16, 17, 18
23, 24, 25

SATYANVESHANA TRUST
102, 2nd 'A' Cross,
Near N.E.T. School, Gavipuram Extn,
BANGALORE South - 560 019. Karnataka

ಶ್ರಿಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ
ದ್ವಿತೀಯರತ್ನವು. ಒಂಬತ್ತನೆಯ ಸಂಚಿಕೆಯು.

ಶ್ರೀಮನ್ನಿಗಮಾನ್ತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಪುರುಷಾರ್ಥಕಾಷ್ಠಾಧಿಕಾರಷ್ಷೋಡಶಃ
ಶಾಸ್ತ್ರೀಯನಿಯಮನಾಧಿಕಾರಸ್ಸಪ್ತದಶಃ
ಅಪರಾಧಪರಿಹಾರಾಧಿಕಾರೋಽಷ್ಟಾದಶಃ

ವಿದ್ಯಾಭ್ಯಾಸದ ಇಲಾಖಾ ಸರ್ಕಲ್ ಇನ್ಸ್ಪೆಕ್ಟರು
ಸಿ. ಎಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ
ಗಿರಿಜಾವಿಲಾಸ ಪ್ರೆಸ್
1934

ಕ್ರಯ ಒಂದು ರೂಪಾಯಿ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಥ ಪುರುಷಾರ್ಥಕಾಷ್ಠಾಧಿಕಾರಃ. ೧೬.

ಸ್ವತಂತ್ರ ಸ್ವಾಮಿತ್ವಾತ್ಸ್ವ ಬಹುಮತಿ ಪಾತ್ರೇಷು ನಿಯತಂ।
ಶ್ರಿಯಃಕಾನ್ತೋ ದೇವಸ್ಸಖಲು ವಿನಿಯುಙ್ತೇ ಚಿದಚಿತಾ ॥

ಅವತಾರಿಕೆ. ಹಿಂದಿನ ಅಧಿಕಾರಾಂತ್ಯದಲ್ಲಿ **"ಕರಣತ್ರಯತ್ತಾಲುಮ್ ಕರ್ತ್ತವ್ಯಙ್ಗಳಿಲ್ ಪ್ರಧಾನಂ ಭಗವತ್ಕೈಙ್ಕರ್ಯತ್ತಿಲ್ ಎಲ್ಲೈನಿಲಮಾಯ್ ಶಾಸ್ತ್ರಾನುಜ್ಞಾತಮಾನವಾಚಾರ್ಯಾದಿ ಭಾಗವತಕೈಙ್ಕರ್ಯಮ್"** ಎಂದು ಹೇಳಲ್ಪಟ್ಟಿತು. ಮೂಲಮಂತ್ರದಲ್ಲಿ ಮುಖ್ಯವಾಗಿ ತೋರುವದು ಈ ಚೇತನನು ಅಕಾರವಾಚ್ಯನಾದ ಶ್ರಿಯಃಪತಿಗೆ ಶೇಷನು ಎಂಬ ಭಾವವು **"ಶೇಷಃಪರಾರ್ಥತ್ವಾತ್"** ಎಂಬ ಸೂತ್ರಾನುಸಾರವಾಗಿ **"ಪರಗತಾತಿಶಯಾಧಾನೇಚ್ಛಯೋಪಾದೇಯತ್ವಮೇವ ಯಸ್ಯ ಸ್ವರೂಪಂ ಸ ಶೇಷಃ ಪರಶ್ಶೇಷೀ"** ಇತರನಲ್ಲಿರುವ ಉತ್ಕೃಷ್ಟತೆಯನ್ನು ತೋರಿಸುವ ಇಷ್ಟವನ್ನಂಗೀಕರಿಸುವದೇ ಯಾವನಿಗೆ ಸ್ವರೂಪವೋ ಅತನೇ ಶೇಷನೆನಿಸುವನು, ಇತರನೇ ಶೇಷಿ ಎನಿಸುವನೆಂದು, ಶ್ರೀಭಾಷ್ಯಕಾರರು ಶೇಷಶೇಷಿಭಾವಗಳನ್ನು ವಿವರಿಸಿರುತ್ತಾರೆ. ಇಂತಹ ಶೇಷಶೇಷಿಭಾವವು ಚೇತನನಿಗೂ ಸರ್ವೇಶ್ವರನಿಗೂ ಸರಿಹೋಗುತ್ತದೆ. ಹೀಗೆ ತನ್ನ ಅನನ್ಯಾರ್ಹಶೇಷತ್ವವು ಪರಮಾತ್ಮನಿಗೇನೆ ಸಲ್ಲುವದಾದರೆ ಆಳ್ವಾರಾಚಾರ್ಯರುಗಳಿಗೂ ಭಾಗವತರುಗಳಿಗೂ ಶೇಷನಾಗಿರುವ ಭಾವವು ಹೇಗೆ ಕೂಡುತ್ತದೆ?

ಯಥಾಲೋಕಾಮ್ನಾಯಂ ಯತಿಪತಿಮುಖ್ಯೈ ರಾಹಿತಧಿಯಾಂ ।
ತತೋ ನಃ ಕೈಙ್ಕರ್ಯಂ ತದಭಿಮತ ಪರ್ಯಂತಮಭವತ್ ॥೩೩॥

ಅಂತಹ ಆಳ್ವಾರಾಚಾರ್ಯ ಭಾಗವತರುಗಳಿಗೆ ಈ ಪ್ರಪನ್ನನು ಶೇಷಭೂತನಾಗಿ ಕೈಂಕರ್ಯಗಳನ್ನೆಸಗುವುದು ಹೇಗೆ ಉಪಪನ್ನವು ? ಶಾಸ್ತ್ರಗಳಲ್ಲಿ ಉಪಪನ್ನವೆಂದು ನಿರೂಪಿತವಾಗಿದ್ದರೆ ಅವುಗಳಭಿಪ್ರಾಯವು ಹೇಗೆ ? ಇವೇ ಮೊದಲಾದ ಶಂಕಾಗಳಿಗೆ ಈ ಅಧಿಕಾರದಲ್ಲಿ ಸಮಾಧಾನವು ಹೇಳಲ್ಪಟ್ಟು, ಭಗವತ್ಕೈಂಕರ್ಯಕ್ಕೆ ಭಾಗವತ ಕೈಂಕರ್ಯದವರೆಗೂ ಅನ್ವಯವೆಂಬುವ ಭಾವವು ಉಪಪಾದಿಸಲ್ಪಡುತ್ತದೆ.

ಅರ್ಥ - **ಶ್ರಿಯಃಕಾನ್ತಃ** - ಎಲ್ಲರಿಂದಲೂ ಆಶ್ರಯಿಸಲ್ಪಡುವಂಥಾ ಲಕ್ಷ್ಮಿಗೆ ಪತಿಯಾದ. **ಸಃ** - ಆ ಎಂದರೆ ಪ್ರಸಿದ್ಧನಾದ ಎಂಬರ್ಥವು; **ಹೇಗೆ** ಪ್ರಸಿದ್ಧನೆಂದರೆ ಶರಣಾಗತವತ್ಸಲನೆಂದು ಪ್ರಸಿದ್ಧನಾದ, **ದೇವಃ** - ಲೀಲಾಪರನಾದ ನಾರಾಯಣನು, **ಸ್ವತಂತ್ರಸ್ವಾಮಿತ್ವಾತ್**-ಸ್ವತಂತ್ರನಾಗಿಯೂ ಸರ್ವಕ್ಕೂ ಸ್ವಾಮಿಯಾಗಿಯೂ ಇರುವವರಿಂದ, **ಚಿದಚಿತೌ** - ಚೇತನಾಚೇತನಗಳನ್ನು, **ಸ್ವಬಹುಮತಿಪಾತ್ರೇಷು**-ತನಗೆ ತುಂಬಾ ಅಭಿಮಾನವಿರುವ ಪಾತ್ರಗಳಾದ ಭಾಗವತರುಗಳಲ್ಲಿ, **ನಿಯತಂ** - ಯಾವಾಗಲೂ ನಿಯಮೇನ ಇರತಕ್ಕದ್ದಾಗಿ, **ವಿನಿಯುಙ್ಕ್ತೇಖಲು** - ನಿಯಮಿಸುತ್ತಾನಷ್ಟೇ, ಎಂದರೆ ಎಲ್ಲಿವರಿವಿಗೆ ಈ ಚಿದಚಿತ್ತುಗಳು ಅವನಿಗೆ ಶೇಷಭೂತವೋ, ಅದುವರೆಗೂ ಆತನಿಗೆ ಅಭಿಮಾನವಿರುವ ಭಾಗವತರುಗಳಿಗೂ ಶೇಷಭೂತವೇ ಎಂಬುವದು ಪ್ರಮಾಣಸಿದ್ಧವೆಂಬ ಭಾವವು, ಭಾಗವತರುಗಳಿಗೆ ಶೇಷಭೂತರೇನೋ ಆಗಬಹುದು. ಆದರೆ ಅವರಿಗೆ ಕೈಂಕರ್ಯ ಮಾಡಲೇಬೇಕೆಂದು ಹೇಳಲು ಹೇಗಾಗುತ್ತದೆ ? ಎಂದರೆ ಉತ್ತರಾರ್ಧದಿಂದ ಸಮಾಧಾನವನ್ನು ಹೇಳುವರಾಗಿ ಲೋಕವನ್ನೂ ಶ್ರುತಿ ಪ್ರಮಾಣವನ್ನೂ ಯತಿರಾಜರನ್ನೂ ಅನುಸರಿಸಿರುವ ನಮಗ್ಗೆ ಶೇಷಿಗೆ ಪಾರತಂತ್ರ್ಯದಿಂದಅಭಿಮತ ಕೈಂಕರ್ಯಗಳನ್ನೆಸಗುವದೇ ಶೇಷಭಾವಕ್ಕೆ ಸ್ವರೂಪವಾದುದರಿಂದ, ಭಾಗವತ ಶೇಷತ್ವವು ಭಾಗವತ ಕೈಂಕರ್ಯದಲ್ಲೇ ಪರ್ಯವಸಾನವೆಂದು ಹೇಳುತ್ತಾರೆ.

ಯಥಾ ಲೋಕಾಮ್ನಾಯಂ - ಲೋಕವನ್ನೂ ವೇದವನ್ನೂ ಅನುಸರಿಸಿ **ಯತಿಪತಿಮುಖ್ಯೈಃ** - ಶ್ರೀ ಭಾಷ್ಯಕಾರ ಪ್ರಭೃತಿಗಳನ್ನುಳ್ಳ ಪೂರ್ವಾಚಾರ್ಯರುಗಳಿಂದ, **ಆಹಿತಧಿಯಾಂ** - ಶಿಕ್ಷಿಸಲ್ಪಟ್ಟ ಬುದ್ಧಿಯುಳ್ಳ, **ನಃ** - ಭರನ್ಯಾಸ ಮಾಡಿ, ಕೃತಕೃತ್ಯರೆನಿಸಿ, ಪುಣ್ಯಶಾಲಿಗಳಾದ ನಮಗೆ, **ತತಃ** - ಭಗವಂತನಿಂದ ಭಾಗವತರಿಗೆ ಕಿಂಕರನೆಂದು ಆಜ್ಞಪ್ತರಾಗಿರುವುದರಿಂದಲೇ, **ಕೈಙ್ಕರ್ಯಂ** - ಭಗ

ವತ್ಕೈಂಕರ್ಯವು, **ತದಭಿಮತಪರ್ಯಂತಂ** ಆ ಭಗವಂತನಿಗೆ ತುಂಬಾ ಪ್ರಿಯರಾದ ಭಾಗವತರ ಪರ್ಯಂತವಾಗಿ, **ಅಭವತ್** - ಆಯಿತು. ಭಗವತ್ಕೈಂಕರ್ಯವು ಭಾಗವತ ಕೈಙ್ಕರ್ಯಪರ್ಯನ್ತವಾದುದೆಂದು ಸ್ಥಾಪಿಸಲ್ಪಟ್ಟಿತು

ತಾತ್ಪರ್ಯ.—ಸರ್ವೇಶ್ವರನು ಲಕ್ಷ್ಮೀಪತಿಯಾಗಿ ಲಕ್ಷ್ಮಿಯೊಂದಿಗೆ ಸದಾ ಇರುವವರಿಂದ ಆತನು ಕ್ರೀಡೆಯಲ್ಲಿ ಪ್ರವರ್ತಿಸಿ ಜಗತ್ಸೃಷ್ಟಿ ಸ್ಥಿತಿಲಯಾದಿಗಳನ್ನೆಲ್ಲಾ ನಡಿಸುವನೆಂದೂ ಹಿಂದೆ ಹೇಳಲ್ಪಟ್ಟಿತು. ಸಮಸ್ತ ಚಿದಚಿತ್ತುಗಳೂ ಆತನಿಗೆ ಶೇಷಭೂತವು ಆತನು ಸರ್ವಸ್ವತಂತ್ರನು. ನಾವೆಲ್ಲಾ ಆತನ ಸ್ವತ್ತಾಗಿ ಪರತನ್ತ್ರರಾದುದರಿಂದ ಆತನ ಇಷ್ಟಾನುಸಾರ ನಮ್ಮನ್ನು ನಿಯಮಿಸುವ ಶಕ್ತಿಯುಂಟು. ಆತನಿಗೆ ತುಂಬಾ ಇಷ್ಟರಾದವರು ಪರಮಭಾಗವತೋತ್ತಮರು. ಅಂತವರಿಗೆ ಶೇಷಭೂತರಾಗಿ ಕೈಙ್ಕರ್ಯಾದಿಗಳನ್ನೆಸಗುವದೂ ಸರ್ವೇಶ್ವರನಿಗೆ ತುಂಬಾ ಅಭಿಮತವಾದುದೆಂದೂ ಭಗವತ್ಕೈಙ್ಕರ್ಯಕ್ಕೆ ಭಾಗವತ ಕೈಙ್ಕರ್ಯವರೆಗೂ ಅನ್ವಯನೆಂದು ಈ ಹದಿನಾರನೆಯ ಅಧಿಕಾರದಲ್ಲಿ ಸ್ಥಾಪಿಸಲ್ಪಡುತ್ತದೆ. ಪುರುಷಾರ್ಥವು ಭಗವತ್ಕೈಂಕರ್ಯವು. ಈ ಭಗವತ್ಕೈಂಕರ್ಯದ ಕಾಷ್ಠಾ ಎಂದರೆ ಎಲ್ಲೈ ಶ್ರೇಷ್ಠಾಂಶವು. ಆ ಭಗವಂತನಿಗೆ ತುಂಬಾ ಅಭಿಮತರಾದ ಭಾಗವತರುಗಳಿಗೆ ಮಾಡುವ ಕೈಙ್ಕರ್ಯವೂ ಸರ್ವೇಶ್ವರನಿಗೆ ಅಭಿಮತವಾಗುವದರಿಂದ, ಭಾಗವತಕೈಙ್ಕರ್ಯವಾಗುತ್ತದೆ. ಈ ಭಾಗವತ ಕೈಙ್ಕರ್ಯವನ್ನು ಕುರಿತು ಈ ಅಧಿಕಾರದಲ್ಲಿ ಹೇಳುವದರಿಂದ ಇದಕ್ಕೆ **ಪುರುಷಾರ್ಥಕಾಷ್ಠಾಧಿಕಾರವೆಂದು** ಹೆಸರು.

"**ಶ್ರಿಯಃಕಾಂತೋ ದೇವಃ, ನಿತ್ಯೈವೈಷಾಜಗನ್ಮಾತಾವಿಷ್ಣೋಃಶ್ರೀರನಪಾಯಿನೀ**" ಎಂದೂ ಮಹರ್ಷಿಗಳು ಹೇಳಿರುವ ಹಾಗೆ, ಲಕ್ಷ್ಮಿಯೊಂದಿಗೇನೇ ಯಾವಾಗಲೂ ಸರ್ವೇಶ್ವರನು ಇರುವದರಿಂದ, ಈ ಲೋಕದಂಪತಿಗಳಿಗೆ ಜಗತ್ಸೃಷ್ಟಿ ಸ್ಥಿತಿ ನಿಯಮನಲಯಾದಿ ಜಗತ್ತಿನ ಲೀಲೆಗಳಲ್ಲಿ ಅಭಿರುಚಿಯುಂಟೆಂಬ ಭಾವವನ್ನು ಪ್ರದರ್ಶಿಸುವದಕ್ಕಾಗಿಯೇ, **ಶ್ರಿಯಃಕಾಂತೋ ದೇವಃ** ಎಂಬ ಪ್ರಯೋಗವು. **ದೇವಃ** ಎಂದರೆ ಕ್ರೀಡಾಪರನು, ಶ್ರಿಯಃಕಾಂತನಾದುದರಿಂದಲೇ ಕ್ರೀಡಾಪರನೆಂಬ ಭಾವವು. ಇದೇ ಪ್ರಯೋಗವನ್ನೇ ಶ್ರೀಯತಿರಾಜರವರು ತಾವು ಅನುಗ್ರಹಿಸಿದ ವೇದಾಂತದೀಪದ ಪ್ರಥಮ ಶ್ಲೋಕದಲ್ಲಿ ಮಾಡಿರುತ್ತಾರೆ. "**ಶ್ರದ್ಧಯಾ ದೇವೋ ದೇವತ್ವಮಶ್ನುತೇ**" "ಲಕ್ಷ್ಮಿಯೊಂದಿಗೇನೇ ಲೀಲಾಸಕ್ತನಾದ ಸರ್ವೇಶ್ವರನು ಜಗತ್ತಿನ ಸೃಷ್ಟಿನಿಯಮನಾದಿ ಲೀಲೆಗಳನ್ನೆಲ್ಲಾ ಅನುಭವಿಸುವನು" ಎಂಬ ಶ್ರುತ್ಯರ್ಥವು ಉಪಪಾದಿಸಲ್ಪಟ್ಟಿತು. ಆದುದರಿಂದಲೇ **ಚಿದಚಿತಾ** - ಚೇತನಾಚೇತನಗಳನ್ನು ತನ್ನ ಇಷ್ಟಾನುಸಾರವಾಗಿ ನಿಯಮಿಸುವನು. ಇವೆರಡೂ ಆತನಿಗೆ ಶೇಷಭೂತವಾದುವಾಗಿ ಆತನೊಂದಿಗೆ ಇರುತ್ತವೆ

"ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ" ಎಂಬ ಶ್ರುತ್ಯನುಸಾರವಾಗಿ ಭೋಕ್ತಾವಾದ ಚೇತನನಿಗೂ ಭೋಗ್ಯವೆಂದು ಹೇಳಿಸಿಕೊಳ್ಳುವ ಅಚೇತನ ನಕ್ಕೂ ಆತನು ಪ್ರೇರಿತಾ - ನಿಯಾಮಕನು. ಹೀಗೆ ಚಿದಚಿತ್ತುಗಳನ್ನು ತನ್ನ ಇಷ್ಟಾನುಸಾರ ನಿಯಮಿಸಲು ಈತನಿಗೆ ಸ್ವಾತಂತ್ರ್ಯವೂ ಸ್ವಾಮಿತ್ವವೂ ಅವಶ್ಯಕ ವೆಂದು "ಸ್ವತಂತ್ರಸ್ವಾಮಿತ್ವಾತ್" ಎಂಬುವದರಿಂದ ತೋರ್ಪಡಿಸಿರುತ್ತಾರೆ. ಸ್ವಾತಂತ್ರ್ಯವಿದ್ದರೆ ತಾನೇ ತನಗೆ ಪರಾಧೀನರನ್ನು ನಿಯಮಿಸಬಲ್ಲನು. ಒಬ್ಬನ ಸ್ವತಂತ್ರನಾಗಿಯೇನೋ ಇರಬಹುದು ಆದರೆ ತನ್ನ ವಸ್ತುವಲ್ಲದ್ದನ್ನು ನಿಯ ಮಿಸುವ ಶಕ್ತಿಯು ಆತನಿಗಿಲ್ಲ ಎಲ್ಲವೂ ಸರ್ವೇಶ್ವರನ "ಸ್ವಂ" ಸ್ವತ್ತಾಗಿ, ಸರ್ವೇ ಶ್ವರನು ಎಲ್ಲಾ ಜಗತ್ತಿಗೂ ಸ್ವಾಮಿಯು. ಆದುದರಿಂದ ಸರ್ವಚೇತನರೂ ಆತನ ಸ್ವತ್ತು, ಆತನು ನಮ್ಮೆಲ್ಲರಿಗೂ ಸ್ವಾಮಿಯು; "ಸ್ವತ್ವಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತಂ" ಎಂದು ಹೇಳಲ್ಪಟ್ಟಿರುತ್ತದೆ.

ಹಾಗೆಯೇ ಒಂದು ಪದಾರ್ಥವು ಒಬ್ಬನಿಗೆ ಸೇರಿದುದಾಗಿ ಸ್ವಾಮಿತ್ವವಿರ ಬಹುದು. ಸ್ವಾತಂತ್ರ್ಯವಿಲ್ಲದಿದ್ದರೂ ನಿಯಮಿಸಲು ಸಾಧ್ಯವಿಲ್ಲವು. ನಮ್ಮ ಮನೆಯೇ ಆಗಿರಬಹುದು, ಅದನ್ನು ವಾಸಕ್ಕೆ ಇನ್ನೊಬ್ಬರಿಗೆ ಕೊಟ್ಟಿದುದರಿಂದ, ಸ್ವಾತಂತ್ರ್ಯವಿಲ್ಲದೆ ಹೋದುದರಿಂದ ಇಷ್ಟಾನುಸಾರ ಆ ಮನೆಯನ್ನು ವಿನಿಯೋಗಿ ಸಲು ಸಾಧ್ಯವಿಲ್ಲವಷ್ಟೆ. ಆದುದರಿಂದ ಇಷ್ಟಾನುಸಾರ ನಿಯಮಿಸಲು ಸ್ವಾತಂ ತ್ರ್ಯವೂ, ಸ್ವಾಮಿತ್ವವೂ ಎರಡೂ ಅವಶ್ಯಕವು.

ಹೀಗೆ ಎರಡೂ ಇರುವದರಿಂದ, ತನಗೆ ತುಂಬಾ ವಿಶ್ವಾಸವಿರುವ ಜ್ಞಾನಿ ಗಳಾದ ಭಾಗವತೋತ್ತಮರುಗಳಿಗೆ ಈ ಚೇತನಾಚೇತನವು ಶೇಷಭೂತರಾಗಿರ ತಕ್ಕೆಂದು ನಿಯಮಿಸಲು ಶಕ್ತನಷ್ಟೆ. ಅಂತಹ ಜ್ಞಾನಿಗಳಾದ ಪರಮೈಕಾನ್ತಿಗಳ ವಿಷಯದಲ್ಲಿ ಶ್ರಿಯಃಪತಿಗೆ ಪರಮ ವಿಶ್ವಾಸವೆಂಬುವದು ಸುಪ್ರಸಿದ್ಧವೆಂದು ಹೇಳು ವದಕ್ಕಾಗಿ ಇಲ್ಲಿ ಸಃ ಎಂಬ ಪ್ರಯೋಗವು. ಆತನಿಗೆ ಈ ಪರಮೈಕಾನ್ತಿಗಳು ಬಹುಮತಿಪಾತ್ರಗಳು. (೧) "ಜ್ಞಾನೀ ತ್ವಾತ್ಮೈವ ಮೇ ಮತಂ" ಎಂದು ಹೇಳಿರುವ ಹಾಗೆ ಆತನಿಗೆ ಅವರು ಅತ್ಯಂತ ಪ್ರಿಯರು. (೨) "ಅಹಂ ಭಕ್ತ ಪರಾಧೀನಃ" ಎಂದು ತಾನೇ ಭಕ್ತರಿಗೆ ಅಧೀನನೆಂದು ಹೇಳಿಕೊಂಡಿರುವಾಗ, ತನಗೆ ದಾಸಭೂತರಾಗಿರುವ ನಮ್ಮನ್ನು ಅಂತಹ ಭಕ್ತರಿಗೆ ಅಧೀನರನ್ನಾಗಿ ರುವ ಹಾಗೆ ನಿಯಮಿಸಲಾರನೋ? ರಾಮಲಕ್ಷ್ಮಣರು ವಿಶ್ವಾಮಿತ್ರರಿಗೆ ಸರ್ವ ಸಹಾಯವನ್ನೂ ಮಾಡಿ ಕೃತಾರ್ಥರಾಗಿ ಆ ಮುನಿವರ್ಯರಿಗೆ ವಂದಿಸಿ ಹೇಳು ತ್ತಾರೆ :—

"ಇಮೌ ಸ್ಮ ಮುನಿಶಾರ್ದೂಲ ಕಿಂಕರೌ ಸಮುಪಸ್ಥಿತೌ ।
ಆಜ್ಞಾಪಯ ಯಥೇಷ್ಟಂವೈ ಶಾಸನಂ ಕರವಾವ ಕಿಂ ॥" ರಾ. ಬಾ.
ಮುನಿಶಾರ್ದೂಲ-ಪರಬ್ರಹ್ಮೋಪಾಸಕರಲ್ಲಿ ಶ್ರೇಷ್ಠನಾಗಿ ಭಕ್ತಶಿಖಾಮಣಿಯೇ, ಆದುದರಿಂದಲೇ, **ಇಮೌಸ್ಮಕಿಂಕರೌ** - ಅಂತವರು ನನಗೆ ದಾಸಭೂತರಾಗಿರುವದು ಹಾಗಿರಲಿ ತಾವೇ ಅಂತಹ ಭಕ್ತಾಗ್ರೇಸರರಿಗೆ ಕಿಂಕರರು. "**ಭಕ್ತಿಕ್ರೀತೋಜನಾರ್ದನಃ** - ಜನಾರ್ದನನು ಭಕ್ತಿಗೆ ವಿಕ್ರಯಿಸಲ್ಪಟ್ಟವನು" ಎಂದು ಹೇಳಿರುವಹಾಗೆ, ಭಕ್ತರಿಗೆ ಕಿಂಕರನು, **ಸಮುಪಸ್ಥಿತೌ** - ಭಕ್ತನನ್ನಗಲಿ ಒಂದು ಕ್ಷಣಕೂಡಾ ಇರಲಾರನು, ಆದುದರಿಂದ ಭಕ್ತನು ತನ್ನನ್ನು ಹುಡುಕಿಕೊಂಡು ಬರುವ ಆವಶ್ಯಕವಿಲ್ಲವು, ತಾನೇ ಅವರುಗಳಿರುವ ಸ್ಥಳಕ್ಕೆ ಹೋಗಿ ಅವರುಗಳ ಇಷ್ಟವನ್ನು ನಡೆಸಿಕೊಡುವನು ; ಗಜೇಂದ್ರ, ಧ್ರುವ, ಪ್ರಹ್ಲಾದರು ಈತನಿರುವ ಸ್ಥಳವನ್ನು ಕುರಿತು ಬರಲಿಲ್ಲವು. ಅವರುಗಳಿದ್ದ ಸ್ಥಳಕ್ಕೆ ತಾನೇ ಓಡಿಹೋಗಿ ಎದುರಿಗೆ ನಿಂತು ಅವರುಗಳನ್ನು ಕಾಪಾಡಿರುತ್ತಾನೆ. **ಅಜ್ಞಾಪಯ** - ತಾನು ಅವರನ್ನು ಆಜ್ಞಾಪಿಸುವದು ಹಾಗಿರಲಿ, ಆ ಭಕ್ತರುಗಳ **ಪ್ರಾರ್ಥನೆ**ಯನ್ನೇ ತನಗೆ ಆಜ್ಞೆಯಾಗಿ ಭಾವಿಸುವನು ; **ಯಥೇಷ್ಟಂವೈ** – ತನ್ನ ಇಷ್ಟಾನುಸಾರ ಆ ಭಕ್ತರು ನಡೆಯುವದು ಹಾಗಿರಲಿ, ಅವರ ಇಷ್ಟಾನುಸಾರ ತಾನು ನಡೆಯುವನು, **ಶಾಸನಂಕರವಾವಕಿಂ** - ಭಕ್ತನ ಹೇಳಿಕೆಯನ್ನು ಶಿರಸಾವಹಿಸಿ ನಡೆಸಿಕೊಡುವನು. ಹೀಗೆ ಭಕ್ತರ ವಿಷಯದಲ್ಲಿ ಸಂಪೂರ್ಣಾಭಿಮಾನದಿಂದ ಅವರುಗಳಿಗೆ ತಾನೇ ಶೇಷಭೂತನಾಗಿ ಅವರುಗಳ ಕೆಲಸವನ್ನು ನಡೆಸಿಕೊಟ್ಟಿರುವಾಗ, ಅಂಥಾವರುಗಳಿಗೆ ತನ್ನ ದಾಸಭೂತರಾದ ನಮ್ಮನ್ನೂ ಶೇಷಭೂತರಾಗಿ ಕೈಂಕರ್ಯಗಳನ್ನೆಸಗತಕ್ಕದ್ದೆಂದು ನಿಯಮಿಸುವದೂ ಯುಕ್ತವಾದುದಷ್ಟೇ. ಇದು ನ್ಯಾಯವಾದ ವಿಷಯವೇ ಎಂದು ತೋರಿಸುವದಕ್ಕಾಗಿ **ಖಲು ಎಂಬ ಪ್ರಯೋಗವು**. ಹಾಗೆ ಭಾಗವತೋತ್ತಮರಿಗೆ ಅಧೀನರನ್ನಾಗಿ ಮಾಡಿ ಅವರಿಗೆ ಕೈಂಕರ್ಯಗಳನ್ನೆಸಗುವಹಾಗೆ ನಿಯಮಿಸಿರುವದು ಶಾಸ್ತ್ರವಿಹಿತವಾದುದಾಗಿ ಪ್ರಸಿದ್ಧವಾದ ವಿಷಯವೆಂಬ ತಾತ್ಪರ್ಯವು.

ಲೋಕರೀತಿಯಾಗಿಯೂ, ಶಾಸ್ತ್ರರೀತಿಯಾಗಿಯೂ, **ಪೂರ್ವಾಚಾರ್ಯರುಗಳ** ಅನುಷ್ಠಾನರೀತಿಯಾಗಿಯೂ ಕೂಡ ಭಗವತ್ಕೈಂಕರ್ಯಕ್ಕೆ ಭಾಗವತಕೈಂಕರ್ಯದವರೆಗೂ ಸಂಬಂಧವೆಂದು ಮುಂದೆ ಉಪದೇಶಿಸುತ್ತಾರೆ :— **ಯಥಾಲೋಕಾನ್ಯಾಯಂ** - ಲೋಕದಲ್ಲಿ ರಾಜರುಗಳು ತಮ್ಮ ಭೃತ್ಯರುಗಳನ್ನೂ, ತಮಗುಚಿತವಾದ ಆಭರಣ ಬಿರುದು ಮೊದಲಾದವುಗಳನ್ನೂ, ಸಹ ತಮಗೆ ತುಂಬಾ ಪ್ರಿಯರಾದ ಹೆಂಡತಿ ಮಕ್ಕಳಿಗೂ ಸಹ ವಿನಿಯೋಗಿಸುವ ಹಾಗೆ ನಿಯಮಿಸುವದನ್ನು

ಭಗವತ್ಕೈಙ್ಕರ್ಯಂ ಕಥಂ ಭಾಗವತ ಕೈಙ್ಕರ್ಯಪರ್ಯನ್ತಂ ?

ಇಚ್ಛಾ ಭಗವತ್ಕೈಙ್ಕರ್ಯತ್ತೈ ಭಾಗವತಕೈಙ್ಕರ್ಯಪರ್ಯಂತವಾಗ

ಕಂಡಿರುವವು. ಹಾಗೆಯೇ "ದೇವ ಮಿವಾಚಾರ್ಯಮುಪಾಸೀತ", "ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ" "ಆಚಾರ್ಯದೇವೋ ಭವ",

"ಮಮ ಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾ ಭವೇತ್ ।
ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾ ವಿಶೇಷತಃ"

ಇತ್ಯಾದಿ ಶ್ರುತಿ ಸ್ಮೃತಿವಾಕ್ಯಗಳೂ ಕೂಡ ಹಾಗೆಯೇ ಬೋಧಿಸುತ್ತವೆಂದು ಹೇಳುವುದಕ್ಕಾಗಿ "ಯಥಾಮ್ನಾಯಂ" ಎಂಬ ಪ್ರಯೋಗವು.

ಇನ್ನೂ ಪೂರ್ವಾಚಾರ್ಯರುಗಳನುಷ್ಠಾನಕ್ರಮವೂ ಕೂಡ ಹಾಗೆಯೇ ಎಂದು ತಿಳಿಸುವುದಕ್ಕಾಗಿ ತಾವೂ, ಯತಿರಾಜರೂ, ಅವರಾಚಾರ್ಯರಾದ ಯಾಮುನಾದಿಗಳೂ ಮತ್ತು ಯತಿರಾಜ ಶಿಷ್ಯರಾದ ಪ್ರಣತಾರ್ತಿಹರಾದಿಗಳೂ, ಇವರುಗಳಿಂದ ಶಿಕ್ಷಿಸಲ್ಪಟ್ಟ ಬುದ್ಧಿಯುಳ್ಳವರು. ಶೇಷತ್ವಲಕ್ಷಣವು "ಪರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯಸ್ವರೂಪಂ ಸಶೇಷಃ ಪರಶ್ಶೇಷಿ" ಎಂದು ಶ್ರೀಭಾಷ್ಯಕಾರರು ನಿರೂಪಿಸಿರುತ್ತಾರೆ. ಹೀಗೆ ಅಪ್ಪಣೆಕೊಡಿಸಿರುವುದರಿಂದ, ಕಿಂಕರನವೃತ್ತಿಯಾದ ಕೈಂಕರ್ಯವು ಇಲ್ಲದೆಹೋದರೆ ಶೇಷಿಗೆ ಅತಿಶಯವು ಸಿದ್ಧಿಸಲಾರದ ಪ್ರಯುಕ್ತ ಶೇಷತ್ವ ಸ್ವರೂಪಕ್ಕೇನೆ ಹಾನಿಯುಂಟಾಗುತ್ತದೆಂಬ ಭಾವವು. ತತಃ - ಆ ಕಾರಣದಿಂದ ಎಂದರೆ ಪೂರ್ವಾರ್ಧದಲ್ಲಿ ಹೇಳಿರುವ ಹಾಗೆ ಭಗವಂತನು ಚಿದಚಿತ್ತುಗಳನ್ನು ಭಾಗವತರುಗಳಿಗೆ ಶೇಷಭೂತವಾದುವಾಗಿ ನಿಯಮಿಸಿರುವದರಿಂದ ನಮಗೆ ಭಗವತ್ಕೈಂಕರ್ಯವು ಭಾಗವತಕೈಂಕರ್ಯ ಪರ್ಯಂತವಾಗಿ ಆಯಿತೆಂದು ಹೇಳಿರುತ್ತಾರೆ. ಆ ಮಹಾಭಾಗವತೋತ್ತಮರಾದ ವಿಪ್ರರಿಗೆ ಮಾಡಿದ ಕೈಂಕರ್ಯವನ್ನು ಸರ್ವೇಶ್ವರನೇ, ತನಗೆ ಮಾಡಿದ ಕೈಂಕರ್ಯಕ್ಕಿಂತ ಪ್ರಿಯತಮವಾದುದಾಗಿ ಭಾವಿಸಿ ಅವುಗಳನ್ನು ಪರಿಗ್ರಹಿಸುವನು ಎಂಬ ಭಾವವು. ಆದುದರಿಂದಲೇ "ಶ್ರೀಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತಮಂ" ಭಾಗವತ ಪೂಜೆಯು ಭಗವತ್ಪೂಜೆಗಿಂತ ಶ್ರೇಷ್ಠವೆಂದು ಹೇಳಲ್ಪಟ್ಟಿರುತ್ತದೆ.

ಭಗವತ್ಕೈಂಕರ್ಯವು ಭಾಗವತ ಕೈಂಕರ್ಯಪರ್ಯನ್ತವೆಂಬುವದು ಹೇಗೆ ?

ಇಚ್ಛಾ - ಈ ಹಿಂದೆ ಹೇಳಿದ ಉತ್ತರಕೃತ್ಯಗಳಲ್ಲಿ, ಭಗವತ್ಕೈಙ್ಕರ್ಯತ್ತೈ

ಚೊಲ್ಲುಗೈಕ್ಕಡಿಯೆನ್ನೆನ್ನಿಲ್ ? "ಪರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯ ಸ್ವರೂಪಂ ಸಶೇಷಃ, ಪರಶ್ಶೇಷೀ" ಎನ್ರು ವೇದಾರ್ಥ ಸಂಗ್ರಹತ್ತಿಲೆ ಅರುಳಿಚ್ಚೆಯ್ದಪಡಿಯೆ ಸರ್ವೇಶ್ವರನ್ನೈಪ್ಪತ್ತ ಶೇಷಭೂತನಾನವಿವರ್ ಅತಿಶಯಾಧಾನಂ ಪಣ್ಣ ಪ್ರಾಪ್ತಿ.

ಭಗವತ್ಕೈಂಕರ್ಯವನ್ನು, ಭಾಗವತಕೈಂಕರ್ಯಪರ್ಯಂತವಾಗ - ಭಾಗವತ ಕೈಙ್ಕರ್ಯ ಪರ್ಯಂತವಾದುದೆಂದು, ಚೊಲ್ಲುಗೈಕ್ಕು - ಹೇಳುವದಕ್ಕೆ, **ಅಡಿಎನ್ರೆನ್ನಿಲ್** - ಕಾರಣವೇನು ಎಂದರೆ ? ಇಲ್ಲಿ ಶಙ್ಕಾಭಿಪ್ರಾಯವೇನೆಂದರೆ ;—**ಚೇತನನೇನೋ** ಭಗವಂತನಿಗೆ ಶೇಷಭೂತನು ಹೌದು ; ಆ ಶೇಷತ್ವವು ಪಾರತಂತ್ರ್ಯರೂಪ ವಾದುದು ; ಇಷ್ಟೇ ವಿನಾ ಕೈಂಕರ್ಯರೂಪವಾಗಿರಬೇಕೆಂಬ ನಿಯಮವು ತೋರಿ ಬರುವದಿಲ್ಲವು ; ಹೀಗಿರುವಾಗ ಭಾಗವತ ಕೈಂಕರ್ಯದ ಆವಶ್ಯಕತೆಯು ಹೇಗೆ ? ಎಂಬುವದು ಶಙ್ಕಾಭಿಪ್ರಾಯವು. ಈ ಶಙ್ಕೆಗೆ ಸಮಾಧಾನ ಹೇಳುವವರಾಗಿ, ಶೇಷತ್ವಕ್ಕೆ ಕೈಂಕರ್ಯವೇ ಪರಮಪ್ರಯೋಜನವೆಂದುಪದೇಶಿಸುವವರಾಗಿ, **ಶ್ರೀ** ಭಾಷ್ಯಕಾರರು ವೇದಾರ್ಥ ಸಂಗ್ರಹದಲ್ಲಿ ಅಪ್ಪಣೆ ಕೊಡಿಸಿದ ಶೇಷತ್ವ ಲಕ್ಷಣ ವನ್ನು ಮೊದಲು ಉಪಪಾದಿಸುತ್ತಾರೆ.

"**ಪರಗತ** - ಇತರನನ್ನು ಹೊಂದಿದ, ಇಲ್ಲಿ ಇತರನು ಶೇಷಿಯು, ಆತ ನನ್ನು ಹೊಂದಿದ, **ಅತಿಶಯ** - ಅತಿಶಯವನ್ನು, ಮಾಹಾತ್ಮ್ಯೆಯನ್ನು, **ಆಧಾ ನೇಚ್ಛಯಾ** - ಉಂಟುಮಾಡುವ ಅಪೇಕ್ಷೆಯಿಂದ, **ಉಪಾದೇಯತ್ವಮೇವ** - ಸ್ವೀಕರಿಸೋಣವೇ, **ಯಸ್ಯಸ್ವರೂಪಂ** – ಯಾವನಿಗೆ ಸ್ವರೂಪವೋ, **ಸ ಶೇಷಃ**- ಅವನೀಗ ಶೇಷಭೂತನೆನ್ನುವನು, **ಪರಶ್ಶೇಷೀ** - ಆ ಇತರನಾದರೋ ಶೇಷಿ ಎಂದೆನಿಸುವನು" **ಎನ್ರು** - ಎಂಬದಾಗಿ, **ವೇದಾರ್ಥಸಂಗ್ರಹ** ವೆಂಬ ಗ್ರಂಥ ದಲ್ಲಿ, **ಅರುಳಿಚ್ಚೆಯ್ದಪಡಿಯೇ** - ಅನುಗ್ರಹಿಸಿ ಹೇಳಿರುವ ಮೇರೆಗೆ, **ಸರ್ವೇ ಶ್ವರನ್ನೈಪತ್ತ** - ಸರ್ವೇಶ್ವರನನ್ನು ಹೊಂದಿ, **ಶೇಷಭೂತನಾನವಿವರ್** – **ಶೇಷ** ಭೂತನಾದ ಈ ಚೇತನನು **ಅತಿಶಯಾಧಾನಂ** - ಅತಿಶಯವನ್ನುಂಟುಮಾಡು ವದು, **ಪ್ರಾಪ್ತಂ** - ಯೋಗ್ಯವು, ತನಗೆ ಸ್ವರೂಪವು ಎಂಬ ಭಾವವು. ಇತರನಿಗೆ ಅತಿಶಯವನ್ನುಂಟುಮಾಡಿ, ಹೀಗೆ ಆತನಿಗೆ ಪ್ರಯೋಜನವನ್ನುಂಟುಮಾಡು ವದೇ ತನಗೆ ಪರಮ ಪ್ರಯೋಜನವೆಂದು ಭಾವಿಸುವದೇ ಯಾವನಿಗೆ ಸ್ವರೂ ಪವೋ, ಅವನು ಶೇಷನೆಂದೂ, ಅತಿಶಯವನ್ನು ಹೊಂದಿದವನು ಶೇಷಿಯೆಂದೂ ಹೇಳಲ್ಪಟ್ಟಿತು. ಹೀಗೆ ವೇದಾರ್ಥ ಸಂಗ್ರಹದಲ್ಲಿ ಅಪ್ಪಣೆಕೊಡಿಸಿರುತ್ತಾರೆಂಬ ತಾತ್ಪರ್ಯವು. ಆದರೆ ಯಾರೆಂಬುವದು ಹೇಳಲ್ಪಡಲಿಲ್ಲವು ವೇದಾರ್ಥ

ಸಂಗ್ರಹ ಗ್ರಂಥಕರ್ತರಾದ ಶ್ರೀ ಭಾಷ್ಯಕಾರರು ಲೋಕವಿಖ್ಯಾತರಾಗಿ ಅವರು ಯಾರೆಂಬುವದು ಸರ್ವರಿಗೂ ವಿದಿತವಾದ ವಿಷಯದಿಂದಾಗಲಿ, ತುಂಬಾ ಮರ್ಯಾದೆಗೆ ಅರ್ಹರಾಗಿರುವ ಗುರುಜನರೆಂಬಭಿಪ್ರಾಯದಿಂದಾಗಲಿ ಅವರ ನಾಮಧೇಯವು ಇಲ್ಲಿ ಹೇಳಲ್ಪಡಲಿಲ್ಲವ. ಅವರು ಈ ವಾಕ್ಯದಿಂದ ಶೇಷಶೇಷಿಶಬ್ದಗಳಿಗೆ ಲಕ್ಷಣವನ್ನು ಬರೆದರು. ಇನ್ನೊಬ್ಬನಿಗೆ ಎಂದರೆ ಶೇಷಿಗೆ ಅತಿಶಯವನ್ನುಂಟುಮಾಡಬೇಕೆಂಬ ಇಚ್ಛೆಯು ಇರಬೇಕು; ಈ ಇಚ್ಛೆಯು ಶೇಷಿಯನ್ನು ಹೊಂದಿದ್ದಾಗಿಯಾಗಲಿ, ಶೇಷನನ್ನು ಹೊಂದಿದ್ದಾಗಿಯಾಗಲಿ, ಇಬ್ಬರನ್ನು ಹೊಂದಿದ್ದಾಗಿಯಾಗಲಿ ಅಥವಾ ಮಧ್ಯಸ್ಥನನ್ನು ಹೊಂದಿದ್ದಾಗಲಿ ಇರಬಹುದು. ಹೇಗೆಂದರೆ ಭಾರ್ಯೆಯು ಭರ್ತೃವಿಗೆ ಅತಿಶಯವನ್ನುಂಟುಮಾಡುತ್ತಿರುವವಳು ಎಂಬ ವ್ಯವಹಾರದಲ್ಲಿ ಇಚ್ಛೆಯು ಭರ್ತೃವನ್ನೂ, ಭಾರ್ಯೆಯನ್ನೂ, ಇಬ್ಬರನ್ನೂ, ಅಥವಾ ಇತರರನ್ನೂ ಹೊಂದಿದುದಾಗಿರಬಹುದು. ಈ ಅತಿಶಯವನ್ನುಂಟುಮಾಡಿದುದನ್ನು ವ್ಯವಹರಿಸುವದರಿಂದಲ್ಲವೇ ಶೇಷಶೇಷಿ ಎಂಬದಾಗಿ ಹೇಳಬಹುದು. ಆದುದರಿಂದ ವ್ಯವಹಾರಕ್ಕೆ ಒಬ್ಬ ಚೇತನನು ಅವಶ್ಯಕನೆಂದು ಇದರಿಂದ ಹೇಳಿದಂತಾಯಿತು. ಈ ಅತಿಶಯವನ್ನುಂಟುಮಾಡುವದು, ಅತಿಶಯವನ್ನು ಹೊಂದಿದುದೂ ಸಹ ಚೇತನನಾಗಿಯಾದರೂ ಅಚೇತನವಾಗಿಯಾದರೂ ಇರಬಹುದು. ಈ ಆಭರಣವು ಈ ಸ್ತ್ರೀಗೆ ತುಂಬಾ ಒಪ್ಪುತ್ತದೆ ಎಂಬುವದರಲ್ಲಿ ಆಭರಣವು ಅತಿಶಯವನ್ನುಂಟುಮಾಡುವದರಿಂದ ಆಭರಣವು ಶೇಷವು, ಸ್ತ್ರೀಯು ಶೇಷಿಯು.

ಹಾಗೆಯೇ ಸರ್ವ ಚಿದಚಿತ್ತುಗಳೂ ಸರ್ವೇಶ್ವರನಿಗೆ ಅತಿಶಯವನ್ನುಂಟುಮಾಡುವವುಗಳಾಗಿ ಶೇಷಭೂತವಾದವು, ಸರ್ವೇಶ್ವರನು ಶೇಷಿಯು, ಎಂಬ ಭಾವವು. ಈ ಅತಿಶಯವನ್ನುಂಟುಮಾಡುವ ಇಚ್ಛೆಯು ಸರ್ವೇಶ್ವರನಲ್ಲೇ "ಉದಾರಾಸ್ಸರ್ವ ಏವೈತೇ" "ಅಹಂಭಕ್ತಪರಾಧೀನಃ" "ಸುಗ್ರೀವಂನಾಥಮಿಚ್ಛತಿ" ಇತ್ಯಾದಿ ವಾಕ್ಯಗಳಲ್ಲಿ ತೋರಬರುವಂತೆ ಇರಬಹುದು. ಅಥವಾ "ಪಿತಾತ್ವಂ ಮಾತಾತ್ವಂ", "ದಯನೀಯಸ್ತವನಾಥದುರ್ಲಭಃ" "ತವಾಹಮಸ್ಮೀತಿ ಚ ಯಾಚಮಾನಃ" "ಅಹಮಸ್ಮ್ಯಪರಾಧ ಚಕ್ರವರ್ತೀ" ಇತ್ಯಾದಿ ವಾಕ್ಯಗಳಲ್ಲಿ ತೋರಿಬರುವಂತೆ, ಅತಿಶಯವನ್ನುಂಟುಮಾಡುವ ಇಚ್ಛೆಯು ಶೇಷಗತವಾಗಿರಬಹುದು. ಅಥವಾ "ಭಜತಾಂ ಪ್ರೀತಿಪೂರ್ವಕಂ । ದದಾಮಿಬುದ್ಧಿಯೋಗಂ" ಎಂಬಲ್ಲಿ ಪ್ರೀತಿಪೂರ್ವಕಪದವ ಕಾಕಾಕ್ಷಿನ್ಯಾಯಪ್ರಕಾರ ಅನ್ವಯಿಸಿದರೆ, ಪ್ರೀತಿಪೂರ್ವಕ ಭಜಿಸುವವರಿಗೆ ಪ್ರೀತಿಪೂರ್ವಕನಾಗಿ ಬುದ್ಧಿಯೋಗವನ್ನು ಕೊಡುವೆನು" ಎಂದು ಹೇಳಿರುವಹಾಗೆ ಅತಿಶಯವುಂಟುಮಾಡುವ ಇಚ್ಛೆಯು ಇಬ್ಬರಲ್ಲೂ ಇರಬಹುದು. ಅಥವಾ

ಅನ್ವತಿಶಯನ್ತ್ರಾಣ ವಸ್ತುಶಕ್ತ್ಯೈ ಅನುರೋಧಿತ್ವವರನೇಣುವ್.

"ಯಸ್ಯಪ್ರಸಾದೇ ಸತತಂ ಪ್ರಸೀದೇಯುರಿಮಾಃ ಪ್ರಜಾಃ ।
ಸರಾಮೋ ವಾನರೇಂದ್ರಸ್ಯ ಪ್ರಸಾದ ಮಭಿಕಾಂಕ್ಷತೇ" ॥

ಯಾವನ ಅನುಗ್ರಹದಿಂದ ಈ ಲೋಕಜನರೆಲ್ಲಾ ಸರ್ವ ಶ್ರೇಯಸ್ಸನ್ನು ಹೊಂದ ಬಹುದೋ ಅಂತಹ ರಾಮನು ವಾನರ ಶ್ರೇಷ್ಠನಾದ ಸುಗ್ರೀವನ ಅನುಗ್ರಹವನ್ನು ಅಪೇಕ್ಷಿಸುತ್ತಾನೆ ಎಂಬಲ್ಲಿ ತೋರಿಬರುವ ಹಾಗೆ ಅತಿಶಯವನ್ನುಂಟುಮಾಡುವ ಇಚ್ಛೆಯು ಇತರರಾದ ಲಕ್ಷ್ಮಣನನ್ನಾಗಲಿ ಮಹರ್ಷಿಯನ್ನಾಗಲಿ ಹೊಂದಿದ್ದಾಗಿಯೂ ಇರಬಹುದು.

ಶ್ರೀಭಾಷ್ಯಕಾರರು ಶೇಷಶೇಷೀ ಲಕ್ಷಣವನ್ನು ಹೇಳಿರುವದರಲ್ಲಿ **ಚಿತ್ತು** ಸರ್ವೇಶ್ವರನಿಗೆ ಶೇಷಭೂತವಾದುದು ಎಂದು ಹೇಳಿದರು. ಅಚಿತ್ತಲ್ಲವೆಂಬ ಭಾವ ಬಂದೀತೆಂದು ಭಾವಿಸಿ, ಹಾಗಲ್ಲವು, ಅಚಿತ್ತೂ ಕೂಡ ಸರ್ವೇಶ್ವರನಿಗೆ ಶೇಷಭೂತವೆಂದು ತಿಳಿಸುವದಕ್ಕಾಗಿ "ಅನ್ವತಿಶಯನ್ತ್ರಾಣ" ಎಂದು ಪ್ರಾರಂಭಿಸಿ ಐದುವಾಕ್ಯಗಳ ಮೂಲಕ ಹೇಳುತ್ತಾರೆ. **ಅನ್ವತಿಶಯನ್ತ್ರಾಣ** - ಆ ಅತಿಶಯವಾದರೋ, **ವಸ್ತುಶಕ್ತ್ಯೈ** - ಶೇಷವೆಂದು ವ್ಯವಹರಿಸಲ್ಪಡುವ ವಸ್ತುವಿನ ಸಾಮರ್ಥ್ಯವನ್ನು, **ಅನುರೋಧಿತ್ವವರನೇಣುವ್** - ಅನುಸರಿಸಿ ಬರತಕ್ಕದ್ದು; ಎಂದರೆ ಅತಿಶಯವನ್ನುಂಟುಮಾಡುವ ಶಕ್ತಿಯಿದ್ದರೆ ಸಾಕೆಂಬ ಭಾವವು. ಶೇಷವಸ್ತುವು ಅಚಿತ್ತಾಗಿ ಜಡದ್ರವ್ಯವಾದರೆ ಪ್ರೀಣನ ಸಾಮರ್ಥ್ಯವಿಲ್ಲವಲ್ಲಾ ಎಂಬುವದರಿಂದ ಶೇಷತ್ವಕ್ಕೇನೂ ಹಾನಿ ಇಲ್ಲವು, ಅತಿಶಯವನ್ನುಂಟುಮಾಡುವ ಶಕ್ತಿ ಮಾತ್ರ ಶೇಷವೆಂದೆನಿಸುವ ದ್ರವ್ಯಕ್ಕೆ ಅನುಸರಿಸಿ ಬಂದರೆ ಸಾಕೆಂಬ ಭಾವವು. ಒಬ್ಬ ಆಳು ನಮಗೆ ಶೇಷಭೂತನಾಗಿರಬಹುದು. ಸಂಬಳವನ್ನು ಪಡೆಯುವತನಕವೇ ಆತನು ಶೇಷನೇವಿನಾ ಯಾವಾಗಲೂ ಶೇಷನಲ್ಲವು; ಇಲ್ಲಿ ಅತಿಶಯವು ವಸ್ತುಶಕ್ತಿಯನ್ನು ಅನುಸರಿಸಿ ಬರಲಿಲ್ಲವು. ಉಪಾಧಿಮೂಲಕ ಉಂಟಾದುದರಿಂದ ಆಳು ನಮಗೆ ಸಹಜ ಶೇಷನಲ್ಲವು. ನಾವಾದರೋ ಸರ್ವೇಶ್ವರನಿಗೆ ಹಾಗಲ್ಲವು: "ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ" ಎಂದು ಹೇಳಿರುವಹಾಗೆ, ಅತಿಶಯವು ವಸ್ತುಶಕ್ತಿಯನ್ನನುಸರಿಸಿ ಬಂದಿರುವದರಿಂದ ಸರ್ವೇಶ್ವರನು ಶೇಷಿಯು, ನಾವು ಶೇಷರು. ಹಾಗೆಯೇ ಸಮಸ್ತ ಜಗತ್ತಿನ ಅಚಿತ್ತೂ ಸಹ ಸರ್ವೇಶ್ವರನಿಗೆ ಅತಿಶಯಾಧಾಯಕವು, ಅದುದರಿಂದ ಸಮಸ್ತವೂ ಆತನಿಗೆ ಶೇಷಭೂತವಾದುದೆಂಬಭಿಪ್ರಾಯವು. ಮುಂದಿನ ವಾಕ್ಯದಿಂದ ಅಚಿತ್ತೂ, ಚಿತ್ತೂ ಸಹ ಸರ್ವೇಶ್ವರನಿಗೆ ಹೇಗೆಅತಿಶಯಾಧಾಯಕವೆಂದು ಹೇಳುತ್ತಾರೆ.

ಶಾಸ್ತ್ರಾನುಗುಣಮಾಗ ವರ್ತಿಕ್ಕುಂಪೋದು (೧) "ಶುಭೇತ್ವಸೌತು ಷ್ಯತಿ ದುಷ್ಕೃತೇತು ನ ತುಷ್ಯತೇಸೌ ಪರಮಶ್ಶರೀರೀ" ಎನ್ಗಿರಪಡಿಯೇ ಈಶ್ವರನುಕ್ಕು ಸಂತೋಷತ್ತೈ ಯುಣ್ಡಾಕ್ಕಿ ಅವನುಡೈಯ ಔದಾರ್ಯಾದಿ ಗುಣಙ್ಗಳ್ ಕುಮರಿರಾದಪಡಿ, ಅವ್ಮುಖತ್ತಾಲೆ "ಉದಾರಾಸ್ಸರ್ವ ಏವೈತೇ" ಎನ್ರು ತಾನೇ ಕೊಣ್ಡಾಡುಮ್ಪಡಿ ಅತಿಶಯಾ ಧಾಯಕ ನಾವ್.

ವದು ಸರ್ವೇಶ್ವರನಿಗೆ ಲೀಲೆಯು. ಜಗತ್ತಿನ ಸರ್ವವ್ಯಾಪಾರಗಳೂ ಸ್ವಾಮಿಗೆ ಲೀಲೆಯೇ, ಹೀಗೆ ಅತಿಶಯವನ್ನುಂಟುಮಾಡಬಹುದು ಎಂಬ ತಾತ್ಪರ್ಯವು ಆದರೆ ಶಾಸ್ತ್ರಮರ್ಯಾದೆಯನ್ನನುಸರಿಸಿ ಧರ್ಮಪ್ರವರ್ತನೆಯಿಲ್ಲ, ಆ ರೀತಿ ಅತಿಶಯ ವನ್ನುಂಟುಮಾಡುವದರಲ್ಲಿ ಸ್ವಲ್ಪ ವೈಲಕ್ಷಣ್ಯ ಉಂಟೆಂದು ಬೋಧಿಸುತ್ತಾರೆ.

ಶಾಸ್ತ್ರಾನುಗುಣಮಾಗ ವರ್ತಿಕ್ಕುಮ್ ಪೋದು - ಶಾಸ್ತ್ರರೀತ್ಯಾ ನಡೆ ಯುವಾಗ, "**ಶುಭೇತು** - ಆ ಪ್ರವೃತ್ತಿಯು ಸುಕೃತವಾಗಿ ಮಂಗಳವಾದುದಾಗಿ ದ್ದರೆ, **ಪರಮಶ್ಶರೀರೀ** - ಸರ್ವಶ್ರೇಷ್ಠನಾದ ಸರ್ವಶರೀರಕನಾದ ಸರ್ವೇಶ್ವರನಾದ **ಅಸೌ** - ಈ ಕೃಷ್ಣನು, **ತುಷ್ಯತಿ** - ಸಂತೋಷಿಸುವನು, **ದುಷ್ಕೃತೇತು, ಅಸೌ** - ಈತನು, **ನ ತುಷ್ಯತೇ** - ಸಂತೋಷಿಸುವದಿಲ್ಲವು," **ಎನ್ಗಿರಪಡಿಯೇ**- ಎಂದು ಹೇಳಿರುವಹಾಗೆ, **ಈಶ್ವರನುಕ್ಕುಸಂತೋಷತ್ತೈಯುಣ್ಡಾಕ್ಕಿ** - ಸರ್ವೇ ಶ್ವರನಿಗೆ ಸಂತೋಷವನ್ನುಂಟುಮಾಡಿ, ಆತನ ಔದಾರ್ಯವೇ ಮೊದಲಾದ ಗುಣ ಗಳು, **ಮೊದಲಾದ** ಎಂಬುವದರಿಂದ ಸೌಲಭ್ಯ ಸೌಶೀಲ್ಯ **ವಾತ್ಸಲ್ಯ** ಕಾರುಣ ಗುಣಗಳು ಬೋಧಿಸಲ್ಪಟ್ಟವು, **ಕುಮರ್** ಎಂದರೆ ಭರ್ತೃವಿಲ್ಲದ ಕನ್ನಿಕೆಯು, ಆದುದರಿಂದ **ಕುಮರಿರಾದಪಡಿ** ಎಂದರೆ ಆ ಗುಣಗಳಿಗೆ ಯೋಗ್ಯನಾದ ಸ್ವಾಮಿ, ಯು ಇಲ್ಲದಿರೋಣ ಹೇಗೋ ಹಾಗೆ ಎಂದರೆ ಆ ಗುಣಗಳು ವ್ಯರ್ಥವಾಗದಹಾಗೆ **ಅವ್ಮುಖತ್ತಾಲೆ** - ಆ ಮೂಲಕವಾಗಿ, "**ಉದಾರಾಸ್ಸರ್ವ ಏವೈತೇ**" - "ಈ ನಾಲ್ಕು ಜನ ಭಕ್ತರೆಲ್ಲರೂ ಉದಾರಿಗಳೇ" **ಎನ್ರು** - ಎಂಬದಾಗಿ, **ತಾನೇ ಕೊಣ್ಡಾಡುಮ್ಪಡಿ** - ತಾನೇ ಹೊಗಳುವಹಾಗೆ, **ಅತಿಶಯಾಧಾಯಕನಾವ್**- ಅತಿಶಯವನ್ನುಂಟುಮಾಡುವನಾಗಬಹುದು. "**ಶುಭೇತ್ವಸೌ**" ಎಂಬುವದು ಉತ್ತರಾರ್ಧವು, **ಪೂರ್ವಾರ್ಧವು** "**ಮತ್ಸ್ಯೋಯಥಾ ಸ್ರೋತ ಇವಾಭಿ ಪಾತೀ ತಥಾಕೃತಂ ಪೂರ್ವಮುಪೈತಿಕರ್ಮ**" ಎಂಬುವದು "ಮತ್ಸ್ಯವು

---

(೧) ಶಾಂತಿ. ೧೯೯.೨೫

ಪ್ರವಾಹದ ನೀರಿಗೆ ಅಭಿಮುಖವಾಗಿ ಹೇಗೆ ಹೋಗುತ್ತದೋ ಹಾಗೆಯೇ ಚೇತನನು ತನ್ನ ಪೂರ್ವದಲ್ಲಿ ಮಾಡಿದ ಸುಕೃತ ದುಷ್ಕೃತರೂಪ ಕರ್ಮವನ್ನೇ ಹೊಂದುವನು," ಎಂಬುವದು ಇದರರ್ಥವು. ಶಾಸ್ತ್ರಸಮ್ಮತವಾದ ಪ್ರವೃತ್ತಿಯಿದ್ದರೆ ಸರ್ವೇಶ್ವರನು ಸಂತೋಷಿಸುವನು. ಅದರಿಂದ ಸರ್ವೇಶ್ವರನ ಅನುಗ್ರಹ ಉಂಟಾಗಿ ಈತನಿಗೆ ಸುಖಪ್ರಾಪ್ತಿಯುಂಟು. ಶಾಸ್ತ್ರವಿರುದ್ಧಾಚರಣೆಯಾದರೆ ಸರ್ವೇಶ್ವರನು ಸಂತೋಷಿಸನು, "ಆಜ್ಞಾಚ್ಛೇದೀ ಮಮದ್ರೋಹೀ" ಎಂದು ಹೇಳಿರುವಹಾಗೆ ಭಗವನ್ನಿಗ್ರಹಕ್ಕೆ ಪಾತ್ರನಾಗುವದರಿಂದ ದುಃಖಭಾಕ್ಕಾಗುವನು. "ಶುಭೇತ್ವಸೌತುಷ್ಯತಿ" ಎಂಬಲ್ಲಿ ಅಸೌ ಎಂದರೆ ಎಲ್ಲಿ ಜೀವಾತ್ಮನೆಂದು ಅರ್ಥ ಹೇಳಿಯಾರೋ ಎಂದು ಮಹರ್ಷಿಯು ಪರಮಶ್ಶರೀರಿ ಎಂದು ಪ್ರಯೋಗಿಸಿರುತ್ತಾರೆ. ಇದರಿಂದ ಜೀವಾತ್ಮನನ್ನು ಕುರಿತು ಹೇಳಲಿಲ್ಲವೆಂದೂ, ಸಂತೋಷಪಡುವವನು ಮತ್ತು ಪಡದವನೂ ಸರ್ವೇಶ್ವರನೇ, ಸರ್ವೋತ್ಕೃಷ್ಟ ಶರೀರಿಯೇ ಎಂದೂ ಹೇಳಲ್ಪಟ್ಟಿತು. ಹೀಗೆ ವೈದಿಕ ಮರ್ಯಾದೆಗೆ ಅನುಗುಣವಾದ ಧರ್ಮಗಳನ್ನೆಸಗುವರು ಸರ್ವೇಶ್ವರಾನುಗ್ರಹಕ್ಕೆ ಪಾತ್ರರಾಗುವದೂ ಅಲ್ಲದೆ, ಆತನ ಉದಾರಾದಿ ಗುಣಗಳಿಗೆ ಪಾತ್ರರಾಗಿ ಸರ್ವೇಶ್ವರನಿಂದ ಉದಾರರೆಂದು ಹೊಗಳಲ್ಪಟ್ಟು ಈ ರೀತಿಯಲ್ಲಿ ಸರ್ವೇಶ್ವರನಿಗೆ ಅತಿಶಯವನ್ನುಂಟುಮಾಡುವರೆಂದು ಹೇಳಲ್ಪಟ್ಟಿತು. ಈ ಗೀತಾಶ್ಲೋಕವು ಯಾವುದೆಂದರೆ:—

"ಉದಾರಾಸ್ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಮ್ ।
ಆಸ್ಥಿತ ಸ್ಸಹಿ ಯುಕ್ತಾತ್ಮಾ ಮಾಮೇವಾನುತ್ತಮಾಂಗತಿಂ ॥"

ಶ್ರೀಕೃಷ್ಣನು ಹೇಳುತ್ತಾನೇನೆಂದರೆ:- ನಾಲ್ಕು ವಿಧ ಭಕ್ತರು ತನ್ನನ್ನು ಭಜಿಸುವರೆಂದೂ ಅವರು ಹಿಂದೆ ಇದ್ದ ಐಶ್ವರ್ಯವನ್ನು ಕಳಕೊಂಡವನು, ಹೊಸದಾಗಿ ಐಶ್ವರ್ಯವನ್ನು ಬಯಸುವವನು, ಜೀವಾತ್ಮೋಪಾಸಕನು, ಮೋಕ್ಷಾರ್ಥಿಯಾದ ಜ್ಞಾನಿಯಾದ ಸರ್ವೇಶ್ವರೋಪಾಸಕನು ಎಂದು ಹೇಳಿ, ಇವರುಗಳಲ್ಲಿ ಜ್ಞಾನಿಯೇ ಸರ್ವಶ್ರೇಷ್ಠನೆಂದೂ, ಆತನೇ ತನಗೆ ತುಂಬಾ ಪ್ರಿಯನೆಂದುಪದೇಶಿಸಿ ಅನಂತರ ಇವರು ನಾಲ್ಕು ಜನರೂ ತುಂಬಾ ಉದಾರಿಗಳೆಂದು ಹೇಳುತ್ತಾರೆ. ಏಕೆಂದರೆ ಇವರೆಲ್ಲರೂ ತಮ್ಮ ಇಷ್ಟಾರ್ಥಸಿದ್ಧಿಗಾಗಿ ತನ್ನನ್ನೇ ಉಪಾಸಿಸುವರು, ಆದುದರಿಂದ ಎಂಬ ಭಾವವು. ಯಾರು ತನ್ನಿಂದ ಅಲ್ಪಸ್ವಲ್ಪವನ್ನಾಗಲಿ ಪಡೆಯುವರೋ ಅವರು ತನಗೆ ಹೀಗೆ ಅತಿಶಯವನ್ನು ತೋರಿಸಿದವರಾದುದರಿಂದ ತನಗೆ ಸಮಸ್ತವನ್ನೂ ದಯಪಾಲಿಸಿದವರಾಗಿ ತಾನು ಭಾವಿಸುವನು. ಜ್ಞಾನಿಯಾದರೋ ತನಗಧೀನವಾದ ಆತ್ಮಧಾರಣೆಯುಳ್ಳವನಾಗಿ ಭಾವಿಸುವನು, ಅದೇನು ಹಾಗೆ, ಎಂದರೆ, ಈ ಜ್ಞಾನಿಯು ತನ್ನನ್ನು ಬಿಟ್ಟು ಆತ್ಮಧಾರಣೆಯಿಲ್ಲದವನಾಗಿ ತನ್ನನ್ನೇ

ಅಪ್ಪಡಿಯೇ ನಿತ್ಯರುಮ್, ಮುಕ್ತರುಮ್ ಈಶ್ವರಾಭಿಪ್ರಾಯತ್ತೈ ಸಾಕ್ಷಾತ್ಕರಿತ್ತು ಪಣ್ಣುಗಿರ ಕೈಙ್ಕರ್ಯಙ್ಗಳಾಲೆ (೧) "ಪ್ರಹರ್ಷಯಿಷ್ಯಾಮಿ ಸನಾಥ ಜೀವಿತಃ" ಎನ್ಗಿರಪಡಿಯೇ ಭೋಗವಿಶೇಷತ್ತೈ ಯುತ್ಪಾದಿತ್ತು ಅನುಭವಿತ್ತಾಲೆ ಅತಿಶಯಾಧಾಯಕರಾವರ್ಗಳ್.

ಶ್ರೇಷ್ಠವಾದ ಪ್ರಾಪ್ಯವೆಂದು ತಿಳಿದಿರುವನು, ಆದುದರಿಂದ ಆತನನ್ನು ಬಿಟ್ಟು ತನಗೂ ಆತ್ಮಧಾರಣವು ಸಾಧ್ಯವಲ್ಲವು ಎಂಬುವುದು ಈ ಶ್ಲೋಕಾಭಿಪ್ರಾಯವು". ಹೀಗೆ ಕೊಂಡಾಡಿ ಅಂತವರು ತನಗೆ ಅತಿಶಯವನ್ನುಂಟುಮಾಡಿರುತ್ತಾರೆಂದು ಭಾವಿಸುವನು ಎಂಬ ತಾತ್ಪರ್ಯವು.

ಅನಂತರ ನಿತ್ಯರು, ಮುಕ್ತರುಗಳು, ಪ್ರಪನ್ನರು, ಇವರುಗಳ ವಿಷಯದಲ್ಲಿ ಹೇಗೆ ಎಂಬುವದನ್ನು ತಿಳಿಸುತ್ತಾರೆ. ಶಾಸ್ತ್ರಾನುಗುಣವಾಗಿ ಪ್ರವೃತ್ತಿಯುಳ್ಳವರು ಹೇಗೆ ಅತಿಶಯಾಧಾಯಕರೆಂಬುವದು ಉಪಪಾದಿಸಲ್ಪಟ್ಟಿತು. ನಿತ್ಯಮುಕ್ತರುಗಳ ವ್ಯಾಪಾರಗಳಲ್ಲಿ ಅತಿಶಯಾಧಾಯಕತ್ವಕ್ಕೆ ವಿಶೇಷ ಉಂಟೆಂದು ಹೇಳುತ್ತಾರೆ, ಅದು ಯಾವುದೆಂದರೆ ಈಶ್ವರನ ಅಭಿಪ್ರಾಯವನ್ನು ತಿಳಿದು ಕೈಙ್ಕರ್ಯವನ್ನೆಸಗುವರು ; ಆದುದರಿಂದ ಸರ್ವೇಶ್ವರನಿಗೆ ಈ ಕೈಙ್ಕರ್ಯವು ಪರಮ ಭೋಗ್ಯವಾಗಿ ಅತಿಶಯಾಧಾಯಕವು ; ಹಾಗೆಯೇ, ಕೃತಕೃತ್ಯನಾದ ಪ್ರಪನ್ನನು ಮಾಡುವ ಭಗವತ್ಕೈಙ್ಕರ್ಯಗಳೂ ಕೂಡ ಶಾಸ್ತ್ರಮೂಲಕವಾಗಿ ಉಂಟಾದ ಭಗವದಭಿಪ್ರಾಯವನ್ನನುಸರಿಸಿರುವದರಿಂದ, ನಿತ್ಯಮುಕ್ತರುಗಳ ಕೈಙ್ಕರ್ಯಗಳಿಗೆ ಸಮಾನವಾಗಿ ಭೋಗ್ಯಭೂತವಾದವುಗಳೇ ಎಂದು ತಿಳಿಸುತ್ತಾರೆ.

ಅಪ್ಪಡಿಯೇ - ಅದರ ಹಾಗೆಯೇ, ನಿತ್ಯರೂ, ಮುಕ್ತರೂ ಈಶ್ವರನ ಅಭಿಪ್ರಾಯವನ್ನು ಸಾಕ್ಷಾತ್ಕರಿಸಿ, **ಪಣ್ಣುಗಿರ ಕೈಙ್ಕರ್ಯಙ್ಗಳಾಲೇ** - ಮಾಡುವ ಕೈಙ್ಕರ್ಯಗಳ ಮೂಲಕವಾಗಿ, "**ಸನಾಥಜೀವಿತಃ** - ನಾಥನೊಂದಿಗಿರುವದರಿಂದ ನನ್ನ ದೀನದೆಸೆಯು ಕಳೆದು ಜೀವಿಸಿಕೊಂಡಿರುವವನಾಗಿ, **ಪ್ರಹರ್ಷಯಿಷ್ಯಾಮಿ** ನಿನಗೆ ಸ್ವಾರ್ಥಕರ್ತೃತ್ವ, ಸ್ವತಂತ್ರಕರ್ತೃತ್ವ, ಅಂತಹ ಭೋಕ್ತೃತ್ವ ಮುಂತಾದ ಯಾವದೊಂದೂ ಭ್ರಮೆ ಇಲ್ಲದಹಾಗೆ ಕೈಙ್ಕರ್ಯಗಳನ್ನೆಸಗಿ ನಿನ್ನನ್ನು ಸಂತೋಷಗೊಳಿಸುವೆನು; ಎಂದರೆ ಸಂತೋಷಗೊಳಿಸುವದೇ ನನಗೆ ಮುಖ್ಯ ಪ್ರಯೋಜನವು ಎಂಬ ಭಾವವು." **ಎನ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಭೋಗವಿಶೇಷತ್ತೈ** ಮುಖ್ಯವಾಗಿ ಭೋಗರಸವನ್ನು, **ಉತ್ಪಾ**

(೧) ಸ್ತೋತ್ರ. ೪೬

ದಿತ್ಸ್ರ - ಉಂಟುಮಾಡಿ, ಅನುಮುಖತ್ವಾಲೆ - ಆ ಮೂಲಕವಾಗಿ, **ಅತಿಶಯಾಧಾಯಕರಾವರಗಳ್** - ಅತಿಶಯವನ್ನುಂಟುಮಾಡುವರಾಗುವರು. ಬದ್ಧನು ತನ್ನ ಅಶಾಸ್ತ್ರೀಯ ಪ್ರವರ್ತನೆಯಿಂದ ಶಾಸ್ತ್ರನಾಗಿರುವ ಸರ್ವೇಶ್ವರನಿಗೆ ಲೀಲಾರಸವನ್ನುಂಟುಮಾಡಿ ಅತಿಶಯಾಧಾಯಕನಾಗುವನೆಂದೂ, ಆತನು ತನ್ನ ಶಾಸ್ತ್ರೀಯ ಪ್ರವರ್ತನೆಯಿಂದ ಕರುಣೆ ಔದಾರ್ಯಾದಿ ಗುಣೋತ್ತಂಭಕನಾಗಿ ಅತಿಶಯಾಧಾಯಕನೆಂದೂ ಹೇಳಿದರು; ನಿತ್ಯಮುಕ್ತರಾದರೋ, ತಮ್ಮ ಅಹಂಕಾರ ಮಮಕಾರ ರಹಿತವಾದ, ಸರ್ವೇಶ್ವರನಿಗೆ ಇಷ್ಟವಾದ, ಕೈಂಕರ್ಯಗಳನ್ನೆಸಗಿ ಭೋಗರಸವನ್ನುಂಟುಮಾಡಿ ಅತಿಶಯಾಧಾಯಕರಾಗುವರು. ಈ ಭಾವವು ಶ್ರೀ ಯಾಮುನೇಯರವರ ಸ್ತೋತ್ರರತ್ನ ಶ್ಲೋಕದಲ್ಲಿ ಉಪಪಾದಿತವಾಗಿರುತ್ತದೆ. ಅದು ಯಾವುದೆಂದರೆ :—

"ಭವನ್ತಮೇವಾನುಚರ ನ್ನಿರಂತರಂ
ಪ್ರಶಾನ್ತ ನಿಶ್ಶೇಷ ಮನೋರಥಾಂತರಃ ।
ಕದಾಹ ಮೈಕಾನ್ತಿಕ ನಿತ್ಯಕಿಂಕರಃ
ಪ್ರಹರ್ಷಯಿಷ್ಯಾಮಿ ಸನಾಥಜೀವಿತಃ ॥"

"ಐಹಿಕ ಮನೋರಥಗಳನ್ನೂ ಸ್ವರ್ಗಾದಿ ಮನೋರಥಗಳನ್ನೂ ಸರ್ವಾತ್ಮನಾ ತ್ಯಜಿಸಿ, ದಾಸಭೂತನಾಗಿ ನಿನ್ನನ್ನೇ ಸದಾ ಅನುಸರಿಸಿಕೊಂಡಿರುವ ತನಗೆ ನಿರುಪಾಧಿಕ ಕೈಂಕರ್ಯಪ್ರಾಪ್ತಿಯು ಎಂದಿಗೋ ? ಎಂದು ಪ್ರಾರ್ಥಿಸುತ್ತಾರೆ. **ಭವಂತಮೇವ** - ಇತರರನ್ನು ಅಪೇಕ್ಷಿಸದೆ ಪ್ರಾಪ್ಯನಾಗಿಯೂ ಪ್ರಾಪಕನಾಗಿಯೂ ಇರಲು ಯೋಗ್ಯನಾದ ಸರ್ವಾಕಾರ ಪರಿಪೂರ್ಣನಾದ ನಿನ್ನನ್ನೇ, **ನಿರಂತರಂ** - ನಿನ್ನ ಪಾದವನ್ನೂ ಮನಸ್ಸನ್ನು ಕೊಡದಹಾಗೆ ಯಾವಾಗಲೂ, **ಅನುಚರನ್** - ಆಯಾ ಅವಸ್ಥೆಗಳಿಗೆ ಉಚಿತವಾದ ಸೇವೆಗಳ ಮೂಲಕ ಅನುಸರಿಸಿರುವವನಾಗಿ, **ಪ್ರಶಾನ್ತ ನಿಶ್ಶೇಷ ಮನೋರಥಾಂತರಃ** - ಇಂತಹ ಕೈಂಕರ್ಯಪ್ರಾಪ್ತಿಯುಂಟಾಗುವದಕ್ಕಾಗಿ, ನಿನ್ನ ಕೃಪೆಯಿಂದಲೇ ಶಮನ ಹೊಂದಿದ ಸಮಸ್ತವಾದ ಇತರ ಮನೋರಥಗಳುಳ್ಳವನಾಗಿ, **ಐಕಾನ್ತಿಕ ನಿತ್ಯಕಿಂಕರಃ** - ನಿನ್ನೊಬ್ಬನಲ್ಲೇ ಸಕ್ತವಾದ ಮನಸ್ಸುಳ್ಳವನಾದುದರಿಂದ, ಇನ್ನೊಬ್ಬರಿಗಿಲ್ಲದೆ ಸದಾ ನಿನಗೇನೇ ದಾಸಭೂತನಾಗಿ, **ಅಹಂ** - ನಾನು, **ಕದಾ** - ಯಾವಾಗ, **ಸನಾಥಜೀವಿತಃ** - ಇದುವರೆವಿಗೂ ನಿನ್ನನಾಶ್ರಯಿಸದಿದುದರಿಂದ ಉಂಟಾದ ದೈನ್ಯವನ್ನು, ಈಗ ನಾಥನುಳ್ಳವನೆಂದು ತಿಳಿದುದರಿಂದ ಕಳೆದುಕೊಂಡು ಸತ್ತೆಯುಳ್ಳವನಾಗಿ, **ಪ್ರಹರ್ಷಯಿಷ್ಯಾಮಿ** - ನಿರುಪಾಧಿಕ ಕೈಂಕರ್ಯಮೂಲಕ ಸಂತೋಷಗೊಳಿಸುವೆನೋ!" ಎಂಬುವದು ಈ ಶ್ಲೋಕಾಭಿಪ್ರಾಯವು.

ಇಪ್ಪ್ರಕಾರಮ್ ಶಾಸ್ತ್ರಮುಖತ್ತಾಲೆ ಈಶ್ವರಾಭಿಪ್ರಾಯತ್ತೈ
ಯುರಿನ್ದು ಕೈಙ್ಕರ್ಯಮ್ ಪಣ್ಣುಗಿರ ಕೃತಕೃತ್ಯನುಕ್ಕುಮ್ ಸಮಾನಮ್

ಭಾಗವತ ಕೈಙ್ಕರ್ಯಸ್ಯ ಭಗವದತ್ಯಂತಾಭಿಮತತ್ವಂ

ಇವನ್ಗಳ್ ಶಾಸ್ತ್ರವಿರುದ್ಧಙ್ಗಳಾಲೆ ಈಶ್ವರನುಕ್ಕು ಲೀಲಾರಸ

ಮುಂದಿನ ವಾಕ್ಯದಿಂದ ಕೃತಕೃತ್ಯನಾದ ಪ್ರಪನ್ನನು ಮಾಡುವ ಕೈಙ್ಕರ್ಯವೂ ಸಹ ನಿತ್ಯಮುಕ್ತರ ಕೈಙ್ಕರ್ಯಗಳಿಗೆ ಸಮಾನವಾಗಿ ಅತಿಶಯಾಧಾಯಕವೆಂದು ಹೇಳುತ್ತಾರೆ. **ಇಪ್ಪ್ರಕಾರಂ** - ಹೀಗೆ ಭೋಗವಿರೋಧವನ್ನುಂಟುಮಾಡಿ ತನ್ಮೂಲಕವಾಗಿ ಆತನಿಗೆ ಅತಿಶಯಾಧಾಯಕನಾಗುವನು, **ಶಾಸ್ತ್ರಮುಖತ್ತಾಲೆ** -- ಶಾಸ್ತ್ರಮೂಲಕವಾಗಿ, **ಈಶ್ವರಾಭಿಪ್ರಾಯತ್ತೈಯುರಿನ್ದು** - ಈಶ್ವರನ ಅಭಿಪ್ರಾಯವನ್ನು ತಿಳಿದು ಎಂದರೆ ಆತನ ಆಜ್ಞಾರೂಪಗಳಾದ ವಿಧಿನಿಷೇಧವಾಕ್ಯಗಳನ್ನನುಸರಿಸಿ, **ಕೈಙ್ಕರ್ಯಮ್ ಪಣ್ಣುಗಿರ** - ಕೈಙ್ಕರ್ಯಗಳನ್ನು ಮಾಡುವ- **ಕೃತಕೃತ್ಯನುಕ್ಕು**- ಭರನ್ಯಾಸವನ್ನನುಷ್ಠಿಸಿರುವ ಕೃತಕೃತ್ಯನಿಗೆ, **ಸಮಾನವ್** ಸಮಾನವು ಶಾಸ್ತ್ರಸಮ್ಮತವಾದ ಕೈಙ್ಕರ್ಯಗಳನ್ನು ಎಸಗುವದರಿಂದ ಸರ್ವ ಕರಾರಾಧ್ಯನು ಸುಪ್ರೀತನಾಗುವದರಿಂದ, ಆ ಕೈಙ್ಕರ್ಯಗಳು ಭೋಗ್ಯಭೂತವಾದುವಾಗುವದರಿಂದ ಈ ಕೃತಕೃತ್ಯನೂ ಕೂಡ ನಿತ್ಯಮುಕ್ತರುಗಳಹಾಗೆ ವಿಶೇಷ ಅತಿಶಯಾಧಾಯಕನಾಗುವನೆಂಬ ಭಾವವು.

ಬದ್ಧನು ಶಾಸ್ತ್ರವಿಹಿತವಲ್ಲದ ಪ್ರವರ್ತನೆಯುಳ್ಳವನಾದರೆ ಸರ್ವೇಶ್ವರನ ಶಿಕ್ಷೆಗೆ ಒಳಪಟ್ಟು ಲೀಲಾರಸೋತ್ಪಾದಕನಾಗಿ ಅತಿಶಯಾಧಾಯಕನಾಗುವನೆಂದೂ ಶಾಸ್ತ್ರಸಮ್ಮತವಾದ ಪ್ರವೃತ್ತಿಯುಳ್ಳವನಾದರೆ ಸಂತೋಷವನ್ನುಂಟುಮಾಡಿ ಶ್ಲಾಘಿಸಲ್ಪಡುವನಾಗಿ ಅತಿಶಯಾಧಾಯಕನೆಂದೂ, ನಿತ್ಯರೂ ಮುಕ್ತರೂ ಮಾಡುವ ಕೈಙ್ಕರ್ಯಗಳು ಪರಮ ಭೋಗ್ಯವಾಗಿ, ಹೀಗೆ ಅವರುಗಳೂ ಅತಿಶಯಾಧಾಯಕರಾಗುವರೆಂದೂ, ಭರನ್ಯಾಸಮಾಡಿದ ಕೃತಕೃತ್ಯರು ಮಾಡುವ ಕೈಙ್ಕರ್ಯಗಳೂ ಕೂಡ ಹಾಗೆಯೇ ಭೋಗ್ಯಗಳಾಗುವದರಿಂದ ಅವರೂ ಅತಿಶಯಾಧಾಯಕರೆಂದೂ ಹೇಳಲ್ಪಟ್ಟಿತು

ಭಾಗವತ ಕೈಙ್ಕರ್ಯವು ಭಗವಂತನಿಗೆ ಅತ್ಯಂತ ಪ್ರಿಯವಾದುದು

ಹೀಗೆ ನಾನಾವಿಧ ಅತಿಶಯಾಧಾನ ಭೇದಗಳಲ್ಲಿ, ಸರ್ವೇಶ್ವರನು ಯಾವ

ಮಾತ್ರತ್ತೈ ಉಣ್ಡಾಕ್ಕುಮ್ಪೋದು ತನಕ್ಕು ಅನರ್ಥಪರ್ಯವಸಿತಮಾಯಿ

ಸಂದರ್ಭಗಳಲ್ಲಿ ಮಾತ್ರ ಕೈಂಕರ್ಯವಾಗಿ ಭಾವಿಸುವನು ಎಂದರೆ **ಹೇಳುತ್ತಾರೆ** :— **ಇವತ್ತಿಲ್** - ಈ ಮೇಲೆ ಹೇಳಿದ ಅತಿಶಯಾಧಾಯಕತ್ವಭೇದಗಳಲ್ಲಿ, **ಶಾಸ್ತ್ರವಿರುದ್ಧಙ್ಗಳಾಲೆ** - ಶಾಸ್ತ್ರವಿರುದ್ಧವಾದ ಕರ್ಮಗಳಿಂದ, **ಈಶ್ವರನುಕ್ಕು** - ಸರ್ವೇಶ್ವರನಿಗೆ, **ಲೀಲಾರಸಮಾತ್ರತ್ತೈ** - ಲೀಲಾರಸಮಾತ್ರವನ್ನೇ, ಆ ಪ್ರವೃತ್ತಿಗಳು ಸರ್ವೇಶ್ವರನಿಗೆ ಅಭಿಮತವಾದವಲ್ಲವಾದುದರಿಂದ ಭೋಗ್ಯಭೂತವಾದವುಗಳಲ್ಲವೆಂಬ ಭಾವವು, **ಉಣ್ಡಾಕ್ಕುಮ್ಪೋದು** - ಉಂಟುಮಾಡುವಾಗ, **ತನಕ್ಕು ಅನರ್ಥಪರ್ಯವಸಿತಮಾಯಿರುಕ್ಕುಮ್** - ತನಗೆ ನರಕಪ್ರಾಪ್ತಿ, ಹೀನಜನ್ಮಪ್ರಾಪ್ತಿ ಮೊದಲಾದ ಅನೇಕ ಅನರ್ಥಗಳಲ್ಲಿ ಪರ್ಯವಸಾನವನ್ನುಂಟುಮಾಡುವಂಥಾದಾಗುವದು. ಶಾಸ್ತ್ರವಿರುದ್ಧಾಚರಣೆಯು ತನಗೆ ತತ್ಕಾಲದಲ್ಲಿ ಹಿತವಾಗಿದ್ದರೂ ಸರ್ವೇಶ್ವರಾಭಿಮತಕ್ಕೆ ವಿರುದ್ಧವಾದುದರಿಂದ **ಆಜ್ಞಾಚ್ಛೇದೀ ಮಮದ್ರೋಹೀ**" ಎಂದು ಹೇಳಿರುವಹಾಗೆ ಭಗವನ್ನಿಗ್ರಹಕ್ಕೆ ಪಾತ್ರನಾಗಿ ಅನರ್ಥಗಳಿಗೆ ಗುರಿಯಾಗುವನೆಂಬ ಭಾವವು. ಯಾವ ಸಂದರ್ಭದಲ್ಲಿ ಭಗವದನುಗ್ರಹಕ್ಕೆ ಪಾತ್ರನಾಗಿ, ಈತನು ಮಾಡುವದು ಭೋಗ್ಯಭೂತವಾಗಿ ಕೈಂಕರ್ಯರೂಪವಾದುದಾಗಿ, ತನಗೂ ಕೂಡ ಸ್ವಾಭಿಮತಪುರುಷಾರ್ಥವನ್ನು ಕೊಡುವಂಥಾದಾಗುತ್ತದೆಂಬುವದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ :— **ಬದ್ಧದಶೈಯಿಲ್** - ಬದ್ಧದೆಶೆಯಲ್ಲಿ, **ಶಾಸ್ತ್ರತ್ತಾಲುಮ್** - ಶಾಸ್ತ್ರಮೂಲಕವಾಗಿಯೂ, **ಮುಕ್ತದಶೈಯಿಲ್** - ಮುಕ್ತಾವಸ್ಥೆಯಲ್ಲಿ, **ಪ್ರತ್ಯಕ್ಷತ್ತಾಲುಮ್** - ಪ್ರತ್ಯಕ್ಷದಲ್ಲೂ, **ಈಶ್ವರಾಭಿಪ್ರಾಯತ್ತೈಕಣ್ಡು** - ಸರ್ವೇಶ್ವರನಭಿಪ್ರಾಯವನ್ನು ತಿಳಿದು, **ತದನುರೂಪಮಾಗ ವರ್ತಿಕ್ಕುಮ್ಪೋದು** - ಅದಕ್ಕನುಗುಣವಾಗಿ ಪ್ರವರ್ತಿಸುವಾಗ, **ಈಶ್ವರನುಡೈಯಲೀಲಾದಿ ಪುರುಷಾರ್ಥತ್ತುಡನೆ** - ಸರ್ವೇಶ್ವರನ ಲೀಲೆಯೇ ಮೊದಲಾದ ಪ್ರಯೋಜನದೊಂದಿಗೆ, ಇಲ್ಲಿ **ಆದಿ** ಶಬ್ದದಿಂದ ಭೋಗವೂ ಹೇಳಲ್ಪಟ್ಟಿತು. **ಆನುಷಙ್ಗಿಕಮಾಗ** - ಅದಕ್ಕೆ ಸಂಬಂಧಿಸಿದುದಾಗಿಯೇ, **ತನಕ್ಕುಮ್** - ತನಗೂ, **ಸ್ವಾಭಿಮತ ಪುರುಷಾರ್ಥಮುಣ್ಡಾಮ್** - ತನಗಭಿಮತವಾದ ಪುರುಷಾರ್ಥವಾದ ಪರಮ ಪುರುಷನ ಕೈಂಕರ್ಯಪ್ರಾಪ್ತಿಯುಂಟಾಗಬಹುದು. ಸರ್ವೇಶ್ವರನಭಿಪ್ರಾಯವನ್ನು ತಿಳಿಯಬೇಕಾದರೆ, ಬದ್ಧಾವಸ್ಥೆಯಲ್ಲಿ ಈತನಿಗೆ ಜ್ಞಾನಸಂಕೋಚವಿರುವದರಿಂದ ಈತನಿಗೆ ಶಾಸ್ತ್ರವೇ ಜ್ಞಾನಚಕ್ಷುಸ್ಸನ್ನು ಕೊಡುವಂಥಾದ್ದು ; ಮುಕ್ತಾವಸ್ಥೆಯಲ್ಲಾ

ರುಕ್ಕುಮ್. ಬದ್ಧದಶೈಯಿಲ್ ಶಾಸ್ತ್ರತ್ತಾಲುಮ್, ಮುಕ್ತದಶೈಯಿಲ್ ಪ್ರತ್ಯಕ್ಷತ್ತಾಲುಮ್ ಈಶ್ವರಾಭಿಪ್ರಾಯತ್ತೈಯಱಿನ್ದು, ತದನುರೂಪಮಾಗ ವರ್ತಿಕ್ಕುಮ್ ಪೋದು, ಈಶ್ವರನುಡೈಯ ಲೀಲಾದಿ ಪುರುಷಾರ್ಥತ್ತುಡನೇ ಆನುಷಙ್ಗಿಕಮಾಗತ್ತನಕ್ಕುಮ್ ಸ್ವಾಭಿಮತ ಪುರುಷಾರ್ಥಮುಣ್ಡಾಮ್. ಅನ ಪಿನ್ಬು ಚೇತನಾನವನ್ ಬುದ್ಧಿಪೂರ್ವಕಮಾಗವೊರು ಪ್ರವೃತ್ತಿ ಪಣ್ಣುಮ್ ಪೋದು, ತತ್ಪುರುಷಾರ್ಥಮುಮಾನುಷಙ್ಗಿಕ

ದರೋ ಅಂತಹ ಜ್ಞಾನಸಂಕೋಚವಿಲ್ಲದುದರಿಂದ ಶಾಸ್ತ್ರವೇ ಆಗ ಈತನಿಗೆ ಬೇಕಾಗುವದಿಲ್ಲವು. ಪ್ರತ್ಯಕ್ಷದಲ್ಲೇ ಪರಮಾತ್ಮಾಭಿಪ್ರಾಯವನ್ನು ತಿಳಿಯಬಹುದು. ಆದುದರಿಂದಲೇ **ಬದ್ಧದಶೈಯಿಲ್ ಶಾಸ್ತ್ರತ್ತಾಲುಮ್ ಮುಕ್ತದಶೈಯಿಲ್ ಪ್ರತ್ಯಕ್ಷತ್ತಾಲುಮ್** ಎಂಬ ಪ್ರಯೋಗವು. ಹೀಗೆ ಈಶ್ವರಾಭಿಪ್ರಾಯಾನುಸಾರ ನಡೆಸುವ ಕಾರ್ಯಗಳೇ ಆತನಿಗೆ ಕೈಂಕರ್ಯಗಳಾಗಿ ಪರಿಣಮಿಸಿ, ಆತನಿಗೆ ಲೀಲಾರಸ ಭೋಗರಸಗಳನ್ನುಂಟುಮಾಡುವುವಗಳಾಗಿ ಅವುಗಳಿಂದ ತಾನು ಸುಪ್ರೀತನಾಗುವನು. ಇಂತಹ ಪ್ರವರ್ತನೆಯಿಂದ ಸರ್ವೇಶ್ವರನಿಗೂ ತನಗೂ ಸಹ ಪ್ರಯೋಜನವು. ಆತನಿಗೆ ಲೀಲಾರಸ ಭೋಗರಸಗಳುಂಟುಮಾಡುವದರಿಂದ ಆತನಿಗೆ ಪ್ರಯೋಜನವು. ತನಗಾದರೋ ತನ್ನಿಷ್ಟಾನುಸಾರ ಪುರುಷಾರ್ಥಪ್ರಾಪ್ತಿಯು.

ಈ ಮುಂದಿನ ವಾಕ್ಯದಿಂದ ಭಗವತ್ಕೈಂಕರ್ಯದ ಎಲ್ಲೆಯು ಭಾಗವತ ಕೈಂಕರ್ಯದವರೆಗೂ ಹೇಗೆ? ಭಾಗವತ ಕೈಂಕರ್ಯಕ್ಕೆ ಪ್ರಧಾನ್ಯವು ಹೇಗೆ? ಎಂಬುವದನ್ನು ವಿಶದೀಕರಿಸುತ್ತಾರೆ. ಲೋಕದಲ್ಲಿ ರಾಜಸೇವಕನು ರಾಜನಿಗೆ ಕೈಂಕರ್ಯ ಮಾಡುವದಕ್ಕೆ ಬದಲಾಗಿ ಇತರರಿಗೆ ಕೈಂಕರ್ಯಮಾಡಿದರೆ ರಾಜನ ಕೋಪಕ್ಕೆ ಪಾತ್ರನಾಗುವನು. ಹೀಗಿರುವಲ್ಲಿ ಭಾಗವತ ಕೈಂಕರ್ಯವು ಭಗವತ್ಕೈಂಕರ್ಯದ ಎಲ್ಲೆಯು ಹೇಗೆ ಎಂದರೆ, ರಾಜಸೇವಕನು ರಾಜಕುಮಾರನಿಗೆ ಕೈಂಕರ್ಯವೆಸಗಿದರೆ ರಾಜನಿಗೆ ಅದು ಹೇಗೆ ಪರಮಭೋಗ್ಯವಾಗುತ್ತದೋ, ಹಾಗೆಯೇ ಭಾಗವತಕೈಂಕರ್ಯವೂ ಕೂಡ ಸರ್ವೇಶ್ವರನಿಗೆ ತನಗೆ ಪ್ರಿಯತಮನ ಕೈಂಕರ್ಯವಾದುದರಿಂದ ಪರಮಭೋಗ್ಯವಾಗುತ್ತದೆಂದು ತಿಳಿಸುತ್ತಾರೆ.

ಅನಪಿನ್ಬು - ಹೀಗಾದನಂತರ. ಹೇಗಾದನಂತರವೆಂದರೆ, ಶಾಸ್ತ್ರಾನುಗುಣ್ಯವಾದ ಪ್ರವೃತ್ತಿಯು ಯಾವಾಗ ಇಬ್ಬರಿಗೂ ಪ್ರಯೋಜನವುಳ್ಳದ್ದಾಯಿತೋ ಆಗ ಎಂಬ ಭಾವವು, **ಚೇತನನಾನವನ್** - ಚೇತನನಾದ ಈತನು ಬುದ್ಧಿಪೂರ್ವಕವಾಗಿ, **ಒರುಪ್ರವೃತ್ತಿ ಪಣ್ಣುಮ್ಪೋದು** - ಒಂದು ಕಾರ್ಯವನ್ನು

ಮಾಗವಾಗಿಲುಮ್ ಪುಗಿರವೇಣ್ಡಿಯುತ್ತಾಲದುವರುಮ್ಪೋದು ಈಶ್ವರಾಭಿಪ್ರಾಯ ವಿಶೇಷಮುಡಿಯರಾಗ ವರವೇಣ್ಡುಗೈಯಾಲ್ ಅದಕ್ಕಾಗ ಈಶ್ವರಾಭಿಪ್ರಾಯತ್ತೈಯಾರಾಯ್‌ನ್ದ ವಿಡತ್ತಿಲ್ ಭಾಗವತ ಕೈಂಕರ್ಯಮ್ ಅವನುಕ್ಕು ಸರ್ವತ್ತಿಲುಮ್ ಅಭಿಮತಮಾಯಿರುನ್ದದು.

ಇಪ್ಪರ್ಥ (ತ್ತೈ) ತ್ತಿಲ್ (೧) "ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ । ತಸ್ಮಾತ್ಪರತರಂಪ್ರೋಕ್ತಂ ತದೀಯಾರಾಧನಂ

ಮಾಡುವಾಗ, ತನ್ ಪುರುಷಾರ್ಥಮುಮ್ - ತನಗೆ ಶ್ರೇಯೋರೂಪವಾದುದೂ, ಆನುಷಙ್ಗಿಕಮಾಗಿಲುಮ್ - ಸಾಕ್ಷಾತ್ತಾಗಿ ಅಪೇಕ್ಷಿಸದೆ ಅದರ ಜೊತೆಯಲ್ಲಾದರೂ, ಪುಗಿರವೇಣ್ಡಿಯತ್ತಾಲ್ - ಅದರಲ್ಲಿ ಪ್ರವೇಶಿಸುವ ಹಾಗೆ ಮಾಡಿದರೆ, ಅದುವರುಂಪೋದು - ಅದು ಬರುವಾಗ, ಈಶ್ವರಾಭಿಪ್ರಾಯ ವಿಶೇಷಮುಡಿಯಾಗ. ವರವೇಣ್ಡುಗೈಯಾಲೆ - ಸರ್ವೇಶ್ವರನ ಅಭಿಪ್ರಾಯವಿಶೇಷಕ್ಕನುಸಾರವಾಗಿ ಅದು ಬರಬೇಕಾದುದರಿಂದ ಎಂದರೆ ಆ ಪ್ರವೃತ್ತಿಯುಂಟಾಗಬೇಕಾದುದರಿಂದ, ಈಶ್ವರಾಭಿಪ್ರಾಯತ್ತೈ - ಈ ಸರ್ವೇಶ್ವರಾಭಿಪ್ರಾಯವನ್ನು, ಆರಾಯ್‌ನ್ದವಿಡತ್ತಿಲ್ - ವಿಮರ್ಶಿಸಿ ನೋಡಿದ ಸಂದರ್ಭದಲ್ಲಿ, ಭಾಗವತಕೈಂಕರ್ಯವು, ಅತನುಕ್ಕು ಸರ್ವತ್ತಿಲುಮ್ ಅಭಿಮತಮಾಯಿರುನ್ದದು - ಆ ಸರ್ವೇಶ್ವರನಿಗೆ ಎಲ್ಲಾ ವಿಧದಲ್ಲೂ ತುಂಬಾ ಇಷ್ಟವಾದುದಾಗಿರುತ್ತದೆ. ಅಥವಾ ಸಮಸ್ತ ಅಭಿಮತವಾದವುಗಳಲ್ಲಿ ಇದೊಂದು ಮುಖ್ಯವಾದುದು ಎಂಬಭಿಪ್ರಾಯವಾದರೂ ಆಗಬಹುದು. ಇತರ ಪ್ರಾಣಿಗಳಿಗಿಂತಲೂ ಈ ಮನುಷ್ಯನಿಗೆ ಹೆಚ್ಚು ಕೃಪೆಯನ್ನು ತೋರಿದವನಾಗಿ ಸರ್ವೇಶ್ವರನು ಬುದ್ಧಿಯನ್ನು ಕೊಟ್ಟಿರುತ್ತಾನೆ. ಆದುದರಿಂದ ಇವನು ಮಾಡುವ ಸರ್ವ ಪ್ರವೃತ್ತಿಗಳೂ ಶಾಸ್ತ್ರಧರ್ಮಗಳನ್ನನುಸರಿಸಿ ಈಶ್ವರಾಭಿಪ್ರಾಯವನ್ನು ಒಳಗೊಂಡಿರಬೇಕು. ಹೀಗೆ ಸರ್ವೇಶ್ವರನ ಅಭಿಪ್ರಾಯ ವಿಶೇಷವನ್ನು ಚೆನ್ನಾಗಿ ವಿಮರ್ಶಿಸಿ ತಿಳಿದುದಾದರೆ, ತನಗೆ ತುಂಬಾ ಪ್ರಿಯವಾದ ಭಾಗವತರ ಕೈಂಕರ್ಯವು ಭಗವಂತನಿಗೆ ವಿಶೇಷಾಭಿಮತವಾದುದು ಆಗುತ್ತದೆ ಎಂಬಭಿಪ್ರಾಯವು. ಹಾಗೆ ಆತನಿಗೆ ತುಂಬಾ ಅಭಿಮತವೆಂಬುವದಕ್ಕೆ ಪ್ರಮಾಣಗಳುಂಟೋ ಎಂದರೆ ಉಂಟು ಎಂದು ಅನೇಕ ಪ್ರಮಾಣಗಳನ್ನು ಮುಂದೆ ಉದಾಹರಿಸುತ್ತಾರೆ.

ಇಪ್ಪರ್ಥತ್ತಿಲ್ - ಈ ಅಭಿಪ್ರಾಯದಲ್ಲಿ, ಈ ಪದಕ್ಕೆ ಮುಂದೆ ಆರಾಯ್‌ನ್ದಾಲ್ ಎಂಬುವದರೊಡನೆ ಅನ್ವಯವು (೧) "ಸರ್ವೇಷಾಂ ಆರಾಧ

---

(೧) ಪಾದ್ಮೋತ್ತರ ೨೯-೮೧.

ಪರಮ್ । (೨) "ಮಮ ಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾ ಭವೇತ್। ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾ ವಿಶೇಷತಃ॥" (೩) ಮದ್ಭಕ್ತ ಜನವಾತ್ಸಲ್ಯಂ ಪೂಜಾಯಾಂಚಾನುಮೋದನಂ । ಮತ್ಕಥಾಶ್ರವಣೇ

ನಾನಾಂ - ಸಮಸ್ತವಾದ ಆರಾಧನೆಗಳ ಮಧ್ಯದಲ್ಲಿ, **ವಿಷ್ಣೋಃ** - ಶ್ರೀ ಮಹಾವಿಷ್ಣುವಿನ, **ಆರಾಧನಂಪರಂ** - ಆರಾಧನವು ಶ್ರೇಷ್ಠವಾದುದು. **ತಸ್ಮಾತ್** - ಆ ವಿಷ್ಣುವಿನ ಆರಾಧನೆಗಿಂತಲೂ, **ಪರಂ** - ಶ್ರೇಷ್ಠವಾದ, **ತದೀಯಾರಾಧನಂ** - ಆ ವಿಷ್ಣು ಭಕ್ತರಾದ ಮಹಾಭಾಗವತರ ಆರಾಧನವು, **ಪರತರಂ ಪ್ರೋಕ್ತಂ** - ಶ್ರೇಷ್ಠತರವೆಂದು ಹೇಳಲ್ಪಟ್ಟಿತು. ಸಮಸ್ತ ಆರಾಧನೆಗಳ ಮಧ್ಯದಲ್ಲಿ ವಿಷ್ಣ್ವಾರಾಧನವು ಪರವಾದುದಾದರೆ, ಭಾಗವತಾರಾಧನವು ಪರತರವಾದುದು ಅದಕ್ಕೂ ಶ್ರೇಷ್ಠವೆಂಬ ಭಾವವು. (೨) **ಮದ್ಭಕ್ತಭಕ್ತೇಷು** - ನನ್ನ ಭಕ್ತರ **ಭಕ್ತರಲ್ಲಿ**, **ಮಮಪ್ರೀತಿಃ** - ನನ್ನ ಪ್ರೀತಿಯು, **ಅಭ್ಯಧಿಕಾ ಭವೇತ್** - ತುಂಬಾ ಹೆಚ್ಚಾದುದಾಗುವದು. **ತಸ್ಮಾತ್** - ಆ ಕಾರಣದಿಂದ, **ಮದ್ಭಕ್ತಭಕ್ತಾಶ್ಚ** - ನನ್ನ ಭಕ್ತರ ಭಕ್ತರುಗಳೂ ಕೂಡ, **ವಿಶೇಷತಃ** - ವಿಶೇಷವಾಗಿ, ಹೆಚ್ಚಾಗಿ, **ಪೂಜನೀಯಾಃ** - ಪೂಜಿಸಲು ಯೋಗ್ಯರು. ಸರ್ವೇಶ್ವರನಿಗೆ ಮಹಾ ಭಾಗವತೋತ್ತಮರ ಭಕ್ತರಲ್ಲೂ ವಿಶೇಷ ಪ್ರೀತಿಯಿರುವುದರಿಂದ ಅಂತವರು ವಿಶೇಷವಾಗಿ ಪೂಜಿಸಲ್ಪಡತಕ್ಕದ್ದು ಎಂದು ಹೇಳಿರುವುದರಿಂದ, ಅಂತವರ ವಿಶೇಷಾರಾಧನೆಯಿಂದ ಸರ್ವೇಶ್ವರನು ತುಂಬಾ ಸುಪ್ರೀತನಾಗುವನು ಎಂಬ ಭಾವವು. ಹಿಂದಿನ ಪ್ರಮಾಣದಲ್ಲಿ ಭಾಗವತ ಕೈಂಕರ್ಯದ ಮಾಹಾತ್ಮ್ಯೆಯು ಉಪಪಾದಿಸಲ್ಪಟ್ಟಿತು. ಈ ಪ್ರಮಾಣದಲ್ಲಿ ಭಾಗವತ ಕೈಂಕರ್ಯಕ್ಕಿಂತಲೂ ಭಾಗವತರ ಭಕ್ತರ ಕೈಂಕರ್ಯವು ವಿಶೇಷವಾದುದೆಂದು ಹೇಳಲ್ಪಟ್ಟಿತು. ಸಾಮಾನ್ಯವಾಗಿ ನನ್ನನ್ನು ಆರಾಧಿಸಿದರೆ ನನಗೆ ಅವರಲ್ಲಿ ಪ್ರೀತಿಯುಂಟಾಗುತ್ತದೆಂದೂ, ನನ್ನನ್ನು ಭಕ್ತಿಯಿಂದ ಆರಾಧಿಸಿದರೆ, ಅವರಲ್ಲಿ ಅಧಿಕ ಪ್ರೀತಿಯುಂಟಾಗುತ್ತದೆಂದೂ, ನನ್ನ ಭಕ್ತರ ವಿಷಯದಲ್ಲಿ, ಅದಕ್ಕೂ ಅಧಿಕ ಪ್ರೀತಿಯುಂಟಾಗುತ್ತದೆಂದೂ, ಸರ್ವೇಶ್ವರನು ಹೇಳಿಕೊಂಡಿರುತ್ತಾನೆ. ಆದುದರಿಂದ ಇಂತಹ ಅತ್ಯಧಿಕ ಪ್ರೀತಿಯುಳ್ಳವರನ್ನು ವಿಶೇಷವಾಗಿ ಆರಾಧಿಸುವದು ತನಗೆ ತುಂಬಾ ಸಂತೋಷವನ್ನು ಕೊಡುವಂಥಾದ್ದೆಂಬ ಭಾವವು. ಮುಂದಿನ ಮೂರನೇ ಪ್ರಮಾಣದಿಂದ ಭಗವದ್ಭಕ್ತನ ಲಕ್ಷಣವನ್ನು ಹೇಳುತ್ತಾರೆ.

(೧) ಗರುಡಪುರಾಣ ೨೧೯.೬-೯ (೨) ಭಾರ. ಅ. ೫೨ ೧೦೬-೧೩

ಭಕ್ತಿಸ್ಸ್ವರ ನೇತ್ರಾಂಗ ವಿಕ್ರಿಯಾ। ಸ್ವಯಮಾರಾಧನೇ ಯತ್ನೋ ಮಮಾರ್ಥೇ ದಂಭವರ್ಜನಂ। ಮಮಾನು ಸ್ಮರಣಂ ನಿತ್ಯಂ ಯಚ್ಚ ಮಾಂ ನೋಪಜೀವತಿ। ಭಕ್ತಿರಷ್ಟವಿಧಾಹ್ಯೇಷಾ ಯಸ್ಮಿನ್ಮ್ಲೇಚ್ಛೇಪಿ ವರ್ತತೇ। ಸವಿಪ್ರೇಂದ್ರೋ ಮುನಿಶ್ರೀಮಾನ್। ಸಯತಿ ಸ್ಸಚ ಪಣ್ಡಿತಃ। ತಸ್ಮೈ ದೇಯಂ ತತೋಗ್ರಾಹ್ಯಂ ಸ ಚ ಪೂಜ್ಯೋಯಥಾಹ್ಯಹಮ್."

---

(೩) (೧) **ಮದ್ಭಕ್ತಜನವಾತ್ಸಲ್ಯಂ** - ನನ್ನ ಭಕ್ತ ಜನರಲ್ಲಿ ವಿಶ್ವಾಸವೂ, (೨) **ಪೂಜಾಯಾಂ ಚಾನುಮೋದನಂ** - ಇತರರು ಮಾಡುತ್ತಿರುವ ನನ್ನ ಪೂಜೆಯಲ್ಲಿ ಸಂತೋಷವೂ, ಅಥವಾ ನನ್ನ ಭಕ್ತಜನರ ಪೂಜೆಯಲ್ಲಿ ಸಂತೋಷವೂ, ಇಲ್ಲಿ **ಪೂಜಾಯಾಂಚ** ಎಂದು **ಚ** ಕಾರವಿರುವದರಿಂದ, ಮದ್ಭಕ್ತಜನಪೂಜೆ ಎಂದು ಅರ್ಥವನ್ನು ಹೇಳುವದು ಸಮಂಜಸವಾಗಿ ತೋರುತ್ತದೆ. (೩) **ಮತ್ಕಥಾಶ್ರವಣೇಭಕ್ತಿಃ** - ನನ್ನ ದಿವ್ಯ ಚೇಷ್ಟಿತಗಳ ಕಥೆಯನ್ನು ಕೇಳುವದರಲ್ಲಿ ಭಕ್ತಿಯೂ, (೪) **ಸ್ವರನೇತ್ರಾಂಗ ವಿಕ್ರಿಯಾ** - ಸ್ವರ, ಕಣ್ಣು, ಶರೀರಗಳಲ್ಲಿ ವಿಕಾರವೂ, ಸ್ವರವಿಕಾರವು ಗದ್ಗದ ಧ್ವನಿಯು, ನೇತ್ರವಿಕಾರವು ಆನಂದಭಾಷ್ಪಗಳಿಂದ ತುಂಬಿರೋಣವು, ಅಂಗವಿಕಾರವು ರೋಮಾಂಚವನ್ನು ಹೊಂದಿರೋಣವು, **ಗಾತ್ರೈಸ್ಸರೋಮೋದ್ಗಮೈಃ ಕಂಠೇನಸ್ವರಗದ್ಗದೇನ ನಯನೇ ನೋದ್ಗೀರ್ಣಭಾಷ್ಪಾಂಬುನಾ"** ಎಂದು ಹೇಳಿರುವ ಹಾಗೆ ನಿತ್ಯವೂ ಪರಮೇಶ್ವರನ ಚರಣಾರವಿಂದಯುಗಳವನ್ನು ಭಕ್ತಿಯಿಂದ ಧ್ಯಾನಮಾಡುವವನಿಗೆ ಪ್ರಾಪ್ತವಾಗುತ್ತದೆಂದು ಹೇಳಲ್ಪಟ್ಟಿರುತ್ತದೆ, (೫) **ಸ್ವಯಂ** - ತಾನೇ ಆರಾಧನೇಯತ್ನಃ-ನನ್ನನ್ನಾರಾಧಿಸುವದರಲ್ಲಿ ಪ್ರಯತ್ನವೂ, (೬) **ಮಮಾರ್ಥೇ**- ನನ್ನ ಉದ್ದಿಶ್ಯವಾಗಿ, **ದಂಭವರ್ಜನಂ** - ಡಂಭವನ್ನು ಬಿಟ್ಟಿರುವದೂ, (೭) **ನಿತ್ಯಂ ಮಮಾನುಸ್ಮರಣಂ** - ಪ್ರತಿದಿನದಲ್ಲೂ ಅಥವಾ ಯಾವಾಗಲೂ ನನ್ನನ್ನು ಸ್ಮರಿಸೋಣವೂ, ಧ್ಯಾನಮಾಡೋಣವೂ, (೮) **ಮಾಂ** - ನನ್ನನ್ನು, **ನೋಪಜೀವತಿ** - ಮೋಕ್ಷೇತರ ಫಲಕ್ಕಾಗಿ ಯಾಚಿಸದಿರೋಣವೂ, **ಯತ್** - ಯಾವುದೋ, **ತತ್** - ಅದು ಎಂದು ಇಟ್ಟುಕೊಳ್ಳತಕ್ಕದ್ದು, ಹೀಗೆ **ಅಷ್ಟವಿಧಾ**- ಎಂಟುವಿಧ ಲಕ್ಷಣಗಳುಳ್ಳ, **ಭಕ್ತಿಃ** - ಭಕ್ತಿಯು, **ಯಸ್ಮಿನ್ಮ್ಲೇಚ್ಛೇಪಿ** - ಯಾವ ಮ್ಲೇಚ್ಛನಲ್ಲಿಯಾದರೂ, **ವರ್ತತೇ** - ಇದ್ದುದೇಯಾದರೆ, **ಸಃ** - ಅವನೂ ಕೂಡ, **ವಿಪ್ರೇಂದ್ರಃ** - ಬ್ರಾಹ್ಮಣಶ್ರೇಷ್ಠನಿಗೆ ಸಮಾನನು, **ಮುನಿಃ** - ಮನನಶೀಲನು, **ಶ್ರೀಮಾನ್** - ವಿದ್ಯಾಸಂಪತ್ತನ್ನು ಹೊಂದಿದವನು, **ಸಃ ಯತಿಃ** - ಅವನೇ ಇಂದ್ರಿಯಗಳನ್ನು ಜಯಿಸಿದ ಸನ್ಯಾಸಿಯು, **ಸ ಚ ಪಂಡಿತಃ** - ಅವ

(೪) "ಅನನ್ಯದೇವತಾ ಭಕ್ತಾಯೇ ಮದ್ಭಕ್ತ ಜನಪ್ರಿಯಾಃ ಮಾಮೇವ ಶರಣಂಪ್ರಾಪ್ತಾಸ್ತೇ ಮದ್ಭಕ್ತಾಃ ಪ್ರಕೀರ್ತಿತಾಃ ।",

ನೇನೇ ಸಮಸ್ತವನ್ನೂ ತಿಳಿದ ಪಂಡಿತನು, **ತಸ್ಮೈದೇಯಂ** - ಅವನಿಗಾಗಿಯೇ ಕೊಡತಕ್ಕದ್ದು, ಯಾವದನ್ನು ಕೊಡತಕ್ಕದ್ದೆಂದರೆ ದ್ರವ್ಯದಾನಕ್ಕೆ ಆತನಿಗೆ ಅರ್ಹತೆಯಿಲ್ಲದುದರಿಂದ, ಜ್ಞಾನವನ್ನು ಅವನಿಗೆ ಕೊಡಬಹುದೆಂಬ ಭಾವವು, **ತತೋಗ್ರಾಹ್ಯಂ** - ಅವನಿಂದ ಪರಿಗ್ರಹಿಸತಕ್ಕದ್ದು, ಅವನಿಂದ ದ್ರವ್ಯ ಪರಿಗ್ರಹ ನಿಷೇಧಿಸಲ್ಪಟ್ಟಿರುವದರಿಂದ, ಜ್ಞಾನವನ್ನು ಪಡಿಯತಕ್ಕದ್ದು ಎಂಬ ಭಾವವು ಆದರೆ ಬ್ರಹ್ಮವಿದ್ಯಾದಿ ಉಪದೇಶವನ್ನು ಆತನಿಂದ ಹೊಂದಲೂ ಕೂಡ ಆತನು ಅನರ್ಹನಾದುದರಿಂದ ಜ್ಞಾನಸಂಶಯವೇನಾದರೂ ಇದ್ದಪಕ್ಷದಲ್ಲಿ, ನಿರ್ಣಯ ಜ್ಞಾನವನ್ನು ಆತನಿಂದ ಹೊಂದಲು ಸಾಧ್ಯವಿದ್ದರೆ ಆಗಬಹುದೆಂಬ ಭಾವವು. ಮಹಾಜ್ಞಾನಿಯಾದ ವಿದುರನು ಧೃತರಾಷ್ಟ್ರನಿಗೆ ನೀತಿ ಮೊದಲಾದವುಗಳನ್ನು ಹೇಳಿವನೇ ವಿನಾ, ಬ್ರಹ್ಮಜ್ಞಾನವು ತನಗಿದ್ದರೂ ಬ್ರಹ್ಮವಿದ್ಯೆಯನ್ನು ತಾನುಪದೇಶಿಸದೆ ಸನತ್ಸುಜಾತರಿಂದ ಉಪದೇಶವನ್ನು ಹೊಂದುವಹಾಗೆ ಮಾಡಿದನು. **ಯಥಾಹ್ಯಹಂ** - ನಾನು ಹೇಗೆ, **ಪೂಜ್ಯಃ** - ಪೂಜಿಸಲು ಯೋಗ್ಯನೋ, **ತಥಾ** - ಹಾಗೆ, **ಸ ಚ** - ಅವನೂ ಕೂಡ, **ಪೂಜ್ಯಃ** - ಪೂಜಿಸಲು ಯೋಗ್ಯನು. ಇಲ್ಲಿ **"ಮದ್ಭಕ್ತಜನವಾತ್ಸಲ್ಯಂ ಪೂಜಾಯಾಂ ಚಾನುಮೋದನಂ"** ಎಂಬುವದರಿಂದ ಭಾಗವತರಲ್ಲಿ ಪ್ರೀತಿಯೂ ಅವರ ಪೂಜೆಯೂ ಹೇಳಲ್ಪಟ್ಟು ಆ ಭಾಗವತನು ನೀಚವರ್ಣನಾದರೂ ತುಂಬಾ ಮಾನನೀಯನೆಂದೂ ಹೇಳಲ್ಪಟ್ಟಿತು. ಇಲ್ಲಿ ನಮ್ಮ ಆಳ್ವಾರುಗಳಲ್ಲೇ ಕೆಲವರು ಬ್ರಾಹ್ಮಣ ವರ್ಣದವರಲ್ಲದೇ ಇದ್ದರೂ ನಿತ್ಯಸೂರಿಗಳ ಅಂಶಾವತಾರಿಗಳಾಗಿ ಪರಮ ಜ್ಞಾನನಿಧಿಗಳಾದ ಪ್ರಯುಕ್ತ ಅವರುಗಳನ್ನು ಗುರುಪರಂಪರೆಯಲ್ಲಿ ಮಹನೀಯರು ಸೇರಿಸಿರುತ್ತಾರೆ.

(೪) ತನ್ನ ಭಕ್ತರು ಯಾರೆಂದರೆ ಹೇಳುತ್ತಾರೆ:— **ಯೇ ಅನನ್ಯದೇವತಾ ಭಕ್ತಾಃ** - ಯಾರು ಇತರ ದೇವತೆಗಳ ಭಕ್ತರಲ್ಲವೋ, **ಯೇ** - ಯಾರು, **ಮದ್ಭಕ್ತಜನಪ್ರಿಯಾಃ** - ನಮ್ಮ ಭಕ್ತರಾದ ಜನರಿಗೆ ಪ್ರಿಯರೋ, **ಯೇ** - ಯಾರು, **ಮಾಮೇವ** - ನನ್ನನ್ನೇ, **ಶರಣಂಪ್ರಾಪ್ತಾಃ** - ಶರಣು ಹೊಂದಿದ್ದಾರೆಯೋ, **ತೇ** - ಅವರು, **ಮದ್ಭಕ್ತಾಃ** - ನನ್ನ ಭಕ್ತರೆಂದು, **ಪ್ರಕೀರ್ತಿತಾಃ** - ಹೊಗಳಲ್ಪಟ್ಟಿರುವರು. ಇಲ್ಲಿ ಮದ್ಭಕ್ತಜನಪ್ರಿಯರೂ ಕೂಡ ಮದ್ಭಕ್ತರೆಂದು ಹೇಳಿರುವದರಿಂದ ಭಾಗವತ ಕೈಙ್ಕರ್ಯವು ಸ್ವಾಮಿಗೆ ಅಭಿಮತವಾದು

(೫) "ತಸ್ಯ ಯಜ್ಞವರಾಹಸ್ಯ ವಿಷ್ಣೋರಮಿತತೇಜಸಃ । ಪ್ರಣಾಮಂ ಯೇಽಪಿ ಕುರ್ವನ್ತಿ ತೇಷಾಮಪಿ ನಮೋನಮಃ ।",

(೬) ತದಾಶ್ರಯಸ್ಯಾಶ್ರಯಣಾತ್ತಸ್ಯ ತಸ್ಯಚ ತಸ್ಯಚ । ಸಂಸೇವ

ಡೆಂದು ತೋರಿಬರುತ್ತದೆ ; ಮತ್ತು ಇತರ ದೇವತಾರಾಧನವಿಲ್ಲದೆಯೂ, ನನ್ನ ಭಕ್ತರನ್ನು ಬಹುಮಾನಿಸುವರಾಗಿಯೂ, ಇರುವವರೇ, ನನ್ನ ಭಕ್ತರೇವಿನಾ ಇತರರಲ್ಲವೆಂಬ ಭಾವವೂ ತೋರಿಬರುತ್ತದೆ.

(೫) **ತಸ್ಯ** - ಆ ಮಹಾ ಪ್ರಸಿದ್ಧನಾದ, **ಯಜ್ಞವರಾಹಸ್ಯ** - ಯಜ್ಞ ಸ್ವರೂಪನಾದ ಶ್ರೀ ವರಾಹಾವತಾರಿಯಾದ, **ಅಮಿತತೇಜಸಃ** - ಅಪರಿಮಿತವಾದ ತೇಜಸ್ಸುಳ್ಳ, **ವಿಷ್ಣೋಃ** - ಶ್ರೀ ಮಹಾವಿಷ್ಣುವಿಗೆ, **ಯೇಽಪಿ** - ಯಾರಾದರೆ **ಪ್ರಣಾಮಂಕುರ್ವನ್ತಿ** - ನಮಸ್ಕರಿಸುತ್ತಾರೋ, **ತೇಷಾಮಪಿ** - ಅಂತಹ ಭಾಗವತೋತ್ತಮರಿಗೂ ಕೂಡ, **ನಮೋನಮಃ** - ಪುನಃ ಪುನಃ ನಮಸ್ಕಾರವು. ಇಲ್ಲಿಯೂ ಸರ್ವೇಶ್ವರನ ಹಾಗೆ ಭಾಗವತೋತ್ತಮರೂ ಕೂಡ ಪೂಜಾರ್ಹರೆಂದು ಹೇಳಲ್ಪಟ್ಟಿತು. ಶ್ರೀ ವರಾಹಾವತಾರಿಯ ದಿವ್ಯಮಂಗಳ ವಿಗ್ರಹವೆಲ್ಲಾ ಯಜ್ಞಮಯ ದ್ರವ್ಯಗಳಿಂದುಂಟಾದುದು ಎಂಬ ಭಾವವು. ವಿಷ್ಣುಪುರಾಣದ ಈ ಮುಂದಿನ ಶ್ಲೋಕವು ಈ ಅರ್ಥವನ್ನುಪಪಾದಿಸುತ್ತದೆ :—(ವಿ. ಪು. ೧. ೪. ೩೨)

**"ಪಾದೇಷು ವೇದಾಸ್ತವಯೂಪ ದಂಷ್ಟ್ರ
ದಂತೇಷುಯಜ್ಞಾಶ್ಚಿತಯಶ್ಚವಕ್ತ್ರೇ ।
ಹುತಾಶ ಜಿಹ್ವೋಽಸಿ ತನೂರುಹಾಣಿ
ದರ್ಭಾಃಪ್ರಭೋ ಯಜ್ಞಪುಮಾಂಸ್ತ್ವಮೇವ "॥**

"ನಿನ್ನ ಪಾದಗಳಲ್ಲಿ ವೇದಗಳು, ಕೋರೆದಾಡಿಗಳಲ್ಲಿ ಯೂಪಸ್ತಂಭವು, ದಂತಗಳಲ್ಲಿ ಯಜ್ಞಗಳು, ಬಾಯಿಯಲ್ಲಿ ಚಯನಯಜ್ಞಭೇದಗಳು ನಾಲಿಗೆಯಲ್ಲಿ ಅಗ್ನಿಯು, ಕೂದಲುಗಳು ದರ್ಭೆಗಳು, ಆದುದರಿಂದ ಓ ಸ್ವಾಮಿಯೇ ನೀನೇ ಯಜ್ಞಪುರುಷನು" ಎಂಬುವದು ಈ ಶ್ಲೋಕಾರ್ಥವು. ಈ ಅಭಿಪ್ರಾಯವು ಶ್ರೀ ಮದ್ಭಾಗವತವಲ್ಲಿ ಇನ್ನೂ ವಿಸ್ತಾರವಾಗಿ ಉಪಪಾದಿಸಲ್ಪಟ್ಟಿರುತ್ತದೆ.

(೬) "**ತದಾಶ್ರಯಸ್ಯ** - ಭಗವಂತನನ್ನಾಶ್ರಯಿಸುವವರನ್ನು, **ಆಶ್ರಯಣಾತ್** - ಆಶ್ರಯಿಸುವದರಿಂದಲೂ, ಮತ್ತು **ತಸ್ಯ ಚ** - ಹಾಗೆ ಆಶ್ರಯಿಸಿದವನನ್ನು, **ಸಂಸೇವನಾತ್** - ಸೇವಿಸುವದರಿಂದಲೂ, ಮತ್ತು **ತಸ್ಯಚ** - ಸೇವಿಸಿದವನನ್ನು, **ಸಂಸೇವನಾತ್** - ಸೇವಿಸುವದರಿಂದಲೂ, **ತಸ್ಯಚ** - ಹಾಗೆಯೇ, ಅಂತಹ ಭಾಗವತನನ್ನು ಸೇವಿಸಿದ ಭಾಗವತ ಸೇವಿಯ **ಸಂಸೇವನಾತ್** -

ನಾನ್ನರಾಲೋಕೇ ಪೂಯನ್ತೇ ಸರ್ವಪಾತಕೈಃ।" ಇತ್ಯಾದಿ ಪ್ರಮಾಣಙ್ಗಳೈ ಯಾರಾಯ್‌ನ್ದಾಲ್, ರಾಜಕುಮಾರೋಪಲಾಳನವೊಪ್ಪೇಲೆ, ಭಾಗವತ ಕೈಙ್ಕರ್ಯಮ್ ಭಗವಾನುಕ್ಕು ಅಭಿಮತಮಾಯಿರುಕ್ಕೈಯಾಲ್ ಶೇಷಭೂತನಾನವಿವನ್ ಶೆಯ್ಯುಮ್ ಕಿಂಚಿತ್ಕಾರಙ್ಗಳಿಲ್ ಭಾಗವತ ಕೈಙ್ಕರ್ಯಮ್ ಪ್ರಧಾನಮಾಯಿತ್ತು.

ಸೇವಿಸುವದರಿಂದಲೂ, **ಲೋಕೇ** - ಈ ಜಗತ್ತಿನಲ್ಲಿ, **ನರಾಃ** - ಮನುಷ್ಯರು **ಸರ್ವಪಾತಕೈಃ** - ಸಮಸ್ತ ಪಾಪಗಳಿಂದಲೂ, **ಪೂಯನ್ತೇ** - ಪರಿಶುದ್ಧರಾಗುತ್ತಾರೆ. ಇದರಿಂದ ಭಾಗವತನೂ, ಅವನನ್ನು ಆಶ್ರಯಿಸಿದ ಭಾಗವತನೂ, ಈತನನ್ನು ಆಶ್ರಯಿಸಿದ ಭಾಗವತನೂ, ಹೀಗೆ ಪರಂಪರಾ ರೂಪದಲ್ಲಿ ಭಾಗವತರುಗಳು "**ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ**" ಎಂದು ಹೇಳಿರುವಹಾಗೆ, ಸಮಸ್ತ ಪಾಪಗಳನ್ನೂ ಹೋಗಲಾಡಿಸುವರು ಎಂಬ ಭಾವವು", **ಇತ್ಯಾದಿ ಪ್ರಮಾಣಙ್ಗಳೈ** - ಇವೇ ಮೊದಲಾದ ಪ್ರಮಾಣಗಳನ್ನು, **ಆರಾಯ್‌ನ್ದಾಲ್** - ವಿಮರ್ಶಿಸಿ ನೋಡಿದುದಾದರೆ, **ರಾಜಕುಮಾರೋಪಲಾಳನವೊಪ್ಪೇಲೆ** - ರಾಜಕುಮಾರನ ಲಾಲನೆಯು ಹೇಗೆ ರಾಜನಿಗೆ ತುಂಬಾ ಪ್ರಿಯವಾದುದೋ ಹಾಗೆಯೇ, '**ಭಾಗವತಕೈಙ್ಕರ್ಯಂ** - ಭಾಗವತ ಕೈಙ್ಕರ್ಯವು, ಭಗವಂತನಿಗೆ **ಅಭಿಮತಮಾಯಿರುಕ್ಕೈಯಾಲೇ** - ತುಂಬಾ ಇಷ್ಟವಾಗಿರುವವರಿಂದ, **ಶೇಷಭೂತನಾನವಿವನ್** - ಸರ್ವೇಶ್ವರನಿಗೆ ದಾಸಭೂತನಾದ ಇವನು, **ಶೆಯ್ಯುಮ್** - ಮಾಡುವ, **ಕಿಂಚಿತ್ಕಾರಙ್ಗಳಿಲ್** - ಕೈಙ್ಕರ್ಯಗಳಲ್ಲಿ, ಭಾಗವತ ಕೈಙ್ಕರ್ಯವು, **ಪ್ರಧಾನಮಾಯಿತ್ತು** - ಮುಖ್ಯವಾದುದು ಎಂದರೆ ಶ್ರೇಷ್ಠವಾದುದು ಎಂಬ ಭಾವವು. ಈ ದಾಸಭೂತನಾದ ಚೇತನನು ಮಾಡುವ ಕೈಙ್ಕರ್ಯಗಳಲ್ಲಿ ಭಾಗವತ ಕೈಙ್ಕರ್ಯವು ಸರ್ವಶೇಷಿಯಾದ ಶ್ರಿಯಃಪತಿಗೆ ತುಂಬಾ ಅಭಿಮತವಾದುದಾಗಿ, ತುಂಬಾ ಶ್ರೇಷ್ಠವಾದುದು ಆಯಿತು ಎಂಬ ಭಾವವು. ಇದರಿಂದ, ನಾವು ಮಾಡುವ ನಿತ್ಯನೈಮಿತ್ತಿಕ ಕರ್ಮಗಳೂ ಭಾಗವತಾಗ್ರೇಸರರಾದ ಆದಿತ್ಯಾಗ್ನಿಗಳ ಆರಾಧನವಾಗಿ, ತನ್ಮೂಲಕ ತದಾತ್ಮಕ ಭಗವದಾರಾಧನವಾಗಿ ಪರಿಣಮಿಸಿ ಶ್ರಿಯಃಪತಿಗೆ ಹೇಗೆ ಅಭಿಮತವಾದವೋ ಹಾಗೆಯೇ ಈ ಭಾಗವತ ಕೈಙ್ಕರ್ಯವೂ ತದಾತ್ಮಕ ಭಗವತ್ಕೈಙ್ಕರ್ಯರೂಪವಾಗಿಯೇ ಸರ್ವೇಶ್ವರನಿಗೆ ಪ್ರಿಯತಮವಾದುದು ಎಂಬ ಭಾವವೂ ತೋರಿಬರುತ್ತದೆ.

ಹೀಗೆ ಭಗವದನನ್ಯಾರ್ಹ ಶೇಷಭೂತನಾದ ಈ ಪ್ರಪನ್ನನು ಭಗವಂತನಲ್ಲದೆ ಇತರರನ್ನಾರಾಧಿಸಿ ಕೈಂಕರ್ಯಗಳನ್ನೆಸಗಿದರೆ, ಆ ಅನನ್ಯಾರ್ಹಶೇಷತ್ವಕ್ಕೆ

ಭಾಗವತ ಕೈಙ್ಕರ್ಯಸ್ಯ ಭಗವದಾರಾಧನತ್ವ ಕಥನಮ್.

ಇನ್ನಿಡತ್ತಿಲ್ ತತ್ತ್ವವಿತ್ತುಕ್ಕು ಪ್ರಮಾಣಸರಣಿಯೈ ಪಾರ್ತ್ತಾಲ್ (೧) ಯೋ ಯಜನ್ತಿ ಪಿತ್ರೂನ್ ದೇವಾನ್ ಬ್ರಾಹ್ಮಣಾನ್ ಸಹುತಾಶನಾನ್ । ಸರ್ವಭೂತಾನ್ತರಾತ್ಮಾನಂ ವಿಷ್ಣುಮೇವ ಯಜನ್ತಿ ತೇ ।" ಇತ್ಯಾದಿಗಳ್ಪಡಿಯೇ ಈಶ್ವರನ್ ಭಾಗವತ ಶರೀರ (ಕ) ನಾಯ್‌ಕೊಣ್ಡು ಆರಾಧ್ಯ ನಾವನ್.

ವಿರೋಧ ಉಂಟಾಗುವದಿಲ್ಲವೇ ಎಂದರೆ ಸರ್ವಾತ್ಮನಾ ಇಲ್ಲವೆಂದೂ, ಅಂತಹ ಭಾಗವತ ಕೈಂಕರ್ಯದಿಂದ ತದಂತರ್ಯಾಮಿಯಾದ ಭಗವಂತನೇ ಸುಪ್ರೀತನಾಗುವನೆಂದು ಸಪ್ರಮಾಣವಾಗಿ ಉಪದೇಶಿಸುತ್ತಾರೆ :—

ಭಾಗವತಕೈಙ್ಕರ್ಯವೂ ಭಗವತಾರಾಧನವೇ.

ಇನ್ನಿಡತ್ತಿಲ್ - ಈ ಸಂದರ್ಭದಲ್ಲಿ ಎಂದರೆ ನಿರುಪಾಧಿಕ ಶೇಷತ್ವ ಸಂಬಂಧವಿಲ್ಲದೆ, ಶಾಸ್ತ್ರವಿಧಿಯನ್ನನುಸರಿಸಿ ಭಾಗವತ ಕೈಂಕರ್ಯವನ್ನು ಮಾಡುವ ಸಂದರ್ಭದಲ್ಲಿ, **ತತ್ತ್ವವಿತ್ತುಕ್ಕು** - ಶಾಸ್ತ್ರಯಾಥಾತ್ಮ್ಯವನ್ನು ಚೆನ್ನಾಗಿ ಪರಿಶೀಲನೆ ಮಾಡಿದವನಿಗೆ, ಇದಕ್ಕೆ **"ಆರಾಧ್ಯನಾವನ್"** ಎಂಬುವದರೊಂದಿಗೆ ಅನ್ವಯವು, **ಪ್ರಮಾಣಸರಣಿಯೈಪಾರ್ತ್ತಾಲ್** - ಶಾಸ್ತ್ರಪ್ರಮಾಣಗಳಲ್ಲಿ ಹೇಳಿರುವ ಮಾರ್ಗವನ್ನು ವಿವೇಚನಮಾಡಿ ನೋಡಿದುದಾದರೆ, "**ಯೋ**-ಯಾರು, **ಪಿತ್ರೂನ್** - ಪಿತೃಗಳನ್ನೂ, **ದೇವಾನ್** - ಇಂದ್ರಾದಿ ದೇವತೆಗಳನ್ನೂ, **ಸಹುತಾಶನಾನ್** - ಅಗ್ನಿಯೊಂದಿಗೆ ಸೇರಿದ, **ಬ್ರಾಹ್ಮಣಾನ್** - ಬ್ರಾಹ್ಮಣರುಗಳನ್ನು ಎಂದರೆ ಅಗ್ನಿಮುಖದಲ್ಲಿ ಯಜ್ಞ ಹೋಮಾದಿಗಳನ್ನಾಚರಿಸುವ ಬ್ರಾಹ್ಮಣರನ್ನು ಎಂಬರ್ಥವು, **ಯಜನ್ತಿ** - ಯಜ್ಞಯಾಗ, ಜಪ, ಹೋಮಾದಿಗಳ ಮೂಲಕ ಆರಾಧಿಸುತ್ತಾರೋ, **ತೇ** - ಅವರೆಲ್ಲರೂ, **ಸರ್ವಭೂತಾನ್ತರಾತ್ಮಾನಂ** - ಸರ್ವ ಚೇತನರಿಗೂ ಅಂತರ್ಯಾಮಿಯಾದ, **ವಿಷ್ಣುಮೇವ** - ವಿಷ್ಣುವನ್ನೇ, **ಯಜನ್ತಿ** - ಹಾಗೆ ಆರಾಧಿಸುವರು", **ಇತ್ಯಾದಿಗಳಿರ್ಪಡಿಯೇ** - ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, **ಈಶ್ವರನ್** - ಸರ್ವೇಶ್ವರನು, **ಭಾಗವತ**

---

(೧) ಭಾರ. ಶಾನ್ತಿ. ೩೫೫-೨೪

ಶರೀರನಾಯ್‌ಕ್ಕೊಣ್ಡು - ಭಾಗವತನನ್ನೇ ಶರೀರವಾಗಿ ಹೊಂದಿರುವವನಾಗಿ ಆರಾಧ್ಯನಾವ್ - ಆರಾಧಿಸಲ್ಪಟ್ಟವನಾಗುವನು. ಪ್ರಮಾಣರೀತಿಯನ್ನನು ಸರಿಸಿ ವಿಮರ್ಶಿಸಿ ನೋಡಿದರೆ, ಈ ಭಾಗವತರು ಆರಾಧಿಸಲ್ಪಟ್ಟರೆ, ತಚ್ಛರೀರಕ ನಾಗಿ ತದಂತರ್ಯಾಮಿಯಾಗಿರುವ ಪರಮಾತ್ಮನೇ ಆರಾಧಿಸಲ್ಪಡುವನು ಎಂಬು ವದಕ್ಕೆ "ಯೇ ಯಜನ್ತಿ" ಎಂಬ ಪ್ರಮಾಣವನ್ನು ಉದಾಹರಿಸಿದರು. (ಈ ಪ್ರಮಾಣವು ಕುಂಭಕೋಣದಲ್ಲಿ ಅಚ್ಚಾಗಿರುವ ಪ್ರತಿಯಲ್ಲಿ

ಯೇ ಯಜನ್ತಿ ಪಿತೄನ್ದೇವಾನ್ ಗುರೂಂಶ್ಚೈವಾತಿಥೀಂ ಸ್ತಥಾ ।
ಗಾಂಶ್ಚೈವ ದ್ವಿಜಮುಖ್ಯಾಂಶ್ಚ ಪಿತರಂ ಮಾತರಂ ತಥಾ ।
ಕರ್ಮಣಾ ಮನಸಾ ವಾಚಾ ವಿಷ್ಣುಮೇವ ಯಜನ್ತಿ ತೇ ॥"

ಎಂದು ಇರುತ್ತದೆ. ಹೀಗೆ ಮಹರ್ಷಿವಾಕ್ಯಗಳು ಹಿಂದಿನವರ ಪಾಠಕ್ಕೂ ಈಗಿನ ಪಾಠಕ್ಕೂ ತುಂಬಾ ವ್ಯತ್ಯಾಸವಿರುತ್ತದೆ. ಅಭಿಪ್ರಾಯದಲ್ಲೇನೂ ಈ ಎರಡು ಪಾಠಕ್ಕೂ ವ್ಯತ್ಯಾಸವಿಲ್ಲದಿದ್ದರೂ, ಹೀಗೆ ಪಾಠಾಂತರಗಳನ್ನು ಇತರರು ತಮ್ಮ ಕವಿತಾಶಕ್ತಿಯಿಂದ ಕಲ್ಪಿಸುವದು ಶೋಚನೀಯವಾದುದು.) ಗೀತೆಯಲ್ಲೂ,

"ಯೋಯೋ ಯಾಂಯಾಂ ತನುಂಭಕ್ತಶ್ಶ್ರದ್ಧಯಾರ್ಚಿತು ಮಿಚ್ಛತಿ।
ತಸತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ॥" (೭.೨೧)

ಎಂಬ ಶ್ಲೋಕದಲ್ಲೂ ಈ ಮೇಲಿನಭಿಪ್ರಾಯವೇ ತೋರಿಬರುತ್ತದೆ. ಸರ್ವೇಶ್ವರನು ಅಗ್ನಿಮುಖವಾಗಿ ಮಾಡಿದ ಹೋಮಾರ್ಚನೆಗಳ ಮೂಲಕವಾಗಿಯೂ ಬ್ರಾಹ್ಮಣ ಸಂತರ್ಪಣೆಗಳ ಮೂಲಕವಾಗಿಯೂ ತೃಪ್ತನಾಗುವನೆಂಬುವದರಲ್ಲಿ ಸಂದೇಹ ವಿಲ್ಲವು. ಹಾಗೆಯೇ ಭಾಗವತದಲ್ಲೂ,

"ನಹ್ಯಗ್ನಿಮುಖತೋಽಯಂ ವೈ ಭಗವಾನ್ ಸರ್ವಯಜ್ಞಭುಕ್
ಇಜ್ಯೇತಹವಿಷಾರಾಜನ್ ಯಥಾ ವಿಪ್ರಮುಖೇ ಹುತೈಃ (೭.೧೪.೧೮)

ವಿಪ್ರಮುಖಾರಾಧನದಿಂದ ಸರ್ವಯಜ್ಞಭೋಕ್ತಾವಾದ ಸರ್ವೇಶ್ವರನು ಪ್ರೀತನಾಗುವಷ್ಟು ಅಗ್ನಿಮುಖಾರಾಧನದಿಂದ ಪ್ರೀತನಾಗುವದಿಲ್ಲವೆಂದು ಹೇಳ ಲ್ಪಟ್ಟಿರುತ್ತದೆ.

ಆದರೆ ಗೀತೆಯಲ್ಲಿ,

"ಯೇಽಪ್ಯನ್ಯದೇವತಾಭಕ್ತಾಃ ಯಜನ್ತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌನ್ತೇಯ ಯಜನ್ತ್ಯವಿಧಿ ಪೂರ್ವಕಂ
ಅಹಂಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವಚ ।
ನತುಮಾಮಭಿಜಾನಂತಿ ತತ್ವೇನಾತಶ್ಚ್ಯವನ್ತಿ ತೇ" ಎಂದರೆ,

ಯಾರು ಅನ್ಯದೇವತಾಭಕ್ತರಾಗಿ, ಶ್ರದ್ಧೆಯುಳ್ಳವರಾಗಿ ಆರಾಧಿಸುವರೋ, ಅವರೂ ಕೂಡ ನನ್ನನ್ನೇ ಆರಾಧಿಸುವರು ; ಆದರೆ ವಿಧಿಗೆ ವ್ಯತಿರಿಕ್ತವಾಗಿ ಆರಾ

(೧)"**ಸ ಚ ಮಮಪ್ರಿಯಃ**" ಎಙ್ಙರಪಡಿಯೇ ಪರಮೈಕಾನ್ತಿ ವಿಷಯ
ತ್ತಿಲ್ ಪ್ರೀತಿಪರತಂತ್ರನಾನ ಪ್ರಕಾರಿಯಿನುಡೈಯ ನಿನವೈಪ್ಪಾರ್‌ತ್ತಾಲ್।

ಧಿಸುವರು. ಏಕೆಂದರೆ ನಾನೇ ಸರ್ವಯಜ್ಞಗಳಿಗೂ ಸ್ವಾಮಿಯೂ, ಅವುಗಳ
ಲ್ಲೆಲ್ಲಾ ನಾನೇ ಭೋಕ್ತಾ, ಈ ವಿಷಯವನ್ನು ತಿಳಿಯದ **ಜ**ನರು ನನ್ನ ಯಥಾ
ವತ್ತಾದ ಸ್ವರೂಪವನ್ನು ತಿಳಿಯದವರಾಗಿ ಅಲ್ಪಾಸ್ಥಿರಫಲಭಾಗಿಗಳಾಗುತ್ತಾ
ರೆಂದು ಹೇಳಿದೆಯಲ್ಲಾ, ಭಾಗವತಾರಾಧನೆಯೂ ಕೂಡ, ಈ ಮೇಲೆ ಹೇಳ
ಲ್ಪಟ್ಟ ಆರಾಧನೆಗಳ ಹಾಗೋ? ಎಂದರೆ ಹಾಗಲ್ಲವು. ಅದು, ಅನ್ಯದೇವತೆಯೇಪರ
ದೇವತೆ ಎಂದು ತಿಳಿದು ಸರ್ವೇಶ್ವರನನ್ನುಲ್ಲಂಘಿಸಿ ಮಾಡಿದ ಆರಾಧನೆಯಾಗಿರು
ತ್ತದೆ; ಭಾಗವತಾರಾಧನೆಯಾದರೋ ಆತನಿಗೆ ತುಂಬಾ ಪ್ರಿಯರಾದವರ
ಆರಾಧನೆಯಾದುದರಿಂದ ಆತನಿಗೆ ತುಂಬಾ ಪ್ರಿಯವಾದುದಾಗಿ ಆದರಿಂದಾತನು
ತುಂಬಾ ಸುಪ್ರೀತನಾಗುವನೆಂದು ಮುಂದೆ ತಿಳಿಸುತ್ತಾರೆ.

"**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।**
ಪ್ರಿಯೋಹಿಜ್ಞಾನಿನೋತ್ಯರ್ಥ ಮಹಂ ಸ ಚ ಮಮಪ್ರಿಯಃ॥"

ಎಂಬುವದು ಪೂರಾಶ್ಲೋಕವು. **ತೇಷಾಂ** - ಆ ನಾಲ್ಕು ಜನ ಭಕ್ತರಲ್ಲಿ, ಜ್ಞಾನಿ
ಯಾದವನು, **ನಿತ್ಯಯುಕ್ತಃ** - ಸಾಧನದೆಶೆಯಲ್ಲೂ ಪ್ರಾಪ್ಯದೆಶೆಯಲ್ಲೂ,
ಸದಾ ನನ್ನೊಂದಿಗೇ **ಸೇ**ರಿದವನಾಗಿ, **ಏಕಭಕ್ತಿಃ** - ಹೀಗೆ ನನ್ನೊಬ್ಬನಲ್ಲೇ
ಪ್ರಹ್ಲಾದನ ಹಾಗೆ ಭಕ್ತಿಯುಳ್ಳವನಾಗಿರುವದರಿಂದ, **ವಿಶಿಷ್ಯತೇ** - ವಿಶೇಷ
ಮಾಹಾತ್ಮ್ಯಯುಳ್ಳವನಾಗಿ ತನಗೆ ತುಂಬಾ ಪ್ರಿಯನು ಎಂಬ ಭಾವವು.
ಅಹಂ - ಸರ್ವೇಶ್ವರನಾದ ಸರ್ವಜ್ಞನಾದ ಸರ್ವಶಕ್ತನಾದ ನಾನೂ, **ಅತ್ಯರ್ಥಂ** -
ಇಷ್ಟೆಂದು ಹೇಳಲು ಸಾಧ್ಯವಲ್ಲದಷ್ಟು, ಆ ಜ್ಞಾನಿಗೆ, ಪ್ರಿಯನು ; ಹಾಗೆಯೇ
ಸಃ - ಆ ಪರಮಭಕ್ತನೂ, **ಮಮ** - ನನಗೆ, **ಅತ್ಯರ್ಥಂ** - ಇಷ್ಟೆಂದು ಹೇಳಲು
ಸಾಧ್ಯವಲ್ಲದಷ್ಟು, **ಪ್ರಿಯಃ** - ಪ್ರಿಯನು", **ಎಙ್ಙರಪಡಿಯೇ** - ಎಂದು
ಹೇಳಿರುವಹಾಗೆ, **ಪರಮೈಕಾನ್ತಿ ವಿಷಯತ್ತಿಲ್** - ಸದಾ ಸರ್ವೇಶ್ವರನಲ್ಲೇ
ಸಕ್ತನಾದ ಮನಸ್ಸುಳ್ಳ ಪ್ರಪನ್ನನ ವಿಷಯದಲ್ಲಿ, **ಪ್ರೀತಿಪರತನ್ತ್ರನಾನ** -
ಪ್ರೀತಿಗೆ ಅಧೀನನಾದ, **ಪ್ರಕಾರಿಯಿನುಡೈಯ** - ವಿಶೇಷಣದಿಂದ ಸದಾ ಸೇರಿ
ರುವ ವಿಶೇಷ್ಯನಾದ ಸರ್ವೇಶ್ವರನ, **ನಿನವೈಪಾರ್‌ತ್ತಾಲ್** - ಸಂಕಲ್ಪವನ್ನು
ಕುರಿತು ಪರ್ಯಾಲೋಚಿಸಿದರೆ, "**ಜ್ಞಾನೀತ್ವಾತ್ಮೈವ ಮೇಮತಮ್**" - ಜ್ಞಾನಿ

---

(೧). ಗೀ. ೭. ೧೭

"ಜ್ಞಾನೀತ್ವಾತ್ಮೈವಮೇ ಮತಮ್" ಎಙ್ಗಿರಪಡಿಯೇ ಭಾಗವತ ಕೈಙ್ಕರ್ಯತ್ತಿಲ್ ಭಗವಾನ್ ತನ್ನನ್ತರ್ಯಾಮಿ ಪಕ್ಕಲಿಲೇ ಪಣ್ಣಿನದಾಕ ಉಗಕ್ಕುಮವನ್.

ಯಾವನೋ ನನಗೆ ಆತ್ಮಾ ಎಂಬುದಾಗಿಯೇ ನನ್ನ ಅಭಿಪ್ರಾಯವು. ಎಂದರೆ ಜ್ಞಾನಿಯಾದವನು ಹೇಗೆ ನನ್ನನ್ನು ಬಿಟ್ಟು ತನಗೆ ಆತ್ಮಧಾರಣವು ಸಾಧ್ಯವಿಲ್ಲವಾದುದರಿಂದ ತನಗೆ ನಾನೇ ಆತ್ಮಾ ಎಂದು ಭಾವಿಸಿರುತ್ತಾನೋ ಹಾಗೆಯೇ ನಾನೂ ಸಹ ಆತನನ್ನು ಬಿಟ್ಟು ಸರ್ವಥೈವ ಇರಲಾರೆನಾದುದರಿಂದ ಆತನೂ ನನಗೆ ಆತ್ಮವೇ ಎಂದು ಭಾವಿಸಿರುವೆನು ಎಂಬಭಿಪ್ರಾಯವು" **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಭಾಗವತಕೈಙ್ಕರ್ಯತ್ತಿಲ್** - ಭಾಗವತ ಕೈಂಕರ್ಯವನ್ನು, **ಭಗವಾನ್** - 'ಹೇಯಪ್ರತ್ಯನೀಕನಾಗಿ ಕಲ್ಯಾಣ ಗುಣಾಕರನಾದ ಸರ್ವೇಶ್ವರನು, **ತನ್ನನ್ತರ್ಯಾಮಿಪಕ್ಕಲಿಲೇ** - ತನಗೆ ಆತ್ಮಾವಾದವನ ವಿಷಯದಲ್ಲಿ, **ಪಣ್ಣಿನದಾಗ** - ಮಾಡಲ್ಪಟ್ಟಿತೆಂಬುದಾಗಿ ಭಾವಿಸಿ, **ಉಗಕ್ಕುಮವನ್** - ಸಂತೋಷಿಸುವವನು. ಮಹಾಭಾಗವತನಾದ ಪರಮೈಕಾಂತಿಯು ತುಂಬಾ ಜ್ಞಾನಿಯಾದ ಪ್ರಯುಕ್ತ "ಜ್ಞಾನೀತ್ವಾತ್ಮೈವಮೇ ಮತಂ" ಎಂದು ಸರ್ವೇಶ್ವರನೇ ಹೇಳಿಕೊಂಡಿರುವದರಿಂದ, ಅಂತಹ ಜ್ಞಾನಿಗೆ ತಾನು **ಅಹಂ ಭಕ್ತಪರಾಧೀನಃ**" ಎಂದು ತಾನೇ ಹೇಳಿಕೊಂಡಿರುವಹಾಗೆ, ಪರತನ್ತ್ರನೆಂದೂ, ಆತನಿಗೆ ಮಾಡಿದ ಕೈಂಕರ್ಯದಿಂದ ಸರ್ವೇಶ್ವರನು ತುಂಬಾ ಸಂತುಷ್ಟನಾಗುವನೆಂದೂ, ಹೇಳಲ್ಪಟ್ಟಿತು. ಮೇಲೆ ಹೇಳಿದ ಚತುರ್ವಿಧಭಕ್ತರೂ "**ಉದಾರಾಸ್ಸರ್ವಏವೈತೇ ಜ್ಞಾನೀತ್ವಾತ್ಮೈವಮೇ ಮತಂ**" ಎಂದು ಹೇಳಿರುವಹಾಗೆ, ಉದಾರರೇ ಸರಿ. ಆದರೆ ಆ ನಾಲ್ವರಲ್ಲಿ ಜ್ಞಾನಿಯಾದವರೋ ನನಗೆ ಆತ್ಮನೆಂದೇ ಭಾವಿಸುವೆನು, ಅದೇನು ಆ ಜ್ಞಾನಿಯಲ್ಲಿ ಅಷ್ಟು ಮಹಿಮೆ ಎಂದರೆ ಹೇಳುತ್ತಾರೆ :- "**ಆಸ್ಥಿತಸ್ಸಹಿಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ**" ಯಾವ ಕಾರಣದಿಂದ ಈ ಜ್ಞಾನಿಯು ನನ್ನನ್ನು ಬಿಟ್ಟು ಆತ್ಮಧಾರಣೆಯು ಸಾಧ್ಯವಲ್ಲವೆಂದು ತೀವವನಾಗಿ ನನ್ನನ್ನೇ ಪರಮಪ್ರಾಪ್ಯವೆಂದು ನಂಬಿದ್ದಾನೆಯೋ ಆ ಕಾರಣದಿಂದ ಆತನನ್ನು ನಾನು ಬಿಟ್ಟಿರಲಾರೆನು; ಆದುದರಿಂದ ಆತನೂ ನನ್ನ ಸ್ವರೂಪವನ್ನು ಕಾಪಾಡುವ ಆತ್ಮನೇ ಸರಿ ಎಂದು ಶ್ರೀಕೃಷ್ಣನು ಹೇಳಿ

(೧) ಗೀ. ೭. ೧೮

ಕೊಂಡಿರುತ್ತಾನೆ. ಈ ಮೇಲಿನ ವಾಕ್ಯದಲ್ಲಿ ಪ್ರಪನ್ನನು ಪರಮೈಕಾನ್ತಿ ಎಂದು ಹೇಳಲ್ಪಟ್ಟಿರುತ್ತಾನೆ. ಯತೀಂದ್ರಮತದೀಪಿಕೆಯಲ್ಲಿ ಪ್ರಪನ್ನನು, ಏಕಾನ್ತಿ ಪರಮೈಕಾನ್ತಿ ಎಂದು ಎರಡು ವಿಧವೆಂದೂ, ಮೋಕ್ಷಫಲದೊಂದಿಗೆ ಇತರ ಫಲಗಳನ್ನೂ ಸಹ ಅಪೇಕ್ಷಿಸುವವನು ಏಕಾನ್ತಿ ಎಂದೂ, ಭಕ್ತಿ ಜ್ಞಾನಗಳಲ್ಲದೆ ಇನ್ನಾವುದನ್ನೂ ಸರ್ವೇಶ್ವರನಿಂದ ಅಪೇಕ್ಷಿಸದವನು ಪರಮೈಕಾನ್ತಿ ಎಂದೂ, ಲಕ್ಷಣವು ಹೇಳಲ್ಪಟ್ಟಿರುತ್ತದೆ. ಈ ಮೇಲಿನ ವಾಕ್ಯದಲ್ಲಿ ಸರ್ವೇಶ್ವರನು ಪ್ರಕಾರಿ ಎಂದು ಹೇಳಿರುವದರಿಂದ, ನಾವೆಲ್ಲಾ ಆತನಿಗೆ ಅಪೃಥಕ್ಸಿದ್ಧ ವಿಶೇಷಣವಾಗಿ ಪ್ರಕಾರಭೂತರು. ಈ ಅಭಿಪ್ರಾಯಗಳು ಶ್ರೀಮದ್ರಾಮಾಯಣದಲ್ಲಿ ಬಹು ಸ್ವಾರಸ್ಯವಾಗಿ ಉಪಪಾದಿಸಲ್ಪಟ್ಟಿವೆ.

(೧) **"ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ।**
ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ"

"ಸೀತೆಯು ಹೇಗೆ ನಿನಗೆ ಅಪೃಥಕ್ಸಿದ್ಧ ವಿಶೇಷಣವಾಗಿ ಅಗಲಿರಲಾರಳೋ ಹಾಗೆಯೇ ನಾನೂ ಸಹ ನಿನ್ನನ್ನು ಬಿಟ್ಟು ಅಗಲಿರಲಾರೆನು, ಎಂಬ ಜ್ಞಾನಿಯಾದ ಲಕ್ಷ್ಮಣನ ಅಮೋಘೋಕ್ತಿಯಿಂದ ಸರ್ವೇಶ್ವರನಿಂದಿಲ್ಲದೆ ಸತ್ತೆಯಿಲ್ಲವೆಂಬಭಾವವು ತೋರಿಬರುತ್ತದೆ. ಹಾಗೆಯೇ (೨) **ಲೋಕನಾಥಸ್ಯ ರಾಮಸ್ಯ ಸಖಾದಾಸಸ್ಯ ರಾಕ್ಷಸ"** ಎಂದು ತನ್ನ ಅನನ್ಯಾರ್ಹ ಶೇಷತ್ವವನ್ನೂ **"ನ ಮಯಾಮೋಕ್ಷ್ಯ ಸೇದ್ಯತ್ವಂ ಪಾರ್ಥಿವೇಂದ್ರಸ್ಯ ತೇಜಸಾ"** ಎಂಬುವದರಿಂದ ಆತನಿಂದಲೇ ತನ್ನ ಸತ್ತಾಸ್ಥಿತ್ಯಾದಿಗಳನ್ನೂ ರಾವಣನಿಗೆ ಉಪದೇಶಿಸಿದ ಜ್ಞಾನಿಯಾದ ಸುಗ್ರೀವನ ವಿಷಯದಲ್ಲಿ (೩) **ತ್ವಯಿಕಿಞ್ಚಿತ್ಸಮಾಪನ್ನೇ ಕಿಂಕಾರ್ಯಂ ಸೀತಯಾಮಮ"** "ನಿನಗೆ ಈಷದಪಿ ವಿಪತ್ತು ಸಂಭವಿಸಿದುದಾದರೆ ತನಗೆ ಸೀತೆಯಿಂದ ಪ್ರಯೋಜನವೇನು" ಎಂದು ಶ್ರೀರಾಮನು ಹೇಳಿಕೊಂಡಿರುವದರಿಂದ ಜ್ಞಾನಿಯ ಸಂರಕ್ಷಣೆಯೇ ಸರ್ವೇಶ್ವರನಿಗೆ ಸ್ವರೂಪದಾಯಕವೆಂದೂ, **"ಜ್ಞಾನೀತ್ವಾತ್ಮೈವ ಮೇಮತಂ"** ಎಂಬ ಭಾವವು ಹೇಳಲ್ಪಟ್ಟಿತು. ಹೀಗೆ ಜ್ಞಾನಿಯಿಂದಲೇ ತನಗೆ ಸ್ವರೂಪವೆಂದು ಸರ್ವೇಶ್ವರನು ಭಾವಿಸಿರುವದರಿಂದ ತನ್ನನ್ತರ್ಯಾಮಿ **ಪಕ್ಕಲಿಲೆ ಪಣ್ಣಿನದಾಗ ಉಗಕ್ಕುಮ್**, ತನಗೆ ಅನ್ತರ್ಯಾಮಿಯಾದ ಜ್ಞಾನಿಯನ್ನು ಪ್ರೀತಿಸಿ ಮಾಡಲ್ಪಟ್ಟಿತೆಂದು ಸಂತೋಷಿಸುವನು ಎಂದು ಹೇಳಲ್ಪಟ್ಟಿತು.

ಹಿಂದಿನ ವಾಕ್ಯದಲ್ಲಿ ಭಾಗವತಶೇಷತ್ವವೂ ಭಾಗವತ ಕೈಂಕರ್ಯವೂ ಕೂಡ ಅಪ್ರಾಸಕವಾಗಿಯೇ ಸರ್ವೇಶ್ವರನಿಗೆ ಅಭಿಮತವೆಂದು ಹೇಳಲ್ಪಟ್ಟವು. ಮುಂದೆ

(೧) ರಾ. ಅಯೋ. ೫೩.೩೧ (೨) ರಾ. ಯುದ್ಧ. ೩೯.೧೦ (೩) ರಾ. ಯುದ್ಧ ೪೦.೫

ಯಥಾ ಭಾಗವತ ಶೇಷತ್ವಂ ಸದ್ವಾರಕಾದ್ವಾರಭೇದೇನ ದ್ವಿವಿಧಂ, ತಥಾ ಭಾಗವತ ಕೈಙ್ಕರ್ಯಮಪಿ ದ್ವಿವಿಧಂ.

ಇಪ್ಪಡಿ ಶೇಷಿಕ್ಕು ಅಭಿಮತ ಮೆಙ್ಗಿರ ವಳವೇಯನ್ರಿ, ಶೇಷತ್ವ ಮಾಗಿರ ಸಂಬಂಧಮ್ ತಾಣ ಸದ್ವಾರಕ ಮಾಗವು ಮುಣ್ಡಾಗೈಯಾಲ್, ಕೈಙ್ಕರ್ಯಮುಮ್ ಸದ್ವಾರಕಮಾಗವುಮ್ ಪ್ರಾಪ್ತಮ್ :—ಅದೆಙ್ಗನೇ ಎನ್ನಿಲ್,

---

ಭಾಗವತಶೇಷತ್ವ ಹೇಗೆ ಅದ್ವಾರಕ ಸದ್ವಾರಕವೆಂದು ಎರಡು ವಿಧವೋ ಹಾಗೆಯೇ ಭಾಗವತ ಕೈಙ್ಕರ್ಯವೂ ಕೂಡ ಎರಡು ವಿಧವು.

ಸದ್ವಾರಕವಾಗಿಯೂ ಅವು ಪ್ರಪನ್ನನಿಗೆ ಉಂಟಾಗುತ್ತವೆ ಎಂದು ಉಪಪಾದಿಸುತ್ತಾರೆ.

ಇಪ್ಪಡಿ - ಹೀಗೆ ಎಂದರೆ ಮೇಲೆ ಹೇಳಿದಹಾಗೆ, ಭಾಗವತ ಶೇಷತ್ವ ಕೈಂಕರ್ಯಗಳು, **ಶೇಷಿಕ್ಕು** - ಸರ್ವಶೇಷಿಯಾದ ಸರ್ವೇಶ್ವರನಿಗೆ, **ಅಭಿಮತ ಮೆಙ್ಗಿರ ವಳವೇಯನ್ರಿ** - ತುಂಬಾ ಇಷ್ಟವೆಂಬುವದು ಮಾತ್ರವೇ ಅಲ್ಲವು, **ಶೇಷತ್ವಮಾಗಿರ ಸಂಬಂಧಮುಮ್** - ಪ್ರಪನ್ನನು ಭಾಗವತೋತ್ತಮರಿಗೂ ಶೇಷನು ಎಂಬ ಸಂಬಂಧವೂ, **ಸದ್ವಾರಕಮಾಗವು ಮುಣ್ಡಾಗೈಯಾಲ್**-ಭಗವಂತನ ಮೂಲಕವಾಗಿಯೂ ಉಂಟಾಗುವದರಿಂದ, **ಕೈಙ್ಕರ್ಯಮುಮ್** - ಭಾಗವತ ಕೈಙ್ಕರ್ಯವೂ ಕೂಡ, **ಸದ್ವಾರಕಮಾಗ** – ಭಗವಂತನ ಮೂಲಕವಾಗಿಯೂ, **ಪ್ರಾಪ್ತಂ** - ಸಂಭವಿಸುತ್ತದೆ, ಉಂಟಾಗುತ್ತದೆ. **ಅದೆಙ್ಗನೇ ಎನ್ನಿಲ್** - ಅದು ಹೇಗೆ ಎಂದರೆ, ಅದು ಎಙ್ಗನೇ ಎನ್ನಿಲ್ ಎಂದು ಪ್ರಾರಂಭಿಸಿ, "ಕೈಙ್ಕರ್ಯಮುಮ್ ನಿರ್ಕುಮ್" ಎಂಬುವವರಿವಿಗೂ ಉಪಪಾದಿಸಿ ತೋರಿಸುತ್ತಾರೆ. ಅಂತಹ ನಿಷ್ಕರ್ಷಾಭಿಪ್ರಾಯವು ಮನಸ್ಸಿಗೆ ಚೆನ್ನಾಗಿ ಹಿಡಿಯುವದಕ್ಕಾಗಿ "ನಿತ್ಯಂಶ್ರಿಯಾ" ಎಂಬ ಸ್ವಂತ ಕಾರಿಕೆಯನ್ನು ದಯಪಾಲಿಸುತ್ತಾರೆ. ಈ ಕಾರಿಕೆಯಿಂದ ಪರಮಾತ್ಮನಲ್ಲಿರುವ ಶೇಷಿತ್ವವು ನಮಗೆ "ದಾಸಭೂತಾ ಸ್ಸ್ವತಸ್ಸರ್ವೇ" ಎಂದು ಹೇಳಿರುವ ಹಾಗೆ ಸ್ವಾಭಾವಿಕವಾಗಿ ಅದ್ವಾರಕವಾಗಿಯೂ ದೆ, ಮಹಾಭಾಗವತರ ಮೂಲಕವಾಗಿ ಸದ್ವಾರಕವಾಗಿಯೂ ಪ್ರಾಪ್ತವಾಗು

ನಿತ್ಯಂ ಶ್ರಿಯಾ ಸಮೇತಸ್ಯ ಭಕ್ತೈ ರಾತ್ಮವತಸ್ಸದಾ ।
ಸಹ ಸದ್ವಾರಕಂ ಚ ಸ್ಯಾಚ್ಛೇಷಿತ್ವಂ ಪರಮಾತ್ಮನಃ ॥೯॥

ತ್ತದೆಂದು ಹೇಳುತ್ತಾರೆ. **ಶ್ರಿಯಾ** - ಲಕ್ಷ್ಮಿಯೊಂದಿಗೆ, **ನಿತ್ಯಂ** - ಯಾವಾಗಲೂ, **ಸಮೇತಸ್ಯ** - ಯುಕ್ತನಾಗಿಯೇ ಇರುವ, ಮತ್ತು **ಭಕ್ತೈಃ** -ಪರಮ ಭಾಗವತರುಗಳಾದ ಭಕ್ತರಿಂದ, **ಸದಾ** - ಯಾವಾಗಲೂ, **ಆತ್ಮವತಃ** - ಆತ್ಮವನ್ನು ಹೊಂದಿದವನಾದ ಎಂದರೆ ಸ್ವರೂಪ ಹೊಂದಿದವನಾದ, **ಪರಮಾತ್ಮನಃ** - ನಿಸ್ಸಮಾಭ್ಯಧಿಕನಾದ ಪರಮಾತ್ಮನ, **ಶೇಷಿತ್ವಂ** - ಶೇಷಿಯಾಗಿರುವ ಭಾವವು, **ಸಹ** - ಅದ್ವಾರಕವಾಗಿರುವದರೊಂದಿಗೆ, **ಸದ್ವಾರಕಂ ಚ ಸ್ಯಾತ್** - ಸದ್ವಾರಕವೂ ಕೂಡ ಆಗುತ್ತದೆ ಎಂದರೆ ಮಹಾಭಾಗವತರುಗಳ ಮೂಲಕವಾಗಿಯೂ ಕೂಡುತ್ತದೆ. **"ಅಸ್ಯೈಮಮ ಚ ಶೇಷಂ ಹಿ ವಿಭೂತಿ ರುಭಯಾತ್ಮಿಕಾ"** "ಈ ಲೀಲಾವಿಭೂತಿ ನಿತ್ಯವಿಭೂತಿ ಎನಿಸುವ ಎರಡು ನಿಯಾಮ್ಯವರ್ಗವೂ ಈ ನನ್ನ ಪತ್ನಿಯಾದ ಲಕ್ಷ್ಮಿಗೂ ನನಗೂ ಸಹ ಶೇಷಭೂತವಾದವು" **"ಉಭಯಾಧಿಷ್ಠಾನಂ ಚೈಕಂಶೇಷಿತ್ವಂ"** "ಈ ಶೇಷಿತ್ವವು ಲಕ್ಷ್ಮೀನಾರಾಯಣರಿಬ್ಬರಲ್ಲೂ ಇರುವಂಥಾದ್ದು". ಇತ್ಯಾದಿ ಪ್ರಮಾಣಗಳ ಮೂಲಕ, ಚೇತನನಿಗೆ ಶೇಷಿತ್ವವು ಪರಮಾತ್ಮನಲ್ಲಿ ಅದ್ವಾರಕವಾಗಿಯೂ ಲಕ್ಷ್ಮೀ ಮೂಲಕವಾಗಿ ಸದ್ವಾರಕವಾಗಿಯೂ ಹೇಗೆ ಉಂಟಾಗುತ್ತದೆಯೋ, ಹಾಗೆಯೇ ಪರಮಾತ್ಮನಿಗೆ ಶೇಷಿಯಾಗಿರುವ ಭಾವವು, ಅದ್ವಾರಕವಾಗಿಯೂ, ಭಾಗವತನ ಮೂಲಕವಾಗಿ ಸದ್ವಾರಕವಾಗಿಯೂ ಉಂಟಾಗುತ್ತದೆ.

ಗೃಹವು ಅದ್ವಾರಕವಾಗಿ ದೇವದೇತ್ತನಿಗೆ ಸೇರಿದುದು, ಆದರೂ ಆ ದೇವದತ್ತನ ಪತ್ನೀಪುತ್ರರಿಗೂ ಸಹ ಸದ್ವಾರಕವಾಗಿಯೂ ಹೇಗೆ ಸೇರಿದುದಾಗುತ್ತದೋ ಹಾಗೆ ಎಂಬ ಭಾವವು. ಇದರಿಂದ ದೇವದತ್ತನ ಗೃಹವು ಆತನಪತ್ನೀಪುತ್ರರಿಗೂ ಸಹ ಶೇಷಭಾವ ಉಳ್ಳದು ಎಂಬುವದು ತಪ್ಪಿದ್ದಲ್ಲವೆಂಬ ಭಾವವು. ಗೃಹವು ಪತ್ನೀಪುತ್ರರಿಗೂ ಸಹ ಶೇಷಭಾವವನ್ನು ಹೊಂದಿರುವುದು ದೇವದತ್ತನಿಗೆ ಹೇಗೆ ಅಭಿಮತವೋ, ಸರ್ವೇಶ್ವರನಿಗೂ ಕೂಡ, ತನಗೆ ಬೇಕಾದ ಪ್ರಪನ್ನರು ತನಗೆ ತುಂಬಾ ಪ್ರಿಯರಾದ ಭಾಗವತರ ಮೂಲಕ ಶೇಷಿಭಾವವನ್ನು ಹೊಂದಿರುವದು ತನಗೆ ತುಂಬಾ ಇಷ್ಟವಾದುದೆಂಬ ಭಾವವು ಇಲ್ಲಿ **ಆತ್ಮವತಃ** ಎಂಬುವದರಿಂದ ಭಕ್ತರನ್ನು ಆತ್ಮಾವೆಂದು ಹೇಳಿರುವದರಿಂದ, ಅಂತವರಿಗೆಈ ಪ್ರಪನ್ನನನ್ನು ಸ್ವಚ್ಛಂದನಾದ ಶ್ರಿಯಃಪತಿಯು ಶೇಷಭೂತನಾಗಿ ನಿಯಮಿಸುವದು ನ್ಯಾಯವೇ ಎಂಬ ಭಾವವು ತೋರಿಬರುತ್ತದೆ. ಇದನ್ನೇ ಶ್ರೀಮದಾಚಾರ್ಯರವರು ಮುಂದೆ

ಉಪಪಾದಿಸುತ್ತಾರೆ ಅಥವಾ ಇನ್ನೊಂದು ವಿಧವಾಗಿಯೂ ಅರ್ಥ ಹೇಳಬಹುದು. **ನಿತ್ಯಂಶ್ರಿಯಾ ಸಮೇತಸ್ಯ - ಉಭಯಧಿಷ್ಠಾನಂ ಚೈಕಂ ಶೇಷಿತ್ವಂ** ಎಂದು ಹೇಳಿರುವ ಹಾಗೆ **ನಿತ್ಯಾನಪಾಯಿನಿಯಾದ** ಶ್ರೀ ಮಹಾಲಕ್ಷ್ಮೀಯುಕ್ತನಾದ ನಾರಾಯಣನಿಗೆ, **ಸಹ** - ಅದ್ವಾರಕ ಶೇಷಿತ್ವದೊಂದಿಗೆ, **ಸದ್ವಾರಕಂ ಚ ಸ್ಯಾತ್**- ಸದ್ವಾರಕ ಶೇಷಿತ್ವವೂ ಉಂಟಾಗುತ್ತದೋ, ಹಾಗೆಯೇ **ಸದಾಭಕ್ತೈರಾತ್ಮವತಃ** - ಯಾವಾಗಲೂ ಅವಿನಾಭೂತರಾಗಿ ಆತ್ಮಾವಾಗಿರುವ ಭಕ್ತರೊಂದಿಗೇನೇ, ಅದ್ವಾರಕಶೇಷಿತ್ವದೊಂದಿಗೆ, ಸದ್ವಾರಕಶೇಷಿತ್ವವೂ ಪ್ರಾಪ್ತವಾಗುತ್ತದೆ ಎಂದೂ ಅರ್ಥ ಹೇಳಬಹುದು. ಅಥವಾ, **ನಿತ್ಯಂ ಶ್ರಿಯಾಸಮೇತಸ್ಯ** - ಯಾವಾಗಲೂ ಲಕ್ಷ್ಮಿಯೊಂದಿಗೇನೇ ಇರುವ, ಮತ್ತು **ಸದಾ ಭಕ್ತೈಃ ಸಮೇತಸ್ಯ** - ಹಾಗೆಯೇ ಯಾವಾಗಲೂ ಭಕ್ತರುಗಳಿಂದಲೇ ಸೇರಿ ಇರುವ, ಪರಮಾತ್ಮನ, ಶೇಷಿತ್ವವು **ಆತ್ಮವತಃ** - ತನಗೆ ಆತ್ಮರುಗಳಾದ ಜ್ಞಾನಿಗಳನ್ನು ಕುರಿತು, **ಸಹ** - ಅದ್ವಾರಕ ದೊಂದಿಗೆ, **ಸದ್ವಾರಕಂಚಸ್ಯಾತ್** ಎಂದೂ ಅರ್ಥ ಹೇಳಬಹುದು. ಲಕ್ಷ್ಮಿ ವಿಷಯದಲ್ಲಿ ಸುಮ್ಮನೆ **ಸಮೇತಸ್ಯ** ಎಂದು ಹೇಳಿ, ಭಕ್ತರುಗಳ ವಿಷಯದಲ್ಲಿ **ಆತ್ಮವತಃ** ಎಂದು ವಿಶೇಷಿಸಿ ಹೇಳಿರುವದರಿಂದ ಲಕ್ಷ್ಮೀ ಮೂಲಕವಾಗಿ ಶೇಷಿತ್ವ ಕ್ಕಿಂತ ಮಹಾಭಾಗವತರ ಮೂಲಕ ಶೇಷಿತ್ವವು ಶ್ರಿಯಃಪತಿಗೆ ತುಂಬಾ ಅಭಿ ಮತವೆಂಬ ಭಾವವೂ ತೋರಿಬರುತ್ತದೆ. ಇದು ಶ್ರೀಮದ್ರಾಮಾಯಣದಲ್ಲಿ ಮಹರ್ಷಿ ಯಿಂದ ಉಪಪಾದಿತವಾಗಿರುತ್ತದೆ:—

"ಅಪ್ಯಹಂ ಜೀವಿತಂ ಜಹ್ಯಾಂತ್ವಾಂವಾ ಸೀತೇ ಸಲಕ್ಷ್ಮಣಾಂ ।
ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ॥"

ಈ ಶ್ಲೋಕವು ತುಂಬಾ ಅರ್ಥಗರ್ಭಿತವಾದುದು. ತಾನು ಮಾಡಿದ ಪ್ರತಿಜ್ಞೆ ಯನ್ನು ಬಿಡುವದಕ್ಕಿಂತಲೂ, ತನಗೆ ತುಂಬಾ ಪ್ರಿಯವಾದ ಪ್ರಾಣವನ್ನಾದರೂ ಬಿಟ್ಟೇನು ಎಂದು ಹೇಳಲ್ಪಟ್ಟಿತು. ಇದರಿಂದ ಬ್ರಾಹ್ಮಣರೇ ತನಗೆ ಪ್ರಾಣ ವಾದುದರಿಂದ ಪ್ರತಿಜ್ಞೆಯನ್ನು ಬಿಡುವದು ತನ್ನ ಸ್ವರೂಪವನ್ನು ತೊರೆದಹಾಗೆ ಆಗು ವದರಿಂದ, ಪ್ರಾಣವನ್ನೇ ತೊರೆಯಬಹುದು ಎಂಬ ಭಾವವು. ಈ ತನ್ನ ಪ್ರಾಣಕ್ಕೂ ಮೇಲಾದುದು **ಪ್ರಾಣೇಭ್ಯೋಪಿಗರೀಯಸೀ** ಎಂದು ಹೇಳಿದ್ದರೂ, ಅಂತಹ ಸೀತೆ ಯನ್ನಾದರೂ ಬಿಡುವೆನು ; **ದೇಶೇದೇಶೇ ಕಳತ್ರಾಣಿ ದೇಶೇದೇಶೇಚ ಬಾಂಧ ವಾಃ। ತಂತುದೇಶಂ ನ ಪಶ್ಯಾಮಿ ಯತ್ರಭ್ರಾತಾ ಸಹೋದರಃ** ಎಂದು ಸೀತೆ ಗಿಂತಲೂ ಪ್ರಿಯನಾದ ಲಕ್ಷ್ಮಣನನ್ನಾಗಲಿ ಬಿಡುವೆನು. ಇವೆಲ್ಲಕ್ಕಿಂತಲೂ ಪ್ರಿಯ ವಾದುದು ಯಾವುದೆಂದರೆ ತನ್ನ ಸತ್ಯಸಂಕಲ್ಪವು, ಅದರಲ್ಲೂ ಪ್ರಿಯತಮ

ಭಗವಚ್ಛೇಷತ್ವಸ್ಯ ಭಾಗವತಪರ್ಯನ್ತತ್ವೇ ಲೋಕದೃಷ್ಟಾನ್ತ ಪ್ರಮಾಣಾನಿ.

ಸ್ವತನ್ತ್ರನಾಯ್ ಸಚ್ಛಂದ ಲೀಲನಾನ ರಾಜಾ ತಾರ್ಣ ಪೂಣ್ಡ ಆಭರಣತ್ತೈಯುಮ್, ಇಟ್ಟಮಾಲೈಯೈಯುಮ್, ಅಡಿಯಾರ್ಗಳುಡೈಯವುಮ್ ಆನೈಕುದುರೈಗಳುಡೈಯವುಮ್ ಕಳತ್ತಿಲೆ ಯಿಡುಮಾಪ್ಪೋಲೆ,

---

ನಾಮಿದು ಬ್ರಾಹ್ಮಣರಲ್ಲಿ ಮಾಡಿದ ಪ್ರತಿಜ್ಞೆಯು, ಅದನ್ನು ಎಂದಿಗಾದರೂ ಬಿಡುವೆನೇ ? ಎಂಬ ಭಾವವು.

ಆದರೆ ಈ ಪ್ರಪನ್ನನು ಸರ್ವೋತ್ಕೃಷ್ಟನಾದ ಶ್ರಿಯಃಪತಿಗೇನೇ ನಿರುಪಾಧಿಕ ಶೇಷಭೂತನು, ಮಹಾಭಾಗವತನಿಗೆ ಔಪಾಧಿಕವಾಗಿ ಶೇಷಭೂತನು. ಹೀಗಿರುವಾಗ ಸರ್ವೇಶ್ವರನಿಗೆ ಮಾತ್ರನೇ ಅನನ್ಯಶೇಷಭೂತನಾಗಿರುವಾಗ ಭಾಗವತ ಶೇಷತ್ವ ನಿರ್ಬಂಧ ಹೇಗೆ ಕೂಡುತ್ತದೆ, ಎಂಬಾಕ್ಷೇಪ ತೋರಬಹುದು. ಇದಕ್ಕೆ ಸಮಾಧಾನವಾಗಿ, ಸ್ವತಂತ್ರನಾಗಿ ಲೀಲಾಪರನಾದ ರಾಜಾಧಿರಾಜನು ಹಾಗೆ ನಿಯಮಿಸುವದು ಯುಕ್ತವೆಂದು ಹೇಳಿ, ಲೋಕದಲ್ಲೂ ಕೂಡ ಹಾಗುಂಟು ಎಂದು ಸದೃಷ್ಟಾಂತವಾಗಿ ಪ್ರಮಾಣಗಳನ್ನು ಉದಾಹರಿಸುತ್ತಾರೆ :—

ಭಗವಚ್ಛೇಷತ್ವವು ಭಾಗವತಪರ್ಯನ್ತವೆಂಬುವದಕ್ಕೆ ಲೋಕ ದೃಷ್ಟಾನ್ತ ಪ್ರಮಾಣಗಳು.

ಸ್ವತಂತ್ರನಾಗಿಯೂ, ಸಚ್ಛಂದಲೀಲನಾನ - ತನ್ನಿಷ್ಟಾನುಸಾರ ಲೀಲಾರಸವನ್ನನುಭವಿಸುವನಾದ, **ರಾಜಾ** - ಒಬ್ಬ ರಾಜನು, **ತಾರ್ಣಪೂಣ್ಡ** - ತಾನು ಅಲಂಕರಿಸಿಕೊಂಡ, **ಆಭರಣತ್ತೈಯುಮ್** - ಆಭರಣವನ್ನೂ, **ಇಟ್ಟಮಾಲೆಯೈಯುಮ್** - ಧರಿಸಿದ ಪುಷ್ಪಮಾಲಿಕೆಯನ್ನೂ, **ಅಡಿಯಾರ್ಗಳುಡೈಯವುಮ್** - ತನಗೆ ದಾಸಭೂತರಾದವರ, ಮತ್ತು **ಆನೆಕುದುರೈಗಳುಡೈಯವುಮ್** - ಆನೆ ಕುದುರೆಗಳ, **ಕಳತ್ತಿಲೆ ಯಿಡುಮಾಪ್ಪೋಲೆ** - ಕುತ್ತಿಗೆಯಲ್ಲಿ ಹಾಕುವಹಾಗೆ, ಮುಂದೆ **ಭಗವದಿಷ್ಟ ವಿನಿಯೋಗಾರ್ಹತೆಯಾಲೆ** ಎಂಬುವದರೊಂದಿಗೆ ಅನ್ವಯಿಸಿ ಭಗವಚ್ಛೇಷಿತ್ವವೂ ಭಗವಂತನ ಅಭಿಮತಾನುಸಾರ ಭಾಗವತಪರ್ಯನ್ತವೆಂದು ಹೇಳುತ್ತಾರೆ. ಇಲ್ಲಿ ದೃಷ್ಟಾಂತ ದಾರ್ಷ್ಟಾಂತಿಕಗಳು ಹೇಗೆ ಎಂದರೆ :-ಒಬ್ಬ ರಾಜನು ಸ್ವತನ್ತ್ರನಾಗಿಯೂ ಲೀಲಾಸಕ್ತನಾಗಿಯೂ ಇದ್ದರೆ, ತಾನು ಧರಿಸಿದ ಆಭರಣ ಹಾರಗಳನ್ನು ತನಗೆ ಶೇಷಭೂತರಾದ,

(೧) ಅಡಿಯಾರ್‌ಕ್ಕೆನ್ನೈಯಾಳ್‌ಪಡುತ್ತ ವಿಮಲರ್” ಎನ್ರುವರ್

ಸೇವಕರ ಕಂಠದಲ್ಲಾಗಲಿ ಆನೆ ಕುದುರೆಗಳ ಕಂಠದಲ್ಲಾಗಲಿ ಹೇಗೆ ಹಾಕಿ ಸಂತೋಷಿಸುವನೋ, ಹಾಗೆಯೇ ಸ್ವತಂತ್ರನಾಗಿ ಲೀಲಾಸಕ್ತನಾದ ಶ್ರಿಯಃಪತಿಯು ತನಗೆ ಶೇಷಭೂತರಾದ ಪ್ರಪನ್ನರನ್ನು ಮಹಾ ಭಾಗವತೋತ್ತಮರಿಗೆ ಶೇಷಭೂತರನ್ನಾಗಿ ಮಾಡಿ ಸಂತೋಷಿಸುವದು ಯುಕ್ತವಾದುದೇ ಎಂಬ ಭಾವವು. ಇಲ್ಲಿ ಆಭರಣ ಹಾರಗಳ ಸ್ಥಳದಲ್ಲಿ ಪ್ರಪನ್ನರು, ಅಡಿಯಾರ್‌ಗಳ್ ಸ್ಥಳದಲ್ಲಿ ಮಹಾಭಾಗವತೋತ್ತಮರು ರಾಜನ ಸ್ಥಳದಲ್ಲಿ ಶ್ರಿಯಃಪತಿಯು, ಹೀಗೆ ದಾರ್ಷ್ಟಾಂತಿಕದಲ್ಲಿ ಇಟ್ಟುಕೊಳ್ಳತಕ್ಕದ್ದು. ಆದರೆ ಪ್ರಪನ್ನರು ಚೇತನರು, ಇವರಿಗೆ ದೃಷ್ಟಾಂತದಲ್ಲಿ ಅಚೇತನವಾದ ಆಭರಣ ಹಾರಗಳಿಗೆ ಹೋಲಿಸಬಹುದೋ ಎಂದರೆ, ಈ ಪ್ರಪನ್ನರೂ ಸರ್ವೇಶ್ವರನಿಗೆ ಅಚೇತನಗಳೋಪಾದಿಯಲ್ಲಿ ಅತ್ಯಂತ ಪರತನ್ತ್ರರಾದುದರಿಂದ ಸರ್ವೇಶ್ವರನು ತನ್ನ ಇಷ್ಟಾನುಸಾರ ವಿನಿಯೋಗಿಸತಕ್ಕದ್ದು ನ್ಯಾಯವೆಂಬ ಭಾವವು ಇದರಿಂದ ತೋರಿಬರುತ್ತದೆ. ಈ ಪಾರತಂತ್ರ್ಯವು ಇಡುವಾಪ್ಪೋಲೆ ಎಂಬ ಪ್ರಯೋಗದಿಂದಲೂ ಸುವ್ಯಕ್ತವು. ಅದನ್ನೇ ಮುಂದೆ “ಅತ್ಯಂತ ಪಾರತಂತ್ರ್ಯಾದಿಗಳಡಿಯಾಗ” ಎಂಬು ಪದದಿಂದುಪಪಾದಿಸುತ್ತಾರೆ. ಹೀಗೆ ಲೋಕದೃಷ್ಟಾಂತವೂ ಉಂಟೆಂದು ತಿಳಿಸಿ ಆಳ್ವಾರ್‌ಸೂಕ್ತಿಗಳಿಂದಲೂ ಪುರಾಣೋಕ್ತಿಯಿಂದಲೂ ಸಮರ್ಥಿಸುತ್ತಾರೆ :—

(೧) ಎನ್ನೈ - ಅನೇಕ ಜನ್ಮಗಳನ್ನೆತ್ತಿ ದೀನನಾಗಿರುವ ನನ್ನನ್ನು, ಅಡಿಯಾರ್ಕ್ಕು - ನಿನಗೆ ದಾಸಭೂತರಾದ ಭಾಗವತೋತ್ತಮರುಗಳಿಗೆ, ಆಳ್‌ಪಡುತ್ತ- ದಾಸಭೂತನನ್ನಾಗಿ ಮಾಡಿದ, ವಿಮಲರ್ - ದಿವ್ಯಸ್ವರೂಪವುಳ್ಳ ಸರ್ವೇಶ್ವರನು

ಅಮಲನಾದಿ ಪಿರಾನಡಿಯಾರ್ಕ್ಕೆನ್ನೈ ಆಟ್ಪಡುತ್ತ ।
ವಿಮಲರ್ ವಿಣ್ಣವರ್‌ಕೋರ್ ವಿರೈಯಾರ್ ಪೊಳಿಲ್ವೇಙ್ಗಡವರ್
ನಿಮಲರ್ ನಿನ್ಮಲನ್ನೀತಿವಾನವ ನೀಣ್ಮದಿಳ ರಙ್ಗತ್ತಮ್ಮಾನ್ತಿರು
ಕ್ಕಮಲ ಪಾದಗಳ ವನ್ದೆನ್ಕಣ್ಣಿನುಳ್ಳನ ವೊಕ್ಕಿನ್ರದೇ ॥೧॥

ಎಂಬುವದು ಪ್ರಾಚಾಪಾಶುರವು. ಅಮಲರ್ - ಹೇಯಗುಣರಹಿತನಾಗಿರುವದರಿಂದ ತುಂಬಾ ಪರಿಶುದ್ಧನಾದ. ಆದಿಪ್ಪಿರಾರ್ - ಜಗತ್ಕಾರಣನಾಗಿ ಸಕಲ ಚೇತನರಿಗೂ ಮಹೋಪಕಾರನಾಗಿರುವ, ಅಡಿಯಾರ್‌ಕ್ಕು....... ವಿಮಲರ್ - ಇದಕ್ಕೆ ಅರ್ಥವು ಮೇಲೆ ಬರೆಯಲ್ಪಟ್ಟಿರುತ್ತದೆ. ವಿಣ್ಣವರ್‌ಕೋರ್ - ನಿತ್ಯ

(೧) ಅಮಲನಾದಿಪ್ಪಿರಾರ್ ೧

(೨)"ನಾರದೋಽಹ ಮನುಪ್ರಾಪ್ತ ಸ್ತ್ವದ್ದರ್ಶನ ಕುತೂಹಲಾತ್।ಪ್ರಭವೋ ಭಗವದ್ಭಕ್ತಾ ನ್ಮಾದೃಶಾಂ ಸತತಂ ದ್ವಿಜ" ಎನ್ರುಮ್, (೩)"ಮ...

ಸೂರಿಗಳಿಗೆ ಸ್ವಾಮಿಯಾಗಿ ನಿಯಾಮಕನು, ಹೀಗೆ ನಿತ್ಯವಿಭೂತಿಯನ್ನು ಹೊಂದಿದ್ದರೂ ಲೀಲಾವಿಭೂತಿಯಲ್ಲಿ ಆದರ ಉಳ್ಳವನೆಂದು ಹೇಳುತ್ತಾರೆ :—**ವಿರೈಯಾರ್ ಪೊಳಿಲ್** - ಪರಿಮಳದಿಂದ ತುಂಬಿರುವ ಉದ್ಯಾನವನಗಳುಳ್ಳ, **ವೇಙ್ಗಡವರ್** - ತಿರುಪತಿ ಬೆಟ್ಟದಲ್ಲಿ ನೆಲಸಿರುವವನು. **ನಿಮಿಲರ್** - ಭಕ್ತರನ್ನನುಗ್ರಹಿಸಿ ರಕ್ಷಿಸುವ ಮಾಹಾತ್ಮ್ಯೆಯಿಂದ ಪ್ರಕಾಶಿಸುತ್ತಿರುವವನು, **ನಿನ್ಮಲರ್** - ಹೀಗೆ ಅಡಿಯಾರ್ ಆದವರಿಗೆ **ಆಳ್ ಪಡುತ್ತಿ** ಉಪಕರಿಸಿದ ಮಹಿಮೆಯಿಂದ ಪ್ರಕಾಶಿಸುವವನು; **ನೀತಿವಾನವರ್** - ನಿತ್ಯ ವಿಭೂತಿಯುಳ್ಳವನು ; **ನೀಳ್ ಮದಿಳ್ ಅರಙ್ಗತ್ತು** - ಎತ್ತರವಾದ **ಸಪ್ತ**ಪ್ರಾಕಾರಗಳುಳ್ಳ ಶ್ರೀರಂಗವೆಂಬ ದಿವ್ಯಕ್ಷೇತ್ರದ, **ಅಮ್ಮಾನ್** - ಸ್ವಾಮಿಯಾದವನು; ಇಂಥಾವನು ನನಗೆ ಮಾಡಿರುವ ಮಹೋಪಕಾರವೇನೆಂದರೆ :—ಮೂಲಸ್ವಾಮಿಯನ್ನು ಸೇವಿಸುವ ಸುಕೃತವು ನಿಕೃಷ್ಟಜನ್ಮವಾದುದರಿಂದ ನನಗೆ ಇಲ್ಲವೆಂದು ತಿಳಿದಿದ್ದರೂ ಕೂಡ ನಿನ್ನ ನಿರ್ಹೇತುಕ ಕೃಪೆಯು ಏನು ಮಾಡಿತೆಂದರೆ :-**ತಿರುಕ್ಕಮಲಪಾದಂ** - ಶ್ರೇಷ್ಠವಾದ, ಕಮಲಪುಷ್ಪಕ್ಕೆ ಸಮಾನವಾದ ನಿನ್ನ ಪಾದಯುಗ್ಮವು, **ಎನ್ ಕಣ್ಣಿಲ್ ಉಳ್ಳನ** - ನನ್ನ ದೃಷ್ಟಿಪಥಕ್ಕೆ ಗೋಚರವಾಯಿತಲ್ಲವೇ ? **ಒಕ್ಕಿನ್ರದೇ** - ಇಂತಹ ಸುಕೃತಪರಿಪಾಕವು ಎನಗೆ ದೊರಕಿದುದು, ದಯಾವಾತ್ಸಲ್ಯಾದಿಗಳಿಂದ ಯುಕ್ತನಾದ ಸ್ವಾಮಿಯಾದ ನಿನಗೂ ಅನನ್ಯಗತಿಕನಾಗಿ ನಿನ್ನನ್ನೇ ನಂಬಿರುವ ದಾಸನಾದ ನನಗೂ ಇರುವ ಸ್ವಾಮಿಭೃತ್ಯ ಸಂಬಂಧಕ್ಕೆ ಯೋಗ್ಯವಾದುದೇ ಸರಿ." **ಎನ್ರುಮ್** - ಎಂಬುದಾಗಿಯೂ,

(೨) **ಅಹಂ ನಾರದಃ** - ನಾರದನಾದ ನಾನು, **ಹೇದ್ವಿಜ** – ಓ ಬ್ರಾಹ್ಮಣನೇ, **ತ್ವದ್ದರ್ಶನ ಕುತೂಹಲಾತ್** - ನಿನ್ನನ್ನು ನೋಡಬೇಕೆಂಬ ಕುತೂಹಲದಿಂದ, **ಅನುಪ್ರಾಪ್ತಃ** – ನಿನ್ನಲ್ಲಿಗೆ ಬಂದಿರುತ್ತೇನೆ. ಅದೇನೆಂದರೆ ಹೇಳುತ್ತಾರೆ :-**ಮಾದೃಶಾಂ** - ನಮ್ಮಂತಹ ಭಾಗವತನಿಷ್ಠೆಯಲ್ಲಿ ತುಂಬಾ ವಿಶ್ವಾಸವುಳ್ಳ ಪ್ರಪನ್ನರಿಗೆ, **ಭಗವದ್ಭಕ್ತಾಃ** - ಸರ್ವೇಶ್ವರನಿಗೆ ಅಂತರಂಗ ಭಕ್ತರಾದವರು. ಭಾಗವತೋತ್ತಮರು, **ಸತತಂ** - ಯಾವಾಗಲೂ, **ಪ್ರಭವಃ** - ನಾಥರು ; ಇದರಿಂದ ಭಾಗವತೋತ್ತಮರಿಗೆ ತಾವು ದಾಸರು ಎಂದು ಹೇಳಿಕೊಂಡಹಾಗಾ

---

(೨) ಪಾದ್ಮೋತ್ತರ ೮೧-೫೨.

ನೋರ್‌ದೆಯ್‌ವ ಮುಳದೆನ್ರಿರುಪ್ಪಾರೋ ಡೊತ್ತಿಲೇನುತ್ತದು ಮುನ್ನಡಿ
ಯಾರ್‌ಕ್ಕಡಿಮೈ" ಎನ್ರುಮ್ ಸೊಲ್ಲುಗಿರಪಡಿಯೇ ಅತ್ಯಂತ ಪಾರ
ತನ್ತ್ರ್ಯಾದಿಗಳಡಿಯಾಗ ಭಗವದಿಷ್ಟ ವಿನಿಯೋಗಾರ್ಹತೈಯಾಲೇ ಭಗವ

ಯಿತು. ಆದರೆ ಈ ಭಾಗವತ ದಾಸ್ಯವು ಪ್ರಪನ್ನನಿಗೆ ಇಲ್ಲಿರುವ ಕೆಲವು ಕಾಲ
ಔಪಾಧಿಕವಾಗಿ ಪ್ರಾಪ್ತವಾಗಿರುವಾಗ, **ಸತತಂ ಪ್ರಭವಃ** - ಯಾವಾಗಲೂ
ನಾಥರು ಎಂಬ ಪ್ರಯೋಗವು ಹೇಗೆ? ಸ್ವಾಮಿಯವರ ಕಾರಿಕೆಯಲ್ಲೂ, **ಸದಾ** -
ಎಂದೂ ಪ್ರಯೋಗಿಸಿರುತ್ತಾರೆ. ಇಂತಹ ಭಾಗವತೋತ್ತಮರುಗಳನ್ನು ನಾವು
ಸಾಮಾನ್ಯ ಮನುಷ್ಯರೆಂದೇ ಭಾವಿಸಕೂಡದು. ಭಗವದಂಶ, ನಿತ್ಯಮುಕ್ತರುಗ
ಳಂಶಭೂತರಾಗಿರಬಹುದಾದುದರಿಂದಲೂ ಅಥವಾ ದೇಹಾವಸಾನಾನಂತರ ಮುಕ್ತ
ದೆಶೆಯು ಸಿದ್ಧವಾದುದರಿಂದ ಅಂತಹ ಭಾಗವತ ಶೇಷತ್ವವು ಸದಾ ಉಂಟೆಂಬ
ಭಾವವು. ಅದೂ ಅಲ್ಲದೆ, ಭಗವಚ್ಛೇಷತ್ವವು, ಪ್ರಪನ್ನನಿಗಾಗಲಿ ಸರ್ವ ಚೇತನ
ರಿಗಾಗಲಿ ಸ್ವರೂಪತಃ ಪ್ರಾಪ್ತವಾದುದು. ಉಪಾಧಿ ಮೂಲಕವಾದುದಲ್ಲವು.
ಆದುದರಿಂದಲೇ **ದಾಸಭೂತಾಸ್ಸ್ವತಸ್ಸರ್ವೇ** ಎಂದು ಹೇಳಲ್ಪಟ್ಟಿರುತ್ತದೆ.
ಯಾವಾಗ ಭಗವಚ್ಛೇಷತ್ವವು ಸ್ವರೂಪತಃ ಪ್ರಾಪ್ತವಾಯಿತೋ, ಆಗ ತದೀಯ
ಶೇಷತ್ವವೂ ಸ್ವರೂಪತಃ ಪ್ರಾಪ್ತವಾಯಿತೆಂಬ ಭಾವವು. ಈ ಅಭಿಪ್ರಾಯವನ್ನೇ
ಶ್ರೀಮದಾಚಾರ್ಯರವರು ಮುಂದೆ **ಯಾವದಾತ್ಮಭಾವಿಯಾನ ಕಟ್ಟಳೆಯಿಲೆ**
ಎಂಬ ಪ್ರಯೋಗದಿಂದ ತಿಳಿಸುತ್ತಾರೆ. **ಎನ್ರುಮ್** - ಎಂಬದಾಗಿಯೂ.

(೩) **ಮುನ್ನಮ್ ...... ಮುಳದು** - ಶ್ರಿಯಃಪತಿಯಲ್ಲದೆ ಬೇರೊಬ್ಬ ಪರ
ತತ್ವವುಂಟು, **ಎನ್ರಿರುಪ್ಪಾರೋಡು** - ಎಂಬಭಿಪ್ರಾಯದಿಂದಿರುವವರೊಂದಿಗೆ.
ಒತ್ತಿಲೇನ್ - ಸಂಬಂಧವನ್ನು ಹೊಂದಲಿಲ್ಲವು. **ಉಟ್ರದುಮ್** - ಅಭಿನಿವೇಶ
ವನ್ನು ಹೊಂದಿದುದು, **ಉನ್ನಡಿಯಾರ್‌ಕ್ಕಡಿಮೈ** - ನಿನ್ನ ದಾಸಭೂತರಾದ
ಭಾಗವತೋತ್ತಮರುಗಳಿಗೆ ದಾಸ್ಯವು. ಈ ಅಮೋಘ ಪಾಶುರವು ಪರದೇವತಾ
ಪಾರಮಾರ್ಥ್ಯಾಧಿಕಾರದಲ್ಲಿ ಉಪಪಾದಿತವಾಗಿರುತ್ತದೆ. ೭೨೭ನೆಯ ಪುಟವನ್ನು
ನೋಡಿ. ಭಗವಚ್ಛೇಷತ್ವವು **ತದೀಯಪರ್ಯನ್ತ**ವೆಂಬುವದು ಇಲ್ಲಿ ಉಪಪಾದಿಸ
ಲ್ಪಟ್ಟಿರುತ್ತದೆ." **ಎನ್ರುಮ್** - ಎಂಬದಾಗಿಯೂ. **ಸೊಲ್ಲುಗಿರಪಡಿಯೇ** -
ಹೇಳಿರುವ ಹಾಗೆ. **ಅತ್ಯಂತ ಪಾರತಂತ್ರ್ಯಾದಿಗಳಡಿಯಾಗ** - ಈ ಪ್ರಪನ್ನನ
ಜಡಪದಾರ್ಥದೋಪಾದಿಯಲ್ಲಿ ಸರ್ವೇಶ್ವರನಿಗೆ ಅತ್ಯಂತ ಪರತನ್ತ್ರನಾಗಿರುವದೇ
ಮೊದಲಾದವುಗಳ ಮೂಲಕವಾಗಿ, ಇಲ್ಲಿ **ಆದಿ** ಶಬ್ದದಿಂದ ಭಾಗವತನಿಷ್ಠಾ

ಚ್ಛೇಷತ್ವಂ ತಾಳಿ ಯಾವದಾತ್ಮ ಭಾವಿಯಾನ ಕಟ್ಟಳೈಯಿಲೆ ಭಾಗವತ ಶೇಷತ್ವಪರ್ಯನ್ತಮಾಯಿತ್ತು.

ಇಙ್ಗು ಭಾಗವತತ್ವಮುಡಿಯಾಗ ಸ್ವರೂಪ ಪ್ರಯುಕ್ತ ಮಾಗ

ಜ್ಞಾನವೂ, ಭಕ್ತಿವೈರಾಗ್ಯಾದಿ ಜ್ಞಾನವೂ ಹೇಳಲ್ಪಟ್ಟವು. **ಭಗವದಿಷ್ಟ ವಿನಿಯೋಗಾರ್ಹತಯಾಲೇ** - ಯಾವಾಗ ಅತ್ಯನ್ತ ಪರತನ್ತ್ರನೋ ಆಗ ಭಗವಂತನು ತನ್ನ ಇಷ್ಟಾನುಸಾರ ಉಪಯೋಗಿಸಲು ಅರ್ಹತೆಯುಳ್ಳವನಾದುದರಿಂದ, **ಭಗವಚ್ಛೇಷತ್ವಂ ತಾಳಿ** - ತಾನು ಭಗವಂತನಿಗೆ ಶೇಷಭೂತನಾಗಿರುವದು, **ಯಾವದಾತ್ಮಭಾವಿಯಾನ** - **ದಾಸಭೂತಾಸ್ಸ್ವತಸ್ಸರ್ವೇ** ಎಂದು ಹೇಳಿರುವಹಾಗೆ ತನ್ನ ಆತ್ಮಸ್ವರೂಪವಿರುವವರೆವಿಗೂ ತಪ್ಪದೇ ಇರುವಂತಹ, **ಕಟ್ಟಳೆಯಿಲೆ** - ರೀತಿಯನ್ನನುಸರಿಸಿ, **ಭಾಗವತಶೇಷತ್ವ ಪರ್ಯನ್ತಮಾಯಿತ್ತು** - ಭಾಗವತರಿಗೂ ಶೇಷಭಾವವನ್ನು ಹೊಂದಿರುವದರವರೆಗೂ ಪ್ರಾಪ್ತವಾಯಿತು.

ಈ ಮೇಲಿನ ಮೂರು ಪ್ರಮಾಣಗಳಲ್ಲಿಯೂ, ಹೇಳಿರುವ ಹಾಗೆ ಯಾವಾಗ ಈತನು ಶ್ರಿಯಃಪತಿಗೆ ನಿರುಪಾಧಿಕ ಶೇಷಭೂತನೆಂದೂ ಅತ್ಯಂತ ಪರತನ್ತ್ರನೆಂದೂ ಸ್ವರೂಪತಃ ಏರ್ಪಟ್ಟಿತೋ, ಅಂತವನನ್ನು ಸರ್ವೇಶ್ವರನು ತನ್ನಿಷ್ಟಾನುಸಾರ ನಿಯಮಿಸಲು ಶಕ್ತನಾದುದರಿಂದ ತದೀಯರಾದ ಭಾಗವತೋತ್ತಮರಿಗೂ ಸಹ ಸ್ವರೂಪತಃ ಶೇಷಭೂತನಾಗಿರತಕ್ಕದ್ದೆಂದು ನಿಯಮಿಸುವದು ಯುಕ್ತವಾದುದರಿಂದ, ಭಗವಚ್ಛೇಷತ್ವವು ತದೀಯಪರ್ಯನ್ತವೆಂದು ಇಲ್ಲಿ ಸಿದ್ಧಾನ್ತಿಸಲ್ಪಟ್ಟಿತು. ಈ ಮೇಲಿನ ವಾಕ್ಯದಲ್ಲಿ **ಯಾವದಾತ್ಮಭಾವಿಯಾನ ಕಟ್ಟಳೈಯಿಲೆ** ಎಂದು ಹೇಳಿರುವದರಿಂದ ಭಗವಚ್ಛೇಷತ್ವ ಭಾಗವತ ಶೇಷತ್ವಗಳು ಸ್ವರೂಪತಃ ಪ್ರಾಪ್ತವಾದುದೆಂದು ಹೇಳಲ್ಪಟ್ಟಿತು. ಮುಂದಿನ ವಾಕ್ಯದಿಂದ ಸ್ವರೂಪ ಮಾತ್ರದಿಂದಲೇ ಅಲ್ಲದೆ, ಸರ್ವೇಶ್ವರನ ಮತ್ತು ತನ್ನ ಗುಣಗಳ ಜ್ಞಾನ ಮೂಲಕವಾಗಿಯೂ ಇವುಗಳುಂಟಾಗುತ್ತವೆಂದು ಹೇಳುತ್ತಾರೆ. ಪಾದ್ಮೋತ್ತರ ಪುರಾಣ ವಾಕ್ಯದಲ್ಲಿ ಹೇಳಿರುವ **ಭಗವದ್ಭಕ್ತಾಃ ಪ್ರಭವಃ** - ಭಗವದ್ಭಕ್ತರು ಹೇಗೆ ಸ್ವರೂಪತಃ ಶೇಷಿಗಳೆಂಬುವದು ಹಿಂದಿನ ವಾಕ್ಯದಲ್ಲಿ ಉಪಪಾದಿಸಲ್ಪಟ್ಟಿತು. ಆದರೆ ಅಲ್ಲಿ **ಮಾದೃಶಾಂ** ಎಂದು ನಾರದ ಮಹರ್ಷಿ ಉಪಯೋಗಿಸಿದ ಅರ್ಥಸ್ವಾರಸ್ಯವನ್ನು ಈಗ ತೋರಿಸುವರಾಗಿ, ಗುಣಜ್ಞಾನ ಮೂಲಕವಾಗಿಯೂ ಭಾಗವತ ಶೇಷತ್ವವು ಪ್ರಾಪ್ತವಾಗುತ್ತದೆಂದು ತೋರ್ಪಡಿಸುತ್ತಾರೆ.

ಇಙ್ಗು - **ಈ** ಸಂದರ್ಭದಲ್ಲಿ, ಯಾವ ಸಂದರ್ಭವೆಂದರೆ ಭಗವಚ್ಛೇಷತ್ವವು ಭಾಗವತ ಶೇಷತ್ವಪರ್ಯನ್ತವೆಂಬುವದರಲ್ಲಿ, **ಭಾಗವತತ್ವಮುಡಿಯಾಗ** - ಭಾಗ

ವುಮ್, (೧) "ಗುಣೈರ್ದಾಸ್ಯ ಮುಪಾಗತಃ" ಎಙ್ಗಿರ ನ್ಯಾಯತ್ತಾಲೆ ಗುಣಜ್ಞಾನ ಮಡಿಯಾಗ ಸ್ವೇಚ್ಛೈಯಾಲುಮ್, ವನ್ದ ಭಾಗವತ ಶೇಷತ್ವಮ್ "ಭಗವದ್ಭಕ್ತೈಃ", "ಮಾದೃಶಾಂ" ಎಙ್ಗಿರ ಇರಣ್ಡು ಪದತ್ತಾಲುಮ್ ಸೂಚಿತಮ್.

ವತತ್ವಮೂಲಕವಾಗಿ, ಹಿಂದೆ ಉಪಪಾದಿಸಿದ ರೀತಿಯಲ್ಲಿ, **ಸ್ವರೂಪ ಪ್ರಯುಕ್ತ ಮಾಗವುಮ್** - ಸ್ವರೂಪ ಕ್ರಮದಿಂದಲೂ, ಎಂದರೆ ಭಗವಂತನಿಗೆ ಸ್ವರೂಪತಃ ಯಾವಾಗ ಶೇಷನಾದನೋ, ಆಗ ಆತನಿಗೆ ಇಷ್ಟವಾದವರಿಗೂ ಶೇಷನಾಗಿರತಕ್ಕದೆಂಬುವದು ಸ್ವರೂಪಪ್ರಯುಕ್ತವೇ ಉಂಟಾಗುತ್ತದೆಂಬ ಭಾವವು, **"ಗುಣೈರ್ದಾಸ್ಯ ಮುಪಾಗತಃ"**, ಉತ್ಕೃಷ್ಟ ಗುಣಗಳು ಶ್ರೀರಾಮನಲ್ಲಿರುವದರಿಂದ, **ದಾಸ್ಯಂ** – ದಾಸಭಾವವನ್ನು, **ಉಪಾಗತಃ** – ಹೊಂದಿದವನು, ಎಙ್ಗಿರ - ಎಂದು ಹೇಳಿದ ಲಕ್ಷ್ಮಣೋಕ್ತಿಯು, **ನ್ಯಾಯತ್ತಾಲೇ** – ರೀತಿಯಲ್ಲಿ, **ಗುಣಜ್ಞಾನ ಮಡಿಯಾಗ** – ಭಾಗವತೋತ್ತಮರಲ್ಲಿ ತನಗಿಂತಲೂ ಉತ್ಕೃಷ್ಟ ಗುಣಗಳುಂಟೆಂಬ ಜ್ಞಾನಮೂಲಕವಾಗಿ, ಆ ಉತ್ಕೃಷ್ಟ ಗುಣಗಳು ಯಾವುವೆಂದರೆ ಮುಖ್ಯವಾಗಿ ಜ್ಞಾನ ಭಕ್ತಿ ವೈರಾಗ್ಯಗಳು; **ಸ್ವೇಚ್ಛೈಯಾಲುಮ್** – ತನ್ನ ಇಷ್ಟಾನುಸಾರವಾಗಿಯೂ, **ವನ್ದ** – ಹೀಗೆ ಎರಡು ವಿಧವಾಗಿಯೂ ಉಂಟಾದ ಭಾಗವತ ಶೇಷತ್ವವು, ಪಾದ್ಮೋತ್ತರ ಪುರಾಣ ಶ್ಲೋಕದಲ್ಲಿರುವ **"ಭಗವದ್ಭಕ್ತೈಃ", "ಮಾದೃಶಾಂ", ಎಙ್ಗಿರ ಇರಣ್ಡು ಪದತ್ತಾಲುಮ್** – ಎನ್ನುವ ಎರಡು ಪದಗಳಿಂದಲೂ, **ಸೂಚಿತಮ್** - ಪ್ರದರ್ಶಿಸಲ್ಪಟ್ಟಿತು. ಇದರಿಂದ ಪ್ರಪನ್ನನಿಗೆ ಭಾಗವತ ಶೇಷತ್ವವು ಎರಡು ವಿಧವಾಗಿಯೂ ಪ್ರಾಪ್ತವಾಗುತ್ತದೆ ಎಂದು ಹೇಳುತ್ತಾರೆ. ಸರ್ವೇಶ್ವರನ ಇಷ್ಟಾನುಸಾರವೂ ಉಂಟಾಗಬಹುದು; ತನ್ನ ಇಷ್ಟಾನುಸಾರವೂ ಉಂಟಾಗಬಹುದು ಸರ್ವೇಶ್ವರನ ಇಷ್ಟಾನುಸಾರ ಉಂಟಾಗುವದು ಸ್ವರೂಪತಃ; ತನ್ನಿಷ್ಟಾನುಸಾರ ಉಂಟಾಗುವದು ಗುಣೋತ್ಕರ್ಷದಿಂದೆಂದು ಹೇಳುತ್ತಾರೆ. ಸರ್ವೇಶ್ವರನಿಗೆ ಸ್ವರೂಪತಃ ಶೇಷನಾದುದರಿಂದ ಅಂತವನನ್ನು ಸರ್ವೇಶ್ವರನು ತನ್ನಿಷ್ಟಾನುಸಾರ ವಿನಿಯೋಗಿಸಬಹುದಾದ ಪ್ರಯುಕ್ತ ಭಾಗವತೋತ್ತಮನಿಗೂ ಶೇಷಭೂತನೇ ಭಾಗವತೋತ್ತಮನು ಉತ್ಕೃಷ್ಟ ಗುಣಗಳುಳ್ಳವನಾದುದರಿಂದ ಆ ಗುಣಗಳ ಮೂಲಕವೂ ಆತನಿಗೆ ಶೇಷಭೂತನು ಎಂಬ ಭಾವವು. ಹೀಗೆ ಎರಡು ವಿಧವಾಗಿಯೂ ದಾಸ್ಯವು ಪ್ರಾಪ್ತವಾಗಬಹುದೆಂಬುವದು ಶ್ರೀಮದ್ರಾಮಾಯಣ

---

(೧) ರಾಮಾ. ಕಿಷ್ಕಿಂಧಾ ೪. ೧೨.

ದಲ್ಲಿ ಉಪಪಾದಿತವಾಗಿರುತ್ತದೆ. ಉತ್ಕೃಷ್ಟಗುಣಗಳಿರುವದರಿಂದ ದಾಸ್ಯವು ಪ್ರಾಪ್ತವಾಗಬಹುದು ಎಂಬುವದಕ್ಕೆ,

ಅಹಮಸ್ಯಾವರೋಭ್ರಾತಾ ಗುಣೈರ್ದಾಸ್ಯ ಮುಪಾಗತಃ ।
ಕೃತಜ್ಞಸ್ಯ ಬಹುಜ್ಞಸ್ಯ ಲಕ್ಷ್ಮಣೋ ನಾಮನಾಮತಃ ॥
ಸುಖಾರ್ಹಸ್ಯ ಮಹಾರ್ಹಸ್ಯ ಸರ್ವಭೂತ ಹಿತಾತ್ಮನಃ ।
ಐಶ್ವರ್ಯೇಣ ಚ ಹೀನಸ್ಯ ವನವಾಸಾ ಶ್ರಿತಸ್ಯಚ ॥

ಎಂಬ ಶ್ಲೋಕವನ್ನು ಉದಾಹರಿಸುತ್ತಾರೆ. ಇದು ಲಕ್ಷ್ಮಣನ ವಾಕ್ಯವು. **ಅಹಮಸ್ಯಾವರೋ ಭ್ರಾತಾ** - ನಾನು ಈ ಶ್ರೀರಾಮನಿಗೆ ತಮ್ಮನು, ಎಂದರೆ-ಆತನ ಭಾವನೆಯಿಂದ ತಮ್ಮನು. ಆತನ ಸರ್ವೋತ್ಕೃಷ್ಟ ಗುಣಗಳ ಮೂಲಕ ಆತನಿಗೆ ದಾಸಭಾವವನ್ನು ಹೊಂದಿರುವವನಾಗಿದ್ದೇನೆ. ಆತನಲ್ಲಿ ಏನು ಅಂತಹ ಉತ್ಕೃಷ್ಟ ಗುಣಗಳು ಎಂದು ಕೇಳುವೆಯೋ, ಆಶ್ರಿತ ರಕ್ಷಣೋಪಯುಕ್ತಗುಣಗಳುಂಟು. **ಕೃತಜ್ಞಸ್ಯ** – ಮಾಡಿದುದನ್ನು, **"ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ"** ಎಂದು ಹೇಳಿರುವ ಹಾಗೆ ಏನಾದರೂ ಅಲ್ಪಸ್ವಲ್ಪ ಮಾಡಿದರೂ ಅದನ್ನು ತಿಳಿದು ಸಂತೋಷಪಡತಕ್ಕವನು. **ಬಹುಜ್ಞಸ್ಯ** - ಅಲ್ಪಸ್ವಲ್ಪ ಮಾಡಿದುದನ್ನೂ ಬಹುವಾಗಿ ಮಾಡಲ್ಪಟ್ಟಿತೆಂದು ತಿಳಿದು ಆನಂದಿಸುವ ಉದಾರ ಗುಣಯುಕ್ತನು. ಇನ್ನೂ ಎಂತವನೆಂದರೆ, **"ಸರ್ವಭೂತ ಹಿತಾತ್ಮನಃ"** ಎಲ್ಲಾ ಚೇತನರಿಗೂ ಹಿತಮಾಡಬೇಕೆಂಬ ಮನಸ್ಸುಳ್ಳವನು. ಆದುದರಿಂದಲೇ ಅಂತಹಮಹನೀಯನಿಗೆ ದಾಸ್ಯವನ್ನೂ ಅದನ್ನು ಪ್ರದರ್ಶಿಸುವ ಕೈಙ್ಕರ್ಯವನ್ನೂ ನನ್ನ ಸ್ವಂತ ಇಷ್ಟದಿಂದಲೇ ಅಂಗೀಕರಿಸಿರುತ್ತೇನೆ. ಅದು ಹೇಗೆ ಹೇಳುತ್ತೀ ಎನ್ನುತ್ತೀಯೋ? **ಲಕ್ಷ್ಮಣೋ ನಾಮ ನಾಮತಃ**-ನನ್ನ ಹೆಸರೇ ಲಕ್ಷ್ಮಣನು, ಕೈಙ್ಕರ್ಯ ಲಕ್ಷ್ಮೀ ಸಂಪನ್ನನಾದುದರಿಂದಲೇ ಆ ಹೆಸರು. ಈ ದಾಸ್ಯವು ಉಪಾಧಿಯಿಂದುಂಟಾದುದಲ್ಲವು. ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲಿಯೂ ಉಂಟೆಂದು ಹೇಳಿಕೊಳ್ಳುತ್ತಾನೆ. **ಸುಖಾರ್ಹಸ್ಯ ಮಹಾರ್ಹಸ್ಯ ಐಶ್ವರ್ಯೇಣ ಚ ಹೀನಸ್ಯ ವನವಾಸಾಶ್ರಿತಸ್ಯಚ**, ರಾಜಭೋಗಗಳನ್ನನುಭವಿಸುತ್ತಿರಲಿ ಅಥವಾ ರಾಜ್ಯಭ್ರಷ್ಟನಾಗಿ ವನವಾಸವನ್ನಾಶ್ರಯಿಸಿರಲಿ, ಹೀಗೆ ಎಲ್ಲಾ ದೇಶಕಾಲಾವಸ್ಥೆಗಳಲ್ಲೂ ದಾಸ್ಯವನ್ನು ನನ್ನಿಷ್ಟಾನುಸಾರವಾಗಿಯೇ ಅವಲಂಬಿಸಿರುವೆನು ಎಂದು ಹೇಳಿಕೊಂಡಿರುತ್ತಾನೆ, ಆದರೆ ಪರಾಧೀನವಾದ ಈ ದಾಸ್ಯವು ಕ್ಲೇಶಕರವಾದುದಲ್ಲವೋ ಎಂದರೆ ಈ ದಾಸ್ಯವೂ ಅದರಿಂದುಂಟಾದ ಪರಾಧೀನತೆಯೂ ಹೀಗೆ ತನ್ನಿಷ್ಟಮೂಲಕವಾಗಿಯೇ ಇದ್ದರೆ ಎಂದಿಗೂ ಕ್ಲೇಶವಾದುದಲ್ಲವು. ಆದರೆ ಸೀತೆಗೆ ಅಶೋಕವನದಲ್ಲಿ ಪ್ರಾಪ್ತವಾದ ಹಾಗೆ ಇಷ್ಟವಿಲ್ಲದೆ ಬಲಾತ್ಕಾರದಿಂದ ಉಂಟಾದರೆ ಅಗಂಗ

“ಧಿಗಸ್ತು ಪರವಶ್ಯತಾಂ” ಎಂದು ಹೇಳಬೇಕಾಗುತ್ತದೆ. ಆದರೆ ಲಕ್ಷ್ಮಣನಿಗೆ ಶ್ರೀರಾಮನ ವಿಷಯದಲ್ಲಿ ಉಂಟಾದ ಪಾರವಶ್ಯವು ಹಾಗಲ್ಲವು; ಲಕ್ಷ್ಮಣನಿಗೆ ಪರಮ ಹಿತವಾದುದು.

ಇನ್ನೊಂದು ಕಡೆಯಲ್ಲಿ ಸ್ವರೂಪತಃ ತನಗೆ ದಾಸ್ಯ ಉಂಟೆಂದು ಲಕ್ಷ್ಮಣನೇ ಹೇಳಿಕೊಂಡಿರುತ್ತಾನೆ :—

“ಸೀತಾ ಸಮಕ್ಷಂ ಕಾಕುತ್ಸ್ಥಮಿದಂ ವಚನ ಮಬ್ರವೀತ್ ।
ಪರವಾ ನಸ್ಮಿ ಕಾಕುತ್ಸ್ಥ ತ್ವಯಿವರ್ಷ ಶತಂಸ್ಥಿತೇ ”॥ ಆ೩ ೧೫-೬.
ಶ್ರೀರಾಮನು ಲಕ್ಷ್ಮಣನನ್ನು ಕುರಿತು ಆತನ ಸೌಕರ್ಯಕ್ಕನುಕೂಲವಾದ ನೀರು ನೆಳಲಿರುವ ಒಂದು ರಮಣೀಯ ಪ್ರದೇಶದಲ್ಲಿ ಪರ್ಣಶಾಲೆಯನ್ನು ರಚಿಸು ಎಂದು ಆತನಿಗೇ ಸ್ವಾತಂತ್ರ್ಯವನ್ನು ಕೊಟ್ಟು ಹೇಳಲು, ವನಕ್ಕೆ ಹೊರಟ ಕಾಲದಲ್ಲಿ ಶ್ರೀರಾಮನು ತನ್ನನ್ನು ಅಯೋಧ್ಯೆಯಲ್ಲೀ ಇರೆಂದು ಆಜ್ಞಾಪಿಸಿ ದರೂ, ಆತನ ಮಾತನ್ನು ಉಲ್ಲಂಘಿಸಿ ತನ್ನ ಪಾರತಂತ್ರ್ಯ ಸ್ವರೂಪವನ್ನು ಮರೆತಿದ್ದುದು, ಈಗ ಜ್ಞಾಪಕಕ್ಕೆ ಬಂದುದರಿಂದ ತಾನು ತುಂಬಾ ಪರತಂತ್ರನು, ಎಂದು ಪುರುಷಕಾರಭೂತೆಯಾದ ಸೀತೆಯ ಸಮಕ್ಷದಲ್ಲಿ ಶ್ರೀರಾಮನಿಗೆ ಅರಿಕೆಮಾಡಿಕೊಳ್ಳುತ್ತಾನೆ. “ಸ್ವಯಂತು ರುಚಿರೇದೇಶೇ ಕ್ರಿಯತಾಮಿತಿ ಮಾಂವದ” ನೀನೇ ನಿಮ್ಮಗಳಿಗೆ ಮನೋಹರವಾದ ಸ್ಥಳದಲ್ಲಿ ಆಶ್ರಮ ವನ್ನು ರಚಿಸು ಎಂದು ಆಜ್ಞಾಪಿಸತಕ್ಕದ್ದೆಂದು ಬೇಡುತ್ತಾ, ನಾನು ನಿಮಗೆ ಅನಂತಕಾಲವೂ ಕೈಂಕರ್ಯವನ್ನೆಸಗುತ್ತಿರುವವನಾದುದರಿಂದ, ಪರವಾನ್ ಅಸ್ಮಿ - ನಿನಗೆ ಪಾರತಂತ್ರ್ಯ ಸ್ವರೂಪವುಳ್ಳವನಾಗಿರುವೆನು ಎಂದು ಲಕ್ಷ್ಮಣನು ಹೇಳಿ ಕೊಂಡನು. ಈ ಪಾರತಂತ್ರ್ಯವು ಸಾರ್ವಕಾಲಿಕವಾದುದು ಎಂದು ತ್ವಯಿವರ್ಷ ಶತಂಸ್ಥಿತೇ ಎಂಬುವದರಿಂದ ಹೇಳಲ್ಪಟ್ಟಿತು. ಈ ಶ್ಲೋಕದಲ್ಲಿ ದ್ವಯ ಮಂತ್ರಾರ್ಥವು ಸೂಚಿತವಾಗಿರುತ್ತದೆ. ಲಕ್ಷ್ಮಣನು ಸಂಯತಾಂಜಲಿಃ ಅಂಜಲಿಬದ್ಧನಾಗಿ ಹೇಳಿದನು ಎಂದು ಹಿಂದೆ ಇರುವದರಿಂದ ಭರನ್ಯಾಸವನ್ನು ಮಾಡಿದನೆಂಬುವದು ಸೂಚಿಸಲ್ಪಟ್ಟಿತು. ಸೀತಾ ಸಮಕ್ಷಂ ಎಂಬುವದರಿಂದ ಶ್ರೀಮಚ್ಛಬ್ದಾರ್ಥವು ಬೋಧಿಸಲ್ಪಟ್ಟಿತು. ಕ್ರಿಯತಾಂ ಇತಿಮಾಂವದ ಎಂಬಲ್ಲಿ ನಾರಾಯಣಾಯನಮಃ ಎಂಬುವದರ ಅರ್ಥವು ತೋರುಬರುತ್ತದೆ.

ಹೀಗೆ ಸ್ವರೂಪತಃ ಮತ್ತು ಗುಣತಃ ತನಗೆ ದಾಸ್ಯವು ಉಂಟು ಎಂದು ಲಕ್ಷ್ಮಣನು ಹೇಳಿಕೊಂಡಿರುತ್ತಾನೆ ಹಾಗೆಯೇ ಪ್ರಪನ್ನನೂ ಕೂಡ ಭಾಗ ವತೋತ್ತಮನಿಗೆ ಸ್ವರೂಪತಃ ಗುಣತಃ ಸಹ ಶೇಷಭೂತನು ಎಂಬ ಭಾವವು.

ಇಬ್ಭಾಗವತ ಶೇಷತ್ವಮ್ ಕ್ರಯುಮ್ ಶೆಲ್ಲುಮ್ಪಡಿಯೈ, (೧) ಪೇಶು ವಾರಡಿಯಾರ್‌ಗಳೆನ್ತಮ್ಮೈ ವಿರ್ಕವುಮ್ ಪೆರುವಾರ್‌ಗಳೆ"ನ್ರು ಕಲ್ಪ ಸೂತ್ರ ವ್ಯಾಖ್ಯಾತಾಕ್ಕಳಾದ ಪೆರಿಯಾಳ್ವಾರರುಳಿಚ್ಚೆಯ್‌ದಾರ್.

ಈ ಭಾಗವತ ಶೇಷತ್ವವು ಭಗವಚ್ಛೇಷತ್ವಕ್ಕಿಂತ ವಿಲಕ್ಷಣವಾದುದೆಂದು ತೋರಿಸುತ್ತಾರೆ:—ಇಬ್ಭಾಗವತ ಶೇಷತ್ವಮ್ – ಈ ಭಾಗವತ ಶೇಷತ್ವವು, ಕ್ರಯುಂ ಶೆಲ್ಲುಮ್‌ಪಡಿಯೇ -- ಕ್ರಯ ಮಾಡಿದರೂ ಅದು ಸಲ್ಲುವ ಪ್ರಕಾರವನ್ನು ಶೇಷ್ರ ಪದಾರ್ಥವಾದರೆ ಕ್ರಯಮಾಡಿದರೂ ಕ್ರಯ ಸಲ್ಲುವದಿಲ್ಲವು, ಏಕೆಂದರೆ ಆ ಪದಾರ್ಥವು ಮಾರಿದ ಕಳ್ಳನದಲ್ಲವು. ಈ ಭಾಗವತ ಶೇಷತ್ವವು ಹಾಗ ಲ್ಲವು ಎಂಬ ಭಾವವು. ಪೇಶುವಾರ್ - ಭಗವನ್ನಾಮ ಸಂಕೀರ್ತನ ಪರ ರಾದ ಭಾಗವತರುಗಳ, ಎನ್ತಮ್ಮೈ - ಶೇಷಭೂತರಾದ ನಮ್ಮನ್ನು. ವಿರ್ಕ ವುಮ್ - ಕ್ರಯಮಾಡುವದಕ್ಕೆ, ಪೆರುವಾರ್‌ಗಳ್ - ಸಮರ್ಥರು." ಎನ್ರು - ಎಂದು, ಕಲ್ಪಸೂತ್ರ ವ್ಯಾಖ್ಯಾತಾಕ್ಕಳಾನ - ಕಲ್ಪಸೂತ್ರಕ್ಕೆ ವ್ಯಾಖ್ಯಾನ ರೂಪದಲ್ಲಿ ಬರೆದ ಪೆರಿಯಾಳ್ವಾರ್ರವರು, ಅರುಳಿಚ್ಚೆಯ್‌ದಾರ್ - ಅಪ್ಪಣೆ ಕೊಡಿಸಿರುತ್ತಾರೆ.

ಕಾಶಿ ನಾಯ್‌ಕ್ಕರವ್ ವಿರ್‌ಕಿಲುಙ್ಕರವಾದು ಮಾಱ್ರಲಿ ಶೋರಿಟ್ಟು
ತ್ತೇಶವಾರ್‌ತ್ತೈಪಡೈಕ್ಕುಂ ವಣ್ಕೈಯಿನಾರ್‌ಗಳ್ ನಾಳ್‌ತಿರುಕ್ಕೋಟ್ಟಿ
ಯೂರ್ಕ್ಟ
ಕೇಶವಾ ಪುರುಡೋತ್ತಮಾ ಕಿಳರ್ ಶೋದಿಯಾಯ್ ಕುರಳಾವೆನ್ರು
ಪೇಶವಾರಡಿಯಾರ್‌ಗಳ್ ಎನ್ತಮ್ಮೈ ವಿರ್ಕವುಪ್ ಪೆರುವಾರ್‌ಗಳೇ

ಎಂಬುವದು ಪೂರಾಪಾಶುರವು. ಕಾಶಿ....ವಿರ್‌ಕಿಲುಮ್ - ಒಂದು ಕಾಸಿಗೆ ಒಂದು ಹಿಡಿ ನೆಲ್ಲು ಮಾರುವಾಗಲೂ, ಕರವಾದು - ಮುಂಪಕ್ಕೆ ಬೇಕಾದೀತೆಂದ ಮುರಿಸದದೆ, ಮಾಱ್ರಲಿಶೋರಿಟ್ಟು - ಪ್ರತ್ಯುಪಕಾರ ನಿರಪೇಕ್ಷವಾಗಿ ಅನ್ನ ವನ್ನು ಹಾಕಿ ಎಂದರೆ ಅತಿಥಿ ಸತ್ಕಾರವು ವಿಹಿತವಾದುದರಿಂದ, ಇವರೆಲ್ಲಾ ಭಗ ವದ್ವಿಭೂತಿಗೆ ಸೇರಿದವರೆಂದು ಭಾವಿಸಿಯೂ, ಇವರಲ್ಲಿರುವ ದೈನ್ಯದಿಂದುಂಟಾದ ಕೃಪೆಯಿಂದಲೂ ಅನ್ನವನ್ನು ಹಾಕಿ ಎಂಬ ಭಾವವು. ದೇಶವಾರ್‌ತ್ತೈ ಪಡೈಕ್ಕುಮ್ - ತಮ್ಮ ಊರಿಗೆ ಖ್ಯಾತಿಬರುವ ಹಾಗೆ, ವಣ್ಕೈಯಿನಾರ್‌ಗಳ್- ಔದಾರ್ಯವಾದ ಬಳೆಕೈಗಳುಳ್ಳ, ನಾಳ್‌ತಿರುಕ್ಕೋಟ್ಟಿಯೂರ್ - ಇಂತಹ ದೇಶದಲ್ಲಿರುವದೇ ನಮಗೆ ಸಾರ್ಥಕ್ಯವೆಂದು ಭಾವಿಸುವ ತಿರುಕ್ಕೋಟ್ಟಿಯೂರಿನ,

ಕೇಶವ, ಪುರುಷೋತ್ತಮ, ಪ್ರಕಾಶವಾದ ತೇಜಸ್ಸಾದವನೇ ಕುರಳಾ-ವಾಮನನೇ ಎಂದು, ಪೇಶುವಾರಡಿಯಾರ್‌ಗಳ್ - ಸ್ತೋತ್ರಮಾಡುವ ದಾಸರು, ನಮ್ಮನ್ನು ವಿಕ್ರಯಿಸಲು ಸಮರ್ಥರು ಎಂಬರ್ಥವು, ನಾವು ಭಾಗವತರಿಗೆ ಶೇಷಭೂತರಾದುದರಿಂದ ಅವರು ತಮ್ಮಿಷ್ಟಾನುಸಾರ ಕ್ರಯವಿಕ್ರಯಾದಿಗಳನ್ನು ಮಾಡಲು ಸ್ವಾತಂತ್ರ್ಯವುಳ್ಳವರೆಂಬ ಭಾವವು.

ಈ ಅಭಿಪ್ರಾಯವನ್ನೇ ಸ್ವಾಮಿ ದೇಶಿಕರವರು ಯತಿರಾಜ ಸಪ್ತತಿಯಲ್ಲೂ ಉಪಪಾದಿಸುವವರಾಗಿ, ಈ ಅಮೋಘಾಭಿಪ್ರಾಯವು ಶ್ರೀ ಯತಿರಾಜರಿಂದ ಪ್ರಾಪ್ತವಾದುದೆಂದು ಹೇಳುತ್ತಾರೆ.

ಅಭಿಗಮ್ಯ ಸಮ್ಯಗನಘಾಸ್ಸುಮೇಧಸಃ
ಯತಿಚಕ್ರವರ್ತಿ ಪದಪದ್ಮ ಪತ್ತನಂ ।
ಹರಿಭಕ್ತ ದಾಸ್ಯರಸಿಕಾಃ ಪರಸ್ಪರಂ
ಕ್ರಯವಿಕ್ರಯಾರ್ಹದಶಯಾ ಸಮಿನ್ಧತೇ ॥೧೮॥

ಶ್ರೀ ಯತಿಸಾರ್ವಭೌಮರ ಚರಣಾರವಿಂದವನ್ನಾಶ್ರಯಿಸಿದವರು, ತೇಜಸ್ಸುಳ್ಳ ನಿರ್ಮಲ ರತ್ನದಹಾಗೆ ಪಾಪಗಂಧವೇ ಇಲ್ಲದೆ ಸಮೀಚೀನವಾದ ಜ್ಞಾನದೀಪ್ತಿಯನ್ನು ಹೊಂದಿದವರಾದುದರಿಂದಲೇ, ಹರಿಭಕ್ತದಾಸ್ಯರಸಿಕರಾಗಿ ಎಂದರೆ ಭಾಗವತೋತ್ತಮರಾದ ಶ್ರೀವೈಷ್ಣವರಿಗೆ ತಾವು ದಾಸರು, ಅವರಿಗೆ ಕೈಂಕರ್ಯವೆಸಗುವದೇ ತಮಗೆ ಸ್ವರೂಪವು ಎಂಬ ರತ್ನಮಹಿಮೆಯನ್ನರಿತವರಾಗಿ, ರತ್ನಗಳು ಹೇಗೆ ಕ್ರಯವಿಕ್ರಯವೆಂದರೆ ಕೊಳ್ಳುವದು ಮಾರುವದಕ್ಕೆ ಅರ್ಹಗಳೋ ಹಾಗೆಯೇ ಈ ಭಾಗವತೋತ್ತಮರೂ ಪರಸ್ಪರ ಶೇಷಭೂತರಾಗಿ ಅಧೀನರಾಗಿ ಕ್ರಯವಿಕ್ರಯಗಳಿಗೆ ಯೋಗ್ಯವಾದ ದೆಶೆಯಿಂದ ಬೆಳಗುತ್ತಾರೆಂದು ಹೇಳಿರುತ್ತಾರೆ. ಶ್ರೀ ಪೆರಿಯಾಳ್ವಾರವರ ಶ್ರೀಸೂಕ್ತಿಯನ್ನು ಉದಾಹರಿಸಿರುವ ಅಭಿಪ್ರಾಯವೇನೆಂದರೆ, ಇವರು "ಗುರುಮುಖಮನಧೀತ್ಯ", ಗುರುಮುಖವಾಗಿ ಉಪದೇಶಹೊಂದದೆ, ಶ್ರಿಯಃಪತಿಯಿಂದ ದತ್ತವಾದ ಬುದ್ಧಿಯೋಗ, ಸರ್ವಜ್ಞತೆಯುಳ್ಳವರಾಗಿಯೂ, ಕಲ್ಪಸೂತ್ರವ್ಯಾಖ್ಯಾತಾವಾಗಿರುವದರಿಂದ ಅಂಗಾಂಗಿಗಳಿಗಿರುವ ಶೇಷಶೇಷೀಭಾವ ಸ್ವರೂಪಾದಿಗಳನ್ನೂ, ಸೋಮಕ್ರಯದಲ್ಲಿ ತೋರುವ ಕ್ರಯವಿಕ್ರಯದ ಸ್ವರೂಪಗಳನ್ನೂ ಚನ್ನಾಗಿ ವಿಮರ್ಶಿಸಿ ತಿಳಿದವರಾದ ಪ್ರಯುಕ್ತ ಅವರಭಿಪ್ರಾಯವು ಪ್ರಮಾಣವಾಗುವದರಲ್ಲಿ ನಿಸ್ಸಂದೇಹವಾದುದರಿಂದ, ಆ ಆಳ್ವಾರವರಭಿಪ್ರಾಯದಲ್ಲಿ ತಮಗೆ ಪರಮಾದರವೆಂದು ಸೂಚಿಸಿರುತ್ತಾರೆ. ಕಲ್ಪಸೂತ್ರದಲ್ಲಿ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಯಾವ ಅಲ್ಪಭಾಗವೂ ತಪ್ಪದೆ ಅನುಷ್ಠಾನಪ್ರಕಾರವು ಹೇಗೆ ಉಪಪಾದಿತವಾಗಿರುತ್ತದೋ, ಹಾಗೆಯೇ ಪೆರಿಯ ತಿರು

ಮೂಲಮಂತ್ರೇ ಭಾಗವತ ಶೇಷತ್ವಾನುಸಂಧಾನ ಸ್ಥಲಪ್ರದರ್ಶನಂ

ಇದು ಮಧ್ಯಮ ಪದತ್ತುಕ್ಕು ತ್ತಾತ್ಪರ್ಯಾರ್ಥಮ್. ಇವ್ವರ್ಥತ್ತೈ

ಮೊಳಿಯಲ್ಲಿಯೂ ಶ್ರೀ ಪೆರಿಯಾಳ್ವಾರವರು, ಶ್ರೀ ಕೃಷ್ಣ ಚರಿತ್ರೆಯನ್ನು ಸಾಙ್ಗವಾಗಿ ಆತನು ಮಧುರೆಯಲ್ಲಿ ಅವತರಿಸಿದ ಮೊದಲುಗೊಂಡು ಅವತಾರೋಪಸಂಹಾರವರೆಗೂ ಎಲ್ಲಾ ದಿವ್ಯ ವ್ಯಾಪಾರಗಳನ್ನೂ ಕ್ರಮವಾಗಿ ತಮ್ಮ ಪ್ರಬಂಧದಲ್ಲಿ ಉಪಪಾದಿಸಿರುವದರಿಂದಲೂ ಅವರಭಿಪ್ರಾಯವು ಆದರಣೀಯವು ಎಂಬ ಭಾವವು. ಹೀಗೆ ಭಾಗವತ ಶೇಷತ್ವದಿಂದ ಪ್ರಪನ್ನರು ಭಾಗವತ ಪಾರತಂತ್ರ್ಯವುಳ್ಳವರಾಗುವದರಿಂದ ಆ ಭಾಗವತರು ತಮ್ಮ ಗೃಹಕ್ಷೇತ್ರ ರತ್ನಾದಿಗಳಂತೆ ಇಷ್ಟಾನುಸಾರ ವಿನಿಯೋಗಿಸಬಹುದೆಂದು ಏರ್ಪಟ್ಟಿತು. ಆದರೆ ಈ ಪ್ರಪನ್ನರ ಭಾಗವತಶೇಷತ್ವದ ಮುಖ್ಯ ವೈಲಕ್ಷಣ್ಯವೇನು ಎಂದರೆ, ಈ ಶೇಷತ್ವವು ಪರಸ್ಪರವಾದುದು ; ಪ್ರಪನ್ನರಾದ ಭಾಗವತೋತ್ತಮರು ಪರಸ್ಪರ ಶೇಷಭೂತರು : ಆದುದರಿಂದ **ಕ್ರಯವಿಕ್ರಯಾರ್ಹದೆ**ಶೆಯನ್ನು ಹೊಂದಿದವರು. ಭಗವಚ್ಛೇಷತ್ವದಲ್ಲಿ ಈ ವೈಲಕ್ಷಣ್ಯವಿಲ್ಲವು ; ನಾವು ಯಾವಾಗಲೂ ಭಗವಂತನಿಗೆ ಶೇಷಭೂತರೇ ವಿನಾ, ಆತನು ನಮಗೆ ಶೇಷನಲ್ಲವು.

ಇದು ತುಂಬಾ ಮುಖ್ಯವಾದ ಉಪದೇಶವಾದರೆ, ಮುಖ್ಯವಾದ ಮೂಲಮಂತ್ರದಲ್ಲಿ ತೋರಬೇಕಲ್ಲಾ, ಎಲ್ಲಿ ಸೂಚಿತವಾಗಿದೆ ಎಂದರೆ ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಮೂಲಮಂತ್ರದಲ್ಲಿ ಭಾಗವತಶೇಷತ್ವ ತೋರುವ ಸ್ಥಳವು

ಇದು - ಈ ಭಗವಚ್ಛೇಷತ್ವವು ಭಾಗವತ ಶೇಷತ್ವಪರ್ಯಂತವಾಗಿಯೂ ಉಂಟೆಂಬ ಮತ್ತು ಭಾಗವತ ಶೇಷತ್ವವು ತುಂಬಾ ಮುಖ್ಯವಾದುದೆಂಬಭಿಪ್ರಾಯವು, **ಮಧ್ಯಮ ಪದತ್ತುಕ್ಕು** - ಮಧ್ಯಮ ಪದವಾದ **ನಮಸ್ಸಿ**ಗೆ. **ತಾತ್ಪರ್ಯಾರ್ಥಂ** - ಫಲಿತಾರ್ಥವು. **ನಮಶ್ಶಬ್ದದಿಂದ** ಸರ್ವವಿಧ ಕೈಙ್ಕರ್ಯಾದಿಗಳೆಲ್ಲಾ ಶ್ರೀಮನ್ನಾರಾಯಣನಿಗೇನೇ ವಿನಾ ಮಃ **ನ** - ನನಗಲ್ಲವು ಎಂಬಭಿಪ್ರಾಯದಿಂದ ಭಗವಂತನ ವಿಷಯದಲ್ಲಿ ಪೂರಾ ಪಾರತಂತ್ರ್ಯವು ತೋರಿಬರುವದರಿಂದ. ಶ್ರೀಮನ್ನಾರಾಯಣನಿಗೆ, ತನಗೆ ಶೇಷಭೂತನಾದವನನ್ನು ತನ್ನಿಷ್ಟಾನುಸಾರ

ಯನುಸಂಧಿತ್ತಾಲ್ ಇಶ್ಶೇಷತ್ವಂ ಸದ್ವಾರಕಮಾಗವುಮ್ ಅದ್ವಾರಕಮಾಗವುಮ್ ನಿನ್ರನಿಲೈಯಿಲೆ ಶೇಷವೃತ್ತಿಯಾನ ಕೈಙ್ಕರ್ಯಮುಮ್ ನಿರ್ಕುಮ್.

ಉಪಯೋಗಿಸಲು ಸ್ವಾತಂತ್ರ್ಯ ಉಂಟೆಂದು ಏರ್ಪಟ್ಟಿತು. ಭಾಗವತೋತ್ತಮರುಗಳು ತನಗೆ ತುಂಬಾ ಪ್ರಿಯರಾದ ಪ್ರಯುಕ್ತ ಅವರಿಗೆ ಈ ಪ್ರಪನ್ನರು ಶೇಷಭೂತರಾಗಿರಬೇಕೆಂಬುವದು ಶ್ರೀಮನ್ನಾರಾಯಣನಿಗೆ ತುಂಬಾ ಇಷ್ಟವೆಂದು ತೋರಿಬರುತ್ತದೆಂಬ ಭಾವವು.

ಭಾಗವತ ಶೇಷತ್ವವೇನೋ ಪ್ರಮಾಣಬಲದಿಂದಲೂ ಮೂಲಮಂತ್ರದಲ್ಲಿ ತೋರಿಬರುವದರಿಂದಲೂ ಪ್ರಾಪ್ತವೆಂದು ಒಪ್ಪಿಕೊಳ್ಳಬಹುದು. ಪ್ರಪನ್ನನು ಪತಿವ್ರತಾ ಶಿರೋಮಣಿಯು ಹಾಗೆ ಪತಿ ಪಾರಾರ್ಥ್ಯರೂಪವಾದ ಕೈಙ್ಕರ್ಯವನ್ನು ಪತಿಗೇನೇ ಮಾಡತಕ್ಕದ್ದು ನ್ಯಾಯವಾದುದರಿಂದ, ಭಗವತ್ಕೈಙ್ಕರ್ಯ ಯುಕ್ತನೇ ವಿನಾ ಇತರರಿಗೂ ಕೈಙ್ಕರ್ಯ ಮಾಡಲೇಬೇಕೆಂಬ ವಿಧಿಯುಂಟಾಗುವದಿಲ್ಲವಷ್ಟೇ. ಆದುದರಿಂದ ಭಾಗವತ ಕೈಙ್ಕರ್ಯವನಾವಶ್ಯಕವೆಂದಾಗುತ್ತದಲ್ಲಾ ಎಂದರೆ, ಹಾಗಲ್ಲವು, ಅವಶ್ಯಕರ್ತವ್ಯವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಯಾವಾಗ ಶೇಷನೆಂದಾಯಿತೋ ಆಗ ಆತನಿಗೆ ತಾನು ಕಿಂಕರನೆಂದಾಯಿತು; ಕಿಂಕರನ ವೃತ್ತಿಯೇ ಕೈಙ್ಕರ್ಯವಾದುದರಿಂದ ಶೇಷವೃತ್ತಿಗೆ ಕೈಙ್ಕರ್ಯವು ಆವಶ್ಯಕವೆಂದು ಹೇಳಿ, ಅದು ಸದ್ವಾರಕವಾಗಿಯೂ ಅದ್ವಾರಕವಾಗಿಯೂ ಪ್ರಾಪ್ತವೆಂದು ಹೇಳುತ್ತಾರೆ. **ಇವ್ವರ್ಥತ್ತೈ** - ಭಗವಂತನಿಗೆ ಅತ್ಯಂತ ಪಾರತಂತ್ರ್ಯದಿಂದುಂಟಾದ ಭಗವಂತನ ಇಷ್ಟವಿನಿಯೋಗರೂಪವಾದ ಭಾಗವತ ಶೇಷತ್ವವು ಮಧ್ಯಮಪದದಲ್ಲಿ ಸೂಚಿತವಾಗಿದೆ ಎಂಬ ಅಭಿಪ್ರಾಯವನ್ನು, **ಅನುಸಂಧಿತ್ತಾಲ್** - ಅನುಸಂಧಾನಮಾಡಿದರೆ, **ಇಶ್ಶೇಷತ್ವಂ** ಈ ಶೇಷತ್ವವು, ಭಗವಂತನಿಗೆ ನಾವು ಶೇಷಭೂತರಾಗಿರುವಿಕೆಯು **ಸದ್ವಾರಕಮಾಗವುಮ್** - ಭಾಗವತರಿಗೆ ಶೇಷಭೂತನಾಗಿರುವದರ ಮೂಲಕವೂ **ಅದ್ವಾರಕಮಾಗವುಮ್** - ಸಾಕ್ಷಾತ್ತಾಗಿಯೂ, **ನಿನ್ರನಿಲೈಯಿಲೆ** - ನಿಲ್ಲುತ್ತದೆಂದು ಸ್ಥಾಪಿಸಿರುವ ಹಾಗೆಯೇ. **ಶೇಷವೃತ್ತಿಯಾನ** - ಆ ಶೇಷತ್ವದ ವ್ಯಾಪಾರವಾದ, ಕೈಙ್ಕರ್ಯವೂ ಕೂಡ, **ನಿರ್ಕುಮ್** - ಹಾಗೆಯೇ ಸದ್ವಾರಕವಾಗಿಯೂ ಅದ್ವಾರಕವಾಗಿಯೂ ನಿಲ್ಲುವದು ಎಂಬ ಭಾವವು.

ಮುಂದೆ ಭಾಗವತ ಕೈಙ್ಕರ್ಯವೂ ಭಗವತ್ಕೈಙ್ಕರ್ಯರೂಪವಾಗುವದರಲ್ಲೇನೂ ಸಂದೇಹವಿಲ್ಲವೆಂದೂ, ಆದುದರಿಂದ ಸಾಧ್ಯಾಧಿಕ್ಯವೆಂಬ ಶಙ್ಕೆಗೆ ಕಾರಣವಿರುವ

ಆಕ್ಕೈಯಾಲ್ ತನ್ ಶಕ್ತಿಕ್ಕನುರೂಪವಾಗ ಭಗವತ್ಕೈಙ್ಕರ್ಯತ್ತಿನುಡೈಯ ಸಾಧ್ಯಾಕಾರ ವಿವೃದ್ಧಿಯಾನ ಪುರುಷಾರ್ಥತ್ತಿಲ್ ಎಲ್ಲೈನಿಲತ್ತೈತ್ತರಿಶುತೂರ್ ವಿಡಾದೊಳಿಯ ಪ್ರಾಪ್ತಂ.

ದಿಲ್ಲವೆಂದೂ ಆ ಕಾರಣದಿಂದ ಯಥಾ ಶಕ್ತ್ಯ ಅವಶ್ಯಕರ್ತವ್ಯವೆಂದೂ ಉಪದೇಶಿಸುತ್ತಾರೆ.

ಆಕ್ಕೈಯಾಲ್ - ಆದ ದರಿಂದ **ತನ್ ಶಕ್ತಿಕ್ಕನುರೂಪವಾಗ** - ತನ್ನ ಶಕ್ತ್ಯನುಸಾರವಾಗಿ, **ಭಗವತ್ಕೈಙ್ಕರ್ಯತ್ತಿನುಡೈಯ** ಇಲ್ಲಿ ಕೈಙ್ಕರ್ಯವೆಂದರೆ ಕಿಙ್ಕರನ ಭಾವವು, ಆದ ದರಿಂದ ಶೇಷತ್ವವು, ಭಗವಚ್ಛೇಷತ್ವದ **ಸಾಧ್ಯಾಕಾರವಿವೃದ್ಧಿಯಾನ** - ಸಾಧ್ಯವು ಭಗವತ್ಕೈಙ್ಕರ್ಯವು, ಅಂತಹ ಸಾಧ್ಯಾಕಾರದ ವಿವೃದ್ಧಿಯು ಭಾಗವತ ಕೈಙ್ಕರ್ಯವು. ಆದುದರಿಂದ ಭಾಗವತಕೈಙ್ಕರ್ಯರೂಪವಾದ, **ಪುರುಷಾರ್ಥತ್ತಿಲ್**-ಪ್ರಯೋಜನದಲ್ಲಿ, **ಎಲ್ಲೈನಿಲತ್ತೈ** - ಸೀಮಾವಾದ ಪ್ರದೇಶವನ್ನು, **ತರಿಶುತೂರ್ ವಿಡಾದೆ** - ಒಳ್ಳೇ ಪೈರಾಗುವ ಪ್ರದೇಶವನ್ನು ಕಳೆಗಳು ತುಂಬಿರುವ ಅರಣ್ಯವಾಗುವ ಹಾಗೆ ಬಿಡದೆ, **ಒಳಿಯ ಪ್ರಾಪ್ತಂ**-ಇರುವದು ಯೋಗ್ಯವಾದುದು. ಭಗವತ್ಕೈಙ್ಕರ್ಯದ ಎಲ್ಲೆಯು ಭಾಗವತ ಕೈಙ್ಕರ್ಯವೆಂದು ಹೇಳಿದುದರಿಂದ, ಭಗವತ್ಕೈಙ್ಕರ್ಯಕ್ಕಿಂತ ಶಕ್ತ್ಯನುಸಾರ ಅತಿಶಯವಾಗಿಯೇ ಭಾಗವತ ಕೈಙ್ಕರ್ಯವು ನಡಿಸತಕ್ಕದ್ದೆಂದು ಹೇಳಲ್ಪಟ್ಟಿತು. ಆದುದರಿಂದ ಭಾಗವತ ಕೈಙ್ಕರ್ಯವು ಆವಶ್ಯಕವೆಂದು ಬೋಧಿಸಲ್ಪಟ್ಟಿತು. ಹೇಗೆ ಒಳ್ಳೇ ಸಸ್ಯಬಿತ್ತಿರುವ ನೆಲದಲ್ಲಿ ಕಳೆಕೀಳದಿದ್ದರೆ ಪೂರ್ಣಸಸ್ಯಫಲವಿಲ್ಲವೋ, ಹಾಗೆಯೇ ಭಾಗವತಕೈಙ್ಕರ್ಯವನ್ನು ಬಿಟ್ಟರೆ ಭಗವತ್ಪ್ರೀಣನ ಉಂಟಾಗುವದಿಲ್ಲವಾದುದರಿಂದ ಸಂಪೂರ್ಣ ಭಗವತ್ಕೈಙ್ಕರ್ಯದ ಫಲವು ಪ್ರಾಪ್ತವಾಗುವದಿಲ್ಲವೆಂಬ ಭಾವವು. ಕಳೆಕೀಳದಿದ್ದರೆ ಕ್ಷೇತ್ರದ ಸ್ವರೂಪಕ್ಕೆ ಹೇಗೆ ಕುಂದುಕವೋ, ಹಾಗೆ ಭಾಗವತಕೈಙ್ಕರ್ಯವಿಲ್ಲದಿದ್ದರೆ ಭಗವತ್ಕೈಙ್ಕರ್ಯದ ಸ್ವರೂಪಕ್ಕೆ ಕುಂದುಕವೆಂಬುವದೂ ತೋರಿಬರುತ್ತದೆ.

ಆದರೆ ಅನ್ಯಶೇಷತ್ವವೂ ಅನ್ಯಕೈಂಕರ್ಯವೂ ಭಗವದೇಕಾಂತತ್ವಕ್ಕೆ ಕುಂದುಕವಲ್ಲವೋ? ಪತಿವ್ರತಾಶಿರೋಮಣಿಗೆ ಭರ್ತೃವಿಷಯದಲ್ಲಿ ಹೇಗೆ ಐಕಾಂತ್ಯ ಉಂಟೋ, ಹಾಗಲ್ಲವೇ ಈ ಪ್ರಪನ್ನನೂ ಭಗವತ್ಕೈಙ್ಕರ್ಯದಲ್ಲಿ ಮಾತ್ರವೇ ನಿರತನಾಗಿರತಕ್ಕದ್ದು? ಎಂದರೆ, ಹಾಗಲ್ಲವು. ಪತಿವ್ರತೆಯು ಹೇಗೆ ಪತಿಗೆ ಅತಿಪ್ರಿಯರಾದ ಸಹೋದರಾದಿಗಳನ್ನುಪಚರಿಸುವದು ಪತಿವ್ರತಾ ಧರ್ಮಕ್ಕೆ ವಿರೋಧವಲ್ಲವೋ, ಹಾಗೆಯೇ ಭಗವಚ್ಛೇಷತ್ವಕ್ಕೆ ಭಾಗವತರನ್ನುಪಚರಿಸುವದು ವಿರುದ್ಧವಲ್ಲವೆಂದು ತಿಳಿಸುತ್ತಾರೆ;—

ಭಾಗವತ ಶೇಷತ್ವಸ್ಯ ಪರಮೈಕಾಂತಿವಿರುದ್ಧತ್ವ ಶಙ್ಕಾಪರಿಹಾರಃ

ಇದು (೧) "ಭರ್ತುರ್ ಭೃತ್ಯಗಣಸ್ಯ ಚ" ಎನ್ನುವದ್, (೨) "ಅಪ್ರೋ

ಭಾಗವತ ಶೇಷತ್ವವು ಪರಮೈಕಾಂತಿತ್ವಕ್ಕೆ ವಿರುದ್ಧವೆಂಬ ಶಙ್ಕಾಪರಿಹಾರವು

ಈ ವಿಧವಾದ ಶಙ್ಕೆ ಮತ್ತು ಅದರ ಸಮಾಧಾನವೂ ಸಹ ಪೌಷ್ಕರಸಂಹಿತೆಯಲ್ಲಿ ಉಪಪಾದಿತವಾಗಿರುವದರಿಂದ, ಆ ಸಂಹಿತಾ ವಾಕ್ಯವನ್ನು ಉದಾಹರಿಸುತ್ತಾರೆ:—ಅಲ್ಲಿ ಚತುರ್ಮುಖ ಬ್ರಹ್ಮನು ಶ್ರೀ ಭಗವಂತನನ್ನು ಕುರಿತು ಕೇಳುತ್ತಾನೆ:—ಅನ್ಯದೇವತಾರಾಧನವು ಸ್ವರೂಪ ವಿರುದ್ಧವು, ಎಂದಿಗೂ ಕೂಡದೆಂದು ನಿಷೇಧಿಸಿ, ಅನ್ಯದೇವತಾರಾಧನರೂಪವಾದ ವರ್ಣಾಶ್ರಮ ಧರ್ಮಗಳು ಅವಶ್ಯ ಕರ್ತವ್ಯವೆಂದು ತಿಳಿಸಿರುತ್ತೀರಿ, ಇದು ವಿರುದ್ಧವಾದದಲ್ಲವೇ ಎಂದು ಆಕ್ಷೇಪಿಸಲು ಅದಕ್ಕೆ ಸರ್ವೇಶ್ವರನು ಸಮಾಧಾನವನ್ನು ಹೇಳುತ್ತಾನೆ:---

ಶ್ರೀ ಭಗವಾನುವಾಚ ॥

ಸತ್ಯಮೇ ತನ್ಮಹಾಬುದ್ಧೇ ಯಥಾ ಸಂಚೋದಿತಂ ತ್ವಯಾ ।
ಕಿಂತು ಕ್ರಿಯಾನ್ತರೇ ಪ್ರಾಪ್ತೇ ನ ದೋಷಸ್ತ್ವಧಿಕಾರಿಣಾಂ ।
ಯಸ್ಮಾತ್ಸರ್ವ ಪರತ್ವಂ ಹಿ ತೇಷಾಮುಸ್ತ್ಯಚ್ಯುತಂ ಪ್ರತಿ ।
ತದಾಶ್ರಯತ್ವಾದ್ದೇವಾನಾಮನ್ಯೇಷಾಂ ಪೂಜನಂತು ವೈ ।
ನ ದೋಷೋ ಹಿ ಯಥಾ ಲೋಕೇ ಭರ್ತುರ್ಭೃತ್ಯಗಣಸ್ಯ ಚ ।
ಮಾನನಾದ್ಧರ್ಮ ಪತ್ನೀನಾಂ ಸಮಕ್ಷೇವಾ ಪರೋಕ್ಷತಃ ।

"ಓ ಮಹಾಪ್ರಾಜ್ಞನಾದ ಚತುರ್ಮುಖನೇ ನೀನು ಮಾಡಿದಾಕ್ಷೆಪವೇನೋ ನ್ಯಾಯವಾದುದೇ. ಮಾಡಿದುದು ಕಾರ್ಯಾನ್ತರದಲ್ಲಿ ಅನ್ವಯಿಸಿದರೆ, ಹಾಗೆ ನಡಿಸಿದವರಿಗೇನೋ ದೋಷವಿರುವದಿಲ್ಲವು. ಈ ದೇವತೆಗಳಿಗೂ ಕೂಡ ಶ್ರೀ ಮಹಾವಿಷ್ಣುವಿನ ವಿಷಯದಲ್ಲಿ ಸರ್ವೋತ್ಕೃಷ್ಟ ಭಾವವು ಇರುವದರಿಂದಲೂ, ಶ್ರೀಮಹಾವಿಷ್ಣುವನ್ನೇ ಆ ದೇವತೆಗಳು ಆಶ್ರಯಿಸಿರುವವರಿಂದಲೂ, ಹಾಗೆಯೇ ಇತರ ಭಾಗವತರುಗಳ ಪೂಜನವು ದೋಷವಾದುದ

---

(೧) ಪೌಷ್ಕರಸಂಹಿತಾ.

ವಿಷ್ಣೋರನಾಪ್ತಶ್ಚ ದ್ವಿಧಾ ಪರಿಕರಸ್ಸ್ಮೃತಃ । ನಿತ್ಯೋ ವಂದ್ಯೋ ನ ಚಾನಿತ್ಯಃ ಕರ್ಮವಶ್ಯೋ ಮುಮುಕ್ಷುಭಿಃ" ಎನ್ನು ಶ್ರೀ ಪೌಷ್ಕರಾದಿ

ಲ್ಲವು. ಹೇಗೆಂದರೆ ಪತಿವ್ರತಾ ಶಿರೋಮಣಿಗಳಾದ ಧರ್ಮಪತ್ನಿಗಳಿಗೆ, ತಮ್ಮ ಪತಿಗಳ ಎದುರಿನಲ್ಲಿಯಾಗಲಿ, ಅಥವಾ ಪರೋಕ್ಷದಲ್ಲಾಗಲಿ, ಭರ್ತ್ರಾವಿನ ತುಂಬಾ ಪ್ರಿಯರಾದ ಭೃತ್ಯಗಣವನ್ನುಪಚರಿಸುವದು ಹೇಗೆ ದೋಷವಲ್ಲವೋ ಹಾಗೆಯೇ ಎಂಬ ಭಾವವು. ವರ್ಣಾಶ್ರಮ ಧರ್ಮಗಳನ್ನು ನಡೆಸುವಾಗ ಸೂರ್ಯಾಗ್ನಿ ಮೊದಲಾದವರುಗಳನ್ನು ಕುರಿತು ಹೇಳುವ ಮಂತ್ರಗಳು ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆ ಎಂದು ಇಟ್ಟುಕೊಳ್ಳಬಹುದು. ಹಿಂದೆ ಉದಾಹರಿಸಿರುವ **"ಯೇ ಯಜನ್ತಿ ಪಿತೄನ್ ದೇವಾನ್"** ಎಂಬ ಗೀತಾ ಶ್ಲೋಕವು ಇದನ್ನೇ ಉಪಪಾದಿಸುತ್ತದೆ. ಪತಿಶುಶ್ರೂಷಾ ನಿರತಳಾದ ನಾರೀಮಣಿಗೆ ಪತಿಶುಶ್ರೂಷೆಯೊಂದಿಗೆ ಭರ್ತೃಪ್ರಿಯವರ್ಗ ಶುಶ್ರೂಷೆಯೂ ಕೂಡ ಪತಿಪಾರಾರ್ಥ್ಯಕ್ಕೆ ಹೇಗೆ ವಿರುದ್ಧವಲ್ಲವೋ, ಹಾಗೆಯೇ **"ಶುದ್ಧ ತತ್ಪರಿವಾರೇಷು ಸಪರ್ಯಾ ಭರ್ತೃ ಭೃತ್ಯವತ್"** ಎಂದು ಹೇಳಿರುವ ಹಾಗೆ ಶುದ್ಧರಾದ ಭಾಗವತರ ಅರ್ಚನೆಯು ಪ್ರಪನ್ನನ ಪರಮೈಕಾಂತ್ಯಕ್ಕೆ ವಿರುದ್ಧವಾದುದಲ್ಲವು. ಆದರೆ ಚತುರ್ಮುಖ ರುದ್ರಾದಿಗಳು ಭಾಗವತರೇ ಆಗಿರುವಾಗ ಅವರ ಆರಾಧನೆಯು ಹಿಂದೆ ಅನ್ಯದೇವತಾಭಜನವಾಗುತ್ತದೆಂದು **ನಿಷೇಧಿಸಲ್ಪಟ್ಟಿತಲ್ಲಾ** ಅದು ಏಕೆ ಎಂದು ಪ್ರಶ್ನಿಸಬಹುದು. ನಮ್ಮ ಭಾಗವತರುಗಳಾದರೋ ನಿತ್ಯರಾದ ನಿತ್ಯಮುಕ್ತರುಗಳ ಅಂಶಭೂತರಾಗಿ ದೇಹಾವಸಾನದಲ್ಲಿ ಶೀಘ್ರದಲ್ಲೇ ಸ್ವಸ್ವರೂಪಾವಿರ್ಭಾವದೊಂದಿಗೆ ಮುಕ್ತಿಯನ್ನು ಹೊಂದಬಹುದಾದುದರಿಂದ **ನಿತ್ಯೋವಂದ್ಯಃ** ಎಂದು ಹೇಳಿರುವ ಹಾಗೆ **ಪೂಜಾರ್ಹರು.** ಬ್ರಹ್ಮರುದ್ರಾದಿಗಳು ಇನ್ನೂ **ಕರ್ಮವಶ್ಯ**ರಾಗಿಯೇ ಇರುವವರಿಂದ **ಅನಿತ್ಯ**ರಾದ ಭೃತ್ಯವರ್ಗಕ್ಕೆ ಸೇರಿದವರಾಗಿ **ನವಂದ್ಯಃ ಪೂಜನೀ**ಯರಲ್ಲವು

ಎನ್ನುವ್ - ಎಂದು ಪೌಷ್ಕರ ಸಂಹಿತೆಯಲ್ಲಿ ಹೇಳಿರುವ ಹಾಗೂ, **"ವಿಷ್ಣೋಃ** - ಶ್ರೀ ಮಹಾವಿಷ್ಣುವಿನ, **ಪರಿಕರಸ್** - ಭೃತ್ಯವರ್ಗವು, **ಆಪ್ತಃ**- ಆಪ್ತವಾದುದೆಂದೂ, **ಅನಾಪ್ತಃ** - ಆಪ್ತವಲ್ಲದ್ದೆಂದೂ, **ದ್ವಿಧಾ** – ಎರಡು ವಿಧವಾದುದೆಂದೂ, **ಸ್ಮೃತಃ** – ಹೇಳಲ್ಪಟ್ಟಿರುತ್ತದೆ. ಅದರಲ್ಲಿ ಆಪ್ತನು ಯಾರೆಂದರೆ :—**ನಿತ್ಯಃ – ನಿತ್ಯ**ಶಬ್ದದಿಂದ ಹೇಳಲ್ಪಟ್ಟ ನಿತ್ಯಮುಕ್ತ ಭಾಗವತ ವರ್ಗವು, **ಮುಮುಕ್ಷುಭಿಃ** – ಮೋಕ್ಷಾರ್ಥಿಗಳಿಂದ, **ವಂದ್ಯಃ – ಪೂಜಿ**

ಗಳಿಲ್ ಚೊನ್ನ ನ್ಯಾಯತ್ತಾಲೇ ಪತಿವ್ರತಾ ಧರ್ಮಂ ಪೋಲೆ ಯಿರುಕ್ಕಿರ ಪರನ್ಯೈಕಾಂತಿತ್ವಕ್ಕು ಮಿಗವುಮ್ ಉಚಿತಮಾನ ಪತಿಚಿತ್ತಾನುವರ್ತನಮ್.

ಆಗೈಯಾಲ್ ಹೇತ್ವಂತರತ್ತಾಲನ್ರಿಕ್ಕೇ ಅನನ್ಯಾರ್ಹ ಶೇಷತ್ವ ಜ್ಞಾನಮುಡಿಯಾಗ ವರುಗೈಯಾಲೆ, ಇವ್ವನ್ಯ ಶೇಷತ್ವಮ್ ವಿರುದ್ಧಮನ್ರು.

ಸಲು ಅರ್ಹವಾದುದು. ಅನಾಪ್ತವು ಯಾವುದೆಂದರೆ, **ಅನಿತ್ಯಃ** - ಅನಿತ್ಯರಾದ **ಕರ್ಮವಶ್ಯಃ** - ಕರ್ಮಾಧೀನವಾದ, ಚತುರ್ಮುಖಾದಿ ಬದ್ಧವರ್ಗವು. **ನ ವಂದ್ಯಃ**- **ಪೂಜಾರ್ಹವಲ್ಲದುದು**" **ಎನ್ರುಮ್** - ಎಂದೂ ಶ್ರೀ ಪೌಷ್ಕರ ಸಂಹಿತೆ ಮೊದಲಾದವುಗಳಲ್ಲಿ. **ಚೊನ್ನನ್ಯಾಯತ್ತಾಲೆ** - ಹೇಳಿರುವ ಪ್ರಕಾರ, **ಪತಿವ್ರತಾ ಧರ್ಮಂಪೋಲೆಯಿರುಕ್ಕಿರ** - ಪತಿವ್ರತೆಯ ಧರ್ಮದ ಹಾಗೆ ಇರುವ, **ಪರನ್ಯೈ ಕಾನ್ತಿತ್ವತ್ತಕ್ಕು**-ಪ್ರಪನ್ನನ ತೈಲಧಾರಾವದವಿಚ್ಛಿನ್ನ ಭಗವಚ್ಚಿಂತನಕ್ಕೆ, **ಮಿಕವುಮುಚಿತಮಾನ** - ತುಂಬಾ ಯೋಗ್ಯವಾದ. **ಪತಿಚಿತ್ತಾನು ವರ್ತನಮ್** - ಪತಿವ್ರತಾ ವಿಷಯವಾಗಿ ಅರ್ಥ ಹೇಳುವಾಗ ತನ್ನ ಗಂಡನ ಮನಸ್ಸಿಗೆ ಅನುಸಾರವಾಗಿ ನಡೆಯೋಣವಾಗಿರುತ್ತದೆ ಎಂದರೆ ಪತಿಯ ಪ್ರಿಯವರ್ಗದ ಶುಶ್ರೂಷೆಯಾಗಿರುತ್ತದೆಂಬ ಭಾವವು; ಪರನ್ಯೈಕಾನ್ತಿಯ ವಿಷಯವಾಗಿ ಅರ್ಥ ಹೇಳುವಾಗ ಲೋಕಪತಿಯಾದ ಸರ್ವೇಶ್ವರನ ಅಭಿಮತಾನುಸಾರ ಪ್ರವರ್ತನೆಯಾಗಿರುತ್ತದೆ. **ಪತಿಚಿತ್ತಾನುವರ್ತನಮ್** ಎಂಬುದೇ ಕ್ರಿಯೆಯು, ಇದಕ್ಕೆ "ಇದು" ಎಂಬ ಕರ್ತೃಪದದೊಂದಿಗೆ ಅನ್ವಯವು. ಸರ್ವ ಚೇತನವರ್ಗವೂ ಸರ್ವೇಶ್ವರನಿಗೆ ಶೇಷಭೂತರು, ಆದುದರಿಂದ **ಪರಿಕರಸ್ಮೃತಃ** ಎಂದು ಹೇಳಿದುದರಿಂದ ಜ್ಞಾನವಿರುವ ಚೇತನರೆಲ್ಲಾ ದಾಸ್ಯವರ್ಗಕ್ಕೆ ಸೇರಿದವರೆಂದು ಹೇಳಲ್ಪಟ್ಟಿತು. ಈ ದಾಸ್ಯವರ್ಗವು ಅನಿತ್ಯವೆಂದೂ ನಿತ್ಯವೆಂದೂ ಎರಡು ವಿಧವೆಂದು ಹೇಳಿ, ನಿತ್ಯವರ್ಗವೇ ಪೂಜನೀಯರೆಂದೂ ಅನಿತ್ಯವರ್ಗವು ಪೂಜಾರ್ಹರಲ್ಲವೆಂದೂ, ಹೇಳಲ್ಪಟ್ಟಿತು. ನಿತ್ಯಮುಕ್ತರುಗಳು ನಿತ್ಯವರ್ಗಕ್ಕೆ ಸೇರಿದವರೆಂದೂ ಅನಿತ್ಯವರ್ಗವು ಇನ್ನೂ ಕರ್ಮವಶ್ಯರಾಗಿರುವವರೆಂದೂ ಹೇಳಲ್ಪಟ್ಟಿತು. ಪತಿಯ ಇಷ್ಟಾನುಸಾರ ಪತಿಭೃತ್ಯವರ್ಗದ ಉಪಚಾರವು ಪತಿವ್ರತೆಗೆ ಹೇಗೆ ವಿರುದ್ಧವಾದುದಲ್ಲವೋ, ಹಾಗೆಯೇ, ಜಗತ್ಪತಿಯ ಇಷ್ಟಾನುಸಾರ ಭಾಗವತಾರ್ಚನೆಯು ವಿರುದ್ಧವಾದುದಲ್ಲವೆಂಬಭಿಪ್ರಾಯವು. ಇದನ್ನೇ ಮುಂದೆ ಉಪಪಾದಿಸಿರುತ್ತಾರೆ.

ಆಗೈಯಾಲ್ - ಆ ಕಾರಣದಿಂದ, **ಹೇತ್ವಂತರತ್ತಾಲನ್ರಿಕ್ಕೇ** - **ಪತಿಚಿತ್ತಾನುವರ್ತನಮ್** ಎಂಬ ಕಾರಣವಲ್ಲದೆ ಬೇರೆ ಇನ್ನು ಯಾವ ಕಾರಣಮೂಲಕ

ಭಾಗವತ ಶೇಷತ್ವಮ್ ಸ್ವಾಭಾವಿಕಂ ಔಪಾಧಿಕಂ ಚ

ಇಬ್ಭಾಗವತ ಶೇಷತ್ವಮ್ ಸ್ವಾಭಾವಿಕನೋ? ಔಪಾಧಿಕನೋ

ವಾಗಿಯೂ ಅಲ್ಲದೆ, ಪತಿವ್ರತೆಯು ಪರವಾಗಿ ಅರ್ಥಹೇಳುವಾಗ ಅರ್ಥಕಾಮಾದಿ ಪ್ರಯೋಜನಮೂಲಕವಾದ ಯಾವ ಕಾರಣದಿಂದಲೂ ಅಲ್ಲದೆ ಎಂಬ ತಾತ್ಪರ್ಯವು; ಪ್ರಪನ್ನನ ವಿಷಯವಾಗಿ ಅರ್ಥ ಹೇಳುವಾಗ ಇನ್ನು ಯಾವ ವಿಧವಾದ ನೀಚಭೋಗಗಳ ಪ್ರಯೋಜನಕ್ಕಾಗಿ ಅಲ್ಲದೆ ಎಂಬ ಭಾವವು, **ಅನನ್ಯಾರ್ಹ ಶೇಷತ್ವ ಜ್ಞಾನನುಡಿಯಾಗ ವರುಗೈಯಾಲೇ** - ತಾನು ಭಗವಂತನಿಗೊಬ್ಬನಿಗಲ್ಲದೆ ಇನ್ಯಾರಿಗೂ ಸ್ವಾಭಾವಿಕವಾಗಿ ಶೇಷಭೂತನಲ್ಲವು ಎಂಬ ಜ್ಞಾನಮೂಲಕವಾಗಿ ಬರುವವರಿಂದ. **ಇನ್ನುಸ್ಯಶೇಷತ್ವಮ್** - ಈ ಪತಿವ್ರತೆಯು ಪತಿಭೃತ್ಯರಿಗೆ ಶೇಷಭೂತನಾಗಿರುವದೂ. **ವಿರುದ್ಧಮನ್ರು** - ವಿರುದ್ಧವಲ್ಲವು. ಇಲ್ಲಿ **ಅನನ್ಯಾರ್ಹ ಶೇಷತ್ವ** ಜ್ಞಾನನುಡಿಯಾಗ ಎಂಬುವದರಿಂದ **ದಾಸಭೂತಾಸ್ಸ್ವತಸ್ಸರ್ವೇ** ಎಂಬುವ ಸ್ವರೂಪತಃ ಪ್ರಾಪ್ತವಾಗಿ ದಾಸತ್ವವು ಸರ್ವೇಶ್ವರನಿಗೆ ಮಾತ್ರವೇ ಸಲ್ಲುವದೆಂದೂ, ಇದರಿಂದ ಅನ್ಯದೇವತಾ ಭಜನವು ವಿರುದ್ಧವೆಂದೂ ಜ್ಞಾಪಿಸಿದಂತಾಯಿತು.

ಭಾಗವತ ಶೇಷತ್ವವು ಸ್ವಾಭಾವಿಕವಾದುದೆಂದೂ ಔಪಾಧಿಕವೆಂದೂ ಭಾವಿಸಬಹುದು.

ಇಬ್ಭಾಗವತ ಶೇಷತ್ವ.........ನೆನ್ನಿಲ್ - ಈ ಭಾಗವತ ಶೇಷತ್ವವೇನು ಸ್ವಾಭಾವಿಕವಾದುದೋ ಅಥವಾ ಒಂದು ಉಪಾಧಿ ವ್ಯಾಜಮೂಲಕ ಉಂಟಾದುದೋ ಎಂದರೆ, ಅದು ಸ್ವಾಭಾವಿಕವೂ ಹೌದು, ಔಪಾಧಿಕವೂ ಹೌದು, ಎಂದುಪದೇಶಿಸುತ್ತಾರೆ. ಯಾವಾಗಲೂ ಸರ್ವಕಾಲದಲ್ಲೂ ಇರುವದು ಸ್ವಾಭಾವಿಕವಾದುದು; ಸರ್ವಕಾಲದಲ್ಲೂ ಇಲ್ಲದೆ ಒಂದು ಅನಿತ್ಯವಾದ ಕಾರಣಮೂಲಕ ಉಂಟಾಗುವದು ಔಪಾಧಿಕವಾದುದು. ಗಂಡಹೆಂಡರ ಸಂಬಂಧವುಂತಾದುದು ಔಪಾಧಿಕವಾದುದು. ಸರ್ವೇಶ್ವರನಿಗೆ ನಾವು ಭೃತ್ಯರಾಗಿರುವದು ಸ್ವರೂಪತಃ ಆದುದರಿಂದ ನಿತ್ಯವಾದುದಾಗಿ ಸ್ವಾಭಾವಿಕವಾದುದು.

(೧) ವೈ. ಸ್ತವ ೭೭.

ವೆನ್ನಿಲ್ ? ಕರ್ಮಾದ್ಯುಪಾಧಿಗಳ್ಳರ (೧) "ನಿತ್ಯಾಭಿ ವಾಂಛಿತ ಪರಸ್ಪರ ನೀಚಭಾವೈಃ" ಎಙ್ಗಿರಪಡಿಯೇ ಯಾವದಾತ್ಮ ಭಾವಿಯಾಯ್ ಕ್ಕೊಣ್ಡು ಮುಕ್ತದಶೈಯಿಲುಮ್ ಅನುವರ್ತಿಪ್ಪದೊನ್ರಾಗೈಯಾಲೇ ಸ್ವಾಭಾವಿಕಮೆನ್ನವುಮಾಮ್.

ಕರ್ಮಾದ್ಯುಪಾಧಿಗಳರ - ಕರ್ಮವೇ ಮೊದಲಾದ ಇತರ ವ್ಯಾಜರೂಪವಾದ ಕಾರಣಗಳಿಲ್ಲದ ಹಾಗೆ, "ನಿತ್ಯಾಭಿ ವಾಂಛಿತ.......... ಭಾವೈಃ" ನಿತ್ಯ - ಯಾವಾಗಲೂ, ಅಭಿವಾಂಛಿತ - ಅಪೇಕ್ಷಿಸಲ್ಪಟ್ಟ, ಪರಸ್ಪರನೀಚಭಾವೈಃ - ಪರಸ್ಪರ ಶೇಷಭಾವಗಳುಳ್ಳ ಮುಕ್ತರುಗಳಿಂದ ಎಙ್ಗಿರಪಡಿಯೇ - ಎಂದು ಹೇಳಿರುವ ಹಾಗೆ, ಯಾವದಾತ್ಮಭಾವಿಯಾಯ್‌ಕ್ಕೊಂಡು ತನ್ನ ಆತ್ಮ ಸ್ವರೂಪವಿರುವವರೆಗೂ ಪ್ರಾಪ್ತವಾದುದಾಗಿ. ಮುಕ್ತದಶೈಯಿಲುಮ್ - ಮುಕ್ತಾವಸ್ಥೆಯಲ್ಲೂ, ಅನುವರ್ತಿಪದೊನ್ರಾಗೈಯಾಲೆ - ಅನುಸರಿಸಿಬರುವಂಥಾದ್ದು ಒಂದೇಯಾದುದರಿಂದ, ಸ್ವಾಭಾವಿಕ ಮೆನ್ನವುಮಾಮ್ - ಈ ಭಾಗವತ ಶೇಷತ್ವವು ಸ್ವಾಭಾವಿಕವಾದುದೆಂದು ಹೇಳಬಹುದು. ಚೇತನನ ಸ್ವರೂಪವು ಜ್ಞಾನತ್ವಾದಿಗಳಿಂದ ಮಹಾಪರಿಶುದ್ಧವಾದುದೆಂದೂ ಪ್ರಕೃತಿಸಂಬಂಧದಿಂದ ಈ ಸ್ವರೂಪವು ತಿರೋಹಿತವಾದುದಾಗಿ, ಮುಕ್ತದೆಶೆಯಲ್ಲಿ "ಸ್ವೇನರೂಪೇ ಣಾಭಿ ನಿಷ್ಪದ್ಯತೇ" ಎಂದು ಹೇಳಿರುವ ಹಾಗೆ ಸ್ವಸ್ವರೂಪಾವಿರ್ಭಾವ ಉಂಟಾಗುತ್ತದೆಂದೂ, ಹಿಂದೆಯೇ ಹೇಳಲ್ಪಟ್ಟಿರುತ್ತದೆ. "ಮಮೈವಾಂಶೋ ಜೀವ ಲೋಕೇ ಜೀವಭೂತಸ್ಸನಾತನಃ" (ಗೀ.೧೫.೭) ಎಂದು ಗೀತೆಯಲ್ಲಿ ತಚ್ಛರೀರಕನಾಗಿ ತದಂಶವೆಂಬ ಜ್ಞಾನಉಂಟಾಗುವದರಿಂದ ಸರ್ವಚೇತನರೂ ಭಗವದಂಶರಾದುದರಿಂದ ಪರಸ್ಪರ ಶೇಷಭಾವವು ಸ್ವಸ್ವರೂಪದಿಂದಲೇ ಉಂಟಾಗುವಂಥಾದ್ದಾಗಿ ಸ್ವಾಭಾವಿಕವಾದುದೇ ಎಂದುಪದೇಶಿಸಿರುತ್ತಾರೆ. ಅದಕ್ಕೆ ಪ್ರಮಾಣವಾಗಿ ಶ್ರೀಯತಿರಾಜರ ಶಿಷ್ಯರಾದ ಶ್ರೀಕೂರನಾಥರ ವಾಕ್ಯವನ್ನುದಾಹರಿಸುತ್ತಾರೆ:—ಆ ಪೂರ್ವಶ್ಲೋಕವು ಯಾವುದೆಂದರೆ:—

> "ಕೈಙ್ಕರ್ಯ ನಿತ್ಯನಿರತೈರ್ಭವದೇಕ ಭೋಗ್ಯೈರ್ನಿತ್ಯೈರನುಕ್ಷಣನವೀನರಸಾರ್ದ್ರಭಾವೈಃ। ನಿತ್ಯಾಭಿವಾಂಛಿತ ಪರಸ್ಪರ ನೀಚ ಭಾವೈರ್ಮದ್ದೈವತೈಃ ಪರಿಜನೈಸ್ತವ ಸಙ್ಗಸೀಯ ॥"

ಇದರರ್ಥವು. ಸದಾ ಕೈಂಕರ್ಯನಿರತರಾದ, ನಿನ್ನನ್ನನುಭವಿಸುವದೇ ಮುಖ್ಯ ಭೋಗವಾಗಿವುಳ್ಳ ಹೊಸಹೊಸದಾಗಿ ಆನಂದಾದಿರಸದಿಂದ ತೋಯಿಸಲ್ಪಟ ಮನೋಭಾವಗಳುಳ್ಳ, ಯಾವಾಗಲೂ ಅಪೇಕ್ಷಿಸಲ್ಪಟ್ಟ ಪರಸ್ಪರ ಶೇಷಭಾವವ

ಭಗವತ್ಸಂಬಂಧ ಜ್ಞಾನ ವಿಶೇಷ ನಿಬಂಧನಮಾಗೈಯಾಲೇ ಔಪಾಧಿಕಮೆನ್ನುವುಮಾಮ್. ಇಪ್ಪಡಿಯಾಗಿಲ್ ಇರುವರುಕ್ಕುಮ್ ಭಾಗವತತ್ವ

ನ್ನುಳ್ಳ ನನಗೆ ದೇವತಾ ಸ್ವರೂಪರಾದ ನಿತ್ಯಮುಕ್ತರುಗಳಾದ ನನ್ನ ಪರಿಜನದೊಂದಿಗೆ ನಾನು ಸೇರಬೇಕೆಂದು ಹೇಳಿಕೊಳ್ಳುತ್ತಾರೆ ಎಂದರೆಸೇರಿಸೈಯ್ಯಾ ಎಂದು ಪ್ರಾರ್ಥಿಸುತ್ತಾರೆ.

ಹೀಗೆ ಭಾಗವತರುಗಳು ನಿತ್ಯಮುಕ್ತರುಗಳ ಹಾಗೆ ಪರಸ್ಪರ ಶೇಷಭಾವವನ್ನು ವಹಿಸಿರುತ್ತಾರೆಂದೂ ಅದು ಸ್ವಾಭಾವಿಕವಾದುದೆಂದೂ ಹೇಳಿದರೆ ಎರಡು ಆಕ್ಷೇಪಣೆಗಳಿಗೆ ಕಾರಣವಾಗುತ್ತದೆ. ಇದು ಸ್ವರೂಪತಃ ಪ್ರಾಪ್ತವಾದುದಾದರೆ ಎಲ್ಲಾ ಚೇತನರುಗಳಿಗೂ ಎಲ್ಲರೂ ಶೇಷಭಾವವನ್ನು ವಹಿಸತಕ್ಕದ್ದೆಂದು ಏರ್ಪಡುವದರಿಂದ ಮಹಾಭಾಗವತೋತ್ತಮರನ್ನು ಮಾತ್ರ ಆಶ್ರಯಿಸುವದರಲ್ಲಿ ವಿಶೇಷವೇನು ಎಂಬಾಕ್ಷೇಪ ತೋರಿಬರುತ್ತದೆ. ಎರಡನೆಯದು, ಭಾಗವತರುಗಳು ಪರಸ್ಪರ ಶೇಷಭೂತರೆಂದರೆ, ಒಬ್ಬರೇ ಶೇಷಭೂತರೂ ಶೇಷಿಗಳೂ ಸಹ ಆಗಬಹುದೆಂದಾಗುವದರಿಂದ ಇದು ವಿರುದ್ಧವಲ್ಲವೇ ಎಂಬ ಎರಡನೆಯ ಆಕ್ಷೇಪ ತೋರಿಬರುತ್ತದೆ ಈ ಎರಡು ಆಕ್ಷೇಪಗಳನ್ನೂ ಮುಂದಿನ ಎರಡು ವಾಕ್ಯಗಳಿಂದಪರಿಹರಿಸುತ್ತಾರೆ.

ಈ ಮೊದಲನೆಯ ಆಕ್ಷೇಪ ಸಮಾಧಾನಾರ್ಥವಾಗಿ, ಪ್ರಪನ್ನನ ಭಾಗವತ ಶೇಷತ್ವವು ಸ್ವಾಭಾವಿಕವಾದುದೂ ಅಲ್ಲದೆ ಔಪಾಧಿಕವೆಂದೂ, ಭಾಗವತನಿಗೂ ಭಗವಂತನಿಗೂ ಇರುವ ಸಂಬಂಧ ಜ್ಞಾನಮೂಲಕವಾಗಿ ಉಂಟಾಗುವದೆಂದೂ ತಿಳಿಸುತ್ತಾರೆ. ಸ್ವರೂಪತಃ ಉಂಟಾದರೆ ಸ್ವಾಭಾವಿಕವೆಂದೂ ಒಂದು ಕಾರಣಮೂಲಕ ಉಂಟಾದರೆ ಔಪಾಧಿಕವೆಂದೂ ಹಿಂದೆ ಹೇಳಲ್ಪಟ್ಟಿತು. ಭಾಗವತನಿಗೂ ಭಗವಂತನಿಗೂ ಇರುವ ಸಂಬಂಧ ಜ್ಞಾನದಿಂದ ಈ ಶೇಷತ್ವವು ಪ್ರಪನ್ನನಿಗೆ ಪ್ರಾಪ್ತವಾಗುವುದರಿಂದ ಔಪಾಧಿಕವೂ ಹೌದು ಎಂದು ತಿಳಿಸುತ್ತಾರೆ:—

ಭಗವತ್ಸಂಬಂಧ ಜ್ಞಾನ ವಿಶೇಷ ನಿಬಂಧನಮಾಗೈಯಾಲೇ - ಭಗವತ್ಸಂಬಂಧವು ಇವರಿಗೆ ಇರುವದರಿಂದಲೇ ಭಾಗವತರು ಎಂದು ಹೇಳಿಸಿಕೊಳ್ಳುತ್ತಾರೆ; ಈ ಸಂಬಂಧವೆಂಥಾದ್ದೆಂದರೆ ಅವರು ಭಗವಂತನಿಗೆ ಶೇಷಭೂತರು, ಅಥವಾ ಸ ಚ ಮಮ ಪ್ರಿಯಃ ಎಂದು ಹೇಳಿರುವ ಹಾಗೆ ಆತನಿಗೆ ಪ್ರಿಯಸಖರೂ ಎಂದೂ, ಇತ್ಯಾದಿ ಸಂಬಂಧದ ಜ್ಞಾನ ವಿಶೇಷವನ್ನೇ ಮೂಲಹೇತುವಾಗುಳ್ಳೋಣದರಿಂದ, ಈ ಭಾಗವತ ಶೇಷತ್ವವು ಔಪಾಧಿಕಮೆನ್ನು

ಮುಣ್ಡಾನಾಲ್ ಒರುವರ್ಕೈಪ್ಪತ್ತ ಒರುವರ್ಕ್ಕು ಶೇಷತ್ವಮುಮ್ ಶೇಷಿತ್ವಮುಮ್ ವರುಗೈ ವಿರುದ್ಧಮನ್ರೋ ವೆನ್ನಿಲ್ :— ಪರಸ್ಪರೋಪಕಾರ್ಯೋಪಕಾರಕ ಭಾವಾದಿಗಳಿಪ್ಪೋಲೆ ಇಜ್ಜಗಮ್ ವಿರೋಧಮಿಲ್ಲೈ. ಅಧಿ

ಮುಮಾಮ್ - ಔಪಾಧಿಕವಾದುದು ಎಂದೂ ಭಾವಿಸಬಹುದು. ಆದರೆ ಸ್ವಾಭಾವಿಕವಾಗಿ ಸ್ವರೂಪತಃ ಪ್ರಾಪ್ತವಾಗುವಾಗ ಔಪಾಧಿಕವೆಂದೂ ಏಕೆ ಉಪಪಾದನೆ ಮಾಡಬೇಕೆಂದರೆ, ಭಾಗವತರು ಮಾತ್ರವೇ ಪೂಜಾರ್ಹರು, ಇತರ ಚೇತನರಾರೂ ಅಲ್ಲವು, ಎಂಬದಾಗಿ ಲೋಕವಾಡಿಕೆಯಿಂದ ತೋರಿ ಬರುವಂಶವೂ ಸಹಜವಾದುದೇ ಎಂದು ಉಪದೇಶಿಸುವದಕ್ಕಾಗಿ ಎಂದು ತಿಳಿಯುತಕ್ಕದ್ದು. ದೇವತಾಂತರ ಶೇಷತ್ವದ ಹಾಗೆ ಕರ್ಮಕೃತ ಉಪಾಧಿಯಿಂದುಂಟಾದುದಲ್ಲವಾದುದರಿಂದ ಅನನ್ಯಾರ್ಹ ಶೇಷತ್ವಕ್ಕೇನೂ ವಿರೋಧವಿಲ್ಲವು. ಆದುದರಿಂದಲೇ ಹಿಂದಿನ ವಾಕ್ಯದಲ್ಲಿ **ಕರ್ಮಾದ್ಯುಪಾಧಿಗಳಳರ** ಎಂದು ಪ್ರಯೋಗಿಸಿರುತ್ತಾರೆ.

ಮುಂದೆ ಎರಡನೆಯ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ. ಒಬ್ಬರಿಗೇನೇ ಪರಸ್ಪರ ಶೇಷಶೇಷಿ ಭಾವವು ಇದ್ದುದಾದರೆ ವಿರುದ್ಧವಲ್ಲವೋ ಎಂದರೆ ವಿರೋಧವೇನೂ ಇಲ್ಲವೆಂದು ತಿಳಿಸುತ್ತಾರೆ. **ಇಪ್ಪಡಿಯಾಗಿಲ್** ಹೀಗಾದ ನಂತರ ಎಂದರೆ ಶೇಷತ್ವವು ಸ್ವಾಭಾವಿಕವಾಗಿ ಪರಸ್ಪರ ಶೇಷಭಾವವು ಭಾಗವತರಿಗೆ ಉಂಟೆಂದು ಒಪ್ಪಿಕೊಂಡರೆ, **ಇರುವರುಕ್ಕುಮ್** - ಇಬ್ಬರಿಗೂ, **ಭಾಗವತತ್ವ ಮುಣ್ಡಾನಾಲ್** - ಭಾಗವತತ್ವ ಉಂಟಾದರೆ, **ಒರುವರ್ಕೈಪ್ಪತ್ತ** - ಒಬ್ಬರನ್ನು ಕುರಿತು, **ಒರುವರ್ಕ್ಕು** - ಒಬ್ಬರಿಗೆ, **ಶೇಷಭಾವವೂ ಶೇಷಿಭಾವವೂ** ಸಹ **ವರುಗೈ** - ಪ್ರಾಪ್ತವಾಗೋಣವು, **ವಿರುದ್ಧಮನ್ರೋ ವೆನ್ನಿಲ್** - ವಿರುದ್ಧವಲ್ಲವೋ ಎಂದರೆ, **ಪರಸ್ಪರೋಪಕಾರ್ಯೋಪಕಾರಕ ಭಾವಾದಿಗಳಿರ್ ಪೋಲೆ** - ಪರಸ್ಪರ ಉಪಕಾರ ಹೊಂದುವ ಉಪಕಾರ ಮಾಡುವ ಭಾವವೇ ಮೊದಲಾದವುಗಳ ಹಾಗೆ, ಎಂದರೆ ಇಬ್ಬರು ಪರಸ್ಪರ ಉಪಕಾರವನ್ನು ಹೊಂದಿ, ಉಪಕಾರವನ್ನು ಹೇಗೆ ಮಾಡಬಹುದೋ ಹಾಗೆ ಎಂಬರ್ಥವು, **ಇಜ್ಜಗಮ್** - ಭಾಗವತರು ಪರಸ್ಪರ ಶೇಷ ಶೇಷಿ ಭಾವವನ್ನು ಹೊಂದುವರೆಂದು ಹೇಳಿದ ಈ ಸಂಸಾರದಲ್ಲೂ, **ವಿರೋಧ ಮಿಲ್ಲೈ** - ವಿರೋಧವಿಲ್ಲವು. ಒಬ್ಬ ಭಾಗವತರೇ ಇನ್ನೊಬ್ಬರಿಗೆ ಶೇಷಭಾವದಲ್ಲಿರುವಾಗ ಅವರೇ ಇನ್ನೊಬ್ಬರಿಗೆ ಶೇಷಿಯಾಗುವದು ನ್ಯಾಯವಿರುದ್ಧವಲ್ಲವೋ ? ಒಬ್ಬರೇ ಕರ್ತಾರವಾಗಿಯೂ ಕರ್ಮವಾಗಿಯೂ ಇರುವದು ಅಸಙ್ಗತವಲ್ಲವೋ? ಎಂದರೆ ವಿರುದ್ಧವಲ್ಲವೆಂಬುದನ್ನು ಒಂದು ದೃಷ್ಟಾಂತ

ಕಾರ್ಯವಸ್ಥೈಯಿಲೇ ಕ್ರಿಯೈಕ್ಕು ಶೇಷಿಯಾನವನ್ ತಾನೇ ಕರ್ತೃವಸ್ಥೈಯಿಲೇ (ಕ್ರಿಯೈಕ್ಕು) ಅದುಕ್ಕು ಶೇಷನಾಯ್ ನಿಲ್ಲಾನಿನ್ರಾನ್. ಅಪ್ಪ

ಮೂಲಕ ತಿಳಿಯಪಡಿಸಿ, ಮೀಮಾಂಸಾ ನ್ಯಾಯಮೂಲಕ ಸಮರ್ಥನೆಮಾಡುತ್ತಾರೆ. ಲೋಕದೃಷ್ಟಾಂತ ಯಾವುದೆಂದರೆ ಒಬ್ಬನು ತನ್ನ ಮಿತ್ರನಿಗೆ ಉಪಕಾರವನ್ನು ಮಾಡಿ, ಆ ಮಿತ್ರನಿಂದಲೂ ಉಪಕಾರ ಹೊಂದಿದರೆ, ಹೇಗೆ ಇಬ್ಬರಿಗೂ ಪರಸ್ಪರ ಉಪಕಾರ್ಯೋಪಕಾರಕಭಾವಗಳು ಪ್ರಾಪ್ತವಾಗುತ್ತವೋ, ಹಾಗೆಯೇ ಭಾಗವತರುಗಳಿಗೆ ಪರಸ್ಪರ ಶೇಷಶೇಷಿ ಭಾವಗಳು ಎಂಬ ಭಾವವು. ಇದು ಏಕ ಕಾಲದಲ್ಲೇ ಪ್ರಾಪ್ತವಾದರೂ ಪ್ರಾಪ್ತವಾಗಬಹುದು. ಈ ಅಭಿಪ್ರಾಯವನ್ನೇನೋ, ಹೀಗೆ ಯುಕ್ತಿಮೂಲಕ ಸಾಧಿಸಬಹುದು. ಶಾಸ್ತ್ರಾನುಮತಿಯುಂಟೋ ಎಂದರೆ ನ್ಯಾಯಪರಿಶೀಲನಪರರಾದ ಮೀಮಾಂಸಕರೂ ಕೂಡ ಇದನ್ನು ಅಂಗೀಕರಿಸಿರುತ್ತಾರೆಂದು ತೋರ್ಪಡಿಸಿರುತ್ತಾರೆ:—ಶೇಷತ್ವವೆಂದರೆ ಇನ್ನೊಂದು ವಸ್ತುವಿಗೆ ಅತಿಶಯವನ್ನುಂಟುಮಾಡುವಿಕೆ, ಶೇಷಿತ್ವವೆಂದರೆ ಇನ್ನೊಂದರಿಂದ ಅತಿಶಯವನ್ನು ಹೊಂದುವಿಕೆಯು; ಅತಿಶಯವನ್ನುಂಟುಮಾಡಿ ಅತಿಶಯವನ್ನು ಹೊಂದುವಿಕೆಯೇ ಪರಸ್ಪರ ಶೇಷಶೇಷಿ ಭಾವವೆಂದು ಉಪಪಾದಿಸಿ, ಇದು ಅವಸ್ಥಾಭೇದದಿಂದ ಉಂಟಾಗಬಹುದೆಂದು ತಿಳಿಸುತ್ತಾರೆ. **ಅಧಿಕಾರ್ಯವಸ್ಥೈಯಿಲೆ** – ಒಂದು ಕರ್ಮದಿಂದ ಉಂಟಾಗುವ ಫಲವನ್ನು ಹೊಂದಬೇಕೆಂಬಭಿಲಾಷೆಯುಳ್ಳ ಯಜಮಾನನೆಂದು ಹೇಳಿಸಿಕೊಳ್ಳುವವಸ್ಥೆಯಲ್ಲಿ, **ಕ್ರಿಯೈಕ್ಕು** - ವೈದಿಕಕರ್ಮಕ್ಕೆ, **ಶೇಷಿಯಾನವನ್ ತಾನೇ** - ಶೇಷಿಯಾದ ಆ ಯಜಮಾನನೇ, ಎಂದರೆ ಇಲ್ಲಿ ಕ್ರಿಯೆಯು ಯಜಮಾನನಿಗೆ ಅತಿಶಯವನ್ನುಂಟುಮಾಡುವುದಾಗಿ ಶೇಷಭೂತವಾದುದು, ಯಜಮಾನನು ಆ ಅತಿಶಯವನ್ನು ಹೊಂದುವನಾಗಿ ಶೇಷಿಯು ಎಂಬ ಭಾವವು, ಹೀಗೆ ಶೇಷಿಯಾದ ಯಜಮಾನನೇ, **ಕರ್ತೃವಸ್ಥೈಯಿಲೆ** - ಕರ್ಮವನ್ನು ಮಾಡುವ ಅವಸ್ಥೆಯಲ್ಲಿ, **ಅದುಕ್ಕು** - ಆ ಕರ್ಮಕೆ ಕ್ರಿಯೆಯು ಅತಿಶಯವನ್ನು ಹೊಂದುವದರಿಂದ, ಆ ಕರ್ಮವು ಶೇಷಿಯಾಗುತ್ತದೆ ಅಂತಹ ಶೇಷಿಯಾದ ಕರ್ಮಕ್ಕೆ, **ಶೇಷನಾಯ್** - ಈ ಯಜಮಾನನು ಅತಿಶಯವನ್ನುಂಟುಮಾಡುವದರಿಂದ ಶೇಷಭೂತನಾಗಿ, **ನಿಲ್ಲಾನಿನ್ರಾನ್** – ನಿಲ್ಲುವನು ಎಂದರೆ ಇರುವನು. ಯಜ್ಞಯಾಗಾದಿಕರ್ಮಗಳನ್ನಾಚರಿಸುವ ಸಂದರ್ಭದಲ್ಲಿ ವಿಹಿತವಾದ ಕರ್ಮವು ಆಚರಿಸುವ ಯಜಮಾನನಿಗೆ ಫಲರೂಪವಾದ ಅತಿಶಯವನ್ನುಂಟುಮಾಡುವದಾಗಿ ಶೇಷವೆಂದೂ, ಯಜಮಾನನು ಅತಿಶಯವನ್ನು ಹೊಂದುವದ

ಡಿಯೇ ಅನ್ಯೋನ್ಯಂ ಪಣ್ಣುಮ್ ಅತಿಶಯಙ್ಗಳೈಯುಪಜೀವಿಯಾದೆ ಒರುತ್ತರುಕ್ಕೊರುತ್ತರ್ ಅತಿಶಯಾಧಾನಂ ಪಣ್ಣಿನಾಲ್, ಅತಿಶಯಾಧಾಯಕತ್ವ ವೇಷತ್ತಾಲೆ ಇರುವರುಕ್ಕುಮ್ ಶೇಷತ್ವಮುಣ್ಡಾಯ್, ಅತಿಶಯತ್ತುಕ್ಕು ಆಶ್ರಯಮಾನ ವೇಷತ್ತಾಲೆ ಯಿರುವರುಕ್ಕುಮ್ ಶೇಷತ್ವಮುಂಡಾಗಕ್ಕುರೈಯಿಲ್ಲೈ.

ರಿಂದ ಶೇಷಿಯೆಂದೂ ವ್ಯವಹರಿಸಲ್ಪಡುವರು; ಕರ್ಮವನ್ನು ಅನುಷ್ಠಿಸುತ್ತಿರುವ ಕಾಲದಲ್ಲಿ ಕರ್ಮವು ಅತಿಶಯವನ್ನು ಹೊಂದುವದರಿಂದ ಶೇಷಿಯೆಂದೂ, ಯಜಮಾನನು ಕರ್ಮಕ್ಕೆ ಅತಿಶಯವನ್ನುಂಟುಮಾಡುವದರಿಂದ ಶೇಷನೆಂದೂ, ವ್ಯವಹರಿಸಲ್ಪಡುವರು; ಆದುದರಿಂದ ಅವಸ್ಥಾಭೇದದಿಂದ ಶೇಷಶೇಷಿತ್ವಗಳು ಪರಸ್ಪರ ಪ್ರಾಪ್ತವಾಗಬಹುದೆಂಬುವದು ಮೀಮಾಂಸಾಶಾಸ್ತ್ರಸಮ್ಮತವಾದ ವಿಷಯವೆಂಬ ತಾತ್ಪರ್ಯವು. ಮುಂದಿನ ವಾಕ್ಯದಿಂದ ಈ ಅಭಿಪ್ರಾಯವನ್ನೇ ಸಮರ್ಥಿಸುವರಾಗಿ, ಭಾಗವತರುಗಳಿಗೆ ಪರಸ್ಪರ ಶೇಷಶೇಷಿತ್ವವು ಹೇಗೆ ಸಮಂಜಸವೆಂಬುವದನ್ನು ತೋರ್ಪಡಿಸುತ್ತಾರೆ

ಅಪ್ಪಡಿಯೇ - ಮೇಲೆ ಹೇಳಿದ ರೀತಿಯಲ್ಲೇ, **ಅನ್ಯೋನ್ಯಂ ಪಣ್ಣುಂ ಅತಿಶಯಙ್ಗಳೈ** - ಪರಸ್ಪರ ಭಾಗವತರುಗಳು ಮಾಡುವ ಅತಿಶಯಗಳನ್ನು, **ಉಪಜೀವಿಯಾದೆ** - ಜೀವಿಸದ ಹಾಗೆ ಮಾಡದೆ, ಯಾವಾಗ ಜೀವಿಸುತ್ತದೆ ಎಂದರೆ ಮಾಡಿದ ಅತಿಶಯಕ್ಕೆ ಪ್ರತ್ಯತಿಶಯವನ್ನು ಅಪೇಕ್ಷಿಸಿದರೆ ಆಗ ಜೀವಿಸುತ್ತದೆ, ಆದುದರಿಂದ ಮಾಡಿದುದಕ್ಕೆ ಪ್ರತಿಯನ್ನು ಅಪೇಕ್ಷಿಸದೆ ಎಂಬ ಭಾವವು, **ಒರುತ್ತರುಕ್ಕೊರುತ್ತರ್** - ಒಬ್ಬರಿಗೊಬ್ಬರು, **ಅತಿಶಯಾಧಾನಂ ಪಣ್ಣಿನಾಲ್** - ಅತಿಶಯವನ್ನುಂಟುಮಾಡುವ ಕೈಂಕರ್ಯವನ್ನು ಮಾಡಿದರೆ, **ಅತಿಶಯಾಧಾಯಕತ್ವ** - ಅತಿಶಯವನ್ನುಂಟುಮಾಡುವ, **ವೇಷತ್ತಾಲೆ** - ಅವಸ್ಥೆಯಿಂದ **ಇರುವರುಕ್ಕುಮ್** - ಇಬ್ಬರಿಗೂ, **ಶೇಷತ್ವಮುಣ್ಡಾಯ್** - ಶೇಷತ್ವವು ಉಂಟಾಗಿ, **ಅತಿಶಯತ್ತುಕ್ಕು ಆಶ್ರಯಮಾನ ವೇಷತ್ತಾಲೆ** - ಆ ಅತಿಶಯಕ್ಕೆ ಆಶ್ರಯಭೂತರಾಗಿ ಎಂದರೆ ಅತಿಶಯರೂಪ ಕೈಂಕರ್ಯಕ್ಕೆ ಉದ್ದೇಶ್ಯರಾಗಿರುವ ಅವಸ್ಥೆಯಿಂದ, **ಇರುವರುಕ್ಕುಮ್ ಶೇಷಿತ್ವಮುಣ್ಡಾಗಕ್ಕುರೈಯಿಲ್ಲೈ** - ಇಬ್ಬರಿಗೂ ಶೇಷಿತ್ವವೂ ಉಂಟಾಗುವದರಲ್ಲೇನೂ ನ್ಯೂನತೆಯಿಲ್ಲವು, ಅಭ್ಯಂತರವಿಲ್ಲವೆಂಬ ಭಾವವು. ಇಬ್ಬರು ಭಾಗವತರುಗಳೂ ಪರಸ್ಪರ ಅತಿಶಯವನ್ನುಂಟುಮಾಡುವದಕ್ಕಾಗಿ ಪ್ರತಿಫಲವನ್ನೇನೂ ಅಪೇಕ್ಷಿಸದೆ, ಅಂತರ್ಯಾಮಿಯಾಗಿರುವ ಶ್ರಿಯಃಪತಿಯು ಪ್ರೀತನಾ

ಇಪ್ಪಡಿ ಈಶ್ವರೇಚ್ಛೈಯಾಲೇ ಇರುವರುಮ್ ಪರಸ್ಪರಮ್ ಅತಿಶಯಾಧಾಯಕರಾಗ ವಿನಿಯುಕ್ತರಾಕೈಯಾಲೇ, ಇರುವರುಕ್ಕುಮ್

ಗುಮೆನೆಂಬ ಭಾವದಿಂದ ಪರಸ್ಪರಾತಿಶಯದ್ಯೋತಕವಾದ ಕೈಙ್ಕರ್ಯಗಳನ್ನೆಸಗುವಾಗ ಪರಸ್ಪರ ಶೇಷತ್ವವೂ, ಆ ಪರಸ್ಪರಾತಿಶಯಕ್ಕೆ ಆಶ್ರಯರಾಗಿ ಅವುಗಳನ್ನು ಪರಿಗ್ರಹಿಸುವಾಗ ಶೇಷಿತ್ವವೂ ಸಹ ಪ್ರಾಪ್ತವಾಗುತ್ತದೆಂಬ ಭಾವವು.

ಆದರೆ **"ಪರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯ ಸ್ವರೂಪಂ ಸಶೇಷಃ, ಪರಶ್ಶೇಷೀ** ಎಂದು ಶೇಷ ಶೇಷಿ ಲಕ್ಷಣವು ಹೇಳಲ್ಪಟ್ಟಿರುತ್ತದೆ, ಒಬ್ಬ ಭಾಗವತನು ಮತ್ತೊಬ್ಬ ಭಾಗವತನಿಗೆ ಅತಿಶಯವನ್ನುಂಟುಮಾಡುವದಕ್ಕಾಗಿ ಈ ಕೈಙ್ಕರ್ಯದಲ್ಲಿ ಪ್ರವರ್ತಿಸುವನೆಂಬ ಇಚ್ಛೆಯಿರುವದರಿಂದ ಶೇಷಲಕ್ಷಣ ಉಂಟೆಂದೇನೋ ಒಪ್ಪಿಕೊಳ್ಳಬಹುದು. ಆದರೆ ಈ ಭಾಗವತನು ನಮಗೆ ಅತಿಶಯವನ್ನುಂಟುಮಾಡುವನೆಂಬ ಇಚ್ಛೆಯೇ ಇಲ್ಲವಾದುದರಿಂದ ಶೇಷಿಯ ಲಕ್ಷಣವೇ ಇಲ್ಲವೆಂಬ ಆಕ್ಷೇಪವು ತೋರಬಹುದು. ಅದೂ ಅಲ್ಲದೆ ಈ ಶೇಷ ಶೇಷಿ ಲಕ್ಷಣಕ್ಕೆ ಈಶ್ವರೇಚ್ಛೆಯು, **"ಇಚ್ಛಾತ ಏವ ತವ ವಿಶ್ವಪದಾರ್ಥಸತ್ತಾ"** ಎಂಬ ಶ್ಲೋಕದಲ್ಲಿ (೨೬೬ನೆಯ **ಪುಟ ನೋಡಿ**) ಉಪಪಾದಿಸಿರುವ ಹಾಗೆ ಈಶ್ವರೇಚ್ಛೆಯಿಲ್ಲದೆ ಭಾಗವತರ ಸ್ವಕೀಯವಾದ ಇಚ್ಛೆಯಮೂಲಕ ಶೇಷ ಶೇಷಿ ಲಕ್ಷಣವು ಕೂಡುತ್ತದೆಂದು ಹೇಳುವದು ಪ್ರಾಮಾಣಿಕವಾಗುತ್ತದೆಯೇ ಎಂಬಾಕ್ಷೇಪಕ್ಕೆ ಸಮಾಧಾನ ಹೇಳುವವರಾಗಿ **"ಪರಗತಾತಿಶಯಾಧಾನೇಚ್ಛಯಾ"** ಎಂಬ ಶೇಷಸ್ವರೂಪಲಕ್ಷಣಬೋಧಕವಾಕ್ಯವು ಹೇಗೆ ಸಮಂಜಸವೆಂಬುವದನ್ನು ತಿಳಿಸುತ್ತಾರೆ ಲಕ್ಷಣವಾಕ್ಯವಲ್ಲಿ ಇಚ್ಛೆಯು ಯಾರದು? ಉಪಾದೇಯತ್ವವೆಂದರೇನು ? ಇವುಗಳನ್ನೂ ತಿಳಿಸುತ್ತಾರೆ. ಇಚ್ಛೆಯು ಸರ್ವೇಶ್ವರನದು ಎಂದೂ, ಉಪಾದೇಯತ್ವವೆಂದರೆ, ಸರ್ವೇಶ್ವರನಿಂದ ವಿನಿಯುಕ್ತತ್ವವೆಂದೂ, ಆದುದರಿಂದ ಸರ್ವೇಶ್ವರನ ಇಚ್ಛೆಯಿಂದಲೇ ಭಾಗವತರು ಪರಸ್ಪರ ಶೇಷರಾಗಿ ವಿನಿಯುಕ್ತರಾಗಿರುವರೆಂದು ಉಪದೇಶಿಸುತ್ತಾರೆ :—

ಇಪ್ಪಡಿ - ಈ ಈ ರೀತಿಯಲ್ಲಿ ಎಂದರೆ ಭಾಗವತರಿಗೆ ಪರಸ್ಪರ ಶೇಷ ಶೇಷಿ ಭಾವವುಂಟೆಂದು ಹಿಂದೆ ಉಪಪಾದಿಸಿದ ಹಾಗೆ, **ಈಶ್ವರೇಚ್ಛೈಯಾಲೆ** - ಶ್ರಿಯಃಪತಿಯ ಇಚ್ಛೆಯಿಂದಲೇ, ಇದು ಲಕ್ಷಣ ವಾಕ್ಯದಲ್ಲಿರುವ ಇಚ್ಛಾಶಬ್ದತಾತ್ಪರ್ಯವು, ಇರುವರುಮ್ - ಇಬ್ಬರು ಭಾಗವತರೂ. **ಪರಸ್ಪರಂ** - ಒಬ್ಬರಿಗೊಬ್ಬರು, **ಅತಿಶಯಾಧಾಯಕರಾಗ** - ಅತಿಶಯವನ್ನುಂಟುಮಾಡುವವರಾಗಿ,

ಭಾಗವತ ಶೇಷತ್ವ ಸಂಬಂಧಮ್ ಪ್ರಾಮಾಣಿಕಮ್. ಗುಣವಶೀಕೃತನಾನ ತನ್ನಿನವಾಲೇ ಭಗವದ್ವಿಷಯತ್ತಿಲುಮ್ ಭಾಗವತ ವಿಷಯತ್ತಿಲುಮ್ ವರುಮ್ ದಾಸತ್ವಮ್ ಭೋಗವರ್ಧಕಮಾಯ್‌ಕ್ಕೊಂಡು ತನ್ನೇತ್ತಮಾಯಿರುಕ್ಕುಮ್.

ವಿನಿಯುಕ್ತರಾಗೈಯಾಲೆ - ವಿನಿಯೋಗಿಸಲ್ಪಟ್ಟಿರುವದರಿಂದ, ಇದು ಉಪಾದೇಯತ್ವ ಶಬ್ದಾರ್ಥವು, **ಇರುವರುಕ್ಕುಮ್** - ಇಬ್ಬರಿಗೂ, **ಭಾಗವತ ಶೇಷತ್ವಸಂಬಂಧ** ಉಂಟೆಂಬುದು, **ಪ್ರಾಮಾಣಿಕಂ**-ಸತ್ಯವಾದುದು. ಇದರಿಂದ ಭಾಗವತರುಗಳ ಪರಸ್ಪರ ಶೇಷ ಶೇಷಿತ್ವವು ಭಗವದಿಚ್ಛಾ ಸಿದ್ಧವಾದುದಾಗಿ, ಭಗವದತ್ಯರ್ಥ ಪ್ರೀತಿಕರವಾಗಿರುವದರಿಂದ, ಈ ಭಾಗವತ ಶೇಷತ್ವವು ಭಾಗವತ ಕೈಙ್ಕರ್ಯಪರ್ಯಂತವಾದುದೆಂಬುದು ಪ್ರಮಾಣಸಿದ್ಧವಾದುದೆಂದು ಇದರಿಂದ ಸ್ಥಾಪಿಸಲ್ಪಟ್ಟಿತು

ಸರ್ವೇಶ್ವರನಾದರೋ ಕಲ್ಯಾಣಗುಣ ಮಹೋದಧಿಯು ಅಂತವನಿಗೆ ಅಧೀನನಾಗಿರುವದು ಆನಂದಕರವಾದುದು. ಹಾಗಲ್ಲದೆ ಈ ಪ್ರಕೃತಿಮಂಡಲದಲ್ಲಿರುವ ಜೀವಾತ್ಮರಿಗೆ ಅಧೀನವಾಗಿರುವ ಶೇಷಭಾವವು, ಧಿಗಸ್ತು ಪರವಶ್ಯತಾಂ" (ರಾ ಸುಂ. ೨೫.೧೧) ಎಂದು ಹೇಳಿರುವ ಹಾಗೆ ಕ್ಲೇಶಾವಹವು. ಹೀಗಿರುವಲ್ಲಿ ಸರ್ವೇಶ್ವರನು ಭಾಗವತ ಶೇಷತ್ವವನ್ನು ಸಮ್ಮತಿಸಬಹುದೋ ಎಂದರೆ ಗುಣಹೀನನಿಗೆ ಶೇಷಭಾವವೇನೋ ಕ್ಲೇಶಾವಹವು. ಆದರೆ ಭಾಗವತನು ಹೇಯಗುಣವರ್ಜಿತನಾಗಿ ಕಲ್ಯಾಣಗುಣಯುಕ್ತನಾದುದರಿಂದ ಕ್ಲೇಶಕ್ಕೇನೂ ಕಾರಣವಿಲ್ಲವೆಂದೂ, ಅಂತಹ ಶೇಷತ್ವವು ಪರಮ ಸುಖಕ್ಕೆ ಕಾರಣಭೂತವಾಗುವದೆಂದೂ, **ಗುಣವಶೀಕೃತ**ವೆಂಬ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ :—

ಗುಣವಶೀಕೃತನಾನ - ಶೇಷಿಯಾದ ಭಾಗವತನಲ್ಲಿರುವ ಕಲ್ಯಾಣಗುಣಗಳಿಂದ ಆತನಿಗೆ ಶೇಷನಾಗಿ ಅಧೀನನಾಗಿರುವ, **ತನ್ನಿನವಾಲೇ** - ಪ್ರಪನ್ನನಾದ ತನ್ನ ಪ್ರೀತ್ಯತಿಶಯದಿಂದ ಕೂಡಿದ ಇಚ್ಛೆಯಿಂದಲೂ, ಭಗವಂತನ ವಿಷಯದಲ್ಲೂ ಭಾಗವತನ ವಿಷಯದಲ್ಲೂ, **ವರುಮ್** – ಪ್ರಾಪ್ತವಾಗುವ, **ದಾಸತ್ವಮ್** - ಚೇತನನಲ್ಲಿರುವ ಜ್ಞಾಯಮಾನ ಶೇಷತ್ವವೇ ದಾಸತ್ವವೆಂದು ಹಿಂದೆ ಹೇಳಲ್ಪಟ್ಟಿರುತ್ತದೆ, **ಭೋಗವರ್ಧಕಮಾಯ್‌ಕ್ಕೊಂಡು**-ತನ್ನ ಸುಖವನ್ನು ವೃದ್ಧಿಹೊಂದಿಸುವದಾಗಿ, **ತನ್ನೇತ್ತಮಾಯಿರುಕ್ಕುಮ್**-ಪ್ರಪನ್ನನಾದ ತನಗೆ ಅತಿಶಯವನ್ನುಂಟುಮಾಡುವದಾಗುತ್ತದೆ. ಮೇಲೆ ಹೇಳಿದ ಪ್ರಕಾರ ಸರ್ವೇಶ್ವರನ ಇಚ್ಛಾಮೂಲಕ ಇಬ್ಬರು ಭಾಗವತರೂ ಪರಸ್ಪರ ಶೇಷಶೇಷಿ ಭಾವವನ್ನು ಹೊಂದಿರುವದರೊಂದಿಗೆ,

ಭಾಗವತನೂ ಕೂಡ ತನ್ನ ಸ್ವಂತ ಇಚ್ಛೆಯಮೂಲಕವೂ ಇನ್ನೊಬ್ಬ ಭಾಗವತನ ಶೇಷತ್ವವನ್ನು ಅಂಗೀಕರಿಸುವನು. ಈ ವಿಷಯದಲ್ಲಿ ಈತನಿಗೆ **"ಕರ್ತಾಶಾಸ್ತ್ರಾರ್ಥವತ್ವಾತ್" "ಪರಾತ್ತು ತಚ್ಛ್ರುತೇಃ"** ಎಂಬ ಸೂತ್ರಗಳಲ್ಲಿ ಹೇಳಿರುವ ಪ್ರಕಾರ ಪರಾಯತ್ತಕರ್ತೃತ್ವವುಂಟು. ಆದುದರಿಂದ ಈ ಪ್ರಪನ್ನನು ಭಗವಂತನ ವಿಷಯದಲ್ಲೂ ಭಾಗವತನ ವಿಷಯದಲ್ಲೂ ಅವರುಗಳಲ್ಲಿರುವ ಕಲ್ಯಾಣಗುಣಗಳಿಂದಲೂಸಹ ವಶೀಕೃತನಾಗಿ ದಾಸಭಾವವನ್ನು ಅವಲಂಬಿಸಿರುತ್ತಾನೆ. ಆ ದಾಸತ್ವವು ಈ ಪ್ರಪನ್ನನಿಗೆ ತುಂಬಾ ಭಗವನ್ಮುಖೋಲ್ಲಾಸಮೂಲಕ ಅತಿಶಯವನ್ನುಂಟುಮಾಡುತ್ತದೆಂಬಭಾವವು. ದಶರಥನ ಸಭೆಯಲ್ಲಿ ಕೋಸಲದೇಶದವರೆಲ್ಲಾ ನೆರದು, **"ಇಚ್ಛಾಮೋಹಿ ಮಹಾಬಾಹುಮ್ ರಘುವೀರಂ ಮಹಾಬಲಂ"** (ರಾ. ಅಯೋಧ್ಯಾ ೨.೨೨) ಎಂಬದಾಗಿ ಶ್ರೀರಾಮನನ್ನು "**ಪತಿ**" ಯನ್ನಾಗಿ ವರಿಸಲು, ದಶರಥನು ಅದಕ್ಕೆ ಸಂಶಯಾವಿಷ್ಟಹೃದಯನಾಗಿ ತಾನು ಬಹು ಧರ್ಮದಿಂದ ಅವರುಗಳಿಗೆಲ್ಲಾ ಸುಖವುಂಟಾಗುವ ಹಾಗೆ ರಾಜ್ಯಪರಿಪಾಲನ ಮಾಡಿದ್ದರೂ, ಶ್ರೀರಾಮನನ್ನು ಸ್ವಾಮಿಯಾಗಿ ವರಿಸಿದುದಕ್ಕೆ ಕಾರಣವೇನೆಂದು ಬೆಸಗೊಳ್ಳಲು, ಅದಕ್ಕೆ ಅಯೋಧ್ಯಾ ಜನರು, **"ಬಹವೋ ನೃಪಕಲ್ಯಾಣ ಗುಣಾಃ ಪುತ್ರಸ್ಯ ಸಂತಿತೇ"** (ರಾ. ಅಯೋಧ್ಯಾ೨.೨೬) ಓ ರಾಜನೇ ನಿನ್ನ ಪುತ್ರನಲ್ಲಿ ಅನೇಕ ಕಲ್ಯಾಣಗುಣಗಳುಂಟು ಎಂದು ಹೇಳಿ ಅವುಗಳಲ್ಲಿ ಕೆಲವನ್ನೆಲ್ಲಾ ನಿರೂಪಿಸಿರುತ್ತಾರೆ. ಆದುದರಿಂದ ಶ್ರೀರಾಮನ ವಿಷಯದಲ್ಲಿ ಅಯೋಧ್ಯಾ ಜನವು ಗುಣವಶೀಕೃತರಾಗಿ ದಾಸ್ಯವನ್ನವಲಂಬಿಸುವದಕ್ಕಾಗಿ, ಮುಂದೆ ೪೮ನೆಯ ಶ್ಲೋಕದಲ್ಲಿ

"ತಮೇವಂ ಗುಣ ಸಂಪನ್ನಂ ರಾಮಂ ಸತ್ಯಪರಾಕ್ರಮಂ।
ಲೋಕಪಾಲೋಪಮಂ ನಾಥ ಮಕಾಮಯತ ಮೇದಿನೀ"

ಇಂತಹ ಕಲ್ಯಾಣಗುಣಗಣಪೂರ್ಣನಾದ ಶ್ರೀರಾಮನನ್ನು ಸ್ವಾಮಿಯಾಗಿರಬೇಕೆಂದು ಲೋಕದ ಜನವೆಲ್ಲಾ ಅಪೇಕ್ಷಿಸಿತು ಎಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಲಕ್ಷ್ಮಣನೂ ಕೂಡ ತಾನು ಶ್ರೀರಾಮನ ವಿಷಯದಲ್ಲಿ ಶೇಷಭಾವವನ್ನು ವಹಿಸಿರುವದು, ಶ್ರೀರಾಮನ ಕಲ್ಯಾಣಗುಣಮಾಹಾತ್ಮ್ಯೆಯಿಂದಲೇ ಎಂದು,

"ಅಹಮಸ್ಯಾವರೋ ಭ್ರಾತಾ ಗುಣೈರ್ದಾಸ್ಯಮುಪಾಗತಃ" (ಕಿಷ್ಕಿಂಧಾ.೪.೧೨) ಎಂದೂ ತನ್ನ ಹೆಸರೂ ಕೂಡ, ಅಂತಹ ಶ್ರೀರಾಮ ಗೆ ದಾಸ್ಯಮಾಡಿ ಕೈಂಕರ್ಯಲಕ್ಷ್ಮೀಸಂಪನ್ನನಾದುದರಿಂದಲೇ ಲಕ್ಷ್ಮಣನೆಂದು ಹೇಳಿಕೊಂಡಿರುತ್ತಾನೆ ೧೩೪೨ನೆಯ ಪುಟನೋಡಿ.

ಹಾಗೆಯೇ ಭಾಗವತ ಶೇಷತ್ವದಲ್ಲೂ, ಪ್ರಪನ್ನನು ಭಾಗವತನಲ್ಲಿರುವ ಕಲ್ಯಾ

ಣಗುಣಗಳಿಂದ ಆಕರ್ಷಿಸಲ್ಪಟ್ಟವನಾಗಿ ದಾಸ್ಯವನ್ನು ಮಾಡುವುದಕ್ಕೆ ಒಂದು ಒಳ್ಳೇ ನಿದರ್ಶನವು ಮಧುರಕವಿಯಾಳ್ವಾರೆಂದು ಹೇಳಬಹುದು. ಇವರು ತಮ್ಮ ಆಚಾರ್ಯರಾದ ನಮ್ಮಾಳ್ವಾರ್ರವರಲ್ಲಿ ಇಂತಹ ಕಲ್ಯಾಣಗುಣಗಳನ್ನೆಲ್ಲಾ ಕಂಡು ಅವರನ್ನು ತಮ್ಮ ಕಣ್ಣಿನುಣ್ ಶಿರುತ್ತಾಂಬುಂಬ ಆಚಾರ್ಯನಿಷ್ಠಾಸೂಚಕವಾದ ಪ್ರಬಂಧದಲ್ಲಿ ಕೊಂಡಾಡಿ, ತಾವು ಅವರಿಗೆ ದಾಸ್ಯವನ್ನು ವಹಿಸಿದುದು ಅವರ ಕಲ್ಯಾಣಗುಣಗಳ ಮೂಲಕವಾಗಿ ಎಂದು "ತಕ್ಕಶೀರ್ ಶಠಗೋಪನೆನ್ನಂಬಿಕ್ಕಾಟ್ಪಕ್ಕ ಕಾದಿಲ್ ಅಡಿಮೈಪ್ಪಯನನ್ರೇ" (೯) ಮಹಾಭಾಗವತೋತ್ತಮರಾದ ಆಚಾರ್ಯರೆಂದು ಹೇಳಿಸಿಕೊಳ್ಳಲು ಅರ್ಹವಾದ ಕಲ್ಯಾಣಗುಣಪರಿಪೂರ್ಣರಾದ, ಅಜ್ಞಾನಗಂಧವೇ ಇಲ್ಲದೇ ಇರುವ ನಮ್ ಆಳ್ವಾರ್ ಎಂದು ಹೇಳಿಸಿಕೊಳ್ಳಲು ಯೋಗ್ಯರಾದ ನನಗೆ ಪರಮಗುರುವಾಗಿರುವ ಶ್ರೀಶಠಗೋಪರಿಗೆ ದಾಸ್ಯವನ್ನು ಹೊಂದಿರಬೇಕೆಂಬಪೇಕ್ಷೆಯು ತುಂಬಾ ಪ್ರಯೋಜನಕರವಾದುದಲ್ಲವೇ" ಎಂಬದಾಗಿ ಸ್ತೋತ್ರಮಾಡಿರುತ್ತಾರೆ. ಇಲ್ಲಿಯೂ ಭಾಗವತ ದಾಸ್ಯವು "ಭೋಗವರ್ಧಕವಾಯ್‌ಕ್ಕೊಂಡು ತನ್ನೇತ್ತಮಾಯಿರುಕ್ಕುಮ್", ಎಂಬುವದು ನಿದರ್ಶಿಸಲ್ಪಟ್ಟಿತು.

ಇಲ್ಲಿ ಭೋಗವರ್ಧಕವಾಯ್‌ಕ್ಕೊಂಡು ಎಂದು ಹೇಳಿರುವದರಿಂದ ಪ್ರಪನ್ನನಾದ ಭಾಗವತನಿಗೆ ಈ ಶೇಷತ್ವವು ಹೇಗೆ ಆನಂದ ಸುಖವನ್ನು ವೃದ್ಧಿ ಹೊಂದಿಸುತ್ತದೆ ಎಂದರೆ, ಯದ್ಯಪಿ ಸರ್ವೇಶ್ವರಸಙ್ಕಲ್ಪಾನುಸಾರವಾಗಿ ಭಾಗವತ ಕೈಙ್ಕರ್ಯವು ನಡೆದರೂ, ತನ್ನ ಮೂಲಕವಾಗಿ ಅದು ನಡೆದು ಭಗವತ್ಪ್ರೀತಿಯುಂಟಾದುದರಿಂದ, ಅದಕ್ಕೆ ಕಾರಣಭೂತನಾದೆನಲ್ಲವೇ ಎಂಬ ಆನಂದ ಉಂಟಾಗುವದರಿಂದ ಭೋಗವರ್ಧಕವೆಂಬ ಭಾವವು. ಈ ದೇಶದ ಪ್ರಜೆಗಳಿಗೆ ಸರ್ವೇಶ್ವರನೇ ಅನೇಕ ಸುಖಗಳನ್ನು ರಾಜ್ಯಾಡಳಿತ ಮೂಲಕವಾಗಿ ಕಲ್ಪಿಸುತ್ತಾನೆ. ಆದರೆ ರಾಜನು ಅವುಗಳಿಗೆಲ್ಲಾ ನಿಮಿತ್ತಕಾರಣನಾಗುವದರಿಂದ ಆತನಿಗೆ ಹೇಗೆ ಆನಂದವನ್ನುಂಟುಮಾಡುವದರಮೂಲಕ ಭೋಗವರ್ಧಕವೋ ಹಾಗೆಯೇ ಪ್ರಪನ್ನನ ಭಾಗವತ ಶೇಷತ್ವ ಕೈಙ್ಕರ್ಯವೂ ಸಹ ಎಂಬ ಭಾವವು. ಇದೂ ಅಲ್ಲದೆ ಈ ಭಾಗವತಶೇಷತ್ವವು, ಪುರುಷಾರ್ಥಕಾಷ್ಠೆಯನ್ನು ತಾನು ಹೊಂದಿ ಅದರಿಂದ ಸರ್ವೇಶ್ವರನಿಗೆ ಈಶ್ವರತ್ವ ಭೋಕ್ತೃತ್ವಗಳ ಮೂಲಕ ಆತನಿಗೆ ಲೀಲಾರಸ ಉಂಟುಮಾಡುವುದರಿಂದಲೂ ಭೋಗವರ್ಧಕವೆಂದು ಹೇಳಬಹುದು.

ಹೀಗೆ ಭಾಗವತ ಶೇಷತ್ವವು ಈಶ್ವರೇಚ್ಛೆಯ ಮೂಲಕವಾಗಿಯೂ ಭಾಗವತನಾದ ಪ್ರಪನ್ನನ ಇಚ್ಛಾಮೂಲಕವಾಗಿಯೂ ಪ್ರಾಪ್ತಮ್ ಎಂದು ಉಪಪಾದಿ

ಭಾಗವತ ಶೇಷತ್ವ ಶೇಷಿತ್ವಯೋರ್ವೈಲಕ್ಷಣ್ಯಂ

ಇವ್ವಿಡತ್ತಿಲ್ ಈಶ್ವರರ್ ಸ್ವಾತಂತ್ರ್ಯ ಸಹಕೃತ್ತೈಯಾನ ತನ್ನಿಚ್ಛೈಯಾಲೆ ಭಾಗವತರ್ಕಳೆಲ್ಲಾಂ ಶೇಷಿತ್ವತ್ತೈಯುಂಡಾಕ್ಕುಂ. ಇವರ್ಗಳಿ

ಸಲ್ಪಟ್ಟಿತು. ಇನ್ನು ಭಾಗವತಶೇಷಿತ್ವವು ಹೇಗೆ ಉಂಟಾಗುತ್ತದೆಂಬುವದನ್ನು ತಿಳಿಸುತ್ತಾರೆ. ಇಲ್ಲಿ ಭಾಗವತನಿಗೆ ತಾನು ಶೇಷಿಯೆಂಬ ಭಾವವು ಮಮಕಾರ ರೂಪವಾಗಿ ಕೂಡದಾದುದರಿಂದ, ಶೇಷಿತ್ವವು ಭಾಗವತೇಚ್ಛೆಯಿಂದುಂಟಾಗುವದಿಲ್ಲವು. ಆದುದರಿಂದ ಈಶ್ವರೇಚ್ಛೆಯ ಮೂಲಕವಾಗಿಯೇ ಉಂಟಾಗುವಂಥಾದ್ದೆಂದು ತಿಳಿಸುತ್ತಾರೆ. ಆದರೆ ಅಂತಹ ಮಮಕಾರ ರೂಪವಾದ ಶೇಷಿತವನ್ನು, ಈಶ್ವರೇಚ್ಛೆಯಿಂದ ಪ್ರಾಪ್ತವಾದರೂ, ಭಾಗವತನು ವಹಿಸಬಹುದೋ ? ಎಂದರೆ, ತನ್ನ ಭಗವದಧೀನವಾದ ಪಾರತಂತ್ರ್ಯಕ್ಕೆ ಅಂತಹ ಶೇಷಿತ್ವವಹನದಿಂದ ಇನ್ನೂ ತನಗೆ ಸ್ವರೂಪ ಲಾಭವೇ ವಿನಾ ಮಮಕಾರ ಪ್ರದರ್ಶನವೇನೂ ಇಲ್ಲವೆಂದು ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ. ಶ್ರೀಭರತಾಳ್ವಾರ್ವವರು ಶ್ರೀರಾಮನ ಇಚ್ಛಾನುಸಾರ ಅಯೋಧ್ಯಾ ರಾಜ್ಯಕ್ಕೆ ಶೇಷಿಯಾಗಿ ರಾಜ್ಯಾಡಳಿತವನ್ನು ವಹಿಸಿದುದು, ಮಹಾಭಾಗವತರಾದ ಶ್ರೀಭರತಾಳ್ವಾರವರಿಗೆ ಮಮಕಾರವನ್ನು ಹೇಗೆ ಉಂಟುಮಾಡಲಾರದೋ ಹಾಗೆ ಎಂಬಭಾವವು. ಶೇಷತ್ವದಲ್ಲಾದರೋ ಸರ್ವೇಶ್ವರನ ಸುತಃ ಭಾಗವತನ, ಹೀಗೆ ಇಬ್ಬರ ಇಚ್ಛಾಸಿದ್ಧಿಯುಂಟು. ಶೇಷಿತ್ವದಲ್ಲಾದರೋ ಸರ್ವೇಶ್ವರನ ಇಚ್ಛಾಮಾತ್ರವೇ, ಭಾಗವತನ ಪಾರತಂತ್ರ್ಯರೂಪವಾದ ಅನುಮತಿ, ಇವುಗಳು ಉಂಟೆಂಬ ಭಾವವು. ಹೀಗೆ ಭಾಗವತ ಶೇಷತ್ವಕ್ಕೂ ಭಾಗವತ ಶೇಷಿತ್ವಕ್ಕೂ ಇರುವ ವೈಲಕ್ಷಣ್ಯವನ್ನು ಮುಂದಿನ ವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ.

ಭಾಗವತಶೇಷತ್ವಕ್ಕೂ ಶೇಷಿತ್ವಕ್ಕೂ ಇರುವ ವ್ಯತ್ಯಾಸವು.

ಇವ್ವಿಡತ್ತಿಲ್ – ಹೀಗೆ ಭಗವಂತನ ಇಚ್ಛಾಮೂಲಕವಾಗಿ, ಭಾಗವತರುಗಳು ಪರಸ್ಪರ ಶೇಷಶೇಷಿಗಳಾಗಿರುವ ಸಂದರ್ಭದಲ್ಲಿ, ಈಶ್ವರರ್ - ಸರ್ವೇಶ್ವರನು ಸ್ವಾತಂತ್ರ್ಯ ಸಹಕೃತ್ತೈಯಾನ - ಸ್ವಾತಂತ್ರ್ಯದೊಂದಿಗೆ ಸೇರಿದ, ತನ್ನಿಚ್ಛೈಯಾಲೇ – ತನ್ನ ಸಙ್ಕಲ್ಪದಿಂದ, ಎಂದರೆ ತನ್ನ ಸಙ್ಕಲ್ಪಮಾತ್ರದಿಂದಲೇ ಭಾಗ

ಚ್ಚೈಯುಮ್ ಕೊಟ್ಟುಕ್ಕೊಂಡು ಇವರ್ಗಳುಕ್ಕು ಭಾಗವತ ಶೇಷತ್ವತ್ತೈ ಯುಂಡಾಕ್ಕುಮ್

ಪರಸ್ಪರ ಶೇಷಶೇಷಿಭಾವೇನ ಪುರುಷಾರ್ಥಕಾಷ್ಠಾಸಿದ್ಧಿಃ

——

ಇಪ್ಪಡಿ ಸ್ವಾಮಿಕ್ಕು ಇಷ್ಟವಿನಿಯೋಗಾರ್ಹರಾಯ್ಕ್ಕೊಂಡು ಶೇಷಿ

ವತ ಸಙ್ಕಲ್ಪವೇನೂ ಇಲ್ಲದೆ ಎಂಬ ಭಾವವು, ಭಾಗವತರ್ಕೆಲ್ಲಾಮ್ - ಎಲ್ಲಾ ಭಾಗವತರುಗಳಿಗೂ, ಶೇಷಿತ್ವತ್ತೈಯುಂಡಾಕ್ಕುಮ್ - ಶೇಷಿತ್ವವನ್ನುಂಟು ಮಾಡುತ್ತದೆ. ಆದರೆ, ಇವರ್ಗಳಿಚ್ಚೈಯುಮ್ ಕೊಟ್ಟುಕ್ಕೊಂಡು – ಈ ಭಾಗವತರುಗಳಿಚ್ಛೆಯೂ ಕೂಡ ಸೇರಿ, ಇವರ್ಗಳಿಗೆ ಈ ಭಾಗವತರುಗಳಿಗೆ, ಭಾಗವತ ಶೇಷತ್ವವನ್ನುಂಟುಮಾಡುತ್ತದೆ. ಭಾಗವತ ಶೇಷತ್ವಕ್ಕೆ ಇಬ್ಬರ ಇಚ್ಛೆಯೂ ಉಂಟು. ಆದರಲ್ಲಿ ಪ್ರಧಾನವಾದುದು ಈಶ್ವರ ಸಙ್ಕಲ್ಪವು; ಭಾಗವತನ ಇಚ್ಛೆಯು ಸರ್ವೇಶ್ವರಾಯತ್ತವಾದುದಾಗಿ ಭಾಗವತನಿಗೆ ಆನಂದವರ್ಧಕವಾಗಿ ಪರಮಶ್ರೇಯಸ್ಸನ್ನುಂಟುಮಾಡುತ್ತದೆ ಭಾಗವತ ಶೇಷಿತ್ವದಲ್ಲಾದರೋ ಈಶ್ವರೇಚ್ಛೆ ಮಾತ್ರವೇ ಉಂಟು. ಈ ಈಶ್ವರೇಚ್ಛೆಯು ಅಪ್ರತಿಹತವಾದುದು, ಆತನು ಸತ್ಯಸಙ್ಕಲ್ಪನಾದುದರಿಂದ ಆತನ ಸಙ್ಕಲ್ಪಕ್ಕೆ ವಿಘಾತವೇ ಇಲ್ಲವು. ಏಕೆಂದರೆ ಆ ಇಚ್ಛೆಯು ಸ್ವಾತಂತ್ರ್ಯಸಹಕೃತೈಯಾದುದು. ನಿರ್ವಿಘ್ನವಾಗಿ ಜರಗುವದಕ್ಕೆ ಸ್ವಾತಂತ್ರ್ಯವಿರಬೇಕು. ಆದುದರಿಂದಲೇ ಸ್ವಾತಂತ್ರ್ಯ ಸಹಕೃತೈಯಾನ ತನ್ನಿಚ್ಚೈಯಾಲೇ ಎಂಬ ಪ್ರಯೋಗವು. ಅದೂ ಅಲ್ಲದೆ ಸರ್ವ ಸ್ವಾತಂತ್ರ್ಯವೂ ಸ್ವಾಮಿಗೆ ಇರುವದರಿಂದ ಈ ಭಾಗವತರುಗಳಿಗೆ ಶೇಷತ್ವವನ್ನೂ ಶೇಷಿತ್ವವನ್ನೂ, ಹೀಗೆ ಕಲ್ಪಿಸುವದು ನ್ಯಾಯವೇ ಎಂದು ಆಕ್ಷೇಪಿಸುವದೂ ಕೂಡ ನ್ಯಾಯವಲ್ಲವೆಂಬ ಭಾವವು. ಸ್ವಾತಂತ್ರ್ಯ ವೈಶ್ವರಸುಪರ್ಯನು ಯೋಜ್ಯ ಮಾಹುಃ" ಎಂದು ಈಶ್ವರ ಸ್ವಾತಂತ್ರ್ಯ ವಿಷಯದಲ್ಲಿ ವಾದವು ಸರಿಯಲ್ಲವೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. (ನೆಯ ಪುಟ ನೋಡಿ) ಭಾಗವತರುಗಳು ತಾವೇ ಸ್ವತಂತ್ರಿಸಿ ಶೇಷಿತ್ವವನ್ನು ವಹಿಸಲು, ಅಹಂಕಾರ ಮಮಕಾರಗಳ ಭಯದಿಂದ ಇಚ್ಛಿಸಿದ್ದರೂ, ಸರ್ವೇಶ್ವರನ ಅಪ್ರತಿಹತ ಸ್ವಾತಂತ್ರ್ಯ ಸಙ್ಕಲ್ಪ ಆಜ್ಞಾಪರರಾಗಿರುವದರಿಂದ ಶೇಷಿತ್ವವನ್ನು ವಹಿಸುವದೂ ಕೂಡ ಆಜ್ಞಾಕೈಙ್ಕರ್ಯವಾದುದರಿಂದ ಸ್ವರೂಪಾನುಗುಣವಾದುದೇ ವಿನಾ ಸ್ವರೂಪವಿರುದ್ಧವಲ್ಲವೆಂಬ ಭಾವವು. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ

ಗಳಾಯ್ ನಿರ್ಕ್ಕೃತನ್ನಾಲೇ ಇರುವರುಮ್ ಸ್ವರೂಪಂ ಪೆತ್ತಾರ್‌ಗಳ್.

ಶೇಷಿತ್ವತ್ತೈಯುಣ್ಡಾಕ್ಕುಮ್ ಸರ್ವೇಶ್ವರನ ಸಙ್ಕಲ್ಪವನ್ನುಂಟುಮಾಡುತ್ತದೆ ಎಂಬುವದರಿಂದ ಆ ಭಾಗವತರುಗಳು ತಾವೇ ಇಷ್ಟಪಟ್ಟು ವಹಿಸಿದರೆಂಬುವದು ವ್ಯಾವೃತ್ತವಾಯಿತು. ಆದರೆ ಭಾಗವತ ಶೇಷತ್ವದಲ್ಲಾದರೋ ಹಾಗಲ್ಲವು, ಭಾಗವತರ ಇಚ್ಛೆಯೂ ಉಂಟೆಂದು ಉಪದೇಶಿಸುತ್ತಾರೆ. ಭಾಗವತ ಶೇಷತ್ವದಲ್ಲಿ ಮಾತ್ರ, ಭಾಗವತರುಗಳ ಪರಸ್ಪರ ಇಚ್ಛೆಯೂ ಸರ್ವೇಶ್ವರನ ಸಙ್ಕಲ್ಪವೂ ಸಹ ಉಂಟು.

ಈ ಪರಸ್ಪರ ಶೇಷಶೇಷಿಭಾವದಿಂದ ಪುರುಷಾರ್ಥ ಕಾಷ್ಠಾಸಿದ್ಧಿಯು.

ಈ ಪರಸ್ಪರ ಶೇಷಶೇಷಿಭಾವದಲ್ಲಿ ಒಬ್ಬ ಭಾಗವತನು ಶೇಷನೂ ಇನ್ನೊಬ್ಬನು ಶೇಷಿಯೂ ಆದರೆ, ಸರ್ವೇಶ್ವರನಿಗೆ ಇಬ್ಬರೂ ಶೇಷಭೂತರಾಗಿ ಆತನಿಂದ ಇಷ್ಟವಿನಿಯೋಗಾರ್ಹತೆಯನ್ನು ಪಡೆದಿರುವದರಿಂದ ಒಬ್ಬರನ್ನು ಶೇಷನಾಗಿಯೂ, ಇನ್ನೊಬ್ಬರನ್ನು ಶೇಷಿಯಾಗಿಯೂ ನಿಯಮಿಸಲು ಆತನಿಗೆ ಸ್ವಾತಂತ್ರ್ಯ ಉಂಟು. ಇದನ್ನು ತಿಳಿದವರಾಗಿ ಸಂಪೂರ್ಣಪಾರತಂತ್ರ್ಯವನ್ನು ವಹಿಸುವದರಿಂದ ಇಬ್ಬರೂ ಸ್ವರೂಪವನ್ನು ಹೊಂದಿದರೆಂದು **ಇಪ್ಪಡಿ** ಎಂದು ಆರಂಭಿಸಿದವಾಕ್ಯಮೂಲಕವಾಗಿ, ತಿಳಿಸುತ್ತಾರೆ

ಇಪ್ಪಡಿ - ಮೇಲೆ ಹೇಳಿದ ರೀತಿಯಲ್ಲಿ, **ಸ್ವಾಮಿಕ್ಕು ಇಷ್ಟವಿನಿಯೋಗಾರ್ಹರಾಯ್‌ಕ್ಕೊಂಡು** - ಸರ್ವೇಶ್ವರನು ತನ್ನಿಷ್ಟಾನುಸಾರ ನಿಯಮಿಸಲು ಅರ್ಹರಾಗಿ, **ಶೇಷಿಗಳಾಯ್ ನಿರ್ಕ್ಕೃತನ್ನಾಲೇ**-ಪಾರತಂತ್ರ್ಯವನ್ನು ವಹಿಸಿ ಇಬ್ಬರೂ ಶೇಷಿಗಳಾಯ್ ಇರುವದರಿಂದ, **ಇರುವರುಮ್** - ಶೇಷಿತ್ವವನ್ನು ವಹಿಸಿದ ಇಬ್ಬರು ಭಾಗವತರೂ, **ಸ್ವರೂಪಮ್ ಪೆತ್ತಾರ್‌ಗಳ್** - ಸ್ವರೂಪವನ್ನು ಹೊಂದಿದರು. ಭಾಗವತರುಗಳಿಬ್ಬರೂ ಪರಸ್ಪರ ಶೇಷಿಗಳಾಗಿ ವರ್ತಿಸಿ ತಮ್ಮ ಸ್ವತಂತ್ರೇಚ್ಛೆಯಿಂದಲ್ಲಿದೆ ಈಶ್ವರಸಙ್ಕಲ್ಪಾನುಸಾರವೆಂದು ತಿಳಿದು ಹೀಗೆ **ಪೂರ್ಣಪಾರತಂತ್ರ್ಯ**ದಿಂದ ಸರ್ವೇಶ್ವರನ ಆಜ್ಞಾರೂಪಕೈಙ್ಕರ್ಯವನ್ನು ನಡೆಸುತ್ತೇವೆಂದು ಭಾವಿಸುವದರಿಂದ ಇಬ್ಬರೂ ಸ್ವರೂಪವನ್ನು ಹೊಂದಿದರೆಂದು ಹೇಳಲ್ಪಟ್ಟಿತು. ಮುಂದೆ ಪರಸ್ಪರ ಶೇಷರಾಗಿ ವರ್ತಿಸುವದರಿಂದುಂಟಾಗುವ ಪ್ರಯೋಜನವನ್ನು ಸೂಚಿಸುತ್ತಾರೆ :—

ಸ್ವಾಭೀಷ್ಟಮಾನ ಭಾಗವತ ಶೇಷತ್ವಮುಮ್ ಅರ್ದಿ ಫಲಮಾನ ಭಾಗವತ ಕೈಙ್ಕರ್ಯಮುಮ್ ಸಿದ್ಧಿಕ್ಕೈಯಾಲ್ ಇರುವರುಮ್ ಪುರುಷಾರ್ಥಕಾಷ್ಠೈಪೆತ್ತಾರ್ಗಳ್.

ಸ್ವಾಭೀಷ್ಟಮಾನ - ತನ್ನ ಇಷ್ಟಾನುಸಾರ ಪ್ರಾಪ್ತವಾದ, **ಭಾಗವತಶೇಷತ್ವವೂ, ಅರ್ದಿಫಲಮಾನ** - ಅದರ ಫಲರೂಪವಾದ, ಕಾರ್ಯರೂಪವಾದ, **ಭಾಗವತಕೈಙ್ಕರ್ಯವೂ** ಸಹ, **ಸಿದ್ಧಿಕ್ಕೈಯಾಲೇ** - ಸಿದ್ಧಿಸುವದರಿಂದ, **ಇರುವರುಮ್** – ಪರಸ್ಪರ ಶೇಷರಾದ ಇಬ್ಬರು ಭಾಗವತರೂ, **ಪುರುಷಾರ್ಥಕಾಷ್ಠೈಪೆತ್ತಾರ್ಗಳ್** – ಬರೀ ಸ್ವರೂಪವನ್ನು ಹೊಂದಿರುದು ಮಾತ್ರವೇ ಅಲ್ಲದೆ, **ಪುರುಷಾರ್ಥಕಾಷ್ಠೈ** - **ಕಾಷ್ಠೈ** ಎಂದರೆ ಎಲ್ಲೆಯು, **ಪುರುಷಾರ್ಥಕಾಷ್ಠೆ** ಪ್ರಯೋಜನದ ಸರ್ವೋತ್ತಮಾಂಶವು, ಎಂದರೆ ಪ್ರಯೋಜನೋತ್ಕರ್ಷವನ್ನು, ಸರ್ವಶ್ರೇಷ್ಠಪ್ರಯೋಜನವನ್ನು, **ಪೆತ್ತಾರ್ಗಳ್**-ಹೊಂದಿದರು. ಈ ಪರಸ್ಪರ ಶೇಷತ್ವದಲ್ಲಿ, ಪೂರ್ಣವಿಶ್ವಾಸದಿಂದ ತನ್ನಿಷ್ಟವೂ ಕೂಡಾ ಇರುವದರಿಂದ ಸ್ವರೂಪವನ್ನು ಮಾತ್ರ ಹೊಂದುವಲ್ಲದೆ ಪುರುಷಾರ್ಥ ಕಾಷ್ಠೆಯನ್ನು ಹೊಂದಲು ಕಾರಣವಾಯಿತು ಎಂಬ ಭಾವವು. ಪರಮವಿಶ್ವಾಸದಿಂದ ಭಾಗವತ ಶೇಷತ್ವವನ್ನು ಪ್ರದರ್ಶಿಸಿ ತತ್ಕಾರ್ಯರೂಪವಾದ ಕೈಙ್ಕರ್ಯವನ್ನೆಸಗುವದೇ ಪುರುಷಾರ್ಥ ಕಾಷ್ಠೆಯೆಂದು ಹೇಳಲ್ಪಟ್ಟಿತು. ಆದುದರಿಂದ ಭಗವಚ್ಛೇಷತ್ವಕ್ಕಿಂತ ಭಾಗವತ ಶೇಷತ್ವವು ಅತಿಶಯವಾದುದೆಂಬುವದು ಮುಖ್ಯ ತಾತ್ಪರ್ಯವು. ಪರಸ್ಪರ ಶೇಷಿಭಾವಕ್ಕಿಂತಲೂ ಪರಸ್ಪರ ಶೇಷಭಾವವೂ ಅತಿಶಯವಾದುದೆಂದೂ ತೋರಿಬರುತ್ತದೆ.

ಹೀಗೆ ಇಬ್ಬರು ಭಾಗವತರುಗಳನ್ನು ಪರಸ್ಪರ ಶೇಷರನ್ನಾಗಿಯೂ ಪರಸ್ಪರ ಶೇಷಿಗಳನ್ನಾಗಿಯೂ ಸರ್ವೇಶ್ವರನು ನಿಯಮಿಸುವದರಿಂದ ಆತನಿಗೆ ಪ್ರಯೋಜನವೇನೆಂಬುವದನ್ನು "**ಇರುವರ್ಯೈಯುಮ್**" ಎಂದಾರಂಭಿಸಿ ಹೇಳುವ ವಾಕ್ಯದಿಂದ ತಿಳಿಸುತ್ತಾರೆ :—

ಇರುವರ್ಯೈಯುಮ್ - ಈ ಇಬ್ಬರು ಭಾಗವತರುಗಳನ್ನೂ, **ಇಪ್ಪಡಿ** - ಮೇಲೆ ಉಪಪಾದಿಸಿದ ರೀತಿಯಲ್ಲಿ, **ಪರಸ್ಪರ** ಶೇಷಶೇಷಿಗಳಾಗ – ಪರಸ್ಪರ ಶೇಷರಾಗಿಯೂ ಪರಸ್ಪರ ಶೇಷಿಗಳಾಗಿಯೂ ಇರಬೇಕೆಂದು, **ನಿಯಮಿತ್ತು** - ನಿಯಮನವನ್ನು ಮಾಡಿ ಎಂದರೆ ಆಜ್ಞಾಪಿಸಿ, **ರಸಿಕ್ಕೈಯಾಲೇ** - ಲೀಲಾವಿನೋದವನ್ನು ಹೊಂದುವದರಿಂದ, **ಈಶ್ವರರ್** – ಸರ್ವೇಶ್ವರನು, **ತನ್ ಈಶ್ವರತ್ವಮತಾವತ್ತು**ನು - ಸ್ವಾಮಿಯಾಗಿ ನಿಯಮಿಸುವ ಶಕ್ತಿಯುಳ್ಳ ಈಶ್ವರ ಭಾವ

ತಿರುವರೈಯುಮಿಪ್ಪಡಿ ಪರಸ್ಪರಶೇಷಶೇಷಿಗಳಾಗ ನಿಯಮಿತ್ತು ರಸಿಕ್ಕೈಯಾಲೇ, ಈಶ್ವರನ್ ತನ್ ಈಶ್ವರತ್ವಮುಮ್ ಭೋಕ್ತೃತ್ವಮುಮ್ ಪೆತ್ತಾನ್.

ವನ್ನೂ, ಭೋಕ್ತೃತ್ವವನ್ನೂ ಹೊಂದಿದನು. ಹೀಗೆ ಭಾಗವತರನ್ನು ಪರಸ್ಪರ ಶೇಷಶೇಷಿಗಳಾಗಿ ನಿಯಮಿಸುವದೆಲ್ಲಾ ಸರ್ವೇಶ್ವರನಿಗೆ ಲೀಲಾರೂಪ ಪ್ರಯೋಜನವು. ಈ ಲೀಲಾರೂಪ ಪ್ರಯೋಜನದಿಂದ ಆನಂದಿಸುವನಾದುದರಿಂದ ಆತನು ಭೋಕ್ತೃತ್ವವನ್ನು ಪಡೆದನು ಎಂಬರ್ಥವು. ಆತನು ಭಾಗವತರನ್ನು ಹೀಗೆ ನಿಯಮಿಸುವದರಿಂದ ಆತನ ಈಶ್ವರತ್ವವೂ ಪ್ರಕಟಿಸಲ್ಪಟ್ಟಿತು. ಪರಮಾತ್ಮನು **ವ್ಯಾಪನಾದ್ಭರಣಾತ್ಸ್ವಾಮ್ಯಾದನ್ಯಃ ಪಂಚದಶೋದಿತಃ"** (ಗೀತಾರ್ಥ ಸಗ್ರಂಹ,೧೯) ಎಂದು ೧೫ನೇ ಅಧ್ಯಾಯದ ಅರ್ಥಾನುಸಾರವಾಗಿ ಚಿದಚಿತ್ತುಗಳನ್ನು ವ್ಯಾಪಿಸಿ ಭರಣಮಾಡಿ ಸ್ವಾಮಿಯಾಗಿ ನಿಯಾಮಕನಾಗಿರುವದರಿಂದ ಅವರುಗಳಿಗಿಂತ ವಿಲಕ್ಷಣನಾಗಿ ಬೇರೆಯಾಗಿ ಈಶ್ವರನೆಂದು ಹೇಳಲ್ಪಟ್ಟಿರುವನು. ಹಾಗೆಯೇ ಇನ್ನೊಂದು ಕಡೆಯಲ್ಲೂ **"ಯೋ ಲೋಕತ್ರಯ ಮಾವಿಶ್ಯಬಿಭರ್ತ್ಯವ್ಯಯ ಈಶ್ವರಃ"** ಎಂದಿರುವದರಿಂದ ಈಶ್ವರತ್ವಕ್ಕೆ ಮೂರು ಲೋಕವನ್ನೂ ವ್ಯಾಪಿಸೋಣ ಭರಿಸೋಣ ನಿಯಮಿಸೋಣಗಳು ಲಕ್ಷಣಗಳೆಂದು ತೋರಿ ಬರುತ್ತವೆ. ಈಶ್ವರತ್ವಕ್ಕೆ ಸ್ವಂ ಎಂದರೆ ಸ್ವತ್ತೂ ಮತ್ತು ಅದನ್ನು ನಿಯಮಿಸುವ ಶಕ್ತಿಯೂ ಆವಶ್ಯಕವು; **ಸ್ವತ್ವಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿಸ್ಥಿತಂ,** ಜೀವಾತ್ಮರೆಲ್ಲಾ ಪರಬ್ರಹ್ಮನ ಸ್ವತ್ತು, ಅವರನ್ನು ನಿಯಮಿಸುವ ಸ್ವಾಮಿತ್ವವು ಪರಬ್ರಹ್ಮನಲ್ಲಿ ನಿಂತಿತು ಎಂಬ ವಾಕ್ಯವೂ ಸಹ ಮೇಲಿನಭಿಪ್ರಾಯವನ್ನೇ ಸೂಚಿಸುತ್ತದೆ.

ಹೀಗೆ ಸರ್ವೇಶ್ವರನ ಸಙ್ಕಲ್ಪದಿಂದಲೇ ಭಾಗವತರುಗಳಾದ ತಾವು ಪರಸ್ಪರ ಶೇಷಶೇಷಿ ಭಾವಗಳನ್ನು ಹೊಂದಿದುದು, ಹಾಗೆ ಸಙ್ಕಲ್ಪಿಸುವದು ಸರ್ವೇಶ್ವರನಿಗೆ ಲೀಲಾರೂಪ ಭೋಕ್ತೃತ್ವವು, ಎಂಬ ಜ್ಞಾನವೇ ಪುರುಷಾರ್ಥಕಾಷ್ಠೆಯನ್ನುಂಟುಮಾಡತಕ್ಕದ್ದೆಂದು ತಿಳಿಸುತ್ತಾರೆ.

ಇಪ್ಪ್ರಕಾರತ್ತಾಲೆ - ಈ ರೀತಿಯಲ್ಲಿ ಎಂದರೆ ಮೇಲೆ ಉಪಪಾದಿಸಿದ ರೀತಿಯಲ್ಲಿ, **ತಙ್ಗಳುಕ್ಕು** - ಭಾಗವತೋತ್ತಮರುಗಳಾದ ತಮಗೆ **ವನ್ದ** - ಪ್ರಾಪ್ತವಾದ **ಶೇಷತ್ವ ಶೇಷಿತ್ವಾದಿಗಳೆಲ್ಲಾಂ** - ಪರಸ್ಪರ ಶೇಷ ಶೇಷಿ ಭಾವಗಳೇ ಮೊದಲಾದವುಗಳೆಲ್ಲಾ ಇಲ್ಲಿ ಆದಿಪದದಿಂದ, ಅವರುಗಳ ಸ್ತೋತ್ರ, ಆರಾಧನ, ಕೈಙ್ಕ

ಇಪ್ಪ್ರಕಾರತ್ತಾಲೆ ತಜ್ಜ್ಞರ್ಕ್ಕು ವನ್ನ ಶೇಷತ್ವ ಶೇಷಿತ್ವಾದಿಗಳೆಲ್ಲಾಮ್ ಈಶ್ವರನುಡೈಯ ಭೋಕ್ತೃತ್ವತ್ತುಕ್ಕು ಶೇಷಮೆನ್ರು ತೆಳಿಗೈಯಾಲೇ ಇರುವರುಕ್ಕುಮ್ ಕೋದತ್ತ ಪುರುಷಾರ್ಥಕಾಷ್ಠೈ ಉಂಡಾಕಿರದು.

ಪ್ರಪನ್ನಾನಾಂ ಪರಮೈಕಾನ್ತಿ ಪ್ರಸಾದ ಏವಾ ಪೇಕ್ಷಣೀಯೋ
ನಾನ್ಯ ಇತಿ ನಿಗಮಯತಿ

ಇಪ್ಪಡಿ ನಿಷ್ಕಿತಾರ್ಥರಾಯ್ ಸಾರವಿತ್ತುಕ್ಕಳಾನ ಕೃತಕೃತ್ಯರುಕ್ಕು,

ರ್ರುವೇ ಮೊದಲಾದವುಗಳು ಹೇಳಲ್ಪಟ್ಟವು. **ಈಶ್ವರನುಡೈಯ** - ಸರ್ವೇಶ್ವರನ **ಭೋಕ್ತೃತ್ವತ್ತುಕ್ಕು** - ಲೀಲಾರಸಾನಂದರೂಪ ಭೋಕ್ತೃತ್ವಕ್ಕೆ. **ಶೇಷಮೆನ್ರು** - ಅಧೀನವಾದುದೆಂದು, **ತೆಳಿಗೈಯಾಲೆ** - ತಿಳಿಯುವದರಿಂದ. **ಇರುವರುಕ್ಕುಮ್** - ಇಬ್ಬರು ಭಾಗವತರುಗಳಿಗೂ, **ಕೋದತ್ತ** - ಕೋದೆಂದರೆ ನಿಸ್ಸಾರವಾದ ಭಾಗವು, ಅತ್ತವೆಂದರೆ ಇಲ್ಲದ, ಆದುದರಿಂದ ದೋಷವಿಲ್ಲದ. ನಿರ್ದುಷ್ಟವಾದ. **ಪುರುಷಾರ್ಥಕಾಷ್ಠೈ** - ಪುರುಷಾರ್ಥದ ಆಚೆ ದಡವು ಎಂದರೆ ಪುರುಷಾರ್ಥದ ಉತ್ಕೃಷ್ಟಭಾವವು, **ಉಂಡಾಗಿರದು** - ಉಂಟಾಗುತ್ತದೆ. ಈಶ್ವರಸಙ್ಕಲ್ಪಾನುಸಾರವಾಗಿ ತಾವುಗಳು ಪರಸ್ಪರ ಶೇಷಶೇಷಿಗಳಾಗಿ ಕೈಙ್ಕರ್ಯವನ್ನೆಸಗುವದೂ ಅದನ್ನು ಪರಿಗ್ರಹಿಸುವದೂ, ಇವುಗಳಿಂದ ಸರ್ವೇಶ್ವರನು ಆನಂದಿಸುವನೆಂಬ ಜ್ಞಾನವನ್ನು ಹೊಂದುವದೂ, ಎಂಬೀ ಅಧಿಕಾರದ ಮುಖ್ಯಾಭಿಪ್ರಾಯವನ್ನು ಈ ಮುಂದಿನ ವಾಕ್ಯದಮೂಲಕ ಉಪದೇಶಿಸಿರುತ್ತಾರೆ.

ಪ್ರಪನ್ನರುಗಳಿಗೆ ಪರಮೈಕಾಂತಿಗಳ ಪ್ರಸಾದವೇ ಮುಖ್ಯವಾಗಿ ಬೇಕಾದುದೇ ವಿನಾ ಬೇರೆಯಲ್ಲವೆಂದು ಅಧಿಕಾರಪೂರ್ತಿಯು

ಸಾಙ್ಗಭರನ್ಯಾಸವನ್ನನುಷ್ಠಿಸಿ ಕೃತಕೃತ್ಯನಾದವನು ಭಾಗವತ ಶೇಷತ್ವ ಕೈಙ್ಕರ್ಯಗಳೇ ಪುರುಷಾರ್ಥ ಪರಾಕಾಷ್ಠೆಯೆಂದು ಚೆನ್ನಾಗಿ ಅರಿತವನಾಗಿ, ಅವುಗಳನ್ನನುಷ್ಠಿಸುತ್ತಾ ಏನೊಂದೂ ಪ್ರತಿಫಲವನ್ನಪೇಕ್ಷಿಸದೆ ಅಂಥಾ ಭಾಗವತೋತ್ತಮನಾದ ಪರಮೈಕಾನ್ತಿಯ ಕೃಪೆಗೆ ಪಾತ್ರನಾಗುವದೇ ತನಗೆ ಮುಖ್ಯವು, ಇನ್ನೇನೂ ತನಗೆ ಬೇಕಾಗಿಲ್ಲವೆಂದು ತಿಳಿಯತಕ್ಕದ್ದೆಂದುಪದೇಶಿಸಿ ಅಧಿಕಾರವನ್ನು ಮುಗಿಸುತ್ತಾರೆ:—

ಅಪರಾಧರುಚಿಯುಮುನ್, ಅತಿಶಙ್ಕೆಯುಮುನ್ ಅನ್ಯದೇವತಾ ಸ್ಪರ್ಶಮುಮುನ್, ಆತ್ಮಾಧೀನಭೋಗಮುಮುನ್, ಆತ್ಮಾರ್ಥ ಭೋಗಮುಮುನಾಗಿರ ಪಳುದಿಲ್ಲಾದ ಪರಮೈಕಾಂತಿಗಳುಡೈಯ ಪ್ರಸಾದಮೇ ಎಪ್ಪೋದುಮ್ ಸ್ವಯಂ ಪ್ರಯೋಜನಮಾಗ, ಅಪೇಕ್ಷಣೀಯಮ್.

ಇಪ್ಪಡಿ - ಈ ಅಧಿಕಾರದಲ್ಲಿ ಉಪಪಾದಿಸಿದ ರೀತಿಯಲ್ಲಿ, **ನಿಶ್ಚಿತಾರ್ಥರಾಯ್** - ನಿಷ್ಕರ್ಷೆಯುಳ್ಳ ಅಭಿಪ್ರಾಯವನ್ನು ಹೊಂದಿದವರಾಗಿ, ನಿಷ್ಕರ್ಷಾಭಿಪ್ರಾಯವು ಯಾವುದೆಂದರೆ, ಭಾಗವತ ಶೇಷತ್ವ ಕೈಂಕರ್ಯಗಳೇ ಪುರುಷಾರ್ಥಕಾಷ್ಠೆ ಎಂದರಿತವರಾಗಿ, **ಸಾರವಿತ್ತುಕ್ಕಳಾನ** - ಆದುದರಿಂದ ಸಾರವಾದುದು ಎಂದರೆ ಸರ್ವಶ್ರೇಷ್ಠವಾದುದು ಯಾವುದೆಂದು ಚನ್ನಾಗಿ ತಿಳಿದವರಾದ, **ಕೃತಕೃತ್ಯರುಕ್ಕು** - ಭರನ್ಯಾಸಮಾಡಿ ಕೃತಕೃತ್ಯರಾದ ಪ್ರಪನ್ನರಿಗೆ, ಯಾವುದು ತುಂಬಾ ಅಪೇಕ್ಷಿತವಾದುದು ಎಂದರೆ ಹೇಳುತ್ತಾರೆ ; **ಪರಮೈಕಾಂತಿಗಳುಡೈಯ** - ಐಹಿಕದಲ್ಲಿ ಸಂಪೂರ್ಣ ವೈರಾಗ್ಯವುಳ್ಳವರಾಗಿ ಜ್ಞಾನಭಕ್ತಿಗಳನ್ನಲ್ಲದೆ ಬೇರೆ ಯಾವುದನ್ನೂ ಅರ್ಥಿಸದ ಮಹಾ ಭಾಗವತೋತ್ತಮರುಗಳ, **ಪ್ರಸಾದಮೇ** – ಪ್ರಸನ್ನತೆಯೋ, ಕೃಪೆಯೋ, **ಎಪ್ಪೋದುಮ್** - ಯಾವಾಗಲೂ, **ಸ್ವಯಂ ಪ್ರಯೋಜನಮಾಗ** – ಆ ಪ್ರಸನ್ನತೆಯೇ ಸ್ವತಃ ಪ್ರಯೋಜನವೇ ವಿನಾ ಅದರಿಂದ ಇನ್ನು ಯಾವ ಪ್ರಯೋಜನವನ್ನೂ ಬಯಸದ ಹಾಗೆ, ಅದೇ ಸಾಧನವಾಗಿ ಇನ್ನು ಯಾವ ಸಾಧ್ಯಾಂಶವನ್ನೂ ಬಯಸದ ಹಾಗೆ ಎಂಬ ಭಾವವು. **ಅಪೇಕ್ಷಣೀಯಂ** – ಅಪೇಕ್ಷಿಸತಕ್ಕದ್ದು. ಆ ಪರಮೈಕಾಂತಿಗಳೆಂತಾವರಾಗಿರಬೇಕೆಂದರೆ ಹೇಳುತ್ತಾರೆ. ಯಾವಯಾವ ದೋಷಗಳಿರಕೂಡದೆಂದರೆ ತಿಳಿಸುತ್ತಾರೆ:— **ಅಪರಾಧರುಚಿಯುಮುನ್** - ಶಾಸ್ತ್ರಗಳಲ್ಲಿ ವಿಧಿ ನಿಷೇಧ ವಾಕ್ಯಗಳಿಗೆ ವಿರುದ್ಧವಾಗಿ ನಡೆಯುವುದೇ ಅಪರಾಧವು, ಅಂತಹ ಅಪರಾಧಗಳಲ್ಲಿ ರುಚಿಯೂ, **ಅತಿಶಙ್ಕೆಯುಮುನ್** – ಶಾಸ್ತ್ರದಲ್ಲಿ ಶ್ರದ್ಧೆಯಿಲ್ಲದೆ ಸಂದೇಹವೂ, **ಅನ್ಯದೇವತಾ ಸ್ಪರ್ಶಮುಮುನ್** - ಐಹಿಕ ಭೋಗಗಳಿಗಾಗಿ ಬ್ರಹ್ಮರುದ್ರಾದಿಗಳನ್ನಾರಾಧಿಸಿದ ಸಂಬಂಧವೂ, **ಆತ್ಮಾಧೀನ ಭೋಗಮುಮುನ್** - ಸುಖದುಃಖರೂಪ ಸರ್ವ ಭೋಗಗಳೂ ತನಗೆ ಅಧೀನವಾದವು ಎಂಬ ಭ್ರಮೆಯೂ, **ಆತ್ಮಾರ್ಥಭೋಗಮುಮುನ್** - ಸಮಸ್ತ ಭೋಗಗಳೂ ತನ್ನ ಪ್ರಯೋಜನಕ್ಕಾಗಿಯೇ ಎಂಬ ಭ್ರಮೆಯೂ, **ಆಗಿರಪಳುದಿಲ್ಲಾದ** - ಆಗಿರುವ ಈ ದೋಷಗಳಿಲ್ಲದ, ಪರಮೈಕಾನ್ತಿಯು. ಇಲ್ಲಿ ಪರಮೈಕಾನ್ತಿಗೆ ನಾಲ್ಕು ದೋಷಗಳು ಮುಖ್ಯವಾಗಿರಕೂಡ

- ವೇದ ಮುರಿನ್ದ ಭಗವರ್ ವಿಯಕ್ಕ ವಿಳಙ್ಗುಯು ಶೀರ್
ನಾಥರ್ ವಗುತ್ತವಗೈ ಪೆರುನಾಮುವನ್ನಲ್ಲಡಿಯಾರ್ ।

ವೆಂದು ಹೇಳಲ್ಪಟ್ಟಿತು ಪ್ರಥಮತಃ ಅಪರಾಧರುಚಿಯಿರಕೂಡದು, ಶಾಸ್ತ್ರದಲ್ಲಿನ ವಿಧಿ ನಿಷೇಧವಾಕ್ಯಗಳಿಗನುಸಾರವಾದ ಪ್ರವೃತ್ತಿಯಿರಬೇಕು, ಇದರಿಂದ ಮುಂದಿನಧಿಕಾರವಾದ ಶಾಸ್ತ್ರೀಯ ನಿಯಮನಾಧಿಕಾರವು ಸೂಚಿಸಲ್ಪಟ್ಟಿತು. ಎರಡನೆಯದು ಅನ್ಯದೇವತಾ ಸ್ಪರ್ಶವು ಕೂಡದು, ಮೂರನೆಯದು, ತನ್ನ ಸುಖ ದುಃಖಾದಿಗಳೆಲ್ಲಾ ತನಗಧೀನವೆಂಬ, ಮತ್ತು ಏನಾದರೂ ತನಗೆ ಸಿದ್ಧಿಸಿದರೆ, ತಾನೇ ಸ್ವತಂತ್ರನಾಗಿ ಸಾಧಿಸಿದೆನೆಂಬ ಭ್ರಮೆಯು ಕೂಡದು ನಾಲ್ಕನೆಯದು ಎಲ್ಲವೂ ತನ್ನ ಭೋಗಕ್ಕಾಗಿಯೇ ಇರುವವೆಂಬ ಭ್ರಮೆಯೂ ಕೂಡದು. ಇಂತಹ ದೋಷಗಳೊಂದೂ ಇಲ್ಲದೆ, ಐಹಿಕಗಳಲ್ಲಿ ಪರಮ ವಿರಕ್ತಿ ಭಾವವನ್ನು ಹೊಂದಿರುವ ಪರಮೈಕಾಂತಿಗಳಿಗೆ ಶೇಷಭೂತನಾಗಿ ಕೈಂಕರ್ಯಗಳನ್ನೆಸಗುವದರಿಂದ ಪುರುಷಾರ್ಥ ಕಾಷ್ಠೆಯನ್ನು ಹೊಂದಿ, ಅವರುಗಳನ್ನು ಪ್ರಸನ್ನರಾಗಿಮಾಡಿಕೊಳ್ಳುವದೇ ಕೃತ ಕೃತ್ಯನಾದ ಮಹಾಭಾಗವತನಿಗೆ ಮುಖ್ಯವಾಗಿ ಬೇಕಾದುದು ಎಂದು ಹೇಳಿ ಅಧಿಕಾರಾರ್ಥವನ್ನು ಮುಗಿಸುತ್ತಾರೆ.

ಅವತಾರಿಕೆ. ಭಾಗವತರಿಗೆ ಶೇಷತ್ವವೂ ಕೈಂಕರ್ಯವೂ ಪುರುಷಾರ್ಥ ಕಾಷ್ಠೆ ಎಂದು ಹೇಳಲ್ಪಟ್ಟಿತು. ಪುತ್ರನಾಗಲಿ ಶಿಷ್ಯನಾಗಲಿ ಕೀಳುಜಾತಿಯವನಾಗಲಿ ಅಥವಾ ಶೂದ್ರನಾಗಲಿ ಭಾಗವತನಾಗಿದ್ದರೆ, ಅವರುಗಳಿಗೆಲ್ಲಾ ಶೇಷಭೂತನಾಗಿ ಕೈಂಕರ್ಯಮಾಡತಕ್ಕದ್ದೋ ಇಲ್ಲವೋ ಎಂಬ ಸಂದೇಹದಲ್ಲಿ ಈ ಪ್ರಪನ್ನನು ಶಾಸ್ತ್ರ ಮರ್ಯಾದೆಯ ರೀತ್ಯಾ ನಡೆಸತಕ್ಕದ್ದಾದುದರಿಂದ ಅಂತವರಿಗೆ ಶೇಷಭಾವವು ಶಾಸ್ತ್ರಸಮ್ಮತವಲ್ಲದುದರಿಂದ ಆಚಾರ್ಯಾದಿ ಮಹಾಭಾಗವತರುಗಳಿಗೆ ಮಾತ್ರವೇ ಶೇಷತ್ವವು ವಿಹಿತವಾದುದೆಂದು ತಿಳಿಸುತ್ತಾರೆ :—

ಅರ್ಥ, ವೇದಮುರಿನ್ದ ಭಗವರ್ - ಅನುಷ್ಠಾನಪರ್ಯನ್ತವಾಗಿ ವೇದಗಳನ್ನು ಅರ್ಥದೊಂದಿಗೆ ತಿಳಿದ ಒಳ್ಳೇ ಜ್ಞಾನಿಗಳಾದ ಭಾಗವತರುಗಳು, **ವಿಯಕ್ಕ**-ಆಶ್ಚರ್ಯಪಡುವ ಹಾಗೆ, **ವಿಳಙ್ಗುಯು** - ಪ್ರಕಾಶಿಸುತ್ತಿರುವ, **ಶೀರ್**-ಕಲ್ಯಾಣಗುಣಮಹೋದಧಿಯಾದ, **ನಾಥರ್** - ನಮಗೆ ಸ್ವತಂತ್ರ ಸ್ವಾಮಿಯು, **ವಗುತ್ತವಗೈ** - ಸ್ವೇಚ್ಛೆಯಿಂದ ವಿಧಿಸಿದ ಅಥವಾ ವಿನಿಯೋಗಿಸಿದ ಮಾರ್ಗವು ಅದು ಯಾವುದೆಂದರೆ ಭಾಗವತ ಶೇಷತ್ವಸಂಪತ್ತು, ಅದನ್ನು, **ಪೆರುನಾಮು**-ಕೃಪೆಯಾಹೊಂದಿದ ಪ್ರಪನ್ನರಾದ ನಾವು, **ಅವರ್ನಲ್ಲಡಿಯಾರ್ಕ್ಕು**-ಆ ಕೃಪಾಸಾಗರನ ಹೇಯಗುಣಗಂಧವಿಲ್ಲದೆ, ಮೇಲೆ ಹೇಳಲ್ಪಟ್ಟ ಅಪರಾಧ ರುಚ್ಯಾದಿ ದೋಷರಹಿತ

ಕ್ಕಾತರಮ್ಮಿಕ್ಕ ವಡಿಮ್ಮೈ ಯಿಶೈನ್ದಳಿಯಾ ಮರೈನೂಲ್
ನೀತಿ ನಿರುತ್ತ ನಿಲೈ ಕುಲೈಯಾವಗೈ ನಿನ್ರನಮೇ ॥ ೨೩ ॥

ರಾಗಿ ಕಲ್ಯಾಣಗುಣಯುಕ್ತರಾದ ಅವನ ದಾಸರಾದವರಿಗೆ, **ಆದರಮ್ಮಿಕ್ಕ** - ಅವರಲ್ಲಿರುವ ಗುಣಾಧಿಕ್ಯದಿಂದ ಉಂಟಾದ ಆದರವು ಹೆಚ್ಚಾಗಿರುವ ಹಾಗೆ, **ಅಡಿಮ್ಮೈ** - ಕೈಂಕರ್ಯವನ್ನು, **ಇಶೈನ್ದು** - ಅಂಗೀಕರಿಸಿ, **ಅಳಿಯಾ** - ನಾಶರಹಿತವಾದ ಎಂದರೆ ಅನಾದಿಯಾಗಿ ನಿತ್ಯವಾದ **ಮರೈನೂಲ್** - ವೇದಶಾಸ್ತ್ರದ, **ನೀತಿನಿರುತ್ತ ನಿಲೈ** - ಉಪದೇಶರೂಪ ನೀತಿಯಿಂದ ವ್ಯವಸ್ಥಿತವಾದ ಸ್ಥಿತಿಯು, ಎಂದರೆ ವರ್ಣಾಶ್ರಮೋಚಿತವಾದ ಧರ್ಮವನ್ನನುಸರಿಸಿರೋಣವು, **ಕುಲೈಯಾವಗೈ** - ನಾಶವಾಗದಿರುವ ಮಾರ್ಗದಲ್ಲಿ, ರೀತಿಯಲ್ಲಿ, **ನಿನ್ರನಮೇ** - ನಿಂತವರಾದೆವಲ್ಲವೇ ? ಆದುದರಿಂದ ತಾವು ಹೀಗೆ ಸರ್ವೇಶ್ವರಕೃಪೆಯನ್ನು ಹೊಂದಿದವರಾದ ಪ್ರಯುಕ್ತ ಮಹಾಭಾಗ್ಯಶಾಲಿಗಳೆಂಬ ಭಾವವು.

ತಾತ್ಪರ್ಯ - ಸರ್ವೇಶ್ವರನು ಪರಮಕೃಪೆಯಿಂದ ತನ್ನ ಸುಸಂಕಲ್ಪದಿಂದ **ನಗುತ್ತವಗೈಯಾದ** ಭಾಗವತ ಶೇಷತ್ವದ ಮೂಲಕ ಪುರುಷಾರ್ಥ ಕಾಷ್ಠಾರೂಪ ಸಂಪತ್ತನ್ನು **ಹೊಂದಿದೆವು**. **ಇಂತಹ** ಪುರುಷಾರ್ಥ ಕಾಷ್ಠಾರೂಪ ಸಂಪತ್ತನ್ನು ದಯಪಾಲಿಸಿದವನು **ವಿಳಂಗಿಯ ಶೀರ್‌ನಾಥ**-ಪ್ರಕಾಶಮಾನಗಳಾದ ಕಲ್ಯಾಣಗುಣಗಳಿಂದೊಪ್ಪುವ ಸರ್ವೇಶ್ವರನು. ಈ ಸಂಪತ್ತನ್ನು ಕಂಡು. **ವೇದಮುರಿನ್ದ ಭಗವರ್ ವಿಯಕ್ಕ**, ವೇದಗಳನ್ನು ಸುಮ್ಮನೆ ಕತ್ತೆಯು ಭಾರವನ್ನು **ಹೊತ್ತ** ಹಾಗಲ್ಲದೆ, ಅರ್ಥಸಹಿತವಾಗಿ ಅಧ್ಯಯನಮಾಡಿ ಅದರ ಸಾರಾಂಶವನ್ನು ಗ್ರಹಿಸಿದ ಮಹನೀಯರು ಆಶ್ಚರ್ಯಪಡುವರು ಎಂದು ಹೇಳಲ್ಪಟ್ಟಿತು ಆಶ್ಚರ್ಯವೇತಕ್ಕೆಂದರೆ ವೇದಗಳು ಅಪಾರವಾಗಿ, ಸಾರಾಂಶವು ತುಂಬಾ ಗುಪ್ತವಾಗಿದ್ದರೂ ಈ ಕೃತಕೃತ್ಯರಾದ ಭಾಗವತೋತ್ತಮರುಗಳು ಅದನ್ನು ಕಂಡು ಹಿಡಿದು ತದನುಗುಣವಾಗಿ ಅನುಷ್ಠಾನವುಳ್ಳವರಾಗಿ ಭಾಗವತ ಕೈಂಕರ್ಯರೂಪ ಭಾಗ್ಯೋದಯವನ್ನು ಉಳ್ಳವರಾದರಲ್ಲಾ ಎಂಬದಾಗಿ ವೇದಾರ್ಥ ನಿರ್ಣಯಮಾಡಿದ್ದ ಭಾಗವತರು ಆಶ್ಚರ್ಯಪಡಬಹುದು ಎಂಬ ಭಾವವು. ಅಲ್ಪ ಶ್ರುತರಾಗ ಅಪಾರ್ಥ ಹೇಳಿ ವೇದಗಳು ಈ ಅಪಾರ್ಥಗಳಿಗಾಗಿ ನಡುಗುವ ಹಾಗೆ ಮಾಡಿದವರಲ್ಲವು ನಮ್ಮ ಮಹಾಭಾಗವತರುಗಳಾದರೋ ಇತರರ ಹಾಗೆ ವೇದಗಳಿಗೆ ಪರಸ್ಪರ ವಿರುದ್ಧ ಭಾವ ಬರುವ ಅರ್ಥವನ್ನು ಹೇಳದೆ ಸರ್ವಸಮಂಜಸಾರ್ಥಗಳನ್ನು ಹೇಳಿ ಅವುಗಳ ಸಾರಾಂಶವನ್ನು ಗ್ರಹಿಸಿದವರೆಂದು ವೇದಮುರಿನ್ದ ಭಗವರ್ ಎಂದು ಪ್ರಯೋಗಿಸಿರುತ್ತಾರೆ.

ವಿಳಂಗೀಯ ಶೀರ್ ನಾಥ್ರ, ಸರ್ವೇಶ್ವರನೇನೋ ನಮಗೆ ಸ್ವಾಮಿಯು, ನಾವು ಆವನಿಗೆ ದಾಸರು, ನಮ್ಮನ್ನಾತನು ತನ್ನ ಇಷ್ಟಾನುಸಾರ ವಿನಿಯೋಗಿಸಬಹುದು. ಆದರೆ ಹೀಗೆ ಇಹಲೋಕದಲ್ಲಿರುವವರಿಗೆ ಅಧೀನರನ್ನಾಗಿರುವಹಾಗೆ ಮಾಡಿ ಅವರಿಗೆ ಕೈಂಕರ್ಯವನ್ನೆಸಗುವ ಹಾಗೆ ನಿಯಮಿಸಿರುತ್ತಾನೆ. ಇದನ್ನು ತಿಳಿಸುವದಕ್ಕಾಗಿಯೇ **ವಗುತ್ತವಗ್ಗೆ** ಎಂಬ ಪ್ರಯೋಗವು. ಹಾಗೆ ನಮ್ಮನ್ನು ನಿಯೋಗಿಸಬಹುದೋ ಎಂದರೆ ದುಷ್ಟನ ನಿಯಮವು, ರಾವಣನು ಮಾರೀಚನನ್ನು ವಿನಿಯೋಗಿಸಿದ ರೀತಿಯೇ ನಾಶಕ್ಕೆ ಕಾರಣವು. ಆದರೆ ಸರ್ವೇಶ್ವರನಾದರೋ ಕಲ್ಯಾಣ ಗುಣ ಮಹೋದಧಿಯು, ಆದುದರಿಂದ ಆತನು **ವಗುತ್ತವಗ್ಗೆ** ಪರಮನಿಶ್ರೇಯಸಕ್ಕೂ ಆನಂದಕ್ಕೂ ಕಾರಣಭೂತನಾಗುವದರಲ್ಲಿ ಸಂದೇಹವಿಲ್ಲವೆಂದು ತಿಳಿಸುವದಕ್ಕಾಗಿ **ವಿಳಂಗಿಯ ಶೀರ್ ನಾಥ್ರ** ಎಂದು ಪ್ರಯೋಗಿಸಿರುತ್ತಾರೆ. ಇಂತಹ ಭಾಗವತ ಶೇಷತ್ವವೇ ಪುರುಷಾರ್ಥ ಕಾಷ್ಠೆ ಎಂಬುವದು **ಪೆರನಾಮ್** ಎಂಬ ಪ್ರಯೋಗದಿಂದ ಭಾಗ್ಯೋದಯ ಪ್ರಾಪ್ತಿಯು ಲಭಿಸಿದ ಹಾಗೆ ತೋರಿಬರುತ್ತದೆ. ಯಾವಾಗ ಭಾಗವತ ಶೇಷತ್ವವೇರ್ಪಟ್ಟಿತೋ ಆಗ ತತ್ಕಾರ್ಯವಾದ ಭಾಗವತ ಕೈಂಕರ್ಯವನ್ನು ಅಂಗೀಕರಿಸುವದೇ ತಮಗೆ ಸ್ವರೂಪವೆಂದೂ ಅದನ್ನು ತುಂಬಾ ಆದರಾತಿಶಯದಿಂದ ನಡಿಸತಕ್ಕದ್ದೆಂದೂ ತಿಳಿಸುವದಕ್ಕಾಗಿ **ಆದರ ಮೀಕ್ಕ ವಡಿಮ್ಮೆ** ಯುಕ್ಕೈನ್ನು ಎಂದು ಪ್ರಯೋಗಿಸಿರುತ್ತಾರೆ. ಹಾಗೆ ಭಾಗವತ ಕೈಂಕರ್ಯಾದಿಗಳನ್ನಂಗೀಕರಿಸುವದರಲ್ಲಿ ವೇದಪ್ರೋಕ್ತವಾದ ವರ್ಣಾಶ್ರಮ ಧರ್ಮಗಳನ್ನನುಸರಿಸಿ ನಡಿಸುವ ನಿಲೈಯನ್ನು ಆಚಾರ್ಯ ಮುಖೇನ ಸಂಪಾದಿಸಿಕೊಂಡ ಭಾಗ್ಯೋದಯವುಳ್ಳವರೆಂದು ಹೇಳಿಕೊಳ್ಳುತ್ತಾರೆ.

ಹಿಂದೆ ಉತ್ತರಕೃತ್ಯಾಧಿಕಾರದಲ್ಲಿ ಹೇಳಿದ ಹಾಗೆ ಸಾಧ್ಯಭರನ್ಯಾಸವನ್ನನುಷ್ಠಿಸಿದ ಪ್ರಪನ್ನನು ಕೃತಕೃತ್ಯನಾಗಿ ಉಪಾಯರೂಪದಿಂದಾಗಲಿ ಅದಕ್ಕೆ ಅಂಗವಾಗಿಯಾಗಲಿ ಏನೊಂದನ್ನೂ ಮಾಡುವದರಾವಶ್ಯಕತೆಯಿಲ್ಲದಿದ್ದರೂ ಆಯಾ ಪ್ರಪನ್ನನ ವರ್ಣಾಶ್ರಮೋಚಿತವಾಗಿ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಧರ್ಮಗಳನುಷ್ಠಾನವು ಅತ್ಯಾವಶ್ಯಕವು. ಇತರರಭಿಪ್ರಾಯಪಡುವ ಹಾಗೆ ಪರಿತ್ಯಾಗಮಾಡತಕ್ಕವುಗಳಲ್ಲವು, ಎಂಬುವದನ್ನು "**ಮರೈನೂಲ್ ನೀತಿನಿರುತ್ತ ನಿಲೈ ಕುಲಯಾವಗ್ಗೆ**" ಎಂಬುವದರಿಂದ ವ್ಯಕ್ತಪಡಿಸುತ್ತಾರೆ. ಈ ವಿಷಯವು ತುಂಬಾ ಮುಖ್ಯವಾಗಿ ಇತರರಿಗೆ ಈ ವಿಷಯದಲ್ಲಿರುವ ಶಂಕೆಗಳನ್ನೆಲ್ಲಾ ನಿವರ್ತಿಸುವದು ಈ ಪ್ರಯೋಗದಿಂದ ಸೂಚಿಸಲ್ಪಟ್ಟಿರುತ್ತದೆ. ಅದೂ ಅಲ್ಲದೆ **ಮರೈನೂಲ್ ನೀತಿ ನಿಲೈ ಕುಲಯಾವಗ್ಗೆ** ಎಂದು ಹೇಳಿರುವದರಿಂದ ಇತರ ವರ್ಣದವರು ಭಾಗವತೋತ್ತಮರಾಗಿದ್ದರೆ ಅಂಥಾವರಿಗೆ ಬ್ರಾಹ್ಮಣನು ಶೇಷತ್ವವನ್ನು ವಹಿಸಬ

> **ನಾಥೇ ನಸ್ತೃಣಮನ್ಯದನ್ಯದಪಿ ವಾ ತನ್ನಾಭಿ ನಾಳೀಕಿನೀ**
> **ನಾಳೀಕ ಸ್ಪೃಹಣೀಯ ಸೌರಭಮುಚಾ ವಾಚಾ ನ ಯಾಚಾಮಹೇ ।**

ಹುದೇ? ಮತ್ತು ಬ್ರಾಹ್ಮಣೇತರನು ಶೇಷಿತ್ವವನ್ನು ವಹಿಸಬಹುದೇ? ಇತ್ಯಾದಿ ಶಂಕೆಗಳೂ ಕೂಡ ನಿರಸ್ತವಾದವು. ಪುತ್ರಾದಿಗಳು ಭಾಗವತರಾದರೂ ವಂದನಾದಿಗಳು ಶಾಸ್ತ್ರವಿರುದ್ಧವಾದುದರಿಂದ ಕೂಡದೆಂಬುದೂ ಸೂಚಿಸಲ್ಪಟ್ಟಿತು. ಇವು ಶಾಸ್ತ್ರಮರ್ಯಾದೆಗೆ ವಿರುದ್ಧವಾದವೆಂಬಭಿಪ್ರಾಯವೂ ತೋರಿಬರುತ್ತದೆ. ಈ ಶಂಕೆಗಳೂ ಮುಂದೆ ಉಪಪಾದಿಸಲ್ಪಟ್ಟು ನಿರಸನ ಮಾಡಲ್ಪಡುತ್ತವೆ. ಹಾಗೆ ಭಾಗವತ ಶೇಷತ್ವ ಕೈಂಕರ್ಯಗಳನ್ನವಲಂಬಿಸಿದುದರಿಂದುಂಟಾದ ಭಾಗವತ ಮುಖೋಲ್ಲಾಸವೇ ತಮಗೆ ತುಂಬಾ ಅಪೇಕ್ಷಿತಾಂಶವೆಂಬುವದೂ ಸಹ ತೋರಿಬರುತ್ತದೆ.

ಅವತಾರಿಕೆ :—ಈ ಅಧಿಕಾರೋಪಪಾದನವನ್ನು **ಪರಮೈಕಾನ್ತಿಗಳುಡೈಯ ಪ್ರಸಾದಮೇ ಎಪ್ಪೋದುಮ್ ಅಪೇಕ್ಷಣೀಯಮ್**, ಎಂದು ಮುಗಿಸುತ್ತಾರೆ. ಅದನ್ನೇ ಸ್ಥಿರೀಕರಿಸಿ ಹೇಳುವದಕ್ಕಾಗಿಯೂ, ಐಹಿಕವು ತೃಣಕ್ಕೆ ಸಮಾನವಾದುದಾಗಿ, ಸ್ವರ್ಗವೂ ಕೂಡ ಅಂಥಾದ್ದೇ ಆಗಿ, ಸ್ವಾತ್ಮಾನುಭವ ಕೈವಲ್ಯವು ತಾದೃಶವಾದುದಾಗಿ ತುಚ್ಛವಾದುದರಿಂದ ಅವುಗಳನ್ನು ತಾವು ಯಾಚಿಸುವದಿಲ್ಲವೆಂದೂ ಕೃತಕೃತ್ಯರಾದುದರಿಂದ ಮೋಕ್ಷವನ್ನೂ ಕೂಡ ಯಾಚಿಸುವದಿಲ್ಲವೆಂದೂ ಶೇಷ ಪರಮೈಕಾಂತಿಗಳ ಪ್ರಸಾದವೇ ತಮಗೆ ಕೇವಲಾಪೇಕ್ಷಿತವಾದುದೆಂದೂ ತಿಳಿಸುವದಕ್ಕಾಗಿ ಈ ಶ್ಲೋಕವನ್ನು ಅನುಗ್ರಹಿಸಿರುತ್ತಾರೆ.

ಅರ್ಥ :— ನಃ - ಸಹಜಶೇಷಭೂತರಾದುದರಿಂದ ಭಾಗವತಶೇಷತ್ವದಮಹಿಮೆಯನ್ನರಿತ ನಮಗೆ, **ನಾಥೇ**-ಸ್ವಾಮಿಯಾದುದರಿಂದ ಹಿತವಾಗೋಣ ಹೇಗೋ ಹಾಗೆ ನಿಯಾಮಕನಾಗಿರುವ ಸರ್ವೇಶ್ವರನಲ್ಲಿ ಎಂದರೆ ಆತನ ಸನ್ನಿಧಿಯಲ್ಲಿ, ತೃಣಂ - ತೃಣಪ್ರಾಯವಾದ ಇಹಲೋಕ ಸ್ವರ್ಗಲೋಕ ಭೋಗಗಳನ್ನೂ, **ಅನ್ಯತ್** - ಅದಕ್ಕಿಂತಲೂ ಸ್ವಲ್ಪ ಮೇಲಾದ ಆತ್ಮಾನುಭವರೂಪ ಕೈವಲ್ಯವನ್ನೂ ಅನ್ಯದಪಿ - ಅದಕ್ಕೂ ಮೇಲಾದ ಮೋಕ್ಷಾನಂದವನ್ನೂ, ಅಪಿ ಶಬ್ದದಿಂದ ಮೋಕ್ಷವು ನಿರುಪಮವಾಗಿ ನಿರತಿಶಯವಾದುದಾದರೂ, ಅದನ್ನೂ ಕೂಡ ಎಂಬರ್ಥವು. ವಾ ಎಂಬ ಪದದಿಂದ ಇವೆಲ್ಲವೂ ಒಟ್ಟಿಗೆ ಸೇರಿರುವದನ್ನಾಗಲಿ, **ತನ್ನಾಭಿನಾಳೀಕಿನೀ ನಾಳೀಕಸ್ಪೃಹಣೀಯ ಸೌರಭಮುಚಾ, ತತ್** - ಆ ಸರ್ವೇಶ್ವರನ, **ನಾಭಿ ನಾಳೀಕಿನೀ**-ನಾಭಿ ಎಂಬ ಕಮಲ ಸರೋವರದಲ್ಲಿನ **ನಾಳೀಕ**-

ಶುದ್ಧಾನಾಂ ತು ಲಭೇಮಹಿ ಸ್ಥಿರಧಿಯಾಂ ಶುದ್ಧಾನ್ತ ಸಿದ್ಧಾಂತಿನಾಂ । ಮುಕ್ತೈಶ್ವರ್ಯದಿನ ಪ್ರಭಾತ ಸಮಯಾ ಸ(ಕ್ತಿಂ)ತ್ತಿಂ ಪ್ರಸತ್ತಿಂ ಮುಹುಃ ॥ ೩೭ ॥

ಕಮಲ ಪುಷ್ಪದಿಂದಲೂ ಕೂಡ, ಸ್ಪೃಹಣೀಯ ಸೌರಭಮುಚಾ - ಅಪೇಕ್ಷಿಸಲ್ಪಡುವ ಪರಿಮಳವನ್ನು ಬೀರುತ್ತಿರುವ, ವಾಚಾ - ವಾಕ್ಕಿನಿಂದ, ನಯಾಚಾಮಹೇ - ಬೇಡುವದಿಲ್ಲವು. ಆ ಕಮಲಪುಷ್ಪದ ಸೌರಭಕ್ಕಿಂತ ತಮ್ಮ ವಾಕ್ಕಿನ ಸೌರಭವು ಉತ್ಕೃಷ್ಟವಾದುದೆಂಬ ಭಾವವು. ಆ ಕಮಲಪುಷ್ಪಕ್ಕೆ ಅನ್ಯದೇವತೆಯಾದ ಚತುರ್ಮುಖನ ಸಂಬಂಧರೂಪದೋಷ ಉಂಟು, ತಮ್ಮ ವಾಕ್ಕಿಗೆ ಅಂತಹ ದೋಷವಿಲ್ಲದುದರಿಂದ ಉತ್ಕೃಷ್ಟತೆಯು. ಅದೂ ಅಲ್ಲದೆ ತಮ್ಮ ವಾಕ್ಕಿಗೆ ಭಾಗವತ ಪರಾಕಾಷ್ಠಾರೂಪ ಪ್ರಾಶಸ್ತ್ಯ ಉಂಟು, ಅದು ಕಮಲಕ್ಕಿಲ್ಲವು. ಈ ಎರಡು ಕಾರಣಗಳಿಂದ ಕಮಲ ಸೌರಭಕ್ಕಿಂತ ವಾಕ್ಸೌರಭವು ಮೇಲಾದುದರಿಂದ ಕಮಲಕ್ಕೆ ಇದರ ಸೌರಭದ ಸ್ಪೃಹಣೀಯತ್ವ ಉಂಟೆಂಬ ಭಾವವು. ಇನ್ನು ಯಾವುದರಪೇಕ್ಷೆಯು ಕೃತಕೃತ್ಯರಾದ ತಮಗೆ ಎಂದರೆ ಉತ್ತರಾರ್ಧದಿಂದ ತಿಳಿಸುತ್ತಾರೆ :—**ಶುದ್ಧಾನಾಂ** – ಹಿಂದೆ ಹೇಳಿದ ಅಪರಾಧರುಚಿ ಮೊದಲಾದ ದೋಷಗಳೊಂದೂ ಯಿಲ್ಲದೆ ಪರಿಶುದ್ಧರಾದ, **ಸ್ಥಿರಧಿಯಾಂ** - ಮಹಾವಿಶ್ವಾಸಕ್ಕೆ ವಿರೋಧಿಯಾದ ಶಂಕಾ ಪಂಚಕಾದಿ ಭ್ರಮೆಗಳೊಂದೂ ಇಲ್ಲದೆ ಸ್ಥಿರವಾದ ಬುದ್ಧಿಯುಳ್ಳ **ಶುದ್ಧಾನ್ತ ಸಿದ್ಧಾನ್ತಿನಾಂ**, ಶುದ್ಧಾನ್ತರೆಂದರೆ ಅಂತಃಪುರ ಸ್ತ್ರೀಯರು, ಅವರುಗಳ ಸಿದ್ಧಾನ್ತವು, ಪಾತಿವ್ರತ್ಯವು, ಭರ್ತೃಪರಾಯಣತ್ವವು, ಅಂತಃಪುರದ ಪತಿವ್ರತಾಶಿರೋಮಣಿಗಳು ಹೇಗೆ ಭರ್ತೃವಿನಲ್ಲೇ ಇಡಲ್ಪಟ್ಟ ಚಿತ್ತವುಳ್ಳವರೋ ಹಾಗಿರುವ ಪರಮೈಕಾಂತಿಗಳ, **ಮುಕ್ತೈಶ್ವರ್ಯದಿನಪ್ರಭಾತ ಸಮಯಾಸತ್ತಿಂ**; **ಮುಕ್ತೈಶ್ವರ್ಯ** - ಮುಕ್ತೈಶ್ವರ್ಯವಾದ ಪರಿಪೂರ್ಣ ಬ್ರಹ್ಮಾನುಭವವೆಂಬ, **ದಿನ** - ಹಗಲಿನ, **ಪ್ರಭಾತ ಸಮಯಾಸತ್ತಿಂ** - ಪ್ರಾತಃಕಾಲದ ಸಂಬಂಧವುಳ್ಳ, **ಆಸಕ್ತಿಂ** ಎಂಬ ಪಾಠಾಂತರದಲ್ಲೂ ಅದೇ ಅಭಿಪ್ರಾಯವು. **ಪ್ರಸತ್ತಿಂ** - ಅನುಗ್ರಹವನ್ನು, ಪ್ರಸನ್ನತೆಯನ್ನು, **ಮುಹುಃ** - ಪದೇ ಪದೇ, **ಲಭೇಮಹಿ** - ಭಗವತ್ಕೃಪೆಯಿಂದ ಹೊಂದುವೆವು. ಹೀಗೆ ಭಾಗವತ ಶೇಷತ್ವ ಕೈಂಕರ್ಯಮುಖೇನ ಭಾಗವತ ಪ್ರಸಾದವೇ ತಮಗೆ ಪದೇಪದೇ ಅಪೇಕ್ಷಣೀಯವಾದುದೆಂದು ಹೇಳಲ್ಪಟ್ಟಿತು.

ತಾತ್ಪರ್ಯವು. ನಿರತಿಶಯ ಪರಿಪೂರ್ಣಬ್ರಹ್ಮಾನುಭವರೂಪ ಮೋಕ್ಷವೂ ಶ್ರಿಯಃಪತಿ ಕೈಙ್ಕರ್ಯವೂ ಸಹ ತಾವು ಸಕೃದನುಷ್ಠಿಸಿದ ಭರನ್ಯಾಸದಿಂದ ಕರಗತ

ನಾಗಿ ತಾವು ಕೃತಕೃತ್ಯರಾದ ಬಳಿಕ ಇನ್ನೇನಾದರೂ ಅಪೇಕ್ಷಿಸತಕ್ಕದ್ದುಂಟೋ ಎಂದರೆ, ಯಾವ ಯಾವುದನ್ನು ಯಾವ ಯಾವ ಕಾರಣದಿಂದ ಅಪೇಕ್ಷಿಸತಕ್ಕದ್ದಲ್ಲ ವೆಂಬುವದನ್ನು ಪೂರ್ವಾರ್ಧದಿಂದ ನಿಷೇಧಿಸಿ ಹೇಳಿ, ಈಗ ತನಗೆ ಅಪೇಕ್ಷಿತವಾದುದು ಮಹಾಭಾಗವತೋತ್ತಮರುಗಳ ಪ್ರಸನ್ನತೆಯು, ಅದೇ ಪುರುಷಾರ್ಥಕಾಷ್ಠೆ ಯೆಂದು ತಿಳಿಸುತ್ತಾರೆ.

ನಾಥೇ ಎಂಬ ಪ್ರಯೋಗದಿಂದ ಸ್ವಾಮಿಯಾದ ಬಳಿಕ ತನ್ನ ನಿರ್ಹೇತುಕ ಕೃಪಾವಾತ್ಸಲ್ಯಭಾವಗಳಿಂದ ತನ್ನ ಪ್ರಿಯದಾಸನಿಗೆ ಏನೇನನ್ನು ಮಾಡಬೇಕೋ ಅವನ್ನು ತಾನೇ ನಾವು ಶರಣಾಗತರಾದ ಬಳಿಕ ಅನುಗ್ರಹಿಸುವನಾದುದರಿಂದ ಆ ವಿಷಯದಲ್ಲಿ ನಾವು ಆತನನ್ನು ಯಾಚಿಸುವದು ಅನಾವಶ್ಯಕವೆಂಬ ಭಾವದಿಂದ ನಾಥೇ - ಸ್ವಾಮಿಯ ಸನ್ನಿಧಿಯಲ್ಲಿ ಯಾಚಿಸುವದಿಲ್ಲವು ಎಂದು ಹೇಳಿ ಕೊಳ್ಳುತ್ತಾರೆ.

ಸ್ವಾಮಿಯಾದರೆ ಏನು, ಕೇಳಿಕೊಳ್ಳತಕ್ಕದ್ದಾದರೂ ಏನಾದರೂ ಉಂಟೋ ಎಂದರೆ, ಯಾವುದೂ ಇರುವದಿಲ್ಲವು :—ಅದು ಹೇಗೆಂದರೆ :—

ನಃ ಪ್ರಪನ್ನರಾಗಿ ಕೃತಕೃತ್ಯರಾದ ತಮಗೆ, ಇಹಲೋಕದೈಶ್ವರ್ಯವೂ ಇಂದ್ರಾದಿಲೋಕಭೋಗಗಳೂ ಸಹ ತೃಣಪ್ರಾಯವಾದುವು. ಗೀತೆಯಲ್ಲಿ

"ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವತೇ ।
ಆದ್ಯಂತವಂತಃ ಕೌನ್ತೇಯ ನ ತೇಷು ರಮತೆ ಬುಧಃ"

ಐಹಿಕಸುಖಗಳೆಲ್ಲಾ ದುಃಖಮೂಲವಾದವುಗಳು, ಆದುದರಿಂದ ಪ್ರಪನ್ನನಿಗೆ ಇವು ತೃಣಸಮಾನವು ಎಂದು ಹೇಳಲ್ಪಟ್ಟಿರುತ್ತದೆ. ಹಾಗೆ ಭಾವಿಸದೆ ಅದನ್ನಪೇಕ್ಷಿಸುವವರನ್ನೂ ಕೂಡ "ತೃಣಮಿವ ತ್ರೈವರ್ಗಿಕಾನ್ ಭಾವಯ" ತೃಣದ ಹಾಗೆ ಭಾವಿಸತಕ್ಕದ್ದೆಂದು ಈ ಗ್ರಂಥಕರ್ತರೇ ಇನ್ನೊಂದು ಕಡೆಯಲ್ಲಿ ಹೇಳಿರುತ್ತಾರೆ. ಸ್ವರ್ಗಾದಿಭೋಗವೂ ಅನಿತ್ಯವಾದುದು, ಸ್ವರ್ಗಾನುಭವಾನಂತರ ಇಹ ಲೋಕಕ್ಕೇ ಬರಬೇಕಾಗುತ್ತದಾದುದರಿಂದ, "ತೇತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ," ಎಂದೂ, ಸ್ವರ್ಗೇಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ" ಎಂದೂ, "ಆ ಬ್ರಹ್ಮ ಭುವನಾ ಲ್ಲೋಕಾಃ ಪುನರಾವರ್ತಿನೋಽರ್ಜುನ" ಎಂದೂ ಹೇಳಿರುವ ಹಾಗೆ ಐಹಿಕಭೋಗಗಳ ಹಾಗೆ ಅವೂ ಕೂಡ ಪ್ರಪನ್ನನಿಗೆ ತೃಣರೂಪವಾದವೇ, ಅಸ್ಯತ್ ಇದಕ್ಕಿಂತ ಸ್ವಲ್ಪ ಉತ್ಕೃಷ್ಟವಾದ ಕೈವಲ್ಯವೆಂದು ಹೇಳಿಕೊಳ್ಳುವ ಕೇವಲ ಸ್ವಾತ್ಮಾನುಭವವೂ ಕೂಡ ಅಂಥಾದ್ದೇ ಎಂದು ಹೇಳುತ್ತಾರೆ.

"ನನಾಕಪೃಷ್ಠಂ ನ ಚ ಸಾರ್ವಭೌಮಂ ನ ಪಾರಮೇಷ್ಠ್ಯಂ ನರಸಾಧಿಪತ್ಯಂ । ನ ಯೋಗ ಸಿದ್ಧೀರ ಪುನರ್ಭವಂವಾ ವಾಂಛನ್ತಿಯತ್ಪಾದರಜಃ ಪ್ರಪನ್ನಾಃ

ಸರ್ವೇಶ್ವರನ ಪಾದಕಮಲಪರಾಗವನ್ನಾಶ್ರಯಿಸಿದ ಪ್ರಪನ್ನರು ಸ್ವರ್ಗಲೋಕವನ್ನಾಗಲಿ, ಇಹಲೋಕಮಂಡಲಾಧಿಪತ್ಯವನ್ನಾಗಲಿ, ಬ್ರಹ್ಮಲೋಕಾಧಿಪತ್ಯವನ್ನಾಗಲಿ, ಪಾತಾಳಲೋಕಾಧಿಪತ್ಯವನ್ನಾಗಲಿ ಅಣಿಮಾದಿಸಿದ್ಧಿಗಳನ್ನಾಗಲಿ, ಅಪುನರ್ಭವಂವಾ-ಕೈವಲ್ಯವನ್ನಾಗಲಿ ಅಪೇಕ್ಷಿಸುವದಿಲ್ಲವು (ಭಾಗ ೧೦.೧೬.೩೭) ಎಂದು ಭಾಗವತದಲ್ಲಿ ಹೇಳಲ್ಪಟ್ಟಿರುತ್ತದೆ. ಇವೆಲ್ಲವೂ ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ" ಎಂದು ಹೇಳಿರುವ ಹಾಗೆ ಭಗವದ್ಭೋಗೈಕರಸಿಕನಾದ ಕೃತಕೃತ್ಯನಾದ ಪ್ರಪನ್ನನಿಗೆ ಇವೆಲ್ಲಾ ತೃಣಪ್ರಾಯವೇ ಮಾತ್ರವಲ್ಲವು, ನರಕಸಮಾನವಾದವುಗಳೆಂದೂ ಹೇಳಲ್ಪಟ್ಟಿವೆ.

ಅನ್ಯದಪಿ ಎಂಬಲ್ಲಿ ಅಪಿ ಶಬ್ದದಿಂದ ಮೋಕ್ಷವನ್ನೂ ಕೂಡ ಯಾಚಿಸುವದಿಲ್ಲವು ಎಂಬರ್ಥವೂ ತೋರಬರುತ್ತದೆ ಆದರೆ ಮೋಕ್ಷವು ಸಂಪೂರ್ಣ ಬ್ರಹ್ಮಾನುಭವತತ್ಕೈಂಕರ್ಯಪ್ರಾಪ್ತಿಗಳನ್ನುಂಟುಮಾಡುವಾಗ ಅದೂ ಬೇಡವೋ ಎಂದರೆ ಆ ವಿಷಯದಲ್ಲಿ ಯಾಚಿಸತಕ್ಕದ್ದೇನೂ ಇರುವದಿಲ್ಲವೆಂಬ ಭಾವವು. ಏಕೆಂದರೆ ಯಾವಾಗ ಭರನ್ಯಾಸವು ಅನುಷ್ಠಿಸಲ್ಪಟ್ಟಿತೋ ಆಗ ಅದು ಪಾಯುಧವಾಗಿ ಏರ್ಪಟ್ಟು ಈತನ ದೇಹಾವಸಾನವನ್ನೇ ನಿರೀಕ್ಷಿಸುತ್ತಿರುತ್ತದೆ ಈ ವಿಷಯದಲ್ಲಿ ಸರ್ವೇಶ್ವರನ ಸ್ವಕೀಯೋಕ್ತಿಗಳಿಂದಲೇ ಈಷದಪಿ ಸಂದೇಹವಿಲ್ಲವು. "ನತ್ಯಜೇಯಂ ಕಥಂಚನ," "ಮೋಕ್ಷಯಿಷ್ಯಾಮಿ ಮಾಶುಚಃ," "ದದಾಮ್ಯೇತದ್ವ್ರತಂ ಮಮ," "ಮಾಮುಪೇತ್ಯತು ಕೌನ್ತೇಯ ಪುನರ್ಜನ್ಮ ನ ವಿದ್ಯತೇ" ಎಂಬ ಪ್ರಮಾಣಗಳಿಂದ ಸಂಪೂರ್ಣ ಬ್ರಹ್ಮಾನುಭವಪ್ರಾಪ್ತಿಯು ಕರಗತವಾಗಿರುವಾಗ ಪ್ರಪನ್ನನು ಆ ವಿಷಯದಲ್ಲಿ ಯಾಚಿಸಬಹುದೋ ? ಆತನೇ ತನ್ನ ನಿರ್ಹೇತುಕ ಕೃಪೆಯಿಂದ ಮೊದಲೇ ದಯಪಾಲಿಸಿರುವದನ್ನು ಈತನು ಯಾಚಿಸಬಹುದೋ ? ಸರ್ವೇಶ್ವರನ ಮಹಿಮೆಗೂ, ತನ್ನ ಸ್ವರೂಪಕ್ಕೂ ಸಹ, ಯಾಚಿಸುವದು ತುಂಬಾ ಕುಂದುಕವಾದುದೆಂಬ ಭಾವವು

ಇಂಥಾವುಗಳನ್ನೆಲ್ಲಾ ತಮ್ಮ ವಾಕ್ಕಿನಿಂದ ಅಪೇಕ್ಷಿಸುವದಿಲ್ಲವು ಎಂದು ವಾಚಾ ನ ಯಾಚಾಮಹೇ ಎಂದು ಹೇಳಿಕೊಳ್ಳುತ್ತಾರೆ. ತಮ್ಮ ವಾಕ್ಕು ಅಮೋಘವಾದುದು, ಸರ್ವೋತ್ಕೃಷ್ಟವಾದುದು. ಆದುದರಿಂದ ಅಲ್ಪವಾದವುಗಳನ್ನೂ ವ್ಯರ್ಥವಾದವುಗಳನ್ನೂ ಅಪೇಕ್ಷಿಸಕೂಡದು. ಹೇಗೆ ಉತ್ಕೃಷ್ಟವಾದ್ದೆಂದ್ಗರೆ ? ತನಾಭಿನಾಳಿಕಿನೀ.......ಸೌರಭಮುಚಾವಾಚಾ ಎಂದು ಹೇಳ್ಯ

ತ್ತಾರೆ ಶ್ರಿಯಃಪತಿಯ ನಾಭಿ ಎಂಬುವದೇ ಒಂದು ಪದ್ಮಸರೋವರವು, ಅದರಲ್ಲಿ ಹುಟ್ಟಿದ್ದ, ಚತುರ್ಮುಖನಿಗೆ ಜನ್ಮಸ್ಥಾನವಾದ ಕಮಲವೂ ಕೂಡ ಅಪೇಕ್ಷಿಸುವ ಪರಿಮಳವನ್ನು ಬೀರುತ್ತಿರುವಂಥಾದ್ದು ಈ ಗ್ರಂಥಕರ್ತರೇ ಮೊದಲಾದ ಪರಮೈಕಾಂತಿಗಳ ವಾಕ್ಕು. ಅದು ಹೇಗೆಂದರೆ :—(೧) ಆ ಕಮಲಕ್ಕಾದರೋ ಚತುರ್ಮುಖನಾದ ಅನ್ಯದೇವತೆಯ ಸಂಬಂಧವುಂಟು, ಇವರ ವಾಕ್ಕುಗಳಲ್ಲಾದರೋ ಎಂದರೆ ಉಪದೇಶ ಮತ್ತು ಗ್ರಂಥಗಳಲ್ಲಾದರೋ ಅಂತಹ ಅನ್ಯದೇವತಾ ಸಂಬಂಧವೇ ಇಲ್ಲವಾದುದರಿಂದ, ಅದಕ್ಕಿಂತಲೂ ಉತ್ಕೃಷ್ಟವಾದುದರಿಂದ ಕಮಲಕ್ಕೆ ಸ್ಪೃಹಣೀಯತ್ವ ಉಂಟೆಂದು ಹೇಳಬಹುದು. (೨) ಅಥವಾ ಆ ಕಮಲದಲ್ಲೇ ಚತುರ್ಮುಖಬ್ರಹ್ಮನಿರುವದರಿಂದ ಆ ಕಮಲದಿಂದ ಹೊರಡುವ ಪರಿಮಳವು ಚತುರ್ಮುಖನ ನಾಲ್ಕು ಮುಖಗಳಿಂದಲೂ ಹೊರಡುವ ಶ್ರುತಿಗಳಿಂದ ಕೂಡಿದುದು. ಈ ಶ್ರುತಿಗಳಲ್ಲಾದರೋ ಬ್ರಹ್ಮರುದ್ರೇಂದ್ರಾದಿಗಳ ಸ್ತುತಿ ಜಪ ಹೋಮಾದಿಗಳೆಲ್ಲವೂ ಇರುವದರಿಂದ ಅನ್ಯದೇವತಾ ಸಂಬಂಧ ಉಂಟು, ಇವರುಗಳ ವಾಕ್ಕಿನಲ್ಲಿ ಅಂತಹ ಸಂಬಂಧವಿಲ್ಲದೆ ಪವಿತ್ರವಾದುದೆಂಬ ಭಾವವು, "ತ್ರೈಗುಣ್ಯ ವಿಷಯಾವೇದಾನಿಸ್ತ್ರೈಗುಣ್ಯೋಭವಾರ್ಜುನ" ಎಂಬ ಗೀತಾ ವಾಕ್ಯವಿಲ್ಲಿ ಅನುಸಂಧೇಯವು (೩) ಅಥವಾ ಚತುರ್ಮುಖನಿಗೆ ಜನ್ಮಸ್ಥಾನವಾದ ಈ ನಾಳೀಕದಿಂದ ಯಾವಾಗಲೂ ವೇದಗಳು ಹೊರಡುವದರಿಂದ ಆ ಕಮಲದಲ್ಲಿ ನಮಗೆ ಸ್ಪೃಹಣೀಯ ಭಾಗವು ಉಪನಿಷತ್ತು, ಅದರ ಸಾರವತ್ತಾದ ಸೌರಭವು ರಹಸ್ಯತ್ರಯವು, ಇಂತಹ ಪರಿಮಳವನ್ನು ಮುಂಚಾ - ಪ್ರಸರಿಸುತ್ತಿರುವದು ತಮ್ಮ ವಾಕ್ಕು ಎಂಬ ಸ್ವಾರಸ್ಯವಾದ ಪ್ರಕೃತಕ್ಕನುಗುಣವಾದ ಅರ್ಥವನ್ನೂ ಹೇಳಬಹುದು. (೪) ಅಥವಾ, ಕಮಲದಿಂದ ಬರುವ ಸ್ಪೃಹಣೀಯ ಭಾಗವು ವೇದಗಳು, ಅವುಗಳ ಸೌರಭವು ಉಪನಿಷತ್ತು ಇಂತಹ ಉಪನಿಷತ್ತುಗಳ ಅರ್ಥವನ್ನೇ, ಮುಂಚಾ - ಪ್ರಸರಿಸುತ್ತಿರುವ ವೇದಾಂತಾಚಾರ್ಯರಾದ ತಮ್ಮ ವಾಕ್ಕು ಎಂದರ್ಥವನ್ನಾಗಲಿ ಹೇಳಬಹುದು. ಅನೇಕ ಬ್ರಹ್ಮಾಂಡಗಳುಂಟೆಂಬ ಭಾವವು ನಾಳೀಕಿನೀ ಪದ್ಮಸರಸ್ಸಿನಲ್ಲಿ ಅನೇಕ ಕಮಲಗಳಿವೆ ಎಂಬುವದರಿಂದ ತೋರಿಬರುತ್ತದೆ.

ಇವು ಯಾವುಗಳನ್ನೂ ಅಪೇಕ್ಷಿಸಿದ ಪಕ್ಷದಲ್ಲಿ. ಅಪೇಕ್ಷಿತಕ್ಕದ್ದೇನಾದರೂ ಉಂಟೋ, ಎಂದರೆ, ಒಂದು ಮಾತ್ರ ಉಂಟು, ಅದರಲ್ಲಿ ತಮಗೆ ಅಪೇಕ್ಷೆಯುಂಟೆಂದು ಸರ್ವಜ್ಞನಾದ ಸ್ವಾಮಿಯೇ ಅರಿತು, ಆತನೇ ದಯಪಾಲಿಸುವನಾದುದರಿಂದ, ಯಾಚಾಮಹೇ ಎಂದು ಹೇಳದೆ, ಲಭೇಮಹಿ ಪಡೆಯುವೆವು ಎಂದು ಹೇಳಿಕೊಂಡಿರುತ್ತಾರೆ. ಅದು ಯಾವುದೆಂದರೆ ಉತ್ತರಾರ್ಧದಿಂದ ಹೇಳುತ್ತಾರೆ.

ಪರಮೈಕಾಂತಿ ಶೇಷತ್ವ ಕೈಙ್ಕರ್ಯಗಳೇ ಪುರುಷಾರ್ಥಕಾಷ್ಠೆ ಎಂಬ ಜ್ಞಾನದಿಂದುಂಟಾಗುವ ಆ ಪರಮೈಕಾಂತಿಗಳ ಪದೇಪದೇ ಪ್ರಸನ್ನತೆಯೇ ಎಂದು **ಲಭೇಮಹಿ ಪ್ರಸತ್ತಿಂ ಮುಹುಃ** ಎಂಬದಾಗಿ ಪ್ರಯೋಗಿಸಿರುತ್ತಾರೆ. **ಶುದ್ಧಾನಾಂತು** ಎಂದು **ತು** ಶಬ್ದವನ್ನು ಉತ್ತರಾರ್ಧದ ಆದಿಯಲ್ಲಿಯೇ ಉಪಯೋಗಿಸಿರುವದರಿಂದ **ಪೂರ್ವಾರ್ಧ**ದಲ್ಲಿ **ಹೇಳಿದವ**ರುಗಳಿಗಿಂತಲೂ ಈ ಮಹಾಭಾಗವತರ ಪ್ರಸನ್ನತೆಯು ವಿಲಕ್ಷಣವಾಗಿ ಮಹತ್ತಾದುದೆಂಬುವದು ತೋರಿಬರುತ್ತದೆ.

ಆ ಪರಮೈಕಾಂತಿಗಳೆಂಥಾವರೆಂದರೆ ಹೇಳುತ್ತಾರೆ:—**ಶುದ್ಧಾನಾಂ** ಅಪರಾಧರುಚಿಯೇ ಮೊದಲಾದ ಯಾವ **ದೋಷ**ಗಳೂ ಅವರುಗಳಲ್ಲಿಲ್ಲವು, ಮಹಾಪರಿಶುದ್ಧಾತ್ಮರು. ಮತ್ತು ಸ್ಥಿರಧಿಯರು, ಚಂಚಲಚಿತ್ತರಲ್ಲವು, ಭ್ರಮ ಶಂಕಾದಿ ದೋಷಗಳೊಂದೂ ಇಲ್ಲದ ನಿಶ್ಚಲಚಿತ್ತರು, ಸರ್ವಶರಣ್ಯನಲ್ಲಿ ಮಹಾವಿಶ್ವಾಸವುಳ್ಳವರು; **ಶುದ್ಧಾಂತ ಸಿದ್ಧಾಂತಿನಾಂ**, ಪತಿವ್ರತಾ ಶಿರೋಮಣಿಯ ಹಾಗೆ ಪತಿಪಾರಾರ್ಥ್ಯ, ತದನನ್ಯಭೋಗ್ಯತ್ವಾದಿಗಳುಳ್ಳವರೆಂದು ಹೇಳಲ್ಪಟ್ಟಿತು. ಪರಮಪುರುಷನಾದ ಪತಿಯನ್ನೇ ಅವಲಂಬಿಸಿ ಆತನೇ ಶರಣ್ಯನೆಂದು ಭಾವಿಸಿದವರು **ಸೀತೆಯು** ವಿಷಯದಲ್ಲಿ ಆಂಜನೇಯನು ಹೇಳುತ್ತಾನೆ :—

ನೈಷಾ ಪಶ್ಯತಿ ರಾಕ್ಷಸ್ಯೋ ನೇಮಾನ್ಪುಷ್ಪ ಫಲದ್ರುಮಾ೯ ।
ಏಕಸ್ಥಹೃದಯಾನೂನಂ ರಾಮಮೇವಾನು ಪಶ್ಯತಿ ॥ (ಸುಂ.೧೬.೨೫)

ಎಂದರೆ ಸೀತೆಯು ತನಗೆ ಪ್ರತಿಕೂಲರಾಗಿ ಪ್ರತಿಭಟಿಸುವ ರಾಕ್ಷಸಿಯರನ್ನೂ ನೋಡದೆ, ಮನೋಹರಫಲಪುಷ್ಪಗಳಿಂದೊಪ್ಪುತ್ತಿರುವ ವೃಕ್ಷಗಳನ್ನೂ ಕಣ್ಣೆತ್ತಿ ನೋಡದೆ, ಹೃದಯದಲ್ಲಿ ಏಕಾಂತ್ಯದಿಂದ ರಾಮನೊಬ್ಬನನ್ನೇ ಸಾಕ್ಷಾತ್ಕರಿಸುತ್ತಿದ್ದಳು, ಎಂದು ಹೇಳಿರುವ ಹಾಗೆ ಪರಮೈಕಾಂತಿಗಳಾದ ಭಾಗವತರೂ ಕೂಡ ಪತಿವ್ರತಾಶಿರೋಮಣಿಯಾದ ಸೀತೆಯ ಪ್ರವೃತ್ತಿ ಪ್ರಕಾರ ಐಹಿಕದುಃಖಗಳನ್ನಾಗಲಿ ಐಹಿಕಶ್ರೇಯಸ್ಸುಗಳನ್ನಾಗಲಿ ಪರಿಗಣಿಸದೆ ಸತತ ಪರಮಾತ್ಮನನ್ನೇ ಧ್ಯಾನಿಸುತ್ತಾ ಇರುವ ಸ್ಥಿರಧಿಯರು. ಮತ್ತು ಸೀತೆಯು ಹೇಗೆ ತನ್ನ ಪತಿಯನ್ನೇ ನಂಬಿದುದರಿಂದಲತನೇ ಸಿದ್ಧೋಪಾಯನಾಗಿ ಬಂದು

"**ಶರೈಸ್ತು ಸಂಕುಲಾಂ ಕೃತ್ವಾಲಂಕಾಂ ಪರಬಲಾರ್ದನಃ**
ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್"

ಶರಗಳಿಂದ ಈ ಲಂಕೆಯನ್ನು ವ್ಯಾಕುಲಿತವಾದುದಾಗಿ ಮಾಡಿ ಶತ್ರುಬಲನಾಶಕನಾದ ಶ್ರೀರಾಮನು ನನ್ನನ್ನು ಕರೆದುಕೊಂಡು ಹೋದರೆ ಅದೀಗ ಆತನಿಗೆ ಉಚಿತವಾದುದಾಗುವದು ಎಂದು ಹೇಳಿಕಳುಹಿಸಿದಳು. ಇದೇ ಸೀತೆಯ ಸಿದ್ಧಾಂತವಾದುದರಿಂದ, ಶುದ್ಧಾನ್ತವೆಂದರೆ ಸ್ವಾಮಿಯ ಅಂತಃಪುರದಲ್ಲಿರುವ

ಲಕ್ಷ್ಮಿಯು ಸಿದ್ಧಾನ್ತವಾಯಿತು ಅದರಂತೆಯೇ ನಮ್ಮ ಪರವ್ಯೈಕಾಂತಿಗಳ ಸಿದ್ಧಾನ್ತವೂ ಕೂಡ, ಅದು ಹೇಗೆಂದರೆ:--ಈ ಪರವ್ಯೈಕಾಂತಿಗಳಾದರೋ ಆತ್ಮ ವೆಂಬ ಶರವನ್ನು ಕೂಡ ಪ್ರಣವಧನುಸ್ಸು ಮೂಲಕ ಈ ದೇಹವೆಂಬ ಲಂಕೆಯನ್ನು ಧ್ವಂಸನಮಾಡಿ ತನ್ನನ್ನು ದಿವ್ಯವೈಕುಂಠಕ್ಕೆ ಸ್ವಾಮಿಯು ಕರೆದುಕೊಂಡುಹೋದರೆ, **ತತ್ತಸ್ಯ ಸದೃಶಂ ಭವೇತ್**, ಆದೀಗ ಆ ಕರುಣಾಸಾಗರನಿಗೆ ಯೋಗ್ಯವಾದು ದಾಗುತ್ತದೆಂದು ನಂಬಿದವರು. ಇಂತಹ ಮಹನೀಯರಾದ ಮಹಾಭಾಗವತೋ ತ್ತಮರ ಪ್ರಸನ್ನತೆಯನ್ನು ಸರ್ವೇಶ್ವರ ಕೃಪೆಯಿಂದ ಹೊಂದುವೆವು ಎಂದು ಹೇಳಿ ಕೊಳ್ಳುತ್ತಾರೆ. ಆ ಪ್ರಸನ್ನತೆ ಎಂಥಾದ್ದೆಂದರೆ ? **ಮುಕ್ತೈಶ್ವರ್ಯ ದಿನ ಪ್ರಭಾತ ಸಮಯಾಸತ್ತಿಂ,** ಮುಕ್ತರ ಐಶ್ವರ್ಯವಾದ ಪರಿಪೂರ್ಣಬ್ರಹ್ಮಾನುಭವವೆಂಬು ವದೇ ಒಂದು ದಿವ್ಯಪ್ರಕಾಶವುಳ್ಳ ಹಗಲು, ಅದಕ್ಕೆ ಈ ಪ್ರಸನ್ನತೆಯು ಪೂರ್ವ ಭಾವಿಯಾಗಿರುವ ಪ್ರಾತಃಕಾಲ ಸಮಯದ ಸಂಬಂಧವುಳ್ಳದ್ದು. ಮುಕ್ತೈಶ್ವ ರ್ಯವೇ ಒಂದು ಪ್ರಕಾಶವಾದ ಹಗಲಾದರೆ. ಈ ಮಹಾಭಾಗವತರ ಅನುಗ್ರಹ ಸಂಪಾದನೆಯೇ ಆ ಮುಕ್ತೈಶ್ವರ್ಯಕ್ಕೆ ಪೂರ್ವಭಾವಿಯಾದ ಪ್ರಾತಃಕಾಲವು ಎಂಬ ಭಾವವು. ಪ್ರಾತಃಕಾಲವನ್ನನುಸರಿಸಿ ಹಗಲು ಹೇಗೆ ಬರುವದು ಸಿದ್ಧವೋ, ಹಾಗೆಯೇ ಈ ಭಾಗವತಾನುಗ್ರಹವನ್ನನುಸರಿಸಿ ಮುಕ್ತೈಶ್ವರ್ಯಪ್ರಾಪ್ತಿಯೂ ಸಿದ್ಧವಾದುದೆಂಬ ಭಾವವು. ಮುಕ್ತೈಶ್ವರ್ಯವನ್ನು ಒಂದು ಹಗಲಿಗೆ ಹೋಲಿಸಿರು ವದರಿಂದ ಅದಕ್ಕೆ ಕತ್ತಲುರೂಪವಾದ ವಿನಾಶವೆಂಬುವದೂ ಎಂದಿಗೂ ಇಲ್ಲವೆಂಬ ಭಾವವೂ ತೋರಿಬರುತ್ತದೆ. ಮುಕ್ತೈಶ್ವರ್ಯವನ್ನು ಒಂದು ಹಗಲಿಗೆ ಹೋಲಿ ಸಲು "**ಸಕೃದ್ದಿವಾಹೈವಾಸ್ಯ ಭವತಿ**" ಎಂಬ ಶ್ರುತಿಯು ಪ್ರಮಾಣವಾಗಿರು ತ್ತದೆ.

ಈ ಶ್ಲೋಕವು ಪುರುಷಾರ್ಥಕಾಷ್ಠೆಯನ್ನು ಪ್ರತಿಪಾದಿಸುವದಾಗಿ ತುಂಬಾ ಅನೋಘವಾದುದಲ್ಲದೆ ಇದರಲ್ಲಿ ಇನ್ನೂ ಹೆಚ್ಚು ಸ್ವಾರಸ್ಯ ಉಂಟು. ಇದನ್ನು ಶ್ರೀಮದ್ವೇದಾನ್ತ ರಾಮಾನುಜ ಮಹಾದೇಶಿಕಮುನಿಗಳು ಹೊರಪಡಿಸಿರುತ್ತಾರೆ ಶ್ರೀ ನಮ್ಮಾಳ್ವಾರ್ರವರು ಅನೇ ಪತ್ತಿನ ಹತ್ತನೆಯ ತಿರುವಾಯ್‌ಮೊಳಿಯಲ್ಲಿ ಈ ಪುರುಷಾರ್ಥಕಾಷ್ಠೆಯನ್ನೇ ಉಪಪಾದಿಸಿರುತ್ತಾರೆ. ಈ ಶ್ಲೋಕವು "**ನೆಡು ಮಾರ್ಕಡಿಮೈ**" ಎಂದು ಪ್ರಾರಂಭಿಸಿ ಹೇಳುವ ಕೋಯಿಲ್ ತಿರುವಾಯ್‌ಮೊ ಳಿಯ ಪಾಶುರಗಳ ಸ್ವಾರಸ್ಯವನ್ನೂ ಸಙ್ಗ್ರಹಿಸಿರುವಂಥಾದ್ದಾಗಿರುತ್ತದೆ. ಮೊದಲ ನೆಯ ಪಾಶುರವಾದ "**ನೆಡುಮಾರ್ಕಡಿಮೈ**" ಎಂಬುವದರಲ್ಲಿ "**ವಿರ್ಯೞಮೂ ವುಲಗುಪೆರಿನುಮೇ**" ಎಂಬುವದರಿಂದ ಭಾಗವತ ಶೇಷತ್ವಕ್ಕೆ ತ್ರೈಲೋಕ್ಯೈ ಶ್ವರ್ಯವೂ ಕೂಡ ಸಮಾನವಾಗಲಾರದೆಂದು ಹೇಳುವದರಿಂದ ಅದೆಲ್ಲಾ ತೃಣಸಮಾ

ನವೆಂದು ಹೇಳಲ್ಪಟ್ಟಿರುವದರಿಂದ ಶ್ಲೋಕದ "ತೃಣಂ" ಎಂಬ ಪದವು ಸಂಗ್ರಹಿಸಲ್ಪಟ್ಟಿತು. ಎರಡನೆಯ ಪಾಶುರನಾದ ಇರ್ಯರ್ವಮೂವುಲಗು ಪೆರಿನುಮ್ ಎಂಬುವದರಲ್ಲಿ ತಾನೇತಾನೇಯಾನಾಲುಮ್ ಎಂಬುವದರಿಂದ ತ್ರಿಲೋಕಾಧಿಪತ್ಯದೊಂದಿಗೆ ಕೇವಲಾತ್ಮಾನುಭವಪ್ರಾಪ್ತವಾದರೂ, ಅದೂ ಭಾಗವತ ಶೇಷತ್ವಕ್ಕೆ ಸಮಾನವಾಗಲಾರದೆಂದು ಹೇಳಿರುವದರಿಂದ, ಇಲ್ಲಿ "ಅನ್ಯತ್" ಎಂಬ ಶಬ್ದದಿಂದ ಈ ಅಭಿಪ್ರಾಯವು ಸಂಗ್ರಹಿಸಲ್ಪಟ್ಟಿತು. ಎರಡನೆಯ ಅನ್ಯತ್ ಶಬ್ದದಿಂದ ನಾಲ್ಕನೆಯ ಪಾಶುರದಿಂದ ಮೋಕ್ಷವನ್ನೂ ಕೂಡ ಯಾಚಿಸುವದಿಲ್ಲವೆಂಬ ಭಾವವು. ಮೂರನೆಯ ಪಾಶುರನಾದ ಇಚ್ಚ್ಗೇತಿರಿನ್ರೇರ್ಕಿಳುಕ್ಕುತ್ತಿನ್ನ" ಎಂಬಲ್ಲಿ ಉಪಪಾದಿತವಾಗಿರುತ್ತದೆ. "ವಾ" ಎಂಬ ಅವ್ಯಯದಿಂದ ತೋರುವ ಸಮುಚ್ಚಯ ಭಾವವು ಎರಡನೆಯ ಪಾಶುರದಲ್ಲಿ ಉಪಪಾದಿತವಾಗಿರುತ್ತದೆ. ಭಾಗವತ ಶೇಷತ್ವ ಕೈಂಕರ್ಯದ ಮುಂದೆ ಇವುಗಳೊಂದನ್ನೂ ನಯಾಚಾಮಹೇ ಯಾಚಿಸುವದಿಲ್ಲವೆಂದು ಹೇಳಿದ ಅಭಿಪ್ರಾಯವು "ಉರುಮೋ" ಸಮಾನಮಾದೀತೇ ಇತ್ಯಾದಿ ಶಬ್ದಗಳಿಂದ ಐಶ್ವರ್ಯ ಕೈವಲ್ಯಾದಿಗಳು ತುಂಬಾ ನಿಕೃಷ್ಟವಾದವೆಂಬುವದರಿಂದ ತೋರಿಬರುತ್ತದೆ. ಅದೂ ಅಲ್ಲದೆ ಏಳನೆಯ ಪಾಶುರದಲ್ಲಿ "ಅಡಿಕ್ಕೀಳ್‌ಪುಗುದಲನ್ರಿ" ಆ ಶ್ರಿಯಃಪತಿ ಪಾದಕಮಲದ ಕೆಳಗೆ ಪ್ರವೇಶಿಸದೆ. ಅವನಡಿಯಾರ್-ಅವನಿಗೆ ದಾಸರಾದ ಶ್ರೀಮದ್ಭಾಗವತೋತ್ತಮರ "ನನಿಮಾಕ್ಕಲವಿಲ್ಬುನ್ಬಮೋ"ಬಹು ಶ್ಲಾಘ್ಯವಾದಸಂಶ್ಲೇಷ ಸುಖವೇ. ನಾಳುಮ್‌ವಾಯ್‌ಕ್ಕನಙ್ಗಳ್ಕ್ಕೇ ಪ್ರತಿದಿನವೂ ನಮಗೆ ಲಭಿಸತಕ್ಕದ್ದು, ಎಂದು ಹೇಳಿರುವ ಹಾಗೆ ಯಾವಾಗ ಪರಿಪೂರ್ಣ ಬ್ರಹ್ಮಾನಂದಕ್ಕಿಂತ ಈ ಭಾಗವತ ಶೇಷತ್ವ ಕೈಂಕರ್ಯಗಳು ಶ್ಲಾಘ್ಯವಾದುವೆಂದು ಹೇಳಿದನಂತರ ಕೈಮುತಿಕನ್ಯಾಯಪ್ರಕಾರ ಐಹಿಕ ಸ್ವರ್ಗಲೋಕೈಶ್ವರ್ಯ ಕೈವಲ್ಯಗಳಿಗಿಂತ ಶ್ರೇಷ್ಠವಾದುವೆಂದು ಹೇಳಿದಂತೆಯಾಯಿತು. ಇಲ್ಲಿ ನಾಳುಮ್ ವಾಯ್‌ಕ್ಕ ಎಂದು ಹೇಳಿರುವದರಿಂದ, ಲಭೇಮಹಿ ಮುಹುಃ ಎಂಬುವದು ಸಂಗ್ರಹಿಸಲ್ಪಟ್ಟಿತು. ಇಲ್ಲಿಯೂ ಕೂಡ ಯಾಚಾಮಹೇ ಎಂಬುವ ಪ್ರಾರ್ಥನೆ ಇಲ್ಲದೆ ವಾಯ್‌ಕ್ಕ ಎಂಬುವದರಿಂದ ಲಭೇಮಹಿ ಎಂಬುವದರ ತಾತ್ಪರ್ಯವೇ ಇಲ್ಲಿಯೂ ತೋರಿಬರುತ್ತದೆ. ಸೌರಭಮುಚಾವಾಚಾ - ತಮ್ಮ ವಾಕ್ಕು ಒಳ್ಳೇ ಪರಿಮಳವನ್ನು ಪ್ರಸರಿಸುತ್ತಲಿದೆ ಎಂಬಭಿಪ್ರಾಯದಿಂದ ನಾಲ್ಕನೆಯ ಮತ್ತು ಐದನೆಯ ಪಾಶುರಗಳಲ್ಲಿ ಹೇಳಿರುವ ಪರಮಪುರುಷನ ಕಲ್ಯಾಣಗುಣವಿಷಯವಾದ ಕವಿತಾರಚನೆಯ ವೈಭವವು ಸಂಗ್ರಹಿಸಲ್ಪಟ್ಟಿತು. ಶುದ್ಧಾನಾಂ ಸ್ಥಿರಧಿಯಾಂ ಎಂಬುವದು ೯ನೆಯ ಪಾಶುರದಲ್ಲಿರುವ "ಕೋದಿಲ್ ಅಡಿಯಾರ್ಕ್ಕ" ಪ್ರಯೋಜನಾನ್ತರ ಸಂಬಂಧವೆಂಬ ಕೋದು ಎಂದರೆ ನಿಸ್ಸಾರವಾದ ತೃಣರೂಪದೋಷ

ವಿಲ್ಲದ ಭಾಗವತರು ಎಂಬುವವರ ತಾತ್ಪರ್ಯವು. ಶುದ್ಧಾನ್ತಸಿದ್ಧಾಂತಿನಾಂ" ಎಂಬುವದು ೧೦ನೆಯ ಪಾಶುರದಲ್ಲಿರುವ "ನೀಕ್ಕಮಿಲ್ಲಾವಡಿಯಾರ್" "ವಿಶ್ಲೇಷೆ ಇಲ್ಲದ ಹಾಗೆ ಸರ್ವೇಶ್ವರನನ್ನನುಭವಿಸುವ ಭಾಗವತೋತ್ತಮರು" ಎಂಬುವವರ ವಿವರಣವು. ಮುಕ್ತೈಶ್ವರ್ಯದಿನ ಪ್ರಭಾತ ಸಮಯಾಸತ್ತಿಂ ಎಂಬುವದು ೧೧ನೆಯ ಪಾಶುರದಲ್ಲಿರುವ "ನಲ್ಲಕೋಳ್ಪ್ಪಡು" ಸರ್ವಶ್ರೇಷ್ಠವಾದ ಪುರುಷಾರ್ಥರೂಪಸ್ವೀಕಾರ ಎಂಬಲ್ಲಿ ನಲ್ಲ ಎಂಬ ಶಬ್ದಾರ್ಥದ ವಿವರಣವು. ಲಭೇಮಹಿ ಎಂದು ಬಹುವಚನಾಭಿಪ್ರಾಯವು ೧೧ನೆಯ ಪಾಶುರದಲ್ಲಿ "ಅವರಕ್ಕೇ ಕುಡಿಗಳಾಯ್ ಶೆಲ್ಲುಮ್" ಆ ಮಹಾಭಾಗವತೋತ್ತಮರಿಗೇನೇ ಶೇಷವೃತ್ತಿಯನ್ನು ಮಾಡುವ ಕುಲವಾಗಿರುವವರಾಗಿ ಎಂದು ಹೇಳಿರುವವರ ವಿವರಣವು, ತನಗೂ ತನ್ನ ಸಂಬಂಧಿಗಳಿಗೂ ಇದು ಲಭಿಸಬೇಕೆಂಬ ಭಾವವು. ಇಲ್ಲಿ "ನಾಥೇ" ಎಂಬ ಪದವು ಇದೇ ತಿರುವಾಯ್‌ಮೊಳಿಯಲ್ಲಿ ನೆಡಮಾರ್ಕ್ಕಡಿಮೈ" ಎಂಬಲ್ಲಿ ಆಶ್ರಿತವಾತ್ಸಲ್ಯತ್ವವು ತೋರಿಬರುವದರಿಂದ, ಇವರಭಿಪ್ರಾಯವಾಗಿರುತ್ತದೆ. ಇದರಿಂದ ಈ ಶ್ಲೋಕವು ಎಂಟನೆಯಪತ್ತಿನ ೧೦ನೆಯ ತಿರುವಾಯ್‌ಮೊಳಿಯಾದ ನೆಡಮಾರ್ಕ್ಕಡಿಮೈಯ ಸಂಗ್ರಹರೂಪವಾದುದೆಂಬುವದು ತೋರಿಬರುತ್ತದೆ. ಹೀಗೆ ಶ್ರಿಯಃಪತಿಯ ಸನ್ನಿಧಿಯಲ್ಲಿ ಮೋಕ್ಷವನ್ನೂ ಕೂಡ ನಾವು ಯಾಚಿಸುವದಿಲ್ಲವು, ಏಕೆಂದರೆ ಭಗವಚ್ಛೇಷತ್ವ ಕೈಂಕರ್ಯಗಳು ಪರಮಪುರುಷಾರ್ಥವಾದರೆ ಭಾಗವತ ಶೇಷತ್ವ ಕೈಂಕರ್ಯಗಳು ಆ ಪರಮಪುರುಷಾರ್ಥದ ಪರಾಕಾಷ್ಠೆಯು.

"ಮಮ ಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾ ಭವೇತ್ ।
ತಸ್ಮಾನ್ಮದ್ಭಕ್ತ ಭಕ್ತಾಶ್ಚ ಪೂಜನೀಯಾ ವಿಶೇಷತಃ"

ಎಂಬ ವಿಷ್ಣುಸಂಹಿತಾ ಪ್ರಮಾಣಾನುಸಾರ, ಮಹಾಭಾಗವತೋತ್ತಮರುಗಳಲ್ಲಿ ಸರ್ವೇಶ್ವರನಿಗೆ ಅತ್ಯಂತ ಪ್ರೀತಿಯಾದುದರಿಂದ ಅವರುಗಳಿಗೆ ಶೇಷತ್ವವೂ ಕೈಂಕರ್ಯಗಳೇ ಪುರುಷಾರ್ಥಕಾಷ್ಠೆ ಎಂದು ಈ ಅಧಿಕಾರದಲ್ಲಿ ಹೇಳಲ್ಪಟ್ಟಿತು. ಇಂತಹ ಭಾಗವತ ಶೇಷತ್ವವೇ ಪುರುಷಾರ್ಥಕಾಷ್ಠೆ ಎಂದು ತಿಳಿಯಲೆಂದೂ, ಅವರ ಪ್ರಸನ್ನತೆಯೇ ಅಪೇಕ್ಷಣೀಯವೆಂದು ಸರ್ವರೂ ತಿಳಿಯಲೆಂದೂ, ಸರ್ವೇಶ್ವರನೇ, ಕೃಷ್ಣಾವತಾರಿಯಾಗಿ ಸಾಂದೀಪಿನೀ ಕುಚೇಲಾದಿಗಳಿಗೆ ಶೇಷತ್ವ ಕೈಂಕರ್ಯ ಪ್ರಸನ್ನತೆಗಳಿಂದಲೂ, ಹಾಗೆಯೇ ರಾಮಾವತಾರಿಯಾಗಿ ವಿಶ್ವಾಮಿತ್ರ, ದಂಡಕಾರಣ್ಯ ಋಷಿಗಳಿಗೆ ಶೇಷತ್ವ ಕೈಂಕರ್ಯ ಪ್ರಸನ್ನತೆಗಳಿಂದಲೂ, ತೋರಿಸಿರುತ್ತಾನೆ. ಸರ್ವೇಶ್ವರನಿಗೆ ಮಹಾಭಾಗವತರುಗಳ ವಿಷಯದಲ್ಲಿ ಇಂತಹ ಪ್ರೀತ್ಯತಿಶಯವಿರುವದರಿಂದ ಸ್ವನಿಷ್ಠೆಗಿಂತಲೂ ಸರ್ವೋತ್ಕೃಷ್ಟರಾದ ಆಚಾರ್ಯರ ಮೂಲಕ

ನಡೆಸುವ ಉಕ್ತಿನಿಷ್ಠಾ ಆಚಾರ್ಯನಿಷ್ಠೆಗಳು ಸ್ವನಿಷ್ಠೆಗಿಂತ ಮಹಿಮೆಹೊಂದಿದವೆಂಬುದು ಇದರಿಂದ ಊಹಿಸಬಹುದು.

ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ
ಹದಿನಾರನೆಯ ಅಧಿಕಾರವಾದ ಪುರುಷಾರ್ಥಕಾಷ್ಠಾಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವ ಶರ್ಮನ
ಆಚಾರ್ಯಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದುವು.
ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಶಾಸ್ತ್ರೀಯನಿಯಮನಾಧಿಕಾರಃ. ೧೭

ಮುಕುನ್ದೇ ನಿಕ್ಷಿಪ್ಯ ಸ್ವಭರಮನಘೋ ಮುಕ್ತವದಸೌ ।
ಸ್ವತಂತ್ರಾಜ್ಞಾ ಸಿದ್ಧಾಂ ಸ್ವಯಮನುವಿದಿತಸ್ವಾಮಿ ಹೃದಯಃ ।

ಅವತಾರಿಕೆ. ಹಿಂದಿನಧಿಕಾರದ ಕೊನೆಯಲ್ಲಿ **"ಮುಕ್ಕೈನೂಲ್ ನೀತಿನಿರುತ್ತ ನಿಲೈ ಕುಲೆಯಾ ವಗೈ"** ಎಂದು ಕೃತಕೃತ್ಯನಾದ ಪ್ರಪನ್ನನಿಗೂ ಕೂಡ ವರ್ಣಾಶ್ರಮೋಚಿತ ಧರ್ಮಾನುಷ್ಠಾನವು ಆವಶ್ಯಕವೆಂದು ತೋರುವ ಶಾಸ್ತ್ರವಶ್ಯತೆಯು ವಿಧಿಸಲ್ಪಟ್ಟಿತು. ಆದರೆ,

೧. ಈ ಕೃತಕೃತ್ಯನಾದವನಿಗೆ ಯಾವವಿಧವಾದ ಫಲಾಪೇಕ್ಷೆಯೂ ಇಲ್ಲವು. ಹೀಗಿರುವಾಗ ನಿತ್ಯನೈಮಿತ್ತಿಕಾನುಷ್ಠಾನವೂ ಶಾಸ್ತ್ರವಶ್ಯತೆಯೂ ಏತಕ್ಕೆ? ಈತನು ಮುಕ್ತತುಲ್ಯನೆಂದು ಹೇಳಲ್ಪಟ್ಟಿರುತ್ತದೆ. ಮುಕ್ತರಿಗೆ ವರ್ಣಾಶ್ರಮಗಳು ಯಾವುವೂ ಇಲ್ಲವು, ನಿತ್ಯನೈಮಿತ್ತಿಕಗಳಿಲ್ಲವು, ಶಾಸ್ತ್ರವಶ್ಯತೆಯೂ ಇಲ್ಲವು, ಹೀಗಿರುವಾಗ, ಈ ಕೃತಕೃತ್ಯರಾದ ಪ್ರಪನ್ನರಿಗೆ ತಾನೇ ಹೇಗೆ ಆವಶ್ಯಕವು? ಮುಕ್ತರಿಗೆ ಸ್ವೇಚ್ಛಾನುಗುಣವಾಗಿ ಕೈಙ್ಕರ್ಯಸ್ವೀಕಾರವು. ಹಾಗೆಯೇ ಇವರುಗಳಿಗೂ ಏಕೆಕೂಡದು? ಹಾಗಾದರೆಶಾಸ್ತ್ರವನ್ನು ತಿರಸ್ಕರಿಸಬಹುದೇ? **"ಅಹರಹಸ್ಸಂಧ್ಯಾಮುಪಾಸೀತ"** ಇತ್ಯಾದಿ ಶಾಸ್ತ್ರವಿಧಿಗಳು ಕೃತಕೃತ್ಯನಲ್ಲದೆ ಪ್ರಪನ್ನನಲ್ಲದವನವಿಷಯದಲ್ಲಿ ಹೇಳಲ್ಪಟ್ಟಿರಬಹುದು.

ಪರಿತ್ಯಾಗೇ ಸದ್ಯಸ್ಸ್ವಪರ ವಿವಿಧಾ ನರ್ಥಜನನಾ ।
ದಲಂಘ್ಯಾ ಮಾಮೋಕ್ಷಾದನುಸರತಿ ಶಾಸ್ತ್ರೀಯ ಸರಣಿಂ ॥

೨. ಶ್ರೀ ಭಾಷ್ಯಕಾರರು ಚರಮದಶೆಯಲ್ಲಿ ಹತ್ತಿರಿರುವ ಶಿಷ್ಯರಾದ ಭಾಗವ ತೋತ್ತಮರುಗಳಿಗೆ ವಿಧಿಸಿದ ಉತ್ತರಕೃತ್ಯಗಳಲ್ಲಿ ಶ್ರೀಭಾಷ್ಯಪ್ರವಚನಾದಿ ಗಳು ಮಾತ್ರವೇ ಹೇಳಲ್ಪಟ್ಟಿವೇ ವಿನಾ ನಿತ್ಯ ನೈಮಿತ್ತಿಕಾದಿಗಳನ್ನನುಷ್ಠಿ ಸಬೇಕೆಂಬುವದರ ಪ್ರಸಕ್ತಿಯೇ ಇಲ್ಲವು. ಆದುದರಿಂದ ಅವರನುಷ್ಠಾನವು ಐಚ್ಛಿಕವಾಗಿರಬಹುದು. ಹಾಗೆಯೇ ಶ್ರೀವರಾಮುನಿಯೂ ಕೂಡ, "ಕುರ್ಯಾತ್ಪ್ರೀತ್ಯೈವಕಾರಿತಃ" ಎಂದು ಹೇಳಿರುವದರಿಂದ ಶಾಸ್ತ್ರವಿಧಿ ಯಾಗಿ ಅನುಷ್ಠಿಸುವ ಅವಶ್ಯಕವಿಲ್ಲವು, ಪ್ರೀತಿಯಿಂದ ತಾನೇ ಐಚ್ಛಿಕವಾಗಿ ಅನುಷ್ಠಿಸಬಹುದೆಂಬ ಶಂಕ್ಯೆ ಉಂಟಾಗಬಹುದು.

ಈ ಅಧಿಕಾರದಲ್ಲಿ ಅಂತಹ ಶಂಕಾಗಳಿಗೆಲ್ಲಾ ಸಮಾಧಾನವನ್ನು ಹೇಳುವವ ರಾಗಿ ಕೃತಕೃತ್ಯನಾದ ಪ್ರಪನ್ನನಿಗೂ ಶಾಸ್ತ್ರವಶ್ಯತೆಯು ತಪ್ಪಿದ್ದಲ್ಲ ವೆಂದೂ, ಶಾಸ್ತ್ರೀಯಪದ್ಧತಿಯನ್ನನುಸರಿಸುವದರಿಂದ ಈತನಿಗೆ ಏನೊಂದೂ ಪ್ರಯೋಜನವಿಲ್ಲದಿದ್ದರೂ ಪರಿತ್ಯಾಗದಲ್ಲಿ ತನಗೂ ಇತರರಿಗೂ ಸಹ ಅನೇಕಾನರ್ಥ ಗಳು ಪ್ರಾಪ್ತವಾಗುತ್ತದೆಂದೂ, ಆದುದರಿಂದ ಅವುಗಳು ಅವಶ್ಯಾನುಷ್ಠೇಯಗ ಳೆಂದೂ, ಉಪದೇಶಿಸುತ್ತಾರೆ. ಕೆಲವರು "**ಸರ್ವಧರ್ಮಾ ಪರಿತ್ಯಜ್ಯ**" ಎಂದು ಹೇಳಿರುವದರಿಂದ, ಸಕಲ ಕರ್ಮಪರಿತ್ಯಾಗವನ್ನು ಪ್ರಪನ್ನನು ಮಾಡಬಹುದು ಎಂಬ ಪಾರ್ಥವನ್ನು ಹೇಳಿ ಅನೇಕ ಅನರ್ಥಗಳಿಗೆ ಗುರಿಯಾಗುತ್ತಾರಲ್ಲಾ ಎಂಬ ಪರಿತಾಪದಿಂದ ಹಿತೋಪದೇಶವನ್ನು ಮಾಡುತ್ತಾರೆ:—

ಅರ್ಥ— ಮುಕುನ್ದೇ - ಮುಕ್ತಿದಾಯಕನಾದ ಶ್ರೀಮನ್ನಾರಾಯಣನಲ್ಲಿ **ಸ್ವಭರಂ** - ತನ್ನ ರಕ್ಷಾಭರವನ್ನು, **ನಿಕ್ಷಿಪ್ಯ** - ಇಟ್ಟು, ಸಮರ್ಪಿಸಿ, **ಅನಘಃ** - ವಿನಷ್ಟವಾದ ಪೂರ್ವಾಘವನ್ನೂ, ಲೇಪಿಸದ **ಉತ್ತರಾಘವನ್ನೂ**. ಉಳ್ಳವನಾದ ಪ್ರಯುಕ್ತನಿರ್ದುಷ್ಟನಾಗಿರುವ, ಆದುದರಿಂದ **ಮುಕ್ತವತ್** - ಮುಕ್ತನಿಗೆ ಸಮಾನನಾಗಿರುವ **ಅಸೌ** ಈದೇಹಸಂಬಂಧದಿಂದ ಪ್ರಾರಬ್ಧಕರ್ಮವನ್ನು ಮಾತ್ರ ಅನುಭವಿಸುತ್ತಿರುವ ಬದ್ಧನಾದ ಪ್ರಪನ್ನನು, ಇಷ್ಟುಮಟ್ಟಿಗೆ ಮಾತ್ರವೇ ಮುಕ್ತಸಾಮ್ಯವು. ಪುನಃ ವ್ಯತಿರೇಕ ದೃಷ್ಟಾಂತವೂ ಉಂಟೆಂದು ಹೇಳು ತ್ತಾರೆ, ಆದುದರಿಂದ **ಮುಕ್ತವತ್** ಎಂಬುವದನ್ನು ಪುನಃ ಅಧ್ಯಾಹಾರಮಾಡಿ ಕೊಳ್ಳತಕ್ಕದ್ದು, ಆದರೆ **ಮುಕ್ತವತ್** ಮುಕ್ತನ ಹಾಗೆ, **ಸ್ವಯಮುವಿದಿತ ಸ್ವಾಮಿ ಹೃದಯಃ** - ತಾವಾಗಿಯೇ, ಎಂದರೆ **ಶಾಸ್ತ್ರಗಳ** ಮೂಲಕವಲ್ಲದೆ

ಸರ್ವೇಶ್ವರನ ಮನೋಭಿಪ್ರಾಯವನ್ನು ಇಂಗಿತವನ್ನು ತಿಳಿಯುವವನು. ಮುಕ್ತನಿಗೆ ಪ್ರಕೃತಿಸಂಬಂಧವಿಲ್ಲದಿರುವದರಿಂದ ಸರ್ವಜ್ಞನಾಗಿರುವದರಿಂದ ಶಾಸ್ತ್ರದ ಆವಶ್ಯಕತೆಯಿಲ್ಲದಿರುವದರಿಂದ ಸ್ವಾಮಿಹೃದಯವನ್ನು ಅರಿತವನು, ಈ ಪ್ರಪನ್ನನು ಹಾಗಲ್ಲವೆಂಬ ಭಾವವು, **ಸ್ವತಂತ್ರಾಜ್ಞಾಸಿದ್ಧಾಂ** - ಸ್ವತಂತ್ರನಾದ ಸರ್ವೇಶ್ವರನ, ಆಜ್ಞೆಗಳಾದ ಶ್ರುತಿಸ್ಮೃತಿಗಳಲ್ಲಿ ವಿಧಿಸಲ್ಪಟ್ಟ, ಆಕಾರಣದಿಂದಲೇ, **ಅಲಂಘ್ಯಾಂ** - ಅತಿಕ್ರಮಿಸಲು ಸಾಧ್ಯವಲ್ಲದ, **ಶಾಸ್ತ್ರೀಯಸರಣಿಂ** - ಶಾಸ್ತ್ರದಲ್ಲಿ ತೋರಿಬರುವ ನಿಯಮದ ಮಾರ್ಗವನ್ನು, **ಪರಿತ್ಯಾಗೇ** - ತ್ಯಜಿಸಿದ್ದಾದರೆ, **ಸದ್ಯಃ** - ಒಡನೆಯೇ ಈ ಜನ್ಮದಲ್ಲೇ, **ಸ್ವಪರವಿವಿಧಾನರ್ಥಜನನಾತ್** - ತನಗೂ ಇತರರಿಗೂ ಸಹ ನಾನಾವಿಧವಾದ ಅನರ್ಥಗಳನ್ನುಂಟು ಮಾಡುವದರಿಂದ, **ಆಮೋಕ್ಷಾತ್** - ದೇಹಾವಸಾನದ ಮೇಲೆ ಮೋಕ್ಷಪ್ರಾಪ್ತಿಯುಂಟಾಗುವವರೆಗೂ, **ಅನುಸರತಿ** - ಅನುಸರಿಸುತ್ತಾನೆ, ಎಂದರೆ ಅನುಸರಿಸತಕ್ಕದ್ದೆಂಬ ಭಾವವು.

ತಾತ್ಪರ್ಯ. ಈ ಮೇಲಿನವತಾರಿಕೆಯಲ್ಲಿ ಉಪಪಾದಿಸಿದ ಶಂಕಾಗಳಲ್ಲಿ ಕೆಲವು, ಈ ಶ್ಲೋಕದಲ್ಲಿ ಪೂರ್ವಪಕ್ಷರೂಪದಲ್ಲಿ ತೋರ್ಪಡಿಸಿ, ಅವುಗಳಿಗೆ ಸಮುಚಿತಗಳಾದ ಸಮಾಧಾನಗಳು ಹೇಳಲ್ಪಟ್ಟಿರುತ್ತವೆ ಯಾವಾಗ ಪ್ರಪನ್ನನು **ಅನಘಃ** ದೋಷರಹಿತನಾಗಿ ಸಂಚಯ ಆಗಾಮಿ ಪಾಪಗಳಿಂದ ಬಿಡಲ್ಪಟ್ಟವನಾಗಿ ತನ್ನ ರಕ್ಷಾಭರವನ್ನು ಶರಣಾಗತರಕ್ಷಾದೀಕ್ಷಾವ್ರತನಾಗಿ ಸತ್ಯಸಙ್ಕಲ್ಪನಾಗಿರುವ ಶ್ರಿಯಃಪತಿಯಲ್ಲಿ ಸಮರ್ಪಿಸಿ ಬಿಟ್ಟನೋ, ಆಗ ಆತನು **ನಾಥ**ನಾದುದರಿಂದ ಪ್ರಿಯದಾಸನಾದ ಭಕ್ತನಿಗೆ ಯಾವದು ಹಿತವೋ ಅದನ್ನು ಆತನೇ ದಯಪಾಲಿಸಿ ಸಂರಕ್ಷಿಸುವನು. ಆ ವಿಷಯದಲ್ಲಿ ಈಷದಪಿಸಂದೇಹಕ್ಕವಕಾಶವಿಲ್ಲವು. ಆದುದರಿಂದ ಈತನು ಆಗ **ಮುಕ್ತವತ್** ಮುಕ್ತನಿಗೆ ಸಮಾನನಾದವನಾಗುತ್ತಾನೆಂದು ಹೇಳಲ್ಪಟ್ಟಿತು. ಯಾವಾಗ ಉಪಾಯಾನುಷ್ಠಾನವನ್ನು ಮಾಡಿದನೋ, ಆಗ ಈತನು **"ಪ್ರಾರಬ್ಧೇತರ ಪೂರ್ವಪಾಪಮಖಿಲಂ ಪ್ರಾಮಾದಿಕಂ ಚೋತ್ತರಂ ನ್ಯಾಸೇನ ಕ್ಷಪಯ"** ಎಂದು ಹೇಳಿರುವ ಹಾಗೆ ಪ್ರಾರಬ್ಧವಲ್ಲದ ಪೂರ್ವ ಮಾಡಿದ ಪುಣ್ಯಪಾಪಗಳೆಲ್ಲಾ ನಾಶವಾಗುತ್ತವೆ, ಬುದ್ಧಿಪೂರ್ವವಲ್ಲದ ಉತ್ತರಾಘವೂ ಅಂಟುವದಿಲ್ಲವು. ಈ ಅಭಿಪ್ರಾಯವು, **"ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್"** (ಶಾ. ಸೂ. ೪.೧.೧) ಎಂಬ ವ್ಯಾಸಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ:—**ತದಧಿಗಮೇ** - ಉಪಾಸನವು ಆರಂಭಿಸಲ್ಪಟ್ಟರೆ, ಆ ಕಾರಣದಿಂದ, ಪೂರ್ವಾಘವಿನಾಶವೂ ಉತ್ತರಾಘದ ಅಶ್ಲೇಷವೂ ಉಂಟಾಗುತ್ತದೆ. ಏಕೆಂದರೆ ಛಾಂದೋಗ್ಯ ಶ್ರುತಿಯಲ್ಲಿ ಹಾಗೆ ಹೇಳಿರುವದರಿಂದ.

ದುದರಿಂದ ಭರನ್ಯಾಸವನ್ನನುಷ್ಠಿಸಿದವನು **ಅನಘನು** ಎಂಬ ತಾತ್ಪರ್ಯವು. ಈ "**ಮುಕ್ತವತ್**" ಎಂಬ ದೃಷ್ಟಾಂತವು ಬಹು ಸ್ವಾರಸ್ಯವಾಗಿ ಆಕ್ಷೇಪ ಸಮಾಧಾನಗಳೆರಡಕ್ಕೂ ಅನುಕೂಲಿಸುವ ಹಾಗೆ ಇಲ್ಲಿ ಪ್ರಯೋಗಿಸಲ್ಪಟ್ಟಿರುತ್ತದೆ. **ಮುಕ್ತನ ಹಾಗೆ** ಎಂದು ಹೇಳಿರುವದರಿಂದ ಮುಕ್ತನು ಕರ್ಮಬದ್ಧನಲ್ಲದೆ ಶಾಸ್ತ್ರವಶ್ಯನಲ್ಲದೇ ವರ್ಣಾಶ್ರಮಧರ್ಮಗಳ ಆವಶ್ಯಕತೆಯಿಲ್ಲದೇ ಇರುವ ಹಾಗೆ ಈ **ಪ್ರಪನ್ನನೂ ಕೂಡ** ಶಾಸ್ತ್ರವಶ್ಯನಲ್ಲದೆ ವರ್ಣಾಶ್ರಮೋಚಿತ ಧರ್ಮಗಳನ್ನನುಷ್ಠಿಸದೆ ಇರಬಹುದೇ ಎಂದರೆ, ಈ ಸಂದರ್ಭಗಳಲ್ಲಿ ಮಾತ್ರ **ಮುಕ್ತವತ್** ಅಲ್ಲವು ಎಂದು ವ್ಯತಿರೇಕ ದೃಷ್ಟಾಂತದಿಂದ ತೋರ್ಪಡಿಸುತ್ತಾರೆ. ಮುಕ್ತನಾದರೋ **ಸ್ವಯಂವಿದಿತಸ್ವಾಮಿ ಹೃದಯಃ** ಆತನಿಗೆ ಪ್ರಕೃತಿಸಂಬಂಧವು ತೊಲಗಿರುವದರಿಂದ **ಸ್ವೇನ ರೂಪೇಣಾಭಿನಿಷ್ಪದ್ಯತೇ**" ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆಸ್ವಸ್ವರೂ**ಪಾವಿರ್ಭಾವ** ಉಂಟಾಗುವದರಿಂದ ಸರ್ವೇಶ್ವರನ ಹೃದಯವನ್ನು ತನ್ನ ಸರ್ವಜ್ಞತೆಯಿಂದ ತಿಳಿಯುವನು. ಈ ಕೃತಕೃತ್ಯನಾದ ಪ್ರಪನ್ನನಾದರೋ ಇನ್ನೂ ಬದ್ಧದೆಶೆಯಲ್ಲೇ ಇರುವದರಿಂದ **ಮುಕ್ತನ** ಹಾಗಲ್ಲದೆ "**ಸ್ವಯಮವಿದಿತ ಸ್ವಾಮಿ ಹೃದಯಃ**" ತಾನಾಗಿಯೇ ಸರ್ವೇಶ್ವರನ ಹೃದಯವನ್ನರಿಯಲಾರನು, ಶಾಸ್ತ್ರಮೂಲಕವಾಗಿ ತಿಳಿಯಬಲ್ಲನು. ಆದುದರಿಂದ ಈತನಿಗೆ "**ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ**" ಇದನ್ನು ಮಾಡತಕ್ಕದ್ದು, ಇದನ್ನು ಮಾಡತಕ್ಕದ್ದಲ್ಲವು ಎಂಬ ನಿರ್ಣಯದಲ್ಲಿ ಈತನಿಗೆ ಶಾಸ್ತ್ರವೇ ಪ್ರಮಾಣವು. **ಶಾಸ್ತ್ರೀಯಸರಣಿಂ ಅನುಸರತಿ** ಶಾಸ್ತ್ರದ ಮಾರ್ಗವನ್ನು ಅನುಸರಿಸತಕ್ಕದ್ದು. ನಿತ್ಯನೈಮಿತ್ತಿಕಕರ್ಮಗಳನ್ನು ಆಗತ್ಯದೇಹಾವಸಾನದವರೆಗೂ ಅನುಷ್ಠಿಸತಕ್ಕದ್ದೆಂಬ ಭಾವವು; **ಯಾವಜ್ಜೀವಂ** ಎಂದು ಹೇಳದೆ **ಆಮೋಕ್ಷಾತ್** ಎಂದು ಹೇಳಿದುದರಭಿಪ್ರಾಯವೇನೆಂದರೆ :—ಯಾವಾಗ ಸಾಂಗಭರನ್ಯಾಸವು ಅನುಷ್ಠಿಸಲ್ಪಟ್ಟಿತೋ, ಆಗ ದೇಹಾವಸಾನಾನಂತರ **ಮೋಕ್ಷವು** ಸಿದ್ಧವಾದುದರಿಂದ **ಆಮೋಕ್ಷಾತ್** ಎಂಬ ಪ್ರಯೋಗವು; ಅಥವಾ ಮೋಕ್ಷಪ್ರಾಪ್ತಿಯಾಗುವವರೆಗೂ ಈ ಲೀಲಾವಿಭೂತಿಯಲ್ಲಿರುವವರೆಗೂ ವರ್ಣಾಶ್ರಮ ಧರ್ಮಗಳಿಗನುಗುಣವಾದ ಆಚಾರವು ತಪ್ಪಿದ್ದಲ್ಲವೆಂಬುವದನ್ನು ಸೂಚಿಸುವದಕ್ಕಾಗಿಯೂ ಹಾಗೆ ಪ್ರಯೋಗವು. ಕರ್ಮಾನುಸಾರಪ್ರಾಪ್ತವಾದ ದೇಹರೂಪಪ್ರಕೃತಿಸಂಬಂಧವಿರುವವರಿಗೂ ಈ ಶಾಸ್ತ್ರೀಯವಶ್ಯತೆಯು ತಪ್ಪಿದ್ದಲ್ಲವೆಂಬ ಭಾವವು. ವರ್ಣಾಶ್ರಮ ಧರ್ಮಗಳು ಆತ್ಮಾವಿನ ಕರ್ಮಮೂಲಕ ಪ್ರಾಪ್ತವಾದ ಜನ್ಮ ಮತ್ತು ದೇಹಕ್ಕೆ ಸಂಬಂಧಿಸಿದುವೇ ವಿನಾ ಆತ್ಮಾವಿಗೆ ಸಂಬಂಧಿಸುವದಲ್ಲವು. ಹೀಗೆ ಸಂಕಲ್ಪಿಸಿದವನು ಸ್ವತಂತ್ರನಾದ ಸರ್ವೇಶ್ವರನು. ಆತನ ಆಜ್ಞಾರೂಪವಾದುದು ಶ್ರುತಿಸ್ಮೃ

ತಿರೂಪವಾದ ಶಾಸ್ತ್ರವು. ಆತನು ಸ್ವತಂತ್ರನಾದುದರಿಂದ ಆತನ ಶಾಸನಗಳ ವಿಷಯದಲ್ಲಿ ಯಾವ ವಿಧವಾದ ವಾದವೂ ಯುಕ್ತವಾದುದಲ್ಲವೆಂಬ ಭಾವವು. ಬದ್ಧನಿಗೆ ಮಾತ್ರ ಈ ವಿಧವಾದ ಶಾಸ್ತ್ರವಶ್ಯತೆ ಏಕೆ ಎಂಬ ವಾದವನ್ನು ತರಲು ಕಾರಣವೇ ಇರುವದಿಲ್ಲವೆಂಬರ್ಥವೂ ತೋರಿಬರುತ್ತದೆ. ಈ ಶಾಸ್ತ್ರಗಳಲ್ಲಿ ಹೇಳಿರುವ ವಿಧಿನಿಷೇಧವಾಕ್ಯಗಳಿಗೆ ವಿರೋಧವಾಗಿ ನಡೆಯಲು ಮಾರ್ಗವೇ ಇಲ್ಲವು ಎಂಬುವದನ್ನು ತಿಳಿಸುವದಕ್ಕಾಗಿ "**ಅಲಂಘ್ಯಾಂ**" ಎಂಬದಾಗಿ ಪ್ರಯೋಗಿಸಿರುತ್ತಾರೆ :—

ಶ್ರುತಿಸ್ಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ ।
ಆಜ್ಞಾಚ್ಛೇದೀ ಮಮದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ ॥

ಶ್ರುತಿಸ್ಮೃತಿಗಳು ಸರ್ವೇಶ್ವರನ ಆಜ್ಞೆಗಳು, ಅದನ್ನು ಯಾರು ಉಲ್ಲಂಘಿಸಿ ನಡೆಯುತ್ತಾರೋ, ಅವರು ನನ್ನಾಜ್ಞೆಯನ್ನು ಮೀರಿದವರಾಗಿ, ನನಗೆ ದ್ರೋಹವನ್ನು ಮಾಡಿದವರು, ನನ್ನ ಭಕ್ತರಾದರೇನು ಅವರು ವೈಷ್ಣವರಾಗುವದಿಲ್ಲವು, ಎಂಬ ವಿಷ್ಣುಧರ್ಮ ಶ್ಲೋಕವನ್ನೇ ಶ್ರೀಮದಾಚಾರ್ಯರವರೇ ಮುಂದೆ ಉದಾಹರಿಸುತ್ತಾರೆ. ಹಾಗೆಯೇ,

ಏವಂ ವಿಲಂಘಯನ್ಮರ್ತ್ಯೋ ಮರ್ಯಾದಾಂ ವೇದ ನಿರ್ಮಿತಾಂ ।
ಪ್ರಿಯೋಽಪಿ ನ ಪ್ರಿಯೋ ಸೌಮೇ ಮದಾಜ್ಞಾವ್ಯತಿವರ್ತನಾತ್ ॥

ಎಂಬ ವಚನವು ಇಲ್ಲಿ **ಅನುಸಂಧೇಯವು** ಹೀಗೆ ಮನುಷ್ಯನು ವೇದಶಾಸ್ತ್ರದಲ್ಲಿ ತೋರುವ ಶಾಸ್ತ್ರಮರ್ಯಾದೆಯನ್ನು ಉಲ್ಲಂಘಿಸುವದರಿಂದ, ಪ್ರಿಯನಾಗಲು ಭಕ್ತಿಮೊದಲಾದ ಯೋಗ್ಯತೆಯಿದ್ದರೂ, ಆತನು ನನ್ನ ಆಜ್ಞೆಯನ್ನು ಮೀರುವದರಿಂದ ನನಗೆ ಪ್ರಿಯನಾಗುವದಿಲ್ಲವು ಎಂದು ಇಲ್ಲಿ ಹೇಳಲ್ಪಟ್ಟಿರುತ್ತದೆ.

ಹೀಗೆ ನಿತ್ಯನೈಮಿತ್ತಿಕಾನುಷ್ಠಾನವನ್ನು ಮಾಡಿ ಶಾಸ್ತ್ರೀಯ ಸರಣಿಂ, ಶಾಸ್ತ್ರಮರ್ಯಾದೆಯನ್ನು **ಪರಿತ್ಯಾಗೇ** ತ್ಯಜಿಸಿದ ಪಕ್ಷದಲ್ಲಿ ತುಂಬಾ ಅನರ್ಥವು ಒಡನೇ ಈ ಜನ್ಮದಲ್ಲೇ ತನಗೂ ತನಗೆ ಸೇರಿದವರಿವಿಗೂ ಪ್ರಾಪ್ತವಾಗುತ್ತದೆಂದು "**ಸದ್ಯಸ್ಸ್ವಪರ ವಿವಿಧಾನರ್ಥಜನನಾತ್**" ಎಂಬುವದರಿಂದ ಉಪದೇಶಿಸಿರುತ್ತಾರೆ. ಇಬ್ಬರಿಗೂ ಅಕೃತ್ಯಕರಣ ಕೃತ್ಯಾಕರಣಾದಿ ದೋಷಗಳು ಪ್ರಾಪ್ತವಾಗುತ್ತವೆ ; ಇದರಿಂದ ತನಗೂ ಇತರರಿಗೂ ಸಹ ಕೇಡುಂಟಾಗುತ್ತದೆ. ತನಗೆ ಅನರ್ಥವ್ಯಾವುದೆಂದರೆ, "**ಅಂಧಾ ಭವಂತಿ ಖಂಜಾ ಭವಂತಿ ಕಾಣಾ ಭವಂತಿ**" ಕುರುಡನಾಗಲಿ ಕುಂಟನಾಗಲಿ ಒಂದು ಕಣ್ಣಿಲ್ಲದವನಾಗಲಿ ಇವೇ ಮುಂತಾದ ಕುಂದುಕಗಳು ಪ್ರಾಪ್ತವಾಗುವಿಕೆಯು. ಮತ್ತು ಭಾಗವತಗೋಷ್ಠಿಯಲ್ಲಿ ಸ್ವರೂಪ ಹಾನಿಯು ಇತರರಿಗನರ್ಥ ಹೇಗೆಂದರೆ :—

ಶಾಸ್ತ್ರವಶ್ಯತಾ ಅವಶ್ಯಕೀ.

ಇತ್ಥೀಪತ್ತ್ಯ ಸಂಬಂಧಮುಡಿಯಾಗ ಭಗವದ್ಭಾಗವತ ವಿಷಯಜ್ಞ

"ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನು ವರ್ತತೆ." (ಗೀ೩.೨೧)
ಎಂದು ಹೇಳಿರುವ ಹಾಗೆ ಈತನು ಶ್ರೇಷ್ಠನಾಗಿ ಹಾಕಿದ ಮೇಲುಪಂಕ್ತಿಯನ್ನನು ಸರಿಸಿ ಇತರರು ನಡೆಯುವರಾದುದರಿಂದ, ವರ್ಣಸಾಂಕರ್ಯಾದಿ ಮಹಾದೋಷಗಳು ಇತರರಿಗೂ ಪ್ರಾಪ್ತವಾಗುತ್ತವೆ ಎಂಬ ಭಾವವು.

ಈ ಹಿತೋಪದೇಶಕ್ಕೆ ಮುಖ್ಯಕಾರಣವೇನೆಂದರೆ, ಅನೇಕರು ಮೋಕ್ಷಕ್ಕೆ ಜ್ಞಾನವೇ ಮುಖ್ಯವಾದುದರಿಂದ, ಕರ್ಮವು ಅನಾವಶ್ಯಕವೆಂದು ಅಭಿಪ್ರಾಯ ಪಡುವರು. ಹೀಗೆ ಕರ್ಮಭ್ರಷ್ಟರಾಗಿ ಅನರ್ಥಗಳಿಗೆ ಗುರಿಯಾಗುತ್ತಾರಲ್ಲಾ ಎಂಬ ಪರಿತಾಪದಿಂದ, "ಸರ್ವಧರ್ಮಾನ್ ಪರಿತ್ಯಜ್ಯ" ಇತ್ಯಾದಿ ವಚನಗಳಿಗೆ ಅಪಾರ್ಥಗಳನ್ನು ಕಲ್ಪಿಸಿ ನಿತ್ಯನೈಮಿತ್ತಿಕಾನುಷ್ಠಾನಗಳನ್ನು ತ್ಯಜಿಸತಕ್ಕದ್ದು ಸರಿಯಲ್ಲವೆಂದುಪದೇಶಿಸುತ್ತಾರೆ. 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬುವದರಿಂದ ಸರ್ವಕರ್ಮಪರಿತ್ಯಾಗವು ಉದ್ದೇಶಿಸಲ್ಪಟ್ಟಿದ್ದರೆ, ಈ ವಾಕ್ಯಗಳಿಗೆ ಸ್ವಲ್ಪ ಹಿಂದೆ

"ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ
ಸ್ವಕರ್ಮ ನಿರತಸ್ಸಿದ್ಧಿಂ ಯಥಾ ವಿನ್ದತಿ ತಚ್ಛೃಣು" (ಗೀ ೧೮-೪೫)
ಎಂದರೆ, ತಮ್ಮತಮ್ಮ ಸರಿಯಾದ ನಿತ್ಯಕರ್ಮಾನುಷ್ಠಾನನಿರತರು ಕೊನೆಗೆ ಮೋಕ್ಷವನ್ನೇ ಹೊಂದುವರು ಸ್ವಕರ್ಮನಿರತನಾಗಿರುವವನು ಸಿದ್ಧಿಯನ್ನು ಮೋಕ್ಷವನ್ನು ಹೊಂದುವನು. ಹೀಗೆ ಸ್ವಕರ್ಮನಿರತನಾದವನು ಹೇಗೆ ಮೋಕ್ಷವನ್ನು ಹೊಂದುವನೋ ಅದನ್ನು ಹೇಳುವೆನು ಕೇಳು ಎಂಬದಾಗಿ ಎಂದಿಗೂ ಹೇಳುತ್ತಿರಲಿಲ್ಲವು.

ಹಾಗೆಯೇ ಸ್ನಾನ ಪಂಚಮಹಾಯಜ್ಞಗಳು, ಆಹಾರ ಮುಂತಾದವುಗಳಲ್ಲೆಲ್ಲಾ ಈ ಪ್ರಪನ್ನನು ಶಾಸ್ತ್ರೀಯನಿಯಮನವನ್ನನುಸರಿಸತಕ್ಕದ್ದು.

ಶಾಸ್ತ್ರವಶ್ಯತೆಯು ಆವಶ್ಯಕವು.

ಕೃತಕೃತ್ಯನಾದ ಪ್ರಪನ್ನನಿಗೆ ಭಗವದ್ಭಾಗವತ ಶೇಷತ್ವಮೂಲಕವಾಗಿ ಪ್ರಾಪ್ತವಾದ ಕೈಂಕರ್ಯವು ಪ್ರಧಾನವಾದುದೆಂದು ಈಗ ಸ್ಥಾಪಿಸಲ್ಪಟ್ಟಿತು.

ಳಿಲ್ ಇರ್ವ್ನ ಪಣ್ಣುಮ್ ಕೈಙ್ಕರ್ಯಮ್ ಶಾಸ್ತ್ರಸಾಪೇಕ್ಷರುಚಿಯಾ ಲೇಯೋ ? ಶಾಸ್ತ್ರನಿರಪೇಕ್ಷರುಚಿಯಾಲೇಯೋ ? ಎನ್ನಿಲ್, ಇರುಳ್ ತರುಮಾಞಾಲತ್ತುಳ್ಳಿರುಕ್ಕಿರ ಇವನುಕ್ಕು ಶಾಸ್ತ್ರಮ್ ಕೈವಿಳಕ್ಕಾಕ ವೇಣ್ಡುಗೈಯಾಲೇ ಯಥಾಶಾಸ್ತ್ರಮಾಯ್, ಶಾಸ್ತ್ರಂ ವಿಕಲ್ಪಿತ್ತವಿತ್ತಿಲ್ ಯಥಾರುಚಿಯಾಗಕ್ಕಡವದು. ಅದೆಙ್ಗನೇ ಎನ್ನಿಲ್ ? ಎನ್ನ

ಆದರೆ ಈ ಕೈಙ್ಕರ್ಯವೇನು ಶಾಸ್ತ್ರೀಯನಿಯಮನಾನುಸಾರ ನಡೆಸತಕ್ಕದ್ದೇ ? ಅಥವಾ ಶಾಸ್ತ್ರನೈರಪೇಕ್ಷ್ಯ ನಡೆಸತಕ್ಕದ್ದೇ ಎಂಬ ಸಂದೇಹದಲ್ಲಿಶಾಸ್ತ್ರೀಯನಿಯಮನಾನುಸಾರವೇ ನಡಿಸತಕ್ಕದ್ದೆಂಬುದು ಈ ಅಧಿಕಾರದಲ್ಲಿ ಹೇಳಿರುವದರಿಂದ ಇದಕ್ಕೆ ಶಾಸ್ತ್ರೀಯನಿಯಮನಾಧಿಕಾರವೆಂಬ ಹೆಸರು. ಪ್ರಪನ್ನನ ಸರ್ವಧರ್ಮಗಳೂ ಸ್ವಾಮಿಕೈಙ್ಕರ್ಯರೂಪವಾದುದರಿಂದ, ಅವುಗಳನ್ನು ಶಾಸ್ತ್ರಮರ್ಯಾದೆಯನ್ನತಿಕ್ರಮಿಸದೆ, ನಡಿಸತಕ್ಕದ್ದೆಂಬದಾಗಿ ಹೇಳುತ್ತಾರೆ.

ಇತ್ತ್ಯೇಪತ್ತ್ಯಸಂಬಂಧಮುಡಿಯಾಗ - ಭಗವದ್ಭಾಗವತರುಗಳಿಗೆ ಶೇಷಭಾವವನ್ನು ಹೊಂದಿರುವ ಸಂಬಂಧದ ಮೂಲಕವಾಗಿ, **ಭಗವದ್ಭಾಗವತ ವಿಷಯಙ್ಗಳಿಲ್** - ಅವರುಗಳ ವಿಷಯದಲ್ಲಿ, **ಇರ್ವ್ನ**–ಈ ಕೃತಕೃತ್ಯನಾದ ಪ್ರಪನ್ನನು, **ಪಣ್ಣುಮ್ ಕೈಙ್ಕರ್ಯಮ್** - ಮಾಡುವ ಕೈಙ್ಕರ್ಯವು, **ಶಾಸ್ತ್ರಸಾಪೇಕ್ಷರುಚಿಯಾಲೇಯೋ ?** - ಶಾಸ್ತ್ರಾಪೇಕ್ಷೆಯಿಂದ ಉಂಟಾದ ರುಚಿಯಿಂದಲೋ ? ಅಥವಾ **ಶಾಸ್ತ್ರನಿರಪೇಕ್ಷರುಚಿಯಾಲೇಯೋ**-ಶಾಸ್ತ್ರಾಪೇಕ್ಷೆಯಿಲ್ಲದೆ ತನ್ನಿಷ್ಟಾನುಸಾರ ಸ್ವತಃ ಪ್ರಾಪ್ತವಾದ ರುಚಿಯಿಂದಲೋ ? **ಎನ್ನಿಲ್** – ಎಂದು ವಿಚಾರಮಾಡಿದರೆ :—**ಇರುಳ್ ತರುಮ್** – ಅಜ್ಞಾನವನ್ನು ಕೊಡುವ, **ಮಾ** - ಮಹಾ ವಿಶಾಲವಾದ, **ಞಾಲತ್ತುಳ್**-ಪೃಥಿವಿಯಲ್ಲಿ, **ಇರುಕ್ಕಿರ**-ಇರುವ, **ಶಾಸ್ತ್ರಮ್ ಕೈವಿಳಕ್ಕಾಕವೇಣ್ಡುಗೈಯಾಲೇ** - ಶಾಸ್ತ್ರವು ಕೈಯಲ್ಲಿ ಹಿಡಿದಿರುವ ಬೆಳಕಿನ ಹಾಗೆ ಆಗಬೇಕಾಗಿರುವದರಿಂದ, ಕೈದೀವಿಟಿಗೆ ಹೇಗೆ ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ಕೊಡುತ್ತದೋ ಹಾಗೆ ಶಾಸ್ತ್ರವು ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ಕೊಡುತ್ತದೆಯಾದುದರಿಂದ ಎಂಬ ಭಾವವು, **ಯಥಾ ಶಾಸ್ತ್ರಮಾಯ್ಕ್ಕಡವದು** - ಶಾಸ್ತ್ರಾನುಸಾರವಾಗಿ ನಡಿಯತಕ್ಕದ್ದು ; **ಶಾಸ್ತ್ರಂ ವಿಕಲ್ಪಿತ್ತವಿತ್ತಿಲ್** - ಶಾಸ್ತ್ರವು, ಎಲ್ಲಿ ಇದಾಗಲಿ ಅದಾಗಲಿ ಎಂದು ವಿಕಲ್ಪಿಸಿ ಹೇಳುವ ಸಂದರ್ಭದಲ್ಲಿ, **ಯಥಾರುಚಿಯಾಗಕ್ಕಡವದು** - ತನ್ನಿಷ್ಟಾನುಸಾರವಾಗಿ ನಡಿಸಬಹುದು. ಈ ಕೃತಕೃತ್ಯನಾದ ಪ್ರಪನ್ನನು ಮಾಡುವ ಕಾಯಿಕ, ವಾಚಿಕ, ಮಾನಸಿಕ ಕೈಙ್ಕರ್ಯಗಳನ್ನೆಲ್ಲಾ ಶಾಸ್ತ್ರಾನುಸಾರ

ರುವಮಾನಾರ್ ತಿರುನಾಟ್ಟುಕ್ಕೆಳುನ್ದರುಳುಗಿರಪೋದು ಶ್ರೀಪಾದತ್ತಿಲೆ ಸೇವಿ

ವಾಗಿಯೇ ನಡಿಸತಕ್ಕದ್ದೇ ಅಥವಾ ಶಾಸ್ತ್ರದ ಆವಶ್ಯಕತೆಯಿಲ್ಲದೆ ತನ್ನಿಷ್ಟಾನುಸಾರವಾಗಿ ನಡಿಸಬಹುದೋ ಎಂಬ ಶಂಕಾದಲ್ಲಿ ಶಾಸ್ತ್ರಾನುಸಾರವಾಗಿಯೇ ನಡಿಸತಕ್ಕದ್ದೆಂದುಪದೇಶಿಸುತ್ತಾರೆ. ಚೇತನನು ಪ್ರಕೃತಿಯಿಂದ ಬದ್ಧನಾಗಿರುವದರಿಂದ ಅವಿದ್ಯೆಯಿಂದ ಜ್ಞಾನವು ಆವೃತವಾಗಿ ಸ್ವಸ್ವರೂಪವನ್ನೂ ಪರಬ್ರಹ್ಮ ಸ್ವರೂಪವನ್ನೂ ತಿಳಿಯದೇ ಇರುವ ಪ್ರಯುಕ್ತ ಇರುಳ್‌ಜಾಲತ್ತ್ರೈ ಎಂದು ಪ್ರಯೋಗಿಸಿರುತ್ತಾರೆ. ಈ ಕತ್ತಲಿಗೆ ಬೆಳುಕು ಯಾವುದು ಎಂದರೆ ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ **“ಶನುಯುಸಿ ತಮಃ ಪ್ರಜಾನಾಂ ಶಾಸ್ತ್ರಮಯೇನ ಸ್ಥಿರಪ್ರದೀಪೇನ”** ಎಂದು ಹೇಳಿರುವ ಹಾಗೆ ದಯಪಾಲಿಸಿರುವ ಶಾಸ್ತ್ರರೂಪವಾದ ಸ್ಥಿರಪ್ರದೀಪವು. ಈ ದೀಪವು ಎಣ್ಣೆಯದೀಪದ ಹಾಗಲ್ಲವು; ಎಣ್ಣೆಯು ಮುಗಿದನಂತರ ಆರಿಹೋಗುವಂತಾದಲ್ಲವು, ಕ್ಷಣಕ್ಷಣಕ್ಕೂ ಬದಲಾಯಿಸುವಂಥಾದ್ದಲ್ಲವು. ಯಾವಾಗಲೂ ಒಂದೇ ವಿಧವಾಗಿ ಪ್ರಕಾಶಿಸುವಂಥಾದ್ದು. ಹೀಗೆ ಸ್ಥಿರವಾದ ಪ್ರಕಾಶವುಳ್ಳದ್ದು. ಆದುದರಿಂದಲೇ ಇಲ್ಲಿ **ಕೈವಿಳಕ್ಕು** ಎಂಬ ಪ್ರಯೋಗವು. ಬೆಳಕು ಒಂದು ಕಡೆಯಲ್ಲಿ ಹಚ್ಚಿಟ್ಟಿದ್ದರೆ ನಾವು ದೂರ ಹೋದ ಹಾಗೆಲ್ಲಾ ಪ್ರಕಾಶವು ಕಮ್ಮಿಯಾಗಬಹುದು. ಕೈಯಲ್ಲಿರುವ ಬೆಳಕಾದರೋ ಹಾಗಲ್ಲವು. ನಾವು ಹೋದಹಾಗೆಲ್ಲಾ ಅದೂ ಜೊತೆಯಲ್ಲೇ ಬರುವದರಿಂದ ಪ್ರಕಾಶವು ಒಂದೇ ವಿಧವಾಗಿದ್ದುಕೊಂಡು ಸ್ಥಿರಪ್ರದೀಪವಾಗಿ ಪರಿಣಮಿಸುತ್ತದೆ. ನಮ್ಮ ಜ್ಞಾನವು ಅಜ್ಞಾನಾವೃತವಾಗಿರುವದರಿಂದ ಸರ್ವೇಶ್ವರನಿಗೆ ಅಭಿಮತವಾದುವು ಯಾವುವೆಂದು ನಾವರಿಯವು. ಹಾಗೆ ಅಭಿಮತವಾದುವು ಯಾವುವೆಂಬುವದು ಆತನು ಅನುಗ್ರಹಿಸಿರುವ **“ಶ್ರುತಿಸ್ಮೃತಿರ್ಮಮೈವಾಜ್ಞಾ”** ಎಂದು ಹೇಳಿರುವ ಹಾಗೆ, ಶಾಸ್ತ್ರಗಳಿಂದ ವ್ಯಕ್ತಪಡುತ್ತದೆ. ಆದುದರಿಂದ ಶಾಸ್ತ್ರದಪೇಕ್ಷೆಯು ಅತ್ಯಾವಶ್ಯಕವು. ತದನುಸಾರವಾಗಿ ವರ್ತಿಸತಕ್ಕದ್ದು. ಶಾಸ್ತ್ರವೇನಾದರೂ ವಿಕಲ್ಪಿಸಿ ಹೇಳಿದ್ದರೆ ಆಗ ತನ್ನಿಷ್ಟಾನುಸಾರ ಆ ವಿಕಲ್ಪಗಳಲ್ಲಿ ಒಂದನ್ನು ಅವಲಂಬಿಸಬಹುದು ಎಂದು ಹೇಳಿ, ಅದಕ್ಕೆ ಶ್ರೀಯತಿವರ್ಯರ ಶ್ರೀಸೂಕ್ತಿಯಿಂದ ದೃಷ್ಟಾಂತವನ್ನು ತೋರಿಸುತ್ತಾರೆ. **“ವೇದಮನೂಚ್ಯಾಚಾರ್ಯೋನ್ತೇವಾಸಿನ ಮನುಶಾಸ್ತಿ,”** ಎಂದು ಹೇಳಿರುವ ಹಾಗೆ ಮತೋದ್ಧಾರಕರ ಉಪದೇಶವು ಶಿಷ್ಯರಿಗೆಲ್ಲಾ ಶಾಸನವಾದುದರಿಂದ, **“ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ”** ಎಂದು ಶ್ರುತಿಯು ಉದ್ಘೋಷಿಸುವಂತೆ, ಶ್ರೀಯತಿರಾಜರು ವಿಕಲ್ಪಿಸಿ

ತ್ತಿರುನ್ದ ಮುದಲಿಗಳುಡೈಯ ಆರ್ತಿಯೈಕ್ಕಣ್ಡು ಇವರ್‌ಗಳೈ ಯಳೈತ್ತ ರುಳಿಯೆನ್ನುಡೈಯ ವಿಯೋಗತ್ತಿಲ್ ದೇಹತ್ಯಾಗ ಪಣ್ಣಿನಾರುಂಡಾಗಿಲ್ ಆಳವನ್ದಾರ್ ಶ್ರೀಪಾದಮೇ ಎನ್ನೋಡವರ್‌ಗಳಕ್ಕು ಸಂಬಂಧಮಿಲ್ಲೈ ಯೆನ್ರರುಳಿಚ್ಚೆಯ್ಯ ; ಇವರ್‌ಗಳುಮಿತ್ತೈಕ್ಕೇಟ್ಟು ಮಿಗವುಮ್ ಶೋಕಾರ್ತರಾಯ್ ಇನಿ ಎಙ್ಗಳುಕ್ಕು ಚೆಯ್ಯವಡುಪ್ಪದೇದೆನ್ರು ವಿಣ್ಣಪ್ಪಂ

ಹೇಳಿದ ನಿರ್ದುಷ್ಟವಾದ ಕರ್ಮಗಳಲ್ಲಿ ಯಾವುದಾದರೂ ಒಂದನ್ನೂ ಅನುಷ್ಠಿಸಬಹುದು ಎಂದುಪದೇಶಿಸುತ್ತಾರೆ. ಇದರಿಂದ **ತಾನಿ ಅನವದ್ಯಾನಿಕರ್ಮಾಣಿ ಸೇವಿತವ್ಯಾನಿ** ಎಂಬ ಶಾಸ್ತ್ರನಿಯಮವು ಇಲ್ಲಿ ಪ್ರದರ್ಶಿಸಲ್ಪಟ್ಟಿತು. **ಅದೆಙ್ಗನೇ ಎನ್ನಿಲ್** ಅದು ಎಲ್ಲಿ ಎಂದರೆ, ಅದು ಹಾಗೆ ಎಲ್ಲಿ **ತೋರಿ**ಬರುತ್ತದೆ ಎಂದರೆ, **ಎಮ್ಬೆರುಮಾನಾರ್**-ನಮಗೆ ಪರಮಾಚಾರ್ಯರಾದ ಶ್ರೀಯತಿರಾಜರವರು, **ತಿರುನಾಟ್ಟುಕ್ಕೆಳನ್ದರುಳಿಕಿರಪೋದು**-ಪರಮಪದಕ್ಕೆ ಹೋಗಲು ಅನುಮೋದಿಸಿದಾಗ, **ಶ್ರೀಪಾದತ್ತಿಲ್** ಆ ಯತೀಂದ್ರರ ಚರಣಾರವಿಂದದಲ್ಲಿ, **ಸೇವಿತ್ತಿರುನ್ದ ಮುದಲಿಗಳುಡೈಯ ಆರ್ತಿಯೈ ಕಂಡು** - ಸೇವೆಮಾಡಿಕೊಂಡಿರುವ ಎಂದರೆ ಆಶ್ರಯಿಸಿರುವ ಮಹಾಜ್ಞಾನಿಗಳಾದ ತಮ್ಮ ಪ್ರಿಯಶಿಷ್ಯರ ಮುಂದೆ ವಿಯೋಗಮೂಲಕವಾಗಿ ಉಂಟಾಗುವ ವ್ಯಸನವನ್ನು ನೋಡಿ, **ಇವರ್‌ಗಳೈ ಯಳೈತ್ತರುಳಿ** - ಈ ಶಿಷ್ಯರುಗಳನ್ನು ಸಮೀಪಕ್ಕೆ ಬರುವ ಹಾಗೆ ದಯಮಾಡಿ, **ಎನ್ನುಡೈಯ ವಿಯೋಗತ್ತಿಲ್** - ನನ್ನ ವಿಯೋಗದಲ್ಲಿ, **ದೇಹತ್ಯಾಗಮ್ ಪಣ್ಣಿನಾರುಂಡಾಗಿಲ್** -- ನೀವೂ ದೇಹತ್ಯಾಗವನ್ನು ಮಾಡಿದುದಾದರೆ, **ಆಳವಂದಾರ್ ಶ್ರೀಪಾದಮೇ** - ನಮ್ಮ ಪ್ರಾಚಾರ್ಯರಾದ ಶ್ರೀ ಆಳವಂದಾರ್ರವರ ಶ್ರೀಪಾದದ ಮೇಲೆ ಆಣೆಯಿಟ್ಟು ಹೇಳುತ್ತೇನೇನೆಂದರೆ:—**ಎನ್ನೋಡವರ್‌ಗಳಕ್ಕು**-ನನ್ನೊಂದಿಗೆ ಆ ಶಿಷ್ಯರುಗಳಿಗೆ, **ಸಂಬಂಧಮಿಲ್ಲೈ ಎನ್ರರುಳಚ್ಚೆಯ್ಯ**-ಏನೊಂದೂ ಸಂಬಂಧವಿರುವಿದಲ್ಲವೆಂದು ಹೇಳಲಾಗಿ; **ಇವರುಗಳುಮ್** - ಈ ಶಿಷ್ಯರುಗಳು, **ಮಿಗವುಮ್ ಶೋಕಾರ್ತರಾಯ್** - ಹೆಚ್ಚಾದ ಶೋಕದಿಂದ ಪೀಡಿತರಾಗಿ, **ಇನಿ** - ಇನ್ನು ಮೇಲೆ, **ಎಙ್ಗಳುಕ್ಕು** - ನಮಗೆ, **ಚೆಯ್ಯಪಡುವದು** - ಇತಿಕರ್ತ್ರವ್ಯತಾರೂಪದಲ್ಲಿ ಮಾಡಬೇಕಾದುದು, **ಏದೆನ್ರು ವಿಣ್ಣಪ್ಪಂಶೆಯ್ಯ** - ಯಾವುದು ಎಂದು ವಿಜ್ಞಾಪಿಸಿಕೊಳ್ಳಲಾಗಿ, ಬೆಸಗೊಳ್ಳಲಾಗಿ. **ಇವರ್**-ಈ ಯತಿರಾಜರವರು, **ಅರುಳಿಚ್ಚೆಯ್ಯದರುಳಿನ** - ಕೃಪೆಮಾಡಿ ಹೇಳಿದ, **ವಾರ್ತೈ** - ಸೂಕ್ತಿ ಏನೆಂದರೆ ಹೇಳುತ್ತಾರೆ :—

ಶೆಯ್ಯ; ಇವರರುಳಿಚೆಯ್‌ದರುಳಿನ ವಾರ್ತ್ತೈ : ಒರುವರ್ ಪ್ರಪನ್ನನಾನಾಲ್ ಅವನುಡೈಯ ಆತ್ಮಯಾತ್ರೈ ಭಗವದಧೀನ ಮಾಗೈಯಾಲೇ ಅದಿಲವನುಕ್ಕು ಅನ್ವಯಮಿಲ್ಲೈ. ಉಂಡೆಂದಿರುನ್ದಾನಾಗಿಲ್ ಆತ್ಮಸಮರ್ಪಣಮ್ ಪೊಯ್‌ಯಾಮಿತ್ತನೈ. ದೇಹಯಾತ್ರೈ ಕರ್ಮಾ

ಶತಾಯುಃ ಪುರುಷಃ - ಎಂದು ಹೇಳಿರುವ ಹಾಗೆ ಒಬ್ಬ ಪುರುಷನಿಗೆ ಆಯುಃಪ್ರಮಾಣವು ಒಂದು ನೂರುವರ್ಷಗಳು ; ಆದರೆ ಶ್ರೀಭಾಷ್ಯಕಾರರವರು ಶ್ರೀಶಾಜ್ಞಯಾ ಈ ಲೀಲಾವಿಭೂತಿಯಲ್ಲಿ ಈ ಆಯುಃಪರಿಮಿತಿಯನ್ನೂ ಮೀರಿ ಲೋಕಸಂಗ್ರಹಾರ್ಥವಾಗಿ ೧೨೦ವರುಷಗಳಿದ್ದು ಪರಮಪದಿಸಿದರು. ಕಾಲವು ಸನ್ನಿಹಿತವಾಯಿತೆಂದು ತಮ್ಮ ಸರ್ವಜ್ಞತೆಯಿಂದರಿತವರಾಗಿ, ಅದನ್ನು ತಮ್ಮ ಪ್ರಿಯಶಿಷ್ಯರುಗಳಿಗೆಲ್ಲಾ ತಿಳಿಸಲು, ಅವರು ತುಂಬಾ ಖೇದಗೊಂಡು, ಗುರುವಿಶ್ಲೇಷೆಯನ್ನು ಸಹಿಸದೆ, ತಾವುಗಳೂ ದೇಹತ್ಯಾಗವನ್ನು ಮಾಡುವದಾಗಿ ಅರಿಕೆಮಾಡಿಕೊಳ್ಳಲು; ಆಗ ಯತಿರಾಜರು ತಮ್ಮ ಪ್ರಾಚಾರ್ಯರಾಗಿ ಜ್ಞಾನನಿಧಿಯಾದ ಪ್ರಯುಕ್ತ ಅವರಲ್ಲಿ ತುಂಬಾ ಭಕ್ತಿಯುಳ್ಳವರಾದುದರಿಂದ ಅವರ ಮೇಲೆ ಆಣೆ ಇಟ್ಟು, ಈ ವಿಧವಾಗಿ ಪ್ರಾಣತ್ಯಾಗಮಾಡುವದು ಅಶಾಸ್ತ್ರೀಯವಾಗುವದರಿಂದ ಆಗ ಅವರು ಶಿಷ್ಯರೆಂದೆನಿಸುವದಕ್ಕೇನೆ ಅರ್ಹತೆಯಿಲ್ಲದೆ ಹೋಗುತ್ತದೆಂದು ತಿಳಿಸಲು ; ಆಗ ಶಿಷ್ಯರು ತುಂಬಾ ಚಿಂತಾಕ್ರಾಂತರಾಗಿ ತಾವು ಮಾಡತಕ್ಕ ಕರ್ತವ್ಯವೇನೆಂದು ಪ್ರಾರ್ಥಿಸಿದರು. ಆಗ ಶಿಷ್ಯರುಗಳ ವಿಷಯದಲ್ಲಿ ದಯಾರ್ದ್ರ ಹೃದಯರಾದ ಯತಿಶೇಖರರು ಉಪದೇಶಿಸಿದರೇನೆಂದರೆ :— **ಒರುವರ್** - ಒಬ್ಬನು, **ಪ್ರಪನ್ನನಾನಾಲ್** - ಉಪಾಯಾನುಷ್ಠಾನಮಾಡಿ ಪ್ರಪನ್ನನೆಂದೆನಿಸಿದ ಬಳಿಕ, **ಅವನುಡೈಯ** - ಆತನ, **ಆತ್ಮಯಾತ್ರೈ** - ಆತ್ಮಾ ಹೇಗೆ ಸದ್ಗತಿಯನ್ನು ಹೊಂದಬೇಕೋ ಅಂತಹ ವ್ಯಾಪಾರವು, **ಭಗವದಧೀನಮಾಗೈಯಾಲೇ** - ಭಗವಂತನ ಅಧೀನವಾದುದರಿಂದ, **ಅದಿಲ್** - ಆ ವಿಷಯದಲ್ಲಿ, **ಅವನುಕ್ಕು ಅನ್ವಯಮಿಲ್ಲೈ** - ಅವನಿಗೆ ಸಂಬಂಧವಿಲ್ಲವು. **ಉಂಡೆಂದಿರಿಂದಾನಾಗಿಲ್** - ತನಗೆ ಆ ವಿಷಯದಲ್ಲಿ ಸಂಬಂಧ ಉಂಟೆಂದು ಇದ್ದುದಾದರೆ, **ಆತ್ಮಸಮರ್ಪಣವು ಪೊಯ್ಯಾಮಿತ್ತನೈ** - ಸುಳ್ಳಾದುದಾಗುವದಷ್ಟೇ, ಎಂದರೆ ವ್ಯರ್ಥವಾದುದಾಗುವದಷ್ಟೇ, ಎಂದರೆ ವ್ಯರ್ಥವಾಗುವದೆಂಬ ಭಾವವು. ಯಾವಾಗ ಸ್ವರೂಪರಕ್ಷಾಫಲಭರಗಳನ್ನು ಶ್ರಿಯಃಪತಿಯಲ್ಲಿಟ್ಟು ಭರನ್ಯಾಸವನ್ನು ಗುರುಮುಖೇನ ಅನುಷ್ಠಿಸಿದನೋ, ಒಡನೇ ಈ ಸರ್ವಭರವನ್ನೂ ಭಗವಂತನೇ ವಹಿಸಿರುವನು. ತನ್ನ

ಧೀನೈಯಾಗೈಯಾಲೇ ಯಡಕ್ಕು ಕ್ಕರೈಯ ವೇಂಡಾ, ಕರೈನ್ದಾನಾಗಿಲ್ ನಾಸ್ತಿಕನಾಮಿತ್ತನೈ. ಆಗೈಯಾಲ್ ಉಭಯ ಯಾತ್ರೈಯುಂಕೊಂಡಿವನುಕ್ಕು ಕಾರ್ಯಮಿಲ್ಲೈ. ೨ ಆನಾಲ್ ಮನೋವಾಕ್ಕಾಯಙ್ಗಳಾಗಿರ ತ್ರಿವಿಧ ಕರಣಙ್ಗಳೈಕ್ಕೊಣ್ಡು ವೇಣ್ಡಿತ್ತು ಚೆಯ್ದು ತಿರಿಯವ

ರಕ್ಷಣೆಯಲ್ಲಿ ತಾನು ಅಶಕ್ತನೆಂದೂ ತನಗೆ ಇನ್ನ್ಯಾರೂ ಗತಿಯಿಲ್ಲವೆಂದೂ, ಭಾವಿಸಿದರೆ ತಾನು ಅನನ್ಯಗತಿಕನೆಂದು ಹೇಳಿಕೊಂಡಿದುದು ಯಥಾರ್ಥವಾಗುವದೆಂಬ ಭಾವವು. ಯಾವಾಗ ಅನನ್ಯಗತಿತ್ವರೂಪಕಾರ್ಪಣ್ಯವೇ ಇಲ್ಲವೋ, ಆಗ ಮುಖ್ಯವಾದ ಒಂದಂಗವೇ ಇಲ್ಲವಾದ ಪ್ರಯುಕ್ತ **ಆತ್ಮಸಮರ್ಪಣಂ ಪೊಯ್ಯಾಮ್** ಎಂದು ಹೇಳಲ್ಪಟ್ಟಿತು. ಆದುದರಿಂದ ತನಗೆ ದೇಹಾವಸಾನಾನಂತರ ಪ್ರಾಪ್ತವಾಗುವ ಸದ್ಗತಿ ವಿಷಯದಲ್ಲಿ ಮಾಡತಕ್ಕದ್ದೇನೂಇಲ್ಲವು. ಆದರೆ ದೇಹವಿರುವ ತನಕವಾದರೂ ದೇಹಯಾತ್ರೆಗಾಗಿಯಾಗಲಿ ಆ ಪ್ರಪನ್ನನು ಚಿಂತಿಸಬೇಡವೇ ಎಂದರೆ ಅದಕ್ಕಾಗಿ ಕೂಡ ಅವನು ಶೋಕಿಸುವ ಆವಶ್ಯಕವಿಲ್ಲವೆಂದುಪದೇಶಿಸುತ್ತಾರೆ:—**ದೇಹಯಾತ್ರೈ** - ಉದರ ಪೋಷಣೆಗಾಗಿ ಮಾಡಬೇಕಾದ ವ್ಯಾಪಾರವು, **ಕರ್ಮಾಧೀನೈಯಾಗೈಯಾಲೇ** - ಈತನ ಪ್ರಾರಬ್ಧಕರ್ಮಕ್ಕನುಗುಣವಾದುದರಿಂದ, **ಅದುಕ್ಕು ಕರೈಯ ವೇಣ್ಡಾ** - ಅದಕ್ಕಾಗಿ ದುಃಖಿಸಬೇಡ, **ಕರೈನ್ದಾನಾಗಿಲ್** - ಹಾಗೆ ದುಃಖಿಸಿದನಾದರೆ, **ನಾಸ್ತಿಕನಾಮ್** - ಈಶ್ವರನೇ ಇಲ್ಲವೆಂದು ಹೇಳುವ ನಾಸ್ತಿಕನ ಹಾಗೆ ಆಗುವನು. ಈಶ್ವರನು ಅವನಿಗೆ ಜನ್ಮವನ್ನು ಕಲ್ಪಿಸಿದಾಗಲೇ ಆತನ ಕರ್ಮಾನುಸಾರ ದೇಹಯಾತ್ರೆಯೂ ಹೀಗೆಯೇ ನಡಿಯಬೇಕೆಂದು ಸಙ್ಕಲ್ಪಿಸಿರುತ್ತಾನೆ. ಹಾಗೆಯೇ ಅದು ನಡಿಯುತ್ತದಾದುದರಿಂದ ಅದಕ್ಕಾಗಿ ಈತನು ಚಿಂತಿಸುವ ಆವಶ್ಯಕವಿಲ್ಲವೆಂಬ ಭಾವವು. ಅದರ ವಿಷಯವಾಗಿ ಚಿಂತಿಸಿದುದಾದರೆ ದೇವರನ್ನು ಬಿಟ್ಟು ತಾನೇ ಸ್ವತಂತ್ರಿಸಿ ಯೋಚಿಸಿದ ಹಾಗಾಗುತ್ತದೆ. ಫಲಸಿದ್ಧಿಯು ತನ್ನಧೀನವೆಂದು ಭಾವಿಸುವವನು ನಾಸ್ತಿಕನು. **ದೈವಂಚೈವಾತ್ರಪಂಚಮಂ** ಎಂದು ಹೇಳಿರುವ ಹಾಗೆ ಈಶ್ವರನು ಇದಕ್ಕೆ ಪ್ರಧಾನಕಾರಣನು ಆದುದರಿಂದ ಎಲ್ಲವೂ ಆತನ ಸಂಕಲ್ಪಾನುಸಾರವಾಗಿ ನಡೆಯುತ್ತದೆ. ಅಂತಹ ಸಂದರ್ಭದಲ್ಲಿ ಆತನನ್ನು ಬಿಟ್ಟು ಎಲ್ಲವೂ ತನ್ನಧೀನವೆಂದೇ ಭಾವಿಸುವದು ನಾಸ್ತಿಕನ ಮತವು ಎಂಬಭಿಪ್ರಾಯವು. **ಆಗೈಯಾಲ್** - ಆದುದರಿಂದ, **ಉಭಯಯಾತ್ರೈಯೈಕ್ಕೊಂಡು** ಈ ಆತ್ಮಯಾತ್ರೆ ದೇಹಯಾತ್ರೆ ಈ ಎರಡನ್ನೂ ಕುರಿತು, **ಇವನುಕ್ಕು ಕಾರ್ಯಮಿಲ್ಲೈ**-ಇವನು

ನ್ಯೈಯುಮೋ ವೆನ್ನಿಲ್ ? ಅದು ಇವನುಕ್ಕು ಸ್ವರೂಪಮುನ್ರು. ಉಪಾಯಾಂಶತ್ತಿಲ್ ಅನ್ವಯಮಿಲ್ಲಾ ವಿಟ್ಟಾಲುಮ್ ಪ್ರಾಪ್ಯಮಾನ ಕೈಙ್ಕರ್ಯತ್ತಿಲೆ ಯಿವತ್ತ್ರೈ ಯನ್ವಯಿಪ್ಪಿಕ್ಕ ವುತ್ತನ್ವೈ. ಅದಿಲಿವನುಕ್ಕಿರುನ್ದ

ಸ್ವತಂತ್ರಿಸಿ ಮಾಡತಕ್ಕದ್ದೇನೂ ಇಲ್ಲವು. ಇದರಿಂದ ಕರ್ತೃತ್ವವೇನೂ ಇಲ್ಲವೇ ಇಲ್ಲವೆಂಬಭಿಪ್ರಾಯವಲ್ಲವು, ಏಕೆಂದರೆ, **"ಕರ್ತಾಶಾಸ್ತ್ರಾರ್ಥವತ್ವಾತ್"** ಎಂಬುವ ಪ್ರಮಾಣರೀತ್ಯಾಕರ್ತೃತ್ವವೇನೋ ಉಂಟು ; ಆದರೆ **ಪರಾತ್ತುತಚ್ಛ್ರುತೇಃ** – ಎಂಬ ಸೂತ್ರಾನುಸಾರ ಅದು ಈಶ್ವರಸಂಕಲ್ಪಾನುಸಾರ ನಡಿಯುತ್ತದೆಯಾದುದರಿಂದ ಆ ವಿಷಯದಲ್ಲಿ ಚಿಂತೆಯು ಅನಾವಶ್ಯಕವೆಂಬ ಭಾವವು. ಸರ್ವೇಶ್ವರನು ತನ್ನ ಸಂಕಲ್ಪಾನುಸಾರ ಈತನ ಕೈಯಿಂದ ಮಾಡಿಸುವನಾದುದರಿಂದ ಆ ವಿಷಯದಲ್ಲಿ ಈತನು ಚಿಂತಿಸಬೇಕಾದುದಿಲ್ಲನೆಂಬ ಭಾವವು. **ಆನಾಲ್**- ಹಾಗಾದರೆ, **ಮನೋವಾಕ್ಕಾಯಙ್ಗಳಾಗಿರ** - ಮನಸ್ಸು, ವಾಕ್ಕು, ಶರೀರಗಳಾಗಿರುವ, **ತ್ರಿಕರಣಙ್ಗಳೈಕ್ಕೊಂಡು**–ಮೂರು ಇಂದ್ರಿಯಗಳಮೂಲಕವಾಗಿಯೂ, **ವೇಣ್ಡಿತ್ತು ಚೆಯ್ದು** - ಇಷ್ಟವಾದುದನ್ನು ಮಾಡಿ, **ತಿರಿಯುವನ್ವೈಯುಮೋ ?** ಸಂಚರಿಸಬಹುದೋ ? ಅದು - ಹಾಗೆ ಇಷ್ಟಾನುಸಾರ ಪ್ರವರ್ತನೆಯು, **ಇವನುಕ್ಕು** ಈ ಕೃತಕೃತ್ಯನಾದ ಪ್ರಪನ್ನನಿಗೆ, **ಸ್ವರೂಪಮುನ್ರು** - ಸ್ವರೂಪಕ್ಕೆ ಯೋಗ್ಯವಾದುದಲ್ಲವು. **ಉಪಾಯಾಂಶತ್ತಿಲನ್ವಯಮಿಲ್ಲಾವಿಟ್ಟಾಲುಮ್** – ಸರ್ವೇಶ್ವರನನ್ನು ಹೊಂದುವದಕ್ಕೆ ಬೇಕಾದ ಭರನ್ಯಾಸರೂಪ ಉಪಾಯವು ಆಗಲೇ ಅನುಷ್ಠಿಸಲ್ಪಟ್ಟಿರುವದರಿಂದ, ಉಪಾಯಾನುಷ್ಠಾನದ ವಿಷಯದಲ್ಲಿ ಇನ್ನೇನೂ ಸಂಬಂಧವಿಲ್ಲದಿದ್ದರೂ, **ಪ್ರಾಪ್ಯಮಾನ ಕೈಙ್ಕರ್ಯತ್ತಿಲೆ** - ಪ್ರಾಪ್ಯವಾದ ಕೈಂಕರ್ಯದಲ್ಲಿ, **ಇವತ್ತ್ರೈ** - ಈ ತ್ರಿವಿಧಕರಣಗಳನ್ನೂ, **ಅನ್ವಯಿಪ್ಪಿಕ್ಕವುತ್ತನ್ವೈ** - ಸಂಬಂಧ ಉಂಟಾಗುವ ಹಾಗೆ ಮಾಡುವದಷ್ಟೇ. ಮೋಕ್ಷಾರ್ಥಿಗೆ ಬೇಕಾದುದು ಮುಖ್ಯವಾಗಿ ಎರಡೇ ; ಉಪಾಯಾನುಷ್ಠಾನವು, ಅನಂತರ ಭಗವದ್ಭಾಗವತ ಕೈಙ್ಕರ್ಯವು. ಆದುದರಿಂದ ಕೃತಕೃತ್ಯನಿಗೆ ಇಹಪರ ಎರಡರಲ್ಲೂ ಅನ್ವಯವು ಮುಖ್ಯವಾಗಿ ಕೈಙ್ಕರ್ಯದಲ್ಲೇ. **"ಅಹಂ ಸರ್ವಂ ಕರಿಷ್ಯಾಮಿ"** (ರಾಮಾ ಅಯೋಧ್ಯಾ) ಎಂಬ ಸೌಮಿತ್ರಿಯ ವಾಕ್ಯದಿಂದ ಇದು ವ್ಯಕ್ತವು. ಆ ಕಾರಣದಿಂದ **ಪ್ರಾಪ್ಯಮಾನ ಕೈಙ್ಕರ್ಯತ್ತಿಲೇ** ಎಂಬ ಪ್ರಯೋಗವು ತ್ರಿಕರಣಗಳೂ ಕೈಂಕರ್ಯದಲ್ಲೇ ನಿರತವಾಗಿರಬೇಕೆಂಬ ಭಾವವು **ಅದಿಲ್** - ಆ ಕೈಂಕರ್ಯ ವಿಷಯದಲ್ಲಿ, **ಅವನುಕ್ಕು** - ಆ ಕೃತಕೃತ್ಯನಾದ ಪ್ರಪನ್ನನಿಗೆ,, **ಇರುನ್ದಕಾಳ್** - ಈ

ನಾಳ್ ಪಣ್ಣಲಾವ್ ಕೈಙ್ಕರ್ಯಮ್ ಅಞ್ಜುಣ್ಡು ; ಅವೈಯಾವನ :— (೧) ಭಾಷ್ಯತ್ತೈ ವಾಶಿತ್ತು ಪ್ರವರ್ತಿಪ್ಪಿತ್ತಲ್, (೨) ಅದುಕ್ಕು ಯೋಗ್ಯತೈ ಇಲ್ಲೈಯಾಗಿಲ್, ಅರುಳಿಚ್ಚೆಯಲೈಕ್ಕೇಟ್ಟು ಪ್ರವರ್ತಿಪ್ಪಿತ್ತಲ್, (೩) ಅದುಕ್ಕು ಯೋಗ್ಯತೈ ಇಲ್ಲೈಯಾಗಿಲ್ ಉಗನ್ದರುಳಿನ ದಿವ್ಯದೇಶಙ್ಗಳುಕ್ಕು ಅಮುದುಪಡಿ ಶಾತ್ತುಪ್ಪಡಿ ತಿರುವಿಳಕ್ಕುತ್ತಿರುಮಾಲೈಗಳೈಯುಣ್ಡಾಕ್ಕುದಲ್ (೪) ಅದುಕ್ಕು ಯೋಗ್ಯತೆಯಿಲ್ಲೈಯಾಗಿಲ್, ದ್ವಯ

ಲೋಕದಲ್ಲಿರುವತನಕ, ಎಂದರೆ ದೇಹಾವಸಾನದವರೆಗೂ, **ಪಣ್ಣಲಾಮ್ ಕೈಙ್ಕರ್ಯಮ್** - ಮಾಡಬೇಕಾದ ಕೈಙ್ಕರ್ಯವು, **ಅಞ್ಜುಂಡು** - ಐದು ಉಂಟು ; ಎಂದರೆ ಆ ಐದರಲ್ಲಿ ತನ್ನ ಯೋಗ್ಯತಾನುಸಾರ ಯಾವುದಾದರೂ ಒಂದನ್ನಾಗಲಿ ಮಾಡತಕ್ಕದ್ದು ಎಂಬ ಭಾವವು. ಅವುಗಳಲ್ಲಿ ಎರಡುಮೂರನ್ನಾಗಲಿ ಅಥವಾ ಎಲ್ಲವನ್ನಾಗಲಿ ಮಾಡಿದರೂ ಮಾಡಬಹುದು ಎಂಬ ಭಾವವೂ ತೋರಿಬರುತ್ತದೆ. **ಅವೈಯಾವನ** ? ಆ ಐದು ವಿಧ ಕೈಂಕರ್ಯಗಳು ಯಾವುವೆಂದರೆ:---(೧) **ಭಾಷ್ಯತ್ತೈ**-ತಾವು ಅನುಗ್ರಹಿಸಿದ ಶ್ರೀಭಾಷ್ಯವನ್ನು, **ವಾಶಿತ್ತು**-ಗುರುಮುಖೇನ ಓದಿ ಎಂದರೆ **ಉಪದೇಶ**ಹೊಂದಿ, **ಪ್ರವರ್ತಿಪ್ಪಿದಲ್** - ಅದನ್ನು ಪ್ರವರ್ತಿಸೋಣವು, ಪ್ರಚುರಮಾಡೋಣವೂ, (೨) **ಅದುಕ್ಕು ಯೋಗ್ಯತೆಯಿಲ್ಲೈಯಾಗಿಲ್** - ಅದಕ್ಕೆ ಯೋಗ್ಯತೆ ಇಲ್ಲದಿದ್ದರೆ, **ಅರುಳಿಚ್ಚೆಯ್ಯಲೈ ಕೇಟ್ಟು** - ಆಳ್ವಾರ್ ಶ್ರೀಸೂಕ್ತಿಗಳಾದ ದ್ರಾವಿಡ ಪ್ರಬಂಧಗಳನ್ನು, **ಕೇಟ್ಟು** - ಕೇಳಿ ಎಂದರೆ ಉಪದೇಶ ಹೊಂದಿ, **ಪ್ರವರ್ತಿಪ್ಪಿದಲ್** - ಅದನ್ನು ಪ್ರಚುರಮಾಡೋಣವೂ, (೩) ಅದಕ್ಕೂ ಯೋಗ್ಯತೇ ಇಲ್ಲದೇ ಹೋದರೆ, **ಉಗನ್ದರುಳಿನ** - **ನಮ್ಮಾಳ್ವಾರ್** ಮೊದಲಾದ ಆಳ್ವಾರುಗಳು ಪಾಶುರಗಳನ್ನು ಹೇಳಿ ಮಂಗಳಾಶಸನವನ್ನು ಮಾಡಿ ಕೃಪೆಗೈದಿರುವ, **ದಿವ್ಯದೇಶಂಗಳುಕ್ಕು** - ತೀರ್ಥಪ್ರಸಾದ ಸ್ವೀಕರಿಸಲು **ಯೋಗ್ಯ**ವಾದ ಭಾಗವತರುಗಳಿಗೆ ಅಭಿಮತವಾದ ಪುಣ್ಯಕ್ಷೇತ್ರಗಳಿಗೆ, **ಅಮುದುಪಡಿ** - ನಿವೇದನೋಪಯುಕ್ತವಾದ ಸಾಮಗ್ರಿಗಳನ್ನೂ, **ಶಾತ್ತುಪಡಿ** - ದೇವರು ಧರಿಸಲು ಯೋಗ್ಯವಾದ ಕುಂಕುಮಕೇಸರಿ, ಪಚ್ಚಕರ್ಪೂರಯುಕ್ತವಾದ ಶ್ರೀಗಂಧ, ದಿವ್ಯಕವಚ ದಿವ್ಯಾಭರಣ ಮೊದಲಾದವುಗಳನ್ನೂ, **ತಿರುವಿಳಕ್ಕು**-ದೀಪಾರೋಪಣವು, ದೀಪವನ್ನು ಹಚ್ಚೋಣವು, **ತಿರುಮಾಲೈಗಳ್ಳೈ**-ಪುಷ್ಪಹಾರಗಳು **ಉಣ್ಡಾಕ್ಕುದಲ್** - ಇವುಗಳನ್ನು ಒದಗಿಸೋಣವೂ, (೪) ಅದುಕ್ಕೂ ಯೋಗ್ಯತೆಯಿಲ್ಲವಾದರೆ, **ದ್ವಯತ್ತಿನುಡೈಯ** - ದ್ವಯಮಂತ್ರದ, **ಅರ್ಥಾನುಸಂಧಾನಮ್**

ತ್ತಿನುಡೈನುಡೈಯ ಅರ್ಥಾನುಸಂಧಾನಂ ಪಣ್ಣುದಲ್ (೫) ಅದುಕ್ಕು ಯೋಗ್ಯತೈ ಇಲ್ಲೈಯಾಗಿಲ್ ಎನ್ನುಡೈಯವನೆನ್ರು ಅಭಿಮಾನಿಪ್ಪೆ

ಪಣ್ಣುದಲ್ ಅರ್ಥಸ್ವಾರಸ್ಯವನ್ನು ಗ್ರಹಿಸೋಣವೂ (೫) ಆದಕ್ಕು ಯೋಗ್ಯತೆ ಯಿಲ್ಲವಾದರೆ **ಎನ್ನುಡೈಯವರ್** - ನನಗೆ ಸಂಬಂಧಪಟ್ಟವನು ಎಂದರೆ ತನ್ನ ಪ್ರಿಯ ಶಿಷ್ಯನು, **ಎನ್ರು** - ಎಂಬದಾಗಿ, **ಅಭಿಮಾನಪ್ಪಾರ್** - ಅಭಿಮಾನಿಸುವ, ವಿಶ್ವಾಸ ತೋರಿಸುವ, **ಒರು ಶ್ರೀವೈಷ್ಣವನುಡೈಯ**-ಒಬ್ಬ ಶ್ರೀವೈಷ್ಣವನ, ಇದ ರಿಂದ ಅವೈಷ್ಣವನು ಕೂಡದೆಂದು ಹೇಳಿದಂತಾಯಿತು, **ಅಭಿಮಾನತ್ತಿಲೆ** - ವಿಶ್ವಾಸದಲ್ಲಿದ್ದುಕೊಂಡು, **ಒದುಙ್ಗವರ್ತಿತ್ತಲ** - ಆತನಿಗೆ ಅಧೀನನಾಗಿ ನಡೆ ದುಕ್ಕೊಳ್ಳೋಣವೂ, ಎಂದರೆ ಒಬ್ಬ ಶ್ರೀವೈಷ್ಣವ ಭಾಗವತನಿಗೆ ಪರತಂತ್ರನಾಗಿ ದ್ದುಕೊಂಡು ಆತನ ವಿಶ್ವಾಸಕ್ಕೆ ಪಾತ್ರನಾಗಿ ಆತನಿಗೆ ಕೈಂಕರ್ಯವನ್ನೆ ಸಗುವದೂ, ಹೀಗೆ ಈ ಐದು ವಿಧ ಕೈಂಕರ್ಯಗಳೂ, **ಶೆಯ್ಯಲಾಮ್** - ಮಾಡತಕ್ಕ ಕರ್ತವ್ಯಗಳಾಗಿವೆ. ಹೀಗೆ ಶ್ರೀಭಾಷ್ಯಾದಿಪ್ರವಚನಾದಿಗಳೂ. ಆಳ್ವಾರ್‌ಸೂಕ್ತಿ ಪಠನ ಪ್ರವಚನ ಪ್ರಚಾರಣಾದಿಗಳೂ ಸಹ ಶಾಸ್ತ್ರೀಯನಿಯಮನಗಳಿಗೆ ಸೇರಿದವು ಎಂಬುವದಕ್ಕೆ

"ಭಕ್ತ ಪ್ರಣೀತಗಾಥಾಶ್ಚ ತ್ರಯ್ಯನ್ತಾರ್ಥೋಪ ಬೃಂಹಿತಾಃ ।
ಶ್ರಾವಯೇದ್ವಿಧಿವದ್ವೇಷಂ" ಎಂಬ
"ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾ ಮೇವೈಷ್ಯತ್ಯಸಂಶಯಃ

ಎಂಬ ಪ್ರಮಾಣಗಳನ್ನು ಸಾರಪ್ರಕಾಶಿಕಾಯವರು ಉದಾಹರಿಸಿರುತ್ತಾರೆ. ಈ ಮೇಲಿನ ಶ್ರೀಭಾಷ್ಯಕಾರರವರ ಉಪದೇಶರೂಪವಾದ ಶ್ರೀಸೂಕ್ತಿಯಿಂದ ಶಾಸ್ತ್ರೀ ಯನಿಯಮನಾನುಸಾರ ನಡೆಯುವದು ಅತ್ಯಾವಶ್ಯಕವೆಂಬುದು ನಿದರ್ಶಿಸಲ್ಪ ಟ್ಟಿತು. ಈ ಅಭಿಪ್ರಾಯಗಳನ್ನು ಶ್ರೀಯತಿವರ್ಯರುಪದೇಶಿಸಿದರೆಂಬುವದಕ್ಕೆ ಶ್ರೀ ಪಪನ್ನಾಮೃತದಲ್ಲಿ ಒಂದು ಶ್ಲೋಕವುಂಟು :—

ಶ್ರೀಭಾಷ್ಯಂ ದ್ರವಿಡಾಗಮ ಪ್ರವಚನಂ ಶ್ರೀಶಸ್ಥಲೇಷ್ವನ್ವಹಂ ।
ಕೈಂಕರ್ಯಮ್ ಯದುಶೈಲನಿತ್ಯವಸತಿಸ್ಸಾರ್ಥದ್ವಯೋಚ್ಚಾರಣಂ ।
ಯದ್ವಾ ಭಾಗವತಾಭಿಮಾನ ವಸತಿ ಶ್ರೇಯಸ್ಸತಾಮಿತ್ಯಲಂ ।
ಶಿಷ್ಯಾನ್ಪ್ರಾಹ ಯತೀಶ್ವರಃ ಪರಮಗಾದ್ವಿಷ್ಣೋಃ ಪದಂಶಾಶ್ವತಂ॥

ಶ್ರೀಭಾಷ್ಯಪ್ರವರ್ತನೆಯು, ಆಳ್ವಾರ್ ಸೂಕ್ತಿಗಳಾದ ದ್ರಾವಿಡ ಪ್ರಬಂಧಗಳ ಪ್ರವ ಚನವು, ಶ್ರೀವೈಷ್ಣವದಿವ್ಯದೇಶಗಳಲ್ಲಿ ಕೈಙ್ಕರ್ಯವು, ತಿರುನಾರಾಯಣಪುರದಲ್ಲಿ

ನೊರು ಶ್ರೀವೈಷ್ಣವನುಡೈಯ ಅಭಿಮಾನತ್ತಿಲೇ ಯೊದುಙ್ಗಿ ವರ್ತಿ ತ್ತಲ್ ಶೆಯ್ಯಲಾಮ್.

ಇಪ್ಪಡಿ ವರ್ತಿಕ್ಕುಮ್ ಅಧಿಕಾರಿಕ್ಕು ಮುನ್ನಡಿ ಪಾರ್ತ್ತು ವರ್ತಿ ಕ್ಕವೇಣ್ಡುವನ ಮೂನ್ರುವಿಷಯಮುಂಡು. ಅವೈಯಾವನ?—ಅನು ಕೂಲರೆನ್ರುಮ್, ಪ್ರತಿಕೂಲರೆನ್ರುಮ್, ಅನುಭಯರೆನ್ರುಮ್. ಅನು ಕೂಲರಾವಾರ್? ಶ್ರೀವೈಷ್ಣವರ್ಗಳ್. ಪ್ರತಿಕೂಲರಾವಾರ್? ಭಗವದ್ವಿ ಟ್ಟುಕ್ಕಳ್. ಅನುಭಯರಾವಾರ್? ಇವ್ವಿರಣ್ಡುಮಿಲ್ಲಾದ ಸಂಸಾರಿಗಳ್.

ವಾಸವು, ದ್ವಯಾರ್ಥಾನುಸಂಧಾನವು, ಇವು ಯಾವುದಕ್ಕೂ ಅವಕಾಶವಿಲ್ಲದಿದ್ದರೆ ಶ್ರೀಮದ್ಭಾಗವತನನ್ನಾಶ್ರಯಿಸಿ ವಾಸಮಾಡೋಣವೂ, ಇವುಗಳೆಲ್ಲಾ ಪ್ರಪನ್ನರಿಗೆ ಶ್ರೇಯಸ್ಕರವಾದುದರಿಂದ ಇಷ್ಟುಮಟ್ಟಿಗೆ ಸಾಕು ಎಂದು ಯತೀಶ್ವರರು ತಮ ಪ್ರಿಯಶಿಷ್ಯರಿಗೆ ಚರಮದೆಶೆಯಲ್ಲಿ ಹೇಳಿ ದಿವ್ಯವೈಕುಂಠವನ್ನು ಕುರಿತು ತೆರಳಿದರು" ಎಂಬುವದು ಈ ಶ್ಲೋಕಾರ್ಥವು.

ಮುಂದೆ ಲೋಕದ ಜನರನ್ನು ಮೂರಾಗಿ ವಿಭಾಗಿಸಿ ಅವರುಗಳ ವಿಷಯದಲ್ಲಿ ಈ ಕೃತಕೃತ್ಯನಾದ ಪ್ರಪನ್ನನು ಹೇಗೆ ವರ್ತಿಸತಕ್ಕದ್ದೆಂಬುವದನ್ನುಪದೇಶಿಸು ತ್ತಾರೆ. ಇಪ್ಪಡಿ ವರ್ತಿಕ್ಕುಮಧಿಕಾರಿಕ್ಕು-ಹೀಗೆ ಪ್ರವೃತ್ತಿಯುಳ್ಳ ಅಧಿಕಾರಿಗೆ, ಎಂದರೆ, ಹೀಗೆ ಕೃತಕೃತ್ಯನಾದ ಪ್ರಪನ್ನನು ಶಾಸ್ತ್ರೀಯನಿಯಮನಾನುಸಾರ ಈ ಮೇಲೆ ಹೇಳಿದ ಕರ್ತವ್ಯಗಳಾದ ಕೈಂಕರ್ಯಗಳನ್ನು ಮಾಡುತ್ತಾ ಇರುವ ಅಧಿಕಾ ರಿಗೆ, ಮುನ್ನಡಿ ಪಾರ್ತು ವರ್ತಿಕ್ಕ ವೇಣ್ಡುವನ-ಮುಂದೆ ನೋಡಿ ಕಾಲಿಡಬೇ ಕಾದ ಹಾಗೆ, ನೋಡಿ ಕಾಲಿಡದಿದ್ದರೆ ಹೇಗೆ ಹಳ್ಳಕ್ಕೆ ಬಿದ್ದು ನಾಶಪ್ರಾಪ್ತಿಯೋ, ಹಾಗೆಯೇ ಉಂಟಾಗುತ್ತದೆಂಬ ಭಾವವು. ಈ ಮುನ್ನಡಿ ಪಾರ್ತ್ತು ವರ್ತಿಕ್ಕ ಎಂಬುವದರಭಿಪ್ರಾಯವು ಶಾಸ್ತ್ರವಿಹಿತವಾದ ಆಚರಣೆ ಎಂಬಭಿಪ್ರಾಯವೆಂದು ಶ್ರೀದೇಶಿಕರವರೇ ಮುಂದೆ ಉಪದೇಶಿಸುತ್ತಾರೆ, ಮೂನ್ರು ವಿಷಯಮುಂಡು - ಮೂರು ವಿಷಯಗಳುಂಟು. ಅವೈಯಾವನ-ಆ ಮೂರು ಅಂಶಗಳು ಯಾವುವು ಎಂದರೆ ಹೇಳುತ್ತಾರೆ :—ಮೊದಲು ಲೋಕದ ಜನರನ್ನು ಅನುಕೂಲರು, ಪ್ರತಿ ಕೂಲರು, ಅನುಭಯರೆಂದು ವಿಭಾಗಿಸಿ, ಅವರುಗಳ ವಿಷಯದಲ್ಲಿ ಹೇಗೆ ನಡೆದು ಕೊಳ್ಳಬೇಕೆಂಬುವದನ್ನು ತಿಳಿಸುತ್ತಾರೆ. ಅನುಕೂಲರಾವಾರ್ - ಅನುಕೂಲರು ಯಾರು ? ಶ್ರೀವೈಷ್ಣವರ್ಗಳ್ - ಶ್ರೀಮಹಾವಿಷ್ಣುವೇ ಪರತತ್ವವೆಂದು ತಿಳಿದು ಆತ್ಮನಲ್ಲಿ ಭಕ್ತಿಯುಳ್ಳವರುಗಳು. ಪ್ರತಿಕೂಲರಾವಾರ್-ಪ್ರತಿಕೂಲರು ಯಾರು?

ಅನುಕೂಲಾದಿ ವಿಷಯೇ ವರ್ತಿತವ್ಯ ಪ್ರಕಾರಾಃ

ಇದಿಲ್ ಅನುಕೂಲರ್ಕ್ಕೈಕಣ್ಡಾಲ್ ಚಂದನ ಕುಸುಮಾದಿಗಳ್ಪೋಲವುಮ್, ನಿಲವುಮ್ ತೆನ್ರಲುಪೋಲವುಮ್, ಅಭಿಮತ ವಿಷ

ಭಗವದ್ವಿಟ್ಟುಕ್ಕಳ್ - ಸರ್ವೇಶ್ವರನ ದ್ವೇಷಿಗಳು. ಸರ್ವೇಶ್ವರನಲ್ಲದೆ ಇತರ ದೇವತೆಗಳೇ ಪರತತ್ತ್ವವೆಂದು ಭಾವಿಸುವರೂ, ಮತ್ತು ಶಾಸ್ತ್ರಚೋದಿತ ನಿಯಮಗಳಿಗೆ ವಿರೋಧವಾಗಿ ನಡೆಯುವದರಿಂದ ಭಗವನ್ನಿಗ್ರಹಕ್ಕೆ ಪಾತ್ರರಾದವರೂ ; **ಅನುಭಯರಾವಾರ್** - ಎರಡೂ ಅಲ್ಲದವರು ಯಾರು ? **ಇವ್ವಿರಣ್ಡುಮಿಲ್ಲಾದ ಸಂಸಾರಿಗಳ್** - ಇವೆರಡೂ ಎಂದರೆ ಶ್ರೀವಿಷ್ಣುವಿನಲ್ಲಿ ಪರತತ್ತ್ವವೆಂಬ ಭಕ್ತಿಯೂ, ಭಗವನ್ನಿಗ್ರಹಕ್ಕೆ ಗುರಿಮಾಡುವ ಭಗವದ್ದ್ವೇಷವೂ ಇಲ್ಲದ ಸಂಸಾರಿಗಳು.

ಅನುಕೂಲರೇ ಮೊದಲಾದವರುಗಳ ವಿಷಯದಲ್ಲಿ ನಡೆಯಬೇಕಾದ ಪ್ರಕಾರಗಳು.

---

(೧) **ಇದಿಲ್** - ಈ ಮೂರು ವಿಧ ಜನಗಳಲ್ಲಿ, **ಅನುಕೂಲರನ್ನು** ಕಂಡರೆ, **ಚಂದನ ಕುಸುಮಾದಿಗಳ್ಪೋಲವುಮ್** - ಗಂಧಪುಷ್ಪಾದಿಗಳ ಹಾಗೆಯೂ, **ನಿಲವುಮ್** - ಬೆಳದಿಂಗಳು, **ತೆನ್ರಲುಮ್ ಪೋಲವುಮ್** - ಮಲಯಮಾರುತದ ಹಾಗೆಯೂ, **ಅಭಿಮತ ವಿಷಯಙ್ಗಳ್ ಪೋಲವುಮ್** - ತುಂಬಾ ಇಷ್ಟವಾದ ವಿಷಯಗಳಾದ ಸುಂದರ ಭಾರ್ಯಾ **ಪುತ್ರಾದಿಗಳ** ಹಾಗೂ, **ಉಗನ್ದು ವರ್ತಿಪ್ಪಾರ್** - ಪ್ರೀತಿಯಿಂದ ನಡೆಯುತಕ್ಕದ್ದು ಎಂದರೆ ಪ್ರೀತಿಮಾಡತಕ್ಕದ್ದು. ಇಲ್ಲಿ ಅನುಕೂಲರನ್ನು ಕಂಡರೆ ಪ್ರೀತಿಸತಕ್ಕದ್ದು ಎಂಬುವದಕ್ಕೆ ಮೂರು ದೃಷ್ಟಾಂತವು ಹೇಳಲ್ಪಟ್ಟಿತು. **ಚಂದನಕುಸುಮ** ದೃಷ್ಟಾಂತಕ್ಕೆ ಭಗವತ್ಕೈಂಕರ್ಯರೂಪ ಭೋಗವರ್ಧಕರು ಅಥವಾ **ಭೋಗಸಾಧನರು** ಎಂಬುವದರಲ್ಲೂ, ಬೆಳದಿಂಗಳು ತಂಗಾಳಿ ದೃಷ್ಟಾಂತಕ್ಕೆ ಸಂಸಾರತಾಪ ಪರಿಹಾರದಲ್ಲೂ **ಅಭಿಮತ ವಿಷಯಙ್ಗಳ** ದೃಷ್ಟಾಂತಕ್ಕೆ ಭೋಗ್ಯತಮತ್ವದಲ್ಲೂ ತಾತ್ಪರ್ಯವು ಈ ದೃಷ್ಟಾಂತಗಳಲ್ಲಿ ಹೇಳಲ್ಪಟ್ಟವೆಲ್ಲಾ ಪ್ರಿಯವಾದವು, ಅವುಗಳ ಹಾಗೆ ಈ ಅನುಕೂಲರನ್ನು ಪ್ರಿಯತಮರನ್ನಾಗಿ ಭಾವಿಸತಕ್ಕದ್ದೆಂಬ ಭಾವವು. ಅಂತವರುಗಳ ಸಹವಾಸವು ಈತನಿಗೆ ಸರ್ವಸುಖದಾಯಕವು. ಸರ್ವತಾಪಹರವು, ಪರಮಭೋಗ್ಯ

ಯುಙ್ಗಳ್ ಪೋಲವುಮ್, ಉಗನ್ದು ವರ್ತ್ತಿಪ್ಪೃ. ಪ್ರತಿಕೂಲರ್ೖಕ್ಕಣ್ಡಾಲ್ ಸರ್ಪಾಗ್ನಿಗಳೈ ಕಂಡಾರ್ಪೋಲೆ ವೆರುವಿ ವರ್ತ್ತಿಪ್ಪೃ. ಅನುಭಯರ್ೖಕ್ಕಣ್ಡಾಲ್ ಕಾಷ್ಠಲೋಷ್ಟಾದಿಗಳೈ ಕಂಡಾರ್ಪೋಲೆ ತೃಣವತ್ಕರಿತ್ತು ವರ್ತಿಪ್ಪೃ. ಇವರ್ಗಳ್ ಅನುಕೂಲಿಪ್ಪಾರ್ಗಳಾಗಿಲ್ ಇವ

ಘಾತವಾದುದೆಂಬ ಭಾವವು.

(೨) ಪ್ರತಿಕೂಲರನ್ನು ನೋಡಿದರೆ, **ಸರ್ಪಾಗ್ನಿಗಳೈ ಕಣ್ಡಾರ್ಪೋಲೆ**-ನಾಗರಹಾವು ಅಗ್ನಿಗಳನ್ನು ಕಂಡ ಹಾಗೆ, **ವೆರುವಿ ವರ್ತಿಪ್ಪೃ** - ಭಯಪಟ್ಟು ನಡೆದುಕೊಳ್ಳತಕ್ಕದ್ದು. ಈ ಪ್ರತಿಕೂಲರ ಸಹವಾಸವು ಈತನಿಗೆ ಶಾಸ್ತ್ರಮರ್ಯಾದೆಯನ್ನು ಮೀರಿದ ಹಾಗೆ ಮಾಡಿ ಈತನನ್ನು ತನ್ನ ಹಾಗೆಯೇ ಭಗವನ್ನಿಗ್ರಹಕ್ಕೆ ಗುರಿಮಾಡುತ್ತದೆ, ಸರ್ಪ ಮತ್ತು ಅಗ್ನಿಯ ಸಹವಾಸವು ಹೇಗೆ ಹಾನಿಕರವೋ ಹಾಗೆ ಹಾನಿಕರವೆಂಬ ಭಾವವು.

"ವರಂ ಹುತವಹಜ್ವಾಲಾ ಪಂಜರಾಂತರ್ವ್ಯವಸ್ಥಿತಿಃ ।
ನ ಶೌರಿ ಚಿಂತಾ ವಿಮುಖ ಜನಸಂವಾಸ ವೈಶಸಮ್ ।

ಎಂಬ ಸೂಕ್ತಿಯು ಇಲ್ಲಿ ಅನುಸಂಧೇಯವು. ಅಗ್ನಿಯ ಮಧ್ಯದಲ್ಲಾದರೂ ಇರಬಹುದು. ಶೌರಿಚಿಂತಾ ವಿಮುಖರ ಮಧ್ಯೆ ಇರಕೂಡದೆಂದು ಹೇಳಿರುವಾಗ ಸಾಕ್ಷಾದ್ಬ್ರಹ್ಮದ್ವೇಷಿಗಳ ಮಧ್ಯದಲ್ಲಿರುವದು ಹಾನಿಕರವೆಂದು ಹೇಳತಕ್ಕದ್ದೇನಿರುತ್ತದೆ.

(೩) ಅನುಕೂಲರೂ ಪ್ರತಿಕೂಲರೂ ಅಲ್ಲದೆ ಇರುವ ಐಹಿಕದಲ್ಲೇ ಮಗ್ನರಾಗಿರುವ ಸಂಸಾರಿಗಳನ್ನು ಕಂಡರೆ, **ಕಾಷ್ಠಲೋಷ್ಟಾದಿಗಳೈ ಕಣ್ಡಾರ್ಪೋಲೆ**-ಕಟ್ಟಿಗೆ ಮಣ್ಣುಹೆಂಟೆಗಳನ್ನು ಕಂಡ ಹಾಗೆ, **ತೃಣವತ್ಕರಿತ್ತುವರ್ತಿಪ್ಪೃ** - ತೃಣದ ಹಾಗೆ ಭಾವಿಸಿ ನಡೆಯತಕ್ಕದ್ದು.

ಅನುಕೂಲರೊಂದಿಗೆ ಸಹವಾಸಮಾಡತಕ್ಕದ್ದೆಂದು ಹೇಳಿ, ಪ್ರತಿಕೂಲರ ಸಹವಾಸವು ಹಾನಿಕರವಾದುದರಿಂದ ಸುತರಾಂ ಕೂಡದೆಂದು ಹೇಳಿ, ಅನುಭಯರಾದವರು ನಮ್ಮ ಮಾರ್ಗಕ್ಕೆ ಬರುವರಾದರೆ, ಅವರನ್ನು ತಿದ್ದಿ, ಅವರಿಗೆ ಸರಿಯಾದ ಜ್ಞಾನವನ್ನು ಕೊಡುವದು ನಮ್ಮ ಕರ್ತವ್ಯವೆಂದೂ, ಹಾಗೆ ನಮ್ಮ ಮಾರ್ಗಕ್ಕೆ ಅವರು ಬಾರದಿದ್ದರೆ ಅಂತವರ ವಿಷಯದಲ್ಲಿ ನಾವು ಪರಿತಾಪವನ್ನು ತೋರತಕ್ಕದ್ದೆಂದೂ ಮುಂದಿನ ವಾಕ್ಯಗಳಿಂದ ಉಪದೇಶಿಸುತ್ತಾರೆ:—**ಇವರ್ಗಳ್** - ಈ ಅನುಭಯರಾದ ಸಂಸಾರಿಗಳು, **ಅನುಕೂಲಿಪ್ಪಾರ್ಗಳಾಗಿಲ್** - ಭಗವಂತ

ರ್‌ಗಳುಕ್ಕು ಜ್ಞಾನತ್ತೈಯುಂಡಾಕ್ಕವುಮ್‌, ಇವರ್‌ಗಳ್ ಅನುಕೂಲಿಯಾ ರ್‌ಗಳಾಗಿಲ್ ಅಯ್ಯೋ ವೆನ್ರಿವರ್‌ಗಳ್ ಪಕ್ಕಲಿಲೆ ಕೃಪೈಪಣ್ಣಿಯಿರುಕ್ಕ ವುಮ್, ಅಡುಕ್ಕುಮ್.

ಅನುಕೂಲಾದಿ ವಿಷಯೇ ವಿಪರೀತ ಪ್ರವರ್ತನಸ್ಯ ಹೇತುಫಲಾನ್ಯಾಹ.

ಇಪ್ಪಡಿ ಚ್ಚೆಯ್ಯವೊಟ್ಟಾದೊಳಿಗಿರದು ಅರ್ಥಕಾಮಙ್ಗಳಿಲ್ ಪ್ರಾವ ಣ್ಯಮ್‌. ಅರ್ಥಕಾಮಙ್ಗಳಡಿಯಾಗ ಶ್ರೀವೈಷ್ಣವರ್‌ಗಳೈ ಅನಾದರಿತ್ತಿ

ನಲ್ಲಿ ಭಕ್ತಿಯುಳ್ಳವರಾಗಿಯೂ, ಶಾಸ್ತ್ರವಿಹಿತವೃತ್ತಿಯುಳ್ಳವರಾಗಿಯೂ ಆದ ಪಕ್ಷದಲ್ಲಿ, ಇವರ್‌ಗಳುಕ್ಕು - ಇವರುಗಳಿಗೆ, ಜ್ಞಾನತ್ತೈಯುಂಡಾಕ್ಕವುಮ್ - ಬ್ರಹ್ಮಜ್ಞಾನವನ್ನುಂಟುಮಾಡತಕ್ಕದ್ದು. ಇವರುಗಳ ಹಾಗೆ ಅನುಕೂಲರಾಗದೇ ಹೋದರೆ, ಅಯ್ಯೋ ವೆನ್ರಿವರ್‌ಗಳ್ ಪಕ್ಕಲಿಲೇ - ಅಯ್ಯೋ ಎಂದು ಇವರುಗಳ ವಿಷಯದಲ್ಲಿ, ಕೃಪೆಪಣ್ಣಿರುಕ್ಕುವುಮ್-ಕೃಪೆಮಾಡತಕ್ಕದ್ದು, ಅಡುಕ್ಕುಮ್ - ಯುಕ್ತವಾದುದು. ಇಂತಹ ಜ್ಞಾನಶೂನ್ಯರು ಸ್ವಲ್ಪ ಅನುಕೂಲರಾಗಿ ತೋರಿ ಬಂದರೆ, ಆಗ ಶ್ರಮಪಟ್ಟು ಆತನಿಗೆ ಸರಿಯಾದ ಜ್ಞಾನವನ್ನುಪದೇಶಿಸಿ ಉಪಾ ಯಾನುಷ್ಠಾನಾದಿಗಳನ್ನವಲಂಬಿಸುವ ಹಾಗೆ ಮಾಡತಕ್ಕದ್ದು ಈ ಪ್ರಪನ್ನನಿಗೆ ಕರ್ತವ್ಯವು. ಹಾಗೆ ಅನುಕೂಲನಾಗಿ ಬಾರದಿದ್ದರೆ ಇಂತಹ ಒಳ್ಳೇ ಜನ್ಮವನ್ನೆ ತ್ತಿರುವಾಗಲೂ ಕೂಡ ಜ್ಞಾನವನ್ನು ಸಂಪಾದಿಸಿಕೊಳ್ಳದೇ ಹೋದನೇ ಎಂಬ ದಾಗಿ ಆತನಲ್ಲಿ ಕನಿಕರವನ್ನು ತೋರಿಸತಕ್ಕದ್ದೆಂಬ ಭಾವವು.

ಮೇಲೆ ಹೇಳಿದ ಅನುಕೂಲಾದಿಗಳ ವಿಪರೀತವಾದ ಪ್ರವರ್ತನೆಗೆ ಕಾರಣ ಮತ್ತು ಫಲಗಳು

ಇಪ್ಪಡಿ ಹೀಗೆ ಎಂದರೆ ಅನುಕೂಲರ, ಪ್ರತಿಕೂಲರ, ಅನುಭಯರ ವಿಷಯ ದಲ್ಲಿ ನಡೆಯತಕ್ಕದ್ದು ಎಂದು ಹೇಳಿದ ರೀತಿಯಲ್ಲಿ, ಶೆಯ್ಯವೊಟ್ಟಾದೊಳಿಗಿರದು- ಪ್ರವರ್ತನವಿಲ್ಲದಿರುವದು, ಎಂದರೆ ಪ್ರವರ್ತನವಿಲ್ಲದಿರುವದಕ್ಕೆ ಕಾರಣವು, ಅರ್ಥ ಕಾಮಂಗಳಿಲ್ ಪ್ರಾವಣ್ಯಮ್ - ಐಹಿಕಗಳಾದ ಅರ್ಥಕಾಮಗಳಲ್ಲಿ ಆಶೆಯು. ಇದು ಕೃತಕೃತ್ಯನಾದ ಪ್ರಪನ್ನನಿಗೆ ಸರ್ವಾತ್ಮನಾ ಕೂಡದು. ಆದರೂ ಭರನ್ಯಾಸ ವನ್ನು ಮಾಡಿದ ವೃದ್ಧರಿಗೂ ಕೂಡ ಅರ್ಥಕಾಮಗಳಲ್ಲಿ ಪ್ರಾವಣ್ಯವಿರುವದನ್ನು

ರುಕ್ಕುಮಾಗಿಲ್‌ ಸಾರ್ವಭೌಮನಾಯಿರುಪ್ಪಾನೊರು ರಾಜಾವಿನುಡೈಯ ಪುತ್ರರ್‌ಗಳೈ ರಾಜಸನ್ನಿಧಿಯಿಲೆ ಪರಿಭವಿತ್ತಾಲ್‌ ರಾಜಾವೆರುಕ್ಕುಮಾಪ್ಪೋಲೆ ಎಮ್ಪೆರುಮಾರ್ ತಿರುವುಳ್ಳಮ್‌ ಶೀರುಮ್‌. ಅರ್ಥಕಾಮುಙ್ಗಳಡಿಯಾಗ ಪ್ರತಿಕೂಲರ್ಕೈ ಆದರಿಕ್ಕುಮಾಗಿಲ್‌, ರಾಜಾ ಸಾರ್ವಭೌಮನಾಯಿ

ಕಂಡಿರುವೆವು. ಇದು ಪ್ರಾರಬ್ಧಕರ್ಮದ ಪ್ರಾಬಲ್ಯವು. ಪಂಡಿತರಾದ ಜ್ಞಾನಿಗಳು "ಅನ್ತ್ರೇಷುರೇಮಿರೇ" ಎಂದು ಹೇಳಿರುವಹಾಗೆ ಅರ್ಥಕಾಮಗಳಲ್ಲಿ ಪ್ರಾವಣ್ಯವನ್ನು ತ್ಯಜಿಸಿ ಧರ್ಮಮೋಕ್ಷಗಳಲ್ಲಿ ಆಸಕ್ತಿಯುಳ್ಳವರು. ಹಾಗೆ ಅರ್ಥಕಾಮಪರರಾಗಿರುವದರಿಂದ ಉಂಟಾಗುವ ಹಾನಿಯನ್ನು ಶ್ರೀಯತಿವರ್ಯರು ತಿಳಿಸುತ್ತಾರೆ:— ಮೊದಲು ಅನುಕೂಲರ ವಿಷಯದಲ್ಲಿ ವಿರುದ್ಧಾಚರಣೆಯಿಂದ ಉಂಟಾಗಬಹುದಾದ ದೋಷವನ್ನು ತಿಳಿಸುತ್ತಾರೆ.

ಅರ್ಥಕಾಮುಙ್ಗಳಡಿಯಾಗ - ಅರ್ಥಕಾಮಗಳ ಮೂಲಕವಾಗಿ, **ಶ್ರೀವೈಷ್ಣವರ್‌ಗಳ್‌** - ಶ್ರೀಮಹಾವಿಷ್ಣು ಭಕ್ತರನ್ನು, **ಅನಾದರಿತ್ತಿರುಕ್ಕುಮಾಗಿಲ್‌** - ತಿರಸ್ಕರಿಸುದಾದರೆ, **ಸಾರ್ವಭೌಮನಾಯಿರುಪ್ಪಾನೊರುರಾಜಾವಿನುಡೈಯ**- ಚಕ್ರವರ್ತಿಪದವಿಯಲ್ಲಿರುವ ಒಬ್ಬ ರಾಜನ, **ಪುತ್ರರ್‌ಗಳೈ** - ಮಕ್ಕಳನ್ನು, **ರಾಜಸನ್ನಿಧಿಯಿಲೆ** - ಆ ರಾಜನ ಎದುರಿಗೇನೇ, **ಪರಿಭವಿತ್ತಾಲ್‌** - ತಿರಸ್ಕಾರಮಾಡಿ ಅವಮರ್ಯಾದೆಯನ್ನು ಯಾರಾದರೂ ಮಾಡಿದರೆ, **ರಾಜಾವೆರುಕ್ಕುಮಾಪ್ಪೋಲೆ**- ರಾಜನು ಕೋಪಿಸಿಕೊಳ್ಳುವ ಹಾಗೆ, **ಎಮ್ಪೆರುಮಾರ್** - ತನ್ನ ಮಕ್ಕಳಾದ ಶ್ರೀವೈಷ್ಣವರುಗಳನ್ನು ಅವಮಾನಪಡಿಸಿದುದಕ್ಕಾಗಿ ಸಾರ್ವಭೌಮನಾದ ನಮ್ಮ ಸ್ವಾಮಿಯ, **ತಿರುವುಳ್ಳಮ್‌ ಶೀರುಮ್‌** ಹೃದಯವು ಕೋಪಯುಕ್ತವಾಗುವದು.

ನಿರ್ಧನಾಂಶ್ಚ ರತೋ ಲೋಕೇ ವೃತ್ತ್ಯರ್ಥಮಿಹ ವೈಷ್ಣವಾನ್
ನಾವಮನ್ಯೇತತ್ರೈಲೋಕ್ಯಂ ಪವಿತ್ರೀ ಕುರುತೇ ಹರಿಃ"

ಎಂದು ಹೇಳಿರುವ ಹಾಗೆ ಸರ್ವೇಶ್ವರನು ಅಂತಹ ವೈಷ್ಣವರ ಮೂಲಕ ಪಾಪಿಗಳಾದ ಜನವನ್ನು ಪರಿಶುದ್ಧರನ್ನಾಗಿ ಮಾಡಬೇಕೆಂಬ ಸಙ್ಕಲ್ಪಯುಕ್ತನಾಗಿರುವದರಿಂದ ಅಂತವರನ್ನು ಅನಾದರಣೆಮಾಡಿದರೆ ಸರ್ವೇಶ್ವರನಿಗೆ ಕೋಪ ಉಂಟಾಗುವದರಿಂದ ಅವರು ಭಗವನ್ನಿಗ್ರಹಕ್ಕೆ ಗುರಿಯಾಗುವರೆಂಬ ಭಾವವು. ಇಲ್ಲಿ **ಶೀರುಮ್‌** ಎಂದು ಹೇಳಿರುವದರಿಂದ, **"ಜ್ಞಾನೀತ್ವಾತ್ಮೈವ ಮೇ ಮತಂ"**

ರುಕ್ಕ ರಾಜಮಹಿಷೀ ಕ್ಷುದ್ರಜನ್ತುಕ್ಕಳ್ಪಕ್ಕಲಿಲೇ ಮಡಿಪ್ಪಿಚ್ಚೈಪ್ಪು ಕ್ಕಾಲ್ ರಾಜಾವುಕ್ಕು ಅವದ್ಯಮಾಯ್ ಅತ್ತಾಲೆ ಯವಳೈ ಯವರ್ನ ಶೆರು ಕ್ಕವಾಪ್ಪೋಲೆ ಎಮ್ಬೆರುಮಾನ್ ತಿರುವುಳ್ಳಮ್ ಶೆರುತ್ತಿರುಕ್ಕುಮ್.

ಎಂದು ಹೇಳಿರುವ ಹಾಗೆ ವಿಷ್ಣುಭಕ್ತನ ತಿರಸ್ಕಾರದಲ್ಲಿ ಸರ್ವೇಶ್ವರನಿಗೆ ವಿಶೇಷ ಕೋಪವೆಂದು ಹೇಳಿದಂತಾಯಿತು.

ಪ್ರತಿಕೂಲರನ್ನು ಪರಿತ್ಯಾಗಮಾಡದೆ ಆದರಿಸಿದುದಾದರೆ ಆಗುವ ಫಲವನು ಮುಂದೆ ಹೇಳುತ್ತಾರೆ:—ಅರ್ಥಕಾಮಗಳ ಮೂಲಕವಾಗಿ ಪ್ರತಿಕೂಲರನ್ನು ಆದ **ರಿಕ್ಕುಮಾಗಿಲ್**-ಸತ್ಕರಿಸಿದರೆ ಉಪಾದೇಯರೆಂದು ಭಾವಿಸಿದರೆ ಎಂಬ ಭಾವವು **ರಾಜಾಸಾರ್ವಭೌಮನಾಯಿರುಕ್ಕ** - ರಾಜನು ಚಕ್ರವರ್ತಿಯಾಗಿರುವಾಗ, **ರಾಜ ಮಹಿಷೀ** - ರಾಜನ ಪಟ್ಟಮಹಿಷಿ ಎನಿಸುವ ಪತ್ನಿಯು, **ಕ್ಷುದ್ರಜಂತು ಕ್ಕಳ್ ಪಕ್ಕಲಿಲೇ**-ಅಲ್ಪರಾದ ಜನಗಳ ಮಧ್ಯೆ, **ಮಡಿಪ್ಪಿಚ್ಚೈಪ್ಪುಕ್ಕಾಲ್**-ತೀರೆಯ ಕರಗನ್ನು ತೋರಿಸಿ ಬಿಕ್ಷೆಯನ್ನು ಯಾಚಿಸಿದರೆ, **ರಾಜಾವುಕ್ಕು ಅವದ್ಯ ಮಾಯ್** - ರಾಜನಿಗೆ ಅದು ಇಷ್ಟವಾಗದೆ. **ಅತ್ತಾಲೆ** - ಅದರಿಂದ, ಆ ಕಾರಣ ದಿಂದ, **ಅವಳೈ** – ತನ್ನ ಪತ್ನಿಯನ್ನು, **ಅವರ್ನ** - ಆ ರಾಜನು, **ಶೆರುಕ್ಕವಾ ಪ್ಪೋಲೆ** - ಕೋಪಿಸುವ ಹಾಗೆ, **ಎಮ್ಬೆರುಮಾನ್ ತಿರುವುಳ್ಳಮ್** - ನಮ್ಮ ಸ್ವಾಮಿಯ ಹೃದಯವು, **ಶೆರುತ್ತಿರುಕ್ಕುಮ್** - ಕೋಪಗೊಂಡಿರುವದು. ಪ್ರತಿ ಕೂಲರು ಭಗವದ್ದ್ವೇಷಿಗಳಾಗಿ ಕ್ಷುದ್ರದೇವತೆಗಳನ್ನು ಆಶ್ರಯಿಸಿರುವರು, ಇವರು ಸರ್ವಕಾಮ ಸಮೃದ್ಧಿಯನ್ನೀಯುವ ಸರ್ವೇಶ್ವರನಾದ ತಮ್ಮ ಪತಿಯನ್ನು ತ್ಯಜಿಸಿ ಇತರರಾದ ಕ್ಷುದ್ರದೇವತೆಗಳಮೂಲಕ ತಮ್ಮ ಮನೋರಥವನ್ನು ಪಡೆಯಬೇ ಕೆಂದು ಯಾಚಿಸುವದರಿಂದ. ಇವರನ್ನು ನೀಚಜನಗಳಲ್ಲಿ ಬಿಕ್ಷೆಯನ್ನು ಬೇಡುವ ರಾಜಪತ್ನಿಗೆ ಹೋಲಿಸಿರುತ್ತಾರೆ. ನಮಗೂ ಸರ್ವೇಶ್ವರನಿಗೂ ಇರುವ ನವ ವಿಧ ಸಂಬಂಧದಲ್ಲಿ, ಅನುಕೂಲರ ಅನಾದರಣೆಯ ದೃಷ್ಟಾಂತದಲ್ಲಿ ಪಿತಾಪುತ್ರ ಸಂಬಂ ಧವೂ, ಪ್ರತಿಕೂಲರ ಆದರಣೆಯ ದೃಷ್ಟಾಂತದಲ್ಲಿ ಭರ್ತೃಭಾರ್ಯಾಸಂಬಂಧವೂ ಉದಾಹರಣೆಗಾಗಿ ಸೂಚಿಸಲ್ಪಟ್ಟವು ಪ್ರಿಯಪುತ್ರಾನಾದರಣೆಯಲ್ಲಿ ರಾಜನಿಗೆ ತೀವ್ರಕೋಪವೂ, ಪತ್ನಿಯ ನೀಚಜನಾಶ್ರಯದಲ್ಲಿ ರಾಜನಿಗೆ ಆಕೆಯಲ್ಲಿ ಹೇಗೆ ಹೆಚ್ಚಾದ ಕೋಪವೋ, ಹಾಗೆಯೇ ಸರ್ವೇಶ್ವರನಿಗೂ ಇವರುಗಳ ವಿಷಯದಲ್ಲಿ ಹೆಚ್ಚಾದ ಕೋಪವು ಎಂಬ ಭಾವವು. ಅನುಕೂಲರಲ್ಲಿ ಅಗ್ರೇಸರನಾದ ಅಂಬ ರೀಷನನ್ನು ತಿರಸ್ಕರಿಸಿದ ದುರ್ವಾಸಮುನಿಗೂ, ಶವಿಾಕ ಋಷಿಯನ್ನು ಅವಮಾನ

ಅರ್ಥಕಾಮಙ್ಗಳಡಿಯಾಗ ಅನುಭಯರ್ಕ್ಕೈ ಆದರಿಕ್ಕುಮಾಗಿಲ್ ರತ್ನತ್ತುಕ್ಕುಮ್ ಪಾಷಾಣತ್ತುಕ್ಕುಮ್ ವಾಶಿಯರಿಯಾದಾಪ್ಪೋಲೆ ಇವನುಕ್ಕು ಪ್ಪಿರನ್ದ ಜ್ಞಾನಮ್ ಕಾರ್ಯಕರಮಾಯಿತ್ತಿಲ್ಲೈಯಾಗಾದೇ ಯೆನ್ರು ಅವನಳವಿಲೆ ಎಮ್ಪೆರುಮಾನ್ ಅನಾದರತ್ತಿರುಕ್ಕುಮ್.

ಪಡಿಸಿದ ಪರೀಕ್ಷಿದ್ರಾಜನಿಗೂ ಮತ್ತು ವಿಶ್ವಾಮಿತ್ರಾದಿ ಮಹರ್ಷಿಗಳಿಗೆ ಅವಮಾನ ಪಡಿಸಿದ ಯಾದವರಿಗೂ ಸರ್ವೇಶ್ವರನ ಕೋಪವು ಏನನ್ನು ಮಾಡಿತೆಂಬುವದು ತಿಳಿದ ವಿಷಯಗಳೇ. ಹಾಗೆಯೇ ಕ್ಷುದ್ರನಾದ ದುರ್ಯೋಧನನ್ನಾಶ್ರಯಿಸಿದ ಅಶ್ವತ್ಥಾಮ, ಭೀಷ್ಮ, ದ್ರೋಣ, ಕರ್ಣಾದಿಗಳಿಗೆ ಭಗವನ್ನಿಗ್ರಹದಿಂದುಂಟಾದ ಪರಿಣಾಮವೇನಾಯಿತೆಂಬುವದೂ ಸಹ ಸರ್ವವಿದಿತವಿಷಯವೇ. ಅನುಭಯರನ್ನು ಕಾಷ್ಠಲೋಷ್ಟಗಳನ್ನು ಕಂಡ ಹಾಗೆ ಇರದೆ ಆದರಿಸಿದರೆ ಉಂಟಾಗುವ ಫಲವನ್ನು ತಿಳಿಸುತ್ತಾರೆ:— **ಅರ್ಥಕಾಮಗಳಿಗಾಗಿ** ಅನುಭಯರನ್ನು ಆದರಿಸಿದರೆ ರತ್ನಕ್ಕೂ ಪಾಷಾಣಕ್ಕೂ **ವಾಶಿಯರಿಯಾದಾಪ್ಪೋಲೆ**-ವ್ಯತ್ಯಾಸ ತಿಳಿಯದ ಹಾಗೆ, ಎಂದರೆ ವೈಲಕ್ಷಣ್ಯವನ್ನು ತಿಳಿಯದವರ ಜ್ಞಾನದ ಹಾಗೆ ಎಂಬ ಭಾವವು. **ಇವನುಕ್ಕು ಪಿರನ್ದ ಜ್ಞಾನಮ್** - ಇವನಿಗೆ ಉಂಟಾದ ಜ್ಞಾನವು **ಕಾರ್ಯಕರಮಾಯಿತ್ತಿಲ್ಲೈಯಾಗಾದೇ** - ಉಪಯೋಗಕರವಾಗಿ ಆಗಲಿಲ್ಲವೇ ಎಂದರೆ ಆತನ ಪ್ರವೃತ್ತಿಗೆ ಉಪಯುಕ್ತವಾಗಲಿಲ್ಲವೇ, ಎನ್ರು - ಎಂಬದಾಗಿ, **ಅವನಳವಿಲೆ** - ಅವನ ವಿಷಯದಲ್ಲಿ, **ಎಮ್ಪೆರುಮಾನ್** - ಸರ್ವೇಶ್ವರನು, **ಅನಾದರಿತ್ತಿರುಕ್ಕುಮ್**- ಅನಾದರದಿಂದಿರುವನು. **ಅನಾದರಿತ್ತಿರುಕ್ಕುಮ್** ಎಂಬುವವರಿವಿಗೂ ಶ್ರೀಭಾಷ್ಯಕಾರರು ತಮ್ಮ ಶಿಷ್ಯರಿಗೆಚರಮದೆಶೆಯಲ್ಲಿ ಮಾಡಿದಉಪದೇಶವು. ಹೀಗೆ ತೃಣಪ್ರಾಯರನ್ನಾಗಿ ಭಾವಿಸತಕ್ಕವರನ್ನು ಆದರಿಸುವದರಿಂದ ಪಾಷಾಣಕ್ಕೂ ರತ್ನಕ್ಕೂ ಇರುವ ತಾರತಮ್ಯವನ್ನು ಗ್ರಹಿಸದೆ ಪಾಷಾಣವನ್ನು ರತ್ನವಾಗಿ ಭಾವಿಸುವದರಿಂದ ಈತನು ಹೊಂದಿದಜ್ಞಾನವು ವ್ಯರ್ಥವಾಯಿತೆಂದು ತಿಳಿದು ಸರ್ವೇಶ್ವರನು ಈತನ ವಿಷಯದಲ್ಲಿ ಅನಾದರದಿಂದಿರುವನೆಂಬಭಾವವು. ಈಶ್ರೀಯತಿರಾಜರುಪದೇಶವೆಲ್ಲಾ ಶ್ರೀಪ್ರಪನ್ನಾಮೃತದ ೬೭ನೆಯ ಅಧ್ಯಾಯದಲ್ಲಿ ತೋರಿಬರುತ್ತದೆ:— ಹೇಗೆಂದರೆ:—

"ತತಃ ಶ್ರೀವೈಷ್ಣವಾಸ್ಸರ್ವೇ ಶ್ರೀರಂಗಪುರವಾಸಿನಃ ।
ವಿನಮ್ ವಿಜ್ಞಾಪನಂ ಚಕ್ರುರ್ಯತಿರಾಜಂ ಜಗದ್ಗುರುಂ ।
ಅಸ್ಮಾಕಂ ಕಿಂ ವರ್ತಿತವ್ಯಂ ಬ್ರೂಹಿ ಸಮ್ಯಗ್ಯತೀಶ್ವರ ।
ತಚ್ಛ್ರುತ್ವಾ ಕಾನುನಾಚೇದಂ ಮುನ್ನಾಥೋವೈಷ್ಣವಾನ್ವಚಃ"

ಶ್ರೀರಂಗದಲ್ಲಿರುವ ಶಿಷ್ಯರನ್ನು ಕುರಿತು ಯತಿರಾಜರು ಹೇಳುತ್ತಾರೇನೆಂದರೆ :—

"ಯಃ ಕಶ್ಚನ ಪ್ರಪನ್ನಸ್ಸ್ಯಾತ್ಸ ಏವಂ ವರ್ತಯೇದ್ಬುಧಃ ।
ಯತ್ಪ್ರಪನ್ನಸ್ಯ ಚಾದೃಷ್ಟಮೀಶ್ವರಾಧೀನತಸ್ತತಃ ।
ನ ವಿಚಾರೋತ್ರಕರ್ತವ್ಯಸ್ಸಂದೇಹಸ್ಸ್ಫುರಿತೋ ಯದಿ ।
ಮಿಥ್ಯಾ ಭವತಿ ತತ್ತಸ್ಯಧ್ರುವಮಾತ್ಮ ಸಮರ್ಪಣಂ ।"

ಪ್ರಪನ್ನನು ಹೇಗಿರಬೇಕೆಂದರೆ :—

ಆತನ ಅದೃಷ್ಟವಾದ ಮೋಕ್ಷ ಫಲವು ಈಶ್ವರಾಧೀನವಾದುದರಿಂದ ಅದರ ವಿಷಯವಲ್ಲಿ ಈತನಿಗೆ ವಿಚಾರಬೇಕಿಲ್ಲವು. ಸಂದೇಹ ಉಂಟಾದರೆ ಆತನ ಆತ್ಮ ಸಮರ್ಪಣವೇ ಸುಳ್ಳಾಗುತ್ತದೆ. **"ಕರ್ಮಾಧೀನತಯಾ ತಸ್ಯ ದೃಷ್ಟಂ ತತ್ರನಶೋಚಯೇತ್"** । ಐಹಿಕವು ಕರ್ಮಾಧೀನವಾದುದರಿಂದ ಆ ವಿಷಯ ದಲ್ಲೂ ಶೋಕಿಸತಕ್ಕದ್ದಲ್ಲವು.

"ಅತೋಽಭಯೋಃ ಪ್ರಪನ್ನಸ್ಯ ದೃಷ್ಟಾದೃಷ್ಟಾತ್ಮ ಕಾರ್ಯಯೋಃ ।
ನಿರ್ಭರತ್ವಾನು ಸಂಧಾನಂ ಚಾನೀಧ್ವಮಿತಿ ವೈಷ್ಣವಾಃ"

ಆದುದರಿಂದ ಈ ಎರಡರ ವಿಷಯದಲ್ಲೂ ಪ್ರಪನ್ನನು ನಿರ್ಭರನಾಗಿರತಕ್ಕದ್ದು. ಅನಂತರ ಈ ಶಿಷ್ಯರು ತಮ್ಮ ಉತ್ತರಕೃತ್ಯವು ಯಾವುದೆಂದು ಬೆಸಗೊಳ್ಳಲು ಹೇಳುತ್ತಾರೆ.

"ಉಪಾಯ ಬುದ್ಧ್ಯಾಕರ್ಮಾಣಿ ಮಾಕುರುಧ್ವಂಮಹಾತ್ಮಕಾಃ।
ಕರ್ಮಣಾ ಮೇವ ಕೈಂಕರ್ಯೇ ಪ್ರಾಪ್ಯೇ ಭಗವತೋ ಮತಿಃ"

ಯಾವ ಕರ್ಮಗಳನ್ನೂ ಉಪಾಯ ಬುದ್ಧಿಯಿಂದ, ಮೋಕ್ಷ ಮೊದಲಾದ ಫಲಗಳನ್ನು ಸಾಧಿಸಿಕೊಡುತ್ತವೆ ಎಂಬಭಿಪ್ರಾಯದಿಂದ ಮಾಡತಕ್ಕದ್ದಲ್ಲವು. ಭಗವಂತನ ಕೈಂಕರ್ಯರೂಪವೆಂದು ಭಾವಿಸಿ ಅವುಗಳನ್ನು ನಡಿಸತಕ್ಕದ್ದು.

"ತದೀಯಂ ನಾಮ ಕೈಂಕರ್ಯಮ್ ಶ್ರುತ್ವಾ ಶ್ರೀಭಾಷ್ಯಮಾದರಾತ್
ಪ್ರವರ್ತಯಧ್ವಂ ತಲ್ಲೋಕೇ ತತ್ರಾಸಕ್ತಿರ್ನಚೇದ್ಯದಿ ।
ಪರಾಂಕುಶಾದಿ ಮುನಿಭಿರ್ದಶಭಿರ್ದೇಶಿಕೋತ್ತಮೈಃ ।
ಕೃತಂ ಪ್ರಬಂಧಮಭ್ಯಸ್ಯಶಿಷ್ಯೇಭ್ಯೋಪದಿಶಾ ನಿಶಂ"

ಶ್ರೀಭಾಷ್ಯವನ್ನು ಆದರದಿಂದ ಗುರುಮುಖೇನ ಉಪದೇಶಹೊಂದಿ ಪ್ರಚುರಪಡಿ ಸಿದರೆ ಭಗವಂತನಿಗೆ ತುಂಬಾ ಪ್ರಿಯವಾದ ಕೈಂಕರ್ಯವಾಗುವದು. ಹಾಗೆ ಅದರಲ್ಲಿ ನಿಮಗೆ ಆಸಕ್ತಿಯಿಲ್ಲದುದಾದರೆ ಶ್ರೀನಮ್ಮಾಳ್ವಾರ್‌ಪ್ರಭರೇ ಮೊದಲಾದ ಹತ್ತು ಆಳ್ವಾರುಗಳ ದಿವ್ಯಪ್ರಬಂಧವನ್ನು ಅಭ್ಯಾಸಮಾಡಿ ಶಿಷ್ಯರಿಗೆ ನಿತ್ಯವೂ ಉಪದೇಶಿಸಿರಿ ಅದಕ್ಕೂ ನಿಮಗೆ ಶಕ್ತಿಯಿಲ್ಲದುದಾದರೆ, **ದಿವ್ಯದೇಶೇಷು ಕೈಙ್ಕರ್ಯಂ ವಿಷ್ಣವೆ**

ಕುರುತಾನಿಶಂ" ದಿವ್ಯದೇಶಗಳಿಗೆ ಹೋಗಿ ವಿಷ್ಣ್ವಾಲಯದಲ್ಲಿ ಆತನಿಗೆ ಕೈಂಕರ್ಯವನ್ನು ಮಾಡಿರಿ. ಇದಕ್ಕೂ ನಿಮಗೆ ಇಷ್ಟವಿಲ್ಲದಿದ್ದರೆ "ಕುಟೀರಮಪಿ ಕೃತ್ವಾಪಿ ಮತ್ಪ್ರಿಯೇ ಯಾದವಾಚಲೇ । ಮುಕ್ತಾಹಂ ಕಾರಿಣಸ್ಸರ್ವೇ ವಾಸಂ ಕುರುತ ವೈಷ್ಣವಾಃ" ಒಂದು ಗುಡಿಸಲನ್ನಾದರೂ ಕಟ್ಟಿಕೊಂಡು ನನಗೆ ತುಂಬಾ ಪ್ರಿಯವಾದ ತಿರುನಾರಾಯಣಪುರದಲ್ಲಿ, ಅಹಂಕಾರಗಳನ್ನು ತೊರೆದು ವಾಸಮಾಡಿರಿ. ಇದಕ್ಕೂ ನಿಮಗಿಷ್ಟವಿಲ್ಲವಾದರೆ,

"ದ್ವಯಾರ್ಥಸ್ಯಾನು ಸಂಧಾನಂ ಯಾವಜ್ಜೀವ ಮತಂದ್ರಿತಾಃ ।
ಕುರ್ವಂತಸ್ಸನ್ನ್ಯಗೇವಾದ್ಯ ನಿರ್ಭರಾ ವಸತಾದರಾತ್"

ದ್ವಯಮಂತ್ರಾರ್ಥದ ಅನುಸಂಧಾನವನ್ನು ಯಾವಜ್ಜೀವವೂ ನಡೆಸುತ್ತಾ ನಿರ್ಭರರಾಗಿರತಕ್ಕದ್ದು. ಬುದ್ಧಿಯು ಇದರಲ್ಲೂ ಪ್ರವರ್ತಿಸದ ಪಕ್ಷದಲ್ಲಿ,

"ಅಯಂ ಮದೀಯ ಯಿತ್ಯೇವಮಭಿಮಾನವತಃ ಪರಂ ।
ಜ್ಞಾನಶಕ್ತ್ಯಾದಿ ಯುಕ್ತಸ್ಯ ವೈಷ್ಣವಸ್ಯ ಮಹಾತ್ಮನಃ ।
ಮುಕ್ತಾಹಂಕಾರಿಣಸ್ತಸ್ಯನಿದೇಶೇ ವಸತಾನಿಶಂ ।"

ಜ್ಞಾನಶಕ್ತ್ಯಾದಿ ಕಲ್ಯಾಣಗುಣಗಳುಳ್ಳ, ಮಹಾತ್ಮನಾದ, ತನ್ನವನೆಂದು ಅಭಿಮಾನಿಸುವ, ವಿಷ್ಣುಭಕ್ತನ ಆಜ್ಞೆಯಲ್ಲಿ ನಿರಹಂಕಾರರಾಗಿರತಕ್ಕದ್ದು ಎಂದು ಹೇಳಿ,

"ಇತ್ಯೇವಂ ವಸತಾ ಲೋಕೇ ಮಹತಾ ಮಧಿಕಾರಿಣಾಂ ।
ತ್ರಿವಿಧಾ ವಿಷಯಾಸ್ಸಂತಿ ವರ್ತಿತವ್ಯಾ ಯಥಾರ್ಹತಃ ॥"

ಹೀಗೆ ಇರುತ್ತಿರುವ ಪ್ರಪನ್ನರಾದ ಈ ಮಹಾತ್ಮರಾದ ಅಧಿಕಾರಿಗಳು ತಮ್ಮ ಸ್ವರೂಪಾನುಗುಣವಾಗಿ ಶಾಸ್ತ್ರಮರ್ಯಾದೆಯನ್ನತಿಕ್ರಮಿಸದೆ ನಡೆದುಕೊಳ್ಳತಕ್ಕ ಮೂರು ವಿಷಯಗಳುಂಟು; ಇಲ್ಲಿ ಯಥಾರ್ಹತಃ ಎಂಬುವದರಿಂದ ಶಾಸ್ತ್ರೀಯ ನಿಯಮಾನುಸರಣವು ಉಪದೇಶಿಸಲ್ಪಟ್ಟಿತು.

"ವಿರೋಧಿನೋಽನುಕೂಲಾಶ್ಚ ಸ್ಮೃತಾಶ್ಚಾನುಭಯಾ ಇತಿ ।
ವಿಷ್ಣುವಿದ್ವೇಷಿಣೋ ಲೋಕೇ ವಿರೋಧಿನ ಇತಿ ಸ್ಮೃತಾಃ ।
ವೈಷ್ಣವಾಶ್ಚಾನುಕೂಲಾಶ್ಚ ಬದ್ಧಾಶ್ಚಾನುಭಯಾಸ್ಸ್ಮೃತಾಃ ।

ವಿಷ್ಣುದ್ವೇಷಿಗಳು ವಿರೋಧಿಗಳೆಂದೂ, ವಿಷ್ಣುಭಕ್ತರು ಅನುಕೂಲರೆಂದೂ, ಬದ್ಧರು ಅನುಭಯರೆಂದೂ ಹೇಳಲ್ಪಟ್ಟಿರುತ್ತದೆ ಎಂದು ತಿಳಿಸಿ ಮುಂದೆ ಪ್ರಿಯವಸ್ತುವನ್ನು ಕಂಡ ತೆರದಿ, ಅನುಕೂಲರನ್ನು ಕಂಡರೆ ಸಂತೋಷಿಸಬೇಕೆಂದೂ ಪ್ರತಿಕೂಲರನ್ನು ಸರ್ಪಗಳ ಹಾಗೆ ತ್ಯಜಿಸಬೇಕೆಂದೂ, ಸಂಸಾರಿಗಳನ್ನು ಕಾಷ್ಠಲೋಷ್ಟದ ಹಾಗೆ ತೃಣೀಕರಿಸಬೇಕೆಂದೂ ಉಪದೇಶಿಸಿ, ಅದಕ್ಕೆ ಕಾರಣಗಳನ್ನು ತಿಳಿಸುತ್ತಾರೆ.

"ವೈಷ್ಣವಾನಾಂ ಹಿ ಸಂಗತ್ಯಾ ಸಮ್ಯಗ್ಜ್ಞಾನಂ ಪ್ರಜಾಯತೇ ।
ತೈರ್ನಿಶ್ರೇಯಸ ಪ್ರಾಪ್ತಿರ್ಭವಿಷ್ಯತಿ ನ ಸಂಶಯಃ"

ವಿಷ್ಣುಭಕ್ತರ ಸಹವಾಸದಿಂದ ಒಳ್ಳೇ ಜ್ಞಾನವುಂಟಾಗಿ ಅದು ಮೋಕ್ಷಪ್ರಾಪ್ತಿಗೆ ಸಹಕಾರಿಯಾಗುವದರಲ್ಲಿ ಸಂದೇಹವಿಲ್ಲವು. ಇದಕ್ಕೆ ವಿರೋಧವಾಗಿ ನಡೆದುದಾದರೆ ಆಗುವ ಫಲಗಳನ್ನು ಮುಂದೆ ಹೇಳುತ್ತಾರೆ.

"ಅನುಕೂಲಾನನಾದೃತ್ಯ ಪ್ರತಿಕೂಲಾನ್ ಧನೇಚ್ಛಯಾ ।
ಕೃತಾಸ್ಯಾದ್ಯದಿಯಾ ಪೂಜಾ ಸಾಹರೇಶ್ಯೋಕೇದಾ ಭವೇತ್ ।
ಸಾರ್ವಭೌಮಸ್ಯ ನೃಪತೇಸ್ತತ್ಪುತ್ರಂ ರಾಜಸನ್ನಿಧೌ ।
ಯಥಾ ಕೃತಾವಮಾನೇನ ವ್ಯಾಕುಲಂ ನೃಪಮಾನಸಂ ।
ತಥಾ ದೇವಸ್ಯ ವಿಷ್ಣೋಶ್ಚ ವ್ಯಾಕುಲಂ ಹೃದಯಂ ಭವೇತ್ ।
ಅರ್ಥಕಾಮೇಚ್ಛಯಾವಾಪಿ ಪೂಜಯೇನ್ನವಿರೋಧಿನಃ ।
ವಿರೋಧಿನಾಂ ಹಿತದ್ರವ್ಯಂ ವಿರೋಧಾಯೈವ ಕೇವಲಂ ।
ಸರ್ವಾಭೀಷ್ಟ ಪ್ರದೇ ದೇವೇ ಹರೌ ತಿಷ್ಠತಿ ಸರ್ವದಾ ।
ತಸ್ಮಾದ್ವಿಷ್ಣೋಃ ಋತೇ ಯಾಚ್ಞಾ ಕೃತಾ ಯದಿ ವಿರೋಧಿಷು ।
ಸಾರ್ವಭೌಮಸ್ಯ ನೃಪತೇ ಮಹಿಷ್ಯಾ ಕ್ಷತ್ರ ಬಂಧುಷು ।
ಯದಿ ಯಾಚ್ಞಾ ಕೃತಾತೇನ ನೃಪಸ್ಯಾವದ್ಯತಾ ಯಥಾ ।
ತಥಾ ಭಗವತಶ್ಚಾಪಿ ದವದ್ಯಂ ಸುಮಹದ್ಧ್ರುವಂ ।
ನವಾನಯೋ ದನುಭಯಾರ್ಥ ಅರ್ಥಕಾಮೇಚ್ಛಯಾಪಿವಾ ।
ಸುವರ್ಣಲೋಹಯೋರ್ಲೋಕೇ ಯಥಾ ರತ್ನ ವರಾಕಯೋಃ ।
ಅನುಕೂಲಾನುಭಯಯೋಸ್ತಥೈವಮಹದಂತರಂ ।"

ಅನುಕೂಲರ ತಿರಸ್ಕಾರವು ಸರ್ವೇಶ್ವರನಿಗೆ ಇಷ್ಟವಿಲ್ಲವೆಂಬುವದಕ್ಕೆ ಸಾರ್ವಭೌಮ ಪುತ್ರನ ತಿರಸ್ಕಾರದ ನಿದರ್ಶನವೂ, ಪ್ರತಿಕೂಲರನ್ನು ಅರ್ಥಕಾಮಗಳಿಗಾಗಿ ಆದರಿಸೋಣವು ಸರ್ವೇಶ್ವರನಿಗೆ ಅನಭಿಮತವೆಂಬುವದಕ್ಕೆ ರಾಜನಪಟ್ಟಮಹಿಷಿಯು ನೀಚಕ್ಷತ್ರಿಯನನ್ನು ಯಾಚಿಸುವ ನಿದರ್ಶನವೂ ಇಲ್ಲಿ ಹೇಳಲ್ಪಟ್ಟಿವೆ. ಸುವರ್ಣಕ್ಕೂ ಕಬ್ಬಿಣಕ್ಕೂ ಎಷ್ಟು ವ್ಯತ್ಯಾಸವೋ ರತ್ನಕ್ಕೂ ಕಾಡಕಲ್ಲಿಗೂ ಎಷ್ಟು ವ್ಯತ್ಯಾಸವೋ ಅಷ್ಟು ವ್ಯತ್ಯಾಸವು ಅನುಕೂಲರಿಗೂ ಅನುಭಯರಿಗೂ ಎಂದು ಹೇಳಿ, ಉಪದೇಶವನ್ನು ನಿಗಮನಮಾಡಿ ಹೇಳುತ್ತಾರೆ.

"ಅಹೋನಿಶಂ ವೇದ ರತೈರ್ಮಹಾತ್ಮಭಿಃ ಶ್ರೀವೈಷ್ಣವೈರ್ಮುಕ್ತಮದೈರ್ಗುರೂತ್ತಮೈಃ । ನಿವೃತ್ತ ತರ್ಷೈರ್ನಿವಸದ್ಭವಾದರಾತ್ತೇಭ್ಯಶ ನಸ್ಸರ್ವ ಫಲಾನಿ ಸಂತಿ"

ಇಪ್ಪಡಿ ಶ್ರೀಭಾಷ್ಯಕಾರರುಳಿಚ್ಚೆಯ್ದು ಉತ್ತರಕೃತ್ಯತ್ತಿಲ್, " (೧) ಕುಲಟಾ ಷಣ್ಡ ಪತಿತ ವೈರಿಭ್ಯಃ ಕಾಕಣೀಮಪಿ । ಉದ್ಯತಾಮಪಿ ಗೃಹ್ಣೀಯಾನ್ನಾಪದ್ಯಪಿ ಕದಾಚನ" (೨) "ಪರರಂಧ್ರೇಷು ಜಾತ್ಯಂಧಾಃ ಪರದಾರೇಷ್ವಪುಂಸಕಾಃ । ಪರಿವಾದೇಷು ಯೇ ಮೂಕಾಸ್ತೇಽತೀವದಯಿತಾ

ಆದುದರಿಂದ ಯಾವಾಗಲೂ ವೇದಗಳಲ್ಲಿ ಆದರವುಳ್ಳ, ಮಹಾತ್ಮರಾದ, ಅಹಂಕಾರಾದಿಗಳಿಂದ ಬಿಡಲ್ಪಟ್ಟ ಐಹಿಕ ಆಶೆಗಳನ್ನು ತೊರೆದ ಶ್ರೀವೈಷ್ಣವರುಗಳಾದ ಉತ್ತಮಗುರುಗಳೊಂದಿಗೆ ಆದರದಿಂದ ವಸಿಸತಕ್ಕದ್ದು ; ಅವರುಗಳಿಂದೆ ನಮಗೆ ಫಲವುಂಟು" ಎಂದು ಶ್ರೀಯತಿವರ್ಯರು ತಮ್ಮ ಪ್ರಿಯಶಿಷ್ಯರಿಗೆ **ಉಪದೇ**ಶಿಸಿದರೆಂದು ಪ್ರಪನ್ನಾಮೃತದಲ್ಲಿ ಹೇಳಲ್ಪಟ್ಟಿರುತ್ತದೆ.

ಈ ಉಪದೇಶದಲ್ಲಿ ಶಾಸ್ತ್ರೀಯನಿಯಮನ ಪ್ರಶಂಸೆಯು ಹೇಗೆ ಎಂಬುವದನ್ನು ಪಪಾದಿಸಿ **ತೋರಿಸುತ್ತಾರೆ.**

ಇಪ್ಪಡಿ - ಈ ಮೇಲೆ ಹೇಳಿದಪ್ರಕಾರ, "**ಒರುವರ್ ಪ್ರಪನ್ನನಾನಾಲ್** ಎಂದು ಪ್ರಾರಂಭಿಸಿ **ಅನಾದರಿತ್ತಿರುಕ್ಕುಮ್** ಎಂಬುವವರಿಗೂ ಹೇಳಿದ ಪ್ರಕಾರ, ಶ್ರೀಭಾಷ್ಯಕಾರರು **ಅರುಳಿಚ್ಚೆಯ್ದು** - **ಕೃ**ಪಯಾ ಉಪದೇಶಿಸಿದ, **ಉತ್ತರಕೃತ್ಯ**ದಲ್ಲಿ, "**ಕುಲಟಾ** - ಜಾರಸ್ತ್ರೀ, **ಷಂಡ** - ನಪುಂಸಕ, **ಪತಿತ** - ನಿತ್ಯಕರ್ಮಗಳನ್ನು ಪರಿತ್ಯಾಗಮಾಡಿದವನು, **ವೈರಿಭ್ಯಃ** - ಬ್ರಹ್ಮದ್ವೇಷಿಗಳು, ಇವರುಗಳಿಂದ, **ಉದ್ಯತಾಮಪಿ** - ಕೈಎತ್ತಿ ಅವರುಗಳಿಂದ ಕೊಡಲ್ಪಟ್ಟರೂ. **ಕಾಕಿಣೀಮಪಿ** - ಕ್ಷುದ್ರನಾಣ್ಯವನ್ನಾಗಲಿ ಅಥವಾ ಕ್ಷುದ್ರಧಾನ್ಯವನ್ನಾಗಲಿ, **ಆಪದ್ಯಪಿ** - ಆಪತ್ಕಾಲದಲ್ಲೂ ಕೂಡ, **ಕದಾಚನ** - ಎಂದಿಗೂ, **ನ ಗೃಹ್ಣೀಯಾತ್** - ಪರಿಗ್ರಹಿಸಕೂಡದು". ಇದು ಪ್ರತಿಕೂಲರನ್ನು ಅರ್ಥಕ್ಕಾಗಿ ಆಶ್ರಯಿಸುವದರ ನಿಷೇಧಕ್ಕೆ ಪ್ರಮಾಣವು. ಧರ್ಮವಿರುದ್ಧವಾದ ಅರ್ಥಪರಿಗ್ರಹವು ಕೂಡದೆಂದು ಹೇಳಲ್ಪಟ್ಟಿತು. ದ್ರವ್ಯಾಶೆಗಾಗಿ ಇಂತಹ ನೀಚರಾದ ವ್ಯಭಿಚಾರಿ ಪತಿತರೇ ಮೊದಲಾದವರು ಕೊಟ್ಟ ದ್ರವ್ಯಧಾನ್ಯವನ್ನು ಪರಿಗ್ರಹಿಸುವದು ನಿಷಿದ್ಧವಾದುದು, ಶಾಸ್ತ್ರೀಯನಿಯಮನಕ್ಕೆ ವಿರೋಧವಾದುದು, ಆದುದರಿಂದ ಹಾಗೆ ನಡೆಯುವದು ಯುಕ್ತವಲ್ಲವೆಂದು ಶ್ರೀಯತಿವರ್ಯರು ಉಪದೇಶಿಸಿದರೆಂಬ ತಾತ್ಪರ್ಯವು. ಮತ್ತು **ಯೇ**-**ಪರರಂಧ್ರೇಷು**-ಇತರರ ನ್ಯೂನತೆಗಳಲ್ಲಿ, **ಜಾತ್ಯಂಧಾಃ**-ಹುಟ್ಟು ಕುರುಡರೋ ಎಂದರೆ ಇತರರ ದೋಷಗಳನ್ನು ಯಾರು ಎಂದಿಗೂ ನೋಡುವದಿಲ್ಲವೋ ಎಂಬ ಭಾವವು,

---

(೧) ಶಾಂಡಿ. ಸ್ಮೃತಿ. ೩.೧೭ (೨) ವಿ.ಧ. ೭೬-೨೨

ಮುಮ್," ಇತ್ಯಾದಿಗಳಿಲ್ ಪಡಿಯೇ ಧರ್ಮವಿರುದ್ಧಾರ್ಥಕಾಮಙ್ಗಳ್ ದೂರತೋ ನಿರಸ್ತಙ್ಗಳಾನಪಡಿಯಾಲೇ ಧರ್ಮಾವಿರುದ್ಧ ಅರ್ಥಕಾಮಙ್ಗಳ್, ಉಪಾಧಿಯಾಗವುಮ್ ಅನುಕೂಲ ಪ್ರತಿಕೂಲೋದಾಸೀನ ವಿಷಯಙ್ಗಳಿಲ್ ತಾನ್ ನಿನ್ರುನಿಲ್ಯೆ ಕುಲೈಯಲಾಗಾದೆನ್ರು ತಿರುವುಳ್ಳಮ್.

ಯೇ - ಯಾರು, ಪರದಾರೇಷು - ಇತರರ ಹೆಂಡರಲ್ಲಿ, ನಪುಂಸಕಾಃ - ನಪುಂಸಕರೋ ಎಂದರೆ ಇತರರ ಹೆಂಡತಿಗಳನ್ನು ಯಾವನು ಕಣ್ಣೆತ್ತಿ ನೋಡುವದಿಲ್ಲವೋ ಯೇ-ಯಾರು, ಪರಿವಾದೇಷು-ಇತರರ ನಿಂದೆಗಳಲ್ಲಿ, ಮೂಕಾಃ - ಮೂಗರೋ ಎಂದರೆ ಯಾರು ಇತರರನ್ನು ನಿಂದಿಸುವದಿಲ್ಲವೋ, ತೇ-ಅವರು, ಮಮ-ನನಗೆ, ಅತೀವದಯಿತಾಃ - ತುಂಬಾ ಪ್ರಿಯರು." ಇದು ಧರ್ಮವಿರುದ್ಧವಾದ, ಶಾಸ್ತ್ರೀಯನಿಯಮಕ್ಕೆ ವಿರುದ್ಧವಾದ, ಕಾಮವು ಕೂಡದೆಂಬುವದಕ್ಕೆ ಪ್ರಮಾಣವು." ಇತ್ಯಾದಿಗಳಿಲ್ಪಡಿಯೇ - ಇವೇ ಮೊದಲಾದ ಪ್ರಮಾಣಗಳ ಹಾಗೆ, ಧರ್ಮವಿರುದ್ಧಾರ್ಥಕಾಮಙ್ಗಳ್ - ಶಾಸ್ತ್ರದಲ್ಲಿ ವಿಧಿ ನಿಷೇಧವಾಕ್ಯಗಳಿಂದ ವಿಧಿಸಿರುವದೇ ಧರ್ಮವು, ಅದಕ್ಕೆ ವಿರುದ್ಧವಾದ ಅರ್ಥವೂ ಕಾಮವೂ ಸಹ, ದೂರತೋನಿರಸ್ತಙ್ಗಳ್ - ದೂರದಿಂದ ನಿರಸನ ಮಾಡತಕ್ಕವುಗಳು, ಪ್ರಪನ್ನನಿಗೆ ಸರ್ವದಾ ನಿಷಿದ್ಧವಾದವುಗಳು, ದೂರದಿಂದಲೂ ಕಣ್ಣೆತ್ತಿ ಕೂಡ ನೋಡತಕ್ಕದ್ದಲ್ಲವು. ಸಾಧಾರಣವಾಗಿ ಬುಭುಕ್ಷುಗಳಿಗೂ ಕೂಡ ಇವುಗಳು ಪರಿತ್ಯಾಜ್ಯಗಳು ಎಂದು ಹೇಳಿದೆ. ಪ್ರಪನ್ನನ ವಿಷಯದಲ್ಲಿ ಅವುಗಳು ಸುತರಾಂ ತ್ಯಾಜ್ಯಗಳು ಎಂದು ಹೇಳತಕ್ಕದ್ದೇನಿರುತ್ತದೆ ಎಂಬಭಿಪ್ರಾಯವನ್ನು ಸೂಚಿಸುವದಕ್ಕಾಗಿ "ದೂರತಃ ನಿರಸ್ತಂಗಳ್" ಎಂದು ಹೇಳಲ್ಪಟ್ಟಿತು ಆನಪಡಿಯಾಲೇ ಹೀಗಿರುವದರಿಂದ. ಧರ್ಮಕ್ಕೆ ವಿರುದ್ಧವಲ್ಲದ ಅರ್ಥಕಾಮಗಳೂ, ಉಪಾಧಿಯಾಗವುಮ್ - ವ್ಯಾಜರೂಪದಿಂದಲೂ ಕೂಡ ಅನುಕೂಲ ಪ್ರತಿಕೂಲ ಉದಾಸೀನರುಗಳ ವಿಷಯದಲ್ಲಿ, ತಾನಿನ್ರುನಿಲ್ಯೆ - ತಾನು ಹೇಗೆ ನಡೆದು ಕೊಳ್ಳಬೇಕೋ ಅಂತಹ ಸ್ಥಿತಿಯನ್ನು ಅಥವಾ. ತಾನ್ - ತಾನು. ನಿನ್ರುನಿಲ್ಯೆ - ಶಾಸ್ತ್ರೋಕ್ತವಾದ ಸ್ಥಿತಿಯನ್ನು, ಕುಲೈಯಲಾಗಾದು-ವ್ಯತ್ಯಾಸಮಾಡಕೂಡದು. ನಾಶಮಾಡಕೂಡದು. ಎನ್ರು-ಎಂಬದಾಗಿ. ತಿರುವುಳ್ಳಮ್-ಶ್ರೀಭಾಷ್ಯಕಾರರವರಿಗೆ ಅಭಿಪ್ರಾಯವು. ಶ್ರೀಭಾಷ್ಯಕಾರರುಪದೇಶದ ಮುಖ್ಯತಾತ್ಪರ್ಯವೇನೆಂದರೆ :— ಧರ್ಮವಿರುದ್ಧವಾದ ಅರ್ಥಕಾಮಗಳೂ, ಅರ್ಥಕಾಮಗಳಲ್ಲಿ ಪ್ರಾವಣ್ಯವೂ ಪ್ರಪನ್ನನಿಗೆ ಸುತರಾಂ ಕೂಡದು; ಮತ್ತು ಅರ್ಥಕಾಮಗಳು ಧರ್ಮವಿರುದ್ಧವಾದವಲ್ಲವೆಂಬ ನೆಪವನ್ನು ಮಾಡಿಕೊಂಡು, ಶ್ರೀಮತಿವಪ್ಪರು ಅನುಕೂಲ ಪ್ರತಿಕೂಲ

ಅನುಕೂಲಾದಿಷು ವಿಪರೀತಾಚರಣ ನಿಷೇಧಕ ಪ್ರಮಾಣಾನಿ.

ಅದಿಲ್ ಅನುಕೂಲರ್ಕ್ಕೆ ಅನಾದರಿಕ್ಕಲಾಗಾದೆನ್ಱುಮಿಡಮ್, ಶ್ರೀ ಶಾಂಡಿಲ್ಯಸ್ಮೃತಿಯಿಲೇ (೧) **ಅನಾದೃತ ಸುತಂ ಗೇಹೀ ಪುರುಷ ನ್ನಾಭಿನಂದತಿ । ತಥಾ ನರ್ಚಿತ ಸದ್ಭಕ್ತಂ ಭಗವಾನ್ನಾಭಿನಂದತಿ"**

ಅನುಭಯರ ವಿಷಯದಲ್ಲಿ ಉಪದೇಶಿಸಿದ ಹಾಗೆ ನಡೆಯದೆ, ವಿಪರೀತವಾಗಿ ನಡೆಯ ಕೂಡದು. ಶಾಸ್ತ್ರೀಯನಿಯಮನಾನುಸಾರವೇ ಆಚರಣೆ ಇರತಕ್ಕದ್ದೆಂಬಭಿಪ್ರಾಯವು. ಇದಕ್ಕೆ ಒಂದು ನಿದರ್ಶನವನ್ನು ಹೇಳಬಹುದು. ಭಗವದ್ಭಾಗವತ ಕೈಂಕರ್ಯಕ್ಕಾಗಿ ಧನಾರ್ಜನೆಯು ಧರ್ಮವಿರುದ್ಧವಾದುದಲ್ಲವು, ಆದನ್ನು ಆದಕ್ಕಾಗಿ ಸ್ವಸ್ತ್ರೀಯಿಯಿಂದಲಾಗಲಿ ವೇಶ್ಯಾಸ್ತ್ರೀಸಂಗದಿಂದಲಾಗಲಿ ಧನವನ್ನು ಸಂಪಾದಿಸಿ ಎಂದಿಗೂ ಮಾಡತಕ್ಕದ್ದಲ್ಲವು.

ಅನುಕೂಲರೇ ಮೊದಲಾದವರಲ್ಲಿ ವಿಪರೀತಾಚರಣೆಯನ್ನು ನಿಷೇಧಿಸುವ ಪ್ರಮಾಣಗಳು.

೧. ಮೊದಲು ಅನುಕೂಲರನ್ನು ಆದರಿಸಬೇಕೇಯಲ್ಲದೆ ಅನಾದರಿಸಕೂಡದೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ. **ಅದಿಲ್** - ಅದರಲ್ಲಿ ಎಂದರೆ ಶಾಸ್ತ್ರೋಕ್ತ ಅನುಷ್ಠಾನವು ವ್ಯತ್ಯಾಸಹೊಂದಕೂಡದೆಂಬುವದರಲ್ಲಿ, **ಅನುಕೂಲರ್ಕ್ಕೆ ಅನಾದರಿಕ್ಕ ಲಾಗಾದೆನ್ಱುಮಿಡಮ್** - ಅನುಕೂಲರನ್ನು ಅನಾದರಣೆಮಾಡಕೂಡದು ಎಂಬುವ ಸಂದರ್ಭದಲ್ಲಿ. "**ಗೇಹೀ** - ಮನೆಯ ಯಜಮಾನನು, **ಅನಾದೃತಸುತಂ** – ತನ್ನ ಮಗನನ್ನು ಅನಾದರಣೆಮಾಡುವ, **ಪುರುಷಂ** - ಪುರುಷನನ್ನು ಕುರಿತು, **ಯಥಾ** - ಹೇಗೆ, ಮುಂದೆ **ತಥಾ** - ಎಂದಿರುವದರಿಂದ **ಯಥಾ** ಎಂದು ಇಟ್ಟುಕೊಳ್ಳತಕ್ಕದ್ದು, **ನಾಭಿನಂದತಿ** - ಸಂತೋಷಪಡುವದಿಲ್ಲವೋ, **ತಥಾ** – ಹಾಗೆಯೇ, **ಭಗವಾನ್** - ಷಾಡ್ಗುಣ್ಯಪರಿಪೂರ್ಣನಾದ ಸರ್ವೇಶ್ವರನು, **ಅನರ್ಚಿತ ಸದ್ಭಕ್ತಂ**-ಮಹಾಭಾಗವತನಾದ ಭಕ್ತನನ್ನು, **ಪೂಜಿಸ**ದವನನ್ನು ಕುರಿತು, **ನಾಭಿನಂದತಿ** - ಸಂತೋಷಿಸುವದಿಲ್ಲವು," ಎನ್ಱುಶೊಲ್ಲ**ಪ್ಪಟ್ಟದು** - ಎಂದು ಹೇಳಲ್ಪಟ್ಟಿರುತ್ತದೆ. ಭಗವಂತನು ಸಂತುಷ್ಟನಾದರೆ

(೧) ಶಾಂಡಿಲ್ಯ ೪.೮೭

ಎನ್ರು - ಶೊಲ್ಲಪಟ್ಟದು. ಪ್ರತಿಕೂಲಸಂಸರ್ಗನಾಗಾದೆನ್ರು ಮಿಡಮ್ ಮಹಾಭಾರತತ್ತಿಲೇ (೨) "ಯೇ ದ್ವಿಷನ್ತಿ ಮಹಾತ್ಮಾನಂ ನಸ್ಮರನ್ತಿ ಚ ಕೇಶವಂ । ನ ತೇಷಾಂ ಪುಣ್ಯತೀರ್ಥೇಷು ಗತಿಸ್ಸಂಸರ್ಗಿಣಾಮಪಿ" ಎನ್ರು ಶೊಲ್ಲಪ್ಪಟ್ಟದು. ಅಪ್ಪಡಿಯೇ (೧) "ಮೂರ್ಖೈಃ ಪಾಪರತೈಃ

ಆತನ ಕೃಪೆಯು ಒದಗುತ್ತದೆ. ಹಾಗೆ ಸಂತೋಷಿಸದಿದ್ದರೆ, ಆತನ ಕೋಪಕ್ಕೆ ಒಳಪಟ್ಟು ಭಗವನ್ನಿಗ್ರಹವು ಪ್ರಾಪ್ತವಾಗುತ್ತದೆಂಬ ಭಾವವು. ತನ್ನ ಮಗನನ್ನು ಆದರಿಸದವನನ್ನು ಕುರಿತು ತನಗೆ ಹೇಗೆ ಸಂತೋಷವಿಲ್ಲವೋ, ಹಾಗೆಯೇ ಸರ್ವೇಶ್ವರನೂ ಮಹಾಭಾಗವತನಾದ ತನ್ನ ಪ್ರಿಯಪುತ್ರನನ್ನಾರಾಧಿಸದವನನ್ನು ಕುರಿತು ಸಂತೋಷಿಸುವದಿಲ್ಲವು ಎಂಬುವದು ಈ ಶ್ಲೋಕಾಭಿಪ್ರಾಯವು.

೨. ಪ್ರತಿಕೂಲರ **ಸಂಸರ್ಗನಾಗಾದೆನ್ನುಮಿಡಮ್** - **ಸಹವಾಸವು** ಕೂಡದೆನ್ನುವ ಸಂದರ್ಭದಲ್ಲಿ, "**ಯೇ** - ಯಾರು, **ಮಹಾತ್ಮಾನಂ** – ಮಹಾತ್ಮನಾಗಿರುವ, **ಕೇಶವಂ** - ಮಹಾವಿಷ್ಣುವನ್ನು, **ದ್ವಿಷನ್ತಿ** - ದ್ವೇಷಿಸುತ್ತಾರೋ, ಅಥವಾ **ನ ಸ್ಮರಂತಿಚ** - ಸ್ಮರಿಸುವದಿಲ್ಲವೋ. **ತೇಷಾಂ** - ಅವರುಗಳಿಗೂ ಮತ್ತು **ಸಂಸರ್ಗಿಣಾಮಪಿ** - ಅಂಥಾವರೊಂದಿಗೆ ಸಂಬಂಧವುಳ್ಳವರಿಗೂ ಸಹ **ಪುಣ್ಯತೀರ್ಥೇಷು** - ಗಂಗಾ ಯಮುನೆ ಮೊದಲಾದ ಪುಣ್ಯತೀರ್ಥಗಳಲ್ಲೂ, **ಗತಿಃ** - ಉಂಟಾಗುವ ಪುಣ್ಯರೂಪ ಫಲವು, **ನ** - ಇಲ್ಲವು; ಸರ್ವೇಶ್ವರನನ್ನು ದ್ವೇಷಿಸುವರೇ ಆಗಲಿ, ಅಥವಾ ಸ್ಮರಿಸದೇ ಇರುವರೇ ಆಗಲಿ, ಮತ್ತು ಅವರುಗಳ ಸಹವಾಸ ಮಾಡುವರೇಯಾಗಲಿ. ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದರೂ ಅವರಿಗೆ ಯಾವ ವಿಧ ಫಲವೂ ಇರುವದಿಲ್ಲವು ಎಂಬುವದು ಈ ಶ್ಲೋಕಾಭಿಪ್ರಾಯವು. ಇವರಿಂದ ಅಂತಹ ಪ್ರತಿಕೂಲರ ಸಹವಾಸವುಳ್ಳವರು ಭಗವಂತನ ಕೋಪಕ್ಕೆ ಪಾತ್ರರಾಗುವದರಿಂದ, ತೀರ್ಥಯಾತ್ರಾಫಲವು ಅವರುಗಳಿಗಿಲ್ಲವೆಂಬ ಭಾವವು. ಎನ್ರು - ಎಂಬದಾಗಿ, ಮಹಾಭಾರತದಲ್ಲಿ, **ಶೊಲ್ಲಪ್ಪಟ್ಟದು** - **ಹೇಳಲ್ಪಟ್ಟಿತು**. **ಕೇಶವ** ಶಬ್ದಾರ್ಥಕ್ಕೆ ೬೯ನೆಯ ಪುಟವನ್ನು ನೋಡಿ. ಹಾಗೆಯೇ ಪ್ರತಿಕೂಲರ ಸಹವಾಸದಿಂದ ಭಗವಂತನಲ್ಲಿರುವ ನಮ್ಮ ಭಕ್ತಿಯು ತಪ್ಪಿಹೋಗುತ್ತದೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ :—

ಮೂರ್ಖೈಃ – ಆತ್ಮಜ್ಞಾನರಹಿತರಾಗಿಯೂ. **ಪಾಪರತೈಃ**-ಪಾಪಮಾಡುವದಲ್ಲಿ ಆಸಕ್ತಿಯುಳ್ಳವರಾಗಿಯೂ, **ಕ್ರೂರೈಃ** – ಕ್ರೂರರಾಗಿಯೂ. ಇರುವ,

---

(೨) ಭಾರ ಶಾಂತಿ ೩೩೬.೩೬ (೧) ಶಾಂಡಿಲ್ಯ ಸ್ಮೃತಿ ೪.೮೬

ಕ್ರೂರೈರ್ಭಗವಚ್ಛಾಸ್ತ್ರ ದೂಷಕೈಃ । ಸಂಬನ್ಧಂ ನಾಚರೇದ್ಭಕ್ತಿರ್ನಶ್ಯತ್ಯೇತೈಸ್ತು ಸಂಗಮೇ ॥" ಎನ್ನು ಪ್ರತಿಕೂಲಸಂಸರ್ಗಮ್ ಭಗವತ್ಪ್ರೇಮತ್ತೈಯಳಿಕ್ಕುಮೆನ್ನು ಶೊಲ್ಲಪಟ್ಟದು. ಉದಾಸೀನರೈತೃಣವತ್ಕರಿಕ್ಕವೇಣುಮೆನ್ನುಮಿಡಮ್ "ಅದ್ಯಪ್ರಭೃತಿಹೇಲೋಕಾ ಯೂಯಂ ಯೂಯಂ ವಯಂ ವಯಂ । ಅರ್ಥಕಾಮಪರಾಯೂಯಂ ನಾರಾಯಣಪರಾ ವಯಂ । ನಾಸ್ತಿಸಂಗತಿ ರಸ್ಮಾಕಂ ಯುಷ್ಮಾಕಂಚ ಪರಸ್ಪರಂ ।

ಭಗವಚ್ಛಾಸ್ತ್ರದೂಷಕೈಃ - ಭಗವಂತನ ಆಜ್ಞಾರೂಪಗಳಾದ ಶ್ರುತಿ ಪಾಂಚರಾತ್ರಶಾಸ್ತ್ರಮೊದಲಾದವುಗಳನ್ನು ದೂಷಿಸುವರೊಂದಿಗೆ ಅಥವಾ ಭಗವಂತನನ್ನೂ ಮತ್ತು ಆತನ ಶಾಸ್ತ್ರಗಳನ್ನೂ ದೂಷಿಸುವರೊಂದಿಗೆ, **ಸಂಬಂಧಂ** - ಸಹವಾಸವನ್ನು, **ನಾಚರೇತ್** - ಮಾಡತಕ್ಕದ್ದಲ್ಲವು. **ಏತೈಃ** - ಅವರುಗಳೊಂದಿಗೆ, **ಸಂಗಮೇತು** - ಸಂಸರ್ಗದಲ್ಲಿಯಾದರೋ, **ಭಕ್ತಿಃ** - ಮೊದಲು ಭಕ್ತಿಯು ಇದ್ದುದಾದರೇ ಅದೂ, **ನಶ್ಯತಿ**-ನಾಶಹೊಂದುತ್ತದೆ." **ಎನ್ನು** - ಎಂಬದಾಗಿ, **ಪ್ರತಿಕೂಲ ಸಂಸರ್ಗಮ್** - ಪ್ರತಿಕೂಲರೊಂದಿಗೆ ಸೇರಿರುವದು, **ಭಗವತ್ಪ್ರೇಮತ್ತೈ** – ನಮಗೆ ಭಗವಂತನಲ್ಲಿರುವ ಭಕ್ತಿಯನ್ನು **ಅಳಿಕ್ಕುಮೆನ್ನು** - ಹೋಗಲಾಡಿಸುವದೆಂದು **ಶೊಲ್ಲಪ್ಪಟ್ಟದು** - ಹೇಳಲ್ಪಟ್ಟಿತು.

೩. ಉದಾಸೀನರನ್ನು ತೃಣದ ಹಾಗೆ ಉದಾಸೀನ ಭಾವದಿಂದ **ಕಾಣಬೇ**ಕೆಂದು ಹೇಳಿದುದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ. **ಉದಾಸೀನರೈ** - ಅನುಕೂಲಪ್ರತಿಕೂಲರಲ್ಲದೆ ಅನುಭವುರಾದ ಸಂಸಾರಿಗಳನ್ನು, **ತೃಣವತ್ಕರಿಕ್ಕವೇಣುಮ್** - ಹಿಂದೆ ಕಾಷ್ಠಲೋಷ್ಟಗಳೋಪಾದಿಯಲ್ಲಿ **ತೃಣದ** ಹಾಗೆ **ಕಾಣ**ಬೇಕು, **ಎನ್ನುಮಿಡಮ್** - ಎಂದು ಹೇಳಿದುದಕ್ಕೆ ಪ್ರಮಾಣವಾಗಿ ಶ್ರೀನಾರದ ಋಷಿಯ ವಾಕ್ಯವನ್ನು ಉದಾಹರಿಸುತ್ತಾರೆ :—

"**ಹೇ ಲೋಕಾಃ** - ಓ ಜನರುಗಳಿರಾ, **ಅದ್ಯಪ್ರಭೃತಿ** - ಇಂದಿನಿಂದ ಮುಂದಕ್ಕೆ, **ಯೂಯಂ ಯೂಯಂ**-ನಿಮ್ಮಷ್ಟಕ್ಕೆ ನೀವೇ, **ವಯಂವಯಂ**-ನಮ್ಮಷ್ಟಕ್ಕೆ ನಾವೇ. **ಅರ್ಥಕಾಮಪರಾಯೂಯಂ** - ನೀವುಗಳು ದ್ರವ್ಯವೇನು, ಕಾಮಸುಖಗಳೇನು ಇವುಗಳಲ್ಲಿ ಮನಸ್ಸುಳ್ಳವರು, **ನಾರಾಯಣಪರಾವಯಂ** – ನಾವುಗಳಾದರೋ ಶ್ರೀಮನ್ನಾರಾಯಣನಲ್ಲಿ ಮನಸ್ಸುಳ್ಳವರು. **ಅಸ್ಮಾಕಂ ಯುಷ್ಮಾಕಂ ಚ** - ನಮಗೂ ನಿಮಗೂ ಸಹ ಪರಸ್ಪರವಾಗಿ, **ನಾಸ್ತಿ ಸಙ್ಗತಿಃ** - ಸಂಬಂಧವಿರುವದಿಲ್ಲವು. **ವಯಂತು** - ನಾವಾದರೋ, **ವಿಷ್ಣೋಃ** -

ವಯಂತು ಕಿಂಕರಾವಿಷ್ಣೋರ್ಯೂಯಮಿಂದ್ರಿಯ ಕಿಂಕರಾಃ ।" ಇತ್ಯಾದಿ ಗಳಿಲೇ ಪ್ರಸಿದ್ಧಮ್.

ಶಾಸ್ತ್ರೀಯಾನು ಸರಣಮೇವ ಶ್ರೀಯತಿವರ್ಯಯಾಮುನಾ
ರ್ಯಾಭಿಪ್ರೇತಂ

ಇಪ್ಪಡಿ ಮುನ್ನಡಿ ಪಾರ್ತು ನಡಕ್ಕವೇಣ್ಡು ಮೆನ್ರರುಳಿಚ್ಚೆಯ್‌ದ ಅರ್ಥಮ್ ಶಾಸ್ತ್ರೈಕವೇದ್ಯಮಾಗೈಯಾಲೆ, ಶಾಸ್ತ್ರಿಯಜ್ಗಳುಕ್ಕು ಉಪಲ

ವಿಷ್ಣುವಿಗೆ ಅಧೀನವಾಗಿ ಆತನ ದಾಸರು. ಯೂಯಮಿಂದ್ರಿಯಕಿಂಕರಾಃ - ನೀವು ಇಂದ್ರಿಯಗಳಿಗೆ ಅಧೀನರಾಗಿ ಅವುಗಳಿಗೆ ದಾಸರಾಗಿರುತ್ತೀರಿ." ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ, ಪ್ರಸಿದ್ಧಂ - ಪ್ರಸಿದ್ಧವಾದುದು.

ಶಾಸ್ತ್ರೀಯಾನುಸರಣವೇ ಶ್ರೀಯತಿವರ್ಯರ ಮತ್ತು ಯಾಮು
ನೇಯರ ಸೂಕ್ತ್ಯಭಿಪ್ರಾಯವು.

ಮೇಲೆ ಉದಾಹರಿಸಲ್ಪಟ್ಟ ಶ್ರೀಭಾಷ್ಯಕಾರರ ಉಪದೇಶದಲ್ಲಿ ಶ್ರೀಭಾಷ್ಯಾದಿ ಪ್ರವರ್ತನಾದಿಗಳು ಬೋಧಿಸಲ್ಪಟ್ಟವೇ ವಿನಾ ಶಾಸ್ತ್ರೀಯನಿಯಮನಾನುಸಾರ ವಾಗಿ ವರ್ತಿಸಬೇಕೆಂಬ ವಿಷಯವು ಹೇಳಲ್ಪಡಲಿಲ್ಲವಲ್ಲಾ ಎಂಬಾಕ್ಷೇಪವು ಉಂಟಾ ಗಬಹುದೆಂದು ಯೋಚಿಸಿ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಹಾಗೆಯೇ ಶ್ರೀಯಾಮುನಾರ್ಯರೂ ಗೀತಾರ್ಥ ಸಂಗ್ರಹದ ೩೧ನೆಯ ಶ್ಲೋಕದಲ್ಲಿ "ನಿಜಕ ರ್ಮಾದಿಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವ ಕಾರಿತಃ" ಪ್ರೀತ್ಯೈವ - ಪ್ರೀತಿ ಯಿಂದಲೇನೆ ಮಾಡತಕ್ಕದ್ದೆಂದು ಅವಧಾರಣವಿರುವದರಿಂದ, ಶಾಸ್ತ್ರೀಯನಿಯ ಮನವು ವ್ಯಾವರ್ತಿಸಲ್ಪಟ್ಟಿತೆಂಬ ಆಕ್ಷೇಪಕ್ಕೂ ಸಮಾಧಾನ ಹೇಳುವವರಾಗಿ ಈ ಇಬ್ಬರು ಮಹನೀಯರಾದ ಆಚಾರ್ಯವರ್ಯರುಗಳ ಸೂಕ್ತಿಗಳಿಗೂ, ಶ್ರೀಕೃಷ್ಣಭಗ ವಾನರವರ "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ" ಎಂಬ ದಿವ್ಯೋಕ್ತಿಗೂ ಏನೂ ವಿರೋಧವಿಲ್ಲವೆಂದೂ ಉಪದೇಶಿಸುತ್ತಾರೆ.

ಇಪ್ಪಡಿ - ಈ ರೀತಿಯಲ್ಲಿ ಎಂದರೆ, ಶ್ರೀಭಾಷ್ಯಕಾರರವರು ಹೀಗೆ ಉಪದೇ ಶಿಸಿದ ಪ್ರಕಾರ, ಮುನ್ನಡಿ ಪಾರ್ತ್ತು ನಡಕ್ಕವೇಣ್ಡುಮ್ - ಮುಂದಿನ ಹೆಜ್ಜೆ ಯನ್ನು ನೋಡಿ ಜಾಗರೂಕದಿಂದ ನಡೆಯಬೇಕು, ಎನ್ರರುಳಿಚ್ಚೆಯ್ದ ಅರ್ಥಮ್ ಎಂದನುಗ್ರಹಿಸಿ ಉಪದೇಶಿಸಿದುದರಭಿಪ್ರಾಯವು. ಶಾಸ್ತ್ರೈಕವೇದ್ಯಮಾಕೈ

ಕ್ಷಣಮಾಕ ಸಾರೋದ್ಧಾರಂ ಪಣ್ಣಿ ಇವರರುಳಿಚ್ಚೆಯ್ದ ಕೈಙ್ಕರ್ಯಙ್ಗಳುಮ್ ತಾನ್ ವೇಂಡಿನಪಡಿ ಶೆಯ್ಯಪ್ಪೊಣ್ಣಾದ್ದೆಯಾಲೇ, ಶಾಸ್ತ್ರೋಕ್ತಮಾನ ನಿಯಮತ್ತೋಡೆ ಶೆಯ್‌ದಾಲ್ ಕೈಙ್ಕರ್ಯಮಾಮ್ ಎನ್ರು ಸೂಚಿತಮ್.

ಯಾಲೇ - ಶಾಸ್ತ್ರದಿಂದ ಮಾತ್ರವೇ ತಿಳಿಯಬೇಕಾದುದೆಂಬರ್ಥವಾದುದರಿಂದ, **"ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ"** (ಗೀ ೧೬-೨೪) ಇದನ್ನು ಮಾಡತಕ್ಕದ್ದು, ಇದನ್ನು ಮಾಡಕೂಡದೆಂಬ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣವು ಎಂದು ಹೇಳಿರುವ ಹಾಗೆ, ಶಾಸ್ತ್ರಮೂಲಕವೇ ತಿಳಿಯಲು ಯೋಗ್ಯವಾದುದರಿಂದ ಎಂಬಭಿಪ್ರಾಯವು, ಶ್ರೀಭಾಷ್ಯಕಾರರು **"ಮುನ್ನಡಿಪಾರ್ತು ನಡಕ್ಕವುಮ್"** ಎಂದು ಹೇಳಿದುದರಭಿಪ್ರಾಯವು ಶಾಸ್ತ್ರೀಯನಿಯಮನಾನುಸರಣ ಮಾಡಬೇಕೆಂಬಭಿಪ್ರಾಯವೆಂದು ಅಪ್ಪಣೆಕೊಡಿಸಿರುತ್ತಾರೆ, **ಶಾಸ್ತ್ರೀಯಙ್ಗಳುಕ್ಕು** - ಶಾಸ್ತ್ರದಲ್ಲಿ ವಿಧಿಸಿರುವ ನಿತ್ಯನೈಮಿತ್ತಿಕಾದಿ ಕೈಂಕರ್ಯಗಳನ್ನು, **ಉಪಲಕ್ಷಣಮಾಗ** - ಗುರ್ತಿಸಿ ಹೇಳುವಂಥಾದ್ದಾಗಿರುವ, **ಸಾರೋದ್ಧಾರಂಪಣ್ಣಿ** - ಸಾರವಾದುದನ್ನು ಎತ್ತಿ ಉದಾಹರಿಸಿ ಹೇಳಿ, **ಇವರರುಳಿಚ್ಚೆಯ್ದ** - ಈ ಯತಿವರ್ರು ಕೃಪಯಾ ಉಪದೇಶಿಸಿದ, **ಕೈಙ್ಕರ್ಯಙ್ಗಳುಮ್**-ಶ್ರೀಭಾಷ್ಯಾದಿ ಐದು ವಿಧ ಕೈಂಕರ್ಯಗಳನ್ನೂ, **ತಾನ್ ವೇಂಡಿನಪಡಿ ಶೆಯ್ಯಪ್ಪೊಣ್ಣಾದ್ದೆಯಾಲೆ** - ತನ್ನಿಷ್ಟಾನುಸಾರಮಾಡುವದು ಯುಕ್ತವಲ್ಲವಾದುದರಿಂದ, **ಶಾಸ್ತ್ರೋಕ್ತಮಾನ ನಿಯಮತ್ತೋಡೆ** - ಗುರುಶಿಷ್ಯಕ್ರಮಾದಿಗಳೇ ಮೊದಲಾದ ಶಾಸ್ತ್ರದಲ್ಲಿ ಹೇಳಿರುವ ಕ್ರಮಪ್ರಕಾರ, **ಶೆಯ್ದಾಲ್** - ಮಾಡಿದರೆ, **ಕೈಙ್ಕರ್ಯಮಾಮೆನ್ರು ಸೂಚಿತಮ್**- ಸರ್ವೇಶ್ವರನು ಪ್ರೀತನಾಗುವ ಕೈಂಕರ್ಯವಾಗುತ್ತದೆ ಎಂದು ಸೂಚಿಸಲ್ಪಟ್ಟಿತು. ಶ್ರೀಭಾಷ್ಯಕಾರರು **ಮುನ್ನಡಿ ಪಾರ್ತು ನಡಕ್ಕವುಮ್** ಎಂದು ಹೇಳಿದುದು **"ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ"** ಎಂದು ಹೇಳಿರುವ ಹಾಗೆ ಶಾಸ್ತ್ರೋಕ್ತನಿಯಮದಿಂದಲೇ ಕೈಂಕರ್ಯಗಳು ನಡಿಸತಕ್ಕದ್ದೇವಿನಾ ತನ್ನಿಷ್ಟಾನುಸಾರಮಾಡತಕ್ಕದ್ದು ಈ ಪ್ರಪನ್ನನ ಸ್ವರೂಪಕ್ಕೆ ಯುಕ್ತವಾದುದಲ್ಲವೆಂಬಭಾವವು. ಆದುದರಿಂದ ಶ್ರೀಯತಿವರ್ಯರು ಶಾಸ್ತ್ರೀಯನಿಯಮನಾನುಸರಣವನ್ನು ಮುಖ್ಯವಾಗಿ ಉಪದೇಶಿಸಲಿಲ್ಲವೆಂಬಭಿಪ್ರಾಯವು ಇದರಿಂದ ದೂರೀಕೃತವಾಯಿತು. ನಿತ್ಯನೈಮಿತ್ತಿಕಾದಿ ಕೈಂಕರ್ಯಗಳು ಹೇಗೋ ಹಾಗೆಯೇ ಶ್ರೀಯತಿವರ್ಯರು ಅಪ್ಪಣೆಕೊಡಿಸಿದ ಐದು ವಿಧ ಕೈಂಕರ್ಯಗಳೂ ಎಂದು ಭಾವಿಸತಕ್ಕದ್ದು. ಆದುದರಿಂದಲೇ ಈ ಐದು ವಿಧ ಕೈಂಕರ್ಯಗಳನ್ನು ಹೇಳಿದುದರಿಂದ ಶಾಸ್ತ್ರಗಳಲ್ಲಿ ಹೇಳಿ

ಶ್ರೀಯಾಮುನೇಯ ಸೂಕ್ತಿನ ಶಾಸ್ತ್ರೀಯ ಸರಣಿವ್ಯಾವೃತ್ತಿಃ.

ವೇಣ್ಡಿತ್ತು ಚ್ಚೆಯ್ದು ತಿರಿಯವವ್ಯಯುವೋ ವೆನ್ನಿಲ್, ಅದು ಇವನುಕ್ಕು ಸ್ವರೂಪಮನ್ರುಳಿಚ್ಚೆಯ್ದ ಪಡಿಯಾಲೇ (೧) "ಅಶಾ

ರುವ ಸರ್ವವಿಧ ಕೈಂಕರ್ಯಗಳೂ ಹೇಳಿದಂತೆ ಆಯಿತು. ಇವುಗಳನ್ನೆಲ್ಲಾ ಶಾಸ್ತ್ರಕ್ರಮವನ್ನನುಸರಿಸಿ ನಡಿಸಿದರೇನೇ ಅವು ಸರ್ವೇಶ್ವರನಿಗೆ ಅಭಿಮತಗಳಾದ ಕೈಂಕರ್ಯಗಳಾಗುವುವೆಂಬ ಭಾವವು.

ಶ್ರೀಯಾಮುನೇಯರವರೂ, ಶಾಸ್ತ್ರೋಕ್ತನಿಯಮನಾನುಸಾರವಾಗಿ ಪ್ರಪನ್ನನು ಕೈಂಕರ್ಯಗಳನ್ನೆಸಗುವದು ಅಷ್ಟು ಮುಖ್ಯವಲ್ಲವೆಂದು "ಕುರ್ಯಾತ್ಪ್ರೀತ್ಯೈವ ಕಾರಿತಃ" ಎಂಬುವದರಿಂದ ವ್ಯಕ್ತಪಡಿಸಿರುತ್ತಾರೆಂಬಭಿಪ್ರಾಯವು ಸರಿಯಾದುದಲ್ಲವೆಂದು ತೋರ್ಪಡಿಸಿ, ಶಾಸ್ತ್ರೀಯನಿಯಮನಾನುಸರಣವೇ ಈ ಜ್ಞಾನಾಗ್ರೇಸರರ ಅಭಿಪ್ರಾಯವೆಂದುಪದೇಶಿಸುತ್ತಾರೆ.

ಶ್ರೀಯಾಮುನೇಯರ ಸೂಕ್ತಿಯಲ್ಲಿ ಶಾಸ್ತ್ರೀಯಸರಣಿಯ ತಿರಸ್ಕಾರವಿಲ್ಲವು.

ಮುಂದಿನ ಮೂರು ವಾಕ್ಯಗಳಿಂದ, ಶ್ರೀಯಾಮುನೇಯರಿಗೂ ಶಾಸ್ತ್ರೀಯ ಸರಣಿಯೇ ಮುಖ್ಯವೆಂದು ವ್ಯಕ್ತಪಡಿಸುತ್ತಾರೆ. ವೇಣ್ಡಿತ್ತು ಚ್ಚೆಯ್ದು - ತನಗೆ ಇಷ್ಟವಾದ ಕೈಂಕರ್ಯಗಳನ್ನೆಸಗಿ, ತಿರಿಯವವ್ಯಯುವೋ ವೆನ್ನಿಲ್- ಸಂಚಾರವು ಸಾಕೋ ಎಂದರೆ ಪ್ರವರ್ತನೆಯು ಯೋಗ್ಯವೋ ಎಂಬ ಭಾವವು, ಅದು - ಅಂತಹ ಪ್ರವರ್ತನೆಯು, ಇವನುಕ್ಕು - ಈ ಪ್ರಪನ್ನನಿಗೆ, ಸ್ವರೂಪಮನ್ನೆನ್ರು ಅರುಳಿಚ್ಚೆಯ್ದ ಪಡಿಯಾಲೆ - ಸ್ವರೂಪವಲ್ಲವೆಂದು ಶ್ರೀಭಾಷ್ಯಕಾರರವರು ಮೇಲಿನ ಅವರದಿವ್ಯಸೂಕ್ತಿಯಲ್ಲಿ ಅಪ್ಪಣೆಕೊಡಿಸಿರುವದರಿಂದ, "ಅಶಾಸ್ತ್ರಂ - ಶಾಸ್ತ್ರವಿಹಿತವಾಗದೇ ಇರುವ ಯಜ್ಞತಪೋದಾನಾದಿ, ಕೃತ್ಸ್ನಂ - ಸಕಲಕರ್ಮವೂ, ಆಸುರಂ - ಭಗವದಾಜ್ಞೆಯನ್ನತಿಕ್ರಮಿಸುವದರಿಂದ ಆಸುರವೆಂದೆನಿಸಿ ದೋಷಯುಕ್ತವಾದದರಿಂದ ಗ್ರಾಹ್ಯವಲ್ಲವೆಂಬ ಭಾವವು" ಎನ್ರು - ಎಂದು, ಆಳವಂದಾರ್, ಶ್ರೀಯಾಮುನೇಯರು, ಅರುಳಿಚ್ಚೆಯ್ದಪಡಿಯೇ - ಅಪ್ಪಣೆ ಕೊಡಿಸಿರುವಹಾಗೆಯೇ

ಸ್ತ್ರವಾಸುರಂ ಕೃತ್ಸ್ನಂ” ಎನ್ರು ಆಳವಂದಾರ್ ಅರುಳಿಚ್ಚೆಯ್ದಪಡಿಯೇ ಶಾಸ್ತ್ರವಿರುದ್ಧಙ್ಗಳ್, ದೈವಪ್ರಕೃತಿಯಾನ ಇವರ್ಕ ಸ್ವರೂಪತ್ತುಕ್ಕು ಪ್ಪೊರುನ್ದಾಮೈಯಾಲುಮ್ (೨) “ಶ್ರುತಿಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ। ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ,” ಎನ್ರು ಅಡಿಮೈಕೊಳ್ಳುಕಿರವರ್ಕ ಅರುಳಿಚ್ಚೆಯ್ದಪಡಿಯಾಲುಮ್ ಇವರ್ಕಶರೀರತ್ತೋಡಿರುನ್ದಕಾಲಮ್ ಶಾಸ್ತ್ರವಶ್ಯನಾಯ್ ಅಡಿಮೈ

ಶಾಸ್ತ್ರವಿರುದ್ಧಙ್ಗಳ್ - ಶಾಸ್ತ್ರವಿಧಿಗೆವಿರೋಧವಾದ ಕೈಙ್ಕರ್ಯಗಳು, **ದೈವಪ್ರಕೃತಿಯಾನ** - ಭಗವದಾಜ್ಞಾನುಸಾರ ನಡೆಯುವ ಸ್ವಭಾವವುಳ್ಳ, **ಇವರ್ಕಸ್ವರೂಪತ್ತುಕ್ಕು** - ಈ ಕೃತಕೃತ್ಯನಾದಪ್ರಪನ್ನನ ಸ್ವರೂಪಕ್ಕೆ, **ಪೊರುನ್ದಾಮೈಯಾಲುಮ್** - ಯೋಗ್ಯವಲ್ಲದುದರಿಂದಲೂ “**ಶ್ರುತಿಃ** - ವೇದವು, **ಸ್ಮೃತಿ** - ಸ್ಮೃತಿಯೂ ಸಹ, **ಮಮಆಜ್ಞೈವ**-ನನ್ನ ಆಜ್ಞಾರೂಪವಾದುದೇ, ಆದುದರಿಂದ, **ಯಃ** - ಯಾವನು, **ತಾಂ** - ಆಆಜ್ಞೆಯನ್ನು **ಉಲ್ಲಂಘ್ಯ** - ಮೀರಿ, **ವರ್ತತೇ** - ಪ್ರವರ್ತಿಸುತ್ತಾನೋ, **ಸಃ** -ಆತನು, **ಆಜ್ಞಾಚ್ಛೇದೀ**-ಆಜ್ಞೆಯನ್ನು ನಿರಾಕರಿಸಿದವನು, ಆದುದರಿಂದ **ಮಮ ದ್ರೋಹೀ** - ನನಗೆ ದ್ರೋಹಮಾಡಿದವನು, ಆತನು, **ಮದ್ಭಕ್ತೋಽಪಿ** - ನನ್ನನ್ನು ಸ್ಮರಿಸುವ ಭಕ್ತನಾದರೂ, **ನ ವೈಷ್ಣವಃ** - ಆತನು ವಿಷ್ಣುಸಂಬಂಧವುಳ್ಳವನಲ್ಲವಾದುದರಿಂದ ಆತನಿಗೆ ಯಾವವಿಧ ಶ್ರೇಯಸ್ಸೂ ಇಲ್ಲವೆಂಬ ಭಾವವು” **ಎನ್ರು** - ಎಂದು, **ಅಡಿಮೈಕೊಳ್ಳುಗಿರವರ್ಕ** - ಕೈಙ್ಕರ್ಯವನ್ನು ಸ್ವೀಕರಿಸುವ ಸರ್ವೇಶ್ವರನು, **ಅರುಳಿಚ್ಚೆಯ್ದಪಡಿಯಾಲುಮ್** - ಅಪ್ಪಣೆಕೊಡಿಸಿರುವದರಿಂದಲೂ, **ಇವರ್ಕಶರೀರತ್ತೋಡಿರುನ್ದಕಾಲಮ್** - ಈ ಪ್ರಪನ್ನನು ಶರೀರದೊಂದಿಗಿರುವತನಕವೂ, ಎಂದರೆ ದೇಹಾವಸಾನದವರೆವಿಗೂ ಎಂಬ ಭಾವವು, **ಶಾಸ್ತ್ರವಶ್ಯನಾಯ್** - ಶಾಸ್ತ್ರಕ್ಕೆ ಅಧೀನನಾಗಿ, **ಅಡಿಮೈಶೆಯ್ಯವೇಣುಮೆನ್ರು** - ಕೈಂಕರ್ಯವನ್ನು ಮಾಡಬೇಕೆಂದು, **ತಿರುವುಳ್ಳಮ್** - ಅಭಿಪ್ರಾಯವು. ಯಾರು ಹೀಗೆ ಅಭಿಪ್ರಾಯಪಡುತ್ತಾರೆಂದು **ಹೇಳಲಿಲ್ಲವು**. ಯಾರು ಎಂಬುವದನ್ನು **ಊಹಿಸಬ**ಹುದಾದುದರಿಂದ ಹೇಳಲಿಲ್ಲವು ಕೈಂಕರ್ಯಗಳನ್ನು ಶಾಸ್ತ್ರಾನುಗುಣ್ಯವಾಗಿ ನಡೆಸತಕ್ಕದ್ದೆಂಬುವದು ಮುಖ್ಯತಾತ್ಪರ್ಯವು. ಇವಕ್ಕೆ ಮೂರು ಕಾರಣಗಳನ್ನು ತಿಳಿಸಿರುತ್ತಾರೆ.

೧. ಕೃತಕೃತ್ಯನಾದುದರಿಂದ ಮನಸ್ಸು ಬಂದಂತೆ ನಡೆದು ಅಲೆಯುವದು ಈ ಪ್ರಪನ್ನನಿಗೆ ಸ್ವರೂಪವಲ್ಲವೆಂದು ಹೇಳಿರುವದರಿಂದಲೂ. (೨) ಶ್ರೀಯಾಮು

ನೇಯರು "ಅಶಾಸ್ತ್ರಮಾಸುರಂ ಕೃತ್ಸ್ನಂ" ಎಂಬ ಶ್ಲೋಕದಲ್ಲಿ ಭಗವದಾಜ್ಞಾವಿರುದ್ಧವಾದ ವೃತ್ತಿಗಳೆಲ್ಲಾ ಅಶಾಸ್ತ್ರವಾದುವಾಗಿ ಆಸುರವೆಂದೆನಿಸುತ್ತದೆಂದು ಹೇಳಿರುವದರಿಂದಲೂ, (೩) ಸರ್ವೇಶ್ವರನೇ, ಶ್ರುತಿಸ್ಮೃತಿಗಳು ತನ್ನ ಆಜ್ಞೆಯೆಂದು ಹೇಳಿ, ಅವುಗಳನ್ನು ಉಲ್ಲಂಘಿಸಿದವನು ತನಗೆ ವಿರೋಧಿಯೆಂದೂ ಅವನು ವೈಷ್ಣವನಾಗುವದಿಲ್ಲವೆಂದೂ, ಹೀಗೆ ಈ ಮೂರು ಕಾರಣಗಳಿಂದ ಶಾಸ್ತ್ರೀಯಸರಣಿಯಲ್ಲೇ ಅಭಿಪ್ರಾಯವೆಂದು ಹೇಳಿರುವದರಿಂದ, ಶ್ರೀಭಾಷ್ಯಕಾರರಿಗೂ ಶ್ರೀಯಾಮುನೇಯರವರಿಗೂ ಸಹ ಒಂದೇ ಅಭಿಪ್ರಾಯವೆಂಬುವದು ಸೂಚಿಸಲ್ಪಟ್ಟಿತು. ಇವರಭಿಪ್ರಾಯಗಳೂ ಸರ್ವೇಶ್ವರನಭಿಪ್ರಾಯವನ್ನನುಸರಿಸಿರುವುಗಳು ಎಂದು ತೋರಿಸುವದಕ್ಕಾಗಿ "ಶ್ರುತಿಸ್ಸ್ಮೃತಿಃ" ಎಂಬ ಪ್ರಮಾಣವು "ಅಶಾಸ್ತ್ರಮಾಸುರಂ" ಎಂಬ ಶ್ಲೋಕವು, ಗೀತೆಯ ೧೭ನೆಯ ಅಧ್ಯಾಯಾರ್ಥಸಂಗ್ರಹರೂಪವಾದುದು. ಅದು ಯಾವುದೆಂದರೆ:—

ಅಶಾಸ್ತ್ರಮಾಸುರಂ ಕೃತ್ಸ್ನಂ ಶಾಸ್ತ್ರೀಯಂ ಗುಣತಃ ಪೃಥಕ್ ।
ಲಕ್ಷಣಂ ಶಾಸ್ತ್ರಸಿದ್ಧಸ್ಯ ತ್ರಿಧಾ ಸಪ್ತದಶೋದಿತಂ ॥ ೨೧ ॥

ಅಶಾಸ್ತ್ರವಾದುದೆಲ್ಲವೂ ಭಗವದಾಜ್ಞೆಗೆ ವಿರುದ್ಧವಾದವುಗಳಾಗಿ ಆಸುರವೆಂದು ಹೇಳಿಸಿಕೊಳ್ಳುವದರಿಂದ ಗ್ರಾಹ್ಯವಲ್ಲವು. ಅವುಗಳಿಗೆ ಫಲವೂ ಇಲ್ಲವು. ಶಾಸ್ತ್ರಾನುಗುಣ್ಯವಾದುದು ಉಪಾದೇಯವು. ಆದರೆ ಅವು ಗುಣವಿಶೇಷಗಳಿಂದ ಬೇರೆ ಬೇರೆಯಾದವು. ಶಾಸ್ತ್ರಸಿದ್ಧವಾದವುಗಳು ಮೂರು ವಿಧವೆಂದು ಲಕ್ಷಣವು ಹೇಳಲ್ಪಟ್ಟಿತು. ಅವು ಯಾವುವೆಂದರೆ, ವೈದಿಕವಾದ ಸಾಮಾನ್ಯ ಕರ್ಮಾನುಷ್ಠಾನಕ್ಕೆ ಓಂ ಎಂಬ ಪ್ರಣವಪ್ರಯೋಗವೂ, ಫಲಾಭಿಸಂಧಿರಹಿತವಾಗಿ ಮುಮುಕ್ಷುಮಾಡುವ ಕರ್ಮಾನುಷ್ಠಾನದಲ್ಲಿ "ತತ್ ಎಂಬ ಪ್ರಯೋಗವೂ, ಫಲಾಪೇಕ್ಷೆಯಿಂದ ಬುಭುಕ್ಷುವುಮಾಡುವ ಕರ್ಮಾನುಷ್ಠಾನದಲ್ಲಿ "ಸತ್" ಎಂಬ ಪ್ರಯೋಗವೂ, ಹೀಗೆ ಕರ್ಮಗಳೂ ಮೂರು ವಿಧವಾದವೆಂದೂ ಈ ಗೀತೆಯ ೧೭ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ," ಎಂಬುವದು ಈ ಶ್ಲೋಕತಾತ್ಪರ್ಯವು. ಹೀಗೆ ಶ್ರೀಯಾಮುನೇಯರು ಅಶಾಸ್ತ್ರವಾದುವನ್ನು ನಿಂದಿಸಿರುವಾಗ ಶಾಸ್ತ್ರೀಯನಿಯಮಾನುಸರಣವೇ ಆವಶ್ಯಕವೆಂಬುವದು ಅವರಭಿಪ್ರಾಯವು. ಹೀಗಿರುವಾಗ್ಯ, ಮುಂದೆ ೩೧ನೆಯ ಶ್ಲೋಕದಲ್ಲಿ "ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವ ಕಾರಿತಃ" ಎಂಬಲ್ಲಿ ಪ್ರೀತ್ಯೈವ ಎಂಬುವದರಿಂದ, ಪ್ರಪನ್ನನಿಗೆ ಶಾಸ್ತ್ರವಶ್ಯತೆ ಆವಶ್ಯಕವಿಲ್ಲವೆಂದು ಶ್ರೀಯಾಮುನೇಯರಭಿಪ್ರಾಯವೆಂದು ಕೆಲವರು ಹೇಳುವದು ಸರಿಯಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುವದಕ್ಕಾಗಿ ಆ ಶ್ಲೋಕದ ಸಂಯಾಮುನಾಭಿಪ್ರಾಯವನ್ನುಪದೇಶಿಸುತ್ತಾರೆ.

ತೆಯ್ಯವೇಣುಮೆನ್ರು ತಿರುವುಳ್ಳಮ್. "ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವಕಾರಿತಃ। ಉಪಾಯತಾಂ ಪರಿತ್ಯಜ್ಯ ನ್ಯಸೇದ್ದೇವೇತು ತಾಮಭೀಃ" ಎನ್ರು ಶ್ರೀಗೀತಾರ್ಥಸಂಗ್ರಹತ್ತಿಲ್ "ಪ್ರೀತ್ಯೈವ" ಎಂಗಿರ ಅವಧಾರಣತ್ತಾಲೆ ಸಾಧನತ್ವ ಬುದ್ಧಿಯೈ ವ್ಯವಚ್ಛೇದಿತ್ತಾರೆನ್ರುಮಿಡಮ್, "ಉಪಾಯತಾಂ ಪರಿತ್ಯಜ್ಯ" ಎನ್ರು ವಿವರಿಕ್ಕೈಯಾಲೇ ಸುವ್ಯಕ್ತಮ್.

ನಿಜಕರ್ಮಾದಿ ಭಕ್ತ್ಯಂತಂ - ತನ್ನ ಸ್ವಕೀಯ ವರ್ಣಾಶ್ರಮೋಚಿತ ನಿತ್ಯನೈಮಿತ್ತಿಕ ಮೊದಲಾದ ಕರ್ಮಗಳ ಮೊದಲುಗೊಂಡು ಭಕ್ತಿಯೋಗದ ಕೊನೆಯವರೆವಿಗೂ, ಇಲ್ಲಿ **ಆದಿ** ಪದದಿಂದ ಯಜ್ಞಯಾಗಾದಿಗಳು ಹೇಳಲ್ಪಟ್ಟವು. **ಪ್ರೀತ್ಯೈವ** - ಪ್ರೀತಿಯಿಂದಲೇನೆ. **ಕಾರಿತಃ** - ಭಗವಂತನಿಂದಲೇ ಮಾಡಿಸಲ್ಪಟ್ಟವನಾಗಿ. **ಕುರ್ಯಾತ್** - ಮಾಡತಕ್ಕದ್ದು. **ಉಪಾಯತಾಂ** - ಒಂದು ಫಲಕ್ಕೆ ಇದು ಸಾಧನವು ಎಂಬ ಬುದ್ಧಿಯನ್ನು. **ಪರಿತ್ಯಜ್ಯ**-ಸಂಪೂರ್ಣವಾಗಿ ತ್ಯಜಿಸಿ, **ತಾಂತು** - ಆ ಸಾಧನವೆಂಬ ಭಾವವನ್ನಾದರೋ, **ದೇವೇ** - ಲೀಲಾಪರನಾದ ಸರ್ವೇಶ್ವರನಲ್ಲಿ, **ಅಭೀಃ** - ನಿರ್ಭಯನಾಗಿ, **ನ್ಯಸೇತ್** - ಇಡತಕ್ಕದ್ದು ; ಸರ್ವೇಶ್ವರನೇ ಸರ್ವಫಲಕ್ಕೂ ಸಾಧನಭೂತನಾದ ಸಿದ್ಧೋಪಾಯನಾದುದರಿಂದ, **ನಿರ್ಭರೋ ನಿರ್ಭಯೋಸ್ಮಿ** ಎಂದು ಹೇಳಿರುವ ಹಾಗೆ ಸರ್ವಭರವನ್ನೂ ಅವನಲ್ಲಿಟ್ಟುಬಿಟ್ಟು ನಿರ್ಭಯನಾಗಿರತಕ್ಕದ್ದು; ನಿತ್ಯನೈಮಿತ್ತಿಕ ಯಜ್ಞದಾನ ತಪ ಮೊದಲಾದವುಗಳು ಎಂದಿಗೂ ಸಾಧನವಾಗಲಾರವು; ಆದುದರಿಂದ ಅವುಗಳಲ್ಲಿ ಸಾಧನವೆಂಬ ಬುದ್ಧಿಯನ್ನು ತ್ಯಜಿಸಿ, ಅವುಗಳನ್ನು ಪ್ರೀತಿಯಿಂದಲೇ ಮಾಡತಕ್ಕದ್ದು ಎಂಬರ್ಥವು" ಎನ್ರು - ಎಂಬದಾಗಿ, ಗೀತಾರ್ಥ ಸಂಗ್ರಹದಲ್ಲಿ ಪ್ರೀತ್ಯೈವ ಎಂಬಲ್ಲಿರುವ **ಅವಧಾರಣತ್ತಾಲೆ** ಏವ ಎಂಬ ಅವ್ಯಯದಿಂದ, **ಸಾಧನತ್ವ ಬುದ್ಧಿಯೈ** - ಈ ನಿತ್ಯನೈಮಿತ್ತಿಕಾದಿಗಳು ಫಲಕ್ಕೆ ಉಪಾಯವೆಂಬ ಬುದ್ಧಿಯನ್ನು **ವ್ಯವಚ್ಛೇದಿತ್ತಾರ್** - ನಿಷೇಧಿಸಿದರು, **ಎನ್ರುಮಿಡಮ್** ಎನ್ನುವ ಸಂದರ್ಭವು, **"ಉಪಾಯತಾಂಪರಿತ್ಯಜ್ಯ"** ಉಪಾಯವೆಂಬುವ ಬುದ್ಧಿಯನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟು, **ಎನ್ರು** - ಎಂಬದಾಗಿ **ವಿವರಿಕ್ಕೈಯಾಲೇ** - ವಿಸ್ತರಿಸಿರುವದರಿಂದ, **ಸುವ್ಯಕ್ತಮ್** - ನಿಸ್ಸಂದೇಹವಾಗಿ ತೋರಿಬರುತ್ತದೆ. ಸ್ವವರ್ಣಾಶ್ರಮೋಚಿತ ನಿತ್ಯನೈಮಿತ್ತಿಕ ಕರ್ಮಗಳನ್ನೂ, ಯಜ್ಞದಾನ ತಪಸ್ತೀರ್ಥಾದಿಗಳನ್ನೂ, ಕರ್ಮಯೋಗ ಮೊದಲುಗೊಂಡು ಭಕ್ತಿಯೋಗದವರೆವಿಗೂ ಎಲ್ಲಾ ಕರ್ಮಗಳನ್ನೂ ಹೇಗೆ ಅನುಷ್ಠಿಸತಕ್ಕದ್ದು ಎಂಬುವದನ್ನು ಈ ಶ್ಲೋಕವು ಉಪದೇಶಿಸುತ್ತದೆ.

ಶಾಸ್ತ್ರೀಯ ಕೈಙ್ಕರ್ಯತ್ತಿಲ್ ಪ್ರೀತಿಯಿನುಡೈಯ ಪ್ರೇರಕತ್ವಾತಿಶಯಮ್ ವಿವಕ್ಷಿತಮಾನಾಲುಮ್, "ನಿಜಕರ್ಮಾದಿಭಕ್ತ್ಯಂತಂ" ಎಙ್ಗಿರವಿವತ್ತಿಲ್

ಇವುಗಳನ್ನು ಅನುಷ್ಠಿಸುವಾಗ ಪ್ರೀತ್ಯೈವ ಪ್ರೀತಿಯಿಂದ ಮಾತ್ರವೇ ಸರ್ವೇಶ್ವರನೇ ತಾನೇ ನಿಂತುಮಾಡಿಸಿದನೆಂಬು ಮಾಡತಕ್ಕದ್ದು. ಸರ್ವಕರ್ಮಾರಾಧ್ಯನು ತಾನೇ "ಸ್ವಪ್ರೀತಯೇ ಸ್ವಯಮೇವ ಕಾರಯತಿ" ಎಂದು ಮಾಡತಕ್ಕದ್ದು. ಪ್ರೀತ್ಯೈವ ಎಂದರೆ ಪ್ರೀತಿಯಿಂದ ಮಾತ್ರವೇ ಮಾಡತಕ್ಕದ್ದು. ಇನ್ನು ಯಾವ ಬುದ್ಧಿಯಿಂದಲಾದರೂ ಕೂಡದೆಂಬ ಅರ್ಥವು ತೋರಿಬರುತ್ತದೆ. ಯಾವಬುದ್ಧಿಯು ಕೂಡದು ಎಂದರೆ, **ಉಪಾಯತಾಂ ಪರಿತ್ಯಜ್ಯ** ಎಂದು ಹೇಳಿ ಅವುಗಳಿಗೆ ಫಲಸಾಧನತ್ವವುಂಟೆಂಬ ಬುದ್ಧಿಯು ಕೂಡದೆಂದು ನಿಷೇಧಿಸಿರುವದರಿಂದ ಪ್ರೀತ್ಯೈವ ಎಂಬುವದರಲ್ಲಿ ತೋರುವ ಅರ್ಥವನ್ನು **ಉಪಾಯತಾಂ ಪರಿತ್ಯಜ್ಯ** ಎಂದು ವಿವರಿಸಿರುತ್ತಾರೆಂದು ಇಲ್ಲಿ ಹೇಳಿರುತ್ತದೆ. ಆದರೆ "**ಪ್ರಯೋಜನ ಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ**" ಪ್ರಯೋಜನವನ್ನು ಉದ್ದೇಶಿಸದೆ ಯಾವ ಅಲ್ಪ ಬುದ್ಧಿಯುಳ್ಳವನೂ ಪ್ರವರ್ತಿಸುವದಿಲ್ಲವು ಎಂದು ಹೇಳಿರುವಾಗ ಫಲಪ್ರಾಪ್ತಿ ಹೇಗಪ್ಪಾ ಎಂದರೆ, **ನ್ಯಸೇದ್ವೇವೇತು ತಾನುಭೌ** ಎಂದು ಹೇಳಿರುತ್ತಾರೆ. **ಸರ್ವ**ಫಲಪ್ರದನು ಸರ್ವೇಶ್ವರನಾದುದರಿಂದ ಫಲಸಾಧನ ಬುದ್ಧಿಯನ್ನು ಸರ್ವೇಶ್ವರನಲ್ಲಿಟ್ಟು ತಾನು ನಿರ್ಭಯನಾಗಿರತಕ್ಕದ್ದೆಂದುಪದೇಶಿಸಿರುತ್ತದೆ.

ಆದುದರಿಂದ ಇಲ್ಲಿ ಪ್ರೀತ್ಯೇವ ಎಂದರೆ ತನ್ನಿಷ್ಟಾನುಸಾರವೆಂದು ಅರ್ಥ ಮಾಡಿ ಶಾಸ್ತ್ರೀಯನಿಯಮಾನುಸರಣವು ಆವಶ್ಯಕವಿಲ್ಲವೆಂಬುವ ಅಭಿಪ್ರಾಯವು ಸರಿಯಲ್ಲವೆಂದು ಹೇಳಿದಂತಾಯಿತು. ಶಾಸ್ತ್ರೀಯಕೈಂಕರ್ಯವಲ್ಲೇ ತಾತ್ಪರ್ಯವೆಂಬುವದನ್ನು ಮುಂದಿನ ವಾಕ್ಯದಿಂದ ದೃಢೀಕರಿಸುತ್ತಾರೆ. **ಶಾಸ್ತ್ರೀಯಕೈಙ್ಕರ್ಯತ್ತಿಲ್** ಶಾಸ್ತ್ರವಿಹಿತವಾದ ಕೈಂಕರ್ಯಗಳೆಂದು ಹೇಳುವ ಸ್ಥಳದಲ್ಲಿ **ಪ್ರೀತಿಯಿನುಡೈಯ ಪ್ರೇರಕತ್ವಾತಿಶಯಮ್** - ಇತರರು ಹೇಳುವ ಹಾಗೆ, ಪ್ರೀತಿಗೆ ಅನುಗುಣವಾಗಿ ಸರ್ವೇಶ್ವರನ ಪ್ರೇರಕತ್ವದ ಅತಿಶಯವು **ವಿವಕ್ಷಿತಮಾನಾಲುಮ್**- ಹೇಳಲ್ಪಟ್ಟಿತೆಂದು ಅಭಿಪ್ರಾಯಪಟ್ಟರೂ, "**ನಿಜಕರ್ಮಾದಿ ಭಕ್ತ್ಯಂತಂ**" **ಎಙ್ಗಿರ** - ಎಂದು ಹೇಳಿರುವ, **ಇವತ್ತಿನ್ ಸ್ವರೂಪತ್ತುಕ್ಕು**-ಈ ನಿಜಕರ್ಮಶಬ್ದ ಮತ್ತು ಭಕ್ತಿಯೋಗ, ಇವುಗಳ ಸ್ವರೂಪಕ್ಕೆ **ಶಾಸ್ತ್ರವೇ ಪ್ರಮಾಣವು, ಎನ್ನುಮಿಡಮ್** - ಎನ್ನುವ ಸಂದರ್ಭವು, "**ನಿಜಕರ್ಮ**"**ಶಬ್ದತ್ತಾಲೆ** - **ನಿಜಕರ್ಮ** ಶಬ್ದದಿಂದಲೇ **ದರ್ಶಿತಮಾಯಿತ್ತು**-ತೋರಿಸಲ್ಪಟ್ಟಿತು. **ನಿಜಕರ್ಮ**ವೆಂದರೆ **ಶಾಸ್ತ್ರ**ದಲ್ಲಿ ತನಗೆ ವಿಹಿತವಾದ ಕರ್ಮಗಳೇ ನಿಜಕರ್ಮಗಳಾದುದರಿಂದ ಶಾಸ್ತ್ರೀಯನಿಯ

ಸ್ವರೂಪತ್ವತ್ಕ್ಕು ಶಾಸ್ತ್ರವೇ ಪ್ರಮಾಣಮೆನ್ರುಮಿಡವುಮ್ "ನಿಜಕರ್ಮ" ಶಬ್ದತ್ತಾಲೇ ದರ್ಶಿತಮಾಯಿತ್ತು.

ಸ್ವತಂತ್ರಪ್ರಪನ್ನಸ್ಯ ಶಾಸ್ತ್ರೀಯಾನುಸರಣೇ ಪ್ರಮಾಣಂ

ಇಶ್ಶಾಸ್ತ್ರೀಯ ನಿಯಮಮುಮ್,

(೧) "ಅವಿಪ್ಲವಾಯ ಧರ್ಮಾಣಾಂ ಪಾಲನಾಯ ಕುಲಸ್ಯ ಚ ।

ಸಙ್ಗ್ರಹಾಯ ಚ ಲೋಕಸ್ಯ ಮರ್ಯಾದಾ ಸ್ಥಾಪನಾಯ ಚ ।

ಮವನ್ನು ನಡಿಸತಕ್ಕದ್ದೆಂಬುವದೇ ಶ್ರೀಯಾಮುನೇಯರವರಭಿಪ್ರಾಯವೆಂಬುವದು ಸ್ಪಷ್ಟವು. ಪ್ರೀತ್ಯೈವ ಎಂಬುವದಕ್ಕೆ ಇತರರು ಅಭಿಪ್ರಾಯಪಡುವಂತೆ ಪ್ರೀತಿಯಿಂದುಂಟಾಗುವ ಪ್ರೇರಕತ್ವಾತಿಶಯವೆಂದು ಅರ್ಥಹೇಳಿದರೂ, ಶಾಸ್ತ್ರೀಯನಿಯಮನಾನುಸಾರವೇ ಕೈಂಕರ್ಯಾನುಷ್ಠಾನವೆಂಬುವದು "ನಿಜಕರ್ಮ"ವೆಂಬ ಶಬ್ದದಿಂದಲೇ ಸ್ಪಷ್ಟವೆಂದು ಹೇಳುತ್ತಾರೆ. ಇದು ತನಗೆ ಉಚಿತವಾದ ಕರ್ಮವು, ಇದು ತನಗೆ ಉಚಿತವಾದ ಕರ್ಮವಲ್ಲವು ಎಂದು ತಿಳಿದುಕೊಳ್ಳಲು, "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಎಂಬ ಶ್ಲೋಕದಲ್ಲಿ ಹೇಳಿರುವ ಮೇರೆಗೆ ಶಾಸ್ತ್ರವೇ ಪ್ರಮಾಣವು ಆದುದರಿಂದ ನಿಜಕರ್ಮವೆಂದು ಪ್ರಯೋಗಿಸಿರುವದರಿಂದಲೇ, ಶಾಸ್ತ್ರೀಯನಿಯಮನಾನುಸಾರವೇ ನಿತ್ಯಕರ್ಮಾದ್ಯನುಷ್ಠಾನರೂಪ ಕೈಂಕರ್ಯಗಳನ್ನೆಸಗತಕ್ಕದ್ದೆಂಬುವದೇ ಶ್ರೀಯಾಮುನೇಯರವರಭಿಪ್ರಾಯವು.

ಆಗಲಿ, ಈ ವಾಕ್ಯವು ಶಾಸ್ತ್ರಾನುಗುಣಪ್ರವರ್ತನೆಯನ್ನೇ ಸಮರ್ಥಿಸುತ್ತದೆಂದು ಒಪ್ಪಿಕೊಂಡರೂ, ಇದು ಭಕ್ತನ ವಿಷಯವಾದ ವಾಕ್ಯವಾದುದರಿಂದ ಪ್ರಪನ್ನನು ಇಷ್ಟಾನುಸಾರ ನಡೆಯಬಹುದಲ್ಲಾ ಎಂದರೆ ಪ್ರಪನ್ನನ ವಿಷಯದಲ್ಲೂ ಶಾಸ್ತ್ರಾತಿಕ್ರಮವು ನಿಷೇಧಿಸಲ್ಪಟ್ಟಿದೆ ಎಂಬುವದಕ್ಕೆ ಮುಂದೆ ಪ್ರಮಾಣವನ್ನು ಉದಾಹರಿಸುತ್ತಾರೆ. ಅದಕ್ಕಾಗಿ ಲಕ್ಷ್ಮೀತಂತ್ರದ ಪ್ರಪತ್ತ್ಯಧ್ಯಾಯದ ಪ್ರಮಾಣವನ್ನೇ ತೋರಿಸಿದರೆ, ಒಪ್ಪಿಕೊಳ್ಳಲೇಬೇಕೆಂಬಭಿಪ್ರಾಯದಿಂದ ಉದಾಹರಿಸಿರುತ್ತಾರೆ.

ಸ್ವತಂತ್ರಪ್ರಪನ್ನನ ಶಾಸ್ತ್ರೀಯಾನುಸರಣೆಗೆ ಪ್ರಮಾಣವು.

"ಮನೀಷೀ - ಬುದ್ಧಿಯುಳ್ಳವನು ಎಂದರೆ ಈ ಸಂದರ್ಭದಲ್ಲಿ ಪ್ರಪತ್ತ್ಯನುಷ್ಠಾನಮಾಡಿದವನು, ಧರ್ಮಾಣಾಂ - ವೇದವಿಹಿತವಾದ ಕರ್ಮಗಳ, ಅವಿ

---

(೧) ಲಕ್ಷ್ಮೀತಂತ್ರಂ ೧೭-೯೩,೯೪

ಪ್ರಿಯಾಯ ಮಮ ವಿಷ್ಣೋಶ್ಚ ದೇವದೇವಸ್ಯ ಶಾಙ್ಗ್ರ್ಣಃ ।
ಮನೀಷೀ ವೈದಿಕಾಚಾರಂ ಮನಸಾಪಿ ನ ಲಂಘಯೇತ್"
ಎನ್ನು ಪ್ರಪತ್ತ್ಯಧ್ಯಾಯತ್ತಿಲೆ ಪ್ರಸಿದ್ಧಮ್

ಪ್ಲವಾಯ - ನಾಶವಿಲ್ಲದಿರುವದಕ್ಕಾಗಿಯೂ, **ಕುಲಸ್ಯ** - ಕುಲದ. ಇದರಲ್ಲಿ ಶಿಷ್ಯಪರಂಪರೆಯು ಸೇರಿತು, **ಪಾಲನಾಯ** - ರಕ್ಷಣೆಗಾಗಿಯೂ, **ಲೋಕಸ್ಯ** - ತತ್ತ್ವವಿತ್ತುಗಳಲ್ಲದ ಪಾಮರ ಜನವನ್ನು **ಸಙ್ಗ್ರಹಾಯ**- ಸರಿಯಾದ ಮಾರ್ಗಕ್ಕೆ ಬರಮಾಡಿಕೊಳ್ಳುವದಕ್ಕೂ. **ಮರ್ಯಾದಾ** - ಶಾಸ್ತ್ರಮರ್ಯಾದೆಯನ್ನು, **ಸ್ಥಾಪನಾಯ ಚ** - ಸ್ಥಾಪಿಸುವದಕ್ಕಾಗಿಯೂ, **ಮಮ**-ಲಕ್ಷ್ಮಿಯಾದ ನನಗೂ, ಮತ್ತು ನನ್ನ ಪತಿಯಾದ **ದೇವದೇವಸ್ಯ** - ದೇವತೆಗಳಿಗೂ ದೇವನಾದ, **ಶಾಙ್ಗ್ರ್ಣಃ**- ಶಾಙ್ರ್ಗಧನಸ್ಸನ್ನು ಧರಿಸಿರುವ, **ವಿಷ್ಣೋಶ್ಚ** -ವಿಷ್ಣುವಿಗೂ ಕೂಡ, **ಪ್ರಿಯಾಯ**- ಸಂತೋಷಾರ್ಥವಾಗಿಯೂ, **ವೈದಿಕಾಚಾರಂ** - ವೇದದಲ್ಲಿ ವಿಧಿಸಲ್ಪಟ್ಟ ಆಚಾರವನ್ನು, **ಮನಸಾಪಿ** - ಮನಸ್ಸಿನಿಂದಲೂ ಕೂಡ. **ನಲಂಘಯೇತ್** - ಅತಿಕ್ರಮಿಸತಕ್ಕದ್ದಲ್ಲವು." **ಎನ್ನು** - ಎಂಬದಾಗಿ, **ಶಾಸ್ತ್ರೀಯ ನಿಯಮಮ್** - ಶಾಸ್ತ್ರಸಂಬಂಧವಾದ ಕ್ರಮವು. ಶಾಸ್ತ್ರವನ್ನು ಅನುಸರಿಸಿ ನಡೆಯೋಣವು. **ಪ್ರಪತ್ತ್ಯಧ್ಯಾಯತ್ತಿಲೆ** - ಲಕ್ಷ್ಮೀತಂತ್ರದ ಪ್ರಪತ್ತ್ಯಧ್ಯಾಯದಲ್ಲಿ, **ಪ್ರಸಿದ್ಧಂ** - ಪ್ರಸಿದ್ಧವಾದುದು, ಇದು ಲಕ್ಷ್ಮಿಯ ವಾಕ್ಯವು. ಈ ಮೇಲಿನ ಪ್ರಮಾಣದಲ್ಲಿ ಪ್ರಪನ್ನನಿಗೆ ಮನೀಷೀ ಎಂಬ ಪ್ರಯೋಗವಿರುವುದರಿಂದ, ಪ್ರಪನ್ನರಲ್ಲದವರು ಅಪ್ರಬುದ್ಧರೆಂಬ ಭಾವವು ತೋರಿಬರುತ್ತದೆ. ಪ್ರಪನ್ನನೂ ಕೂಡ ಶಾಸ್ತ್ರನಿಯಮಾನುಸಾರವಾಗಿಯೇ ಪ್ರವರ್ತಿಸತಕ್ಕದ್ದೆಂಬುವದಕ್ಕೆ ಐದು ಕಾರಣಗಳನ್ನು ತಿಳಿಸುತ್ತಾರೆ. ಧರ್ಮವೆಂದರೆ ವೇದಗಳಲ್ಲಿ ವಿಧಿಸಲ್ಪಟ್ಟ ಕರ್ಮಗಳು. ಇವುಗಳಿಗೆ ಲೋಪಬಾರದಿರುವದಕ್ಕಾಗಿ ಪ್ರಪನ್ನನು ಶಾಸ್ತ್ರಮರ್ಯಾದೆಯನ್ನು ಮೀರಕೂಡದು. ಮೀರಿದರೆ ಧರ್ಮಲೋಪ ಉಂಟಾಗುತ್ತದೆಂಬ ಭಾವವು. ಕುಲದ ಸಂರಕ್ಷಣೆಗಾಗಿಯೂ ಶಾಸ್ತ್ರಾನುಸರಣವಾವಶ್ಯಕವು ಎಂದು ಹೇಳಿದುದರಿಂದ, ತನ್ನ ಕುಲವು ಹೀನಸ್ಥಿತಿಗೆ ಬರುತ್ತದೆಂದೂ ಮತ್ತು ಗುರುಶಿಷ್ಯಕ್ರಮವೂ ಲಾಘವವನ್ನು ಹೊಂದುತ್ತದೆಂದೂ ಹೇಳಿದಂತಾಯಿತು. ಲೋಕಸಂಗ್ರಹಾರ್ಥವಾಗಿಯೂ ಶಾಸ್ತ್ರನಿಯಮವಾವಶ್ಯಕವು. ಈ ಪ್ರಪನ್ನನನ್ನು ನೋಡಿ, ಇತರ ಪಾಮರಜನರೂ ಇವರನ್ನನುಸರಿಸಿ ನಡೆಯುವದಕ್ಕೆ ಇದು ಸಹಕಾರಿಯಾಗುತ್ತದೆ. ಹಾಗಿಲ್ಲದಿದ್ದರೆ ಲೋಕದ ಜನರೂ ಇವರ ಶಾಸ್ತ್ರಾತಿಕ್ರಮವನ್ನು ನೋಡಿ ಅವರೂ ಅತಿಕ್ರಮಿಸುವರು. **ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ"** (ಗೀ. ೩.೨೦) ಲೋಕರಕ್ಷಣಾರ್ಥ

ಶಾಸ್ತ್ರೀಯನಿಯಮ ಪರಿತ್ಯಾಗೇ ಅನಿಷ್ಟಪ್ರಾಹ

ಇದು ತವಿರ್ನ್ದ್ಪೋದು ವರುಮ್ ಅನಿಷ್ಟಮುಮ್ (೧) ಯಥಾಹಿ ವಲ್ಲಭೋ ರಾಜ್ಞೋ ನದೀಂ ರಾಜ್ಞಾ ಪ್ರವರ್ತಿತಾಂ । ಲೋಕೋಪ

ವಾಗಿ ಶ್ರೇಷ್ಠನಾಗಿರುವವನು ಶಾಸ್ತ್ರಾನುಗುಣವಾಗಿ ಕರ್ಮವನ್ನು ಆಚರಿಸತಕ್ಕದ್ದು ಏಕೆಂದರೆ

"ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।

ಸಯತ್ಪ್ರಮಾಣಂ ಕುರುತೇ ಲೋಕಸ್ತದನು ವರ್ತತೇ (ಗೀ೩.೨೧)

ಸರ್ವವನ್ನೂ ತಿಳಿದ ಶ್ರೇಷ್ಠನಾದವನು ಹೇಗೆ ಆಚರಿಸುವನೋ, ಹಾಗೆಯೇ ಇತರ ಅಜ್ಞಾನಿಗಳೂ ಕೂಡ ಹಾಗೆಯೇ ಆತನನ್ನನುಸರಿಸಿ ನಡೆಯುವರು, ಈತನು ಹಾಕಿದುದೇ ಮೇಲುಪಙ್ಕ್ತಿಯಾಗುವದರಿಂದ **ಸಙ್ಗ್ರಹಾಯಚ ಲೋಕಸ್ಯ** ಎಂದು ಹೇಳಲ್ಪಟ್ಟಿತು. ಈತನಿಗೆ ಶಾಸ್ತ್ರಮರ್ಯಾದೆಯನ್ನು ಕಾಪಾಡುವದು ಸ್ವರೂಪವಾದುದರಿಂದ ಅದನ್ನು ಸ್ಥಾಪನೆಮಾಡುವದು ಈತನ ಇತಿಕರ್ತವ್ಯವು. ಆದುದರಿಂದ **ಮರ್ಯಾದಾ ಸ್ಥಾಪನಾಯ ಚ** ಎಂದು ಹೇಳಲ್ಪಟ್ಟಿತು. ಈ ಐದು ಕಾರಣಗಳಿಂದ ಪ್ರಪನ್ನನು **ಮನಸಾಪಿ** ಶಾಸ್ತ್ರಸರಣಿಯನ್ನು ಉಲ್ಲಂಘಿಸತಕ್ಕದ್ದಲ್ಲವು; ಮನಸಾಪಿ ಎಂದು ಹೇಳಿದನಂತರ ಇನ್ನು ವಾಕ್ಕಾಯಗಳಿಂದ ಉಲ್ಲಂಘನೆಯು ಸರ್ವಥಾ ಸರಿಯಲ್ಲವೆಂದು ಹೇಳತಕ್ಕದ್ದೇನಿದೆ ಎಂಬ **ಭಾವವು**.

ಪ್ರಪನ್ನನ ಶಾಸ್ತ್ರೀಯನಿಯಮ ಪರಿತ್ಯಾಗದಲ್ಲಿ ಅನಿಷ್ಟ ಪ್ರಾಪ್ತಿಯನ್ನು ಹೇಳುತ್ತಾರೆ.

ಇದು – ಈ ಶಾಸ್ತ್ರೀಯನಿಯಮವು, **ತವಿರ್ನ್ದ್ಪೋದು** - ತಪ್ಪಿಹೋದಾಗ, **ವರುಮ್** - ಪ್ರಾಪ್ತವಾಗುವ, **ಅನಿಷ್ಟಮುಮ್** - ಪ್ರತ್ಯವಾಯವು, **"ಯಥಾಹಿ** - ಹೇಗಾದರೆ, **ರಾಜ್ಞಃ** - ರಾಜನ, **ವಲ್ಲಭಃ** – ತುಂಬಾ ಪ್ರಿಯನಾದ **ಪುತ್ರನು**, **ರಾಜ್ಞಾ** - ಆ ರಾಜನಿಂದ, **ಪ್ರವರ್ತಿತಾಂ** - ನಿರ್ಮಿಸಲ್ಪಟ್ಟ, **ಲೋಕೋಪಯೋಗಿನೀಂ** - ಲೋಕದ ಜನರಿಗೆ ತುಂಬಾ ಉಪಯೋಗಕರವಾದ, **ಬಹುಸಸ್ಯವಿವರ್ಧನೀಂ** - ಹೆಚ್ಚಾದ ಬೆಳೆಯನ್ನು ವೃದ್ಧಿಪಡಿಸುವದಾಗಿರುವ, **ನದೀಂ** - ನದಿಯನ್ನು **ತಾಂಪ್ರತಿ**-ಅದನ್ನು ಕುರಿತು, **ಅನಪೇಕ್ಷೋಽಪಿ** -

ಯೋಗಿನೀಂ ರಮ್ಯಾಂ ಬಹುಸಸ್ಯವಿವರ್ಧನೀಂ । ಲಂಘಯನ್ ಶೂಲಮಾರೋಹೇ ದನಪೇಕ್ಷೋಽಪಿ ತಾಂ ಪ್ರತಿ । ಏವಂ ವಿಲಂಘಯನ್ ಮರ್ತ್ಯೋ ಮರ್ಯಾದಾಂ ವೇದ ನಿರ್ಮಿತಾಂ । ಪ್ರಿಯೋಽಪಿ ನ ಪ್ರಿಯೋಽಸೌ ಮೇ ಮದಾಜ್ಞಾವ್ಯತಿವರ್ತನಾತ್" ಎನ್ರು ಅನಂತರಂ ಶೊಲ್ಲಪ್ಪಟ್ಟದು.

ಅಪೇಕ್ಷೆ ಇಲ್ಲದವನಾಗಿದ್ದರೂ, **ಲಂಘಯನ್** - ಅತಿಕ್ರಮವನ್ನು ನಡಿಸುವವನಾಗಿ ಎಂದರೆಕಟ್ಟೆಯನ್ನು ಒಡೆದವನಾಗಿ**ಶೂಲಮಾರೋಹೇತ್**-ಆ ರಾಜನ ಕೋಪಕ್ಕೆ, ಗುರಿಯಾಗಿ ಶಿಕ್ಷಿಸಲ್ಪಟ್ಟ ಗಲ್ಲಿನ ಮರವನ್ನು ಹತ್ತುವನೋ, **ಏವಂ** - ಆ ಪ್ರಕಾರ ವಾಗಿಯೇ, **ಮರ್ತ್ಯಃ**-ಮನುಷ್ಯನು, ಈ ಸಂದರ್ಭದಲ್ಲಿ ಪ್ರಪನ್ನನು, **ವೇದನಿರ್ಮಿತಾಂ**-ವೇದದಿಂದ ನಿರ್ಮಿಸಲ್ಪಟ್ಟ, **ಮರ್ಯಾದಾಂ** - ಶಾಸ್ತ್ರದ ಎಲ್ಲೆಯನ್ನು, **ವಿಲಂಘಯನ್** - ಅತಿಕ್ರಮಿಸುವವನಾಗಿ, **ಪ್ರಿಯೋಽಪಿ**-ಇದಕ್ಕೆ ಮೊದಲು ಪ್ರಪತ್ತ್ಯನುಷ್ಠಾನದಿಂದ ನನಗೆ ತುಂಬಾ ಪ್ರಿಯನಾಗಿದ್ದರೂ, **ಅಸೌ** - ಈತನು, **ಮೇ** - ನನಗೆ (ಇದು ಲಕ್ಷ್ಮಿಯ ವಾಕ್ಯವು) **ಮದಾಜ್ಞಾವ್ಯತಿವರ್ತನಾತ್** - ನನ್ನ ಆಜ್ಞೆಯನ್ನು ಉಲ್ಲಂಘಿಸುವದರಿಂದ, **ನ ಪ್ರಿಯಃ** - ಪ್ರಿಯನಾಗುವದಿಲ್ಲವು" ಎನ್ರು - ಎಂಬದಾಗಿ, **ಅನಂತರಂ** - ಮುಂದೆ, **ಶೊಲ್ಲಪಟ್ಟದು** - ಹೇಳಲ್ಪಟ್ಟಿತು. ರಾಜಾಧಿರಾಜನಾದ ಸರ್ವೇಶ್ವರನ ಆಜ್ಞಾರೂಪ ಶಾಸ್ತ್ರಮರ್ಯಾದೆಯನ್ನುಲ್ಲಂಘಿಸುವದರಿಂದ ಪ್ರಪತ್ತ್ಯನುಷ್ಠಾನಕಾಲದಲ್ಲಿ ತುಂಬಾ ಪ್ರಿಯನಾಗಿದ್ದರೂ ಕೊನೆಗೆ ಆ ಸರ್ವೇಶ್ವರನ ಕೋಪಕ್ಕೂ ನಿಗ್ರಹಕ್ಕೂ ಪಾತ್ರನಾಗಿ ಶಿಕ್ಷಿಸಲ್ಪಡುವನು ಎಂಬ ತಾತ್ಪರ್ಯವು. ಇದಕ್ಕೆ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಒಬ್ಬನು ಒಬ್ಬ ರಾಜನಿಗೆ ತುಂಬಾ ಬೇಕಾದವನಾಗಿ ಪ್ರಿಯನಾಗಿದ್ದುಕೊಂಡು, ಆತನು ನಿರ್ಮಾಣ ಮಾಡಿದ ಒಂದು ಜಲಾಶಯವು ಬಹು ಜನಗಳಿಗುಪಯುಕ್ತವಾಗಿ ತುಂಬಾ ಬೆಳೆಯನ್ನು ಬೆಳೆಯುವದಾಗಿರುವಾಗ, ಅದನ್ನು ಈತನು ಒಡೆದು ಕೆಡಿಸಿದರೆ ಹೇಗೆ ರಾಜನ ಆಗ್ರಹಕ್ಕೆ ಸಿಲುಕಿದವನಾಗಿ ಅನಿಷ್ಟ ಫಲವನ್ನನುಭವಿಸುವನೋ, ಹಾಗೆಯೇ ಈ ಪ್ರಪನ್ನನೂ ಸಹ ಸರ್ವೇಶ್ವರನ ಆಗ್ರಹಕ್ಕೆ ಗುರಿಯಾಗುವನೆಂದು ಹೇಳಲ್ಪಟ್ಟಿತು ಪ್ರಪನ್ನನು ಶರಣಾಗತಿಯನ್ನನುಷ್ಠಿಸುವದರಿಂದ ಶ್ರಿಯಃಪತಿಗೆ ತುಂಬಾ ಪ್ರಿಯನಾಗುವದರಿಂದ, ದೃಷ್ಟಾಂತದಲ್ಲಿ ರಾಜ್ಞಃವಲ್ಲಭಃ ಎಂದು ಪ್ರಯೋಗಿಸಲ್ಪಟ್ಟಿತು. **ನದೀಂ ಲಂಘಯನ್** ಎಂದು ಹೇಳಿರುವದು ಶಾಸ್ತ್ರಮರ್ಯಾದೆಯ ಉಲ್ಲಂಘನೆಯು ಕೂಡದೆಂಬ ಅಭಿಪ್ರಾಯದಿಂದ ಹಾಗೆ ಹೇಳಲ್ಪಟ್ಟಿರುತ್ತದೆ. **ಲೋಕೋಪಯೋಗಿನೀಂ** ಎಂದು ಹೇಳಿರುವದರಿಂದ "**ಲೋಕ**

ಪ್ರಪನ್ನಸ್ಯ ಭಗವದಪ್ರೀತಿ ಶಮನ ಪ್ರಕಾರಃ

ಇನ್ನ ಭಗವದಪ್ರೀತಿಕ್ಕು ಕ್ಷನ್ಮೈ ಕೊಂಡಿಲನಾಗಿಲ್ ಮುಕ್ತನಾವ

ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ" ಎಂಬಶ್ಲೋಕಾರ್ಥವು ಪ್ರದರ್ಶಿಸಲ್ಪಟ್ಟಿತು. **ರಮ್ಯಾಂ** ಎಂಬುವದರಿಂದ ಶಾಸ್ತ್ರನಿಯಮಾನುಸರಣವು ಈತನಿಗೆ ಸ್ವರೂಪವಾದುವದರಿಂದ ರಮ್ಯವಾದುದೆಂಬ ಭಾವವು ತೋರಿಬರುತ್ತದೆ. ಈ ಶಾಸ್ತ್ರಾನುಸರಣ ಕೈಂಕರ್ಯದಿಂದ ಮೋಕ್ಷಾಕಾಂಕ್ಷೆಯುಳ್ಳ ಈತನಿಗೆ ಏನೊಂದೂ ಸಹಾಯವಾಗದಿದ್ದರೂ, ಈ ಶಾಸ್ತ್ರಮರ್ಯಾದೆಯು ಆವಶ್ಯಕವೆಂದು ಹೇಳುವದಕ್ಕಾಗಿ, **ಅನಪೇಕ್ಷೋಽಪಿ ತಾಂಪ್ರತಿ** ಎಂಬ ಪ್ರಯೋಗವು. ಆದುದರಿಂದ ಭಗವದಪ್ರೀತಿಯೂ, ಅದರಿಂದುಂಟಾಗುವ ಅನರ್ಥವೂ ಉಂಟಾಗದಿರುವದಕ್ಕಾಗಿ ಈತನು ಶಾಸ್ತ್ರಮರ್ಯಾದೆಯನ್ನತಿಕ್ರಮಿಸುವದು ಯುಕ್ತವಲ್ಲನೆಂಬ ಭಾವವು. ಇಲ್ಲಿ **ಅನಂತರಂ ಶೊಲ್ಲಪಟ್ಟದು** ಎಂದು ಹೇಳಿರುವದರಿಂದ ಹೀಗೆ ಹೇಳಿರುವದು ಪ್ರಪನ್ನನನ್ನುದ್ದೇಶಿಸಿ ಹೇಳಿದುದೇ ವಿನಾ ಪ್ರಪನ್ನನಲ್ಲದವನ ವಿಷಯವಲ್ಲವೆಂಬುವದು ವ್ಯಕ್ತವು.

ಪ್ರಪನ್ನನಿಗೆ ಶಾಸ್ತ್ರಮರ್ಯಾದೋಲ್ಲಂಘನದಿಂದುಂಟಾಗುವ ಭಗವದ ಪ್ರೀತಿಯ ಶಮನವು.

ಇನ್ನ - ಇಂತಹ, ಎಂದರೆ ಶಾಸ್ತ್ರೀಯನಿಯಮನೋಲ್ಲಂಘನೆಯಿಂದ ಪ್ರಾಪ್ತವಾದ, **ಭಗವದಪ್ರೀತಿಕ್ಕು** - ಭಗವಂತನ ಪ್ರೀತಿಯನ್ನು ದೂರೀಕರಿಸುವ ಅಪರಾಧಕ್ಕೆ, **ಕ್ಷನ್ಮೈ** - ಇದರಿಂದ ಕ್ಷಮಿಸಲ್ಪಡುವನು ಎಂಬ ವ್ಯುತ್ಪತ್ತಿಯಿಂದ **ಕ್ಷನ್ಮೈ** ಎಂದರೆ ಪ್ರಾಯಶ್ಚಿತ್ತವು, ಅದಾದರೋ ಪುನಶ್ಶರಣಾಗತಿಯು ಅದನ್ನು, **ಕೊಂಡಿಲನಾಗಿಲ್** - ಅವಲಂಬಿಸದೇ ಹೋದರೆ, **ಮುಕ್ತನಾವದರ್ಕುಮುನ್ಬೇ**-ಮುಕ್ತನಾಗುವದಕ್ಕೆ ಮುಂಚಿತವಾಗಿ, **ಅಧಿಕಾರಾನುರೂಪಮಾಗ** - ತನ್ನ ಅಧಿಕಾರಕ್ಕನುಗುಣವಾಗಿ, **ಏದೇನುಮೊರು** - ಯಾವುದಾದರೂ ಒಂದು, **ಅನಿಷ್ಟತ್ತೈ** - ಇಷ್ಟವಿಲ್ಲದ ಫಲವನ್ನು, **ವಿಳೈಪ್ಪಿಕ್ಕುಮ್** - ಉಂಟುಮಾಡುತ್ತದೆ. ಹೀಗೆ ಪ್ರಪನ್ನನು ಶಾಸ್ತ್ರೀಯನಿಯಮವನ್ನುಲ್ಲಂಘಿಸಿ ನಡೆದ ಅಪರಾಧಕ್ಕೆ ಪ್ರಾಯಶ್ಚಿತ್ತವಿಲ್ಲವೋ ಎಂದರೆ ಉಂಟೆಂದು ಹೇಳುತ್ತಾರೆ. ಹೀಗೆ ನಡೆದುದಕ್ಕೆ ಪಶ್ಚಾತ್ತಾಪಹುಟ್ಟಿ ಪುನಶ್ಶರಣಾಗತಿಯನ್ನನುಷ್ಠಿಸಿದರೆ, ಭಗವದಪ್ರೀತಿಯು ಶಮನವಾಗಿ,

ದರ್ಕ್ಕು ಮುನ್ಬೇ ಅಧಿಕಾರಾನುರೂಪಮಾಗ ಏದೇನು ಮೊರು ಅನಿಷ್ಟತ್ತೈ ವಿಳೈ(ವಿ)ಪ್ಪಿಕ್ಕುಮ್.

ಮುಕ್ತನಾಗುವದಕ್ಕೆ ಮುಂಚಿತವಾಗಿ ಅಲ್ಪಶಿಕ್ಷೆಯನ್ನು ಕೊಟ್ಟು ಮುಕ್ತಿಯನ್ನೀಯುವನೆಂದುಪದೇಶಿಸುತ್ತಾರೆ. **ಮುಕ್ತನಾವದರ್ಕ್ಕು ಮುನ್ಬೇ ಅಧಿಕಾರಾನುರೂಪಮಾಗ** ಎಂದು ಏಕೆ ಪ್ರಯೋಗಿಸಿರುತ್ತಾರೆಂದರೆ, ಭಕ್ತ್ಯಧಿಕಾರಿಯಾದರೆ ಈ ಜನ್ಮದಲ್ಲೇ ಮುಕ್ತಿಯನ್ನು ಕೊಟ್ಟೇತೀರಬೇಕೆಂಬ ನಿಯಮವಿಲ್ಲದುದರಿಂದ ಬೇರೇ ಜನ್ಮವನ್ನು ಕೊಟ್ಟು ಶಿಕ್ಷಿಸಿ ಮುಕ್ತಿಯನ್ನೀಯಬಹುದು. ಪ್ರಪನ್ನನಾಗಿದ್ದರೆ, "**ಏತದ್ದೇಹಾವಸಾನೇ ಮಾಂತ್ವತ್ಪಾದಂ ಪ್ರಾಪಯಸ್ವಯಂ**" ಎಂದು ಹೇಳಿರುವ ಹಾಗೆದೇಹಾವಸಾನದಲ್ಲೇ ಮೋಕ್ಷವನ್ನು ಪ್ರಾರ್ಥಿಸಿದ್ದರೆ. ಈತನಿಗೆ ಅಯಮವರ್ಗದ್ವಿಯುಂಟಾಗಿ. ಆ ಕಾಲದಲ್ಲಿ "**ಖಂಜಾ ಭವಂತಿ ಕಾಣಾ ಭವಂತಿ**" ಎಂದು ಹೇಳಿರುವಹಾಗೆ ಕ್ಲೇಶಗಳು ಪ್ರಾಪ್ತವಾಗುತ್ತವೆ. ಆದರೆ ಪುನರ್ಜನ್ಮವಿಲ್ಲವು. ಪ್ರಪನ್ನನು ದೇಹಾವಸಾನದಲ್ಲೇ ಮೋಕ್ಷವನ್ನು ಬಯಸದೇ, ಕಾಲನಿಯಮವನ್ನು ಬಿಟ್ಟು ಪ್ರಪದನವನ್ನನುಷ್ಠಿಸಿದರೆ, ಪುನರ್ಜನ್ಮವುಂಟಾಗುವದರಲ್ಲೇನೂ ವಿರುದ್ಧವಲ್ಲವಾದರಿಂದ ಪುನರ್ಜನ್ಮ ಪ್ರಾಪ್ತವಾಗಿ ದುಃಖಾನುಭವ ಉಂಟಾಗಬಹುದು. ಆದರೆ ಅಂತಹ ಭಗವದಪ್ರೀತಿಯಿಂದ ಶಿಕ್ಷೆಯುಂಟಾಗುವದಕ್ಕೆ ಮುಂಚೆಯೇ ಪುನಶ್ಶರಣಾಗತಿಯನ್ನು ಮಾಡಿದುದಾದರೆ ಭಗವದನುಗ್ರಹವು ಪುನಃ ಉಂಟಾಗಬಹುದೆಂಬ ಭಾವವು. ಸಾರದೀಪಿಕಾ ವ್ಯಾಖ್ಯಾನದಲ್ಲಿ "**ಅಧಿಕಾರಾನುರೂಪಮಾಗ**" ಎಂಬುವದು ಭಕ್ತ್ಯಧಿಕಾರಿಗೆ ಸಂಬಂಧಿಸಿದ್ದವಲ್ಲವೆಂದು ಅಭಿಪ್ರಾಯಪಟ್ಟು. **ಅಧಿಕಾರಾನುರೂಪಮಾಗ**ವೆಂದರೆ ಈ ನ್ಯಸ್ತಭರದ ಅಧಿಕಾರಕ್ಕನುರೂಪವಾದ ಎಂದು ಅರ್ಥಮಾಡಿ, ಅಲ್ಪಶಿಕ್ಷೆಯನ್ನುಂಟುಮಾಡುವನೆಂಬರ್ಥವನ್ನು ಸೂಚಿಸಿರುತ್ತಾರೆ. ಇದೂ ಸಮಂಜಸವಾದ ಅಭಿಪ್ರಾಯವೇ. ಆದರೆ ಕೆಲವರು, ಪ್ರಪನ್ನನ ಉತ್ತರಾಪರಾಧಗಳಿಗೆ ಪ್ರಾಯಶ್ಚಿತ್ತವೇನೂ ಆವಶ್ಯಕವಿಲ್ಲವೆಂದೂ. ಕರುಣಾಸಾಗರನು ನ್ಯಸ್ತಭರನ ಭರನ್ಯಾಸದಿಂದ ಪ್ರೀತನಾಗಿ, ಮನ್ನಿಸಿಬಿಡುವನೆಂದು, ಅಭಿಪ್ರಾಯಪಡುವರು. ಇದು ಸರಿಯಾದ ಅಭಿಪ್ರಾಯವಲ್ಲವೆಂಬುವದು, **ಏದೇನುಮೊರು ಅನಿಷ್ಟತ್ತೈ-ವಿಳೈಪ್ಪಿಕ್ಕುಮ್** ಎಂಬುವದರಿಂದ ಸೂಚಿತವಾಯಿತು.

ಹೀಗೆ ಭಗವದಪ್ರೀತಿಯೇನೋ ಉಂಟಾಗಿ ಏನಾದರೂ ಒಂದು ಅನಿಷ್ಟಫಲವನ್ನೇನೋ ಸರ್ವೇಶ್ವರನುಂಟುಮಾಡುವದು ಹಾಗಿರಲಿ ನ್ಯಸ್ತಭರನಾದ ಈ ಪ್ರಪನ್ನನ ಸ್ವರೂಪಕ್ಕೆ ಇಂತಹ ಭಗವದಪ್ರೀತಿಯನ್ನು ಸಂಪಾದಿಸಿಕೊಳ್ಳುವದು

ಅದು ನಿರ್ಕ, ಸತ್ವಪ್ರಕೃತಿಯಾನ ಇವನುಕ್ಕು ಭಗವದ ಪ್ರೀತಿಕ್ಕು ಮೇರ್

ತುಂಬಾ ಅಯುಕ್ತವೆಂದೂ, ಅದಕ್ಕಿಂತಲೂ ಹೆಚ್ಚಾದ ನರಕವು ಬೇರೇ ಇಲ್ಲವೆಂದೂಹೇಳುತ್ತಾರೆ :—ಅದು ನಿರ್ಕ-ಭಗವದಪ್ರೀತಿಮೂಲಕ ಪ್ರಾಪ್ತವಾದ ಅನಿಷ್ಟಫಲವು ಹಾಗಿರಲಿ, **ಸತ್ವಪ್ರಕೃತಿಯಾನ**-ಸತ್ವಗುಣಾಧಿಕ್ಯ ಸ್ವಭಾವವುಳ್ಳ, **ಇವನುಕ್ಕು**-ಭಗವತ್ಪ್ರೀತಿಯೇ ಮುಖ್ಯ ಪ್ರಯೋಜನವಾಗಿ ಉಳ್ಳ ಈ ಪ್ರಪನ್ನನಿಗೆ, **ಭಗವದಪ್ರೀತಿಕ್ಕು** – ಭಗವತ್ಪ್ರೀತಿಯುಂಟಾಗುವದಕ್ಕೆ ಬದಲಾಗಿ ಭಗವದಪ್ರೀತಿಯುಂಟಾಗುವದಕ್ಕೆ, **ಮೇರ್‌ಪಟ್ಟ** - ಹೆಚ್ಚಾದ, **ನರಕಮಿಲ್ಲೈ** - ನರಕವಿಲ್ಲವು. ಈ ಪ್ರಪನ್ನನು ಸತ್ವಸ್ವಭಾವವುಳ್ಳವನಾದುದರಿಂದಲೇ ಈತನಿಗೆ ಸಾತ್ವಿಕ ಸಂಭಾಷಣ, ಗುರೂಪಸದನ, ಭರನ್ಯಾಸಾನುಷ್ಠಾನಗಳು ಲಭಿಸಿರುತ್ತವೆ. ಇವೆಲ್ಲವೂ ಲಭಿಸಿರುವದು ತನಗೆ ಭಗವತ್ಪ್ರೀತಿಯು ಪ್ರಾಪ್ತವಾಗಲಿ ಎಂಬಭಿಪ್ರಾಯದಿಂದಿರುವಾಗ ಅಂತಹ ಪ್ರೀತಿಗೆ ಬದಲಾಗಿ ಅಪ್ರೀತಿಯುಂಟಾದರೆ, ಆತನು ತನಗೆ ನರಕಪ್ರಾಪ್ತಿಯುಂಟಾದ ಹಾಗೆ ಭಾವಿಸುವನು ಎಂಬ ಭಾವವು ಪ್ರಪನ್ನನಾದುದರಿಂದ ಈತನಿಗೆ ನರಕಪ್ರಾಪ್ತಿಯೇನೋ ಇಲ್ಲವೆಂಬುವದು ವ್ಯಕ್ತವು. **"ಸರ್ವಥಾ ನಖಲು ಭಾಗವತಾ ಯಮವಿಷಯಂ ಗಚ್ಛಂತಿ"** ಪ್ರಪನ್ನರಾದ ಭಾಗವತರುಗಳು ಎಂದಿಗೂ ಯಮ ಪಟ್ಟಣವನ್ನು ಸೇರುವದಿಲ್ಲವೆಂದು ಹೇಳಲ್ಪಟ್ಟಿರುತ್ತದೆ.

> **"ಕಮಲನಯನ ವಾಸುದೇವ ವಿಷ್ಣೋ**
> **ಧರಣಿಧರಾಚ್ಯುತ ಶಂಖಚಕ್ರಪಾಣೇ ।**
> **ಭವ ಶರಣ ಮಿತೀರಯಂತಿ ಯೇ**
> **ವೈತ್ಯಜ ಭಟದೂರ'ರೇಣ ತಾನಪಾಪಾನ್"**

ಓ ಕಮಲನೇತ್ರನೇ, ವಾಸುದೇವನೆ, ವಿಷ್ಣುವೇ, ಜಗತ್ತನ್ನು ಧರಿಸಿರುವನೇ, ಸತ್ಯಸಂಕಲ್ಪದಿಂದ ಜಾರದವನೇ ಅಥವಾ ನಾಶರಹಿತನೇ, ಶಂಖಚಕ್ರವನ್ನು ಕೈಯಲ್ಲಿ ಧರಿಸಿದವನೇ ನಮಗೆ ಉಪಾಯವಾಗೆಂದು ತಾನಾಗಿಯೇ ಆಗಲಿ, ಅಥವಾ ಆಚಾರ್ಯಮುಖೇನ ಉಪದೇಶಿಸಲ್ಪಟ್ಟು, ಹೇಳುವ ಸುಕೃತಿಗಳನ್ನು, ಓ ನನ್ನ ದೂತನೇ ದೂರದಿಂದಲೇ ಬಿಟ್ಟುಬಿಡು" ಎಂಬ ವಿಷ್ಣುಪುರಾಣದ ಯಮವಾಕ್ಯದಿಂದಲೂ,' ಪ್ರಪನ್ನನಿಗೆ ನರಕಪಾತವಿಲ್ಲವೆಂಬುವದು ಸುವ್ಯಕ್ತವು. ಈ ಗ್ರಂಥಕರ್ತರೇ ಈ ವಿಷಯವನ್ನೇ ವಿಶದವಾಗಿ ಅಭೀತಿಸ್ತವದಲ್ಲಿ **ನರಕಪಾತ ಭೀತಿಃಕುತಃ"** (ಅಭೀತಿಸ್ತವ.೭) ಎಂಬದಾಗಿ ಹೇಳಿರುತ್ತಾರೆ. ಹೀಗಿದ್ದರೂ, ದೈವವಶಾತ್ ಇವನಿಗೆ ಭಗವದಪ್ರೀತಿಯು ಪ್ರಾಪ್ತವಾದುದಾದರೆ ಅದಕ್ಕಿಂತ ಹೆಚ್ಚಾದ ನರಕವಿಲ್ಲವೆಂದು ಈತನು ಭಾವಿಸುವನು. ಏತಕ್ಕೆಂದರೆ ತನಗೆ ಸ್ವರೂಪವಿ

ಪಟ್ಟ ನರಕಮಿಲ್ಲೈ. ಅನ್ದ ಭಗವದಪ್ರೀತಿ ಶಮಿಪ್ಪದುಮ್ ಪಿನ್ಬು ಕ್ಷಮೈ ಕೊಳ್ಳಿಲ್; "ಸುಹೃದಂ ಸರ್ವಭೂತಾನಾಂ ಎನ್ಱುಮ್‌ಪಡಿ ನಿಸರ್ಗ ಸುಹೃ

ರುದ್ಧವಾದ ಭಗವದಪ್ರೀತಿಯು ಅದರಿಂದ ಪ್ರಾಪ್ತವಾಯಿತಲ್ಲಾ ಎಂಬ ಉಪಕ್ಲೇಶವೇ ನರಕಯಾತನೆಗಿಂತ ಹೆಚ್ಚಾದುದೆಂಬಭಿಪ್ರಾಯವು. ಈ ಅಪ್ರೀತಿಯು ಇಲ್ಲದಿದ್ದಾದರೆ ಭಗವತ್ಪ್ರಾಪ್ತಿಯು ಆ ಪ್ರಪನ್ನನಿಗೆ ಕ್ಷಿಪ್ರದಲ್ಲೇ ಉಂಟಾಗುತ್ತಿತ್ತು. ಅದು ಈಗ ವಿಳಂಬಿಸಿದುದರಿಂದ **"ಯಸ್ತ್ವಯಾ ಸಹ ಸಸ್ವರ್ಗೋನಿರಯೋಯುಂ ತ್ವಯಾವಿನಾ"** ಲೋಕಭರ್ತ್ತಾವಾದ ನಿನ್ನೊಂದಿಗಿರುವದೇ ನನಗೆ ಸ್ವರ್ಗವು ನಿನ್ನನ್ನಗಲಿರುವದೇ ನನಗೆ ನರಕವು" **ಎಂಬ** ಸೀತಾವಾಕ್ಯದ ಹಾಗೆ ಪ್ರಪನ್ನನು ಭಗವದ್ವಿಶ್ಲೇಷವನ್ನೇ ನರಕವಾಗಿ ಭಾವಿಸುವನೆಂಬ ಭಾವವು. ಆದುದರಿಂದ ಅಂತಹ ಪ್ರಪನ್ನನು ಭಗವದಪ್ರೀತಿಯನ್ನು ಹೋಗಲಾಡಿಸಿಕೊಳ್ಳಲು ಯತ್ನಿಸುವನು. ಅದಕ್ಕೆ ಪ್ರಾಯಶ್ಚಿತ್ತವು, **ಕ್ಷಮಸ್ವ** ಕ್ಷಮಿಸ್ವೈಯ್ಯಾ ಎಂಬದಾಗಿ ಪ್ರಾರ್ಥಿಸಿ ಶರಣಾಗತಿಯನ್ನನುಷ್ಠಿಸುವದೇ ಎಂದು ಹೇಳುತ್ತಾರೆ.

ಮುಂದಿನ ವಾಕ್ಯದಿಂದ ಆ ಭಗವದಪ್ರೀತಿಯು ಶಮನವಾಗುವ ಪ್ರಕಾರವನ್ನುಪದೇಶಿಸುತ್ತಾರೆ:—**ಅನ್ದ** - ಮೇಲೆ ಹೇಳಿದ ರೀತಿಯಲ್ಲಿ ಪ್ರಪನ್ನನಿಗೆ ಪ್ರಾಪ್ತವಾದ, ಭಗವದಪ್ರೀತಿಯು, **ಕ್ಷಮೈಕೊಳ್ಳಿಲ್** - ಕ್ಷಮಸ್ವ ಎಂದು ಹೇಳಿ ಶರಣಾಗತನಾದರೆ, **ಪಿನ್ಬು** - ಅನಂತರ, **ಶಮಿಪ್ಪದುಮ್** - ಶಮನವಾಗುವದು. ಈ ಅಭಿಪ್ರಾಯವನ್ನೇ ಶ್ರೀಮದಾಚಾರ್ಯರವರು ಮುಂದೆ **ಚರಮ** ಶ್ಲೋಕಾಧಿಕಾರದಲ್ಲೂ ಉಪಪಾದಿಸಿ. **"ಧೀಪೂರ್ವೋತ್ತರ ಪಾಪ್ಮನಾಮನುಜನನಾ ಜ್ಞಾತೇಪಿ ತನ್ನಿಷ್ಕೃತೇಃ"** ಬುದ್ಧಿಪೂರ್ವಕವಾದ ಅಪರಾಧವು ಪ್ರಪನ್ನನಿಗೆ **ಉಂಟಾಗ**ಲಾರದೆಂದೂ ಒಂದು ವೇಳೆ ಉಂಟಾದರೂ ಅದು ಪ್ರಾಯಶ್ಚಿತ್ತದಿಂದ ಶಮನವಾಗುತ್ತದೆಂದೂ ಉಪದೇಶಿಸಿರುತ್ತಾರೆ.

"ಸರ್ವಭೂತಾನಾಂ - ಸರ್ವಚೇತನರಿಗೂ. **ಸುಹೃದಂ** - ಪರಮಮಿತ್ರನನ್ನಾಗಿ" ಮುಂದಕ್ಕೆ **"ಜ್ಞಾತ್ವಾಮಾಂ ಶಾನ್ತಿ ಮೃಚ್ಛತಿ"** ಎಂದಿರುತ್ತದೆ. ಹೀಗೆ ಯಾರು ನನ್ನನ್ನು ತಿಳಿಯುವನೋ ಆತನು, ಕರ್ಮಯೋಗವು ನನ್ನ ಆರಾಧನರೂಪವೆಂದು ತಿಳಿದವನಾದುದರಿಂದ ಸುಖವನ್ನು ಹೊಂದುವನು ಎಂಬರ್ಥವು. **ಎನ್ಱುಮ್‌ಪಡಿ** - ಎಂದು ಹೇಳಿರುವ ಹಾಗೆ, **ನಿಸರ್ಗಸುಹೃತ್ತಾನ - ಸಹಜಪರ**ಮಮಿತ್ರನಾದ, **ಈಶ್ವರನುಡೈಯ** – ಆ ಶ್ಲೋಕದಲ್ಲೇ ಹೇಳಿರುವ ಹಾಗೆ **"ಸರ್ವ**

ತ್ತಾನ ಈಶ್ವರನುಡೈಯ ಅಪ್ರೀತಿ ಶಮಿಪ್ಪಿಕ್ಕುಮಳವು ಇವನುಕ್ಕು ಅರುನ್ತುದ ಮಾಯಿರುಕ್ಕುಮ್.

ಲೋಕ ಮಹೇಶ್ವರ"ನ, ಅಪ್ರೀತಿಯು ಶಮಿಪ್ಪಿಕ್ಕು ಮಳವು - ಶಮನವಾಗುವತನಕವೂ, **ಇವನುಕ್ಕು** - ಈ ಭಗವದಪ್ರೀತಿಯನ್ನು ಹೊಂದಿದ ಪ್ರಪನ್ನನಿಗೆ ಈ ಅಪ್ರೀತಿಯು, **ಅರುನ್ತುದ ಮಾಯಿರುಕ್ಕುಮ್** - ಮರ್ಮಸ್ಥಾನವನ್ನು ಚುಚ್ಚುವದರಿಂದುಂಟಾಗುವ ಬಾಧೆಯ ಹಾಗೆ ತುಂಬಾ ಕ್ಲೇಶಕರವಾಗಿರುವದು. ಸರ್ವೇಶ್ವರನು ನಮಗೆ ಪರಮಸುಹೃತ್ತಾಗಿ ಉಪೋದ್ಘಾತಾಧಿಕಾರದಲ್ಲಿ ಜೀವನು ಸರ್ವೇಶ್ವರನಿಗೆ ಹೃದಯಂಗಮನೆಂದೂ, ಆತನು ಕುಮಾರನೆಂದೂ, ಪುತ್ರನೆಂದೂ, ಶಿಷ್ಯನೆಂದೂ, ಪ್ರೇಷ್ಯನೆಂದೂ ಹೀಗೆಲ್ಲಾ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದರಿಂದ, ಪಿತಾಸಿಗೆ ಪುತ್ರನಲ್ಲೂ, ಗುರುವಿಗೆ ಶಿಷ್ಯನಲ್ಲೂ ಔಪಾಧಿಕವಾಗಿಯೇ ಪ್ರೀತಿಯಿರುವದನ್ನು ನಾವು ಕಂಡಿರುವಾಗ ಲೋಕಪಿತಾವಾಗಿ ಲೋಕಗುರುವಾಗಿಯೂ ಇರುವ ಸರ್ವೇಶ್ವರನಿಗೆ ಚೇತನರಾದ ನಮ್ಮಲ್ಲಿ ಸಹಜಸೌಹಾರ್ದವುಂಟೆಂದು ಹೇಳುವದೇನೂ ಅತಿಶಯೋಕ್ತಿಯಾಗುವದಿಲ್ಲವು. ಮತ್ತು ಪುತ್ರಶಿಷ್ಯರ ದುಷ್ಕೃತ್ಯದಿಂದಪಿತಾಗುರುಗಳಲ್ಲಿರುವ ಔಪಾಧಿಕ ಪ್ರೀತಿಯೂ ಹೇಗೆ ಬದಲಾಯಿಸಿ ಅಪ್ರೀತಿಯನ್ನುಂಟು ಮಾಡುತ್ತದೋ ಹಾಗೆಯೇ ಚೇತನನು ದೇಹೇಂದ್ರಿಯಗಳ ಸಂಬಂಧಮೂಲಕಮಾಡುವ ದುಷ್ಕೃತ್ಯಗಳಿಂದ ಭಗವದಪ್ರೀತಿಯುಂಟಾಗುವದೇನೂ ಆಶ್ಚರ್ಯವೂ ಅಲ್ಲವು. ಆ ಅಪ್ರೀತಿಯನ್ನು ಶಮನವಾಗುವ ಹಾಗೆ ಮಾಡುವದು ಈತನಿಗೆ ಕರ್ತವ್ಯವು; ಹಾಗೆ ಶಮನವಾಗುವವರಿವಿಗೂ ಈತನಿಗೆ ಮನೋವ್ಯಥೆಯು ಅಪಾರವಾದುದೆಂದು ಹೇಳುವದಕ್ಕಾಗಿ **ಅರುನ್ತುದಮಾಯಿರುಕ್ಕುಮ್** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಅರುಂತುದವಾಗಿರುವದರಿಂದ ಪ್ರಾಯಶ್ಚಿತ್ತರೂಪವಾದ ಪುನಶ್ಶರಣಾಗತಿಯನ್ನು ಮಾಡಿ ಸರ್ವೇಶ್ವರನ ಅಪ್ರೀತಿಯ ಶಮನವನ್ನು ಹೊಂದುತ್ತಾನೆಂಬ ಭಾವವು. ಆದರೆ ಕೆಲವರು ಹಾಗೆ ತಾವು ಮಾಡಿದಪರಾಧಕ್ಕಾಗಿ ಶೋಕಿಸದೆ, ಭಗವದಪ್ರೀತಿಯನ್ನು ಪುನಶ್ಶರಣಾಗತಿಮೂಲಕ ಕಳೆದುಕೊಳ್ಳದೇ, ಇರುವದನ್ನು ಕಂಡಿರುವೆಯಲ್ಲಾ, ಅಂತಹ ಪ್ರಪನ್ನನಿಗೆ ಅರುನ್ತುದವಾಗಿರುತ್ತದೆಂದು ಹೇಗೆ ಹೇಳಲ್ಪಟ್ಟಿತು ? ಎಂಬ ಶಂಕಾವಿಗೆ ಉತ್ತರವನ್ನು, "ಇಜ್ಜನಿರಾದವನುಕ್ಕು" ಎಂಬ ವಾಕ್ಯದಮೂಲಕ ತಿಳಿಸುತ್ತಾರೆ.

ಭಗವದಪ್ರೀತಿಯು ತನಗೆ ತುಂಬಾ ಅನಿಷ್ಟವಾದುದೆಂಬ ಭಾವವಿಲ್ಲದಿದ್ದರೆ. ಅಂತವನಿಗೆ ಪ್ರಪತ್ತಿಯೇ ಸಿದ್ಧಿಸುವದಿಲ್ಲವೆಂದು ಶಂಕಿಸಬೇಕಾಗುತ್ತದೆಂದು

(ಇಜ್ಜ ಪಾರಾದವನುಕ್ಕು) ಇಜ್ಜನಿರಾದವನುಕ್ಕು ಸ್ವಾಮಿ ವಿಷಯತ್ತಿಲ್ ಪ್ರಾವಣ್ಯಮುಮ್ ಕೈಙ್ಕರ್ಯರೂಪವಾನ ಮೋಕ್ಷತ್ತಿಲ್ ಅಭಿರುಚಿಯುಮ್ ಶಂಕಿಕ್ಕ ಅಡುಕ್ಕುಮ್.

ಹೇಳುತ್ತಾರೆ :— **ಇಜ್ಜನಿರಾದವನುಕ್ಕು** - ಹೀಗೆ ಭಗವದಪ್ರೀತಿಯು ಅರುನ್ತುದವಾಗಿಲ್ಲದವನಿಗೆ, **ಇಜ್ಜ ಪಾರಾದವನುಕ್ಕು** ಎಂದು ಪಾಠಾಂತರವಾದರೆ, ಭಗವದ ಪ್ರೀತಿಯು ಅಸಿಷ್ಟಾವಹವೆಂದು ನೋಡದವನಿಗೆ, ಎಂಬರ್ಥವು, **ಸ್ವಾಮಿ ವಿಷಯತ್ತಿಲ್ ಪ್ರಾವಣ್ಯಮುಮ್** - ಸರ್ವೇಶ್ವರನ ವಿಷಯದಲ್ಲಿ ವಿಶೇಷ ನಮ್ರತೆಯಿಂದ ಸೇರಿದ ಭಕ್ತಿಯೂ, **ಕೈಙ್ಕರ್ಯರೂಪವಾನ ಮೋಕ್ಷತ್ತಿಲ್ ಅಭಿರುಚಿಯುಮ್** - ಭಗವತ್ಕೈಙ್ಕರ್ಯರೂಪವಾದ ಮೋಕ್ಷದಲ್ಲಿ ವಿಶೇಷ ಆಸಕ್ತಿಯೂ, **ಶಂಕಿಕ್ಕ ಅಡುಕ್ಕುಮ್** - ಇಲ್ಲವೆಂದು ಸಂದೇಹಪಡಲು ಸಾಧ್ಯವು ಭಗವದಪ್ರೀತಿಗೆ ಭಯಪಡದೆ ಉದಾಸೀನ ಭಾವದಿಂದಿದ್ದರೆ ಸರ್ವೇಶ್ವರನಲ್ಲಿ. **"ಪ್ರೀತಿರೂಪ ಮನುಧ್ಯಾನಂ ಭಕ್ತಿರಿತ್ಯಭಿದೀಯತೇ"** ಎಂದು ಹೇಳಿರುವ ಹಾಗೆ ಭಕ್ತಿಯಿಲ್ಲವೆಂದೂ, ಹಾಗೆ ಪ್ರೀತಿಯಿದ್ದರೇನೇ ಆತನಿಗೆ ಕೈಙ್ಕರ್ಯ ಮಾಡಬೇಕೆಂಬ ವಿಶೇಷಾಭಿಲಾಷೆಯು ಇರುತ್ತದೆಂದು ಹೇಳಬಹುದು. ಯಾವಾಗ ಪ್ರೀತಿಯನ್ನು ಸಂಪಾದಿಸಿಕೊಳ್ಳದೆ, ಅಪ್ರೀತಿಯುಂಟಾದರೂ ಅದಕ್ಕೆ ಗಮನಕೊಡದಿರುತ್ತಾನೋ, ಆಗ ಕೈಙ್ಕರ್ಯಮಾಡಬೇಕೆಂಬ ಉತ್ಕಟೇಚ್ಛೆಯೇ ಇಲ್ಲವೆಂದು ಹೇಳಬೇಕಾಗುತ್ತದೆ ನಮ್ಮ ಅಭಿಪ್ರಾಯದ ಪ್ರಕಾರ ಮೋಕ್ಷಾವಸ್ಥೆಯಲ್ಲಿ ಪರಮ ಪದದಲ್ಲಿ ಸ್ವಾಮಿ ಸನ್ನಿಧಿಯಲ್ಲಿರುತ್ತಾ, ಆತನಿಗೆ ಸರ್ವವಿಧ ಕೈಙ್ಕರ್ಯಗಳನ್ನೆಸಗುತ್ತಾ ನಿರಂತರ ಸುಖಾನುಭವವನ್ನು ಹೊಂದುತ್ತಿರುವನು. ಆದುದರಿಂದಲೇ ಇಲ್ಲಿ **"ಕೈಙ್ಕರ್ಯರೂಪವಾನ ಮೋಕ್ಷ"**ವೆಂಬ ಪ್ರಯೋಗವು. ಸ್ವಾಮಿಯಲ್ಲಿ ಭಕ್ತಿಯೂ, ಕೈಙ್ಕರ್ಯಸಾಮ್ರಾಜ್ಯದಲ್ಲಭಿಲಾಷೆಯೂ, ಎರಡೂ ಯಾವಾಗ ಇಲ್ಲವೋ, ಆಗ ಆತನಿಗೆ ಪ್ರಪತ್ತಿಯೇ ಸಿದ್ಧಿಸಲಿಲ್ಲವೆಂಬುವದು ಸಿದ್ಧವು. ಪ್ರಪತ್ತಿ ಸಿದ್ಧಿಸಿದ್ದರೆ, ಸ್ವಾಮಿವಿಷಯದಲ್ಲಿ ಪ್ರಾವಣ್ಯವೂ, ಸ್ವಾಮಿಕೈಙ್ಕರ್ಯದಲ್ಲಭಿರುಚಿಯೂ ಎರಡೂ ಇರುತ್ತಿತ್ತು ಆಗ ತನ್ನಪರಾಧಮೂಲಕ ಭಗವದಪ್ರೀತಿಯುಂಟಾಗಿದೆ ಎಂದು ತಿಳಿದು, ತನ್ನಿವಾರಣಾರ್ಥವಾಗಿ ಪ್ರಾಯಶ್ಚಿತ್ತಮಾಡಿಕೊಳ್ಳುವನು. ಹೀಗೆ ಭಗವದಪ್ರೀತಿಯನ್ನು ಹೋಗಲಾಡಿಸಿಕೊಳ್ಳುವತನಕ ತುಂಬಾ ವ್ಯಥೆಪಡುವನು ಎಂಬುವದು ಮುಖ್ಯಾಭಿಪ್ರಾಯವು.

ಹೀಗೆ ಶಾಸ್ತ್ರೀಯ ನಿಯಮನಾತಿಕ್ರಮಣವು ತುಂಬಾ ದೋಷಾವಹವಾದುದಾದರೆ, ಇಂತಹ ಸಮಸ್ತಾಭಿಪ್ರಾಯಗುಳುಳ್ಳ ರಹಸ್ಯತ್ರಯಗಳಲ್ಲಿ ಇದು ಸೂಚಿಸಲ್ಪಟ್ಟಿರಬೇಕು. ಹಾಗೆ ಎಲ್ಲಿ ಸೂಚಿಸಲ್ಪಟ್ಟಿದೆ ಎಂದರೆ ತಿಳಿಸುತ್ತಾರೆ :—

ರಹಸ್ಯತ್ರಯೇ ಶಾಸ್ತ್ರೀಯ ನಿಯಮನಾನುಸಂಧಾನ ಸ್ಥಲ ಪ್ರದರ್ಶನಮ್

ಇವ್ವಾಜ್ಞಾತಿಲಂಘನಮ್ (೧) "ಪ್ರಹರ್ಷಯಿಷ್ಯಾಮಿ" ಎನ್ರು ಉದ್ದೇಶ್ಯಮಾನ ಭಗವತ್ಪ್ರೀತಿಕ್ಕು ವಿರೋಧಿಯಾನಪಡಿಯಾಲೆ ಇಶ್ಶಾಸ್ತ್ರೀಯ ನಿಯಮಮ್ ರಹಸ್ಯತ್ರಯತ್ತಿಲ್ ವಿರೋಧಿ ನಿವೃತ್ತಿಯೈ ಯನುಸಂಧಿಕ್ಕು ಮಿಡಙ್ಗಳಿಲೆ ಅನುಸಂಧಿಕ್ಕ ಪ್ರಾಪ್ತಮ್.

ರಹಸ್ಯತ್ರಯದಲ್ಲಿ ಶಾಸ್ತ್ರೀಯ ನಿಯಮನ ಕೋರುವ ಸ್ಥಳಗಳು

ಇವ್ವಾಜ್ಞಾತಿ ಲಂಘನಂ-ಈ ಸರ್ವೇಶ್ವರನ ಆಜ್ಞಾರೂಪವಾದ ಶಾಸ್ತ್ರೀಯ ನಿಯಮನವನ್ನತಿಕ್ರಮಿಸೋಣವು, "ಪ್ರಹರ್ಷಯಿಷ್ಯಾಮಿ ಎನ್ರು" ಸಂತೋಷಗೊಳಿಸುವೆನೆಂದು ಶ್ರೀ ಯಾಮುನೇಯರು ಹೇಳಿರುವಹಾಗೆ, **ಉದ್ದೇಶ್ಯಮಾನ ಭಗವತ್ಪ್ರೀತಿಕ್ಕು** - ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಭಗವತ್ಪ್ರೀತಿಗೆ, **ವಿರೋಧಿಯಾನ ಪಡಿಯಾಲೆ** - ವಿರುದ್ಧವಾದುದರಿಂದ, **ಈ ಶಾಸ್ತ್ರೀಯ ನಿಯಮಮ್**-ಪ್ರಪನ್ನನು ಶಾಸ್ತ್ರಾನುಸಾರವಾಗಿಯೇ ನಡೆಯಬೇಕೆಂಬ ವಿಧಿಯು, **ರಹಸ್ಯತ್ರಯತ್ತಿಲ್** - ಮೂರು ರಹಸ್ಯಗಳಲ್ಲೂ, **ವಿರೋಧಿ ನಿವೃತ್ತಿಯೈ** - ಭಗವತ್ಪ್ರಾಪ್ತಿಗೆ ವಿರೋಧಿಯಾದುದರ ನಿವೃತ್ತಿಯನ್ನು, **ಅನುಸಂಧಿಕ್ಕು ಮಿಡಙ್ಗಳಿಲೆ** - ಅನುಸಂಧಾನಮಾಡಬಹುದಾದ ಸ್ಥಳಗಳಲ್ಲಿ, **ಅನುಸಂಧಿಕ್ಕ ಪ್ರಾಪ್ತಮ್** - ಅನುಸಂಧಾನಮಾಡಬಹುದು. ಪರಮ ಪುರುಷಾರ್ಥಕಾಷ್ಠಾಭೂತವಾದ ಪರಮ ಪುರುಷನ ನಿರುಪಾಧಿಕ ಕೈಂಕರ್ಯಪ್ರಾಪ್ತಿಯುಂಟಾಗಬೇಕಾದರೆ "**ಪ್ರಹರ್ಷಯಿಷ್ಯಾಮಿ**" ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ ಭಗವತ್ಪ್ರೀಣನವೇ ಪ್ರಧಾನಪ್ರಯೋಜನವಾದುದರಿಂದ, ಸರ್ವೇಶ್ವರನ ಪ್ರೀತಿಯನ್ನು ಪ್ರಪನ್ನನು ಸಂಪಾದಿಸಿಕೊಳ್ಳಬೇಕೇ ವಿನಾ ಆತನ ಅಪ್ರೀತಿಯನ್ನು ಎಂದಿಗೂ ಸಂಪಾದಿಸಿಕೊಳ್ಳಕೂಡದು. "**ಶ್ರುತಿಸ್ಸ್ಮೃತಿರ್ಮಮೈವಾಜ್ಞಾ**" ಎಂದು ಹೇಳಿರುವ ಹಾಗೆ ಶಾಸ್ತ್ರವು ಸರ್ವೇಶ್ವರನ ಆಜ್ಞೆಯಾದುದರಿಂದ ಶಾಸ್ತ್ರೀಯನಿಯಮನಾನುಸರಣವು ಭಗವನ್ಮುಖೋಲ್ಲಾಸವನ್ನುಂಟುಮಾಡಲು ಅತ್ಯಾವಶ್ಯಕವು. ಹಾಗೆ ನಡೆಯದೆ

---

(೧) ಶ್ಲೋ ೪೬

ಶಾಸ್ತ್ರೀಯನಿಯಮನಾನುಸರಣ ಪ್ರಯೋಜನಮ್

ಇನ್ನ ನಿಯಮನಾನುವರ್ತನಮ್ ಪೂರ್ಣೋಪಾಯರಲ್ಲಾದ ಅಧಿಕಾರಿಗಳುಕ್ಕು ಉಪಾಯಪೂರ್ತಿವಿರೋಧಿಯೈ ಶಮಿಪ್ಪಿತ್ತುಕ್ಕೊಂಡು ಭಗ

ಶಾಸ್ತ್ರಸರಣಿಯನ್ನುಲ್ಲಂಘಿಸುವದೇ ಪ್ರಾಪ್ಯವಿರೋಧಿಯಾಗುತ್ತದೆ. ಆದುದರಿಂದ ಶ್ರೀಮದ್ರಹಸ್ಯತ್ರಯಗಳಲ್ಲಿ ವಿರೋಧಿ ನಿವೃತ್ತಿಯನ್ನನುಸಂಧಾನ ಮಾಡುವ ಸ್ಥಳಗಳಲ್ಲಿ ಈ ಶಾಸ್ತ್ರೀಯ ನಿಯಮನವನ್ನು ಅನುಸಂಧಾನ ಮಾಡಬಹುದೆಂದುಪದೇಶಿಸುತ್ತಾರೆ. ಆ ವಿರೋಧಿನಿವೃತ್ತಿಯು ತೋರುವ ಸ್ಥಳಗಳು ಯಾವುವೆಂದರೆ :— "ನಮಸ್ಸುಕ್ಕಳಿಲ್ ಮಕಾರಙ್ಗಳಿಲ್ ಪಟ್ಟಿಗಳಾಲುಮ್, ಸರ್ವಪಾಪ ಶಬ್ದತ್ತಾಲುಮ್ ಅನುಸಂಧಿತ್ತು" ಎಂಬುದಾಗಿ ತಾವೇ ಅರ್ಥಪಂಚಕಾಧಿಕಾರದಲ್ಲಿ ಸೂಚಿಸಿರುತ್ತಾರೆ. ಮೂಲಮಂತ್ರದ್ವಯಗಳಲ್ಲಿರುವ ನಮಃ ಎಂಬುವದು ಮಮ ನ ಎಂದಾಗುವದರಿಂದ ಶೇಷತ್ವಕೈಂಕರ್ಯಗಳಲ್ಲಿ ಮಮಕಾರವು ತೊಲಗುವದರಿಂದ ಶಾಸ್ತ್ರೀಯ ನಿಯಮನವು ಸೂಚಿಸಲ್ಪಟ್ಟಿತೆಂಬ ಭಾವವು. ೪೧೫-೬ನೆಯ ಪುಟಗಳನ್ನು ನೋಡಿ. ಹಾಗೆಯೇ ಸರ್ವಪಾಪಗಳೂ ಶಾಸ್ತ್ರೀಯ ವಿಧಿನಿಷೇಧಗಳ ಉಲ್ಲಂಘನೆಯಿಂದ ಪ್ರಾಪ್ತವಾಗುತ್ತವೆ. ಶಾಸ್ತ್ರೀಯ ನಿಯಮನಾನುಸರಣೆಯಿಂದ ಸರ್ವೇಶ್ವರನು ಸುಪ್ರೀತನಾಗುವದರಿಂದ ಅವುಗಳ ಬಾಧೆ ಯಾವುದೂ ಇರುವದಿಲ್ಲವೆಂಬ ಭಾವವು.

ಈ "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬ ಲೀಲಾಸಾರಥಿಯಾದ ಸರ್ವೇಶ್ವರನ ಕೃಪಾಪ್ರದರ್ಶಕ ವಾಕ್ಯವು ಶರಣಾಗತಿಯನ್ನನುಷ್ಠಿಸುವವನನ್ನು ಕುರಿತು ಹೇಳಿದ ವಾಕ್ಯವಾದುದರಿಂದ. ಉಪಾಯಾನುಷ್ಠಾನದ ಅಭಿಪ್ರಾಯವೇ ಇಲ್ಲದಿರುವ ಅಧಿಕಾರಿಯ ವಿಷಯದಲ್ಲೂ ಉಪಾಯಾನುಷ್ಠಾನವನ್ನು ಮಾಡಿ ಪೂರ್ಣೋಪಾಯನೆಂದೆನಿಸಿದವನ ವಿಷಯದಲ್ಲೂ ಈ ಶಾಸ್ತ್ರೀಯ ನಿಯಮನಾನುಸರಣವು ಯಾವ ಫಲಗಳನ್ನುಂಟುಮಾಡುತ್ತದೆಂದು ಹೇಳಿ ಈ ಅಧಿಕಾರ ಪರಿಸಮಾಪ್ತಿಯನ್ನು ಮಾಡುತ್ತಾರೆ.

ಶಾಸ್ತ್ರೀಯ ನಿಯಮನಾನುನುಸರಣ ಪ್ರಯೋಜನವು

ಇನ್ನ ನಿಯಮನಾನುವರ್ತನಮ್ – ಶಾಸ್ತ್ರಗಳಲ್ಲಿ ವಿಧಿಸಿರುವ ರೀತಿ ಕೈಂಕರ್ಯಗಳನ್ನು ನಡೆಸೋಣವು, ಪೂರ್ಣೋಪಾಯರಲ್ಲಾದ - ಭಕ್ತಿ ಪ್ರಪತ್ತಿ ಮಾರ್ಗಗಳನ್ನವಲಂಬಿಸದೇ ಇರುವ, ಅಧಿಕಾರಿಗಳಿಗೆ. ಉಪಾಯಪೂರ್ತಿವಿರೋ

ವತ್ಪ್ರಸಾದನಮಾಯಿರುಕ್ಕುಮ್. ಪೂರ್ಣೋಪಾಯರುಕ್ಕು ಅತಿಲಂಘನ ಹೇತುಕಾಪ್ರೀತಿ ಪರಿಹಾರಪಡಿ ಪಣ್ಣಿಕ್ಕೊಂಡು ಭಗವತ್ಪ್ರೀಣನಮಾಯಿರುಕ್ಕುಮ್

ಧಿಯ್ಯೈ - ಉಪಾಯಾನುಷ್ಠಾನವನ್ನು **ಪೂರ್ತಿ**ಮಾಡುವುದಕ್ಕೆ ವಿರೋಧಿಯಾದ ಭಗವನ್ನಿಗ್ರಹವನ್ನು, **ಶಮಿಪ್ಪಿತ್ತುಕ್ಕೊಂಡು** - ಶಮನಮಾಡಿಕೊಂಡು **ಭಗವತ್ಪ್ರಸಾದನಮಾಯಿರುಕ್ಕುಮ್** - ಭಗವಂತನ ಪ್ರಸನ್ನತೆಗೆ ಕಾರಣಭೂತವಾದುದಾಗಿ ಆಗುತ್ತದೆ ಎಂದರೆ ಆತನ ಅನುಗ್ರಹವನ್ನು ಸಂಪಾದಿಸಿಕೊಡುವಂಥಾದ್ದಾಗುತ್ತದೆ. ಭಗವದನುಗ್ರಹವು ಪ್ರಾಪ್ತವಾಗುವದರಿಂದ ಉಪಾಯಪೂರ್ತಿಗೆ ಕಾರಣವಾಗುತ್ತದೆಂಬ ಭಾವವು. **ಪೂರ್ಣೋಪಾಯರುಕ್ಕು** - ಉಪಾಯಪೂರ್ತಿಯುಂಟಾಗಿ ಕೃತಕೃತ್ಯರಾದ ಪ್ರಪನ್ನರಿಗೂ ಮತ್ತು ಭಕ್ತಿಯೋಗಾಧಿಕಾರಿಗಳಿಗೂ, **ಅತಿಲಂಘನ ಹೇತುಕಾಪ್ರೀತಿ** - ಶಾಸ್ತ್ರೀಯಮಾರ್ಗವನ್ನುಲ್ಲಂಘಿಸುವದರಿಂದುಂಟಾಗುವ ಭಗವಂತನ ಅಪ್ರೀತಿಯು, **ಪರಿಹಾರಪಡಿಪಣ್ಣಿಕ್ಕೊಂಡು** - ಪ್ರಾಪ್ತವಾಗದ ಹಾಗೆ ಮಾಡಿಕೊಂಡು, **ಭಗವತ್ಪ್ರೀಣನಮಾಯಿರುಕ್ಕುಮ್**- ಭಗವಂತನಿಗೆ ಪ್ರೀತಿಯನ್ನುಂಟುಮಾಡುವಂಥಾದ್ದಾಗುವದು. ಈ ಶಾಸ್ತ್ರೀಯಾನುಸರಣವು ಪ್ರಪನ್ನನಲ್ಲದವನಿಗೆ ಭಗವತ್ಪ್ರಸನ್ನತೆಯನ್ನುಂಟುಮಾಡಿ ಉಪಾಯಾನುಷ್ಠಾನಕ್ಕೆ ಸಹಕಾರಿಯಾಗುತ್ತದೆ. ಪ್ರಪನ್ನನಾದವನಿಗೆ ಭಗವದಪ್ರೀತಿಯನ್ನುಂಟುಮಾಡದೆ, ಭಗವತ್ಪ್ರೀತಿಯನ್ನುಂಟುಮಾಡುತ್ತದೆ. ಹೀಗೆ ಒಂದೇವಿಧ ಪ್ರವೃತ್ತಿಯು ಒಂದು ಸಂದರ್ಭದಲ್ಲಿ ಪ್ರಸನ್ನತೆಯನ್ನೂ ಇನ್ನೊಂದು ಸಂದರ್ಭದಲ್ಲಿ ಭಗವತ್ಪ್ರೀಣನವನ್ನೂ ಹೀಗೆ ಭಿನ್ನಫಲಗಳನ್ನುಂಟುಮಾಡುತ್ತದೆಯೇ ಎಂದರೆ, ಬುಭುಕ್ಷುವು ಮಾಡುವ ಶರಣಾಗತಿಯಿಂದ ಐಹಿಕ ಫಲಪ್ರಾಪ್ತಿಯೂ, ಮುಮುಕ್ಷುವು ಮಾಡುವ ಶರಣಾಗತಿಯಿಂದ ಪರಮಪದಪ್ರಾಪ್ತಿಯೂ, ಹೀಗೆ ಭಿನ್ನಫಲಗಳು ಹೇಗೋ, ಹಾಗೆ ಎಂದು ಭಾವಿಸತಕ್ಕದ್ದು.

ಆಗಲಿ. “**ಅಹರಹಸ್ಸಂಧ್ಯಾಮುಪಾಸೀತ**” ಇತ್ಯಾದಿ ನಿತ್ಯನೈಮಿತ್ತಿಕಕರ್ಮಗಳಲ್ಲೇನೋ ಶಾಸ್ತ್ರೀಯನಿಯಮಾನುಸರಣವು ಉಭಯಾಧಿಕಾರಿಗಳಿಗೂ ಅತ್ಯಾವಶ್ಯಕವು. ಆದರೆ ಮಾಲಾಕರಣ, ದೀಪಾರೋಪಣ, ದ್ರಾವಿಡ ಪ್ರಬಂಧಾದಿ ಸೇವೆ ಇವೇ ಮೊದಲಾದವುಗಳನ್ನು ಮಾಡಿಯೇ ತೀರಬೇಕೆಂಬ ನಿಯಮವಿಲ್ಲದುದರಿಂದ ಇಲ್ಲಿಯೂ ಕೂಡ ಶಾಸ್ತ್ರೀಯ ನಿಯಮಾನುಸರಣವು ಆವಶ್ಯಕವೇ ಎಂಬ ಪ್ರಶ್ನೆಗೆ ಇಲ್ಲಿಯೂ ಕೂಡ ಆವಶ್ಯಕವೇ ಎಂದುಪದೇಶಿಸುತ್ತಾರೆ. ಹಾಗೆ ಸಿದ್ಧಾಂತರೂಪ

ಆಜ್ಞಾನುಜ್ಞಾ ವಿಭಾಗೇನ ದ್ವಿಧಾ ಶಾಸ್ತ್ರೀಯ ಪದ್ಧತಿಃ ।
ನಿಗ್ರಹಾನುದಯಾಯಾದ್ಯಾ ಪರಾ ತತ್ತತ್ಫಲಾಪ್ತಯೇ ॥ ೧೦ ॥
ಅನುಜ್ಞಯಾ ಪ್ರವೃತ್ತೇಽಪಿ ಕ್ರಮಕೋಪಾದಿಸಂಭವೇ ।
ಆಜ್ಞಾತಿಕ್ರಮದೋಷಸ್ಸ್ಯಾನ್ನಿಯಮೋಽತೋ ದುರತ್ಯಯಃ ॥ ೧೧ ॥

ದಲ್ಲಿ ವ್ಯವಸ್ಥೆ ಮಾಡಿ ಉಪದೇಶಿಸುವ ಸಂದರ್ಭಗಳಲ್ಲಿ ತಮ್ಮ ಕಾರಿಕೆಗಳನ್ನುಪಯೋಗಿಸುತ್ತಾರೆ. ಆದುದರಿಂದ ಶಂಕಾಪಿಶಾಚಿಗಳಿಗಾಗಲೂ ವಿವಾದಕ್ಕೆ ಆಸ್ಪದವಿಲ್ಲದೆಯೂ ಇರುವುದಕ್ಕಾಗಿ ಕಾರಿಕೆಗಳನ್ನನುಗ್ರಹಿಸುತ್ತಾರೆ.

ಶಾಸ್ತ್ರೀಯಪದ್ಧತಿಃ - ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಕೈಂಕರ್ಯರೂಪಮಾರ್ಗವು ಎಂದರೆ ಪ್ರವೃತ್ತಿಯು. ಶಾಸ್ತ್ರಧರ್ಮಗಳೆಲ್ಲಾ ಭಗವತ್ಕೈಂಕರ್ಯರೂಪವಾದುದರಿಂದ ಶಾಸ್ತ್ರೀಯಪದ್ಧತಿಃ ಎಂಬ ಪ್ರಯೋಗವು. **ಆಜ್ಞಾನುಜ್ಞಾವಿಭಾಗೇನ** - ಆಜ್ಞಾ ಕೈಂಕರ್ಯಗಳೆಂಬ ಅನುಜ್ಞಾ ಕೈಂಕರ್ಯಗಳೆಂಬ ವಿಭಾಗದಿಂದ, **ದ್ವಿಧಾ**-ಎರಡು ವಿಧವಾದುದು, ಆದ್ಯಾ-ಅವುಗಳಲ್ಲಿ ಮೊದಲನೆಯದಾದ ಆಜ್ಞಾಕೈಂಕರ್ಯರೂಪ ಶಾಸ್ತ್ರೀಯ ಪದ್ಧತಿಯು ಏತಕ್ಕೆಂದರೆ, **ನಿಗ್ರಹಾನುದಯಾಯ** - ಭಗವನ್ನಿಗ್ರಹವುಂಟಾಗದೇ ಇರುವುದಕ್ಕಾಗಿ; ಆಜ್ಞಾ ಕೈಂಕರ್ಯಗಳನ್ನು ತಪ್ಪಿಸಿದರೆ ಭಗವನ್ನಿಗ್ರಹವು ಪ್ರಾಪ್ತವಾಗುತ್ತದೆ. ಆದುದರಿಂದ ಭಗವನ್ನಿಗ್ರಹ ಉಂಟಾಗದಿರುವುದಕ್ಕಾಗಿ ಆಜ್ಞಾಕೈಂಕರ್ಯಗಳನ್ನು ಶಾಸ್ತ್ರೀಯ ಪದ್ಧತಿಯನ್ನನುಸರಿಸಿ ನಡೆಸುವುದು ಅತ್ಯಾವಶ್ಯಕವು; **ಪರಾ**-ಅಪರಾ ಎರಡನೆಯದಾದ ಅನುಜ್ಞಾ ಕೈಂಕರ್ಯರೂಪವಾದ ಶಾಸ್ತ್ರೀಯ ಪದ್ಧತಿಯು ಏತಕ್ಕೆಂದರೆ, **ತತ್ತತ್ಫಲಾಪ್ತಯೇ** - ಆಯಾ ಅನುಜ್ಞಾ ಕೈಂಕರ್ಯ ಪ್ರಕರಣದಲ್ಲಿ **ಹೇಳಲ್ಪಟ್ಟಿರುವ** ಭಗವಂತನ ಮುಖೋಲ್ಲಾಸವನ್ನುಂಟುಮಾಡುವ ಪ್ರಯೋಜನಕ್ಕಾಗಿ ಎಂದು ಭಾವಿಸತಕ್ಕದ್ದು.

ಪ್ರಪನ್ನನಿಗಾದರೋ ಭಗವನ್ಮುಖೋಲ್ಲಾಸಕರವಾದುವು ಅನುಜ್ಞಾಕೈಂಕರ್ಯಗಳು. ಇವುಗಳಿಗೆ ಶಾಸ್ತ್ರೀಯನಿಯಮವು ಆವಶ್ಯಕವೋ ಎಂದರೆ, ಆವಶ್ಯಕವೆಂದು ಮುಂದಿನ ಕಾರಿಕೆಯಿಂದ ತಿಳಿಸುತ್ತಾರೆ. ಇವುಗಳನ್ನೂ ಕೂಡ ತನ್ನ ಇಷ್ಟಾನುಸಾರ ನಡೆಸತಕ್ಕದ್ದಲ್ಲವು. ಶಾಸ್ತ್ರಾನುಸಾರವಾಗಿಯೇ ಅನುಷ್ಠಿಸತಕ್ಕವು. ಹಾಗೆ ನಡೆಸದೇ ಇದ್ದ ಪಕ್ಷದಲ್ಲಿ ಆಜ್ಞಾ ಕೈಂಕರ್ಯಗಳ ವಿಷಯದಲ್ಲಿ ಶಾಸ್ತ್ರೋಲ್ಲಂಘನಕ್ಕೆ ಯಾವ ದೋಷಗಳು ಹೇಳಲ್ಪಟ್ಟಿವೆಯೋ ಆ ದೋಷಗಳೇ ಈ ಅನುಜ್ಞಾ ಕೈಂಕರ್ಯಗಳ ಶಾಸ್ತ್ರಕ್ರಮೋಲ್ಲಂಘನದಿಂದ ಪ್ರಾಪ್ತವಾಗುತ್ತವೆಂದು ಹೇಳುತ್ತಾರೆ. **ಅನುಜ್ಞಯಾ** - ಕೈಂಕರ್ಯದ ಅನುಜ್ಞಾರೂಪದಿಂದ, **ಪ್ರವೃತ್ತೇಽಪಿ** - ಅನುಷ್ಠಾನ ಪ್ರವೃತ್ತಿಯಾದರೂ ಕೂಡ, **ಕ್ರಮಕೋಪಾದಿಸಂಭವೇ**. **ಕ್ರಮ** - ಶಾಸ್ತ್ರಕ್ರಮದ

ಕೋಪಾದಿ - ಭಂಗವೇ ಮೊದಲಾದವುಗಳ, **ಸಂಭವೇ** - ಪ್ರಾಪ್ತವಾಗಲಾಗಿ, ಇಲ್ಲಿ ಕೋಪಶಬ್ದದಿಂದ ಶಾಸ್ತ್ರೋಲ್ಲಂಘನವೂ, **ಆದಿ** ಶಬ್ದದಿಂದ ಶಾಸ್ತ್ರದಲ್ಲಿ ಹೇಳಿರುವ ದೇಶಕಾಲ ವಸ್ತು ಅವಸ್ಥೆಗಳಿಗೆ ವಿರೋಧವಾದವೂ ಹೇಳಲ್ಪಟ್ಟವು, **ಆಜ್ಞಾತಿಕ್ರಮದೋಷಸ್ಸ್ಯಾತ್** - ಆಜ್ಞಾಕೈಂಕರ್ಯಗಳನ್ನತಿಕ್ರಮಿಸುವ **ದೋಷವೇ** ಪ್ರಾಪ್ತವಾಗುತ್ತದೆ. **ಅತಃ** – ಆ ಕಾರಣದ ದೆಸೆಯಿಂದ, **ನಿಯಮಃ** - ಶಾಸ್ತ್ರೀಯ ನಿಯಮವು, **ದುರತ್ಯಯಃ** - ದಾಟಲಸಾಧ್ಯವು, ಎಂದರೆ ಮೀರಲು ಸಾಧ್ಯವಿಲ್ಲವೆಂಬ ಭಾವವು ದೇವರಿಗೆ ಮಾಲೆಯನ್ನು ರಚಿಸಿ ಸಮರ್ಪಿಸುವ ಕೈಂಕರ್ಯವು ಅನುಜ್ಞಾಕೈಂಕರ್ಯವಾದರೂ ಅಲ್ಲಿಯೂ ಕೂಡ ಶಾಸ್ತ್ರೀಯನಿಯಮವು ಆವಶ್ಯಕವು. ಕ್ರಮದಲ್ಲೂ ದೇಶ, ಕಾಲ, ವಸ್ತು, ಅವಸ್ಥೆಗಳಲ್ಲೂ ನಿಯಮವಿರಬೇಕು. ಮಾಲಾರಚನೆಯಲ್ಲಿ ಶುಚಿಸ್ಪೃಷ್ಟವಾದ ದೇಶದಲ್ಲಿದ್ದ ಹೂವುಗಳಾಗಿರಬೇಕು, ಕೆಂಪು ಬಣ್ಣಗಳ ಹೂವುಗಳಿಗಿಂತ ಹಳದಿ ಬಿಳಿಬಣ್ಣದ ಹೂವುಗಳು ಉತ್ತಮವಾದವು. ಮತ್ತು,

“ಉತ್ತಮಂ ಸ್ವಾರ್ಜಿತಂ ಪುಷ್ಪಂ ಮಧ್ಯಮಂ ವನ್ಯ ಮುಚ್ಯತೇ ।
ಅಧಮಂತು ಕ್ರಯಕ್ರೀತಂ ಪಾರಕ್ಯಮಧಮಾಧಮಂ ।
ಹಸ್ತಾನೀತಂ ಪಟಾನೀತಂ ಸ್ವಯಂ ಪತಿತ ಮೇವಚ”

ತನ್ನ ಉದ್ಯಾನವನದಲ್ಲಿ ಬೆಳೆಸಿದ ಪುಷ್ಪಾದಿಗಳು ಉತ್ತಮವಾದವು, ವನದಿಂದ ತಂದವು ಮಧ್ಯಮವು, ಕ್ರಯಕ್ಕೆ ಕೊಂಡವು ಅಧಮವು, ಇತರ ಕ್ಷೇತ್ರದಲ್ಲಿ ಬೆಳೆದವು, ಅಧಮಾಧಮವು. ಕೈಯಲ್ಲಿಯೂ ಬಟ್ಟೆಯಲ್ಲೂ ತಂದವೂ ತಾನೇ ಕೆಳಗೆ ಉದುರಿದವೂ, ಕೂಡ ಅಧಮಾಧಮವೇ.

ಕಾಲನಿಯಮಕ್ಕೆ ಉದಾಹರಣೆಯಾಗಿ

ಆರವಾರೇ ಚ ಶುಕ್ರೇ ಚಮನ್ವಾದಿಷು ಯುಗಾದಿಷು ।
ನಾಹರೇತ್ತುಲಸೀ ಪತ್ರಂ ಮಧ್ಯಾಹ್ನಾತ್ಪರತಸ್ತಥಾ ।

ಮಂಗಳವಾರ, ಶುಕ್ರವಾರ, ಮನ್ವಾದಿ ಯುಗಾದಿಯಲ್ಲೂ, ಮಧ್ಯಾಹ್ನದ ಮೇಲೂ ತುಲಸಿಯನ್ನು ಎತ್ತಕೂಡದು. ಹಾಗೆಯೇ, ಹುಣ್ಣಿಮೆ ಸಂಕ್ರಮಣ, ಅಮಾವಾಸ್ಯೆ ದ್ವಾದಶಿ, ರಾತ್ರಿ, ಸಂಧ್ಯಾ ಇವುಗಳಲ್ಲೂ ತುಲಸೀಹರಣವು ನಿಷೇಧಿಸಲ್ಪಟ್ಟಿರುತ್ತದೆ. ಮತ್ತು “ವರ್ಜ್ಯಂಪರ್ಯುಷಿತಂಪುಷ್ಪಂ ನವರ್ಜ್ಯಂ ತುಲಸೀದಳಂ” ಎಂಬುವದರಿಂದ ಪೂರ್ವದಲ್ಲಿ ಸಂಪಾದಿಸಿದ ಪುಷ್ಪವೂ ದೇವರ ಪೂಜೆಗೆ ಯೋಗ್ಯವಲ್ಲವು. ಶ್ರೀ ಹರಿಯು ತುಲಸಿ ಇಲ್ಲದ ಪೂಜೆಯನ್ನು ಒಲ್ಲನು ಎಂದು ಹೇಳಿರುವದರಿಂದಲೂ, ಮೇಲೆ ಹೇಳಿದ ದಿನಗಳಲ್ಲಿ ತುಲಸೀ ಹರಣವು ನಿಷೇಧಿಸಲ್ಪಟ್ಟಿರುವದರಿಂದ ಹಿಂದಿನ ದಿನಗಳಲ್ಲಿ ಎತ್ತಿದ ತುಲಸಿಯು ಮಾತ್ರ ಗ್ರಾಹ್ಯವು. ಹೀಗೆಯೇ ದೀಪಾರೋಪಣ, ಭಾಗವತಾರ್ಚನಾ ಭಗವದಾರಾಧನಾದಿಗಳಲ್ಲೂ ಶಾಸ್ತ್ರೀಯನಿಯ

"ಪ್ರತ್ಯವಾಯ ಪರೀಹಾರೇ ಫಲಾನ್ತರ ಸಮನ್ವಿತೇ ।
ತತ್ರ ಸಂವಲಿತಂ ಪ್ರಾಹುರಧಿಕಾರಂ ವಿಚಕ್ಷಣಾಃ" ॥ ೧೨ ॥

ಮವನ್ನು ಕ್ರಮದೇಶಕಾಲಾದಿಗಳ ವಿಷಯದಲ್ಲಿ ಅನುಸರಿಸತಕ್ಕದ್ದು. ಭಗವನ್ನಿವೇದನವನ್ನು ಮಾಡಿ ಅನಂತರ ಅಭಿಷೇಕಮಾಡಕೂಡದು. ಕ್ರಮವನ್ನವಲಂಬಿಸತಕ್ಕದ್ದು. ಪ್ರಶಸ್ತ ಪ್ರದೇಶವೂ ಉಚಿತಕಾಲವೂ ಭಗವದಾರಾಧನೆಗೆ ಅವಶ್ಯಕವು.

ಹೀಗೆ ಅನುಜ್ಞಾಕೈಂಕರ್ಯಗಳಲ್ಲೂ ಶಾಸ್ತ್ರನಿಯಮವು ಅವಶ್ಯಕವು ಎಂದು ಸ್ಥಾಪಿಸಲ್ಪಟ್ಟಿತು. ಆದರೆ ಭಗವದ್ಭಕ್ತಿಯಿಂದಲೂ ಭಗವನ್ಮುಖೋಲ್ಲಾಸಕ್ಕಾಗಿಯೂ ಅನುಷ್ಠಿಸತಕ್ಕವುಗಳು ಕೈಂಕರ್ಯಗಳು; ಆದುದರಿಂದ ಅನುಜ್ಞಾಕೈಂಕರ್ಯಗಳು ಭಗವನ್ಮುಖೋಲ್ಲಾಸಕ್ಕಾಗಿಯೇ ಮುಖ್ಯವಾಗಿ ಮಾಡಲ್ಪಡುವವರಿಂದ ಭಕ್ತಿಯಿಂದ ನಡಿಸಲ್ಪಡತಕ್ಕವು. ಆಜ್ಞಾಕೈಂಕರ್ಯಗಳಾದರೋ ಸದಾ ಅನುಷ್ಠಿಸಲ್ಪಡತಕ್ಕವುಗಳಾಗಿ. ಪ್ರತ್ಯವಾಯ ಪರಿಹಾರವೇ ಪ್ರಯೋಜನವಾಗಿ ಮಾಡತಕ್ಕವುಗಳಾಗಿ, ಪರಮಾತ್ಮನ ಆಜ್ಞೆಯೇ ಮುಖ್ಯೋದ್ದೇಶ್ಯವಾಗಿ ಅನುಷ್ಠಿಸತಕ್ಕವುಗಳು ಇಲ್ಲಿ ಅನುಜ್ಞಾಕೈಂಕರ್ಯಗಳ ಹಾಗೆ ಭಕ್ತಿಪುರಸ್ಸರವಾಗಿ ಅನುಷ್ಠಿಸತಕ್ಕವುಗಳಲ್ಲವು. ಹೀಗೆ ಭಕ್ತಿಪುರಸ್ಸರವಾದುವು ಯಾವಾಗ ಅಲ್ಲವೋ, ಆಗ ಅವುಗಳು ಕೈಂಕರ್ಯಗಳೆಂದೇ ಹೇಳಲಾಗುವುದಿಲ್ಲವು, ಇತ್ಯಾದಿ ಶಂಕೆಗಳಿಗೆ ಸಮಾಧಾನ ಹೇಳುವವರಾಗಿ, ಈ ನಿತ್ಯನೈಮಿತ್ತಿಕ ಕೈಂಕರ್ಯಗಳು ಪ್ರತ್ಯವಾಯ ಪರಿಹಾರದ ಜೊತೆಗೆ ಭಗವನ್ಮುಖೋಲ್ಲಾಸವನ್ನು ಉಂಟುಮಾಡತಕ್ಕವುಗಳೆಂದು "ಪ್ರತ್ಯವಾಯಪರೀಹಾರೇ" ಎಂಬ ಶ್ಲೋಕದ ಮೂಲಕ ಉಪದೇಶಿಸುತ್ತಾರೆ:-ಪ್ರತ್ಯವಾಯ ಪರೀಹಾರೇ – ಆಜ್ಞಾಕೈಂಕರ್ಯವು ಪ್ರಾಪ್ತಿವಿರೋಧಿಯಾದ ಭಗವನ್ನಿಗ್ರಹರೂಪದೋಷನಿವೃತ್ತಿಯುಂಟುಮಾಡುವುದಾಗಿಯೂ, ಫಲಾಂತರಸಮನ್ವಿತೇಸತಿ – ಬೇರೇ ಫಲದೊಂದಿಗೆ ಸೇರಿದುದಾಗಿಯೂ ಆಗಲಾಗಿ, ಬೇರೆ ಫಲವು ಯಾವುದೆಂದರೆ ಭಗವನ್ಮುಖೋಲ್ಲಾಸವು, ತತ್ರ – ಆ ಆಜ್ಞಾಕೈಂಕರ್ಯದಲ್ಲಿ ಅಧಿಕಾರಂ – ಅಧಿಕಾರವು, ಸಂವಲಿತಂ – ಎರಡೂ ಸೇರಿದುದಾಗಿ, ವಿಚಕ್ಷಣಾಃ-ವಿದ್ವಾಂಸರು, ಪ್ರಾಹುಃ – ಹೇಳುತ್ತಾರೆ. ಶಾಸ್ತ್ರಜ್ಞಾನವುಳ್ಳ ಮಹಾಪಂಡಿತರು ನಿತ್ಯನೈಮಿತ್ತಿಕ ಕೈಂಕರ್ಯಗಳು ಭಗವದಾಜ್ಞಾರೂಪವಾದವುಗಳಾದುದರಿಂದ ಪ್ರಾಪ್ತಿವಿರೋಧಿಯನ್ನು ಹೋಗಲಾಡಿಸುವಗಳೆಂದೂ ಮತ್ತು ಭಗವತ್ಪ್ರೀತಿಯನ್ನುಂಟುಮಾಡುವವಗಳೆಂದೂ, ಹೀಗೆ ಎರಡು ವಿಧವಾದ ಪ್ರಯೋಜನವುಳ್ಳವುಗಳೆಂದೂ ಹೇಳುತ್ತಾರೆಂಬಭಿಪ್ರಾಯವು ಹೀಗೆ ಒಂದೇಸಲ ಕರ್ಮಾನುಷ್ಠಾನದಿಂದ ಎರಡು ಫಲಗಳೂ ಪ್ರಾಪ್ತವಾಗುತ್ತವೆ. ಒಂದೊಂದು ಫಲಕ್ಕೆ ಬೇರೆಬೇರೆಯಾಗಿ ಎರಡುಸಲ ಕರ್ಮಾನುಷ್ಠಾನ ಮಾಡಬೇಕಾ

ನಿತ್ಯಕಾಮ್ಯ ಸ್ವರೂಪೈಕ್ಯೇ ವಿನಿಯೋಗ ಪೃಥಕ್ತ್ವತಃ ।
ಫಲಾರ್ಥಂ ಕ್ರಿಯಮಾಣೇಪಿ ನಿತ್ಯಂ ಭವತಿ ತಂತ್ರತಃ ॥ ೧೩ ॥

ಧವಿಲ್ಲವು, ಹೇಗೆಂದರೆ :-ಅಗ್ನಿಹೋತ್ರಾದಿಗಳಿಗೆ ಯಾವಜ್ಜೀವವೂ ನಡೆಸತಕ್ಕ ಅಧಿಕಾರವೂ ಸ್ವರ್ಗಕಾಮನಾರೂಪ ಅಧಿಕಾರವೂ ಸಹ ಹೇಗೆ ಉಂಟಾಗುತ್ತದೋ ಹಾಗೆ ಎಂಬ ಭಾವವು, ಈ ಅಭಿಪ್ರಾಯವು "**ಸರ್ವಥಾಪಿತ ಏವೋಭಯಲಿಂಗಾತ್**" ಎಂಬ (೩.೪.೩೪) ಎಂಬ ಬ್ರಹ್ಮಸೂತ್ರವಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಇದರರ್ಥವೇನೆಂದರೆ :-ಎರಡು ವಿಧ ವಿನಿಯೋಗವಿದ್ದರೂ ಕರ್ಮಸ್ವರೂಪ ಒಂದೇಯಾಗಿ ತೋರಿಬರುವದರಿಂದ ಏನೂ ವಿರೋಧವಿಲ್ಲವು. ಒಂದೇ ಕರ್ಮಾನುಷ್ಠಾನದಿಂದ ಎರಡುವಿಧ ಅಧಿಕಾರ ಪ್ರಾಪ್ತಿಯೇನೂ ವಿರೋಧವಾದುದಲ್ಲವೆಂಬ ಭಾವವು. ಮತ್ತು ಜಾತೇಷ್ಟಿಯು ನೈಮಿತ್ತಿಕ ಕರ್ಮವು, ಅದನ್ನನುಷ್ಠಿಸದಿದ್ದರೆ ಭಗವನ್ನಿಗ್ರಹವು ಪ್ರಾಪ್ತವಾಗುತ್ತದೆ. ಅನುಷ್ಠಿಸುವದರಿಂದ ಭಗವನ್ನಿಗ್ರಹ ನಿವೃತ್ತಿಯೂ ಮತ್ತು ಪುತ್ರನಿಗೆ ಸಂಸ್ಕಾರದ್ವಾರಾ ಪರಿಶುದ್ಧಿಯೂ ಹೇಗೆ ಎರಡೂ ಉಂಟಾಗುತ್ತದೆಯೋ ಹಾಗೆ ಎಂಬ ತಾತ್ಪರ್ಯವು.

ಹೀಗೆ ನಿತ್ಯಕರ್ಮಾನುಷ್ಠಾನಗಳಲ್ಲಿ ಪ್ರಾಪ್ತಿವಿರೋಧಿಶಮನವೂ ಭಗವತ್ಪ್ರೀಣನವೂ ಉಂಟಾಗುತ್ತದೆಂದು ಹೇಳಲ್ಪಟ್ಟಿತು. ಸುಪ್ರೀತನಾದ ಜಗದೀಶ್ವರನು ಕರ್ಮಾಧಿಕಾರಿಯ ಮನೋರಥವನ್ನು ಸಲ್ಲಿಸದೇ ಇರನು. ಇದರಿಂದ ನಿತ್ಯನೈಮಿತ್ತಿಕಗಳನ್ನು ಅನುಷ್ಠಿಸುವವನು ತನ್ನ ಕಾಮ್ಯಫಲವನ್ನೂ ಸಹ ಹೊಂದುವನೆಂದು ಇದರಿಂದ ಸಿದ್ಧಪಟ್ಟಿತು. ಹೀಗೆ ಸಂವಲಿತಾಧಿಕಾರತ್ವವಿರುವದರಿಂದ ಕಾಮ್ಯಾರ್ಥವಾಗಿ ನಿತ್ಯನೈಮಿತ್ತಿಕಾನುಷ್ಠಾನ ಮಾಡಿದರೂ ನಿತ್ಯಕರ್ಮಗಳಿಂದಾಗುವ ಪ್ರಾಪ್ತಿವಿರೋಧನಿರಸನವು ಪ್ರಾಪ್ತವಾಗುತ್ತದೆಂಬುವದು ಸ್ಥಾಪಿಸಲ್ಪಟ್ಟಿತು. ಆದರೆ ಸಂವಲಿತಾಧಿಕಾರತ್ವವೆಂದು ಹೇಳಿದುದರಿಂದ ನಿತ್ಯವೆಂಬಭಿಪ್ರಾಯದಿಂದ ಅನುಷ್ಠಿಸಿದರೂ ಕಾಮ್ಯಫಲಸಿದ್ಧಿಯುಂಟೋ ಎಂದರೆ ಅದಕ್ಕೆ ಮುಂದಿನ ಶ್ಲೋಕದಿಂದ ಉತ್ತರವನ್ನನುಗ್ರಹಿಸುತ್ತಾರೆ.

ಅರ್ಥ - **ನಿತ್ಯಕಾಮ್ಯಸ್ವರೂಪೈಕ್ಯೇ** - ಮೇಲೆ ಹೇಳಿದ ರೀತಿಯಲ್ಲಿ ನಿತ್ಯವಾಗಿಯೂ, ಕಾಮ್ಯವಾಗಿಯೂ ಇರುವ ಕರ್ಮಗಳ ಸ್ವರೂಪವು ಒಂದೇಯಾಗಿ ಪ್ರಮಾಣಸಿದ್ಧವಾಗಿರಲಾಗಿ, **ವಿನಿಯೋಗಪೃಥಕ್ತ್ವತಃ** - ಪ್ರತ್ಯವಾಯ ಪರಿಹಾರಕ್ಕಾಗಿಯೂ, ಕಾಮ್ಯಫಲಕ್ಕಾಗಿಯೂ, ಹೀಗೆ ಪ್ರಯೋಜನವು ಬೇರೆಬೇರೆಯಾಗಿರುವದರಿಂದ, **ಫಲಾರ್ಥಂಕ್ರಿಯಮಾಣೇಪಿ** - ಕಾಮ್ಯಫಲಗಳಿಗಾಗಿ

ಮಾಡಲ್ಪಟ್ಟರೂ ಕೂಡ, ಸಂಧ್ಯಾವಂದನವೇ ಮೊದಲಾದವುಗಳು, **ತಂತ್ರತಃ** - ಎಂದರೆ ಕಾಮ್ಯಫಲಕ್ಕಾಗಿ ಅನುಷ್ಠಿಸಿದ ಕರ್ಮಪ್ರಕ್ರಿಯೆ ಮೂಲಕವಾಗಿಯೇ, ತಂತ್ರದ ಮೂಲಕ, **ನಿತ್ಯಂ ಭವತಿ** - ನಿತ್ಯವಾದ ಆಜ್ಞಾಕೈಂಕರ್ಯವೂ ಸಿದ್ಧಿಸುತ್ತದೆ, ಎಂದರೆ, ಕಾಮ್ಯಫಲಾರ್ಥವಾಗಿ ಮಾಡಿದ ಒಂದು ಸಲದ ಕರ್ಮಾನುಷ್ಠಾನದಿಂದಲೇ ಆಜ್ಞಾಕೈಂಕರ್ಯವೂ ಆಗುತ್ತದೆಂಬ ಭಾವವು. ಕಾಮ್ಯಫಲಕ್ಕಾಗಿ ಒಂದು ಅನುಷ್ಠಾನವೂ, ನಿತ್ಯಕ್ಕಾಗಿ ಇನ್ನೊಂದು ಸಲ ಅನುಷ್ಠಾನವೂ ಹೀಗೆ ಎರಡು ಸಲ ಅನುಷ್ಠಿಸಬೇಕೆಂಬುವದಿಲ್ಲವು. ಕಾಮ್ಯಫಲೋದ್ದೇಶ್ಯವಾಗಿ ಒಂದು ಸಲ ಅನುಷ್ಠಿಸಿದರೂ ಅದರೊಂದಿಗೆ ನಿತ್ಯಕರ್ಮಾನುಷ್ಠಾನವೂ ಲಭಿಸಿ ಪ್ರತ್ಯವಾಯ ಪರೀಹಾರವೂ ಪ್ರಾಪ್ತವಾಗುತ್ತದೆಂಬ ಭಾವವು. ಕೃತಕೃತ್ಯನಾದ ಪ್ರಪನ್ನನಿಗೆ ಕಾಮ್ಯಫಲವು ಯಾವುದೂ ಬೇಕಿಲ್ಲವಾದುದರಿಂದ ಭಗವನ್ಮುಖೋಲ್ಲಾಸವೇ ಕಾಮ್ಯಫಲವಾಗುತ್ತದೆ. ಹಾಗೆ **ಭಗವತ್ಪ್ರೀತ್ಯರ್ಥಂ** ಎಂದು ಸಙ್ಕಲ್ಪಿಸಿ ಅನುಷ್ಠಿಸಿದರೂ ನಿತ್ಯವನ್ನನುಷ್ಠಿಸಿದ ಫಲವಾದ ಪ್ರತ್ಯವಾಯ ಪರೀಹಾರವೂ ಲಭಿಸುತ್ತದೆ ಎಂಬ ಭಾವವೂ ತೋರಿಬರುತ್ತದೆ. ಜ್ಞಾನಿಯಾದ ಮೋಕ್ಷಾರ್ಥಿಯು ಈ ಅಭಿಪ್ರಾಯವನ್ನರಿತವನಾದ ಪ್ರಯುಕ್ತ, ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳಲ್ಲಿಲ್ಲಾ "**ಶ್ರೀಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ**" ಎಂದು ಸಙ್ಕಲ್ಪವನ್ನು ಹೇಳುವದು ಸರ್ವಸಮಂಜಸವಾದ ವಿಷಯವಾಗಿರುತ್ತದೆ. ಕಾಮ್ಯಫಲಗಳು ಯಾವುವೂ ಅಂಟದಿರುವದಕ್ಕಾಗಿ ಸಾತ್ವಿಕತ್ಯಾಗವನ್ನೂ ಹೇಳತಕ್ಕದ್ದಾಗಿರುತ್ತದೆ.

ಆದರೆ ನಿತ್ಯವಾಗಿ ಅನುಷ್ಠಿಸಿದರೆ, ಕಾಮ್ಯಫಲವೂ ಆ ಕರ್ಮಕ್ಕೆ ಸಂಬಂಧಿಸಿದ್ದರೆ, ಅದೂ ಪ್ರಾಪ್ತವಾಗುತ್ತದೆಯೇ? ಎಂದರೆ ಅದು ಪ್ರಾಪ್ತವಾಗುವದಿಲ್ಲವು. ಕಾಮ್ಯಫಲಕ್ಕಾಗಿ ಅನುಷ್ಠಿಸಿದರೂ ನಿತ್ಯವೂ ಸಿದ್ಧಿಸುವದೂ, ನಿತ್ಯಕ್ಕಾಗಿ ಅನುಷ್ಠಿಸಿದರೆ ಕಾಮ್ಯಫಲಸಿದ್ಧಿಸದಿರುವದೂ ಹೀಗೆಲ್ಲಾದರೂ ಉಂಟೋ? ಎಂದರೆ, ಹೀಗೆ ವ್ಯತ್ಯಾಸ ಉಂಟಾಗಲು ಕಾರಣಗಳುಂಟು. ಹೇಗೆಂದರೆ:--ನಿತ್ಯವಾಗಿ ಅನುಷ್ಠಿಸುವದಕ್ಕೆ ಅಧಿಕಾರವು ಆ ಕಾಲದಲ್ಲಿ ಪರಿಶುದ್ಧನಾಗಿ ಜೀವಿಸಿರುವಿಕೆಯು. ಕಾಮ್ಯವಾಗಿ ಅನುಷ್ಠಿಸುವದಕ್ಕೆ ಅಧಿಕಾರವು ಆಯಾ ಫಲಗಳಲ್ಲಿ ಆಶೆಯು. ಕಾಮ್ಯವಾಗಿ ಅನುಷ್ಠಿಸುವಾಗಲೂ ಪರಿಶುದ್ಧವಾಗಿ ಜೀವಿಸಿರುವಿಕೆ ಎಂಬಧಿಕಾರವೂ ಇರುವದರಿಂದ ಕಾಮ್ಯದೊಂದಿಗೆ ನಿತ್ಯದಸಿದ್ಧಿಯು. ನಿತ್ಯವಾಗಿ ಅನುಷ್ಠಿಸುವಾಗ ಕಾಮ್ಯಫಲದಲ್ಲಿ ಆಶಾರೂಪ ಅಧಿಕಾರವು ಇಲ್ಲದಿರುವದರಿಂದ ಕಾಮ್ಯಸಿದ್ಧಿಯಿಲ್ಲವು. ಆದರೆ ಕಾಮ್ಯರೂಪದಲ್ಲಿ ಅನುಷ್ಠಿಸುವಾಗಲೂ ಪ್ರತ್ಯವಾಯ ಪರೀಹಾರವಾಗಬೇಕೆಂಬಾಶೆಯು ಇಲ್ಲವಲ್ಲಾ, ಹೀಗಿರುವಾಗ ನಿತ್ಯತ್ವ ಸಿದ್ಧಿ ತಾನೇ ಹೇಗೆ ಉಂಟಾಗುತ್ತ

ಅನುಜ್ಞಾ ಮಾತ್ರ ಸಿದ್ಧೇಷು ಕೈಂಕರ್ಯೇಷು ವಿಚಕ್ಷಣೈಃ ।
ಅಕೃತೌ ತತ್ಫಲಾ ಲಾಭೋ ನ ತು ದೋಷ ಇತೀರಿತಂ ॥ ೧೪ ॥

ದೆಂಬ ಆಕ್ಷೇಪವು ಸರಿಯಾದುದಲ್ಲವು. ಏಕೆಂದರೆ ಪ್ರತ್ಯವಾಯ ಪರಿಹಾರ ಫಲಾಪೇಕ್ಷೆ ಇಲ್ಲದಿದ್ದರೂ, ಆಗಲೂ ಪರಿಶುದ್ಧವಾಗಿ ಜೀವಿಸಿರುವಿಕೆ ಎಂಬಧಿಕಾರವು ಇರುವದರಿಂದ ನಿತ್ಯತ್ವಸಿದ್ಧಿಯುಂಟು ಎಂದು ತಿಳಿಯತಕ್ಕದ್ದು.

ಅವತಾರಿಕೆ ಆಜ್ಞಾಕೈಂಕರ್ಯಗಳನ್ನೇನೋ ಮಾಡಿಯೇತೀರಬೇಕೆಂದೂ ಮಾಡಿದಿದ್ದರೆ ಪ್ರತ್ಯವಾಯವೆಂದೂ ಹೇಳಲ್ಪಟ್ಟಿತು. ಕೃತಕೃತ್ಯನಾದ ಪ್ರಪನ್ನನ ಸ್ವರೂಪಕ್ಕನುಗುಣವಾದ ಕೆಲವು ಅನುಜ್ಞಾಕೈಂಕರ್ಯಗಳುಪದೇಶಿಸಲ್ಪಟ್ಟವು. ಅವುಗಳಲ್ಲದೆ ಇನ್ನೂ ಇತರ ಅನುಜ್ಞಾಕೈಂಕರ್ಯಗಳುಂಟು. ಆಜ್ಞಾ ಮತ್ತು ಅನುಜ್ಞಾ ಎರಡೂ ಕೈಂಕರ್ಯಗಳೆನಿಸುವದರಲ್ಲಿ ಏನೂ ವಿಶೇಷವಿಲ್ಲವು. ಇವೆರಡಕ್ಕೂ ಶಾಸ್ತ್ರೀಯನಿಯಮನಾನುಸಾರವಾಗಿ ಅನುಷ್ಠಾನದಲ್ಲಿ ಏನೊಂದೂ ವ್ಯತ್ಯಾಸವಿಲ್ಲವು. ಹೀಗಿರುವಾಗ ಆಜ್ಞಾಕೈಂಕರ್ಯದ ಅನನುಷ್ಠಾನದಲ್ಲಿ ದೋಷ ಹೇಗೋ, ಹಾಗೆಯೇ ಅನುಜ್ಞಾ ಕೈಂಕರ್ಯದ ಅನನುಷ್ಠಾನದಲ್ಲೂ ದೋಷವೋ ಎಂದರೆ, **"ತತ್ತತ್ಫಲಾಪ್ತಯೇ"** ಪಶುಪುತ್ರ ಸ್ವರ್ಗಾದಿ ಫಲಗಳಿಗಾಗಿ ಮಾಡತಕ್ಕವುಗಳಾದುದರಿಂದ ಅಂತಹ ಫಲಗಳು ಮುಮುಕ್ಷುವಿಗೆ ಅಪೇಕ್ಷಿತಗಳಲ್ಲವಾದುದರಿಂದ ಪ್ರತ್ಯವಾಯವಿಲ್ಲವು. ಭಗವನ್ಮುಖೋಲ್ಲಾಸಕ್ಕಾಗಿ ಬೇಕಾದರೆ ಮಾಡಬಹುದು. ಬಿಟ್ಟರೆ ಪ್ರತ್ಯವಾಯವಿಲ್ಲವಾಗಿ, ಸ್ವಾಮಿಯು ಅವುಗಳನ್ನು ಅಂಗೀಕರಿಸಿರುವದರಿಂದಲೇ ಅವುಗಳು ಅನುಜ್ಞಾಕೈಙ್ಕರ್ಯಗಳೆಂದು ಹೇಳಿಸಿಕೊಂಡಿವೆ ಎಂದುಪದೇಶಿಸುತ್ತಾರೆ.

ಅನುಜ್ಞಾಮಾತ್ರಸಿದ್ಧೇಷು - ಅನುಜ್ಞಾ ಮಾತ್ರವೇ ಎಂದು ಶಾಸ್ತ್ರಸಿದ್ಧಗಳಾದ, **ಕೈಙ್ಕರ್ಯೇಷು** - ಕೈಂಕರ್ಯಗಳ ವಿಷಯದಲ್ಲಿ, **ಅಕೃತೌ** - ಮಾಡಲ್ಪಡದೇ ಹೋದರೆ, **ತತ್ಫಲಾ ಲಾಭಃ** ಆಯಾ ಫಲಗಳ ಅಲಾಭವೆಂದರೆ ಪ್ರಾಪ್ತಿ ಇಲ್ಲದೇ ಹೋಗೋಣ ಮಾತ್ರವೇ, **ನ ತು ದೋಷಃ** - ದೋಷವೇನೂ ಇಲ್ಲವು, ಆಜ್ಞಾಕೈಙ್ಕರ್ಯವನ್ನು ಮಾಡದೇ ಇದ್ದರೆ ಹೇಗೆ ದೋಷಪ್ರಾಪ್ತಿಯೋ, ಹಾಗೆ ಅನುಜ್ಞಾ ಕೈಙ್ಕರ್ಯವನ್ನು ಮಾಡದಿದ್ದರೆ ದೋಷವೇನೂ ಇಲ್ಲವೆಂಬ ಭಾವವು. ಯಜ್ಞದಾನತಪಸ್ತೀರ್ಥಗಳೆಲ್ಲಾ ಅನುಜ್ಞಾಕೈಂಕರ್ಯಗಳು. ಇವುಗಳನ್ನನುಷ್ಠಿಸದಿದ್ದರೆ ಪ್ರತ್ಯವಾಯವಿಲ್ಲವು ಎಂಬರ್ಥವು. ದಾನಮಾಡಿದರೆ ಸರ್ವೇಶ್ವರನು ಸುಪ್ರೀತನಾಗುವನು. ಮಾಡದಿದ್ದರೆ ಪ್ರತ್ಯವಾಯವಿಲ್ಲವು ಎಂಬ ತಾತ್ಪರ್ಯವು ಹಾಗೆಯೇ ಇತರ ಅನುಜ್ಞಾಕೈಂಕರ್ಯಗಳಲ್ಲೂ ಊಹಿಸಬಹುದು ಶ್ರೀನಿವಾಸನಿಗೆ ಮಾಲಾಕೈಙ್ಕರ್ಯ

ಮಾಡುವದರಿಂದ ಆತನು ಸುಪ್ರೀತನಾಗುವನು. ಮಾಡದೇಹೋದರೆ ದೋಷವಿಲ್ಲವು. ಆದರೆ ಪ್ರಪನ್ನನಿಗೆ ಸರ್ವೇಶ್ವರನ ಮುಖೋಲ್ಲಾಸವನ್ನು ಅನವರತ ಸಂಪಾದಿಸಿಕೊಳ್ಳುವದು ಸ್ವರೂಪವಾದುದರಿಂದ, ಅಂತಹ ಅನುಜ್ಞಾಕೈಙ್ಕರ್ಯಗಳನ್ನೆಸಗುವದು ಯುಕ್ತವಾದುದು. ಮುಮುಕ್ಷುವು ಈ ಕೈಙ್ಕರ್ಯಗಳನ್ನು ಬಂಧಕ ಕಾಮ್ಯ ಫಲಕಾಮನೆಯಿಂದ ಎಂದಿಗೂ ಅನುಷ್ಠಿಸಕೂಡದು. ಸಮಸ್ತ ಆಜ್ಞಾಕೈಙ್ಕರ್ಯಗಳನ್ನೇಯಾಗಲಿ ಅನುಜ್ಞಾ ಕೈಙ್ಕರ್ಯಗಳನ್ನೇಯಾಗಲಿ ಅನುಷ್ಠಿಸುವಾಗ ಸಾತ್ವಿಕತ್ಯಾಗಪೂರ್ವಕ ಅನುಷ್ಠಿಸತಕ್ಕವುಗಳಾಗಿವೆ ಈ ಶ್ಲೋಕದಲ್ಲಿ ಅನುಜ್ಞಾಮಾತ್ರವೆಂದು ಪ್ರಯೋಗಿಸಿರುವದರಿಂದ ಆಜ್ಞಾಕೈಙ್ಕರ್ಯವೆಂದಿಗೂ ಅಲ್ಲವೆಂಬ ತಾತ್ಪರ್ಯವು. ನಿತ್ಯನೈಮಿತ್ತಿಕಗಳು ಈ ಶ್ಲೋಕದಲ್ಲಿ ಹೇಳಲ್ಪಡಲಿಲ್ಲವು, ಎಂದು ತಿಳಿಯತಕ್ಕದ್ದು. ಇತಿ - ಈ ಪ್ರಕಾರವಾಗಿ, ವಿಚಕ್ಷಣೈಃ - ಪಂಡಿತರುಗಳಿಂದ ಶಾಸ್ತ್ರಗಳನ್ನು ಚನ್ನಾಗಿ ತಿಳಿದ ವಿದ್ವಾಂಸರುಗಳಿಂದ, ಈರಿತಂ - ಹೇಳಲ್ಪಟ್ಟಿತು ತಾವು ಮಾತ್ರವೇ ಹಾಗೆ ಅಭಿಪ್ರಾಯಪಡಲಿಲ್ಲವು, ಶಾಸ್ತ್ರಜ್ಞರ ಅಭಿಪ್ರಾಯವೂ ಹಾಗೆಯೇ ಎಂದು ತಿಳಿಸುತ್ತಾರೆ. ಶಾಸ್ತ್ರಪಙ್ಕ್ತಿಗಳಿಗನುಸಾರವಾಗಿಯೇ ತಾವೂ ಹೇಳುವದೇ ವಿನಾ ಅದನ್ನುಬಿಟ್ಟು ಯುಕ್ತಿವಾದವನ್ನು ಎಂದಿಗೂ ಹೇಳುವರಲ್ಲವೆಂಬಭಿಪ್ರಾಯವೂ ಸಹ ಗರ್ಭಿತವು.

ಈಗ ಸ್ವಾಮಿಗಳವರು ಉಪದೇಶಿಸಿದ ಐದು ಕಾರಿಕೆಗಳ ಸಂಗ್ರಹಾಭಿಪ್ರಾಯವೇನೆಂದರೆ :-ಕೈಙ್ಕರ್ಯಗಳು ಆಜ್ಞಾಕೈಙ್ಕರ್ಯಗಳೆಂದೂ ಅನುಜ್ಞಾಕೈಙ್ಕರ್ಯಗಳೆಂದೂ ಎರಡು ವಿಧವು. ಸಂಧ್ಯಾವಂದನ, ದೇವರ್ಷಿಪಿತೃತರ್ಪಣ, ಬ್ರಹ್ಮಯಜ್ಞ, ಮಾಧ್ಯಾಹ್ನಿಕ, ವೈಶ್ವದೇವಾದಿಗಳು ನಿತ್ಯಗಳು. ದರ್ಶಾದಿ ಶ್ರಾದ್ಧ ಮೊದಲಾದವು ನೈಮಿತ್ತಿಕಗಳು. ದಿವ್ಯದೇಶಯಾತ್ರೆ, ದೀಪಾರೋಪಣ ಭಾಗವತಕೈಙ್ಕರ್ಯಗಳೂ, ಕಾಮ್ಯಾದಿಗಳೂ ಸಹ ಅನುಜ್ಞಾಕೈಙ್ಕರ್ಯಗಳು. ಆಜ್ಞಾಕೈಙ್ಕರ್ಯಗಳನ್ನು ಶಾಸ್ತ್ರನಿಯಮಾನುಸಾರ ನಡೆಸತಕ್ಕದ್ದು. ನಡೆಸದೆ ಇದ್ದರೆ ಪ್ರತ್ಯವಾಯ ಉಂಟು. ಆದುದರಿಂದ ಭಗವದಾಜ್ಞೆಯೆಂದು ಭಾವಿಸಿ, ಭಗವತ್ಪ್ರೀತ್ಯರ್ಥವಾಗಿ ವಿಧಿಪ್ರೋಕ್ತವಾದ ಕಾಲಗಳಲ್ಲಿ ಸರಿಯಾಗಿ ಶಾಸ್ತ್ರೀಯನಿಯಮನ್ನನುಸರಿಸಿ ನಡೆಸತಕ್ಕದ್ದು. ಇವುಗಳನ್ನನುಷ್ಠಿಸಿದುದರಿಂದುಂಟಾಗುವ ಫಲವು ಪ್ರಪನ್ನನಾದ ಕೃತಕೃತ್ಯನಿಗೆ ಅಪೇಕ್ಷಿತವಲ್ಲವಾದುದರಿಂದ ಸಾತ್ವಿಕತ್ಯಾಗವನ್ನು ಹೇಳತಕ್ಕದ್ದು. ಈತನು ಆಜ್ಞಾಕೈಙ್ಕರ್ಯವೆಂಬ ಭಾವನೆಯಿಂದ ನಡೆಸುವದರಿಂದ ಫಲಪ್ರಾಪ್ತಿಯೂ ಈತನು ಅಪೇಕ್ಷಿಸದಿದ್ದರೂ ಉಂಟಾಗುತ್ತದೆ ಎಂಬುವದಿಲ್ಲವು. ಪ್ರಪನ್ನನಲ್ಲದವನೂ ಫಲಗಳಿಗಾಗಿ ಇವುಗಳನ್ನನುಷ್ಠಿಸಿದರೂ ನಿತ್ಯವೆಂದು ಅನುಷ್ಠಿಸುವದರಿಂದುಂಟಾಗುವ ಭಗವನ್ನಿಗ್ರಹದೋಷವು ಮಾತ್ರ ಪರಿಹಾರವಾಗುವುದು.

ನಿನ್ರು ನಮುನ್ಪಡೈವಾನೋರ್ ನಿಲೈಯಿಲ್ ನಿಲಮುಳನ್ದಾರ್ ।
ನನ್ರಿದು ತೀಯದಿದೆನ್ರು ನಡತ್ತಿಯ ನಾರ್ ಮರೈಯಾಲ್

ಅನುಜ್ಞಾಕೈಙ್ಕರ್ಯಗಳನ್ನು ನಡೆಸಲೇಬೇಕೆಂಬ ಆವಶ್ಯಕತೆ ಇಲ್ಲವು. ನಡೆಸದಿರುವದರಿಂದ ದೋಷವಿಲ್ಲವು. ಆಯಾ ಫಲಗಳೂ ಇಲ್ಲವು. ಕೃತಕೃತ್ಯನಾದ ಪ್ರಪನ್ನನು ಫಲಕಾಮನೆಯಿಲ್ಲದೆ ನಡಿಸಿದರೂ ಭಗವಂತನು ಸುಪ್ರೀತನಾಗುವನು. ಕೃತಕೃತ್ಯನಲ್ಲದವನು ಫಲಕ್ಕಾಗಿ ಇವುಗಳನ್ನನುಷ್ಠಿಸಿದರೊ ಆಯಾ ಫಲಗಳು ಪ್ರಾಪ್ತವಾಗುವವು. ಭಗವಂತನು ಹಾಗೂ ಸುಪ್ರೀತನಾಗುವನು. ಆದರೆ ಈ ಅನುಜ್ಞಾಕೈಙ್ಕರ್ಯಗಳನ್ನು ಯಾವಾಗ ಭಗವತ್ಪ್ರೀತಿಗಾಗಲಿ ಫಲಕ್ಕಾಗಲಿ ಮಾಡಲು ಪಕ್ರಮಿಸಿದನೋ, ಆಗಲೂ ಅವುಗಳನ್ನು ಶಾಸ್ತ್ರೀಯನಿಯಮನಾನುಸಾರವಾಗಿ ಮಾಡತಕ್ಕದ್ದು. ಹಾಗೆ ಮಾಡದಿದ್ದರೆ ಆಜ್ಞಾಕೈಙ್ಕರ್ಯಗಳನ್ನು ತ್ಯಜಿಸಿದರೆ ಹೇಗೆ ದೋಷವೋ ಹಾಗೆಯೇ ದೋಷಪ್ರಾಪ್ತವಾಗುತ್ತದೆ. ಇದರಿಂದ ಈ ಲೋಕದಲ್ಲಿರುವತನಕ ಪ್ರಪನ್ನನೇ ಆಗಲಿ ಇತರನೇ ಆಗಲಿ ಈತನು ಮಾಡುವ ಎಲ್ಲಾ ಕೈಂಕರ್ಯಗಳನ್ನೂ ಶಾಸ್ತ್ರೀಯನಿಯಮನಾನುಸಾರ ನಡೆಸಬೇಕೆಂಬುವದು ಸ್ಥಾಪಿಸಲ್ಪಟ್ಟಿತು ಇದು ಏಕೆಂದರೆ ಈ ಜೀವಾತ್ಮನಿಗೆ ಪ್ರಕೃತಿಸಂಬಂಧವೂ ತತ್ಪ್ರಯುಕ್ತ ಕರ್ಮಾವಿದ್ಯಾದಿಗಳಿಂದುಂಟಾಗುವ ಜ್ಞಾನಸಂಕೋಚವಿರುವದರಿಂದ ಸರ್ವೇಶ್ವರನ ನಿರ್ಹೇತುಕ ಕೃಪೆಯಿಂದ ಕೊಡಲ್ಪಟ್ಟ ಶಾಸ್ತ್ರದೀಪದಿಂದಲೇ ಅಜ್ಞಾನವೆಂಬ ತಮಸ್ಸನ್ನು ಹೋಗಲಾಡಿಸಿಕೊಂಡು ಆಶಾಸ್ತ್ರಚೋದಿತ ಮಾರ್ಗಾನುಸಾರವೇ ಪ್ರವರ್ತಿಸತಕ್ಕದ್ದು ಮುಖ್ಯ ಕರ್ತವ್ಯವು.

ಅವತಾರಿಕೆ ಹೀಗೆ ಶಾಸ್ತ್ರಮೂಲಕವಾಗಿಯೇ ಭಗವದಭಿಪ್ರಾಯವನ್ನು ತಿಳಿಯಬೇಕೇ ವಿನಾ ನಮ್ಮ ಜ್ಞಾನಗಳ ಮೂಲಕವೂ, ವಾದಗಳ ಮೂಲಕವೂ ಗ್ರಹಿಸಲು ಸಾಧ್ಯವಿಲ್ಲವೆಂಬುವದನ್ನು ದೃಢೀಕರಿಸಿ, ಒಂದು ಪಾಶುರದಮೂಲಕ ತಿಳಿಸುತ್ತಾರೆ. ಹಾಗೆ ಶಾಸ್ತ್ರಮೂಲಕವಾಗಿಯೇ ಗ್ರಹಿಸತಕ್ಕದ್ದಾದರೇ ಅಂತಹ ಶಾಸ್ತ್ರವು ಯಾವುದು ? ಪಾಶುಪತಾದಿ ಶಾಸ್ತ್ರಗಳು ಪ್ರಮಾಣಗಳೇ ? ಎಂದರೆ ಅವುಗಳು ಯಾವುವೂ ಶಾಸ್ತ್ರಗಳಲ್ಲವು, ಶ್ರುತಿಗಳೂ ಅವುಗಳ ಉಪಬೃಹ್ಮಣಗಳಾದ ಸ್ಮೃತಿಗಳೂ ಇವುಗಳೇ ಶಾಸ್ತ್ರಗಳೆಂದುಪದೇಶಿಸುತ್ತಾರೆ.

ಅರ್ಥ —ನಿಲಮುಳನ್ದಾರ್ - ವಾಮನಾವತಾರದಲ್ಲಿ ಬಲಿಯಿಂದ ಮೂರು ಹೆಜ್ಜೆಯ ಭೂಮಿಯನ್ನು ಬೇಡಿ ಅನಂತರ ತ್ರಿವಿಕ್ರಮಾವತಾರದಲ್ಲಿ ಭೂಮಿಯನ್ನೆಲ್ಲಾ ಒಂದು ಹೆಜ್ಜೆಯಿಂದಲೇ ಅಳೆದು ತನ್ನ ನಿರ್ಹೇತುಕ ಕೃಪೆಯನ್ನು ಸರ್ವ

ಇನ್ರು ನಮಕ್ಕಿರವಾದಲಿ ಲಿಮ್ಮತಿ ಯಿನ್ನಿಲವೇ ।
ಅನ್ರಿಯಡಿಕ್ಕಡಿಯಾರಿರುಳ್ ತೀರ್ಕ್ಕ ವಡಿಯುಳದೇ ॥ ೨೪ ॥

ರಿಗೂ ಪ್ರದರ್ಶಿಸಿದ, ಶ್ರೀಮನ್ನಾರಾ ಯಣನು, ಇದು ನನ್ರು - ಶಾಸ್ತ್ರದಲ್ಲಿ ಹೇಳಿರುವ ವಿಧಿ ನಿಷೇಧವಾಕ್ಯಗಳಿಗನುಸಾರವಾಗಿರುವದರಿಂದ, ಇದು ಸಮೀಚೀನವಾದುದು. ಆದುದರಿಂದ ಅನುಷ್ಠಿಸತಕ್ಕದ್ದು ಎಂಬ ಭಾವವು, ಇದು ತೀಯದು- ಇದು ಅಂತಹ ವಿಧಿನಿಷೇಧ ವಾಕ್ಯಗಳಿಗೆ ವಿರೋಧವಾದುದರಿಂದ ನಿಂದಿತವಾದುದುರಿಂದ ತ್ಯಾಜ್ಯವು ಎಂಬ ಭಾವವು, ಎನ್ರು - ಎಂಬದಾಗಿ, ನಡತ್ತಿಯ-ಹೀಗೆ ಧರ್ಮಪ್ರವೃತ್ತಿಯನ್ನು ಮಾಡಿಸುವ, ನಾರ್ಮರೈಯಾಲ್-ನಾಲ್ಕು ವೇದಂಗಳಿಂದ ಅನ್ಬುಡೈ-ನಿರತಿಶಯಪರಮಭಕ್ತಿಯುಳ್ಳ, ವಾನೋರ್ ನಿಲೈಯಿಲ್-ಪರಮಪದವಲ್ಲಿರುವ ನಿತ್ಯಮುಕ್ತರುಗಳ ಸ್ಥಿತಿಯಲ್ಲಿ ಎಂದರೆ ಸದಾ ಭಗವತ್ಪ್ರೀತಿಯುಂಟಾಗುವ ಹಾಗೆ ಆತನಿಗೆ ನಿತ್ಯಕೈಂಕರ್ಯಮಾಡುತ್ತಿರುವ ಸ್ಥಿತಿಯಲ್ಲಿ. ನಿನ್ರನಮ್-ನಿಂತವರಾದೆವು, ಪ್ರತಿಷ್ಠಿತರಾದೆವು. ಹೀಗೆ ಇದನ್ನು ಶಾಸ್ತ್ರಮೂಲಕವಾಗಿಯೇ ತಿಳಿಯಬೇಕೇ ? ಸ್ವತಃ ತಿಳಿಯಲು ಸಾಧ್ಯವಿಲ್ಲವೋ ಎಂದರೆ, ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇನ್ರು-ಈ ದೇಹವನ್ನು ಧರಿಸಿರುವ ಈ ಸಂಸಾರ ವೇಳೆಯಲ್ಲಿ, ನಮಕ್ಕು - ಅನಾದಿಯಾಗಿ ಬಂದ ಕರ್ಮವಾಸನಾದಿಗಳಿಂದ ಆಚ್ಛಾದಿತವಾದ ಜ್ಞಾನಸ್ವರೂಪವುಳ್ಳ ನಮಗೆ, ಇರವಾದಲಿಲ್- ಇದು ರಾತ್ರಿಯಾಗಿರುವದರಿಂದ, ಅಜ್ಞಾನಾಂಧಕಾರದಲ್ಲಿರುವದರಿಂದ ಎಂಬರ್ಥವು, ಇಮ್ಮತಿಯಿ - ಈ ವೇದಶಾಸ್ತ್ರವೆಂಬ ಚಂದಿರನ, ನಿಲವು - ಬೆಳದಿಂಗಳಿನ, ಅನ್ರಿ - ಹೊರತು, ಅಡಿಕ್ಕಡಿ - ಪದೇ ಪದೇ, ಆರ್ - ಅಭಿವೃದ್ಧಿ ಹೊಂದುತ್ತಿರುವ, ಇರುಳ್ - ಅಜ್ಞಾನವೆಂಬ ಅಂಧಕಾರವನ್ನು, ತೀರ್ಕ್ಕ - ಕಳೆದುಕೊಳ್ಳಲು, ಅಡಿಯುಳದೇ - ಮಾರ್ಗವುಂಟೋ ಎಂದರೆ, ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ದಯಪಾಲಿಸಿದ, ಶಾಸ್ತ್ರವೆಂಬ ಚಂದಿರನ ಬೆಳದಿಂಗಳಮೂಲಕ ನಮ್ಮ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸಿಕೊಳ್ಳಬೇಕೇ ವಿನಾ, ಅದಕ್ಕೆ ಇನ್ನು ಯಾವ ಮಾರ್ಗವೂ ಇಲ್ಲವೆಂಬ ಭಾವವು.

ತಾತ್ಪರ್ಯ. ಸರ್ವೇಶ್ವರನು ನಿಲಮಿಳನ್ದಾನ್ ಎಂಬದಾಗಿ ಇಲ್ಲಿ ತ್ರಿವಿಕ್ರಮಾವತಾರಮೂರ್ತಿಯಾಗಿ ಹೇಳಲ್ಪಟ್ಟಿರುತ್ತಾನೆ. ತ್ರಿವಿಕ್ರಮಾವತಾರದಿಂದ ನಾವು ಗ್ರಹಿಸುವ ಅಭಿಪ್ರಾಯಗಳು ಅನೇಕ ಇವೆ. ಈ ಭೂಲೋಕವೆಲ್ಲಾ ತನಗೆ ಪ್ರಿಯವಾದುದು ಆದುದರಿಂದ ಅಲ್ಲಿನ ಚೇತನರ ನಿಮ್ನೋನ್ನತ ಭಾವಗಳೊಂ

ದನ್ನೂ ಪರಿಗಣಿಸದೆ, ತನ್ನ ನಿರ್ಹೇತುಕ ಕೃಪೆಯೂ ಉದಾರಭಾವವೂ ಸಹ ಎಲ್ಲರಿಗೂ ಉತ್ತಾರಕವಾಗಲೆಂದೂ, ಅಂತಹ ಕೃಪೌದಾರ್ಯಭಾವಗಳನ್ನು ವಶೀಕರಣ ಮಾಡಿಕೊಳ್ಳಲು ತನ್ನ ಪಾದಕಮಲಗಳ ಆಶ್ರಯವೇ ಎಂದೂ, ಸರ್ವೇಶ್ವರನು ತೋರಿಸಿರುತ್ತಾನೆ.

ಆ ಪಾದವನ್ನು ಆಶ್ರಯಿಸಿದ ಪ್ರಹ್ಲಾದನು ರಕ್ಷಿಸಲ್ಪಟ್ಟನು. ಹಾಗೆ ಆಶ್ರಯಿಸದೇ ಇರುವ ಅತನ ಪೌತ್ರನಾದ ಬಲಿಯು ಅಂತಹ ಮಾಹಾತ್ಮ್ಯೆಯುಳ್ಳ ಪಾದಸ್ಪರ್ಶ ಉಂಟಾದರೂ ಸುತಲವೆಂಬ ಪಾತಾಳ ಲೋಕವನ್ನು ಸಾರಿದನು. ಅದಲ್ಲದೆ ಬಲಿಚಕ್ರವರ್ತಿಯು ಧರ್ಮವ್ಯಾಜದಿಂದ ಅಧರ್ಮವನ್ನೇ ನಡಿಸುತ್ತಿದ್ದುದರಿಂದ, ಹಾಗೆಯೇ ಸರ್ವೇಶ್ವರನು ಅತನನ್ನು ವಂಚಿಸಿ ವಾಮನನಾಗಿ ಮೂರು ಹೆಜ್ಜೆಯ ನೆಲವನ್ನು ಬೇಡಿ, ತ್ರಿವಿಕ್ರಮನಾಗಿ ಎರಡು ಹೆಜ್ಜೆಯಿಂದಲೇ ಸರ್ವವನ್ನೂ ಅಳೆದು, ಮಾತಿಗೆ ತಪ್ಪಿದವನೆಂದು ತೋರಿಸಿದುದಕ್ಕೆ, ತನ್ನ ತಲೆಯ ಮೇಲೆ ಪಾದವನ್ನಿಟ್ಟು ಅಳೆಯಬಹುದೆಂದು ಹೇಳಲು; ಆಗ ಅತನ ತಲೆಯ ಮೇಲೆ ಪಾದವನ್ನಿಟ್ಟು ನಿಗ್ರಹಿಸಿ, ಅಧರ್ಮಿಯನ್ನು ಯಾವ ವಿಧದಿಂದಾಗಲಿ ವಾಲಿವಧೆಯಂದದಿ ನಿಗ್ರಹಿಸಬಹುದೆಂಬುವದನ್ನು ತೋರ್ಪಡಿಸಿದನು. ಪ್ರಕೃತದಲ್ಲಿ ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ಕರಣಕಳೇಬರಯೋಗ, "ಶಾಸ್ತ್ರಮಯೇನ ಸ್ಥಿರಪ್ರದೀಪೇನ" (ದಯಾ. ೧೪) ಎಂದು ಹೇಳಿರುವ ಹಾಗೆ, ಶಾಸ್ತ್ರಪ್ರದೀಪ ಪ್ರದಾನಾದಿಗಳನ್ನುಂಟುಮಾಡಿದುದರಿಂದ ಅಂತಹ ನಿರ್ಹೇತುಕ ಕೃಪೆಯು ತ್ರಿವಿಕ್ರಮಾವತಾರದಲ್ಲಿ ವ್ಯಕ್ತವಾದುದರಿಂದ, ನಿಲಮುಳನ್ನಾ೯ ಎಂದು ಪ್ರಯೋಗಿಸಿರುತ್ತಾರೆ. ಶಾಸ್ತ್ರಗಳು ಯಾವುವು ಎಂದರೆ ಮುಖ್ಯವಾಗಿ ಅನಾದಿಯಾಗಿ ನಮಗೆ ಬಂದಿರುವ ವೇದಗಳು. ಇವುಗಳ ಅರ್ಥಗಳನ್ನು ಪರಸ್ಪರ ಸಾಮಂಜಸ್ಯದಿಂದ ತಿಳಿಯುವದು ಕಷ್ಟತರವಾದುದರಿಂದ, ಋಷಿಗಳು ಶ್ರುತ್ಯರ್ಥಗಳನ್ನುಪಬ್ರಹ್ಮಣವನ್ನು ಮಾಡಿ, ನಮಗೆ ಸರಿಯಾದ ಅರ್ಥಗಳನ್ನು ತಿಳಿಸಿರುತ್ತಾರೆ. ಆದುದರಿಂದ ನಮಗೆ ಶಾಸ್ತ್ರಶಬ್ದದಿಂದ ಉಪಾದೇಯಗಳು ಯಾವುವೆಂಬುವದು ಯತೀಂದ್ರಮತದೀಪಿಕೆಯ ತೃತೀಯಾವತಾರದಲ್ಲಿ ವ್ಯಕ್ತವು. ವೇದಗಳೂ, ದಶೋಪನಿಷತ್ತುಗಳೂ, ಶಾರೀರಕ ಮೀಮಾಂಸಾಸೂತ್ರಗಳು, ವೇದೋಪಬೃಂಹಣಗಳಾದ ಮನುಸ್ಮೃತಿ ಭಗವದ್ಗೀತಾ ಮುಂತಾದವು, ವೇದೋಪಬೃಂಹಣಗಳಾದ ರಾಮಾಯಣ, ಭಾರತ ಭಾಗವತಗಳೂ, ಸಾತ್ವಿಕ ಪುರಾಣಗಳಾದ ವಿಷ್ಣುಪುರಾಣ ಪಾದ್ಮಪುರಾಣಾದಿಗಳೂ ಭಗವಚ್ಛಾಸ್ತ್ರವಾದ ಪಾಂಚರಾತ್ರಶಾಸ್ತ್ರವೂ, ನಮ್ಮ ಆಳ್ವಾರಾಚಾರ್ಯರುಗಳ ಸೂಕ್ತಿಗಳುಎಲ್ಲಾ ಶಾಸ್ತ್ರಪ್ರಮಾಣಗಳು. ಎಲ್ಲಾದಕ್ಕೂ ಮೂಲರೂಪವಾದಪ್ರಮಾಣಗಳು ಶ್ರುತಿ ಉಪನಿಷತ್ತುಗಳು. ಇವುಗಳು ಅನಾದಿಯಾಗಿ ಪರಮಾತ್ಮನಿಂದ ಚತುರ್ಮು

ಋನಿಗೂ, ಆತನಿಂದ ಆತನ ಮಕ್ಕಳಿಗೂ, ಹೀಗೆ ಪರಂಪರಾರೂಪದಲ್ಲಿ ಉಚ್ಚಾರಣಾ ನೂಚ್ಚಾರಣಾರೂಪದಲ್ಲಿ ಬಂದಿರುವದರಿಂದ ಇವುಗಳು ಮುಖ್ಯಪ್ರಮಾಣಗಳು. ಆದರಲ್ಲಿ ಇದುನನ್ನು ಇದು ವಿಧಿರೂಪದಲ್ಲಿ ಹೇಳಿರುವದರಿಂದ ಮಾಡತಕ್ಕದ್ದು ಇದು ತೀಯದು, ಇದು ನಿಷೇಧರೂಪದಲ್ಲಿ ಹೇಳಿರುವದರಿಂದ ಮಾಡತಕ್ಕದ್ದಲ್ಲ ವೆಂದು ಹೇಳಿರುತ್ತದೆಯಾದುದರಿಂದ, ಪ್ರಕೃತಿಸಂಬಂಧದಿಂದ ಜ್ಞಾನಸಂಕೋಚ ಹೊಂದಿದ ನಮಗೆ. ಶಾಸ್ತ್ರವೇ ಪ್ರಮಾಣವು, ಆದುದರಿಂದ ಗೀತೆಯಲ್ಲಿ

"ಯಶ್ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ"
ನಸಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ"

ಎಂಬದಾಗಿ, ಶಾಸ್ತ್ರನಿಯಮವನ್ನು ಎಂದರೆ ವೇದಗಳಲ್ಲೂ, ವೇದೋಪ ಬ್ರಹ್ಮಣ ಗಳಲ್ಲೂ ಹೇಳಿರುವ ಭಗವಂತನಿಂದ ವಿಧಿಸಲ್ಪಟ್ಟ ನಿಯಮವನ್ನು ಯಾರು ಅತಿ ಕ್ರಮಿಸಿ ತನ್ನಿಷ್ಟಾನುಸಾರವಾದ ಮಾರ್ಗದಲ್ಲಿ ಪ್ರವರ್ತಿಸುವರೋ ಅವರು ಐಹಿಕ ಸುಖಗಳನ್ನಾಗಲಿ ಆ ಮುಷ್ಮಿಕ ಶ್ರೇಷ್ಠಗತಿಯನ್ನಾಗಲಿ ಹೊಂದುವದಿಲ್ಲವು ಎಂದು ವ್ಯತಿರೇಕರೂಪದಲ್ಲಿ ಹೇಳಿ, "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ। ಜ್ಞಾತ್ವಾಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ" (ಗೀ. ೧೬.೨೩.೨೪) ಆದುದರಿಂದ ಇದು ಉಪಾದೇಯವುಮಾಡತಕ್ಕದ್ದು, ಇದು ಅನುಪಾ ದೇಯವಾದುದರಿಂದ ಮಾಡತಕ್ಕದ್ದಲ್ಲವು ಎಂದು ನಿಶ್ಚರಿಸುವದಕ್ಕೆ ಸರ್ವಜ್ಞ ನಲ್ಲದ ನಿನಗೆ ವೇದಗಳೂ ವೇದೋಪಬ್ರಂಹಗಳೂ ಪ್ರಮಾಣವು ಯಾವುಮ ಪುರುಷಾರ್ಥರೂಪ ಪರತತ್ವವು, ಆತನ ಪ್ರೀತಿಯನ್ನು ಸಂಪಾದಿಸುವ ಮಾರ್ಗ ಯಾವುದು, ಯಾವುದು ಆತನನ್ನು ಹೊಂದುವ ಉಪಾಯವು. ಇಂತವುಗಳನ್ನು ಬೋಧಿಸುವ, ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳನ್ನು ತಿಳಿದವನಾಗಿ, ಆತನಿಗೆ ಪ್ರೀಣನರೂಪವಾದ ಅಂತಹ ಕೈಂಕರ್ಯಗಳನ್ನು ಮಾಡತಕ್ಕದ್ದುಚಿತವು" ಎಂದು ಅನ್ವಯರೂಪದಲ್ಲಿ ಹೇಳಲ್ಪಟ್ಟಿರುತ್ತದೆ.

ಹೀಗೆ ವಿಧಿನಿಷೇಧರೂಪಧರ್ಮಗಳನ್ನರಿಯುವವರಲ್ಲಿ ವೇದಶಾಸ್ತ್ರಗಳೂ ಅವು ಗಳ ಉಪಬ್ರಹ್ಮಣಗಳೂ ನನಗೆ ಪ್ರಮಾಣವು. ನಮ್ಮ ಬರೀ ಜ್ಞಾನವಾದರೋ ಕಾರ್ಯಕಾರಿಯಲ್ಲವು. ಏಕೆಂದರೆ, ನಮ್ಮ ಧರ್ಮಭೂತಜ್ಞಾನವು ನಮಗೀಗ ಪ್ರಾಪ್ತ ವಾಗಿರುವ ಪ್ರಕೃತಿ ಸಂಬಂಧದಿಂದ ತಿರೋಹಿತವಾಗಿರುತ್ತದೆ. ಆದುದರಿಂದ ಇನ್ನು ಇರುವಾದಿಲ್ ಹೀಗೆ ದೇಹಸಂಬಂಧ ಉಂಟಾಗಿರುವದರಿಂದ ಜ್ಞಾನವು ಅಜ್ಞಾನೇನಾವೃತಂ, ಅಜ್ಞಾನದಿಂದ ಆವರಿಸಲ್ಪಟ್ಟದಾಗಿ, ಅಂಧಕಾರದಲ್ಲಿರು ತ್ತದೆ. ಇಂತಹ ಸ್ಥಿತಿಯಲ್ಲಿ ನಮ್ಮ ಪ್ರವೃತ್ತಿಗೆ ಬೆಳಕು ಯಾವುದೆಂದರೆ, ಇನ್ನು ತಿಯಿನ್ನಿಲವು ಶಾಸ್ತ್ರಜನ್ಯಜ್ಞಾನವೆಂಬ ಬೆಳದಿಂಗಳು; ಇಲ್ಲಿ ಶಾಸ್ತ್ರವೇ ಚಂದ್ರನು,

ಇವೆಲ್ಲಾ ಮೂಲಕ ಶಾಸ್ತ್ರವನ್ನು ತಿಳಿಯಬೇಕು

ಶ್ರುತಿಸ್ಮೃತ್ಯಾಚಾರ್ಯೈಸ್ಸ್ವಮತಿಗತಿಭಿಶ್ಶುದ್ಧ ಮನಸಾಂ ।
ಸುಸಙ್ಕಲ್ಪೈರ್ಧರ್ಮ್ಯೈಃ ಕುಲಚರಣ ದೇಶಾದಿ ಸಮಯೈಃ ॥

ಅದರಿಂದುಂಟಾಗುವ **ಜ್ಞಾನವೇ** ಬೆಳದಿಂಗಳು, ಎಂದು **ಏತಕ್ಕೆ** ಹೇಳಲ್ಪಟ್ಟಿತೆಂದರೆ, ಚಂದ್ರನೂ ಬೆಳದಿಂಗಳೂ ಹೇಗೆ ಆಹ್ಲಾದಕರವೋ ಹಾಗೆಯೇ ಶಾಸ್ತ್ರವೂ ಅದರ ಜ್ಞಾನವೂ ಸ್ವಾಮಿಕೃಪೆಯುಳ್ಳವನಿಗೆ ಪರಮ ಆಹ್ಲಾದಕರವಾದವು ಎಂಬ ತಾತ್ಪರ್ಯವು. **ಇವ್ಮತಿಯುನ್ನಿಲವೇ** ಎಂಬುವದಕ್ಕೆ ಇನ್ನೊಂದು ವಿಧವಾಗಿಯೂ ಅರ್ಥಹೇಳಬಹುದು ; **ಇವ್ಮತಿ** ಎಂಬುವದರಿಂದ ವೇದಶಾಸ್ತ್ರವೂ, ಅದರ ಬೆಳದಿಂಗಳೂ ಎಂಬುವದರಿಂದ ದಶೋಪನಿಷತ್ತುಗಳೂ ಹೇಳಲ್ಪಟ್ಟವೆಂದು ಭಾವಿಸಬಹುದು. **ಆರಿರುಳ್ ತೀರ್ಕ್ಕ** - ಪರಿಪೂರ್ಣ ಅಂಧಕಾರವನ್ನು ಹೋಗಲಾಡಿಸಲು ಉಪನಿಷತ್ತುಗಳಿಗಿಂತ ಮೇಲಾದ ಶಾಸ್ತ್ರವಿಲ್ಲವೆಂಬ ಭಾವವು. ಹೀಗೆ ಉಪನಿಷತ್ತುಗಳಿಂದ ಕೂಡಿದ ವೇದಗಳನ್ನು ಬಿಟ್ಟರೆ, ನಮಗೆ ಪದೇ ಪದೇ ಪ್ರಾಪ್ತವಾಗುವ ಬುದ್ಧಿಭ್ರಾಮಕಗಳನ್ನು ಕಳೆದುಕೊಳ್ಳಲು ಬೇರೆ ಮಾರ್ಗವಿಲ್ಲವೆಂದು **ಅಡಿಕ್ಕಡಿ ಆರಿರುಳ್ ತೀರ್ಕ್ಕವಡಿಯುಳದೇ** ಎಂದುಪದೇಶಿಸಿರುತ್ತಾರೆ. ಪರಬ್ರಹ್ಮತತ್ಪ್ರಾಪ್ತಿವಿಷಯಕ ಜ್ಞಾನವೂ, ತತ್ಕೈಙ್ಕರ್ಯ ಮೊದಲಾದವುಗಳೂ ಅತೀಂದ್ರಿಯವಾದುದರಿಂದ, ವೇದಗಳೂ ತದುಪಜೀವಿಗಳಾದ ಶಾಸ್ತ್ರಗಳೂ ಪ್ರಮಾಣಗಳೇ ವಿನಾ, ಪ್ರತ್ಯಕ್ಷಾನುಮಾನ ಪ್ರಮಾಣಗಳೇ ಆಗಲಿ, ವಾದಗಳೇ ಆಗಲಿ ಪ್ರಮಾಣಗಳಾಗಲಾರವು. ಆದುದರಿಂದ ಶಾಸ್ತ್ರಮೂಲಕವಾಗಿಯೇ ಭಗವತ್ಪ್ರೀತಿಯುಂಟಾಗುವ ಭಗವದಾಜ್ಞಾರೂಪ ಕೈಙ್ಕರ್ಯಗಳನ್ನೂ ಭಗವದನುಜ್ಞಾರೂಪ ಕೈಙ್ಕರ್ಯಗಳನ್ನೂ ತಿಳಿದು ಅನುಷ್ಠಿಸತಕ್ಕದ್ದೆಂಬ ಭಾವವು.

ಅವತಾರಿಕೆ. ಕೈಙ್ಕರ್ಯಗಳನ್ನು ನಡೆಸುವಾಗ ಯಾವುಯಾವುಗಳನ್ನು ಪ್ರಮಾಣವಾಗಿ ಭಾವಿಸತಕ್ಕದ್ದೆಂದು ವಿಶದವಾಗಿ ಈ ಶ್ಲೋಕಮೂಲಕ ತಿಳಿಸುತ್ತಾರೆ.

ಅರ್ಥ :- **ನಿಯಮಯಿತುಃ** - **"ಪ್ರೇರಿತಾರಂಚಮತ್ವಾ"** ಎಂಬ ವಾಕ್ಯದಲ್ಲಿ ತೋರಿಬರುವ ಹಾಗೆ, ನಮಗೆಲ್ಲಾ ನಿಯಾಮಕನಾದ, **ಆದೇಃ**-ಮೂಲಪುರುಷನಾದ ಭಗವಂತನ, **ಅಭಿಮತಂ** – ಇಷ್ಟವಾದ ಅಭಿಪ್ರಾಯವನ್ನು, **ಬುಧಃ** – ಪಂಡಿತನಾದವನು, **ನಿಪುಣಂ** - ಬಹು ಚನ್ನಾಗಿ, ಬಹು ವಿವೇಕಯುಕ್ತನಾಗಿ, **ಅನ್ವಿಚ್ಛತಿ** – ತಿಳಿಯುವನು; ಎಂದರೆ ಭಗವತ್ಸಙ್ಕಲ್ಪವನ್ನು ಚನ್ನಾಗಿ ಅರಿತವನಾಗಿ ಕೈಙ್ಕರ್ಯಗಳನ್ನೆಸಗುವನು ಎಂಬ ಭಾವವು. ಹಾಗೆ ಭಗವದಭಿಮತವನ್ನು

ನಿಯೋಗೈರ್ಯೋಗ್ಯಾನಾಂ ನಿಯಮಯಿತುರಾದೇರಭಿಮತಂ
ನಿಮಿತ್ತ ಸ್ವಪ್ನಾದ್ಯೈರಪಿ ನಿಪುಣ ಮನ್ವಿಚ್ಛತಿ ಬುಧಃ ॥ ೩೯ ॥

ತಿಳಿಯುವ ಬಗೆ ಹೇಗೆ ಎಂದರೆ ತಿಳಿಸುತ್ತಾರೆ. (೧) **ಶ್ರುತಿಸ್ಮೃತ್ಯಾಚಾರೈಃ** - ಶ್ರುತಿಗಳಿಂದಲೂ, ಅವುಗಳಿಗೆ ವಿರುದ್ಧವಲ್ಲದ ಸ್ಮೃತಿಗಳಿಂದಲೂ, ಆಚಾರ ಗಳಿಂದಲೂ, (೨) **ಸ್ವಮತಿಗತಿಭಿಃ** - ವಿಕಲ್ಪಿಸಿ ಹೇಳಿರುವ ಸಂದರ್ಭಗಳಲ್ಲಿ ತನ್ನ ಬುದ್ಧಿಯನ್ನು ಹೊಂದಿದ ಮಾರ್ಗಗಳಿಂದಲೂ, ತನಗೆ ಇಷ್ಟವಾದ ಪ್ರವೃತ್ತಿ ಯಿಂದಲೂ. (೩) **ಶುದ್ಧಮನಸಾಂ** - ಪರಿಶುದ್ಧ ಮನಸ್ಸುಳ್ಳ ಸಾಧುಗಳ, **ಸುಸ ಙ್ಕಲ್ಪೈಃ** - ಒಳ್ಳೇ ಸಂಕಲ್ಪಗಳಿಂದಲೂ, (೪) **ಧರ್ಮ್ಯೈಃ** - ಶ್ರುತಿಗಳಲ್ಲಿನ ವಿಧಿ ನಿಷೇಧರೂಪಧರ್ಮಗಳಿಂದ ಸೇರಿದ, ಎಂದರೆ ಅವುಗಳಿಗೆ ವಿರೋಧವಲ್ಲದ, **ಕುಲ ಚರಣದೇಶಾದಿಸಮಯೈಃ** - ಜಾತಿ, ಶಾಖೆ, ದೇಶಗಳು ಇವೇ ಮೊದಲಾದ ಸಂಕೇತಗಳಿಂದಲೂ, (೫) **ಯೋಗ್ಯಾನಾಂ** - ಯೋಗ್ಯರಾದ ಮಹಾಭಾಗವತೋ ತ್ತಮರ, **ನಿಯಮೈಃ** - ಆಜ್ಞೆಗಳಿಂದಲೂ, (೬) **ನಿಮಿತ್ತಸ್ವಪ್ನಾದ್ಯೈಃ** - ಶಕುನ ಸ್ವಪ್ನ ಮೊದಲಾದವುಗಳಿಂದಲೂ, ಹೀಗೆ ಈ ಆರು ವಿಧಗಳಿಂದಲೂ ಮೂಲ ಪುರುಷನ ಅಭಿಮತವನ್ನರಿಯುವನು ಎಂದು ಹೇಳಲ್ಪಟ್ಟಿತು.

ತಾತ್ಪರ್ಯ :—ಪಂಡಿತನಾದವನು ಸರ್ವೇಶ್ವರನ ಅಭಿಮತವನ್ನು ತಿಳಿದು ಆತನಿಗೆ ಇಷ್ಟವಾಗುವ ಹಾಗೆ ಸಮಸ್ತ ಕಾರ್ಯಗಳನ್ನೂ ಕೈಙ್ಕರ್ಯರೂಪದಲ್ಲಿ ಮಾಡ ತಕ್ಕದ್ದೆಂದು ಹೇಳುತ್ತಾರೆ. ಆತನ ಅಭಿಮತವನ್ನು ತಿಳಿಯುವದು ಹೇಗೆಂದರೆ ಹೇಳುತ್ತಾರೆ :—

(೧) **ಶ್ರುತಿಸ್ಮೃತ್ಯಾಚಾರೈಃ**, ಈತನು ಉದ್ದೇಶಿಸುವ ಕೈಙ್ಕರ್ಯವು ಶ್ರುತಿ ಪ್ರತಿಪಾದ್ಯವಾಗಿದ್ದರೆ ಶ್ರುತಿಗಳಿಂದ ತಿಳಿಯಬಹುದು. ಅಲ್ಲಿ ಸರಿಯಾಗಿ ಹೇಳ ಲ್ಪಡದೇ ಇದ್ದರೆ, ಶ್ರುತ್ಯನುಸಾರವಾಗಿ, ಅದಕ್ಕೆ ವಿರೋಧವಲ್ಲದ ಸ್ಮೃತಿಗಳಿಂದ ತಿಳಿಯಬಹುದು. ಬಾರ್ಹಸ್ಪತ್ಯ, ಕಾಪಿಲ, ಚತುರ್ಮುಖ ಸ್ಮೃತಿಗಳು ಶ್ರುತಿ ವಿರುದ್ಧವಾದವುಗಳಾದುದರಿಂದ ಇವು ಗ್ರಾಹ್ಯವಲ್ಲವು ; ಮನು ಮೊದಲಾದ ಸ್ಮೃತಿ ಗಳುಶ್ರುತಿವಾಕ್ಯಗಳಿಗೆ ವಿರುದ್ಧವಲ್ಲವಾದುದರಿಂದ ಉಪಾದೇಯವು. ಸ್ಮೃತಿಯಲ್ಲೂ ಕಾಣದವುಗಳನ್ನು ಶ್ರುತಿವಿರುದ್ಧವಲ್ಲದ, **ಆಚಾರೈಃ** - ಆಚಾರಗಳಿಂದಲೂ ತಿಳಿಯಬಹುದು. ಈ ಶ್ರುತಿಸ್ಮೃತಿ ಆಚಾರಗಳಲ್ಲಿ ಶ್ರುತಿಮೂಲಕವೇ ತಿಳಿಯಬಹು ದಾದರೆ ಅದೇ ಮುಖ್ಯ ಪ್ರಮಾಣವು, ಅಲ್ಲಿ ವ್ಯಕ್ತವಿಲ್ಲದಿದ್ದರೆ ಸ್ಮೃತಿಯೂ, ಅಲ್ಲಿಯೂ ವ್ಯಕ್ತವಿಲ್ಲವಾದರೆ ಮಹಾನುಭಾವರಾದ ಆಚಾರ್ಯರುಗಳ ಆಚಾರ

ಮೂಲಕವಾಗಿಯೂ ಭಗವಂತನಿಗೆ ಅಭಿಮತವಾದುದನ್ನು ತಿಳಿಯಬಹುದು. ಇದರಿಂದ ಉತ್ತರೋತ್ತರಕ್ಕಿಂತ ಪೂರ್ವಪೂರ್ವಕ್ಕೆ ಬಲೀಯಸ್ತ್ವವೆಂಬುದು ಏರ್ಪಟ್ಟಿತು. ಆದರೆ ಶ್ರುತಿಯಲ್ಲಿ ಹೇಳದಿರುವದು ಸ್ಮೃತಿಯಲ್ಲಿ ಹೇಳಲ್ಪಟ್ಟರೆ ಅದು ಹೇಗೆ ಪ್ರಮಾಣವಾದೀತು? ಮತ್ತು ಹಾಗೆಯೇ ಸ್ಮೃತಿಯಲ್ಲಿ ಹೇಳಲ್ಪಡದಿರುವದು ಆಚಾರಮೂಲಕ ಏರ್ಪಟ್ಟರೆ ಅದು ಹೇಗೆ ಪ್ರಮಾಣವಾದೀತು? ಎಂಬೀ ಆಕ್ಷೇಪಣೆ ತೋರಬಹುದು; ಸ್ಮೃತ್ಯಾಚಾರಗಳು ಶ್ರುತಿವಿರುದ್ಧವಲ್ಲದೇ ಇರುವದರಿಂದ ಉಪಾದೇಯಗಳೆಂಬ ಭಾವವು.

(೨) ಶ್ರುತಿಯಲ್ಲಿಯಾಗಲಿ, ಸ್ಮೃತಿಯಲ್ಲಿಯಾಗಲಿ ವಿಕಲ್ಪಿಸಿ ಹೇಳಿದ್ದರೆ ಆಗ **ಸ್ವಮತಿಗತಿಭಿಃ**, ತನ್ನಿಷ್ಟಾನುಸಾರ ವಿಕಲ್ಪಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಬಹುದು. ಮುಕ್ತಿಯನ್ನು ಹೊಂದಲು ಶ್ರುತಿಸ್ಮೃತಿಗಳಲ್ಲಿ ಭಕ್ತಿಯೋಗ ಮೂಲಕವೇಯಾಗಲಿ ಅಥವಾ ಪ್ರಪದನ ಮೂಲಕವೇಯಾಗಲಿ ಉಪಾಯಾನುಷ್ಠಾನವನ್ನು ಅವಲಂಬಿಸಬಹುದು ಎಂದು ಹೇಳಿರುವದರಿಂದ ಇವುಗಳಲ್ಲಿ ಯಾವುದಾದರೂ ಒಂದನ್ನು ಶಕ್ತ್ಯನುಸಾರಅವಲಂಬಿಸಬಹುದೆಂಬ ಭಾವವು. ಹಾಗಲ್ಲದೆ **ಸ್ವಮತಿಗತಿಭಿಃ** ಎಂದರೆ ಎಲ್ಲಾ ವಿಷಯಗಳಲ್ಲೂ ತನ್ನಿಷ್ಟಾನುಸಾರ ನಡೆಯಬಹುದು ಎಂದರ್ಥ ಹೇಳಿದರೆ, ಪೂರ್ವೋಕ್ತವಾದ **ಶ್ರುತಿಸ್ಮೃತ್ಯಾಚಾರೈಃ** ಎಂಬುವದಕ್ಕೆ ವಿರುದ್ಧವಾದುದಾಗುತ್ತದೆ. **"ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ"** ಎಂಬ ಶ್ರೀಕೃಷ್ಣನ ದಿವ್ಯಸೂಕ್ತಿಗೂ ವಿರೋಧವಾದುದಾಗುತ್ತದೆ. ಹೀಗೆ ಶಾಸ್ತ್ರದಲ್ಲಿ ವಿಕಲ್ಪಿಸಿ ಹೇಳಿದ್ದರೆ ಫಲದಲ್ಲೇನಾದರೂ ವ್ಯತ್ಯಾಸ ಉಂಟೋ ಎಂದರೆ **"ವಿಕಲ್ಪೋಽವಿಶಿಷ್ಟಫಲತ್ವಾತ್"** ಎಂಬ ಸೂತ್ರ ಪ್ರಕಾರ (೩.೩.೫೭) ಫಲದಲ್ಲೇನೂ ವ್ಯತ್ಯಾಸವಿಲ್ಲವು. **ಅಷ್ಟವರ್ಷಂ ಬ್ರಾಹ್ಮಣಂ ಉಪನಯೀತ"** ಎಂಬ ಶ್ರುತಿಪ್ರಮಾಣದಲ್ಲಿ ಗರ್ಭಾಷ್ಟಮವೇ ಜನ್ಮಾಷ್ಟಮವೇ ಎಂಬ ಸಂದೇಹದಲ್ಲಿ **ಸ್ವಮತಿ** ಯಾವದನ್ನು ಸರಿ ಎಂದು ಅನುಮೋದಿಸುತ್ತದೋ ಅಂತಹ ಗತಿಯೆಂದರೆ ಮಾರ್ಗವನ್ನು ಅವಲಂಬಿಸಬಹುದು. ಹೀಗೆಯೂ ಭಗವದಭಿಮತವನ್ನರಿಯಬಹುದು.

(೩) **ಶುದ್ಧಮನಸಾಂ ಸುಸಙ್ಕಲ್ಪೈರ್ಧರ್ಮ್ಯೈಃ** - ಪರಿಶುದ್ಧಮನಸ್ಕರಾದ ಋಷಿಗಳ ಧರ್ಮಯುಕ್ತವಾದ ಸಙ್ಕಲ್ಪಗಳಿಂದಲೂ ಸರ್ವೇಶ್ವರನಭಿಮತವನ್ನು ತಿಳಿಯಬಹುದು. ಇಲ್ಲಿಯೂ **ಧರ್ಮ್ಯೈಃ** ಎಂಬುವ ಪದವಿರುವದರಿಂದ ಶಾಸ್ತ್ರಕ್ಕೆ ಅವಿರುದ್ಧವಾದ ಅರ್ಥದಲ್ಲಿ ಅಂತಹ ಋಷಿಗಳ ದಿವ್ಯಸೂಕ್ತಿಯೇ ಪ್ರಮಾಣವೆಂದು ಭಾವಿಸತಕ್ಕದ್ದು. **"ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣ ಪ್ರವೃತ್ತಯಃ"** ಶ್ರುತ್ಯರ್ಥಗಳು ಬಹಳ ಗೂಢ

ವಾದವು. ಅಲ್ಲಿ ಉಪಯೋಗಿಸಿರುವ ಪದಗಳಿಗೆ ಅರ್ಥವು ಯಾವುದು ಎಂಬ ಸಂದೇಹವು ಪ್ರಾಪ್ತವಾಗಬಹುದು. ಅಂತಹ ಸಂದರ್ಭಗಳಲ್ಲಿ ಶ್ರೀ ಭಾಷ್ಯಕಾರರೂ ಶ್ರೀರಂಗ ರಾಮಾನುಜಮುನಿವರ್ಯರೂ ನಿರ್ಧರಿಸಿರುವ ಅರ್ಥಗಳೇ ನಮಗೆ ಪ್ರಮಾಣಗಳು. ಹಿಂದೆ **ಸ್ವಮತಿಗತಿಭಿಃ** ಎಂದು ಹೇಳಿರುವದರಿಂದ, ಅದನ್ನನುಸರಿಸಿ ತನ್ನಿಷ್ಟಾನುಸಾರ ಅರ್ಥಮಾಡಕೂಡದು. ಅಂತಹ ಸತಾಂ ಅಂತಕರಣ ಪ್ರವೃತ್ತಿಗಳೇ ಪ್ರಮಾಣವೆಂದು ನಿರ್ಧರಿಸತಕ್ಕದ್ದು. ಅನೇಕ ಉಪನಿಷದ್ವಾಕ್ಯಗಳಿಗೆ ಮನಸ್ಸು ತೋರಿದ ಹಾಗೆಲ್ಲಾ ಅರ್ಥಮಾಡುತ್ತಾರೆಂದು ಭಾವಿಸಿ, ಅವುಗಳಿಗೆ ಸರಿಯಾದ ಅರ್ಥಗಳನ್ನು ಪ್ರದರ್ಶಿಸುವದಕ್ಕಾಗಿ ಶ್ರೀ ವ್ಯಾಸಮಹರ್ಷಿಯು ಬ್ರಹ್ಮಸೂತ್ರಗಳನ್ನು ಕಲ್ಪಿಸಿದರು. ಆದುದರಿಂದ ಅಂತಹಧರ್ಮಯುಕ್ತವಾದ ಸುಸಙ್ಕಲ್ಪಗಳೂ ಪ್ರಮಾಣಗಳು. ಇವುಗಳಿಂದಲೂ ಭಗವದಭಿಮತವನ್ನರಿಯಬಹುದು. ಈ ಮೂರು ವಿಧವಾಗಿಯೂ ಭಗವದಭಿಮತವನ್ನರಿಯಬಹುದೆಂದು ಹೇಳಿದುದರಿಂದ

ವೇದೋಽಖಿಲೋಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ ।
ಆಚಾರಶ್ಚೈವ ಸಾಧೂನಾಮಾತ್ಮನಸ್ತುಷ್ಟಿರೇವಚ ॥

ಎಂಬುವದರ ತಾತ್ಪರ್ಯವು ಪ್ರದರ್ಶಿಸಲ್ಪಟ್ಟಿತು. ನಮ್ಮ ಅನುಷ್ಠಾನಗಳಿಗೆ ಯಾವುವು ಮೂಲಕಾರಣವಾಗಿ ಭಾವಿಸಬೇಕೆಂದರೆ, ಸಮಸ್ತ ವೇದಗಳೂ, ಅವುಗಳನ್ನನುಸರಿಸಿರುವ ಸ್ಮೃತಿಗಳೂ, ಶೀಲಗಳೂ, ಸಾಧುಗಳ ಆಚಾರವೂ, ವಿಕಲ್ಪಿಸಿರುವ ಸಂದರ್ಭದಲ್ಲಿ ತನ್ನ ಇಷ್ಟವೂ ಸಹ, ಇವುಗಳು ಸರ್ವೇಶ್ವರನಿಗೆ ಅಭಿಮತವಾದವು ಎಂಬ ತಾತ್ಪರ್ಯವು.

೪. **ಕುಲಚರಣದೇಶಾದಿಸಮಯೈಃ** - ಕುಲಕ್ಕನುಗುಣವಾದ ಸಂಕೇತಗಳೂ ಪ್ರಮಾಣವು, ವಿವಾಹದಲ್ಲಿ ಬ್ರಾಹ್ಮಣನಿಗೆ ಪಾಣಿಗ್ರಹಣವೂ ಶೂದ್ರನಿಗೆ ಮಾಂಗಲ್ಯಧಾರಣವೂ ಮುಖ್ಯವಾದವು. ಹಾಗೆಯೇ ಕೆಲವರು ಶಿಖೆಯನ್ನು ಮುಂಭಾಗದಲ್ಲೂ ಇತರರು ಹಿಂಭಾಗದಲ್ಲೂ ಧರಿಸುತ್ತಾರೆ. ಈ ಅನುಷ್ಠಾನಗಳೂ ಕೂಡ ಶ್ರುತಿವಿರುದ್ಧವಾಗಿರಕೂಡದು. ಆದುದರಿಂದ **ಧರ್ಮ್ಯೈಃ** ಎಂಬುಪದನ್ನು **ಕುಲಚರಣ ದೇಶಾದಿ ಸಮಯೈಃ** ಎಂಬುವದಕ್ಕೂ ವಿಶೇಷಣವಾಗಿ ಭಾವಿಸಬಹುದು. ಶಿಖೆ ಊರ್ಧ್ವಪುಂಡ್ರಗಳು ಶಾಸ್ತ್ರದಲ್ಲಿ ವಿಧಿಸಿರುವದರಿಂದ, ಶಿಖೆಯನ್ನೂ ಊರ್ಧ್ವಪುಂಡ್ರವನ್ನೂ ಸಂಪೂರ್ಣವಾಗಿ ತ್ಯಜಿಸಿ, ಅದೂ ಕುಲಸಮಯವೆಂದು ಭಾವಿಸಲು ಸಾಧ್ಯವಿಲ್ಲವು. ಚರಣ ಸಂಕೇತಗಳು ಹೇಗೆಂದರೆ:- ಋಕ್ಶಾಖೆಯವರು ಉಪಾಕರ್ಮವನ್ನು ಶ್ರವಣನಕ್ಷತ್ರ ಪ್ರಾಧಾನ್ಯದಿಂದಲೂ ಯಜುಶ್ಶಾಖೆಯವರು ಶ್ರಾವಣ ಪೂರ್ಣಿಮಾ ಪ್ರಾಧಾನ್ಯದಿಂದಲೂ, ಸಾಮಶಾಖೆ

ಮವರು ಹಸ್ತನಕ್ಷತ್ರ ಪ್ರಾಧಾನ್ಯದಿಂದಲೂ ಆಚರಿಸುವದು ಸರ್ವೇಶ್ವರನಿಗೆ ಅಭಿಮತವೆಂಬ ಭಾವವು ಕೃಷ್ಣಾಷ್ಟಮಿಯು ಮನ್ನಾರ್ ಸಂಪ್ರದಾಯಕ್ಕೂ ತೋಳಪ್ಪರ ಸಂಪ್ರದಾಯಕ್ಕೂ ಭಿನ್ನಾಚರಣೆಯುಳ್ಳದಾದರೂ, ಶ್ರೀಕೃಷ್ಣನಿಗೆ ಅಭಿಮತವೇ. ಹಾಗೆಯೇ ದೇಶಾಚರಣೆಯೂ ವ್ಯತ್ಯಾಸವನ್ನು ಹೊಂದಬಹುದು. ನರ್ಮದಾನದಿಯ ದಕ್ಷಿಣತೀರವಾಸಿಗಳಿಗೆ ಕರ್ಕಾಟಕ ಮಾಸದಲ್ಲೂ, ಉತ್ತರ ತೀರವಾಸಿಗಳಿಗೆ ಸಿಂಹಮಾಸದಲ್ಲೂ ಉಪಾಕರ್ಮವು ಉಪಾದೇಯವು ಏಕಾದಶೀ ಸಂಕ್ರಮಣಾಚರಣೆಗಳು ವಾಕ್ಯರೀತ್ಯಾ ಸಿದ್ಧಾಂತರೀತ್ಯಾ ವ್ಯತ್ಯಸ್ತವಾದವುಗಳಾಗಬಹುದು.

(೫) **ಯೋಗ್ಯಾನಾಂ ನಿಯೋಗೈಃ,** ಯೋಗ್ಯರಾದವರ **ಆಜ್ಞೆಯೂ** ಪ್ರಮಾಣವೇ. ಇಲ್ಲಿ ಯೋಗ್ಯರು ಯಾರೆಂದರೆ :—**ಸತ್ಕರ್ಮನಿರತರಾಗಿ, ಶ್ರುತಿ** ಧರ್ಮಪ್ರವರ್ತಕರಾಗಿ, ಪರಿಶುದ್ಧರಾಗಿರುವವರು. ಇಂಥಾವರ ಆಜ್ಞೆಯೂ ನಮಗೆ ಪ್ರಮಾಣವು. ಅನುಬಂಧಿಗಳ ಕನ್ಯಕಾಪರಿಗ್ರಹಣವು ಸಾಧುವೇ ಅಸಾಧುವೇ ಎಂಬ ಸಂದೇಹದಲ್ಲಿ ಅಂತಹ ಯೋಗ್ಯರ ಅಭಿಪ್ರಾಯವೇ ನಮಗೆ ಉಪಾದೇಯವು. ಏಕಾದಶೀ ಮೊದಲಾದವುಗಳಲ್ಲಿ ಧರ್ಮಕಾರ್ಯಾದಿ ವಶದಿಂದ ಫಲಾಹಾರ ಮಾಡಬಹುದೆಂದು ಯೋಗ್ಯರ ಆಜ್ಞೆಯು ಉಪಾದೇಯವು. ಆಚಾರ್ಯರ ತಿರುನಕ್ಷತ್ರಪ್ರಯುಕ್ತ ಶಾತ್ತುಮರೆಯು ದ್ವಾದಶಿಯಲ್ಲಿ ಪ್ರಾಪ್ತವಾದರೆ, ಕಾಲನಿಯಮಾನುಸಾರ ಪಾರಣೆಯು ಮುಖ್ಯವೇ ಇಲ್ಲವೇ ಭಾಗವತಾರಾಧನೆಯೇ ಎಂಬ ಶಂಕಾವಲ್ಲಿ **ಯೋಗ್ಯರ ನಿಯೋಗವು** ನಿರ್ಧಾರಕವು.

(೬) **ನಿಮಿತ್ತಸ್ವಪ್ನಾದ್ಯೈರಪಿ** - ಶಕುನ ಸ್ವಪ್ನಾದಿಗಳೂ ಕೂಡ ಭಗವದಭಿಮತದ್ಯೋತಕಗಳೇ. ಒಳ್ಳೆಯ ಶಕುನಗಳು ಭಗವದಭಿಮತವನ್ನೂ ದುಶ್ಶಕುನಗಳು ಭಗವದನಭಿಮತವನ್ನೂ ಬೋಧಿಸುತ್ತವೆ. ಹಾಗೆಯೇ ಒಳ್ಳೆಯ ಮತ್ತು ಕೆಟ್ಟ ಕನಸುಗಳು ಸರ್ವೇಶ್ವರನ ಅಭಿಮತಾನಭಿಮತಸುಸಙ್ಕಲ್ಪಗಳನ್ನು ತಿಳಿಸುತ್ತವೆ. ಇಲ್ಲಿ ಆದಿ ಪದದಿಂದ ಆರಾಧನೆ ಮುಗಿದನಂತರ ದೇವರ ಪಾದದಲ್ಲಿ ಚೀಟಿ ಬರೆದು ಹಾಕಿ ಅರ್ಚಕನ ಮೂಲಕ ಒಂದು ಚೀಟಿಯನ್ನು ತೆಗೆದು ಭಗವದಭಿಪ್ರಾಯವನ್ನು ತಿಳಿಯುವ **ಕ್ರಮವೂ** ಸಂಗ್ರಹಿಸಲ್ಪಟ್ಟಿತು.

“ತ್ರಿರೂಪೋಹಿತ ಮಾಚಷ್ಟೇ ಮನುಷ್ಯಾಣಾಂ ಕಲೌಹರಿಃ ।
ಗುರುಶ್ಚ ಸ್ವಪ್ನ ದೃಷ್ಟಶ್ಚ ಪೂಜಾಂತೇಚಾರ್ಚಕಾನನಾತ್”

ಕಲಿಯುಗದಲ್ಲಿ ಶ್ರೀಹರಿಯು ಮನುಷ್ಯರಿಗೆ ಮೂರು ರೂಪದಲ್ಲಿ ಹಿತವನ್ನುಂಟುಮಾಡುವನು :-ಗುರುರೂಪದಲ್ಲೂ, ಸ್ವಪ್ನದಲ್ಲಿ ಕಂಡರೂಪದಲ್ಲೂ, ಪೂಜೆಯೆಲ್ಲಾ ಮುಗಿದನಂತರ **“ಅರ್ಚಕಸ್ತು ಹರಿಸ್ಸಾಕ್ಷಾತ್”** ಎಂಬ ಉಕ್ತ್ಯನುಸಾರ ಅರ್ಚ

ಚನ ಮುಖದ ಮೂಲಕವಾಗಿಯೂ ಹಿತವನ್ನು ತಿಳಿಸುತ್ತಾನೆಂಬ ತಾತ್ಪರ್ಯವು.

ಹೀಗೆ ಈ ಆರು ವಿಧವಾಗಿ ಭಗವದಭಿಪ್ರಾಯವನ್ನು ತಿಳಿಯಬಹುದು ಎಂದು ಹೇಳುತ್ತಾರೆ. ಈ ಆರು ವಿಧಗಳಲ್ಲಿ ಪೂರ್ವಪೂರ್ವವಾಗಿ ಹೇಳಲ್ಪಟ್ಟವುಗಳ ಅಭಾವದಲ್ಲಿ ಉತ್ತರೋತ್ತರವಾಗಿ ಹೇಳಲ್ಪಟ್ಟವು ಗ್ರಾಹ್ಯಗಳು ಎಂದು ಭಾವಿಸ ತಕ್ಕದ್ದು. ಪೂರ್ವೋಕ್ತ ಪ್ರಮಾಣವಿರುವಾಗ ಉತ್ತರೋಕ್ತ ಪ್ರಮಾಣ ಗ್ರಾಹ್ಯ ವಲ್ಲವೆಂಬುವದೂ ಇದರಿಂದ ತೋರಿಬರುತ್ತದೆ.

ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ ಹದಿನೇಳನೆಯ ಅಧಿಕಾರವಾದ

ಶಾಸ್ತ್ರೀಯನಿಯಮನಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮನಿಂದ ರಚಿಸಲ್ಪಟ್ಟ

"ಆಚಾರ್ಯಹೃದಯಾನ್ವೇಷಿಣೀ"

ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಪರಾಧ ಪರಿಹಾರಾಧಿಕಾರಃ. ೧೮.

ಸ್ವಚ್ಛಸ್ವಾದು ಸದಾವದಾತಸುಭಗಾಂ ದೈವಾದಯಂ ದೇಹಭೃ
ನ್ಮಾಲಿನ್ಯ ಪ್ರಶಮಾಯ ಮಾಧವದಯಾ ಮಂದಾಕಿನೀಂ ವಿನ್ದತಿ।

ಅವತಾರಿಕೆ. ಹಿಂದಿನ ಅಧಿಕಾರಕ್ಕೂ ಇದಕ್ಕೂ ಸಙ್ಗತಿ ಹೇಗೆಂದರೆ :- ಹಿಂದೆ ಆಜ್ಞಾಕೈಙ್ಕರ್ಯಗಳನ್ನು ಆವಶ್ಯಕವಾಗಿ ಶಾಸ್ತ್ರೀಯನಿಯಮಾನುಸಾರ ನಡೆಸಬೇಕೆಂದೂ, ಅನುಜ್ಞಾಕೈಙ್ಕರ್ಯಗಳು ಐಚ್ಛಿಕವೆಂದೂ, ಅವುಗಳಲ್ಲಿ ಸಾಧ್ಯವಾದವನ್ನು ನಡೆಸುವದು ಪ್ರಪನ್ನನಾದವನಿಗೆ ಸ್ವರೂಪವೆಂದೂ, ಹಾಗೆ ಅನುಜ್ಞಾ ಕೈಙ್ಕರ್ಯಗಳನ್ನು ನಡೆಸುವಾಗ ಅವುಗಳನ್ನೂ ಕೂಡ ಶಾಸ್ತ್ರೀಯ ನಿಯಮಾನುಸಾರ ನಡೆಸಬೇಕೆಂದೂ, ಹೇಳಲ್ಪಟ್ಟಿತು. ಶಾಸ್ತ್ರಗಳಲ್ಲಿ ಹೇಳಿರುವ ನಿಯಮಾನುಸಾರ ವಿಧಿನಿಷೇಧವಾಕ್ಯಗಳನ್ನು ನಡೆಸದೆ ಹೋದರೆ ಅಪರಾಧ ಪ್ರಾಪ್ತವಾಗುತ್ತದೆ. ಹಾಗೆ ಪ್ರಪನ್ನನಿಗೆ ಅಪರಾಧ ಪ್ರಾಪ್ತವಾದರೆ ಆತನಿಗುಂಟಾಗುವ ಪ್ರತ್ಯವಾಯವೇನು ? ಇಂತಹ ಅಪರಾಧಗಳು ಅಬುದ್ಧಿಪೂರ್ವಕವಾಗಿಯಾಗಲಿ ಬುದ್ಧಿಪೂರ್ವಕವಾಗಲಿ ಉಂಟಾಗಬಹುದು. ಬುದ್ಧಿಪೂರ್ವಕ ಅಪರಾಧಗಳು ಒಂದು ವಿಪತ್ತು ಮೂಲಕವಾಗಿಯೂ ಸಂಭವಿಸಬಹುದು. ಅಂತಹ ಕಾರಣವಿಲ್ಲದೆಯೂ ಸಂಭವಿಸಬಹುದು. ಇವುಗಳಿಗೆ ಏನಾದರೂ ಪ್ರಾಯಶ್ಚಿತ್ತದ ಆವಶ್ಯಕವುಂಟೇ? ಪ್ರಪದನದ ಮಹಿಮೆಯಿಂದಲೇ ಇವುಗಳಿಗೆ ನಿವೃತ್ತಿಯುಂಟೇ? ಈ ಅಪರಾಧಗಳಿಂದ ಈ ಪ್ರಪನ್ನನ ಮೋಕ್ಷಪ್ರಾಪ್ತಿಗೆ ವಿಘ್ನವುಂಟೇ ? ಇತ್ಯಾದಿ ಶಂಕೆಗಳಿಗೆ ಈ ಅಧಿಕಾರದಲ್ಲಿ ಸ

ಯದ್ಯಪ್ಯೇಷ ಮಸಾವಸಾದ್ವಿಷಯಸ್ರೋತಃ ಪ್ರಸೂತೈಃ ಪುನಃ
ಪಙ್ಕೈರೇವ ಕಳಙ್ಕಯನ್ನಿಜತನುಂ ಪ್ರಾಜ್ಞೈರ್ನ ಸಂಶ್ಲಿಷ್ಯತೇ ॥೪೦॥

ಮಾಧಾನವನ್ನು ಹೇಳುವವರಾಗಿ, ಪ್ರಥಮತಃ ಈ ಶ್ಲೋಕದಿಂದ. ಸುಕೃತ ಪರಿಪಾಕದಿಂದ ಭರನ್ಯಾಸವನ್ನು ಅನುಷ್ಠಿಸಿ ಸರ್ವೇಶ್ವರ ದಯೆಯೆಂಬ ಮಂದಾಕಿನಿಯಲ್ಲಿ ಅವಗಾಹನೆಯನ್ನು ಮಾಡಿ ಸರ್ವಾಪರಾಧಗಳನ್ನೂ ಕಳೆದುಕೊಂಡು ಪರಿಶುದ್ಧನಾದ ಈ ಜ್ಞಾನಿಯಾದ ಪ್ರಪನ್ನನು ಅಜ್ಞಾನಿಯಾದ ಗಜವು ಸ್ನಾನಮಾಡಿದನಂತರ ಮಣ್ಣನ್ನು ಸೊಂಡಲಿನಿಂದ ತಲೆಯ ಮೇಲೆ ಹಾಕಿಕೊಂಡ ಹಾಗೆ, ಎಂದಿಗೂ ಅಪರಾಧರೂಪ ಕಳಙ್ಕವನ್ನು ಬುದ್ಧಿಪೂರ್ವಕವಾಗಿ ಹೊಂದುವದಿಲ್ಲವೆಂದೂ, ಹಾಗೆ ಒಂದು ವೇಳೆ ಅಪರಾಧವನ್ನು ಬುದ್ಧಿಪೂರ್ವಕವಾಗಿ ಸಂಪಾದಿಸಿಕೊಂಡರೂ, ಅಂಥಾವನು ಪ್ರಾಜ್ಞರಾದ ಭಾಗವತರ ಗೋಷ್ಠಿಗೆ ಅನರ್ಹನಾಗುವನೆಂದು ಹೇಳುತ್ತಾರೆ; ಇಷ್ಟುಮಾತ್ರವೇ ವಿನಾ ಆ ಕೃಪಾಸಿಂಧ್ವ್ಯಪಸಾಗರನು "**ನತ್ಯಜೇಯಂ ಕಥಂಚನ**" ಎಂದು ವಾಗ್ದಾನಮಾಡಿದ ಬಳಿಕ ಮೋಕ್ಷಪ್ರಾಪ್ತಿಗೇನೂ ಸಂದೇಹವಿಲ್ಲವೆಂದು ಭಾವಿಸತಕ್ಕದ್ದು. ಸರ್ವೇಶ್ವರನ ಚರಣಸನ್ನಿಧಿಯಲ್ಲಿ ಮಾಡಿದ ಭರನ್ಯಾಸವು ಎಂದಿಗೂ ವಿತಥವಾಗದು. ಒಂದು ವೇಳೆ ಬುದ್ಧಿಪೂರ್ವಾಪರಾಧವು ಪ್ರಾಪ್ತವಾದರೂ ಪುನಃ ಪ್ರಾಯಶ್ಚಿತ್ತದಿಂದ ಅದೂ ಕೂಡ ಪರಿಹಾರವನ್ನು ಹೊಂದುತ್ತದೆ ಎಂಬ ಭಾವವು. ಆದುದರಿಂದಲೇ ಈ ಅಧಿಕಾರಕ್ಕೆ ಅಪರಾಧ ಪರಿಹಾರಾಧಿಕಾರವೆಂಬ ಹೆಸರು.

ಅರ್ಥ—**ಅಯಂ** - ಹೀಗೆ ಭರನ್ಯಾಸವನ್ನನುಷ್ಠಿಸಿ ಕೃತಕೃತ್ಯನಾದ ಈ **ದೇಹಭೃತ್** - ಬದ್ಧಶರೀರಿಯಾದ ಈ ಜೀವಾತ್ಮನು, **ದೈವಾತ್** - ಯಾದೃಚ್ಛಿಕ ಸುಕೃತ ಪರಿಪಾಕದ ದೆಶೆಯಿಂದ, **ಮಾಲಿನ್ಯಪ್ರಶಮಾಯ** - (ದಯಾಪರವಾಗಿ) ಕರ್ಮವಶ್ಯನಾದ ತನಗೆ ಉಂಟಾದ ಪುಣ್ಯಪಾಪಗಳು ತೊಲಗುವದಕ್ಕಾಗಿ, ತನ್ನ ದೇಹದ ಕೊಳೆಯು ಹೋಗುವದಕ್ಕಾಗಿ (ಮಂದಾಕಿನೀ ನದಿಯ ಪರವಾಗಿ) **ಸ್ವಚ್ಛಸ್ವಾದುಸದಾವದಾತ ಸುಭಗಾಂ**, (ದಯಾಪರವಾಗಿ) **ಸ್ವಚ್ಛ** - ಬಹಳ ನಿರ್ಮಲವಾದ, **ಸ್ವಾದು** ರುಚಿಯಾದ, **ಸದಾವದಾತ** - ಬೆಳ್ಳಗಾದ (ಕೆಟ್ಟವರ್ಣಗಳಿಲ್ಲದ) ಆದುದರಿಂದಲೇ, **ಸುಭಗಾಂ** - ಸ್ನಾನಪಾನಗಳಿಗೆ ಬಹು ಭೋಗ್ಯವಾದ ಅಥವಾ ಮನೋಹರವಾದ, **ಮಾಧವ ದಯಾಮಂದಾಕಿನೀಂ, ಮಾಧವ** - ಲಕ್ಷ್ಮೀಪತಿಯ, **ದಯಾ** - ಕೃಪೆಎಂಬ, **ಮಂದಾಕಿನೀಂ** - ಮಂದಾಕಿನೀನದಿಯನ್ನು, **ವಿಂದತಿ** - ಹೊಂದುವನು, **ಏವಂಯದ್ಯಪಿ** - ಹೀಗೆ

ಇವ್ವರೂ ಕೂಡ, **ಅಸೌ** - ಈ ಪ್ರಪನ್ನನು, **ಅಸಾರವಿಷಯಸ್ರೋತಃ ಪ್ರಸೂತೈಃ**, **ಅಸಾರ** - ಅಲ್ಪಾಸ್ಥಿರಗಳಾದುದರಿಂದ ಸಾರವಿಲ್ಲದಿರುವ, **ವಿಷಯ**-ಶಬ್ದಾದಿ ವಿಷಯಗಳ ಎಂದರೆ ಅವುಗಳನುಭವಗಳ, **ಸ್ರೋತಃ** - ಪ್ರವಾಹಗಳಿಂದ **ಪ್ರಸೂತೈಃ** - ಹುಟ್ಟಿದ, ಅಥವಾ **ವಿಷಯ** - ಶಬ್ದಾದಿ ವಿಷಯಗಳಲ್ಲಿನ, **ಸ್ರೋತಃ** - ಅನುಭವ ಪ್ರವಾಹಗಳಿಂದ, **ಪ್ರಸೂತೈಃ** - ಉತ್ಪನ್ನಗಳಾದ. **ಪಙ್ಕೈರೇವ** – ಕೆಸರುಗಳಿಂದಲೇ ಎಂದರೆ ಪಾಪಗಳಿಂದಲೇ, **ನಿಜತನುಂ** – ತನ್ನ ಶರೀರವನ್ನು, **ಕಳಙ್ಕಯನ್**-ಮಾಲಿನ್ಯವನ್ನು ಹೊಂದಿಸುವವನಾಗಿ, **ಪ್ರಾಜ್ಞೈಃ**-ಮಹಾಜ್ಞಾನಿಗಳಾದ ಭಾಗವತೋತ್ತಮರುಗಳೊಂದಿಗೆ, **ನ ಸಂಶ್ಲಿಷ್ಯತೇ**- ಸೇರಿರಲು ಅನರ್ಹನಾಗುತ್ತಾನೆ, ಎಂದರೆ ಭಾಗವತರುಗಳು ಈತನನ್ನು ಪರಿಗ್ರಹಿಸುವುದಿಲ್ಲವೆಂಬ ಭಾವವು.

ತಾತ್ಪರ್ಯ—ಹಿಂದೆ ಪುರುಷಾರ್ಥಕಾಷ್ಠಾಧಿಕಾರದ ಕೊನೆಯ ಶ್ಲೋಕದಲ್ಲಿ ಪ್ರಪನ್ನರು ತಮ್ಮ ಅಮೋಘವಾದ ವಾಕ್ಕಿನಿಂದ ಸರ್ವೇಶ್ವರನನ್ನು ಕುರಿತು ತುಚ್ಛವಾದ ಯಾವ ಪುರುಷಾರ್ಥವನ್ನೂ ಯಾಚಿಸುವುದಿಲ್ಲವೆಂದೂ, ಮೋಕ್ಷವನ್ನು ಆತನೇ ದಯಪಾಲಿಸುವನೆಂದು ವಾಗ್ದಾನವಾಗಿರುವುದರಿಂದ ಅದನ್ನೂ ಯಾಚಿಸುವುದಿಲ್ಲವೆಂದೂ, ಪ್ರಪನ್ನರಿಗೆ ಮುಖ್ಯವಾಗಿ ಬೇಕಾದುದು ಭಾಗವತರ ಪ್ರಸನ್ನತೆಯು. ಅದನ್ನು ಸರ್ವೇಶ್ವರನೇ ತನ್ನ ಕೃಪಾಪ್ರಭಾವದಿಂದಲೇ ಉಂಟುಮಾಡುವನೆಂದೂ, ಹೇಳಲ್ಪಟ್ಟಿತು. ಸರ್ವೇಶ್ವರನ ಅಂತಹ ಕೃಪಾಪ್ರಭಾವರೂಪವಾದ ಪ್ರೀತಿಯನ್ನು ಯಾವಜ್ಜೀವವೂ ಈ ಪ್ರಪನ್ನನು ಹೊಂದಿರಬೇಕಾದರೆ ಶಾಸ್ತ್ರೀಯನಿಯಮಾನುಸಾರ ಪ್ರವೃತ್ತಿಯು ಅತ್ಯಾವಶ್ಯಕವು. ಹಾಗೆ ನಡೆಯದಿದ್ದರೆ ಅಪರಾಧಗಳಿಗೆ ಗುರಿಯಾಗುವನು.

ಪ್ರಪನ್ನನಾಗಿ ತನ್ನ ಸರ್ವಭರವನ್ನೂ ಸ್ವಾಮಿಯಲ್ಲಿಟ್ಟಿರುವವನು ಆತನಿಗೆ ಪ್ರಿಯನಾಗಿ ವರ್ತಿಸುವನೇ ವಿನಾ ಅಪರಾಧಗಳನ್ನು ಬುದ್ಧಿಪೂರ್ವಕವಾಗಿ ಮಾಡಿ ತದ್ವಾರಾ ಭಗವದಪ್ರೀತಿಗೆ ಎಂದಿಗೂ ಗುರಿಯಾಗಲಾರನು. ಏತಕ್ಕೆಂದರೆ ಶರಣಾಗತಿಯನ್ನು ಮಾಡಿದ ಒಡನೆಯೇ ಪ್ರಪನ್ನನು ತನ್ನವನಾದನು, **"ಯೋಮದ್ಭಕ್ತಃ ಸಮೇಪ್ರಿಯಃ"** ಎಂದು ಹೇಳಿರುವ ಮೇರೆಗೆ ಆತನು ತುಂಬಾ ಪ್ರಿಯನಾದವನಾದನು. ಅಂಥಾವನಿಂದ ಸರ್ವೇಶ್ವರನು ಎಂದಿಗೂ ಅಪರಾಧಗಳನ್ನು ಮಾಡಿಸಲಾರನು. **"ದದಾಮಿ ಬುದ್ಧಿಯೋಗಂತಂ"** ಎಂದು ಹೇಳಿರುವ ಮೇರೆಗೆ ಸರ್ವೇಶ್ವರನೇ ತನ್ನ ಕೃಪಾಪ್ರಭಾವದಿಂದ ವಿವೇಕವನ್ನು ಕೊಟ್ಟಿರುವದರಿಂದ ಬುದ್ಧಿಪೂರ್ವಕವಾಗಿ ಮಹಾಪಾತಕಗಳನ್ನಾಗಲಿ ಫಲಾಕಾಂಕ್ಷೆಯಿಂದ ಪುಣ್ಯಕರ್ಮಗಳನ್ನಾಗಲಿ ಎಸಗುವದಿಲ್ಲವು. ಈ ಅಭಿಪ್ರಾಯವನ್ನು ಈ ಶ್ಲೋಕದ

ಪೂರ್ವಾರ್ಧದಿಂದ ತಿಳಿಸುತ್ತಾರೆ. ಅಧಿಕಾರಾಂತ್ಯದ ಕೊನೇ ಶ್ಲೋಕದಲ್ಲೂ ಈ ಅಭಿಪ್ರಾಯವನ್ನೇ "ಧೀಪೂರ್ವೋತ್ತರ ಪಾಪ್ಮನಾಮಜನನಾತ್" ಎಂಬುವದರಿಂದ ವ್ಯಕ್ತಪಡಿಸುತ್ತಾರೆ. ಒಂದು ವೇಳೆ ಅಂಥಾವನೂ ಕೂಡ ಬುದ್ಧಿಪೂರ್ವಕವಾಗಿ ಅಪರಾಧಮಾಡಿದರೆ ಅದರಿಂದ ನಾವು ಊಹಿಸತಕ್ಕದ್ದೇನೆಂದರೆ:—(೧)ಆತನಿಗೆ ಪ್ರಪತ್ತ್ಯಂಗಗಳ ಲೋಪದಿಂದ ಶರಣಾಗತಿಯೇ ಸಿದ್ಧಿಸಲಿಲ್ಲವೆಂದಾಗಲಿ ಹೇಳಬಹುದು. (೨) ಅಥವಾ, ಆತನ ಪ್ರಾರಬ್ಧಕರ್ಮವು ತುಂಬಾ ಪ್ರಬಲವಾದುದೆಂದಾಗಲಿ ತಿಳಿಯಬಹುದು. ಹೀಗೆ ಶರಣಾಗತಿಯನ್ನನುಷ್ಠಿಸಿದನಂತರವೂ ಇಂತಹ ಪ್ರಾರಬ್ಧಕರ್ಮ ಪ್ರಾಬಲ್ಯದಿಂದ ವಿವೇಕಶೂನ್ಯತೆಯನ್ನು ಹೊಂದಿ, ಬುದ್ಧಿಪೂರ್ವಕವಾಗಿ ಪುಣ್ಯಾಪಾಪಗಳು ಪ್ರಾಪ್ತವಾದರೆ, ಅಂಥಾವನು ಪ್ರಪನ್ನಗೋಷ್ಠಿಗೆ ಅನರ್ಹನಾಗುವನೆಂದು ಇಷ್ಟುಮಾತ್ರ ಈ ಶ್ಲೋಕದ ಉತ್ತರಾರ್ಧದಿಂದ ತಿಳಿಸುತ್ತಾರೆ. ಅಂತಹ ಬುದ್ಧಿಪೂರ್ವಾಪರಾಧಕ್ಕೂ ಕೂಡ ಪುನಶ್ಶರಣಾಗತಿರೂಪ ಪ್ರಾಯಶ್ಚಿತ್ತವುಂಟೆಂದೂ, ಹಾಗೆ ಪುನಶ್ಶರಣಾಗತಿಯನ್ನು ಮಾಡದೇ ಹೋದರೆ ಆತನನ್ನು ಆತನ ದೇಹಾವಸಾನದೊಳಗೇನೆ ಅಲ್ಪಶಿಕ್ಷೆಗೆ ಗುರಿಮಾಡಿ, ತನ್ನ ಕೃಪಾಪ್ರಭಾವ ಮೂಲಕ ರಕ್ಷಿಸಿ, ಆತನಿಗೆಮೋಕ್ಷಪ್ರಾಪ್ತಿಯನ್ನಿತ್ತು, ತನ್ನ ಅಮೋಘವಾದ ವಾಗ್ದಾನವನ್ನು ಕಾಪಾಡಿಕೊಳ್ಳುವನು.

ಆದುದರಿಂದ ಇದೆಲ್ಲಾ ಮಾಧವ ದಯೆಯ ಪ್ರಭಾವವೆಂದು ಹೇಳುವುದಕ್ಕೆ ಪ್ರಾರಂಭಿಸಿ, ಸರ್ವೇಶ್ವರನ ದಯೆಯಾದುದರಿಂದ ಇಹಲೋಕದ ನದಿಗಳನ್ನೆಲ್ಲಾ ತ್ಯಜಿಸಿ ದೇವಗಂಗೆಯಾದ ಮಂದಾಕಿನಿಗೆ ಹೋಲಿಸಿರುತ್ತಾರೆ.

ಈ ಚೇತನನಾದರೋ ದೇಹಭೃತ್, ಪ್ರಕೃತಿರೂಪ ಶರೀರವನ್ನು ಧರಿಸಿರುವನು. ಆದುದರಿಂದ ಜ್ಞಾನತಿರೋಹಿತನಾಗಿ, ಈ ಭಗವತ್ಕೃಪಾರೂಪ ಮಂದಾಕಿನಿಯ ಪ್ರಭವವನ್ನರಿಯದೆ ತಟಸ್ಥನಾಗಿರುವವನು. ಈ ಕೃಪಾರೂಪ ಮಂದಾಕಿನಿಯಲ್ಲಿ ಅವಗಾಹಿಸಿದರೆ ಸರ್ವವಿಧ ಪಾಪಗಳೂ ತೊಲಗಿ ಪರಿಶುದ್ಧನಾಗುವನೆಂದು ತಿಳಿಯನು. ಪ್ರಪನ್ನನಾದರೋ ಹಾಗಲ್ಲವು. ಭಗವಂತನ ಮತ್ತು ಆಚಾರ್ಯರ ಕೃಪಾಕಟಾಕ್ಷದಿಂದ "ಮಂದಾಕಿನೀಂ ವಿಂದತಿ" ಎಂದು ಹೇಳಿರುವಹಾಗೆ ಇದರ ಪ್ರಭಾವವನ್ನರಿತು, "ಸರಿತಾಂ ಶ್ರೇಷ್ಠಾ ಸರ್ವಪಾಪವಿನಾಶಿನೀ" ಎಂದು ಸಮಸ್ತ ಪಾಪಗಳನ್ನು ಹೋಗಲಾಡಿಸುವ ಈ ಕೃಪಾರೂಪಶ್ರೇಷ್ಠವಾದ ನದಿಯನ್ನು ಹೊಂದಿ ಅವಗಾಹಿಸಬೇಕಾದರೆ ಯಾದೃಚ್ಛಿಕ ಸುಕೃತವೂ ಅದರಿಂದುಂಟಾಗುವ ಆದಿಗುರುವಿನ ಕಟಾಕ್ಷವೀಕ್ಷಣಾದಿಗಳೂ ಬೇಕು. ಆದುದರಿಂದಲೇ ಇಲ್ಲಿ ದೈವಾತ್ ಎಂಬ ಪ್ರಯೋಗವು ಈ ದೈವಾತ್ ಎಂಬುವದರಿಂದ ಈತನು ಮಾಡಿದ ಅಲ್ಪಸುಕೃತಕ್ಕೆ ಪರವಶನಾಗಿ ಸರ್ವೇಶ್ವರನು ಪರಮಕೃಪಯಾ

ಅನುಗ್ರಹಿಸಿದ ಕಟಾಕ್ಷವೀಕ್ಷಣ, ಸಾತ್ವಿಕಸಂಭಾಷಣ, ಗುರೂಪಸದನ, ಉಪಾಯೋಪಸ್ಥಾನ ಮುಂತಾದ ಪರಮೋಪಕಾರವೆಲ್ಲಾ ಸಂಗ್ರಹಿಸಲ್ಪಟ್ಟಿತು.

ಮಂದಾಕಿನಿಯೇ ಎಂಥಾದ್ದೆಂದರೆ—"**ಅನನ್ತ ಚರಣಾಂಭೋಜಪ್ರಸೂತಾಯಾಃ ಭವಚ್ಛಿದಃ**" (ಭಾಗ. ೯. ೯. ೧೪) ಅನನ್ತನಾದ ಸರ್ವೇಶ್ವರನ ಪಾದಕಮಲದಿಂದ ಹುಟ್ಟಿದವಳಾದುದರಿಂದಲೇ ಸಂಸಾರರೂಪವಾದ ಸರ್ವಪಾಪಗಳನ್ನೂ ಅವರಿಂದುಂಟಾಗುವ ದುಃಖಗಳನ್ನೂ ಕತ್ತರಿಸುವಂಥಾವಳು, ಹೀಗಿರುವಾಗ ಆತನ ಕೃಪಾಮಂದಾಕಿನಿಗೆ ಅಂತಹ ಶಕ್ತಿಯುಂಟೆಂದು ಹೇಳತಕ್ಕದ್ದೇನಿದೆ ಎಂಬ ಭಾವವು ತೋರುವಹಾಗೆ **ಕೃಪಾಮಂದಾಕಿನೀಂ** ಎಂದು ರೂಪಕವಾಗಿ ಹೇಳಿರುತ್ತಾರೆ. ಆಗಲಿ, ಈ ಕೃಪೆಗೆ ಇಂತಹ ಅತ್ಯದ್ಭುತವಾದ ಶಕ್ತಿ ಇರಲು ಕಾರಣವೇನೆಂಬರೆ, ಈತನು ಮಾಧವನಾದುದರಿಂದ, ಶ್ರಿಯಃಪತಿಯಾದುದರಿಂದ ಎಂದು ತಿಳಿಸುವದಕ್ಕಾಗಿ, **ಮಾಧವಕೃಪಾ ಮಂದಾಕಿನೀಂ** ಎಂದು ಪ್ರಯೋಗಿಸಿರುತ್ತಾರೆ. "**ಅನುಗ್ರಹಮಯು**"ಳಾಗಿ "**ನಿತ್ಯಮಜ್ಞಾತನಿಗ್ರಹಳಾದವಳ**" **ಧವ** ಎಂದರೆ ಪತಿಯಾದುದರಿಂದಲೇ, ಅಂಥಾವಳ**ಸಹವಾಸ** ಈತನಿಗೆ ಇರುವದರಿಂದಲೇ, ಭಗವಂತನಿಗೆ ಇಂತಹ ನಿರತಿಶಯವಾದ ಯಶಸ್ಸು. "**ಅಪ್ರಮೇಯಂ ಹಿ ತತ್ತೇಜಃ ಯಸ್ಯಸಾ ಜನಕಾತ್ಮಜಾ**" ಎಂದು ಶ್ರೀರಾಮನ ತೇಜಸ್ಸು ನಿರುಪಮವಾಗಿ ಉತ್ಕರ್ಷವನ್ನು ಹೊಂದಲು ಸೀತಾಸಂಬಂಧವೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ನಮ್ಮಾಳ್ವಾರವರು **ಮಾಧವನೆನ್ರೇನ್ರೋತ ವಲ್ಲರೇಲ್,** ಎಂಬ (೧೦. ೫. ೭) ಪಾಶುರದಲ್ಲಿ ದ್ವಯಾನುಸಂಧಾನ ಮಾಡುವ ಕಾಲದಲ್ಲಿ ಯಾವಾಗಲೂ ನಾರಾಯಣಶಬ್ದಕ್ಕೆ ಶ್ರೀಮಚ್ಛಬ್ದವನ್ನು ಸೇರಿಸಿಯೇ ಹೇಳತಕ್ಕದ್ದು, ಹಾಗೆ ಮಾಧವ, ಶ್ರಿಯಃಪತಿ ಎಂದು ಹೇಳಿದರೇನೆ ಪಾಪಗಳೆಲ್ಲಾ ತೊಲಗಿ ಪ್ರಾಪ್ಯಪ್ರಾಪ್ತಿಯುಂಟೆಂದುಪದೇಶಿಸುತ್ತಾರೆ.

ಆ ಕೃಪಾರೂಪಮಂದಾಕಿನಿಯಲ್ಲಿ ಅವಗಾಹನೆಯು ಏತಕ್ಕೆಂದರೆ, ನಿರ್ಮಲವಾದ ನದಿಯಲ್ಲಿ ಮೈತೊಳೆದರೆ ಮಾಲಿನ್ಯವು ಹೇಗೆ ತೊಲಗುತ್ತದೆಯೋ, ದೇವಗಂಗೆಯಲ್ಲಿಅವಗಾಹನೆಮಾಡಿದರೆ ಸರ್ವಪಾಪವೂ ಹೇಗೆ ತೊಲಗುತ್ತದೋ, ತದ್ವತ್ ಇಲ್ಲಿಯೂ **ಮಾಲಿನ್ಯಪ್ರಶಮನಾಯ** ಪ್ರಾರಬ್ಧೇತರ ಸರ್ವಪಾಪಗಳೂ ತೊಲಗುವದಕ್ಕಾಗಿ, **ಮಂದಾಕಿನೀಂ ವಿಂದತಿ** ಈ ಕೃಪಾರೂಪ ನದಿಯಲ್ಲಿ ಅವಗಾಹಿಸುತ್ತಾನೆ.

ಆ ಕೃಪಾಮಂದಾಕಿನಿಯು ಎಂಥಾದ್ದೆಂದರೆ ಹೇಳುತ್ತಾರೆ **ಸ್ವಚ್ಛಸ್ವಾದುಸದಾನದಾತ ಸುಭಗಾಂ,** ಮಂದಾಕಿನಿಯು ನಿರ್ಮಲವಾಗಿಯೂ ಬಹುರುಚ್ಯವಾಗಿಯೂ ಯಾವಾಗಲೂ ಬೆಳ್ಳಗೂ ಇದ್ದು ಮಣ್ಣು ಮುಂತಾದುವುಗಳೊಂದೂ ಇಲ್ಲದ ನಿರ್ಮಲವಾದ ಸ್ವಾದೂದಕವುಳ್ಳದ್ದು, ಹಾಗೆಯೇ ಕೃಪಾನದಿಯೂ ಕೂಡ ಸ್ವಚ್ಛ

ವಾದುದು, ಆ ಕೃಪೆಗೆ ಹೇಯಗುಣ ಸಂಬಂಧವೇ ಇಲ್ಲದುದರಿಂದ ಸ್ವಚ್ಛವಾದುದು, ಮೋಕ್ಷವನ್ನಿತ್ತು ತನ್ನನ್ನನುಭವಿಸುವ ಮತ್ತು ತನ್ನ ಕೈಂಕರ್ಯರೂಪ ಸಾಮ್ರಾಜ್ಯಾನುಭವವುಳ್ಳ ಭೋಗ್ಯತೆಯುಳ್ಳದಾದುದರಿಂದ **ಸ್ವಾದುತ್ವವೂ** ಉಂಟು; ನಿಶ್ಶೇಷವಾಗಿ ಪಾಪಕ್ಷಯವನ್ನುಂಟುಮಾಡುವದರಿಂದ **ಸದಾವದಾತ** ಎಂದು ಹೇಳಲ್ಪಟ್ಟಿತು; ಬುದ್ಧಿಪೂರ್ವಕವಾಗಿ ಪಾಪಮಾಡಿದರೂ, ಅದನ್ನೂ ಕೂಡ ಪ್ರಾಯಶ್ಚಿತ್ತಮುಖೇನವಾಗಲಿ ಅಥವಾ ಅಲ್ಪದಂಡನೆಯಿಂದಲಾಗಲಿ ಹೋಗಲಾಡಿಸಿ ಮೋಕ್ಷವನ್ನು ಈ ಕೃಪೆಯು ಕೊಡುವದರಿಂದ ಸದಾವದಾತತ್ವವು ಸಿದ್ಧಿಸಿತು ಎಂಬ ಭಾವವು. ಸಂಪೂರ್ಣವಾಗಿ ಪಾಪಕ್ಷಯ ಮಾಡುವದರಿಂದಲಾಗಲಿ, ಅಥವಾ ಅನಾದಿಕಾಲದಿಂದಿರುವದರಿಂದಲಾಗಲಿ, ಇಲ್ಲಿ **ಸದಾ** ಎಂಬ ಪ್ರಯೋಗವು. ಹೀಗೆ ಮೋಕ್ಷಪ್ರಾಪ್ತಿಗೆ ವಿರೋಧವನ್ನೆಲ್ಲಾ ಪರಿಹರಿಸುವದರಿಂದ **ಸುಭಗಾ** ಮನೋಹರವಾದುದು.

ಯದ್ಯಸ್ಯೈವಂ-ಇಂತಹ ಕೃಪಾಮಂದಾಕಿನಿಯಲ್ಲಿ ಅವಗಾಹಿಸಿ ಪ್ರಾರಬ್ಧಕರ್ಮ ವಿನಾ ಇತರ ಪಾಪಗಳನ್ನೆಲ್ಲಾ ನಿಶ್ಶೇಷವಾಗಿ ಕಳೆದುಕೊಂಡು ಗುರುಮುಖೇನ ಪ್ರಪದನಾನುಷ್ಠಾನ ಮಾಡಿದ ಸುಕೃತಿಯಾದ ಪ್ರಪನ್ನನು ಮಹಾ ಪರಿಶುದ್ಧಸ್ವರೂಪವುಳ್ಳವನಾಗುವದರಿಂದ ಅಂಥಾವನು ಪುನಃ ಅಪರಾಧಗಳನ್ನುಂಟುಮಾಡುವ ಅಸಾರವಾದ ಐಹಿಕ ವಿಷಯಗಳಲ್ಲಿ ಭೋಗ್ಯಭಾವವನ್ನು ಸುತರಾಂ ತ್ಯಜಿಸಬೇಕು. ತನ್ನ ಪರಿಶುದ್ಧ ಸ್ವರೂಪವನ್ನು ಐಹಿಕ ಸುಖಾನುಭವಗಳಿಂದ ಮಾಲಿನ್ಯವನ್ನು ಹೊಂದುವಹಾಗೆ ಮಾಡಕೂಡದು. ಮಾಧವದಯಾ ಮಂದಾಕಿನಿಯಲ್ಲಿ ಮಿಂದುದರಿಂದ ಹಿಂದೆ ತನ್ನ ಶರೀರಕ್ಕೆ ಅಂಟಿದ್ದ ಸಮಸ್ತ ಕೆಸರೂ ತೊಳೆಯಲ್ಪಟ್ಟು ಪರಿಶುದ್ಧನಾದವನು, ಪುನಃ ಅಂತಹ ಕೆಸರಿನಲ್ಲೇ ಸ್ನಾನ ಮಾಡಬಹುದೇ ? ಕೆಸರಾದ ಶರೀರವನ್ನು ಪರಿಶುದ್ಧವಾದ ನೀರುಳ್ಳ ಕೃಪಾ ಮಂದಾಕಿನಿಯಲ್ಲಿ ತೊಳದಿದ್ದಾಯಿತು. ಮುಂದಕ್ಕೆ ಆ ಶರೀರವನ್ನು ಪರಿಶುದ್ಧವಾಗಿಟ್ಟುಕೊಳ್ಳದೆ ಪುನಃ ಕೆಸರು ನೀರಿನಲ್ಲೇ ಪ್ರಾಜ್ಞನಾದವನು ತೊಳೆಯುವನೋ ? ಎಂದಿಗೂ ತೊಳೆಯಲಾರನು. ಜ್ಞಾನಶೂನ್ಯತೆಯುಳ್ಳ ಗಜ, ಮಹಿಷ, ಸೂಕರಗಳು ಬೇಕಾದರೆ, ಅವುಗಳ ಮಾಲೀಕನು ಪರಿಶುದ್ಧ ನೀರಿನಲ್ಲಿ ತೊಳೆದನಂತರವೂ ನಿಜತನೂಂ ತಮ್ಮ ಶರೀರಗಳನ್ನು, **ಪಙ್ಕೈರೇವ ಕಳಂಕಯಂತಿ,** ಕೆಸರು ಗುಂಡಿಗಳಲ್ಲಿ ಹೊರಳಾಡಿ ಕೆಸರುಮಾಡಿಕೊಳ್ಳಬಹುದು. ಗಜವು ಸ್ನಾನಮಾಡಿದ ನಂತರ ಸೊಂಡಲಿನಿಂದ ಮಣ್ಣನ್ನು ತೆಗೆದು ತಲೆಯ ಮೇಲೆ ಹಾಕಿಕೊಳ್ಳುತ್ತದೆ. ಹಂದಿ ಮತ್ತು ಕೋಣನು ಕೆಸರಿನಲ್ಲಿ ಹೊರಳಾಡುತ್ತವೆ. ವಿವೇಕಿಯಾದವನು ಮಾಧವದಯೆ ಎಂಬ ನಿರ್ಮಲೋದಕದಲ್ಲಿ ಸರ್ವಾಪರಾಧಗಳನ್ನೂ ಕಳೆದುಕೊಂಡ ನಂತರ, ಪುನಃ ಐಹಿಕ ಭೋಗಾಸಕ್ತನಾಗಿ ಈ ಪ್ರಕೃತಿ ಎಂಬ ಹಾಳುಗುಂಡಿಯಲ್ಲಿ

ಪ್ರಪನ್ನಸ್ಯ ಬುದ್ಧಿಪೂರ್ವೋತ್ತರ ಪಾಪಾನಾಂ ಅಸಂಭಾವಿತತ್ವಂ

ಇಪ್ಪದಿ ಭಗವಚ್ಛೇಷತ್ವೈಕ ಸ್ವಭಾವನಾಗೈಯಾಲೆ ಶಾಸ್ತ್ರನಿಯತ

ಬಿದ್ದು ಹೊರಳಿ, ದೇಹವನ್ನು ಕೆಸರುಮಾಡಿಕೊಳ್ಳಕೂಡದು. ಹಾಗಲ್ಲದೆ ಅಸಾರವಾದ ವಿಷಯ ಸುಖಾನುಭವಗಳ ಪ್ರವಾಹಗಳಿಂದ ಉಂಟಾದ ಪಂಕದಿಂದ ತನ್ನ ಶರೀರವನ್ನು ಕೆಸರುಮಾಡಿಕೊಂಡರೆ, ಅಂಥಾವರು **ಪ್ರಾಜ್ಞೈರ್ನ ಸಂಶ್ಲಿಷ್ಯತೇ,** ಕೃಪಾಮಂದಾಕಿನಿಯಲ್ಲಿ ಸ್ನಾನಮಾಡಿ ಪರಿಶುದ್ಧರಾಗಿರುವ ಪ್ರಾಜ್ಞರಾದ ಭಾಗವತೋತ್ತಮರಿಂದ ಹತ್ತಿರ ಸೇರಿಸಲ್ಪಡುವದಿಲ್ಲವು. ಸ್ವಚ್ಛವಾದ ನೀರಿನಲ್ಲಿ ಸ್ನಾನಮಾಡಿ ಮಡಿಯುಟ್ಟವರು ಕೆಸರಿನಲ್ಲಿ ಬಿದ್ದು ಬಂದವನನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲು ಹೇಗೆ ಸಮ್ಮತಿಸರೋ, ಹಾಗೆಯೇ ಐಹಿಕವೆಲ್ಲಾ ತೃಣವೆಂದು ಭಾವಿಸಿ ಅವುಗಳಲ್ಲಿ ಮನಸ್ಸಿಡದೆ ಮಾಧವಕೃಪಾ ಮಂದಾಕಿನಿಯಲ್ಲಿ ಅವಗಾಹಿಸಿ ಪರಿಶುದ್ಧರಾದ ಭಾಗವತೋತ್ತಮರು ಪುನಃ ಐಹಿಕದಲ್ಲೇ ಬಿದ್ದು ನರಳುತ್ತಿರುವವರನ್ನು ಹತ್ತಿರ ಸೇರಿಸರು ಎಂಬ ಭಾವವು. ಇದೇತಕ್ಕೆಂದರೆ, ಅಂಥಾವನು **ಪ್ರಿಯೋಽಪಿ ನ ಪ್ರಿಯೋಽಸೌ ಮದಾಜ್ಞಾ ವ್ಯತಿವರ್ತನಾತ್,** ಒಂದು ಕಾಲದಲ್ಲಿ ಪ್ರಿಯನಾಗಿದ್ದರೂ ಈಗ ನನ್ನ ಆಜ್ಞೆಯನ್ನು ಅತಿಕ್ರಮಿಸುವದರಿಂದ ಆತನು ನನಗೀಗ ಪ್ರಿಯನಲ್ಲವೆಂದೂ, "**ಮದ್ಭಕ್ತೋಽಪಿ ನಮೇಽಪ್ರಿಯಃ**" ನನ್ನ ಭಕ್ತನಾದರೂ ಅಂಥಾವನು ನನಗೆ ಪ್ರಿಯನಲ್ಲವು ಎಂದು ಹೇಳಿರುವಹಾಗೆ, ಈಗ ಸರ್ವೇಶ್ವರನಿಗೆ ಪ್ರಿಯರಲ್ಲವಾದುದರಿಂದ ಪರವೈಕಾನ್ತಿಗಳಾದ ಪರಮಭಾಗವತರಿಗೂ ಕೂಡ ಪ್ರಿಯನಾಗುವದಿಲ್ಲವು.

ಆದರೆ ಭಾಗವತೋತ್ತಮರಿಗೆ, ಇಂಥಾವನು ಈತನ ದೇಹಾವಸಾನದವರೆಗೂ ದೋಷಿಯೇ ಹೇಗೆ ಎಂದರೆ, **ನಿಜತನುಂ ಕಳಙ್ಕಯೇತ್** ಎಂದು ಹೇಳಿರುವದರಿಂದ, ಎಲ್ಲಿಯವರೆಗೆ ಈತನು ಐಹಿಕದ ಭೋಗಗಳಿಗೆ ಸಿಲುಕಿ ಅಪರಾಧಗಳನ್ನು ಸಂಪಾದಿಸಿಕೊಳ್ಳುತ್ತಾ ದೇಹವನ್ನು ಕೆಸರುಮಾಡಿಕೊಳ್ಳುವನೋ ಅದುವರೆಗೂ ಈತನು ಅನರ್ಹನು. ಆದರೆ ಪುನಃ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಯಾವಾಗ ಅನುಷ್ಠಿಸಿದನೋ ಆಗ ನಿಜತನುವಿನ ಪಙ್ಕವು ತೊಲಗಿ ಪರಿಶುದ್ಧನಾಗುವವರಿಂದ ಸರ್ವೇಶ್ವರನಿಗೆ ಇಷ್ಟನಾದವನಾಗುವನು; ಆಗ ಭಾಗವತೋತ್ತಮರಿಗೂ ಕೂಡ ಉಪಾದೇಯನೇ ಆಗುವನು ಎಂಬುವದನ್ನೂ ಕೂಡ ಊಹಿಸಬಹುದು.

ತತ್ತತ್ಕೈಙ್ಕರ್ಯೈಕರಸನಾನ ಇವ್ವಧಿಕಾರಿಕ್ಕು ಪ್ಪಿನ್ಬನಾಪತ್ತಿಲ್ ಬುದ್ಧಿ ಪೂರ್ವಕಮಾನವಪರಾಧಮ್ ವರುಗೈ, ಪ್ರಧಾನ ಕೈಙ್ಕರ್ಯೈಕ ನಿಷ್ಠೈಕ್ಕು ವಿರುದ್ಧಮಾಗೈಯಾಲೇ ಪ್ರಾಯೇಣ ಸಂಭಾವಿತಮನ್ರು.

ಪ್ರಪನ್ನನಿಗೆ ಬುದ್ಧಿಪೂರ್ವಕವಾದ ಉತ್ತರಾಘ ಸಂಬಂಧವು ಅಸಂಭಾವಿತವಾದುದು

ಇಪ್ಪಡಿ - ಹೀಗೆ ಎಂದರೆ, ಮೇಲೆ ಶಾಸ್ತ್ರೀಯ ನಿಯಮನಾಧಿಕಾರದಲ್ಲಿ ಹೇಳಿದ ಹಾಗೆ, ಇದು "**ಶಾಸ್ತ್ರನಿಯತ**" ಎಂಬುವದರೊಂದಿಗೆ ಅನ್ವಯಿಸ ತಕ್ಕದ್ದು. ತತ್ತತ್ಕೈಙ್ಕರ್ಯಗಳು **ಶಾಸ್ತ್ರನಿಯತ**ವಾಗಿರತಕ್ಕದ್ದು ಎಂಬುವದು ಇಪ್ಪಡಿ ಎಂಬುವದರ ವಿವರಣವು: **ಭಗವಚ್ಛೇಷತ್ವೈಕಸ್ವಭಾವನಾಗೈಯಾಲೆ** - ತಾನು ಜಗದಂತನಿಗೇನೇ ಮುಖ್ಯವಾಗಿ ಶೇಷಭೂತನಾದವನಾದುದರಿಂದ, **ಶಾಸ್ತ್ರನಿಯತ ತತ್ತತ್ಕೈಙ್ಕರ್ಯೈಕರಸನಾನ** - ಶಾಸ್ತ್ರವಿಧಿಗಳಿಗನುಸಾರವಾಗಿಯೇ ಅದಾಯಾ ಆಜ್ಞಾನುಜ್ಞಾ ಕೈಙ್ಕರ್ಯಗಳೇ ಮುಖ್ಯ ಪ್ರಯೋಜನವಾಗಿವುಳ್ಳ, **ಇವ್ವಧಿಕಾರಿಕ್ಕು** - ಈ ಕೃತಕೃತ್ಯನಾದ ಪ್ರಪನ್ನನಿಗೆ, **ಪಿನ್ಬು** - ಪ್ರಪತ್ತ್ಯುತ್ತರ ಕಾಲದಲ್ಲಿ, **ಅನಾಪತ್ತಿಲ್** - ಆಪತ್ಕಾಲವಲ್ಲದಿರುವಾಗ, **ಬುದ್ಧಿಪೂರ್ವಕಮಾನ ಅಪರಾಧಮ್ ವರುಗೈ** - ಬುದ್ಧಿಪೂರ್ವಕವಾಗಿ ಅಪರಾಧಗಳು ಪ್ರಾಪ್ತವಾಗುವದು, **ಪ್ರಧಾನ ಕೈಙ್ಕರ್ಯೈಕ ನಿಷ್ಠೈಕ್ಕು** - ಪ್ರಪತ್ತಿಯಿಂದುಂಟಾದ ಕೈಙ್ಕರ್ಯವೇ ಮುಖ್ಯವಾದ ನಿಷ್ಠೆಯಾಗಿರುವದಕ್ಕೆ, **ವಿರುದ್ಧಮಾಗೈಯಾಲೇ** - ವಿರುದ್ಧವಾಗುವದರಿಂದ **ಪ್ರಾಯೇಣ** - ಬಹಳ, **ಸಂಭಾವಿತಮನ್ರು** - ಸಂಭವಿಸ ತಕ್ಕದ್ದಲ್ಲವ, **ಪ್ರಾಯೇಣ** ಅಸಂಭಾವಿತವೆಂದು ಹೇಳಿದುದರಿಂದ, ಕೆಲವು ಸಂದರ್ಭಗಳಲ್ಲಿ ಬುದ್ಧಿಪೂರ್ವಾಘವು ಕೃತಕೃತ್ಯನಾದ ಪ್ರಪನ್ನನಿಗೆ ಸಂಭವಿಸ ಬಹುದೆಂಬಭಿಪ್ರಾಯವು ಸೂಚಿತವಾಯಿತು. ಅಂತಹ ಸಂದರ್ಭದಲ್ಲಿ ಹೇಗೆ ಎಂಬ ಪ್ರಶ್ನೆಯು ಉಂಟಾಗಬಹುದು. ಅದಕ್ಕೆ ಪರಿಹಾರವನ್ನು ಮುಂದೆ ಉಪ ಪಾದಿಸುತ್ತಾರೆ.

ಈ ಸಾಂಗ ಭರನ್ಯಾಸವನ್ನು ಅನುಷ್ಠಿಸಿದ ಅಧಿಕಾರಿಯು, ತಾನು ಸರ್ವೇ ಶ್ವರನಿಗೆ "**ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ**" ಎಂದು ಹೇಳಿರುವಹಾಗೆ, ಸ್ವಭಾವತಃ ದಾಸಭೂತನು, ಕಿಂಕರನು ಎಂಬ ಜ್ಞಾನವುಳ್ಳವನು. ಆದುದರಿಂದ ತಾನು ಶಾಸ್ತ್ರನಿಯಮಾನುಸಾರಕೈಙ್ಕರ್ಯಗಳನ್ನೆಸಗುವದೇ ತನಗೆ ಮುಖ್ಯಸ್ವರೂಪವೆಂದು ಚೆನ್ನಾಗಿ ತಿಳಿದವನು, ಎಂದಿಗಾದರೂ ಅವುಗಳನ್ನು ಉಲ್ಲಂ

ಸಿ, ಬುದ್ಧಿಪೂರ್ವಕವಾಗಿ ಅಪರಾಧಗಳನ್ನು ಮಾಡುವನೋ! ಈತನಿಗೆ ಭಗವದ್ಭಾವತ ಕೈಂಕರ್ಯಗಳನ್ನೆಸಗುವದೇ ಮುಖ್ಯ ನಿಷ್ಠೆಯು ; ಅಂಥಾವನು ತನ್ನ ಸ್ವರೂಪಕ್ಕೆ ವಿರುದ್ಧವಾದ ಕೆಲಸಗಳನ್ನು ಮಾಡಿ, ಭಗವದಾಜ್ಞೆಗೆ ವಿರೋಧವಾಗಿ ನಡೆದು, ಹೀಗೆ ಬುದ್ಧಿಪೂರ್ವಕವಾದ ಅಪರಾಧಗಳಿಗೆ ಗುರಿಯಾದಾನೋ? ಹಾಗೆ ಆಗುವದು ಸುತರಾಂ ಅಸಂಭಾವಿತವು ಎಂಬ ಭಾವವು. ಇಲ್ಲಿ **ಅನಾಪತ್ತಿಲ್ ಬುದ್ಧಿಪೂರ್ವಕಮಾನ ಅಪರಾಧಮ್ ವರುಗೈ** ಎಂದು ಹೇಳಿದುದರಿಂದ, ಆಪತ್ತಿನಲ್ಲಿ ಬುದ್ಧಿಪೂರ್ವಕವಾಗಿಯಾಗಲಿ, ಅಬುದ್ಧಿಪೂರ್ವಕವಾಗಲಿ ಅಪರಾಧವು ದೋಷವಾಗುವದಿಲ್ಲವೆಂಬ ಭಾವವು. ಇದು ಹೇಗೆಂದರೆ:—ಸೀತೆಯು ಅಶೋಕವನದಲ್ಲಿ ಸಿಕ್ಕಿ ರಾಕ್ಷಸಸ್ತ್ರೀಯರಿಂದ ಬಾಧಿಸಲ್ಪಡುತ್ತಿದ್ದುದನ್ನು ಕಂಡು ಆಂಜನೇಯನು ತನ್ನ ಬೆನ್ನಿನ ಮೇಲೆ ಕೂತುಕೊಂಡರೆ ಶ್ರೀರಾಮನಲ್ಲಿಗೆ ಒಡನೆ ಕರೆದುಕೊಂಡು ಹೋಗುವನೆಂದು ಹೇಳಲು, ಆಕೆಯು ಬುದ್ಧಿಪೂರ್ವಕವಾಗಿ ಪರಪುರುಷನ ಅಂಗಸ್ಪರ್ಶವು ನಿಂದನೀಯವೆಂದು ತಿಳಿದು ಹೇಳುತ್ತಾಳೆ :---

ಭರ್ತೃಭಕ್ತಿಂ ಪುರಸ್ಕೃತ್ಯ ರಾಮಾದನ್ಯಸ್ಯ ವಾನರ ।
ನ ಸ್ಪೃಶಾಮಿ ಶರೀರಂತು ಪುಂಸೋ ವಾನರ ಪುಂಗವ ॥

(ರಾ. ಸುಂ. ೩೭.೬೦)

ಪತಿವ್ರತೆಗೆ ಭರ್ತೃವಿನಲ್ಲಿ ಅನನ್ಯಭಕ್ತಿಯು ಮುಖ್ಯವು, ಆದುದರಿಂದ ಶ್ರೀರಾಮನಲ್ಲದೆ ಪರಪುರುಷನ ಶರೀರವನ್ನು ಎಂದಿಗೂ ಬುದ್ಧಿಪೂರ್ವಕವಾಗಿ ಮುಟ್ಟಲಾರೆನು. ಸತಿಗೆ ಅದು ಅಧರ್ಮವೆಂಬಭಿಪ್ರಾಯದಿಂದ ಹೇಳಿದಳು. ಆದರೆ ಪರಪುರುಷನಾದ ರಾವಣನ ಅಂಗಸಂಸ್ಪರ್ಶವಾಯಿತಲ್ಲಾ ಎಂದರೆ ಅದೂ ಕೂಡ ಭರ್ತೃವಿಗೆ ಏನು ಆಪತ್ತು ಒದಗಿತೋ ಎಂಬ ಭಯದಿಂದ **ಭರ್ತೃಭಕ್ತಿಂಪುರಸ್ಕೃತ್ಯ** ಲಕ್ಷ್ಮಣನನ್ನು ಸಹಾಯಾರ್ಥವಾಗಿ ಕಳುಹಿಸಿದ ವೇಳೆಯಲ್ಲಿ ರಾವಣನು ನನ್ನನ್ನಪಹರಿಸಿದುದರಿಂದ ಬಲಾತ್ಕಾರದಿಂದ ಅಬುದ್ಧಿಪೂರ್ವಕವಾಗಿ ಉಂಟಾದ ಪರಪುರುಷಾಂಗಸ್ಪರ್ಶವೆಂದು ಹೇಳುತ್ತಾಳೆ :-

ಯದಹಂ ಗಾತ್ರಸಂಸ್ಪರ್ಶಂ ರಾವಣಸ್ಯ ಬಲಾದ್ಗತಾ ।
ಅನೀಶಾ ಕಿಂಕರಿಷ್ಯಾಮಿ ವಿನಾಥಾ ವಿವಶಾಸತೀ ॥

(ರಾ. ಸುಂ. ೩೭.೬೧)

ತಾನು ಅಸಮರ್ಥಳು, ಪ್ರತಿಕ್ರಿಯೆಗೆ ಯೋಗ್ಯತೆಯಿಲ್ಲದವಳು, ನಾಥನು ಹತ್ತಿರವಿಲ್ಲದವಳು, ಅಂಥಾವಳು ಏನುಮಾಡಬಲ್ಲೆನು ಎಂದು ಹೇಳಿಕೊಂಡಿರುತ್ತಾಳೆ. ಹಾಗೆಯೇ ಆಪತ್ಕಾಲದಲ್ಲಿ ಬುದ್ಧಿಪೂರ್ವಕವಾಗಿ ಅಧರ್ಮ ಮಾಡಿದರೂ ಅಪರಾಧವಾಗುವದಿಲ್ಲವು. ಬುದ್ಧಿಪೂರ್ವಕವಾಗಿ ಸುಳ್ಳು ಹೇಳುವದು ಅಪರಾಧವಾದರೂ ಕಳ್ಳರು ಬಂದು ಈ ಮಾರ್ಗದಲ್ಲಿ [illegible] ಗಾಡಿಗಳು ಹೋಯಿತೇ ಎಂದು

ಆಪತ್ಕೃತ ಬುದ್ಧಿಪೂರ್ವಾಘಾನಾಂ ಪ್ರಾಮಾದೀಕಾನಾಂಚ ಅಶ್ಲೇಷವಿಷಯತ್ವಂ

ಪ್ರಾರಬ್ಧಕರ್ಮ ವಿಶೇಷವಶತ್ತಾಲೆ ದೇಶಕಾಲಾವಸ್ಥಾ ವೈಗುಣ್ಯಹೇತು ಕಮಾಗವುಮ್, ಪ್ರಾಮಾದಿಕಮಾಗವುಮ್, ಸುಷುಪ್ತ್ಯಾದ್ಯವಸ್ಥೈಗಳಿಲುಮ್ ವರುಮ್, ಅಪರಾಧ ಲೇಶಂಗಳುಳ್ಳವೈ ಅಶ್ಲೇಷ ವಿಷಯಮಾಯ್ ಕ್ಕಳಿನ್ನು ಪೋಮ್.

ಕೇಳಿದರೆ, ಹೋಗಲಿಲ್ಲವೆಂದು ಸುಳ್ಳು ಹೇಳುವದು, ಅಪರಾಧವಾಗುವದಿಲ್ಲವು ಹೀಗೆ ಆಪತ್ತಿನಲ್ಲಿ ಪ್ರಾಪ್ತವಾದ ಬುದ್ಧಿಪೂರ್ವಕವಾದ ಅಧರ್ಮವೂ, ಅಬುದ್ಧಿಪೂರ್ವಕವಾದ ಸಮಸ್ತ ಅಧರ್ಮಗಳೂ ಅಪರಾಧಗಳಾಗುವದಿಲ್ಲವು ಎಂಬುವದನ್ನು ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ.

ಆಪತ್ತಿನಲ್ಲಿ ಬುದ್ಧಿಪೂರ್ವಕಮಾಡಿದ, ಮತ್ತು ಅಬುದ್ಧಿಪೂರ್ವಕ ಮಾಡಿದ ಸರ್ವಾಪರಾಧಗಳೂ ಲೇಪಿಸುವದಿಲ್ಲವು

ಪ್ರಾರಬ್ಧಕರ್ಮವಿಶೇಷವಶತ್ತಾಲೇ - ಪ್ರಾರಬ್ಧಕರ್ಮ ವಿಶೇಷಕ್ಕೆ ಸಿಕ್ಕಿದುದರಿಂದ, **ದೇಶವೈಗುಣ್ಯ, ಕಾಲವೈಗುಣ್ಯ, ಅವಸ್ಥಾವೈಗುಣ್ಯ, ಹೇತುಕಮಾಗವುಮ್** - ಕಾರಣ ಮೂಲಕವಾಗಿ ಬಂದ ಬುದ್ಧಿಪೂರ್ವಕವಾದ ಅಪರಾಧವೂ, ಇಲ್ಲಿ ವೈಗುಣ್ಯವೆಂದರೆ ಶಾಸ್ತ್ರಾನುಗುಣವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲದೆ ವಿಪರೀತವಾಗಿ ನಡೆಯುವುದಕ್ಕೆ, **ಪ್ರಾಮಾದಿಕಮಾಗವುಮ್** - ಪ್ರಮಾದದಿಂದಲಾಗಲಿ ಎಂದರೆ ಅಬುದ್ಧಿಪೂರ್ವಕವಾಗಲಿ ಮಾಡಿದ ಅಪರಾಧವು, ಹಾಗೆಯೇ, **ಸುಷುಪ್ತ್ಯಾದ್ಯವಸ್ಥೈಗಳಿಲುಮ್ ವರುಮ್** - ನಿದ್ರೆ ಮೊದಲಾದ ಅವಸ್ಥೆಗಳಲ್ಲೂ ಬರುವ ಅಪರಾಧಗಳು, ಇಲ್ಲಿ **ಆದಿ**ಪದದಿಂದ ಸ್ವಪ್ನ ಮೂರ್ಛಾವಸ್ಥೆಗಳೂ ಹೇಳಲ್ಪಟ್ಟವು. ಹೀಗೆ **ಅಪರಾಧಲೇಶಂಗಳುಳ್ಳವೈ** - ಉಂಟಾಗುವ ಅಲ್ಪವಾದ ಅಪರಾಧಗಳೂಕೂಡ, **ಅಶ್ಲೇಷವಿಷಯಮಾಯ್** - ಈ ಪ್ರಪನ್ನನಿಗೆ ಲೇಪಿಸದಿರುವಗಳಾಗಿಕೊಂಡು, **ಕಳಿನ್ನುಪೋಮ್** - ನಾಶವಾಗಿ ಹೋಗುವವು. ಆಪತ್ಕಾಲವಲ್ಲದಿರುವಾಗ ಬುದ್ಧಿಪೂರ್ವಕವಾದ ಅಪರಾಧವು ಸಾಮಾನ್ಯವಾಗಿ ಪ್ರಪನ್ನನಿಗೆ ಸಂಭವಿಸಲಾರದೆಂದು ಪ್ರಥಮವಾಕ್ಯದಿಂದ ಹೇಳಿದರು. ಅಂತಹ ಅಪರಾಧವಲ್ಲದುದು ಎರಡು ತೆರನಾಗಿರಬಹುದು. (೧) ಆಪತ್ಕಾಲದಲ್ಲಿ ಬುದ್ಧಿಪೂರ್ವಕಮಾಡುವ ಅಪ

ರಾಧವೂ (೨) ಆಪತ್ಕಾಲವಲ್ಲದೇ ಇರುವಾಗ ಅಬುದ್ಧಿಪೂರ್ವಕ ಅಪರಾಧವೂ ; ಇವೆರಡೂ ಪ್ರಪನ್ನನಿಗೆ ಲೇಪಿಸುವದಿಲ್ಲವೆಂದು ಹೇಳುತ್ತಾರೆ. ಪ್ರಾರಬ್ಧವೆಂದು ಪ್ರಾರಂಭಿಸಿ. **ಹೇತುಕವಾಗವುಮ್** ಎಂಬುವದರಿಂದ ಮೊದಲನೆಯ ವಿಧ ಅಪರಾಧವೂ, **ಪ್ರಾಮಾದಿಕವಾಗುವುಮ್** ಎಂಬುವದರಿಂದ ಎರಡನೆಯ ವಿಧಾಪರಾಧವೂ ಹೇಳಲ್ಪಟ್ಟಿತು; **ಸುಷುಪ್ತ್ಯಾದ್ಯವಸ್ಥೈಗಳಿಲುಮ್** ಎಂದು ಹೇಳುವ ಅಪರಾಧವೂ ಎರಡನೆಯ ವಿಧದಲ್ಲೇ ಅಂತರ್ಗತವು. ಆಪದ್ದೆಶೆಯಲ್ಲಿ ಬುದ್ಧಿಪೂರ್ವಾಘವು ದೇಶವೈಗುಣ್ಯ, ಕಾಲವೈಗುಣ್ಯ ಅವಸ್ಥಾವೈಗುಣ್ಯದಿಂದ ಪ್ರಾಪ್ತವಾಗಬಹುದು. ಶಾಸ್ತ್ರನಿಯಮಾನುಸಾರ ನಡೆಯದಿರುವದೇ ವೈಗುಣ್ಯವು. ದೇಶವೈಗುಣ್ಯ ಹೇಗೆಂದರೆ, ಮರುಪ್ರದೇಶದಲ್ಲಿ ಪ್ರಾರಬ್ಧಕರ್ಮವಿಶೇಷದಿಂದ ಸಿಲುಕಿ ಸ್ನಾನಸಂಧ್ಯಾವಂದನಾದಿಗಳಿಗೆ ಅನುಕೂಲವಿಲ್ಲದೇ ಹೋಗೋಣವು, ಅಬ್ರಾಹ್ಮಣ್ಯ ದೇಶದಲ್ಲಿ ಸಿಲುಕಿ, ಶಾಸ್ತ್ರಾನುಗುಣವಾಗಿ ಪಿತೃಶ್ರಾದ್ಧವನ್ನು ನೆರವೇರಿಸುವದರಲ್ಲಿ ಲೋಪವೂ ಕಾಲವೈಗುಣ್ಯಕ್ಕೆ ನಿದರ್ಶನಗಳು:- ಸಾಯಂಕಾಲ ಆರು ಘಂಟೆಗೆ ರೈಲು ಹೊರಡುವವರಿಂದ ರೈಲಿನಲ್ಲಿ ಸಂಧ್ಯಾವಂದನಾದಿಗಳು ಅನುಚಿತವಾದುದರಿಂದ ತತ್ಪೂರ್ವವಾಗಿ ಸೂರ್ಯಾಸ್ತಮಯಕ್ಕೆ ಮುಂಚೆಯೇ ಸಂಧ್ಯಾವಂದನೆಯನ್ನು ನುಷ್ಠಿಸೋಣವು, ದ್ವಾದಶಿಯಲ್ಲಿ ಪಿತೃಶ್ರಾದ್ಧ ಪ್ರಾಪ್ತವಾದುದರಿಂದ ದ್ವಾದಶಿ ಕಟ್ಟಳೆಯನ್ನತಿಕ್ರಮಿಸೋಣವು, ದುರ್ಭಿಕ್ಷಕಾಲವಾದುದರಿಂದ ಪಂಚಮಹಾಯಜ್ಞಗಳಿಗೆ ಲೋಪವೂ, ಇವೇ ಮೊದಲಾದವುಗಳು. ಅವಸ್ಥಾ ವೈಗುಣ್ಯಕ್ಕೆ ನಿದರ್ಶನಗಳು :—ವ್ಯಾಧಿಪೀಡಿತನಾಗಿ ನಿತ್ಯನೈಮಿತ್ತಿಕ ಕರ್ಮಗಳಿಗೆ ಲೋಪವು. ಹಾಗೆಯೇ ಸುಷುಪ್ತ್ಯವಸ್ಥೆಯಲ್ಲಿ ಭಾಗವತರು ಹತ್ತಿರ ಬಂದರೂ ಪ್ರತ್ಯುತ್ಥಾನಾದಿಗಳಿಲ್ಲದೆ ಕಾಲುಚಾಚಿಕೊಂಡು ಮಲಗಿರುವದು. ಸ್ವಪ್ನಾವಸ್ಥೆಯಲ್ಲಿ ಭಾಗವತಾಪಚಾರ ಮಾಡುವದು, ಒಂದು ಪ್ರಾಣಿಯನ್ನು ಕೊಲ್ಲುವದು ಇತ್ಯಾದಿ. ಮೂರ್ಛಾವಸ್ಥೆಯಲ್ಲಿ ಒಬ್ಬ ಚೇತನನ ಮೇಲೆ ಬೀಳುವುದು, ಆತನ ಕೈಯನ್ನು ಕಚ್ಚುವುದು ಇತ್ಯಾದಿ. ಇಂತಹ ದೇಶ, ಕಾಲ, ಅವಸ್ಥಾವೈಗುಣ್ಯಕ್ಕೆಲ್ಲಾ ಕಾರಣವು ಪ್ರಾರಬ್ಧಕರ್ಮವಿಶೇಷವಾದುದರಿಂದ, **ಪ್ರಾರಬ್ಧಕರ್ಮ ವಿಶೇಷವಶತ್ತಾಲೆ** ಎಂಬ ಪ್ರಯೋಗವು ಈ ಎಲ್ಲಾ ಅಪರಾಧಗಳೆಲ್ಲಾ ಸರ್ವೇಶ್ವರನ ಕೃಪಾಪ್ರಭಾವದಿಂದ ನಿಶ್ಶೇಷವಾಗಿ ಕಳೆದುಹೋಗುವದರಿಂದ **ಅಪರಾಧ ಲೇಶಙ್ಗಳುಳ್ಳನ್ವೈ** ಎಂದು ಪ್ರಯೋಗಿಸಿರುತ್ತಾರೆ. ಇಲ್ಲಿ **ಅಶ್ಲೇಷ ವಿಷಯಮಾಯ್** ಎಂದು ಏತಕ್ಕೆ ಪ್ರಯೋಗಿಸಿರುತ್ತಾರೆಂದರೆ :-“**ತದ್ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯನ್ತೇ, ಏವಮೇವಂ ವಿದಿಪಾಪಂ ಕರ್ಮ ನ ಶ್ಲಿಷ್ಯತೇ**” ತಾವರೇ ಎಲೆಗೆ ನೀರು ಹೇಗೆ ಅಂಟುವದಿಲ್ಲವೋ ಹಾಗೆಯೇ ಬ್ರಹ್ಮವಿತ್ತಿಗೆ ಪ್ರಾಮಾದಿಕರೂಪ ಪಾಪವು ಅಂಟುವದಿಲ್ಲವೆಂದು, **ನ ಶ್ಲಿಷ್ಯತೇ** ಎಂದು ಶ್ರುತಿಯಲ್ಲಿ ಹೇಳಿರುವ

ಬುದ್ಧಿಪೂರ್ವಾಘಾನಾಂ ಪ್ರಾಯಶ್ಚಿತ್ತೇನ ನಿವೃತ್ತಿಃ

ಬುದ್ಧಿಪೂರ್ವಕ ಪಾಪಾರಂಭಕಪಾಪಙ್ಗಳುಕ್ಕು ಅಂಜಿ ಅವೈಯುಮ್ ಕಳಿಯವೇಣುಮೆನ್ರು ಪ್ರಪತ್ತಿಪಣ್ಣಾದೆ ಪಾಂಬೋಡೊರು ಕೂರೈಯಿಲೆ ಪಯಿನ್ರಾರ್ ಪೋಲೆ ಪ್ರಕೃತಿಯೋಡೇಕೂಡ ವಿರುಕ್ಕಿರ ಇವನುಕ್ಕು ಅತ್ತ

ದರಿಂದಲೂ ಹಾಗೆಯೇ ಬ್ರಹ್ಮಸೂತ್ರದಲ್ಲಿ **"ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್"** (ಬ್ರ. ಸೂ. ೪. ೧. ೧೩) ಉತ್ತರಾಘ ವಿಷಯದಲ್ಲಿ ಅಶ್ಲೇಷಶಬ್ದವೇ ಪ್ರಯೋಗಿಸಲ್ಪಟ್ಟಿರುತ್ತದೆ. **ಅಶ್ಲೇಷ**ವೆಂದರೆ ಪಾಪಪುಣ್ಯರೂಪ ಕರ್ಮಗಳನ್ನು ಮಾಡಿದರೂ ಅವುಗಳ ಫಲೋತ್ಪತ್ತಿಗೆ ವಿರುದ್ಧವಾದ ಸಾಮರ್ಥ್ಯವನ್ನು ಹೊಂದಿರುವಿಕೆಯು. ನೀರು ಗೊಬ್ಬರವಿರುವ ಸ್ಥಳದಲ್ಲಿ ಭತ್ತವನ್ನು ಬಿತ್ತಿದರೆ ಫಲರೂಪವಾದ ಭತ್ತದ ಪೈರು ಉಂಟಾಗಲೇಬೇಕು. ಆದರೆ ಹೀಗಿದ್ದರೂ ಸರ್ವೇಶ್ವರ ಸಂಕಲ್ಪದಿಂದ ಪೈರು ಬೆಳೆಯುವಿಕೆಯಿಲ್ಲ ಹೇಗೋ, ಹಾಗೆಯೇ ಕರ್ಮವು ಪಾಪರೂಪ ಫಲಪ್ರದವಾದರೂ ಸರ್ವೇಶ್ವರ ಸಂಕಲ್ಪದಿಂದ ಅಂತಹ ಫಲೋತ್ಪತ್ತಿ ಇಲ್ಲದೇ ಹೋಗಬಹುದು. ಅದಕ್ಕೆ **ಅಶ್ಲೇಷ** ಎಂಬ ಹೆಸರು,

ಹಿಂದೆ ಅನಾಪತ್ತಿನಲ್ಲಿ ಬುದ್ಧಿಪೂರ್ವಾಘವು, ಸಾಧಾರಣವಾಗಿ **ಕೃತಕೃತ**ನಾದ ಸ್ವನಿಷ್ಠೆಯನ್ನು ತಿಳಿದ ದೇವಭಾಗವತ ಕೈಙ್ಕರ್ಯಗಳಿಂದಾಗಿ ಭಗವತ್ಪ್ರೀತಿಯನ್ನು ಸಂಪಾದಿಸಿಕೊಳ್ಳಬೇಕೆಂದಿರುವ ಪ್ರಪನ್ನನಿಗೆ ಸಂಭವಿಸಲಾರದೆಂದು ಹೇಳಲ್ಪಟ್ಟಿತು. ಒಂದು ವೇಳೆ ಸಂಭವಿಸಿದುದಾದರೆ ಅಂತಹ ಅಪರಾಧ ಪರಿಹಾರ ಹೇಗೆ ಎಂಬುವದನ್ನು ಮುಂದಿನ "ಬುದ್ಧಿಪೂರ್ವಕ" ವೆಂಬುವ ವಾಕ್ಯದಿಂದುಪದೇಶಿಸುತ್ತಾರೆ.

ಬುದ್ಧಿಪೂರ್ವಪಾಪಗಳ ನಿವೃತ್ತಿಯು

ಬುದ್ಧಿಪೂರ್ವಕ ಪಾಪಾರಂಭಃ-ಬುದ್ಧಿಪೂರ್ವಕವಾಗಿ ಪಾಪಗಳನ್ನು ಪ್ರಪತ್ತ್ಯುತ್ತರಕಾಲದಲ್ಲೂ ಮಾಡುವಹಾಗ ಮಾಡುವ, **ಪಾಪಙ್ಗಳುಕ್ಕು** - ಪ್ರಾರಬ್ಧಕ್ಕೆ ಸಂಬಂಧಿಸಿದ ಪಾಪಗಳಿಗೆ, **ಅಂಜಿ** - ಭಯಪಟ್ಟು, **ಅವೈಯುಮ್ ಕಳಿಯವೇಣುಮೆನ್ರು** - ಅವುಗಳೂ ಕೂಡ ನಶಿಸಿಹೋಗಬೇಕೆಂದು, **ಪ್ರಪತ್ತಿಪಣ್ಣಾದೆ** - ಪ್ರಪತ್ತಿಯನ್ನು ಮಾಡದೆ, **ಪಾಂಬೋಡು** - ಒಂದು ಸರ್ಪದೊಂದಿಗೆ **ಒರುಕೂರೈಯಿಲೆ** - ಒಂದು ಗೃಹದಲ್ಲಿ, **ಪಯಿನ್ರಾರ್ ಪೋಲೆ** - ವಾಸಮಾಡುವರಹಾಗೆ, **ಪ್ರಕೃತಿಯೋಡೇಕೂಡ ವಿರುಕ್ಕಿರವಿವನುಕ್ಕು** – ಈಗೇಹಪತಿ

ಗುಣಪೂರ್ತಿಯಿಲ್ಲಾಮೈಯಾಲೆ ಮನ್ದ ಧೈರ್ಯರಾನ ಋಷಿಗಳುಕ್ಕುಪ್ಪೋಲೆ ಬುದ್ಧಿಪೂರ್ವಕಮಾಗವುಮ್ ಶಿಲಸ್ವನಿಷ್ಠಾ ವಿಪರೀತಙ್ಗಳ್ ವನ್ದಾಲುಮ್, ನಿಸರ್ಗಸುಹೃತ್ತಾನ ಶ್ರಿಯಃಪತಿರಕ್ಷಣೋನ್ಮುಖನಾಯ್ ನಿರ್ಕೈಯಾಲೇ, ಅವ್ವಿಪರೀತಾನುಷ್ಠಾನಙ್ಗಳ್ ಮಿನ್ನೋಳಿಮಾತ್ರಮಾಯ್ ನಿಲೈನಿರ್ಕುಮ ವೈಯನ್ರಿಕ್ಕೇ, ಅಕ್ಕಾಲತ್ತಿಲ್ ಪಿರನ್ದ ಸ್ವನಿಷ್ಠಾವೈಪರೀತ್ಯಮಾಗಿರ ವಿಳ ವೈಕ್ಕಡುಗ ಅನುಸಂಧಿತ್ತು ಯಥೋಚಿತಮಾಗ ಲಜ್ಜಾನುತಾಪಙ್ಗಳ್ ಪಿರನ್ದು,

---

ಯಾದ ಮತ್ತು ತನ್ನನ್ನು ವಂಚಿಸಿ ನಾಶಮಾಡುವ ಈ ಏಕಾದಶೇನ್ದ್ರಿಯಗಳೊಂದಿಗೆ ಕೂಡಿದ ಶರೀರದೊಂದಿಗಿರುವ ಈ ಚೇತನನಿಗೆ, **ಆತ್ಮಗುಣ ಪೂರ್ತಿಯಿಲ್ಲಾಮೈಯಾಲೆ** - ವಿವೇಕ ಮೊದಲಾದ ಆತ್ಮಗುಣಗಳ ಸಮೃದ್ಧಿ ಇಲ್ಲದಿರುವದರಿಂದ, **ಮಂದಧೈರ್ಯರಾನ** - ಅಲ್ಪವಾದ ಚಿತ್ತಸ್ಥೈರ್ಯವುಳ್ಳ, ಎಂದರೆ ಇಂದ್ರಿಯಗಳಿಗೆ ವಶವಾದ ಮನಸ್ಸುಳ್ಳ, **ಋಷಿಗಳಿಕ್ಕುಪ್ಪೋಲೆ** - ಸೌಭರಿ ವಿಶ್ವಾಮಿತ್ರಾದಿ ಋಷಿಗಳ ಹಾಗೆ, **ಬುದ್ಧಿಪೂರ್ವಕಮಾಗುವುಮ್** - ಬುದ್ಧಿಪೂರ್ವಕವಾಗಿ, **ಶಿಲಸ್ವನಿಷ್ಠಾವಿಪರೀತಙ್ಗಳ್** - ಕೆಲವು ಸ್ವನಿಷ್ಠೆಗೆ ವಿರುದ್ಧವಾದವುಗಳು, **ವನ್ದಾಲುಮ್** - ಪ್ರಾಪ್ತವಾದರೂ, **ನಿಸರ್ಗಸುಹೃತ್ತಾನ** - ಸಹಜ ಮಿತ್ರನಾದ, ಶ್ರಿಯಃಪತಿಯು, **ರಕ್ಷಣೋನ್ಮುಖನಾಯ್** - ರಕ್ಷಿಸಬೇಕೆಂದು ಉದ್ಯುಕ್ತನಾಗಿ, **ನಿರ್ಕೈಯಾಲೆ**-ನಿಲ್ಲುವದರಿಂದ, ಅವ್ವಿಪರೀತಾನುಷ್ಠಾನಗಳು, **ಮಿನ್ನೋಳಿಮಾತ್ರಮಾಯ್** - ವಿದ್ಯುತ್ತಿನ ಹಾಗೆ ಅಲ್ಪಕಾಲೀನವಾಗಿ, **ನಿಲೈನಿರ್ಕುಮವೈಯನ್ರಿಕ್ಕೆ** - ಸ್ಥಿರವಾಗಿ ನಿಲ್ಲದೇ ಇರುವುದರಿಂದ, **ಅಕ್ಕಾಲತ್ತಿಲ್** - ಆ ಬುದ್ಧಿಪೂರ್ವಕಾಘವನ್ನು ಮಾಡಿದ ಕಾಲದಲ್ಲಿ, **ಪಿರನ್ದ** - ಉಂಟಾದ, **ಸ್ವನಿಷ್ಠಾವೈಪರೀತ್ಯಮಾಗಿರವಿಳವೈ**-ಸ್ವನಿಷ್ಠೆಗೆ ವಿರುದ್ಧವಾದ ನ್ಯೂನತೆಯನ್ನು, **ಕಡುಗ ಅನುಸನ್ಧಿತ್ತು** - ಶೀಘ್ರವಾಗಿ ಅನುಸಂಧಾನಮಾಡಿ, ಎಂದರೆ ಆಲೋಚಿಸಿ, **ಯಥೋಚಿತಮಾಗ** - ಅದಕ್ಕನುಗುಣವಾದ, **ಲಜ್ಜಾನುತಾಪಙ್ಗಳ್** - ನಾಚಿಕೆಯೂ ಮತ್ತು ದುಃಖವೂ, **ಪಿರನ್ದು** - ಉಂಟಾಗಿ, ಇದಕ್ಕೆ "**ಪ್ರಾಯಶ್ಚಿತ್ತಾವಲಂಬನಂ ಉಣ್ಡಾಮ್** ಎಂದರೆ ಪ್ರಾಯಶ್ಚಿತ್ತದ ಅನುಷ್ಠಾನವು ಪ್ರಾಪ್ತವಾಗಬಹುದು" ಎಂಬುವದರೊಂದಿಗೆ ಅನ್ವಯಿಸತಕ್ಕದ್ದು. ಅಂತಹ ಪ್ರಾಯಶ್ಚಿತ್ತಾನುಷ್ಠಾನಕ್ಕೆ ಮೂರು ಪ್ರಮಾಣಗಳನ್ನುದಾಹರಿಸುತ್ತಾರೆ.

ಈ ಮೇಲಿನ ವಾಕ್ಯಾಭಿಪ್ರಾಯವೇನೆಂದರೆ :—ಪ್ರಾರಬ್ಧಕರ್ಮದಲ್ಲೂ ಪ್ರಪತ್ತ್ಯುತ್ತರ ಕಾಲದಲ್ಲಿ ಬುದ್ಧಿಪೂರ್ವಕವಾಗಿ ಪಾಪಾರಂಭಕ ಪಾಪಗಳೂ ಉಂಟು.

ಇವುಗಳೂ ಸಹ ನಷ್ಟವಾಗಬೇಕೆಂದು ಶರಣಾಗತಿಮಾಡುವ ಕಾಲದಲ್ಲೇ ಸಙ್ಕಲ್ಪಿಸಿದರೆ, ಶರಣಾಗತವತ್ಸಲನು ಅಂತಹ ಪ್ರಪನ್ನನ ಮನೋರಥವನ್ನು ಪೂರ್ತಿಮಾಡಿ ಬುದ್ಧಿಪೂರ್ವಾಘವು ಪ್ರಪತ್ತ್ಯುತ್ತರ ಕಾಲದಲ್ಲಿ ಸಂಭವಿಸದಹಾಗೆ ಕೃಪೆಗೆಯ್ಯುವನು ಹಾಗೆ ಉದ್ದೇಶಿಸಿ ಪ್ರಪದನಾನುಷ್ಠಾನ ಮಾಡದಿದ್ದರೆ ಬುದ್ಧಿಪೂರ್ವಾಘಗಳು ಸಂಭವಿಸಬಹುದು. ಹಾಗೆ ಸಂಭವಿಸಲು ಕಾರಣವೇನೆಂದರೆ ಈತನು ಒಂದು ಮನೆಯಲ್ಲಿ ಹಾವಿನೊಂದಿಗೆ ವಾಸಮಾಡುತ್ತಿದ್ದರೆ ಎಷ್ಟು ಜಾಗರೂಕನಾಗಿದ್ದರೂ ಯಾವುದಾದರೂ, ಒಂದು ದಿನ ಅದು ಈತನನ್ನು ಕಚ್ಚಿ ವಿಷವ್ಯಾಪನೆಯುಂಟುಮಾಡಿ ಹೇಗೆ ನಾಶಮಾಡುತ್ತದೋ, ಹಾಗೆಯೇ, ಮದಸಿದ ಈ ದಶೇಂದ್ರಿಯಂಗಳಿಂದ ಕೂಡಿದ ಮನಸ್ಸುಳ್ಳ ಈ ಶರೀರದಲ್ಲಿ ವಾಸಮಾಡುವದರಿಂದ. ಅವುಗಳಿಂದ ದಷ್ಟನಾಗಿ ಚಿತ್ತಭ್ರಮೆಯುಂಟಾಗಿ ಕೆಟ್ಟುಹೋಗಿ ಬುದ್ಧಿಪೂರ್ವಾಘಗಳನ್ನು ಕದಾಚಿತ್ ಮಾಡಬಹುದು. ಈ ಇಂದ್ರಿಯಗಳ ಹಾವಳಿಯನ್ನು ಶುಕಮಹರ್ಷಿಯು ಬಹುಸ್ವಾರಸ್ಯವಾಗಿ ವರ್ಣಿಸಿ(೧) "ಬಹ್ವ್ಯಸ್ಸಪತ್ನ್ಯ ಇವಗೇಹಪತಿಂ ಲುನನ್ತಿ" (ಭಾಗ)ಅನೇಕ ಹೆಂಡರು ಒಬ್ಬ ಗೃಹಸ್ಥನಿಗೆ ಇದ್ದರೆ ಅವರೆಲ್ಲಾ ಸೇರಿ ಹೇಗೆ ಯಜಮಾನನನ್ನು ಹಾಳುಮಾಡುವರೋ, ಹಾಗೆ ಈ ಇಂದ್ರಿಯಗಳೂ ಮನಸ್ಸೂ ಸಹ ಈ ಆತ್ಮನನ್ನು ಪಾಪಗಳನ್ನು ಮಾಡುವಹಾಗೆ ಪ್ರೇರಿಸುತ್ತವೆ ಎಂದು ಹೇಳಿರುತ್ತಾರೆ.

"ಪಾಪಂ ಪ್ರಜ್ಞಾಂ ನಾಶಯತಿ ಕ್ರಿಯಮಾಣಂಪುನಃ ಪುನಃ ।
ನಷ್ಟಪ್ರಜ್ಞಃ ಪಾಪಮೇವ ಪುನರಾರಭತೇ ನರಃ"

ಎಂಬ ಶ್ಲೋಕವೂ ಇಲ್ಲಿ ಅನುಸಂಧೇಯವು. ಇಲ್ಲಿ ನಷ್ಟಪ್ರಜ್ಞಃ ಎಂದು ಹೇಳಿರುವದು ಆತ್ಮಗುಣಪೂರ್ತಿ ಇಲ್ಲದೆ ಎಂಬುವ ಅಭಿಪ್ರಾಯವನ್ನು ಸೂಚಿಸುತ್ತದೆ. ಹಾಗೆ ನಷ್ಟಪ್ರಜ್ಞನಾಗುವದು ಕರ್ಮವಶ್ಯನಾಗಿ ಪ್ರಕೃತಿಸಂಬಂಧವಿರುವದರಿಂದ ಪ್ರಾಪ್ತವಾಗುತ್ತದೆ. ಇಂದ್ರಿಯಗಳ ಹಾವಳಿ ತಪ್ಪಿಸಿಕೊಳ್ಳುವದಕ್ಕೆ ಚಿತ್ತಸ್ಥೈರ್ಯವಿರಬೇಕು. ಭೋಗ್ಯವಸ್ತುಗಳ ಮಧ್ಯದಲ್ಲಿದ್ದರೂ ಅವುಗಳಿಂದ ಮನಸ್ಸು ಚಂಚಲವಾಗಕೂಡದು. ಹೀಗಿರುವದು ಬಹಳ ಕಷ್ಟತರವಾದದು. ಮಹರ್ಷಿಗಳೂ ಕೂಡ ಅಂತಹ ಸನ್ನಿವೇಶದಲ್ಲಿ ರಂಭಾ ಊರ್ವಶಿ ಮೊದಲಾದ ಅಪ್ಸರಸ್ತ್ರೀಯರುಗಳ ವಂಚನೆಗೆ ವಶರಾಗಿ ಐಹಿಕಭೋಗಾಸಕ್ತರಾಗಿರುತ್ತಾರೆ. ಸೌಭರಿ ವಿಶ್ವಾಮಿತ್ರ ವೃತ್ತಾಂತಗಳು ಇದಕ್ಕೆ ನಿದರ್ಶನವು. ಈ ಅಭಿಪ್ರಾಯವನ್ನು ತಿಳಿಸುವದಕ್ಕಾಗಿ ಮನ್ದಧೈರ್ಯರಾನ ಋಷಿಗಳುಕ್ಕುಪ್ಪೋಲೇ ಎಂಬ ಪ್ರಯೋಗವು. ಲಕ್ಷ್ಮಣನ ಕೋಪೋಪಶಮನಕ್ಕಾಗಿ ಸುಗ್ರೀವನಿಂದ ಕಳುಹಿಸಲ್ಪಟ್ಟ ತಾರೆಯು ಲಕ್ಷ್ಮಣನಂ ಕುರಿತು ಹಾಗೆಯೇ ಹೇಳಿರುತ್ತಾಳೆ :-

"ಮಹರ್ಷಯೋಧ್ಯಾನ ತಪೋಭಿಕಾಮಾಃ ಕಾಮಾಭಿಕಾಮಾಃ ಪ್ರತಿಬದ್ಧಮೋಹಾಃ" "ಮಹರ್ಷಿಗಳು ಧ್ಯಾನವೇನು ತಪಸ್ಸೇನು, ಇವುಗಳಲ್ಲಿ ಅಭಿರುಚಿಯುಳ್ಳವರು. ಇಂಥಾವರೂ ಕೂಡ ಭೋಗ್ಯವಸ್ತುಗಳ ಸನ್ನಿಧಿಯಲ್ಲಿ ಐಹಿಕ ಕಾಮುಗಳಲ್ಲಿ ಸಕ್ತರಾದವರಾಗಿ, ವಿಷಯಸುಖಗಳಲ್ಲಿ ಬಂಧಿಸಲ್ಪಟ್ಟ ಮೋಹವುಳ್ಳವರಾಗುವರೆಂದು ಹೇಳಲ್ಪಟ್ಟಿರುತ್ತದೆ. ಹೀಗಿರುವಲ್ಲಿ ಇನ್ನು ಸಾಧಾರಣರಾದ ಪ್ರಪನ್ನರ ವಿಷಯದಲ್ಲಿ ಹೇಳತಕ್ಕದ್ದೇನು ಎಂಬ ಭಾವವು. ಹೀಗೆ ಬುದ್ಧಿಪೂರ್ವಾಘವು ಪ್ರಾಪ್ತವಾದರೆ ಅಂಥಾವನಿಗೆ ಮೋಕ್ಷ ಉಂಟೋ ಇಲ್ಲವೋ ಎಂಬ ಸಂದೇಹಕ್ಕೆ ಸಮಾಧಾನ ಹೇಳುವವರಾಗಿ, ಈ ಪ್ರಪನ್ನನು ಅನುಷ್ಠಿಸಿದ ಶರಣಾಗತಿಯು ಮಾಹಾತ್ಮ್ಯಯಿಂದ ಮೋಕ್ಷಕ್ಕೇನೂ ಸಂದೇಹವಿಲ್ಲ ಎಂಬ ಭಾವವನ್ನು ಮನಸ್ಸಿನಲ್ಲಿಟ್ಟು "ನಿಸರ್ಗ ಸುಹೃತ್ತಾನ ಶ್ರಿಯಃಪತಿರಕ್ಷಣೋನ್ಮುಖನಾಯ್" ಎಂದು ಪ್ರಯೋಗಿಸಿರುತ್ತಾರೆ. ನಿತ್ಯಹೃದ್ಯೋಽಪಿ ಎಂದು ಹಿಂದೆ ಹೇಳಿರುವ ಹಾಗೆ ಸರ್ವೇಶ್ವರನು ಸರ್ವಸ್ಯ ಶರಣಂ ಸುಹೃತ್ ಎಂಬ ಶ್ರುತ್ಯನುಸಾರ ಪರಮಸುಹೃತ್ತು. ಈ ಭಾವದಿಂದ ಬಂದ ಶರಣಾಗತನಾದವನನ್ನು "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ" ಎಂದಿಗೂ ಕೈಬಿಡೆನು ಎಂದು ಹೇಳಿರುತ್ತಾನಾದುದರಿಂದ, ಮೋಕ್ಷಕ್ಕೆ ಎಂದಿಗೂ ಚ್ಯುತಿಯಿಲ್ಲವು. ಆತನಿಗೆ "ಆಶ್ರಿತ ಸಂರಕ್ಷಣಮೇವ ಪರಮಧರ್ಮಂ" ಎಂದು ಹೇಳಿರುವದರಿಂದ ಆತನು ಯಾವಾಗಲೂ ಆಶ್ರಿತರಕ್ಷಣೋನ್ಮುಖನು. ಯಾವಾಗ ಆತನು ಆಶ್ರಿತನಾದನೋ ಆತನು ತನಗೆ ಸಮಾನನಾದನು; ಏತಕ್ಕೆಂದರೆ ಆತನು ನಮಗೆ ಪರಮಸುಹೃತ್. ವಿಭೀಷಣನು ಯಾವಾಗ ಆಶ್ರಯಿಸಿಬಿಟ್ಟನೋ, ಯಾವಾಗ ಸುಗ್ರೀವನು ಶ್ರೀರಾಮನನ್ನು ಕುರಿತು

"ತಸ್ಮಾತ್ಕ್ಷಿಪ್ರಂ ಸಹಾಸ್ಮಾಭಿಸ್ತುಲ್ಯೋ ಭವತು ರಾಘವ ।
ವಿಭೀಷಣೋ ಮಹಾ ಪ್ರಾಜ್ಞಸ್ಸಖಿತ್ವಂಚಾಭ್ಯುಪೈತುನಃ ॥"

ನಮ್ಮೊಂದಿಗೆ ಸಮಾನನಾಗಲು ಈ ಮಹಾಪ್ರಾಜ್ಞನಾದ ವಿಭೀಷಣನು ಯೋಗ್ಯನೆಂಬ ಶ್ರೀರಾಮಾಭಿಪ್ರಾಯವನ್ನು ಅನುಮೋದಿಸಿದನೋ, ಆಗ ಒಡನೆಯೇ ಒಂದು ಕ್ಷಣ ವಿಳಂಬವೂ ಇಲ್ಲದೆ "ವಿಭೀಷಣೇನಾಶು ಜಗಾಮ ಸಂಗಮಂ", ಶರಣ್ಯನಿಗೆ ಶರಣಾಗತನ ಸಂಗಮವೇ, ಸ್ನೇಹವೇ ಲಾಭಕರವಾದ ವಿಶೇಷವಾದುದರಿಂದ ಶ್ರೀರಾಮನು ಆತನಿಗೆ ಪರಮಸುಹೃತ್ತಾದನು. ಅದೂ ಅಲ್ಲದೆ, ಆತನ ಶ್ರಿಯಃಪತಿಯಾಗಿ ಅನುಗ್ರಹಮಯಳಾದ ಲಕ್ಷ್ಮಿಯೊಂದಿಗೆ ಇರುವದರಿಂದ ಪ್ರಪನ್ನನನ್ನು ಹೇಗಾದರೂ ಮಾಡಿ ರಕ್ಷಿಸಬೇಕೆಂದೇ ರಕ್ಷಣೋನ್ಮುಖನಾಗಿರುವದರಿಂದ ಇಂತಹ ಬುದ್ಧಿಪೂರ್ವಕವಾದ ವಿಪರೀತಾನುಷ್ಠಾನಗಳು ವಿದ್ಯುತ್ಪ್ರಕಾಶದಹಾಗೆ

(೧) "ಅಪಾಯಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್ ।
ಪ್ರಾಯಶ್ಚಿತ್ತಿರಿಯಂ ಸಾತ್ರ ಯತ್ಪುನಶ್ಶರಣಂ ವ್ರಜೇತ್ ।
ಉಪಾಯಾನಾಂ ಉಪಾಯತ್ವ ಸ್ವೀಕಾರೇಪ್ಯೇ ತದೇವ ಹಿ॥"

ಕ್ಷಣಿಕವೇ ವಿನಾ ಬಹಳ ಕಾಲವಿರುವದಿಲ್ಲವು. ಸರ್ವೇಶ್ವರನ ಕೃಪೆಯಿಂದ ಇವನಿಗೆ ಒಡನೆ ಲಜ್ಜೆಯೂ ಅನುತಾಪಗಳೂ ಹುಟ್ಟಿ, ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಕೈಕೊಂಡು ಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಅನುಷ್ಠಿಸಿ, ಪಾಪವಿಮುಕ್ತನಾಗಿ ರಕ್ಷಿಸಲ್ಪಡುವನು ಎಂಬ ತಾತ್ಪರ್ಯವು. ಈ ಅಭಿಪ್ರಾಯಗಳನ್ನು ಸಪ್ರಮಾಣವಾಗಿ ಉಪದೇಶಿಸುತ್ತಾರೆ :-

(೧) **ಅಪಾಯ ಸಂಪ್ಲವೇ** ಎಂಬ ವಾಕ್ಯವು ಪ್ರಪನ್ನನನ್ನು ಕುರಿತು ಹೇಳುತ್ತದೆ. **ಅಪಾಯಸಂಪ್ಲವೇ** - ಪಾಪಗಳು ಪ್ರಾಪ್ತವಾದರೆ, **ಸದ್ಯಃ** - ಒಡನೆ, **ಪ್ರಾಯಶ್ಚಿತ್ತಂಸಮಾಚರೇತ್** - ಪ್ರಾಯಶ್ಚಿತ್ತವನ್ನು ಅನುಷ್ಠಿಸತಕ್ಕದ್ದು. **ಪುನಃ ಶರಣಂ ವ್ರಜೇತ್** - ಪುನಃ ಶರಣು ಹೊಂದುವದು, **ಯತ್** - ಯಾವುದೋ, **ಸಾ** - ಅದು, **ಇಯಂ ಪ್ರಾಯಶ್ಚಿತ್ತಿಃ** - ಈ ಮೇಲೆ ಹೇಳಿದ ಪ್ರಾಯಶ್ಚಿತ್ತವೆಂಬುವದು. **ಉಪಾಯಾನಾಂ** – ಕರ್ಮಯೋಗ ಮೊದಲಾದವುಗಳನ್ನು, **ಉಪಾಯತ್ವೇನ ಸ್ವೀಕಾರೇಪಿ**-ಉಪಾಯಭಾವದಿಂದ ಅವಲಂಬಿಸಿದ ಸಂದರ್ಭದಲ್ಲೂ ಕೂಡ, **ಏತದೇವಹಿ** - ಇದುವೇ ಪ್ರಾಯಶ್ಚಿತ್ತವು ಎಂದರೆ ಪುನಶ್ಶರಣಾಗತಿಯೇ ಪ್ರಾಯಶ್ಚಿತ್ತವು. ಈ ಪುನಶ್ಶರಣಾಗತಿಯೇನು ಹಿಂದಿನ ಶರಣಾಗತಿಯು ಈ ಬುದ್ಧಿಪೂರ್ವಾಘದಿಂದ ನಾಶವಾಗಿ ಹೋದುದರಿಂದಲೋ, ಅಥವಾ ಪ್ರಾಯಶ್ಚಿತ್ತರೂಪದಿಂದಲೋ, ಎಂಬ ಸಂದೇಹದಲ್ಲಿ ಈ ಪ್ರಮಾಣವು ಮೊದಲಿನ ಶರಣಾಗತಿಯು ನಷ್ಟವಾಗಲಿಲ್ಲವೆಂದೂ, ಈ ಪುನಶ್ಶರಣಾಗತಿಯು ಪ್ರಾಯಶ್ಚಿತ್ತರೂಪವಾದುದೆಂದೂ, ಸ್ಪಷ್ಟವಾಗಿ ತಿಳಿಸುತ್ತದೆ. "**ಅಪಾಯ ಸಂಪ್ಲವೇ ಸದ್ಯಃ ಪುನಶ್ಚ ಶರಣಂ ವ್ರಜೇತ್**" ಎಂಬ ಪ್ರಮಾಣವಾಕ್ಯವಿದ್ದುದಾದರೆ ಮೊದಲಿನ ಪ್ರಪದನವು ನಷ್ಟವಾಯಿತೆಂದೂ ಅದಕ್ಕಾಗಿ ಪುನಶ್ಶರಣಾಗತಿ ಮಾಡಬೇಕೆಂದೂ ಊಹಿಸಬಹುದಾಗಿತ್ತು. ಆದರೆ **ಅಪಾಯಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್** ಎಂದು ಪ್ರಾಯಶ್ಚಿತ್ತವನ್ನು ವಿಧಿಸಿ, ಆ ಪ್ರಾಯಶ್ಚಿತ್ತಕ್ಕಾಗಿ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಮಾಡತಕ್ಕ

---

(೧) ಲಕ್ಷ್ಮೀತಂತ್ರ. ೧೭-೯೧,೯೨

(೨) "ಅಜ್ಞಾನಾದಥವಾ ಜ್ಞಾನಾದಪರಾಧೇಷು ಸತ್ಸ್ವಪಿ ।
ಪ್ರಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಂ। "

ದ್ದೆಂದು ವಿಧಿಸಿರುವದರಿಂದ ಈ ಎರಡನೆಯರೂಪ ಶರಣಾಗತಿಯು ಪ್ರಾಯಶ್ಚಿತ್ತ ರೂಪವಾದುದೆಂದು ತಿಳಿಯತಕ್ಕದ್ದು. ಹಾಗೆಯೇ ಭರಸಮರ್ಪಣೆಗೆ ಬದಲಾಗಿ ಇನ್ನೊಂದುಪಾಯವಾದ ಅಜ್ಞಪ್ರಪತ್ತಿಯನ್ನು ಅವಲಂಬಿಸಿದವನಿಗೂ ಇದೇ ಪ್ರಾಯಶ್ಚಿತ್ತರೂಪ ಶರಣಾಗತಿ ಎಂದು ಪ್ರಮಾಣವು ಹೇಳುತ್ತದೆ. (೨) "**ಅಜ್ಞಾನಾದಥವಾಜ್ಞಾನಾತ್**-ಅಜ್ಞಾನದಿಂದಲಾಗಲಿ, ಬುದ್ಧಿಪೂರ್ವಕವಾಗಲಿ, **ಅಪರಾಧೇಷು ಸತ್ಸ್ವಪಿ**-ಅಪರಾಧಗಳು ಇದ್ದರೂ ಕೂಡ, **ಕ್ಷಮಸ್ವೇತಿ**-ಕ್ಷಮಿಸೈಯ್ಯಾ, ಎಂದು, **ಪ್ರಾರ್ಥನೈಕೈವ ಕೇವಲಂ** - ಪ್ರಾರ್ಥಿಸುವದು ಒಂದು ಮಾತ್ರವೇ, **ಪ್ರಾಯಶ್ಚಿತ್ತಂ** - ಪ್ರಾಯಶ್ಚಿತ್ತವು". ಇದರಲ್ಲಿ ಪ್ರಾಯಶ್ಚಿತ್ತವು ಯಾವ ರೂಪವಾದುದು ಎಂದರೆ ಹೇಳಲ್ಪಡುತ್ತದೆ:—ಅಪರಾಧವನ್ನು ಕ್ಷಮಿಸೈಯ್ಯಾ ಎಂದು ಹೇಳಿ ಅದಕ್ಕಾಗಿ ಶರಣಾಗತಿಯನ್ನು ಮಾಡತಕ್ಕದ್ದೆಂದು ಹೇಳಲ್ಪಟ್ಟಿತು. ಇದರ ಅನುಸಂಧಾನವೇ ಶ್ರೀಭಾಷ್ಯಕಾರರು "**ಮನೋವಾಕ್ಕಾಯೈಃ**............ **ಸರ್ವಾನ ಶೇಷತಃ ಕ್ಷಮಸ್ವ**" ಎಂಬ ವಾಕ್ಯದಿಂದ ಪ್ರಾರ್ಥಿಸಿರುವದು. ಇಲ್ಲಿ "**ಅಜ್ಞಾನಾತ್**" ಎಂದಿರುವದರಿಂದ ಅಜ್ಞಾನದಿಂದ ಮಾಡಿದಪರಾಧಕ್ಕೆ ಪ್ರಾಯಶ್ಚಿತ್ತವು ಆವಶ್ಯಕವೇ ಎಂದರೆ, ಆವಶ್ಯಕವಿಲ್ಲದಿದ್ದರೂ ಪ್ರಾಯಶ್ಚಿತ್ತ ಶರಣಾಗತಿ ಮಾಡುವದರಿಂದ ದೋಷವೇನೂ ಇಲ್ಲವು. ಅಪರಾಧಗಳು ಕೆಲವು ಬುದ್ಧಿಪೂರ್ವಕವಾಗಿಯೂ ಕೆಲವು ಅಬುದ್ಧಿಪೂರ್ವಕವಾಗಿಯೂ ನಡೆದಿರಬಹುದು. ಈ ವಿಷಯಗಳಲ್ಲಿ ವಿವಾದ ಬೇಕಿಲ್ಲವು. ಪ್ರಾಯಶ್ಚಿತ್ತರೂಪ ಶರಣಾಗತಿಯನ್ನನುಷ್ಠಿಸುವದು ಯುಕ್ತವು ಎಂಬ ತಾತ್ಪರ್ಯವು.

(೩) ಇದು ರಾವಣನಿಗೆ ಸೀತೆಯು ಮಾಡುವ ಉಪದೇಶವು. ಲೋಕಮಾತೆಯಾದುದರಿಂದ ಪರಮವಾತ್ಸಲ್ಯದಿಂದ ಹೇಳುವ ಅಮೋಘವಾಕ್ಕಾಗಿರುತ್ತದೆ. ಸಃ - ಆ ಸತ್ಯಸಙ್ಕಲ್ಪನಾದ ಶ್ರೀರಾಮನು, **ಶರಣಾಗತವತ್ಸಲಃ** - ಶರಣಾಗತರಲ್ಲಿ ತುಂಬಾ ವಾತ್ಸಲ್ಯವುಳ್ಳವನು. ಮಹಾಪರಾಧಿಯಾಗಿದ್ದರೂ ಮನ್ನಿಸುವನೋ ಎಂಬ ಸಂದೇಹವು ಬೇಡ, **ಧರ್ಮಜ್ಞಃ** - ಶರಣಾಗತ ಧರ್ಮವನ್ನು ಚನ್ನಾಗಿ ತಿಳಿದವನು, **ದೋಷೋ ಯದ್ಯಪಿ ತಸ್ಯಸ್ಯಾತ್** ಎಂದು

(೨) ವಂಗಿ ನಿತ್ಯಂ.

(೩) "ವಿದಿತಸ್ಸಹಿ ಧರ್ಮಜ್ಞಶ್ಶರಣಾಗತ ವತ್ಸಲಃ।
ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ।

ಹೇಳತಕ್ಕವನು. ಇದು ವಿದಿತಃಹಿ ಇದು ಲೋಕಪ್ರಸಿದ್ಧವಾದ ವಿಷಯವು ಶರಣಾಗತವತ್ಸಲನೆಂಬ ಪ್ರಸಿದ್ಧಿಗೆ ನಿನ್ನ ಅನುಜನೇ ಸಾಕ್ಷಿಯಾಗುವನು ಎಂಬ ಭಾವವು. ನನ್ನಂತಹ ರಾಜನು ಆತನಿಗೆ ಎರಗುವದು ಧರ್ಮವೋ ಎಂದು ಯೋಚಿಸ ಬೇಡ, **ತೇನ ಮೈತ್ರೀ ಭವತು ತೇ**-ಆತನೊಂದಿಗೆ ಸಖ್ಯವನ್ನು ಬೆಳೆಸು, ನಿನಗೆ **ಯದಿ ಜೀವಿತುಮಿಚ್ಛಸಿ**- ಚನ್ನಾಗಿ ಬದುಕಬೇಕೆಂಬಪೇಕ್ಷೆಯು ಇದ್ದುದಾದರೆ, ಹಾಗೆ ಮಾಡು. **ಏನಂ ಶರಣಾಗತವತ್ಸಲಂ** - ಇಂತಹ ಶರಣಾಗತವತ್ಸಲ ನನ್ನು, ಆತನು ಅಂತಹ ಸತ್ಯಸಙ್ಕಲ್ಪನೆಂದು ಮನಸ್ಸಿಗೆ ಚನ್ನಾಗಿ ಹಿಡಿಯುವದ ಕ್ಕಾಗಿ ಶರಣಾಗತವತ್ಸಲನೆಂಬುವದನ್ನು ಎರಡುಸಲ ಹೇಳಿರುತ್ತಾಳೆಂದೂ ಭಾವಿಸ ಬಹುದು ; ಇನ್ನೊಂದಭಿಪ್ರಾಯವು ಮುಂದೆ ವಿವರಿಸ್ಪಡುತ್ತದೆ. ಆತನು

"ಮಿತ್ರ ಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"।
ದೋಷೋ ಯದ್ಯಪಿ ತಸ್ಯಸ್ಯಾತ್ಸತಾ ಮೇ ತದಗರ್ಹಿತಂ"

ಎಂದು ಹೇಳುವ ಸತ್ಯಸಙ್ಕಲ್ಪನಾದುದರಿಂದ **ತೇನಮೈತ್ರೀ ಭವತು ತೇ** ಎಂದುಕೃಪೆಯಾ ಉಪದೇಶಿಸಿರುತ್ತಾಳೆ ; ಇಂಥಾವನನ್ನು **ತ್ವಂ**- ನೀನು, **ಪ್ರಸಾದ ಯಸ್ವ** - ನಿನ್ನನ್ನು ಅನುಗ್ರಹಿಸುವಹಾಗೆ ಪ್ರಸನ್ನನಾಗಿ ಮಾಡಿಕೋ ; **ಪ್ರಯ ತೋಭೂತ್ವಾ** - ಆ ಶರಣಾಗತಿಯಿಂದ ಸರ್ವಪಾಪಗಳನ್ನೂ ಕಳೆದುಕೊಂಡು ಮುಂದಕ್ಕೆ ಪ್ರತಿಕೂಲನಾಗದೆ, ಪರಿಶುದ್ಧನಾಗಿ, **ಅಸ್ಮೈ** - ಇಂತಹ ಶ್ರೀರಾಮ ನಿಗೆ **ಮಾಂಚ** - ನನ್ನನ್ನೂ ಕೂಡ **ನಿರ್ಯಾತಯಿತು ಮರ್ಹಸಿ** - ಹಿಂತಿರುಗಿ ಸಮರ್ಪಿಸಲು ಯೋಗ್ಯನಾಗುತ್ತೀ ಎಂದರೆ ನನ್ನನ್ನು ಸಮರ್ಪಿಸುವದು ಯುಕ್ತ ವಾದುದು ಎಂಬ ಭಾವವು. ರಾವಣನು ಪ್ರಪನ್ನನಲ್ಲವಲ್ಲಾ, ಇದು ಬುದ್ಧಿ ಪೂರ್ವೋತ್ತರಾಘ ವಿಷಯ ಹೇಗೆ ಆದೀತೆಂದು ಪ್ರಶ್ನಿಸಬಹುದು. ಇಲ್ಲಿ ಮೊದಲು **"ಶರಣಾಗತ ವತ್ಸಲಃ ತೇನ ಮೈತ್ರೀ ಭವತುತೇ"** ಎಂಬುವದರಿಂದ ತನ್ನ ಉಜ್ಜೀವನಾರ್ಥವಾಗಿ ಶರಣಾಗತಿಯು ಉಪದೇಶಿಸಲ್ಪಟ್ಟಿತು. ಆಗಲೂ ಸೀತೆ ಯನ್ನು ಕಳುಹಿಸಿಕೊಡದೆ ಅಶೋಕವನದಲ್ಲಿಟ್ಟಿದುದರಿಂದ ಬುದ್ಧಿಪೂರ್ವಾಘವು ಇನ್ನೂ ಹಿಂಬಾಲಿಸಿರುವದರಿಂದ ಅದಕ್ಕೆ ಪ್ರಾಯಶ್ಚಿತ್ತರೂಪದಲ್ಲಿ **"ಪ್ರಸಾದ**

(೩) ರಾಮಾ. ಸುಂದರ ೨೧-೨೦,೨೧

ಪ್ರಸಾದಯಸ್ವ ತ್ವಂ ಚೈನಂ ಶರಣಾಗತ ವತ್ಸಲಂ ।
ಮಾಂಚಾಸ್ಮೈ ಪ್ರಯತೋ ಭೂತ್ವಾ ನಿರ್ಯಾತಯಿತು ಮರ್ಹಸಿ ॥"

ಯಸ್ವ ತ್ವಂ ಚೈನಂ ಶರಣಾಗತವತ್ಸಲಂ ಮಾಂಚಾಸ್ಮೈ ಪ್ರಯತೋ ಭೂತ್ವಾನಿ ರ್ಯಾತಯಿತುಮರ್ಹಸಿ" ಎಂಬುವದರಿಂದ ಪ್ರಾಯಶ್ಚಿತ್ತರೂಪ ಪುನಶ್ಶರಣಾಗತಿಯು ವಿಧಿಸಲ್ಪಟ್ಟಿರುವುದರಿಂದ ಶರಣಾಗತ ವತ್ಸಲ ಪದವು ಎರಡು ಸಲ ಪ್ರಯೋಗಿಸಲ್ಪಟ್ಟಿರುತ್ತದೆ. ಒಬ್ಬನು ದ್ರವ್ಯವನ್ನು ಅಪಹರಿಸಿದರೆ, ಮೊದಲು ರಕ್ಷಿಸು ಎಂದು ಬೇಡಿ, ಕದ್ದ ಪದಾರ್ಥವನ್ನು ತಂದು ಸಮರ್ಪಿಸಿ ಅದರ ಪ್ರಾಯಶ್ಚಿತ್ತಕ್ಕಾಗಿ ಪುನಃ ನಮಸ್ಕರಿಸುವನು. ಮೊದಲು ಶರಣಾಗತಿಯನ್ನು ಮಾಡಿದರೇನೆ ಸೀತೆಯನ್ನು ಪರಿಗ್ರಹಿಸು ಎಂದು ಬೇಡಲು ಅಧಿಕಾರ ಉಂಟಾದೀತು ಆದುದರಿಂದ ರಕ್ಷಣಾರೂಪ ಶರಣಾಗತಿಯೂ ಪ್ರಾಯಶ್ಚಿತ್ತರೂಪ ಶರಣಾಗತಿಯೂ ಎರಡೂ ಆವಶ್ಯಕವು. ಈ ಶ್ಲೋಕವು ಅತ್ಯಂತ ಮಾತೃವಾತ್ಸಲ್ಯದಿಂದ ಲೋಕಮಾತೆಯು ಆಚಾರ್ಯಸ್ಥಾನದಲ್ಲಿ ನಿಂತು ಜೀವಾತ್ಮನಿಗೆ ಹೇಳುವ ಹಿತೋಪದೇಶವೆಂದೂ ಭಾವಿಸಬಹುದು. ಸರ್ವೇಶ್ವರನು ಶರಣಾಗತವತ್ಸಲನು ಶರಣಾಗತ ಧರ್ಮವನ್ನು ಚನ್ನಾಗಿ ತಿಳಿದ ಸತ್ಯಸಙ್ಕಲ್ಪನು. ಆತನಲ್ಲಿ ಮೈತ್ರೀ ಮಹಾವಿಶ್ವಾಸವು ಉಂಟಾಗಿ ಯದಿ ಜೀವತುಮಿಚ್ಛಸಿ ನಿನಗೆ ಆತ್ಮೋಜ್ಜೀವನವನ್ನು ಮಾಡಿಕೊಳ್ಳಬೇಕೆಂಬ ಇಷ್ಟವಿದ್ದರೆ, ಶರಣಾಗತಿಯನ್ನು ಮಾಡು, ಹಾಗೆ ಮಾಡದಿದ್ದರೆ ಪುನಃಪುನಃ ಜನ್ಮವೆತ್ತುವದು ನಿನಗೆ ಮರಣಸಮಾನವೆಂಬ ಭಾವವು. ಆದುದರಿಂದ ನೀನು ಅಂತಹ ಶರಣಾಗತವತ್ಸಲನನ್ನು ಪ್ರಸನ್ನನಾಗಿಮಾಡಿಕೊಂಡು ಮಾಂಚ - "ಅಹಂ ಮೇ" ಎಂದು ಹೇಳಿ ಆತ್ಮಾಪಹಾರಚೌರ್ಯಮಾಡಿದ ಜೀವಾತ್ಮನನ್ನೂ ಅಥವಾ ಅಹಂ,ಮಾಂ ಇತ್ಯಾದಿ ಪ್ರತ್ಯಭಿಜ್ಞೆಯಿಂದ ತೋರುವ ಜೀವಾತ್ಮನನ್ನು, ಅಥವಾ "ಮಾಂ" ವಿದೇಹರಾಜತನಯಾನ್ಯಾಯೇನ ಲಾಲಿಷ್ಯತೇ" ಎಂದು ಹೇಳಿರುವ ಹಾಗೆ ನನ್ನ ಹಾಗೆ ಬಂಧಕ್ಕೆ ಸಿಕ್ಕಿರುವ ಜೀವಾತ್ಮನನ್ನು, ಆ ಅಪರಾಧವನ್ನು ಕಳೆದುಕೊಳ್ಳುವದಕ್ಕೋಸ್ಕರ ನಿರ್ಯಾತಯಿತುಮರ್ಹಸಿ, ಆತನ ಸ್ವತ್ತನ್ನು ಆತನಿಗೆ ಹಿಂತಿರುಗಿ ಸಮರ್ಪಿಸುವದು ಯುಕ್ತವು ಎಂಬ ಸ್ವಾರಸ್ಯಾರ್ಥವೂ ತೋರಿಬರುತ್ತದೆ. ಈ ಸಂದರ್ಭದಲ್ಲಿ,

(೧) "ಅಸ್ವೇಸ್ವಮಿತಿ ಭಾವೋತ್ರಯತ್ಪುಂಸಾಮುಪಜಾಯತೇ ।
ಅಹಂ ಮಮೇತಿ ಭಾವೋಯತ್ ಪ್ರಾಯೇಣೈವಾಭಿಜಾಯತೇ"

(೧) ವಿ. ಪು. ೫.೩೦.೧೫.

ಇತ್ಯಾದಿಗಳಿಲ್ ಶೊಲ್ಲುಗಿರಪಡಿಯೇ ಯಥಾಧಿಕಾರಮ್ ಪ್ರಾಯಶ್ಚಿತ್ತಾವ ಲಂಬನಮುಣ್ಡಾಮ್.

ಪ್ರಾಯಶ್ಚಿತ್ತಾಕರಣೇ ಅಲ್ಪಶಿಕ್ಷಯಾರಕ್ಷಣಂ

ಪ್ರಾರಬ್ಧಕರ್ಮವಿಶೇಷವಶತ್ತಾಲೆ ಕಠಿನ ಪ್ರಕೃತಿಯಾಯ್ ಕ್ಷಮೈ ಕೊಳ್ಳುಗೈಯುಮ್ ಕೈತಪ್ಪಿನಪೋದು (೧) "ಸ್ವಪುರುಷಮಭಿವೀಕ್ಷ್ಯ

ಮತ್ತು

"ಅನ್ಯಥಾಸಂತಮಾತ್ಮಾನಂ ಯೋಽನ್ಯಥಾಪ್ರತಿಪದ್ಯತೇ ।
ಕಿಂತೇನ ನಕೃತಂಪಾಪಂ ಚೋರೇಣಾತ್ಮಾಪಹಾರಿಣಾ"

ಎಂಬೀ ಶ್ಲೋಕಗಳು ಇಲ್ಲಿ ಅನುಸಂಧೇಯವು

ಇತ್ಯಾದಿಗಳಿಲ್ - ಇಂತಹ ಪ್ರಮಾಣಗಳಲ್ಲಿ, ಶೊಲ್ಲುಗಿರಪಡಿಯೇ- ಹೇಳಿರುವ ರೀತಿಯಲ್ಲಿ, ಯಥಾಧಿಕಾರಮ್ - ಭಕ್ತಿಮಾರ್ಗ ಪ್ರಪದನಮಾರ್ಗ ಗಳನ್ನು ಅವಲಂಬಿಸಿದ ಶಕ್ತರಾದ ಅಶಕ್ತರಾದ ಅಧಿಕಾರಿಗಳಿಗೆ, ಪ್ರಾಯಶ್ಚಿತ್ತಾ ವಲಂಬನಮುಣ್ಡಾಮ್ - ಪ್ರಾಯಶ್ಚಿತ್ತಾನುಷ್ಠಾನವು ಶ್ರಿಯಃಪತಿಯನುಗ್ರಹ ದಿಂದಲೇ ಪ್ರಾಪ್ತವಾಗಬಹುದು.

ಹಾಗೆ ಪ್ರಾಯಶ್ಚಿತ್ತಾವಲಂಬನವಿಲ್ಲದಿದ್ದರೆ ಅಲ್ಪಶಿಕ್ಷೆಮಾಡಿ ರಕ್ಷಣವು.

ಪ್ರಾರಬ್ಧಕರ್ಮವಿಶೇಷವು ಪ್ರಬಲವಾದುದರಿಂದ ಪ್ರಾಯಶ್ಚಿತ್ತಮಾಡಿಕೊ ಳ್ಳದೆಹೋದರೂ ಮೋಕ್ಷಪ್ರಾಪ್ತಿಗೆ ಚ್ಯುತಿಯಿಲ್ಲವು. ಸರ್ವೇಶ್ವರನು ಅಂಥಾವ ನನ್ನು ದೇಹಾವಸಾನದ ಒಳಗೆ ಅಲ್ಪ ದಂಡನೆಗೆ ಗುರಿಮಾಡಿ ರಕ್ಷಿಸುವನು ಎಂದು ಹೇಳುತ್ತಾರೆ. ಈ ಅಧಿಕಾರ ಕೊನೆಯ ಶ್ಲೋಕದಲ್ಲಿ ಹೇಳಿರುವ ಜಾತೇಪಿ ತನ್ನಿಷ್ಕೃತೇಃ ಎಂಬುವ ಭಾಗವು ಉಪಪಾದಿಸಲ್ಪಟ್ಟಿತು. ಈಗ ಕೌಟಿಲ್ಯೇ ಸತಿ ಶಿಕ್ಷಯಾಪ್ಯನಘಯನ್ ಕ್ರೋಡೀ ಕರೋತಿ ಪ್ರಭುಃ ಎಂಬ ವಾಕ್ಯವು ಉಪಪಾದಿಸಲ್ಪಡುತ್ತದೆ. ಪ್ರಾರಬ್ಧಕರ್ಮ ವಿಶೇಷವಶತ್ತಾಲೆ - ಪ್ರಾರಬ್ಧ ಕರ್ಮ ವಿಶೇಷಕ್ಕೆ ಒಳಪಟ್ಟಿರುವದರಿಂದ, ಕಠಿನ ಪ್ರಕೃತಿಯಾಯ್ - ಕ್ಷಮಿಸು ಎಂದು ಬೇಡಲು ಬೇಕಾದ ಸಾತ್ವಿಕನ ಮೃದು ಸ್ವಭಾವವಿಲ್ಲದೆ ಕಠಿನವಾದ ರಾಜಸತಾಮಸಸ್ವಭಾವ ಉಳ್ಳವನಾಗಿ, ಕ್ಷಮೈಕೊಳ್ಳುಗೆಯುಮ್ ಕೈತಪ್ಪಿನ

ಪಾಶಹಸ್ತಂ ವದತಿ ಯಮಃ ಕಿಲ ತಸ್ಯ ಕರ್ಣಮೂಲೇ। ಪರಿಹರ ಮಧು ಸೂದನ ಪ್ರಪನ್ನಾನ್ ಪ್ರಭುರಹಮನ್ಯ ನೃಣಾಂ ನ ವೈಷ್ಣವಾನಾಂ" ॥ (೨) "ಕಮಲನಯನ ವಾಸುದೇವ ವಿಷ್ಣೋ ಧರಣಿ ಧರಾಚ್ಯುತ ಶಂಖ ಚಕ್ರಪಾಣೇ। ಭವ ಶರಣಮಿತೀರಯಂತಿ ಯೇ ವೈತ್ಯಜಭಟ ದೂರತ ರೇಣ ತಾನ ಪಾಪಾನ್"

ಪೋದು – ಕ್ಷಮಿಸು ಎಂಬ ಪ್ರಾರ್ಥನಾಯುಕ್ತವಾದ ಪ್ರಾಯಶ್ಚಿತ್ತರೂಪ ಶರಣಾ ಗತ್ಯನುಷ್ಠಾನವು ತಪ್ಪಿದ ಸಂದರ್ಭದಲ್ಲಿ, ಮುಂದೆ ನರಕಪ್ರಾಪ್ತಿ ಏನೊಂದೂ ಇಲ್ಲದೆ ಈ ದೇಹದಲ್ಲೇ ಅಲ್ಪದಂಡನೆಯನ್ನುಕೊಟ್ಟು ಸರ್ವೇಶ್ವರನು ರಕ್ಷಿಸುವನು ಎಂದು ಹೇಳುತ್ತಾರೆ. ಈ ಅಭಿಪ್ರಾಯಸಮರ್ಥನೆಗಾಗಿ ಕೆಲವು ಪ್ರಮಾಣಗಳನ್ನು ಪ್ರದರ್ಶಿಸುತ್ತಾರೆ :– **ಯಮಃ** - ಯಮನ; **ಪಾಶಹಸ್ತಂ** - ಪಾಶವನ್ನು ಧರಿಸಿ ರುವ, **ಸ್ವಪುರುಷಂ** - ತನ್ನ ಭಟನನ್ನು, **ಅಭಿವೀಕ್ಷ್ಯ** - ಕಂಡು, **ತಸ್ಯ ಕರ್ಣ ಮೂಲೇ** - ಆತನ ಕಿವಿಯಲ್ಲಿ ಗುಟ್ಟಾಗಿ, **ವದತಿಕಿಲ** - ಹೇಳುತ್ತಾನೆಯಷ್ಟೆ ; ಏನನ್ನು ಗುಟ್ಟಾಗಿ ಹೇಳುತ್ತಾನೆಂಬುವದು ಉತ್ತರಾರ್ಧದಲ್ಲಿ ಹೇಳಲ್ಪಡುತ್ತದೆ :– "ಓ ಭಟನೇ, **ಮಧುಸೂದನಪ್ರಪನ್ನಾನ್** - ಮಧು ಎಂಬ ರಾಕ್ಷಸನನ್ನು ಕೊಂದ ಶ್ರೀ ಮಹಾವಿಷ್ಣುವಿನಲ್ಲಿ ಶರಣಾಗತರಾದ ಪ್ರಪನ್ನರನ್ನು, **ಪರಿಹರ** - ಬಿಟ್ಟು ಬಿಡು ಎಂದರೆ ಅವರ ತಂಟೆಗೆ ಹೋಗಬೇಡ, **ಅನ್ಯನೃಣಾಂ** - ಇತರ ಜನರಿಗೆ, **ಅಹಂ ಪ್ರಭುಃ** - ನಾನು ಸ್ವಾಮಿಯು, **ನ ವೈಷ್ಣವಾನಾಂ** - ಅಂತಹ ವೈಷ್ಣವ ರಿಗೆ ನಾನು ಪ್ರಭುವಲ್ಲವು" ಎಂಬದಾಗಿ ಯಮನು ಹೇಳಿದನು ಎಂಬ ತಾತ್ಪರ್ಯವು ಪ್ರಪನ್ನರಿಗೆ ಯಮನ ಬಾಧೆಯು ಇಲ್ಲವು ಎಂಬುವದಕ್ಕೆ ಈ ಪ್ರಮಾಣವು

(೨) **ಕಮಲ ನಯನ** - ಪುಂಡರೀಕಾಕ್ಷನೇ, **ವಾಸುದೇವನೇ** ವಾಸು ದೇವ ಶಬ್ದಕ್ಕೆ ವ್ಯುತ್ಪತ್ತಿ ಹೇಗೆಂದರೆ :– **"ಸರ್ವತ್ರಾಸೌ ಸಮಸ್ತಂ ಚ ವಸತ್ಯ ತ್ರೇತಿವೈಯತಃ"** ಎಂದು ಹೇಳಿರುವ ಹಾಗೆ ಈತನು ಎಲ್ಲೆಲ್ಲಿಯೂ ಎಲ್ಲವೂ ಈತನಲ್ಲೂ ವಾಸವಾಗಿರುವವರಿಂದ ವಾಸುದೇವನು. **ಹೇ ವಿಷ್ಣೋ** - ಓ ಸರ್ವ ವನ್ನು ವ್ಯಾಪಿಸುವ ವಿಷ್ಣುವೇ,

"ಯಸ್ಮಾದ್ವಿಷ್ಟಂಭಿತಂ ಸರ್ವಂತಸ್ಯ ಶಕ್ತ್ಯಾ ಮಹಾತ್ಮನಃ।
ತಸ್ಮಾತ್ಸ ಪ್ರೋಚ್ಯತೇ ವಿಷ್ಣುರ್ವಿಶೇರ್ಧಾತೋಃ ಪ್ರವೇಶನಾತ್"

---

(೧) ವಾಮನ ಪುರಾಣ ೯೪. ೩೧ (೨) ವಿ. ಪು ೩. ೭. ೩೩.

(೩) "ದೇವಂ ಶಾರ್ಙ್ಗಧರಂ ವಿಷ್ಣುಂ ಯೇ ಪ್ರಪನ್ನಾಃ ಪರಾಯಣಂ । ನ ತೇಷಾಂ ಯಮ ಸಾಲೋಕ್ಯಂ ನ ಚ ತೇ ನರಕೌಕಸಃ," ಎನ್ರು ವೈಷ್ಣವ ವಾಮನಾದಿ ಪುರಾಣಙ್ಗಳಿಲ್ ಪಾಶುರಙ್ಗಳುಕ್ಕು ಮೂಲಮಾನ ಶ್ರುತಿಯಿಲ್ ಶೊಲ್ಲುಗಿರಪಡಿಯೇ ಯಮ ವಿಷಯಗಮನ

ಎಂಬ ವಿಷ್ಣುಧರ್ಮ ಶ್ಲೋಕವು ಇಲ್ಲಿ ಅನುಸಂಧೇಯವು; **ಧರಣೀಧರ** - ವರಾಹಾವತಾರಿಯಾಗಿ ಭೂಮಿಯನ್ನು ತನ್ನ ಕೋರೆದಾಡೆಯಿಂದ ಧರಿಸಿದವನೇ, **ಅಚ್ಯುತ**-ನಾಶರಹಿತನೇ, ಅಥವಾ ಶರಣಾಗತನನ್ನು ಕೈಬಿಡುವದಿಲ್ಲವೆಂಬ ಸತ್ಯಸಙ್ಕಲ್ಪದಿಂದ ಜಾರದಿರುವವನೇ, ಶಂಖಚಕ್ರಗಳನ್ನು ಕೈಯಲ್ಲುಳ್ಳವನೇ, **ಶರಣಂಭವ**-ರಕ್ಷಕನಾಗು ಅಥವಾ ಸಿದ್ಧೋಪಾಯನಾಗು, ಇತಿ-ಎಂಬದಾಗಿ, **ಯೇ** - ಯಾರು, **ಈರಯನ್ತಿ**-ಹೇಳುತ್ತಾರೋ, ಇದರಿಂದ ಉಕ್ತಿನಿಷ್ಠಾರೂಪ ಶರಣಾಗತಿಯು ಹೇಳಲ್ಪಟ್ಟಿತು, **ಅಪಾಪಾನ್** - ಪಾಪಗಳಿಲ್ಲದಿರುವ, **ತಾನ್** - ಅಂಥಾವರನ್ನು, **ದೂರತರೇಣ** - ತುಂಬಾ ದೂರದಲ್ಲೇ, **ಭಟ** - ಓ ದೂತನೇ, **ತ್ಯಜ** - ಬಿಟ್ಟುಬಿಡು. ಅವರ ಹತ್ತಿರ ಹೋಗಬೇಡ. ಇದರಿಂದ ನರಕಪತನಾದಿ ಯಮಶಿಕ್ಷೆಯು ಶರಣಾಗತಿಯನ್ನನುಷ್ಠಿಸಿದವರಿಗಿಲ್ಲವೆಂಬ ಭಾವವು.

(೩) **ದೇವಂ** - ಲೀಲಾಸಕ್ತನಾದ, **ಶಾರ್ಙ್ಗಧರಂ** - ಶಾರ್ಙ್ಗವೆಂಬ ಧನಸ್ಸನ್ನು ಧರಿಸಿದ, **ವಿಷ್ಣುಂ** - ಶ್ರೀ ಮಹಾವಿಷ್ಣುವನ್ನು, **ಯೇ** - ಯಾರು **ಪರಾಯಣಂ** - ಉಪಾಯೋಪೇಯವಾಗಿ, **ಪ್ರಪನ್ನಾಃ** - ಶರಣಾಗತಿಮೂಲಕ ಆಶ್ರಯಿಸುತ್ತಾರೋ, **ತೇಷಾಂ** - ಅಂಥಾವರಿಗೆ, **ಯಮಸಾಲೋಕ್ಯಂ** - ಯಮಲೋಕವಾಸವು, **ನ** - ಇಲ್ಲವು, **ತೇ** - ಅವರುಗಳು, **ನ ಚ ನರಕೌಕಸಃ**-ನರಕವಾಸಿಗಳೂ ಅಲ್ಲವು, **ಎನ್ರು** - ಎಂಬುದಾಗಿ ವೈಷ್ಣವ, ವಾಮನ ಮೊದಲಾದ ಪುರಾಣಗಳಲ್ಲಿರುವ, **ಪಾಶುರಙ್ಗಳುಕ್ಕು** - ಮೇಲೆ ಉದಾಹರಿಸಿದ ಶ್ಲೋಕಗಳಿಗೆ **ಮೂಲಮಾನ** - ಮೂಲಾಧಾರವಾದ, **ಶ್ರುತಿಯಿಲ್** - ಶ್ರುತಿಯಲ್ಲಿ, **ಶೊಲ್ಲುಗಿರಪಡಿಯೇ** - ಹೇಳಿರುವಹಾಗೆ, **ಯಮವಿಷಯಗಮನ ಮನ್ರಿಕ್ಕೇ** - ಯಮಲೋಕವನ್ನು ಕುರಿತು ಹೋಗುವದಿಲ್ಲದೆ, **ವೇಲಿಟ್ಟುಪಾಯ ವೇಂಡುಮದು** - ಕುಂತಾಯುಧ ಧರಿಸಿ ಭೇದಿಸತಕ್ಕದ್ದು, **ಮುಳ್ಳಿಟ್ಟುಪಾಯ್‌ನ್ದು ಕಳಿಯುಮ್** - ಮುಳ್ಳನ್ನು ಚುಚ್ಚುವದರಿಂದಹೋಗಬಹುದು, ಎಙ್ಗ ರಕಣಿಕ್ಕಿಲೆ-ಎಂಬ ಲೋಕದಗಾದೆಗನುಸಾರವಾಗಿ, **ಕಾಣಿ**-ಒಂದುಕಣ್ಣಿಲ್ಲದವನು, **ಖಂಜ**-

---

(೩) ವಾಮ. ಪು. ೯೪. ೪೩

ಮನ್ರಿಕ್ಕೇ, ವೇಲಿಟ್ಟುಪ್ಪಾಯ ವೇಂಡುಮದು ಮುಳ್ಳಿಟ್ಟು ಪಾಯುನ್ನು ಕಳಿಯುಮೆಙ್ಗರ ಕಣಕ್ಕಿಲೇ ಕಾಣರ್ ಖಂಜರ್ ಎನ್ರು ಮುದಲಾಗ ವೋದುಗಿರ ಇಙ್ಗತ್ತೈ ಉಪಕ್ಲೇಶಮುಖತ್ತಾಲೇ ಶಿಕ್ಕೈಯುರಕ್ಕುಮ್ ವಿರುಗಗಳೈ ಮುನ್ನಿಟ್ಟು ಸರ್ವೇಶ್ವರರ್, ಕ್ಷಮಾ ಪ್ರೇಮದಯಾ ವಾತ್ಸಲ್ಯಙ್ಗಳಾಲೇ ತಣಿನ್ದ ಪ್ರತಾಪತ್ತೈಯುಡೈಯನಾಯ್, ಮಿಗವುಮ್ ದಣ್ಡಿಕ್ಕವೇಣ್ಡುಮ್ ಅಪರಾಧತ್ತುಕ್ಕು ಸೇವ್ಯನಾನ ಸಾರ್ವಭೌಮ ನಡೈಯಾಳಕ್ಕಾರರ್, ಅಂತಃಪುರ ಪರಿಜನಮ್, ಕೂನರ್, ಕುರಳರ್, ಕುಮಾರರಗಳ್ ವಿಷಯತ್ತಿಲ್ ಅಪರಾಧಙ್ಗಳುಕ್ಕೇಡಾಗವುಮ್, ಅಂತರಂಗತ್ವಾದಿ

ಒಂದು ಕಾಲಿಲ್ಲದ ಕುಂಟನು, **ಎನ್ರುಮುದಲಾಗ** - ಎಂಬುವದೇ ಮೊದಲಾದ **ಓದುಗಿರ** - ಶ್ರುತಿಯಲ್ಲಿ ಹೇಳಿರುವ. **ಇಙ್ಗತ್ತೈ ಉಪಕ್ಲೇಶಮುಖತ್ತಾಲೆ** - ಇಂತಹ ದುಃಖಗಳ ಮೂಲಕವಾಗಿ, **ಶಿಕ್ಕೈಯುರಕ್ಕುಮ್ ವಿರುಗಗಳೈ** - ಹೊತ್ತಲೆಲ್ಲಾ ತೀರುವ ಮಾರ್ಗಗಳನ್ನು, **ಮುನ್ನಿಟ್ಟು** ಪುರಸ್ಕರಿಸಿ, **ಸರ್ವೇಶ್ವರನು ಕ್ಷಮಾಪ್ರೇಮದಯಾ ವಾತ್ಸಲ್ಯ**ಗಳಿಂದ, **ತಣಿನ್ದ ಪ್ರತಾಪತ್ತೈಯುಡೈಯನಾಯ್**-ಶಾಂತವಾದ ಪ್ರತಾಪವುಳ್ಳವನಾಗಿ, ಪ್ರತಾಪವ್ಯಾವುದೆಂದರೆ, ಹೆಚ್ಚು ಅಪರಾಧಗಳಿಗೆ ಅದಕ್ಕೆ ಸರಿಯಾದ ಹೆಚ್ಚುದಂಡನೆ ಮಾಡಬೇಕೆಂಬ ಪ್ರತಾಪ**ವು, ಮಿಗವುಮ್ ದಂಡಿಕ್ಕ ಅಪರಾಧತ್ತುಕ್ಕು** - ಹೆಚ್ಚಾಗಿ ಶಿಕ್ಷಿಸಬೇಕಾದ ಅಪರಾಧಕ್ಕೆ, ಸರ್ವೇಶ್ವರನು ಅಲ್ಪದಂಡನೆಯನ್ನು ಕೊಟ್ಟು ಆಶ್ರಿತನನ್ನು ರಕ್ಷಿಸಿಬಿಡುವನು ಎಂಬುವವಕ್ಕೆ ಒಂದು ಲೌಕಿಕ ದೃಷ್ಟಾಂತವನ್ನು ಕೊಡುತ್ತಾರೆ. **ಸೇವ್ಯನಾನ** - ಸೇವಿಸಲು ಯೋಗ್ಯನಾದ, **ಸಾರ್ವಭೌಮನ** - ಚಕ್ರವರ್ತಿಯ, **ಅಡೈಯಾಳಕ್ಕಾರರ್** - ಛತ್ರಚಾಮರಾದಿಗಳನ್ನು ಹಿಡಿಯುವ ಆಳುಗಳೂ, **ಅಂತಃಪುರ ಪರಿಜನಂ** - ಅಂತಃಪುರದ ಪಟ್ಟಮಹಿಷಿಗಳಿಗೆ ದಾಸೀಜನರು, **ಕೂನರ್**-ಗೂನುಳ್ಳ ಕುಬ್ಜರು, **ಕುರುಳರ್** - ವಾಮನರು, ಕುಳ್ಳರು, **ಕುಮಾರರ್‌ಗಳ್** - ಸ್ವಂತಪುತ್ರರುಗಳು, **ವಿಷಯತ್ತಿಲ್** - ಇವರುಗಳ ವಿಷಯದಲ್ಲಿ, **ಅಪರಾಧಙ್ಗಳುಕ್ಕೇಡಾಗವುಮ್** - ಅವರುಗಳು ಮಾಡಿದ ಅಪರಾಧಗಳಿಗೆ ಅನುಗುಣವಾಗಿಯೂ, **ಅಂತರಂಗತ್ವಾದಿ ತಾರತಮ್ಯತ್ತುಕ್ಕೇಡಾಗವುಮ್**-ವಿಶ್ವಾಸವೇ ಮೊದಲಾದ**ವು**ಗಳಲ್ಲಿನ ತರತಮಭೇದಕ್ಕನುಗುಣವಾಗಿ, **ಆದಿ**ಶಬ್ದದಿಂದ ದೇಹಾನುಬಂಧಿತ್ವವು ಹೇಳಲ್ಪಟ್ಟಿತು. **ಸಂಬಂಧಾನೃಶಂಸ್ಯಾದಿಗಳಾಲೆ ಪ್ರೀತಿನಡಕ್ಕಚೆಯ್‌ದೇ** - ಅವರುಗಳ ವಿಷಯದಲ್ಲಿ ಪ್ರೀತಿಯಿರುವದರಿಂದಲೇ, ಅವರುಗಳು, **ತಪ್ಪಿನತ್ತುಕ್ಕು** - ಮಾಡಿದ ಅಪರಾಧಕ್ಕಾಗಿ, **ಕ್ಷಮೈಕೊಳ್ಳುಗೈಕ್ಕಾಗವುಮ್** -

ತಾರತಮ್ಯತ್ತುಕ್ಕೀಡಾಗವುಮ್, ಸಂಬಂಧಾನ್ಯಶಂಸ್ಯಾದಿಗಳಾಲೆ ಪ್ರೀತಿನಡಕ್ಕಚ್ಚೆಯ್ಯದೇಯುವರ್‌ಗಳ್ ತಪ್ಪಿನತ್ತುಕ್ಕು ಕ್ಷಮೈಕೊಳ್ಳೈಗೈಕ್ಕಾಗವುಮ್, ಮೇಲೈಕ್ಕುಮ್ ಶಿಕ್ಷೈಯಾಗೈಕ್ಕಾಗವುಮ್, ಮುಖಮ್ ಕೊಡಾದೇಯಿರುತ್ತಲ್, ಶಮ್ಮಟ್ಟೈಯಿಟ್ಟಡಿತ್ತಲ್, ತಳ್ಳಿವಿತ್ತಲ್, ವಾಶಲಿಲೆ ತಗ್ಗೈವಿತ್ತಲ್ ಶಿರುದುನಾಳ್, ಸೇವೈಯೈ ವಿಲಕ್ಕಿವಿಡುದಲ್, ಶೆಯ್ಯುಮಾಪ್ಪೋಲೆ, ಕಾಕಾಸುರನ್ಯಾಯತ್ತಾಲೆ ಒರುಕಣ್ಣೈಳಿವಾಲೇ ಇವ್ವಾಶ್ರಿತರ್ಕೈ ರಕ್ಷಿತ್ತು ವಿಡುಮ್.

ಕ್ಷಮಿಸಿದಹಾಗೆ ಆಗುವದಕ್ಕಾಗಿಯೂ, **ಮೇಲೈಕ್ಕುಮ್ ಶಿಕ್ಷೈಯಾಗೈಯಾಕ್ಕುವುಮ್** - ಮುಂದೆ ಹಾಗೆ ಅಪರಾಧಗಳನ್ನು ಮಾಡದಿರುವದಕ್ಕಾಗಿ ಸ್ವಲ್ಪ ಶಿಕ್ಷೆಯಾಗುವದಕ್ಕಾಗಿಯೂ, **ಮುಖಮ್ ಕೊಡಾದೇಯಿರುತ್ತಲ್** - ಮುಖವನ್ನು ಕೊಡದೇ ಇರುವದಾಗಲಿ, **ಶಮ್ಮಟ್ಟೈಯಿಟ್ಟಡಿತ್ತಲ್** - ಚಾಟಿಯಿಂದ ಹೊಡಿಸಿದಾಗಲಿ, **ತಳ್ಳಿವಿತ್ತಲ್** - ಕುತ್ತಿಗೆಗೆ ಕೈಹಾಕಿ ದಬ್ಬಿಸಿದಾಗಲಿ, **ವಾಶಲಿಲೆ ತಗ್ಗೈವಿತ್ತಲ್** - ಬಾಗಿಲನ್ನು ಹಾಕಿಸಿಯೇಯಾಗಲಿ, **ಶಿರುದುನಾಳ್ ಸೇವೈಯೈ ವಿಲಕ್ಕಿವಿಡುದಲ್**-ಕೆಲವು ದಿನಗಳು ಅವರು ತನಗೆ ಸೇವೆಮಾಡದಹಾಗೆ ತಪ್ಪಿಸಿಯಾಗಲಿ. **ಶೆಯ್ಯುಮಾಪ್ಪೋಲೆ** - ಮಾಡುವಹಾಗೆ, **ಕಾಕಾಸುರ ನ್ಯಾಯತ್ತಾಲೇ** - ಕಾಕಾಸುರನನ್ನು ಶ್ರೀರಾಮನು ದಂಡಿಸಿದ ತೆರದಿ, **ಒರುಕಣ್ಣೈಳಿವಾಲೆ** - ಒಂದು ಕಣ್ಣನ್ನು ನಾಶಮಾಡಿದಹಾಗೆ ಎಂದು ಒಂದು ಅರ್ಥವು, ಯಾವುದಾದರೂ ಒಂದು ಲಘುಶಿಕ್ಷೆಯ ಮೂಲಕ ಎಂದು ಇನ್ನೊಂದರ್ಥವು. **ಇವ್ವಾಶ್ರಿತರ್ಕೈ** - ಈ ಥರವಾದ ಸರ್ವೇಶ್ವರನನ್ನು ಆಶ್ರಯಿಸಿದವರನ್ನು **ರಕ್ಷಿತ್ತು ವಿಡುಮ್** - ರಕ್ಷಿಸಿಬಿಡುವನು ಇದಕ್ಕೆ ಕರ್ತೃವಾದವನು ಸರ್ವೇಶ್ವರನ್ ಎಂದು ಹಿಂದೆ ಇರುತ್ತದೆ. ಈ ವಾಕ್ಯತಾತ್ಪರ್ಯವೇನೆಂದರೆ. ಆಪತ್ಕಾಲನ್ಯಾಯವು ಇಲ್ಲದಿರುವ ಸಮಯದಲ್ಲಿ ಬುದ್ಧಿಪೂರ್ವಕಾಪರಾಧಮಾಡಿ, ಪ್ರಾರಬ್ಧಕರ್ಮದ ಪ್ರಾಬಲ್ಯದಿಂದ ಪ್ರಾಯಶ್ಚಿತ್ತಮಾಡಿಕೊಳ್ಳದೆ ಪ್ರಮೀತನಾದರೆ, ಆಗಲೂ ಕೂಡ ಆತನಿಗೆ ಮುಕ್ತಿಯ ವಿಷಯದಲ್ಲಿ ಏನೂ ತೊಂದರೆ ಇರುವದಿಲ್ಲವು ಎಂದು ಉಪದೇಶಿಸುವದಕ್ಕಾಗಿ ಇವ್ವಾಶ್ರಿತರ್ಕೈ ರಕ್ಷಿತ್ತುವಿಡುಮ್, ಸರ್ವೇಶ್ವರನು ರಕ್ಷಿಸಿಬಿಡುವನು ಎಂದು ಹೇಳಿದರು. ಪುನರ್ಜನ್ಮವಿಲ್ಲವೋ ಅಂಥಾವನಿಗೆ ಎಂದರೆ ಪುನರ್ಜನ್ಮವೂ ಇಲ್ಲವು. ವೈಕುಂಠಲೋಕವಲ್ಲದೆ ಇತರ ಯಮಲೋಕಾದಿಗಳು ಕೂಡ ಇಲ್ಲವೆಂದು ತಿಳಿಸುವದಕ್ಕಾಗಿ ವೈಷ್ಣವ, ವಾಮನ ಪುರಾಣಗಳನ್ನು ಉದಾಹರಿಸಿ

ರುತ್ತಾರೆ. ಈ ಪುರಾಣ ವಚನಗಳು ಕಲ್ಪಿತವಲ್ಲವು, ಶ್ರುತಿಯು ಉಪಬ್ರಹ್ಮಣವೆಂದು ಹೇಳಿರುತ್ತಾರೆ. ಆ ಶ್ರುತಿವಾಕ್ಯಗಳು ಯಾವುವೆಂದರೆ, "**ನಖಲು ಭಾಗವತಾ ಯಮವಿಷಯಂ ಗಚ್ಛಂತಿ, ಇಹೈವೈಷಾಂ ಕೇಚಿದುಪಪ್ಲವಾ ಭವಂತಿ ಕಾಣಾ ಭವಂತಿ, ಖಂಜಾ ಭವಂತಿ ಅವಿಧೇಯ ಭಾರ್ಯಾ (ಪುತ್ರಾ) ಭವಂತಿ**" ಇತ್ಯಾದಿಗಳು. "ಭಾಗವತರು ಯಮಲೋಕವನ್ನು ಕುರಿತು ಎಂದಿಗೂ ಹೋಗುವದಿಲ್ಲವಷ್ಟೇ, ಈ ಲೋಕದಲ್ಲೇನೇ ಕ್ಲೇಶಗಳನ್ನು ಹೊಂದುವರು, ಹೇಗೆಂದರೆ:—ಒಂದು ಕಣ್ಣಿಲ್ಲದವರಾಗಿ ಆಗುವರು, ಕುಂಟರಾಗಿ ಆಗುವರು, ವಿಧೇಯರಲ್ಲದ ಭಾರ್ಯಾಪುತ್ರರುಳ್ಳವರಾಗುವರು" ಎಂಬುವದು ಈ ಶ್ರುತಿವಾಕ್ಯಗಳ ಭಿಪ್ರಾಯವು. ನರಕಾದಿ ಇತರ ಲೋಕಗಳ ಪ್ರಾಪ್ತಿಯಿಲ್ಲದಿದ್ದರೂ ಈ ಬುದ್ಧಿಪೂರ್ವಾಘಗಳಿಗೆ ಶಿಕ್ಷೆಯುಂಟೆಂಬುವದು ಈ ಮೇಲಿನ ಶ್ರುತಿವಾಕ್ಯಗಳಿಂದಲೇ ಸಿದ್ಧವು. ಇಹೈವ ಎಂಬ ಶ್ರುತಿವಾಕ್ಯದಲ್ಲಿ ಏವಕಾರವಿರುವದರಿಂದ ಈ ಲೋಕದಲ್ಲೇ ಈ ಜನ್ಮವೆತ್ತಿರುವಾಗಲೇ ಮರಣಕ್ಕೆ ಮುಂಚಿತವಾಗಿ ಈ ಉಪಕ್ಲೇಶಗಳು ಪ್ರಾಪ್ತವಾಗುತ್ತವೆಂದು ಕಂಠೋಕ್ತವಾಗಿ ಹೇಳುವದಕ್ಕಾಗಿಯೇ ಇಲ್ಲಿ ಅವಧಾರಣವಿರುತ್ತದೆ. ಪುನರ್ಜನ್ಮವು ಈ ಶರಣಾಗತನಿಗಿಲ್ಲವೆಂಬುವದು ಇದರಿಂದ ತೋರಿಬರುತ್ತದೆ. ಈ ಶ್ರುತ್ಯಭಿಪ್ರಾಯವನ್ನೇ ಸ್ವಾಮಿಯವರು "**ಕಾಣರ್ ಖಂಜರ್ ಎನ್ರು ಮುದಲಾಗ ವೋದುಗಿರ ವಿಜ್ಞಾತ್ಯ ಉಪಕ್ಲೇಶಮುಖತ್ತಾಲೆ**" ಎಂಬುವದರಿಂದ ವ್ಯಕ್ತಪಡಿಸಿರುತ್ತಾರೆ. ಇಂತಹ ಅಲ್ಪದಂಡನೆಗಳು ಹೇಗೆ ತೋರಿಬರುತ್ತವೆಂಬುವದಕ್ಕೆ ಒಂದು ಲೋಕೋಕ್ತಿಯನ್ನುಪಯೋಗಿಸಿರುತ್ತಾರೆ:—"**ವೇಲಿಟ್ಟು ಪಾಯುಮೇಂಡುಮುದು ಮುಳ್ಳಿಟ್ಟಪಾಯ್ನ್ದು ಕಳಿಯುಮ್.**" ಸರ್ವೇಶ್ವರನ ಕೃಪೆಯಿದ್ದುದಾದರೆ ನಿಶಿತಾಯುಧದಿಂದ ಪರಿಹರಿಸತಕ್ಕದ್ದು ಮುಳ್ಳಿನಿಂದ ಪರಿಹಾರವಾಗುತ್ತದೆ ಎಂಬ ತಾತ್ಪರ್ಯವು. ಶರಣಾಗತನಲ್ಲವಿದ್ದರೆ ಕ್ರೂರದಂಡನೆ ವಿಧಿಸುವ ಸಂದರ್ಭದಲ್ಲಿ, ಶರಣಾಗತನಾಗಿ ತನ್ನವನಾದುದರಿಂದ ಅಲ್ಪದಂಡನೆಕೊಟ್ಟು ರಕ್ಷಿಸುವನು. ಹೀಗೆ ಎರಡು ವಿಧವಾದ ನ್ಯಾಯ ತೀರ್ಪು ಎಲ್ಲರನ್ನೂ ಸಮವಾಗಿ ನೋಡುವ ಸಾಮ್ಯವೆಂಬ ಗುಣವುಳ್ಳ ಸರ್ವೇಶ್ವರನಿಗೆ ಯುಕ್ತವೋ? ಎಂದರೆ ಭಕ್ತರು ತನ್ನವರಾಗಿ ಗುಣಿಗಳಾದುದರಿಂದ ಅಂತಹ ಗುಣಿಗಳ ವಿಷಯದಲ್ಲಿ ತೋರಿದ ದಯೆಯು ನಿಂದಿತವಲ್ಲವು. ಇಂತಹ ನಟನೆಯು ಯುಕ್ತವಾದುದೇ ಎಂದು ತೋರ್ಪಡಿಸುವದಕ್ಕಾಗಿ ಒಂದು ಲೋಕದೃಷ್ಟಾಂತವನ್ನು ಒಂದು ಶಾಸ್ತ್ರ ದೃಷ್ಟಾಂತವನ್ನೂ ಉದಾಹರಿಸುತ್ತಾರೆ. ಏನೆಂದರೆ ಬಹು ಜನಗಳಿಂದ ಉಪಚರಿಸಲ್ಪಡುವ ಒಬ್ಬ ಚಕ್ರವರ್ತಿಯು ಇದ್ದಾನೆಂದು ಊಹಿಸೋಣ. ಆದುದರಿಂದಲೇ ಸೇವ್ಯನಾದ ಚಕ್ರವರ್ತಿ ಎಂದು ಪ್ರಯೋಗಿಸಿರು

ತ್ತಾರೆ. ಆತನ ಕೈಕೆಳಗೆ ಆತನಿಗೆ ನಾನಾವಿಧ ಕೈಂಕರ್ಯಗಳನ್ನು ಮಾಡುವ ಆಳುಗಳು ಆತನ ಪಟ್ಟಮಹಿಷಿಗೆ ಉಪಚರಿಸುವ ದಾಸೀ ಜನವೂ, ಇನ್ನೂ ಕುಬ್ಜರು ವಾಮನರು ರಾಜಕುಮಾರರು ಮೊದಲಾದವರೆಲ್ಲಾ ಇರುತ್ತಾರೆ. ಇವರುಗಳು ಬುದ್ಧಿಪೂರ್ವಕವಾಗಿ ಅಪರಾಧಗಳನ್ನು ಮಾಡಿದುದಾದರೆ, ಅವರುಗಳು ತನಗೆ ಪ್ರೀತಿಪಾತ್ರರಾದುದರಿಂದ ಅವರನ್ನು ದಂಡಿಸಲು ರಾಜನಿಗೆ ಮನಸ್ಸಿಲ್ಲದೆ ಕ್ಷಮಿಸಬಿಡಬೇಕೆಂಬ ಇಷ್ಟವೂ ಇರುತ್ತದೆ. ಆದರೆ ಯಾವುದೊಂದು ದಂಡನೆಯೂ ಇಲ್ಲದೆ ಬಿಟ್ಟುಬಿಟ್ಟರೆ ಪುನಃಪುನಃ ಅಪರಾಧಗಳನ್ನು ಮಾಡಬಹುದು. ಆದುದರಿಂದ ಅವರಲ್ಲಿ ತನಗಿರುವ ವಿಶ್ವಾಸಾನುಗುಣವಾಗಿ ಕ್ಷಮಿಸಿದಹಾಗೂ ಇರಬೇಕು, ಶಿಕ್ಷಿಸಿದಹಾಗೂ ಇರಬೇಕು. ಅದಕ್ಕಾಗಿ ಆ ಚಕ್ರವರ್ತಿಯು ಲಘುದಂಡನೆಯನ್ನು ವಿಧಿಸುವನು. ಹೀಗೆ ಆತನು ಗುರುದಂಡನೆಯನ್ನು ವಿಧಿಸುವ ಸ್ಥಳದಲ್ಲಿ ಲಘುದಂಡನೆಯನ್ನು ವಿಧಿಸುವದು ನ್ಯಾಯವೋ ಎಂದರೆ ಸಂಬಂಧಾನ್ಯಶಂಸ್ಯಾದಿ ಪ್ರಯುಕ್ತವಾದ ಪ್ರೀತಿಯ ಕಾರ್ಯವಾದುದರಿಂದ ಏನೊಂದು ವಿರುದ್ಧವಾದುದಲ್ಲವೆಂಬ ಭಾವವು. ಆ ಲಘುದಂಡನೆಗಳು ಎಂಥಾದ್ದೆಂದರೆ :—ಮುಖವನ್ನೆತ್ತಿ ನೋಡದೆಯೂ, ಮುಖಕೊಟ್ಟು ಮಾತನಾಡದೆ ಇರುವದೂ, ಚಾಟಿಯಿಂದ ಹೊಡೆಯುವದೂ, ಕೋಪದಿಂದ ಕತ್ತುಹಿಡಿದು ದಬ್ಬಿಸಿಬಿಡುವದೂ, ಬಾಗಿಲಿನ ಆಚೆಗೆ ಇಡುವದೂ, ಕೆಲವು ದಿನಗಳು ಆತನು ಮಾಡುತ್ತಿದ್ದ ಉಪಚಾರದಿಂದ ತಪ್ಪಿಸಿಬಿಡುವದೂ, ಇವೇ ಮೊದಲಾದ ಅಲ್ಪದಂಡನೆಗಳನ್ನು ವಿಧಿಸಿ ಅನಂತರ ಮೊದಲು ಇದ್ದ ಸ್ಥಿತಿಯಲ್ಲೇ ಇಟ್ಟು ಕಾಪಾಡುವನು. ಅದರ ಹಾಗೆಯೇ ಪ್ರಪನ್ನನು ಬುದ್ಧಿಪೂರ್ವಾಪರಾಧ ಮಾಡಿದುದಾದರೆ, ಸರ್ವೇಶ್ವರನೂ ಕೂಡ ಹಾಗೆಯೇ ಮೇಲೆ ಹೇಳಿದ ರೀತಿಯಲ್ಲಿ ಈ ಜನ್ಮದಲ್ಲೇ ಲಘುದಂಡನೆಯನ್ನು ವಿಧಿಸಿ ದೇಹಾವಸಾನಾನಂತರ ಮುಕ್ತಿಯನ್ನಿತ್ತು ರಕ್ಷಿಸುವನು. ಹಾಗಾದರೆ ಹಾಗೆ ಸರ್ವೇಶ್ವರನು ಲಘುದಂಡನೆಯನ್ನು ಕೊಟ್ಟ ಶಾಸ್ತ್ರವೃಷ್ಟಾಂತವು ಇತಿಹಾಸಗಳಲ್ಲೇನಾದರೂ ಉಂಟೋ ಎಂದರೆ ಕಾಕಾಸುರವೃತ್ತಾಂತ ಉಂಟೆಂದು ತಿಳಿಸುತ್ತಾರೆ. ಸೀತೆಯ ತೊಡೆಯಲ್ಲಿ ಶ್ರೀರಾಮನು ತಲೆಯನ್ನಿಟ್ಟು ನಿದ್ರೆಮಾಡುತ್ತಿರುವಾಗಲೇ ಇಂದ್ರಪುತ್ರನಾದ ಕಾಕಾಸುರನು ಬಂದು ಸೀತೆಯ ಸ್ತನವನ್ನು ಚುಚ್ಚಿ ಬಹುವ್ಯಥೆಯನ್ನುಂಟುಮಾಡಿದುದನ್ನು ಶ್ರೀರಾಮನು ಕಂಡು, ಬಹುಕೋಪಗೊಂಡ ಒಂದು ದರ್ಭವನ್ನಭಿಮಂತ್ರಿಸಿ ಬ್ರಹ್ಮಾಸ್ತ್ರವಾಗಿ ಬಿಡಲು; ಅಸ್ತ್ರವು ಈ ಕಾಕನನ್ನು ಅಟ್ಟಿಸಿಕೊಂಡು ಹೋಗಲು, ಆಗ ಆ ಕಾಕನು "**ಚಂಡಾಳಃ ಪಕ್ಷಿಣಾಂ ಕಾಕಃ**" ಎಂದಿರುವದರಿಂದ ಗೃಹಾಂಗಣಕೆ ಕೂಡ ಆತನನ್ನು ಸೇರಿಸದೆ, ಎಲ್ಲರಿಂದಲೂ ಪರಿತ್ಯಕ್ತನಾದನು. ಆಗ ಬಂದು "**ತಮೇವ ಶರಣಂಗತಃ**" ಆ ಶ್ರೀರಾಮನನ್ನೇ ಶರಣ ಹೊಂದಿದನು. ಈ ಅಪರಾಧವು ಮಹತ್ತಾಗಿದ್ದರೂ,

"ಸತಂ ನಿಪತಿತಂ ಭೂಮೌ ಶರಣ್ಯಶ್ಶರಣಾಗತಂ ।
ವಧಾರ್ಹಮಪಿ ಕಾಕುತ್ಸ್ಥಃ ಕೃಪಯಾ ಪರ್ಯಪಾಲಯತ್"
(ರಾ. ಸುಂ. ೩೮. ೩೪, ೩೫)

ಆತನು ಯಾವಾಗ ಭೂಮಿಯಲ್ಲಿ ದಂಡವತ್ಪ್ರಣಾಮ ಮಾಡಿ ಬಿದ್ದನೋ, ಆಗ ಆ ಕೃಪಾಮಹೋದಧಿಯಾದ ಶ್ರೀರಾಮನು ಆತನನ್ನು ಮನ್ನಿಸಿ ರಕ್ಷಿಸಿದನು. ಹೇಗೆ ರಕ್ಷಿಸಿದನೆಂಪರೆ ಅಲ್ಪದಂಡನೆಯನ್ನು ಕೊಟ್ಟು ಕಾಪಾಡಿದನು. **"ದತ್ವಾ ಸ ದಕ್ಷಿಣಂ ನೇತ್ರಂ ಪ್ರಾಣೇಭ್ಯಃ ಪರಿರಕ್ಷಿತಃ"** ಆ ಬ್ರಹ್ಮಾಸ್ತ್ರಕ್ಕೆ ಆ ಕಾಕನ ಬಲಕಣ್ಣನ್ನು ಆಹುತಿಕೊಟ್ಟು ರಕ್ಷಿಸಲ್ಪಟ್ಟನೆಂಬ ವೃತ್ತಾಂತವಿರುತ್ತದೆ. ಇಂತಹ ಲಘುದಂಡನೆಯು ಯುಕ್ತವಾದುದೇ ಎಂಬುವದನ್ನು ಒಂದು ಲೋಕ ದೃಷ್ಟಾಂತದ ಮೂಲಕವಾಗಿಯೂ ಒಂದು ಶಾಸ್ತ್ರದೃಷ್ಟಾಂತಮೂಲಕವಾಗಿಯೂ ಸ್ಥಾಪಿಸಿರುತ್ತಾರೆ. ಆದುದರಿಂದ ಪ್ರಪನ್ನನಿಗೆ ಬುದ್ಧಿಪೂರ್ವಾಘದಿಂದ ಮೋಕ್ಷ ಪ್ರಾಪ್ತಿಗೆ ವಿಘಾತವಿಲ್ಲವು. ದೇಹಾವಸಾನದಲ್ಲೇ ಮೋಕ್ಷಪ್ರಾಪ್ತಿಯುಂಟು. ಆದರೆ ಜೀವಮಾನಕಾಲದಲ್ಲೇ ಲಘುದಂಡನೆಯನ್ನನುಭವಿಸಲೇಬೇಕು. ಆದರೆ ಮನಃ ಪೂರ್ವಕವಾದ ಶೋಕದಿಂದ ಕೂಡಿದ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನನುಷ್ಠಿಸುವದರಿಂದ ಈ ಲಘುದಂಡನೆಯನ್ನೂ ಕೂಡ ಕಳೆದುಕೊಳ್ಳಬಹುದು ಎಂದೂ, ಹಾಗೆ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನನುಷ್ಠಿಸದಿದ್ದರೆ, ಈ ಲಘುದಂಡನೆಯು ತಪ್ಪಿದ್ದಲ್ಲವೆಂದೂ, ಈಗ ಉಪದೇಶಿಸಲ್ಪಟ್ಟಿತು. ಆದರೆ ಶ್ರುತಿಯಲ್ಲಿ **"ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ"** (ತೈ. ಆ. ೯) ಎಂದು ಯಾವ ಭಯವೂ ಇಲ್ಲವೆಂದು ಹೇಳಿರುವದರಿಂದ ಅಬುದ್ಧಿಪೂರ್ವಕ ಬುದ್ಧಿಪೂರ್ವಕ ಪಾಪಗಳ ಭಯವೂ ಇಲ್ಲವೆಂಬ ಭಾವ ತೋರಿಬರುತ್ತದಲ್ಲಾ? ಹಾಗೆಯೇ **"ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಎಂಬಲ್ಲಿ **ಸರ್ವಪಾಪೇಭ್ಯಃ** ಎಂಬುವದರಿಂದ ಬುದ್ಧಿಪೂರ್ವಾಘದಿಂದಲೂ ಬಿಡಿಸುವೆನು ಎಂದು ಹೇಳಿದಂತಾಗುವದಿಲ್ಲವೇ? ವಿಷ್ಣುಪುರಾಣದಲ್ಲಿ ಯಮನು ತನ್ನ ಭಟನಿಗೆ ಹೇಳುವ ಸಂದರ್ಭದಲ್ಲಿ, **"ಹೃದಿಯದಿ ಭಗವಾನನಾದಿ ರಾಸ್ತೇ ಹರಿರಸಿ ಶಂಖಗದಾಧರೋ ವ್ಯಯಾತ್ಮಾ। ತದಘಮಘ ವಿಘಾತ ಕರ್ತೃಭಿನ್ನಂ ಭವತಿ ಕಥಂ ಸತಿ ಚಾಂಧಕಾರ ಮರ್ಕೇ॥"** "ಯಾವನ ಹೃದಯದಲ್ಲಿ ಅನಾದಿಯಾದಶಂಖ ಚಕ್ರಾದಿ ದಿವ್ಯಾಯುಧಗಳನ್ನು ಧರಿಸಿದ ಭಗವಂತನು ಇದ್ದಾನೋ, ಅಂತಾವನ ಎಲ್ಲಾ ಪಾಪಗಳು, ಪಾಪವಿನಾಶಕರನಾದ ಸರ್ವೇಶ್ವರನಿಂದ ನಾಶಗೊಳಿಸಲ್ಪಡುತ್ತವೆ. ಸೂರ್ಯನಿರುವಾಗ ಅಂಧಕಾರವು ಹೇಗಿರಲಾರದೋ ಹಾಗೆ ಯಾವ ಪಾಪಗಳೂ ಇರಲಾರವು" ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಬುದ್ಧಿಪೂರ್ವಾಘವು ತಾನೇ ಹೇಗೆ ಇದ್ದೀತು? ಹಾಗೆಯೇ ನಮ್ಮಾಳ್ವಾರ್ರವರ (೭ ೧೦ ೮)

1.7.2002

ಬುದ್ಧಿಪೂರ್ವಾಘಸ್ಯಾಪಿ ಕ್ಷಮಾ ವಿಷಯತ್ವಮಿತ್ಯಭಿ ಯುಕ್ತೋಕ್ತೇಃ ತಾತ್ಪರ್ಯಂ

ಇಪ್ಪಡಿ ಮೃದು ಪ್ರಕೃತಿಗಳೈ ಕ್ಷಮೈಕೊಳ್ಳಪಣ್ಣುವಿತ್ತಲ್, ಕಠಿನ

"ಅನ್ರಿಮತ್ತೊನ್ರಿಲನ್ ಶರಣೇಯೆನ್ರು ಕಲಿರುಮೊಯ್ ಗೈಯಿನ್ನಾಯ್" ಎಂಬ ಪಾಶುರದಲ್ಲಿ ಗಜೇಂದ್ರ ಶರಣಾಗತಿ ಮಾಹಾತ್ಮ್ಯೆಯನ್ನು ತಿಳಿಸುವ ಸಂದರ್ಭದಲ್ಲಿ, "ತೀವಿನೈಯುಳ್ಳತ್ತಿನ್ ಶಾರ್ವಲ್ಲವೇ" ಎಂಬಲ್ಲಿಯೂ ಪಾಪಗಳ ಸಂಬಂಧವೇ ಇರುವದಿಲ್ಲವೆಂಬಭಿಪ್ರಾಯ ತೋರಿಬರುವದರಿಂದ ಬುದ್ಧಿಪೂರ್ವಾಘದ ಭಯವೂ ಪ್ರಪನ್ನನಿಗಿರುವದಿಲ್ಲವೆಂಬಭಿಪ್ರಾಯವನ್ನು ಕೆಲವು ವ್ಯಾಖ್ಯಾತೃಗಳು ವ್ಯಕ್ತಪಡಿಸುತ್ತಾರೆ. ಒಬ್ಬ ವ್ಯಾಖ್ಯಾತೃವು "ಪ್ರಾಮಾದಿಕತ್ತುಕ್ಕನ್ರಿಕ್ಕೇ ಬುದ್ಧಿಪೂರ್ವಕಮಾಗಪ್ಪಣ್ಣಿನದುಕ್ಕುಮ್ ಅಂಜವೇಂಡಾದಪಡಿಯಾಯಿರುಕ್ಕುಮ್" "ತೇಜಸ್ತಿಮಿರಙ್ಗಳುಕ್ಕು ಸಹಾವಸ್ಥಾನಮುಂಡೋ? ಅವನ್ (ಸರ್ವೇಶ್ವರನ್) ವನ್ನು ಹೃದಯತ್ತಿಲೆ ನಿತ್ಯವಾಸಂ ಪಣ್ಣ, ತೀವಿನೈ ಒದುಙ್ಗ ವಿಡಮುಣ್ಡೋ" ಎಂದು ಕೇಳುತ್ತಾರೆ.

ಇಂತಹ ಪೂರ್ವಪಕ್ಷಕ್ಕೆ ಸಮಾಧಾನವನ್ನು "ಇಪ್ಪಡಿ" ಎಂಬ ಮುಂದಿನ ವಾಕ್ಯದಿಂದ ಹೇಳುವವರಾಗಿ ಈ ಸಮಾಶ್ವಾಸಪ್ರದ ವ್ಯಾಖ್ಯಾತೃಗಳ ಅಭಿಪ್ರಾಯವೇನೆಂಬುವದನ್ನು ತಿಳಿಸುತ್ತಾರೆ. ಬುದ್ಧಿಪೂರ್ವಾಘವನ್ನೂ ಕ್ಷಮಿಸಿಬಿಡುವನು ಎಂಬುವದನ್ನು ಎಲ್ಲರೂ ಒಪ್ಪತಕ್ಕದ್ದು. ಅಲ್ಪದಂಡನೆಮೂಲಕ ರಕ್ಷಿಸುವದೂ ಕ್ಷಮಾಗುಣಮಾಹಾತ್ಮ್ಯವೇ ವಿನಾ ಬೇರೆಯಲ್ಲವು ಎಂದು ಭಾವಿಸತಕ್ಕದ್ದು. ಬುದ್ಧಿಪೂರ್ವಾಘ ಸಂದರ್ಭದಲ್ಲೂ ಕ್ಷಮೆಯೂ ಉಂಟು. ರಕ್ಷಣೆಯೂ ಉಂಟೆಂದು ತಿಳಿಸುತ್ತಾರೆ. ಆದರೆ ಪ್ರಾಯಶ್ಚಿತ್ತವಿಲ್ಲದ ಸಂದರ್ಭದಲ್ಲಿ ಅಲ್ಪದಂಡನೆಯಮೂಲಕ ಕ್ಷಮಿಸಿ ರಕ್ಷಿಸುತ್ತಾರೆಂದುಪದೇಶಿಸುತ್ತಾರೆ

ಬುದ್ಧಿಪೂರ್ವಾಘವೂ ಈಶ್ವರಕ್ಷಮಾ ವಿಷಯವೆಂಬುವದೇ ಅಭಿಯುಕ್ತರುಕ್ತಿಯ ತಾತ್ಪರ್ಯವು.

ಇಪ್ಪಡಿ - ಹೀಗೆ, ಹಿಂದೆ ಬುದ್ಧಿಪೂರ್ವಾಘದ ವಿಷಯದಲ್ಲಿ ಹೇಳಿದ ಹಾಗೆ ಎಂಬರ್ಥವು, **ಮೃದುಪ್ರಕೃತಿಗಳೈ** - ಸತ್ವಗುಣಾವಿಷ್ಟರಾದವರನ್ನು, **ಕ್ಷಮೈಕೊಳ್ಳಪಣ್ಣುದಲ್** - ಕ್ಷಮಿಸಬೇಕೆಂದು ಪ್ರಾರ್ಥಿಸುವಹಾಗೆ ಮಾಡಿ ಪುನಃ ಪ್ರಾಯಶ್ಚಿತ್ತ ಶರಣಾಗತಿಯನ್ನನುಷ್ಠಿಸುವ ಹಾಗೆ ಮಾಡಿಯಾಗಲಿ, ಅಥವಾ

ಪ್ರಕೃತಿಗಳುಕ್ಕು ಶಿಕ್ಷಾರೂಪಮಾನ ದಂಡವಿಶೇಷಮ್ ಪಣ್ಣುದಲ್ ಶೆಯ್‌ಗಿರವಿಡಮುಮ್ ಪೂರ್ವಪ್ರಪತ್ತಿ ಫಲಮಾನ ಕ್ಷಮೈಯಿಲ್ ಪ್ರಕಾರ ಭೇದಮೆನ್ರು ಶಿಕ್ಷಕನಾನ ಶೇಷಿಪಕ್ಕಲಿಲೇ ಕೃತಜ್ಞತೈ ನಡಕ್ಕೈಕ್ಕಾಗ ಬುದ್ಧಿಪೂರ್ವೋತ್ತರಾಘತ್ತೈಯುಮ್ ಕ್ಷಮಿಕ್ಕುಮೆನ್ರು ಶಿಲರ್ ಶೊನ್ನಾರ್‌ಗಳ್.

ಕಠಿನಪ್ರಕೃತಿಗಳುಕ್ಕು - ಸ್ವಲ್ಪ ರಾಜಸ ತಾಮಸ ಸ್ವಭಾವವುಳ್ಳವರಾದುದರಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದವರಿಗೆ, **ಶಿಕ್ಷಾರೂಪಮಾನ ದಂಡವಿಶೇಷಮ್ ಪಣ್ಣುದಲ್** - ಖಂಜಾ ಭವಂತಿ, ಕಾಣಾ ಭವಂತಿ, ಅವಿಧೇಯಭಾರಾಪುತ್ರಾ ಭವಂತಿ, ಇಂತಹ ದಂಡವಿಶೇಷವನ್ನು ಶಿಕ್ಷೆಯಾಗಿ ವಿಧಿಸಿಯಾಗಲಿ, ಇವುಗಳೇನೂ ಅಂತಹ ದಂಡವಲ್ಲವು. ಆದರೂ ಅಲ್ಪಶಿಕ್ಷೆಯಿಲ್ಲದೆ ರಕ್ಷಿಸಕೂಡದೆಂಬದಾಗಿ, ಹೆಚ್ಚಾದ ಅಪರಾಧವಿದ್ದರೂ ಕ್ಷಮೆಯಿಂದ ಸಹಿಸಿಕೊಂಡು ಅಲ್ಪದಂಡನೆಯಾದುದರಿಂದ ಇಲ್ಲಿ ದಂಡವಿಶೇಷವೆಂಬ ಪ್ರಯೋಗವು; **ಶೆಯ್‌ಗಿರವಿಡಮುಮ್**-ಹೀಗೆಲ್ಲಾ ಮಾಡುವುದು, **ಪೂರ್ವಪ್ರಪತ್ತಿ ಫಲಮಾನ**-ಮೊದಲು ಅನುಷ್ಠಿಸಿದ ಪ್ರಪದನದ ಫಲರೂಪವಾದ, **ಕ್ಷಮೈಯಿಲ್ ಪ್ರಕಾರಭೇದಮೆನ್ರು**-ಸರ್ವೇಶ್ವರನ ಕ್ಷಮೆಯ ತಾರತಮ್ಯ ಭಾವಗಳಾಗುವದರಿಂದ, **ಶಿಕ್ಷಕನಾನ** ಮಾರ್ಗ ತಪ್ಪಿದರೆ ದಂಡಿಸುವ, **ಶೇಷಿಪಕ್ಕಲಿಲೇ** - ಶೇಷಿಯನ್ನು ಕುರಿತು, **ಕೃತಜ್ಞತೈ ನಡಕ್ಕೈಕ್ಕಾಗ**-ಕೃತಜ್ಞತಾಭಾವವು ಯಾವಾಗಲೂ ಇರುವದಕ್ಕಾಗಿ, **ಬುದ್ಧಿಪೂರ್ವ**ಕವಾಗಿ ಮಾಡಿದ ಉತ್ತರಾಘವನ್ನೂ ಕೂಡ, **ಕ್ಷಮಿಕ್ಕುಮ್** - ಸರ್ವೇಶ್ವರನು ರಕ್ಷಿಸುವನೆಂದು, **ಶಿಲರ್**- ಈ ನಮ್ಮಾಳ್ವಾರ್ ಸೂಕ್ತಿಗಳ ವ್ಯಾಖ್ಯಾತೃಗಳಾದ ಕೆಲವರು, **ಶೊನ್ನಾರ್‌ಗಳ್**-ಹೇಳಿದರು.

ಬುದ್ಧಿಪೂರ್ವಾಪರಾಧವನ್ನು ಪ್ರಪತ್ತ್ಯನಂತರ ಮಾಡಿದರೆ, ಮೃದುಪ್ರಕೃತಿಯಾಗಿ ಶೋಕಿಸಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಅದನ್ನೂ ಕ್ಷಮಿಸಿ ಶ್ರಿಯಃಪತಿಯು ರಕ್ಷಿಸುವನು. ಹಾಗಲ್ಲದೆ ಕಠಿಣಪ್ರಕೃತಿಯಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಆತನು ಪ್ರಪನ್ನನಾಗಿ ಶರಣಾಗತಿಯನ್ನನುಷ್ಠಿಸಿರುವದರಿಂದ, ಆತನಲ್ಲಿ ಮಮತೆಯನ್ನೇ ತೋರಿ ಆತನ ಅಪರಾಧಗಳಿಗೆ ಸರಿಯಾದ ಕ್ರೂರದಂಡನೆಗಳನ್ನು ವಿಧಿಸದೆ ಕ್ಷಮಿಸಿ, ಅಲ್ಪದಂಡನೆ ಮೂಲಕ ರಕ್ಷಿಸಿಬಿಡುವನು. ಅಂತೂ ಇಂತಹ ಬುದ್ಧಿಪೂರ್ವಾಘವಿದ್ದರೂ ಪ್ರಪನ್ನನಿಗೆ ಕೃಪಾಸಾಗರನು ಮೋಕ್ಷಪ್ರಾಪ್ತಿಯನ್ನು ಎಂದಿಗೂ ತಪ್ಪಿಸುವದಿಲ್ಲವು ಈ ಅಭಿಪ್ರಾಯವನ್ನೇ ಈ ಮೇಲಿನ ಪೂರ್ವಪಕ್ಷವಾಕ್ಯಗಳು ಬೋಧಿಸುತ್ತವೇ ಪಿನಾ ಬುದ್ಧಿಪೂರ್ವಾಘಕ್ಕೆ ಪ್ರಾಯಶ್ಚಿತ್ತವಿಲ್ಲದ

ಪ್ರಪತ್ತೇಃ ನಿಷ್ಫಲತ್ವ ಶಙ್ಕಾ ನಿರಾಸಃ

ಪ್ರಾರಬ್ಧಕರ್ಮತ್ತಿಲ್ ಪಾಪಾಂಶವಪ್ಪೋಲೆ ಬುದ್ಧಿಪೂರ್ವೋತ್ತರಾಘಂ

ಸಂದರ್ಭದಲ್ಲಿ ಅಲ್ಪದಂಡನೆಯಿಲ್ಲವೆಂದು ಬೋಧಿಸುವದಿಲ್ಲವು. **ನ ಬಿಭೇತಿ ಕುತಶ್ಚನ** "ಸರ್ವಕ್ಲೇಶ ಭಯವೂ ಇಲ್ಲವಾಗುತ್ತದೆ" ಎಂದು ಹೇಳಿದುದರಿಂದ ಪರಬ್ರಹ್ಮೋಪಾಸನದಿಂದ ಪರಬ್ರಹ್ಮಪ್ರಾಪ್ತಿಗೆ ವಿರೋಧವಾದ ಸರ್ವಕ್ಲೇಶ ಭಯವೂ ತೊಲಗುತ್ತವೆ ಎಂಬರ್ಥವು. ಹಾಗೆಯೇ "**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂಬುವದರ ಮುಖ್ಯಾಭಿಪ್ರಾಯವು, ಸರ್ವಪಾಪನಿವೃತ್ತಿಮೂಲಕವಾಗಿ ನಿಸ್ಸಂದೇಹವಾಗಿ ಮೋಕ್ಷಪ್ರಾಪ್ತಿಯನ್ನುಂಟುಮಾಡುವೆನು ಎಂಬುವದು. ಬುದ್ಧಿಪೂರ್ವೋತ್ತರಾಘದ ನಿವೃತ್ತಿಯೂ ಕೂಡ ಉಂಟೇ ಉಂಟು. ಪ್ರಾಯಶ್ಚಿತ್ತ ಮಾಡಿಕೊಂಡರೆ ತತ್ಕ್ಷಣವೇ ಉಂಟು. ಮಾಡಿಕೊಳ್ಳದಿದ್ದರೆ ಅಲ್ಪಶಿಕ್ಷಾನುಭವದಿಂದ ನಿವೃತ್ತಿಯು. ಎಲ್ಲವೂ ಕ್ಷಮಾಫಲವೇ. ಹೀಗೆ ಅಲ್ಪದಂಡನೆಯಿಂದ ನಿವೃತ್ತಿ ಎಂದು ಹೇಳದೆ ಬುದ್ಧಿಪೂರ್ವಾಘವೂ ಸಂಬಂಧಿಸುವದೇ ಇಲ್ಲ ಎಂದರೆ, ಮನಃಪೂರ್ವಕವಾಗಿ ಇತರರ ಮನೆಯಲ್ಲಿ ಕದ್ದು ಪ್ರಪನ್ನನು ದ್ರವ್ಯಾರ್ಜನೆಯನ್ನು ಮಾಡಬಹುದು. ಪ್ರಪದನ ಮಾಡಿರುವದರಿಂದ ಭಯವಿಲ್ಲೆಂದು ಹೇಳಿದಂತಾಗುತ್ತದೆ. ಅನಂತರ ಇತರರ ಮನೆಯ ದ್ರವ್ಯವನ್ನು ಕದಿಯಬೇಕೆಂಬುವನು ಶೀಘ್ರದಲ್ಲಿ ಶರಣಾಗತಿಯನ್ನು ಮಾಡಿಬಿಟ್ಟು ಕದಿಯಬೇಕು; ಏಕೆಂದರೆ ಆ ಪಾಪವು ಆಗ ಸಂಭವಿಸುವದಿಲ್ಲವು; ಇಂತಹ ಪರಿಹಾಸಕ್ಕೆಲ್ಲಾ ಕಾರಣವಾಗುತ್ತದೆ. ಈ ವಿಷಯವನ್ನು ಶ್ರೀಮದಾಚಾರ್ಯರವರು ಮುಂದೆ ಚರಮಶ್ಲೋಕದಲ್ಲಿ "**ಇಜ್ಜನನ್ನಿಕ್ಕೇ ಬುದ್ಧಿಪೂರ್ವೋತ್ತರಾಘಮುಮ್ ಈಶ್ವರನುಕ್ಕು ಭೋಗ್ಯಮಾಮ್ ಎನ್ನುವಿವಕ್ಷಿತಮಾಗಿಲ್, ಪ್ರಪನ್ನನುಕ್ಕಿದುವೇ ಯಥಾಶಕ್ತಿ ಸಂಪಾದ್ಯಮಾಮ್**" ಎಂದು ತಿಳಿಸಿರುತ್ತಾರೆ. **ಶಿಲರ್ ಶೊನ್ನಾರ್‌ಗಳ್** ಎಂಬುವದರಿಂದ ಹೀಗೆಲ್ಲಾ ಪರಿಹಾಸಕ್ಕೆ ಒಳಗಾಗಬೇಕಾಗುವದರಿಂದ, ಕೆಲವರಭಿಪ್ರಾಯ ಹಾಗೆಯೇ ವಿನಾ, ತಮ್ಮಭಿಪ್ರಾಯ ಹಾಗಲ್ಲವೆಂಬ ಭಾವವೂ ತೋರಿಬರುತ್ತದೆ.

ಆದರೆ ಭರನ್ಯಾಸಾನಂತರ ಮಾಡುವ ಬುದ್ಧಿಪೂರ್ವಾಪರಾಧಕ್ಕೆ ಪ್ರಾಯಶ್ಚಿತ್ತವಿಲ್ಲದ ಸಂದರ್ಭದಲ್ಲಿ ದಂಡನೆಯುಂಟು ಎಂದು ಒಪ್ಪಿಕೊಂಡರೆ, ಈ ಬುದ್ಧಿಪೂರ್ವಾಪರಾಧವು ಒಂದು ವೇಳೆ ಪ್ರಬಲವಾದುದಾದರೆ, ಮೋಕ್ಷಪ್ರಾಪ್ತಿಗೆ ವಿಘಾತ ಉಂಟಾಗಲಾರದೋ ? ಎಂದರೆ, "**ಪ್ರಾರಬ್ಧಕರ್ಮತ್ತಿಲ್**" ಎಂದು ಪ್ರಾರಂಭಿಸಿದ

ಪ್ರಾಯಶ್ಚಿತ್ತಮ್ ಪಣ್ಣಾದಪೋದು ಸಫಲಮಾನಾಲುಮ್, ಪಣ್ಣಿನ ಪ್ರಪತ್ತಿ ಮೋಕ್ಷಮ್ ಕೊಡಾದೊಳಿಯುಮೋವೆನ್ರು ಶಙ್ಕಿಕ್ಕವೊಣ್ಣಾದು

ಮುಂದಿನ ವಾಕ್ಯದಿಂದ ಮೋಕ್ಷಪ್ರಾಪ್ತಿಗೆ ಎಂದಿಗೂ ಸಂದೇಹವಿಲ್ಲವೆಂದುಪದೇಶಿಸುತ್ತಾರೆ :—

ಬುದ್ಧಿಪೂರ್ವಾಘದಲ್ಲೂ ಪ್ರಪತ್ತಿಯು ಎಂದಿಗೂ ನಿಷ್ಫಲವಾಗುವದಿಲ್ಲವು

ಪ್ರಾರಬ್ಧಕರ್ಮತ್ತಿಲ್ - ಪ್ರಾರಬ್ಧಕರ್ಮದಲ್ಲಿನ, **ಪಾಪಾಂಶಮ್ಪೋಲೆ** - ಸುಕೃತಭಾಗನಲ್ಲದೆ, ಪಾಪಭಾಗದಹಾಗೆ, **ಬುದ್ಧಿಪೂರ್ವೋತ್ತರಾಘಂ** - ಬುದ್ಧಿಪೂರ್ವಕವಾಗಿ ಮಾಡಿದ ಉತ್ತರಾಪರಾಧವು, **ಪ್ರಾಯಶ್ಚಿತ್ತಮ್ ಪಣ್ಣಾದಪೋದು**-ಪ್ರಾಯಶ್ಚಿತ್ತವನ್ನು ಪುನಶ್ಶರಣಾಗತಿ ಮೂಲಕ ಮಾಡಿಕೊಳ್ಳದಿದ್ದರೆ, **ಸಫಲಮಾನಾಲುಮ್** - ಅವರ ಫಲವನ್ನುಂಟುಮಾಡಿದರೂ ಎಂದರೆ; ಸರ್ವೇಶ್ವರನು ಕ್ಷಮಾಪೂರ್ವಕ ಅಲ್ಪ ಶಿಕ್ಷಾಪ್ರಾಪ್ತಿಯನ್ನುಂಟುಮಾಡಿದರೂ ಎಂಬರ್ಥವು, **ಪಣ್ಣಿನಪ್ರಪತ್ತಿ** - ಈ ಮೋಕ್ಷಾರ್ಥಿಯು ಪೂರ್ವದಲ್ಲಿ ಅನುಷ್ಠಿಸಿದ ಪ್ರಪತ್ತಿಯು, **ಮೋಕ್ಷಮ್ ಕೊಡಾದೊಳಿಯುಮೋ** - ಎಲ್ಲಿಯಾದರೂ ಮೋಕ್ಷಪ್ರಾಪ್ತಿಯನ್ನುಂಟುಮಾಡದೆ ಇದ್ದೀತೋ, **ಎನ್ರು ಶಂಕಿಕ್ಕವೊಣ್ಣಾದು** - ಎಂದು ಸಂಶಯ ಬೇಕಿಲ್ಲವು. ಯಾವಾಗ ಶರಣಾಗತಿಯನ್ನನುಷ್ಠಿಸಿದನೋ ಆಗ ಸತ್ಯಸಙ್ಕಲ್ಪನಾದ ಶರಣ್ಯನು ದೇಹಾವಸಾನದಲ್ಲಿ ಮೋಕ್ಷವನ್ನು ಕೊಡುವದಾಗಿ ಅಭಯವನ್ನಿತ್ತಿರುವನು. ಇದಕ್ಕೆ ಎಂದಿಗೂ ಚ್ಯುತಿಯಿಲ್ಲವೆಂಬರ್ಥವು, **"ರಾಮೋ ದ್ವಿರ್ನಾಭಿ ಭಾಷತೇ"** ಶ್ರೀರಾಮನು ಎಂದಿಗೂ ಎರಡು ವಿಧವಾಗಿ ಮಾತಾಡುವದಿಲ್ಲವು. ಆಡಿದ ಮಾತಿಗೆ ವಿರೋಧವಿಲ್ಲವು. ಮಾಡುತ್ತೇನೆಂದು ಹೇಳಿದ ವಾಕ್ಯವನ್ನು ಹೇಗಾದರೂ ಮಾಡಿ ನಡೆಸಿಕೊಡುವನು. ಇದಕ್ಕೆ ನಿದರ್ಶನವಾಗಿ.

ಅಬ್ಧಿಂ ನ ತೇರಿಥ ನ ಜಿಗ್ಯಿಥ ರಾಕ್ಷಸೇಂದ್ರಂ
ನೈವಾಸ್ಯ ಜಜ್ಞಿಥ ಯದಾ ಚ ಬಲಾಬಲಂ ತ್ವಂ
ನಿಸ್ಸಂಶಯಸ್ಸಪದಿ ತಸ್ಯ ಪದೇಭ್ಯಷಿಂಚಃ
ತಸ್ಯಾನುಜಂ ಕಥಮಿದಂ ಹಿ ವಿಭೀಷಣಂ ಚ॥

(ಅತಿಮಾನುಷಸ್ತವ)

ಓ ಶ್ರೀರಾಮನೇ ನೀನು ಅಬ್ಧಿಂನತೇರ್ರ್ಯಥ - ಸಮುದ್ರವನ್ನು ಇನ್ನೂ ದಾಟಲೂ ಇಲ್ಲವು, ಅದಕ್ಕೆ ಪ್ರಯತ್ನವೂ ಇಲ್ಲವು, **ನ ಜಿಗ್ಯಥ ರಾಕ್ಷಸೇಂದ್ರಂ** - ರಾವಣ

ನನ್ನು ಕೊಲ್ಲಲಿಲ್ಲವು. ನೈವಾಸ್ಯ ಜಜ್ಞಿಥ ಯದಾ ಚ ಬಲಾಬಲಂತ್ವಂ-ಇನ್ನೂ ಶತ್ರುವಿನ ಬಲಾಬಲಗಳ ವಿಚಾರವನ್ನು ಮಾಡಲಿಲ್ಲವು ಹೀಗಿದ್ದರೂ ನಿಸ್ಸಂಶಯಸ್ಸನ್ ಪದಿ ತಸ್ಯ ಪದೇ ಅಭ್ಯಷಿಂಚಃ ತಸ್ಯಾನುಜಂ-ಆಸ್ಥಾನದಲ್ಲಿ ನಿಸ್ಸಂಶಯನಾಗಿ, ಬೇಗನೆ ಆ ರಾವಣನ ತಮ್ಮನಾದ ವಿಭೀಷಣನನ್ನು ಅಭಿಷೇಕ ಮಾಡಿರುತ್ತೀಯೆ. ಅನಂತರ ಇದು ಹೇಗಾದರೂ ನಡೆಯಬೇಕಲ್ಲವೇ ಎಂಬ ಆತಂಕವುಳ್ಳವನಾಗಿ, ರಾವಣಾದಿ ಸರ್ವರಾಕ್ಷಸರನ್ನೂ ಕೊಂದನಂತರ ಬೇಗನೇ ಪುನಃ ವಿಭೀಷಣನಿಗೆ ಪಟ್ಟಾಭಿಷೇಕವನ್ನು ನಡೆಸಿ.

“ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಂ ।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದಹ॥”

ಶರಣಾಗತನ ಕೋರಿಕೆಯನ್ನು ಇನ್ನೂ ನಡಿಸಲಿಲ್ಲವೇ ಎಂಬ ಪರಿತಾಪದಿಂದ ಬಿಡುಗಡೆಯನ್ನು ಹೊಂದಿದವನಾಗಿ, ತಾನು ಈಗಲ್ಲವೇ ಕೃತಕೃತ್ಯನಾದೆನು ಎಂದು ತುಂಬಾ ಆನಂದವನ್ನು ಹೊಂದಿದನು ಎಂದು ಮಹರ್ಷಿಯು ವರ್ಣಿಸಿರುತ್ತಾರೆ. ಆದುದರಿಂದ ಸತ್ಯಸಂಕಲ್ಪನು ತಾನಾಡಿದ ಮಾತನ್ನು ಎಂದಿಗೂ ನಡಸದೇ ಇರನು. ಆದುದರಿಂದಲೇ ಶಙ್ಕ್ಯಕ್ಕವೊಣ್ಣಾದು – ಎಂದುಪದೇಶಿಸಿರುತ್ತಾರೆ.

ಹಾಗೆಯೇ ಶ್ರೀ ಪರಮಭಕ್ತರಾದ ಶ್ರೀಭರತಾಳ್ವಾರವರು ತಮಗೆ ಪ್ರಾಪ್ತವಾಗಿರುವ ಲೋಕಾಪವಾದವನ್ನು ಪರಿಹರಿಸುವದಕ್ಕಾಗಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತರಾಗಬೇಕೆಂದು ಬಹುವಿಧವಾಗಿ ಯಾಚಿಸಿದರೂ, ಹಾಗೆ ಮಾಡಲಿಲ್ಲವೇ ಎಂಬ ಪರಿತಾಪಪೀಡಿತರಾಗಿ ಹೇಳುತ್ತಾರೆ :—

“ಮಾಂ ನಿವರ್ತಯಿತುಂ ಯೋಸೌ ಚಿತ್ರಕೂಟ ಮುಪಾಗತಃ
ಶಿರಸಾ ಯಾಚತೋ ಯಸ್ಯ ವಚನಂ ನಕೃತಂ ಮಯಾ”

(ರಾ. ಯು, ೧೩೪. ೧೯)

ತಲೆಬಾಗಿ ಬೇಡಿದವನ ಮಾತನ್ನು ನಡೆಸಲಿಲ್ಲವೇ. ಆದುದರಿಂದ “ತಂತು ಮೇ ಭ್ರಾತರಂ ದ್ರಷ್ಟುಂ ಭರತಂ ತ್ವರತೇ ಮನಃ” “ಆದುದರಿಂದ ಮೊದಲು ಆ ಭರತನನ್ನು ಹೋಗಿ ನೋಡಬೇಕೆಂಬ ಮನಸ್ಸು ನನ್ನನ್ನು ತ್ವರೆಗೊಳಿಸುತ್ತದೆ.” ಎಂದು ಹೇಳಿ, ಒಡನೆ ಅಯೋಧ್ಯೆಗೆ ಹೋಗಿ ಆತನ ಕೋರಿಕೆಯನ್ನು ನಡಿಸಿಕೊಟ್ಟಿರುತ್ತಾರೆ. ಹೀಗೆ ಭಕ್ತಾಭೀಷ್ಟವನ್ನು ಯಾವಾಗ ನಡೆಸಿಕೊಡುವೆನೋ ಎಂಬ ತ್ವರೆಯುಳ್ಳವನು ಸರ್ವೇಶ್ವರನಾದುದರಿಂದ ಶರಣಾಗತಿಯನ್ನನುಷ್ಠಿಸಿ ಪ್ರಪನ್ನನಾದವನಿಗೆ ಮೋಕ್ಷಪ್ರಾಪ್ತಿ ವಿಷಯದಲ್ಲಿ ಶಙ್ಕ್ಯಕ್ಕವೊಣ್ಣಾದು ಎಂದು ಹೇಳಿರುತ್ತಾರೆ.

ಪೆರುಙ್ಗಾಯಮ್ ವೈತ್ತ ಮರಙ್ಗಳುಕ್ಕು ಸ್ಥಲಾದಿ ವಿಶೇಷಙ್ಗಳಾಲೇ ನಾಟ್ಟತ್ತುಕ್ಕು ಕಾಲತಾರತಮ್ಯಮುಳ್ಳ ಮಾತ್ರಮ್ ; ಇಙ್ಗು ನಿಮಿರ್

ಈ ಮೇಲಿನ ವಾಕ್ಯದಲ್ಲಿ **ಪ್ರಾರಬ್ಧ ಕರ್ಮತ್ತಿಲ್** ಪಾಪಾಂಶವು ಅದರ ಫಲವನ್ನು ಕೊಡುತ್ತದೆ ಎಂದು ಹೇಳಲ್ಪಟ್ಟಿರುವದರಿಂದ ಪುಣ್ಯಾಂಶವು ಫಲದಾಯಕವಲ್ಲವೆಂದು ತೋರಿಬರುತ್ತದೆ. ಹಾಗೆಯೇ ಬುದ್ಧಿಪೂರ್ವಕಪುಣ್ಯಾಂಶವೂ ಕೂಡ ಫಲದಾಯಕವಲ್ಲವೆಂಬುವದನ್ನೂ ಗ್ರಹಿಸಬಹುದು. ಇದು ಏತಕ್ಕೆಂದರೆ ಪ್ರಪನ್ನನಾದವನಿಗೆ ವೈರಾಗ್ಯವಿರುವದರಿಂದ ನಶ್ವರವಾದ ತುಚ್ಛವಾದ ಸುಖಭೋಗಗಳಲ್ಲಿ ಅಭಿಲಾಷೆಯಿಲ್ಲವು. ಮೊದಲು ಏನೋ ದುರಾಶೆಯಿಂದ ರಾಜನನ್ನನುವರ್ತಿಸಿ ಒಂದು ಗ್ರಾಮವನ್ನು ಪಡೆಯಬೇಕೆಂದು ಆತನನ್ನು ಆಶ್ರಯಿಸಿದರೂ, ಆ ಆಶ್ರಯವು ಮುಂದೆ ಫಲಕೊಡುವ ಕಾಲದಲ್ಲಿ ಆ ಗ್ರಾಮವು ತನಗೆ ಬೇಕಿಲ್ಲವೆಂದು ಹೇಳಿ ಆ ಕಾಮ್ಯಫಲದಿಂದ ಹೇಗೆ ತಪ್ಪಿಸಿಕೊಳ್ಳಬಹುದೋ ಹಾಗೆ ಎಂಬ ಭಾವವು. ಇದು ಉಪಾಸನ ವಿದ್ಯಾನಿಷ್ಠನಿಗೂ ಶರಣಾಗತಿನಿಷ್ಠನಿಗೂ ಸಾಧಾರಣವಾದ ವಿಷಯವು. ಪ್ರಾರಬ್ಧಕರ್ಮದ ಪಾಪಾಂಶವು ಹಾಗಲ್ಲವು ; ಕರ್ಮದ ಫಲವು ನನಗೆ ಬೇಡವೆಂದರೂ ಬಿಡತಕ್ಕದ್ದಲ್ಲವು. ಅದರ ಫಲವನ್ನನುಭವಿಸಲೇಬೇಕು ಇದು ಹೇಗೋ, ಹಾಗೆಯೇ ಬುದ್ಧಿಪೂರ್ವೋತ್ತರಾಘವೂ ಕೂಡ ಪ್ರಾಯಶ್ಚಿತ್ತವಿಲ್ಲದ ದೆಶೆಯಲ್ಲಿ ಅದರ ಫಲವನ್ನು ಕೊಡದೇ ಇರದು ಎಂದು ಹೇಳಲ್ಪಟ್ಟಿತು. ಇಂತಹ ಪಾಪಗಳ ಫಲಾನುಭವವನ್ನು ಮಾಡಲೇಬೇಕೆಂದು ಹೇಳಲ್ಪಟ್ಟಿತು. ಪ್ರಾರಬ್ಧಕರ್ಮದ ಪಾಪಾಂಶವೂ, ಪ್ರಾಯಶ್ಚಿತ್ತವಿಲ್ಲದ ಬುದ್ಧಿಪೂರ್ವಕವಾದ ಉತ್ತರಾಘವೂ, ಇವೆರಡರ ಫಲವನ್ನು ಪ್ರಪನ್ನನೂ ಅನುಭವಿಸಿಯೇ ತೀರಬೇಕು. ಆದರೆ ಮೊದಲು ಪ್ರಪತ್ತಿಯನ್ನು ಅನುಷ್ಠಿಸುವ ಕಾಲದಲ್ಲಿ ಪ್ರಾರಬ್ಧಕರ್ಮದ ಪಾಪಾಂಶವೂ ಕಳೆಯಬೇಕೆಂದು ಪ್ರಾರ್ಥಿಸಿದರೆ ಅದೂ ನಿವಾರಣವಾಗುತ್ತಿತ್ತು ಎಂದು ತಿಳಿಯತಕ್ಕದ್ದು. ಈ ಎರಡು ವಿಧವಾದ ಪಾಪಫಲಾನುಭವಗಳು ಈ ಜನ್ಮದಲ್ಲೇ ದೇಹಾವಸಾನದ ಒಳಗೇ ಹೊರತು ಪುನರ್ಜನ್ಮವಿಲ್ಲವು, ದೇಹಾವಸಾನವಾದ ಒಡನೆಯೇ ಮೋಕ್ಷಪ್ರಾಪ್ತಿಯು ಎಂಬುವದು ಮುಖ್ಯ ತಾತ್ಪರ್ಯವು.

ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯಗಳಿಂದಲೂ ಸದೃಷ್ಟಾಂತವಾಗಿ ಸಮರ್ಥನೆ ಮಾಡುತ್ತಾರೆ :— **ಪೆರಙ್ಗಾಯಮ್ ವೈತ್ತ** - ಹಿಂಗನ್ನು ಇಟ್ಟ, **ಮರಙ್ಗಳುಕ್ಕು** - ಮರಗಳಿಗೆ, **ಸ್ಥಲಾದಿ ವಿಶೇಷಙ್ಗಳಾಲೆ** - ಭೂಮಿಯ

ಗಳ್ ಸಂಸಾರತ್ತಿನುಡೈಯ ನಿಶ್ಶೇಷನಿವೃತ್ತಿ ಪಿರಕ್ಕೈಕ್ಕು ವಿಳಂಬಾವಿಳಂಬ

ಗುಣವೇ ಮೊದಲಾದ ವಿಶೇಷಗಳಿಂದ. ಇಲ್ಲಿ **ಆದಿ**ಶಬ್ದದಿಂದ ಕಾಲವಿಶೇಷವೂ ಹೇಳಲ್ಪಟ್ಟಿತು, **ವಾಟ್ಟತ್ತುಕ್ಕು** - ಬಾಡಿಹೋಗುವದಕ್ಕೆ, **ಕಾಲತಾರತಮ್ಯಮುಳ್ಳಮಾತ್ರಮ್** - ಹೆಚ್ಚುಕಾಲ, ಕಮ್ಮಿಕಾಲ ಉಳ್ಳ ವ್ಯತ್ಯಾಸ ಮಾತ್ರವೇ. ಮರಗಳ ಬೇರಿಗೆ ಹಿಂಗನ್ನು ತಗಲಿಸಿದರೆ ಅವು ಬಾಡಿಹೋಗುವದೇನೋ ಸಿದ್ಧವು. ಕೆಲವು ದೇಶಕಾಲಗಳ ವ್ಯತ್ಯಾಸದಿಂದ ಸಾವಕಾಶವಾಗಿಯೂ, ಕೆಲವು ಶೀಘ್ರವಾಗಿಯೂ, ಬಾಡಿಹೋಗುತ್ತವೆ. ಹೇಗೆಂದರೆ ನೀರಿನ ವಸತಿ ಹೆಚ್ಚಾದ ಪ್ರದೇಶವಾದರೆ ಸಾವಕಾಶವಾಗಿ ಬಾಡುತ್ತವೆ, ನೀರಿನ ವಸತಿ ಇಲ್ಲದಿದ್ದರೆ ಬೇಗ ಬಾಡಿಹೋಗುತ್ತವೆ. ಹಾಗೆಯೇ ಮಳೆಗಾಲವಾಗಿದ್ದರೆ ಸಾವಕಾಶವಾಗ ಬಾಡುತ್ತವೆ. ಅಂತೂ ಬಾಡುವದೇನೋ ನಿಶ್ಚಯವು. ಹಾಗೆಯೇ **ಇಙ್ಙುಮ್** - ಇಲ್ಲಿಯೂ ಎಂದರೆ ಈ ಸಂದರ್ಭದಲ್ಲೂ, **ಇವರ್‌ಗಳ್** - ಈ ಪ್ರಾಯಶ್ಚಿತ್ತ ಮಾಡಿಕೊಳ್ಳದ ಬುದ್ಧಿಪೂರ್ವಕವಾಗಿ ಅಪರಾಧಮಾಡಿದವರು, **ಸಂಸಾರತ್ತಿನುಡೈಯ ನಿಶ್ಶೇಷನಿವೃತ್ತಿಪಿರಕ್ಕೈಕ್ಕು** - ಸಂಸಾರದ ಸಂಪೂರ್ಣ ನಿವೃತ್ತಿಹೊಂದುವದಕ್ಕೆ, **ವಿಳಂಬಾವಿಳಂಬ ವೈಷಮ್ಯಮೇ ಉಳ್ಳದು** - ಒಂದು ಸಂದರ್ಭದಲ್ಲಿ ಹೆಚ್ಚುಕಾಲ ವಿಳಂಬವೂ ಇನ್ನೊಂದು ಸಂದರ್ಭದಲ್ಲಿ ಕಾಲವಿಳಂಬವಿಲ್ಲದೆಯೂ ಹೀಗೆ ವ್ಯತ್ಯಾಸವಿರೋಣವು. ಮರದ ಬೇರಿನ ಭಾಗಕ್ಕೆ ಹಿಂಗಿನ ಸಂಬಂಧ ಉಂಟಾದರೆ ಮರವು ಒಣಗಿಹೋಗುವದು ಹೇಗೆ ಸಿದ್ಧವೋ, ಹಾಗೆಯೇ ಈ ಪ್ರಪದನವನ್ನನುಷ್ಠಿಸಿದವನಿಗೆ ಈ ಪ್ರಾಕೃತದೇಹವು ನಶಿಸಿಹೋಗಿ ಮೋಕ್ಷಪ್ರಾಪ್ತಿ ಎಂಬುವದು ಸಿದ್ಧವು ಎಂಬ ಭಾವವು. ಆದರೆ ಈ ಪ್ರಪನ್ನನ ಪ್ರಾರಬ್ಧಪಾಪವಿಶೇಷಕ್ಕನುಗುಣವಾಗಿಯೂ ಬುದ್ಧಿಪೂರ್ವಕವಾಗಿ ಮಾಡಿದ ಉತ್ತರಾಘಕ್ಕನುಗುಣವಾಗಿಯೂ ವಿಳಂಬವಾಗಿ ಮೋಕ್ಷಪ್ರಾಪ್ತಿಯುಂಟಾಗುತ್ತದೆ. ಇಂತಹ ಪ್ರತಿಬಂಧಕಗಳಿಲ್ಲದಿದ್ದರೆ ವಿಳಂಬವಿಲ್ಲದೆಯೇ ಮೋಕ್ಷಪ್ರಾಪ್ತಿಯು ಸಂಭವಿಸುತ್ತದೆ. ಹೇಗೆಂದರೆ:- ಬೇರಿಗೆ ಹಿಂಗನ್ನಿಟ್ಟ ಮರವೇ ಒಳ್ಳೆ ಜಲಸಮೃದ್ಧಿಯಿರುವ ಪ್ರದೇಶದಲ್ಲಿದ್ದರೆಯಾಗಲಿ, ಅಥವಾ ಮಳೆ ಹೊಯ್ದರೆಯಾಗಲಿ, ಸ್ವಲ್ಪ ಕಾಲಾನಂತರವೇ ಬಾಡಿಹೋಗುತ್ತವೆ. ಹಾಗಲ್ಲದೆ ಜಲಸಮೃದ್ಧಿಯಿಲ್ಲದ ಪ್ರದೇಶದಲ್ಲಾಗಲಿ ಅಥವಾ ಬಿಸಿಲು ಕಾಲದಲ್ಲಾಗಲಿ ಅದೇ ಹಿಂಗನ್ನಿಟ್ಟ ಮರವು ಇಂತಹ ಪ್ರತಿಬಂಧಕಗಳಿಲ್ಲದ ಸಂದರ್ಭದಲ್ಲಿ ಬೇಗನೆ ಬಾಡಿಹೋಗುತ್ತದೆ. ಹಾಗೆಯೇ ಪ್ರಪನ್ನನ ವಿಷಯದಲ್ಲೂ ಪ್ರತಿಬಂಧಕಗಳಿದ್ದರೆ ವಿಳಂಬಿಸಿಯೂ, ಹಾಗೆ ಪ್ರತಿಬಂಧಕಗಳಿಲ್ಲದಿದ್ದರೆ ವಿಳಂಬವಿಲ್ಲದೆಯೂ ದೇಹಾವಸಾನ ಉಂಟಾಗಿ ಮೋಕ್ಷಪ್ರಾಪ್ತಿ ಎಂಬ ಭಾವವು.

ನೈಷಮ್ಯಮೇಯುಳ್ಳದು. ಇದ್ದೇಹಾನಂತರಂ ಮೋಕ್ಷಮ್ ಪೆರವೇಣ್ಡು ಮೆನ್ರುಪೇಕ್ಷಿತ್ತಾಲುಮ್ ಅನಿಯತಾಸ್ಸುಕ್ಕಳಾಯ್ ವಿಳಂಬಾಕ್ಷಮರಾಯಿ

ಆದರೆ ಆಯುಸ್ಸು ನಿಯತವಾಗಿರುವಾಗ ಪ್ರತಿಬಂಧಕಗಳಿಂದ ಆಯುರ್ವೃದ್ಧಿಯುಂಟೋ ಎಂದರೆ, ಅದಕ್ಕೆ ಸಮಾಧಾನವನ್ನು ಮುಂದಿನ "ಇದ್ದೇಹಾನನ್ತರಂ" ಎಂಬ ವಾಕ್ಯದಿಂದ ತಿಳಿಸುತ್ತಾರೆ. ಅದೂ ಅಲ್ಲದೆ ಈತನು ಶರಣಾಗತಿಯನ್ನನುಷ್ಠಿಸುವಾಗ "ಏತದ್ದೇಹಾವಸಾನೇ ಮಾಂ ತ್ವತ್ಪಾದಂ ಪ್ರಾಪಯ" ಎಂದು ಹೇಳಿರುವಹಾಗೆ ಗೋಪ್ತೃತ್ವವರಣವಿರುವದರಿಂದ ಆಯುರ್ವೃದ್ಧಿ ಮೂಲಕ ವಿಳಂಬತಾನೇ ಸರಿಯೋ ಎಂಬ ಆಕ್ಷೇಪವೂ ಉಂಟಾದೀತು. ಇದಕ್ಕೂ ಸಹ ಮುಂದಿನ ವಾಕ್ಯದಲ್ಲಿ ಸಮಾಧಾನ ದೊರೆಯುತ್ತದೆ. ನಿಯತಾಯುಸ್ಸುಗಳೇನೋ ಎಲ್ಲರೂ ಹೌದು. ಜನ್ಮಕಾಲದಲ್ಲೇ ಗ್ರಹಗಳ ಗತಿಗಳಿಗನುಸಾರವಾಗಿ ಪ್ರತಿಯೊಬ್ಬನಿಗೂ ನಿಯತವಾದುದೇ. ಇದನ್ನು ಆಯುಷ್ಕಾಮೇಷ್ಟ್ಯಾದಿಗಳಿಂದ ವೃದ್ಧಿ ಮಾಡಿಕೊಳ್ಳಬಹುದೆಂದು ಶಾಸ್ತ್ರವು ಹೇಳುತ್ತದೆ. ಹಾಗೆ ಮಾಡಿಕೊಂಡರೆ ಅನಿಯತಾಯುಸ್ಸುಳ್ಳವರಾಗುತ್ತಾರೆ. ಹಾಗೆಯೇ ಬುದ್ಧಿಪೂರ್ವಕವಾದ ಉತ್ತರಾಘವು ಪ್ರಾಪ್ತವಾದರೂ ಸ್ವಾಮಿಸಙ್ಕಲ್ಪದಿಂದ ಪಾಪಫಲಾನುಭವಕ್ಕಾಗಿ ಆಯುರ್ವೃದ್ಧಿಯುಂಟಾಗಬಹುದು. ಏಕೆಂದರೆ, ದೇಹಾವಸಾನದಲ್ಲೇ ಮೋಕ್ಷವನ್ನು ಕೊಡಬೇಕಾಗಿರುವದರಿಂದಲೂ, ಆತನಿಗೆ ಪುನರ್ಜನ್ಮವಿಲ್ಲದಿರುವದರಿಂದಲೂ ಬುದ್ಧಿಪೂರ್ವೋತ್ತರಾಘಕ್ಕೆ ಸರಿಯಾದ ಶಿಕ್ಷೆಯನ್ನು ಅನುಭವಿಸಬೇಕಾಗಿರುವದರಿಂದಲೂ, ಆಯುಸ್ಸು ವೃದ್ಧಿಯಾಗುತ್ತದೆ ಎಂಬ ಭಾವವು. ಸ್ವಾಮಿಸಙ್ಕಲ್ಪದಿಂದ ಆಯುರ್ವೃದ್ಧಿಯುಂಟಾಗುವವರನ್ನು ಮುಂದಿನ ವಾಕ್ಯದಲ್ಲಿ ಅನಿಯತಾಸ್ಸುಕ್ಕಳಾಯ್ ಎಂದು ಹೇಳಿರುತ್ತಾರೆ. ಹಿಂದೆ ವಿಳಂಬಾವಿಳಂಬನೇಮವುಳ್ಳದು ಎಂದು ಹೇಳಿದುದನ್ನೇ ವಿಶದೀಕರಿಸುತ್ತಾರೆ. ಇದ್ದೇಹಾನನ್ತರಂ ಮೋಕ್ಷಮ್ ಪೆರವೇಣ ಮೆನ್ರುಪೇಕ್ಷಿತ್ತಾಲುಮ್ - ದೇಹಾವಸಾನದಲ್ಲಿ ಮೋಕ್ಷವನ್ನು ಹೊಂದಬೇಕೆಂದು ಅಪೇಕ್ಷಿಸಿದರೂ ಕೂಡ ವಿಳಂಬಾಕ್ಷಮರಾಯಿರುಪ್ಪಾರ್ಕ್ಕು - ದೇಹಾವಸಾನದ ವಿಳಂಬವನ್ನು ಸಹಿಸದವರಿಗೆ, ಅನಿಯತಾಯುಸ್ಸುಕ್ಕಳಾಯ್ - ಇಷ್ಟೇ ಆಯುಸ್ಸೆಂಬ ನಿಯತಿ ಇಲ್ಲದಿರುವರಾಗಿ ಎಂದರೆ ಹಾಗೆ ಸರ್ವೇಶ್ವರನಿಂದ ಸಙ್ಕಲ್ಪಿಸಲ್ಪಟ್ಟವರಾಗಿ, ಆಯುವೃದ್ಧಿಯಾಲೆ ವಿಳಂಬಮ್ ವರುಮ್ - ಸ್ವಾಮಿಸಙ್ಕಲ್ಪದಿಂದಲೇ ಆಯುಸ್ಸು ವೃದ್ಧಿಯಾಗಿ ವಿಳಂಬ ಉಂಟಾಗುವದು, ಎಂದರೆ ಬುದ್ಧಿಪೂರ್ವಕವಾದ ಅಪರಾಧಕ್ಕಾಗಿ

ರುಪ್ಪಾರ್ಕ್ಕಾಯುರ್ವೃದ್ಧಿಯಾಲೇ ವಿಳಂಬವುಮ್ ವರುಮ್; ನಿಯತಾಯುಸ್ಸುಕ್ಕಳುಕ್ಕು ಉಳ್ಳವಾಯುಸ್ಸುಕ್ಕುಳ್ಳೇ ಫಲಿತ್ತುವಿಡುಮ್. (೧) ಭವೇಯಂ ಶರಣಂ ಹಿ" ಎನ್ರು ಪಿನ್ಬು ಮುಣ್ಡಾನ ರಾಕ್ಷಸಿಗಳುಡೈಯ

ಅಲ್ಪಶಿಕ್ಷೆಯನ್ನನುಭವಿಸುವದಕ್ಕಾಗಿ ಆಯುರ್ವೃದ್ಧಿಯೂ ಅದರಿಂದ ವಿಳಂಬವೂ ಉಂಟಾಗುತ್ತವೆಂಬ ಭಾವವು. ವಿಳಂಬ ಬೇಡವೆಂದಿರುವವರಿಗೆ ವಿಳಂಬವೂ ಕೂಡ ಶಿಕ್ಷಾರೂಪವಷ್ಟೇ; ನಿಯತಾಯುಸ್ಸುಕ್ಕಳುಕ್ಕು - ಕ್ಷಿಪ್ತವಾದ ಆಯುಸ್ಸುಳ್ಳವರಾಗಿರಲೆಂದು ಸ್ವಾಮಿಸಙ್ಕಲ್ಪವಿರುವವರಿಗೆ ನಿಯತಾಯುಸ್ಸುಕ್ಕುಳ್ಳೇ- ಕ್ಷಿಪ್ತವಾದ ಆಯುಸ್ಸಿನಲ್ಲಿಯೇ, ಫಲಿತ್ತುವಿಡುಮ್ - ಅಲ್ಪದಂಡನೆಯಾದ ಖಂಜತ್ವ, ಕಾಣತ್ವಾದಿರೂಪಫಲಗಳುಂಟಾಗಿ ಬಿಡುವುವು. ಶರಣಾಗತಿಯನ್ನನುಷ್ಠಿಸುವ ಕಾಲದಲ್ಲೇ ಈ ಪ್ರಪನ್ನನು ದೇಹಾವಸಾನಾನಂತರವೇ ಮೋಕ್ಷವುಂಟಾಗಬೇಕೆಂದು ಪ್ರಾರ್ಥಿಸಿದ್ದರೂ ಕೂಡ ಆಯುರ್ವೃದ್ಧಿ ವಿಳಂಬವು ನ್ಯಾಯವೋ ಎಂಬಾಕ್ಷೇಪ ಬಂದೀತಾಗಿ ಅಂತಹ ಸಂದರ್ಭದಲ್ಲೂ ಈತನಿಗೆ ವಿಳಂಬವು ಇಷ್ಟವಲ್ಲದುದರಿಂದ ಅಲ್ಪದಂಡನೆಗಾಗಿ ಆಯುರ್ವೃದ್ಧಿಯನ್ನುಂಟುಮಾಡುವನು. ಇನ್ನು ಕೆಲವರಿಗೆ ಕ್ಲಿಪ್ತವಾದ ಆಯುಸ್ಸಿನಲ್ಲಿಯೇ ಈ ಅಲ್ಪದಂಡನೆಯನ್ನನುಭವಿಸುವಹಾಗೆ ಮಾಡುವನು. ಈ ಎರಡು ಸಂದರ್ಭದಲ್ಲೂ ಮೋಕ್ಷಕ್ಕೆ ಚ್ಯುತಿಯಿಲ್ಲವೆಂಬ ಭಾವವು.

ಅದರೆ ಬುದ್ಧಿಪೂರ್ವೋತ್ತರಾಘವು ಶರಣಾಗತಿಯ ಮಾಹಾತ್ಮ್ಯೆಯಿಂದ ಏನೊಂದೂ ದಂಡನೆಯಿಲ್ಲದೆ ಕ್ಷಮಿಸಲ್ಪಟ್ಟಹಾಗೆ ತೋರುವ ಇತಿಹಾಸ ಒಂದುಂಟಲ್ಲಾ ಎಂದು ಶ್ರೀಮದ್ರಾಮಾಯಣದಿಂದ ಒಂದು ದೃಷ್ಟಾಂತವನ್ನು ಉದಾಹರಿಸಿ, ಆ ಸಂದರ್ಭದಲ್ಲೂ ಕೂಡ ಅಲ್ಪದಂಡನಾರೂಪ ಪ್ರಾಣಭಯವಿತ್ತೆಂದು ಉಪಪಾದಿಸುತ್ತಾರೆ. ಇತಿಹಾಸವು ಯಾವುದೆಂದರೆ ಹೇಳುತ್ತಾರೆ.

(೧) ವಃ - ರಾಕ್ಷಸಸ್ತ್ರೀಗಳಾದ ತ್ರಿಜಟೆ ಮೊದಲಾದವರಾದ ನಿಮಗೆ, ಶರಣಂ - ರಕ್ಷಕಳು, ಭವೇಯಂ - ಆಗುವೆನು, ಎಂದು ಸೀತಾವಾಕ್ಯವು

"ತತಸ್ಸಾಹ್ರೀಮತೀ ಬಾಲಾ ಭರ್ತುರ್ವಿಜಯ ಹರ್ಷಿತಾ ।
ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿವಃ"

ಎಂಬುವದು ಪೂರಾಶ್ಲೋಕವು; ತತಃ - ಆ ತ್ರಿಜಟೆಯು ಸ್ವಪ್ನವೃತ್ತಾಂತವನ್ನು ಹೇಳಿದನಂತರ, ಭರ್ತುಃ - ತನ್ನ ಪತಿಯಾದ ಶ್ರೀರಾಮನ, ವಿಜಯಹರ್ಷಿತಾ -

(೧) ರಾ. ಸುಂ. ೫೮.೯೧

ಬುದ್ಧಿಪೂರ್ವಾಪಚಾರಙ್ಗಳ್, (೨) **"ಮರ್ಷಯಾಮೀಹ ದುರ್ಬಲಾ,"**

ವಿಜಯಸೂಚಕವಾರ್ತೆಯಿಂದ **ಹರ್ಷ**ಗೊಂಡವಳಾದ, ಮತ್ತು ಬಾಲೆಯಾದ, ಪತಿಗೆ ವಿಜಯಸೂಚಕವೃತ್ತಾಂತದಿಂದಲೂ ಬಾಲೆಯಾದುದರಿಂದಲೂ, **ಹ್ರೀಮತೀ** - ಲಜ್ಜಾಯುಕ್ತಳಾಗಿ, **ತತ್**-ಆ ತ್ರಿಜಟಾ ಸ್ವಪ್ನವೃತ್ತಾಂತವು, **ತಥ್ಯಂ ಯದಿ**-ನಿಶ್ಚಯವಾದುದಾದರೆ, **ವಃ** - ನಿಮಗೆ, **ಶರಣಂ** - ರಕ್ಷಕಳು, **ಭವೇಯಂ** - ಆಗುವೆನೆಂದು ಸೀತೆಯು ಹೇಳಿದಳು ಎಂಬುವದು ಈ ಶ್ಲೋಕ ತಾತ್ಪರ್ಯವು, **ಎನ್ರಪಿನ್ಬುವನ್** - ಎಂದು ಹೇಳಿದನಂತರವೂ ಕೂಡ, **ಉಂಡಾನ** - ಉಂಟಾದ, ರಾಕ್ಷಸ ಸ್ತ್ರೀಯರ, **ಬುದ್ಧಿಪೂರ್ವಾಪಚಾರಙ್ಗಳ್** - ಬುದ್ಧಿಪೂರ್ವಾಪರಾಧಗಳು, ಇದಕ್ಕೆ **ಕ್ಷಮಾವಿಷಯವಾಯಿತ್ತಿಲ್ಲೈಯೋ** ಎಂಬುವದರೊಂದಿಗೆ ಅನ್ವಯವು. (೨) **"ಮರ್ಷಯಾಮೀಹ ದುರ್ಬಲಾ"** - ಬಲಹೀನಳಾದುದರಿಂದ ಸಹಿಸಿಕೊಂಡಿರುತ್ತೇನೆಂದೂ, ಈ ಸಂದರ್ಭ ಯಾವುದೆಂದರೆ :—

> **"ಭಾಗ್ಯ ವೈಷಮ್ಯ ಯೋಗೇನ ಪುರಾದುಶ್ಚರಿತೇನ ಚ ।**
> **ಮಯ್ಯೇತತ್ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೇ ।**
> **ಪ್ರಾಪ್ತವ್ಯಂ ತು ದಶಾಯೋಗಾನ್ಮಯೈತದಿತಿ ನಿಶ್ಚಿತಂ ।**
> **ದಾಸೀನಾಂ ರಾವಣಸ್ಯಾಹಂ ಮರ್ಷಯಾಮೀಹದುರ್ಬಲಾ"**

ಇದು ಸೀತೆಗೆ ತೊಂದರೆಕೊಟ್ಟ ರಾಕ್ಷಸಸ್ತ್ರೀಯರುಗಳನ್ನು ಶಿಕ್ಷಿಸಲು ಅನುಜ್ಞೆಯಂ ಬೇಡಿದ ಆಂಜನೇಯನಿಗೆ ಹೇಳುವ ಸೀತಾವಾಕ್ಯವು. ಆ ರಾವಣ ದಾಸೀಯರಲ್ಲಿ ಏನೊಂದೂ ಅಪರಾಧವಿಲ್ಲವು. ಸ್ವಾಮಿ ಆಜ್ಞಾನುಸಾರ ವರ್ತಿಸುವರಲ್ಲಿ ಏನು ಅಪರಾಧವು? ತನಗೆ ಉಂಟಾಗಿದ್ದ ಈ ದುರ್ದೆಶೆಯಾದರೋ ಭಾಗ್ಯವೈಷಮ್ಯಯೋಗದಿಂದಲೋ, ಹಿಂದೆ ಮಾಡಿದ ದುಶ್ಚರಿತದಿಂದಲೋ, ಉಂಟಾಗಿರಬಹುದು. ತಾನು ಮಾಡಿದ ಕರ್ಮವನ್ನು ಅನುಭವಿಸಲೇಬೇಕಷ್ಟೆ. ಅಂತಹ ಅನುಭವಿಸುವ ಕಾಲ ಈಗ ಒದಗಿರುತ್ತದೆ ಎಂದು ನಿಶ್ಚಯಿಸಿರುವೆನು. ಆದುದರಿಂದ ಈ ರಾವಣ ದಾಸಿಯರ ತರ್ಜನೆ ಮೊದಲಾದವನ್ನು ಸಹಿಸಬೇಕಾಗಿ ಬಂತು ಏಕೆಂದರೆ ನಾನು **ದುರ್ಬಲಾ,** ಅಂತಹ ಹಿಂದಿನ ಕರ್ಮಫಲ ಪ್ರಾಪ್ತವಾಗದಹಾಗೆ. ಏನೊಂದೂ ಪ್ರತಿಕ್ರಿಯೆಯನ್ನು ಮಾಡಿಕೊಳ್ಳದೆ ಅಶಕ್ತಳಾಗಿರುತ್ತೇನೆ." ಎಂದು ಹೇಳಿ ಸೀತೆಯು ಆಂಜನೇಯನ ಶಿಕ್ಷಾಪೇಕ್ಷೆಯನ್ನು ನಿರೋಧಿಸಿದಳು. (೩) ಸೀತೆಯು ಇನ್ನೂ ಆಂಜನೇಯನಿಗೆ ಹೇಳುತ್ತಾಳೆ :—**ಪಾಪಾನಾಂ ವಾ ಶುಭಾ**

(೨) ರಾ. ಯು. ೧೧೬-೪೦

(೩) "ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂಪ್ಲವಙ್ಗಮ" ಎಂಗಿರಪಡಿಯೇ ಪಿರಾಟ್ಟಿಕ್ಕು ಕ್ಷಮಾ ವಿಷಯಮಾಯಿಱ್ಱಿಲ್ಲೈಯೋವೆ

ನಾಂ ವಾ" ಆ ರಾಕ್ಷಸ ಸ್ತ್ರೀಯರು ನಿನ್ನಭಿಪ್ರಾಯ ಪ್ರಕಾರ ಪಾಪಿಗಳು, ನನ್ನಭಿಪ್ರಾಯಪ್ರಕಾರ ಅವರು ಶುಭರು, ಸ್ವಾಮ್ಯಾಜ್ಞೆ ಪ್ರಕಾರ ವರ್ತಿಸಿಮುದರಿಂದ ನಿರ್ದೋಷಿಗಳು. ಹೇಗೇ ಆಗಲಿ, ಅವರು ನೀನು ಹೇಳಿದ ಹಾಗೆ "ದಂಡ್ಯಾದಂಡನೀಯಾಃನಾದಂಡ್ಯಾಃ" ಎಂಬ ಧರ್ಮಶಾಸ್ತ್ರೋಕ್ತಿ ಪ್ರಕಾರ ದಂಡಿಸಲು ಯೋಗ್ಯನಾದವನನ್ನು ದಂಡಿಸಲೇಬೇಕು, ದಂಡಿಸದೆ ಬಿಡತಕ್ಕದ್ದಲ್ಲವು ಎಂದು, ವಧಾರ್ಹರಾಗಿದ್ದರೂ ಕೂಡ, "ದುಷ್ಟೋಽಪಿ ಶರಣಾಗತೋ ರಕ್ಷಣೀಯಃ" "ಶರಣಾಗತನಾದವನು ದುಷ್ಟನಾಗಿದ್ದರೂ ರಕ್ಷಿಸಲು ಯೋಗ್ಯನೆಂಬ" ವಿಶೇಷ ಶಾಸ್ತ್ರವಿರುವದರಿಂದ ಅಂಥಾವರಿಗೆ ಆರ್ಯೇಣ - ಪೂಜ್ಯನಾದವನಿಂದ, ಕರುಣಂ ಕಾರ್ಯಂ- ಕರುಣೆಯನ್ನು ತೋರಿಸುವದೇ ಯುಕ್ತವು; ಶುಭಕಾರ್ಯ ಮಾಡಿದವರಿಗೆ ಅವರ ಕರ್ಮವೇ ಅವರನ್ನು ರಕ್ಷಿಸುವಹಾಗೆ ನಮ್ಮನ್ನು ಬಲಾತ್ಕರಿಸುತ್ತದೆ. ಪಾಪಮಾಡಿದವರನ್ನು ತಾನೇ ನಾವು ರಕ್ಷಿಸಬೇಕಾದುದು ಎಂಬ ಸ್ವಾರಸ್ಯಾರ್ಥವು. ಹೇ ಪ್ಲವಙ್ಗಮ - ಓ ವಾನರನೇ, ನಿನಗೆ ಯುಕ್ತಾಯುಕ್ತ ಚೇಷ್ಟಾವ್ಯವಸ್ಥೆಯಿಲ್ಲದುದರಿಂದ ನೀನು ಪ್ಲವಙ್ಗಮನೇ ಸರಿ ಎಂಬ ಭಾವವು. ಆದರೆ ದೋಷಿಗಳನ್ನೂ ರಕ್ಷಿಸಿಬಿಡಬಹುದೋ ಎನ್ನುತ್ತೀಯೋ? ನಕಶ್ಚಿನ್ನಾಪರಾಧ್ಯತಿ - ಹಾಗೆ ಅಪರಾಧ ಮಾಡದಿರುವರು ಯಾರಾದರೂ ಈ ಲೋಕದಲ್ಲಿರುತ್ತಾರೋ? ಹಾಗೆ ಪಾಪಕರ್ಮವಿಲ್ಲದಿದ್ದರೆ ನಿತ್ಯವಿಭೂತಿಗೆ ಹೋಗುತ್ತಿದ್ದರೇ ವಿನಾ ಈ ಲೋಕಕ್ಕೆ ಬರುವರೋ? ಯಾವಾಗ ಇಲ್ಲಿಗೆ ಬಂದರೋ ಅವರು ಅಪರಾಧಿಗಳೇ ಸರಿ ಎಂಬ ಭಾವವು. ಆದುದರಿಂದ ಅಂಜನೀಯನಾದ ನೀನು ತಾನೇ ನಿರಪರಾಧಿಯೋ? ನನ್ನ ಉದ್ದಿಶ್ಯವಾಗಿ ನೀನು ಮಾರ್ಗತಪ್ಪಿ ನಡೆದಿಲ್ಲವೋ? ಬ್ರಹ್ಮಚಾರಿಯಾಗಿ ರಾವಣನ ಅಂತಃಪುರ ಸ್ತ್ರೀಯರುಗಳ ಅವಯವಗಳನ್ನೆಲ್ಲಾ ಅವಲೋಕಿಸಿದೆಯಲ್ಲಾ, ಹಾಗೆ ಮಾಡಬಹುದೋ ಎಂಬ ಭಾವವು" ಎಙ್ಗಿರಪಡಿಯೇ - ಎಂದು ಈ ಎರಡು ಪ್ರಮಾಣಗಳಲ್ಲೂ ಹೇಳಿರುವ ಹಾಗೆ, ಪಿರಾಟ್ಟಿಕ್ಕು ಶ್ರೀ ಸೀತಾದೇವಿಗೆ, ಕ್ಷಮಾ ವಿಷಯ ಮಾಯಿಱ್ಱಿಲ್ಲೈಯೋ ಎನ್ನಿಲ್ - ಮೇಲೆ ಹೇಳಲ್ಪಟ್ಟ ರಾಕ್ಷಸ ಸ್ತ್ರೀಯರುಗಳ ಬುದ್ಧಿಪೂರ್ವಾಪಚಾರಗಳು ಮನ್ನಿಸಲು ಯೋಗ್ಯವಾದವು ಆಗಲಿಲ್ಲವೋ ಎಂದು ಆಕ್ಷೇಪಿಸಿದರೆ; ಮೊದಲು ಈ ರಾಕ್ಷಸಸ್ತ್ರೀಯರುಗಳಿಗಾಗಿ ತ್ರಿಜಟೆಯು ಸೀತೆಯ ಪಾದದಲ್ಲಿ ಶರಣಾಗತಿಯನ್ನು ಮಾಡಿದಳು; ಈ ಶರಣಾಗತ್ಯನು

ನ್ನಿಲ್, ಅನ್ವಿಡತ್ತಿಲುಮ್ ಅವರ್‌ಗಳುಕ್ಕು ತಿರುವಡಿ ನಲಿಯಪ್ಪುಗಿರಾನೆಜ್ಞರ ಭಯಮ್‌ವಿಳೈನ್ನು, ನಲಿವುಕ್ಕು ವಿಲಕ್ಕುಣ್ಣಾನಪಡಿಯಾಲೇ ವಾಳಾಲೇ ಯೋಂಗಿ ವಿಡುವಾಪ್ಪೋಲೆ ದಂಡಲೇಶಮುಮ್ ಕ್ಷಮೈಯುಮ್ ಸಿದ್ಧಮ್.

ಸ್ನಾನವಾದನಂತರವೂ ರಾವಣವಧೆಯುವರಿವಿಗೂ ರಾವಣನಿಗೆ ದಾಸಿಗಳಾದುದರಿಂದ ಆತನ ಇಷ್ಟಾನುಸಾರವಾಗಿ ಸೀತೆಯ ಸನ್ನಿಧಿಯಲ್ಲಿ ಬುದ್ಧಿಪೂರ್ವಾಘವನ್ನು ಮಾಡಿರುತ್ತಾರೆ. ಆದರೂ ಅನುಗ್ರಹಮಯಳಾದ ಸೀತೆಯು ಅಂಥಾವರನ್ನೂ ಕೂಡ ಮನ್ನಿಸಿಬಿಟ್ಟದ್ದರಿಂದ, ಬುದ್ಧಿಪೂರ್ವಾಘವೂ ಶರಣಾಗತಿ ಮಾಹಾತ್ಮ್ಯೆಯಿಂದ ಪ್ರಪನ್ನನಿಗೆ ಸಂಬಂಧಿಸುವದಿಲ್ಲವೆಂದು ತೋರುತ್ತದೆಯಲ್ಲಾ ಎಂದಾಕ್ಷೇಪವನ್ನು ತಂದರೆ, ಅದಕ್ಕೆ ಮುಂದಿನ ವಾಕ್ಯಶೇಷದಿಂದ ಸಮಾಧಾನ ಹೇಳುತ್ತಾರೆ ಅನ್ವಿಡತ್ತಿಲುಮ್-ಆ ಸಂದರ್ಭದಲ್ಲೂ, ಅವರ್‌ಗಳುಕ್ಕು - ಆ ರಾಕ್ಷಸಸ್ತ್ರೀಯರುಗಳಿಗೆ, ತಿರುವಡಿ-ಆಂಜನೇಯನು (ತಿರುವಡಿ ಎಂದರೆ ಪಾದಸೇವಕನು ಎಂಬರ್ಥವು. ಪೆರಿಯ ತಿರುವಡಿ ಎಂದರೆ ಗರುತ್ಮಾರವರಿಗೆ ಹೆಸರು, ಚಿನ್ನ ತಿರುವಡಿ ಅಥವಾ ಶಿರಿಯ ತಿರುವಡಿ ಎಂದರೆ ಆಂಜನೇಯನಿಗೆ ಹೆಸರು) ನಲಿಯಪುಗುಗಿರಾ - ಚಿತ್ರವಧೆಯನ್ನು ಮಾಡುವನು, ಎಜ್ಞರ ಭಯಮ್ ವಿಳೈನ್ನು - ಎನ್ನುವ ಭಯವನ್ನು ಹುಟ್ಟಿಸಿ, ನಲಿವುಕ್ಕು ವಿಲಕ್ಕುಣ್ಣಾನ ಪಡಿಯಾಲೇ - ಆ ವಧೆಗೆ ಸೀತೆಯು ಕ್ಷಮಾಗುಣದಿಂದ ಬಿಡುಗಡೆ ಉಂಟಾದುದರಿಂದ, ವಾಳಾಲೆ ಓಂಗಿ – ಕತ್ತಿಯನ್ನು ಝುಳಪಿಸಿ, ವಿಡುವಾಪ್ಪೋಲೆ – ಅನಂತರ ಕ್ಷಮಿಸಿ ಬಿಡುವಹಾಗೆ ಎಂದರೆ ಕತ್ತಿಯಿಂದ ಕಡಿದುಬಿಡುತ್ತೇನೆ ನೋಡು ಎಂದು ಕತ್ತಿಯನ್ನು ಬೀಸಿ, ಅನಂತರ ಈ ಸಲವೇನೋ ಬಿಟ್ಟಿರುತ್ತೇನೆ, ಇನ್ನೊಂದು ಸಲ ಹೀಗೆಯೇ ಮಾಡಿದುದಾದರೆ ಎರಡಾಗಿ ಕತ್ತರಿಸಿಬಿಡುವೆನೆಂದು ಕತ್ತಿಯನ್ನು ಹಿಂತೆಗೆದಹಾಗೆ, ದಣ್ಡಲೇಶಮುಮ್ - ಪ್ರಾಣಹೋದಹಾಗೆ ಭಯವನ್ನುಂಟುಮಾಡಿದುದರಿಂದ ದಂಡಲೇಶವೂ, ಕ್ಷಮೈಯುಮ್ - ಸೀತಾದೇವಿಯು ತೋರಿಸಿದ ಕ್ಷಮೆಯೂ ಸಹ, ಸಿದ್ಧಮ್ - ಇಲ್ಲಿ ಸುವ್ಯಕ್ತವು.

ಆದರೆ ಕೆಲವು ದೊಡ್ಡವರೂ ಬುದ್ಧಿಪೂರ್ವಾಘದ ಲೇಪನವು ಪ್ರಪನ್ನನಿಗೆ ಲೇಪಿಸುವದಿಲ್ಲವೆಂದು ಅಭಿಪ್ರಾಯಪಟ್ಟರಲ್ಲಾ, ಅದೇಕೆ ಹಾಗೆ ಅಭಿಪ್ರಾಯ ಪಟ್ಟರು? ಅವರುಗಳಿಗೆ ಪ್ರಮಾಣವಾಕ್ಯಗಳೇನೂ ಇಲ್ಲವೋ! ಹಾಗೆ ಯಾವುದೂ ಇಲ್ಲವಾದರೂ ಹಾಗೇಕೆ ಹೇಳಿದರು? ಅವು ಸರಿಯಾದ ಅಭಿಪ್ರಾಯಗಳಲ್ಲವಾದರೂ ಹಾಗೆ ಹೇಳಲು ಕಾರಣವೇನೆಂದರೆ, ಮುಂದಿನ ವಾಕ್ಯದಿಂದ "ಅಗ್ನಿಯಾಲ್" ಎಂದು ಪ್ರಾರಂಭಿಸಿ, ಶರಣ್ಯನ ಕಲ್ಯಾಣಗುಣಗಳ ಪ್ರಭಾವಕ್ಕೆ

ಆಗೈಯಾಲ್ ಪ್ರಪನ್ನನುಕ್ಕು ಬುದ್ಧಿಪೂರ್ವೋತ್ತರಾಘಮ್ ಲೇಪಿಯಾದೆನ್ರು ವಿಶೇಷಿತ್ತು ಚೊಲ್ಲುವದೊರು ಪ್ರಮಾಣಮನ್ರಿಕ್ಕೇಯಿರುಕ್ಕ, ಇವನುಕ್ಕು ಪಿನ್ಬು ಬುದ್ಧಿಪೂರ್ವಾಪರಾಧಮ್ ಪಿರಿನ್ದಾಲುಮ್ ಕ್ಷಮೈಕೊಳ್ಳವೇಣ್ಡಾವೆನ್ರುಮ್, ಕ್ಷಮೈಕೊಳ್ಳಾವಿಡಲುಮ್ ಶಿಕ್ಷಾರೂಪಮಾನ ದಂಡ ವಿಶೇಷಮಿಲ್ಲೈ ಎನ್ರುಮ್, ವಿಳಂಬಾಕ್ಷಮರುಕ್ಕು ಪರಮ ಫಲತ್ತುಕ್ಕು ವಿಳಂಬಮ್ ವಾರಾದೆನ್ರುಮ್, ಪ್ರಾರಬ್ಧಸುಕೃತ ವಿಶೇಷಾದಿಗಳಾಲೇ ವರುಮಿಙ್ಙಿಕೈಙ್ಕರ್ಯತ್ತುಕ್ಕು ವಿಚ್ಛೇದ ಸಙ್ಕೋಚಙ್ಗಳ್

ಕಟ್ಟುಬಿದ್ದೋ, ಇಲ್ಲವೇ ಶರಣಾಗತಿ ಪ್ರಭಾವಕ್ಕೆ ಮೋಹಿತರಾಗಿಯೋ, ಹಾಗೆ ಹೇಳಿರುತ್ತಾರೆಂದು ತಿಳಿಸುತ್ತಾರೆ :—**ಆಗೈಯಾಲ್** - ಪ್ರಾಯಶ್ಚಿತ್ತವಿಲ್ಲದ ಬುದ್ಧಿಪೂರ್ವಕವಾದ ಉತ್ತರಾಘಕ್ಕೆ ಅಲ್ಪದಂಡನೆಯೂ, ಕ್ಷಮೆಯೂ ಸಿದ್ಧವಾದುದರಿಂದ, **ಪ್ರಪನ್ನನುಕ್ಕು** - ಶರಣಾಗತಿಯನ್ನನುಷ್ಠಿಸಿದವನಿಗೆ, **ಬುದ್ಧಿಪೂರ್ವೋತ್ತರಾಘಂ** - ಪ್ರಪದನಾನಂತರ ಮಾಡುವ ಬುದ್ಧಿಪೂರ್ವಕವಾದ ಅಪರಾಧವು, **ಲೇಪಿಯಾದು** - ಸಂಬಂಧಿಸುವದಿಲ್ಲವು, **ಎನ್ರು** - ಎಂಬುದಾಗಿ, **ವಿಶೇಷಿತ್ತು ಚ್ಚೊಲ್ಲುವದು** - ವಿಶೇಷಿಸಿ ಹೇಳುವಂಥಾ, ವ್ಯಕ್ತವಾಗಿ ಹೇಳುವಂಥಾ, **ಒರು ಪ್ರಮಾಣ ಮನ್ರಿಕ್ಕೆ ಇರುಕ್ಕ** - ಒಂದು ಪ್ರಮಾಣವಾದರೂ ಇಲ್ಲದೆ ಇದ್ದರೂ (೧) **ಇವನುಕ್ಕು** - ಈ ಪ್ರಪನ್ನನಿಗೆ, **ಪಿನ್ಬು** - ಶರಣಾಗತಿ ಅನುಷ್ಠಿಸಿದ ನಂತರವೂ, ಬುದ್ಧಿಪೂರ್ವವಾದ ಅಪರಾಧವು, **ಪಿರಿನ್ದಾಲುಮ್** - ಉಂಟಾದರೂ, **ಕ್ಷಮೈಕೊಳ್ಳವೇಂಡಾವೆನ್ರುಮ್** - ಕ್ಷಮಿಸು ಎಂದು ಬೇಡುವ ಅವಶ್ಯಕತೆ ಇಲ್ಲವೆಂದೂ ಎಂದರೆ ಪ್ರಾಯಶ್ಚಿತ್ತ ಮಾಡಿಕೊಳ್ಳುವಾವಶ್ಯಕತೆಯಿಲ್ಲವೆಂದೂ. (೨) ಹಾಗೆ **ಕ್ಷಮೈಕೊಳ್ಳಾವಿಡಲುಮ್** - ಸರ್ವೇಶ್ವರನ ಕ್ಷಮೆಯನ್ನು ಬೇಡದಿದ್ದರೂ ಕೂಡ, ಎಂದರೆ ಪ್ರಾಯಶ್ಚಿತ್ತವನ್ನನುಷ್ಠಿಸದೇ ಇದ್ದರೂ, **ಶಿಕ್ಷಾರೂಪಮಾನ ದಂಡಲೇಶ ಮಿಲ್ಲೈ ಎನ್ರು** - ಶಿಕ್ಷಾರೂಪವಾದ ಅಲ್ಪದಂಡನೆಯೂ ಇಲ್ಲವೆಂದೂ, (೩) **ವಿಳಂಬಾಕ್ಷಮರುಕ್ಕು** – ಸಾವಕಾಶವನ್ನು ತಡೆಯದವರಿಗೆ, **ಪರಮಫಲತ್ತುಕ್ಕು** – ಸರ್ವೋತ್ಕೃಷ್ಟ ಫಲವಾದ ಭಗವಂತನ ಪ್ರಾಪ್ತಿ ಅವನ ಕೈಙ್ಕರ್ಯಪ್ರಾಪ್ತಿ, ಇವುಗಳಿಗೆ ವಿಳಂಬವು, **ವಾರಾದೆನ್ರುಮ್** - ಬರುವದಿಲ್ಲವೆಂದೂ, (೪) **ಪ್ರಾರಬ್ಧಸುಕೃತ ವಿಶೇಷಙ್ಗಳಾಲೇ** - ಪ್ರಾರಬ್ಧಕರ್ಮದ ಸುಕೃತ ವಿಶೇಷಗಳಿಂದ, **ವರುಮ್**-ಉಂಟಾಗುವ, **ಇಙ್ಙಿಕೈಙ್ಕರ್ಯತ್ತುಕ್ಕು**-ಇಲ್ಲಿನ ಕೈಙ್ಕರ್ಯಗಳಿಗೆ **ವಿಚ್ಛೇದ ಸಙ್ಕೋಚಙ್ಗಳ್** – ಚ್ಯುತಿ ನ್ಯೂನತೆಗಳು **ವಾರಾದೆನ್ರುಮ್** - ಬರುವದಿಲ್ಲವೆಂದೂ. **ಶೊಲ್ಲುಗಿರ ಪಕ್ಷಙ್ಗಳ್** - ಹೇಳುವ

ನಾರಾದೆನ್ನುಮ್‌, ಶೊಲ್ಲುಗಿರಪಕ್ಷಙ್ಗಳ್‌ ಶರಣ್ಯನುಡೈಯ ಗುಣಙ್ಗಳೈ ಯುಮ್‌, ಶರಣಾಗತಿಯುಡೈಯ ಪ್ರಭಾವತ್ತೈಯುಮ್‌ ಶೊಲ್ಲುಗೈಕ್ಕಾಗ ವತ್ತನ್ನೈ.

ಬುದ್ಧಿ ಪೂರ್ವೋತ್ತರಾಘಾ ಶ್ಲೇಷೋಕ್ತೇ ಬಾಧಕವಾಹ

ಇಪ್ಪಡಿ ಯಲ್ಲಾದ ಪೋದು ಪ್ರಪನ್ನರಾನ ಪೂರ್ವರ್‌ಗಳುಡೈಯ

ಭಿನ್ನಾಭಿಪ್ರಾಯಗಳು, ಶರಣ್ಯನುಡೈಯ - ಸರ್ವಲೋಕ ರಕ್ಷಕನ, ಗುಣಙ್ಗಳೈ ಯುಮ್‌ - ಕೃಪೌದಾರ್ಯವೇ ಮೊದಲಾದ ಕಲ್ಯಾಣಗುಣಗಳನ್ನೂ ಶರಣಾಗತಿಯ ಪ್ರಭಾವವನ್ನೂ, ಶೊಲ್ಲುಗೈಕ್ಕಾಗವತ್ತನ್ನೈ - ಹೇಳುವದಕ್ಕಾಗಿ ಈ ಮಹನೀಯರು ಹೇಳಿದ ಮಾತೇ ವಿನಾ ಆ ನಾಲ್ಕು ಅಭಿಪ್ರಾಯಗಳು ಸರಿಯಾದವಲ್ಲವು ಎಂಬ ಭಾವವು. ಈ ನಾಲ್ಕು ಅಭಿಪ್ರಾಯಗಳು ಯಾವುವೆಂದರೆ:—

೧. ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವು ಬೇಕಿಲ್ಲ, ಸ್ವಾಮಿಯು ಅದನ್ನು ಮನ್ನಿಸುವನು.

೨. ಅದಕ್ಕಾಗಿ ಪ್ರಾಯಶ್ಚಿತ್ತಮಾಡದಿದ್ದರೂ ಸರ್ವೇಶ್ವರನು ಶಿಕ್ಷಿಸುವದಿಲ್ಲವು.

೩. ಆದರಿಂದ ಫಲಪ್ರಾಪ್ತಿಗೇನೂ ಆಯುರ್ವೃದ್ಧಿಯುಂಟಾಗುವದರ ಮೂಲಕ ವಿಳಂಬವಾಗುವದಿಲ್ಲವು.

೪. ಪ್ರಾರಬ್ಧಕರ್ಮದ ಸುಕೃತ ವಿಶೇಷದಿಂದುಂಟಾಗುವ ಕೈಂಕರ್ಯಕ್ಕೆ ಚ್ಯುತಿ ಅಥವಾ ನ್ಯೂನತೆಯುಂಟಾಗುವದಿಲ್ಲವು

ಈ ಅಭಿಪ್ರಾಯಗಳು ಸರಿಯಾದವಲ್ಲವು, ಆದರೂ ಈ ಅಭಿಪ್ರಾಯಗಳು ಏನು ಸೂಚಿಸುತ್ತವೆ ಎಂದರೆ, ಸರ್ವ ಶರಣ್ಯನ ಕೃಪೌದಾರ್ಯ ಮೊದಲಾದ ಕಲ್ಯಾಣ ಗುಣಗಳ ಮಾಹಾತ್ಮ್ಯೆಯನ್ನೂ ಶರಣಾಗತಿಯ ಪ್ರಭಾವವನ್ನೂ ಸೂಚಿಸುತ್ತವೇ ವಿನಾ ಬೇರೆ ಇನ್ನೇನೂ ಇಲ್ಲವು. ಇವುಗಳಿಗೆ ಇರುವ ಮಾಹಾತ್ಮ್ಯೆಯನ್ನು ಮನಸ್ಸಿನಲ್ಲಿಟ್ಟು ಹಾಗೆ ಹೇಳಿಬಿಟ್ಟರೆಂಬ ಭಾವವು.

ಬುದ್ಧಿಪೂರ್ವೋತ್ತರಾಘವು ಲೇಪಿಸದು ಎಂದು ಹೇಳುವದ ರಿಂದುಂಟಾಗುವ ಬಾಧಕಗಳು.

ಬುದ್ಧಿಪೂರ್ವೋತ್ತರಾಪರಾಧಗಳ ವಿಷಯದಲ್ಲಿ ಪ್ರಾಯಶ್ಚಿತ್ತವನ್ನವಿಧಿಸ ದಿದ್ದ ಪಕ್ಷದಲ್ಲಿ ಅಪರಾಧ ಉಂಟು ಎಂದು ಒಪ್ಪಿಕೊಳ್ಳಬೇಕೆಂದು ಸಮರ್ಥನವಾ

ಅನುಷ್ಠಾನ ಪರಂಪರೈಕ್ಕುಮ್, ಪ್ರಪನ್ನರೈಪ್ಪಱ್ಱವೇ ಪ್ರಾಯಶ್ಚಿತ್ತಮ್ ವಿಧಿಕ್ಕಿರ ಶಾಸ್ತ್ರತ್ತುಕ್ಕುಮ್, ಮೋಕ್ಷಮ್ ಪೆರುಗೈಕ್ಕು ಕಾಲಙ್ಕುರಿತ್ತು ಪ್ರಪತ್ತಿ ಪಣ್ಣಾದೇ ಅನುವೃತ್ತ ಬುದ್ಧಿಪೂರ್ವಾಪರಾಧರುಮಾಯ್ ವಿಳಂಬಾಕ್ಷಮರುಮಾಯ್, ಇರುಪ್ಪಾರ್ಕ್ಕು ವಿಳಂಬಮ್ ಶೊಲ್ಲುಕಿರ ಪ್ರಮಾಣಙ್ಗಳುಕ್ಕುಮ್, ಶೇರಾದು.

ಡಿಪುದು ಹಾಗಿರಲಿ; ಕರುಣಾಸಾಗರನಾದುದರಿಂದ ಪ್ರಪನ್ನನಲ್ಲಿ ಆತನಿಗಿರುವ ಪ್ರೀತ್ಯತಿಶಯದಿಂದ ಅಂತಹ ಅಪರಾಧಗಳನ್ನೂ ಕೂಡ ಮನ್ನಿಸಿಬಿಡುವನು ಎಂದು ಒಪ್ಪಿಕೊಂಡರೆ ಬಾಧಕವೇನು? ಹಾಗೆ ಮನ್ನಿಸಿಬಿಡುವನೆಂಬುವದಕ್ಕೆ ಪ್ರಮಾಣರೂಪದಲ್ಲಿ ವಿಶೇಷೋಕ್ತಿಯಿಲ್ಲದಿದ್ದರೆ ಸಾಮಾನ್ಯವಾಗಿ **"ಏವಮೇವಂ ವಿದಿ ಕರ್ಮ ನ ಶ್ಲಿಷ್ಯತೇ" "ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಇತ್ಯಾದಿ ಪ್ರಮಾಣಗಳಲ್ಲಿ ಸಮಸ್ತ ಪಾಪಗಳ ನಾಶವೂ ತೋರಿಬರುವದರಿಂದ, ಈ ಬುದ್ಧಿಪೂರ್ವೋತ್ತರಾಘಗಳು ಲೇಪಿಸುವದಿಲ್ಲವೆಂದು ಹೇಳುವದರಿಂದ ಬಾಧಕವೇನು ಎಂಬುವದಕ್ಕೆ ಉತ್ತರವನ್ನು ಮುಂದೆ ಅನುಗ್ರಹಿಸುತ್ತಾರೆ.

ಇಪ್ಪಡಿ ಯಲ್ಲಾದಪೋದು - ಪ್ರಾಯಶ್ಚಿತ್ತವಿಲ್ಲದ ಬುದ್ಧಿಪೂರ್ವೋತ್ತರಾಘದ ವಿಷಯದಲ್ಲಿ ಅಲ್ಪ ದಂಡನೆಯುಂಟು ಎಂದು ಅಂಗೀಕರಿಸದೇ ಹೋದರೆ, **ಪ್ರಪನ್ನರಾನ ಪೂರ್ವರುಗಳುಡೈಯ ಅನುಷ್ಠಾನಪರಂಪರೈಕ್ಕುಮ್** - ಪ್ರಪನ್ನರಾದ ಹಿಂದಿನ ಮಹನೀಯರುಗಳ ಕ್ರಮಾಗತವಾಗಿ ಬಂದ ಅನುಷ್ಠಾನಗಳಿಗೂ, **ಪ್ರಪನ್ನರೈಪ್ಪಱ್ಱ** - ಪ್ರಪನ್ನರನ್ನೇ ಮುಖ್ಯವಾಗಿ ಕುರಿತು, **ಪ್ರಾಯಶ್ಚಿತ್ತಮ್ ವಿಧಿಕ್ಕಿರ ಶಾಸ್ತ್ರತ್ತುಕ್ಕುಮ್** - ಪ್ರಾಯಶ್ಚಿತ್ತವನ್ನು ವಿಧಿಸಿರುವ ಶಾಸ್ತ್ರಕ್ಕೂ, **ಮೋಕ್ಷಮ್ ಪೆರುಗೈಕ್ಕು ಕಾಲಙ್ಕುರಿತ್ತು ಪ್ರಪತ್ತಿ ಪಣ್ಣಾದೆ** - ಮೋಕ್ಷವನ್ನು ಪಡೆಯುವುದಕ್ಕೆ ಇಂತಹ ಕಾಲವೆಂದುದ್ದೇಶಿಸಿ ಪ್ರಪತ್ತಿಯನ್ನನುಷ್ಠಿಸದೇ, **ಅನುವೃತ್ತ ಬುದ್ಧಿಪೂರ್ವಾಪರಾಧರುಮಾಯ್** - ಅನುಸರಿಸಿ ಬಂದ ಬುದ್ಧಿಪೂರ್ವಕವಾದ ಅಪರಾಧವನ್ನುಳ್ಳವರಾಗಿಯೂ **ವಿಳಂಬಾಕ್ಷಮರುಮಾಯ್** - ಮೋಕ್ಷಪ್ರಾಪ್ತಿಗೆ ವಿಳಂಬವನ್ನು ಸಹಿಸದವರಾಗಿಯೂ. **ಯಿರುಪ್ಪಾರ್ಕ್ಕು** - ಇರುವವರಿಗೆ. **ವಿಳಂಬಂ ಶೊಲ್ಲುಗಿರ** - ಅದಕ್ಕಾಗಿ ಅಲ್ಪ ದಂಡನೆಯನ್ನು ಹೊಂದಲು ಬೇಕಾದ ಆಯುರ್ವೃದ್ಧಿಮೂಲಕ ಉಂಟಾಗುವ ವಿಳಂಬವನ್ನು ಹೇಳುವ. **ಪ್ರಮಾಣಙ್ಗಳುಕ್ಕು** - ಪ್ರಮಾಣಗಳಿಗೆ ಸಾಕ್ಷಾದ್ವಿರುದ್ಧವಾದ ಅಭಿಪ್ರಾಯವಾಗುತ್ತದೆಂಬ ಭಾವವು. ಬುದ್ಧಿಪೂರ್ವೋತ್ತರಾಘವನ್ನೂ ಕೂಡ

ಸರ್ವೇಶ್ವರನು, ತನ್ನಲ್ಲಿ ಶರಣಾಗತಿಮಾಡಿ ಪ್ರಪನ್ನನೆನಿಸಿದವನಲ್ಲಿರುವ ಪ್ರೀತ್ಯತಿಶಯದಿಂದ ಸಂಪೂರ್ಣವಾಗಿ ಕ್ಷಮಿಸಿ ಬಿಡುವನು ಎಂದು ಹೇಳಿದರೆ ಮೂರು ವಿಧವಾದ ವಿರೋಧಗಳು ಪ್ರಾಪ್ತವಾಗುತ್ತವೆ ಎಂದು ಹೇಳಿರುತ್ತಾರೆ:—

೧. ಅನೇಕ ಪ್ರಪನ್ನರು ತಮಗೆ ಪ್ರಾಪ್ತವಾದ ಬುದ್ಧಿಪೂರ್ವೋತ್ತರಾಘಕ್ಕಾಗಿ ಪ್ರಾಯಶ್ಚಿತ್ತವನ್ನನುಷ್ಠಿಸಿರುತ್ತಾರೆ:—ಇಂತಹ ಕ್ರಮಾಗತವಾಗಿ ಬಂದ ಅನುಷ್ಠಾನಗಳಿಗೆ ವಿರುದ್ಧವಾದುದಾಗುತ್ತದೆ. ಭಾಗವತೋತ್ತಮರುಗಳು ತಮಗೆ ಪ್ರಾಪ್ತವಾದ ಪರಸ್ಪರಾಪಚಾರಗಳಿಗಾಗಿ ದಂಡವತ್ಪ್ರಮಾಣಗಳ ಮೂಲಕ ಪ್ರಾಯಶ್ಚಿತ್ತಮಾಡಿಕೊಂಡಿರುತ್ತಾರೆ:—ಸುಗ್ರೀವನು ಮಾಡಿದ ಪ್ರತಿಜ್ಞೆಯನ್ನು ಮರೆತು ಭಗವದಪರಾಧವನ್ನು ಮಾಡಿದುದರಿಂದ ಮಹಾಭಾಗವತನಾದ ಆಂಜನೇಯನಿಂದ

"ಕೃತಾಪರಾಧಸ್ಯ ಹಿತೇ ನಾನ್ಯಂ ಪಶ್ಯಾಮ್ಯಹಂ ಕ್ಷಮಂ ।
ಅಂತರೇಣಾಂಜಲಿಂ ಬಧ್ವಾ ಲಕ್ಷ್ಮಣಸ್ಯ ಪ್ರಸಾದನಾತ್ ॥

ಎಂಬದಾಗಿ ಭಗವದಪರಾಧಕ್ಕೆ ಮಹಾಭಾಗವತನ ಕ್ಷಮಾಪಣೆಯೇ ಪ್ರಾಯಶ್ಚಿತ್ತವೆಂದು ಉಪದೇಶಿಸಲ್ಪಟ್ಟವನಾಗಿ,

"ಯದಿ ಕಿಂಚಿದತಿಕ್ರಾಂತಂ ವಿಶ್ವಾಸಾತ್ಪ್ರಣಯೇನವಾ ।
ಪ್ರೇಷ್ಯಸ್ಯ ಕ್ಷಮಿತವ್ಯಂ ಮೇ ನ ಕಶ್ಚಿನ್ನಾಪರಾಧ್ಯತಿ"

ಎಂದು ಮಹಾಭಾಗವತನಾದ ಲಕ್ಷ್ಮಣನ ಕ್ಷಮಾಪಣೆಯನ್ನು ಬೇಡಿದನು. ಇದನ್ನು ಕಂಡು ಲಕ್ಷ್ಮಣನು, ಸುಗ್ರೀವನನ್ನು ಕುರಿತು ತುಂಬಾ ನಿಷ್ಠುರೋಕ್ತಿಗಳನ್ನು ಪ್ರಯೋಗಿಸಿದುದರಿಂದ, ತನಗೆ ಭಾಗವತಾಪಚಾರವು ಸಂಘಟಿಸಿತೆಂದು ಭೀತನಾಗಿ

"ಯಚ್ಚ ಶೋಕಾಭಿಭೂತಸ್ಯ ಶ್ರುತ್ವಾ ರಾಮಸ್ಯ ಭಾಷಿತಂ ।
ಮಯಾ ತ್ವಂ ಪರುಷಾಣ್ಯುಕ್ತಸ್ತಚ್ಚ ತ್ವಂ ಕ್ಷಂತುಮರ್ಹಸಿ ॥

ಶ್ರೀರಾಮನು ಬಹು ದುಃಖಾಕ್ರಾಂತನಾಗಿ ಆಡಿದ ಮಾತುಗಳು ತುಂಬಾ ನನ್ನ ಮನವನ್ನು ನೋಯಿಸಿದುದರಿಂದ ನಾನು ನಿನ್ನನ್ನು ಕುರಿತು ಯಾವ ನಿಷ್ಠುರೋಕ್ತಿಗಳನ್ನು ಪೇಳಿದೆನೋ, ಅವೆಲ್ಲವನ್ನೂ ನೀನು ದಯವಿಟ್ಟು ಕ್ಷಮಿಸತಕ್ಕದ್ದೆಂದು ಸುಗ್ರೀವನನ್ನು ಕುರಿತು ಪ್ರಾರ್ಥಿಸಿದನು. ಇಲ್ಲಿ ಇಬ್ಬರೂ ಪ್ರಪನ್ನರೇ. ಇದರಿಂದ ಬುದ್ಧಿಪೂರ್ವಕವಾದ ಅಪರಾಧಗಳು ಇಬ್ಬರಿಗೂ ಉಂಟಾದವು. (೧೩೦ನೆಯ ಪುಟ ನೋಡಿ) ಭಾಗವತ ಶಿಖಾಮಣಿಯಾದ ಅಂಬರೀಷನಿಗೆ ಮಾಡಿದ ಅಪರಾಧಕ್ಕಾಗಿ ದುರ್ವಾಸಮುನಿಗೆ ಸರ್ವೇಶ್ವರನು **"ತಮೇವ ಶರಣಂಗಚ್ಛ"** ಆ ಅಂಬರೀಷನನ್ನೇ ಶರಣಹೊಂದು ಎಂದು ಉಪದೇಶಿಸಿದ ಹಾಗೆ, ಇಲ್ಲಿಯೂಕೂಡ ಇಬ್ಬರೂ ಪರಸ್ಪರ ಕ್ಷಮಾಪಣೆಯನ್ನು ಮಾಡಿಕೊಂಡಿರುತ್ತಾರೆ. ಹೀಗೆಯೇ ಇತರ ಪ್ರಪನ್ನರೂ ಕೂಡ ಅನುಷ್ಠಿಸಿರುತ್ತಾರೆಂಬೂ ಅಂತಹ ಅನುಷ್ಠಾನಕ್ಕೆ ಆ ಅಭಿಪ್ರಾಯವು ವಿರೋಧವಾ

(೧) "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ರ ಸಾಮಾನ್ಯೇನ ಚೊಲ್ಲ ಚೆಯ್‌ದೇಯುಮ್,

ಗುತ್ತದೆ ಎಂಬ ತಾತ್ಪರ್ಯವು. ಮೇಲೆ ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಪ್ರಮಾಣಗಳೆಲ್ಲಾ ಸಾಮಾನ್ಯ ವಚನಗಳಾಗಿರುವದರಿಂದ ಪ್ರಾಮಾದಿಕವಾಗಿ ಪ್ರಾಪ್ತವಾಗುವ ಅಪರಾಧಕ್ಕೆ ಮಾತ್ರವೇ ಅನ್ವಯಿಸುತ್ತದೆಂದು ಊಹಿಸಬೇಕು. ಏಕೆಂದರೆ ಬುದ್ಧಿಪೂರ್ವೋತ್ತರಾಘಕ್ಕೆ ಬೇರೇ ವಿಶೇಷ ವಚನವಿರುವದರಿಂದ ಅದರ ಪ್ರಕಾರ ಅನುವರ್ತಿಸತಕ್ಕದ್ದು. ಆದುದರಿಂದಲೇ ಪೂರ್ವಪ್ರಪನ್ನರ ಅನುಷ್ಠಾನವು ಈ ವಿಶೇಷವನ್ನನುಸರಿಸಿರುವಂಥಾದ್ದೆಂಬ ಭಾವವು.

(೨) ಈ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತ ಉಂಟೆಂದು ಹೇಳುವ ವಿಶೇಷವಿಧಿಯಾದ ಶಾಸ್ತ್ರಪ್ರಮಾಣಕ್ಕೂ ವಿರೋಧವಾದುದಾಗುತ್ತದೆ. ಆ ಶಾಸ್ತ್ರ ಪ್ರಮಾಣವು ಯಾವುದೆಂದರೆ :—

"ಅಪಾಯ ಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್ ।
ಪ್ರಾಯಶ್ಚಿತ್ತಿರಿಯಂ ಸಾತ್ರ ಯತ್ಪುನಃ ಶರಣಂ ವ್ರಜೇತ್"

ಇದನ್ನು ಇವರೇ ಹಿಂದೆ ಉದಾಹರಿಸಿರುತ್ತಾರೆ. ಇದು ಪ್ರಪನ್ನನ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವೆಂಬುವದರಲ್ಲಿ ಸಂದೇಹವಿಲ್ಲವು. ಯತ್ಪುನಃ ಶರಣಂ ವ್ರಜೇತ್ ಎಂಬುವದರಿಂದಲೇ ಸುವ್ಯಕ್ತವು.

(೩) ಮೋಕ್ಷಪ್ರಾಪ್ತಿಗೆ ವಿಳಂಬ ಬೇಡವೆನ್ನುವವರಿಗೆ ಶಿಕ್ಷೆಗಾಗಿ ವಿಳಂಬವನ್ನು ವಿಧಿಸುವ ಶಾಸ್ತ್ರಕ್ಕೂ ವಿರುದ್ಧವಾಗುತ್ತದೆ.

"ಅಪಾಯಾವಿರತಶ್ಚಸ್ವನ್ಮಾಂ ಚೈವ ಶರಣಂ ಗತಃ ।
ಕಸೂಕೃತ್ಯಾಖಿಲಂ ಪಾಪಂ ಮಾಮಾಪ್ನೋತಿ ನರಶ್ಚಸ್ವೈಃ

ಎಂಬುವದು ವಿಳಂಬಸೂಚಕ ಪ್ರಮಾಣವು. ಇದರರ್ಥವೇನೆಂದರೆ :—ನನ್ನನ್ನೇ ಶರಣ ಹೊಂದಿದ್ದರೂ, ಹಾಗೆ ಶರಣ ಹೊಂದಿದನಂತರವೂ ಬಾರಿಬಾರಿಗೂ ಅಪರಾಧಗಳನ್ನು ಮಾಡಿದುದಾದರೆ, ಅಂತಹ ಮನುಷ್ಯನು ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ, ಆ ಸರ್ವಪಾಪವನ್ನೂ ಅನುಭವಿಸುವುದರಿಂದ ಕ್ಷೀಣವಾಗುವ ಹಾಗೆ ಮಾಡಿ ಎಂದರೆ ನಾಶಗೊಳಿಸಿ, ಕಾಲವಿಳಂಬದಿಂದ ನನ್ನನ್ನು ಸೇರುವನು ಎಂಬದಾಗಿ ಲಕ್ಷ್ಮೀವಾಕ್ಯವು. ಇದರಿಂದ ಉತ್ತರಾಘಗಳಿಗಾಗಿ ಶಿಕ್ಷೆಯನ್ನನುಭವಿಸುವದಕ್ಕಾಗಿ ಆಯುರ್ವೃದ್ಧಿಯುಂಟಾಗುವದರಿಂದ ವಿಳಂಬವು ಪ್ರಾಪ್ತವಾಗುತ್ತದೆಂಬ ಭಾವವು. ಈ ವಾಕ್ಯದಿಂದ ಲಕ್ಷ್ಮಿಗೂ ಸಹ ನಾರಾಯಣನ ಹಾಗೆ ಬುದ್ಧಿಪೂರ್ವೋತ್ತರಾಘಗಳನ್ನು ಹೋಗಲಾಡಿಸುವ ಶಕ್ತಿಯುಂಟೆಂದೂ ಪ್ರಾಯ

(೨) "ಪ್ರಾಯಶ್ಚಿತ್ತಿರಿಯಂ ಸಾತ್ರ ಯತ್ಪುನಶ್ಶರಣಂ ವ್ರಜೇತ್" ಎನ್ನು ವಿಶೇಷಿಕ್ಕೈಯಾಲೇ ಬುದ್ಧಿಪೂರ್ವೋತ್ತರಾಘತ್ತುಕ್ಕು ಪ್ರಪತ್ತ್ಯನಂತರಂ ಪ್ರಾಯಶ್ಚಿತ್ತವಾಗ ಪ್ರಾಪ್ತಮಾಯಿತ್ತು[2].

ತ್ತಿ ಶರಣಾಗತಿಯನ್ನು ಲಕ್ಷ್ಮಿಯು ಸಾನ್ನಿಧ್ಯದಲ್ಲೂ ಮಾಡಬಹುದೆಂದೂ, ತೋರಿಬರುತ್ತದೆ. ಮಾಂಚ ಎಂಬ ಚಕಾರವಿರುವದರಿಂದ ಸರ್ವೇಶ್ವರನ ಹಾಗೆಯೇ ಸರ್ವೇಶ್ವರಿಯಾದ ತನಗೂ ಉಂಟೆಂದೂ ತೋರಿಬರುತ್ತದೆ ತುಂಬಾ ವಿಳಂಬದಿಂದ ನನ್ನನ್ನು ಹೊಂದುವನು; ಎಂದರೆ ಬುದ್ಧಿಪೂರ್ವಾಘದ ಫಲವನ್ನನುಭವಿಸುವದಕ್ಕಾಗಿ, ಆಯುರ್ವೃದ್ಧಿಯಿಂದ ವಿಳಂಬ ಉಂಟಾಗುತ್ತದೆಂಬ ಭಾವವು. ಈ ಮೂರು ಕಾರಣಗಳಿಂದಲೂ ಬುದ್ಧಿಪೂರ್ವೋತ್ತರಾಘವೂ ಕೂಡ ಪ್ರಪನ್ನನಿಗೆ ಲೇಪಿಸುವದಿಲ್ಲವೆಂಬಭಿಪ್ರಾಯವು ಸಮಂಜಸವಾದುದಲ್ಲವು ಎಂಬ ತಾತ್ಪರ್ಯವು.

ಆದರೆ "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬುವ ಪ್ರಮಾಣದಲ್ಲಿ ಸರ್ವಶಬ್ದವನ್ನುಪಯೋಗಿಸಿರುವದರಿಂದ, ಇದರಲ್ಲಿ ಉತ್ತರಾಘಗಳು ಸೇರಲಿಲ್ಲವೇ ? ಹಾಗೆ ಸೇರಿದರೆ ಪ್ರಾಮಾದಿಕ ಪಾಪಗಳು ಮಾತ್ರವೇ ಪರಿಹೃತವು ಎಂದು ಹೇಗೆ ಹೇಳಲಾಗುತ್ತದೆ? ಬುದ್ಧಿಪೂರ್ವಾಘವು ಸೇರಲಿಲ್ಲವೇ ಎಂದು ಪ್ರಶ್ನಿಸಬಹುದು ಯೆಂದು ಯೋಚಿಸಿ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. "ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಸಮಸ್ತ ಪಾಪಗಳಿಂದ ಬಿಡುಗಡೆ ಮಾಡುತ್ತೇನೆಂದು, ಸರ್ವೇಶ್ವರನು, ಸಾಮಾನ್ಯೇನ ಶೊಲ್ಲಚೆಯ್‌ದೇಯುಮ್- ಎಂದು ಸಾಮಾನ್ಯವಾಗಿ ಹೇಳಿದ್ದರೂ, "ಪ್ರಾಯಶ್ಚಿತ್ತಿರಿಯಂ ಸಾತ್ರಯತ್ಪುನಶ್ಶರಣಂ ವ್ರಜೇತ್ ಎನ್ನು" "ಪುನಃ ಶರಣಾಗತಿಯನ್ನನುಷ್ಠಿಸುವದು ಯಾವುದುಂಟೋ ಅದೇ ಈ ಪ್ರಾಯಶ್ಚಿತ್ತವೆಂದು, ವಿಶೇಷಿಕ್ಕೈಯಾಲೇ - ಅದನ್ನೇ ವಿಶೇಷಿಸಿ ಹೇಳಿರುವದರಿಂದ, ಬುದ್ಧಿಪೂರ್ವಕವಾದ ಉತ್ತರಾಘಕ್ಕೆ, ಪ್ರಪತ್ತ್ಯನಂತರಂ - ಮೊದಲು ಮಾಡಿದ ಪ್ರಪತ್ತಿಯಾದನಂತರ, ಪ್ರಾಯಶ್ಚಿತ್ತವಾಗ ಪ್ರಾಪ್ತಮಾಯಿತ್ತು[2] - ಪ್ರಾಯಶ್ಚಿತ್ತವಾಗಿ ಪುನಶ್ಶರಣಾಗತಿಮಾಡಬೇಕೆಂದು ಸ್ಥಾಪಿತವಾಯಿತು. "ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬುವದು ಸಾಮಾನ್ಯ ವಾಕ್ಯವು, ಇದರಲ್ಲಿ ಸರ್ವ ಶಬ್ದವು ಎಲ್ಲಾ ವಿಧ ಪಾಪಗಳನ್ನು ಬೋಧಿಸಿದರೂ, ಅದರಲ್ಲಿ ಒಂದು ಪಾಪಗಳಿಗೆ ಬೇರೇ ವಿಶೇಷ ವಿಧಿ ಇದ್ದುದಾದರೆ, ಆ ವಿಶೇಷ ವಿಧಿಯು ಆ ವಿಶೇಷ ವಿಧ ಪಾಪಕ್ಕೆ ಮಾತ್ರ ಅನ್ವಯಿಸಿ

---

(೧) ಗೀ. ೧೮. ೬೬. (೨) ಲಕ್ಷ್ಮೀತಂತ್ರ ೧೭-೯೧.

ಪುನಶ್ಶರಣಾಗತಿ ವಾಕ್ಯಸ್ಯ ಅಧಿಕಾರಿ ವಿಶೇಷವಿಷಯತ್ವ ಮಿತಿವಾದಸ್ಯ ನಿರಾಸಃ

ಪುನಶ್ಶರಣಾಗತಿಯೈ ವಿಧಿಕ್ಕಿರ ವಚನತ್ತೈ ಯಡಿಯಿಲೇ ಬುದ್ಧಿ

ಕ್ಕೊಂಡು, ಮಿಕ್ಕ ಎಲ್ಲಾ ವಿಧ ಪಾಪಗಳಿಗೂ ಸಾಮಾನ್ಯ ವಚನವು ಅನ್ವಯಿಸ್ಸುತ್ತದೆಂದು ತಿಳಿಯತಕ್ಕದ್ದು. ಆದುದರಿಂದ **ಸರ್ವಪಾಪೇಭ್ಯಃ** ಎಂಬುವದ್ದು ಸಾಮಾನ್ಯ ವಚನವು, ಇದು ವಿಶೇಷಿಸಿ ಹೇಳುವಂಥಾ ಪಾಪಗಳಿಗೆ ಮಾತ್ರ ಅನ್ವಯಿಸುವದಿಲ್ಲವು. ಅದು ವಿನಾ ಮಿಕ್ಕೆಲ್ಲಾ ವಿಧ ಪಾಪಗಳಿಗೂ ಸಾಮಾನ್ಯ ವಚನವು ಅನ್ವಯಿಸುತ್ತದೆಂದು ತಿಳಿಯತಕ್ಕದ್ದು. ಇದಕ್ಕೆ ನಿದರ್ಶನವಾಗಿ "ನ ಹಿಂಸ್ಯಾತ್" ಪ್ರಾಣಿಹಿಂಸೆ ಮಾಡಕೂಡದೆಂಬ ಸಾಮಾನ್ಯ ವಿಧಿಯುಂಟು. ಸ್ವರ್ಗಕಾಮಿಯು "**ಪಶುಮಾಲಭೇತ**" ಛಾಗಪಶುವನ್ನು ಕೊಂದು ಯಜ್ಞಮಾಡತಕ್ಕದ್ದೆಂಬ ವಿಶೇಷವಿಧಿಯಿದೆ ಆ ಸಾಮಾನ್ಯ ವಚನವಾದ "**ನ ಹಿಂಸ್ಯಾತ್**" ಎಂಬುವದು ಈ ಯಜ್ಞ ಪಶುವಧೆ ಸಂಬಂಧದಲ್ಲಿ ಅನ್ವಯಿಸುವದಿಲ್ಲವು. ಹಾಗೆಯೇ ಈ ಸಂದರ್ಭದಲ್ಲೂ ಎಂದು ಭಾವಿಸತಕ್ಕದ್ದು. ಇದೂ ಅಲ್ಲದೆ **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂದು ಹೇಳಿರುವದರಿಂದ ಪ್ರಪನ್ನನಿಗೆ ಸರ್ವಪಾಪ ವಿಮೋಚನೆಯಿಂದ ಮೋಕ್ಷಪ್ರಾಪ್ತಿಯೆಂದು ಹೇಳಿರುವದರಿಂದ ಬುದ್ಧಿಪೂರ್ವಾಘಯುಕ್ತನೂ ಕೂಡ ಅಲ್ಪದಂಡನೆಯಿಂದ ಶಿಕ್ಷಿಸಲ್ಪಟ್ಟು ಸರ್ವಪಾಪ ವಿಮೋಚನೆಯಿಂದಲೇ ಈತನಿಗೂ ಕೂಡ ಮೋಕ್ಷವಾಗುವದರಿಂದ, ಈ ಎರಡು ವಾಕ್ಯಗಳಿಗೂ ಏನೊಂದೂ ವಿರೋಧವಿಲ್ಲವು.

ಆದುದರಿಂದ ಪ್ರಪನ್ನನ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವುಂಟೆಂದು ಈ ಮೇಲಿನ ವಾಕ್ಯದಿಂದ ಸ್ಥಾಪಿಸಿ ಹೇಳಿದರು.

ಮುಂದೆ ಈ ಅಭಿಪ್ರಾಯಕ್ಕೆ ಕೆಲವು ಪೂರ್ವಪಕ್ಷಗಳು ಬಂದೀತೆಂದು ಭಾವಿಸಿ ಸಮಾಧಾನ ಹೇಳುತ್ತಾರೆ. ಈ ಪ್ರಾಯಶ್ಚಿತ್ತವನ್ನು ವಿಧಿಸುವ ವಿಶೇಷ ವಾಕ್ಯವು, ಪ್ರಥಮ ಪ್ರಪದನ ಕಾಲದಲ್ಲಿ ಬುದ್ಧಿಪೂರ್ವೋತ್ತರಾಘವೂ ಸೇರಿದ ಸಮಸ್ತವಿಧ ಪಾಪಗಳು ತೊಲಗಬೇಕೆಂದು ಪ್ರಾರ್ಥಿಸಿದವರಿಗೆ ಅನ್ವಯಿಸುವದಿಲ್ಲವೆಂದೂ, ಹಾಗೆ ಬುದ್ಧಿಪೂರ್ವೋತ್ತರಾಘ ನಾಶವು ಸಂಕಲ್ಪದಲ್ಲಿ ಸೇರದೆ ಇರುವವರಿಗೆ ಮಾತ್ರ ಅನ್ವಯಿಸುತ್ತದೆಂದೂ ಹಾಗೆ ಹೇಳಿದರೇನೇ ಎರಡು ಪ್ರಮಾಣಗಳಿಗೂ ಸಾರ್ಥಕ್ಯ ಉಂಟಾಗುತ್ತದೆ ಎಂದೂ ಹೇಳಿವೆವು ಎಂದರೆ ಹಾಗಲ್ಲವೆಂದು "**ಪುನಶ್ಶರಣಾಗತಿಯೈ**" ಎಂದು ಪ್ರಾರಂಭಿಸುವ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ

ಪೂರ್ರ್ವೋತ್ತ್ರರಾಘುತ್ತುಕ್ಕುಮ್ ಪರಿಹಾರಮಾಗ ಪ್ರಪತ್ತಿಪಣ್ಣಾದಾರ್ ವಿಷಯಿತ್ತಲೇ ನಿಯಮಿತ್ತಾಲೋವೆನ್ನ ವೊಣ್ಣಾದು ; ಬುದ್ಧಿಪೂರ್ರ್ವೋತ್ತ್ರರಾಘುತ್ತ್ರೈಯುಮ್ ಪ್ರಪತ್ತಿ ಪಣ್ಣಲಾಮೆನ್ರು ವಿಶೇಷಿತ್ತು ಕಂಠೋಕ್ತಿ ಪಣ್ಣುಮದೊರ ವಚನಮುಣ್ಡಾಗಲಿರೇ ಇಪ್ಪಡಿ ನಿಯಮಿಕ್ಕಲಾವದು.

ಈ ಪುನಶ್ಶರಣಾಗತಿಯು ಬೇರೆ ಅಧಿಕಾರಿಯನ್ನು ಕುರಿತದ್ದು ಎಂಬ ವಾದದ ನಿರಾಸವು.

ಪುನಶ್ಶರಣಾಗತಿಯೈ – ಪುನಃ ಶರಣಾಗತಿಯನ್ನು, **ವಿಧಿಕ್ಕಿರ** – ಮಾಡಬೇಕೆಂದು ಆಜ್ಞಾಪಿಸುವ, **ವಚನತ್ತೈ** – ವಾಕ್ಯವನ್ನು, **ಅಡಿಯಿಲೇ**-ಮೊದಲು, **ಬುದ್ಧಿಪೂರ್ವೋತ್ತರಾಘುತ್ತುಕ್ಕುಮ್** - ಬುದ್ಧಿಪೂರ್ವೋತ್ತರಾಘಕ್ಕೂ, **ಪರಿಹಾರಮಾಗ** - ಪರಿಹಾರವಾಗುವದಕ್ಕಾಗಿ, **ಪ್ರಪತ್ತಿಪಣ್ಣಾದಾರ್** - ಪ್ರಪತ್ತಿಯನ್ನನುಷ್ಠಿಸದೇ ಇರುವವರಿಗೆ, **ನಿಯಮಿತ್ತಾಲೋ** - ಅನ್ವಯಿಸಿದರೋ ಎಂದರೆ ಅನ್ವಯಿಸಬಿಡುತ್ತೇವೆ, **ಎನ್ನವೊಣ್ಣಾದು** - ಎಂದು ಹೇಳಲಾಗುವದಿಲ್ಲವು. ಮೊದಲು ಪ್ರಪತ್ತಿಯನ್ನನುಷ್ಠಿಸುವ ಸಮಯದಲ್ಲೇ ಬುದ್ಧಿಪೂರ್ವೋತ್ತರಾಘವೂ ನಮಗೆ ಲೇಪಿಸಬೇಡವೆಂದು ಪ್ರಾರ್ಥಿಸಿ ಶರಣಾಗತಿ ಮಾಡಿದವರಿಗೆ "ಪ್ರಾಯಶ್ಚಿತ್ತಿರಿಯಂ ಸಾತ್ರಯತ್ಪುನಶ್ಶರಣಂ ವ್ರಜೇತ್" ಎಂಬ ಪುನಶ್ಶರಣಾಗತಿ ವಿಷಯವಾದ ವಾಕ್ಯವು ಅನ್ವಯಿಸುವದಿಲ್ಲವು, ಹಾಗೆ ಶರಣಾಗತಿಯನ್ನು ಮಾಡದೇ ಇದ್ದವರಿಗೆ ಅನ್ವಯಿಸುತ್ತದೆ ಎಂದು ಏಕೆ ಅಭಿಪ್ರಾಯಪಡಕೂಡದು ? ಎಂದು ಪ್ರಶ್ನಿಸಿದರೆ ಅದು ಸರಿಯಾದ ಅಭಿಪ್ರಾಯವಲ್ಲವೆಂದು ತಿಳಿಸುತ್ತಾರೆ. ಅದು ಹೇಗೆ ಸರಿಯಲ್ಲವೆಂದು "**ಬುದ್ಧಿಪೂರ್ವೋತ್ತರಾಘುತ್ತೈಯುಮ್**" ಎಂಬ ವಾಕ್ಯಶೇಷದಿಂದ ಉಪದೇಶಿಸುತ್ತಾರೆ:—**ಬುದ್ಧಿಪೂರ್ವೋತ್ತರಾಘುತ್ತೈಯುಮ್ ಪ್ರ**ಪ್ಪ - ಬುದ್ಧಿಪೂರ್ವಕವಾದ ಉತ್ತರಾಪರಾಧಗಳನ್ನೂ ಕುರಿತು ಎಂದರೆ ಬುದ್ಧಿ**ಪೂರ್ವೋತ್ತರಾಘ**ಗಳೂ ನನಗೆ ಲೇಪಿಸಕೂಡದೆಂದು, **ಪ್ರಪತ್ತಿಪಣ್ಣಲಾಮ್** - ಪ್ರಪತ್ತಿಯನ್ನನುಷ್ಠಿಸಬಹುದೆಂದು, **ವಿಶೇಷಿತ್ತು** - ವಿಶೇಷ ವಿಧಿಯಾಗಿ, **ಕಂಠೋಕ್ತಿಪಣ್ಣುಮದೊರುವಚನಂ**-ಶಾಸ್ತ್ರವು ತಾನೇ ಹೇಳುವ ಒಂದು ಪ್ರತ್ಯಕ್ಷವಿಧಿರೂಪ ವಾಕ್ಯವು, **ಉಂಡಾಗಲಿರೇ** - ಉಂಟಾಗಿದ್ದರಲ್ಲವೇ ಎಂದರೆ ಇದ್ದರಲ್ಲವೇ, **ಇಪ್ಪಡಿನಿಯಮಿಕ್ಕಲಾವದು** - ಈಗ ಅಭಿಪ್ರಾಯಪಟ್ಟಹಾಗೆ ಅನ್ವಯಿಸಬಹುದು. ಹೀಗೆ

ಬುದ್ಧಿಪೂರ್ವೋತ್ತರಾಘಾಶ್ಲೇಷೇ ಪುನಃಪ್ರಪತ್ತಿವಚನ ವೈಯರ್ಥ್ಯಮ್

'ಇಪ್ರಪತ್ತಿ ಬುದ್ಧಿಪೂರ್ವೋತ್ತರಾಘತ್ತ್ರೈಕ್ಯಮ್ ಪರಿಹಾರಮೆನ್ರಿ

ದರೆ ಪ್ರಪದನ ಕಾಲದಲ್ಲಿ ಬುದ್ಧಿಪೂರ್ವೋತ್ತರಾಘದ ಕ್ಷಾಮಣೆಯನ್ನೂ ಸೇರಿಸಿ ಮಾಡುವ ಒಂದು ಪ್ರಪದನ ಕ್ರಮವೂ, ಅದು ಇಲ್ಲದೇ ಇರುವ ಒಂದು ಪ್ರಪದನ ಕ್ರಮವೂ ಇರುತ್ತದೆಂದು ಒಪ್ಪಬೇಕಾಗುತ್ತದೆ. ಅಂತಹ ಎರಡು ವಿಧಾನ್ಯ ಸ್ಥಾನವೂ ಇಲ್ಲವು. ಹಾಗೆ ಬುದ್ಧಿಪೂರ್ವೋತ್ತರಾಘದ ಅಶ್ಲೇಷವನ್ನುಂಟು ಮಾಡುವ ಕ್ರಮವು ಇದ್ದುದಾದರೆ ವಿವೇಕವಿರುವವರೆಲ್ಲರೂ ಅಂತಹ ಕ್ರಮವನ್ನೇ ಅವಲಂಬಿಸುತ್ತಿದ್ದರೇ ವಿನಾ ಇನ್ನೊಂದು ಅಷ್ಟು ಶ್ಲಾಘ್ಯವಲ್ಲದ ಕ್ರಮವನ್ನು ಎಂದಿಗೂ ಅವಲಂಬಿಸುತ್ತಿರಲಿಲ್ಲವು ಆಗ ಪುನಶ್ಶರಣಾಗತಿ ವಾಕ್ಯಕ್ಕೆ ವೈಯರ್ಥ್ಯ ವುಂಟಾಯಿತು. ಈ ಅಭಿಪ್ರಾಯವನ್ನು ಸ್ವಾಮಿಯವರೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ. ಹೀಗೆ ಬುದ್ಧಿಪೂರ್ವೋತ್ತರಾಘ ಕ್ಷಾಮಣೆಯನ್ನೂ ಸೇರಿಸಿ ಪ್ರಥಮ ಪ್ರಪದನದಲ್ಲೇ ಮಾಡಬಹುದೆಂದು ಕಂಠೋಕ್ತವಾದ ಶಾಸ್ತ್ರಪ್ರಮಾಣ ಬೇರೆಯಿಲ್ಲವು. ಹಾಗೆ ಇದ್ದಿದ್ದರೂ ಈ ಪ್ರಾಯಶ್ಚಿತ್ತ ವಾಕ್ಯಕ್ಕೆ ವೈಯರ್ಥ್ಯವು ತಪ್ಪಲಿಲ್ಲವು. ಹಾಗೆ ಒಂದು ವೇಳೆ ಕಂಠೋಕ್ತ ಪ್ರಮಾಣವಿದ್ದುದಾದರೆ ಬುದ್ಧಿಪೂರ್ವಾಘವು ಲೇಪಿಸುವುದಿಲ್ಲವಾದುದರಿಂದ ಅಂತಹ ಪ್ರಪನ್ನನು ಸ್ವೇಚ್ಛಾವಿಹಾರ ಮಾಡಬಹುದು; ಲಗಾಮಿಯಿಲ್ಲದ ಕುದುರೆಯ ಹಾಗೆ ನಡೆಯಬಹುದೆಂದು ಏರ್ಪಡುತ್ತದೆ. ಇಂತಹ ಆಭಾಸಗಳಿಗೆ ಕಾರಣವಾಗುವದರಿಂದಲೇ ಅಂತಹ ಕಂಠೋಕ್ತವಾದ ಪ್ರಮಾಣವು ಎಂದಿಗೂ ಇರಲಾರದೆಂದು ಭಾವಿಸಿಯೇ, "ಕಂಠೋಕ್ತಿ ಪಣ್ಣುಮುದೊರುವಚನ"ವಿಲ್ಲವೆಂದು ಹೇಳಿರುತ್ತಾರೆ.

ಬುದ್ಧಿಪೂರ್ವೋತ್ತರಾಘಲೇಪವಿಲ್ಲವೆಂದರೆ ಪುನಃ ಪ್ರಪತ್ತಿ ವಚನಕ್ಕೆ ವೈಯರ್ಥ್ಯವು.

ಇಪ್ರಪತ್ತಿ - ಈ ಮೊದಲು ಸಲ ಸಕೃದನುಷ್ಠೇಯವಾದ ಪ್ರಪತ್ತಿಯೇ, ಬುದ್ಧಿಪೂರ್ವೋತ್ತರಾಘಕ್ಕೂ ಕೂಡ, ಪರಿಹಾರಮೆನ್ನರಿನ್ಗಾಲ್ - ಪರಿಹಾರ ಉಂಟು ಮಾಡುತ್ತದೆಂದು ತಿಳಿದಿದ್ದ ಪಕ್ಷದಲ್ಲಿ, ಇಚ್ಚೈಟ್ಟೈವಿಡುವಾರ್ಯ್ಯಯುಮ್ - ಈ ಲಘುವಾದ ಉಪಾಯದಿಂದುಂಟಾಗುವ ಸಾಮರ್ಥ್ಯವನ್ನು ಬಿಡುವವರು, ಶಿಷ್ಟರ್ಯಾಮ್ಯಾವಾಲೇ ಯಾರೂ ಇಲ್ಲದುದರಿಂದ, ಪುನಃಪ್ರಪತ್ತಿ ವಚನಮ್ -

ನ್ಚಾಲ್ ಇಚ್ಛಾಟ್ಟು ವಿಡುವಾರ್ಪೈಯುಮ್ ಕಿಡೈಯಾನ್ಮೈಯಾಲೇ ಪುನಃ ಪ್ರಪತ್ತಿವಚನಮ್ ನಿರ್ವಿಷಯಮಾನ್.

ವಿಶೇಷ ವಚನೇನ ಸಾಮಾನ್ಯ ವಚನಹ್ರಾಸಃ, ನತು ಸಾಮಾನ್ಯ ವಚನೇನ ವಿಶೇಷ ವಚನಬಾಧಃ

ಸಾಮಾನ್ಯ ವಚನತ್ತಿಳವ್ಯಾಪ್ತಿ ವಿಶೇಷವಚನತ್ತೈ ಬಾಧಿಕ್ಕ

"**ಪ್ರಾಯಶ್ಚಿತ್ತಿರಿಯಂ ಸಾತ್ರಯತ್ಪುನಶ್ಶರಣಂ ವ್ರಜೇತ್**" ಎಂಬ ಪುನಃ ಪ್ರಪತ್ತಿಯನ್ನು ಹೇಳಿರುವ ವಾಕ್ಯವು, **ನಿರ್ವಿಷಯಮಾನ್** - ಯಾವುದಕ್ಕೂ ಅನ್ವಯಿಸುವುದಿಲ್ಲವಾದುದರಿಂದ ವ್ಯರ್ಥವಾದುದಾಗುತ್ತದೆ. ಕೆಲವರು ಅಭಿಪ್ರಾಯಪಡುವ ಹಾಗೆ ಮೊದಲು ಮಾಡಿದ ಪ್ರಪತ್ತಿಯಿಂದಲೇ ಬುದ್ಧಿಪೂರ್ವಾಘವು ಕಳೆದುಹೋಗುತ್ತದೆಂದು ತಿಳಿದವರಾದರೆ, ಎಲ್ಲರೂ ಈ ವಿಷಯ ತಮಗೆ ತಿಳಿಯದಿದ್ದರೂ, ಗುರುಗಳಿಗೆ ಈ ವಿಷಯವು ವೇದ್ಯವಾಗಿರಬೇಕೆಂದು ಒಪ್ಪಿಕೊಳ್ಳಬೇಕಾಗಿರುವದರಿಂದ ಅವರ ಮೂಲಕವಾಗಿಯಾದರೂ ತಿಳಿದು, ಯಾರೊಬ್ಬರೂ ಇಂತಹ ಸಾಮರ್ಥ್ಯವುಳ್ಳ ಉಪಾಯವನ್ನು ತ್ಯಜಿಸಲಾರರು. ಆಗ ಎಲ್ಲಾ ಪ್ರಪನ್ನರೂ ಹಾಗೆಯೇ ಅನುಷ್ಠಿಸುವರಾದುದರಿಂದ, ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾಗುವ ಸಂಭವವೇ ಇಲ್ಲವಾಗುತ್ತದೆ. ಆಗ ಪ್ರಾಯಶ್ಚಿತ್ತ ವಚನವು ಯಾರಿಗೆ ಅನ್ವಯಿಸಬೇಕು ? ಯಾರಿಗೂ ಸಂಬಂಧಿಸದೇ ಇರುವದರಿಂದ ನಿರರ್ಥಕವಾದುದಾಗುತ್ತದೆಂಬ ಭಾವವು.

ವಿಶೇಷ ವಚನದಿಂದ ಸಾಮಾನ್ಯ ವಚನಕ್ಕೆ ಸಂಕೋಚವು.
ಸಾಮಾನ್ಯ ವಚನದಿಂದ ವಿಶೇಷ ವಚನಕ್ಕೆ ಬಾಧೆಯಿಲ್ಲವು

ಸಾಮಾನ್ಯವಚನತ್ತಿಳವ್ಯಾಪ್ತಿ - ಸಾಮಾನ್ಯ ವಚನದ ವ್ಯಾಪ್ತಿಯನ್ನು ಮನಸ್ಸಿನಲ್ಲಿಟ್ಟು. ವಿಶೇಷ ವಾಕ್ಯವನ್ನು, **ಬಾಧಿಕ್ಕವೊಣ್ಣಾದು** - ಬಾಧಿಸುವದು ಯುಕ್ತವಲ್ಲವು ಅಥವಾ ಸಾಧ್ಯವಲ್ಲವು. ನ್ಯಾಯಶಾಸ್ತ್ರ ನಿಪುಣರು ವಿಶೇಷ ವಾಕ್ಯಕ್ಕೆ ಸಾರ್ಥಕತೆಯುಸ್ನುಂಟುಮಾಡಿ, ವಿಶೇಷ ವಚನಕ್ಕೆ ಎಲ್ಲಿ ಅನ್ವಯುವೋ, ಅಲ್ಲಿ ಮಾತ್ರ ಬಿಟ್ಟು ಮಿಕ್ಕೆಲ್ಲಾ ಕಡೆಯಲ್ಲೂ ಸಾಮಾನ್ಯವಚನಕ್ಕೆ ಗೌರವವನ್ನು ಕೊಡುತ್ತಾರೆ. ಹಾಗೆ ಒಪ್ಪಿಕೊಳ್ಳದೆ. ಸಾಮಾನ್ಯ ವಾಕ್ಯವು ವಿಶೇಷ ವಾಕ್ಯವನ್ನು ಹೊಡೆದುಹಾಕುತ್ತದೆಂದರೆ ವಿಶೇಷ ವಾಕ್ಯಕ್ಕೆ ಗತಿಯೇನು ? ಇನ್ನೂ ಮೊದಲಾದ ಅನೇಕ ನ್ಯಾಯವಿರೋಧಗಳುಂಟಾಗುತ್ತವೆ. ಆದುದರಿಂದ

ವ್ರೊಣ್ಣಾದು. ಇಪ್ಪಡಿ ವಿಶೇಷ ವಚನತ್ತೈ ಬಾಧಿಕ್ಕಿಲ್ ಉಪಾಸನ ನಿಷ್ಠ ನುಕ್ಕುಮ್ ಬುದ್ಧಿಪೂರ್ವೋತ್ತರಾಘತ್ತುಕ್ಕುಮ್ ದೋಷಮಿಲ್ಲೈಯಾಮ್.

ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂಬಲ್ಲಿ ಸರ್ವಶಬ್ದವು ಯಾವ ಪಾಪಗಳಿಗೆ ವಿಶೇಷವಿಧಿಯಿಂದ ಬೇರೆ ಕ್ರಮವು ಹೇಳಲ್ಪಟ್ಟಿರುತ್ತದೋ, ಅಂತಹ ಪಾಪಗಳನ್ನು ಮಾತ್ರ ಬಿಟ್ಟು, ಮಿಕ್ಕೆಲ್ಲಾ ಪಾಪಗಳನ್ನೂ ಬೋಧಿಸುತ್ತದೆ ಎಂದು ತಿಳಿಯತಕ್ಕದ್ದು. ಪ್ರಾರಬ್ಧಾಂಶ ಪಾಪಕ್ಕೂ, ಮತ್ತು ಬುದ್ಧಿಪೂರ್ವೋತ್ತರಾಘಕ್ಕೂ ಬೇರೇ ಪ್ರಾಯಶ್ಚಿತ್ತ ವಿಧಿಗಳಿರುವದರಿಂದ ಇವೆರಡನ್ನು ಮಾತ್ರ ಬಿಟ್ಟು ಮಿಕ್ಕೆಲ್ಲಾ ಪಾಪಗಳು ಎಂದು ತಿಳಿಯತಕ್ಕದ್ದೆಂಬ ಭಾವವು.

ಆಗಲಿ, ಇಲ್ಲಿ ಬುದ್ಧಿಪೂರ್ವೋತ್ತರಾಘವೂ ಕಳಿಯಲಿ ಎಂದು ಸಙ್ಕಲ್ಪಿಸಿ ಪ್ರಥಮ ಪ್ರಪತ್ತಿ ಮಾಡುವದರಿಂದ ಪ್ರಾಯಶ್ಚಿತ್ತಿವಿಧಿಗೆ ಗತಿಯೇ ಇಲ್ಲವಾಯಿತು ಎಂದು ಮೇಲೆ ಹೇಳಲ್ಪಟ್ಟಿತಲ್ಲಾ, ನೀವೂ ಕೂಡ ಪ್ರಥಮ ಪ್ರಪತ್ತಿಯಲ್ಲೇ ಪಾಪಾರಂಭಕ ಪ್ರಾರಬ್ಧ ಕರ್ಮದ ಪಾಪಗಳ ನಿವೃತ್ತ್ಯರ್ಥವಾಗಿ ಪ್ರಪದನ ಮಾಡಬಹುದು ಎಂಬುವದು ಮಾತ್ರ ಹೇಗೆ ಒಪ್ಪುವಿರಿ? ಎಂದು ಕೇಳಿದರೆ, ಇದರಿಂದೇನೂ ಪ್ರಾರಬ್ಧಕರ್ಮಾನುಭವ ವಾಕ್ಯವೇನೂ ನಿರರ್ಥಕವಾದುದಾಗುವದಿಲ್ಲವೆಂದು ಹೇಳುವೆವು. ಏಕೆಂದರೆ, ಅನೇಕರಿಗೆ ಪ್ರಾರಬ್ಧಕರ್ಮ ಪಾಪಗಳನ್ನೂ ಹೀಗೆ ಕಳೆಯಬಹುದೆಂಬ ವಿಷಯವು ತಿಳಿದಿರುವದಿಲ್ಲವು. ಆದುದರಿಂದ ಇದನ್ನು ಒಪ್ಪಬಹುದು. ಆದರೆ ಬುದ್ಧಿಪೂರ್ವೋತ್ತರಾಘದ ನಾಶಕ್ಕಾಗಿಯೂ ಮೊದಲೇ ಪ್ರಪದನ ಮಾಡಿಬಿಟ್ಟರೆ, ಬುದ್ಧಿಪೂರ್ವೋತ್ತರಾಘವೇ ಆ ಮೇಲೆ ಇರಲಾರದಾದುದರಿಂದ, ಪ್ರಾಯಶ್ಚಿತ್ತ ವಿಧಿಗೆ ವೈಯರ್ಥ್ಯವೆಂಬ ಭಾವವು.

ಆದರೆ ಈ ಸಂದರ್ಭದಲ್ಲಿ ಸಾಮಾನ್ಯ ವಚನವಾದ "**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂಬುವದರಿಂದ ವಿಶೇಷ ವಿಧಿಯಾದ "**ಪ್ರಾಯಶ್ಚಿತ್ತಿರಿಯಂ ಸಾತ್ರ ಯತ್ಪುನಶ್ಶರಣಂ ವ್ರಜೇತ್**" ಎಂಬುವದು ಬಾಧಿಸಲ್ಪಡುತ್ತದೆಂದು ಹೇಳಿದರೆ, ಪ್ರಾಪ್ತವಾಗುವ ಬಾಧಕಗಳನ್ನು ಮುಂದೆ "**ಇಪ್ಪಡಿ**" ಎಂಬುವ ವಾಕ್ಯದಿಂದ ತಿಳಿಸುತ್ತಾರೆ. **ಇಪ್ಪಡಿ** – ಈ ಪ್ರಕಾರವಾಗಿ ಎಂದರೆ ಸಾಮಾನ್ಯ ವಚನದಿಂದ ವಿಶೇಷ ವಚನವನ್ನು ಬಾಧಿಸಬಹುದೆಂದು ಹೇಳುವ ಸಂದರ್ಭದಲ್ಲಿ, **ವಿಶೇಷವಚನತ್ತೈ ಭಾದಿಕ್ಕಿಲ್** – ಸಾಮಾನ್ಯ ವಚನದ ಸರ್ವಪಾಪಶಬ್ದವು, ಬುದ್ಧಿಪೂರ್ವಾಪರಾಧ ಪ್ರಾಯಶ್ಚಿತ್ತವಾಕ್ಯವನ್ನು ಬಾಧಿಸಿದರೆ, **ಉಪಾಸನನಿಷ್ಠನುಕ್ಕುಮ್** – ಭಕ್ತಿಮಾರ್ಗವನ್ನವಲಂಬಿಸಿದ ಯೋಗಿಯ ವಿಷಯದಲ್ಲೂ ಕೂಡ, **ಬುದ್ಧಿಪೂರ್ವೋತ್ತರಾಘತ್ತುಕ್ಕುಮ್** - ಬುದ್ಧಿಪೂರ್ವಕ

ವಾದ ಉತ್ತರಾಘವು ಪ್ರಾಪ್ತವಾದರೂ **ದೋಷಮಿಲ್ಲೈಯರಾನ್** - ದೋಷ ವಿಲ್ಲವೆಂದಾಗುತ್ತದೆಂಬ ಭಾವವು. ಭಕ್ತಿನಿಷ್ಠನ ವಿಷಯದಲ್ಲಿ ಬುದ್ಧಿಪೂರ್ವೋತ್ತ ರಾಘವು ಶ್ಲೇಷಿಸುತ್ತದೆಂದೂ, ಪ್ರಪನ್ನನಿಗೆ ಈ ಜನ್ಮದಲ್ಲೇ ಅಲ್ಪದಂಡನೆಯಿಂದ ಕ್ಷಯಿಸುತ್ತದೆ ಎಂದೂ ಹೇಳುವ ಅಭಿಪ್ರಾಯಕ್ಕೆ ವಿರೋಧವಾಗುತ್ತದೆ ಎಂಬ ಭಾವವು. ಭಕ್ತಿನಿಷ್ಠನ ವಿಷಯದಲ್ಲೂ **"ಏವಂ ವಿದಿಪಾಪಂಕರ್ಮ ನ ಶ್ಲಿಷ್ಯತೇ"** (ಛಾಂ. ೪ ೧೪.೩) ಎಂಬ ಶ್ರುತಿಯಿರುವದರಿಂದ ಹೀಗೆ ಉಪಾಸಕನಲ್ಲಿ ಪಾಪ ಕರ್ಮವು ಅಂಟುವುದಿಲ್ಲವೆಂದರೆ ಸಮಸ್ತ ಪಾಪಕರ್ಮವೂ ಅಂಟುವದಿಲ್ಲವೆಂದು ಹೇಳಿ ರುವ ಸಾಮಾನ್ಯ ವಚನದಿಂದ ಬುದ್ಧಿಪೂರ್ವೋತ್ತರಾಘವೂ ಅಂಟುವದಿಲ್ಲವೆಂದು ಅಭಿಪ್ರಾಯಪಡಬೇಕಾಗುತ್ತದೆ. ಹಾಗೆಯೇ ಇನ್ನೊಂದು ಶ್ರುತಿಯೂ ಹೇಳುತ್ತದೆ:- **"ತದ್ಯಥೇಷೀಕಾತೂಲ ಮಗ್ನೌ ಪ್ರೋತಂ ಪ್ರದೂಯೇ ತೈವಗ್ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯನ್ತೇ"** (ಛಾ. ೫. ೨೪. ೩) ಮುಂಜೇ ಹುಲಿನಲ್ಲಿ ರುವ ತೂಲವು ಅಗ್ನಿಯಲ್ಲಿ ಹಾಕಲ್ಪಟ್ಟರೆ ಒಡನೇ ಹೇಗೆ ಉರಿದುಹೋಗುತ್ತದೋ ಹಾಗೆಯೇ ಸರ್ವಪಾಪಗಳೂ ಈ ಬ್ರಹ್ಮವಿದ್ಯಾನಿಷ್ಠನಿಗೆ ದಗ್ಧವಾಗಿ ಹೋಗುತ್ತವೆ ಎಂದು ಸರ್ವಶಬ್ದವೇ ಸಾಕ್ಷಾತ್ತಾಗಿ ಉಪಯೋಗಿಸಿರುವದರಿಂದ ಬುದ್ಧಿಪೂರ್ವೋತ್ತ ರಾಘವೂ ಕೂಡ ಈ ಸಾಮಾನ್ಯ ವಾಕ್ಯದಿಂದ ನಾಶವಾಗಬೇಕಾಗಿ ಬರುತ್ತದೆ ಎಂಬ ಭಾವವು. ಈ ಶ್ರುತಿಯನ್ನೇ ಶ್ರೀ ಪರಾಶರರು ಶ್ಲೋಕರೂಪದಲ್ಲಿ ಹೇಳಿರು ತ್ತಾರೆ. (ವಿ. ಪು. ೬. ೭. ೭೪)

> **"ಯಥಾಗ್ನಿ ರುದ್ಧತ ಶಿಖಃ ಕಕ್ಷಂ ದಹತಿ ಸಾನಲಃ ।**
> **ತಥಾ ಚಿತ್ತ ಸ್ಥಿತೋ ವಿಷ್ಣುರ್ಯೋಗಿನಾಂ ಸರ್ವ ಕಿಲ್ಬಿಷಂ"**

ಇಲ್ಲಿಯೂ ಸರ್ವಕಿಲ್ಬಿಷವೆಂಬ ಪ್ರಯೋಗವಿರುತ್ತದೆ. ಹಾಗೆಯೇ ಶ್ರೀಮದ್ಭಾಗ ವತದಲ್ಲೂ, **"ಸ್ವಪಾದ ಮೂಲಂ ಭಜತಃ ಪ್ರಿಯಸ್ಯ ತ್ಯಕ್ತಾನ್ಯ ಭಾವಸ್ಯ ಹರಿಃಪರೇಶಃ । ವಿಕರ್ಮಯಚ್ಚೋತ್ಪತಿತಂಕಥಂ ಚಿದ್ಧುನೋತಿ ಸರ್ವಂ ಹೃದಿ ಸನ್ನಿವಿಷ್ಟಃ"** (ಭಾಗ ೧೧. ೫. ೪೩) ಸರ್ವೇಶ್ವರನ ಚರಣಕಮಲದಲ್ಲಿ ಶರಣಾಗತಿಯನ್ನು ಮಾಡಿ ಅನ್ಯದೇವತಾ ಸಂಬಂಧವಿಲ್ಲದವನಿಗೆ, ಸರ್ವ ದುರಿತ ಹರನಾದ ಮತ್ತೂ ಶ್ರೇಷ್ಠರಾದ ಬ್ರಹ್ಮರುದ್ರೇಂದ್ರಾದಿಗಳಿಗೂ ಸ್ವಾಮಿಯಾದ ಸರ್ವೇಶ್ವರನು, ಆತನ ಹೃದಯಗುಹೆಯಲ್ಲೇ ಇರುವವನಾಗಿ ಆತನಿಗೆ ನಿಯಾ ಮಕನಾಗಿ ಆ ಪ್ರಪನ್ನನಿಗೆ ಉಂಟಾಗುವ ಉತ್ತರಾಘಗಳೆಲ್ಲವನ್ನೂ ನಾಶಮಾಡು ತ್ತಾನೆ. ಇಲ್ಲಿಯೂ **ಧುನೋತಿ ಸರ್ವಂ** ಎಂಬುವದರಿಂದ ಬುದ್ಧಿಪೂರ್ವೋತ್ತ ರಾಘಗಳೂ ಕೂಡ ಸೇರುವದಿಲ್ಲವೆಂಬಭಿಪ್ರಾಯವು ತೋರಬಹುದು. ಆದರೆ **ಕಥಂ ಚಿದ್ಧುನೋತಿ** ಎಂದು ಹೇಳಿರುವದರಿಂದ ಆತನು ಅನುತಾಪ ಮತ್ತೂ ಇನ್ನು ಮುಂದೆ ಮಾಡುವದಿಲ್ಲವೆಂಬ ಅಭಿಸಂಧಿಕೂಡಿ ಪ್ರಾಯಶ್ಚಿತ್ತ ಮಾಡಿ

ಕೊಂಡರೆ ಆತನ ಪಾಪವನ್ನು ಕ್ಷಮಿಸಿ, ಅಥವಾ ಹಾಗೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ, ಅಲ್ಪದಂಡನೆಯನ್ನು ಕೊಟ್ಟು ಅಂತೂ **ಕಥಂಚಿತ್** - ಹೇಗಾದರೂ ಮಾಡಿ ದೇಹಾವಸಾನದಲ್ಲಿ ಸಮಸ್ತೋತ್ತರಾಘಗಳನ್ನೂ ನಾಶಮಾಡಿ ಮುಕ್ತಿಯನ್ನೀವನು ಎಂಬುವದೀಗ ಸರಿಯಾದ ಅಭಿಪ್ರಾಯವು.

ಶಂಕರ ಭಾಷ್ಯದಲ್ಲೂ ಕೂಡ "**ವರ್ತಮಾನ ಶರೀರಾಂಭಕ ಪಾಪ್ಮವರ್ಜಂ**" ಎಂಬುವದರಿಂದ ಈ ಸರ್ವಶಬ್ದಗಳು ಪ್ರಾರಬ್ಧ ಕರ್ಮಕ್ಕೆ ಅನ್ವಯಿಸುವದಿಲ್ಲವೆಂದುಹೇಳಿರುವಾಗ, ಬುದ್ಧಿಪೂರ್ವಾಘಕ್ಕೆ ಸಂಬಂಧಿಸುವುದಿಲ್ಲವೆಂದು ಹೇಳಲು ಅಭ್ಯಂತರವೇನು? ಇದರಿಂದ **ಸರ್ವಪಾಪೇಭ್ಯಃ** ಎಂಬುವುದಕ್ಕೆ ನಮ್ಮ ಸಿದ್ಧಾಂತಾರ್ಥವು ಸರ್ವಸಮಂಜಸವೆಂದು ಭಾವಿಸತಕ್ಕದ್ದು. "**ಸರ್ವೇಪಾಪ್ಮಾನಃ**" ಎಂಬ ಸಾಮಾನ್ಯ ವಾಕ್ಯವು,

"**ಅಪಿ ಚೇತ್ಪಾತಕಂ ಕಿಂಚಿದ್ಯೋಗೀ ಕುರ್ಯಾತ್ಪ್ರಮಾದತಃ ।**
ಯೋಗಮೇವ ಹಿ ಕುರ್ವೀತನಾನ್ಯಂಯೋಗಂ ಸಮಾಚರೇತ್"

ಎಂಬ ವಿಶೇಷ ವಾಕ್ಯದಿಂದ ಬಾಧಿಸಲ್ಪಡುತ್ತದೆ.

ಆದರೆ,

"**ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ।**
ನಾಶಾಂತಮಾನಸೋ ವಾಪಿ ಪ್ರಜ್ಞಾನೇನೈವ ಮಾಪ್ನುಯಾತ್"

(ಕಠ. ೧.೨.೨೪) ಎಂದರೆ ದುರ್ವ್ಯಾಪಾರಗಳಿಂದ ಹಿಂತಿರುಗದವನು ಈ ವಿಧವಾಗಿ ಒಳ್ಳೇ ಜ್ಞಾನ ಮಾತ್ರದಿಂದಲೇ ಪರಬ್ರಹ್ಮವನ್ನು ಹೊಂದಲಾರನು. **ನಾಶಾಂತಃ** - ಹಾಗೆಯೇ ಬಾಹ್ಯೇಂದ್ರಿಯ ನಿಗ್ರಹವಿಲ್ಲದವನೂ ಹೊಂದಲಾರನು. **ನಾಸಮಾಹಿತಃ** - ನಾನಾವಿಧ ವ್ಯಾಪಾರಗಳಲ್ಲಿಟ್ಟ ಮನಸ್ಸಿನಿಂದ ಸಮಾಹಿತ ಚಿತ್ತನಲ್ಲದವನೂ ಹೊಂದಲಾರನು. ಹಾಗೆಯೇ **ನಾಶಾಂತಮಾನಸೋ ವಾಪಿ**, ಮನಸ್ಸನ್ನು ನಿಗ್ರಹಿಸಿ ಶಾಂತತೆಯನ್ನು ಹೊಂದದವನೂ ಕೂಡ ಜ್ಞಾನಮಾತ್ರದಿಂದಲೇ ಪರಬ್ರಹ್ಮವನ್ನು ಹೊಂದಲಾರನು" ಎಂದಿರುವದರಿಂದ, ಹೀಗೆ ಬುದ್ಧಿಪೂರ್ವಾಘವು ಪ್ರಾಪ್ತವಾದರೆ ಪರಬ್ರಹ್ಮಪ್ರಾಪ್ತಿಯು ಇಲ್ಲವೆಂದು ತೋರಿಬರುತ್ತದೆಯಲ್ಲಾ; ಹಾಗಾದರೆ ಯಮವಶ್ಯತೆ ನರಕಪ್ರಾಪ್ತಿಗಳು ಭಕ್ತನಿಗೆ ಉಂಟೋ? ಪ್ರಪತ್ತ್ಯನುಷ್ಠಿಸಿದವನಿಗೇನೋ ಇವುಗಳಿಲ್ಲವೆಂದು ಹಿಂದೆ ಸ್ಥಾಪಿಸಲ್ಪಟ್ಟಿತು. ಭಕ್ತಿನಿಷ್ಠನಿಗೆ ಹೇಗೆ? ಎಂದರೆ, ಈ ಇಬ್ಬರಿಗೂ ಅವುಗಳಿಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಇಬ್ಬುದ್ಧಿಪೂರ್ವೋತ್ತರಾಘತ್ತಿಲುಮ್ - ಈ ಬುದ್ಧಿಪೂರ್ವಕವಾದ ಉತ್ತರಾಘವು ಪ್ರಾಪ್ತವಾಗುವ ಸಂದರ್ಭದಲ್ಲೂ, ಪರಮೈಕಾಂತಿಗಳಾದ, **ಇವರ್ಗಳಿರುವರ್ಕ್ಕುಮ್** - ಭಕ್ತಿನಿಷ್ಠರೂ ಭರನ್ಯಾಸನಿಷ್ಠರಿಬ್ಬರಿಗೂ, **ಯಮವಶ್ಯ**

ಇಬ್ಬುದ್ಧಿ ಪೂರ್ವೋತ್ತರಾಘತ್ತಿಲುಮ್ ಪರನ್ಯೈಕಾನ್ತಿಗಳಾನ ಇವರ್‌ಗಳಿರುವರ್ಕ್ಕುಮ್ ಯಮವಶ್ಯತಾದಿಗಳಿಲ್ಲೈ ಎನ್ನುಮಿಡಮ್

"ಯಸ್ಮಿನ್ ಕಸ್ಮಿನ್ ಕುಲೇ ಜಾತಾ ಯತ್ರ ಕುತ್ರ ನಿವಾಸಿನಃ ।
ವಾಸುದೇವರತಾ ನಿತ್ಯಂ ಯಮ ಲೋಕಂ ನಯಾಂತಿತೇ"

ಇತ್ಯಾದಿ ವಚನ ಬಲತ್ತಾಲೇ ಸಿದ್ಧಮ್. ಒರುಪಾಪಮ್ ತಾನೇ ಜಾತಿ

ತಾದಿಗಳ್ - ಯಮನಿಗೆ ವಶನಾಗಿರುವಿಕೆ. ಎಂದರೆ ಯಮನು ಕರೆದುಕೊಂಡು ಹೋಗಿ ಶಿಕ್ಷಿಸೋಣವೇ ಮೊದಲಾದವು, ಆದಿಶಬ್ದದಿಂದ ನರಕಪ್ರಾಪ್ತಿ ಮೊದಲಾದವು ಹೇಳಲ್ಪಟ್ಟವು, ಇಲ್ಲೈ ಎನ್ನುಮಿಡಮ್ – ಇಲ್ಲವೆನ್ನುವ ಸಂದರ್ಭದಲ್ಲಿ, "ಯಸ್ಮಿನ್‌ಕಸ್ಮಿನ್ - ಯಾವುದಾದರೂ ಒಂದು, ಕುಲೇ - ಕುಲದಲ್ಲಿ, ಜಾತಾಃ-ಹುಟ್ಟಿದವರೇ ಆಗಲಿ, ಯತ್ರಕುತ್ರ ನಿವಾಸಿನಃ - ಯಾವುದಾದರೂ ಒಂದು ಸ್ಥಳದಲ್ಲಿ ವಾಸಮಾಡಿದವರೇ ಆಗಲಿ, ನಿತ್ಯಂ ವಾಸುದೇವ ರತಾಃ - ಯಾವಾಗಲೂ ವಾಸುದೇವನಲ್ಲೇ ಆಸಕ್ತಿಯುಳ್ಳವರಾಗಿ ಆತನನ್ನು ಧ್ಯಾನಿಸುವಂಥಾ, ತೇ - ಅವರು, ಯಮಲೋಕಂ - ಯಮಲೋಕವನ್ನು ಕುರಿತು, ನಯಾಂತಿ - ಹೋಗುವದಿಲ್ಲವು" ಇತ್ಯಾದಿ - ಇವೇ ಮೊದಲಾದ, ವಚನಬಲತ್ತಾಲೆ – ಪ್ರಮಾಣವಚನ ಬಲದಿಂದ, ಸಿದ್ಧಮ್ - ಸ್ಥಾಪಿತವಾದದು. ಪ್ರಬಲ ಬುದ್ಧಿಪೂರ್ವೋತ್ತರಾಘ ಪ್ರಾಪ್ತವಾದರೆ, ಯೋಗಿಗೆ ಯಮವಶ್ಯತೆ ನರಕಪ್ರಾಪ್ತಿ ಉಂಟೋ ಎಂದರೆ ಇಲ್ಲವೆಂದು ಪ್ರಮಾಣಪೂರ್ವಕವಾಗಿ ಸ್ಥಾಪಿಸಿದರು. ಹಿಂದೆಯೇ ಭರನ್ಯಾಸವನ್ನನುಷ್ಠಿಸಿದವನಿಗೆ ಯಮವಶ್ಯತಾದಿಗಳು ಇಲ್ಲವೆಂದು ಸ್ಥಾಪಿಸಿದ್ದರು. ಅದನ್ನು ಜ್ಞಾಪಕ ಕೊಡುವದಕ್ಕಾಗಿಯೂ ಮತ್ತು ಈ ಭಕ್ತ ಪ್ರಪನ್ನರಿಬ್ಬರೂ ನಿತ್ಯಂ ವಾಸುದೇವರತರಾದುದರಿಂದ ಹಿಂದೆ ಉದಾಹರಿಸಿದ ಶ್ರೀವಾಮನ ವೈಷ್ಣವ ಪುರಾಣ ವಚನಗಳೂ ಕೂಡ ಇಬ್ಬರಿಗೂ ಅನ್ವಯಿಸಬಹುದಾದುದರಿಂದಲೂ ಇಲ್ಲಿ ಇವರ್‌ಗಳಿರುವರುಕ್ಕುಮ್ ಎಂಬ ಪ್ರಯೋಗವು. ಈ ಭಕ್ತಪ್ರಪನ್ನರಿಬ್ಬರೂ ಉತ್ಕೃಷ್ಟ ಕುಲದಲ್ಲಿ ಹುಟ್ಟಿದವರೇ ಆಗಲಿ, ನಿಕೃಷ್ಟ ಕುಲದಲ್ಲಿ ಹುಟ್ಟಿದವರೇ ಆಗಲಿ. ಒಳ್ಳೇ ದಿವ್ಯದೇಶವಾಸಿಗಳೇ ಆಗಲಿ ಕುಗ್ರಾಮವಾಸಿಗಳೇ ಆಗಲಿ ಶ್ರೀವಾಸುದೇವನಲ್ಲಿ ಸಕ್ತವಾದ ಮನಸ್ಸುಳ್ಳವರಾದರೆ ಅವರಿಗೆ ಬುದ್ಧಿಪೂರ್ವೋತ್ತರಾಘಪ್ರಾಪ್ತವಾದರೂ ಯಮಲೋಕಪ್ರಾಪ್ತಿಯಿಲ್ಲವೆಂದು ಈ ಪ್ರಮಾಣವು ಬೋಧಿಸುತ್ತದೆ.

ಆಗಲಿ, ಪ್ರಬಲವಾದ ಬುದ್ಧಿಪೂರ್ವಕ ಅಪರಾಧವನ್ನು ಇತರರು ಮಾಡಿದರೆ

ಗುಣಾದ್ಯಧಿಕಾರ ಭೇದತ್ತಾಲೆ ಗುರು ಲಘು ಫಲ ಭೇದವತ್ತಾ ಯಿರುಕ್ಕು ಮೆನ್ನುಮಿಡವ್ ಸರ್ವ ಸಂಪ್ರತಿಪನ್ನಂ. ಇವ್ವರ್ಥಂ ರಾಜಪುತ್ರಾ

ಯಮವಶ್ಯತೆ ನರಕಪ್ರಾಪ್ತಿಯೂ, ಭಕ್ತರೂ ಪ್ರಪನ್ನರೂ ಮಾಡಿದರೆ ಅಂತಹ ಪ್ರಾಪ್ತಿಯಿಲ್ಲವು, ಅಲ್ಪಶಿಕ್ಷೆ ಮಾತ್ರವೇ ಎಂದರೆ ಹೀಗೆಲ್ಲಾದರೂ ಉಂಟೋ? ಸರ್ವ ಶಾಸ್ತಾವಾದ, ಎಲ್ಲರನ್ನೂ ಸಮಭಾವದಿಂದ ನೋಡುವ, ಸರ್ವೇಶ್ವರನಿಗೆ ಇದು ಸರಿಯೋ ಎಂಬಾಕ್ಷೇಪ ಉಂಟಾಗಬಹುದು. ಅದಕ್ಕಾಗಿ ಮುಂದಿನ ಎರಡು ವಾಕ್ಯಗಳಿಂದ ಸಮಾಧಾನವನ್ನು ಹೇಳುತ್ತಾರೆ. **ಒರುಪಾಪಮ್ ತಾನೇ** - ಒಂದು ಪಾಪವೇ, **ಜಾತಿ ಗುಣಾದ್ಯಧಿಕಾರ ಭೇದತ್ತಾಲೆ** - ಬ್ರಾಹ್ಮಣ, ಕ್ಷತ್ರಿಯಾದಿ ಜಾತಿಯೇನು, ಜ್ಞಾನಿ, ಅಜ್ಞಾನಿ, ಪಂಡಿತ, ಅಪಂಡಿತಾದಿ ಗುಣಭೇದಗಳೇನು, ಪ್ರಪನ್ನನೇನು, ಅಪ್ರಪನ್ನನೇನು, ಇವೇ ಮೊದಲಾದ ಅಧಿಕಾರ ಭೇದದಿಂದ, **ಗುರುಲಘುಫಲಭೇದವತ್ತಾಯಿರುಕ್ಕುಮ್** - ಹೆಚ್ಚುಶಿಕ್ಷೆ ಅಲ್ಪಶಿಕ್ಷೆಯುಳ್ಳ ಫಲಭೇದವನ್ನು ಹೊಂದಿರುತ್ತದೆ, **ಎನ್ನುಮಿಡಂ** - ಎಂದು ಹೇಳುವ ಸದರ್ಥವು, **ಸರ್ವಸಂಪ್ರತಿಪನ್ನಂ** – ಎಲ್ಲರೂ ಅಂಗೀಕರಿಸತಕ್ಕದ್ದೇ. ಹೀಗೆ ಒಂದೇ ಪಾಪಕ್ಕೆ ಅಧಿಕಾರಭೇದದಿಂದ ಅಲ್ಪಶಿಕ್ಷೆಯನ್ನೂ ಹೆಚ್ಚು ಶಿಕ್ಷೆಯನ್ನೂ ಸರ್ವೇಶ್ವರನು ವಿಧಿಸುವನು ಎಂಬ ವಿಷಯವನ್ನು ಸರ್ವರೂ ಒಪ್ಪತಕ್ಕದ್ದೇ ಎಂದರೆ ಶಾಸ್ತ್ರಸಮ್ಮತವಾದುದು ಮತ್ತು ಲೋಕಸಮ್ಮತವಾದುದು ಎಂಬ ಭಾವವು. ಇಲ್ಲಿ ಆದಿ ಪದದಿಂದ ಗೃಹಸ್ಥಾದಿ ಆಶ್ರಮ ಭೇದವೂ, ಬುದ್ಧಿಪೂರ್ವಕತ್ವ, ಪ್ರಾಮಾದಿಕತ್ವಾದಿಗಳೂ ಗ್ರಹಿಸಲ್ಪಟ್ಟವು. ಸರ್ವಶಾಸ್ತಾವಾದ ಸರ್ವೇಶ್ವರನು ಅವರವರ ಕರ್ಮಾನುಸಾರ ಶಿಕ್ಷೆಗಳನ್ನು ವಿಧಿಸುವನು. ತನ್ನನ್ನು ಶರಣು ಹೊಂದಿದರೆ ಆತನ ಎಲ್ಲಾ ಪಾಪಗಳನ್ನು ಹೋಗಲಾಡಿಸುವನು. ಆದರೆ ಸರ್ವರನ್ನೂ ಸಮನಾಗಿ ಕಾಣಬೇಕಾದವನು, ಹೀಗೆ ಶರಣಾಗತರನ್ನು ಮಾತ್ರ ಶಿಕ್ಷಿಸದಿರುವದೂ, ಶರಣಾಗತರಲ್ಲದವರನ್ನು ಶಿಕ್ಷಿಸುವದೂ ಯಾವ ನ್ಯಾಯವೆಂದು ಕೇಳುವದು ಹೇಗೆ ಅಸಮಂಜಸವೋ, ಹಾಗೆಯೇ ಇಲ್ಲಿಯೂ ಕೂಡ ಆಕ್ಷೇಪವು ಯುಕ್ತವಲ್ಲವು. ಎಲ್ಲಾ ಪಾಪಗಳ ನಾಶವನ್ನೂ ಹೊಂದಿ ಕಾಪಾಡಲ್ಪಟ್ಟವನು, ಬುದ್ಧಿಪೂರ್ವಕವಾದ ಅಪರಾಧವನ್ನು ಸಂಪಾದಿಸಿಕೊಂಡರೆ, ಅಲ್ಪ ಶಿಕ್ಷೆಯಿಂದ ಆತನು ಮುಂದೆ ಹಾಗೆ ಪುನರಪರಾಧವನ್ನು ಮಾಡದೆ ಹಾಗೆ ಮಾಡಿ ಕ್ಷಮಿಸಿ ಕೃಪಯಾ ಕಾಪಾಡುವವೇನೂ ಅಸಮಂಜಸವಲ್ಲವೆಂಬ ಭಾವವು. ಒಂದು ಪಾಪಕ್ಕೇನೇ ಲಘು ಗುರುದಂಡನೆಗಳನ್ನು ಶಾಸ್ತ್ರವೇ ವಿಧಿಸಿರುತ್ತದೆ. ಬ್ರಾಹ್ಮಣನಿಗೆ ಬ್ರಹ್ಮಹತ್ಯಾದಿ ಪಾಪಗಳಿಗೆ ೧೨ ವರ್ಷ

ಪರಾಧಾದಿಗಳಿರ್ಪ್ಪೋಲೆ ಲೋಕಮರ್ಯಾದೆಯಾಲುಮ್ ಉಪಪನ್ನಮ್.

ನ ಪ್ರಾಗ್ವದ್ಬುದ್ಧಿ ಪೂರ್ವಾಘೇ ನ ಚಾತ್ಯಂತ ಮ(ನಿ)ನುಗ್ರಹಃ ।
ಲಘುರ್ದಂಡಃ ಪ್ರಪನ್ನಸ್ಯ ರಾಜಪುತ್ರಾಪರಾಧವತ್ ॥೧೫॥

ಪ್ರಾಯಶ್ಚಿತ್ತವೂ ಇತರರಿಗೆ ನಾಲ್ಕರಷ್ಟು ಕಾಲ ಪ್ರಾಯಶ್ಚಿತ್ತವೂ ವಿಧಿಸಲ್ಪಟ್ಟಿರುತ್ತದೆ. "ವಿದುಷೋತಿ ಕ್ರಮೇದಂಡಭೂಯಸ್ತ್ವಂ" ಎಂಬ ವಿಧ್ಯನುಸಾರ ಪಂಡಿತನ ಅಪರಾಧಕ್ಕೆ ಹೆಚ್ಚು ದಂಡನೆಯೂ, ಇತರರಿಗೆ ಅಲ್ಪದಂಡನೆಯೂ, ಅಜ್ಞನಾದ ಬಾಲನಿಗೂ ಜ್ಞಾನಶೂನ್ಯನಾದ ಹುಚ್ಚನಿಗೂ ದಂಡಶೂನ್ಯತೆಯೂ ಹೇಳಲ್ಪಟ್ಟಿರುತ್ತದೆ. ಹೀಗೆ ಅಧಿಕಾರ ಭೇದದಿಂದ ಶಿಕ್ಷೆಯಲ್ಲಿ ಗುರುಲಘುಭಾವಗಳು ಸರ್ವಸಮ್ಮತವಾದವು. ಲೋಕನ್ಯಾಯದಲ್ಲೂ ಇಂತಹ ವ್ಯತ್ಯಾಸವು ಸಮಂಜಸವಾದುದೇ ಎಂದು ಹೇಳುತ್ತಾರೆ. **ಇನ್ವರ್ಥಂ** - ಈ ಅಭಿಪ್ರಾಯವು, ರಾಜಪುತ್ರನು ಮಾಡುವ ಅಪರಾಧದ ಹಾಗೆ, **ಲೋಕಮರ್ಯಾದೆಯಾಲುಮ್** - ಲೋಕದ ನಡೆವಳಿಕೆಯಿಂದಲೂ, **ಉಪಪನ್ನಂ** - ಯುಕ್ತವಾದುದೇ, ರಾಜಕುಮಾರನು ಎಂದಿಗೂ ಅಪರಾಧಗಳನ್ನು ಮಾಡದೇ ಇರುವವನು ಈಗ ಅಪರಾಧ ಮಾಡಿರುತ್ತಾನೆ. ಆದುದರಿಂದ ಸಾಧಾರಣ ಮನುಷ್ಯನಿಗೆ ವಿಧಿಸುವ ದಂಡನೆಗಿಂತಲೂ ಆತನಿಗೆ ಅಲ್ಪದಂಡನೆಯು ವಿಧಿಸಲ್ಪಡುತ್ತದೆ ಎಂಬ ಭಾವವು. ಜವಾನನು ಹಾಗೆಯೇ ಲಂಚ ತೆಗೆದುಕೊಂಡರೆ ಅಲ್ಪದಂಡನೆಯೂ ಅಮಲದಾರನು ಲಂಚ ತೆಗೆದುಕೊಂಡರೆ ಹೆಚ್ಚು ದಂಡನೆಯೂ ವಿಧಿಸುವದುಂಟು. ಸಾಧಾರಣದವರ ಮನೆಯಲ್ಲಿ ಕದ್ದರೆ ಅಲ್ಪದಂಡನೆಯೂ ರಾಜನ ಅರಮನೆಯಲ್ಲಿ ಕದ್ದರೆ ಹೆಚ್ಚು ದಂಡನೆಯೂ ಉಂಟು. ಹೀಗೆ ಲೋಕದಲ್ಲೂ ಒಂದೇ ವಿಧ ಅಪರಾಧಕ್ಕೆ ಅಧಿಕಾರಾನುಗುಣವಾಗಿ ಗುರುಲಘುದಂಡನೆಗಳು.

ಮೇಲೆ ಸ್ಥಾಪಿಸಿದ ಅರ್ಥವನ್ನೇ ಒಂದು ಕಾರಿಕೆಮೂಲಕ ಸಂಗ್ರಹಿಸಿ ಹೇಳುತ್ತಾರೆ :—**ಬುದ್ಧಿಪೂರ್ವಾಘೇಸತಿ** - ಪ್ರಾಯಶ್ಚಿತ್ತವಿಲ್ಲದ ಬುದ್ಧಿಪೂರ್ವಕವಾದ ಅಪರಾಧವು ಪ್ರಾಪ್ತವಾದರೆ, **ನಪ್ರಾಗ್ವತ್** - ಪ್ರಪದನ ಅನುಷ್ಠಾನವಿಲ್ಲದಾಗ ಹೇಗೋ ಹಾಗಲ್ಲವು. ಪ್ರಪದನಕ್ಕೆ ಮುಂಚೆ ಬುದ್ಧಿಪೂರ್ವಕವಾಗಿ ಅಪರಾಧ ಮಾಡಿದುದಕ್ಕೆ ನರಕಪ್ರಾಪ್ತಿ ಮೊದಲಾದವುಗಳು ಭಗವಂತನ ನಿಗ್ರಹದಿಂದ ಹೇಗೆ ಪ್ರಾಪ್ತವಾಗುತ್ತಿದ್ದವೋ, ಹಾಗೆ ಪ್ರಪದನಾನುಷ್ಠಾನಾನಂತರ ಉಂಟಾದ ಬುದ್ಧಿಪೂರ್ವಕಾಪರಾಧಕ್ಕಿಲ್ಲವು. ಹಾಗಾದರೆ ಸಂಪೂರ್ಣವಾಗಿ ಮನ್ನಿಸಿಬಿಡುವನೋ ಎಂದರೆ ಹಾಗೂ ಅಲ್ಲವು. ಪೂರ್ವದಂತೆ ಪೂರಾಶಿಕ್ಷೆಯೂ ಇಲ್ಲವು, ಪೂರಾ

ಆಗೈಯಾಲೆ, ಅಧಿಕಾರಾನುರೂಪಮಾಗ ಲಘುಫಲಮುಮ್ ವಾರಾನ್ಮೈಕ್ಕಾಗ ಪುನಃ ಪ್ರಪದನಮ್ ವಿಧಿಕ್ಕಪಡುಗಿರದು.

ಅಧಿಕಾರಿ ವಿಶೇಷೇಪಿ ಪ್ರಾಯಶ್ಚಿತ್ತಸ್ಯ ಆವಶ್ಯಕತ್ವಂ

ಶಿಷ್ಟತಯಾ ವ್ಯಪದೇಶ್ಯರಾನ ಸಮರ್ಥರುಕ್ಕು ಲೋಕ ಸಂಗ್ರಹತ್ತು

ಇಲ್ಲದೆಯೂ ಇಲ್ಲವು, ಅಲ್ಪಶಿಕ್ಷೆಯುಂಟು ಎಂದು ಮುಂದೆ ಹೇಳುತ್ತಾರೆ. ನ ಚಾತ್ಯಂತ ಮನುಗ್ರಹಃ - ಭಗವಂತನ ಸಂಪೂರ್ಣವಾದ ಅನುಗ್ರಹವೂ ಇಲ್ಲವು. ರಾಜಪುತ್ರಾಪರಾಧವತ್ - ರಾಜಪುತ್ರನು ಮಾಡುವ ಅಪರಾಧಕ್ಕೆ ಹೇಗೆ ಲಘುವಾದ ದಂಡವೋ ಹಾಗೆಯೇ, ಪ್ರಪನ್ನಸ್ಯ - ಭರನ್ಯಾಸವನ್ನು ಮಾಡಿದವನಿಗೂ ಎಂದರೆ ಮಾಡಿದುದರಿಂದಲೇ, ಲಘುರ್ದಂಡಃ - ಅಲ್ಪಶಿಕ್ಷೆಯು, ಎಂದರೆ ಪ್ರಾಯಶ್ಚಿತ್ತವಿಲ್ಲದಿರುವ ಬುದ್ಧಿಪೂರ್ವೋತ್ತರಾಘ ಪ್ರಾಪ್ತವಾದ ಸಂದರ್ಭದಲ್ಲಿ, ಪ್ರಪನ್ನನಿಗೆ ಅಲ್ಪಶಿಕ್ಷೆಯು ಎಂದು ನಿಗಮಿಸಲ್ಪಟ್ಟಿತು. ರಾಜನೂ ಹಾಗೆಯೇ ಇತರರಿಗೆ ವಿಧಿಸುವಷ್ಟು ಕ್ರೂರದಂಡನೆಯು ತನ್ನ ಪುತ್ರನಿಗೆ ಅವಶ್ಯಕವಿಲ್ಲವಾದುದರಿಂದ ಅಷ್ಟು ಕ್ರೂರದಂಡನೆಯನ್ನು ವಿಧಿಸುವನಿಲ್ಲವು. ಪೂರಾ ಮನ್ನಿಸಿಬಿಟ್ಟರೆ ಪ್ರಜೆಗಳಲ್ಲಿ ತನ್ನ ಗೌರವವು ಉಳಿಯುವುದಿಲ್ಲವಾದುದರಿಂದ ಅಲ್ಪಶಿಕ್ಷೆಯು ಆವಶ್ಯಕವೆಂದು ತಿಳಿದು ಹಾಗೆಯೇ ವಿಧಿಸುವನು. ಬುದ್ಧಿಪೂರ್ವೋತ್ತರಾಘಕ್ಕಾಗಿ ಪರಿತಾಪಪಟ್ಟು ಪ್ರಾಯಶ್ಚಿತ್ತರೂಪದಲ್ಲಿ ಶರಣಾಗತಿ ಮಾಡಿದರೆ, ಆ ಲಘುದಂಡನೆಯೂ ಇಲ್ಲವೆಂದುಪದೇಶಿಸುತ್ತಾರೆ:- ಆಗೈಯಾಲ್ -- ಆ ಕಾರಣದಿಂದ, ಎಂದರೆ ಪ್ರಪನ್ನನ ವಿಷಯದಲ್ಲಿ ಬುದ್ಧಿಪೂರ್ವಕವಾದ ಅಪರಾಧಕ್ಕೆ ಅಲ್ಪಶಿಕ್ಷೆಮಾತ್ರ ವಿಧಿಸಿರುವದರಿಂದ, ಅಧಿಕಾರಾನುರೂಪಮಾಗ - ತಾನು ಪ್ರಪದನಾನುಷ್ಠಾನ ಮಾಡಿದ ಅಧಿಕಾರಕ್ಕೆ ತಕ್ಕ ಲಘು. ಫಲಮುಮ್ ವಾರಾನ್ಮೈಕ್ಕಾಗ - ಆ ಲಘುದಂಡನೆಯೂ ಕೂಡ ಬಾರದಿರುವದಕ್ಕಾಗಿ, ಪುನಃ ಪ್ರಪದನಮ್ ವಿಧಿಕ್ಕಪಡುಗಿರದು - ಪ್ರಾಯಶ್ಚಿತ್ತರೂಪವಾದ ಪುನಃ ಪ್ರಪತ್ತಿಯು "ಅಪಾಯ ಸಂಪ್ಲವೇ" ಎಂಬ ವಾಕ್ಯದಿಂದ ವಿಧಿಸಲ್ಪಟ್ಟಿರುತ್ತದೆ.

ಭಕ್ತಿಮಾರ್ಗನಿಷ್ಠನಿಗೂ ಬುದ್ಧಿಪೂರ್ವಾಘಕ್ಕೆ ಪ್ರಾಯಶ್ಚಿತ್ತದ ಆವಶ್ಯಕತೆಯು

ಹಿಂದಿನ ವಾಕ್ಯದಲ್ಲಿ ಅಸಮರ್ಥನಾದ ಪ್ರಪನ್ನನಾದ ಭರನ್ಯಾಸವನ್ನು ಮಾಡಿದವನಿಗೆ ಬುದ್ಧಿಪೂರ್ವಾಘವು ಪ್ರಾಪ್ತವಾದರೆ, ಪ್ರಾಯಶ್ಚಿತ್ತಕ್ಕಾಗಿ ಪುನ

ಕ್ಕಾಗವುನ್, ಪ್ರಸಿದ್ಧ ನಿಮಿತ್ತಙ್ಗಳಿಲ್ ಯಥಾಶಕ್ತಿ ಪ್ರಸಿದ್ಧ ಪ್ರಾಯಶ್ಚಿತ್ತ ಮುಚಿತನ್. ಅದು ತವಿರುಗೈಯುಮ್ ಮುಱ್ಕೊನ್ನ ಆಜ್ಞಾತಿ

ಕ್ರಮ ಶರಣಾಗತಿ ಮಾಡುವದರಿಂದ ಇದೂ ಕೂಡ ಮನ್ನಿಸಲ್ಪಟ್ಟು ದೇಹಾವಸಾನದಲ್ಲಿ ಮೋಕ್ಷವು. ಪ್ರಾಯಶ್ಚಿತ್ತಮಾಡಿಕೊಳ್ಳದಿದ್ದರೆ, ಲಘುದಂಡನೆಯನ್ನು ವಿಧಿಸಿ, ಆತನನ್ನು ಮನ್ನಿಸಿ ಈ ದೇಹಾವಸಾನದಲ್ಲೇ ಮೋಕ್ಷವೆಂದು ಹೇಳಲ್ಪಟ್ಟಿತು. ಪ್ರಸಂಗಾತ್ ಶಕ್ತನಾಗಿ ಪ್ರಪನ್ನನಾದ ಭಕ್ತಿನಿಷ್ಠನಿಗೆ ಹೇಗೆಂದು ತಿಳಿಸುತ್ತಾರೆ.

ಶಿಷ್ಟತಯಾ-ಕರ್ಮ ಜ್ಞಾನ ಭಕ್ತಿಯೋಗ ನಿಷ್ಠರೆಂದು, **ವ್ಯಪದೇಶ್ಯರಾನ**-ಪ್ರಸಿದ್ಧರೆಂದು ಹೇಳಿಸಿಕೊಳ್ಳುವ, **ಸಮರ್ಥರುಕ್ಕು** - ಉಪಾಸನಾರೂಪ ಉಪಾಯಕ್ಕೆ ಸಮರ್ಥರಾದ ಪ್ರಪನ್ನರಿಗೆ, ಇಲ್ಲಿ ಸಮರ್ಥರು ಯಾರು ಎಂಬುವದೂ, ಹೇಗೆ ಸಮರ್ಥರೆಂಬುವದೂ ಹೇಳಲ್ಪಡಲಿಲ್ಲವು. ಹಿಂದೆಯೆಲ್ಲಾ ಭರನ್ಯಾಸನಿಷ್ಠನ ವಿಷಯ ಹೇಳಿದುದರಿಂದ ಈ ವಾಕ್ಯವೂ ಅವರಿಗೇನೇ ಅನ್ವಯಿಸುತ್ತದೆಂದು ಭಾವಿಸಿದರೆ, ಪ್ರಾಯಶ್ಚಿತ್ತಕ್ಕೆ ಬೇಕಾದ ದ್ರವ್ಯ ಮೊದಲಾದ ಉಪಪತ್ತಿಯುಳ್ಳವರೆಂದು ಅರ್ಥ ಹೇಳಬಹುದು. ಹಾಗಲ್ಲದೆ ಭರನ್ಯಾಸನಿಷ್ಠರೆಲ್ಲಾ ಆಕಿಂಚನ್ಯವುಳ್ಳವರಾಗಿ ಅಶಕ್ತರು. ಭಕ್ತಿಯೋಗನಿಷ್ಠರು ಆಕಿಂಚನ್ಯವಿಲ್ಲದ ಸಮರ್ಥರಾದುದರಿಂದ ಅವರನ್ನುದ್ದೇಶಿಸಿ ಹೇಳಲ್ಪಟ್ಟಿತೆಂದು ಭಾವಿಸಬಹುದು. ಅಥವಾ ಈ ಮೇಲಿನ ಎರಡು ವಿಧ ಅಧಿಕಾರಿಗಳನ್ನೂ ಕುರಿತು ಹೇಳಲ್ಪಟ್ಟಿತೆಂದು ಹೇಳಿದರೂ ಏನೊಂದೂ ಬಾಧಕವಿಲ್ಲವು. ಭರನ್ಯಾಸನಿಷ್ಠರು ಅಸಮರ್ಥರಾದ ಪ್ರಪನ್ನರು, ಸಮರ್ಥರಾದ ಪ್ರಪನ್ನರು ಉಪಾಸನಾನಿಷ್ಠರು, **ಲೋಕಸಂಗ್ರಹತ್ತುಕ್ಕಾಗವುನ್** – ಪಾಪಗಳು ಕಳೆಯುವದಕ್ಕಾಗಿ ಮಾತ್ರವಲ್ಲದೆ ಲೋಕದ ಜನರು ಅನುಸರಿಸಿ ನಡೆಯುವದಕ್ಕಾಗಿಯೂ ಕೂಡ, **ಪ್ರಸಿದ್ಧ ನಿಮಿತ್ತಙ್ಗಳಿಲ್**-ಪ್ರಸಿದ್ಧವಾದ ಕಾರಣಗಳಿಂದ ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾದರೆ, **ಯಥಾಶಕ್ತಿ** - ತನ್ನ ಶಕ್ತ್ಯನುಸಾರವಾಗಿ, **ಪ್ರಸಿದ್ಧ ಪ್ರಾಯಶ್ಚಿತ್ತಮ್** - ಶಾಸ್ತ್ರದಲ್ಲಿ ಪ್ರಸಿದ್ಧವಾದ ಪ್ರಾಯಶ್ಚಿತ್ತಾನುಷ್ಠಾನವು, ಅಥವಾ ಪ್ರಸಿದ್ಧವಾಗಿ ಎಲ್ಲರೂ ತಿಳಿಯುವಂತೆ ಪ್ರಾಯಶ್ಚಿತ್ತಮಾಡಿಕೊಳ್ಳುವದು, **ಉಚಿತಮ್** - ಯೋಗ್ಯವು. ಈ ಭಕ್ತಿಯೋಗನಿಷ್ಠನು ತನ್ನ ಉಪಾಸನಾದಿಗಳಿಂದ ಮಹಾಶಿಷ್ಟನೆಂದು ಪ್ರಸಿದ್ಧನು. ಅಂತವನಿಗೆ ಬುದ್ಧಿಪೂರ್ವೋತ್ತರಾಘವು ಪ್ರಸಿದ್ಧವಾಗಿಯೇ ಪ್ರಾಪ್ತವಾದರೆ, ಅಂಥಾವನು ಪಾಪಪರಿಹಾರಕ್ಕೆ ಮಾತ್ರವೇ ಅಲ್ಲದೆ ಲೋಕಸಂಗ್ರಹಾರ್ಥವಾಗಿಯೂ ಪ್ರಸಿದ್ಧವಾಗಿಯೇ ಪ್ರಾಯಶ್ಚಿತ್ತವನ್ನು ಅನುಷ್ಠಿಸತಕ್ಕದ್ದು ಅವಶ್ಯ

ಲಂಘನವೂಂವ್. ಸೈರಂಧ್ರಿಕ್ಕೈಕ್ಕು ಸೇವೈ ತಪ್ಪಿನಪೋದು ತಾದಾತ್ವಿಕ ಮಾನಪರಿಮಳಾದಿಗಳ್ಳೈಯುಂ ಇಳನ್ದು ಭಯಾನುಭವಮುಮುಂಡಾಮಾ

ಕವು. ಏಕೆಂದರೆ:-ಆತನು ಶಿಷ್ಟತಮಾ ಶ್ರೇಷ್ಠನಾದುದರಿಂದ, "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ"(ಗೀ)ಎಂದು ಹೇಳಿರುವದರಿಂದ, ಇಂತಹ ಶ್ರೇಷ್ಠರಾದ ಮಹನೀಯರೇ ಬುದ್ಧಿಪೂರ್ವೋತ್ತರಾಘಕ್ಕಾಗಿ ಪ್ರಾಯಶ್ಚಿತ್ತವನ್ನಾಚರಿಸಿರುವದರಿಂದ ನಾವೂ ಹಾಗೆ ಮಾಡತಕ್ಕದ್ದೆಂದು ತೋರಲಿ ಎಂಬವದಕ್ಕಾಗಿ ಕೂಡ ಅನುಷ್ಠಿಸತಕ್ಕದ್ದೆಂಬ ಭಾವವು. ಆದುದರಿಂದ ಭಕ್ತಿಮಾರ್ಗನಿಷ್ಠನು ಬುದ್ಧಿಪೂರ್ವೋತ್ತರಾಘಕ್ಕೆ ಎರಡು ಕಾರಣಗಳಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳತಕ್ಕದ್ದು. (೧) ಪಾಪನಿವೃತ್ತ್ಯರ್ಥವಾಗಿಯೂ, (೨) ಲೋಕಸಂಗ್ರಹಾರ್ಥವಾಗಿಯೂ ಪ್ರಾಯಶ್ಚಿತ್ತವು ಆವಶ್ಯಕವು. ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ, ಪ್ರತ್ಯವಾಯ ಉಂಟೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—ಅದು ತವಿರುಗೈಯುಮ್ - ಬುದ್ಧಿಪೂರ್ವೋತ್ತರಾಘಕ್ಕೆ ಇಂತಹ ಪ್ರಾಯಶ್ಚಿತ್ತವನ್ನು ತ್ಯಜಿಸುವದು, ಮುಱ್ಕೊನ್ನ - ಹಿಂದೆ ಪ್ರತಿಪಾದಿಸಿದ ಹಾಗೆ, ಎಂದರೆ ಆಜ್ಞಾಕೈಙ್ಕರ್ಯತ್ಯಾಗವು ಹೇಗೆ ಭಗವನ್ನಿಗ್ರಹಕ್ಕೆ ಕಾರಣವಾಗುತ್ತದೋ, ಹಾಗೆ, ಆಜ್ಞಾತಿಲಂಘನವೂಂವ್ - ಭಗವಂತನ ಆಜ್ಞೆಯನ್ನು ಮೀರಿದ ಹಾಗಾಗುತ್ತದೆ, ಎಂದರೆ ಭಗವನ್ನಿಗ್ರಹಕ್ಕೆ ಪಾತ್ರನಾಗುತ್ತಾನೆಂಬ ಭಾವವು. ಇದು ಸರ್ವ ಪ್ರಪನ್ನರಿಗೂ ಅನ್ವಯಿಸುವ ಸಾಮಾನ್ಯ ವಾಕ್ಯವಾಗಿ ಭಾವಿಸಬಹುದು. ಸದ್ವಾರಕ ಪ್ರಪತ್ತಿನಿಷ್ಠನೇ ಆಗಲಿ, ಅದ್ವಾರಕ ಪ್ರಪತ್ತಿನಿಷ್ಠನೇ ಆಗಲಿ ಬುದ್ಧಿಪೂರ್ವಕವಾದ ಅಪರಾಧಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇ ಬೇಕು. ಹಾಗೆ ಮಾಡಿಕೊಳ್ಳದೇ ಹೋದರೆ ಅಪ್ರಪನ್ನನ ಹಾಗಲ್ಲದೆ ಪ್ರಪನ್ನನಿಗೆ ಎರಡು ವಿಧವಾಗಿ ಅನರ್ಥಕ್ಕೆ ಕಾರಣವಾದುದಾಗುತ್ತದೆ. ಹೇಗೆಂಬುವದನ್ನು ಮುಂದಿನ ವಾಕ್ಯದಿಂದ ಸದೃಷ್ಟಾಂತವಾಗಿ ತಿಳಿಸುತ್ತಾರೆ:— ಸೈರಿಂಧ್ರೀ ಎಂದರೆ ರಾಜನ ಪಟ್ಟಮಹಿಷಿ ಮೊದಲಾದವರುಗಳಿಗೆ ಅಲಂಕಾರ ಮಾಡುವವಳು, ಇಂಥಾವಳಿಗೆ ಯಾವುದೋ ಒಂದು ಬುದ್ಧಿಪೂರ್ವಕಾಪರಾಧದ ಮೂಲಕ, ಸೇವೆತಪ್ಪಿನಪೋದು- ಈ ಅಲಂಕಾರ ರೂಪಕೈಙ್ಕರ್ಯ ತಪ್ಪಿಹೋದಾಗ ತಾದಾತ್ವಿಕಮಾನ - ಅವರೊಂದಿಗೆ ಆಗಲೇ ಉಂಟಾಗುತ್ತಿದ್ದ, ಪರಿಮಳಾದಿಗಳ್ಳೈಯುಮ್ - ಸುಗಂಧದ್ರವ್ಯ ಮೊದಲಾದವುಗಳ ಭೋಗವನ್ನೂ ಕೂಡ, ಇಳೈನ್ದು - ಪರಿತ್ಯಜಿಸಿ, ಎಂದರೆ ಕಳೆದುಕೊಂಡು, ಭಯಾನುಭವಮುಮ್ -

ಪ್ಪೋಲೆ ಆಜ್ಞಾತಿಲಂಘನಂ ಇರೆಂಡು ಪಡಿಯನರ್ಥಮ್.
ಬುದ್ಧಿ ಪೂರ್ವೋತ್ತರಾಘ ಶಮನಾರ್ಥಂಚ ಪ್ರಥಮ
ಪ್ರಪದನ ಮಿತಿವಾದಸ್ಯನಿರಾಸಃ

ಸ್ವೇಚ್ಛಾಮಾತ್ರತ್ತಾಲೇ ಬುದ್ಧಿಪೂರ್ವೋತ್ತರಾಘತ್ತೈಯುಮ್‌ಪತ್ತ

ರಾಜನು ಇನ್ನೇನು ಶಿಕ್ಷೆಯನ್ನು ವಿಧಿಸುವನೋ ಎಂಬ ಭಯಪ್ರಾಪ್ತಿಯೂ, **ಉಂಡಾಮಾಪ್ಪೋಲೆ** - ಉಂಟಾಗುವ ಹಾಗೆ ಇಂತಹ, **ಆಜ್ಞಾತಿಲಂಘನಮ್**- ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದಿರುವ ಆಜ್ಞೆಯನ್ನು ಮೀರಿದ, **ಇರಂಡುಪಡಿ**- ಎರಡು ವಿಧವಾಗಿ. **ಅನರ್ಥಮ್** - ಹಾನಿಯನ್ನುಂಟುಮಾಡುತ್ತದೆ. ಈ ರಾಜ್ಞಿಯರನ್ನಲಂಕರಿಸುವ ಸ್ತ್ರೀಗೆ ಹೇಗೆ (೧) ಕೈಙ್ಕರ್ಯ ತಪ್ಪಿದುದರಿಂದ ಜೀವನೋಪಾಯವು ತಪ್ಪಿಹೋಯಿತೋ, (೨) ರಾಜನು ಏನು ದಂಡನೆ ವಿಧಿಸುವನೋ ಎಂಬ ಭಯದಿಂದುಂಟಾದ ಅಸುಖವೋ, ಹೇಗೆ ಎರಡು ವಿಧ ಅನರ್ಥ ಉಂಟಾಯಿತೋ ಹಾಗೆಯೇ ಪ್ರಪನ್ನರಿಗೂ ಹೀಗೆ ಬುದ್ಧಿಪೂರ್ವೋತ್ತರಾಘಕ್ಕೆ ಸರ್ವೇಶ್ವರನ ಆಜ್ಞಾರೂಪ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ, ಎರಡು ವಿಧ ಅನರ್ಥ ಉಂಟು: (೧) ಭಗವದ್ಭಾಗವತ ಕೈಙ್ಕರ್ಯವು ತಪ್ಪಿಹೋಗುವದೂ (೨) ಏನು ಶಿಕ್ಷಿಸಿಬಿಡ್ತುವನೋ ಎಂಬ ನಿಗ್ರಹರೂಪ ಭಯವೂ. ಆದುದರಿಂದ ಪ್ರಾಯಶ್ಚಿತ್ತಾವಲಂಬನದಿಂದ ಈ ಎರಡು ವಿಧ ಅನರ್ಥಗಳೂ ತಪ್ಪುತ್ತವೆಂಬ ಭಾವವು.

ಪ್ರಥಮ ಪ್ರಪದನನೇ ಬುದ್ಧಿಪೂರ್ವೋತ್ತರಾಘದ ಶಮನಾರ್ಥವೆಂಬ ವಾದದ ನಿರಾಸವು

ಪ್ರಥಮ ಪ್ರಪದನಕಾಲದಲ್ಲೇ ಬುದ್ಧಿಪೂರ್ವೋತ್ತರಾಘದ ಪ್ರಶ್ಲೇಷಕ್ಕಾಗಿಯೂ ಏಕೆ ಪ್ರಪದನವನ್ನನುಷ್ಠಿಸಕೂಡದು ಎಂದು ಹಿಂದೆಯೇ ಚರ್ಚೆ ನಡೆದು ಹಾಗೆ ಶಾಸ್ತ್ರಪ್ರಮಾಣವಿಲ್ಲವಾದುದರಿಂದ ಹಾಗೆ ಅನುಷ್ಠಿಸುವದು ಸರಿಯಿಲ್ಲವೆಂದೂ, ಇನ್ನೂ ಅದರಿಂದುಂಟಾಗುವ ದೋಷಗಳೂ ಉಂಟೆಂದೂ, ಉಪಪಾದಿಸಲ್ಪಟ್ಟವು. ಈಗ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವು ಆವಶ್ಯಕವೆಂದೂ, ಹಾಗೆ ಪ್ರಾಯಶ್ಚಿತ್ತವನ್ನನುಷ್ಠಿಸದಿದ್ದರೆ ಎರಡು ವಿಧ ಅನರ್ಥಪ್ರಾಪ್ತಿಯೆಂದೂ ಹೇಳಿದನಂತರ ಬುದ್ಧಿಪೂರ್ವೋತ್ತರಾಘದಿಂದುಂಟಾಗುವ ಅನರ್ಥಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ ಪ್ರಮಾಣಬಲವಿಲ್ಲದಿದ್ದರೂ, ನಾವೇ ಏಕೆ ಸ್ವತಂತ್ರಿಸಿ ಸ್ವೇಚ್ಛಾಮಾತ್ರದಿಂದಲೇ ಅನುಷ್ಠಿಸಕೂಡದು ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ:—

ಅಡಿಯಿಲೇ ಪ್ರಪದನಂ ಪಣ್ಣಿನಾಲೋ ವೆನ್ನಿಲ್ ? ಇದು ಉಪಾಸನತ್ತೈಯುಮ್ ಬುದ್ಧಿಪೂರ್ವೋತ್ತರಾಘತ್ತುಕ್ಕುಮ್ ಪರಿಹಾರಮಾಗ ಪಣ್ಣಿನಾಲೋ, ಅಙ್ಗ ಪ್ರಪತ್ತಿಯುಮ್ ಅದುಕ್ಕುಚ್ಚೇರ ಪಣ್ಣಿನಾಲೋ ವೆಙ್ಗಿರ ಪ್ರತಿಬಂದಿಯಾಲೇ ನಿರಸ್ತಮ್.

ಸ್ವೇಚ್ಛಾಮಾತ್ರತ್ತಾಲೇ - ಪ್ರಮಾಣವಾಕ್ಯವಿಲ್ಲದಿದ್ದರೂ, ನಾವೇ ಸ್ವತಂತ್ರಿಸಿ ನಮ್ಮ ಇಚ್ಛಾಮಾತ್ರದಿಂದಲೇ, ಬುದ್ಧಿಪೂರ್ವೋತ್ತರಾಘವನ್ನೂ, **ಪತ್ತ** - ಕುರಿತು, **ಅಡಿಯಿಲೇ** – ಪ್ರಥಮದಲ್ಲೇ, **ಪ್ರಪದನಂ ಪಣ್ಣಿನಾಲೋವೆನ್ನಿಲ್**- ಇದನ್ನು ಸೇರಿಸಿ ಪ್ರಪದನವನ್ನನುಷ್ಠಿಸಿದರೋ ? ಎಂದರೆ, ಈ ವಾದವು ಅಯುಕ್ತವಾದುದೆಂದು ತೋರಿಸುವದಕ್ಕಾಗಿ ಅಂತಹ ಚೋದ್ಯಗಳನ್ನು ಉದಾಹರಿಸಿ ನಿರಸನಮಾಡುತ್ತಾರೆ. **ಇದು** – ಈ ಚೋದ್ಯವು, **ಉಪಾಸನತ್ತೈಯುಮ್** - ಉಪಾಸನವನ್ನೂ ಕೂಡ, ಬುದ್ಧಿಪೂರ್ವೋತ್ತರಾಘಕ್ಕೂ ಕೂಡ, **ಪರಿಹಾರಮಾಗ ಪಣ್ಣಿನಾಲೋ**- ಪರಿಹಾರವಾಗಿ ಏಕೆ ಮಾಡಕೂಡದು? ಆ ಉಪಾಸನಕ್ಕೆ ಸೇರಿದ **ಅಙ್ಗಪ್ರಪತ್ತಿಯುಮ್** - ಅಂಗವಾದ ಶರಣಾಗತಿಯನ್ನೂ ಕೂಡ, **ಅದುಕ್ಕುಚ್ಚೇರ** - ಅದರೊಂದಿಗೇ ಸೇರಿಸಿ, ಎಂದರೆ ಬುದ್ಧಿಪೂರ್ವೋತ್ತರಾಘ ನಿವೃತ್ತಿಗಾಗಿ ಎಂಬರ್ಥವು, **ಪಣ್ಣಿನಾಲೋ** - ಏಕೆ ಮಾಡಕೂಡದು ? **ಎಙ್ಗಿರ ಪ್ರತಿಬಂಧಿಯಾಲೇ**- ಎಂಬುವ ಪ್ರತಿಚೋದ್ಯಗಳಿಂದ, **ನಿರಸ್ತಮ್** - ನಿರಸನಮಾಡಲ್ಪಟ್ಟಿತು. ಈ ಸಂದರ್ಭಗಳಲ್ಲಿ ಶಾಸ್ತ್ರವೂ ಶಾಸ್ತ್ರಜ್ಞರ ಅನುಷ್ಠಾನಗಳಿಗೂ ನಮ್ಮ ವಾದವು ಸಮಂಜಸವಾಗಿರಬೇಕು. ಹಾಗಲ್ಲದೆ ಶಾಸ್ತ್ರಕ್ಕೂ, ಶಾಸ್ತ್ರಜ್ಞರ ಅನುಷ್ಠಾನಕ್ಕೂ, ವಿರೋಧವಾಗಿ ಸ್ವಮತಿ ವಿಜೃಂಭಣೆಯಿಂದುಂಟಾದ ಯುಕ್ತಿವಾದ ದಿಂದ ಸ್ವತಂತ್ರಿಸಿ ತನ್ನಿಷ್ಟಾನುಸಾರವಾದ ಅನುಷ್ಠಾನವು ಲೋಕಗರ್ಹಿತವಾದುದು. ಆದುದರಿಂದ ತನ್ನಿಷ್ಟಾನುಸಾರ, ಪ್ರಥಮ ಪ್ರಪದನ ಮಾಡುವಾಗಲೇ ಬುದ್ಧಿಪೂರ್ವೋತ್ತರಾಘ ನಿವೃತ್ತಿಗೂ ಪ್ರಪದನ ಮಾಡಿ ಬಿಟ್ಟರೋ ? ಎಂದರೆ, ಅಂತಹ ಅನುಷ್ಠಾನಕ್ಕೆ ಶಾಸ್ತ್ರಬಲವೂ ಇಲ್ಲವು, ಹಾಗೆಯೇ, ಮಹನೀಯರ ಅನುಷ್ಠಾನವೂ ಇಲ್ಲವು ಎಂದು ಹೇಳುವದಕ್ಕಾಗಿ ಅಂತಹ ಚೋದ್ಯವನ್ನೇ ತಾವು ಮಾಡಿ ಅಸಮಂಜಸವೆಂದು ತೋರ್ಪಡಿಸುತ್ತಾರೆ. ಹೇಗೆಂದರೆ ಭಕ್ತಿನಿಷ್ಠನೂ ಕೂಡ ಬುದ್ಧಿಪೂರ್ವಾಘ ಪ್ರಾಪ್ತಿಯಿಲ್ಲದಿರುವದಕ್ಕಾಗಿಯೂ ಕೂಡ ಉಪಾಸನವನ್ನೇ ಏಕೆ ಅನುಷ್ಠಿಸಕೂಡದು ? ಅಥವಾ ಅಙ್ಗಪ್ರಪತ್ತಿ ಮಾಡುವಾಗಲೇ ಈ ಬುದ್ಧಿಪೂರ್ವೋತ್ತರಾಘ ನಿವೃತ್ತಿಯನ್ನು ಸೇರಿಸಿ ಏಕೆ ಅನುಷ್ಠಿಸಕೂಡದು ಎಂದೂ ಕೂಡ ಕೇಳ

ಇನ್ವಿರುವರುಕ್ಕುಮ್ ಇಪ್ಪಡಿಯಾಗಟ್ಟುಮೆನ್ನೈ ಭಾಷ್ಯಾದಿವಿರುದ್ಧಮಾಗೈ ಯಾಲೇ ಅಪಸಿದ್ಧಾನ್ತಮ್. ಉಪಸ್ತಿ ಪ್ರಭೃತಿಗಳಾನ ಬ್ರಹ್ಮನಿಷ್ಠರ್ಗ

ಬಹುದು. ಇವು ಹೇಗೆ ಶಾಸ್ತ್ರವಿರುದ್ಧವೋ ಮತ್ತು ಶಾಸ್ತ್ರಜ್ಞರ ಅನುಷ್ಠಾನಕ್ಕೂ ವಿರೋಧವೋ, ಹಾಗೆಯೇ ಮೊದಲಿನ ಚೋದ್ಯವೂ ಸಹ ಎಂಬ ಭಾವವು. ಭಕ್ತಿ ನಿಷ್ಠನು ಬುದ್ಧಿಪೂರ್ವಾಘದ ಫಲವನ್ನು ಅನುಭವಿಸಿಯೇ ತೀರಬೇಕು. ಇದು ಪ್ರಾರಬ್ಧ ಪಾಪಾನುಗುಣವಾಗಿ ಪ್ರಾಪ್ತವಾಗುತ್ತದೆ. ಆದರೆ ಅಂತಹ ಪಾಪವು ಪ್ರತಿಪದೋಕ್ತ ಪ್ರಾಯಶ್ಚಿತ್ತವಿಧಿ ಎಂದರೆ ಈ ಪಾಪಕ್ಕೆ ಈ ಪ್ರಾಯಶ್ಚಿತ್ತವು ಎಂದು ವಿಧಿಸಿರುವ ರೀತ್ಯಾ, ಪ್ರಾಯಶ್ಚಿತ್ತ ಮಾಡಿಕೊಂಡರೆ ನಿವೃತ್ತಿಯೇ ವಿನಾ, ತನ್ನ ಇಷ್ಟಾನುಸಾರ ನಡೆಯುವದರಿಂದ ನಿವೃತ್ತಿಯು ಸಿದ್ಧಿಸುವದಿಲ್ಲವೆಂಬ ಭಾವವು

ಹೀಗೆ ಶಾಸ್ತ್ರವಿರುದ್ಧವೆಂದೂ ಶಾಸ್ತ್ರಜ್ಞರನುಷ್ಠಾನಕ್ಕೂ ವಿರೋಧವೆಂದೂ ಮುಂದೆ ಪ್ರದರ್ಶಿಸಲ್ಪಡುತ್ತದೆ. ಹಿಂದೆ ಚೋದ್ಯಕ್ಕೆ ಪ್ರತಿಚೋದ್ಯದಿಂದ ಸರಿಯಲ್ಲವೆಂದು ಹೇಳಿದರು. ಮುಂದೆ ಈ ಎರಡು ಅಭಿಪ್ರಾಯಗಳನ್ನೂ ಅನುಮೋದಿಸಿದರೋ ಎಂದರೆ ಶ್ರೀ ಭಾಷ್ಯಾದಿಗಳುಪದೇಶಕ್ಕೆ ವಿರುದ್ಧವಾಗುತ್ತದೆಂದು ತಿಳಿಸುತ್ತಾರೆ. **ಇನ್ವಿರವರುಕ್ಕುಮ್** - ಈ ಇಬ್ಬರ ವಿಷಯದಲ್ಲೂ, ಭರನ್ಯಾಸ ನಿಷ್ಠ ಭಕ್ತಿಯೋಗನಿಷ್ಠರಿಬ್ಬರ ವಿಷಯದಲ್ಲೂ, **ಇಪ್ಪಡಿಯಾಗಟ್ಟುಮೆನ್ನೈ** - ಹೀಗೆಯೇ ಆಗಲಿ ಎಂದು ಹೇಳುವದು, **ಭಾಷ್ಯಾದಿ ವಿರುದ್ಧಮಾಗೈಯಾಲೇ** - ಶ್ರೀ ಭಾಷ್ಯವೇ ಮೊದಲಾದವುಗಳಿಗೆ ವಿರೋಧವಾದುದರಿಂದ, ಅಪಸಿದ್ಧಾನ್ತವು. ಶ್ರೀ ಭಾಷ್ಯದಲ್ಲಿ ಇಂತಹ ಸ್ವೇಚ್ಛಾಪ್ರವೃತ್ತಿ ಕೂಡದೆಂದು ಎಲ್ಲಿ ಹೇಳಿರುತ್ತದೆ ಎಂದರೆ, **"ಅನಾವಿಷ್ಕುರ್ವನ್ನನ್ವಯಾತ್"** (ಬ್ರ. ಸೂ. ೩ ೪.೪೯) ಎಂಬ ಸೂತ್ರದಲ್ಲಿ ಹಾಗೆ ಉಪಪಾದಿಸಲ್ಪಟ್ಟಿರುತ್ತದೆ. ಈ ಸೂತ್ರದ ವಿಷಯ ವಾಕ್ಯವಾದ **"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್"** ಎಂದರೆ ವೈರಾಗ್ಯವು ಆವಶ್ಯಕವಾದುದರಿಂದ ಬ್ರಾಹ್ಮಣನು ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬಾಲಭಾವದಿಂದಿರತಕ್ಕದ್ದು." ಎಂಬುವದರಿಂದ ಬಾಲನ ಹಾಗೆ ಸ್ವೇಚ್ಛಾವೃತ್ತಿಯನ್ನು ಸ್ವೀಕರಿಸಬಹುದು ಎಂಬರ್ಥವೇ ಅಥವಾ ಆ ಪಾಂಡಿತ್ಯ ಮಾಹಾತ್ಮ್ಯಯಿಂದ ಬಾಲನ ಹಾಗೆ ಡಂಭಾದಿಗಳಿಲ್ಲದೆ ಇರತಕ್ಕದ್ದೇ ಎಂಬ ಸಂದೇಹದಲ್ಲಿ, ಸೂತ್ರವು ಹೇಳುವದೇನೆಂದರೆ :—**ಅನಾವಿಷ್ಕುರ್ವ**ೞ - ಬಾಲನ ಹಾಗೆ ಸ್ವಮಾಹಾತ್ಮ್ಯಯಲ್ಲಿ ಅಭಿಮಾನವಿಲ್ಲದವನಾಗಿರತಕ್ಕದ್ದು, ಎಂದು ಹೇಳ

ಳುಡೈಯ ಅನುಷ್ಠಾನತ್ತುಕ್ಕುಮ್ ವಿರುದ್ಧಮ್.

ಲ್ಪಟ್ಟಿತು. ಇಚ್ಛಾನುಸಾರ ಪ್ರವೃತ್ತಿಯು ಹೇಳಲ್ಪಡಲಿಲ್ಲವು. ಏಕೆಂದರೆ, **ಅನ್ಯ ಯಾತ್** - ಸ್ವಪಾಂಡಿತ್ಯ ಮಾಹಾತ್ಮ್ಯಯಲ್ಲಿ ಅಭಿಮಾನವಿಲ್ಲದಿರುವಿಕೆಯು ಬ್ರಹ್ಮ ವಿದ್ಯೆಗೆ ಸಹಕಾರಿ ಎಂದು **ಸಂಬಂಧಿಸಿ** ಹೇಳಿರುವದರಿಂದ, ಬ್ರಹ್ಮವಿದ್ಯಾನಿಷ್ಠ ನಿಗೆ ಸ್ವೇಚ್ಛಾಪ್ರವೃತ್ತಿಯು ಮುಖ್ಯವಾಗಿ ನಿಷೇಧಿಸಲ್ಪಟ್ಟಿರುತ್ತದೆ. ಆದುದರಿಂದ **"ಸ್ವೇಛ್ಛಾಮಾತ್ರತ್ತಾಲೆ । ಬುದ್ಧಿಪೂರ್ವೋತ್ತರಾಘತ್ತೈಯುಮ್ ಪತ್ತ ಅಡಿಯಿಲೇ ಪ್ರಪದನ"**ವು ಶ್ರೀ ಭಾಷ್ಯಾದಿಗಳಿಗೆ ವಿರುದ್ಧವಾದುದು ಸ್ವೇಚ್ಛಾ ಪ್ರವೃತ್ತಿಯು **"ನಾವಿರತೋದುಶ್ಚರಿತಾತ್"** ಎಂಬ ಶ್ರುತಿಯಲ್ಲೂ ನಿಷೇಧಿಸ ಲ್ಪಟ್ಟಿರುತ್ತದೆ. (೧೫೯ನೆಯ ಪುಟ ನೋಡಿ) **"ಆಹಾರ ಶುದ್ಧೌ ಸತ್ವಶುದ್ಧಿಃ"** ಎಂಬ ಶ್ರುತಿಯಲ್ಲೂ ಸ್ವೇಚ್ಛಾಪ್ರವೃತ್ತಿ ಕೂಡದೆಂಬುವದು ತೋರಿಬರುತ್ತದೆ. **ಶ್ರೀ ಭಾಷ್ಯಾದಿ** ಎಂಬಲ್ಲಿ **ಆದಿಶಬ್ದದಿಂದ**ಶ್ರುತಿ ಮೊದಲಾದ ಇತರ ಪ್ರಮಾಣ ಗಳೆಲ್ಲಾ **ಊಹಿಸಲ್ಪಟ್ಟವು**. ಇದೂ ಅಲ್ಲದೆ ಶ್ರೀ ಭಾಷ್ಯಕಾರರವರು **"ತದಧಿ ಗಮ ಉತ್ತರಪೂರ್ವಾಘಯೋಃ ರಶ್ಲೇಷ ವಿನಾಶೌ ತದ್ವ್ಯಪದೇಶಾತ್"** (ಬ್ರ. ಸೂ. ೪. ೧. ೧೩) "ಬ್ರಹ್ಮವಿದ್ಯೆಯು ಪ್ರಾಪ್ತವಾದ ಒಡನೆಯೇ ಅದಕ್ಕೆ ಮುಂದೆ ಮಾಡಿದ ಪಾಪಗಳ ನಾಶವೂ, ತದನಂತರ ಮಾಡುವ ಪಾಪಗಳ ಅಶ್ಲೇ ಷವೂ, ಉಂಟಾಗುತ್ತವೆ, ಏಕೆಂದರೆ ಹಾಗೆ ಶ್ರುತಿಯಲ್ಲಿ ಹೇಳಿರುವದರಿಂದ" ಎಂಬ ಸೂತ್ರದ ಭಾಷ್ಯದಲ್ಲಿ **"ತದಿದಮಶ್ಲೇಷ ವಚನಂಪ್ರಾಮಾದಿಕ ವಿಷಯಂ ಮನ್ತವ್ಯಂ"** ಎಂದು ಹೇಳಿರುವದರಿಂದ ಪ್ರಾಮಾದಿಕವಾದ ಉತ್ತರಾಘದ ಅಶ್ಲೇ ಷವೇ ವಿನಾ ಬುದ್ಧಿಪೂರ್ವೋತ್ತರಾಘ ವಿಷಯುವಲ್ಲವು ಎಂಬುವದು ಸ್ಪಷ್ಟವು. ಬ್ರಹ್ಮವಿತ್ತಾದವನು ನಿಷೇಧಶಾಸ್ತ್ರಕ್ಕೆ ವಶ್ಯನಾಗದೆ ಸ್ವೇಚ್ಛೆಯಿಂದ ಮನಸ್ಸು ಬಂದಂತೆ ಇರಬಹುದಲ್ಲಾ. ಏಕೆಂದರೆ ಉತ್ತರಾಘದ ಅಶ್ಲೇಷವಿಲ್ಲವಲ್ಲಾ ಎಂದರೆ ಹಾಗಲ್ಲವು. ಅದಕ್ಕಾಗಿಯೇ ಬುದ್ಧಿಪೂರ್ವೋತ್ತರಾಘದ ಅಶ್ಲೇಷವೂ ಉಂಟಾ ಗುವದಿಲ್ಲವೆಂದು ಶ್ರೀ ಭಾಷ್ಯಕಾರರು ಹೇಳಿರುತ್ತಾರೆ. ಆದುದರಿಂದ ಇಂತಹ ಸ್ವೇಚ್ಛಾಪ್ರವೃತ್ತಿಯು ಸರಿಯಲ್ಲವೆಂಬ ಭಾವವು

ಮುಂದೆ ಶಾಸ್ತ್ರಜ್ಞರೂ ಶಾಸ್ತ್ರಪ್ರವರ್ತಕರೂ ಆದ ಬ್ರಹ್ಮನಿಷ್ಠರ ಆಚರ ಣೆಗೂ, ಅಂತಹ ಸ್ವೇಚ್ಛಾಪ್ರವೃತ್ತಿಯು ವಿರೋಧವಾದುದೆಂದು ತಿಳಿಸುತ್ತಾರೆ: **ಉಷಸ್ತಿಪ್ರಭೃತಿಗಳಾನ** - ಉಷಿಸ್ತಿಯೇ ಮೊದಲಾದ, **ಬ್ರಹ್ಮನಿಷ್ಠರುಗಳು ಡೈಯ** - ಬ್ರಹ್ಮವಿದ್ಯಾನಿಷ್ಠರಾದವರು ಅಥವಾ ಪರಬ್ರಹ್ಮೋಪಾಸನಾನಿಷ್ಠರ ಅನುಷ್ಠಾನಕ್ಕೂ ಸಹ ವಿರುದ್ಧವಾದುದು. ಇಲ್ಲಿ ಪ್ರಭೃತಿ ಶಬ್ದದಿಂದ ವಿದುರಾದಿ

ಗಳ ಅನುಷ್ಠಾನವೂ ಬೋಧಿಸಲ್ಪಟ್ಟಿತು. ಛಾಂದೋಗ್ಯ ಪ್ರಥಮ ಪ್ರಪಾಠಕ ಹತ್ತನೆಯ ಖಂಡದಲ್ಲಿರುವ ಉಷಸ್ತಿವೃತ್ತಾಂತವೇನೆಂದರೆ :— ಉಷಸ್ತಿಯು ಚಕ್ರ ರೆಂಬುವರ ಕುಮಾರರು, ಬ್ರಹ್ಮವಿತ್ತುಗಳಲ್ಲಿ ಪರಮಾಗ್ರೇಸರರು, ರಾಜನ ಮಾವ ಟಿಗನಾದ ಇಭ್ಯನ ಗ್ರಾಮದಲ್ಲಿ ವಸಿಸುತ್ತಿದ್ದರು ಆಗ ಅಲ್ಲಿ ಪ್ರಬಲ ದುರ್ಭಿಕ್ಷವು ಪ್ರಾಪ್ತವಾದಾಗ ಇವರಿಗೆ ಆಹಾರ ಸಿಕ್ಕದೇ ಬಹುಕಾಲ ಉಪವಾಸವಿರುವವರಾಗಿ ಕಡೆಗೆ ಪ್ರಾಣಸಂಶಯವನ್ನು ಹೊಂದಿದವರಾಗಿ, ಆ ಇಭ್ಯನು ಆನೆಗಳಿಗಾಗಿ ಬೇಯಿಸಿದ ಹುರುಳಿಯಲ್ಲಿ ಮಿಕ್ಕ ಅಂಶವನ್ನು ತಿನ್ನುತ್ತಿರಲು, ಆತನನ್ನು ಕುರಿತು ಈ ಉಷಸ್ತಿಯು ಸ್ವಲ್ಪ ಹುರುಳಿಯನ್ನು ಪ್ರಾರ್ಥಿಸಲು, ಆಗ ಇಭ್ಯನು "ಉಚ್ಛಿಷ್ಟೇಭ್ಯೋಽನ್ಯೋಽನವಿದ್ಯತೇ" "ಈ ಉಚ್ಛಿಷ್ಟ ಹುರುಳಿಯಲ್ಲದೆ ಬೇರೆ ನನ್ನಲ್ಲಿಲ್ಲವು" ಎಂಬ ಪ್ರತ್ಯುತ್ತರವನ್ನೀಯಲು ; "ಏತೇಷಾಂ ಮೇದೇಹಿ" "ಆ ಉಚ್ಛಿಷ್ಟದಲ್ಲೇ ಸ್ವಲ್ಪ ನನಗೆ ಕೊಡು" ಎಂದು ಹೇಳಿ, ಆ ಇಭ್ಯನಿಂದ ಕೊಡಲ್ಪಟ್ಟ ಹುರುಳಿಯನ್ನು ಪರಿಗ್ರಹಿಸಿ, ಸ್ವಲ್ಪವೇ ತಿಂದು, ಅನುಪಾನಕ್ಕಾಗಿ ಸ್ವಲ್ಪ ನೀರು ಬೇಕೇ ಎಂದು ಇಭ್ಯನಿಂದ ಪ್ರಾರ್ಥಿಸಲ್ಪಟ್ಟರು. ಆಗ ಉಷಸ್ತಿಯು "ಉಚ್ಛಿಷ್ಟಂ ಮೇ ಪೀತಂಸ್ಯಾತ್" ನೀರನ್ನು ಕುಡಿದರೆ ಉಚ್ಛಿಷ್ಟ ಪರಿಗ್ರಹ ಮಾಡಿದಂತಾಗುವದು ಎಂದು ಹೇಳಿ ನೀರನ್ನು ನಿರಾಕರಿಸಲು ; ಅದಕ್ಕಾ ಇಭ್ಯನು ನಕ್ಕು, ಹುರುಳಿ ಉಚ್ಛಿಷ್ಟವಲ್ಲವೋ, ನೀರು ಮಾತ್ರ ಉಚ್ಛಿಷ್ಟವೋ ಎಂದು ಅಪಹಾಸ್ಯಮಾಡಲು ; ಅದನ್ನು ಕೇಳಿ ಉಷಸ್ತಿಯು, ಹುರುಳಿಯನ್ನು ತಿನ್ನದಿದ್ದರೆ ಪ್ರಾಣವು ಉಳಿಯುತ್ತಿರಲಿಲ್ಲವು, ಈಗ ಸ್ವೇಚ್ಛೆಯಿಂದ ಉದಕ ಪಾನಮಾಡಿದರೆ ಉಚ್ಛಿಷ್ಟವಾಗುವದು. ಅಂತಹ ನಿಷಿದ್ಧಾಹಾರವನ್ನು ಪರಿಗ್ರಹಿಸತಕ್ಕದ್ದಲ್ಲವೆಂದು ಆತನಿಗೆ ಸಮಾಧಾನ ಹೇಳಿ, ಮಿಕ್ಕ ಹುರುಳಿಯನ್ನು ಯವ್ವನಸ್ಥಳಾಗಿ ಇನ್ನೂ ಉಪವಾಸ ಮಾಡಲು ಶಕ್ತಿಯುಳ್ಳ ತಮ್ಮ ಧರ್ಮಪತ್ನಿಯ ಕೈಗೆ ಕೊಟ್ಟರು. ಅಲ್ಲಿಂದ ದಂಪತಿಗಳಿಬ್ಬರೂ ರಾಜನು ಮಾಡುವ ಯಜ್ಞದಲ್ಲಿ ಧನಾರ್ಜನೆಗಾಗಿ ಆತನ ರಾಜಧಾನಿಯನ್ನು ಕುರಿತು ತೆರಳಿದರು. ಮಾರ್ಗದಲ್ಲಿ ಮಾರನೇ ದಿನವೂ ಈ ಉಷಸ್ತಿಗೆ ಪ್ರಾಣಸಂಶಯಾವಸ್ಥೆ ಪುನಃ ಪ್ರಾಪ್ತವಾಗಲು, ಹೆಂಡತಿಯು ಶೆರಗಿನಲ್ಲಿ ಕಟ್ಟಿದ್ದ ಆ ಉಚ್ಛಿಷ್ಟವೂ ತನ್ನ ಉಚ್ಛಿಷ್ಟವೂ ಆದ ಅದೇ ಹುರಳಿಯನ್ನೇ ಸೇವಿಸಿ ರಾಜಧಾನಿಯನ್ನು ಸಾರಿ, ಹಸಿವು ನೀರಡಿಕೆ ಇಲ್ಲದವರಾಗಿ, ಯಜ್ಞ ಸಹಾಯಕರಾಗಿ ರಾಜನಿಂದ ಕೊಡಲ್ಪಟ್ಟ ದ್ರವ್ಯವನ್ನು ಸ್ವೀಕರಿಸಿದರು ಎಂದು ಛಾಂದೋಗ್ಯವು ಬೋಧಿಸುತ್ತದೆ. ಇವರನುಷ್ಠಾನಪ್ರಕಾರ,

"ಪ್ರಾಣಸಂಶಯ ಮಾಪನ್ನೋ ಯೋಽನ್ನಮತ್ತಿ ಯತಸ್ತತಃ ।
ಲಿಪ್ಯತೇನ ಸಪಾಪೇನ ಪದ್ಮಪತ್ರಮಿವಾಂಭಸಾ ॥"

ಆಗ್ನೈಯಾಲೇ ವಿಶೇಷವಚನ ನಿಃಲ್ಲಾನ್ಯೈಯಾಲೇ(೧) "ಕೃತೇಷಾ

"ಪ್ರಾಣ ಉಳಿಯುತ್ತೋ ಇಲ್ಲವೋ ಎಂಬ ಸಂಶಯವುಳ್ಳವನು ಯಾವ ಕಾರಣದಿಂದ ದುಷ್ಟಾನ್ನವನ್ನು ತಿನ್ನುವನೋ, ಆ ಕಾರಣದಿಂದ, ಆತನು ಆ ನಿಷಿದ್ಧಾಹಾರ ಸೇವನೆಯಿಂದುಂಟಾದ ಪಾಪದಿಂದ ಲಿಪ್ತನಾಗುವದಿಲ್ಲವು" ಎಂದು ಹೇಳಿರುವ ಹಾಗೆ ಆಪತ್ಕಾಲದ ಬುದ್ಧಿಪೂರ್ವೋತ್ತರಾಘವು ಪ್ರಪನ್ನನಿಗೆ ಲೇಪಿಸುವದಲ್ಲವು. ಅವರು ಉದಕಪಾನವನ್ನು ಪರಿತ್ಯಾಗ ಮಾಡಿದುದರಿಂದ, ಆಪತ್ಕಾಲವಲ್ಲದ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಪನ್ನನು ಅಂಜತಕ್ಕದ್ದೆಂಬುವದು ಏರ್ಪಟ್ಟಿತು. ತಾವು ಬ್ರಹ್ಮನಿಷ್ಠರಾದುದರಿಂದ ತಮ್ಮ ಸ್ವೇಚ್ಛಾಪ್ರವೃತ್ತಿಯಿಂದುಂಟಾದ ಪಾಪವೂ ಕೂಡ ಲೇಪಿಸುತ್ತಿರಲಿಲ್ಲವು ಎಂದು ತಿಳಿದವರಾಗಿದ್ದರೆ, ಉದಕಪಾನವನ್ನು ನಿಷೇಧಿಸುತ್ತಿರಲಿಲ್ಲವೆಂಬುವದು ತಾತ್ಪರ್ಯವು. ಹಾಗೆಯೇ ಮಹಾ ಭಾಗವತನಾದ ವಿದುರನೂ ಕೂಡ ತಾನು ಮಹಾಜ್ಞಾನಿಯಾಗಿ ಧೃತರಾಷ್ಟ್ರನಿಗೆ ಉಪದೇಶಿಸುವಹಾಗೆ ಬುದ್ಧಿಯೋಗವು ಸ್ವಾಮಿದತ್ತವಾಗಿದ್ದರೂ, ಧೃತರಾಷ್ಟ್ರನಿಂದ ಪ್ರಾರ್ಥಿಸಲ್ಪಟ್ಟರೂ ಕೂಡ (೧) "**ಶೂದ್ರಯೋನಾವಹಂ ಜಾತೋನಾತೋನ್ಯದ್ವಕ್ತುಮುತ್ಸಹೇ**" ತಾನು ಶೂದ್ರಯೋನಿಯಲ್ಲಿ ಜನಿಸಿದುದರಿಂದ ಬ್ರಹ್ಮವಿದ್ಯೆಯನ್ನು ಕ್ಷತ್ರಿಯರಿಗೆ ಉಪದೇಶಿಸುವದು ಶಾಸ್ತ್ರವಿರುದ್ಧವಾದುದರಿಂದ, ಹೀಗೆ ಬುದ್ಧಿಪೂರ್ವಾಪರಾಧವನ್ನು ಮಾಡುವದು ಯುಕ್ತವಲ್ಲವೆಂದು ಭಾವಿಸಿ ಅವರಿಗೆ ಉಪದೇಶವು ಸನತ್ಸುಜಾತರಮೂಲಕ ಪ್ರಾಪ್ತವಾಗುವ ಹಾಗೆ ಮಾಡಿದರು. ಹೀಗೆ ಬುದ್ಧಿಪೂರ್ವೋತ್ತರಾಘಕ್ಕೆ ಪೂರ್ವಾನುಷ್ಠಿತವಾದ ಪ್ರಾಯಶ್ಚಿತ್ತವಿದ್ದಪಕ್ಷದಲ್ಲಿ ಇಭ್ಯನು ಕೊಟ್ಟ ಜಲಪಾನವನ್ನು ಉಷಸ್ತಿಯೂ, ಧೃತರಾಷ್ಟ್ರನಿಗಾಗಿ ಉಪದೇಶವನ್ನೂ ವಿದುರನೂ, ಅಙ್ಗೀಕರಿಸುತ್ತಿದ್ದರು ಎಂಬ ಭಾವವು ಹೀಗೆ ಮಹನೀಯರ ಅನುಷ್ಠಾನಕ್ಕೂ ವಿರೋಧವಾಗುವದರಿಂದ, ಸ್ವೇಚ್ಛಾಮಾತ್ರದಿಂದ ಬುದ್ಧಿಪೂರ್ವೋತ್ತರಾಘಕ್ಕಾಗಿಯೂಮೊದಲೇ ಪ್ರಪದನವನ್ನಾಗಲಿ ಉಪಾಸನವನ್ನಾಗಲಿ ಅಧಿಕಾರಾನುಗುಣವಾಗಿಮಾಡಬಹುದೆಂಬ ವಾದವು ನಿರಸ್ತವೆಂಬ ತಾತ್ಪರ್ಯವು.

ಮುಂದೆ ಇನ್ನೊಂದು ನ್ಯಾಯದ ಮೂಲಕವಾಗಿಯೂ ಅಂತಹ ಸ್ವೇಚ್ಛಾನುಷ್ಠಾನವು ಯುಕ್ತವಲ್ಲವೆಂದು ತೋರಿಸುತ್ತಾರೆ. **ಆಗ್ನೈಯಾಲೇ** - ಹೀಗೆ ಬುದ್ಧಿಪೂರ್ವೋತ್ತರಾಘಕ್ಕೂ ಪ್ರಾಯಶ್ಚಿತ್ತರೂಪವಾಗಿ ಉಪಾಯಾನುಷ್ಠಾನವು, ಸಿದ್ಧಾನ್ತಕ್ಕೂ ಮಹನೀಯರನುಷ್ಠಾನಕ್ಕೂ ವಿರೋಧವಾದುದರಿಂದ, ವಿಶೇಷವಚನ

(೧) ಭಾರತ. ಉದ್ಯೋ. ೪೧[illegible]

ಪೇನುತಾಪೋನ್ವೈ" ಇತ್ಯಾದಿಗಳಿಲ್ ಕಣಕ್ಕಿಲೇ ನಿಮಿತ್ತಮ್ ಉದಿತ್ತಾಲಲ್ಲದುನ್ನೈಮಿತ್ತಿಕಮ್ ಪ್ರಾಪ್ತಮುನ್ನೆಜ್ಞರ ನ್ಯಾಯಮ್ ಬುದ್ಧಿಪೂರ್ವೋತ್ತರಾಘತ್ತಿಲ್ ಬಾಧಿತಮಾಗಾದು.

ಮಿಲ್ಲಾನ್ನೆಯಾಲೇ – ಅಂತಹ ಅನುಷ್ಠಾನಕ್ಕೆ ವಿಶೇಷ ವಿಧಿರೂಪ ಪ್ರಮಾಣ ವಚನವಿಲ್ಲದುದರಿಂದ, **"ಕೃತೇಪಾಪೇ** - ಪಾಪವು ಮಾಡಲ್ಪಟ್ಟರೇನೇ. **ಅನುತಾಪೋನ್ವೈ** – ಅನುತಾಪವು ಪ್ರಾಪ್ತವಾಗುತ್ತದೆ, ಮಾಡಿದ ಪಾಪಕ್ಕಾಗಿ ಅಂತಹ ಅನುತಾಪ ಉಂಟಾದವನಿಗೇನೇ ಪ್ರಾಯಶ್ಚಿತ್ತವು ಎಂಬ ಭಾವವು," **ಇತ್ಯಾದಿಗಳಿಲ್ ಕಣಕ್ಕಿಲೇ** - ಇತ್ಯಾದಿಗಳ ಅಭಿಪ್ರಾಯಾನುಸಾರ, **ನಿಮಿತ್ತಮ್ ಉದಿತ್ತಾಲಲ್ಲದು** - ನಿಮಿತ್ತವೆಂದರೆ ಕಾರಣವು, ನಿಮಿತ್ತವು ಉಂಟಾಗದೆ, **ನೈಮಿತ್ತಿಕ ಪ್ರಾಪ್ತಮುನ್ನು** - ನಿಮಿತ್ತದ ಕಾರ್ಯರೂಪವಾದ ನೈಮಿತ್ತಿಕಕ್ಕೆ ಅಧಿಕಾರ ಉಂಟಾಗ ವದಿಲ್ಲವು, **ಎಜ್ಞರ ನ್ಯಾಯಮ್** - ಎಂಬ ನ್ಯಾಯವು, ಬುದ್ಧಿಪೂರ್ವೋತ್ತರಾಘದ ವಿಷಯದಲ್ಲೂ, **ಬಾಧಿತಮಾಗಾದು** - ಬಾಧಿಸಲ್ಪಡುವದಿಲ್ಲವು, ಎಂದರೆ ಬುದ್ಧಿಪೂರ್ವೋತ್ತರಾಘದ ವಿಷಯದಲ್ಲೂ ಈ ನ್ಯಾಯವು ಸರಿಹೋಗುತ್ತದೆ ಎಂಬ ಭಾವವು. ಬುದ್ಧಿಪೂರ್ವೋತ್ತರಾಘವು ಉಂಟಾದರೇನೇ ಆಗ ಪಶ್ಚಾತ್ತಾಪ ಉಂಟಾಗುತ್ತದೆ. ಆದುದರಿಂದಲೇ ಇದು ಅನುತಾಪ, ಅನುಸರಿಸಿ ಬಂದ ತಾಪವು, ಅಥವಾ **ಪಶ್ಚಾತ್** – ಅನಂತರ ಉಂಟಾದ ತಾಪವೆಂದು ಹೇಳಲ್ಪಡುತ್ತದೆ. ಈ ಪಶ್ಚಾತ್ತಾಪವು ಪ್ರಾಯಶ್ಚಿತ್ತಾಧಿಕಾರಕ್ಕೆ ವಿಶೇಷಣವು. ಈ ಅಭಿಪ್ರಾಯವು ವಿಷ್ಣು ಪುರಾಣದಲ್ಲಿ

"ಕೃತೇಪಾಪೇನುತಾಪೋನ್ವೈ ಯಸ್ಯಪುಂಸಃ ಪ್ರಜಾಯತೇ ।
ಪ್ರಾಯಶ್ಚಿತ್ತಂತು ತಸ್ಯೈಕಂ ಹರಿ ಸಂಸ್ಮರಣಂ ಪರಂ"

ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. ಯಾವ ಮನುಷ್ಯನಿಗೆ ಪಾಪಮಾಡಿದುದಕ್ಕೆ ಪಶ್ಚಾತ್ತಾಪ ಉಂಟಾಗುತ್ತದೋ ಅಂಥಾವನಿಗೆ ಪ್ರಾಯಶ್ಚಿತ್ತವು ಸಕೃತ್ ಹರಿಸ್ಮರಣವೇ ಪ್ರಶಸ್ತವಾದ ಪ್ರಾಯಶ್ಚಿತ್ತವೆಂಬುವದು ಈ ಶ್ಲೋಕಾಭಿಪ್ರಾಯವು. ಸಾಧಾರಣವಾಗಿ ಎಲ್ಲಾ ಸಂದರ್ಭದಲ್ಲೂ ಪಾಪಮಾಡಿದನಂತರ ಅನುತಾಪ ಉಂಟಾದರೇನೇ ಪ್ರಾಯಶ್ಚಿತ್ತಕ್ಕೆ ಅಧಿಕಾರವು. ಹೀಗೆ ಅಧಿಕಾರವೇ ಇಲ್ಲದಿರುವಾಗ ಪ್ರಾಯಶ್ಚಿತ್ತವು ಎಂಥಾದ್ದು ಎಂಬಾಕ್ಷೇಪವು. ಆದುದ

---

(೧) ವಿ.ಪು. ೨.೬.೪೦

ಪ್ರಪತ್ತೇಃ ಪ್ರಾರಬ್ಧಪಾಪನಿವರ್ತಕತ್ವಂ, ತದ್ದ್ವಾರಾ
ಬುದ್ಧಿಪೂರ್ವೋತ್ತರಾಘೋತ್ಪತ್ತ್ಯಭಾವಶ್ಚ.

ಅನಪಿನ್ಪು ಆಗಾಮಿ ಬುದ್ಧಿಪೂರ್ವಪಾಪತ್ತುಕ್ಕಂಜಿ ನಾನಾಗಿಲ್,

ರಿಂದ ಬುದ್ಧಿಪೂರ್ವೋತ್ತರಾಘ ಉಂಟಾದ ನಂತರವೇ ಪ್ರಾಯಶ್ಚಿತ್ತಕ್ಕೆ ಅಧಿಕಾರ ಉಂಟಾಗುವದರಿಂದ, ಬುದ್ಧಿಪೂರ್ವೋತ್ತರಾಘ ಉಂಟಾಗುವದಕ್ಕೆ ಮುಂಚೆ ಅಧಿಕಾರವೇ ಉಂಟಾಗುವದಿಲ್ಲವು ಹೀಗಿರುವಲ್ಲಿ ಬುದ್ಧಿಪೂರ್ವೋತ್ತರಾಘಕ್ಕಾಗಿಯೂ ಉಪಾಯಾನುಷ್ಠಾನವು ಅಸಮಂಜಸವೆಂಬ ಭಾವವು. ಹೀಗೆ ನಿಮಿತ್ತವೇ ಇಲ್ಲದಿರುವಾಗ ನೈಮಿತ್ತಿಕಕ್ಕೇ ಕಾರಣವೇ ಇರುವದಿಲ್ಲ. ಈ ನ್ಯಾಯವೂ ಬುದ್ಧಿಪೂರ್ವೋತ್ತರಾಘದ ವಿಷಯದಲ್ಲೂ ವಿಹಿತವಾದುದೇ. ಒಂದುವೇಳೆ ಶಾಸ್ತ್ರದಲ್ಲಿ ಹೀಗೆ ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾಗುವದಕ್ಕೆ ಮುಂಚೆಯೇ ಉಪಾಯಾನುಷ್ಠಾನದಲ್ಲೇ ಇದನ್ನೂ ಸೇರಿಸಿ ಮಾಡಬಹುದೆಂಬ ವಿಶೇಷವಚನವಿದ್ದುದಾದರೆ, ಈ ನ್ಯಾಯಕ್ಕೆ ಅವಕಾಶವಿಲ್ಲದೇ ಇತ್ತು. ಅಂತಹ ವಿಶೇಷವಚನವಿಲ್ಲದುದರಿಂದಲೇ ಬುದ್ಧಿಪೂರ್ವೋತ್ತರಾಘಕ್ಕೂ ಈ ನ್ಯಾಯವು ಸಲ್ಲತಕ್ಕದ್ದಾಗಿರುತ್ತದೆ ಎಂಬಭಿಪ್ರಾಯವು

ಆದರೆ ಬುದ್ಧಿಪೂರ್ವೋತ್ತರಾಘದಿಂದ ಅನಿಷ್ಟವು ಪ್ರಾಪ್ತವಾಗದೇ ಇರುವ ಹಾಗೆ ಮಾಡಲು ಏನೂ ಉಪಾಯವಿಲ್ಲವೋ ಎಂದರೆ ಉಪಾಯ ಉಂಟೆಂದು ಉಪದೇಶಿಸುವರಾಗಿ ಅದು ಯಾವುದು ಎಂಬುವದನ್ನು ತಿಳಿಸುತ್ತಾರೆ:—ಪ್ರಪದನವನ್ನು ಪ್ರಾರಬ್ಧದ ಪಾಪಾಂಶ ನಿವೃತ್ತಿಗೂ ಮಾಡಬಹುದು. ಹಾಗೆ ಮಾಡಲು ಶಾಸ್ತ್ರಪ್ರಮಾಣವೂ ಉಂಟು. ಹಾಗೆ ಪ್ರಪದನಾನುಷ್ಠಾನ ಮಾಡುವದರಿಂದ, ಬುದ್ಧಿಪೂರ್ವೋತ್ತರಾಘಕ್ಕೆ ಕಾರಣಭೂತವಾದ ಪ್ರಾರಬ್ಧ ಪಾಪವು ನಶಿಸಿಹೋಗುವದರಿಂದ, ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾಗುವದಿಲ್ಲವೆಂದು ಮುಂದಿನ ಮೂರು ವಾಕ್ಯಗಳಿಂದ ಸಪ್ರಮಾಣವಾಗಿ ತಿಳಿಸುತ್ತಾರೆ.

ಪ್ರಪದನಕ್ಕೆ ಪ್ರಾರಬ್ಧಪಾಪ ನಿವರ್ತಕತ್ವವೂ, ತನ್ಮೂಲಕ
ಬುದ್ಧಿಪೂರ್ವೋತ್ತರಾಘೋತ್ಪತ್ತ್ಯಭಾವವೂ, ಉಂಟು

ಅನಪಿನ್ಪು - ಹೀಗಾದನಂತರ, ಹೇಗಾದನಂತರವೆಂದರೆ ಬುದ್ಧಿಪೂರ್ವೋತ್ತರಾಘವೂ ಅನುತಾಪವೂ ಉಂಟಾದ ಅಧಿಕಾರಿಗೇನೇ ನೈಮಿತ್ತಿಕವಾದ ಪ್ರಾಯ

ಅದುಕ್ಕು ಕಾರಣಮಾನ ಪ್ರಾರಬ್ಧ ಪಾಪತ್ತುಕ್ಕು ಪ್ರಪದನರೂಪ ಪ್ರಾಯಶ್ಚಿತ್ತಮ್ ಪಣ್ಣಪ್ರಾಪ್ತಮ್; "ಸಾಧ್ಯಭಕ್ತಿಸ್ತು ಸಾಹಂತ್ರೀ ಪ್ರಾರಬ್ಧಸ್ಯಾಪಿ ಭೂಯಸೀ" ಎನ್ರಾರ್‌ಗಳಿರೇ.

ಶ್ಚಿತ್ತಾನುಷ್ಠಾನವೆಂದು ಸ್ಥಾಪಿತವಾದನಂತರ, **ಆಗಾಮಿ**-ಮುಂದೆ ಪ್ರಾಪ್ತವಾಗುವ, **ಬುದ್ಧಿಪೂರ್ವಪಾಪತ್ತುಕ್ಕಂಜಿನಾನಾಗಿಲ್** - ಬುದ್ಧಿಪೂರ್ವೋತ್ತರಾಪರಾಧಕ್ಕೆ ಭಯಪಟ್ಟವನಾದರೆ, ಅವಕ್ಕೆ ಕಾರಣವಾದ, ಪ್ರಾರಬ್ಧಪಾಪಕ್ಕೆ ಪ್ರಪದನರೂಪವಾದ ಪ್ರಾಯಶ್ಚಿತ್ತವು, **ಪಣ್ಣಪ್ರಾಪ್ತಂ** - ಮಾಡುವದು ಯುಕ್ತವು. ಹಾಗೆ ಮಾಡಬಹುದೆಂದು ಎಲ್ಲಿ ಹೇಳಿದೆ ಎಂದರೆ ಪ್ರಮಾಣಗಳನ್ನುದಾಹರಿಸುತ್ತಾರೆ :- **ಸಾ** - ಅಂತಹ ಪ್ರಸಿದ್ಧ ಮಾಹಾತ್ಮ್ಯೆಯುಳ್ಳ, **ಸಾಧ್ಯಭಕ್ತಿಸ್ತು** - ಸಾಧ್ಯವಾದ ಉಪಾಸನಾರೂಪ ಭಕ್ತ್ಯುಪಾಯವು ಯಾವುದರಿಂದಲೋ ಅದು ಎಂಬುವದರಿಂದ ಪ್ರಪತ್ತಿಯು ಹೇಳಲ್ಪಟ್ಟಿತು. **ಸಾಧ್ಯಾಭಕ್ತಿರ್ಯಯಾಸಾ** - ಯಾವುದರಿಂದ ಭಕ್ತಿಯು ಸಾಧಿಸಲ್ಪಟ್ಟಿತೋ, ಎಂಬವ್ಯುತ್ಪತ್ತಿಯ ಮೂಲಕ ಭಕ್ತ್ಯುಪಾಯಕ್ಕೂ ಪ್ರಪತ್ತಿಯು ಬೇಕಾಗಿರುವರಿಂದಪ್ರಪತ್ತಿಯ ಮಾಹಾತ್ಮ್ಯೆಯು ಹೆಚ್ಚು ಎಂಬ ಭಾವವು, ಆದದರಿಂದ **ಸಾಧ್ಯಭಕ್ತಿಸ್ತು** ಎಂದರೆ ಪ್ರಪತ್ತಿಯಾವರೋ, **ಪ್ರಾರಬ್ಧಸ್ಯಾಪಿ** - ಪ್ರಾರಬ್ಧಕರ್ಮಕ್ಕೂಕೂಡ, **ಭೂಯಸೀ**-ಅಧಿಕವಾದ, **ಹನ್ತ್ರೀ** - ನಾಶಕವು ; ಇವರಿಂದ ಭಕ್ತ್ಯುಪಾಯವು ಪ್ರಾರಬ್ಧನಾಶಕವಲ್ಲದುವರಿಂದ ಅದಕ್ಕಿಂತಲೂ ಹೆಚ್ಚು ಮಾಹಾತ್ಮ್ಯೆಯುಳ್ಳದ್ದೆಂದು ಹೇಳಲ್ಪಟ್ಟಿತು'' **ಎನ್ರಾರ್‌ಗಳಿರೇ** - ಹೀಗೆ ಆ ಪ್ರಪತ್ತಿಯುಮಾಹಾತ್ಮ್ಯೆಯನ್ನು ಬೋಧಿಸಿರುತ್ತಾರಷ್ಟೇ. ಶ್ರೀಮಾ. ಶೆಟ್ಟಿ ಲೂರುನರಸಿಂಹಾಚಾರ್ಯರವರು ಸಾಧ್ಯಭಕ್ತಿ ಎಂದರೆ ಪ್ರಪತ್ತಿ ಎಂದೂ, ಅದಕ್ಕೆ ಪ್ರಮಾಣವಾಗಿ,

> "ಸಾಧನಂ ಭಗವತ್ಪ್ರಾಪ್ತೌ ಸ ಏವೇತಿ ಸ್ಥಿರಾಮತಿಃ ।
> ಸಾಧ್ಯಭಕ್ತಿಃ ತಥಾಸ್ಯೈವ ಪ್ರಪತ್ತಿರಿತಿ ಗೀಯತೇ"

ಎಂಬ ವಚನವನ್ನು ಉದಾಹರಿಸಿರುತ್ತಾರೆ. ಆದುದರಿಂದ ಸಾಧ್ಯಭಕ್ತಿಯು ಬಹುವ್ರೀಹಿಯೋ ವಿನಾ ಕರ್ಮಧಾರಯವಲ್ಲವು, ಮತ್ತು ಆ ಬಹುವ್ರೀಹಿ ಅರ್ಥವು ಸಾಧಿಸಲ್ಪಟ್ಟ ಭಕ್ತಿಯೇ ಫಲವಾಗಿ ಉಳ್ಳದ್ದು ಎಂಬರ್ಥವೂ ಅಲ್ಲವು. ಯಾವುದರಿಂದ ಉಪಾಸನವು ಸಾಧಿಸಲ್ಪಟ್ಟಿತೋ ಅದು ಎಂಬರ್ಥವನ್ನೇ ಹೇಳತಕ್ಕದ್ದೆಂಬ ಭಾವವು. ಹೀಗೆ ಪ್ರಾರಬ್ಧಪಾಪವು ನಾಶವಾಗುವಹಾಗೆ ಸಜ್ಕಲ್ಪಿಸಿ ಭರನ್ಯಾಸ ಮಾಡಬಹುದೋ ಎಂಬ ಶಂಕೆಗೆ ಪ್ರಮಾಣವಿರುವದರಿಂದ ಮಾಡಬಹುದೆಂದು

(೧) "ಜನ್ಮಾಂತರ ಕೃತಂ ಪಾಪಂ ವ್ಯಾಧಿರೂಪೇಣ ಬಾಧತೇ ।
ತಚ್ಛಾಂತಿ ರೌಷಧೈ ರ್ದಾನೈ ರ್ಜಪಹೋಮಾರ್ಚನಾದಿಭಿಃ"
ಇತ್ಯಾದಿಗಳಿಲುವ್, ದಾನಜಪಾದಿಗಳಿಲು ಮುಳ್ಪಡ ಪ್ರಾರಬ್ಧ ಪಾಪ

ಹೇಳಿದರು. ಹೀಗೆ ಇದು ಒಂದು ಒಳ್ಳೇ ಉಪಾಯವಿರುವಾಗ, ಇಚ್ಛೆ ಬಿಟ್ಟು ಬಿಡುವವರು ಕಿಡೈಯಾದು ಎಂದು ತಾವೇ ಮೇಲೆ ಉಪಪಾದಿಸಿದ ಹಾಗೆ, ಈ ಮಾರ್ಗವನ್ನೂ ಯಾರೂ ಬಿಡುವದಿಲ್ಲವು, ಎಲ್ಲರೂ ಅದನ್ನೇ ಅವಲಂಬಿಸಿ ನಡಿಸುವದರಿಂದ ಬುದ್ಧಿಪೂರ್ವೋತ್ತರಾಘ ಪ್ರಾಯಶ್ಚಿತ್ತ ವಚನವಾದ "ಅಪಾಯ ಸಂಪ್ಲವೇ ಸದ್ಯಃ" ಎಂಬುವದಕ್ಕೆ ವೈಯರ್ಥ್ಯ ಉಂಟಾಗುವದಿಲ್ಲವೇ? ಎಂದರೆ ವೈಯರ್ಥ್ಯವೇನೂ ಇಲ್ಲವೆಂದು ತೋರಿಸುವದಕ್ಕಾಗಿಯೇ ಇಲ್ಲಿ "ಆಗಾಮಿ ಬುದ್ಧಿಪೂರ್ವ ಪಾಪತ್ತುಕ್ಕಂಜಿ ನಾನಾಗಿಲ್" ಎಂದು ಪ್ರಯೋಗಿಸಿರುತ್ತಾರೆ. ಹಾಗೆ ಎಲ್ಲರೂ ಭಯಪಡುವದಿಲ್ಲವೆಂದೂ, ಹಾಗೆ ಭಯಪಡದೇ ಇರುವವರಿಗೆ ಆ "ಅಪಾಯಸಂಪ್ಲವೇ" ಎಂಬ ವಚನವು ಅನ್ವಯಿಸುತ್ತದೆಂಬ ಭಾವವು. ದೃಪ್ತಪ್ರಪನ್ನನು ಪ್ರಾರಬ್ಧಫಲಾನುಭವವನ್ನು ಅಂಗೀಕರಿಸಿರುವವನು, ದೇಹಾವಸಾನದವರಿವಿಗೂ ಉಪಭೋಗಾದಿಗಳನ್ನು ತಿರಸ್ಕರಿಸದೇ ಇರುವವನು, ಜ್ಞಾನವಿವೇಕಾದಿಗಳಿಂದ ಉತ್ತರಾಘಭಯವಿಲ್ಲದಿರುವವನು, ಇಂಥಾವನಿಗೆ ಒಂದು ವೇಳೇ ಈ ಆಗಾಮಿ ಬುದ್ಧಿಪೂರ್ವಾಘವು ಪ್ರಾಪ್ತವಾದರೆ, ಅಂಥಾವನಿಗೆ ಈ ಪುನಶ್ಶರಣಾಗತಿ ವಿಧಿಯು ಅನ್ವಯಿಸುತ್ತದೆ ಎಂಬ ಭಾವವು ತೋರಿ ಬರುತ್ತದೆ. ಮೇಲೆ ಭೂಯಸೀ ಎಂಬ ಶಬ್ದಕ್ಕೆ ಇತರ ಪ್ರಾಯಶ್ಚಿತ್ತ ವಿಧಿಗಳಿಗಿಂತಲೂ ಬಲವತ್ತರವಾದುದೆಂಬರ್ಥವನ್ನೂ ಹೇಳಬಹುದು.

ಆದರೆ ಪ್ರಬಲವಾದ ಗುರೂಪಾಯವಾದ ಭಕ್ತಿಮಾರ್ಗದಿಂದಲೂ ನಾಶಹೊಂದದ ಪ್ರಾರಬ್ಧಪಾಪವು ಈ ಸುಲಭವಾದ ಪ್ರಪತ್ತ್ಯುಪಾಯದಿಂದ ಹೇಗೆ ನಾಶ್ಯವು ಎಂಬಾಕ್ಷೇಪಕ್ಕೆ ಮುಂದೆ ಸಮಾಧಾನವನ್ನು ಹೇಳುತ್ತಾರೆ :—

ಜನ್ಮಾಂತರ ಕೃತಂಪಾಪಂ - ಬೇರೆ ಜನ್ಮದಲ್ಲಿ ಎಂದರೆ ಹಿಂದಿನ ಜನ್ಮಗಳಲ್ಲಿ ಮಾಡಲ್ಪಟ್ಟ ಪಾಪವು, ವ್ಯಾಧಿರೂಪದಿಂದ, **ಬಾಧತೇ** - ಈ ಚೇತನನನ್ನು ಬಾಧಿಸುತ್ತದೆ. **ತಚ್ಛಾಂತಿಃ** - ಪೂರ್ವಜನ್ಮಗಳಲ್ಲಿ ಮಾಡಿ ಈಗ ಪ್ರಾರಬ್ಧರೂಪವಾಗಿರುವ ಪಾಪಫಲದ ಶಾಂತಿಯು, **ಔಷಧೈಃ** - ಔಷಧಿಗಳಿಂದಲೂ,

(೧) ವಿಹಗೇಶ್ವರ ಸಂಹಿತೆ.

ನಾಶಂ ಶೊಲ್ಲಪ್ಪಟ್ಟದಿರೇ. ಆಗೈಯಾಲ್ ಪಾಪಾರಂಭಕ ಪಾಪತ್ತುಕ್ಕಂಜಿಪ್ರಪತ್ತಿ ಪಣ್ಣಿನಾನಾಗಿಲ್ ಅಪ್ಪೋದು ಬುದ್ಧಿಪೂರ್ವಕ ಪಾಪಮ್ ಉದಿಯಾದು. (೧) ದಾಸಸ್ಸಖಾವಾಹನಮಾಸನಂ ಧ್ವಜಃ" ಇತ್ಯಾದಿ

ದಾನೈಃ - ಸತ್ಪಾತ್ರದಲ್ಲಿ ದಾನಮಾಡುವದರಿಂದಲೂ, ಜಪದಿಂದಲೂ ಹೋಮಗಳಿಂದಲೂ, **ಅರ್ಚನಾದಿಭಿಃ** – ದೇವತಾರ್ಚನೆ ಭಾಗವತಾರ್ಚನೆ ತೀರ್ಥಯಾತ್ರೆ ಮೊದಲಾದವುಗಳಿಂದಲೂ, ಉಂಟಾಗುತ್ತದೆ" **ಇತ್ಯಾದಿಗಳಿಲುಮ್** - ಎಂಬಿವೇ ಮೊದಲಾದ ಪ್ರಮಾಣಗಳಲ್ಲೂ, **ದಾನಜಪಾದಿಗಳಿಲು ಮುಳ್ಪಡ** - ದಾನ ಜಪ ಮೊದಲಾದವುಗಳಿಂದಲೂ ಕೂಡ ಪಾಪನಾಶವು, **ಶೊಲ್ಲಪಟ್ಟದಿರೇ** - ಹೇಳಲ್ಪಟ್ಟಿರುತ್ತೆಯಷ್ಟೇ. ಇಲ್ಲಿ **ದಾನಜಪಾದಿಗಳಿಲುಮ್** ಎಂದು ಔಷಧಿಯನ್ನು ಬಿಟ್ಟು ಹೇಳಿರುವದಕ್ಕೆ ಕಾರಣವೇನೆಂದರೆ :—ಪ್ರಾರಬ್ಧಪಾಪಫಲರೂಪ ವ್ಯಾಧಿಯ ಶಾಂತಿಯು ಸಾಕ್ಷಾತ್ತಾಗಿ ಔಷಧದಿಂದುಂಟಾಗುತ್ತದೆ. ದಾನಜಪಾದಿಗಳಿಂದ ಲಾದರೋ ಪ್ರಾರಬ್ಧ ಪಾಪನಿವೃತ್ತಿದ್ವಾರಾ ಶಾಂತಿಯು. ಹೀಗೆ ಅಲ್ಪ ಮಾಹಾತ್ಮ್ಯಯುಳ್ಳ ದಾನ ಜಪ ಹೋಮಾದಿಗಳು ಅಪ್ರಪನ್ನನ ವಿಷಯದಲ್ಲೇ ಶಕ್ತಿಯುಳ್ಳವುಗಳಾದರೆ, ಪ್ರಬಲ ಮಾಹಾತ್ಮ್ಯಯುಳ್ಳ ಪ್ರಪತ್ತಿಯು ಪ್ರಪನ್ನನ ವಿಷಯದಲ್ಲಿ ಪ್ರಾರಬ್ಧಪಾಪನಾಶಕವೆಂಬುವದು ಕೈಮುತಿಕ ನ್ಯಾಯಸಿದ್ಧವೆಂಬ ಭಾವವು. **ಆಗೈಯಾಲ್** - ಆದುದರಿಂದ ಎಂದರೆ, ಪ್ರಾರಬ್ಧಪಾಪಕರ್ಮಕ್ಕೂ ನಾಶವುಂಟೆಂದು ಒಪ್ಪಬೇಕಾದುದರಿಂದ, **ಪಾಪಾರಂಭಕ ಪಾಪತ್ತುಕ್ಕಂಜಿ** - ಬುದ್ಧಿಪೂರ್ವೋತ್ತರಾಘವನ್ನುಂಟುಮಾಡುವ ಪ್ರಾರಬ್ಧಪಾಪಕ್ಕೆ ಭಯಪಟ್ಟು, **ಪ್ರಪತ್ತಿ ಪಣ್ಣಿನಾನಾಗಿಲ್** - ಪ್ರಾರಬ್ಧಪಾಪವೂ ನಾಶವಾಗಲೆಂದು ಪ್ರಾರ್ಥಿಸಿ ಭರನ್ಯಾಸವನ್ನು ಅನುಷ್ಠಿಸಿದವನಾದರೆ, **ಅಪ್ಪೋದು** - ಆಗ, **ಬುದ್ಧಿಪೂರ್ವಕ ಪಾಪಮ್ ಉದಿಯಾದು** - ಬುದ್ಧಿಪೂರ್ವೋತ್ತರಾಘವು ಉಂಟಾಗುವದಿಲ್ಲವು.

ಬುದ್ಧಿಪೂರ್ವೋತ್ತರಾಘದ ತೊಂದರೆ ಇಲ್ಲದೇ ಇರಬೇಕಾದರೆ, ಅದಕ್ಕೆ ಕಾರಣವಾದ ಪ್ರಾರಬ್ಧ ಪಾಪವು ನಾಶವಾಗುವ ಹಾಗೆ ಮಾಡಿಕೊಳ್ಳಬೇಕು ; ಅದಕ್ಕಾಗಿ ಮೋಕ್ಷಾರ್ಥ ಭರನ್ಯಾಸದೊಂದಿಗೆ ಪ್ರಾರಬ್ಧಪಾಪವೂ ತೊಲಗುವ ಹಾಗೆ ಅಪೇಕ್ಷಿಸತಕ್ಕದ್ದೆಂದು ಸ್ಥಾಪಿಸಲ್ಪಟ್ಟಿತು.

ಆದರೆ ಪ್ರಪನ್ನನು ಇಂತಹ ಮಾಹಾತ್ಮ್ಯಯುಳ್ಳ ಪ್ರಪದನವನ್ನನುಷ್ಠಿಸಿ ಸರ್ವೇಶ್ವರನ ನಿರತಿಶಯ ಪ್ರೀತಿಗೆ ಅರ್ಹನಾಗಿರುತ್ತಾನೆ. ಆದುದರಿಂದ

"ವಿಷ್ಣೋಃ ಪ್ರಸಾದಮಾಕಾಂಕ್ಷನ್ ವೈಷ್ಣವಾನ್ ಪರಿತೋಷಯೇತ್ ।
ತಥಾಸ್ವಾರಾಧನೇನಾಪಿ ನ ಪ್ರೀತೋ ಭಗವಾನ್ ಹರಿಃ ।

ಗಳಿರ್ಪಡಿಯೇ ಅತ್ಯಂತ ಭಗವದನ್ತರಙ್ಗರ್ಕ್ಕುಮ್ ಸಾತ್ವಿಕಾಪರಾಧಲೇಶ ಮುಮ್ ಪ್ರತ್ಯವಾಯ ಕರಮೆನ್ನುಮಿಡಮ್ ಶಾಂಡಲೀ ವೃತ್ತಾಂತಗಳಿಲೆ ಪ್ರಸಿದ್ಧಂ.

ಯಥಾ ತುಷ್ಯತಿ ದೇವೇಶೋ ಮಹಾಭಾಗವತಾರ್ಚನಾತ್ ।
ತಥಾ ನ ತುಷ್ಯತಿ ಹರಿರ್ವಿಧಿವತ್ಸ್ವಾರ್ಚನಾದಪಿ"

ಎಂದರೆ "ವಿಷ್ಣುವಿನ ಪ್ರಸನ್ನತೆಯನ್ನಪೇಕ್ಷಿಸುವವನು, ಅವನ ಸಂಬಂಧಿಗಳಾದ ಭಾಗವತರನ್ನು ಸಂತೋಷಗೊಳಿಸತಕ್ಕದ್ದು. ತನ್ನ ಆರಾಧನೆಯಿಂದಲೂ ಕೂಡ ಭಗವಾನ್ ಶ್ರೀ ಹರಿಯು ಅಷ್ಟು ಸಂತೋಷಪಡುವದಿಲ್ಲವು ಮಹಾಭಾಗವತರ ಅರ್ಚನೆಯಲ್ಲಿ ಸರ್ವದೇವತೆಗಳಿಗೂ ನಿಯಾಮಕನಾದ ಸರ್ವೇಶ್ವರನು, ಹೇಗೆ ಸಂತೋಷಪಡುವನೋ, ಹಾಗೆಯೇ ತನ್ನ ಸ್ವಂತ ಅರ್ಚನೆಯಿಂದಲೂ ಕೂಡ ಸಂತೋಷಪಡುವದಿಲ್ಲವು." ಎಂದು ಹೇಳಿರುವ ಹಾಗೆ ಪ್ರಪನ್ನನಿಗೆ ಸರ್ವೇಶ್ವರನು ತುಂಬಾ ಅಂತರಂಗ ಪ್ರಿಯನಾದುದರಿಂದ, ಆತನಿಗೆ ತಾನಾಗಿಯೇ ಬುದ್ಧಿಪೂರ್ವೋ ತ್ತರಾಘವು ಲೇಪಿಸದ ಹಾಗೆ ಏತಕ್ಕೆ ಮಾಡಕೂಡದು ? ಲೋಕದಲ್ಲೂ ಕೂಡ ತುಂಬಾ ಬೇಕಾದವರು ತಪ್ಪು ಮಾಡಿದರೂ ಮನ್ನಿಸಿಬಿಡುವದುಂಟಷ್ಟೇ ? ಹಾಗೆಯೇ ಪ್ರಪನ್ನನ ಬುದ್ಧಿಪೂರ್ವೋತ್ತರಾಘವನ್ನೂ ಸ್ವಾಮಿಯು ಏಕೆ ಮನ್ನಿಸಿ ಬಿಡಕೂಡದು ? ಎಂದರೆ ಬುದ್ಧಿಪೂರ್ವೋತ್ತರಾಘವು ಮಹಾಭಾಗವತನಾದ ಪ್ರಪ ನ್ನನ ಸ್ವರೂಪಕ್ಕೆ ಸರಿಯಾಮದಲ್ಲವಾದುದರಿಂದ ಅಂತಹ ಅಪರಾಧಕ್ಕೆ ಅಲ್ಪ ದಂಡನೆ ಕೂಡ ಇಲ್ಲದೆ ಸರ್ವೇಶ್ವರನು ಮನ್ನಿಸಲಾರನು, ಆದುದರಿಂದ ಬುದ್ಧಿ ಪೂರ್ವೋತ್ತರಾಘವು ಪ್ರತ್ಯವಾಯಕರವೆಂದೂ, ಅಂತಹ ಅಪರಾಧವು ತುಂಬಾ ಅಲ್ಪವಾಗಿದ್ದರೂ ಶ್ರೀಹರಿಗೆ ಅತ್ಯಂತ ಪ್ರಿಯನಾದ ಗರುತ್ಮಂತನಿಗೆ ಪ್ರಾಪ್ತವಾದ ದುರ್ದೆಶೆಯ ವೃತ್ತಾಂತವನ್ನು ಜ್ಞಾಪಕ ಕೊಡುತ್ತಾರೆ:—"ದಾಸಃ - ಸರ್ವೇ ಶ್ವರನಾದ ನಿನಗೆ ಶೇಷಭೂತನೆಂದು ತಿಳಿದು ವಿವಿಧ ಕೈಙ್ಕರ್ಯಗಳನ್ನೆಸಗುವನು, ಸಖಾ - ಸಮಾನಚಿತ್ತವೃತ್ತಿಯುಳ್ಳವನು, ವಾಹನಂ - ನಿನಗೆ ವಾಹನನಾಗು ವವನು, ಆಸನಂ - ಕುಳಿತುಕೊಳ್ಳುವುದಕ್ಕೆ ಆಸನವಾಗುವವನು, ಧ್ವಜಃ - ತೇರಿಗೆ ಧ್ವಜವು, ಇತ್ಯಾದಿಗಳಿರ್ಪಡಿಯೇ - ಹೀಗೆಲ್ಲಾ ಹೊಗಳಲ್ಪಟ್ಟಿರುವ ಹಾಗೆ, ಅತ್ಯಂತಭಗವದನ್ತರಙ್ಗರ್ಕ್ಕುಮ್ - ಸರ್ವೇಶ್ವರನಿಗೆ ಅತ್ಯಂತ ಪ್ರಿಯ ರಾಗಿರುವವರಿಗೂ ಕೂಡ, ಎಂದರೆ ಗರುತ್ಮಾನ್ ಮೊದಲಾದವರುಗಳಿಗೆ ಸಾತ್ವಿಕಾ ಪರಾಧಲೇಶಮುಮ್ - ಭಾಗವತನಿಗೆ ಮಾಡಿದ ಅಲ್ಪಾಪರಾಧವೂ ಕೂಡ,

ಪ್ರತ್ಯವಾಯಕರಮೆನ್ನುಮಿಡಮ್ - ಅನರ್ಥವನ್ನುಂಟುಮಾಡುತ್ತದೆ ಎಂಬುವದು, **ಶಾಂಡಿಲೀವೃತ್ತಾಂತಾದಿಗಳಿಲೇ** - ಶಾಂಡಿಲೀ ವೃತ್ತಾಂತ ಮೊದಲಾದವುಗಳಲ್ಲಿ ಪ್ರಸಿದ್ಧವು. ಬುದ್ಧಿಪೂರ್ವಕವಾದ ಅಪರಾಧವು ಎಷ್ಟು ಅಲ್ಪವಾಗಿದ್ದರೂ ಅವಕ್ಕನುಗುಣವಾದ ದಂಡನೆಯು ಸರ್ವೇಶ್ವರನಿಗೆ ಅತ್ಯಂತ ಬೇಕಾದವರಾದ ನಿತ್ಯಸೂರಿಗಳ ವಿಷಯದಲ್ಲೂ ತಪ್ಪಿದ್ದಲ್ಲವು ಎಂಬುವದಕ್ಕೆ ಶಾಂಡಿಲೀ ವೃತ್ತಾಂತವನ್ನು ಜ್ಞಾಪಿಸುತ್ತಾರೆ. ಗರುತ್ಮಂತನು ಸರ್ವೇಶ್ವರನಿಗೆ ದಾಸನಾಗಿ, ಸಖನಾಗಿ ವಾಹನವಾಗಿ, ಆಸನವಾಗಿ, ಧ್ವಜವಾಗಿ, ಹೀಗೆ ನಾನಾವಿಧ ಕೈಙ್ಕರ್ಯನಿರತನಾಗಿ ಸರ್ವೇಶ್ವರನಿಗೆ ಅತ್ಯಂತ ಬೇಕಾದವನು; ಇಂಥಾವನೂ ಕೂಡ ಬುದ್ಧಿಪೂರ್ವಾಪರಾಧಕ್ಕಾಗಿ ತುಂಬಾ ಕ್ಲೇಶವನ್ನನುಭವಿಸಿರುವನೆಂಬುವದು ಶಾಂಡಿಲೀ ವೃತ್ತಾಂತದಲ್ಲಿ ಪ್ರಸಿದ್ಧವೆಂದು ಹೇಳುತ್ತಾರೆ. ಶಾಂಡಿಲೀ ಎಂಬುವಳು ಮಹಾ ಪ್ರಸಿದ್ಧಳಾದ ಭಾಗವತೋತ್ತಮಳು. ವೃಷಭಗಿರಿಯಲ್ಲಿರುವಳಾಗಿ ಮಧ್ಯಾಹ್ನ ಕಾಲದಲ್ಲಿ ಬಂದ ಭಾಗವತರುಗಳನ್ನು ತುಂಬಾ ಆದರಿಸುತ್ತಿದ್ದಳು. ಹೀಗಿರುವಲ್ಲಿ ಗಾಲವ ಋಷಿಯು ವಿಶ್ವಾಮಿತ್ರರಿಂದ ಉಪದೇಶ ಹೊಂದಿ, ಅದಕ್ಕೆ ಗುರುದಕ್ಷಿಣೆ ಬೇಡವೆಂದು ಹೇಳಿದರೂ ಕೇಳದೇ ನಿರ್ಬಂಧಿಸಿದುದರಿಂದ ಒಂದು ಕಿವಿ ಮಾತ್ರ ಕಪ್ಪಾಗಿರುವ ಚಂದ್ರನ ಹಾಗೆ ಬೆಳ್ಳಗಿರುವ ೮೦೦ ಕುದುರೆಗಳನ್ನು ತಂದುಕೊಡತಕ್ಕದ್ದೆಂದು ಆಜ್ಞಾಪಿಸಿದರು. ಇಂತಹ ಅಸಾಧ್ಯವಾದ ಗುರುದಕ್ಷಿಣೆಯನ್ನು ಬೇಡಿದರಲ್ಲಾ ಎಂದು ಚಿಂತಿಸಿ, ತನ್ನ ಸಖನಾದ ಗರುತ್ಮಂತನೊಂದಿಗೆ ಈ ಋಷಭಗಿರಿಗೆ ಅಶ್ವಗಳನ್ನು ಹುಡುಕುತ್ತಾ ಬಂದರು. ಗರುತ್ಮಂತನು ಈಕೆಯನ್ನು ನೋಡಿ, ಈಕೆಯು ಇಂತಹ ಹೀನಸ್ಥಳದಲ್ಲಿ ಇರಲು ಅನರ್ಹಳು, ಈಕೆಯನ್ನು ಸರ್ವೇಶ್ವರನಲ್ಲಿಗೆ ಕರೆದುಕ್ಕೊಂಡು ಹೋಗಲು ಯೋಗ್ಯಳು ಎಂದು ಮನಸ್ಸಿನಲ್ಲಿ ಭಾವಿಸಿದನು. ಒಡನೆ ಗರುತ್ಮಂತನು ತನ್ನ ಶರೀರದಲ್ಲಿದ್ದ ಗರಿಗಳೆಲ್ಲಾ ಬಿದ್ದು ಹೋಗಿ ಮಾಂಸಪಿಂಡದಂತಾದನು. ಗಾಲವನು ಈತನನ್ನು ಕಂಡು ನಿನಗೆ ಇಂತಹ ದುಸ್ಥಿತಿ ಪ್ರಾಪ್ತವಾಗಲು, ಕಾರಣವೇನೆಂದು ಕೇಳಲು, ವೈನತೇಯನು ನಡೆದ ವೃತ್ತಾಂತವನ್ನು ತಿಳಿಸಲಾಗಿ, ಆಗ ಗಾಲವರು ಶಾಂಡಲಿಯನ್ನು ಕುರಿತು ಪ್ರಸನ್ನಳಾಗತಕ್ಕದೆಂದು ಪ್ರಾರ್ಥಿಸಲು; ಆಗ ಆಕೆಯು ಪ್ರಸನ್ನಳಾಗಿ ಆತನ ಶರೀರವೂ ರೆಕ್ಕೆಗಳೂ ಮೊದಲಿನ ಹಾಗೆ ದೃಢವಾಗಲಿ ಎಂದು ವರವನ್ನಿತ್ತನಂತರ, ಆಕೆಯ ಅನುಜ್ಞೆಯನ್ನು ಹೊಂದಿ ಇಬ್ಬರೂ ಹೊರಟುಹೋದರೆಂಬೀ ವೃತ್ತಾಂತವು ಭಾರತದಲ್ಲಿ (ಉದ್ಯೋಗಪರ್ವ ೧೧೩ನೇ ಅಧ್ಯಾಯ) ಬರುತ್ತದೆ. ಆದುದರಿಂದ ಮಹಾಭಾಗವತನಿಗೆ ಉಂಟಾಗುವ ಬುದ್ಧಿಪೂರ್ವಾಪರಾಧಲೇಶವೂ ಕೂಡ ಅನಿಷ್ಟಫಲಪ್ರದವಾದುದೆಂಬುವದನ್ನು ಈ ವೃತ್ತಾಂತದಿಂದ ತಿಳಿಯಬಹುದೆಂದುಪದೇಶಿಸಿದರು

ಸರ್ವೇಶ್ವರನ್ನೈಪ್ಪೋಲೆ ನಿತ್ಯಸೂರಿಗಳುಮ್ ಅವತರಿತ್ತಾಲ್ ಕರ್ಮವಶ್ಯ

ತ್ತಾರೆ. ಇಲ್ಲಿ "ದಾಸಸ್ಸಖಾವಾಹನ" ವೆಂಬುವದರಿಂದ ನಿತ್ಯಸೂರಿಗಳಲ್ಲಿ ಸೇರಿ ಸರ್ವೇಶ್ವರನಿಗೆ ಅಂತರಂಗ ಪ್ರಿಯನಾಗಿ ಸದಾ ಕೈಙ್ಕರ್ಯದಲ್ಲೇ ನಿರತನಾಗಿ ಮಾಹಾತ್ಮ್ಯೆ ಹೊಂದಿರುವವನಿಗೂ ಕೂಡ ಬುದ್ಧಿಪೂರ್ವಾಪರಾಧಕ್ಕೆ ಅಲ್ಪ ದಂಡವು ತಪ್ಪಿದ್ದಲ್ಲವೆಂದರೆ, ಸಾಧಾರಣ ಪ್ರಪನ್ನರ ವಿಷಯದಲ್ಲಿ ಅಂತಹ ಅಪ ರಾಧಕ್ಕೆ ಶಿಕ್ಷೆಯು ತಪ್ಪಿದ್ದಲ್ಲವೆಂದು ಹೇಳತಕ್ಕದ್ದೇನಿದೆ ಎಂಬ ಭಾವವು. ಆ ಶ್ಲೋಕ ಯಾವುದೆಂದರೆ :—

ದಾಸಸ್ಸಖಾ ವಾಹನ ಮಾಸನಂ ಧ್ವಜೋ
ಯಸ್ತೇವಿತಾನಂ ವ್ಯಜನಂ ತ್ರಯೀಮಯಃ ।
ಉಪಸ್ಥಿತಂ ತೇನ ಪುರೋ ಗರುತ್ಮತಾ
ತ್ವದಂಘ್ರಿ ಸಮ್ಮರ್ದಕಿಣಾಂ ಕಶೋಭಿನಾ ॥

ಈ ಶ್ಲೋಕದಲ್ಲಿ ನಿತ್ಯಸೂರಿಯಾದ ಗರುತ್ಮಂತರು ಹೇಗೆ ಶ್ರಿಯಃಪತಿಗೆ ಸೇವೆ ಯನ್ನು ಮಾಡುತ್ತಾರೆಂಬುವದನ್ನು ಹೇಳುತ್ತಾರೆ. **ಯಃ ತ್ರಯೀಮಯಃ** - ಯಾವ ಮೂರು ವೇದಮಯವಾದ ದಿವ್ಯಮಂಗಳ ವಿಗ್ರಹಯುಕ್ತನಾದವನೋ **ದಾಸಃ** - ನೀನು (ಸರ್ವೇಶ್ವರನು) ಶೇಷಿಯೆಂಬುವದನ್ನರಿತು ಸರ್ವವಿಧ ಕೈಙ್ಕರ್ಯ ಗಳನ್ನೆಸಗುವನಾದನೋ, **ಸಖಾ** - ಸಮಾನಚಿತ್ತವೃತ್ತಿಯುಳ್ಳ ಸ್ನೇಹಿತನೋ, **ವಾಹನಂ** - ನಿನಗೆ ಇಷ್ಟವಾದ ಸ್ಥಳಕ್ಕೆ ತನ್ನ ಬೆನ್ನಿನ ಮೇಲೆ ಬಿಜಮಾಡಿಸಿ ಕೊಂಡು ಹೋಗುವನೋ, **ಆಸನಂ** - ವಿಶ್ರಮಿಸಿಕೊಳ್ಳಲು ಆಸನವಾಗುವನೋ, **ಧ್ವಜಃ** - ರಥಕ್ಕೆ ಪತಾಕೆಯಾಗುವನೋ, **ವಿತಾನಂ** - ಸಭೆಯಲ್ಲಿ ಮೇಲ್ಕಟ್ಟು ಆಗುವನೋ, **ವ್ಯಜನಂ** - ಶೈತ್ಯೋಪಚಾರಕ್ಕೆ ಬೀಸಣಿಗೆಯಾಗುವನೋ. **ತ್ವದಂಘ್ರಿಸಮ್ಮರ್ದಕಿಣಾಂಕಶೋಭಿನಾ** - ವಾಹನವಾದಾಗ ನಿನ್ನ ಕಾಲುಗಳು ಆತನ ಕೈಗಳ ಮೇಲೆ ಉಜ್ಜುವದರಿಂದ, ಜಡ್ಡುಗಟ್ಟಿರುವ ಗುರ್ತಿನಿಂದ ಪ್ರಕಾ ಶಿಸುತ್ತಿರುವ, **ತೇನ** - ಅಂತಹ ಮಾಹಾತ್ಮ್ಯೆಯುಳ್ಳ, **ಗರುತ್ಮತಾ** - ಗರುತ್ಮಂತ ನಿಂದ, **ಪುರಃ ಉಪಸ್ಥಿತಂ** - ಎದುರಿಗೆ ಇರುವ, ಯಾರೆಂದರೆ, **ಭವಂತಂ** ಎಂದು ಮುಂದೆ ಇರುತ್ತದೆ. ಅಂತಹ ವಿಭೂತಿಗಳುಳ್ಳ ಸರ್ವೇಶ್ವರನಾದ ನಿನ್ನನ್ನು ಎಂದು ಯಾಮುನೇಯರು ಸ್ತೋತ್ರಮಾಡುತ್ತಾರೆ. ಆದರೆ ಅಕರ್ಮವಶ್ಯರಾದ ನಿತ್ಯಸೂರಿಗಳಾದ ಈ ವೈನತೇಯನಿಗೆ ಬುದ್ಧಿಪೂರ್ವಾಪರಾಧದ ಸಂಭವವು ಹೇಗೆ ಎಂಬಾಕ್ಷೇಪ ಉಂಟಾಗಬಹುದೆಂದು ಯೋಚಿಸಿ ಸಮಾಧಾನವನ್ನು ಹೇಳುತ್ತಾರೆ:-

ತ್ತ್ವಾಭಿನಯುಂ ಪಣ್ಣಿಲೋಕಹಿತ ಪ್ರವರ್ತನಾರ್ಥವಾಗ ಅಪಚಾರ ಪರಿಹಾರಾದಿಗಳೈ ನಡತ್ತಿ ಪೋರುವರ್‌ಗಳ್.

ಸರ್ವೇಶ್ವರನ್ನೈಪ್ಪೋಲೆ - ಸರ್ವೇಶ್ವರನಹಾಗೆ, **ಸೂರಿಗಳುಮ್** - ನಿತ್ಯ ಸೂರಿಗಳೂ ಕೂಡ, **ಅವತರಿತ್ತಾಲ್** - ಕಾರಣಾಂತರದಿಂದ ಅವತರಿಸಿದರೆ, **ಕರ್ಮವಶ್ಯತ್ವಾಭಿನಯುಂಪಣ್ಣಿ** - ತಾವು ಕರ್ಮಕ್ಕೆ ಒಳಪಟ್ಟವರಂತೆ ನಟಿಸಿ, **ಲೋಕಹಿತಪ್ರವರ್ತನಾರ್ಥಮಾಗ** - ಲೋಕದ ಜನರಿಗೆ ಹಿತವನ್ನುಂಟು ಮಾಡುವದಕ್ಕಾಗಿ, **ಅಪಚಾರ ಪರಿಹಾರಾದಿಗಳೈ** - ಭಗವದ್ಭಾಗವತರಲ್ಲಿ ಅಪಚಾರಪಡುವದೇನು, ಅದಕ್ಕಾಗಿ ಪ್ರಾಯಶ್ಚಿತ್ತವನ್ನನುಷ್ಠಿಸುವದೇನು, ಇವೇ ಮೊದಲಾದವುಗಳನ್ನು, ಇಲ್ಲಿ ಆದಿಪದದಿಂದ ಅಪಚಾರಕ್ಕಾಗಿ ಲಘುದಂಡನವೂ ಸಂಗ್ರಹಿಸಲ್ಪಟ್ಟಿತು, **ನಡತ್ತಿ ಪೋರುವರ್‌ಗಳ್** - ನಡಿಸಿ ಹೋಗುವರು. ಲೋಕಸಂಗ್ರಹಾರ್ಥವಾಗಿ ಹೀಗೆಲ್ಲಾ ನಟಿಸುತ್ತಾರೆಂಬ ಭಾವವು. ಭಗವದ್ಭಾಗವತಾಪರಾಧವು ಬುದ್ಧಿಪೂರ್ವಕವಾಗಿ ಮಾಡಲ್ಪಡತಕ್ಕದ್ದಲ್ಲವೆಂದೂ, ಅದಕ್ಕೆ ಫಲವನ್ನು ಎಂಥಾವನೇ ಆಗಲಿ ಅನುಭವಿಸಿಯೇ ತೀರಬೇಕೆಂದೂ, ಆ ದಂಡನೆಯನ್ನು ತಪ್ಪಿಸಿಕೊಳ್ಳಬೇಕಾದರೆ, ಪುನಃ ಪ್ರಾಯಶ್ಚಿತ್ತವನ್ನನುಷ್ಠಿಸಬೇಕೆಂದೂ ಲೋಕಕ್ಕೆಲ್ಲಾ ಚನ್ನಾಗಿ ತಿಳಿಯಪಡಿಸುವದಕ್ಕಾಗಿ ಹಾಗೆ ನಟಿಸುತ್ತಾರೆಂಬ ಭಾವವು

ಹೀಗೆ ಬುದ್ಧಿಪೂರ್ವೋತ್ತರಾಘವು ಪ್ರಪನ್ನನ ಸ್ವರೂಪಕ್ಕೆ ವಿಹಿತವಾದುದಲ್ಲವೆಂದೂ, ಅದು ಸಂಭವಿಸಿದರೆ ಪ್ರಾಯಶ್ಚಿತ್ತವನ್ನು ಅನುಷ್ಠಿಸಬೇಕೆಂದೂ, ಹಾಗೆ ಅನುಷ್ಠಿಸದಿದ್ದರೆ ಅದಕ್ಕೆ ಲಘುದಂಡವಾದರೂ ತಪ್ಪಿದ್ದಲ್ಲವೆಂದೂ ಹೇಳಲ್ಪಟ್ಟಿತು. ಆದರೆ ಅಂತಹ ಅಪರಾಧವು ಪ್ರಾಪ್ತವಾಗಿ ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವದಕ್ಕಿಂತ, ಸಾಧ್ಯವಾದರೆ ಬುದ್ಧಿಪೂರ್ವಾಪರಾಧವೇ ಪ್ರಾಪ್ತವಾಗದ ಹಾಗೆ ಏಕೆ ಮಾಡಿಕೊಳ್ಳಕೂಡದು ? **ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ** ಎಂದರೆ ಕೆಸರು ತುಳಿದು ಕಾಲು ತೊಳೆಯುವದಕ್ಕಿಂತ ಕೆಸರು ತುಳಿಯದೆ ದೂರದಲ್ಲಿರುವುದು ಉತ್ತಮವು ಎಂಬ ನ್ಯಾಯಪ್ರಕಾರ, ಬುದ್ಧಿಪೂರ್ವೋತ್ತರಾಘ ಉಂಟಾಗದ ಹಾಗೆ ಮಾಡಿಕೊಳ್ಳುವದು ಒಳ್ಳೇ ಉಪಾಯವೆಂದುಪದೇಶಿಸುತ್ತಾರೆ. **ಸರ್ವೇಶ್ವರನ್ನೈಪ್ಪೋಲೆ** ಎಂದು ಹೇಳಿರುವದರಿಂದ ಸರ್ವೇಶ್ವರನೂ ಕೂಡ ಅವತಾರಗಳನ್ನೆತ್ತಿದಾಗ ತಾನೂ ಕರ್ಮವಶ್ಯನೆಂದು ತೋರ್ಪಡಿಸಿಕೊಂಡಿರುತ್ತಾರೆ. ಶ್ರೀರಾಮನು ತನಗೆ ಯೌವ್ವರಾಜ್ಯಾಭಿಷೇಕವು ತಪ್ಪಿ ವನ

ಆಗ್ಯೆಯಾಲ್ ಭಗವತ್ಪ್ರೀತಿ ಯಿಳವಾಮೈಕ್ಕಾಗವುಮ್, ಅದುಕ್ಕಾಗ ಪುನಃ ಪ್ರಪತ್ತಿಯಾದಲ್, ಲಘುದಂಡನಾದಲ್ ಪ್ರಸಜ್ಗಯಾಮೈಕ್ಕಾ

ವಾಸ ಪ್ರಾಪ್ತವಾದಾಗ, ನನು ದೈವಸ್ಯ ಕರ್ಮತತ್ ಕರ್ಮಾನುಸಾರ ಪ್ರಾಪ್ತವಾದ ದೈವಸಂಕಲ್ಪವೆಂದು ಹೇಳುತ್ತಾರೆ. ಹಾಗೆಯೇ ಸೀತೆಯೂ ಕೂಡ

"ವಿಧಿರ್ನ್ನೂನ ಮ ಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ ।
ಸೌಮಿತ್ರಿಂ ಮಾಂಚರಾಮಂಚ ವ್ಯಸನೈಃ ಪಶ್ಯಮೋಹಿತಾನ್ ॥"

ಕರ್ಮಫಲವನ್ನು ಮೀರಲು ಅಸಾಧ್ಯವು ಏಕೆಂದರೆ ಓ ಆಂಜನೇಯನೇ ಗುರುವೇ ಪರದೇವತೆಯೆಂದು ತಿಳಿದ ಲಕ್ಷ್ಮಣನಿಗೂನೂ, ಪತಿಯೇ ಪರದೈವವೆಂದು ಭಾವಿಸಿದ ತನಗೂ, ಧರ್ಮವೇ ಮೂರ್ತೀಭವಿಸಿದ ಹಾಗಿರುವ ರಾಮನಿಗೂ ಸಹ ದುಃಖವು ತಪ್ಪಲಿಲ್ಲವೆಂದು ಹೇಳಿಕೊಂಡಿರುತ್ತಾಳೆ. ಹಾಗೆಯೇ ತನಗೆ ರಾಕ್ಷಸ ಸ್ತ್ರೀಯರುಗಳಿಂದುಂಟಾದ ಬಾಧೆಯೂ ಕೂಡ

"ಭಾಗ್ಯವೈಷಮ್ಯ ಯೋಗೇನ ಪುರಾದುಶ್ಚರಿತೇನ ಚ ।
ಮಯ್ಯೈತತ್ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೇ"

ತನ್ನ ದುಷ್ಕರ್ಮಫಲವೆಂದೂ, ತನ್ನ ಕರ್ಮಫಲವನ್ನೇ ತಾನು ಅನುಭವಿಸತಕ್ಕದ್ದೆಂದೂ, "ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ" ತನಗೆ ಪೂರ್ವಾರ್ಜಿತ ದುಷ್ಕೃತವಿದ್ದುದರಿಂದಲೇ ಇಂತಹ ದುಃಖಪ್ರಾಪ್ತಿ ಎಂದೂ ಹೇಳಿಕೊಂಡಿರುತ್ತಾಳೆ. ಹಾಗೆಯೇ ಶ್ರೀಕೃಷ್ಣಬಲರಾಮರೂ ಕೂಡ ಸತ್ಯಭಾಮೆಯ ಮೂಲಕ ಆಕೆಯ ತಂದೆಯ ವಧೆಯನ್ನು ಕೇಳಿದವರಾಗಿ

ತದಾಕರ್ಣ್ಯೇಶ್ವರೌರಾಜನ್ ಅನುಸೃತ್ಯ ನೃಲೋಕತಾಂ ।
ಅಹೋನಃ ಪರಮಂ ಕಷ್ಟಮಿತ್ಯಸ್ರಾಕ್ಷೌ ವಿಲೇಪತುಃ ॥

ಎಂದು ಹೇಳಿರುವ ಹಾಗೆ ಮಾನುಷ ವ್ಯಾಪಾರವನ್ನಭಿನಯಿಸುವರಾಗಿ ಕಣ್ಣಿನಲ್ಲಿ ನೀರು ಸುರಿಸುತ್ತಾ ರೋದನ ಮಾಡಿದರು ಎಂದು ಹೇಳುತ್ತದೆ. ಹೀಗೆ ಕರ್ಮವಶ್ಯರೆಂದು ಅಭಿನಯಿಸಿರುತ್ತಾರೆ.

ಆಗ್ಯೆಯಾಲ್ - ಹೀಗೆ ಮಹಾ ಅಂತರಙ್ಗರ ವಿಷಯದಲ್ಲೂ ಬುದ್ಧಿಪೂರ್ವೋತ್ತರಾಘವು ಪ್ರತ್ಯವಾಯಕರವಾದುದರಿಂದ, **ಭಗವತ್ಪ್ರೀತಿಯಿಳವಾಮೈಕ್ಕಾಗವುಮ್** - ಭಗವತ್ಪ್ರೀತಿಯನ್ನು ಹೋಗಲಾಡಿಸಿಕೊಳ್ಳದೇ ಇರುವದಕ್ಕಾಗಿಯೂ, **ಅದಕ್ಕಾಗ** - ಆ ಕಾರಣಕ್ಕಾಗಿ, **ಪುನಃ ಪ್ರಪತ್ತಿಯಾದಲ್** - ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪತ್ತಿಯಾಗಲಿ, **ಪ್ರಸಙ್ಗಯಾಮೈಕ್ಕಾಗವುಮ್** - ಉಂಟಾಗದೆ ಇರುವದಕ್ಕಾಗಿಯೂ, **ಮೇಲ್ವರುಮಪರಾಧಙ್ಗಳ್**-

ಗವುಮ್, ಮೇಲ್‌ವರುಮಪರಾಧಙ್ಗಳೈ ವೇರರುಕ್ಕುಮ್ (ಪೊರುಕ್ಕುಮ್) ವಿರಗು ಪಾರ್ಕವೇಣುಮ್.

ಅಪರಾಧಙ್ಗಳೆಲ್ಲಾತ್ತುಕ್ಕು ಮುಡಿ ಅವಿವೇಕಮ್. ಅದಿಲ್ ಪ್ರಧಾನಮಾನ ಅವಿವೇಕಮ್ ಅಚಿತ್ಸ್ವಭಾವಮಾನ ಜಡತ್ವ ವಿಕಾರಾದಿಗಳೈಚ್ಚುಮಕ್ಕೈಯುಮ್, ಈಶ್ವರಸ್ವಭಾವಮಾನ ಸ್ವನಿಷ್ಠತ್ವ ಸ್ವಾತಂತ್ರ್ಯ ಅನನ್ಯಾರ್ಥ

ಪ್ರಪತ್ತ್ಯನಂತರ ಪ್ರಾಪ್ತವಾಗುವ ಅಪರಾಧಗಳನ್ನು, **ವೇರರುಕ್ಕುಮ್ ವಿರುಗು**- ಬುಡಸಹಿತವಾಗಿ ಕತ್ತರಿಸುವ ಉಪಾಯವನ್ನು, **ಪಾರ್ಕವೇಣುಮ್** - ಗಮನಿಸತಕ್ಕದ್ದು. ಆ ಉಪಾಯವು ಯಾವುದೆಂದರೆ ಅಪರಾಧಗಳೊಂದೂ ಉಂಟಾಗದ ಹಾಗೆ ಮಾಡಿಕೊಳ್ಳೋಣವು. ಬುದ್ಧಿಪೂರ್ವೋತ್ತರಾಘ ಉಂಟಾಗದೇನೇ ಇರುವದಕ್ಕೆ ಅದಕ್ಕೆ ಕಾರಣಭೂತವಾದ ಪ್ರಾರಬ್ಧಕರ್ಮನಾಶಕ್ಕಾಗಿ ಪ್ರಪದನವೆಂದು ಹೇಳಲ್ಪಟ್ಟಿತು. ಅನಂತರ ಯಾವ ಅಪರಾಧಗಳೂ ಬಾರದ ಹಾಗೆ ಮಾಡಿಕೊಳ್ಳುವ ಉಪಾಯವಿಲ್ಲವೇ? ಎಂದರೆ ಅವಿವೇಕವನ್ನು ತನಗೆ ಸ್ವಾಮಿಯು ಕೊಟ್ಟ ವಿವೇಕದಿಂದ ಛೇದಿಸುವದೇ ಒಳ್ಳೇ ಉಪಾಯವೆಂದು ಹೇಳುತ್ತಾರೆ. **ಅಪರಾಧಙ್ಗಳ್ ಎಲ್ಲಾತುಕ್ಕುಮ್** - ಈ ಬುದ್ಧಿಪೂರ್ವೋತ್ತರಾಘವೇ ಮೊದಲಾದ ಸರ್ವಾಪರಾಧಗಳಿಗೂ, **ಅಡಿ**-ಕಾರಣವು, ಅವಿವೇಕವು. **ಅದಿಲ್** - ಆ ಅವಿವೇಕಗಳಲ್ಲಿ **ಪ್ರಧಾನಮಾನ ಅವಿವೇಕಮ್** - ಮುಖ್ಯವಾದವೆಂದರೆ ಪ್ರಬಲವಾದ ಅವಿವೇಕವು **ಅಚಿತ್ಸ್ವಭಾವಮಾನ ಜಡತ್ವ ವಿಕಾರಾದಿಗಳೈ** - ಅಚಿತ್ತಿನ ಲಕ್ಷಣವಾದ ಜಡತ್ವ ವಿಕಾರ ಮೊದಲಾದವುಗಳನ್ನೂ ಇಲ್ಲಿ ಆದಿ ಶಬ್ದವು ಸ್ವರೂಪನಾಶವನ್ನು ಬೋಧಿಸುತ್ತದೆ. **ಶುಮಕ್ಕೈಯುಮ್** - ಆರೋಪಿಸಿಕೊಳ್ಳೋಣವು, ತನಗೆ ಸಂಬಂಧಪಟ್ಟವೆಂದು ಭಾವಿಸೋಣವೂ, ಎಂದರೆ ದೇಹಲಕ್ಷಣವನ್ನು ಆತ್ಮಲಕ್ಷಣವಾಗಿ ಭಾವಿಸೋಣವು, ಎಂದರೆ ದೇಹಾತ್ಮಭ್ರಾಂತಿಯೂ, **ಈಶ್ವರಲಕ್ಷಣವಾದ, ಸ್ವನಿಷ್ಠತ್ವ** - ತನ್ನಿಷ್ಟಾನುಸಾರ ಇರುವಿಕೆಯು, **ಇತರರಿಗೆ** ಅಧೀನವಾಗದಿರುವಿಕೆಯು ಸ್ವಾತಂತ್ರ್ಯವು, **ಅನನ್ಯಾರ್ಥತ್ವ** - ಯಾರಿಗೂ ಶೇಷನೆಂಬು ಭಾವಿಸದೆ ಇರೋಣವು, ಇವುಗಳನ್ನು, **ಶುಮಕ್ಕೈಯುಮ್** - ಆರೋಪಿಸಿಕೊಳ್ಳೋಣವು, ಎಂದರೆ ಸ್ವತಂತ್ರಾತ್ಮಭ್ರಾಂತಿಯೂ. ಅವಿವೇಕಗಳೆಲ್ಲಾ ಪ್ರಬಲ ಅವಿವೇಕಗಳು.

"ಅನಾತ್ಮನ್ಯಾತ್ಮಬುದ್ಧಿರ್ಯಾ ಚಾಸ್ವೇ ಸ್ವಮಿತಿಯಾಮತಿಃ ।
ಅವಿದ್ಯಾತರುಸಂಭೂತಿ ಬೀಜಮೇತದ್ದ್ವಿಧಾ ಸ್ಥಿತಂ"

(ವಿ, ಪು. ೬.೭.೧೧)

ತ್ವಾದಿಗಳೈಚ್ಚು ಮಕ್ಕೈಯುಮ್. ಇ (ಅ) ವ್ವಿವೇಕತ್ತೈಯರುಕ್ಕೈಕ್ಕ ತ್ತೆಳಿವಾಳಾಯಿರುಪದೇತ್ತುಚ್ಚುರಕ್ಕ ಪುರತ್ತನ್ನಳವಿಲುಂಡಾನ ತೆಳಿವು.

ಎಂದು ಹೇಳಿರುವ ಹಾಗೆ ದೇಹಾತ್ಮ ಭ್ರಮೆಯೂ, ಸ್ವತಂತ್ರಾತ್ಮ ಭ್ರಮೆಯೂ; ಜಡಸ್ವಭಾವಗಳನ್ನಾರೋಪಿಸಿಕೊಳ್ಳುವದರಿಂದ ತಾನೇ ದೇಹವೆಂಬ ಭ್ರಮೆಯುಂಟಾಗುತ್ತದೆ. ಪರಮಾತ್ಮನ ಸ್ವಾತಂತ್ರ್ಯಾದಿ ಸ್ವಭಾವಗಳನ್ನು ಆರೋಪಿಸಿಕೊಳ್ಳುವದರಿಂದ ಸ್ವತಂತ್ರನೆಂಬ ಭ್ರಮೆಯುಂಟಾಗುತ್ತದೆ. ಇವೆರಡು ವಿಧ ಅವಿವೇಕವನ್ನು ವಿವೇಕವೆಂಬ ಕತ್ತಿಯಿಂದ ಕತ್ತರಿಸತಕ್ಕದ್ದೆಂದು ಹೇಳುತ್ತಾರೆ ಇವ್ವಿವೇಕತ್ತೈ - ಈ ದೇಹಾತ್ಮಭ್ರಮ, ಸ್ವತಂತ್ರಾತ್ಮ ಭ್ರಮರೂಪವಾದ ಅವಿವೇಕವನ್ನು, ಅರುಕ್ಕೈಕ್ಕ - ಕತ್ತರಿಸುವದಕ್ಕೆ, ಛೇದಿಸುವದಕ್ಕೆ, ತೆಳಿವಾಳಾಯಿರುಪ್ಪದು - ತೀಕ್ಷ್ಣವಾದ ಕತ್ತಿಯಾಗಿರುವದು. ಏತ್ತಚ್ಚುರಕ್ಕಮರ - ಆಧಿಕ್ಯ ನ್ಯೂನತೆಯಿಲ್ಲದ ಹಾಗೆ, ತನ್ನಳವಿಲುಂಡಾನ ತೆಳಿವು - ತನ್ನ ಸ್ವರೂಪದ ಯಥಾರ್ಥ ಜ್ಞಾನವು. ತನಗೆ ಇಂತಹ ಅವಿವೇಕವೆಲ್ಲಾ ಕತ್ತರಿಸಿದ ಹಾಗೆ ನಿವರ್ತಿಸುವದಕ್ಕೆ, ತನ್ನ ಮಹಿಮೆಯನ್ನು ಹೆಚ್ಚಿಸದ ಹಾಗೂ ಕಮ್ಮಿಯಾಗದ ಹಾಗೂ ಯಥಾರ್ಥವಾಗಿ ತನ್ನ ಸ್ವರೂಪವೇನೆಂಬುವದರ ತಿಳುವಳಿಕೆಯು. ತಾನು ಜ್ಞಾನತ್ವ ಆನಂದತ್ವ ಅಮಲತ್ವಾದಿಗಳಿಂದ ಪರಿಶುದ್ಧನೆಂದೂ, ಆದುದರಿಂದ ಪ್ರತ್ಯಕ್ತ್ವ ಜಡತ್ವಾದಿಗಳುಳ್ಳ ಅಚೇತನವಾದ ದೇಹಕ್ಕಿಂತಲೂ ವಿಲಕ್ಷಣನೆಂದೂ ತಿಳಿಯುವದರಿಂದ ದೇಹವೇ ಆತ್ಮಾ ಎಂಬ ಭ್ರಮೆಯು ತೊಲಗುತ್ತದೆ.

"ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ"

(ಗೀ ೧೬-೧೪)

ಇತ್ಯಾದಿ ಸ್ವತಂತ್ರಾತ್ಮಭ್ರಾಂತಿ ಜೀವೇಶೈಕ್ಯ ಭ್ರಾಂತಿಗಳು ತಾನು ಸರ್ವೇಶ್ವರನಿಗೆ ದಾಸಭೂತನು, ನಿಯಾಮ್ಯವರ್ಗಕ್ಕೆ ಸೇರಿದವನು, ತಾನು ಪ್ರಾಪ್ತಾ ಅವನು ಪ್ರಾಪ್ಯನು, ತಾನು ಭಗವದನನ್ಯಾರ್ಹ ಶೇಷಭೂತನು, ಭಗವದನನ್ಯ ಶರಣ್ಯನು, ಭಗವದನನ್ಯ ಪ್ರಯೋಜನನು, ಎಂದರೆ ಭಗವಂತನಲ್ಲದೆ ಇನ್ನು ಯಾರಿಗೂ ತಾನು ಶೇಷಭೂತನಲ್ಲವು, ಭಗವಂತನಲ್ಲದೆ ಇನ್ಯಾರೂ ತನಗೆ ರಕ್ಷಕನಿಲ್ಲವು, ಭಗವಂತನಿಗಲ್ಲದೆ ಇನ್ನು ಯಾರಿಗೂ ತಾನು ಪ್ರಯೋಜನವಲ್ಲವೆಂಬಿವೇ ಮೊದಲಾದ ಜ್ಞಾನದಿಂದ ಈ ಅವಿವೇಕವು ತೊಲಗುತ್ತದೆಂಬ ಭಾವವು.

ಅವಿವೇಕ ಪ್ರಭುತ್ವಾದೇರ್ನಿದಾನಸ್ಯ ನಿವರ್ತನಾತ್ ।
ಅರ್ಥಕಾಮಾಪಚಾರಾಣಾ ಮಯತ್ನೋನ್ಮೂಲನಂ ಭವೇತ್ ॥೧೬॥

ಹೀಗೆ ಭಗವಂತನಿಗೆ ಸಲ್ಲುವ ಮಹಿಮೆಯನ್ನೂ, ಅಚೇತನಕ್ಕೆ ಸಲ್ಲುವ ನಿಕೃಷ್ಟತೆಯನ್ನೂ ಈತನು ಆರೋಪಿಸಿಕೊಳ್ಳಕೂಡದೆಂಬಭಿಪ್ರಾಯದಿಂದಲೇ ಚಿತ್ತುಚ್ಛರಕ್ಕಂ ಎಂಬ ಪ್ರಯೋಗವು. ಆದುದರಿಂದ ಇಂತಹ ಆಗಮೋತ್ಥ ತತ್ವತ್ರಯಸ್ವರೂಪಜ್ಞಾನ ಮೂಲಕ ವಿವೇಕ ಉಂಟಾಗಿ ತನ್ನ ನೈಜಸ್ವರೂಪಕ್ಕೆ ಚಿತಚ್ಛರಕ್ಕಜ್ಞಗಳನ್ನು ನ್ಯೂನಾತಿರಿಕ್ತಗಳನ್ನು ತ್ಯಜಿಸಿ ಯಥಾರ್ಥಸ್ವರೂಪಜ್ಞಾನ ಹೊಂದುವನಾಗುವನು ಈ ಅಭಿಪ್ರಾಯವೇ ತತ್ವತ್ರಯಾಧಿಕಾರದ ಆದಿ ಶ್ಲೋಕದಲ್ಲಿ ಬಹು ಚೆನ್ನಾಗಿಪಪಾದಿಸಿರುತ್ತಾರೆ. ಅದನ್ನೇ ಪ್ರಾಸಂಗಿಕವಾಗಿ ಇಲ್ಲಿ ಜ್ಞಾಪಕಕ್ಕೆ ಕೊಡುತ್ತಾರೆ.

ಮುಂದೆ ತಮ್ಮ ಸ್ವಂತ ಕಾರಿಕೆಯ ಮೂಲಕವಾಗಿ ಇಂತಹ ಅಪರಾಧಗಳಿಗೆ ಮೂಲಭೂತವಾದ ಅವಿವೇಕವು ಆತ್ಮಯಾಥಾರ್ಥ್ಯಜ್ಞಾನದಿಂದ ಯಾವಾಗ ನಿವರ್ತಿಸಿ ಹೋಗುತ್ತದೋ, ಆಗ ಅರ್ಥಕಾಮ ಪ್ರಯುಕ್ತ ಉಂಟಾಗಬಹುದಾದ ಬುದ್ಧಿಪೂರ್ವೋತ್ತರಾಘಗಳು ಯಾವುವೂ ಪ್ರಪನ್ನನಿಗೆ ಪ್ರಾಪ್ತವಾಗುವದಿಲ್ಲವೆಂದೂ ಪ್ರಯತ್ನವಿಲ್ಲದೇನೇ ಅಂತಹ ಅಪಚಾರಗಳೆಲ್ಲಾ ನಿರ್ಮೂಲವಾಗುವವೆಂದೂ, ಉಪದೇಶಿಸುತ್ತಾರೆ :—**ನಿದಾನಸ್ಯ** - ಸರ್ವವಿಧಾಪರಾಧಗಳಿಗೂ ಆದಿ ಕಾರಣಭೂತವಾದ, **ಅವಿವೇಕ ಪ್ರಭುತ್ವಾದೇಃ** – ಅವಿವೇಕವೆಂದರೆ ದೇಹವೇ ಆತ್ಮಾ ಎಂಬ ಅವಿವೇಕ ಮತ್ತು ಪ್ರಭುತ್ವ - ತಾನೇ ಸ್ವತಂತ್ರನೆಂಬ ಭ್ರಮೆ, **ಆದೇಃ** - ಮೊದಲಾದವುಗಳ, ಇಲ್ಲಿ ಆದಿಶಬ್ದದಿಂದ ಜೀವಪರಮಾತ್ಮೈಕ್ಯ ಭ್ರಮೆ ಮತ್ತು ತಾನಲ್ಲದೆ ಬೇರೇ ಈಶ್ವರನಿಲ್ಲವೆಂಬ ಭ್ರಮೆಗಳ, **ನಿವರ್ತನಾತ್**-ತತ್ವತ್ರಯಜ್ಞಾನ ಆತ್ಮಸ್ವರೂಪ ಯಾಥಾರ್ಥ್ಯಜ್ಞಾನ ಇವುಗಳಿಂದ ನಿವರ್ತಿಸುವದರಿಂದ **ಅರ್ಥಕಾಮಾಪಚಾರಾಣಾಂ**-ದ್ರವ್ಯ, ಕಾಮ ಇವುಗಳಮೂಲಕ ಪ್ರಾಪ್ತವಾಗುವ ಬುದ್ಧಿಪೂರ್ವೋತ್ತರಾಘಗಳ, **ಅಯತ್ನೋನ್ಮೂಲನಂ**-ಪ್ರಯತ್ನವಿಲ್ಲದ ನಿರ್ಮೂಲನವು, **ಭವೇತ್**-ಉಂಟಾಗುತ್ತದೆ. ಹಿಂದೆ ಜೀವಾತ್ಮನ ಸ್ವರೂಪ ಯಾಥಾರ್ಥ್ಯಜ್ಞಾನವೆಂಬ ತೀಕ್ಷ್ಣ ಕತ್ತಿಯಿಂದ ಈ ಭ್ರಮೆಗಳೆಲ್ಲಾ ಕತ್ತರಿಸಲ್ಪಡುತ್ತವೆ ಎಂದು ಹೇಳಿದುದನ್ನೇ ಸಮರ್ಥನೆ ಮಾಡುವುದಕ್ಕಾಗಿ ಈ ಕಾರಿಕೆಯನ್ನು ಅನುಗ್ರಹಿಸಿರುತ್ತಾರೆ. ಅದನ್ನನುಸರಿಸಿಯೇ ಈ ಕಾರಿಕೆಗೆ ಅರ್ಥಮಾಡುವದು ಯುಕ್ತವು. ಹೀಗೆಯೇ ಎಲ್ಲಾ ವ್ಯಾಖ್ಯಾತೃಗಳೂ ಅರ್ಥಮಾಡಿದ್ದಾರೆ. ಆದರೆ ಸಾರದೀಪ

ಬುದ್ಧಿಪೂರ್ವೋತ್ತರಾಘಾನಾಮನುತ್ಪತ್ತಿಕ್ರಮಃ

ಇವ್ವೈಯೆಲ್ಲಾತ್ತುಕ್ಕುಮಡಿ ಫಲಪ್ರದಾನೋನ್ಮುಖ ಮಾಯಿರುಪ್ಪ

ವ್ಯಾಖ್ಯಾತೃವೂ ಮತ್ತು ಕಾರಿಕಾದರ್ಪಣ ವ್ಯಾಖ್ಯಾತೃವೂ ಸಹ ನಿದಾನಸ್ಯ - ಎಂಬುವದನ್ನು ಅವಿವೇಕ ಪ್ರಭುತ್ವಾದೇಃ ಈ ದೇಹಾತ್ಮ ಸ್ವತಂತ್ರಾತ್ಮ ಭ್ರಮವೇ ಮೊದಲಾದವುಗಳ, ನಿದಾನಸ್ಯ - ಮೂಲಕಾರಣಭೂತವಾದ ಪ್ರಾರಬ್ಧ ರೂಪ ಪೂರ್ವಾಘ ವಿಶೇಷವೆಂದು ಬರೆದಿರುತ್ತಾರೆ; ಈ ಪ್ರಾರಬ್ಧರೂಪ ಪೂರ್ವಾಘದ, ನಿವರ್ತನಾತ್ - ಶರಣಾಗತಿಯ ಮೂಲಕ ನಿವೃತ್ತಿಯುಂಟಾಗುವದರಿಂದ, ಅರ್ಥಕಾಮಗಳಿಂದುಂಟಾಗುವ ಬುದ್ಧಿಪೂರ್ವೋತ್ತರಾಘವು ಉಂಟಾಗುವದಿಲ್ಲ ವೆಂದು ಅರ್ಥಮಾಡಿರುತ್ತಾರೆ. ಮೊದಲಿನ ಅರ್ಥವೇ ಹಿಂದೆಯುಪಪಾದಿಸಿದಕ್ಕೆ ಅನುಗುಣವಾಗಿರುವದರಿಂದ, ಅದೇ ಸಮಂಜಸವಾದ ಅರ್ಥವೆಂದು ತೋರಿ ಬರುತ್ತದೆ. ಈ ಎರಡನೇ ಅರ್ಥದಲ್ಲಿ ಅಪರಾಧಗಳಿಗೆ ಅವಿವೇಕವು ಮೂಲ ಕಾರಣವೆಂದೂ, ಈ ಮೂಲಕಾರಣವಾದ ಅವಿವೇಕಕ್ಕೆ ಬುದ್ಧಿಪೂರ್ವೋತ್ತ ರಾಘವು ಮೂಲಕಾರಣವೆಂದೂ, ಹೇಳಿದರೆ ಮೂಲಕಾರಣಕ್ಕೆ ಮೂಲಕಾರಣ ವೊಂದುಂಟು ಎಂದು ಹೇಳುವದರ ಮೂಲಕ ಅಸಮಂಜಸವು ಈ ಅರ್ಥ ವನ್ನೂ ಕಷ್ಟಪಟ್ಟು ಒಂದು ವಿಧವಾಗಿ ಸಮನ್ವಯವನ್ನು ಮಾಡಬಹುದು ಹೇಗೆಂದರೆ :—ಹಿಂದಿನ ಅಪರಾಧಗಳೇ ಈ ಅವಿವೇಕಗಳಿಗೆಲ್ಲಾ ಮೂಲಕಾರ ಣವು, ಈ ಅವಿವೇಕಗಳಿಗೆ ಮೂಲಕಾರಣವು, ಪ್ರಾರಬ್ಧಕರ್ಮವೂ ಎಂದು ಹೇಳು ವದರಿಂದ ಅಪರಾಧಗಳಿಂದ ಅವಿವೇಕವೂ, ಅವಿವೇಕದಿಂದ ಅಪರಾಧಗಳೂ ಹೀಗೆ ಬೀಜಾಙ್ಕುರನ್ಯಾಯದ ಪ್ರಕಾರ ಉಂಟಾಗುತ್ತವೆಂದು ಹೇಳಬಹುದು. ಆದರೂ ಹಿಂದೆ ಉಪಪಾದಿಸಿದುದನ್ನೇ ಕಾರಿಕೆ ಮೂಲಕ ಸಮರ್ಥನೆಮಾಡುವ ಪದ್ಧತಿಯಿರುವದರಿಂದ ಮೊದಲಿನ ಅರ್ಥವೇ ಸಮಂಜಸವಾಗಿ ತೋರುತ್ತದೆ.

ಬುದ್ಧಿಪೂರ್ವೋತ್ತರಾಘಗಳು ಉಂಟಾಗದೇ ಇರುವ ಕ್ರಮವು

ಹಿಂದೆ ಉಪಪಾದಿಸಿದರಲ್ಲೂ ಕಾರಿಕಾ ಮೂಲಕ ಸಮರ್ಥನೆಯಲ್ಲೂ ಆತ್ಮ ಸ್ವರೂಪ ಯಥಾರ್ಥಜ್ಞಾನದಿಂದುಂಟಾದ ವಿವೇಕದಿಂದ ಅವಿವೇಕರೂಪವಾದ ದೇಹಾತ್ಮ ಸ್ವತಂತ್ರಾತ್ಮ ಜೀವಪರಮಾತ್ಮೈಕ್ಯ ಭ್ರಮಗಳು ತೊಲಗುವದರಿಂದ ಬುದ್ಧಿಪೂರ್ವೋತ್ತರಾಘರೂಪವಾದ ದ್ರವ್ಯಕಾಮಾಭಿಲಾಷೆಗಳಿಂದ ಪ್ರಾಪ್ತವಾಗುವ ಬುದ್ಧಿಪೂರ್ವೋತ್ತರಾಘಗಳು ನಶಿಸಿಹೋಗುತ್ತವೆ ಎಂದು ಹೇಳಲ್ಪಟ್ಟಿತು. ಅದರ

ದೊರು ಪೂರ್ವಾಘಮಾಘ್ಯೆಯಾಲೇ ಅದಿನುಡೈಯ ನಿವೃತ್ತಿಕ್ಕುಮಾಗ ಮಡಿಯಿಲೇ ಪ್ರಪತ್ತಿಪಣ್ಣುದಲ್, ಇದಕ್ಕೆನ್ರು ಪಿನ್ನೊರು ಪ್ರಪತ್ತಿಪಣ್ಣುದಲ್ ಶೆಯ್‌ದಾರ್‌ಕ್ಕಿವೈಯೆಲ್ಲಾಮ್ ಪರಿಹೃತಙ್ಗಳಾಮ್.

ಅಭ್ಯುಪಗತ ಪ್ರಾರಬ್ಧರೂಪ ಪಾಪಾರಂಭಕ ಪಾಪದಿಂದ ಪ್ರಾಪ್ತವಾದ ವಾಸನಾ ಬಲಿಷ್ಠವಾಗಿದ್ದರೆ, ಆಗ ಅದು ಈ ವಿವೇಕಜ್ಞಾನವನ್ನು ನಿರೋಧಿಸಿ ಬುದ್ಧಿ ಪೂರ್ವೋತ್ತರಾಘವು ಒಂದು ವೇಳೇ ಪ್ರಾಪ್ತವಾಗಬಹುದಲ್ಲಾ ಎಂದರೆ, ಅಂಥಾದ್ದನ್ನೂ ಕೂಡ ಪ್ರಪತ್ತಿ ಸಂಸ್ಕಾರ ಬಲದಿಂದ ಪ್ರಾಪ್ತವಾಗದ ಹಾಗೆ ಪರಿಹರಿಸಬಹುದೆಂದು "ಇವೈಯೆಲ್ಲಾತ್ತುಕ್ಕು" ಎಂದು ಪ್ರಾರಂಭಿಸಿ ಹೇಳುತ್ತಾರೆ.

ಇವೈ ಎಲ್ಲಾತ್ತುಕ್ಕುಮ್ - ಈ ಬುದ್ಧಿಪೂರ್ವೋತ್ತರಾಪರಾಧಗಳಾದ ಅರ್ಥಕಾಮಾಪಚಾರಗಳಿಗೆಲ್ಲಾ, **ಅಡಿ** – ಮೂಲಕಾರಣವು. **ಫಲಪ್ರದಾನೋನ್ಮುಖ ಮಾಯಿರುಪ್ಪದು** - ಫಲವನ್ನು ಕೊಡಲು ಅಭಿಮುಖವಾಗಿರುವಂಥಾ, **ಒರು ಪೂರ್ವಾಘಮಾಗ್ಯೆಯಾಲೇ** – ಒಂದು ಮೊದಲು ಮಾಡಿದ ಪಾಪಕರ್ಮವಾಗಿ, ಈಗ ಪ್ರಾರಬ್ಧಪಾಪಕರ್ಮವೆಂದು ಹೆಸರನ್ನು ಹೊಂದಿರುವಂಥಾದ್ದಾದುದರಿಂದ **ಅದಿನುಡೈಯ ನಿವೃತ್ತಿಕ್ಕು** - ಆ ಪ್ರಾರಬ್ಧಪಾಪ ನಿವೃತ್ತಿಗಾಗಿ, **ಅಡಿಯಿಲೇ** - ಪ್ರಥಮದಲ್ಲೇ ಎಂದರೆ ಮೋಕ್ಷಾರ್ಥದೊಂದಿಗೇನೇ, **ಪ್ರಪತ್ತಿಪಣ್ಣುದಲ್** – ಪ್ರಪತ್ತ್ಯನುಷ್ಠಾನವನ್ನಾಗಲಿ, **ಇದಕ್ಕೆನ್ರು** – ಅನಂತರ ಮೋಕ್ಷಾರ್ಥಕ್ಕೆಂದಲ್ಲದೆ, ಈ ಪ್ರಾರಬ್ಧ ಪಾಪನಿವೃತ್ತಿಗಾಗಿ ಎಂದು, **ಪಿನ್ನೊರು ಪ್ರಪತ್ತಿಪಣ್ಣುದಲ್** - ಇನ್ನೊಂದು ಸಲ ಪ್ರಪತ್ತ್ಯನುಷ್ಠಾನವನ್ನಾಗಲಿ, **ಶೆಯ್‌ದಾರ್‌ಕ್ಕು** - ಮಾಡಿದವರಿಗೆ, **ಇವೈಯೆಲ್ಲಾ** – ಈ ಬುದ್ಧಿಪೂರ್ವೋತ್ತರಾಘರೂಪಗಳಾದ ಅರ್ಥಕಾಮಾಪಚಾರಗಳೆಲ್ಲಾ, **ಪರಿಹೃತಙ್ಗಳಾಮ್** - ಪರಿಹಾರವಾಗುವುವು. ಬುದ್ಧಿಪೂರ್ವೋತ್ತರಾಘಗಳಿಗೆ ಕಾರಣವು ಪಾಪಾರಂಭಕ ಪ್ರಾರಬ್ಧ ಪಾಪಕರ್ಮವು. ಇದು ಹೋದರೆ ಬುದ್ಧಿಪೂರ್ವೋತ್ತರಾಘಗಳು ನಿವರ್ತಿಸುತ್ತವೆ. ಆದುದರಿಂದ ಆ ಪಾಪಾರಂಭಕ ಪ್ರಾರಬ್ಧಪಾಪ ನಿವೃತ್ತಿಗಾಗಿ ಮೋಕ್ಷಾರ್ಥ ಪ್ರಪದನವನ್ನು ಗುರುಸನ್ನಿಧಿಯಲ್ಲಿ ಅನುಷ್ಠಿಸುವಾಗಲೇ ಅದರ ನಿವೃತ್ತಿಗಾಗಿಯೂ ಎಂದು ಸಙ್ಕಲ್ಪಿಸಿ ಪ್ರಪತ್ತ್ಯನುಷ್ಠಾನ ಮಾಡಬಹುದು. ಹಾಗಿಲ್ಲದಿದ್ದರೆ ಈ ಪ್ರಾರಬ್ಧ ಪಾಪನಿವೃತ್ತಿಗೆಂದು ಮಾತ್ರವೇ ಇನ್ನೊಂದು ಸಲ ಗುರುಸನ್ನಿಧಿಯಲ್ಲಿ ಪ್ರಪದನವನ್ನನುಷ್ಠಿಸಬಹುದು. ಆದರೆ ಮೋಕ್ಷಾರ್ಥ ಪ್ರಪದನವು ಸಕೃದನುಷ್ಠಿಸತಕ್ಕದಾದುದರಿಂದ ಈ ಎರಡನೇ ಸಲ ಅನುಷ್ಠಿಸುವಾಗ

ಏವಂ ಪರಿಹರಣೀಯೇಷು ಭಾಗವತಾಪಚಾರಃ ಪ್ರಧಾನಃ

ಇಪ್ಪಡಿ ಇವನುಕ್ಕು ಪರಿಹರಣೀಯಙ್ಗಳಾನವತ್ತಿಲ್ ರಾಜದಾರಾಪರಾಧಮ್ಪೋಲೆ ಭಾಗವತಾಪಚಾರಮ್ ಪ್ರಧಾನಮೆನ್ನುಮಿಡತ್ತೈ (೧) ಏ

ಮೋಕ್ಷಾರ್ಥವಾಗಿ ಪುನಃ ಅನುಷ್ಠಿಸತಕ್ಕದ್ದಲ್ಲವೆಂದು ತಿಳಿಸುವದಕ್ಕಾಗಿ ಇಲ್ಲಿ ಇದಕ್ಕೆನ್ನು ಎಂಬ ಪ್ರಯೋಗವು.

ಹೀಗೆ ಬುದ್ಧಿಪೂರ್ವೋತ್ತರಾಘಗಳನ್ನು ಆಗಮೋಕ್ತಜ್ಞಾನ, ವಿವೇಕೋತ್ಥ ಜ್ಞಾನಗಳಿಂದಲೂ, ಪಾಪಾರಂಭಕ ಪ್ರಾರಬ್ಧ ಪಾಪಕರ್ಮ ನಿವೃತ್ತಿಗಾಗಿ ಪ್ರಪತ್ತಿಯನ್ನನುಷ್ಠಿಸುವದರಿಂದಲೂ, ಅರ್ಥಕಾಮಾಪಚಾರರೂಪ ಬುದ್ಧಿಪೂರ್ವೋತ್ತರಾಘಗಳನ್ನು ಪರಿಹರಿಸಿಕೊಳ್ಳತಕ್ಕದ್ದೆಂದು ಉಪದೇಶಿಸಿದರು. ಮುಂದೆ ಇಂತಹ ಪರಿಹರಿಸಿಕೊಳ್ಳುವ ಅಪಚಾರಗಳಲ್ಲಿ ತುಂಬಾ ಪ್ರಬಲವಾದ ಅಪಚಾರವು ಭಾಗವತಾಪಚಾರವೆಂದೂ ಭಾಗವತರುಗಳ ವಿಷಯದಲ್ಲಿ ಹೇಗಿರಬೇಕೆಂದೂ, ಭಾಗವತಾಪಚಾರವು ಪ್ರಾಪ್ತವಾದರೆ ಹೇಗೆ ಪರಿಹರಿಸಿಕೊಳ್ಳತಕ್ಕದ್ದೆಂದೂ, ಇವೇ ಮೊದಲಾದವುಗಳನ್ನೆಲ್ಲಾ ತಿಳಿಸಿ, ಮೂರು ಕಾರಿಕೆಗಳಿಂದ ಸಮರ್ಥಿಸಿ, ಅಧಿಕಾರ ಪರಿಸಮಾಪ್ತಿಯನ್ನು ಮಾಡುತ್ತಾರೆ.

ಹೀಗೆ ಪರಿಹರಿಸಿಕೊಳ್ಳುವ ಅಪಚಾರಗಳಲ್ಲಿ ಭಾಗವತಾಪಚಾರವು ಪ್ರಧಾನವು.

ಇಪ್ಪಡಿ - ಹೀಗೆ ಎಂದರೆ ಆತ್ಮಯಾಥಾರ್ಥ್ಯಜ್ಞಾನದಿಂದಲೂ, ಮತ್ತು ಪ್ರಾರಬ್ಧಪಾಪನಿವೃತ್ತಿಗಾಗಿಯೂ ಪ್ರಪತ್ತಿ ಮಾಡುವದರಿಂದಲೂ ಇವನುಕ್ಕು - ಈ ಕೃತಕೃತ್ಯನಾದ ಪ್ರಪನ್ನನಿಗೆ, ಪರಿಹರಣೀಯಙ್ಗಳಾನವತ್ತಿಲ್ - ಪರಿಹರಿಸಿಕೊಳ್ಳಬೇಕಾದವುಗಳಲ್ಲಿ, ರಾಜದಾರಾಪರಾಧಮ್ಪೋಲೆ - ರಾಜಪತ್ನಿಯ ಅಪರಾಧದ ಹಾಗೆ, ಪತಿವ್ರತಾ ಧರ್ಮವನ್ನು ತ್ಯಜಿಸಿದ ಅಪರಾಧದ ಹಾಗೆ, ಭಾಗವತಾಪಚಾರವು, ಪ್ರಧಾನಮೆನ್ನುಮಿಡತ್ತೈ - ಮುಖ್ಯವಾದುದು ಎಂದರೆ ಪ್ರಬಲವಾದುದು ಎಂಬ ಸಂದರ್ಭದಲ್ಲಿ "ಏವಂ ಮುಕ್ತಿಫಲಾನಿಯಮಃ...." ಎಂಬುವ ಶಾರೀರಕ ಸೂತ್ರದಲ್ಲಿ ಶ್ರೀ ಭಾಷ್ಯಕಾರರವರು, ಅರುಳಿಚೆಯ್‌ದಾರ್ - ಅಪ್ಪಣೆ ಕೊಡಿಸಿರುತ್ತಾರೆ. ಶ್ರೀ ಭಾಷ್ಯಕಾರರು ಈ ಭಾಗವತಾಪಚಾರವು

(೧) ಬ್ರ. ಸೂ. ೩. ೪. ೫೦

ವಂ ಮುಕ್ತಿಫಲಾನಿಯಮ ಸ್ತದವಸ್ಥಾವಧೃತೇಃ ಸ್ತದವಸ್ಥಾವಧೃತೇಃ” ಎನ್ಗಿರ ಸೂತ್ರತ್ತಿಲೆ ಶ್ರೀ ಭಾಷ್ಯಕಾರರ್ ಅರುಳಿಚ್ಚೆಯ್‌ದಾರ್.

ಪ್ರಬಲವಾದುದೆಂದು ಈ ಸೂತ್ರದಭಾಷ್ಯದಲ್ಲಿ ಉಪದೇಶಿಸಿರುತ್ತಾರೆಂಬ ಭಾವವು. ಈ ಸೂತ್ರಾರ್ಥವೇನೆಂದರೆ :—**ಏವಂ** - ಹೀಗೆಯೇ ಎಂದರೆ ಹಿಂದೆ ಐಹಿಕ ಶ್ರೇಯಸ್ಸಿಗಾಗಿ ಮಾಡುವ ಉಪಾಸನೆಸಿದ್ಧಿಯಲ್ಲಿ ಹೇಗೋ ಹಾಗೆ, **ಮುಕ್ತಿಫಲಾನಿಯಮಃ** :- ಮುಕ್ತಿಫಲವನ್ನು ಕೊಡುವ ಉಪಾಸನಾಸಿದ್ಧಿಯಲ್ಲೂ, **ಅನಿಯಮವು** - ನಿಯಮವಿಲ್ಲವು, ಏಕೆಂದರೆ **ತದವಸ್ಥ**ವೆಂದರೆ ಅಂತಹ ಪ್ರತಿಬಂಧವಿಲ್ಲದಿರುವ ಅವಸ್ಥೆಯಲ್ಲಿ, **ಅವಧೃತೇಃ** - ಮುಕ್ತಿಫಲದ ನಿಶ್ಚಯವು ತೋರಿಬರುವದರಿಂದ; ಶ್ರೀ ಯತಿವರ್ಯರು ಹೇಳುತ್ತಾರೆ :—**“ತತ್ರಾಪಿ ಬ್ರಹ್ಮವಿದಪಚಾರಾಣಾಂ ಪೂರ್ವಕೃತಾನಾಂ ಪ್ರಬಲಾನಾಂ ಸಂಭವಾತ್ ಪ್ರತಿಬನ್ಧ ಸಂಭವಃ”** “ಬ್ರಹ್ಮವಿತ್ತುಗಳಿಗೆ ಮಾಡಿದ ಅಪಚಾರ ರೂಪವಾದ ಹಿಂದೆ ಮಾಡಿದ ದುಷ್ಕರ್ಮಗಳು ತುಂಬಾ ಪ್ರಬಲವಾದುದರಿಂದ ಪ್ರತಿಬಂಧ ಉಂಟಾಗುತ್ತದೆ” ಎಂದು ಅಲ್ಲಿ ವ್ಯಾಖ್ಯಾನಮಾಡಿರುತ್ತಾರೆ. ಇಲ್ಲಿ ಪ್ರತಿಬಂಧವ್ಯಾವುದೆಂದರೆ ಬ್ರಹ್ಮವಿದಪಚಾರವು, ಇದು ಬಲವತ್ತರವಾದ ವಿಘ್ನವಾದುದರಿಂದ, ಅಂತಹ ಪ್ರತಿಬಂಧವಿದ್ದರೆ ವಿಳಂಬವೂ, ಪ್ರತಿಬಂಧವಿಲ್ಲದಿದ್ದರೆ ಒಡನೆಯೇ ಉಂಟಾಗಬಹುದು ಎಂಬಭಿಪ್ರಾಯವು. **“ತದವಸ್ಥಾವಧೃತೇಃ”** ಎಂದು ಎರಡು ಸಲ ಹೇಳಿರುವದು ಅಧ್ಯಾಯವು ಮುಗಿಯಿತೆಂದು ಸೂಚಿಸುತ್ತದೆ. ಉಪನಿಷತ್ತುಗಳಲ್ಲೂ ಕೂಡ **“ನಾರಯಣ ಸಾಯುಜ್ಯಮವಾಪ್ನೋತಿ ನಾರಾಯಣ ಸಾಯುಜ್ಯಮವಾಪ್ನೋತಿ”** ಎಂದು ಎರಡು ಸಲ ಹೇಳುವ ವಾಡಿಕೆಯುಂಟು. ರಾಜನಿಗೆ ತನ್ನ ಹೆಂಡತಿಯು ಸತೀಧರ್ಮದಲ್ಲಿಲ್ಲವೆಂದು ತಿಳಿದರೆ ಆತನ ಪ್ರಬಲ ನಿಗ್ರಹಕ್ಕೆ ಹೇಗೆ ಪಾತ್ರಳಾಗುವಳೋ, ಹಾಗೆಯೇ ಪ್ರಪನ್ನನೂ ಭಾಗವತಾಪಚಾರ ಮಾಡಿದುದಾದರೆ ಭಗವಂತನ ಪ್ರಬಲ ನಿಗ್ರಹಕ್ಕೆ ಗುರಿಯಾಗುವನೆಂಬ ಭಾವವು. ಆದುದರಿಂದಲೇ ಸಙ್ಕಲ್ಪಸೂರ್ಯೋದಯದಲ್ಲಿ, **“ತ್ರಸ್ಯ ಬ್ರಹ್ಮ ವಿದಾಗಸಃ,”** ಬ್ರಹ್ಮವಿತ್ತಿಗೆ ಅಪಚಾರ ಎಲ್ಲಿ ಸಂಭವಿಸುತ್ತದೋ ಎಂದು ಭಯಪಡತಕ್ಕದ್ದೆಂದುಪದೇಶಿಸಿರುತ್ತಾರೆ. ಭಾಗವತಾಪಚಾರವು ಭಗವದಪಚಾರಕ್ಕಿಂತಲೂ ಗುರುತರವಾದುದು. **“ಶ್ರೀ ವಿಷ್ಣೋರವಮಾನನಾದ್ಗುರುತರಂ ಶ್ರೀವೈಷ್ಣವೋಲ್ಲಂಘನಂ”** ವಿಷ್ಣುವಿಗೆ ಅವಮಾನ ಮಾಡುವದಕ್ಕಿಂತ ಶ್ರೀವೈಷ್ಣವನ ಅವಮಾನವು ಗುರುತರವೆಂದು ಹೇಳಲ್ಪಟ್ಟಿರುತ್ತದೆ. ಶ್ರೀಮಾನ್ ಶೆಟ್ಟಿಲೂರು ನರಸಿಂಹಾಚಾರ್ಯರವರು ಸಙ್ಕಲ್ಪ

ಭಾಗವತ ವಿಷಯೇ ಕಥಂ ಪ್ರಪನ್ನಸ್ಯ ಪ್ರವೃತ್ತಿಃ ?

(೧) ಆನಪಿನ್ನು ಗುಣವೃತ್ತಾದಿಗಳಾಲೇ ಉತ್ಕೃಷ್ಟರಾನ ಪರಾಶರ

ಸೂರ್ಯೋದಯದ ಇನ್ನೊಂದು ಶ್ಲೋಕವನ್ನುದಾಹರಿಸಿರುತ್ತಾರೆ :—"**ಸಮಸ್ತ ವೃಜಿನೋದಧಿ ಗ್ರಸನ ಡಂಭಕುಂಭೋದ್ಭವಂ ನಿವೃತ್ತಮಪಿ ಧರ್ಮಮತ್ತ್ಯನಘತತ್ವವಿನ್ನಿಗ್ರಹಃ**" ಅಗಸ್ತ್ಯ ಮಹರ್ಷಿಯು ಸಮುದ್ರವನ್ನು ಹೇಗೆ ಪಾನಮಾಡಿದರೋ, ಹಾಗೆ ಈ ನಿವೃತ್ತಿ ಧರ್ಮರೂಪವಾದ ಭಕ್ತಿಪ್ರಪತ್ತಿರೂಪ ಉಪಾಯಗಳು ಸಮಸ್ತ ಪಾಪಗಳೆಂಬ ಸಮುದ್ರವನ್ನೂ ಪಾನಮಾಡಿಬಿಡುತ್ತವೆ ಎಂದರೆ ನಾಶಮಾಡುತ್ತವೆಂಬ ಭಾವವು. ಇಂತಹ ಮಾಹಾತ್ಮ್ಯಯುಳ್ಳ ಈ ಉಪಾಯುಗಳನ್ನೂ ಕೂಡ ನುಂಗಿಬಿಡುವನೊಂದುಂಟು, ಅದು ಯಾವುದೆಂದರೆ "**ಅನಘತತ್ವವಿನ್ನಿಗ್ರಹಃ**" ಉತ್ಕೃಷ್ಟನಾದ ಬ್ರಹ್ಮವಿತ್ತಾದ ಪರಮ ಭಾಗವತನ ನಿಗ್ರಹವು ಎಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ,

ನಿರ್ಧನಾಂಶ್ಚರತೋ ಲೋಕೇವೃತ್ತ್ಯರ್ಥಮಿಹ ವೈಷ್ಣವಾ ।
ನಾವಮನ್ಯೇತ ತ್ರೈಲೋಕ್ಯಂ ಪವಿತ್ರೀ ಕುರುತೇ ಹರಿಃ,

ಅನೇಕ ವೈಷ್ಣವರಾದ ಭಾಗವತೋತ್ತಮರು ವಿರಕ್ತಿಭಾವದಿಂದಿರುವದರಿಂದ ಧನಾರ್ಜನೆಯಲ್ಲಿ ಮನಸ್ಸನ್ನಿಡದೇ ನಿರ್ಧನರಾಗಿದ್ದಾರೆ. ಅಂಥಾವರು ದೇಹ ಯಾತ್ರೆಗೋಸ್ಕರವಾಗಿ ಅಲ್ಲಲ್ಲಿ ಈ ಲೋಕದಲ್ಲಿ ಸಂಚರಿಸುತ್ತಾ ಇರುವರು. ಹೀಗಿರುವದನ್ನು ಕಂಡು ಅವರನ್ನು ಅವಮಾನ ಮಾಡಕೂಡದು. ಏಕೆಂದರೆ, ಅನೇಕ ಕುಮಾರ್ಗವರ್ತಿಗಳಾದ ದುಷ್ಟರಿಂದ ಅಪವಿತ್ರವಾಗಿ ಮಾಡಲ್ಪಟ್ಟ ಈ ಲೋಕವನ್ನು ಜ್ಞಾನನಿಷ್ಠೆ ಕರ್ಮನಿಷ್ಠೆಗಳಿಂದ ಪ್ರಕಾಶಿಸುತ್ತಿರುವ ಇವರುಗಳ ಮೂಲಕ ಶ್ರೀಹರಿಯು ಪವಿತ್ರಮಾಡಲು ಉದ್ದೇಶಿಸಿರುವನು ಆದುದರಿಂದ ಇಂತಹ ಮಹನೀಯರಲ್ಲಿ ಮಾಡುವ ಅಪಚಾರದಿಂದ ಹೆಚ್ಚಾದ ನಿಗ್ರಹವು ಪ್ರಾಪ್ತವಾಗುತ್ತದೆಂದು ತಿಳಿಸುವದಕ್ಕಾಗಿ ರಾಜದಾರಾಪರಾಧಂಪೋಲೆ ಎಂಬ ಪ್ರಯೋಗವು.

ಭಾಗವತರ ವಿಷಯದಲ್ಲಿ ಪ್ರಪನ್ನನು ಹೇಗೆ ನಡೆಯತಕ್ಕದ್ದೆಂಬುದು.

ಈಗ ಭಾಗವತಾಪಚಾರವು ಸರ್ವವಿಧಾಪಚಾರಗಳಲ್ಲಿ ಅತ್ಯಂತ ಪ್ರಬಲವಾದುದು ಎಂದು ಹೇಳಲ್ಪಟ್ಟಿತು. ಹಾಗಾದನಂತರ ಅವರ ವಿಷಯದಲ್ಲಿ ನಮ್ಮ ನಡತೆಯು ಹೇಗಿರಬೇಕು ? ಕೆಲವರಲ್ಲಿ ಉತ್ಕೃಷ್ಟ ನಿಕೃಷ್ಟಭಾವವನ್ನು ಪ್ರದ

ವ್ಯಾಸ ಶುಕ ಶೌನಕ ನಾಥಮುನಿ ಪ್ರಭೃತಿಗಳುಕ್ಕುಮ್, ತನಕ್ಕುಮ್, ಭಾಗವತತ್ವಾದಿಗಳುಮ್ ಪರಮ ಪುರುಷಾರ್ಥ ಲಾಭಮುಮ್ ತುಲ್ಯಮಾಯಿರುನ್ದಾಲುಮ್, ಭಗವತ್ಪರಿಗ್ರಹಮಾನ ಗೋ ಗೋಪಜಾತಿಗಳು

ಶಿಸಬಹುದೋ ? ಕೆಲವರು ನಿಕೃಷ್ಟರೆಂದು ಭಾವಿಸಿ, ಅವರಲ್ಲಿ ತಿರಸ್ಕಾರಬುದ್ಧಿಯನ್ನು ಮಾಡಬಹುದೋ ? ಇತ್ಯಾದಿ ಪ್ರಶ್ನಶಙ್ಕಾದಿಗಳಿಗೆ ಸಮಾಧಾನವು ಮುಂದಿನ "ಆನಪಿನ್ಪ" ಎಂದಾರಂಭಿಸಿ, "**ಪೊರಂದು ಪ್ಪೋರವುಮ್ ಪ್ರಾಪ್ತಮ್**" ಎಂದು ಮುಗಿಸಿ ಉಪದೇಶಿಸಿದ ಒಂದು ಮಹಾವಾಕ್ಯವಾಗಿರುತ್ತದೆ ವ್ಯಾಖ್ಯಾನದ ಅನುಕೂಲಕ್ಕಾಗಿ ಈ ವಾಕ್ಯವನ್ನು ನಾಲ್ಕಾಗಿ ವಿಭಾಗಿಸಿರತ್ತದೆ. **ನಿನ್ನೈಯಾದೊಳಿಯುಮ್** ಎಂಬಲ್ಲಿಗೆ ಪ್ರಥಮ ವಾಕ್ಯವಾಗಿಯೂ, **ಕುರಿಯತ್ತಿರುಕ್ಕವಮ್** ಎಂಬಲ್ಲಿಗೆ ದ್ವಿತೀಯ ವಾಕ್ಯವಾಗಿಯೂ ಸಿದ್ಧಮೆನ್ನಿರುಕ್ಕವುಮ್ ಎಂಬಲ್ಲಿಗೆ ತೃತೀಯ ವಾಕ್ಯವಾಗಿಯೂ, **ಪೋರವುಮ್ ಪ್ರಾಪ್ತಂ** ಎಂಬಲ್ಲಿಗೆ ಚತುರ್ಥ ವಾಕ್ಯವಾಗಿಯೂ ಭಾವಿಸಬಹುದು. ಈ ಕೊನೆಯಲ್ಲಿರುವ ಪ್ರಾಪ್ತಂ ಎಂಬುವವನ್ನು ಇನ್ನು ಮೂರು ಕಡೆಯಲ್ಲಿಯೂ ಇಟ್ಟುಕೊಂಡರೆ ಸರಿಹೋಗುತ್ತವೆ. ಹೇಗೆಂದರೆ "**ನಿನ್ನೈಯಾದೊಳಿಯುಮ್ ಪ್ರಾಪ್ತಮ್**" ಇತ್ಯಾದಿ. ಮೊದಲು ಉತ್ಕೃಷ್ಟರಾದ ಭಾಗವತರನ್ನು ನಿಕೃಷ್ಟರೆಂದೂ ನಿಕೃಷ್ಟರಾದವರನ್ನು ಉತ್ಕೃಷ್ಟರೆಂದು ಭಾವಿಸ ಕೂಡದೆಂದುಪದೇಶಿಸುತ್ತಾರೆ :—

(೧) **ಆನಪಿನ್ಪ** - ಹೀಗಾದನಂತರ, ಎಂದರೆ ಅಪಚಾರಗಳಲ್ಲೆಲ್ಲಾ ಭಾಗವತಾಪಚಾರವು ತುಂಬಾ ಪ್ರಬಲವಾದುದಾಗಿ ಅದನ್ನು ಮುಖ್ಯವಾಗಿ ತ್ಯಜಿಸತಕ್ಕದ್ದೆಂದು ಸ್ಥಾಪಿತವಾದನಂತರ, **ಗುಣ** - ಶಾಸ್ತ್ರಜ್ಞಾನ, ಭಕ್ತಿ ವೈರಾಗ್ಯಾದಿ ಗುಣಗಳು ಇದರಿಂದ ಜ್ಞಾನನಿಷ್ಠೆಯು ಹೇಳಲ್ಪಟ್ಟಿತು, **ವೃತ್ತಾದಿಗಳಾಲೆ** - ವೃತ್ತವೆಂಬುವದರಿಂದ ನಿತ್ಯನೈಮಿತ್ತಿಕಾದಿ ಆಚಾರಗಳು, ಇದರಿಂದ ಕರ್ಮನಿಷ್ಠೆಯು ಹೇಳಲ್ಪಟ್ಟಿತು ; ಸಾರಾಸ್ವಾದಿನಿಯವರು ವೃತ್ತಶಬ್ದಕ್ಕೆ ಕಾಯಕ್ಲೇಶಾದಿ ರೂಪವೃತ್ತವೆಂದು ವ್ಯಾಖ್ಯಾನ ಮಾಡಿರುತ್ತಾರೆ. ಗುಣವೃತ್ತಶಬ್ದಗಳಿಂದ ಜ್ಞಾನನಿಷ್ಠೆ ಕರ್ಮನಿಷ್ಠೆಗಳು ಬೋಧಿತವಾದವೆಂದು ಇತರರು ಅರ್ಥ ಮಾಡಿರುವದೇ ಸಮಂಜಸವಾಗಿರುತ್ತದೆ. ಇಲ್ಲಿ ಆದಿ ಪದದಿಂದ ಆಶ್ರಮವಿಹಿತ ಕರ್ಮಗಳೂ ಉಪಾಸನಾದಿಗಳೂ ಸಂಗ್ರಹಿಸಲ್ಪಟ್ಟವು ; ಇವುಗಳಿಂದ ಉತ್ಕೃಷ್ಟರಾದ ಪರಾಶರರು, ವ್ಯಾಸರು, ಶುಕರು, ಶೌನಕರು, ನಾಥಮುನಿಗಳು, **ಪ್ರಭೃತಿಗಳುಕ್ಕುಮ್** - ಮೊದಲಾದವರಿಗೂ, **ತನಕ್ಕುಮ್** - ತನಗೂ ಸಹ, ಭಾಗವ

ದ್ದೈಯುವುಮ್, ತುಳಸೀ ಚಂಪಕಾದಿಗಳುದ್ದೈಯುವುಮ್, ಗೋಮಯ ಮೃಗಮದಾದಿಗಳುದ್ದೈಯುವುಮ್, ವೈಷಮ್ಯಮ್ಪೋಲೆ ಭಗವತ್ಸಙ್ಕಲ್ಪ ವಿಶೇಷ ಪ್ರಯುಕ್ತಮಾನ ತತ್ತದುಪಾಧಿ ಸ್ವಭಾವತ್ತಾಲೇ, ಸಿದ್ಧಂಗಳಾನ ಉತ್ಕರ್ಷಾಪಕರ್ಷಙ್ಗಳೈ ಅಸೂಯಾ ಪ್ರಾದುರ್ಭಾವ ಪ್ರಕರಣತ್ತಿಲ್ ಆಮ್ನಾತಮಾನಪಡಿಯೇ ತಿರಸ್ಕರಿಕ್ಕ ನಿನೈಯಾದೊಳಿಯುವುಮ್ ;

ತತ್ತ್ವವೇ ಮೊದಲಾದವುಗಳೂ, ಪರಮ ಪುರುಷಾರ್ಥಗಳೂ, **ತುಲ್ಯಮಾಯಿರುನ್ದಾಲುಮ್** - ಸಮಾನವಾಗಿ ಇದ್ದರೂ, **ಭಗವತ್ಪರಿಗ್ರಹಮಾನ** - ಸರ್ವೇಶ್ವರನಿಗೆ ಪ್ರಿಯವಾದ, **ಗೋ ಗೋಪಜಾತಿಗಳುದ್ದೈಯುವುಮ್** - ಗೋವುಗಳೇನು ಗೋಪಾಲಕರು ಗೋಪೀಜನವೇನು ಇವುಗಳಿಗಿರುವ; **ತುಳಸಿಯೇನು ಚಂಪಕ** ವೆಂದರೆ ಸಂಪಿಗೆ ಮೊದಲಾದ ಪುಷ್ಪಗಳೇನು ಇವುಗಳಿಗೂ ಇರುವ; **ಗೋಮಯ** ವೆಂದರೆ ಪವಿತ್ರವೆನಿಸುವ ಆಕಳ ಸಗಣಿ ಏನು; ಮೃಗಮದವೆಂದರೆ ಕಸ್ತೂರಿ ಏನು ಇವುಗಳಿಗಿರುವ; **ವೈಷಮ್ಯಂಪೋಲೆ** - ವ್ಯತ್ಯಾಸದ ಹಾಗೆ, ಮೊದಲನೆಯವುಗಳಾದ **ಗೋವು**, ತುಳಸೀ, ಗೋಮಯಗಳು ತುಂಬಾ ಉತ್ಕೃಷ್ಟವಾದವೆಂದೂ, ಗೋಪೀಜನವು ಗೋವಿನಷ್ಟು ಚಂಪಕವು ತುಳಸಿಯಷ್ಟು ಕಸ್ತೂರಿ ಗೋಮಯದಷ್ಟು ಉತ್ಕೃಷ್ಟವಲ್ಲವೆಂಬ ವ್ಯತ್ಯಾಸದ ಹಾಗೆ ಎಂಬ ತಾತ್ಪರ್ಯವು, **ಭಗವತ್ಸಙ್ಕಲ್ಪ ವಿಶೇಷ ಪ್ರಯುಕ್ತಮಾನ** - ಸರ್ವೇಶ್ವರನ ಸಙ್ಕಲ್ಪದಿಂದುಂಟಾದ, **ತತ್ತದುಪಾಧಿ ಸ್ವಭಾವತ್ತಾಲೇ** - ಆಯಾ ವಸ್ತುಗಳಿಗೆ ಆಯಾಯಾ ಮೇಲೆ ಹೇಳಿದ ಜಾತಿ ಗುಣ ವೃತ್ತಿ ಮೊದಲಾದ ಕಾರಣದಿಂದುಂಟಾದ ಸ್ವಭಾವದಿಂದಲೇ, **ಸಿದ್ಧಙ್ಗಳಾನ** - ಸಿದ್ಧವಾಗಿರುವ, **ಉತ್ಕರ್ಷಾಪಕರ್ಷಙ್ಗಳೈ** - ಒಂದು ತುಂಬಾ ಉತ್ಕೃಷ್ಟವಾಗಿಯೂ, ಇನ್ನೊಂದು ಅಷ್ಟು ಉತ್ಕೃಷ್ಟವಲ್ಲದಿರುವದರಿಂದ ಸ್ವಲ್ಪ ನಿಕೃಷ್ಟವಾಗಿಯೂ ಇರುವಿಕೆಯು, **ಅಸೂಯಾ ಪ್ರಾದುರ್ಭಾವ ಪ್ರಕರಣತ್ತಿಲೆ** - ಅಸೂಯೋತ್ಪತ್ತಿಯನ್ನುಪಪಾದಿಸುವ ಪ್ರಕರಣದಲ್ಲಿ, **ಆಮ್ನಾತಮಾನಪಡಿಯೇ** - ಉಪನಿಷತ್ತಿನಲ್ಲಿ ಉಪದೇಶಿಸಿರುವ ರೀತಿಯಲ್ಲಿ, ಅಥವಾ ರಹಸ್ಯಾಮ್ನಾಯದಲ್ಲಿ ಹೇಳಿರುವ ಮೇರೆಗೆ, **ತಿರಸ್ಕರಿಕ್ಕನಿನೈಯಾದೊಳಿಯುಮ್ ಪ್ರಾಪ್ತಂ** - ತಿರಸ್ಕರಿಸಬೇಕೆಂಬ ಅಭಿಸಂಧಿ ಇಲ್ಲದಿರೋಣವು ಯೋಗ್ಯವಾದುದು. ಯದ್ಯಪಿ ಭಾಗವತರೆಲ್ಲರೂ ಸಮಾನರೇ ಏಕೆಂದರೆ, ಅವರೆಲ್ಲರೂ ಭಗವದ್ಭಕ್ತರಾಗಿ ಸರ್ವೇಶ್ವರನಿಗೆ "ಯೋಮದ್ಭಕ್ತಸ್ಸಮೇಪ್ರಿಯಃ" (ಗೀ ೧೨-೧೬)ಎಂದು ಹೇಳಿರುವ ಹಾಗೆ, ಆತನಿಗೆ ಪ್ರಿಯರು. ಎಲ್ಲರೂ ಉಪಾಯಾನ

ಷ್ಠಾನವನ್ನು ಮಾಡಿರುವದರಿಂದ ಪರಮ ಪುರುಷಾರ್ಥ ಲಾಭವು ಎಲ್ಲರಿಗೂ ಸಮಾನವಾದುದೇ. "ಸಮೋಹಂ ಸರ್ವಭೂತೇಷು" ಎಂದು ಸರ್ವೇಶ್ವರನು ಹೇಳಿರುವದು ಎಲ್ಲರನ್ನೂ ಪ್ರೀತಿಯಿಂದ ಸಮವಾಗಿ ಭಾವಿಸಿ ತತ್ತತ್ಕರ್ಮಾನುಸಾರ ಫಲವನ್ನು ಕೊಡತ್ತೇನೆಂಬಭಿಪ್ರಾಯದಿಂದ ಮಾತ್ರವೇ ಅಲ್ಲದೆ, ಎಲ್ಲರೂ ಸಮರು ಎಂಬಭಿಪ್ರಾಯದಿಂದಲ್ಲವು. ಎಲ್ಲಾ ಚೇತನರಿಗೂ ಅವರವರ ಕರ್ಮಾಯತ್ತವಾದ ತಾರತಮ್ಯ ಉಂಟೇ ಉಂಟು. ಹಾಗೆಯೇ ಭಾಗವತತ್ವವು ಎಲ್ಲಾ ಪ್ರಪನ್ನರಿಗೂ ಸಮನಾಗಿದ್ದರೂ ಅವರುಗಳಲ್ಲೂ ತಾರತಮ್ಯವು ಉಂಟೇ ಉಂಟು. ಶ್ರೀ ಪರಾಶರ, ವ್ಯಾಸ, ಶುಕ ಶೌನಕಾದಿಗಳೂ, ಆದಿ ಪದದಿಂದ ಶ್ರೀ ಯಾಮುನೇಯರೂ ಯತಿವರ್ಯರೇ ಮೊದಲಾದ ಪರಮೈಕಾನ್ತಿಗಳೂ ಪ್ರಪನ್ನರಾದ ನಾವುಗಳೂ ಸಹ ಸಮರೇ ಎಂದು ಎಂದಿಗೂ ಭಾವಿಸತಕ್ಕದ್ದಲ್ಲವು. ಹಾಗೆಯೇ ಆಚಾರ್ಯರೂ ನಾವೂ ಸಹ ಸಮರೆಂದೂ ಎಣಿಸಕೂಡದು. ಪಿತಾ ಮೊದಲಾದ ಗುರುಜನವೂ ನಾವೂ ಸಮರಾಗುವದಿಲ್ಲವು.

ಶ್ರೀ ಪರಾಶರರಾದರೋ ವಸಿಷ್ಠಪೌತ್ರರು. ತಮ್ಮ ತಂದೆಯನ್ನು ವಿಶ್ವಾಮಿತ್ರರಿಂದ ಪ್ರೇರಿಸಲ್ಪಟ್ಟ ರಾಕ್ಷಸರು ಕೊಂದುಹಾಕಿದುದರಿಂದ ರಾಕ್ಷಸನಾಶಕ್ಕಾಗಿ ಸತ್ರವನ್ನು ಮಾಡಿ ಅನೇಕ ರಾಕ್ಷಸರು ಹತರಾಗುವ ಹಾಗೆ ಮಾಡಲು ; ಅದನ್ನು ಕಂಡು ವಸಿಷ್ಠರು ತಮ್ಮ ಪೌತ್ರರಂ ಕುರಿತು ಕ್ರೋಧೋನಾಶಕರಃಪರಃ" ಎಂದೂ "ನಾಶಾನಾಂ ಆಕರಃ ಕ್ರೋಧಃ" ಎಂದೂ ಹೇಳಿರುವದರಿಂದ ಕ್ರೋಧವನ್ನು ತ್ಯಜಿಸಿ, ಸತ್ರೋಪಸಂಹಾರವನ್ನು ಮಾಡತಕ್ಕದ್ದೆಂದು ಉಪದೇಶಿಸಲು, ಆಗ ಗುರುವಾಕ್ಯವನ್ನು ಶ್ರೀ ಪರಾಶರರು ಪಾಲಿಸಿದುದರಿಂದ, ಚತುರ್ಮುಖಬ್ರಹ್ಮನ ಪುತ್ರರಾದ ಪುಲಸ್ತ್ಯರು ಪರಮ ಪ್ರೀತರಾಗಿ, ಪರಾಶರರನ್ನು ಹರಸಿ, ಪರದೇವತಾ ಪಾರಮಾರ್ಥ್ಯವನ್ನು ಯಥಾವತ್ತಾಗಿ ತಿಳಿದ ಬ್ರಹ್ಮವಿತ್ತಾಗಿ, ಪುರಾಣರತ್ನವೆಂದು ಈ ಭುವನದಲ್ಲಿ ಪ್ರಸಿದ್ಧಿಯನ್ನು ಹೊಂದುವ ಹಾಗೆ ವಿಷ್ಣುಪುರಾಣ ಕರ್ತೃವಾಗುವೆ ಎಂದು ವರವನ್ನಿತ್ತು ತೆರಳಿದರು. "ಪರಾಶರಂಮುನಿವರಂ ಕೃತಪೌರ್ವಾಹ್ಣಿಕಕ್ರಿಯಮ್" ಎಂದು ಪ್ರಥಮ ಶ್ಲೋಕದಲ್ಲಿ ಹೇಳಿರುವ ಹಾಗೆ ಜ್ಞಾನನಿಷ್ಠೆ ಕರ್ಮನಿಷ್ಠೆಗಳಿಂದ ಕಂಗೊಳಿಸುತ್ತಿರುವ ಈ ಮಹರ್ಷಿಯು ತಮಗೆ ಅನುರೂಪರಾದ ಶಿಷ್ಯರಾದ ಮೈತ್ರೇಯರಿಗೆ ಈ ಪುರಾಣವನ್ನುಪದೇಶಿಸಿದರೆಂಬ ವೃತ್ತಾಂತವಿರುವದರಿಂದ ಶ್ರೀ ಪರಾಶರರು ಬ್ರಹ್ಮವಿದಗ್ರೇಸರರು.

ಶ್ರೀ ವ್ಯಾಸಮಹರ್ಷಿಯು ಅಂತಹ ಶ್ರೀ ಪರಾಶರ ಪುತ್ರರು. ಇವರು ವೇದಗಳನ್ನೆಲ್ಲಾ ಕ್ರಮಪಡಿಸಿದುದರಿಂದ ಇವರಿಗೆ ವೇದವ್ಯಾಸರೆಂದೂ ಹೆಸರು. ಪ್ರತ್ಯರ್ಥವು ತುಂಬಾ ಗಂಭೀರವಾಗಿ ಸರಿಯಾದ ಸಮಂಜಸಾರ್ಥವು ವ್ಯಕ್ತವಾಗಿ

ತೋರದ ಸಂದರ್ಭಗಳಲ್ಲಿ ಅದರರ್ಥವು ಹೀಗೆಂದು ಬ್ರಹ್ಮಸೂತ್ರಗಳಲ್ಲೂ ತಾವು ಬರೆದ ಪಂಚಮ ವೇದವೆನಿಸುವ ಭಾರತದಲ್ಲೂ, ಭಾಗವತದಲ್ಲೂ ನಿಷ್ಕರ್ಷಿಸಿ ಸ್ಥಾಪಿಸಿದ ಮಹನೀಯರು. ಇವರು ಶ್ರೀಕೃಷ್ಣನ ಉಪದೇಶವಾದ ಶ್ರೀ ಭಗವದ್ಗೀತೆಯನ್ನು ಪ್ರಕಾಶಪಡಿಸಿ ಲೋಕವಿಖ್ಯಾತಿಯನ್ನು ಹೊಂದಿರುತ್ತಾರೆ. ಈ ಕಾರಣಗಳಿಂದ ಇವರು "ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ" ಎಂದು ಹೇಳಿರುವ ಹಾಗೆ ವಿಷ್ಣ್ವಂಶವೆಂದೇ ಭಾವಿಸಲ್ಪಟ್ಟಿರುವವರು. ಶ್ರೀ ಪರಾಶರರೇ ತಮ್ಮ ಪುತ್ರರಾದ ವ್ಯಾಸರನ್ನು ಹಾಗೆಯೇ ಭಾವಿಸಿರುತ್ತಾರೆ :-

"ಕೃಷ್ಣ ದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ ।
ಕೋನ್ಯೋಹಿ ಭುವಿ ಮೈತ್ರೇಯ ಮಹಾಭಾರತ ಕೃದ್ಭವೇತ್"

ಮಹಾಭಾರತದಲ್ಲಿ ಇಲ್ಲದಿರುವ ಅಮೋಘೋಪದೇಶವು ಇನ್ನೆಲ್ಲಿಯೂ ಇಲ್ಲವಾದುದರಿಂದ ಅಂತಹ ನಿರತಿಶಯ ಗ್ರಂಥನಿರ್ಮಾಣವು ಶ್ರೀಮನ್ನಾರಾಯಣಾಂಶವಿಲ್ಲದೇ ಎಂದಿಗೂ ಉಂಟಾಗಲಾರದೆಂಬ ತಾತ್ಪರ್ಯವು ವ್ಯಾಸಮಾಹಾತ್ಮ್ಯೆಯು ಹೀಗೆ ಶ್ರೀ ವಿಷ್ಣುಪುರಾಣದ ತೃತೀಯಾಂಶ ನಾಲ್ಕನೆಯ ಅಧ್ಯಾಯದಲ್ಲಿ ಉಪಪಾದಿತವಾಗಿರುತ್ತದೆ. ಆದುದರಿಂದ ಈ ಮಹರ್ಷಿಯಿಂದ ಉಂಟಾದ ಉಪಕಾರವು ಇಷ್ಟೆಂದು ಹೇಳಲು ಸಾಧ್ಯವಿಲ್ಲದೆ ಕೃತಜ್ಞತಾಭಾವದಿಂದ, ಈ ಋಷಿಯನ್ನೇ ಮೊದಲುಮಾಡಿಕೊಂಡು ದೇವರ್ಷಿ ಪಿತೃತರ್ಪಣದಲ್ಲಿ ಋಷಿತರ್ಪಣವನ್ನು ಪ್ರತಿದಿನವೂ ಕೊಡುತ್ತೇವೆ. ೭೪೦-ನೆಯ ಪುಟಗಳನ್ನು ನೋಡಿ.

ಶುಕಮಹರ್ಷಿಯು, ಶ್ರೀ ವ್ಯಾಸಮಹರ್ಷಿಯ ಮಕ್ಕಳು. ನಿಷ್ಠೆಗಳಲ್ಲಿ ತಂದೆಯನ್ನು ಮೀರಿಸಿದವರು. ಪರೀಕ್ಷಿನ್ಮಹಾರಾಜನಿಗೆ ಏಳು ದಿನಗಳ ನಂತರ ಸರ್ಪದಷ್ಟನಾಗೆಂದು ಋಷಿಪುತ್ರಶಾಪ ಪ್ರಾಪ್ತವಾದಾಗ ಆ ಏಳುದಿನಗಳಲ್ಲಿ ಮೋಕ್ಷಪ್ರಾಪ್ತಿಗೆ ಸಾಧಕವಾದ ಶ್ರೀಮದ್ಭಾಗವತವೆಂದು ಪ್ರಖ್ಯಾತವಾಗಿರುವ ಇತಿಹಾಸ ಕಥೆಯನ್ನುಪದೇಶಿಸಿದ ಪರಮ ಬ್ರಹ್ಮವಿತ್ತು. ಜ್ಞಾನ ಭಕ್ತಿ ವೈರಾಗ್ಯಗಳನ್ನೂ ಸರ್ವೇಶ್ವರನನ್ನು ಹೊಂದುವ ಉಪಾಯಗಳನ್ನೂ ಬಹು ನಿಪುಣತರವಾಗಿ ಉಪಪಾದಿಸುವ ಈ ಭಾಗವತ ಕಥೆಯು ತಂದೆಯಾದ ಶ್ರೀ ವ್ಯಾಸಮಹರ್ಷಿಯಿಂದ ಇವರಿಗೆಉಪದೇಶಿಸಲ್ಪಟ್ಟಿತು.

ಶ್ರೀ ನಾಥಮುನಿಗಳ ವೃತ್ತಾಂತಕ್ಕೆ ಗುರುಪರಂಪರಾ ಸಾರದ (೩೯-೭೦ ೭೫-೮೦) ಪುಟಗಳನ್ನು ಪರಾಂಬರಿಸಬಹುದು. ಹೀಗೆ ಇವರುಗಳು ಗುಣವೃತ್ತಗಳಿಂದ ಸರ್ವೋತ್ಕೃಷ್ಟರು. ಇತರ ಪ್ರಪನ್ನರಿಗೆ ಇಷ್ಟು ಅಮೋಘಗುಣವೃತ್ತಗಳಿಲ್ಲದಿರುವದರಿಂದ ಅಂತಹ ಉತ್ಕರ್ಷವು ಇವರಿಗೆ ಇಲ್ಲವು. ಆದರೂ ಈ ಎರಡು ಪಂಗಡದವರಿಗೂ ಭಾಗವತತ್ವದಲ್ಲೂ ಮೋಕ್ಷಪ್ರಾಪ್ತಿಯಲ್ಲೂ ಸಮ

ಭಾವವು ಆದುದರಿಂದ ಇವರುಗಳೆಲ್ಲಾ ಸಮರೆಂಬಭಿಪ್ರಾಯವು ಸರಿಯಲ್ಲವು. ಏಕೆಂದರೆ, ಇವರುಗಳಿಗಿರುವ ಉತ್ಕರ್ಷಾಪಕರ್ಷಗಳು ಸರ್ವೇಶ್ವರನ ಸಂಕಲ್ಪದಿಂದ ಅವರವರುಗಳ ಸುಕೃತಾನುಸಾರ ಸಿದ್ಧವಾದವು. ಆದುದರಿಂದ ನಿಕೃಷ್ಟರಾದವರು ಉತ್ಕೃಷ್ಟರಾದವರ ವಿಷಯದಲ್ಲಿ ಅಸೂಯೆಯನ್ನು ತೋರಿಸಿ ಅವರುಗಳ ಮಾಹಾತ್ಮ್ಯೆಯೇನಿದೆ ಎಂದು ಅವರನ್ನು ತಿರಸ್ಕರಿಸಕೂಡದು. ಹಾಗೆಯೇ ನಿಕೃಷ್ಟರಾದವರನ್ನು ಉತ್ಕೃಷ್ಟರಾದವರಿಗೆ ಸಮವೆಂದು ಇಲ್ಲದ ಮಾಹಾತ್ಮ್ಯೆಯನ್ನಾರೋಪಿಸಲೂ ಕೂಡದು ಎಂದುಪದೇಶಿಸುತ್ತಾರೆ. ಹೀಗೆ ಅಸೂಯಾಪ್ರಾದುರ್ಭಾವ ಸರಿಯಲ್ಲವೆಂದು ಎಲ್ಲಿ ಹೇಳಿದೆ ಎಂಬುವದು ವ್ಯಕ್ತವಾಗುವದಕ್ಕಾಗಿ "ಅನ್ಸೂಯಾತಮಾನಸವಡಿಯೇ" ಎಂಬ ಪ್ರಯೋಗವು ರಹಸ್ಯಾಮ್ನಾಯದಲ್ಲಿ ಉಪಪಾದಿತವಾಗಿದೆ ಎಂದು ಶ್ರೀ ದೇಶಿಕರವರೇ ತಾತ್ಪರ್ಯ ಚಂದ್ರಿಕೆಯಲ್ಲಿ (ಗೀ. ೧೮ ೪೪) ಹೇಳಿರುತ್ತಾರೆ. ಆ ಪ್ರಕರಣವು ಯಾವುದೆಂದರೆ :— ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರುಗಳ ಕರ್ಮಗಳು ಶಾಸ್ತ್ರವಿಹಿತವಾದವು ಯಾವುದೆಂಬುವದು ಶ್ರೀ ಗೀತೆಯ ೧೮ನೆಯ ಅಧ್ಯಾಯದ ೪೨, ೪೩, ೪೪ನೆಯ ಶ್ಲೋಕಗಳಲ್ಲಿ ಉಪಪಾದಿತವಾಗಿರುತ್ತದೆ. ಕೃತಯುಗಾಂತ್ಯ, ತ್ರೇತಾಯುಗಾರಂಭದಲ್ಲಿ ಕ್ಷತ್ರಿಯ, ವೈಶ್ಯ, ಶೂದ್ರರು ಸ್ವಕರ್ಮನಿರತರಾಗದೆ, ಬ್ರಾಹ್ಮಣರಿಗಿಂತ ನಿಕೃಷ್ಟವಾದ ಕರ್ಮವೆಂದು ಕ್ಷತ್ರಿಯರೂ, ವೈಶ್ಯರು ಬ್ರಾಹ್ಮಣ ಕ್ಷತ್ರಿಯರಿಗಿಂತ ನಿಕೃಷ್ಟಕರ್ಮವು ತಮ್ಮದೆಂದೂ, ಶೂದ್ರರು ಇನ್ನು ಮೂರು ವರ್ಣದವರ ಕರ್ಮಕ್ಕಿಂತ ತುಂಬಾ ನಿಕೃಷ್ಟವೆಂದೂ ಅಸೂಯಾವಿಷ್ಟಮನಸ್ಕರಾದರೆಂದು ಹೇಳಲ್ಪಟ್ಟಿರುತ್ತದೆ. ಇಂತಹ ಅಸೂಯೆಗಳು ಇದರಿಂದ ಎಲ್ಲಾ ಕಾಲದಲ್ಲೂ ಉಂಟೆಂಬುವದು ತೋರಿಬರುತ್ತದೆ. ಆದರೆ ಕಲಿಯುಗದಲ್ಲಿ ಇಂತಹ ಅಸೂಯೆಯು ತುಂಬಾ ಹೆಚ್ಚು ಎಂದು ಅನೇಕ ಪುರಾಣೇತಿಹಾಸಗಳಲ್ಲಿ ಉಪಪಾದಿತವಾಗಿರುವದು ಈಗ ನಮಗೆ ಪ್ರತ್ಯಕ್ಷಸಿದ್ಧವಾಗಿರುತ್ತದೆ, ಹೀಗೆ ಅಸೂಯೆಯು ಹೆಚ್ಚಲು ಕಾರಣವೇನೆಂದು ಯೋಚಿಸುವಲ್ಲಿ, ಉತ್ಕೃಷ್ಟಜಾತೀಯನು ತನ್ನ ಸ್ವಧರ್ಮವನ್ನು ತ್ಯಜಿಸಿ ಕೀಳುಜಾತಿಯವನ ಹಾಗೆ ಪ್ರವರ್ತಿಸುವಿಕೆಯು, ನಿಕೃಷ್ಟವರ್ಣದವನ ಅಸೂಯೆಯನ್ನು ಇನ್ನೂ ವೃದ್ಧಿಮಾಡುತ್ತದೆ. ವರ್ಣಾಶ್ರಮಧರ್ಮಗಳಲ್ಲಿ ಬ್ರಾಹ್ಮಣಕರ್ಮವು ಬಹು ಕಷ್ಟವಾದುದು, ಆಜ್ಞಾನುಜ್ಞಾ ಕೈಙ್ಕರ್ಯಗಳನ್ನು ಸಾಧಿಸುವದು ಸುಲಭವಲ್ಲವು, ಸುಖವು ಕಮ್ಮಿಯು. ಹೀಗಿದ್ದರೂ ಬ್ರಾಹ್ಮಣಕರ್ಮಾಪೇಕ್ಷೆಯು ಇತರರಿಗೆ ಏತಕ್ಕೋ ತಿಳಿಯದು. ಮುಕ್ತಿಫಲವು ಸಾರ್ವತ್ರಿಕವಾಗಿ ಸಾಮಾನ್ಯವೆಂದು ಮುಂದಿನ ಶ್ಲೋಕವಾದ "ಸ್ವೇ ಸ್ವೇ ಕರ್ಮಣ್ಯಭಿರತ ಸ್ಸಂಸಿದ್ಧಿಂ ಲಭತೇ ನರಃ" ಎಂಬಲ್ಲಿ ಉಪಪಾದಿತವಾಗಿರುತ್ತದೆ. ಶೂದ್ರಸ್ಸಾಧುಃ ಎಂಬ ವ್ಯಾಸೋ

ಕ್ತಿಯೂ ಈ ಅಭಿಪ್ರಾಯವನ್ನೇ ಸೂಚಿಸುತ್ತದೆ.

ಮೇಲೆ ಮೂಲದಲ್ಲಿ ಅಮ್ನಾತವಮಾನಪಡಿಯೇ ಎಂದು ಇರುವವರಿಂದ ಶ್ರುತಿಯಲ್ಲಿಯೂ ಸಹ ಈ ಅಸೂಯಾ ಪ್ರಾದುರ್ಭಾವವು ಉಪಪಾದಿತವಾಗಿರುತ್ತ ದೆಂಬಭಿಪ್ರಾಯವೂ ಉಂಟಾಗುತ್ತದೆ. ಆದುದರಿಂದ ಸಾರದೀಪಿಕಾ, ಸಾರಪ್ರಕಾಶಿಕಾ, ಸಾರವಿವರಿಣೀ ವ್ಯಾಖ್ಯಾತೃಗಳು ವಾಜಸನೇಯದಲ್ಲಿ ಉಪಪಾದಿತವಾಗಿದೆ ಎಂದು ಹೇಳುತ್ತಾರೆ. ಜನಕಮಹಾರಾಜನು ಸಹಸ್ರ ಗೋವುಗಳನ್ನು ತರಿಸಿ, ಋಷಿಗಳ ಸಭಾಮಧ್ಯದಲ್ಲಿ ಸರ್ವಾಧಿಕರು ಯಾರೋ ಅವರು ಈ ಗೋವುಗಳನ್ನು ಪರಿಗ್ರಹಿಸಬಹುದೆಂದು ಹೇಳಿದನು. ಋಷಿಗಳಲ್ಲಿ ಪ್ರತಿಯೊಬ್ಬರು ತಾನು ಸರ್ವಾಧಿಕನೆಂದು ಹೇಳಿಕೊಳ್ಳುವದು ಉಚಿತವಲ್ಲವೆಂದು ಸುಮ್ಮನಿರಲು, ಆಗ ಯಾಜ್ಞವಲ್ಕ್ಯರು ಸಭೆಯಲ್ಲಿ ಎದ್ದು ತಾವು ಪರಿಗ್ರಹಿಸು ವದಾಗಿ ಹೇಳಲು ; ಆಗ ಇತರ ಋಷಿಗಳು ಎದ್ದು ಅಸೂಯೆಯಿಂದ ಪ್ರೇರಿತ ರಾಗಿ ಆ ಯಾಜ್ಞವಲ್ಕ್ಯರ ಮಾಹಾತ್ಮ್ಯೆಯನ್ನು ತಿರಸ್ಕರಿಸಲು ಉದ್ಯುಕ್ತರಾದ ರೆಂಬ ವೃತ್ತಾಂತವುಂಟು. ಹೀಗೆ ಈ ಎರಡು ಪ್ರಕರಣಗಳಲ್ಲಿ ಯಾವುದನ್ನಾದರೂ ಅಂಗೀಕರಿಸಬಹುದು. ಶ್ರೀ ಸಾರಾಸ್ವಾದಿನಿಯವರು ರಹಸ್ಯಾಮ್ನಾಯದಲ್ಲಿ ಹೇಳಿ ರುವದೇ ಶ್ರೀ ದೇಶಿಕರವರಿಗೆ ಉದ್ದೇಶ್ಯವೆಂಬುವದನ್ನು ತೋರಿಸಿರುತ್ತಾರೆ.

ಹೀಗೆ ಪರಸ್ಪರ ವ್ಯತ್ಯಾಸ ಉಂಟೇ ಉಂಟು ಎನ್ನುವದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆ. ಗೋಪಜಾತೀಯರು ಯದ್ಯಪಿ ಚೇತನ ರಾಗಿ ಗೋವುಗಳಿಗಿಂತ ಹೆಚ್ಚು ಜ್ಞಾನವುಳ್ಳವರಾದರೂ, ಗೋವುಗಳಿಗೆ ಶಾಸ್ತ್ರ ಮರ್ಯಾದೆಯಿಂದ ಉತ್ಕೃಷ್ಟತೆಯುಂಟು. ಹಾಗೆಯೇ ಚಂಪಕಾದಿ ಪುಷ್ಪಗಳು ತಮ್ಮಲ್ಲಿರುವ ಪರಿಮಳದಿಂದ ಪ್ರಾಶಸ್ತ್ಯವನ್ನು ಹೊಂದಿದ್ದರೂ, ತುಳಸಿಯುಷ್ಟು ಮಹಿಮೆಯನ್ನು ಹೊಂದಿದದಲ್ಲವು ಮೃಗಮದವು ಸುವಾಸನೆಯುಳ್ಳದ್ದಾಗಿಯೂ, ದೇಹಕ್ಕೆ ಉತ್ತೇಜಕವಾಗಿಯೂ, ಸರ್ವೇಶ್ವರನಿಗೆ ತಿಲಕಾದಿಗಳಿಗೆ ಉಪಯುಕ್ತ ವಾಗಿದ್ದರೂ, ಗೋಮಯದ ಹಾಗೆ ಪಾವನತ್ವದಿಂದ ಉತ್ಕೃಷ್ಟತೆಯನ್ನು ಹೊಂದಿದ್ದಲ್ಲವು. ಆದುದರಿಂದ ಇಂತಹ ಉತ್ಕರ್ಷಾಪಕರ್ಷವು ಸ್ವಾಮಿಸಂಕಲ್ಪ ದಿಂದಲೇ ಸಿದ್ಧವಾದುವು. ಆ ಕಾರಣದಿಂದ ಪರಸ್ಪರಾಸೂಯೆಗಳೂ ತಿರ ಸ್ಕಾರಾದಿಗಳೂ ಪ್ರಪನ್ನರಿಗೆ ಯೋಗ್ಯವಲ್ಲವೆಂದುಪದೇಶವು.

೨. ಹಿಂದಿನ ವಾಕ್ಯಖಂಡದಿಂದ ಮಹಾಭಾಗವತೋತ್ತಮರಾಗಿ ಕರ್ಮ ಜ್ಞಾನನಿಷ್ಠೆಗಳಿಂದ ಪ್ರಸಿದ್ಧರಾದವರಲ್ಲಿ ಅಸೂಯೆಯಿಂದ ತಿರಸ್ಕಾರ ಕೂಡ ದೆಂದು ಹೇಳಲ್ಪಟ್ಟಿತು. ಈ ವಾಕ್ಯಖಂಡದಿಂದ ನಿಕೃಷ್ಟಜಾತಿಯ ಪ್ರಪನ್ನರ ವಿಷಯದಲ್ಲಿ ಪ್ರಪನ್ನನ ಕರ್ತವ್ಯವೇನೆಂಬುವದನ್ನು ಉಪದೇಶಿಸುತ್ತಾರೆ :- ಜಾತ್ಯಾ

೨. ಜಾತ್ಯಾದ್ಯುಪಾಧಿಗಳಾಲೇ ಭಾಗವತರ್ ತಿರತ್ತಿಲ್ (೧) ಅನುಜ್ಞಾಪರಿಹಾರೌ ದೇಹಸಂಬಂಧಾಜ್ಜ್ಯೋತಿರಾದಿವತ್" ಎಙ್ಗಿರ ನ್ಯಾಯತ್ತಾಲೆ ಪ್ರವೃತ್ತಿ ವಿಶೇಷಙ್ಗಳುಕ್ಕು ಯಥಾಶಾಸ್ತ್ರಮ್ ನಿಯಮಮುಣ್ಡಾ

ದ್ಯುಪಾಧಿಗಳಾಲೇ - ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರಾದಿ ಜಾತಿಗಳ ಮೂಲಕ ಪ್ರಾಪ್ತವಾದ ಕಾರಣಗಳಿಂದ, **ಭಾಗವತರ್ತಿರತ್ತಿಲ್** - ಅಂತಹ ಭಾಗವತರುಗಳ ವಿಷಯದಲ್ಲಿ **"ಅನುಜ್ಞಾಪರಿಹಾರೌ** - ಎಲ್ಲಾ ಭಾಗವತರುಗಳೂ ಭಾಗವತತ್ವದಿಂದ ಸಮಾನರಾದರೂ ಕೂಡ, ಕೆಲವರ ವಿಷಯದಲ್ಲಿ ಉತ್ತಮ ಜಾತೀಯರಾದ ಬ್ರಾಹ್ಮಣ ಭಾಗವತರ ವಿಷಯದಲ್ಲಿ ಶುಶ್ರೂಷಾದಿ ಪ್ರವೃತ್ತಿಯಲ್ಲಿ ಅನುಜ್ಞೆಯೂ, ಜಾತಿಯಲ್ಲಿ ಕಮ್ಮಿಯಾದ ಶೂದ್ರಾದಿ ಭಾಗವತರ ವಿಷಯದಲ್ಲಿ ಶುಶ್ರೂಷಾದಿ ಪ್ರವೃತ್ತಿಯ ಪರಿಹಾರವೂ ಎಂದರೆ ತ್ಯಾಜ್ಯವೂ ಶಾಸ್ತ್ರಸಿದ್ಧವಾದುದು, ಏಕೆಂದರೆ :- **ದೇಹಸಂಬಂಧಾತ್** - ಈ ಭಾಗವತರು ಉತ್ಕೃಷ್ಟ ನಿಕೃಷ್ಟ ದೇಹವುಳ್ಳವರಾದ ಪ್ರಯುಕ್ತ; ಅದು ಹೇಗೆಂದರೆ :— **ಜ್ಯೋತಿರಾದಿವತ್** - ಅಗ್ನಿ ಮೊದಲಾದವುಗಳ ಹಾಗೆ; ಶ್ರೋತ್ರಿಯಾಗಾರದಿಂದ ಹೋಮಕ್ಕಾಗಿ ಅಗ್ನಿಯನ್ನು ತರಲು ಅನುಜ್ಞೆಯೂ, ಆದಕ್ಕಾಗಿ ಶ್ಮಶಾನಾಗ್ನಿಯು ತ್ಯಾಜ್ಯವೆಂದು ಹೇಗೆ ವಿಧಿಸಲ್ಪಟ್ಟಿದೆಯೋ ಹಾಗೆ. ಯದ್ಯಪಿ ಎರಡೂ ಅಗ್ನಿಯಾದರೂ ಒಂದು ಗ್ರಾಹ್ಯವು ಒಂದು ಅಪರಿಗ್ರಾಹ್ಯವು. ಹಾಗೆಯೇ ಮಡಿಕೆ ಮುಂತಾದ ಸಾಮಾನುಗಳೂ ಹವ್ಯಕ್ಕಾಗಿ ಉಪಯೋಗಿಸಿದುದು ಗ್ರಾಹ್ಯವು, ಕವ್ಯಕ್ಕಾಗಿ ಉಪಯೋಗಿಸಿದುದು ಗ್ರಾಹ್ಯವಲ್ಲವು. ಆದಿ ಪದದಿಂದ ಇವುಗಳೆಲ್ಲಾ ಬೋಧಿಸಲ್ಪಟ್ಟವು." ಎಂಗಿರನ್ಯಾಯತ್ತಾಲೇ - ಎಂದು ಕೆಲವು ಗ್ರಾಹ್ಯವಾಗಿಯೂ, ಇನ್ನು ಕೆಲವು ಅಪರಿಗ್ರಾಹ್ಯವಾಗಿಯೂ ಹೇಳಿರುವ ನ್ಯಾಯಪ್ರಕಾರ, **ಪ್ರವೃತ್ತಿ ವಿಶೇಷಙ್ಗಳುಕ್ಕು** - ಹೀಗೆ ಪ್ರವೃತ್ತಿ ವ್ಯತ್ಯಾಸಗಳಿಗೆ, **ಯಥಾಶಾಸ್ತ್ರಮ್** - ಶಾಸ್ತ್ರಾನುಗುಣವಾಗಿ, **ನಿಯಮಮುಂಡಾನಾಲುಮ್** - ನಿಯಮ ಉಂಟೇಯಾದರೂ, **"ಸಾಧುರೇವ ಸಮಂತವ್ಯಃ"** "ಅಂಥಾವನು ವೈಷ್ಣವಾಗ್ರೇಸರನೇ ಸರಿ". ಎಂಥಾವನು ವೈಷ್ಣವಾಗ್ರೇಸರನೆಂಬುವದು ಈ ಗೀತಾಶ್ಲೋಕದ ಪೂರ್ವಾರ್ಧದಲ್ಲಿ ಹೇಳಲ್ಪಟ್ಟಿರುತ್ತದೆ.

"ಅಪಿಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸಮಂತವ್ಯಸ್ಸಮ್ಯಗ್ವ್ಯವಸಿತೋಹಿಸಃ

(೧) ಶಾ. ಸೂ. ೨.೩.೪೭.

ನಾಲುವರ್ (೧) "ಸಾಧುರೇವ ಸಮಂತವ್ಯಃ" ಎನ್ರುಮ್, (೨) ಸ್ಮೃತ ಸ್ಸಂಭಾಷಿತೋ ಪಿವಾ" ಎನ್ರುಮ್ (೩) ಯ ಶ್ಶೂದ್ರಂ ಭಗವದ್ಭಕ್ತಂ

ಎಂಬುವದು ಪೂರಾಶ್ಲೋಕವು. ಜಾತಿ ಆಕಾರಸ್ವಭಾವಗುಣಾದಿಗಳಿಂದ ಉತ್ಕೃಷ್ಟ ನಿಕೃಷ್ಟರಾದ ಸರ್ವಭೂತಗಳಲ್ಲಿಯೂ ಸರ್ವೇಶ್ವರನು ಆಶ್ರಯಣೀಯ ಭಾಗ ದಲ್ಲಿ ಎಲ್ಲರಿಗೂ ಸಮನು, ಇವನು ಇಂತಹ ಜಾತ್ಯಾಕಾರ ಸ್ವಭಾವ ಜ್ಞಾನಾದಿ ಗಳಿಂದ ನಿಕೃಷ್ಟನೆಂಬ ದ್ವೇಷವೂ ತನಗಿಲ್ಲವು, ಅಂತವುಗಳಿಂದ ಇವನು ಉತ್ಕೃಷ್ಟ ನೆಂಬ ಹೆಚ್ಚು ಪ್ರೀತಿಯೂ ಇಲ್ಲವು. ಇದೂ ಅಲ್ಲದೆ, ಯಾವನು ಎಷ್ಟು ಜಾತ್ಯಾದಿ ಗಳಲ್ಲಿ ಹೆಚ್ಚು ನಿಕೃಷ್ಟನಾಗಿದ್ದರೂ ಕೂಡ, ನನ್ನ ಭಜನವೇ ಮುಖ್ಯ ಪ್ರಯೋ ಜನವೆಂದು ಭಾವಿಸಿ ಭಜಿಸಿದುದೇಯಾದರೆ, ಅಂಥಾವನನ್ನೇ ವೈಷ್ಣವಾಗ್ರೇಸರ ನೆಂದು ಹೆಚ್ಚಾಗಿ ಬಹುಮಾನಿಸತಕ್ಕದ್ದು. ಯಾವ ಕಾರಣದಿಂದೆಂದರೆ, "**ಸಮ್ಯ ಗ್ವ್ಯವಸಿತೋ ಹಿ ಸಃ** - ಆತನ ವ್ಯವಸಾಯವು ತುಂಬಾ ಸಮೀಚೀನವಾದುದ ರಿಂದ; ಭಗವಂತನು ಸಮಸ್ತ ಜಗತ್ತಿಗೂ ಕಾರಣಭೂತನು, ಆತನು ಪರ ಬ್ರಹ್ಮನಾಗಿ ಸಕಲ ಚರಾಚರಕ್ಕೂ ಸ್ವಾಮಿಯು, ನಿಯಾಮಕನು; ಆದುದ ರಿಂದ ನನಗೂ ಸ್ವಾಮಿಯು ನಿಯಾಮಕನು, ನನಗೆ ಪರಮಗುರುವು, ಪರಮ ಸುಹೃತ್ತು, ಆದುದರಿಂದ ನನಗೆ ಪರಮಭೋಗ್ಯನು, ಎಂಬಿವೇ ಮೊದಲಾದ ಸರ್ವ ರಿಗೂ ಸಾಧಾರಣವಾಗಿ ಲಭಿಸದೇ ಇರುವ ಇಂತಹ ಸಮೀಚೀನ ವ್ಯವಸಾಯವು ಆತನಿಗುಂಟು. ಇದರ ಕಾರ್ಯಭೂತವಾದ ನಿರಂತರ ಭಜನವೂ ಆತನಿಗುಂಟು. ಆ ಕಾರಣದಿಂದಲೇ ಅಂತವನನ್ನು **ಸಾಧುರೇವಸಮಂತವ್ಯಃ** - ವೈಷ್ಣವಾ ಗ್ರೇಸರನೆಂಬದಾಗಿ ಭಾವಿಸತಕ್ಕದ್ದು ಎಂಬ ಭಾವವು. ಆತನಲ್ಲಿ ಆಚಾರ ವ್ಯತಿ ಕ್ರಮ ಸ್ವಲ್ಪವಿದ್ದರೂ ಅದರಿಂದಾತನು ಅನಾದರಣೀಯನಲ್ಲವು, ತುಂಬಾ ಆದ ರಿಸಲು ಯೋಗ್ಯನೇ ಎಂಬ ತಾತ್ಪರ್ಯವು", ಎನ್ರುಮ್ - ಎಂದೂ, "**ಸ್ಮೃತಃ**- ಸ್ಮರಿಸಲ್ಪಟ್ಟರೂ, ಅಥವಾ, **ಸಂಭಾಷಿತೋಪಿವಾ** - ಸಂಭಾಷಿಸಲ್ಪಟ್ಟವನೂ ಕೂಡ, ವಾ ಎಂಬುವದರಿಂದ ಸಮುಚ್ಚಯಾರ್ಥದಿಂದ ಎರಡರಿಂದಲೂ ಕೂಡು **ಪುನಾತಿ ಭಗವದ್ಭಕ್ತಸ್ಸಹಸ್ರಾಂಶು ರಿವೋದಿತಃ** ಎಂದು ಮುಂದೆ ಇರ ತ್ತದೆ; **ಸಹಸ್ರಾಂಶುರಿವೋದಿತಃ**, ಉದಿಸಿದ ಸೂರ್ಯನು ಹೇಗೆ ಲೋಕವ ನ್ನೆಲ್ಲಾ ತನ್ನ ಅನೇಕ ಕಿರಣಮೂಲಕ ಪವಿತ್ರಮಾಡುತ್ತಾನೋ, ಹಾಗೆ **ಭಗವದ್ಭಕ್ತಃ** - ಸಾರ್ವತ್ರಿಕವಾಗಿ ಭಗವದ್ಭಕ್ತನು ಯಾವ ಜಾತಿಯವನೇ ಆಗಲಿ, **ಪುನಾತಿ** - ಪವಿತ್ರೀಕರಿಸುತ್ತಾನೆ." ಎನ್ರುಮ್ - ಇದರಿಂದ, ಭಗ

(೧) ಗೀ. ೯.೩೦. (೨) ಇತಿಹಾಸ ಸಮುಚ್ಚಯಮ್ ೩೩.೫೭

ನಿಷಾದಂ ಶ್ವಪಚಂ ತಥಾ । ವೀಕ್ಷತೇ ಜಾತಿ ಸಾಮಾನ್ಯಾತ್ಸಯಾತಿ ನರಕಂ ನರಃ" ಎನ್ನುವ್ (೪) ತಸ್ಮಾದ್ವಿಷ್ಣು ಪ್ರಸಾದಾಯ ವೈಷ್ಣವಾ£ ಪರಿತೋಷಯೇತ್ । ಪ್ರಸಾದ ಸುಮುಖೋ ವಿಷ್ಣು ಸ್ತೇನೈವಸ್ಯಾನ್ನ

ವದ್ಭಕ್ತನು ಉತ್ಕೃಷ್ಟ ಜಾತಿಯವನಾಗಲಿ, ನಿಕೃಷ್ಟ ಜಾತಿಯವನೇಯಾಗಲಿ ಈ ಲೋಕವನ್ನೇ ಸೂರ್ಯನೋಪಾದಿಯಲ್ಲಿ ಪವಿತ್ರಮಾಡತಕ್ಕವನೆಂದು ಹೇಳಲ್ಪಟ್ಟಿತು, "**ಯಃ** - ಯಾವನು, ಭಗವದ್ಭಕ್ತನಾದ ಶೂದ್ರನನ್ನಾಗಲಿ, **ನಿಷಾದಂ**- ಬೇಡರವನನ್ನಾಗಲಿ, **ತಥಾ** - ಹಾಗೆಯೇ, **ಶ್ವಪಚಂ** - ಚಂಡಾಲನನ್ನೇಯಾಗಲಿ, **ಜಾತಿಸಾಮಾನ್ಯಾತ್** - ಆತನ ಶೂದ್ರ, ಬೇಡ ಅಥವಾ ಚಂಡಾಲರೂಪ ನಿಕೃಷ್ಟಜಾತಿಯ ಸಾಮಾನ್ಯ ಭಾವದಿಂದ, **ವೀಕ್ಷತೇ** – ನೋಡುತ್ತಾನೋ, ಎಂದರೆ ಭಗವದ್ಭಕ್ತನೆಂದು ಅಭಿಮಾನಿಸದೆ ಈತನು ಹೀನಜಾತಿಯವನೆಂದು ನೋಡುವನೋ ಎಂಬರ್ಥವು, **ಸಃ** - ಅಂತಹ, **ನರಃ** - ಮನುಷ್ಯನು, **ನರಕಂ ಯಾತಿ** - ನರಕವನ್ನು ಹೊಂದುವನು," ಎನ್ನುವ್ - ಎಂಬುದಾಗಿಯೂ, ಈ ಅಭಿಪ್ರಾಯವನ್ನೇ ವ್ಯಾಸಮಹರ್ಷಿಯು ಭಾರತ ಅಶ್ವಮೇಧ ಪರ್ವದಲ್ಲಿ,

"ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ಸ್ಮೃತಾಃ ।
ಸರ್ವವರ್ಣೇಷು ತೇ ಶೂದ್ರಾಯೇ ಹ್ಯಭಕ್ತಾ ಜನಾರ್ದನೇ"

ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ; ಭಗವದ್ಭಕ್ತನಾದ ಶೂದ್ರನು ಶೂದ್ರನಲ್ಲವು, ಆತನು ವಿಪ್ರನಿಗೆ ಸಮಾನನು, ಅಂಥಾವನು ಭಾಗವತನೆಂದು ಸ್ಮೃತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಜನಾರ್ದನನಲ್ಲಿ ಯಾರು ಅಭಕ್ತರೋ, ಭಕ್ತರಲ್ಲವೋ ಅವರು ಸಮಸ್ತ ವರ್ಣಗಳಲ್ಲೂ ಶೂದ್ರನಿಗೆ ಸಮಾನರು, ಬ್ರಾಹ್ಮಣ ಕ್ಷತ್ರಿಯಾದಿ ಜಾತಿಗೆ ಸೇರಿದವರಾದರೂ ಅವರು ಶೂದ್ರರೇ ಸರಿ ಎಂಬ ಭಾವವು; (೪) **ತಸ್ಮಾತ್** - ಹೀಗೆ ನಿಕೃಷ್ಟ ಜಾತೀಯರನ್ನು ಜಾತಿಸಾಮಾನ್ಯಭಾವದಿಂದ ನೋಡಿದರೆ ಪ್ರತ್ಯವಾಯ ಉಂಟಾಗುವದರಿಂದ, **ವಿಷ್ಣುಪ್ರಸಾದಾಯ** - ವಿಷ್ಣುವು ಪ್ರಸನ್ನನಾಗುವದಕ್ಕಾಗಿ, **ವೈಷ್ಣವಾ£** - ಸಮಸ್ತ ಜಾತೀಯ ವಿಷ್ಣುಭಕ್ತರನ್ನು, **ಪರಿತೋಷಯೇತ್** - ಸಂತೋಷಪಡಿಸತಕ್ಕದ್ದು, **ತೇನೈವ** - ಆ ಭಾಗವತರು ಸಂತುಷ್ಟತೆಯನ್ನು ಹೊಂದುವದರಿಂದಲೇನೇ, **ವಿಷ್ಣುಃ** - ಶ್ರೀ ಮಹಾವಿಷ್ಣುವು **ಪ್ರಸಾದ ಸುಮುಖಃ** – ಅನುಗ್ರಹಕ್ಕೆ ಸುಮುಖನಾದವನಾಗಿ, **ಸ್ಯಾತ್** - ಆಗುವನು, **ನಸಂಶಯಃ** - ಈ ವಿಷಯದಲ್ಲಿ ಸಂದೇಹವಿಲ್ಲವು. ಕೀಳುಜಾತಿಯವನನ್ನು ಜಾತಿಸಾಮಾನ್ಯದಿಂದ ನೋಡಬಾರದೆಂದು ಹೇಳಿ, ಈ ಮೇಲಿನ

(೩) ಇತಿಹಾಸ ಸಮುಚ್ಚಯಂ ೨೭-೨೬ (೪) ಇತಿಹಾಸ ಸಮುಚ್ಚಯಂ ೨೭-೨೭

ಸಂಶಯಃ" ಎನ್ರುಮ್ (೫) "ಪಯಿಲುಮ್ ಶುಡರಳಿ" (೬) "ನೆಡು ಮಾರ್ಕಡಿಮೈ" ಗಳಿಲುಮ್ ವಿಶೇಷಿತ್ತ ಪಡಿಯೇ ಪ್ರತಿಪತ್ತಿಯಿಲ್ ಕುರೈ ಯುತ್ತಿರುಕ್ಕವುಮ್ ;

ಶ್ಲೋಕದಿಂದ ಆತನನ್ನು ಬಹುಮಾನಿಸಿ ಸಂತೋಷಪಡಿಸತಕ್ಕದ್ದೆಂದೂ. ಹಾಗೆ ಸಂತೋಷಪಡಿಸುವದರಿಂದ ಸುಪ್ರೀತನಾದ ವಿಷ್ಣುವು ನಮ್ಮನ್ನನುಗ್ರಹಿಸುವ ನೆಂಬುವದರಲ್ಲಿ ಈಷದಪಿ ಸಂದೇಹವಿಲ್ಲವೆಂದೂ ಹೇಳಲ್ಪಟ್ಟಿತು. ಇನ್ನು ಮುಂದೆ ಆಳ್ವಾರ್ ಪಾಶುರಗಳನು ಉದಾಹರಿಸುತ್ತಾರೆ:—"ಪಯಿಲುಮ್ ಶುಡರಳಿ" ಎಂದು ಪ್ರಾರಂಭಿಸಿ ಹೇಳುವ ಹತ್ತು ಪಾಶುರಗಳಲ್ಲೂ. ನೆಡುಮಾರ್ ಕಡಿಮೈ ಗಳಿಲುಮ್ - ಎಂದು ಪ್ರಾರಂಭಿಸಿ ಹೇಳುವ ಹತ್ತು ಪಾಶುರಗಳಲ್ಲೂ, ವಿಶೇ ಷಿತ್ತಪಡಿಯೇ-ವಿಶೇಷಿಸಿ ಹೇಳಿರುವ ಹಾಗೆ, ಕುಲನಾಥನೆಂದೂ, ಸ್ವಾಮಿಯೆಂದೂ, ಭೋಗ್ಯನೆಂದೂ ಎಂಬಿವೇ ಮೊದಲಾದ ಅಲ್ಲಿ ಹೇಳಲ್ಪಟ್ಟ ಆಕಾರಗಳಿಂದ ಎಂಬ ಭಾವವು, ಪ್ರತಿಪತ್ತಿಯಿಲ್ - ದೃಢವಾದ ಭಕ್ತಿಯಲ್ಲಿ, ಕುರೈಯುತ್ತಿರು ಕ್ಕವುಮ್ - ನ್ಯೂನತೆಯಿಲ್ಲದಿರೋಣವೂ ; ಪ್ರಾಪ್ತಮ್ - ಉಚಿತವು. ಇದ ರಿಂದ ನಿಕೃಷ್ಟಜಾತಿಯ ಭಾಗವತರನ್ನು ಹೇಗೆ ಭಾವಿಸತಕ್ಕದ್ದೆಂಬುವದು ಉಪ ದೇಶಿಸಲ್ಪಟ್ಟಿತು. ತನಗಿಂತಲೂ ನಿಕೃಷ್ಟಜಾತಿಯವರಾದ ಭಾಗವತರುಗಳನ್ನು ತುಚ್ಛವಾಗಿ ಕಾಣಕೂಡದು. ಹಾಗೆ ಕಂಡರೆ ಪ್ರತ್ಯವಾಯ ಉಂಟೆಂದು ಪ್ರಮಾಣಸಹಿತವಾಗಿ ತಿಳಿಸಿದರು. ಅವರು ಶೂದ್ರರಾದುದರಿಂದ ಅವರಲ್ಲಿ ಭಕ್ತಿ ಯನ್ನು ಕಮ್ಮಿ ಮಾಡಕೂಡದು ಎಂದು ಹೇಳಲ್ಪಟ್ಟಿತು. ಮಾನಸಿಕ ಭಕ್ತಿ ವಿಶ್ವಾಸಗಳಿರಬೇಕೆಂಬುವದಕ್ಕೆ ನಮ್ಮಾಳ್ವಾರವರ ಪಾಶುರಗಳನ್ನು ಉದಾಹರಿಸಿ, ಅದರಿಂದ ಇತರ ಆಳ್ವಾರುಗಳೂ ಕೂಡ ಅದೇ ಅಭಿಪ್ರಾಯವುಳ್ಳವರೆಂದು ಸೂಚಿ ಸಿರುತ್ತಾರೆ:—"ಪಯಿಲುಮ್ ಶೊಡರಳಿ" ಎಂಬ ಹತ್ತು ಪಾಶುರಗಳಲ್ಲಿ ಭಾಗವತ ಶೇಷತ್ವದ ಮಹಿಮೆಯು ಹೇಳಲ್ಪಟ್ಟಿರುತ್ತದೆ. ಮೊದಲನೆಯ ಪಾಶುರ ದಲ್ಲಿ ಆ ಭಾಗವತರುಗಳು "ಅವರೇಲುಮವರ್ ಕಂಡೀರ್.....ಎಮ್ಮೈ ಆಳು ಮ್ ಪರಮರೇ" ಎಂದು ಹೇಳಿರುವದರಿಂದ, ಜಾತಿ ವೃತ್ತಗಳಿಂದ ಎಷ್ಟು ನಿಕೃಷ್ಟರಾದರೂ ನಮ್ಮನ್ನಾಳುವ ಶೇಷಿಗಳೆಂದೂ, ಎರಡನೆಯ ಪಾಶುರದಲ್ಲಿ ಅವರು ನಮಗೆ "ನಾಥರೇ" ವೆಂದೂ, ಮೂರನೆಯ ಪಾಶುರದಲ್ಲಿ ಎಮ್ಮೈಯಾಳು ಡೈಯಾರ್‌ಗಳೇ ನಮ್ಮನ್ನು ದಾಸರಾಗಿ ಹೊಂದಿರುವರೆಂದೂ, ನಾಲ್ಕನೆಯ ಪಾಶುರದಲ್ಲಿ ಅವರು ತಮಗೆ ಶೇಷಿಗಳೆಂದೂ, ಐದನೆಯದರಲ್ಲಿ ನಮ್ಮೈ ಆಳಿ ಕ್ಕುಂನ್ ಪಿರಾಕ್ಕಳ್, ನಮ್ಮನ್ನು ಉಜ್ಜೀವಿಸುವ ಹಾಗೆ ಮಾಡುವ ಉಪಕಾರಿ ಗಳೆಂದೂ, ಆರನೇಯದರಲ್ಲಿ ಜನ್ಮಜನ್ಮಾಂತರಗಳನ್ನೆತ್ತುವ ಹಾಗೆ ಮಾಡುವ

ರೆಂದೂ ಏಳನೇಯದರಲ್ಲಿ ನನ್ಮೈ ಪೆರುತು, ಎನ್ಮೈ ನಾಳುಯ್ಯಕ್ಕೊಳ್‌ಕಿನ್ರ ನವ್ಪರೇ ಭಾಗವತ ಶೇಷತ್ವ ಪರ್ಯನ್ತವಾದ ಭಗವಚ್ಛೇಷತ್ವ ಸಂಪತ್ತನ್ನುಂಟು ಮಾಡಿ ನನ್ನನ್ನು ಭಗವಂತನ ಪಾದಕಮಲದಲ್ಲಿ ಕೈಙ್ಕರ್ಯವನ್ನು ನಿರಂತರ ಮಾಡುವ ಹಾಗೆ ಕೃಪೆಗೈದ ವಿಶ್ವಸನೀಯರೆಂದೂ, ಎಂಟನೆಯದರಲ್ಲಿ ಅಂತಹ ಭಾಗವತರು ಎಷ್ಟು ನಿಕೃಷ್ಟರಾಗಿದ್ದರೂ ಅವರುಗಳ ಕುಲವು ನಮ್ಮ ಕುಲಗಳಿಗೆ ಆಚಾರ್ಯ ಸಂತಾನವೆಂದೂ, ಒಂಭತ್ತರಲ್ಲಿ "ಆಳೆನ್ರು ಉಳ್ ಕಲನ್ದಾರ್ ಅಡಿಯಾರ್ ತನ್ನಡಿ ಯಾರೆನ್ನಡಿಗಳೇ" ತಾವು ಶೇಷಭೂತರೆಂದು ತಿಳಿದು ಅನನ್ಯ ಪ್ರಯೋಜನರಾಗಿ ಸೇರಿರುವ ದಾಸರಿಗೆ ಶೇಷಭೂತರಾದವರು ನಮಗೆ ಸ್ವಾಮಿಗಳೆಂದೂ, ಹತ್ತನೆಯ ಪಾಶುರದಲ್ಲಿ ಶ್ರಿಯಃಪತಿಗೆ ಶೇಷಭೂತರಿಗೆ ಶೇಷರೆಂದು ಭಾವಿಸುವ ಪಾರಂಪರ್ಯದಲ್ಲಿರುವವರಿಗೆ ತಾವು ಶೇಷಭೂತರೆಂದೂ ಶ್ರೀ ನಮ್ಮಾಳ್ವಾರ್‌ರವರು ಹೇಳಿಕೊಂಡಿರುತ್ತಾರೆ.

ಹಾಗೆಯೇ "ನೆಡುಮಾಲ್‌ಕ್ಕಡಿಮೈ" ಎಂಬ (ತಿರು ೮. ೧೦) ಹತ್ತು ಪಾಶುರಗಳಲ್ಲಿಯೂ ವೈಷ್ಣವ ಭಾಗವತ ಶೇಷತ್ವವು ಕೊಂಡಾಡಲ್ಪಟ್ಟಿರುತ್ತದೆ. (ನೆಯ ಪುಟ ನೋಡಿ) ಇಲ್ಲೆಲ್ಲಾ ವೈಷ್ಣವ ಭಾಗವತನೆಂದು ಮಾತ್ರ ಹೇಳಿರುವದರಿಂದ ಬ್ರಾಹ್ಮಣನಾಗಿಯೇ ಇರಬೇಕೆಂದು ಹೇಳಲಿಲ್ಲವು; ಯಾವ ಜಾತಿಯ ಭಾಗವತನಾದರೂ ಪೂಜನೀಯನೆಂದು ಹೇಳಲ್ಪಟ್ಟಿತು. ಅಂತವರ ಶ್ರೀ ಪಾದವನ್ನು ಬಿಟ್ಟು ಮೂರು ಲೋಕವೂ ತನಗೆ ಬೇಕಿಲ್ಲವೆಂದೂ, ಅದರ ಮುಂದೆ ಐಶ್ವರ್ಯ ಕೈವಲ್ಯ ಸುಖಗಳೂ ತಮಗೆ ಬೇಕಿಲ್ಲವೆಂದೂ, ಅದು ಇಲ್ಲೇ ಉಂಟಾಗುವ ಸಂದರ್ಭದಲ್ಲಿ ಬೇರೆ ವೈಕುಂಠಯಾತ್ರೆ ತಾನೇ ಏಕೆಯೆಂದೂ, ದಿವ್ಯ ತಿರುವಾಯ್‌ಮೊಳಿಯನ್ನಭ್ಯಸಿಸುವ ಮಹಾಭಾಗವತರೊಂದಿಗೆ ಸುಖಾನುಭವಕ್ಕೆ ಶ್ರೀ ವೈಕುಂಠದಲ್ಲಿ ನಿತ್ಯಾನುಭವವು ಸಮವಾಗಲಾರದೆಂದೂ, ಅವರೊಂದಿಗೆ ಸೇರಿ ಅವರ ಪ್ರಸನ್ನತೆಯನ್ನು ಹೊಂದುವದೇ ತಮಗೆ ಸರ್ವವೂ ಎಂದೂ ಹೇಳಿ ಕೊನೆಗೆ "ಕೋದಿಲಡಿಯಾರ್ ತಮ್‌ತಮರ್‌ಗಳ್ ತಮರ್‌ಗಳ್‌ತಮರ್‌ಗಳಾಮ್ ಶದಿರೇವಾಯ್‌ಕ್ಕ ತಮಿಯೇರ್ಕ್ಕೇ" ಅನನ್ಯ ಪ್ರಯೋಜನರಾದ ಭಾಗವತರುಗಳ ದಾಸರಿಗೆ ದಾಸರಾಗಿರುವ ದಾಸ್ಯಭಾವವೆಂಬ ಪುರುಷಾರ್ಥವನ್ನು ತಾವು ಹೊಂದಬೇಕೆಂದು ಶ್ರೀ ನಮ್ಮಾಳ್ವಾರ್‌ರವರು ಪ್ರಾರ್ಥಿಸಿರುತ್ತಾರೆ.

ಹಿಂದೆ ಶೂದ್ರಾದಿ ಭಾಗವತರ ವಿಷಯದಲ್ಲೂ "ಪ್ರತಿಪತ್ತಿಯಿಲ್ ಕುರೈಯತ್ತಿರುಕ್ಕುವುಮ್" ಎಂದು ಹೇಳಿದನಂತರ, ಅಂತಹ ಭಾಗವತರ ಶೇಷತ್ವೆ ಕಾರ್ಯಭೂತವಾದ ಪ್ರಣಾಮಾದಿ ಕೈಙ್ಕರ್ಯ ಪರ್ಯನ್ತವಾದರಲ್ಲವೇ ಭಕ್ತಿಯಲ್ಲಿ ಕಮ್ಮಿಯಾಗಲಿಲ್ಲವೆಂದು ಹೇಳಬಹುದು. ಹಾಗೆ ಪ್ರಣಾಮಾದಿ ಕೈಙ್ಕರ್ಯ

(೩) ಇಪ್ರತಿಪತ್ತಿ ಮಾತ್ರತ್ತಾಲುಮ್ "ತಸ್ಯೇದ ಮಿತಿ ಧೀಹೇತು ರಪ್ಯುಪಕಾರೀ" ಎಙ್ಗರಪಡಿಯೇ ಪರಿಪೂರ್ಣ ವಿಷಯತ್ತಿಲ್ ಶೇಷತ್ವೋಚಿತ ಕಿಂಚಿತ್ಕಾರಮಾನ ಕೈಙ್ಕರ್ಯಮ್ ಸಿದ್ಧಮೆನ್ರಿರುಕ್ಕೈವುಮ್,

---

ಗಳನ್ನು ಅಂತಹ ಶೂದ್ರಾದಿ ಭಾಗವತರುಗಳಿಗೆ ಎಸಗಬಹುದೋ ಎಂದರೆ ಅದಕ್ಕೆ ಮುಂದಿನ ವಾಕ್ಯವಾದ **"ಇಪ್ರತಿಪತ್ತಿ ಮಾತ್ರತ್ತಾಲುಮ್"** ಎಂಬುವದರಿಂದ ಸಮಾಧಾನವನ್ನು ಹೇಳುತ್ತಾರೆ :— **ಇಪ್ರತಿಪತ್ತಿ ಮಾತ್ರತ್ತಾಲುಮ್** - ಈ ವಿಶ್ವಾಸ ಮಾತ್ರದಿಂದಲೂ ಕೂಡ ಎಂದರೆ, ಈ ನಿಕೃಷ್ಟವರ್ಣದ ಭಾಗವತನಿಗೆ ನಾನು ದಾಸಭೂತನು ಎಂಬ ಇಷ್ಟುಮಾತ್ರ ಮಾನಸಿಕ ಪ್ರತಿಪತ್ತಿಯಿಂದಲೂ ಎಂಬರ್ಥವು, ಇಲ್ಲಿ ಮಾತ್ರ ಶಬ್ದವನ್ನುಪಯೋಗಿಸಿರುವದರಿಂದ ಕಾಯಿಕ ಪ್ರಣಾಮಾದಿಗಳು ಯುಕ್ತವಲ್ಲವೆಂಬುವದು ವ್ಯಕ್ತವು; **"ತಸ್ಯೇದಂ** - ಇದೂ ಕೂಡ ಆ ಭಗವಂತನಿಗೇ ಶೇಷಭೂತವಾದುದಾಗಿ ಅದರಿಂದ ಆತನಿಗೆ ಪ್ರೀತಿಕರವಾದ ವ್ಯಾಪಾರ ಉಳ್ಳದ್ದು, **ಇತಿ** - ಎಂಬ, **ಧೀಹೇತುರಪಿ** - ಬುದ್ಧಿಗೆ ಕಾರಣವಾಗಿರುವದೂ ಕೂಡ, **ಉಪಕಾರೀ** - ಉಪಕಾರಕವು ಎಂದರೆ ಶಾಸ್ತ್ರಮೂಲಕ ಸರ್ವವೂ ಸರ್ವೇಶ್ವರನಿಗೆ ಶೇಷಭೂತವು ಎಂಬ ಅಭಿಸಂಧಿಯಿಂದ ಈ ಭಾಗವತರುಗಳಿಗೂ ಕೂಡ ನಾವು ಶೇಷಭೂತರೆಂಬನುಸಂಧಾನವು ಭಗವತ್ಪ್ರೀತಿಕರವಾಗುತ್ತದೆಂಬ ಭಾವವು" **ಎಙ್ಗರಪಡಿಯೇ** - ಎಂದು ಹೇಳಿರುವ ಹಾಗೆ, **ಪರಿಪೂರ್ಣ ವಿಷಯತ್ತಿಲ್** - ಪರಿಪೂರ್ಣನಾದ ಭಗವಂತನ ವಿಷಯದಲ್ಲಿ, **ಶೇಷತ್ವೋಚಿತ** - ತಾನು ಶೇಷನಾಗಿರುವದಕ್ಕೆ ಯೋಗ್ಯವಾದ, **ಕಿಂಚಿತ್ಕಾರಮಾನ ಕೈಙ್ಕರ್ಯಮ್**-ದಾಸನಾಗಿ ಮಾಡುವ ಕೈಙ್ಕರ್ಯವು, **ಸಿದ್ಧಮೆನ್ರಿರುಕ್ಕೈವುಮ್**-ಉಂಟಾಯಿತೆಂದು ಭಾವಿಸುವದೂ ಕೂಡ, **ಪ್ರಾಪ್ತಮ್**-ಉಚಿತವು ಎಂದು ಇಟ್ಟುಕೊಳ್ಳತಕ್ಕದ್ದು, ಎಂದರೆ ಇವರುಗಳಿಗೆ ತಾನು ಶೇಷಭೂತನೆಂಬ ಬುದ್ಧಿಗೆ ವಿಷಯವಾದುದೂ ಕೂಡ ಅಂತಹ ಬುದ್ಧಿಯನ್ನುಂಟುಮಾಡುವದರಿಂದ ಕಿಂಚಿತ್ಕಾರವು ಸಿದ್ಧಿಸಿದ ಹಾಗೆ ಭಾವನೆ ಎಂಬ ತಾತ್ಪರ್ಯವು. ಭಾಗವತರ ಶೇಷತ್ವವು ಭಗವಚ್ಛೇಷತ್ವದ ಕಾರ್ಯವಾದುದರಿಂದ, ಶಾಸ್ತ್ರವಿರೋಧವಿಲ್ಲದಿರುವ ಸಂದರ್ಭದಲ್ಲಿ ಪರಮ ಶೇಷಿಗೆ ಪ್ರೀಣನ ರೂಪವಾದ ಪ್ರಣಾಮಾದಿ ಪರ್ಯಂತವಾಗಿ ಕೈಙ್ಕರ್ಯ ರೂಪವಾಗಿರತಕ್ಕದ್ದು. ಆದರೆ ಶಾಸ್ತ್ರವಿರೋಧವುಳ್ಳ ಸಂದರ್ಭದಲ್ಲಿ, ಇತರ ವರ್ಣದ ಭಾಗವತರ ವಿಷಯದಲ್ಲಿ, ಪ್ರಣಾಮಾದಿ ಪರ್ಯಂತ ಕೈಙ್ಕರ್ಯವು ಪರಮಶೇಷಿಗೆ ಅನಭಿಮತವಾದುದರಿಂದ, ಇವರೂ ಆವನಿಗೆ ಶೇಷಭೂತರೆಂಬ ಅನುಸಂಧಾನ ಮಾತ್ರದಿಂದಲೇ ಅಂತಹ ಕೈಙ್ಕರ್ಯವು ಸಿದ್ಧಿಸಿತು ಎಂದು ಭಾವಿಸತಕ್ಕದ್ದೆಂಬ

ಭಾಗವತಾಪಚಾರಸ್ಯ ತದ್ಭಾಗವತ ಪ್ರಸಾದನಮೇವ ಪ್ರಾಯಶ್ಚಿತ್ತಮ್

(೪) ಇನ್ನಿ(ಲಜ್ಞಳಿಲೇ) ಲೈಗಳಿಲೊನ್ರು ಕೋಣಿನಪೋದು,
(೧) "ಸರ್ವಂ ಜಿಹ್ಮಂ ಮೃತ್ಯುಪದ ಮಾರ್ಜವಂ ಬ್ರಹ್ಮಣಃ ಪದಮ್"

ಭಾವವು. ಅವರೂ ಭಾಗವತರುಗಳೇ ಎಂದು ಅವರಿಗೆ ಸಾಕ್ಷಾತ್ಪ್ರಣಾಮಾದಿಗಳು ಶಾಸ್ತ್ರನಿಷಿದ್ಧವೆಂಬುದು ಇದರಿಂದ ಏರ್ಪಟ್ಟಿತು.

ಹೀಗೆ ಉತ್ಕೃಷ್ಟಜಾತಿಯ ಭಾಗವತರುಗಳ ವಿಷಯದಲ್ಲೂ ನಿಕೃಷ್ಟಜಾತಿಯ ಭಾಗವತರುಗಳ ವಿಷಯದಲ್ಲೂ ಪ್ರಪನ್ನನು ನಡೆದುಕೊಳ್ಳಬೇಕಾದ ಪ್ರಕಾರವು ಹಿಂದೆ ಉಪದೇಶಿಸಲ್ಪಟ್ಟಿತು. ಹೀಗೆ ನಡೆದುಕೊಳ್ಳುವದಕ್ಕೆ ಬದಲಾಗಿ ಏನಾದರೂ ವಿಪರೀತಾಚರಣೆ ಪ್ರಾಪ್ತವಾಗಿ ಅಪರಾಧ ಪ್ರಾಪ್ತವಾದರೆ, ಅದು ಅಪರಾಧಗಳಲ್ಲಿ ಗುರುತರವಾದುದರಿಂದ ಅಂತಹ ಸಂದರ್ಭದಲ್ಲಿ ಅದಕ್ಕಾಗಿ ನಡುಗಿ ಅಂತಹ ಭಾಗವತಾಪಚಾರಕ್ಕಾಗಿ ಆ ಮಹಾಭಾಗವತನ ಕ್ಷಮಾಪಣೆಯನ್ನು ಪ್ರಾರ್ಥಿಸಿ, ಅಂತಹ ಅಪಚಾರವು ತನಗೆ ಸ್ವರೂಪಹಾನಿಯಾದುದರಿಂದ, ಅದನ್ನು ಪ್ರಕಟಿಸದೆ ಮೌನದಿಂದಿರತಕ್ಕದ್ದೆಂದು ಮುಂದೆ ಉಪದೇಶಿಸುತ್ತಾರೆ :—

ಭಾಗವತಾಪಚಾರಕ್ಕೆ ಆ ಭಾಗವತರ ಪ್ರಸಾದನವೇ ಪ್ರಾಯಶ್ಚಿತ್ತವು.

ಇನ್ನಿಲೈಗಳಿಲ್ - ಈ ಮೇಲೆ ಹೇಳಿದ ರೀತಿಯಲ್ಲಿ ನಡೆಯಬೇಕಾದ ಪ್ರಕಾರಗಳಲ್ಲಿ, ಒನ್ರು ಕೋಣಿನ ಪೋದು - ಯಾವುದಾದರೂ ಒಂದು ವಕ್ರವಾದಾಗ ಎಂದರೆ ವಿಪರೀತಾಚರಣೆಯು ಪ್ರಾಪ್ತವಾದರೆ ಎಂಬರ್ಥವು ; ಭಗವತ್ಸಙ್ಕಲ್ಪಸಿದ್ಧವಾದ ಜಾತ್ಯಾದ್ಯುಪಾಧಿಯಿಂದುಂಟಾದ ಭಾಗವತೋತ್ಕರ್ಷಾಪಕರ್ಷಗಳನ್ನು ತಿರಸ್ಕರಿಸಿಯಾಗಲಿ, ನಿಕೃಷ್ಟಜಾತಿ ಭಾಗವತರಲ್ಲಿ ಪ್ರತಿಪತ್ತಿ ಕಮ್ಮಿಯಾದರಾಗಲಿ ಹೀಗೆ ಭಾಗವತಾಪಚಾರ ಪ್ರಾಪ್ತವಾದರೆ, "ಸರ್ವಂಜಿಹ್ಮಂ - ವಕ್ರವಾದ ಸಮಸ್ತವೂ, ಮೃತ್ಯುಪದಂ-ಸಂಸಾರಕ್ಕೆ ಆಸ್ಪದವಾದುದು ; ಆರ್ಜವಂ - ವಕ್ರವಲ್ಲದ್ದೆಲ್ಲವೂ, ಬ್ರಹ್ಮಣಃಪದಂ - ಪರಬ್ರಹ್ಮನ ಸ್ಥಾನವಾದುದು." ಇದು ಭೀಷ್ಮರು ಯುಧಿಷ್ಠಿರಾದಿಗಳಿಗೆ ಮಾಡುವ ಉಪದೇಶವು, ಯಜ್ಞಕ್ಕಿಂತಲೂ ಶ್ರೇಷ್ಠವಾದುದು ತಪಸ್ಸು, ಆದುದರಿಂದ ಶಾಸ್ತ್ರಮರ್ಯಾದೆಯನ್ನು ಮೀರದೆ ನಡಿಯತಕ್ಕದ್ದೇ ತಪಸ್ಸೆಂದು ಹೇಳಿ, ಹಾಗೆ ವಕ್ರತೆಯಿಲ್ಲದೆ ನಡಿಯು

---

(೧) ಭಾರ. ಶಾಂತಿ ೭೯.೨೧.

ಎಜ್ಙ್ಗರೆ ಪಡಿಯೇ ಮೃತ್ಯುರ್ವಿ ಕಡೈವಾಯಿಲೇ ಯಗಪ್ಪಟ್ಟಾರ್ ಪೋಲೆ ನಡುಙ್ಗ, (೨) "ಕೃತಾಪರಾಧಸ್ಯ ಹಿ ತೇ ನಾನ್ಯತ್ಪಶ್ಯಾಮ್ಯಹಂ ಕ್ಷಮಮ್। ಅಂತರೇಣಾಂಜಲಿಂ ಬದ್ಧ್ವಾ ಲಕ್ಷ್ಮಣಸ್ಯ ಪ್ರಸಾದನಾತ್" ಎನ್ರುಮ್,

---

ವದೇ ಪರಬ್ರಹ್ಮಪದಕ್ಕೆ ಸೋಪಾನವೆಂದೂ, ಶಾಸ್ತ್ರಮರ್ಯಾದೆಯನ್ನು ಮೀರಿ ವಕ್ರವಾಗಿ ನಡಿಯುವದೇ ಸಂಸಾರಕ್ಕೆ ಬೀಜವೆಂದೂ, "ಏತಾವಾಞ್ ಜ್ಞಾನವಿಷಯಃ ಕಿಂ ಪ್ರಲಾಪಃ ಕರಿಷ್ಯತಿ" (ಉತ್ತರಾರ್ಧವು) ಇದೇ ಮುಖ್ಯವಾಗಿ ತಿಳಿಯತಕ್ಕ ವಿಷಯವೆಂದುಪದೇಶಿಸಿರುತ್ತಾರೆ, ಎಜ್ಙ್ಗರ ಪಡಿಯೇ-ಎಂದು ಹೇಳಿರುವ ಹಾಗೆ, ಮೃತ್ಯುರ್ವಿ-ಯಮನ, ಕಡೈವಾಯಿಲೇ-ಕೋರೆಹಲ್ಲುಗಳ ಮಧ್ಯೆ ಬಾಯಿಯಲ್ಲಿ, ಅಗಪಟ್ಟಾರ್ ಪೋಲೆನಡುಙ್ಗ – ಸಿಕ್ಕಿದವರ ಹಾಗೆ ಭಯದಿಂದ ನಡುಗಿ, ಪ್ರಪನ್ನನಾದುದರಿಂದ ಯಮನ ವಶಕ್ಕೆ ಸಿಕ್ಕುವದು ಇಲ್ಲವೇ ಇಲ್ಲವು, ಅಗಪಟ್ಟಾರ್ ಪೋಲೆ ಎಂದು ಹೇಳಿರುವದರಿಂದ ಭಾಗವತಾಪಚಾರವು ಅಪಚಾರಗಳಲ್ಲೆಲ್ಲಾ ಪ್ರಧಾನವಾದುದರಿಂದ ಅದಕ್ಕೆ ಯಮನ ಬಾಯಿಗೆ ತುತ್ತಾದರೆ ಎಷ್ಟು ಭಯಪಡಬೇಕೋ ಹಾಗೆಭಯಪಡಬೇಕು ಎಂಬುವದಕ್ಕೆ ಪ್ರಮಾಣವನ್ನು ಉದಾಹರಿಸಿದರು. ಹಾಗೆಯೇ ರಹೋಗಣನೆಂಬ ಸೌವೀರ ರಾಜನು ಅದಿಭರತರಾದ ಪರಮ ಭಾಗವತೋತ್ತಮರನ್ನು ತನ್ನ ಮೇನಾವನ್ನು ಹೊರಲು ಅಜ್ಞಾಪಿಸಿದರೇ ? ಈ ಭಾಗವತಾಪಚಾರವು ತನಗೆ ಪ್ರಾಪ್ತವಾಯಿತೇ ? ಎಂದು ಭಯದಿಂದ ನಡುಗಿ ಹೇಳುತ್ತಾನೆ :—ನಾಹಂ ವಿಶಙ್ಕೇ ಸುರರಾಜವಜ್ರಾನ್ನ ತ್ರ್ಯಕ್ಷ ಶೂಲಾನ್ನ ಯಮಸ್ಯ ದಂಡಾತ್ । ನಾಗ್ನ್ಯರ್ಕಸೋಮಾನಿಲವಿತ್ತಪಾಸ್ತ್ರಾ ಚ್ಛಂಕೇ ಭೃಶಂ ಬ್ರಹ್ಮಕುಲಾವಮಾನಾತ್ ॥ "ಇಂದ್ರನ ವಜ್ರಾಯುಧಕ್ಕಾಗಲಿ, ರುದ್ರನ ಶೂಲಕ್ಕಾಗಲಿ, ಯಮನ ದಂಡಕ್ಕಾಗಲಿ, ಅಗ್ನಿ ಸೂರ್ಯ ಚಂದ್ರ ವಾಯು ಕುಬೇರರುಗಳ ಅಸ್ತ್ರಕ್ಕಾಗಲಿ ನಾನು ಅಂಜುವದಿಲ್ಲವು, ಆದರೆ ಪರಬ್ರಹ್ಮವಿದಪಚಾರಕ್ಕೆ ಮಾತ್ರನಡುಗುವೆನು ಎಂದು ಹೇಳಿರುತ್ತಾನೆ". ಹಾಗೆ ಅಪರಾಧವು ಒಂದು ವೇಳೆ ಪ್ರಾಪ್ತವಾದರೆ ಆ ಭಾಗವತಕ್ಷಾಮಣೆಯೇ ಆಗ ಆವಶ್ಯಕವೆನ್ನುವದಕ್ಕೆ ರಾಮಾಯಣದಿಂದ ಉದಾಹರಿಸುತ್ತಾರೆ :—ಮೊದಲು ಭಗವದಪಚಾರಕ್ಕೂ ಕೂಡ ಆ ಭಗವಂತನಿಗೆ ತುಂಬಾ ಪ್ರಿಯರಾದವರ ಪ್ರಸಾದನವೇ ಪ್ರಾಯಶ್ಚಿತ್ತವೆಂದು ತಿಳಿಸುತ್ತಾರೆ :—"ಕೃತಾಪರಾಧಸ್ಯ – ಮಾಡಲ್ಪಟ್ಟ ಅಪರಾಧವುಳ್ಳ, ತೇ - ನಿನಗೆ, ಇದು ಸಚಿವಶ್ರೇಷ್ಠ

---

(೨) ರಾ. ಕಿಷ್ಕಿಂಧಾ ೩೨ ೧೭

(೩) "ಯದಿ ಕಿಂಚಿದತಿಕ್ರಾಂತಂ ವಿಶ್ವಾಸಾತ್ಪ್ರಣಯೇನವಾ । ಪ್ರೇಷ್ಯಸ್ಯ ಕ್ಷಮಿತವ್ಯಂ ಮೇ ನಕಶ್ಚಿನ್ನಾಪರಾಧ್ಯತಿ" ಎನ್ರುವ್ (೪) "ಯಚ್ಚ

ನಾವ ಆಂಜನೇಯನು ಸುಗ್ರೀವನಿಗೆ ಮಾಡುವ ಹಿತೋಪದೇಶವು; ಇನ್ನೂ ಅಪರಾಧಾರಂಭಕಾಲವಾಗಿ ಅನುತಾಪವಾದರೂ ಇದ್ದುದಾದರೆ ಲಘುಪ್ರಾಯಶ್ಚಿತ್ತದಿಂದಲಾಗಲಿ ಪರಿಹಾರ ಉಂಟು, ಹಾಗಲ್ಲದೆ ಓ ಸುಗ್ರೀವನೇ ನೀನು ಕೃತಾಪರಾಧನು, ಆದುದರಿಂದ ಪ್ರಬಲ ಪ್ರಾಯಶ್ಚಿತ್ತವೇ ಆವಶ್ಯಕವು; ಅದು ಯಾವುದೆಂದರೆ, **ಅಂಜಲಿಂಬಧ್ವಾ**-ಅಂಜಲಿಯನ್ನು ಮಾಡಿ ಕೈಜೋಡಿಸಿಕೊಂಡು **ಲಕ್ಷ್ಮಣಸ್ಯ ಪ್ರಸಾದನಾತ್** - ಶ್ರೀರಾಮನಿಗೆ ಅಂತರಂಗಭೂತನಾಗಿ ಮಹಾಭಾಗವತನಾದ ಲಕ್ಷ್ಮಣನ ಪ್ರಸನ್ನತೆಯು, **ಅಂತರೇಣ** - ವಿನಾ, **ಅನ್ಯತ್** - ಬೇರೇ ಉಪಾಯವನ್ನು ಅಥವಾ ಪ್ರಾಯಶ್ಚಿತ್ತವನ್ನು, **ಕ್ಷಮಂ** - ಯೋಗ್ಯವಾದುದಾಗಿ, **ಅಹಂ** - ನಾನು, **ನಪಶ್ಯಾಮಿ** - ಕಾಣೆನು. ಪರಮ ಭಾಗವತನಿಗೆ ಮಾಡುವ ಅಂಜಲಿಬಂಧವೇ ನೀನು ಮಾಡಿರುವ ಪ್ರಬಲ ಭಗವದಪರಾಧಕ್ಕೆ ಪ್ರಾಯಶ್ಚಿತ್ತವು. ಆ ಅಂಜಲಿಬಂಧಕ್ಕೆ ಅಷ್ಟು ಮಾಹಾತ್ಮ್ಯವೇ ಎಂದರೆ **ಅಂಜಲಿಃ ಪರಮಾಮುದ್ರಾಕ್ಷಿಪ್ರಂ ದೇವಪ್ರಸಾದಿನೀ,** ಸರ್ವೇಶ್ವರನ ಪ್ರಸಾದನವನ್ನು ಬಹು ಕ್ಷಿಪ್ರವಾಗಿ ಉಂಟುಮಾಡುವ ಶಕ್ತಿಯುಳ್ಳದ್ದೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ಭಗವದಪಚಾರವಲ್ಲೂ ಪರಮ ಭಾಗವತ ಪ್ರಸಾದನವೇ ಪ್ರಾಯಶ್ಚಿತ್ತವೆಂದು ಹೇಳಲ್ಪಟ್ಟಿತು. ಹಾಗೆಯೇ ಪ್ರಮಾಣವಿರುತ್ತದೆ:—

"ಅನುತಪ್ತಸ್ತು ತಾನೇವ ಕ್ಷಾಮಯೇನ್ನಾನ್ಯಥಾ ಶಮಃ ।
ಭಗವತ್ಯಪಚಾರೇಽಪಿ ಸೈಷಾ ಶಾಂತಿರನುತ್ತಮಾ"

ಅಪರಾಧ ಮಾಡಿದವನಿಗೆ ಅನುತಾಪ ಪ್ರಾಪ್ತವಾದರೆ ಭಾಗವತರ ಕ್ಷಾಮಣೆಯನ್ನೇ ಪ್ರಾರ್ಥಿಸತಕ್ಕದ್ದು. ಅದಕ್ಕಿಂತಲೂ ಬೇರೆ ಪ್ರಾಯಶ್ಚಿತ್ತವಿಲ್ಲವು, ಭಗವದಪಚಾರ ಉಂಟಾದರೂ ಅದೇ ಅಸದೃಶವಾದ ಪ್ರಾಯಶ್ಚಿತ್ತವೆಂದು ಹೇಳಲ್ಪಟ್ಟಿರುತ್ತದೆ. ಹೀಗಿರುವಾಗ ಭಾಗವತಾಪಚಾರಕ್ಕೆ ಭಾಗವತ ಪ್ರಸಾದನವೇ ಪ್ರಾಯಶ್ಚಿತ್ತವೆಂದು ಹೇಳತಕ್ಕದ್ದೇನಿದೆ ಎಂಬ ಭಾವವೂ ತೋರಿಬರುತ್ತದೆ", ಎನ್ರುವ್ - ಎಂಬದಾಗಿಯೂ, ಹೀಗೆ ಪ್ರಜ್ಞಾಶಾಲಿಯಾದ ಆಂಜನೇಯನು ಹಿತೋಪದೇಶ ಮಾಡಲು, ಮಹಾರಾಜನಾದ ಸುಗ್ರೀವನು ಮಹಾಭಾಗವತನಾದ ಲಕ್ಷ್ಮಣನನ್ನು ಕ್ಷಮಿಸಬೇಕಾಗಿ ಪ್ರಾರ್ಥಿಸುವನು; "**ಕಿಂಚಿತ್** - ಏನಾದರೂ, **ಅತಿಕ್ರಾಂತಂ**

(೩) ರಾಮಾ. ಕಿಷ್ಕಿಂಧಾ. ೩೬-೧೧ (೪) ರಾಮಾ. ಕಿಷ್ಕಿಂಧಾ ೩೬-೭

ಶೋಕಾಭಿಭೂತಸ್ಯ ಶ್ರುತ್ವಾ ರಾಮಸ್ಯ ಭಾಷಿತಂ । ಮಯಾ ತ್ವಂ ಪರುಷಾ

ಯದಿ - ಅತಿಕ್ರಮಿಸಿ ನಡೆದುದು ಉಂಟಾಗಿದ್ದರೆ, **ಪ್ರೇಷ್ಯಸ್ಯ** - ಭಾಗವತನಾದ ನಿನಗೆ ದಾಸಭೂತನಾದ, **ಮೆ** - ನನಗೆ, ಇದರಿಂದ ಭಾಗವತ ಶೇಷತ್ವವು ಪ್ರದರ್ಶಿಸಲ್ಪಟ್ಟಿತು. **ವಿಶ್ವಾಸಾತ್** - ವಿಶ್ವಾಸದಿಂದಲಾಗಲಿ, **ಪ್ರಣಯೇನವಾ** - ಪ್ರೀತಿಯಿಂದಲಾಗಲಿ, **ತತ್** - ಅಂತಹ ಅತಿಕ್ರಮಣಾಪರಾಧವು **ಕ್ಷಮಿತವ್ಯಂ** - ಕ್ಷಮಿಸತಕ್ಕದ್ದು, **ಕಶ್ಚಿತ್** - ಯಾವನೊಬ್ಬನೂ, **ನಾಪರಾಧ್ಯತಿ** - ಅಪರಾಧ ಮಾಡಿಲ್ಲವೆಂಬುವದು, **ನ** - ಇಲ್ಲವು ಎಂದರೆ ಸರ್ವರೂ ಅಪರಾಧಿಗಳೇ ಎಂಬ ಭಾವವು. ಇದರಿಂದ ಭಗವದ್ವಿಷಯದಲ್ಲಿ ಅಪರಾಧ ಮಾಡಿದವನಿಂದ ಭಾಗವತ ಕ್ಷಮಾಪಣೆಯು ಮಾಡಲ್ಪಟ್ಟಿದುದಾದರೆ, ಅದರಿಂದ ಸುಪ್ರೀತನಾದ ಭಗವಂತನು ಈತನ ಅಪರಾಧವನ್ನು ಕ್ಷಮಿಸುವನಾಗಿ, ಈತನು ತನಗೆ ಮುಂದೆ ಕೈಂಕರ್ಯ ಮಾಡಲು ಯೋಗ್ಯನನ್ನಾಗಿ ಮಾಡುವನೆಂಬ ಶಾಸ್ತ್ರಾರ್ಥವು ಈ ಶ್ಲೋಕದಿಂದ ವ್ಯಕ್ತಮಾಡಲ್ಪಟ್ಟಿತು. ಈ ಮುಂದಿನ ಶ್ಲೋಕದಿಂದ ಭಾಗವತಾಪಚಾರಕ್ಕೆ ಆ ಭಾಗವತನ ಕ್ಷಮಾಪಣೆಯೇ ಪ್ರಾಯಶ್ಚಿತ್ತವೆಂಬುವದು ನಿದರ್ಶಿಸಲ್ಪಡುತ್ತದೆ :— **ಶೋಕಾಭಿಭೂತಸ್ಯ** - ಶೋಕಾಕ್ರಾಂತನಾದ, **ರಾಮಸ್ಯ** - ಶ್ರೀ ರಾಮನ, **ಭಾಷಿತಂ** - ಮಾತನ್ನು, **ಶ್ರುತ್ವಾ** - ಕೇಳಿದವನಾಗಿ, ತಡೆಯದೆ **ಮಯಾ** - ಭ್ರಾತೃ ವ್ಯಸನದಿಂದ ಸಂತಪ್ತನಾದ ನನ್ನಿಂದ, **ಪರುಷಾಣಿ** - ಕ್ರೂರವಾಕ್ಯಗಳು, "ಅನಾರ್ಯಸ್ತ್ವಂ ಕೃತಘ್ನಶ್ಚ ಮಿಥ್ಯಾವಾದೀಚ ವಾನರ" (ರಾಮಾಯಣ. ಕಿಷ್ಕಿಂಧಾ) ಎಂದು ಹೀಗೆಲ್ಲಾ ಹೇಳಿದ ನಿಷ್ಠುರೋಕ್ತಿಗಳು, **ಉಕ್ತ್ವಾ ಇತಿಯತ್** - ಹೇಳಲ್ಪಟ್ಟವೆಂಬುವದು ಯಾವುದುಂಟೋ, **ತಚ್ಚ** - ಅವೆಲ್ಲವನ್ನೂ, **ತ್ವಂ** - ಮಹಾ ಭಾಗವತೋತ್ತಮನಾದ ನೀನು, **ಕ್ಷಂತುಮರ್ಹಸಿ** - ಕ್ಷಮಿಸಲು ಯೋಗ್ಯನಾಗುತ್ತೀಯೇ. ಯಾವಾಗ ಸುಗ್ರೀವನು ತನ್ನಪರಾಧವನ್ನು ಕ್ಷಮಿಸು ಎಂದು ಅಂಜಲಿಬದ್ಧನಾಗಿ ಬೇಡಿದನೋ, ಆಗ ಲಕ್ಷ್ಮಣನು ತಾನು ಅಂತಹ ಪರಮ ಭಾಗವತನನ್ನು ಅನಾರ್ಯನೆಂದೂ, ಕೃತಘ್ನನೆಂದೂ ಮಿಥ್ಯಾವಾದಿ ಎಂದೂ ಹೀಗೆಲ್ಲಾ ನಿಷ್ಠುರೋಕ್ತಿಗಳನ್ನು ಹೇಳಿದುದರಿಂದ ಭಾಗವತಾಪಚಾರವು ತನಗೆ ಸಂಘಟಿತವಾಯಿತೆಂದು ಭಾವಿಸಿ, ಆ ಅಪರಾಧ ಪರಿಹಾರಕ್ಕಾಗಿ ಆತನ ಕ್ಷಮಾಪಣೆಯನ್ನು ಪ್ರಾರ್ಥಿಸಿದನು. ಯದ್ಯಪಿ ರಾಮನೇನೂ ಕ್ರೂರವಾಕ್ಯಗಳನ್ನು ಹೇಳಲಿಲ್ಲವು, "**ಉಚ್ಯಮಾನೋಪಿ ಪರುಷಂ ನೋತ್ತರಂ ಪ್ರತಿಪದ್ಯತೇ**" ಎಂದು ಹೇಳಿರುವ ಹಾಗೆ ಪ್ರಪನ್ನನ ವಿಷಯದಲ್ಲಿ ಕ್ರೂರವಾಕ್ಯಗಳನ್ನು ಪಯೋಗಿಸುವದಿಲ್ಲವು, "**ಮಾವಾಲಿ ಪಥಮನ್ವಗಾಃ**"

ಣ್ಯುಕ್ತಸ್ತಚ್ಚ ತ್ವಂ ಕ್ಷಂತು ಮರ್ಹಸಿ" ಎನ್ರುಮ್, ಮಹಾರಾಜರುಡೈಯವುಮ್, ಇಳೈಯ ಪೆರುಮಾಳುಡೈಯವುಮ್, ಅನ್ಯೋನ್ಯ ಪ್ರಸಾದನ ಪ್ರಕಾರಮ್ ಶೊಲ್ಲುಗಿರ ಶ್ಲೋಕಙ್ಗಳೈ ಪರಾಮರ್ಶಿತ್ತು ಅ(ಇ)ಪ್ಪಡಿಯೇ ಈತ್ತಿನವಾಯ್ ತೆರಿಯಾಮಲ್ ವಜ್ರಲೇಪ ಘಟಿತ ಮಾನಾರ್ಪ್ಪೋಲೆ, ಪ್ಪೊರುನ್ದಿ ಪೋರುವುಮ್, ಪ್ರಾಪ್ತಮ್.

ವಾಲಿಯ ಮಾರ್ಗಕ್ಕೆ ನೀನೂ ಹೋಗಬೇಡವೆಂದೂ ಹಿತೋಪದೇಶಮಾಡಿ ಬಾ ಎಂದೂ, ಇಷ್ಟು ಮಾತ್ರ ಹೇಳಿದರೆ, ರಾಮನು ಶೋಕಸಂತಪ್ತನಾದನಲ್ಲಾ ಎಂಬಾಗ್ರಹದಿಂದ ನಾನೇ ಈ ನಿಷ್ಠುರೋಕ್ತಿಗಳನ್ನಾಡಿದೆನು, ಅವುಗಳನ್ನೆಲ್ಲಾ ಮನ್ನಿಸತಕ್ಕದ್ದೆಂದು ಪ್ರಾರ್ಥಿಸಿದನೆಂಬ ಭಾವವು. ಹೀಗೆ ಭಾಗವತರುಗಳಾದ ಶ್ರೀ ವೈಷ್ಣವರುಗಳ ಸನ್ನಿಧಿಯಲ್ಲಿ ಅಪಚಾರ ಸಂಭವಿಸಿದರೆ ಪಶ್ಚಾತ್ತಾಪದಿಂದ ಅವರುಗಳ ಕ್ಷಮಾಪಣೆಯನ್ನು ಪ್ರಾರ್ಥಿಸಿ ಅವರನ್ನು ಪ್ರಸನ್ನರಾಗಿ ಮಾಡಿಕೊಳ್ಳತಕ್ಕದ್ದು ಮುಖ್ಯ ಕರ್ತವ್ಯವೆಂಬ ಶಾಸ್ತ್ರಾರ್ಥವು ಈ ಶ್ಲೋಕದಿಂದ ಉಪಪಾದಿಸಲ್ಪಟ್ಟಿತು." ಎನ್ರುಮ್ – ಎಂಬದಾಗಿಯೂ, **ಮಹಾರಾಜರುಡೈಯವುಮ್** - ಶ್ರೀ ರಾಮನು ತನಗೆ ರಾಜನಾಗಿ ಭಾವಿಸಿದ ಸುಗ್ರೀವ ಮಹಾರಾಜನ, **ಇಳೈಯ ಪೆರುಮಾಳುಡೈಯುವುಮ್** - ಶ್ರೀ ರಾಮಾನುಜನಾದ ಲಕ್ಷ್ಮಣನ, **ಅನ್ಯೋನ್ಯ ಪ್ರಸಾದನ ಪ್ರಕಾರಮ್** – ಪರಸ್ಪರ ಪ್ರಸನ್ನರಾಗಿ ಮಾಡಿಕೊಂಡ ರೀತಿಯನ್ನು, **ಶೊಲ್ಲುಗಿರ ಶ್ಲೋಕಙ್ಗಳೈ** - ಉಪಪಾದಿಸುವ ಈ ಮೇಲಿನ ಶ್ಲೋಕಗಳನ್ನು, **ಪರಾಮರ್ಶಿತ್ತು** - ಚನ್ನಾಗಿ ವಿಮರ್ಶಿಸಿ ತಿಳಿದು, **ಅಪ್ಪಡಿಯೇ** - ಅದೇ ಪ್ರಕಾರವಾಗಿ, **ಈತ್ತಿನವಾಯ್** - ಎರಡಾಗಿ ಭಾಗಿಸಲ್ಪಟ್ಟ ಬಾಯಿ, **ತೆರಿಯಾಮಲ್** – ತೆಗೆಯದ ಹಾಗೆ, **ವಜ್ರಲೇಪ ಘಟಿತಮಾನಾರ್ಪ್ಪೋಲೆ** - ವಜ್ರಹಾಕಿ ಅಂಟಿಸಿದ ರೀತಿಯಲ್ಲಿ ಹೇಗೋ ಹಾಗೆ, **ಪೊರುನ್ದಿ ಪೋರುವುಮ್ ಪ್ರಾಪ್ತಂ**- ಅವರೊಂದಿಗೆ ಪರಮ ಮೈತ್ರಿಯಿಂದ ಸೇರಿದವರಾಗಿ ನಡೆಯತಕ್ಕದ್ದು ಯುಕ್ತವು. ಮೇಲಿನ ನಾಲ್ಕು ವಾಕ್ಯಗಳಿಗೂ ಸಂಬಂಧಪಟ್ಟ ಪ್ರಾಪ್ತಂ ಎಂಬ ಕ್ರಿಯಾಪದವು ಇಲ್ಲಿ ಇರುತ್ತದೆ. ಈ ಭಾಗವತಾಪಚಾರವು ಪ್ರಾಪ್ತವಾದ ವಿಷಯವು ಸ್ವರೂಪಕ್ಕೆ ಯೋಗ್ಯವಲ್ಲವಾದ ವಿಷಯವಾದುದರಿಂದ ಅದನ್ನು ಇತರರಲ್ಲಿ ಪ್ರಕಟಿಸದೆ ಅದು ನಡೆಯದೇ ಇದ್ದ ಹಾಗೆ ಭಾವಿಸಿ, ಆ ಭಾಗವತರುಗಳೊಂದಿಗೆ ಪ್ರೀತಿ ವಿಶ್ವಾಸಾದಿ ಯುಕ್ತನಾಗಿ ವರ್ತಿಸತಕ್ಕದ್ದೆಂಬ ಭಾವವು. ಹೀಗೆ ಭಾಗವತಾಪಚಾರಕ್ಕೆ ಭಾಗವತ ಪ್ರಸಾದನವೇ ಪ್ರಾಯಶ್ಚಿತ್ತವೆಂಬ ವಿಷಯದಲ್ಲಿ ಶಾಸ್ತ್ರಾದಿ [illegible]

ಪ್ರಾಯಶ್ಚಿತ್ತರೂಪ ಪುನಃ ಪ್ರಪದನೇನ ಸರ್ವೇಶ್ವರಃ ಕ್ಷಾಮ್ಯತಿ ಇತ್ಯತ್ರ ದೃಷ್ಟಾನ್ತಃ

ಜ್ಞಾನಾವಾನಾನವರ್ ಪ್ರಾತಿಕೂಲ್ಯತ್ತಿಲೇ ಬುದ್ಧಿಪೂರ್ವಕವಾಗ ಪ್ರವೃತ್ತನಾನಾಲುಮ್ ಪುನಃ ಪ್ರಪತ್ತಿಯಾಲೇ ಸರ್ವೇಶ್ವರರ್ ಕ್ಷಮಿಕ್ಕು

ವನ ವಿಷಯದಲ್ಲಿ ಉಂಟಾದ ಬುದ್ಧಿಪೂರ್ವಾಪರಾಧಕ್ಕೆ ಆತನ ಪ್ರಸಾದನವೇ ಪ್ರಾಯಶ್ಚಿತ್ತವು. ಸುಗ್ರೀವನು ವಾನರನು, ಲಕ್ಷ್ಮಣನು ಕ್ಷತ್ರಿಯನು, ಆದರೂ ಇಬ್ಬರೂ ಪರಸ್ಪರ ಕ್ಷಮಾಪಣೆಯನ್ನು ಪ್ರಾರ್ಥಿಸಿರುತ್ತಾರೆ. ಹಾಗೆಯೇ ಅಂಬರೀಷೋಪಾಖ್ಯಾನದಲ್ಲಿ ಈ ವಿಷಯವು ಸ್ಪಷ್ಟವು; ದುರ್ವಾಸರು ಋಷಿಯಾದುದರಿಂದ ಬ್ರಾಹ್ಮಣರ, ಅಂಬರೀಷನು ಕ್ಷತ್ರಿಯನು. ಆದರೂ ಬುದ್ಧಿಪೂರ್ವಕವಾಗಿ ದುರ್ವಾಸರು ಅಂಬರೀಷನ ವಿಷಯದಲ್ಲಿ ಅಪರಾಧ ಮಾಡಿದುದರಿಂದ, ಕ್ಷತ್ರಿಯ ಮಹಾಭಾಗವತನ ಕ್ಷಮಾಪಣೆಯೇ ಪ್ರಾಯಶ್ಚಿತ್ತವೆಂದು ಶ್ರೀ ಹರಿಯೇ ದುರ್ವಾಸರಿಗೆ ಉಪದೇಶಿಸಿರುತ್ತಾರೆ. ದುರ್ವಾಸಋಷಿಯು ಸುದರ್ಶನ ಚಕ್ರದಿಂದ ಪೀಡಿತರಾಗಿ ಮುಕುಂದನನ್ನು ಮರೆಹೊಗಲು, ಆಗ ಕರುಣಾಸಾಗರನು "**ಅಹಂ ಭಕ್ತಪರಾಧೀನಃ**" ನಾನು ಭಕ್ತಪರಾಧೀನನಾದುದರಿಂದ ಅಸ್ವತಂತ್ರನು ನಾನು ಇನ್ನೇನನ್ನೂ ಮಾಡಲಾರೆನು. "**ಉಪಾಯಂ ಕಥಯಿಷ್ಯಾಮಿ ತವ ವಿಪ್ರ ಶೃಣುಷ್ವ ತತ್**" ಓ ಋಷಿಯೇ ನಿನಗೊಂದುಪಾಯವನ್ನು ಮಾತ್ರ ಉಪದೇಶಿಸುವೆನು ಅದನ್ನು ಕೇಳು,

"ಬ್ರಹ್ಮಂಸ್ತದ್ಗಚ್ಛ ಭದ್ರಂ ತೇ ನಾಭಾಗ ತನಯಂ ನೃಪಂ।
ಕ್ಷಮಾಪಯ ಮಹಾಭಾಗ ತತಶ್ಶಾನ್ತಿರ್ಭವಿಷ್ಯತಿ"

ಓ ಬ್ರಹ್ಮವಿತ್ತಾದಋಷಿಯೇ, ನೀನು ಇಲ್ಲಿಂದ ನಾಭಾಗನ ಮಗನಾಗಿ ರಾಜನಾದ ಅಂಬರೀಷನಲ್ಲಿಗೆ ಹೋಗು, ನಿನಗೆ ಮಂಗಳವಾಗುತ್ತದೆ, ಆತನಲ್ಲಿಗೆ ಹೋಗಿ ಆತನ ಕ್ಷಮಾಪಣೆಯನ್ನು ಪ್ರಾರ್ಥಿಸು, ಅನಂತರ ನಿನಗೆ ಈ ಭಾಗವತಾಪರಾಧದಿಂದ ಪ್ರಾಪ್ತವಾದ ಕ್ಲೇಶದ ಶಾನ್ತಿಯು ಉಂಟಾಗುತ್ತದೆ" ಎಂದುಪದೇಶಿಸಿದನಂತರ, ಋಷಿಯು ಹಾಗೆಯೇ ನಡೆಸಿದ್ದರಿಂದ ಸುದರ್ಶನ ಚಕ್ರಭಯವು ಶಾಂತವಾಯಿತು. ಹೀಗೆ ಈ ಶಾಸ್ತ್ರಾರ್ಥವು ಬಹು ಸ್ವಾರಸ್ಯವಾಗಿ ಇತಿಹಾಸಗಳಲ್ಲೂ ಉಪಪಾದಿಸಲ್ಪಟ್ಟಿರುತ್ತದೆ. ಅದಕ್ಕೆ ಒಂದು ದೃಷ್ಟಾನ್ತವನ್ನು ಉದಾಹರಿಸುತ್ತಾರೆ.

ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪದನಾನುಷ್ಠಾನದಿಂದ ಭಗವಂತನು ಕ್ಷಮಿಸುವನು ಎಂಬುವದಕ್ಕೆ ದೃಷ್ಟಾನ್ತವು

ಜ್ಞಾನವಾನಾನವರ್ – ಜ್ಞಾನವುಳ್ಳವನು, ಪ್ರಾತಿಕೂಲ್ಯತ್ತಿಲೆ – ಪ್ರತಿ

ಮೆನ್ನುಮಿಡವುಮ್ ಶ್ರೀ ಬದರೀಕಾಶ್ರಮತ್ತಿಲೇ ಕ್ರೋಧಾನ್ಧನಾಯ್ ಧರ್ಮಾತ್ಮಜನಾನ ಭಗವಾನೋಡೆ ಎದಿರಮ್ಬುಕೊತ್ತ ರುದ್ರನೈ ಬ್ರಹ್ಮಾ ತೆಳಿವಿತ್ತು ವಿಲಕ್ಕ, ಅವನುಮ್ (೧) "ಪ್ರಸಾದಯಾಮಾಸ ಭವೋದೇವಂ ನಾರಾಯಣಂ ಪ್ರಭುಮ್। ಶರಣಂಚಜಗಾಮಾದ್ಯಂ ವರೇಣ್ಯಂ ವರದಂ ಹರಿಮ್॥" ಎನ್ಗಿರಪಡಿಯೇ ಪ್ರಸಾದನಮಾನ ಶರಣಾಗತಿಯೈಪ್ಪಣ್ಣಿನಾರ್ (ಣ್ಣಿನಾರ್), (೨) "ತತೋಽಥ ವರದೋದೇವೋ ಜಿತಕ್ರೋಧೋ ಜಿತೇಂದ್ರಿಯಃ।

ಕಾಲಾಂತರದಲ್ಲಿ ಬುದ್ಧಿಪೂರ್ವಕವಾಗಿ, ಪ್ರವೃತ್ತನಾದಾಗಲೂ - ಪ್ರವರ್ತಿಸಿದವನಾದರೂ, **ಪುನಃಪ್ರಪತ್ತಿಯಾಲೇ** - ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪತ್ತಿಯಿಂದ, ಸರ್ವೇಶ್ವರನು **ಕ್ಷಮಿಕ್ಕುಮೆನ್ನುಮಿಡವುಮ್** - ಕ್ಷಮಿಸುವನು ಎಂಬುವ ಸಂದರ್ಭವು, **ಶ್ರೀ ಬದರಿಕಾಶ್ರಮತ್ತಿಲೇ** - ಬದರಿಕಾಶ್ರಮದಲ್ಲಿ, **ಧರ್ಮಾತ್ಮಜನಾನ** - ಧರ್ಮನೆಂಬುವನಿಗೆ ಪುತ್ರನಾದ, **ಭಗವಾನೋಡೆ** - ನರನಾರಾಯಣರೂಪದಲ್ಲಿ ತಪಸ್ಸುಮಾಡುತ್ತಿದ್ದ ನಾರಾಯಣ ಋಷಿಯೊಂದಿಗೆ, **ಕ್ರೋಧಾನ್ಧನಾಯ್** - ಕೋಪದಿಂದ ಜ್ಞಾನವನ್ನು ಕಳೆದುಕೊಂಡು **ಎದಿರಂಪುಕೊತ್ತ** - ಎದುರಾಗಿ ನಿಂತು ಯುದ್ಧಮಾಡಿದ, **ರುದ್ರನೈ** - ರುದ್ರನಿಗೆ, **ಬ್ರಹ್ಮಾ** - ಚತುರ್ಮುಖ ಬ್ರಹ್ಮನು, **ತೆಳಿವಿತ್ತು** - ಸರಿಯಾದ ಜ್ಞಾನವನ್ನುಪದೇಶಿಸುವದರಿಂದ ಕೋಪಶಾಂತಿಯನ್ನುಂಟುಮಾಡಿ, **ವಿಲಕ್ಕ** - ಯುದ್ಧದಿಂದ ನಿವರ್ತಿಸುವ ಹಾಗೆ ಮಾಡಲು, **ಅವನುಮ್** - ಆ, "**ಭವಃ** - ರುದ್ರನು, ದೇವನಾದ, **ಪ್ರಭುಂ** - ಸ್ವಾಮಿಯಾದ, **ನಾರಾಯಣಂ** - ನಾರಾಯಣನನ್ನು, **ಪ್ರಸಾದಯಾಮಾಸ** - ಪ್ರಸನ್ನನಾಗಿ ಮಾಡಿಕೊಂಡನು, **ಆದ್ಯಂ** - ಸರ್ವಕ್ಕೂ ಆದಿಯಾಗಿ ಕಾರಣಭೂತನಾದ, **ವರೇಣ್ಯಂ** - ವಾತ್ಸಲ್ಯಾದಿ ಗುಣಗಳಿರುವದರಿಂದ ವರಿಸಲು ಯೋಗ್ಯನಾದ, **ವರದಂ** - ಪ್ರಾರ್ಥಿಸಿದುದನ್ನು ಕೊಡುವ ಶ್ರೀ ಹರಿಯನ್ನು, **ಶರಣಂಚ ಜಗಾಮ** - ಶರಣವನ್ನೂ ಹೊಂದಿದನು" **ಎನ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಶರಣಾಗತಿಯೈಪಣ್ಣ** - ಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಮಾಡಲು, "**ತತಃ** - ಆ ಕಾರಣದಿಂದ ಎಂದರೆ ಆ ರುದ್ರನು ಶರಣಾಗತಿ ಮಾಡಿದುದರಿಂದ, **ಅಥ** - ಅನಂತರದಲ್ಲಿ. **ವರದಃ** - ಚತುರ್ವಿಧ ಪುರುಷಾರ್ಥಗಳನ್ನೂ ದಯಪಾಲಿಸುವ **ಜಿತಕ್ರೋಧಃ** - ಕ್ರೋಧವನ್ನು ಜಯಿಸಿದವನಾದ, ಜಿತೇಂದ್ರಿಯನಾದ, **ದೇವಃ** - ಕ್ರೀಡಾಪರನಾದ ಸ್ವಾಮಿಯು, **ತತ್ರ** - ಆ ಕಾಲದಲ್ಲಿ, **ಪ್ರೀತಿಮಾರ್** - ಸಂತುಷ್ಟನಾದವನು,

(೧) ಭಾರ. ಶಾಂತಿ. ೩೫೨. ೯೪. (೨) ಭಾರ. ಶಾಂತಿ. ೩೫೨.೯೫

ಪ್ರೀತಿಮಾನ ಭವತ್ತತ್ರ ರುದ್ರೇಣ ಸಹ ಸಂಗತಃ” ಎಙ್ಗುರಪಡಿಯೇ ಸರ್ವೇಶ್ವರ್ಽ ಪ್ರಸನ್ನನಾಯ್ ರುದ್ರನೈ ಅಂಗೀಕರಿತ್ತಾನೆನ್ಗೈಯಾಲೇ ಸಿದ್ಧಮ್.

ಅಭವತ್ - ಆದನು, ರುದ್ರೇಣಸಹಸಙ್ಗತಃ - ರುದ್ರನೊಂದಿಗೆ ಸೇರಿದವನೂ ಆದನು ಎಂದರೆ ಆತನಪರಾಧವನ್ನು ಮನ್ನಿಸಿ ಆತನಿಗೆ ಪೂರ್ಣಾನುಗ್ರಹವನ್ನು ಮಾಡಿದನೆಂಬ ಭಾವವು. ಹೀಗೆ ಬುದ್ಧಿಪೂರ್ವ್ವಾಪರಾಧಕ್ಕೂ ಪಶ್ಚಾತ್ತಾಪಪಟ್ಟು ಪ್ರಾಯಶ್ಚಿತ್ತ ಶರಣಾಗತಿಯನ್ನು ಮಾಡಿದರೆ, ಸರ್ವೇಶ್ವರನು ಅದರಿಂದ ಪ್ರೀತನಾಗಿ ಆತನ ಅಪರಾಧವನ್ನು ಮನ್ನಿಸಿ ಅನುಗ್ರಹ ಮಾಡುವನೆಂಬುವದು ಮುಖ್ಯಾಭಿಪ್ರಾಯವು. ಈ ದಿವ್ಯೇತಿಹಾಸವು ಭಾರತ ಶಾಂತಿಪರ್ವ್ವದ ೩೪೩ನೆಯ ಅಧ್ಯಾಯದಲ್ಲಿ ಉಪಪಾದಿತವು. ದಕ್ಷನು ತನ್ನ ಅಳಿಯನಾದ ರುದ್ರನಿಗೆ ಯಜ್ಞದಲ್ಲಿ ಹವಿರ್ಭಾಗವನ್ನು ಸಮರ್ಪ್ಪಿಸಲಿಲ್ಲವು ಇದಕ್ಕೆ ಕೋಪಾವಿಷ್ಟನಾದ ರುದ್ರನು ತ್ರಿಶೂಲವನ್ನು ಬಿಟ್ಟುಬಿಡಲು, ಅದು ದಕ್ಷಯಜ್ಞವನ್ನು ಧ್ವಂಸಮಾಡಿ, ಬದರಿಕಾಶ್ರಮದಲ್ಲಿ ಧರ್ಮದೇವತೆಯ ಪುತ್ರರಾಗವತರಿಸಿದ ನರನಾರಾಯಣರು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ನಾರಾಯಣನ ವಕ್ಷಸ್ಥಳದಲ್ಲಿ ಬಿದ್ದಿತು. ಆಗ ನಾರಾಯಣನಿಂದ ಕ್ಲೇಶ ಹೊಂದಿದ ಆ ತ್ರಿಶೂಲವು ಶಂಕರನ ಕರವನ್ನು ಹೋಗಿ ಸೇರಿತು. ಇದಕ್ಕಾಗಿ ರುದ್ರನು ಕೋಪಗೊಂಡು ನಾರಾಯಣನೊಂದಿಗೆ ಘೋರಯುದ್ಧವನ್ನೆಸಗಲು, ಆಗ ತುಂಬಾ ಭೀತರಾದ ದೇವತೆಗಳು ಹೋಗಿ ಚತುರ್ಮ್ಮುಖಬ್ರಹ್ಮನಲ್ಲಿ ಮೊರೆಯಿಡಲು, ಆತನು ಹೋಗಿ ರುದ್ರನು ಮಾಡುತ್ತಿದ್ದ ಅವಿವೇಕವನ್ನು ಅವನಿಗೆ ತಿಳಿಸಿ, ಈ ಮಹಾಪರಾಧ ಶಮನಕ್ಕಾಗಿ ನಾರಾಯಣನಲ್ಲಿ ಶರಣಾಗತಿಯನ್ನು ಮಾಡೆಂದುಪದೇಶಿಸಿದನು. ಆ ಪ್ರಕಾರ ರುದ್ರನು ಶರಣಾಗತಿಯನ್ನು ಮಾಡಿದುದರಿಂದ ನಾರಾಯಣನು ಸುಪ್ರೀತನಾಗಿ ಆತನ ಅಪರಾಧವನ್ನು ಮನ್ನಿಸಿ ಅನುಗ್ರಹಿಸಿದನೆಂಬುವದು ಕಥಾಸಾರಾಂಶವು. ಇದು ಅರ್ಜುನನಿಗೆ ಶ್ರೀ ಕೃಷ್ಣನು ರುದ್ರನಿಗೆ ಖಂಡಪರಶು, ಶ್ರೀಕಂಠಾದಿನಾಮಗಳು ಹೇಗೆ ಉಂಟಾಯಿತೆಂದೂ, ಹಾಗೆಯೇ ತನಗೆ ಹೇಗೆ ನಾಮಗಳು ಪ್ರಾಪ್ತವಾಯಿತೆಂದೂ ಹೇಳುವ ಪ್ರಕರಣವು” ಎಙ್ಗುರಪಡಿಯೇ - ಎಂದು ಹೇಳಿರುವ ಹಾಗೆ, ಸರ್ವೇಶ್ವರನು, ಪ್ರಸನ್ನನಾಯ್ - ಅನುಗ್ರಹ ಮಾಡುವನಾಗಿ, ರುದ್ರನನ್ನು, ಅಙ್ಗೀಕರಿತ್ತಾರ್ಽ - ಅಂಗೀಕರಿಸಿದನು, ಎನ್ಗೈಯಾಲೇ - ಎಂದು ಹೇಳಿರುವದರಿಂದ, ಸಿದ್ಧಮ್ - ಸ್ಥಾಪಿತವಾದ ವಿಷಯವು. ಸರ್ವೇಶ್ವರ್ಽ ಕ್ಷಮಿಕ್ಕುಮೆನ್ನುಮಿಡಮ್ ಎಂಬುವದು, ಈ ಸಿದ್ಧಮ್ ಎಂಬುವದಕ್ಕೆ ಕರ್ತೃಪದವು.

ತಾೞ ಕುತ್ತವಾಳ ನಾಗವುಮಾಮ್, ತಾನಿಪ್ಪೋದು ಕುತ್ತಮ್ ಶೆಯ್ಯಾದೇ ಇರುಕ್ಕ ಜನ್ಮಾಂತರ ದುಷ್ಕೃತತ್ತಾಲೆ ಯಾಗವುಮಾಮ್, ಶಿಲಭಾಗವತರ್ ತನ್ನೈ ವೆರುಕ್ಕಿಲ್, ಏದೇನುಮೊರುವಿರಗಾಲೇ ಯವರ್ಗಳೈ ಕ್ಷಮೈಕೊಳ್ಳುಗಿರ, ಮುಖತ್ತಾಲೆ ಈಶ್ವರನೈ ಕ್ಷಮೈಕೊಳ್ಳವೇಣು

ಹೀಗೆ ಬುದ್ಧಿಪೂರ್ವಕವಾಗಿ ಭಾಗವತಾಪಚಾರವು ಪ್ರಾಪ್ತವಾದರೆ, ಆ ಭಾಗವತರಲ್ಲಿ ಕ್ಷಮಾಪಣೆಯೇ ಪ್ರಾಯಶ್ಚಿತ್ತವೆಂದು ಸಪ್ರಮಾಣವಾಗಿ ಸದೃಷ್ಟಾಂತವಾಗಿ ಸ್ಥಾಪಿಸಲ್ಪಟ್ಟಿತು. ಒಂದು ವೇಳೆ ಬುದ್ಧಿಪೂರ್ವಕಾಪರಾಧವನ್ನು ಭಾಗವತರುಗಳಲ್ಲಿ ಮಾಡದೇನೇ ಭಾಗವತನು, ತನ ಜನ್ಮಾಂತರ ದುಷ್ಕೃತ ಫಲವಾಗಿ ನಿಷ್ಠುರೋಕ್ತಿಗಳನ್ನಾಡಿದರೆ, ಆಗ ಪ್ರಪನ್ನನಾದವನು ಹೇಗೆ ನಡೆದುಕೊಳ್ಳಬೇಕೆಂಬುವದನ್ನು ಮುಂದಿನ ವಾಕ್ಯವಾದ "**ತಾೞ ಕುತ್ತವಾಳ ನಾಗವುಮಾಮ್**" ಎಂಬುವದರಿಂದುಪದೇಶಿಸುತ್ತಾರೆ. ಅಂತಹ ಸಂದರ್ಭದಲ್ಲೂ ಅದನ್ನು ಸಹಿಸಿಕೊಂಡು ತಾಳ್ಮೆಯಿಂದ ಅವರುಗಳ ಕ್ಷಮಾಪಣೆಯನ್ನು ಕೇಳಿಕೊಳ್ಳುವದೇ ಯುಕ್ತವೆಂದು ಸಪ್ರಮಾಣವಾಗಿ ತಿಳಿಸಿ, ಅದರಿಂದ ಸರ್ವೇಶ್ವರನು ಸಂತುಷ್ಟನಾಗುವನೆಂದು ಹೇಳುತ್ತಾರೆ.

ತಾೞ ಕುತ್ತವಾಳನಾಗವುಮಾಮ್ - ತಾನು ಈ ಜನ್ಮದಲ್ಲೇ ಮಾಡಿದ ಅಪರಾಧವುಳ್ಳವನಾಗಲಿ, **ತಾೞ ಇಪ್ಪೋದು ಕುತ್ತಮ್ ಶೆಯ್ಯಾದೇ ಇರುಕ್ಕ**- ತಾನು ಈಗ ಈ ಜನ್ಮದಲ್ಲಿ ಏನೊಂದೂ ಅಪರಾಧ ಮಾಡದಿದ್ದರೂ, **ಜನ್ಮಾಂತರ ದುಷ್ಕೃತತ್ತಾಲೆಯಾಗವುಮಾಮ್** - ಹಿಂದಿನ ಜನ್ಮದಲ್ಲಿ ಮಾಡಿದ ದುಷ್ಕೃತ ಮೂಲಕವೇಯಾಗಲಿ, **ಶಿಲಭಾಗವತರ್ ತನ್ನೈ ವೆರುಕ್ಕಿಲ್** - ಕೆಲವು ಭಾಗವತರು ತನ್ನನ್ನು ದೂಷಿಸಿದರೆ, ಯಾವಾಗ ಭಾಗವತರು ನಿಷ್ಠುರೋಕ್ತಿಗಳನ್ನಾಡಿದರೋ, ಅದು ಕಾರಣವಿಲ್ಲದೇ ಬೇರೆ ಆದುದಲ್ಲವು, ಈ ಜನ್ಮದಲ್ಲೇನೂ ಪ್ರತ್ಯಕ್ಷವಾಗಿ ಆ ಭಾಗವತರುಗಳಿಗೆ ಅಪರಾಧ ಮಾಡದಿದ್ದರೂ, ಹಿಂದಿನ ಜನ್ಮದಲ್ಲೇನೋ ದುಷ್ಕೃತ ನಡದಿರಬೇಕು, ಅದಕ್ಕಾಗಿ ಈ ಭಾಗವತರುಗಳು ಸ್ವಾಮಿಸಂಕಲ್ಪಾನುಸಾರ ನಿಷ್ಠುರೋಕ್ತಿಗಳನ್ನಾಡಿದ್ದಾರೆಂದು ಭಾವಿಸತಕ್ಕದ್ದೆಂಬ ಭಾವವು, **ಏದೇನುಮೊರುವಿರುಗಾಲೇ** - ಯಾವುದಾದರೂ ಒಂದು ಉಪಾಯ ಮೂಲಕವಾಗಿ, **ಅವರುಗಳೈ ಕ್ಷಮೈಕೊಳ್ಳುಗಿರ ಮುಖತ್ತಾಲೆ** - ಆ ನಿಂದಿಸಿದ ಭಾಗವತರುಗಳ ಕ್ಷಮಾಪಣೆಯನ್ನು ಮಾಡುವದರ ಮೂಲಕವಾಗಿ, **ಈಶ್ವರನೈ ಕ್ಷಮೈಕೊಳ್ಳವೇಣುಮ್** - ಸರ್ವೇಶ್ವರನ ಕ್ಷಮೆಯನ್ನು ಪ್ರಾರ್ಥಿಸಬೇಕು, ಎನ್ನುಮಿಡಮ್ - ಎನ್ನುವ ಸಂದರ್ಭವು, "**ತಥಾ** - ಹಾಗೆಯೇ, **ಭಾಗವತೈರಿಶಾೞ** - ಭಾಗವತರು

ಮೆನ್ನುಮಿಡವರ್, (೧) "ರೂಕ್ಷಾಣ್ಯಕ್ಷರಾಣಿ ಶೃಣ್ವನ್ನೈತಥಾ ಭಾಗವತೇರಿತಾ । ಪ್ರಣಾಮ ಪೂರ್ವಕಂ ಕ್ಷಾನ್ತ್ಯಾ ಯೋವದೇ ದ್ವೈಷ್ಣವೋ ಹಿ ಸಃ" ಎನ್ರು ಶ್ರೀವೈಷ್ಣವ ಲಕ್ಷಣಮ್ ಶೊಲ್ಲುಗಿರ ಪ್ರಮಾಣತ್ತಿಲೇ ಸಿದ್ಧಂ. ಇಙ್ಙನ ಇನ್ಱಿಯ್ಯಾದಪೋದು (೧) "ಯೇ ಬ್ರಾಹ್ಮಣಾಸ್ತೇಽಹಮಸಂಶಯಂ

ಗಳಿಂದ ಹೇಳಲ್ಪಟ್ಟ, ರೂಕ್ಷಾಕ್ಷರಾಣಿ - ಕ್ರೂರವಾಕ್ಯಗಳನ್ನು, ಶೃಣ್ವನ್ನೈ - ಕೇಳುವವನಾದರೂ, ಕ್ಷಾಂತ್ಯಾ - ತಾಳ್ಮೆಯಿಂದ, ಪ್ರಣಾಮ ಪೂರ್ವಕಂ - ಆ ನಿಂದಿಸಿದ ಭಾಗವತರುಗಳಿಗೆ ಪ್ರಣಾಮ ಪೂರ್ವಕವಾಗಿ, ಯೋವದೇತ್ - ಯಾವನು ಅಪರಾಧ ಪರಿಹಾರರೂಪದಲ್ಲಿ ಪ್ರಸನ್ನರಾಗಿ ಮಾಡುವದಕ್ಕಾಗಿ ಸಂಭಾಷಣೆ ಮಾಡುವನೋ, ಸಃ - ಅವನೀಗ ವೈಷ್ಣವೋಹಿ - ಸರಿಯಾದ ವೈಷ್ಣವನೆಂದು ಕರೆಸಿಕೊಳ್ಳುವನು" ಎನ್ರು - ಎಂಬದಾಗಿ, ಶ್ರೀ ವೈಷ್ಣವ ಲಕ್ಷಣಮ್ ಶೊಲ್ಲುಗಿರ - ಶ್ರೀ ವೈಷ್ಣವ ಲಕ್ಷಣವನ್ನು ಬೋಧಿಸುವ, ಪ್ರಮಾಣತ್ತಿಲೆ - ಪ್ರಮಾಣದಲ್ಲಿ, ಸಿದ್ಧಮ್ - ಸ್ಥಾಪಿತವು, ಈ ಸಿದ್ಧಮ್ ಎಂಬುವದು ಕ್ಷಮೈಕೊಳ್ಳವೇಣು ಮೆನ್ನುಮಿಡವರ್ ಎಂಬುವದರೊಂದಿಗೆ ಅನ್ವಿತವು. ಯಾವಾಗ ಭಾಗವತರು ತನ್ನನ್ನು ನಿಂದಿಸಿದರೋ, ಆಗ ಅದಕ್ಕೆ ಕಾರಣವಿದ್ದೇ ಇರಬೇಕು ; ಕರ್ಮಾನುಸಾರವಾಗಿ ಸ್ವಾಮಿಸಙ್ಕಲ್ಪವಿಲ್ಲದೆ ಅದು ನಡೆಯುವದಿಲ್ಲ ಈಗ ತಾನೇನೂ ಇವರಿಗೆ ಅಪರಾಧ ಮಾಡದಿದ್ದರೂ, ಹಿಂದೆ ಪೂರ್ವಜನ್ಮದಲ್ಲಾದರೂ ದುಷ್ಕೃತವು ತನ್ನಿಂದ ನಡೆದಿರಬೇಕು, ಅದಕ್ಕಾಗಿ ಸರ್ವೇಶ್ವರನು ಈ ರೂಪದಲ್ಲಿ ಶಿಕ್ಷಿಸಿರುವನು. ಆದುದರಿಂದ ತಾನು ಈಗ ನಿರಪರಾಧಿ ಎಂದು ಭಾವಿಸಿ ಆ ನಿಂದಿಸಿದ ಭಾಗವತರನ್ನು ಧಿಕ್ಕರಿಸದೆ, ಅವರ ಕ್ಷಮಾಪಣೆಯನ್ನೇ ಪ್ರಾರ್ಥಿಸತಕ್ಕದ್ದು. ಇದರಿಂದ ಸರ್ವೇಶ್ವರನು ಸುಪ್ರೀತನಾಗಿ ಆ ಹಿಂದಿನ ದುಷ್ಕೃತ ಪರಿಹಾರವನ್ನು ಮಾಡಿ ಅನುಗ್ರಹಿಸುವನೆಂಬ ಭಾವವು.

ಹೀಗೆ ಮಾಡದೆ, ತಾನು ಈಗ ನಿರಪರಾಧಿಯು, ನಿಷ್ಕಾರಣವಾಗಿ ಈ ಭಾಗವತರುಗಳು ತನ್ನನ್ನು ನಿಂದಿಸಿರುತ್ತಾರೆಂದು ಭಾವಿಸಿ, ತಾನೂ ಅವರನ್ನು ಧಿಕ್ಕರಿಸಿ, ಮೇಲೆ ಹೇಳಿದ ರೀತಿಯಲ್ಲಿ ಕ್ಷಮಾಪಣೆ ಮಾಡಿಕೊಳ್ಳದಿದ್ದರೆ ಪ್ರಾಪ್ತವಾಗುವ ಪ್ರತ್ಯವಾಯವೇನೆಂಬುವದನ್ನು "ಇಙ್ಙನ ಇನ್ಱಿಯ್ಯಾದಪೋದು" ಎಂದಾರಂಭಿಸಿ ಹೇಳುತ್ತಾರೆ :— ಇಙ್ಙನ ಇನ್ಱಿಯ್ಯಾದಪೋದು - ಹೀಗೆ ಮಾಡದೇ ಹೋದರೆ, (೧) ಯೇ - ಯಾರು, ಬ್ರಾಹ್ಮಣಾಃ - ಬ್ರಹ್ಮವಿತ್ತಾದ ಎಂದರೆ ಪರಬ್ರಹ್ಮನನ್ನು ತಿಳಿದ ಭಾಗವತರೋ, ತೇ - ಅವರು, ಅಹಂ - ನಾನು ಎಂದರೆ ನನ್ನ

(೧) ಲೈಂಗ ಪುರಾಣಂ (೧) ವಿಷ್ಣುಧರ್ಮ ೫೨.೨೦

ನೃಪ ತೇಷ್ವರ್ಚಿತೇಷ್ವರ್ಚಿತೋಽಹಂ ಯಥಾವತ್। ತೇಷ್ವೇವ ತುಷ್ಟೇಷ್ವಹ ಮೇವ ತುಷ್ಟೋ ವೈರಂಚ ತೈರ್ಯಸ್ಯ ಮಮಾಪಿ ವೈರಮ್." (೨) ಘ್ನಂತಂ ಶಪನ್ತಂ ಪರುಷಂ ವದಂತಂ ಯೋ ಬ್ರಾಹ್ಮಣಂ ನ ಪ್ರಣಮೇದ್ಯಥಾಹಂ। ಸ ಪಾಪಕೃದ್ಬ್ರಹ್ಮದವಾಗ್ನಿದಗ್ಧಃ ವಧ್ಯಶ್ಚ ದಂಡ್ಯಶ್ಚ ನಚಾಸ್ಮದೀಯಃ"

ರೂಪದಲ್ಲಿ ಸಂಚರಿಸುವಂಥಾವರು. ಇದು ಯುಧಿಷ್ಠಿರನಿಗೆ ಹೇಳುವ ಭಗವದ್ವಾಕ್ಯವು, ಹೇನೃಪ-ಓ ರಾಜನಾದ ಯುಧಿಷ್ಠಿರನೇ, ಈ ವಿಷಯದಲ್ಲಿ ಅಸಂಶಯಂ-ಸಂಶಯವಿಲ್ಲವು, **ತೇಷು ಅರ್ಚಿತೇಷು** - ಆ ಭಾಗವತರು ಪೂಜಿಸಲ್ಪಟ್ಟರೆ, **ಅಹಂ**-ನಾನು. **ಯಥಾವತ್** - ಶಾಸ್ತ್ರರೀತಿಯಲ್ಲಿ, **ಅರ್ಚಿತಃ** - ಪೂಜಿಸಲ್ಪಡುವೆನು. **ತೇಷ್ವೇವ ತುಷ್ಟೇಷು** - ಆ ಬ್ರಹ್ಮವಿತ್ತುಗಳು ಸಂತುಷ್ಟರಾದರೆ, **ಅಹಮೇವ ತುಷ್ಟಃ** - ನಾನೇ ಸಂತುಷ್ಟನಾಗುವೆನು; **ಯಸ್ಯ** - ಯಾವನಿಗೆ, **ತೈಃ** - ಆ ಭಾಗವತರೊಂದಿಗೆ, **ವೈರಂ** - ದ್ವೇಷವೋ, **ಮಮಾಪಿ** - ನನಗೂ ಕೂಡ, ಆತನಲ್ಲಿ, **ವೈರಂ** - ದ್ವೇಷವೇ; "**ಪಾಂಡವಾನ್ ದ್ವಿಷಸೇ ರಾಜನ್ ಮಮ ಪ್ರಾಣಾಹಿ ಪಾಂಡವಾಃ**" ನನ್ನ ಭಕ್ತರಾದ ಪಾಂಡವರನ್ನು ದ್ವೇಷಿಸುವದರಿಂದ ನನಗೂ ನೀನು ದ್ವೇಷಿಯೇ, ಎಂದು ದುರ್ಯೋಧನನಿಗೆ ಹೇಳಿದ ಶ್ರೀ ಕೃಷ್ಣನ ಉಕ್ತಿಯು ಈ ಸಂದರ್ಭದಲ್ಲಿ ಅನುಸಂಧೇಯವು ಮತ್ತು, (೨) **ಘ್ನಂತಂ** - ಹೊಡೆಯುತ್ತಿರುವ, **ಶಪನ್ತಂ** - ಶಪಿಸುತ್ತಿರುವ, **ಪರುಷಂ ವದನ್ತಂ** - ಕ್ರೂರ ವಾಕ್ಯಗಳನ್ನಾಡುತ್ತಿರುವ, **ಬ್ರಾಹ್ಮಣಂ** - ಬ್ರಹ್ಮವಿತ್ತನ್ನು, **ಯಥಾ** - ಹೇಗೆ, **ಅಹಂ** - ನಾನು, ಭೃಗುಋಷಿಯು ಕೋಪದಿಂದ ನನ್ನನ್ನು ಕಾಲಿನಿಂದ ಒದ್ದಾಗ ಆತನ ಕ್ಷಮಾಪಣೆಯನ್ನು ಹೇಗೆ ಕೇಳಿಕೊಂಡೆನೋ ಹಾಗೆ, **ನ ಪ್ರಣಮೇತ್**-ಆತನಿಗೆ ನಮಸ್ಕರಿಸಿ ಕ್ಷಮಾಪಣೆಯನ್ನು ಕೇಳಿಕೊಳ್ಳುವದಿಲ್ಲವೋ, **ಸಃ** - ಅಂತವನು, **ಪಾಪಕೃತ್** - ಪಾಪಮಾಡಿದವನು, **ಬ್ರಹ್ಮದವಾಗ್ನಿದಗ್ಧಃ** - ಬ್ರಹ್ಮವಿತ್ತಾದವನ ಕೋಪವೆಂಬ ಕಾಡ್ಗಿಚ್ಚಿನಿಂದ ಭಸ್ಮನಾದವನು, **ವಧ್ಯಃ** - ವಧಿಸಲ್ಪಟ್ಟವನು, ಎಂದರೆ ಸ್ವರೂಪಹಾನಿ ಮಾಡಿಕೊಂಡವನು, **ದಂಡ್ಯಶ್ಚ** - ದಂಡಿಸಲ್ಪಟ್ಟವನೂ ಎಂದರೆ ಸ್ವಭಾವನಾಶ ಮಾಡಿಕೊಂಡವನು, **ನಚಾಸ್ಮದೀಯಃ** - ಆತನು ನನಗೂ ನನ್ನ ಭಕ್ತರಿಗೂ ಸೇರಿದವನೇ ಅಲ್ಲವು; ಒಬ್ಬ ಬ್ರಹ್ಮವಿತ್ತಾದವನು ಒಬ್ಬನನ್ನು ಹೊಡೆಯುತ್ತಾ ಶಪಿಸುತ್ತಾ ನಿಷ್ಠುರೋಕ್ತಿಗಳನ್ನು ಹೇಳುತ್ತಾ ಇದ್ದರೂ, ಆತನ ವಿಷಯದಲ್ಲಿ ತಾಳ್ಮೆಯಿಂದ ಆತನಿಗೆ ಪ್ರಣಾಮವನ್ನು ಮಾಡಿ, ಕೋಪಕಾರಣವನ್ನು ವಿಚಾರಿಸಿ ಕ್ಷಮಾಪಣೆಯನ್ನು ಮಾಡತಕ್ಕದ್ದು. ಭೃಗುಮಹರ್ಷಿಯು, ಕೋಪದಿಂದ ಒದ್ದು, ತಾನು ಹೋಗುವಾಗ ತನ್ನ ಕಾಲಿ

ಎಂಗಿರಪಡಿಯೇ, ಭಗವದಭಿಮಾನ ಬಾಹ್ಯನುಮಾಯ್, ವೈಷ್ಣವ ಪ್ರಕೃತಿಯಾಯಿರುಕ್ಕಿರ ತನಕ್ಕು ಸ್ವರೂಪ ಮೆನ್ನಲಾಮ್ಪಡಿ ಅನ್ತರಙ್ಗಮಾನ ಭಾಗವತ ಶೇಷತ್ವತ್ತೈಯುಮ್, ಸ್ವಭಾವಮಾಯ್ ನಿರ್ಕಿರ ಶಮದಮಾದಿಗಳೈಯುಮ್ ವಿಳಿನಾ ನಾಮ್.

ನಿಂದ ಒಪ್ಪರೂ, ಅದಕ್ಕೆ ಪ್ರತಿಯಾಗಿ ಕೋಪಿಸದೆ, ಆ ನಿಂದೆಯು ಕ್ಷಮಾಪಣೆಯನ್ನು ತಾನು ಕೇಳಿಕೊಂಡನು. ಹಾಗೆ ಮಾಡದಿದ್ದರೆ, ಪ್ರತಿಯಾಗಿ ಕೋಪಿಸಿದವನು ಪಾಪಮಾಡುವನು. ತನಗೆ ಸ್ವರೂಪವಾದ ಭಾಗವತ ಶೇಷತ್ವವನ್ನು ಕಳೆದುಕೊಳ್ಳುವನು, ಇದು ಪಥ್ಯರಲ್ಲದಭಿಪ್ರಾಯವು, ಮತ್ತು ಪ್ರಪನ್ನನ ಸ್ವಭಾವವಾದ ಶಮದಮಾದಿಗಳನ್ನು ಕಳೆದುಕೊಳ್ಳುವನು, ಇದು ದಂಡ್ಯ: ಎಂಬುವರ ಅಭಿಪ್ರಾಯವು ಇದೀಗ ಅಭಿಪ್ರಾಯಗಳೆಂದು ತಾವೇ ಮುಂದೆ ವ್ಯಕ್ತಪಡಿಸಿರುತ್ತಾರೆ” ಇದೂ ಅಲ್ಲದೆ,

“ಗೃಹ್ಯಂತೇ ಯದಿರೋಷೇಣ ತ್ವಾದೃಶೋಽಪಿ ವಿಪಶ್ಚಿತಃ।
ತತಶ್ಶಾಸ್ತ್ರ ವಿಪಶ್ಚಿತ್ತ್ವಂ ಶ್ರಮಏವ ಹಿ ಕೇವಲಂ”

(ರಾಮಾ. ಸುಂ ೫೨೮)

ಎಂದರೆ, ಯಾರೋ ನಿನಗೆ ಅಪಕಾರ ಮಾಡಿದರೆಂದು ನಿನ್ನಂತಹ ಶಾಸ್ತ್ರಜ್ಞರೂ ಅವರ ವಿಷಯದಲ್ಲಿ ಕೋಪಕ್ಕೆ ವಶರಾದರೆ, ಆಗ ಶಾಸ್ತ್ರಪಾಂಡಿತ್ಯವೆಲ್ಲಾ ಕೇವಲ ಶ್ರಮರೂಪವಾಯಿತೇ ವಿನಾ ಪುರುಷಾರ್ಥ ದಾಯಕವಾಗಲಿಲ್ಲವೆಂದು ವಿಭೀಷಣನು ತನ್ನಣ್ಣನಿಗೆ ಬುದ್ಧಿ ಹೇಳಿದ ಹಾಗೆ ಈ ಸಕಲ ತಿಳುವಳಿಕೆಯೆಲ್ಲವೂ ನಿರರ್ಥಕವಾದುವೂ ಆಗುತ್ತವೆ. ಎಙ್ಗಿರಪಡಿಯೇ - ಎಂದು ಹೇಳಿರುವ ಹಾಗೆ, ಭಗವದಭಿಮಾನ ಬಾಹ್ಯನುಮಾಯ್ - ಭಗವದನುಗ್ರಹಕ್ಕೆ ಹೊರಗಾದವನಾಗಿ, ವೈಷ್ಣವ ಪ್ರಕೃತಿಯಾಯಿರುಕ್ಕಿರ ತನಕ್ಕು - ವೈಷ್ಣವ ಸ್ವಭಾವ ಉಳ್ಳವನಾಗಿರುವ, ವೈಷ್ಣವ ದೇಹವನ್ನೆತ್ತಿದ ತನಗೆ, ಸ್ವರೂಪಮೆನ್ನಲಾಂಪಡಿ - ಸ್ವರೂಪವೆಂದು ಹೇಳಬಹುದಾದ, ಅನ್ತರಙ್ಗಮಾನ ಭಾಗವತ ಶೇಷತ್ವತ್ತೈಯುಮ್ - ಪ್ರಿಯವಾದ ಭಾಗವತ ಶೇಷತ್ವವನ್ನೂ, ಸ್ವಭಾವಮಾಯ್ ನಿರ್ಕಿರ - ಅಂತಹ ವೈಷ್ಣವ ಪ್ರಪನ್ನನ ಸ್ವಭಾವವಾಗಿರುವ, ಶಮದಮಾದಿಗಳೈಯುಮ್, ಶಮವೆಂದರೆ ಅಂತರಿಂದ್ರಿಯ ನಿಗ್ರಹವು, ದಮವೆಂದರೆ ಬಾಹ್ಯೇಂದ್ರಿಯ ನಿಗ್ರಹವು, ಇಲ್ಲಿ ಆದಿ ಶಬ್ದದಿಂದ

“ಶಮೋದಮಸ್ತಪಶ್ಶೌಚಂ ಕ್ಷಾಂತಿರಾರ್ಜವಮೇವಚ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮಸ್ವಭಾವಜಂ”

ಇವತ್ತೈ ಯಿಳಿಕ್ಕೈತಾನೇ ಯಿವನುಕ್ಕು ವಧಮುಮ್, ದಂಡಮುಮ್. ಭಗವದಭಿಮಾನ ಬಾಹ್ಯತ್ತೆಯ್ದಿ ಕೊಡುಮೈಯ್ಯೆ (೧) "ಅಳಿ

ಎಂಬ ಶ್ಲೋಕದಲ್ಲಿ (ಗೀ. ೮. ೪೨) ಹೇಳಿರುವ ತಪಸ್ಸು ಮೊದಲಾದವುಗಳು ಹೇಳಲ್ಪಟ್ಟವು, ಇವುಗಳನ್ನೆಲ್ಲಾ, ಇಳಿಸ್ಸಾನಾಮ್ - ನಾಶಮಾಡಿಕೊಂಡವನಾಗುವನು. ಅಂತವನಿಗೆ ಭಗವದನುಗ್ರಹವೂ ಇಲ್ಲವು; ಭಾಗವತ ಶೇಷತ್ವರೂಪ ಸ್ವರೂಪಹಾನಿಯೂ, ಶಮದಮಾದಿಗಳಿಂದ ತನ್ನ ಸ್ವಭಾವಕ್ಕೆ ಹಾನಿಯೂ ಸಹ ಉಂಟಾಗುತ್ತವೆ ಎಂಬ ತಾತ್ಪರ್ಯವು ಇಲ್ಲಿ ವಧ್ಯಶ್ಚ ದಂಡ್ಯಶ್ಚ ಎಂಬುವದಕ್ಕೆ ಸ್ವರೂಪ ಸ್ವಭಾವಹಾನಿ ಎಂಬರ್ಥ ಹೇಳಲ್ಪಟ್ಟಿತಲ್ಲಾ, ಅದು ಹೇಗೆ ಎಂದರೆ ಉಪಪಾದಿಸುತ್ತಾರೆ. ತನಗೆ ಸ್ವರೂಪವೇ ಭಾಗವತ ಶೇಷತ್ವವು, ಇದನ್ನು ಕಳೆದುಕೊಂಡರೆ ಸ್ವರೂಪಹಾನಿಯು, ಸ್ವರೂಪಹಾನಿಯೇ ವಧೆಗೆ ಸಮಾನವು ಹಾಗೆಯೇ ಶಮದಮಾದಿಗುಣಗಳೇ ತನಗೆ ಸ್ವಭಾವವು, ಬಾಹ್ಯೇಂದ್ರಿಯ ಅಂತರಿಂದ್ರಿಯಗಳಿಗ ಮನಾಗಿ ಭಾಗವತರುಗಳೊಂದಿಗೆ ಪರುಷೋಕ್ತಿಯಿಂದ ತನ್ನ ಸ್ವಭಾವವನ್ನು ಹಾಳುಮಾಡಿಕೊಳ್ಳುವದು, ಬಾಹ್ಯೇಂದ್ರಿಯ ಅಂತರಿಂದ್ರಿಯಗಳನ್ನು ನಾಶಮಾಡಿಕೊಂಡ ಹಾಗೆ ಆಗುವದರಿಂದ ದಂಡಕ್ಕೆ ಸಮಾನವು; ಎಂದು ಮುಂದೆ ತಿಳಿಸುತ್ತಾರೆ :—

ಇವತ್ತೈ - ಈ ಭಾಗವತ ಶೇಷತ್ವರೂಪವಾದ ಸ್ವರೂಪವನ್ನೂ, ಶಮದಮಾದಿ ರೂಪ ಸ್ವಭಾವವನ್ನೂ, ಇಳಿಕ್ಕೈತಾನೇ - ಹಾಳುಮಾಡಿಕ್ಕೊಳ್ಳುವದು ತಾನೇ, ವಧಮುಮ್ ದಂಡಮುಮ್ - ಆತ್ಮನಾಶರೂಪ ವಧವೂ ಇಂದ್ರಿಯ ನಾಶಮಾಡಿಕೊಂಡ ಶಿಕ್ಷೆಯೂ ವಧ್ಯಶಬ್ದಕ್ಕೂ ದಂಡ್ಯಶಬ್ದಕ್ಕೂ ಸರಿಯಾದರ್ಥವೇನೆಂಬುವದನ್ನುಪದೇಶಿಸಿ, ಆ ಶ್ಲೋಕದ **ನಚಾಸ್ಮದೀಯಃ** ಎಂಬುವದರರ್ಥವೇನೆಂಬುವದನ್ನು **ತೊಂಡರಡಿಪ್ಪೊಡಿಯಾಳ್ವಾರವರ ತಿರುಮಾಲೈ** ಎಂಬ ಗ್ರಂಥದ ಪಾಶುರದಿಂದ ಸಮರ್ಥನೆಮಾಡಿ ತಿಳಿಸುತ್ತಾರೆ. ಇವರು ಭಾಗವತ ಶೇಷತ್ವ ಮಾಹಾತ್ಮ್ಯೆಯನ್ನರಿತು ಅದರಲ್ಲೇ ಅಭಿರುಚಿಯುಳ್ಳವರಾದ ಪ್ರಯುಕ್ತವೇ, **ತೊಂಡರ್** ಎಂದರೆ ಭಾಗವತರ, **ಅಡಿ** - ಕಾಲಿನ, **ಪೊಡಿ** - ಧೂಳು ತಾವು ಎಂದು ಭಾವಿಸಿ ಆ ನಾಮಧೇಯವನ್ನೇ ಧರಿಸಿಕೊಂಡಿರುತ್ತಾರೆ. **ಭಗವದಭಿಮಾನ ಬಾಹ್ಯತ್ತೆಯ್ದಿ**-ಭಗವದನುಗ್ರಹಕ್ಕೆ ದೂರವಾಗಿರುವದರ, **ಕೊಡುಮೈಯ್ಯೆ** - ಕ್ರೌರ್ಯವನ್ನು, "**ಅಳಿಯ** - ಮನೋಹರನಾದ, ಕೃಪೆಮಾಡಲು ಯೋಗ್ಯನಾದ ಎಂದು ಶ್ರೀಮಾನ್ ಚಿಟ್ಟಿಲೂರು ನರಸಿಂಹಾಚಾರ್ಯರು ವ್ಯಾಖ್ಯಾನ

---

(೧) ತಿರುಮಾಲೆ. ೩೭

ಯುನನ್ಪೈಯುಲೆನ್ನಾರಮ್ಮವೋ ಕೊಡಿಯವಾರೇ” ಎನ್ರು, ಭಾಗವತ ಶೇಷತ್ವಮೇ ತಮಕ್ಕು ನಿರೂಪಕಮಾಗರುಚಿತ್ತ ಶ್ರೀ ತೊಂಡರಡಿಪ್ಪೊಡಿ

ಮಾಡಿರುತ್ತಾರೆ, ನನ್ಪೈಯುಲ್ - ದಾಸ್ಯಭಾವವನ್ನು ಆದರಿಸಿ ನಮ್ಮ ಬಾಲನೆಂಬು, ಎನ್ನಾರ್ - ಎಂದು ಅಭಿಮಾನಿಸಿ ಹೇಳುವದಿಲ್ಲವೇ, ಯಾರು ಎಂದರೆ ನಮ್ಮ ಸ್ವಾಮಿಯಾದ ಶ್ರೀರಂಗನಾಥನೆಂಬ ಭಾವವು. **ಅಮ್ಮವೋ** - ಅಯ್ಯೋ, **ಕೊಡಿಯವಾರೇ** ನನ್ನ ದುಷ್ಕೃತದ ಕ್ರೌರ್ಯವೇ” ಎನ್ರು - ಎಂದು ನಿಂದಿಸಿ; ಈ ಪೂರ್ವಪಾಶುರವು ಯಾವುದೆಂದರೆ :—

“ತೆಳಿವಿಲಾಕ್ಕಲಙ್ಗಲ್ ನೀರ್ ಶೂಳ್ ತಿರುವರಙ್ಗತ್ತುಳ್ ಓಙ್ಗುಮ್ ।
ಒಳಿಯುಳಾರ್ ತಾಮೇಯನ್ರೇ ತನ್ದೈಯುಂತಾಯುಮಾವಾರ್
ಎಳಿಯತೋರರುಳುಮನ್ರೇಯೆನ್ ತಿರುತ್ತೈಮ್ಬಿರಾನಾರ್ ।
ಅಳಿಯ ನನ್ಪೈಯುಲೆನ್ನಾರಮ್ಮವೋ ಕೊಡಿಯವಾರೇ”

ಇದರರ್ಥವು :—**ತೆಳಿವಿಲಾ** - ತಿಳಿಯಾಗುವುದಕ್ಕೆ ಅವಕಾಶವಿಲ್ಲದೆ ಮೇಲೆ ಮೇಲೆ ಪ್ರವಾಹ ಬರುವದರಿಂದ, **ಕಲಙ್ಗಲ್** - ನೀರು ಕಲಕಿ ಕೆಂಪಗಿರುವದು ತಪ್ಪದೇ ಇರುವ, **ನೀರ್ ಶೂಳ್** - ಕಾವೇರೀ ನದಿಯ ನೀರಿನಿಂದ ಸುತ್ತಲ್ಪಟ್ಟ, **ತಿರುವರಙ್ಗತ್ತುಳ್** - ಶ್ರೀರಂಗ ವಿಮಾನದಲ್ಲಿ, **ಓಙ್ಗುಮ್ ಒಳಿಯುಳಾರ್ ತಾಮೇ ಅನ್ರೇ** - ಅತಿಶಯವಾದ ತೇಜಸ್ಸುಳ್ಳ ಶ್ರೀರಂಗನಾಥನೆ ಅಲ್ಲವೇ, **ತಂದೆಯುಮ್** - ಹಿತವನ್ನು ಕಲ್ಪಿಸಿಕೊಡುವ ತಂದೆಯೂ, **ತಾಯುಮ್** - ಪ್ರಿಯವಾಗಿ ಭೋಗ್ಯವಾದುದನ್ನುಂಟುಮಾಡುವ ತಾಯಿಯೂ, **ಆವಾರ್** - ಆಗಿರುವವರು. **ಎನ್ ತಿರುತ್ತು** - ನನ್ನ ವಿಷಯದಲ್ಲಿ ಮಾಡತಕ್ಕದ್ದು, **ಎಳಿಯದು** - ಶ್ರಮಸಾಧ್ಯವಲ್ಲದ (ದೇವತೆಗಳಿಗಾಗಿ ಸಮುದ್ರಮಥನ ಮಾಡಬೇಕಾದ ಶ್ರಮಬೇಕಿಲ್ಲವು, ಮಂದರಗಿರಿಯನ್ನು ಹೊರುವ ಕೆಲಸವಿಲ್ಲವು, ವಿಭೀಷಣನಿಗಾಗಿ ರಾಕ್ಷಸರನ್ನು ವಧಿಸುವ ಶ್ರಮಬೇಕಿಲ್ಲವು, ಇತ್ಯಾದಿ) **ಓರ್ ಅರುಳ್ ಅನ್ರೇ** - ಒಂದು ಸಲ ದಿವ್ಯಕಟಾಕ್ಷದಿಂದ ನೋಡುವದಲ್ಲವೇ ಎಂದು **ತೊಂಡರಡಿ ಪೊಡಿಯಾಳ್ವಾರ್**-ಭಕ್ತಾಂಘ್ರಿರೇಣು ವಾಳ್ವಾರವರು, **ಅರುಳಿಚ್ಚೆಯ್‌ದಾರ್**-ಅಪ್ಪಣೆಕೊಡಿಸುತ್ತಾರೆ. ಆಳ್ವಾರವರು ಎಂತಹವರೆಂದರೆ ಅವರನ್ನು ಶ್ಲಾಘಿಸಿ ಹೇಳುತ್ತಾರೆ:—
ಭಾಗವತ ಶೇಷತ್ವಮೇ ತಮಕ್ಕು ನಿರೂಪಕಮಾಗ ರುಚಿತ್ತವರ್-ಭಾಗವತ ಶೇಷತ್ವವೇ ತಮಗೆ ಸ್ವರೂಪವೆಂದು ಭಾವಿಸಿ ಅದರಲ್ಲಿ ಅಭಿರುಚಿಯುಳ್ಳವರು. ಈ ಅಭಿಪ್ರಾಯವನ್ನೇ **ತಿರುವರಙ್ಗತ್ತ ಮುದನಾರ್ ಇರಾಮಾನುಜನೂಱ್ರನ್ದಾದಿಯ ಶಾತ್ತುಮುರೈ** ಪಾಶುರದಲ್ಲಿ ಶ್ರೀ ರಾಮಾನುಜರನ್ನು ಕುರಿತು ತಾನು,

ಯಾಳ್ವಾರರುಳಿಚ್ಚೆಯ್‌ದಾರ್. ಇಶ್ಲೋಕಙ್ಗಳಿಲ್ ಬ್ರಾಹ್ಮಣ ಶಬ್ದಮ್, (೨) ವಿಷ್ಣುಂಕ್ರಾನ್ತಂ ವಾಸುದೇವಂ ವಿಜಾನನ್ವಿಪ್ರೋ ವಿಪ್ರ

ಕೊಲ್ಲುವದೊನ್ರುಂಡು - ಪ್ರಾರ್ಥಿಸುವದೊಂದುಂಟು, ಅದೇನೆಂದರೆ:—ಉನ್ ತೊಂಡರ್‌ಗಳಟ್ಕೇ ಅನ್ಬುಪ್ಪಿರುಕ್ಕವ್‌ಪಡಿ - ನಿನಗೆ ದಾಸಭೂತರಾದ ಭಾಗವತರುಗಳ ವಿಷಯದಲ್ಲಿ ಪ್ರೀತಿಯುಳ್ಳವನಾಗಿ, ಎನ್ನೈ ಆಕ್ಕಿ - ನನ್ನನ್ನು ಮಾಡಿ, ನನ್ನನ್ನು ಅಜ್ಞಾಟ್ಪಡುತ್ತೇ - ಅವರ ವಿಷಯದಲ್ಲಿ ದಾಸನನ್ನಾಗಿ ಕೃಪಯಾ ಮಾಡತಕ್ಕದ್ದೆಂದು ಪ್ರಾರ್ಥಿಸಿರುತ್ತಾರೆ. ಇಂತಹ ಮಹನೀಯರು, ಶ್ರೀರಂಗನಾಯಕನು ತನ್ನನ್ನು ತನ್ನ ಬಾಲನಾಗಿ ಅಭಿಮಾನಿಸಲಿಲ್ಲವೇ ? ತನ್ನ ದುಷ್ಕೃತವು ಎಷ್ಟು ಪ್ರಬಲವಾದುದು? ಎಂದು ನಿಂದಿಸಿಕೊಂಡಿರುತ್ತಾರೆ. ಆದುದರಿಂದ ಭಗವದಭಿಮಾನಕ್ಕೆ ಬಾಹಿರನಾಗಿ ಮಾಡಿಕೊಳ್ಳುವದು ತುಂಬಾ ಪ್ರಬಲವಾದ ದುಷ್ಕೃತವಾದುದರಿಂದ ಹಾಗೆ ಭಾಗವತಾಪಚಾರದಿಂದ ಭಗವನ್ನಿಗ್ರಹಕ್ಕೆ ಗುರಿಯಾಗಕೂಡದೆಂದುಪದೇಶಿಸಿರುತ್ತಾರೆ. ಹೀಗೆ ಆ ಶ್ಲೋಕದಲ್ಲಿ **ನಚಾಸದೀಯಃ** ಎಂಬ ಪದಕ್ಕೆ ಸವಿಸ್ತರವಾಗಿ ಅರ್ಥವನ್ನು ಬರೆದವರಾಗಿ, ಮುಂದೆ ಬ್ರಾಹ್ಮಣ ಶಬ್ದಕ್ಕೆ, ಆ ಶ್ಲೋಕದಲ್ಲೂ, ಅದರ ಹಿಂದಿನ ಶ್ಲೋಕವಾದ "ಯೇ ಬ್ರಾಹ್ಮಣಾಃ" ಎಂಬಲ್ಲೂ, ಅರ್ಥವೇನೆಂಬುವದನ್ನು ತಿಳಿಸುತ್ತಾರೆ:--**ಇಶ್ಶ್ಲೋಕಙ್ಗಳಿಲ್** - ಈ ಎರಡು **ಶ್ಲೋಕಗಳಲ್ಲೂ ಬ್ರಾಹ್ಮಣ** ಶಬ್ದವು, "**ವಿಷ್ಣುಂ** - ಸರ್ವವನ್ನು ವ್ಯಾಪಿಸಿದ, **ಕ್ರಾಂತಂ** – ಸರ್ವಲೋಕಗಳನ್ನು ಅಳೆದು ಆಕ್ರಮಿಸಿದ, **ವಾಸುದೇವಂ** – ತಾನು ಎಲ್ಲಾದರಲ್ಲೂ, ಎಲ್ಲವೂ ತನ್ನಲ್ಲೂ ಇರುವ ಸರ್ವೇಶ್ವರನನ್ನು, **ವಿಜಾನನ್** - ಚನ್ನಾಗಿ ತಿಳಿದು ಬ್ರಹ್ಮವಿತ್ತೆಂದು ಯಾವಾಗ ಎನಿಸಿದನೋ ಆಗ, **ತತ್ವದರ್ಶೀ** – ಈ ಲೋಕದ ಮತ್ತು ಜೀವ ಪರಮಾತ್ಮ ಯಾಥಾರ್ಥ್ಯವನ್ನು ತಿಳಿದ. **ವಿಪ್ರಃ** - ಬ್ರಾಹ್ಮಣನೀಗ, ಹೀಗೆ **ವಿಪ್ರತ್ವಂ ಗಚ್ಛತೇ**-ವಿಪ್ರಭಾವವನ್ನು ಹೊಂದುವನು ಎಂದರೆ ಬ್ರಾಹ್ಮಣನೆಂದೆನಿಸುವದಕ್ಕೆ ಯೋಗ್ಯನಾಗುವನು" ಇದರ **ಪೂರ್ವಾರ್ಧವು** :—"**ಯೂಪಂವಿಷ್ಣುಂ ವಾಸುದೇವಂ ವಿಜಾನನ್ ಸರ್ವಾನ್ವಿಪ್ರಾನ್ ಬೋಧತೇತತ್ವದರ್ಶೀ**"ಯಜ್ಞದ ಯೂಪಸ್ತಂಭವನ್ನೂ, **ಯಜ್ಞೋವೈ ವಿಷ್ಣುಃ**ಎಂಬ ಪ್ರಕಾರ ಸರ್ವಯಜ್ಞಭೋಕ್ತಾವಾದ ವಿಷ್ಣುವನ್ನೂ ತಿಳಿದರೆ ತತ್ವದರ್ಶಿಯಾದವನು ಆ ಯಜ್ಞಾಧಿಕಾರಿಗಳಾದ ಸಮಸ್ತ ಬ್ರಾಹ್ಮಣರನ್ನೂ ತಿಳಿದವನಾಗಿ, ಅವರ ಮಹಿಮೆಯನ್ನು ಬೋಧಿಸುವನೆಂಬ ಭಾವವು ; ಎಂದರೆ ಯಜ್ಞವೂ, ಯಜ್ಞಭೋಕ್ತೃವೂ ಯಜ್ಞಾಧಿಕಾರಿಗಳೂ ಎಲ್ಲಾ ಒಂದೇ ರಾಶಿಗೆ ಸೇರಿದವರೆಂಬ

---

(೨) ಭಾರತ. ಅನು. ೧೬.೨

ತ್ತ್ವಂಗಚ್ಛತೇ ತತ್ವದರ್ಶಿನೀ” ಎಂಗಿರ ಪ್ರಕ್ರಿಯೈಯಾಲೇ ವಿಶೇಷ ವಿಷಯಮ್ ; ಸಾಮಾನ್ಯ ವಿಷಯಮಾನಾಲುಮ್ ಭಾಗವತ ವಿಷಯತ್ತಿಲ್ ಅಪರಾಧ (ಕ್ಷ್ಮಿ ಷಣ)ಮ್ ಕೈಮುತಿಕ ನ್ಯಾಯತ್ತಾಲೇ ಸಿದ್ಧಮ್.

ಭಾವವು.” ಎಙ್ಗಿರ - ಎಂದು ಹೇಳಿರುವ, ಪ್ರಕ್ರಿಯೈಯಾಲೇ-ಪ್ರಕರಣಾನುಸಾರವಾಗಿ, ವಿಶೇಷವಿಷಯಮ್ - ಹೀಗೆ ಬ್ರಹ್ಮವಿತ್ತಾದ ಬ್ರಾಹ್ಮಣನೆಂದು ವಿಶೇಷಿಸಿ ಹೇಳುವ ಸಂದರ್ಭವು. ಹಾಗೆಯೇ ಇಲ್ಲಿ ಅರ್ಥವೆಂಬುವದು ಶ್ರೀನಿಗಮಾಂತ ದೇಶಿಕರಭಿಪ್ರಾಯವು. ಹಾಗಲ್ಲದ ಬ್ರಾಹ್ಮಣನು ಬ್ರಾಹ್ಮಣ ಶಬ್ದಕ್ಕೆ ಅಯೋಗ್ಯನೆಂಬ ಭಾವವು. ಬ್ರಹ್ಮಾನತೀತಿ ಎಂಬ ವ್ಯುತ್ಪತ್ತಿಯಿಂದ, ಬ್ರಾಹ್ಮಣನೆಂದು ಯೋಗರೂಪದಲ್ಲಿ ಅರ್ಥ ಹೇಳತಕ್ಕದ್ದು ಎಂಬ ತಾತ್ಪರ್ಯವು. ಅದುದರಿಂದ ಬ್ರಹ್ಮವೆಂದರೆ, ವೇದಗಳೂ, ವೇದವನ್ನು ತಿಳಿದ ಬ್ರಾಹ್ಮಣನೂ ವೇದಪ್ರತಿಪಾದ್ಯನಾದ ಪರಬ್ರಹ್ಮವೂ, ಇವುಗಳನ್ನು ಅರಿಯುವವನು ಬ್ರಾಹ್ಮಣನು, ಇದಕ್ಕೆ “ವೇದಾ ವಿಪ್ರಾ ಕೇಶವಶ್ಚೈಕರಾಶಿಃ” ಎಂಬುವ ಪ್ರಮಾಣವನುಸಂಧೇಯವು ಹೀಗೆ ಅರ್ಥ ಹೇಳಿದರೇನೇ, ಕ್ಷತ್ರಿಯಾದಿ ಇತರ ವರ್ಣದ ಭಾಗವತರು ಇವರಲ್ಲಿ ಸೇರಿದವರಾಗಿ ಅಂಥಾವರ ಅಪಚಾರವೂ ಕೂಡನು, ಅದೂ ಕೂಡ ಪ್ರತ್ಯವಾಯಕರವಾದುದೆಂದು ಹೇಳಿದಂತಾಗುತ್ತದೆ. ಹಾಗಲ್ಲದೆ ಸಾಮಾನ್ಯವಾಗಿ ರೂಢಿಯಿಂದ ಹೇಳುವ ಬ್ರಾಹ್ಮಣ ಶಬ್ದದಿಂದ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನೆಂದು ಇಷ್ಟುಮಾತ್ರ ಹೇಳಿದರೆ ಅಂತಹ ಭಾಗವತರ ವಿಷಯವು ಬಿಟ್ಟುಹೋಗುತ್ತದೆ ಆದುದರಿಂದ ಈ ಶ್ಲೋಕಗಳಲ್ಲಿ ಬ್ರಾಹ್ಮಣ ಶಬ್ದದಿಂದ ಬ್ರಹ್ಮವಿತ್ತೇ ಹೇಳಲ್ಪಟ್ಟನೆಂದು ಭಾವಿಸತಕ್ಕದ್ದು. ಆಗಲಿ, ಬ್ರಾಹ್ಮಣಶಬ್ದಕ್ಕೆ ರೂಢಿಯಲ್ಲಿ ಹೇಳುವ ಅರ್ಥವೇ ಸರಿ ಎಂದು ಹೇಳಿದುದಾದರೂ ಚಿಂತೆಯಿಲ್ಲವು ; ಆಗಲೂ ಕೂಡ ಒಂದು ವಿಧವಾಗಿ, ಸ್ವಾರಸ್ಯವನ್ನೇ ಕಲ್ಪಿಸಬಹುದೆಂದು ಅಭಿಪ್ರಾಯಪಡುತ್ತಾರೆ. ಆಗ ಈ ಪ್ರಮಾಣವು ಬ್ರಾಹ್ಮಣನನ್ನು ಮಾತ್ರ ಹೇಳುವ ಸಂದರ್ಭವೆಂದು ಭಾವಿಸಿ, ಸಾಮಾನ್ಯ ಬ್ರಾಹ್ಮಣನಿಗೆ ಅಪರಾಧವಾಗುತ್ತದೆಂದು ಹೇಳಿದರೆ, ಭಾಗವತ ಬ್ರಾಹ್ಮಣನ ವಿಷಯದಲ್ಲಿ ಅಪರಾಧವೆಂದು ಹೇಳುವದು ಕೈಮುತಿಕ ನ್ಯಾಯದ ಪ್ರಕಾರ ಸಿದ್ಧವೆಂದು ಹೇಳುತ್ತಾರೆ :—**ಸಾಮಾನ್ಯವಿಷಯಮಾನಾಲುಮ್** – ಈ ಬ್ರಾಹ್ಮಣ ಶಬ್ದವು ಸಾಮಾನ್ಯವಾಗಿ ಬ್ರಾಹ್ಮಣಯೋನಿಯಲ್ಲಿ ಹುಟ್ಟಿದವರಿಗೆಲ್ಲಾ ಅನ್ವಯಿಸುತ್ತದೆಂದರೆ, **ಭಾಗವತ ವಿಷಯತ್ತಿಲ್** - ಭಾಗವತ ಬ್ರಾಹ್ಮಣ ವಿಷಯದಲ್ಲಿ, **ಅಪರಾಧಮ್** - ಅಪರಾಧವಾಗುತ್ತದೆಂಬುವದೂ, ಅದರಿಂದ ಪ್ರತ್ಯವಾಯವೆಂಬ ಭಾವವೂ, **ಕೈಮುತಿಕನ್ಯಾಯತ್ತಾಲೆ ಸಿದ್ಧಮ್** - ಕಿಮುತ ಇನ್ನು

ಹೇಳತಕ್ಕದ್ದೇನಿದೆ ಎಂಬ ನ್ಯಾಯದಿಂದ ಸಿದ್ಧವು. ಸಾಧಾರಣ ಬ್ರಾಹ್ಮಣ ನಿಗೇನೆ ಅಪರಾಧವಾದರೆ, ಭಾಗವತ ಬ್ರಾಹ್ಮಣನಿಗೆ ಅಪರಾಧವೆಂಬುವದು ಸ್ವತಸ್ಸಿದ್ಧವೆಂಬ ಭಾವವು. **ಅಪರಾಧ ಕ್ಷಾಮಣಮ್'** ಎಂಬ ಪಾಠಾಂತರ ವಾದರೆ, ಸಾಧಾರಣ ಬ್ರಾಹ್ಮಣನಿಗೆ ಮಾಡಿದ ಅಪರಾಧಕ್ಕೆ ಕ್ಷಮಾಪಣವು ಆವಶ್ಯಕ ವಾದರೆ ಭಾಗವತ ಬ್ರಾಹ್ಮಣನ ವಿಷಯದಲ್ಲಿ ಕ್ಷಮಾಪಣದ ಆವಶ್ಯಕ ಉಂಟೆಂದು ಹೇಳತಕ್ಕದ್ದೇನಿದೆ ಎಂಬ ಭಾವವು.

ಈಗ ಹೇಳಲ್ಪಟ್ಟಿದುದು, ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾಗದ ಹಾಗೆ ಮಾಡುವವಕ್ಕಾಗಿ ಪ್ರಾರಬ್ಧಕರ್ಮದ ಪಾಪಾರಂಭಕಾಂಶದ ನಾಶಕ್ಕಾಗಿಯೂ ಪ್ರಥಮ ಶರಣಾಗತಿಯಲ್ಲೇ ಸೇರಿಸಿ ಮಾಡತಕ್ಕದ್ದು. ಹಾಗೆ ಮಾಡದಿದ್ದರೆ ಬುದ್ಧಿಪೂರ್ವೋತ್ತ ರಾಘವು ಪ್ರಾಪ್ತವಾಗಬಹುದು. ಅದರಲ್ಲಿ ತುಂಬಾ ಪ್ರಬಲವಾದುದು ಭಾಗವತಾಪ ಚಾರವು. ಈ ಬುದ್ಧಿಪೂರ್ವೋತ್ತರಾಘಗಳ ವಿನಾಶಕ್ಕಾಗಿ ಪ್ರಾಯಶ್ಚಿತ್ತರೂಪ ಪುನಶ್ಶರಣಾಗತಿಯನ್ನು ಮಾಡತಕ್ಕದ್ದು. ಆದರೆ ಶ್ರೀ ಕೂರೇಶರವರ ವೈಕುಂಠ ಸ್ತವದ (೬೨) ಶ್ರೀ ವರದರಾಜಸ್ತವ (೮೫) ಶ್ಲೋಕಗಳಲ್ಲಿ ಅಪರಾಧಮಾಡಿ ಬಿಟ್ಟೆನೇ ಎಂಬ ಅನುತಾಪವೂ, ಇನ್ನು ಮುಂದೆ ಅಂತಹ ಅಪರಾಧವನ್ನು ಎಂದಿಗೂ ಮಾಡುವುದಿಲ್ಲವೆಂಬ ಅಪರಾಧ ನಿವೃತ್ತಿಯೂ, ಇವುಗಳೂ ಕೂಡ ಪಾಪನಾಶಕಗಳೆಂದು ಹೇಳಿದೆಯಲ್ಲಾ, ಪುನಃ ಪ್ರಾಯಶ್ಚಿತ್ತರೂಪ ಶರಣಾ ಗತಿಯ ಆವಶ್ಯಕತೆಯೇನು ಎಂದರೆ ಅದಕ್ಕೆ ಸಮಾಧಾನವಾಗಿ ಮೂರು ಕಾರಿಕಾ ಶ್ಲೋಕಗಳನ್ನನುಗ್ರಹಿಸುತ್ತಾರೆ. ಶ್ರೀ ಕೂರೇಶರ ಆ ಎರಡು ಶ್ಲೋಕಗಳು ಯಾವು ವೆಂದರೆ :—(೧) **ನಿರವಧಿಷು ಕೃತೇಷು ಚಾಗಸ್ಸಹೋ ಮತಿರನುಶಯಿನೀ ಯದಿಸ್ಯಾತ್ತತಃ। ವರದ ಹಿ ದಯಸೇ ನಸಂಶೇಮಹೇ ನಿರನುಶಯಧಿಯೋ ಹತಾ ವೈವಯಂ** "ಅಪರಾಧಗಳು ಅನಂತವಾಗಿ ಮಾಡಲ್ಪಟ್ಟರೂ, ಅಯ್ಯೋ ಮಾಡಿಬಿಟ್ಟೆನೇ ಎಂಬ ಪಶ್ಚಾತ್ತಾಪಬುದ್ಧಿಯುಂಟಾದರೆ, ಓ ವರದನೇ ನೀನು ದಯಮಾಡಿ ಆ ಅಪರಾಧಗಳನ್ನು ಹೋಗಲಾಡಿಸುವಿ. ಈ ವಿಷಯದಲ್ಲಿ ಈಷದಪಿ ನಾವು ಸಂದೇಹಪಡುವುದಿಲ್ಲವು ಪಶ್ಚಾತ್ತಾಪವಿಲ್ಲದೆ ನಾವು ಕೆಟ್ಟೆವು." ಎಂಬು ವದು ಅಭಿಪ್ರಾಯವು. (೨) **"ಯದ್ಬ್ರಹ್ಮ ಕಲ್ಪ ನಿಯುತಾನುಭವೇ ಪ್ಯನಾಶ್ಯಂ ತತ್ಕಿಲ್ಬಿಷಂ ಸೃಜತಿ ಜಂತು ರಿಹಕ್ಷಣಾರ್ಧೇ। ಏವಂ ಸದಾ ಸಕಲ ಜನ್ಮಸುಸಾಪರಾಧಂ ಕ್ಷಾಮ್ಯಸ್ಯಹೋ ತದಭಿ ಸಂಧಿವಿರಾಮ ಮಾತ್ರಾತ್॥** ಅನೇಕ ಕಲ್ಪಗಳನುಭವಿಸಿದರೂ ನಾಶವಾಗದಷ್ಟು ಪಾಪವನ್ನು ಈ ಜ್ಞಾನಶೂನ್ಯನಾಗಿ ಪಶುಸಮಾನನಾಗಿ ಜನ್ಮಮರಣಾದ್ಯವಸ್ಥೆಗಳನ್ನು ಹೊಂದಿದ ಈತನು ಅಲ್ಪಕಾಲದಲ್ಲೇ ಮಾಡುವನು. ಹೀಗೆ ಯಾವಾಗಲೂ ಸಮಸ್ತ

ಅನುತಾಪಾದುಪರಮಾತ್ಪ್ರಾಯಶ್ಚಿತ್ತೋನ್ಮುಖತ್ವತಃ
ತತ್ಪೂರಣಾಚ್ಚಾಪರಾಧಾಸ್ಸರ್ವೇ ನಶ್ಯನ್ತಿ ಪಾದಶಃ ॥೧೭॥

ಜನ್ಮಗಳಲ್ಲೂ ಅಪರಾಧಗಳನ್ನೆಸಗಿದವನನ್ನು, ಅಯ್ಯೋ ಪಾಪಮಾಡುತ್ತಿದ್ದೇನೆಯೇ, ಇನ್ನು ಮುಂದೆ ಮಾಡುವುದಿಲ್ಲವೆಂಬ ಮಾತ್ರದಿಂದಲೇ ಕ್ಷಮಿಸಿಬಿಡುತ್ತೀಯೇ. ನಿನ್ನ ಕೃಪಾಮಹಿಮೆಯು ಅತ್ಯದ್ಭುತವು, ಎಂದು ಹೀಗೆ ಅನುತಾಪದಿಂದಲೂ, ತದಭಿಸಂಧಿ ವಿರಾಮದಿಂದಲೂ, ಬುದ್ಧಿಪೂರ್ವೋತ್ತರಾಘವು ನಶಿಸಿಹೋಗುತ್ತದೆಂದು ಹೇಳಿರುತ್ತದೆಯಲ್ಲಾ, ಎಂದರೆ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ ; ಅನುತಾಪವು ಉಂಟಾಗುವದೇ ಪಾಪನಿವರ್ತಿಗೆ ಪ್ರಥಮ ಪಾದವಾಗಿ ಪರಿಣಮಿಸಿ, ಮುಂದಕ್ಕೆ ಅಪರಾಧನಿವೃತ್ತಿಯುಳ್ಳವನಾಗುವನೆಂಬುವದು ಪಾಪಪರಿಹಾರಕ್ಕೆ ದ್ವಿತೀಯ ಪಾದವಾಗಿ ಪರಿಣಮಿಸಿ, ಅನಂತರ ಅದಕ್ಕೆ ಪ್ರಾಯಶ್ಚಿತ್ತೋನ್ಮುಖನಾಗುವದು ಮೂರನೇ ಪಾದವೆಂದೂ, ಪ್ರಾಯಶ್ಚಿತ್ತ ಸಮಾಪ್ತಿಯೇ ಅಪರಾಧಪರೀಹಾರಕ್ಕೆ ನಾಲ್ಕನೇ ಪಾದವೆಂದೂ ಹೀಗೆ ಪಾದಶಃ ಈ ನಾಲ್ಕು ಕಾರಣಗಳಿಂದ ಅಪರಾಧದ ನಾಲ್ಕರಲ್ಲಿ ಒಂದೊಂದು ಭಾಗವು ಪರಿಹಾರವಾಗುತ್ತದೆಂದು ಮುಂದಿನ ಶ್ಲೋಕಗಳಿಂದ ತಿಳಿಸುತ್ತಾರೆ :— ಅನುತಾಪಾತ್ - ಅನುತಾಪದಿಂದ ಅಪರಾಧಗಳ ಕಾಲುಭಾಗವೂ. ಅನುತಾಪ ಹೇಗೆಂದರೆ, ತಿಳುವಳಿಕೆ ಇದ್ದರೂ ಲೋಭಾದಿಗಳಿಂದ ನಾನು ಎಂತಹ ಅಪರಾಧಗಳನ್ನು ಹೇಗೆ ಮಾಡಿದೆನು, ಮೌಢ್ಯದಿಂದ ಅಯ್ಯೋ ನಡೆಯಿತೇ, ಮಹತ್ತಾದ ಭಗವನ್ನಿಗ್ರಹಕ್ಕೆ ಪಾತ್ರನಾದೆನೇ, ಶಿಷ್ಟರ ನಿಂದೆಗೆ ಗುರಿಯಾದೆನೇ ಇವೇ ಮೊದಲಾದ ಪಶ್ಚಾತ್ತಾಪದಿಂದ ಕಾಲುಭಾಗವೂ, ಉಪರಮಾತ್ - ಈ ವಿಧವಾದ ದುಷ್ಕೃತ್ಯಗಳಲ್ಲಿ ನಾನು ಎಂದಿಗೂ ಇನ್ನು ಮೇಲೆ ಪ್ರವರ್ತಿಸತಕ್ಕದ್ದಲ್ಲವು ಎಂದು ಪಾಪ ಮಾಡುವ ಬುದ್ಧಿಯಿಲ್ಲದಿರುವದರಿಂದ ಕಾಲುಭಾಗವೂ, ಪ್ರಾಯಶ್ಚಿತ್ತೋನ್ಮುಖತ್ವತಃ - ಪ್ರಾಯಶ್ಚಿತ್ತವನ್ನು ಈಗಲೇ ಮಾಡಿಕೊಳ್ಳುವದು ಯುಕ್ತವು ಎಂದು ಅದನ್ನು ಮಾಡಿಕೊಳ್ಳಲಭಿಮುಖನಾಗುವದರಿಂದ ಕಾಲುಭಾಗವೂ, ತತ್ಪೂರಣಾತ್ - ಆ ಪ್ರಾಯಶ್ಚಿತ್ತವನ್ನು ನಿರ್ವಹಿಸಿ ಪೂರೈಸುವದರಿಂದ, ಕಾಲುಭಾಗವೂ, ಹೀಗೆ ಸರ್ವೇ ಅಪರಾಧಾಃ - ಸಮಸ್ತ ಅಪರಾಧಗಳೂ, ಎಂದರೆ, ಅಬುದ್ಧಿಪೂರ್ವಕವಾದವುಗಳು ಬುದ್ಧಿಪೂರ್ವಕವಾದವುಗಳು, ಗುರುವಾದವು, ಲಘುವಾದವು ಎಲ್ಲವೂ, ಹೀಗೆ ಈ ನಾಲ್ಕರಿಂದಲೂ, ಒಂದೊಂದರಿಂದ ಅಪರಾಧಗಳ ಕಾಲು ಕಾಲು ಭಾಗವು, ನಶ್ಯನ್ತಿ - ನಶಿಸಿಹೋಗುತ್ತವೆ. ಪ್ರಾಯಶ್ಚಿತ್ತ ಪೂರಣದಿಂದಲೇ ನಿಶ್ಶೇಷವಾಗಿ ಅಪರಾಧಗಳ ನಾಶವೆಂಬ ಭಾವವು. ಆದುದರಿಂದ ಅನುತಾಪದಿಂದಲೂ, ಉಪರಮ

ಪೂರ್ವಸ್ಮಿನ್ವಾ ಪರಸ್ಮಿನ್ವಾ ಕಲ್ಪೇ ನಿರ್ವಿಣ್ಣ ಚೇತಸಾಂ।
ನಿವರ್ತ್ಯ ತಾರತಮ್ಯೇಽಪಿ ಪ್ರಪತ್ತಿರ್ನವಿಶಿಷ್ಯತೇ ॥೧೮॥

ದಿಂದಲೂ ಅಪರಾಧ ಪರಿಹಾರ ಉಂಟೆಂದು ಹೇಳಿದ ಅಭಿಯುಕ್ತರ ವಾಕ್ಯವು ಸಮಂಜಸವಾದುದೇ. ಆದರೆ ಅನುತಾಪಾದಿಗಳು, ಪ್ರಾಯಶ್ಚಿತ್ತ ಪೂರ್ತಿಗೆ ಮೂಲ ಕಾರಣಗಳಾದುದರಿಂದ ಅವುಗಳಿಂದಲೂ ಅಪರಾಧಗಳ ಚತುರ್ಥಾಂಶಗಳು ನಾಶ ವೆಂದು ಭಾವಿಸಬಹುದು ಎಂಬ ತಾತ್ಪರ್ಯವು.

ಹಿಂದೆ, ಬುದ್ಧಿಪೂರ್ವೋತ್ತರಾಘಕ್ಕೆಲ್ಲಾ ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪದನವನ್ನನುಷ್ಠಿಸತಕ್ಕದ್ದೆಂದು ಹೇಳಲ್ಪಟ್ಟಿತು. ಹೀಗೆ ಸರ್ವವಿಧಾಪರಾಧ ಗಳಿಗೆ ಇದು ಒಂದೇ ಪ್ರಾಯಶ್ಚಿತ್ತವೆಂದು ಹೇಳಬಹುದೋ, ಗುರುವಾದ ಅಪ ರಾಧಗಳಿಗೂ, ಲಘುವಾದ ಅಪರಾಧಿಗಳಿಗೂ ಗುರುಲಘುಪ್ರಾಯಶ್ಚಿತ್ತಗಳನ್ನು ವಿಧಿಸುವದು ನ್ಯಾಯವು. ಶಾಸ್ತ್ರದಲ್ಲೂ ಹಾಗೆಯೇ ವಿಧಿಸಿರುತ್ತದೆ. ಹೀಗೆ ಈ ಪ್ರಪದನ ಒಂದೇ ಎಲ್ಲಾ ವಿಧ ಬುದ್ಧಿಪೂರ್ವೋತ್ತರಾಘಗಳಿಗೆ ಪ್ರಾಯಶ್ಚಿತ್ತವೆಂದರೆ, ಆ ಶಾಸ್ತ್ರಕ್ಕೆ ವೈಯರ್ಥ್ಯ ಉಂಟಾಗುವದಿಲ್ಲವೇ? ಶಕ್ತನಿಗೆ ಶಾಸ್ತ್ರದಲ್ಲಿ ಹೇಳಿ ರುವ ರೀತ್ಯಾ ಪ್ರಾಯಶ್ಚಿತ್ತಾನುಷ್ಠಾನವೆಂದೂ ಅಶಕ್ತನಿಗೆ ಪ್ರಾಯಶ್ಚಿತ್ತರೂಪ ಪುನಃ ಪ್ರಪದನವೆಂದೂ ಹೇಳಲ್ಪಟ್ಟಿರುವದಕ್ಕೂ ಕೂಡ ಈ ಅಭಿಪ್ರಾಯವು ವಿರೋಧವಾಗುವುದಿಲ್ಲವೇ? ಇತ್ಯಾದಿ ಆಕ್ಷೇಪಗಳ ಸಮಾಧಾನಾರ್ಥವಾಗಿ ಇನ್ನೆ ರಡು ಕಾರಿಕೆಗಳನ್ನನುಗ್ರಹಿಸಿರುತ್ತಾರೆ. ಈ ಎರಡು ಶ್ಲೋಕಗಳಲ್ಲಿ ಮೊದಲನೆಯ ಶ್ಲೋಕದಿಂದ ದೃಷ್ಟಾಂತವನ್ನು ಹೇಳಿ, ಎರಡನೆಯ ಶ್ಲೋಕದಿಂದ ದಾರ್ಷ್ಟಾಂತಿಕ ವನ್ನುಪಪಾದಿಸುತ್ತಾರೆ. ಆದುದರಿಂದ ಎರಡು ಶ್ಲೋಕಗಳಿಂದಲೂ ಒಂದೇ ಅನ್ವಯವು.

ಪೂರ್ವಸ್ಮಿನ್ ಕಲ್ಪೇವಾ - ಮೊದಲಿನ ಬ್ರಹ್ಮಕಲ್ಪದಲ್ಲೇಯಾಗಲಿ, **ಪರಸ್ಮಿನ್ ಕಲ್ಪೇವಾ** - ಅದರ ಈಚಿನ ಬ್ರಹ್ಮಕಲ್ಪದಲ್ಲೇಯಾಗಲಿ, **ನಿರ್ವಿಣ್ಣಚೇತಸಾಂ** - ಸಂಸಾರೇ ಎಂದು ಇಟ್ಟುಕೊಳ್ಳಬೇಕು, ಸಂಸಾರದಲ್ಲಿ ಜಿಹಾಸೆ ಹುಟ್ಟಿರುವ ಚೇತ ನರುಗಳಿಗೆ **ನಿವರ್ತ್ಯತಾರತಮ್ಯೇಽಪಿ** - ನಿವರ್ತಿಸಿ ಹೋಗಲು ಯೋಗ್ಯವಾದ ಪಾಪಗಳ ತರತಮ ಭಾವವಿದ್ದರೂ ಕೂಡ ಎಂದರೆ ಹಿಂದಿನ ಬ್ರಹ್ಮಕಲ್ಪದಲ್ಲಿ ಪ್ರಪ ದನ ಮಾಡಿ ಕಳೆದುಕೊಂಡ ಅಪರಾಧಗಳಿಗಿಂತಲೂ, ಅದರೀಚಿನ ಬ್ರಹ್ಮ ಕಲ್ಪದಲ್ಲಿ ಪ್ರಪದನ ಮಾಡಿ ಕಳೆದುಕೊಂಡ ಅಪರಾಧಗಳು ಬಹು ವಿಶೇಷವಾಗಿ ದ್ದರೂ, **ಪ್ರಪತ್ತಿಃ** - ಪ್ರಪದನವು, **ನವಿಶಿಷ್ಯತೇ** - ಏನೊಂದು ವಿಶೇಷ ಮೂಲಕ ವ್ಯತ್ಯಸ್ತವಾಗಿರುವದಿಲ್ಲವು. ಒಬ್ಬ ಚೇತನನು ಹಿಂದಿನ ಕಲ್ಪದಲ್ಲಿ

ಏವಮೇವ ಗುರೂಣಾಂ ವಾ ಲಘೂನಾಂ ವಾಕಮಪಿವಾಗಸಾಮ್ ।
ಸಕೃತ್ಪ್ರಪತ್ತಿ ರೇವೈಕಾ ಸದ್ಯಃ ಪ್ರಶಮ ಕಾರಣಮ್ ॥೧೯॥

ಪ್ರಪದನಾನುಷ್ಠಾನ ಮಾಡುತ್ತಾನೆ, ಇನ್ನೊಬ್ಬನು ಅವರೀಚಿನ ಕಲ್ಪದಲ್ಲಿ ಪ್ರಪದನಾನುಷ್ಠಾನ ಮಾಡುತ್ತಾನೆಂದು ಭಾವಿಸೋಣ. ಈ ಎರಡನೆಯ ಚೇತನನು ಸಂಪಾದಿಸಿಕೊಂಡಿರುವ ಪಾಪಗಳು ಮೊದಲನೆಯವನಿಗಿಂತ ಸುಮಾರು ಎರಡರಷ್ಟು ಪಾಪಗಳಿದ್ದರೂ ಇರಬಹುದು. ಹೀಗಿದ್ದರೂ ಒಂದೇ ಪ್ರಪದನವು ಏನೊಂದೂ ತಾರತಮ್ಯವಿಲ್ಲದೆ ಇಬ್ಬರ ಪಾಪಗಳನ್ನೂ ಹೋಗಲಾಡಿಸಿ ಹೇಗೆ ಮುಕ್ತಿಯನ್ನೀಯಿತೋ, ಹಾಗೆಯೇ ಗುರುಲಘು ಬುದ್ಧಿಪೂರ್ವೋತ್ತರಾಘಗಳನ್ನೆಲ್ಲಾ ಒಂದೇ ಪ್ರಾಯಶ್ಚಿತ್ತರೂಪ ಪ್ರಪದನವು ಹೋಗಲಾಡಿಸುತ್ತದೆ ಎಂಬೀ ದಾರ್ಷ್ಟಾಂತಿಕವನ್ನು ಏವಮೇವ ಎಂಬ ಕಾರಿಕೆಯಿಂದ ತೋರಿಸುತ್ತಾರೆ. ಏವಮೇವ - ಹೀಗೆಯೇ, ಗುರೂಣಾಂ ಆಗಸಾಂ ವಾ - ಮಹತ್ತಾದ ಬುದ್ಧಿಪೂರ್ವಕವಾದ ಅಪರಾಧಗಳಿಗೂ, ಲಘೂನಾಮಪಿ ಆಗಸಾಂ - ಅಲ್ಪವಾದ ಬುದ್ಧಿಪೂರ್ವಕವಾದ ಅಪರಾಧಗಳಿಗೂ ಕೂಡ, ಸಕೃತ್ಪ್ರಪತ್ತಿರೇವೈಕಾ - ಪ್ರಾಯಶ್ಚಿತ್ತರೂಪದಲ್ಲಿ ಒಂದು ಸಲ ಮಾತ್ರ ಅನುಷ್ಠಿಸುವ ಪ್ರಪತ್ತಿಯೊಂದೇ ಸದ್ಯಃ-ಪ್ರಪತ್ತಿಯನ್ನನುಷ್ಠಿಸಿದ ಉತ್ತರಕ್ಷಣದಲ್ಲೇ, ಒಡನೆ ಎಂಬ ಭಾವವು ಆದಕ್ಕೇನು ಕಾಯಬೇಕೆಂಬುದಿಲ್ಲವೆಂಬ ಭಾವವು, ಪ್ರಶಮಕಾರಣಮ್ - ಸಮಸ್ತ ಪಾಪಗಳಿಗೂ ನಿಶ್ಶೇಷ ವಿನಾಶಹೊಂದಲು ಕಾರಣವು. ಆದುದರಿಂದ ಈ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಒಂದು ಸಲ ಅನುಷ್ಠಿಸುವವರಿಂದಲೇ ಒಡನೇ ಸಮಸ್ತ ಬುದ್ಧಿಪೂರ್ವೋತ್ತರ ಪಾಪಗಳೆಲ್ಲಾ ಗುರುವಾದವುಗಳೇಯಾಗಲೀ ಲಘುವಾದವುಗಳೇಯಾಗಲಿ ನಿಶ್ಶೇಷವಾಗಿ ನಾಶಹೊಂದುವದರಲ್ಲಿ ಸಂದೇಹವಿಲ್ಲವೆಂಬ ಭಾವವು. ಹಾಗಾದರೆ ಗುರುಲಘು ಪಾಪಗಳಿಗೆ ಗುರುಲಘು ಪ್ರಾಯಶ್ಚಿತ್ತಗಳನ್ನು ವಿಧಿಸುವ ಶಾಸ್ತ್ರಗಳಿಗೆ ಪ್ರಯೋಜನವೇನು ಎಂದರೆ, ವಿಶ್ವಾಸವೇ ಮೊದಲಾದವುಗಳು ಇಲ್ಲದಿರುವ ಅಧಿಕಾರಿಗಳ ವಿಷಯದಲ್ಲಿ ಅಂತಹ ಗುರುಲಘು ಪ್ರಾಯಶ್ಚಿತ್ತಗಳನ್ನು ವಿಧಿಸಿರುವ ವಿಷಯವೆಂದು ತಿಳಿಯತಕ್ಕದ್ದು. ಈ ಪ್ರಾಯಶ್ಚಿತ್ತರೂಪ ಪ್ರಪತ್ತಿಯೂ ಕೂಡ ಸಕೃತ್ತೇ ಅನುಷ್ಠಿಸತಕ್ಕದ್ದೆಂದು ಹೇಳಿರುತ್ತಾರೆ. ಬುದ್ಧಿಪೂರ್ವೋತ್ತರಾಘಗಳಿಗಾಗಿ ಅನುತಾಪವೂ ಉಪರಮವೂ ಆವಶ್ಯಕವು. ಹೀಗೆ ಅನುತಾಪ ಹುಟ್ಟಿ, ಮುಂದೆ ಇಂತಹ ಅಪರಾಧಗಳಲ್ಲಿ ಪ್ರವರ್ತಿಸುವದಿಲ್ಲವೆಂದು ನಿಶ್ಚಯಿಸಿಕೊಂಡು ಅದಕ್ಕಾಗಿ ಪ್ರಾಯಶ್ಚಿತ್ತಾನುಷ್ಠಾನ ಮಾಡಿದರೆ ತದನಂತರ ಪುನಃ ಬುದ್ಧಿಪೂರ್ವೋತ್ತರಾಘವು

ಉಳದಾನ ವಲ್‌ವಿನೈಕ್ಕುಳವ್ ವೆರುವಿಯುಲಕಳನ್ನ ।
ವಳರ್ ತಾಮರೈ ಯಿಣೈವನ್ ಶರಣಾಗ ವರಿತ್ತವರ್ ತಾವ್ ।

ಪ್ರಪನ್ನನಿಗೆ ಸಂಘಟಿಸಲಾರದಾದುದರಿಂದ, ಇನ್ನೊಂದು ಸಲ ಪ್ರಾಯಶ್ಚಿತ್ತ ಪ್ರಪತ್ತಿಗೆ ಕಾರಣವಿರುವದಿಲ್ಲವು. ಹಾಗಲ್ಲದೆ ಪುನಃಪುನಃ ಬುದ್ಧಿಪೂರ್ವೋತ್ತರಾಘಗಳನ್ನು ಮಾಡಿ ಪುನಃಪುನಃ ಪ್ರಾಯಶ್ಚಿತ್ತ ಪ್ರಪತ್ತಿಗಳನ್ನು ಮಾಡುವದು ಸರಿಯಲ್ಲವು. ಇದರಿಂದ ಪುನಃಪುನಃ ಬುದ್ಧಿಪೂರ್ವಾಪರಾಧ ಮಾಡುವವನಿಗೆ ಅನುತಾಪೋಪರಮಗಳು ವಾಸ್ತವಾದವಲ್ಲವೆಂದು ಏರ್ಪಡುವದರಿಂದ, ಅಂತಹ ಪ್ರಾಯಶ್ಚಿತ್ತಗಳು ಕಾರ್ಯಕಾರಿಯಾಗಲಾರವು. ಆದುದರಿಂದ ಶ್ರೀ ಕೂರೇಶರವರು "**ನಿರವಧಿಸು ಕೃತಿಷು**" ಮತ್ತು "**ಯದ್ಬ್ರಹ್ಮ ಕಲ್ಪ**" ಎಂಬೀ ಶ್ಲೋಕಗಳಲ್ಲಿ ಅನುಶಯ ಉಪರಮಗಳಿಗೆ ಪ್ರಾಮುಖ್ಯವನ್ನು ಕೊಟ್ಟಿರುತ್ತಾರೆ. ಪ್ರಾಯಶ್ಚಿತ್ತ ಪ್ರಪತ್ತ್ಯನುಷ್ಠಾನವಾದ ಒಡನೆಯೇ ಅಪರಾಧ ಪ್ರಶಮನ ಉಂಟಾಗುವದರಿಂದ ಲಘುದಂಡನಾದಿಗಳಿಂದ ತಪ್ಪಿಸಿಕೊಳ್ಳುವದಕ್ಕಾಗಿ ಪ್ರಪನ್ನನು ಅಂತಹ ಬುದ್ಧಿಪೂರ್ವೋತ್ತರಾಘ ಪ್ರಾಪ್ತವಾದ ಒಡನೆಯೇ ಅನುತಾಪಾದಿಪೂರ್ವಕವಾಗಿ ಪ್ರಾಯಶ್ಚಿತ್ತ ಪ್ರಪತ್ತಿಯನ್ನು ಮಾಡಿಕೊಳ್ಳುವದು ಉತ್ತಮವು. ಸಾವಕಾಶ ಮಾಡಿದರೆ ಆಯುರ್ವೃದ್ಧಿಯೊಂದಿಗೆ ಲಘುದಂಡನೆ ಪ್ರಾಪ್ತವಾಗಬಹುದೆಂಬಭಿಪ್ರಾಯವೂ ಕೂಡ **ಸದ್ಯಃ ಪ್ರಶಮಕಾರಣಂ** ಎಂಬುವವರಿಂದುಂಟಾಗುತ್ತದೆ.

ಆದುದರಿಂದ ಬೇರೆ ಬೇರೆ ರೋಗಗಳಿಗೆ ಬೇರೆ ಬೇರೆ ಚಿಕಿತ್ಸೆಗಳಿದ್ದರೂ ಆಯುರ್ವೇದದಲ್ಲಿ ಸರ್ವವಿಧ ರೋಗಗಳನ್ನು ನಿವಾರಿಸತಕ್ಕ ಒಂದೇ ಸಿದ್ಧೌಷಧ ಇರುವ ಹಾಗೆ ಈ ಪ್ರಾಯಶ್ಚಿತ್ತ ಪ್ರಪದನವು ಸರ್ವವಿಧ ಬುದ್ಧಿಪೂರ್ವಾಪರಾಧಗಳನ್ನು ಶಮನಮಾಡುತ್ತದೆ ಎಂಬ ಭಾವವು

ಈ ಅಧಿಕಾರದಲ್ಲಿ ಉಪಪಾದಿಸಿದಭಿಪ್ರಾಯಗಳನ್ನು ಒಂದು ಪಾಶುರ ಮೂಲಕ ಸಂಗ್ರಹಿಸಿ ಹೇಳುತ್ತಾರೆ:— **ಉಳದಾನ** - ಪೂರ್ವಜನ್ಮಗಳಲ್ಲಿ ಸಂಚಿತವಾದುದಾಗಿ ಈಗ ಅನುಭವಿಸುತ್ತಿರುವ **ವಲ್‌ವಿನೈಕ್ಕು** - ಪ್ರಾರಬ್ಧರೂಪವಾದ ಪ್ರಬಲ ಪಾಪಗಳಿಗೆ, **ಉಳ್ಳವ್** - ಮನಸ್ಸು, **ವೆರುವಿ** - ಭಯಪಟ್ಟು, ತವಕವನ್ನು ಹೊಂದಿ, **ಉಲಗಳನ್ದ** - ತ್ರಿವಿಕ್ರಮನಾಗಿ ಲೋಕಗಳನ್ನೆಲ್ಲಾ ಅಳೆದ, **ವಳರ್ ತಾಮರೈಯಿಣೈ** - ಪ ಸಮೃದ್ಧಿಯಿಂದಭಿರವವ ಅಭಿವೃದ್ಧಿ ಹೊಂದಿದ, ತಾವರೆ ಪುಷ್ಪದ ಹಾಗೆ ಪರಮ ಭೋಗ್ಯವಾದ ಶ್ರಿಯಃಪತಿಯ ಚರಣ ದ್ವಂದ್ವವನ್ನು, **ವನ್ ಶರಣಾಗ** - ದೃಢೋಪಾಯವಾಗಿ, **ವರಿತ್ತವರ್ ತಾವ್** - ಆಶ್ರ

ಕಳೈತಾನೆನವೆಳ್ಳುಕೆನ್ ಮನ್ ತುರಪ್ಪರ್ ತುರನ್ದಿಡ(ಲುವ್)ನುವ್
ಇಳೈತಾನಿಲ್ಲೈ ಶಿಕವೆಙ್ಗಳ್ ಪಿರಾನರುಟ್ಟೇನೆಳುಮೆ ॥೨೫॥

ಯಿಸಿದ ಪ್ರಪನ್ನರು, ಎಂದರೆ ಪ್ರಾರಬ್ಧಕರ್ಮದಲ್ಲಿ ಪಾಪಾರಂಭಕ ಪಾಪಕೂಕ ಭಯಪಟ್ಟು ತತ್ಪರಿಹಾರಾರ್ಥವಾಗಿಯೂ ಆಶ್ರಯಿಸಿದ ಪ್ರಪನ್ನರು, **ಕಳೈತಾನೆನ** - ಭಗವದ್ಭಾಗವತ ಕೈಂಕರ್ಯರೂಪ ಒಳ್ಳೇ ಸಸ್ಯವೃದ್ಧಿಗೆ ಪ್ರತಿಬಂಧಕವಾದ ಅಪಾಯ ರೂಪವಲ್ಲಿ, **ಎಳುವ್** - ಉತ್ಪನ್ನವಾಗುವ, **ಕೆನ್ ಮುವ್** - ದುಷ್ಕರ್ಮಗಳನ್ನು, **ತುರಪ್ಪರ್** - ಪರಿಹರಿಸಿಕೊಳ್ಳುತ್ತಾರೆ. **ತುರನ್ದಿಡಲುವ್** - ಹೀಗೆ ಬುದ್ಧಿ ಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲಾಗಿ, **ಇಳೈದಾನಿಲ್ಲೈ** - ಬುದ್ಧಿ ದೌರ್ಬಲ್ಯದಿಂದುಂಟಾವ ಸ್ಥಿತಿಯು, **ಶಿಕೆ** - ಹೇಗೆ ನಶಿಸಿಹೋಗಬೇಕೋ ಹಾಗೆ, **ಎಙ್ಗಳ್ ಪಿರಾ** - ನಮಗೆ ಪರಮೋಪಕಾರನಾದ ಸರ್ವೇಶ್ವರನ, **ಅರುಳ್ ತೇ** - ಕೃಪಾಪ್ರಭಾವವೆಂಬ ಮಧುವು, ಜೇನುತುಪ್ಪವು, **ಎಳುಮೇ** - ಅಭಿವೃದ್ಧಿಯನ್ನು ಹೊಂದುತ್ತದೆ. ಸರ್ವೇಶ್ವರನ ಕೃಪಾಪ್ರಭಾವದಿಂದ ಈ ಬುದ್ಧಿಪೂರ್ವೋತ್ತರಾಘ ದಿಂದುಂಟಾಗುವ ವಿಷಮ ಫಲವು ನಿವರ್ತಿಸಿ ಹೋಗಿ, ಭಗವದ್ಭಾಗವತ ಕೈಂಕರ್ಯಾ ಭಿವೃದ್ಧಿಯು ಪ್ರಾಪ್ತವಾಗುತ್ತದೆಂಬ ಭಾವವು.

ತಾತ್ಪರ್ಯ :—**ಉಳವಾನವಲ್ ವಿನೈ** ಎಂಬುವದರಿಂದ ಚೇತನನನುಭವಿ ಸುವ ಪ್ರಾರಬ್ಧಕರ್ಮವು ಹೇಳಲ್ಪಟ್ಟಿತು. ಇದು **ವಲ್ ವಿನೈ** - ಎಂಬುವದರಿಂದ ತುಂಬಾ ಪ್ರಬಲವಾದುದೆಂದು ಹೇಳಲ್ಪಟ್ಟಿರುತ್ತದೆ. ಇದನ್ನು ಅನುಭವಿಸಿಯೇ ತೀರಬೇಕಾಗಿರುವದರಿಂದ ಹಾಗೆ ಪ್ರಯೋಗವು. ಉಪಾಸನಾದಿಗಳಿಂದಲೂ ಕೂಡ ಇದು ಹೋಗತಕ್ಕದ್ದಲ್ಲವು ಎಂದು ತಿಳಿಸುವದಕ್ಕಾಗಿಯೇ **ವಲ್** ಎಂಬ ವಿಶೇ ಷಣವು. ಪ್ರಾರಬ್ಧ ಪಾಪಾಂಶವು **"ಉಪಾಯಭಕ್ತಿಃ ಪ್ರಾರಬ್ಧವ್ಯತಿರಿಕ್ತಾ ಘನಾಶನೀ"** ಎಂದು ಹೇಳಿರುವ ಹಾಗೆ ಭಕ್ತ್ಯುಪಾಯದಿಂದಲೂ ಕೂಡ ಪರಿ ಹಾರವಾಗುವಂಥಾದ್ದಲ್ಲವು. ಆದುದರಿಂದಲೇ ಈ ಪ್ರಾರಬ್ಧಪಾಪಾಂಶಕ್ಕೆ ಮನಸ್ಸು ಭಯಪಡುತ್ತದೆಂದು **ಉಳ್ಳಮ್ ವೆರುವಿ** ಎಂದು ಹೇಳಿರುತ್ತಾರೆ. ಏಕೆ ಭಯವೆಂದರೆ ಪ್ರಪತ್ತ್ಯನಂತರವೂ ಕೂಡ ಬುದ್ಧಿಪೂರ್ವೋತ್ತರಾಘಗಳಿಗೆ ಕಾರಣ ಭೂತವಾಗುತ್ತದೆ. ಆದರೆ ಈ ಬುದ್ಧಿಪೂರ್ವೋತ್ತರಾಘಗಳ ನಾಶಕ್ಕಾಗಿಯೂ ನಾವು ಮೊದಲೇ ಪ್ರಪದನನನ್ನು ಅನುಷ್ಠಿಸಲು ಸಾಧ್ಯವಿಲ್ಲವು. ಏಕೆಂದರೆ **"ಕೃತೇ ಪಾಪೇಽನುತಾಪೋ ವೈ"** ಎಂದು ಮೇಲೆ ಹೇಳಿರುವ ಹಾಗೆ ನಿಮಿತ್ತವು ಹುಟ್ಟದೆ ನೈಮಿತ್ತಿಕಕ್ಕೆ ಕಾರಣವಿಲ್ಲವು. ಆದರೆ ಈ ಬುದ್ಧಿಪೂರ್ವೋತ್ತರಾಘವು ಉಂಟಾಗದ ಹಾಗೆ ಮಾಡಿಕೊಳ್ಳಬಹುದು, ಅದು ಹೇಗೆಂದರೆ, ಶರಣಾಗತಿ

ಯನ್ನು ಅನುಷ್ಠಿಸುವಾಗಲೇ ಈ ಪಾಪಾರಂಭಕವಾದ ಪ್ರಾರಬ್ಧ ಪಾಪಾಂಶವು ನಶಿಸಿಹೋಗುವವಕ್ಕಾಗಿಯೂ ಎಂದು ಅನುಷ್ಠಿಸಬಹುದು. ಹಾಗೆ ಶರಣಾಗತಿಯನ್ನನುಷ್ಠಿಸಿದವರು ತಾವು, ಎಂದು "ಉಲಗಳನ್ದ ವಳರ್ ತಾಮರೈಯಿಣೈವರ್ ಶರಣ ಗ ವರಿತ್ತುವರ್ ತಾಮ್" ಎಂಬುವದರಿಂದ ತಿಳಿಸುತ್ತಾರೆ. ಸರ್ವೇಶ್ವರನಾದ ತಾನು ಸರ್ವಲೋಕಕ್ಕೂ ಶೇಷಿಯೂ, ನಾವುಗಳೆಲ್ಲಾ ತನಗೆ ಶೇಷಭೂತರೂ ಎಂದೂ, ಆದುದರಿಂದ ನಮ್ಮಲ್ಲಿರುವ ನಿರ್ಹೇತುಕ ಕೃಪೆಯಿಂದ ತನ್ನ ಚರಣ ದ್ವಂದ್ವವು ಸಮಸ್ತರಿಗೂ ಮುಖ್ಯ ಶರಣವೆಂದೂ, ತಾನು ಸರ್ವಲೋಕ ಶರಣ್ಯನೆಂದೂ, ತ್ರಿವಿಕ್ರಮಾವತಾರಿಯು ತೋರ್ಪಡಿಸಿರುತ್ತಾನೆ. ಪ್ರಾರಬ್ಧಕರ್ಮ ಪಾಪಾಂಶವು ಇನ್ನು ಯಾವ ಉಪಾಯ ಉಪಾಯುಗಳಿಂದಲೂ ನಿವರ್ತ್ಯವಲ್ಲವು, ತ್ರಿವಿಕ್ರಮಾವತಾರಿಯಾದ ಶ್ರಿಯಃಪತಿಯಲ್ಲದೆ ಇನ್ನಾರ್ಯರನ್ನಾಶ್ರಯಿಸಿದರೂ ನಿವರ್ತ್ಯವಲ್ಲವು ಎಂಬೀ ಎರಡು ಅಭಿಪ್ರಾಯಗಳು ಇದರಿಂದ ತೋರಿಬರುತ್ತವೆ. **ವಳ್ ತಾಮರೈಯಿಣೈ** ಎಂಬ ವಿಶೇಷಣದಿಂದ ಸರ್ವೇಶ್ವರನ ಚರಣದ್ವಂದದಲ್ಲಿ ಪರಿಪೂರ್ಣ ಸಮೃದ್ಧಿಯೂ ಭೋಗ್ಯತೆಯೂ ಬೋಧಿಸಲ್ಪಟ್ಟಿತು. ಹೀಗೆ ಪಾಪಾರಂಭಕ ಪಾಪಾಂಶವೂ ಕಳೆಯಬೇಕೆಂದು ಪ್ರಪದನಾನುಷ್ಠಾನ ಮಾಡುವವರು ತಮಗೆ ಇನ್ನು ಮುಂದೆ ಬುದ್ಧಿಪೂರ್ವೋತ್ತರಾಘವು ಉಂಟಾಗದ ಹಾಗೆ ಅನುಗ್ರಹಿಸಬೇಕೆಂಬ ಸಙ್ಕಲ್ಪಪೂರ್ವಕವಾಗಿ ಮಾಡುವದರಿಂದ, **ಕಳೈದಾನೆನ ಎಳುವುಮ್ ಕನ್‌ಮುವಮ್ ತುರಪ್ಪರ್** - ಭಗವದ್ಭಾಗವತ ಕೈಂಕರ್ಯಕ್ಕೆ ಅಪಾಯರೂಪವಾಗಿ ಪರಿಣಮಿಸಿ ವಿಘಾತಿಯನ್ನುಂಟುಮಾಡುವ ಬುದ್ಧಿಪೂರ್ವೋತ್ತರಾಘವ್ಯಾವುದೂ ಉಂಟಾಗದ ಹಾಗೆ ಮಾಡಿಕೊಳ್ಳುವರು. **ಇಳೈ ತಾನಿಲೈಶಿಕೆ,** ಬುದ್ಧಿ ದೌರ್ಬಲ್ಯದಿಂದ ಪಾಪಾಭಿಸಂಧಿರೂಪಸ್ಥಿತಿಯು ನಾಶವಾಗುವ ಹಾಗೆ ಆಗುತ್ತದೆ. ಅವಿವೇಕವು ತೊಲಗಿ ವಿವೇಕ ಉಂಟಾಗಿ ಬದ್ಧಿಪೂರ್ವೋತ್ತರಾಘವು ಸಂಭವಿಸುವದೇ ಇಲ್ಲವು. ಇದಕ್ಕೆ ಕಾರಣವೇನೆಂದರೆ :—**ಎಙ್ಗಳ್ ಪಿರಾನ್ ಅರುಳ್ ತೇನ್**- ನಮಗೆ ಪರಮೋಪಕಾರನಾದ ಶ್ರಿಯಃಪತಿಯ ನಿರ್ಹೇತುಕ ಕೃಪೆಯೆಂಬ ಮಧುವು, ಸಕಲ ಅಪಾಯಗಳನ್ನು ನಿವರ್ತಿಸಿ ಕೈಂಕರ್ಯಾಭಿವೃದ್ಧಿರೂಪ ಶ್ರೇಯಸ್ಸನ್ನುಂಟುಮಾಡುತ್ತದೆ. **ತೇನ್** ಎಂದು ಹೇಳಿದುದರಿಂದ ಆಯುರ್ವೇದದ ಸಿದ್ಧೌಷಧಿಯು ಸಕಲ ವ್ಯಾಧಿಗಳಿಗೂ ಹೇಗೆ ಭೇಷಜವೋ, ಹಾಗೆ ಶ್ರಿಯಃಪತಿಯ ಕೃಪೆಯು ಸರ್ವ ವಿಘಾಪಾಯಗಳಿಗೂ ಪರಿಹಾರವೆಂಬ ಭಾವವು. ಸರ್ವೇಶ್ವರನು ನಮಗೆ ಕರಣ ಕಳೇಬರಗಳನ್ನು ಕೊಟ್ಟು, ಶಾಸ್ತ್ರದೀಪದಿಂದ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ, ಹಾಗೆಯೇ ಶಾಸ್ತ್ರೋಪದೇಶಿಕರನ್ನು ಒದಗಿಸಿಕೊಟ್ಟು, ಯಾವುದೋ

ಪ್ರಾರಬ್ಧೇತರ ಪೂರ್ವಪಾಪ ಮಖಿಲಂ ಪ್ರಾಮಾದಿಕಂ ಚೋತ್ತರಂ।

ಒಂದು ಯಾದೃಚ್ಛಿಕ ಸುಕೃತ ವ್ಯಾಜದಿಂದ ತನ್ನ ಕೃಪಾಕಟಾಕ್ಷದಿಂದ ಜನ್ಮಕಾಲದಲ್ಲೀಕ್ಷಿಸಿ, ಸಾತ್ವಿಕ ಸಂಭಾಷಣೆ ಸದ್ಗುರು ಪ್ರಾಪ್ತಿಗಳನ್ನುಂಟುಮಾಡಿ, ಉಪಾಯಾನುಷ್ಠಾನ ಮಾಡುವಹಾಗೆ ಮಾಡಿ, ಹೀಗೆಲ್ಲಾ ಉಪಕಾರ ಮಾಡುವುದರಿಂದ ಆತನನ್ನು ಪಿರಾನ್ ಎಂದು ಶ್ಲಾಘಿಸಿರುತ್ತಾರೆ. ಆದುದರಿಂದ ಅಂತಹ ಪರಮೋಪಕಾರಕನಲ್ಲಿ ತಮಗಿರುವ ಕೃತಜ್ಞತಾಭಕ್ತಿ ವಿಶ್ವಾಸಗಳನ್ನು ತೋರಿಸುವುದಕ್ಕಾಗಿ ಎಙ್ಗಳ್ ಪಿರಾನ್ ನಮ್ಮ ಪರಮೋಪಕಾರನೆಂದು ಪ್ರಯೋಗಿಸಿರುತ್ತಾರೆ.

ಶ್ರೀ ಸಾರದೀಪಿಕಾ ಸಾರಸಂಗ್ರಹ ವ್ಯಾಖ್ಯಾತೃಗಳು ಮಾತ್ರ "ಇಳೈಪಾನಿಲೆ", ಎಂಬ ಕೊನೆಯ ವಾಕ್ಯಕ್ಕೆ ಬೇರೆ ವಿಧವಾಗಿ ಅರ್ಥಮಾಡಿರುತ್ತಾರೆ :- ಪಾಪಾರಂಭಕ ಪಾಪನಿವೃತ್ತಿಗಾಗಿಯೂ ಮೊದಲೇ ಪ್ರಪದನಾನುಷ್ಠಾನ ಮಾಡುವುದರಿಂದ ಬುದ್ಧಿಪೂರ್ವೋತ್ತರಾಘವು ಉಂಟಾಗುವುದೇ ಇಲ್ಲವೆಂದು ಹಿಂದಿನ ವಾಕ್ಯಗಳಿಂದ ತಿಳಿಸಲ್ಪಟ್ಟಿತು. ಹಾಗೆ ಸಂಕಲ್ಪಿಸಿ ಪ್ರಪದನಾನುಷ್ಠಾನ ಮಾಡದಿದ್ದರೆ ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾಗುತ್ತದೆ. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳದೆ ಕಠಿಣ ಪ್ರಕೃತಿಯುಳ್ಳವನಾದರೆ ಆಗ ಇಳೈಪಾನಿಲೈಯುಂಟಾಗುತ್ತದೆ. ಎಂದರೆ ಬುದ್ಧಿದೌರ್ಬಲ್ಯದಿಂದ ಅವಿವೇಕ ಮೂಲಕ ಬುದ್ಧಿಪೂರ್ವೋತ್ತರಾಘ ಉಂಟಾಗುತ್ತದೆ. ಇದಕ್ಕಾಗಿ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನನುಷ್ಠಿಸಬೇಕು. ಹಾಗೆ ಅನುಷ್ಠಿಸದಿದ್ದರೂ ಆಗಲೂ ಸರ್ವೇಶ್ವರನ ಕೃಪೆಯೆಂಬ ಕೇಣಿ ಮಧ್ಯೇ ನಮ್ಮನ್ನು ಕಾಯುತ್ತದೆ. ಈ ಇಳೈಪಾನಿಲೈಯು, ಕೆರೆ - ನಾವಾಗೋಣ ಹೇಗೋ ಹಾಗೆ, ನಮ್ಮ ಮಹೋಪಕಾರಕನ ಕೃಪೆಯೇ ವೃದ್ಧಿಹೊಂದುತ್ತದೆ ಎಂದರೆ, ಆಗಲೂ ಕೂಡ ಈ ಪ್ರಪನ್ನನು ನಷ್ಟನಾಗಿ ಹೋಗುವುದಿಲ್ಲವು, ಅಲ್ಪದಂಡನೆಯ ಮೂಲಕ ಆ ಅಪರಾಧಗಳು ನಷ್ಟವಾಗುವ ಹಾಗೆ ಮಾಡಿ, ಕೊನೆಗೂ ಆತನ ಕೃಪೆಯೇ ರಕ್ಷಿಸಿಬಿಡುತ್ತದೆ ಎಂದು ವ್ಯಾಖ್ಯಾನ ಮಾಡಿರುತ್ತಾರೆ.

ಅವತಾರಿಕೆ. ಈ ಅಧಿಕಾರದಲ್ಲಿ ಹೇಳಲ್ಪಟ್ಟ ಮುಖ್ಯಾಭಿಪ್ರಾಯಗಳನ್ನೆಲ್ಲಾ ಸಂಗ್ರಹಿಸಿ ಒಂದು ಸಂಸ್ಕೃತ ಶ್ಲೋಕದ ಮೂಲಕ ವಿಶದೀಕರಿಸಿ ಹೇಳುತ್ತಾರೆ :—

ಅರ್ಥ—ನಃ - ಭಗವತ್ಕೃಪಯಾ ಭರನ್ಯಾಸವನ್ನನುಷ್ಠಿಸಿ ಪ್ರಪನ್ನರಾದ ನಮ್ಮ, ಅಖಿಲಂ-ಸಮಸ್ತವಾದ, ಪ್ರಾರಬ್ಧೇತರ ಪೂರ್ವಪಾಪಂ-ಪ್ರಾರಬ್ಧವೆಂದರೆ ಈ ದೇಹದಿಂದ ಅನುಭವಿಸಬೇಕಾಗಿರುವ ಪುಣ್ಯಪಾಪಗಳು, ಅವುಗಳಲ್ಲದ ಇತರ

ನ್ಯಾಸೇನ ಕ್ಷಪಯ ನ್ನನಭ್ಯುಪಗತ ಪ್ರಾರಬ್ಧ ಖಂಡಂಚ ನಃ ।
ಧೀ ಪೂರ್ವೋತ್ತರ ಪಾಪ್ಮನಾ ಮಜನನಾ ಜ್ಜಾತೇಪಿ ತನ್ನಿಷ್ಕೃತೇಃ।
ಕಾಟಲ್ಯೇಸತಿ ಶಿಕ್ಷಯಾಪ್ಯನಘಯನ್ ಕ್ರೋಡೀಕರೋತಿ ಪ್ರಭುಃ॥೪೧॥

ಪೂರ್ವಪಾಪಗಳು, ಇವುಗಳಿಗೆ ಸಂಚಿತ ಪುಣ್ಯಪಾಪಗಳೆಂದು ಹೆಸರು, ಇಲ್ಲಿ ಪಾಪಶಬ್ದವು ಪುಣ್ಯಕ್ಕೂ ಕೂಡ ಉಪಲಕ್ಷಣವು; ಪೂರ್ವಪಾಪಗಳೆಂದರೆ, ಭರನ್ಯಾಸಾನುಷ್ಠಾನಕ್ಕೆ ಮೊದಲು ಸಂಭವಿಸಿದ ಪಾಪಗಳು, **ಪ್ರಾಮಾದಿಕಂಚೋತ್ತರಂ** - ಭರನ್ಯಾಸಾನುಷ್ಠಾನಾನಂತರ ಅಬುದ್ಧಿಪೂರ್ವಕವಾಗಿ ಸಂಭವಿಸಿದ ಪಾಪಗಳೂ, ಚಕಾರದಿಂದ ದೇಶಕಾಲಾದಿ ಕಾರಣಗಳಿಂದ ತನಗಭಿಪ್ರಾಯವಿಲ್ಲದಿದ್ದರೂ ಬುದ್ಧಿಪೂರ್ವಕವಾಗಿ ಪ್ರಾಪ್ತವಾಗುವ ಪಾಪಗಳು ಹೇಳಲ್ಪಟ್ಟವು, **ಅನಭ್ಯುಪಗತೆ ಪ್ರಾರಬ್ಧ ಖಂಡಂಚ** - ಪ್ರಾರಬ್ಧವು ಎರಡು ವಿಧವು, ಅಭ್ಯುಪಗತ ಅನಭ್ಯುಪಗತವೆಂಬದಾಗಿ, ಅಭ್ಯುಪಗತ ಪ್ರಾರಬ್ಧವು ಈ ದೇಹದಲ್ಲೇ ಅನುಭವಿಸಿ ಕಳೆಯತಕ್ಕದ್ದು, ಅನಭ್ಯುಪಗತ ಪ್ರಾರಬ್ಧವು ಮುಂದಿನ ದೇಹದಿಂದ ಕಳೆಯತಕ್ಕದ್ದು, ಇಂತಹ ಅನಭ್ಯುಪಗತ ಪ್ರಾರಬ್ಧಭಾಗವೂ ಕೂಡ ಇವೆಲ್ಲವನ್ನೂ, **ನ್ಯಾಸೇನ** - ಭರನ್ಯಾಸದಿಂದ, **ಕ್ಷಪಯನ್** - ಹೋಗಲಾಡಿಸುವವನಾಗಿ, **ಧೀಪೂರ್ವೋತ್ತರ ಪಾಪ್ಮನಾಂ ಅಜನನಾತ್**-ಅಂತಹ ಪ್ರಪನ್ನನು ವಿವೇಕಿಯಾಗಿ ಶಾಸ್ತ್ರಜ್ಞಾನವನ್ನು ಹೊಂದಿದವನಾಗಿದ್ದರೆ ಬುದ್ಧಿಪೂರ್ವಕವಾದ ಉತ್ತರಾಘವು ಅಂತವನಿಗೆ ಉಂಟಾಗದೇ ಇರುವದರಿಂದಲೂ, **ಜಾತೇಪಿ ತನ್ನಿಷ್ಕೃತೇಃ**-ಒಂದು ವೇಳೆ ಬುದ್ಧಿಪೂರ್ವೋತ್ತರಾಘವು ಅವಿವೇಕದಿಂದುಂಟಾದರೂ, ಅನುತಾಪ ಉಪರಮಗಳು ಉಂಟಾಗಿ ಪ್ರಾಯಶ್ಚಿತ್ತರೂಪ ಶರಣಾಗತಿಯನ್ನನುಷ್ಠಿಸುವದರಿಂದಲೂ, **ಕಾಟಲ್ಯೇಸತಿ** - ಒಂದು ವೇಳೆ ಕಠಿನ ಪ್ರಕೃತಿಯಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೂ, **ಶಿಕ್ಷಯಾಪಿ** - ಅಪಮೃತ್ಯು, ಅಲ್ಪದಂಡನೆ ಮುಂತಾದವುಗಳಿಂದಲಾಗಲಿ, **ಅನಘಯನ್** - ಆತನ ಅಪರಾಧಗಳನ್ನೆಲ್ಲಾ ಪರಿಹರಿಸಿ, **ಪ್ರಭುಃ** - ಸರ್ವಶಕ್ತನಾಗಿ, ಸ್ವತಂತ್ರನಾಗಿ, ನಮಗೆ ಸ್ವಾಮಿಯಾಗಿರುವ ಶ್ರಿಯಃಪತಿಯು, **ಕ್ರೋಡೀಕರೋತಿ** - ಸ್ವೀಕರಿಸುತ್ತಾನೆ. ಎಂದರೆ ಶರಣಾಗತಿಗೆ ಕಟ್ಟುಬಿದ್ದು ದೇಹಾವಸಾನದಲ್ಲಿ ನಿರ್ವಿಘ್ನವಾಗಿ ಮುಕ್ತಿಯನ್ನುಂಟುಮಾಡುವನು ಎಂಬ ತಾತ್ಪರ್ಯವು.

ತಾತ್ಪರ್ಯ—ಪ್ರಪನ್ನನಾದವನು ಶರಣಾಗತಿಯನ್ನನುಷ್ಠಿಸುವದರಿಂದ ಆತನಿಗೆ ಈ ದೇಹಾವಸಾನದೊಳಗೆ ಸರ್ವಪಾಪಗಳು ನಷ್ಟವಾಗಿ ಹೋಗಿ ಆತನನ್ನು ಸರ್ವೇಶ್ವರನು ಅನಘಯನ್ ಪರಿಶುದ್ಧನನ್ನಾಗಿ ಮಾಡಿ ಸ್ವಸ್ವರೂಪಾವಿರ್ಭಾವವನ್ನುಂಟುಮಾಡಿ, ಮೋಕ್ಷವನ್ನು ಕೊಟ್ಟು ಕ್ರೋಡೀಕರೋತಿ ಸ್ವೀಕರಿಸುವನು.

ಎಂದು ಹೇಳುತ್ತಾರೆ. "ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ" ಎಂಬ ಶ್ರುತ್ಯರ್ಥವೇ ಇಲ್ಲಿ ಉಪದೇಶಿಸಲ್ಪಟ್ಟಿರುತ್ತದೆ. ಹಾಗೆ ಈ ಶ್ರುತಿಯೂ ಇನ್ನು ಬೇರೆ ಕಡೆಯಲ್ಲೂ "ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ" (ಛಾಂ ೫. ೧೪೩) ಎಂದೂ, ಏವಮೇವಂ ವಿದಿಪಾಪಂ ಕರ್ಮ ನಶ್ಲಿಷ್ಯತೇ" (ಛಾಂ. ೪.೧೪೩) ಪ್ರಪನ್ನನಿಗೆ ಸಮಸ್ತ ಕರ್ಮಗಳೂ ಸುಟ್ಟುಹೋಗುತ್ತವೆಂದೂ, ಆತನಿಗೆ ಪಾಪಕರ್ಮಗಳ ಲೇಪವಿಲ್ಲ ವೆಂದೂ ಹೇಳುತ್ತದೆ. ಆ ಪಾಪಗಳೆಲ್ಲಾ ನಷ್ಟವಾಗುವ ಪ್ರಕಾರವನ್ನು ಈ ಶ್ಲೋಕಮೂಲಕ ಬೋಧಿಸುತ್ತಾರೆ.

೧. ಪ್ರಾರಬ್ಧೇತರ ಪೂರ್ವಪಾಪ ಮಖಿಲಂ - ಸಮಸ್ತ ಪಾಪಗಳನ್ನೂ ಪೂರ್ವಾಘವೆಂದೂ ಉತ್ತರಾಘವೆಂದೂ ವಿಭಾಗಿಸಬಹುದು. ಈತನು ಪ್ರಪದನಾನುಷ್ಠಾನಕ್ಕೆ ಹಿಂದೆ ಮಾಡಿದುದೆಲ್ಲಾ ಪೂರ್ವಾಘವೆಂದೂ ಅನಂತರವಿರುವ ದೆಲ್ಲಾ ಉತ್ತರಾಘವೆಂದೆನಿಸುತ್ತವೆ. ಪ್ರಾರಬ್ಧೇತರ ಪೂರ್ವಪಾಪವೆಂದು ಯಾವಾಗ ಹೇಳಲ್ಪಟ್ಟಿತೋ, ಆಗ ಪ್ರಾರಬ್ಧವೂ ಪೂರ್ವಾಘದಲ್ಲೇ ಸೇರಿತು. ಪ್ರಾರಬ್ಧವಲ್ಲದ ಇತರ ಪೂರ್ವಾಘಕ್ಕೆ ಸಂಚಿತವೆಂದು ಹೆಸರು ಪ್ರಬಲ ಕರ್ಮಾಂತರವಾದ ಪ್ರಾರಬ್ಧದ ಪ್ರತಿಬಂಧಕದಿಂದ ಆ ಸಂಚಿತವು ಇನ್ನು ಫಲೋ ನ್ಮುಖವಾಗಿಲ್ಲವು. ಫಲೋನ್ಮುಖವಾದುದೇ ಈ ದೇಹದಲ್ಲಿ ಅನುಭವಿಸತಕ್ಕ ದ್ದಾಗಿ ಪ್ರಾರಬ್ಧವೆನಿಸುತ್ತದೆ. ಆದುದರಿಂದ ಪ್ರಾರಬ್ಧೇತರ ಪೂರ್ವಪಾಪ ಮಖಿಲಂ ಎಂಬುವದರಿಂದ ಸಮಸ್ತ ಸಂಚಿತ ಪಾಪಗಳೂ ಹೇಳಲ್ಪಟ್ಟು ಪ್ರಪನು ನನುಷ್ಠಿಸಿದ ಶರಣಾಗತಿಯಿಂದ ಅವೆಲ್ಲವೂ ತೊಲಗುತ್ತನೆ ಎಂಬ ಭಾವವು

೨. ಇನ್ನು ಯಾವುವು ನಾಶವಾಗುತ್ತವೆ? ಎಂದರೆ ಅನಭ್ಯುಪಗತ ಪ್ರಾರಬ್ಧ ಖಂಡಚಃ, ಪ್ರಾರಬ್ಧ ಕರ್ಮವನ್ನೇನೋ ಈ ಪ್ರಪನ್ನನು ಅನುಭವಿ ಸಿಯೇ ತೀರಬೇಕು ಆದರೆ ಈತನನುಭವಿಸತಕ್ಕದ್ದು ಆ ಪ್ರಾರಬ್ಧದ ಒಂದು ಖಂಡವು, ಒಂದು ಭಾಗವು, ಪ್ರಾರಬ್ಧ ಪಾಪವು ಎರಡು ವಿಧವು; (೧) ಅಭ್ಯುಪ ಗತ (೨) ಅನಭ್ಯುಪಗತವೆಂಬದಾಗಿ. ಅಭ್ಯುಪಗತ ಪ್ರಾರಬ್ಧವು ಈ ಜನ್ಮದಲ್ಲೇ ಅನುಭವಿಸತಕ್ಕದ್ದು. ಅನಭ್ಯುಪಗತ ಭಾಗವು ದೇಹಾಂತರದಿಂದ ಅನುಭವಿಸ ತಕ್ಕದ್ದು. ಈ ಶರಣಾಗತಿಯಿಂದ ಈ ಅನಭ್ಯುಪಗತ ಪ್ರಾರಬ್ಧಭಾಗವೂ ನಶಿಸಿ ಹೋಗುತ್ತದೆ.

೩. ಇನ್ನು ಯಾವುವು ನಷ್ಟವಾಗುತ್ತವೆ? ಉತ್ತರಾಘದಲ್ಲಿ ಯಾವುವು ನಷ್ಟವಾಗುತ್ತವೆ? ಎಂದರೆ ಪ್ರಾಮಾದಿಕಂ ಚೋತ್ತರಂ, ಪ್ರಪದನೋತ್ತರ ಕಾಲದಲ್ಲಿ ಅಬುದ್ಧಿಪೂರ್ವಕವಾಗಿ ಮಾಡುವ ಪಾಪಗಳೂ ನಷ್ಟವಾಗುತ್ತವೆ

ಹೀಗೆ ಈ ಮೂರು ವಿಧ ಪಾಪಗಳು ನಷ್ಟವಾಗುತ್ತದೆಂದು (೧) **"ತದಧಿಗಮ ಉತ್ತರಪೂರ್ವಾಘಯೋಃ ರಶ್ಲೇಷ ವಿನಾಶೌ, ತದ್ವ್ಯಪದೇಶಾತ್"** ಎಂಬ ಬ್ರಹ್ಮಸೂತ್ರದಲ್ಲಿ ಪೂರ್ವಾಘಗಳ ವಿನಾಶವೂ ಉತ್ತರಾಘಗಳ ನಿರ್ಲೇಪವೂ ಹೇಳಲ್ಪಟ್ಟಿರುತ್ತದೆ. ಇಲ್ಲಿ ಉತ್ತರಾಘವೆಂದು ಹೇಳಿದುದು ಬುದ್ಧಿಪೂರ್ವೋತ್ತರಾಘಗಳು ವಿನಾ ಮಿಕ್ಕ ಇತರ ಉತ್ತರಾಘಗಳು ಎಂದು ಭಾವಿಸತಕ್ಕದ್ದು. ಕೆಲವು ಉತ್ತರಾಘಗಳು ಬುದ್ಧಿಪೂರ್ವಕವಾಗಿ ಇದ್ದರೂ ದೇಶಕಾಲ ಪ್ರಮಾದದಿಂದ ಉಂಟಾಗಬಹುದು. ಹೇಗೆಂದರೆ ಮಾರ್ಗ ಒಡೆಯುವ ಸ್ಥಳದಲ್ಲಿ ನಿಂತಿರುವ ಪ್ರಪನ್ನನನ್ನು ಕಳ್ಳರು ಬಂದು ಮುಂದೆ ದಿಬ್ಬಣದವರು ಯಾವ ಮಾರ್ಗದಲ್ಲಿ ಹೋದರು ಸರಿಯಾಗಿ ಹೇಳು ಎಂದು ಬೆದರಿಸಿದರೂ, ನಿಶ್ಚಯ ಹೇಳಿದರೆ ದಿಬ್ಬಣದವರಿಗುಂಟಾಗುವ ದುಃಸ್ಥಿತಿಯನ್ನು ತಪ್ಪಿಸುವದೇ ನ್ಯಾಯವಾದುದರಿಂದ, ಈ ಸಂದರ್ಭದಲ್ಲಿ ಅನೃತ ಹೇಳುವದು,—

ಸ್ತ್ರೀಷು ನರ್ಮ ವಿವಾಹೇಚ ವೃತ್ತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್ ॥(ಭಾಗ)

ಸ್ತ್ರೀಗಳನ್ನು ವಶಮಾಡಿಕೊಳ್ಳುವದರಲ್ಲೂ, ಪರಿಹಾಸದಲ್ಲೂ, ವಿವಾಹ ನಡೆಸುವದರಲ್ಲೂ, ವೃತ್ತಿ ಕಲ್ಪಿಸಿಕೊಳ್ಳುವದರಲ್ಲೂ, ಪ್ರಾಣಸಂಕಟ ಉಂಟಾದಾಗಲೂ, ಗೋಬ್ರಾಹ್ಮಣಹಿತವಾಗಿಯೂ, ಹಿಂಸೆ ತಪ್ಪಿಸುವದಕ್ಕಾಗಿಯೂ ಹೇಳಿದ ಸುಳ್ಳು ನಿಂದಿತವಲ್ಲವು ಎಂಬ ಶಾಸ್ತ್ರಾನುಗುಣವಾಗಿ, ಅಪರಾಧವಾಗುವದಿಲ್ಲವು. ಯಾವುದೋ ಒಂದು ಕಾರಣದಿಂದ ಒಂದು ಮರುಕಾಂತಾರದಲ್ಲಿ ಸಿಕ್ಕಿದುದರಿಂದ ನಿತ್ಯ ನೈಮಿತ್ತಿಕ ಕರ್ಮಗಳಿಗೆ ಉಂಟಾಗುವ ಲೋಪವೂ ಕೂಡ ಬುದ್ಧಿಪೂರ್ವಕವಾದರೂ ಅಪರಾಧವಾಗುವದಿಲ್ಲವು. ಉಷಸ್ತಿಋಷಿಗಳು ಪ್ರಾಣಭಯದಿಂದ ಆನೆಯ ಮಾವಟಿಗನನ್ನು ಯಾಚಿಸಿ ಆತನ ಉಚ್ಛಿಷ್ಟವಾದ ಬೆಂದ ಹುರುಳಿಯನ್ನು ಭುಜಿಸಿದುದೂ ಅಧರ್ಮವಲ್ಲವು. ಬುದ್ಧಿಪೂರ್ವಕವಾಗಿ ಮಾಡುವ ಉತ್ತರಾಘಗಳು ಮಾತ್ರ ಆ ಪ್ರಪದನದಿಂದ ನಷ್ಟವಾಗುವದಿಲ್ಲವೆಂಬ ಭಾವವು.

೪. ಹಾಗಾದರೆ ಈ ಬುದ್ಧಿಪೂರ್ವೋತ್ತರಾಘಗಳು ನಷ್ಟವಾಗುವ ಬಗೆ ಹೇಗೆ? ಎಂದರೆ ಪ್ರಪನ್ನನು ಶಾಸ್ತ್ರಾರ್ಥ ತಿಳಿದು ಪ್ರತಿಬದ್ಧನಾದರೆ ಆಗ ಬುದ್ಧಿಪೂರ್ವೋತ್ತರಾಘವು ಉಂಟಾಗುವದೇ ಇಲ್ಲವು. ಮತ್ತು ಪ್ರಾಜ್ಞನಾದರೆ ಇನ್ನೊಂದು ವಿಧವಾಗಿಯೂ ಬುದ್ಧಿಪೂರ್ವೋತ್ತರಾಘವು ಉತ್ಪನ್ನವಾಗದ ಹಾಗೆ ಮಾಡಿಕೊಳ್ಳಬಹುದು. ಈ ಬುದ್ಧಿಪೂರ್ವೋತ್ತರಾಘಕ್ಕೆ ಮೂಲಕಾರಣವು

(೧) ಶಾರೀರಕ ಸೂತ್ರ.

ಪ್ರಾರಬ್ಧಕರ್ಮದ ಪಾಪಾರಂಭಕ ಪಾಪಾಂಶವು. ಇದು ನಿವರ್ತಿಸುವ ಹಾಗೆಯೂ ಸಙ್ಕಲ್ಪಿಸಿ ಪ್ರಪದನಾನುಷ್ಠಾನ ಮಾಡಿದರೆ ಈ ಬುದ್ಧಿಪೂರ್ವೋತ್ತರಾಘವು ಉಂಟಾಗುವದೇ ಇಲ್ಲವು. ಒಂದು ವೇಳೆ ಪ್ರತಿಬುದ್ಧನಲ್ಲದೆ, ಹಾಗೆ ಸಙ್ಕಲ್ಪಿಸದೆ ಪ್ರಪದನ ಮಾಡಿದುದರಿಂದ ಬುದ್ಧಿಪೂರ್ವೋತ್ತರಾಘವು ಉಂಟಾಗಬಹುದು. ಇದು ಶಮನ ಹೊಂದುವ ರೀತಿ ಹೇಗೆಂದರೆ ಹೇಳುತ್ತಾರೆ :—**ಜಾತೇಽಪಿ ತನ್ನಿಷ್ಕೃತೇಃ** ಅದು ಪ್ರಾಪ್ತವಾದರೂ, ಪಶ್ಚಾತ್ತಾಪ ಉಂಟಾಗಿ, ಮುಂದಕ್ಕೆ ಅಂತಹ ಅಪರಾಧಕ್ಕೆ ಗುರಿಯಾಗುವದಿಲ್ಲವೆಂಬ ಉಪಾಯದಿಂದ ಸೇರಿದ ಪ್ರಾಯಶ್ಚಿತ್ತರೂಪ ಪುನಃ ಪ್ರಪದನದಿಂದ ಅದೂ ಕೂಡ ಪರಿಹಾರವಾಗುತ್ತದೆ. **ಕೌಟಿಲ್ಯೇ ಸತಿ,** ಒಂದು ವೇಳೆ ಮಂದಬುದ್ಧಿಯುಳ್ಳವನಾದುದರಿಂದಲೋ, ಕಠಿಣಸ್ವಭಾವ ಉಳ್ಳವನಾದುದರಿಂದಲೋ, ಪ್ರಾಯಶ್ಚಿತ್ತದಲ್ಲಿ ಪ್ರವೃತ್ತಿಯುಂಟಾಗದಿದ್ದರೆ, **ಶಿಕ್ಷಯಾಪ್ಯನಘಯೇ,** "ಇಹೈವೈಷಾಂ ಕೇಚಿದುಪಪ್ಲವಾ ಭವಂತಿ" ಎಂದು ಹೇಳಿರುವ ಹಾಗೆ ಲಘುದಂಡನೆಯಿಂದ ಸ್ವಲ್ಪ ಕ್ಲೇಶಪಡಿಸಿ, ಹೀಗೆ ಎಲ್ಲಾ ಪಾಪಗಳಿಂದಲೂ ಬಿಡಿಸಿ, **ಅನಘಯೇ,** ಪರಿಶುದ್ಧನನ್ನಾಗಿ ಮಾಡಿ ಸರ್ವೇಶ್ವರನು ದೇಹಾವಸಾನದಲ್ಲೇ ಮೋಕ್ಷವನ್ನಿತ್ತು ಕಾಪಾಡುವನು.

ಮೇಲೆ ಪ್ರಾರಬ್ಧಕರ್ಮ ಮಾತ್ರ ಅನುಭವಿಸಲೇಬೇಕೆಂದು ಹೇಳಲ್ಪಟ್ಟಿತು ಇದು ದೃಪ್ತ ಪ್ರಪನ್ನನನ್ನು ಕುರಿತು ಹೇಳಿದುದು. ಆರ್ತನಿಗಾದರೋ, ಮಿಕ್ಕ ಪ್ರಾರಬ್ಧಾಂಶವೂ ಕೂಡ ಒಡನೆ ನಾಶವಾಗಿ ದೇಹಾವಸಾನ ಉಂಟಾಗಿ ಮೋಕ್ಷ ಪ್ರಾಪ್ತಿಯುಂಟಾಗುತ್ತದೆ.

ಈ ಶ್ಲೋಕದಲ್ಲಿ ಉಪಯೋಗಿಸಿರುವ ಪಾಪಶಬ್ದವು ಪುಣ್ಯಕ್ಕೂ ಕೂಡ ಅನ್ವಯಿಸುತ್ತದೆ. ಪಾಪಗಳು ಹೇಗೆ ಮೋಕ್ಷಪ್ರತಿಬಂಧಕಗಳೋ ಹಾಗೆಯೇ ಪುಣ್ಯಗಳೂ ಕೂಡ ಪ್ರತಿಬಂಧಕಗಳು. ಫಲಾಕಾಂಕ್ಷೆಯಿಂದ ಮಾಡಿದ ಪುಣ್ಯಗಳು ಸ್ವರ್ಗಾದಿ ಭೋಗಗಳನ್ನು ಕೊಡುವುವು. ಪುಣ್ಯವು ಕ್ಷೀಣವಾದ ಒಡನೆಯೇ "ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ" (ಗೀ. ೯ ೨೧) ಎಂದೂ, "ಸ್ವರ್ಗೇಽಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ" ಎಂದೂ ಹೇಳಿರುವದರಿಂದ ಈ ಭೂಲೋಕಕ್ಕೆ ಹಿಂತಿರುಗಿ ಬರಬೇಕಾದುದರಿಂದಲೂ, ಸ್ವರ್ಗದಲ್ಲೂ ಕೂಡ ಈ ಭೋಗವು ಕಳೆದು ಭೂಲೋಕಕ್ಕೆ ಎಂದು ಬೀಳುವೆನೋ ಎಂಬ ಭಯವಿರುವದರಿಂದಲೂ, ಪುಣ್ಯವೂ ಪಾಪಕ್ಕೆ ಸಮಾನವಾದುದೇ; "ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ" (ಗೀ. ೮. ೧೬) ಪರಮವೈಕುಂಠವಲ್ಲದೆ ಇತರ ಲೋಕಪ್ರಾಪ್ತಿಗೆಲ್ಲಾ ಪುನರಾವರ್ತಿಯಿರುವದರಿಂದ ಪಾಪ

ತಾತ್ಪರ್ಯವಾದುದೇ ಭಾವವು. ಇದರಿಂದ ದಾನಧರ್ಮಾದಿಗಳೂ ವಾಪೀ ಕೂಪ ತಟಾಕ ನಿರ್ಮಾಣಗಳೂ, ವಿದ್ಯಾಶಾಲೆ ಔಷಧಶಾಲೆ ಮುಂತಾದವುಗಳನ್ನು ನಿರ್ಮಿಡಿ ಸೋಣವೂ, ಮತ್ತು ಇತರ ಪ್ರಾಣಾಸುಖಾಭಿವೃದ್ಧಿಯನ್ನುಂಟುಮಾಡುವ ಧರ್ಮ ಕೆಲಸಗಳೂ ಇವೆಲ್ಲವೂ ಇದರಿಂದ ತ್ಯಾಜ್ಯವೆಂದು ಭಾವಿಸಕೂಡದು. ಇವು ಗಳನ್ನು ಮುಖ್ಯವಾಗಿ ಮಾಡತಕ್ಕದ್ದು. ಒಬ್ಬ ಬಾಲಕನು ಕೆರೆಯಲ್ಲಿ ಬಿದ್ದು ಒದ್ದಾಡುತ್ತಿದ್ದರೆ ಆತನನ್ನು ಮೇಲಕ್ಕೆ ಎತ್ತಿದರೆ ಪುಣ್ಯಕರ್ಮವಾಗಿ ಪರಿಣಮಿಸಿ ಮೋಕ್ಷಪ್ರತಿಬಂಧಕವಾಗುತ್ತೆಂದು ಬಿಡಕೂಡದು. ಬಿಟ್ಟರೆ ನೀ ಪ್ರತ್ಯವಾಯ ಉಂಟು. ಇಂತಹ ಸಂದರ್ಭಗಳಲ್ಲಿ “ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ” ಎಂಬ ಗೀತಾಚಾರ್ಯನ ಉಪದೇಶವನುಸಂಧೇಯವು. ತನ್ನ ಸುಖಕ್ಕೆ ಮಾತ್ರ ಮೇಲ್ ಕಸ್ಟಪಡುವುದು ಅಧಮಪಕ್ಷವು. ತನ್ನ ಸುಖದೊಂದಿಗೆ ಇತರರಿಗೆ ಸುಖವನ್ನುಂಟುಮಾಡುವುದು ಮಧ್ಯಮಪಕ್ಷವು. “ಸ್ವಸುಖದೊಳಾಸೆಯು ತೊರೆದು” ಇತರರಿಗೆ ಸುಖವನ್ನುಂಟುಮಾಡುವುದು ಉತ್ತಮಪಕ್ಷವು. ಇಂತಹ ಪುಣ್ಯಕರ್ಮಗಳು ಮೋಕ್ಷಪ್ರತಿಬಂಧಕವಲ್ಲದಿರುವದಕ್ಕಾಗಿ ಫಲಾಕಾಂಕ್ಷೆಯಿಲ್ಲದೆ ಭಗವತ್ಪ್ರೀತ್ಯರ್ಥವಾಗಿ ನಡೆಸಿ ತ್ಯಾಗವನ್ನು ಶ್ರೀಕೃಷ್ಣಾರ್ಪಣಮಸ್ತು ಎಂದು ಹೇಳತಕ್ಕದ್ದು.

ಸರ್ವೇಶ್ವರನು ಹೀಗೆ ಪ್ರಪನ್ನನಲ್ಲಿರುವ ಪರಮ ವಾತ್ಸಲ್ಯದಿಂದ ಆತನ ಸರ್ವಪುಣ್ಯ ಪಾಪಗಳನ್ನೆಲ್ಲಾ ತೊಲಗಿಸಿ ಪರಿಶುದ್ಧನನ್ನಾಗಿ ಮಾಡಿ ತನ್ನ ದಿವ್ಯ ವೈಕುಂಠದಲ್ಲಿರುವದಕ್ಕೆ ಯೋಗ್ಯತೆಯನ್ನುಂಟುಮಾಡಿ, ಆತನು ಮಾಡುವ ಕೈಂಕರ್ಯ ವನ್ನು ಸ್ವೀಕರಿಸುತ್ತಾನೆಂಬುವದು ಈ ಶ್ಲೋಕತಾತ್ಪರ್ಯವು.

ಇಂತು

ಶ್ರೀಮದ್ರಹಸ್ಯತ್ರಯಸಾರದ ಹದಿನೆಂಟನೆಯ ಅಧಿಕಾರವಾದ

ಅಪರಾಧಪರಿಹಾರಾಧಿಕಾರಕ್ಕೆ

ತಿರುನಾರಾಯಣಪುರದ ವಿಜಯರಾಘವ ಶರ್ಮನ

ಆಚಾರ್ಯ ಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧೩೪೫	೨೭	ಅಹಿತಧಿಯಾಂ	ಅಹಿತಧಿಯಾಂ
೧೩೪೬	೧೪	ಶ್ರೀಷ್ಠಾಂಶವು	ಶ್ರೀಷ್ಠಾಂಶವು,
,,	೩೬	ದೇದವತ್ವೆ	ದೇವತ್ವ
೧೩೫೦	೨೪	ಇತೆರೆನಿಗೆ	ಇತರನಿಗೆ
೧೩೫೩	೧	ಮೇದೆನುಂ	ಮೇದೆನು
,,	೨	ಅತಿಶಯಾಧಾನ್ರ	ಅತಿಶಯಾಧಾನಂ
೧೩೫೫	೯	ಅತಿಶಯ್ಯ	ಅತಿಶಯು
೧೩೫೬	೩	ಇವರರ್ಥವು	ಇದರರ್ಥವು.
,,	೮	ಎಂದ	ಎಂದು
೧೩೬೦	೨೨	ಶರ್ವೇಶ್ವರನ	ಸರ್ವೇಶ್ವರನ
೧೩೬೨	೧	ಯುತ್ತಾಲ್	ಯತ್ತಾಲ್
,,	೧೫	ಂದರ್ಭದಲ್ಲಿ	ಸಂದರ್ಭದಲ್ಲಿ
,,	೧೭	ಸವಸ್ತ	ಸಮಸ್ತ
,,	೨೮	ಈ ವದಕ್ಕೆ	ಈ ಪದಕ್ಕೆ
೧೩೬೩	೧	ಭಕ್ತೈಷು	ಭಕ್ತೇಷು
,,	೧೧	ಆಭ್ಯಧಿಕಾ	ಅಭ್ಯಧಿಕಾ
೧೩೬೮	೫	ಆರಾಧ	ಆರಾಧ್ಯ
೧೩೮೧	೨೫	ಶೇಪಭೂತನೇ	ಶೇಷಭೂತನೇ ;
೧೩೮೪	೩	ವ್ಯಾಖ್ಯಾತಾಕ್ಕಳಾದ	ವ್ಯಾಖ್ಯಾತಾಕ್ಕಳಾನ
,,	೬	ಕ್ರಮಂ	ಕ್ರಯಂ
,,	೧೫	ಕೋರಿಟು	ಕೋರಿಟ್ಟು
,,	೧೬	ತಿರುಕ್ಕೋಟ್ಟಯ.ೂರ್	ತಿರುಕ್ಕೋಟ್ಟಿಯೂರ್
೧೩೮೯	೧೦	ಆಕ್ಷೇಪಿಸಲ	ಆಕ್ಷೇಪಿಸಲು
೧೩೯೦	೯	ಪಿತರ್ಯ್ರ	ಪಿತ್ರ್ಯ
,,	೧೩	ಭರ್ತೃ	ಭರ್ತೃ
೧೩೯೬	೨೨	ಕರ್ಮಕೆ	ಕರ್ಮಕ್ಕೆ
,,	೨೩	ಯಾಗುತ್ತದ್ಕೆ	ಯಾಗುತ್ತದೆ ;
೧೩೯೮	೧೯	ತಿಳಿಸುತ್ತಾರೆ	ತಿಳಿಸುತ್ತಾರೆ.
೧೪೦೦	೨೭	ಶ್ರೀರಾಮ ಗೆ	ಶ್ರೀರಾಮನಿಗೆ

ಪುಟ	ಪಙ್ತಿ	ಅಶುದ್ಧ	ಶುದ್ಧ
೧೪೦೨	೭	ಶೇಷಿತ	ಶೇಷಿತ್ವ
೧೪೦೩	೨೪	ಇಚ್ಛೈಸಿದ್ದರೂ	ಇಚ್ಛೈಸಿದ್ದರೂ
೧೪೦೫	ಕೊನೆಯ ಪಙ್ತಿ	ಈಶ್ವರಮುತಾತ್ವಸು	ರ್ಕ ಈಶ್ವರತ್ವಮು ಇತ್ಯಾದಿ
೧೪೧೪	೨೩	ಭುಜ್ತ್ವ	ಭುಕ್ತ್ವ
೧೪೧೬	೨೦	ಸ್ಪೃಷಣೀಯ	ಸ್ಪೃಹಣೀಯ
೧೪೨೦	೧೧	ನಡಮಾರ್ಕ್ಕಡಿವೈ	ನಡಮಾರ್ಕಡಿವೈ
೧೪೨೩	೧೮	ಎಂಬ ಪಾರ್ಥ	ಎಂಬ ಅಪಾರ್ಥ
೧೪೨೪	೭	ಪರಿತ್ಯಾಗೇ-ಆ	ಪರಿತ್ಯಾಗೇ
,,	೧೬	ಸಂಚಯ	ಸಂಚಿತ
೧೪೨೫	೧	ದುದರಿಂದ	ಆದುದರಿಂದ
೧೪೨೬	೨೧	ಮಾಡಿ	ಮಾಡದೆ
,,	ಕೊನೆಯ ಪಙ್ತಿ	ಹಾನಿಯು	ಹಾನಿಯು.
೧೪೨೭	೧೭	ವಿನ್ದದಿ	ವಿನ್ದತಿ
,,	೧೯	ಹೊಂದುವರು	ಹೊಂದುವರು.
[illegible]	೨	ಶಾಸ್ತ್ರದಿರಪೇಕ್ಷ	ಶಾಸ್ತ್ರನಿರಪೇಕ್ಷ
[illegible]	ಕೊನೆಯ ಪಙ್ತಿ	ಇರುನ್ದತಾಳ್	ಇರುನ್ದನಾಳ್
[illegible]	,,	ಅತ್ಮನಲ್ಲಿ	ಆತನಲ್ಲಿ
[illegible]	೫	ಧುವ	ಧ್ರುವ
[illegible]	ಕೊನೆಯ ಪಙ್ತಿ	ಶನಸ್ಸರ್ವ	ಶ್ಚನಸ್ಸರ್ವ
[illegible]	೬	ಯುಷಾಕಂ	ಯುಷ್ಮಾಕಂ
[illegible]	೬	ಶಾಸ್ತ್ರಿಯ	ಶಾಸ್ತ್ರೀಯ
[illegible]	೧೫	ದ್ರೀಹ	ದ್ರೋಹ
[illegible]	೧೬	ಅಜ್ಞಾನಾಂಘಕಾರ	ಅಜ್ಞಾನಾಂಧಕಾರ
೧೪೮೧	೧೭	ಪ್ರಮಾಣವು	ಪ್ರಮಾಣವು.
೧೪೯೦	೧೯	ಮನಾಮುಸಾರ	ಮನಾನುಸಾರ
೧೪೯೧	೨೧	ಪ್ರಭವ	ಪ್ರಭಾವ
[illegible]	[illegible]	ವೈಗುಣ್ಯ	ವೈಗುಣ್ಯ
,,	೧೨	ಲೋಪವೂ	ಲೋಪವೂ.
[illegible]	೮	ಭಾರಾ	ಭಾರಾ
[illegible]	[illegible]	[illegible]	[illegible]

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧೫೨೩	೩	ಶರಣಂ ವ	ಶರಣಂ ಹಿ ವಃ
,,	೨೩	ಕಕ್ಷಕಳು	ರಕ್ಷಕಳು.
೧೫೩೯	೫	ಶರೀರಾಂಭಕ	ಶರೀರಾರಂಭಕ
೧೫೪೭	೨೩	ಅಮುಷ್ಠಾನಕ್ಕೆ	ಅನುಷ್ಠಾನಕ್ಕೆ
೧೫೪೯	೭	ವಿರುದ್ಧವಾಮುದು	ವಿರುದ್ಧವಾದುದು.
೧೫೫೫	೧೩	ಅಂಗೀಕರಿಸಿರ	ಅಂಗೀಕರಿಸಿರು
೧೫೫೮	೨೧	ಗರುತ್ಮಂತನು	ಗರುತ್ಮಂತನು,
,,		ಬಿದು	ಬಿದ್ದು
,,	೨೨	ಇಂತಹ್ವ	ಇಂತಹ
೧೫೭೧	೭	ಅಸಾಧ್ಯವು	ಅಸಾಧ್ಯವು.
೧೫೭೪	೮	ನಾಗುವನು	ನಾಗುವನು.
,,	೬	ಉದಲ್ಲಿ	ದಲ್ಲಿ
,,	,,	ಪಪಾದಿಸಿರುತ್ತಾರೆ.	ಉಪಪಾದಿಸಿರುತ್ತಾರೆ.
೧೫೭೧	ಕೊನೆಯ ಪಙ್ಕ್ತಿ	ಉಪಾಯನಷ್ಠಾನ	ಉಪಾಯಾನ ಷ್ಠಾನ
೧೫೭೫	೨೧	ಹೊಂದಿದದಲ್ಲವು	ಹೊಂದಿದುದಲ್ಲವು.
೧೫೭೭	೨೪	ಇರತ್ತದೆ.	ಇರುತ್ತದೆ.
೧೫೮೩	೨೩	ಭಾಗವ	ಭಾಗವತ
೧೫೮೪	೨೦	ಕ್ಷಿಪ್ರಪಣೆಯನ್ನೆ	ಕ್ಷಿಪ್ರಪಣೆಯನ್ನೆ
೧೫೮೬	ಕೊನೆಯ ಪಙ್ಕ್ತಿ	ಭಾಗವತನಾನದನೋ	ಭಾಗವತನಾದನೋ
೧೫೯೨	೧೪	ಧುರ್ಯೋಧನ	ದುರ್ಯೋಧನ
೧೫೯೪	೧೮	ಶಿಕ್ಷೆಯೂ	ಶಿಕ್ಷೆಯು
೧೬೦೨	೧೪	ವೂರ್ವಕವಾಗಿ	ಪೂರ್ವಕವಾ
,,	೨೭	ಪ ಸಮೃದ್ಧಿಯಿಂದ ಭಿ ರವವ ಆೃದ್ಧಿ ಹೊಂದಿದ	ಪರಮ ಸಮೃದ್ಧಿಯಿಂದ ಅ ವೃದ್ಧಿ ಹೊಂದಿದ

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯ ಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ

ಶ್ರೀನಿಗಮಾಂತ ಮಹಾದೇಶಿಕರವರ

೧	ಅಭೀತಿಸ್ತವವೆಂಬ ಶ್ರೀ ರಂಗನಾಥಸ್ತೋತ್ರವು	೦	೧೨	೦
೨.	ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀ ಸ್ತೋತ್ರವು	೦	೧೨	೦
೩.	ಶ್ರೀಮದ್ರಹಸ್ಯತ್ರಯಸಾರದ			
(೧)	ಗುರುಪರಂಪರಾಸಾರವು	೦	೧೨	೦
(೨)	ಉಪೋದ್ಘಾತಾಧಿಕಾರವೂ ಸಾರನಿಷ್ಕರ್ಷಾಧಿಕಾರವೂ	೦	೯	೦
(೩)	ಪ್ರಧಾನಪ್ರತಿತಂತ್ರಾಧಿಕಾರವೂ ಅರ್ಥಪಂಚಕಾಧಿಕಾರವೂ	೦	೧೨	೦
(೪)	ತತ್ವತ್ರಯಾಧಿಕಾರವು	೦	೧೨	೦
(೫)	ಪರದೇವತಾಪಾರಮಾರ್ಥ್ಯಾಧಿಕಾರವೂ ಮುಮುಕ್ಷುತ್ವಾಧಿಕಾರವೂ.	೦	೧೦	೦
(೬)	ಅಧಿಕಾರಿವಿಭಾಗಾಧಿಕಾರವೂ, ಉಪಾಯವಿಭಾಗಾಧಿಕಾರವೂ. ಪ್ರಪತ್ತಿಯೋಗ್ಯಾಧಿಕಾರವೂ	೦	೯	೦
(೭)	ಪರಿಕರವಿಭಾಗಾಧಿಕಾರವೂ ಸಾಂಗಪ್ರಪದನಾಧಿಕಾರವೂ	೦	೧೧	೦
(೮)	ಕೃತಕೃತ್ಯಾಧಿಕಾರವೂ, ಸ್ವನಿಷ್ಠಾಭಿಜ್ಞಾನಾಧಿಕಾರವೂ ಉತ್ತರಕೃತ್ಯಾಧಿಕಾರವೂ	೦	೧೨	೦
(೯)	ಪುರುಷಾರ್ಥಕಾಷ್ಠಾಧಿಕಾರವೂ, ಶಾಸ್ತ್ರೀಯನಿಯಮನಾಧಿಕಾರವೂ ಅಪರಾಧಪರಿಹಾರಾಧಿಕಾರವೂ	೧	೦	೦
೪.	ಶ್ರೀಯಾಮುನೇಯರವರ ಚತುಶ್ಲೋಕೀ	೦	೪	೦

ಎಲ್ಲಾ ಪುಸ್ತಕಗಳನ್ನೂ ಒಟ್ಟಿಗೆ ತೆಗೆದುಕೊಳ್ಳುವವರಿಗೆ ಪುಸ್ತಕ ಒಂದಕ್ಕೆ ಒಂದಾಣೆ ಡಿಸ್ಕೌಂಟು ಕೊಡಲ್ಪಡುತ್ತದೆ.

ಪಿ. ಎಂ. ವಿಜಯರಾಘವಾಚಾರ್,

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್,

ಬಸವನಗುಡಿ, ಬೆಂಗಳೂರು ಸಿಟಿ.

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ
ದ್ವಿತೀಯ ರತ್ನವು—ಎಂಟನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಕೃತಕೃತ್ಯಾಧಿಕಾರಸ್ತ್ರಯೋದಶಃ
ಸ್ವನಿಷ್ಠಾಭಿಜ್ಞಾನಾಧಿಕಾರಶ್ಚತುರ್ದಶಃ
ಉತ್ತರಕೃತ್ಯಾಧಿಕಾರಃ ಪಂಚದಶಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸ್ಕೂಲ್ ಇನ್ಸ್ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ
ಗೀತಾ ವಿಲಾಸ ಪ್ರೆಸ್, ಅವೆನ್ಯೂ ರೋಡ್
೧೯೩೩

ಕ್ರಯ ೧೨ ಆಣೆಗಳು

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಥ ಕೃತಕೃತ್ಯಾಧಿಕಾರಃ

ಸಮರ್ಥೇ ಸರ್ವಜ್ಞೇ ಸಹಜ ಸುಹೃದಿ ಸ್ವೀಕೃತಭರೇ
ಯದರ್ಥಂ ಕರ್ತವ್ಯಂ ನಪುನರಿಹ ಯತ್ಕಿಞ್ಚಿದಪಿ ನಃ ।

ಹಿಂದೆ ನಿಗಮಾನ್ತ ಮಹಾದೇಶಿಕರವರು ಉಪದೇಶಿಸಿದ ೧೨ ಅಧಿಕಾರಗಳೂ ಮುಂದಿನ ೧೦ ಅಧಿಕಾರಗಳೂ ಸೇರಿ ಒಟ್ಟು ೨೨ ಅಧಿಕಾರಗಳು ಅರ್ಥಾ**ನುಶಾಸನ** ಭಾಗಕ್ಕೆ ಸೇರಿದವು. ಅಲ್ಲಿಂದ ಮುಂದಿನ ನಾಲ್ಕು ಅಧಿಕಾರಗಳು ಎರಡನೇ ಸ್ಥಿರೀಕರಣ ಭಾಗಕ್ಕೆ ಸೇರಿದವು. ಇವುಗಳಲ್ಲಿ ಹಿಂದೆ ವಿವರಿಸಲ್ಪಟ್ಟ ಸಿದ್ಧೋಪಾಯ ಸಾಧ್ಯೋಪಾಯಾದಿಗಳ ವಿಷಯದಲ್ಲಿ ಬರಬಹುದಾದ ಸಂಶಯ ಪೂರ್ವಪಕ್ಷಗಳಿಗೆಲ್ಲಾ ಸರಿಯಾದ ಸಮಾಧಾನವನ್ನು ಹೇಳಿ ಹಿಂದೆ ಹೇಳಿದ ಅಭಿಪ್ರಾಯಗಳನ್ನೇ ದೃಢಪಡಿಸಿ ಹೇಳುವದರಿಂದ ಇದಕ್ಕೆ ಸ್ಥಿರೀಕರಣ ಭಾಗವೆಂದು ಹೆಸರು.

ಅವತಾರಿಕೆ. ಹಿಂದಿನ ಶ್ಲೋಕದಲ್ಲಿ ತತ್ರ ಸ್ವಯಂ ನಿರ್ಭರಃ ಎಂಬುವದರಿಂದ ಸಾಂಗ ಪ್ರಪದನಾನುಷ್ಠಾನವನ್ನು ಅನುಷ್ಠಿಸಿದವನಿಗೆ ನಿರ್ಭರತ್ವವು ಹೇಳಲ್ಪಟ್ಟಿತು. ಈ ಸಂದರ್ಭದಲ್ಲಿ ಉಂಟಾಗಬಹುದಾದ ಕೆಲವು ಶಙ್ಕೆಗಳಿಗೆ ಈ ಶ್ಲೋಕದಿಂದ ಸಮಾಧಾನ ಹೇಳುವವರಾಗಿ, ನಿರ್ಭರತ್ವವನ್ನು ಸ್ಥಾಪಿಸಿ, ಅಂಥಾವನು ಕೃತಕೃತ್ಯನೆಂಬುವವರಲ್ಲಿ ಈಷದಪಿ ಸಂದೇಹವಿಲ್ಲವೆಂದು ಈ ಅಧಿಕಾರಾರ್ಥವನ್ನು ಸಂಗ್ರಹಿಸಿ ಹೇಳುತ್ತಾರೆ :—

೧. ಸರ್ವೇಶ್ವರನು ಭರನ್ಯಾಸ ಸ್ವೀಕಾರವನ್ನು ಮಾಡಿದರೂ, ಈ ಪ್ರಪನ್ನನಲ್ಲಿ ಏನೋ ಒಂದು ಕಾರಣಾನ್ತರದಿಂದ ಸ್ವೀಕೃತಭರವನ್ನು ತ್ಯಾಗಮಾಡಬಹುದು. ಆಗ ನಿರ್ಭರತ್ವವು ಹೇಗೆ ? ಇದಕ್ಕೆ ಸಮಾಧಾನವು, ಸರ್ವೇಶ್ವರನು ಸಹಜ ಸೌಹಾರ್ದ್ಯ ಸಾಮರ್ಥ್ಯ ಉಳ್ಳವನಾಗಿ, ಸರ್ವಜ್ಞನಾದುದರಿಂದ ನಿರ್ಭರತ್ವವು ಕೂಡುತ್ತದೆಂದು ಹೇಳುತ್ತಾರೆ.

೨. "ನಾನ್ಯಃ ಪನ್ಥಾ ವಿದ್ಯತೇ ಅಯನಾಯ", (೧) "ಭಕ್ತ್ಯಾತ್ವನನ್ಯಯಾ ಶಕ್ಯ" (೨) ಎಂದು ಯೋಗವೇ ಪರಮ ಸಾಧನವೆಂದು ಹೇಳಿರುವಾಗ, ಈ ಉಪಾಯವನ್ನು ಬಿಟ್ಟು ನಿರ್ಭರತ್ವವು ಹೇಗೆ ? ಇದಕ್ಕೆ ಸಮಾಧಾನವು. ಕಠ ಶ್ರುತಿ, ಪಾದ್ಮಪುರಾಣ ಗೀತಾ ಚರಮಶ್ಲೋಕಾದಿಗಳಲ್ಲಿ ಉಪಾಯವು ವಿಹಿತವಾಗಿರುವದರಿಂದ ನಿರ್ಭರತ್ವಕ್ಕೆ ತೊಂದರೆಯಿಲ್ಲವೆಂದ ಉಪದೇಶಿಸುತ್ತಾರೆ.

೩, "ಜಾಯಮಾನೋವೈ ಬ್ರಾಹ್ಮಣ ಸ್ತ್ರಿಭಿರ್‌ಋಣವಾ ಜಾಯತೇ" ಎಂದು ಹೇಳಿರುವ ಹಾಗೆ ದೇವರ್ಷಿ ಪಿತೃ ಋಣಗಳಿಗಾಗಿ ಈತನಿಗೆ ಯಾವಜ್ಜೀವವೂ ಕರ್ತವ್ಯಾಂಶವಿರುವದರಿಂದ ನಿರ್ಭರತ್ವವು ಹೇಗೆ ? "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತ ಮಶ್ನುತೇ" ಅವಿದ್ಯಯಾ - ನಿತ್ಯ ಕರ್ಮಾನುಷ್ಠಾನಗಳಿಂದ, ಮೃತ್ಯುಂ ತೀರ್ತ್ವಾ ಸಂಸಾರವನ್ನು ದಾಟಿ, ವಿದ್ಯಯಾ ಬ್ರಹ್ಮಜ್ಞಾನದಿಂದ, ಅಮೃತ ಮಶ್ನುತೇ - ಮೋಕ್ಷಸುಖವನ್ನು ಹೊಂದುತ್ತಾನೆಂದು ಹೇಳಿರುವದರಿಂದ, ನಿತ್ಯಕರ್ಮಾನುಷ್ಠಾನವನ್ನು ಈ ಕೃತಕೃತ್ಯನು ಮಾಡತಕ್ಕದ್ದೇ ಬಿಡತಕ್ಕದ್ದೇ ? ವಿಧಿಬಲಾದ ಪ್ರಯುಕ್ತ ಕೃತಕೃತ್ಯನೂ ನಡಿಸಲೇಬೇಕು ಎಂದರೆ, ಸೂರ್ಯಾಗ್ನಿಗಳಾದ ಅನ್ಯದೇವತಾ ಸ್ಮರಣರೂಪ ಪ್ರತ್ಯವಾಯ ಉಂಟಾಗಿ "ಯೋನ್ಯಾಂ ಸ್ವಾಂ ದೇವತಾ ಮತಿಯಜತೇ ಪ್ರಸ್ವಾಯೈ ದೇವತಾಯೈ ಚ್ಯವತೇ ನ ಪರಾಂ ಪ್ರಾಪ್ನೋತಿ ಪಾಪೀಯಾನ್ ಭವತಿ" ಎಂಬ ಪ್ರಮಾಣಾನುಸಾರ ಅನ್ಯದೇವತಾಭಜನದಿಂದ ಪಾಪಿಯಾಗುತ್ತಾನೆಂದೂ ಅಂತವನಿಗೆ ಮೋಕ್ಷಸುಖವಿಲ್ಲೆಂದೂ ಹೇಳಿರುವದರಿಂದ ನಿರ್ಭರತ್ವವು ಹೇಗೆ ? ಇದಕ್ಕೆ ಸಮಾಧಾನವು, ಸಂಧ್ಯಾವಂದನ, ದೇವರ್ಷಿ ಪಿತೃತರ್ಪಣಾದಿ ನಿತ್ಯಕರ್ಮಾನುಷ್ಠಾನಗಳೆಲ್ಲಾ ವಿಧಿವಿಹಿತ ಕರ್ಮಗಳಾದುದರಿಂದ ಅವಶ್ಯಾನುಷ್ಠೇಯಗಳೇ ; ತ್ಯಾಗ ಹೇಳುವದರಿಂದ ಪ್ರತ್ಯವಾಯವಿಲ್ಲವು. ಅದೂ ಅಲ್ಲದೆ, ಆ ಸಂದರ್ಭದಲ್ಲಿ ಸೂರ್ಯಾಗ್ನಿಗಳು ಆರಾಧಿಸಲ್ಪಡಲಿಲ್ಲವು ತತ್ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಟ್ಟನೆಂದು ಭಾವಿಸಬಹುದು ; ಅಥವಾ ಸೂರ್ಯಾಗ್ನಿ ಶಬ್ದಗಳು ಕೂಡ ಪರಮಾತ್ಮ

[೧] ಪುರುಷಸೂಕ್ತ [೨] ಗೀ

नियच्छन्तस्तस्मिन्निरुपधि महानन्द जलधौ
कृतार्थीकुर्मस्स्वं कृपणमपि कैङ्कर्यधनिनः ॥ ३० ॥

ನನ್ನೇ ಶಬ್ದವ್ಯುತ್ಪತ್ತಿಮೂಲಕ ಬೋಧಿಸುತ್ತವೆ ಎಂದಾಗಲಿ ಭಾವಿಸಬಹುದೆಂದು ಈ ಅಧಿಕಾರದಲ್ಲಿ ಉಪದೇಶಿಸುತ್ತಾರೆ.

ಅರ್ಥ :—**ಸಮರ್ಥೇ** - ಸರ್ವಶಕ್ತನಾದ, **ಸರ್ವಜ್ಞೇ** - ಸಮಸ್ತವನ್ನೂ ಏಕಕಾಲದಲ್ಲೇ ಸಾಕ್ಷಾತ್ಕರಿಸುವ ಜ್ಞಾನವುಳ್ಳ, **ಸಹಜಸುಹೃದಿ** - ಚೇತನನ ವಿಷಯದಲ್ಲಿ ನಿರ್ಹೇತುಕ ಕೃಪೆಯುಳ್ಳ ಸರ್ವೇಶ್ವರನು, **ಸ್ವೀಕೃತಭರೇ ಸತಿ** ಆ ಕಾರಣದಿಂದಲೇ ಪ್ರಪನ್ನನಿಂದ ಸಮರ್ಪಿಸಲ್ಪಟ್ಟ ರಕ್ಷಾಭರವನ್ನು ಸ್ವೀಕರಿಸಿದವನಾಗಲಾಗಿ, **ಯದರ್ಥಂ** - ಯಾವ ಸ್ವೀಕೃತ ಭರನಾದ ಸರ್ವೇಶ್ವರನ ಪ್ರೀತ್ಯರ್ಥವಾಗಿ ಎಂದರೆ ಕೈಂಕರ್ಯಪ್ರಾಪ್ತಿಗಾಗಿ, **ಪುನಃ ಕರ್ತವ್ಯಂ** - ಪುನಃ ಮಾಡತಕ್ಕದ್ದು, **ಇಹ** - ಈ ಪ್ರಪತ್ತ್ಯುತ್ತರಕಾಲದಲ್ಲಿ ಅಥವಾ **ಇಹ** - ಈ ಪ್ರಪದನ ಸಂದರ್ಭದಲ್ಲಿ, **ನಃ** - ನಮಗೆ, **ಯತ್ಕಿಂಚಿದಪಿ** - ಯಾವ ಸ್ವಲ್ಪ ಕರ್ತವ್ಯಾಂಶವೂ, **ನ** - ಎಂದರೆ ನಾಸ್ತಿ ಇಲ್ಲವೋ, **ತಸ್ಮಿನ್** - ಅಂತಹ ಎಂದರೆ ಸ್ವೀಕೃತಭರನಾದ, **ನಿರುಪಧಿ ಮಹಾನಂದ ಜಲಧೌ**, **ನಿರುಪಧಿ** - ತಡೆಯಿಲ್ಲದ, **ಮಹಾನಂದ ಜಲಧೌ** - ಮಹಾನಂದಕ್ಕೆ ಸಾಗರರೂಪನಾದ ಸರ್ವೇಶ್ವರನ ವಿಷಯದಲ್ಲಿ, **ಸ್ವಂ** - ತನ್ನನ್ನು, **ನಿಯಚ್ಛಂತಃ** - ನಿಯಮದಿಂದ ಐಕಾಂತ್ಯಭಾವವುಳ್ಳವರಾಗಿಯೂ ಮಾಡಿ, ಎಂದರೆ ಯಾವಾಗಲೂ ಸ್ವಾಮಿಗೆ ಕೈಂಕರ್ಯವನ್ನೆಸಗುವದರಲ್ಲೇ ವಿಶ್ವಾಸವುಳ್ಳವರಾಗಿ ಅಥವಾ ಯಾವಾಗಲೂ ಆತನ ವಿಷಯದಲ್ಲಿ ಭಕ್ತಿ ವಿಶ್ವಾಸಗಳನ್ನುಳ್ಳವರಾಗಿ ಆತನಲ್ಲೇ ಸಕ್ತವಾದ ಮನಸ್ಸುಳ್ಳವರಾಗಿ ಆತನ್ನನುಭವಿಸುವವರಾಗಿ, **ಕೃಪಣಮಪಿ** - ತಾನು ಇದಕ್ಕೆ ಮೊದಲು ಸರ್ವೇಶ್ವರನಿಗೆ ಕೈಂಕರ್ಯವಿಷಯದಲ್ಲಿ ತುಂಬಾ ದರಿದ್ರನಾಗಿದ್ದರೂ ಕೂಡ, **ಕೈಂಕರ್ಯಧನಿನಃ** - ಈಗ ಎಂದರೆ ಸಾಂಗಪ್ರಪದನಾನುಷ್ಠಾನಾನಂತರ ಕೈಂಕರ್ಯಮಾಡುವದರಿಂದ, ಭಾಗ್ಯಶಾಲಿಗಳಾಗಿಯೂ **ಕೃತಾರ್ಥೀಕುರ್ಮಃ** ಕೃತಾರ್ಥನನ್ನಾಗಿ ಮಾಡಿಕೊಳ್ಳುವೆವು. ಇನ್ನೊಂದು ವಿಧವಾಗಿಯೂ ಅರ್ಥಮಾಡಬಹುದು :—**ಯದರ್ಥಂ** - ಸ್ವರಕ್ಷಣಮೂಲಕವಾಗಿ ಯಾವ ಭಗವತ್ಕೈಂಕರ್ಯಾನುಭವಗಳ ಪ್ರಾಪ್ತಿ ಉಂಟಾಗುತ್ತದೋ ಅದಕ್ಕಾಗಿ, **ಕರ್ತವ್ಯಂ** - ಮಾಡತಕ್ಕದ್ದು, **ನಃ** - ಭರನ್ಯಾಸವನ್ನು ಮಾಡಿದ ನಮಗೆ, **ಪುನಃ** - ಭರಸ್ವೀಕಾರಾನಂತರ **ಯತ್ಕಿಂಚಿದಪಿ** - ಯಾವುದೊಂದು ಸ್ವಲ್ಪ ಕರ್ತವ್ಯಾಂಶವೂ, **ನ** ನಾಸ್ತಿ, ಇಲ್ಲವೋ, **ನಿರುಪಧಿ ಮಹಾನಂದ ಜಲಧೌ** ಅಂತಹ ನಿರುಪಾಧಿಕವಾದ ಮಹಾನಂದ ಸಾಗರರೂಪ

ನಾದ, **ತಸ್ಮಿನ್** - ಭಗವತ್ಕೈಂಕರ್ಯಾನುಭವದಲ್ಲಿ, **ಸ್ವಂ ನಿಯುಞ್ಜ್ಮಹೇ** - ತನ್ನನ್ನು ನಿಯಮಿಸಿಕೊಳ್ಳುವಂಥಾವವನ್ನಾಗಿಯೂ, **ಕೃಪಣಮಪಿ** - ಪ್ರಪದನಕ್ಕೆ ಮೊದಲು ಕೈಂಕರ್ಯ ದಾರಿದ್ರ್ಯವುಳ್ಳವನಾದರೂ ಕೂಡ, **ಕೈಂಕರ್ಯಧನಿನಃ** - ಅನಂತರ ಕೈಂಕರ್ಯ ಭಾಗ್ಯಶಾಲಿಯಾಗಿಯೂ **ಕೃತಾರ್ಥೀಕುರ್ಮಃ** - ಕೃತಕೃತ್ಯರನ್ನಾಗಿ ಮಾಡಿಕೊಳ್ಳುವೆವು.

ಹೀಗೆ ಕೈಂಕರ್ಯ ಭಾಗ್ಯವು ದೊರಕಿದ ಮಾಹಾತ್ಮ್ಯದಿಂದ **ಕೈಙ್ಕರ್ಯಧನಿನಃ** ಎಂದು ಬಹುವಚನ ಪ್ರಯೋಗವು.

ತಾತ್ಪರ್ಯ - ಸರ್ವೇಶ್ವರನು ನಮ್ಮ ರಕ್ಷಾಭರವನ್ನು ಸ್ವೀಕರಿಸಲು ಮೂರು ಮುಖ್ಯ ಗುಣಗಳು ಆತನಲ್ಲಿರಬೇಕೆಂದು ಇಲ್ಲಿ ಪ್ರಥಮತಃ ಉಪದೇಶಿಸುತ್ತಾರೆ. (೧) **ಸಾಮರ್ಥ್ಯವು.** ಸರ್ವೇಶ್ವರನಿಗೆ ಸರ್ವಶಕ್ತಿತ್ವವು ಇಲ್ಲದೆಹೋದರೆ ನಮ್ಮ ಅಸಂಖ್ಯಾತವಾದ ಅಪರಾಧಗಳನ್ನು **ಹೋಗಲಾಡಿಸಿ** ರಕ್ಷಿಸುವ ಶಕ್ತಿಯಿಲ್ಲದೆ ಹೋಗಿ ಆಗ **"ತತ್ರಾಶಕ್ತ ಇತಿ ಪ್ರಥೇತ ಹಿ"** (ಕ್ಷಮಾ ಷೋಡಶಿ) ಅಶಕ್ತನೆಂಬದಾಗಿ ಲೋಕದಲ್ಲಿ ಅಪಖ್ಯಾತಿಯುಂಟಾಗೀತಾದುದರಿಂದ, ಆತನು ಸಮರ್ಥನಾಗಿರಬೇಕು.

೨. **ಸರ್ವಜ್ಞತ್ವವು** ಯಾವನು ಅನುಗ್ರಹಪಾತ್ರನಾಗಿ "ದಯನೀಯ"ನು, ಯಾವನು ನಿಗ್ರಹಕ್ಕೆ ಪಾತ್ರನಾಗಿ ದಂಡನೀಯನು ಎಂದು ವಿಮರ್ಶೆಮಾಡಿ ತಿಳಿಯಲು ಸರ್ವೇಶ್ವರನಲ್ಲಿ ಸರ್ವಜ್ಞತೆಯು ಆವಶ್ಯಕವು. ಇಲ್ಲವಾದರೆ ಶಿಕ್ಷಾರ್ಹನು ಅನುಗ್ರಹಿಸಲ್ಪಡುವನು, ಅನುಗ್ರಹಪಾತ್ರನು ಶಿಕ್ಷಿಸಲ್ಪಡುವನು. ಆದುದರಿಂದ ಆತನಲ್ಲಿ ಸರ್ವಜ್ಞತೆಯಿರಬೇಕು. ಆ ಸರ್ವಜ್ಞತೆ ಶ್ರೀರಾಮನಲ್ಲಿದ್ದುದರಿಂದಲೇ ಮಹಾಪ್ರಾಜ್ಞನಾದ ವಿಭೀಷಣನು ಇತರರಿಂದ ನಿರೋಧಿಸಲ್ಪಟ್ಟರೂ ರಕ್ಷಿಸಲ್ಪಟ್ಟನು. ಆ ಸರ್ವಜ್ಞತೆಯ ಮೂಲಕವಾಗಿಯೇ ಆತನು ಸಮುದ್ರತರಣ ಲಂಕಾಪ್ರವೇಶವಿಲ್ಲದೆಯೇ ಲಂಕಾರಾಜ್ಯದಲ್ಲಿ ಅಭಿಷಿಕ್ತನಾದನು. ಧರ್ಮರಾಜ ಅರ್ಜುನಾದಿಗಳಿಗೆ ದುರ್ಯೋಧನಾದಿಗಳನ್ನು ವಧಿಸಲು ಇಷ್ಟವಿಲ್ಲದಿದ್ದರೂ ಆ ಸರ್ವಜ್ಞತೆಯ ಮೂಲಕವಾಗಿಯೇ ಆ ದುರ್ಯೋಧನಾದಿಗಳು ಅತ್ಯುತ್ಕಟಪಾಪಿಗಳೆಂದು ತಿಳಿದು ದುಷ್ಕೃತಿಗಳ ವಿನಾಶವು ಮಾಡಲ್ಪಟ್ಟಿತು.

೩. **ಸಹಜಸುಹೃತ್ತ್ವ** — ನಿರ್ಹೇತುಕ ಕೃಪೆಯು. ಒಬ್ಬನು ಪ್ರಾರ್ಥಿಸಿದುದನ್ನು ಕೊಡುವ ಸಾಮರ್ಥ್ಯವೇನೋ ಇರಬಹುದು. ಕೃಪೆಯಿಲ್ಲದಿದ್ದರೆ ಫಲಕಾರಿಯಾಗಲಾರದು. ಆದುದರಿಂದ ಕೃಪೆಯೂ ಆವಶ್ಯಕವು. ಹಾಗೆಯೇ ಸಹಾಯಮಾಡಲು ಒಬ್ಬನಲ್ಲಿ ಕೃಪೆಯಿರಬಹುದು, ಸಾಮರ್ಥ್ಯವಿಲ್ಲದಿದ್ದರೂ ಆ ಕೃಪೆಯು ಕಾರ್ಯಕಾರಿಯಾಗದು. ಆದುದರಿಂದ ಸಾರ್ವಜ್ಞತೆಯಿಂದ ಕೂಡಿದ ಸಾಮರ್ಥ್ಯವೂ ಕೃಪೆಯೂ ಸಹ ಆವಶ್ಯಕವೆಂದು ಇದರಿಂದ ಹೇಳಿದಂತಾಯಿತು.

ಈ ಸುಹೃತ್ತ್ವವು ಸರ್ವೇಶ್ವರನಿಗೆ ಸಹಜವಾದುದೆಂದು ಹೇಳಲ್ಪಟ್ಟಿರುತ್ತದೆ. ಈ
ಲೋಕದಲ್ಲಿರುವವರ ಸುಹೃತ್ತ್ವವು ಸಹಜವಾದುದಲ್ಲವು. ಒಂದು ವ್ಯಾಜವನ್ನು
ನಿಮಿತ್ತೀಕರಿಸಿ ಪರಸ್ಪರ ಸುಹೃತ್ತ್ವ ಉಂಟು. ಪಿತಾಪುತ್ರರಲ್ಲೂ, ಪತಿಪತ್ನಿಯ
ರಲ್ಲೂ, ಪ್ರಿಯಮಿತ್ರರಲ್ಲೂ ಇರುವ ಸುಹೃತ್ತ್ವವು ಒಂದು ನಿಮಿತ್ತವನ್ನು ವ್ಯಾಜೀ
ಕರಿಸಿ ಉಂಟಾದುದು. **ಉಪಕಾರ ಫಲಂಮೈತ್ರಂ** ಎಂದು ಮಹರ್ಷಿಯು ಹೇಳಿ
ರುವ ಹಾಗೆ ಪರಸ್ಪರ ಉಪಕಾರರೂಪವಾದುದು. ಸರ್ವೇಶ್ವರನು ನಮ್ಮಲ್ಲಿರಿಸಿರುವ
ಸುಹೃತ್ತ್ವವು ನಮ್ಮಿಂದ ಏನೊಂದನ್ನೂ ಅಪೇಕ್ಷಿಸದೆ ಇರುವದರಿಂದ **ಸಹಜ**
ವಾದುದು ಎಂದು ಹೇಳುತ್ತಾರೆ.

ಹೀಗೆ ಈ ಮೂರು ಗುಣಗಳೂ ಸರ್ವೇಶ್ವರನಲ್ಲಿರುವದರಿಂದಲೇ ಆತನು ಭರ
ಸ್ವೀಕಾರವನ್ನು ಮಾಡಲು ಯೋಗ್ಯನೆಂದು ಹೇಳುವದಕ್ಕಾಗಿ **ಸ್ವೀಕೃತಭರೇ**
ಎಂಬ ಪ್ರಯೋಗವು.

ಯಾವಾಗ ಭರಸ್ವೀಕಾರವನ್ನು ಮಾಡಿದನೋ, ಆತನು ಸತ್ಯಸಙ್ಕಲ್ಪನಾದ
ಪ್ರಯುಕ್ತ ಆ ರಕ್ಷಾಭರಕ್ಕೆ ಏನೊಂದೂ ಪ್ರತ್ಯವಾಯ ಉಂಟಾಗಲಾರದಾದು
ದರಿಂದ, ಅದಕ್ಕಾಗಿ ಇನ್ನು ಯಾವ ಪ್ರಯತ್ನವನ್ನೂ ಮಾಡುವ ಆವಶ್ಯಕ
ವಿಲ್ಲವು. ಅದಕ್ಕಾಗಿಯಾಗಲಿ, ಅದನ್ನು ಸ್ಥಿರಪಡಿಸಿಕೊಳ್ಳುವದಕ್ಕಾಗಲಿ ಆ ಸಂದ
ರ್ಭದಲ್ಲಿ ಕರ್ತವ್ಯಾಂಶವು ಈಷದಪಿ ಇಲ್ಲವೆಂದು, **ಕರ್ತವ್ಯಂ ನ ಪುನರಿಹ**
ಯದ್ಕಿಂಚಿದಪಿನಃ ಎಂಬುವದರಿಂದ ಉಪದೇಶಿಸಿರುತ್ತಾರೆ. ಸರ್ವೇಶ್ವರನು ಭರ
ಸ್ವೀಕಾರ ಮಾಡಿದರೂ, ಕಾರಣಾನ್ತರದಿಂದ ಭರತ್ಯಾಗ ಮಾಡುವನೆಂಬ ಭಯ
ವಿಲ್ಲದೆ **ನಿರ್ಭರೋ ನಿರ್ಭಯೋಸ್ಮಿ** ಎಂದು ಹೇಳಿದಹಾಗೆ ನಿರ್ಭರನಾಗಿರಬಹುದೆಂಬ
ತಾತ್ಪರ್ಯವು. ಈ ಲಘೂಪಾಯದಿಂದ ರಕ್ಷಾಭರತ್ವವು ಸಿದ್ಧಿಸೀತೋ ಇಲ್ಲವೋ,
ಏನಾದರೂ ಪ್ರಮಾದದಿಂದುಂಟಾಗುವ ದೋಷದಿಂದ ಭರಸ್ವೀಕಾರವು ವ್ಯತ್ಯಸ್ತ
ವಾದೀತೋ ಹೇಗೋ ಇತ್ಯಾದಿ ಶಙ್ಕೆಗಳಿಗೆ ಅವಕಾಶವಿಲ್ಲವೆಂಬ ಭಾವವೂ
ತೋರಿಬರುತ್ತದೆ. ಇದರಿಂದ ಮುಂದೆ ಉಪಪಾದನ ಮಾಡುವ ನಿಶ್ಶಙ್ಕತ್ವವೂ
ನಿರ್ಭಯತ್ವವೂ ಸೂಚಿಸಲ್ಪಟ್ಟವು.

ಆದರೆ ಭರನ್ಯಾಸಾನಂತರ ಬುದ್ಧಿಪೂರ್ವಕವಾಗಿ ಅಪರಾಧಗಳಲ್ಲಿ ಪ್ರಪ
ನ್ನನು ಪ್ರವರ್ತಿಸಿದರೆ, ಆಗಲಾದರೂ ಪುನಶ್ಶರಣಾಗತಿಯು ಕರ್ತವ್ಯವೆಂದು ಮುಂದೆ
ಹೇಳುವಾಗ ಕರ್ತವ್ಯಾಂಶವೇ ಇಲ್ಲವೆಂದು ಹೇಗೆ ಹೇಳಲು ಸಾಧ್ಯವೆಂದು
ಆಕ್ಷೇಪಿಸಿದರೆ, ಈ ಎರಡನೇ ಶರಣಾಗತಿಯು ಆ ದೋಷನಿವೃತ್ತಿಗಾಗಿ ಮಾತ್ರವೇ
ವಿನಾ ಮೋಕ್ಷಪ್ರಾಪ್ತಿಗಾಗಿ ಅಲ್ಲವು. ಮೋಕ್ಷಾರ್ಥವಾಗಿ, "**ಸಕೃದೇವ ಹಿ**
ಶಾಸ್ತ್ರಾರ್ಥಃಕೃತೋಽಯಂ ತಾರಯೇನ್ನರಂ" ಎಂದು ಹೇಳಿರುವ ಹಾಗೆ
ಒಂದೇ ಸಲವೇ ಭರನ್ಯಾಸವೇ ವಿನಾ, ಪುನಃ ಕರ್ತವ್ಯಾಂಶವು ಏನೂ ಇರುವದಿಲ್ಲ

ವೆಂಬ ಭಾವವು. ಆದುದರಿಂದಲೇ ಈತನಿಗೆ ನಿರ್ಭರತ್ವವೆಂಬುವದು ಸ್ವತಸ್ಸಿದ್ಧ ವೆಂದು ಸ್ಥಾಪಿಸಲ್ಪಟ್ಟಿತು.

ಯಾವಾಗ ನಿರ್ಭರತ್ವ, ನಿರ್ಭಯತ್ವ, ನಿಶ್ಶಂಕತ್ವಾದಿಗಳುಂಟಾಯಿತೋ ಆಗ ಈ ಸಾಂಗಪ್ರಪದನಾನುಷ್ಠಾನವನ್ನು ಮಾಡಿದವನು ಕೃತಕೃತ್ಯನೆಂದು ಹೇಳುವದ ಕ್ಕಾಗಿ **ಕೃತಾರ್ಥೀಕುರ್ಮಃ** ಎಂದು ಪ್ರಯೋಗಿಸಿರುತ್ತಾರೆ. ಭಗವತ್ಕೈಂಕರ್ಯಾನು ಭವಪ್ರಾಪ್ತಿಗಳಿಗಾಗಿ ಏನು ಮಾಡಬೇಕಾಗಿತ್ತೋ ಅದು ನಡೆದು ಇನ್ನೇನೂ ಅದಕ್ಕಾಗಿ ಮಾಡತಕ್ಕದ್ದಿಲ್ಲವಾದುದರಿಂದ ಕೃತಕೃತ್ಯನೆಂಬ ಭಾವವು.

ಹೀಗೆ ಕೃತಕೃತ್ಯನಾದನಂತರ ಈ ಪ್ರಪನ್ನನಿಗೆ ಮಾಡತಕ್ಕದ್ದೇನೂ ಇಲ್ಲ ವೋ ಎಂದರೆ ಉಂಟು ಎಂದುಪದೇಶಿಸುತ್ತಾರೆ. ಇಹದಲ್ಲೂ ದೇಹಾವಸಾನದ ವರೆವಿಗೂ ಭಗವತ್ಪ್ರೀಣನಾರ್ಥವಾಗಿ ಕೈಂಕರ್ಯಗಳನ್ನೆಸಗುತ್ತಿರಬೇಕು. ಭಗ ವದ್ಭಾಗವತ ಕೈಂಕರ್ಯಗಳಲ್ಲಿ ನಿರತನಾಗಿರುವ ಭಾಗ್ಯಶಾಲಿಯಾಗಿರಬೇಕು. ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳೂ ಕೂಡ ಭಗವತ್ಕೈಂಕರ್ಯಗಳಾಗಿ ಭಗವತ್ಪ್ರೀ ತ್ಯರ್ಥವಾಗಿ ಅನುಷ್ಠಿಸತಕ್ಕವು. ಕೃತಕೃತ್ಯನಾದರೂ ಇವುಗಳನ್ನು ಮಾಡತ ಕ್ಕದ್ದೇ ವಿನಾ ಶ್ರೀ ಶಾಂಕರಾಭಿಪ್ರಾಯ ಪ್ರಕಾರ ಬಿಡತಕ್ಕದ್ದಲ್ಲವು, **"ಅಹರಹ ಸ್ಸಂಧ್ಯಾಮುಪಾಸೀತ", "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಮೃತಮಶ್ನುತೇ"** ಇತ್ಯಾದಿ ವಿಧಿ ಪ್ರಮಾಣಗಳನ್ನನುಸರಿಸಿ ನಿತ್ಯ ನೈಮಿತ್ತಿಕ ಕರ್ಮರೂಪ ಕೈಂಕರ್ಯಗಳನ್ನನುಷ್ಠಿಸಿ ಭಾಗ್ಯಶಾಲಿಯಾಗಬೇಕೆಂದು ತಿಳಿಸುವದಕ್ಕಾಗಿ **ಕೈಂಕರ್ಯಧನಿನಃ** ಎಂದು ಪ್ರಯೋಗಿಸಿರುತ್ತಾರೆ. ದಾಸಭೂತನಾದ ಚೇತನನಿಗೆ ಭಗವನ್ಮುಖೋಲ್ಲಾಸ ಉಂಟಾಗುವಹಾಗೆ ಇಹದಲ್ಲೂ ಪರದಲ್ಲೂ ಸಹ ಕೈಂಕರ್ಯ ವನ್ನೆಸಗುವದೇ ಪರಮ ಭಾಗ್ಯೋದಯವು. ಆದುದರಿಂದಲೇ **ಧನಿನಃ** ಎಂಬ ಪ್ರಯೋಗವು. ಹೀಗೆ ಕೃತಕೃತ್ಯನಾಗಿ ಕೈಂಕರ್ಯವನ್ನೆಸಗುವದರಿಂದ ತಾನು ಹೃಷ್ಟಮನಸ್ಕನಾಗುವನೆಂಬ ಭಾವವೂ ತೋರಿಬರುತ್ತದೆ.

ಈ ಕೃತಕೃತ್ಯನು ಇನ್ನೇನಾದರೂ ಮಾಡತಕ್ಕದ್ದುಂಟೋ ಎಂದರೆ:— **ನಿರುಪಧಿ ಮಹಾನಂದ ಜಲಧೌ ತಸ್ಮಿನ್ ನಿಯಚ್ಛಂತಃ**, ಪರಿಪೂರ್ಣ ಪರ ಬ್ರಹ್ಮಾನುಭವವೇನು, ಆತನಿಗೆ ಮಾಡುವ ಸರ್ವವಿಧ ಕೈಂಕರ್ಯವೇನು ಇವುಗಳ ಪ್ರಾಪ್ತಿ ವಿಷಯದಲ್ಲಿ ಐಕಾಂತ್ಯವನ್ನು ಸ್ವೀಕರಿಸುವವರಾಗಿರಬೇಕು. ಇದರಿಂದ ಉತ್ತರಕೃತ್ಯ, ನಿರ್ಯಾಣ, ಗತಿಚಿಂತನಾದಿಗಳು ಸೂಚಿಸಲ್ಪಟ್ಟವು. ಈ ಪರಿ ಪೂರ್ಣ ಬ್ರಹ್ಮಾನುಭವವು ಎಂಥಾದ್ದೆಂದರೆ, ಉಪಾಧಿರಹಿತವಾದುದು ; ಇಲ್ಲಿನ ಆನಂದವಾದರೋ ಕರ್ಮಾನುಗುಣವಾಗಿ ಸೋಪಾಧಿಕವಾದುದು. **"ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ"** ಎಂದು ಹೇಳಿರುವ ಹಾಗೆ ಸ್ವಲ್ಪ ಸುಖವೆಂದು ತೋರಿ ಅದೇ ಪುನಃ ದುಃಖರೂಪವಾಗಿ ಪರಿಣ

ಮಿಸುತ್ತದೆ. ಮಕ್ಕಳನ್ನು ಪಡೆಯುವದು ಸುಖವೆಂದು ತೋರಿದರೂ, ಮಕ್ಕಳಿ ಗುಂಟಾಗುವ ರೋಗ ಮೊದಲಾದವುಗಳಿಂದ ಕರ್ಮಾನುಗುಣವಾಗಿ ಕ್ಲೇಶಕರ ವಾಗಿ ಕೆಲವರಿಗೆ ಪರಿಣಮಿಸಬಹುದು. ಆದುದರಿಂದ ಇಲ್ಲಿನ ಆನಂದವು ಅಲ್ಪತ್ವ ಅಸ್ಥಿರತ್ವ, ದುಃಖಮಿಶ್ರತ್ವ, ದುಃಖೋದರ್ಕತ್ವ, ಪ್ರಯಾಸ ಸಾಧ್ಯತ್ವಾದಿ ದೋಷಗಳಿಂದ ಸೋಪಾಧಿಕವು ಪರಮಪದದಾನಂದವಾದರೋ ಇಂತಹ ಉಪಾಧಿಗಳಿಲ್ಲವಾದವೆಂದು ತಿಳಿಸುವದಕ್ಕಾಗಿ **ನಿರುಪಧಿ** ಎಂಬ ಪ್ರಯೋಗವು. ಐಹಿಕಾನಂದಗಳಲ್ಲಿ ತರತಮ ಭಾವಗಳುಂಟು. ಅಂತಹ ತರತಮ ಭಾವಗಳು ಮಧ್ವ ಸಿದ್ಧಾಂತಿಗಳು ಹೇಳುವ ಹಾಗೆ ಈ ಬ್ರಹ್ಮಾನುಭವಾನಂದದಲ್ಲಿಲ್ಲವೆಂದು ಹೇಳುವದಕ್ಕಾಗಿ **ಮಹಾನಂದ** ವೆಂಬುವದರಿಂದ, ಆನಂದವು ಮಹತ್ತಾದು ದೆಂದು ತಿಳಿಸಿರುತ್ತಾರೆ. ಈ ಆನಂದವು **ಜಲಧಿ** ಸಮುದ್ರರೂಪವಾದುದೆಂದು ಹೇಳಿರುವದರಿಂದ ಈ ಆನಂದದ ಅಪರಿಚ್ಛಿನ್ನತ್ವ, ಅಗಾಧತ್ವಾದಿಗಳು ಸೂಚಿಸ ಲ್ಪಟ್ಟವು.

ಹೀಗೆ ಗುರುಮುಖೇನ ಸಾಂಗಪ್ರಪದನಾನುಷ್ಠಾನವನ್ನು ಮಾಡಿದ ಪ್ರಪ ನ್ನನು ತನ್ನ ರಕ್ಷಾವಿಷಯದಲ್ಲಿ ನಿರ್ಭರನಾಗಿ, ನಿರ್ಭಯನಾಗಿ, ಶಂಕಾರಹಿತ ನಾಗಿ, ತಾನು ಕೃತಕೃತ್ಯನೆಂದು ನಂಬಿ, ಭಗವತ್ಪ್ರೀತ್ಯರ್ಥವಾಗಿ ನಿತ್ಯ ನೈಮಿತ್ತಿಕ ಕರ್ಮಗಳನ್ನು ಫಲಾಭಿ ಸಂಧಿರಹಿತನಾಗಿ ಅನುಷ್ಠಿಸುತ್ತಾ, ಭಗವದ್ಭಾಗವತ ಕೈಂಕರ್ಯ ನಿರತನಾಗಿ, ಪರಮ ಪದದಲ್ಲಿ ತನಗೆ ಪ್ರಾಪ್ತವಾಗುವ ಪರಿಪೂರ್ಣ ಬ್ರಹ್ಮಾನುಭವ ಕೈಂಕರ್ಯಗಳನ್ನು ಚಿಂತಿಸುತ್ತಾ ಇರಬೇಕೆಂಬುವದು ಈ ಶ್ಲೋಕದ ಮುಖ್ಯ ತಾತ್ಪರ್ಯವು.

ಈ ಶ್ಲೋಕ ತಾತ್ಪರ್ಯವನ್ನು ಒಂದು ದೊಡ್ಡ ವಾಕ್ಯಮೂಲಕ **"ಇವ್ವು ಪಾಯನಿಷ್ಠರ್"** ಎಂದು ಪ್ರಾರಂಭಿಸಿ **"ತನ್ನಿಷ್ಠರಾಲುಮ್ ಕೊಂಡಾಡು ಮ್ಪಡಿ ಯಿರುಕ್ಕುಮ್"** ಎಂದು ಮುಗಿಸಿದ, ವಾಕ್ಯದ ಮೂಲಕ ಉಪಪಾದಿಸಿ, ಈ ಪ್ರಪತ್ತಿ ನಿಷ್ಠನು ನಿರ್ಭರನಾಗಿ, ನಿಸ್ಸಂಶಯನಾಗಿ, ಹೃಷ್ಟಮನಸ್ಕನಾಗಿ ಭಗ ವದ್ವಿಷಯದಲ್ಲಿ ಆಜ್ಞಾನುಜ್ಞಾರೂಪ ಕೈಂಕರ್ಯಗಳಲ್ಲಿ ಆಸಕ್ತಿಯುಳ್ಳವನಾಗಿ, ಮುಕ್ತನಿಗೆ ಸಮಾನನಾಗಿ ಕೃತಕೃತ್ಯನೆಂದೂ, ಕೃತಾರ್ಥನೆಂದೂ ಹೇಳಿಸಿ ಕೊಳ್ಳುವನು. ಕೃತಕೃತ್ಯತಾಮಾಹಾತ್ಮ್ಯಸೂಚಕವಾಗಿ ಅಮೋಘವಾದ ಒಂದು ಗಂಭೀರವಾದ ಮಹಾವಾಕ್ಯವನ್ನು ಅನುಗ್ರಹಿಸಿರುತ್ತಾರೆ. ಇಷ್ಟು ದೊಡ್ಡ ವಾಕ್ಯದ ಅರ್ಥಗ್ರಹಣವು ಕಷ್ಟತರವಾದುದರಿಂದ, ಈ ವಾಕ್ಯವನ್ನು ಭಿನ್ನ ವಾಕ್ಯಗಳನ್ನಾಗಿ ನಾವು ಭಾಗಿಸಿಕೊಳ್ಳಬಹುದು. ನಿರ್ಭರನಾಯ್ ಎಂಬಲ್ಲಿಗೆ ಮೊದಲನೇ ವಾಕ್ಯವಾಗಿ, ನಿಸ್ಸಂಶಯನುಮಾಯ್ **ನಿರ್ಭಯನುಮಾಯ್** ಎಂಬಲ್ಲಿಗೆ ಎರಡನೇ ವಾಕ್ಯವಾಗಿ, **ಹೃಷ್ಟಮನಾವಾಯ್** ಎಂಬಲ್ಲಿಗೆ ಮೂರನೇ

ಪ್ರಪನ್ನಸ್ಯ ನಿರ್ಭರತ್ವ ನಿರ್ಭಯತ್ವ ನಿಸ್ಸಂಶಯತ್ವ ಹೃಷ್ಟ ಮನಸ್ಕತ್ವ ಕಥನಮ್

ಇವ್ವುಪಾಯ (ವಿಶೇಷ) ನಿಷ್ಠ್ಯ ಪ್ರಪತ್ತ್ಯನಂತರ ಕಾಲನ್ತುಡಙ್ಗಿ ತಾನಿದುಕ್ಕುಕ್ಕೋಲಿನ ಫಲತ್ತಿಲ್ಪ್ಪತ್ತ ತನಕ್ಕೊರು ಕರ್ತವ್ಯಾಂಶತ್ತಿಲನ್ವಯಮಿಲ್ಲಾಮೈಯಾಲುಮ್, ಕರ್ತವ್ಯಾಂಶಮ್ ಸಕೃದನುಷ್ಠಾನತ್ತಾಲೇ ಸಿದ್ಧಮಾಗೈಯಾಲುಮ್, ಸ್ವತಂತ್ರನಾಯ್ ಸತ್ಯಸಂಕಲ್ಪನಾನ ಫಲಪ್ರದನ್ "ಮಾಶುಚಃ", ಎನ್ರರುಳಿಚ್ಚೆಯ್ಗೈಯಾಲುಮ್ ತನಕ್ಕುಪ್ಪಿರನ್ದ ಭರನ್ಯಾಸರೂಪ ದಶೈಯೈ ಪ್ಪಾರ್ತ್ತು ನಿರ್ಭರನಾಯ್,

ವಾಕ್ಯವಾಗಿ ಆದಕ್ಕೆ ಮುಂದೆ ಕಳಿತ್ತವನ್ ಎಂಬಲ್ಲಿಗೆ ನಾಲ್ಕನೇ ವಾಕ್ಯವಾಗಿ ಮುಕ್ತತುಲ್ಯನಾಯ್ ಎಂಬಲ್ಲಿಗೆ ಐದನೇ ವಾಕ್ಯವು; ಹೀಗೆ ಐದು ವಾಕ್ಯಗಳಾಗಿ ವಿಭಾಗಿಸಬಹುದು. ಇವುಗಳಿಗೆಲ್ಲಾ ಕ್ರಿಯಾಪದವು "ಯಿರುಕ್ಕುಮ್" ಎಂದು ಮುಂದೆ ಇರುತ್ತದೆ. ಹೀಗೆ ಮೊದಲಿನ ಮೂರು ವಾಕ್ಯಭಾಗಗಳಿಂದ ನಿರ್ಭರತ್ವ, ನಿರ್ಭಯತ್ವ, ನಿಸ್ಸಂಶಯತ್ವ, ಹೃಷ್ಟಮನಸ್ಕತ್ವಗಳಿಗೆ ಕಾರಣಗಳನ್ನು ಪಪಾದಿಸುತ್ತಾರೆ.

ಈ ಭರನ್ಯಾಸವನ್ನನುಷ್ಠಿಸಿದವನ ನಿರ್ಭರತ್ವಕ್ಕೆ ನಾಲ್ಕು ಕಾರಣಗಳನ್ನು ತಿಳಿಸುತ್ತಾರೆ.

ಇವ್ವುಪಾಯ ವಿಶೇಷನಿಷ್ಠನ್ - ಈ ಸಾಂಗ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನು, (೧) ಪ್ರಪತ್ತ್ಯನಂತರ ಕಾಲಂ ತುಡಙ್ಗಿ - ಪ್ರಪತ್ತಿಯಾದ ಕಾಲಮೊದಲುಗೊಂಡು, ತಾನಿದುಕ್ಕುಕ್ಕೋಲಿನ - ತಾನು ಪ್ರಪತ್ತ್ಯನುಷ್ಠಾನಕ್ಕಾಗಿ ಅಪೇಕ್ಷಿಸಿದ, ಫಲತ್ತಿಲ್ಪ್ಪತ್ತೆ - ಪುರುಷಾರ್ಥವಾದ ಮೋಕ್ಷದಲ್ಲಿ, ಕೈಂಕರ್ಯ ಭಗವದನುಭವ ಪ್ರಾಪ್ತಿರೂಪಫಲದ ವಿಷಯದಲ್ಲಿ, ತನಕ್ಕೊರು ಕರ್ತವ್ಯಾಂಶತ್ತಿಲ್ - ತನಗೆ ಯಾವದೊಂದು ಕರ್ತವ್ಯದ ವಿಷಯದಲ್ಲೂ, ಅನ್ವಯಮಿಲ್ಲಾಮೈಯಾಲುಮ್ - ಸಂಬಂಧವಿಲ್ಲದೇ ಇರುವದರಿಂದಲೂ. (೨) ಕರ್ತವ್ಯಾಂಶಮ್ - ಬ್ರಹ್ಮನಾಡೀ ಪ್ರವೇಶ ಮೊದಲಾದ ವಿಷಯದಲ್ಲಿ ಕರ್ತವ್ಯಾಂಶ ಉಂಟಲ್ಲಾ ಎಂದರೆ ಅದೂ ಕೂಡ, ಸಕೃದನುಷ್ಠಾನತ್ತಾಲೇ - ಈ ಒಂದಾವರ್ತಿ ಅನುಷ್ಠಿಸಿದ ಭರನ್ಯಾಸದಿಂದಲೇ, ಸಿದ್ಧಮಾಗೈಯಾಲುಮ್ - ಸರ್ವೇಶ್ವರನೇ ತಾನೇ ನಿಂತು ನಡಿಸಿಕೊಡುವನಾದ ಪ್ರಯುಕ್ತ ಸಿದ್ಧಿಸುವದರಿಂದಲೂ, (೩) ಸ್ವತಂತ್ರನಾಯ್ - ಸರ್ವ ಸ್ವಾತಂತ್ರ್ಯವಿರುವನಾದ, ಸತ್ಯ

ಸಙ್ಕಲ್ಪನಾನ - ತನ್ನ ಸಙ್ಕಲ್ಪಕ್ಕೆ ಯಾವುದೊಂದೂ ತಡೆಯಿಲ್ಲದವನಾದ, **ಫಲಪ್ರದರ್** - ಈತನಿಗೆ ಪುರುಷಾರ್ಥಪ್ರದನಾದ ಸರ್ವೇಶ್ವರನು, **"ಮಾಶುಚಃ"** ಫಲ ವಿಷಯದಲ್ಲಿ ಶೋಕಿಸಬೇಡವೆಂದು **ಅರುಳಿಚ್ಚೆಯ್‌ಗೈಯಾಲುಮ್** - ಕೃಪೆಯಾ ಹೇಳಿರುವದರಿಂದಲೂ, ಮತ್ತು (೪) **ತನಕ್ಕುಪಿರನ್ನ** - ತನಗೆ ಪ್ರಾಪ್ತವಾದ **ಈ ಭರನ್ಯಾಸರೂಪದಶೈಯೈ** - ಈ ಸಾಂಗ ಪ್ರಪದನಾನುಷ್ಠಾನರೂಪ ಮಹದ್ವಿಶೆಯನ್ನು **ಪಾರ್‌ತು** - ಅರಿತು ಅನುಸನ್ಧಾನಮಾಡಿ, ಹೀಗೆ ಈ ನಾಲ್ಕು ಕಾರಣಗಳಿಂದ **ನಿರ್ಭರನಾಯ್** -(**ಯಿರುಕ್ಕುಮ್** - ಇರುವನು, ಎಂದು ಮುಂದೆ ಇರುತ್ತದೆ.

ಈ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನು ನಿರ್ಭರನಾಗಿರಬಹುದೆಂದು ಹೇಳುತ್ತಾರೆ. ಹಾಗೆ ನಿರ್ಭರನಾಗಿರಲು ಕಾರಣಗಳೇನೆಂದರೆ :—

೧. ಈ ಭರನ್ಯಾಸದ ಮೂಲಕ ಯಾವ ಪ್ರಯೋಜನವನ್ನು ಹೊಂದಬೇಕೆಂದಿದ್ದಾನೋ ಅದು ಸಿದ್ಧವಾದುದರಿಂದ ಅದಕ್ಕಾಗಿ ಈತನು ಇನ್ನೇನನ್ನು ಮಾಡತಕ್ಕದ್ದಿಲ್ಲವು, ಇನ್ನು ಯಾವ ಉಪಾಯವನ್ನೂ ಅವಲಂಬಿಸತಕ್ಕದ್ದಿಲ್ಲವಾದುದರಿಂದ ನಿರ್ಭರನಾಗಿರಬಹುದು. "ವಿರನೋತ್ಸರ್ವಕರ್ಮಸು ಎಂದು ಹೇಳಿರುವ ಹಾಗೆ ಆಮುಷ್ಮಿಕದ ಉಪಾಯಸಾಧನೆಗಾಗಿಯೂ" ಏನೂ ಮಾಡತಕ್ಕದ್ದಿಲ್ಲವು, ಐಹಿಕ ವಿಷಯದಲ್ಲೂ ಸರ್ವೇಶ್ವರನೇ ಸಙ್ಕಲ್ಪಿಸಿರುವದರಿಂದ ಏನೂ ಮಾಡತಕ್ಕದ್ದಿಲ್ಲವು.

೨. ಆದರೂ ಕೆಲವು ಕರ್ತವ್ಯಾಂಶಗಳು ಇಂತಹ ಪ್ರಪನ್ನನಿಗೂ ಉಂಟಲ್ಲಾ ? ಅಂತಿಮಸ್ಮೃತಿ, ಬ್ರಹ್ಮನಾಡಿ ಪ್ರವೇಶ ಮೊದಲಾದ ಕರ್ತವ್ಯಾಂಶಗಳಿದ್ದರೂ ಅವುಗಳೆಲ್ಲಾ ಈ ಶಕ್ತದನುಷ್ಠಿತವಾದ ಪ್ರಪತ್ತಿಯಿಂದಲೇ ಪ್ರೀತನಾದ ಸರ್ವೇಶ್ವರನು ತಾನೇ ನಿಂತು ನಡಿಸಿಕೊಡುವದರಿಂದಲೂ ಈತನು ನಿರ್ಭರನು ಎಂದು ಹೇಳಬಹುದು. ಭಕ್ತಿಯೋಗವೇ ಆಗಲಿ, ಸ್ವತಂತ್ರ ಪ್ರಪತ್ತಿಯೇಯಾಗಲಿ ಫಲವನ್ನು ಕೊಡಲಾರವು, ಕೊಡತಕ್ಕವನು ಸರ್ವೇಶ್ವರನೇ ಆದುದರಿಂದ, ಯಾವಾಗ ಅಂತಹ ಸರ್ವೇಶ್ವರನಲ್ಲಿ ಪ್ರಪನ್ನನು ಸರ್ವಭರವನ್ನೂ ಇಟ್ಟುಬಿಟ್ಟನೋ, ಆವಾಗ ಸರ್ವೇಶ್ವರನೇ ಮಿಕ್ಕ ಯಾವ ಕರ್ತವ್ಯಾಂಶವಿದ್ದರೂ ತಾನೇ ನಡಿಸಿಕೊಡುತ್ತಾನಾದುದರಿಂದ ಪ್ರಪನ್ನನು ನಿರ್ಭರನಾಗಿರಬಹುದೆಂಬ ಭಾವವು.

೩. ಸರ್ವೇಶ್ವರನು ಚರಮ ಶ್ಲೋಕದ ಅಮೋಘ ವಾಕ್ಯದಿಂದ **"ಮಾಶುಚಃ"** ಎಂದು ಹೇಳಿ ಧೈರ್ಯಪಡಿಸುತ್ತಿರುವದರಿಂದಲೂ ಪ್ರಪನ್ನನು ನಿರ್ಭರನಾಗಿರಬಹುದು. **"ಮಾಶುಚಃ"** ಎಂಬುವದರ ಅಭಿಪ್ರಾಯವೇನೆಂದರೆ : —"ಭಕ್ತಿಯೋಗವು ತುಂಬಾ ಕಷ್ಟಸಾಧ್ಯವಾದುದು, ಅಸಮರ್ಥನಾದ ನಾನು ಅಂತಹ ವಿಳಂಬಸಾಧ್ಯವಾದ ಉಪಾಯವನ್ನು ಹೇಗೆ ಕೈಕೊಳ್ಳಲಿ ? ಎಂದು ದೀನನಾಗಿ ಶೋಕಿಸಿದರೆ, ಸರ್ವೇ

ಶ್ವರನು **ಮಾಶುಚಃ** ಶೋಕಿಸಬೇಡ, ನನ್ನನ್ನು ಶರಣುಹೊಂದು, ಹೀಗೆ ನೀನನು ಷ್ಠಿಸಿದ ಶರಣಾಗತಿಯ ಮೂಲಕ, ಸುಪ್ರೀತನಾದ ನಾನು ನಿಂತು ಎಲ್ಲವನ್ನೂ ನಡಿಸಿಕೊಡುವೆನು. ಆದುದರಿಂದ ಶೋಕಿಸಬೇಡವೆಂದು ಸತ್ಯಸಙ್ಕಲ್ಪನಾದ ಫಲಪ್ರದನೇ ಹೇಳಿರುವದರಿಂದ, ಆ ವಿಷಯದಲ್ಲಿ **ನಿರ್ಭರತ್ವವು** ಕೂಡುತ್ತದೆಂಬು ದಾಗಿ ತಾತ್ಪರ್ಯವು. ಹಾಗೆ **ಮಾಶುಚಃ** ಎಂದು ಹೇಳಿರುವವನ ಮಾತಿನಲ್ಲಿ ನಾವು ಪೂರ್ಣ ನಂಬಿಕೆಯನ್ನಿಡಬಹುದು. ಏತಕ್ಕೆಂದರೆ, ಆತನು ಸ್ವತಂತ್ರನು ಮತ್ತು ಸತ್ಯ ಸಂಕಲ್ಪನು ಎಂದು ಹೇಳಿರುತ್ತಾರೆ. ಬಹು ಜನ್ಮಸಾಧ್ಯವಾದ ಭಕ್ತಿಕಾರ್ಯವನ್ನು ಕ್ಷಣಕಾಲ ಸಾಧ್ಯವಾದ ಈ ವ್ಯಾಪಾರದಿಂದ ಸಾಧಿಸಿಕೊಡು ವನೋ ಎಂಬ ಶಂಕಾ ನಿವಾರಣಾರ್ಥವಾಗಿ, ಆತನು ಸ್ವತಂತ್ರನೆಂದು ಹೇಳಿರು ತ್ತಾರೆ. ಆತನು ಹಾಗೆ ವಿಧಿಸಿರುವದರಿಂದ ಶಂಕಾವಿಗೆ ಕಾರಣವೇ ಇಲ್ಲವು. ಅಂತಹ ಗುರೂಪಾಯಕ್ಕೆ ಬದಲಾಗಿ ಇಂತಹ ಲಘೂಪಾಯವನ್ನೂ ಉಪಾಯ ವಾಗಿ ವಿಧಿಸಿರುವದು. ಮಾಯಾಚೇಷ್ಟಿತನ ಮಾಯಾಜಲ್ಪಿತವಲ್ಲವೋ ಎಂದರೆ ಹಾಗಲ್ಲವು ; ಏಕೆಂದರೆ ಆತನು ಸತ್ಯಸಂಕಲ್ಪನು. **ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚಯಾಚತೇ । ಅಭಯಂ ಸರ್ವಭೂತೇಭ್ಯೋದದಾಮ್ಯೇ ತದ್ವ್ರತಂಮಮ ॥** ಎಂದು ಸಂಕಲ್ಪಿಸಿರುತ್ತಾನೆ. ಇಂತಹ ಸಂಕಲ್ಪಕ್ಕೆ ಯಾರಿಂದಲೇಯಾಗಲಿ ತನ್ನಿಂದಲೇಯಾಗಲಿ ತಡೆಯಿಲ್ಲವಾದುದರಿಂದಲೇ ಆತನು **ಸತ್ಯಸಙ್ಕಲ್ಪನು.** ಆತನ ಸತ್ಯಸಂಕಲ್ಪವಿಷಯದಲ್ಲಿ ಮಹಾ ವಿಶ್ವಾಸವು ಈ ಪ್ರಪನ್ನನಿಗೆ ದೃಢವಾಗಿರುವದರಿಂದ ನಿರ್ಭರತ್ವಕ್ಕೇನೂ ತೊಂದರೆಯಿಲ್ಲವೆಂಬ ಭಾವವು.

೪ ಬಹು ಜನ್ಮಗಳು ಕಳೆದು ಹೋದವು ; ಅಜ್ಞಾನದ ಬಲದಿಂದ ಇಂತಹ ಲಘೂಪಾಯರೂಪ ವ್ಯಾಪಾರದ ಮಾಹಾತ್ಮ್ಯೆಯು ತಿಳಿಯದೇ ಅನೇಕ ಜನ್ಮಗಳ ನ್ನೆತ್ತಿದ್ದಾಯಿತು. ಈಗಲಾದರೋ ಈ ತನ್ನ ಸುಕೃತವಿಶೇಷದಿಂದ ಇಂತಹ ಸುಲಭೋಪಾಯದ ಮಾಹಾತ್ಮ್ಯವು ತಿಳಿದು, ಈ ಭರನ್ಯಾಸವು ಲಭಿಸಿ, ಅನು ಷ್ಠಿಸಿದ್ದಾಯಿತು ಎಂದೂ ಕೂಡ ಈತನಿಗೆ ನಿರ್ಭರತ್ವ ಉಂಟಾಗಬಹುದೆಂದು ತಿಳಿಸುವದಕ್ಕಾಗಿ "**ತನಕ್ಕು ಪಿರನ್ದ ಭರನ್ಯಾಸ ರೂಪದಶೈಯ್ಯೆ ಪಾರ್ತ್ತು**" ಎಂದು ಪ್ರಯೋಗಿಸಿರುತ್ತಾರೆ.

ಆದರೆ ಹೀಗೆ ಈ ಮೇಲಿನ ನಾಲ್ಕು ಕಾರಣಗಳಿಂದಲೂ ನಿರ್ಭರತ್ವವು ತೋರಿಬಂದರೂ, ಒಂದು ವಿಧವಾಗಿ ಯೋಚಿಸಿದರೆ ಶಙ್ಕೆಯೂ, ಭಯವೂ ಸಹ ಈ ಪ್ರಪನ್ನನಿಗೆ ಉಂಟಾಗಬಹುದು ಹೇಗೆಂದರೆ ಈತನು ಇದುವರಿವಿಗೂ ಜನ್ಮಗಳನ್ನು ಎತ್ತಿ ಮಾಡಿರುವ ಪಾಪರಾಶಿಗಳು "**ಯದ್ಬ್ರಹ್ಮಕಲ್ಪ ನಿಯುತಾ ನುಭವೇಪ್ಯನಾಶ್ಯಂ**" ಎಂದು ಹೇಳಿರುವ ಹಾಗೆ ಅನೇಕ ಬ್ರಹ್ಮಕಲ್ಪಗಳವರಿವಿಗೆ

“ಮಾಮೇಕಂ ಶರಣಂ ವ್ರಜ” ಎನ್ಗಿರಪಡಿಯೇ ಸಿದ್ಧೋಪಾಯತ್ವೇನ ಸ್ವೀಕೃತನಾನ ಸರ್ವೇಶ್ವರನ್ “ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ” ಎನ್ರು ಫಲಪ್ರದಾನ ಸಙ್ಕಲ್ಪತ್ತೈಪ್ಪಣ್ಣುಗೈಯಾಲೆ ಇಪ್ಪಡಿ ವಿಶ್ವಸನೀಯನುಮಾಯ್ ಸಮರ್ಥನುಮಾಯ್, ಉಪಾಯಭೂತನುಮಾನ ಈಶ್ವರನೈಪ್ಪಾರ್ತ್ತು ಫಲಸಿದ್ಧಿಯಿಲ್ ನಿಸ್ಸಂಶಯನುಮಾಯ್, ನಿರ್ಭಯನುಮಾಯ್. ಕೆಡ್ಜೈಯುರ ವಿಟ್ಟು ಅನ್ಯಪುರುಷಾರ್ಥ

ಅನುಭವಿಸದರೂ ನಾಶವಾಗದಿರುವವು. ಅವೆಲ್ಲವೂ ಈ ಕ್ಷಣಕಾಲ ಮಾಡಿದ ಭರನ್ಯಾಸದಿಂದ ನಾಶವಾಗುತ್ತವೆಯೇ? ಎಂಬ ಶಂಕಾಪ್ರಾಪ್ತವಾಗಬಹುದು. ಮತ್ತು ಹೀಗೆ ಪಾಪರಾಶಿಗಳಿಗೆ ಆಕರನಾದವನಿಗೆ ಸರ್ವೇಶ್ವರನು ಇಷ್ಟು ದಿನವೂ ಇಲ್ಲದೆ ಈಗ ಮಾತ್ರ ಮೋಕ್ಷವನ್ನು ಕೊಟ್ಟುಬಿಡುವನೇ? ಈಗಲೂ ಕೂಡ ಫಲವಿಳಂಬವೇ ಪ್ರಾಪ್ತವಾಗಬಹುದು, ಅಥವಾ ನರಕಪ್ರಾಪ್ತಿಯಾದರೂ ಆಗಬಹುದು, ಇತ್ಯಾದಿ ಭೀತಿಯೂ ಸಹ ಉಂಟಾಗಬಹುದು; ಆದುದರಿಂದ ಮುಂದಿನ ವಾಕ್ಯಭಾಗದಿಂದ ಅಂತಹ ಶಂಕಾಭೀತಿಗಳಿಗೆ ಈಷದಪಿ ಪ್ರಪನ್ನನಿಗೆ ಕಾರಣವಿಲ್ಲವೆಂದು ಉಪಪಾದಿಸುತ್ತಾರೆ.

“ಮಾಮೇಕಂ ಶರಣಂ ವ್ರಜ” - “ದೇವತಾಂತರಗಳ ಸಂಬಂಧವಿಲ್ಲದೆ ನನ್ನೊಬ್ಬನನ್ನೇ ಶರಣಹೊಂದು ಎಂದರೆ ನನ್ನ ಪಾದಾರವಿಂದದಲ್ಲೇ ಭರನ್ಯಾಸವನ್ನು ಮಾಡು” ಎನ್ಗಿರಪಡಿಯೇ ಎಂದು ಹೇಳಿರುವಹಾಗೆಯೇ, **ಸಿದ್ಧೋಪಾಯತ್ವೇನ ಸ್ವೀಕೃತನಾನ** - ಸಿದ್ಧೋಪಾಯನಾಗಿ ವರಿಸಲ್ಪಟ್ಟ, **ಸರ್ವೇಶ್ವರನ್** - ಸರ್ವೇಶ್ವರನು, **ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**” “ಪ್ರಪನ್ನ ಜನರಕ್ಷಣೆಯಲ್ಲಿ ಕಂಕಣಬದ್ಧನಾದ ನಾನು, ಅನನ್ಯಗತಿಕನಾಗಿರುವ ನಿನ್ನನ್ನು, ನನ್ನನ್ನು ಹೊಂದಲು ವಿರೋಧಿಗಳಾದ, ಅನಾದಿಕಾಲದಿಂದ ಸಂಚಿತಗಳಾದ ಅಕೃತ್ಯಕರಣ ಕೃತ್ಯಾಕರಣರೂಪ ಅನೇಕಾಪರಾಧಗಳಿಂದ ಬಿಡಿಸುವೆನು, **ಎನ್ರು** - ಎಂದು, **ಫಲಪ್ರದಾನ ಸಙ್ಕಲ್ಪತ್ತೈ** - ನಿರತಿಶಯ ಫಲವನ್ನು ಕೊಡುವ ಅಮೋಘ ಸಂಕಲ್ಪವನ್ನು, **ಪಣ್ಣುಗೈಯಾಲೇ** ಮಾಡಿರುವದರಿಂದ, **ಇಪ್ಪಡಿ** - ಈ ರೀತಿಯಲ್ಲಿ ಎಂದರೆ ಈ ನಿರತಿಶಯ ಫಲಪ್ರದಾನದಲ್ಲಿ, **ವಿಶ್ವಸನೀಯನುಮಾಯ್** - ನಂಬಲು ಯೋಗ್ಯನಾಗಿಯೂ, **ಸಮರ್ಥನುಮಾಯ್** - ಸಾಮರ್ಥ್ಯವನ್ನು ಹೊಂದಿದವನಾಗಿಯೂ ಉಪಾಯಭೂತನೂ ಆದ, **ಈಶ್ವರನೈ ಪಾರ್ತ್ತು** - ಸರ್ವೇಶ್ವರನನ್ನು ಕಂಡು ಎಂದರೆ ಸರ್ವೇಶ್ವರ[illegible]ನೆಂದು ತಿಳಿದು, ಫಲಸಿದ್ಧಿಯಲ್ಲಿ ನಿಸ್ಸಂಶಯನಾಗಿಯೂ, ನಿರ್ಭಯನಾಗಿಯೂ, ಈ ಪ್ರಪ

ನ್ನನು ಇರುಕ್ಕುಂ ಎಂದು ಮುಂದಿರುವ ಕ್ರಿಯಾಪದವನ್ನು ಇಲ್ಲಿ ಇಟ್ಟುಕೊಳ್ಳತಕ್ಕದ್ದು.

ಇದರಿಂದ ಪ್ರಪನ್ನನು ಪ್ರಪತ್ತ್ಯುತ್ತರಕಾಲದಲ್ಲಿ ನಿಸ್ಸಂಶಯನಾಗಿಯೂ ನಿರ್ಭಯನಾಗಿಯೂ ಇರಲು ಹೇತುಗಳನ್ನು ಹೇಳುತ್ತಾರೆ. ಸರ್ವೇಶ್ವರನು ಪೂರ್ಣ ಕೃಪೆಯಿಂದ ಯೋಗಕ್ಕೆ ಅಶಕ್ತನಾದ ಅಧಿಕಾರಿಗೆ "**ಶರಣಂವ್ರಜ**" ಎಂದು ಹೇಳಿ ವಿಧಿಸಿರುತ್ತಾನೆ. ಉಪಾಸನಸ್ಥಾನದಲ್ಲಿ ತಾನೇ ಉಪಾಯವಾಗಿ ನಿಂತು ಫಲಸಿದ್ಧಿಯನ್ನುಂಟುಮಾಡುತ್ತೇನೆಂದು "**ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂಬದಾಗಿ ಫಲಪ್ರಧಾನ ಸಙ್ಕಲ್ಪಮಾಡಿರುವದರಿಂದ ಅಸಂಖ್ಯಾತಗಳಾದ ಮಹಾಪಾತಕಗಳಿದ್ದರೂ ಅವು ಪ್ರಪನ್ನನನ್ನು ಬಾಧಿಸಲಾರವು. ಹೀಗೆ ತಾನೇ ಉಪಾಯನಾಗಿರುತ್ತೇನೆಂದು "**ಉಪಾಯ ನುಮಾಯ್**" ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಸಙ್ಕಲ್ಪವನ್ನೇನೋ ಎಲ್ಲರೂ ಮಾಡಬಹುದು. ಸಙ್ಕಲ್ಪಕ್ಕೇನಾದರೂ ಪ್ರತಿಹತಿಬಂದರೆ ಅಂತಹ ಸಙ್ಕಲ್ಪಕ್ಕೆ ವಿರೋಧವಾಗಿ ನಡೆಯಬಹುದು. ಆದರೆ ಸರ್ವೇಶ್ವರನ ಸಙ್ಕಲ್ಪಕ್ಕೆ ಯಾರಿಂದಲೇಯಾಗಲೀ ತನ್ನಿಂದಲೇಯಾಗಲಿ ತಡೆಯಿಲ್ಲವೆಂದು ಹಿಂದೆಯೇ ಹೇಳಲ್ಪಟ್ಟಿತು. ಆದರೆ ಅಶಕ್ತನ ಸಂಕಲ್ಪವು ಕಾರ್ಯಕಾರಿಯಾಗದೆ ಸಂಶಯಕ್ಕೂ ಭಯಕ್ಕೂ ಕಾರಣವಾಗಬಹುದು. ಸರ್ವೇಶ್ವರನ ಸಙ್ಕಲ್ಪವು ಹಾಗಲ್ಲವು; ಆತನು ಮಹಾ ಸಮರ್ಥನು, ಆದುದರಿಂದ ಯಾವ ಪ್ರತಿಬಂಧಕಕ್ಕೂ ಆಸ್ಪದವಿಲ್ಲದಹಾಗೆ ನಡಿಸಿಕೊಡುವನು. ಆದುದರಿಂದ "**ಸಮರ್ಥನುಮಾಯ್**" ಎಂದು ಪ್ರಯೋಗಿಸಿರುತ್ತಾರೆ. ಫಲಪ್ರಧಾನ ಸಾಮರ್ಥ್ಯವೇನೋ ಇರಬಹುದು. ವಂಚಕಬುದ್ಧಿಯಿಂದಲಾಗಲಿ ಅಥವಾ ಇನ್ಯಾವದಾದರೂ ಆರೋಪಿತ ದೋಷಭಾವದಿಂದಲಾಗಲಿ ಫಲಪ್ರಧಾನ ಸಿದ್ಧಿಸದೇ ಇರಬಹುದು. ಸರ್ವೇಶ್ವರನು ಎಂದಿಗೂ ಹಾಗಲ್ಲವು. "**ನಹಿಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ** ಎಂದೂ, "**ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ**" ಎಂದೂ "**ರಾಮೋದ್ವಿರ್ನಾಭಿಭಾಷತೇ**" ಎಂದೂ, ಇವೇ ಮೊದಲಾದ ಪ್ರತಿಜ್ಞೆಗಳನ್ನೂ ಮಾಡಿ ತದನುಸಾರವಾಗಿ ನಡಿಸಿರುವದರಿಂದ ಆತನ ಸಂಕಲ್ಪಿಸಿದುದರಲ್ಲಿ ಈಷದಪಿ ಸಂಶಯಕ್ಕಾಗಲಿ, ಭಯಕ್ಕಾಗಲಿ ಕಾರಣವಿರುವದಿಲ್ಲವೆಂದು ಹೇಳುವದಕ್ಕಾಗಿ "**ವಿಶ್ವಸನೀಯನುಮಾಯ್**" ಎಂದೂ ಪ್ರಯೋಗಿಸಿರುತ್ತಾರೆ.

ಹೀಗೆ ಸರ್ವೇಶ್ವರನೇ ಉಪಾಯಭೂತನಾಗಿಯೂ, ಸಮರ್ಥನಾಗಿಯೂ ವಿಶ್ವಸನೀಯನಾಗಿಯೂ, ಇರುವದರಿಂದಲೇ ರಕ್ಷಣೆವಿಷಯದಲ್ಲಿ ಸಂಶಯಕ್ಕಾಗಲಿ ನರಕಪಾತಭೀತಿಗಾಗಲಿ ಕಾರಣವಿಲ್ಲವೆಂಬ ಭಾವವು.

ಆದರೆ ಬಲಿಚಕ್ರವರ್ತಿಯನ್ನು ವಂಚಿಸಲಿಲ್ಲವೇ ? ಮೋಹಿನ್ಯವತಾರ

ಜ್ಜಳ್ಳೈಯುಮ್, ಕಾನ್ಪುರವಿಟ್ಟ ಉಪಾಯಾಂತರಜ್ಜಳ್ಳೈಯುಮ್, ಅಕಿಂಚನನಯತ್ನಮಾಗ ಮಹಾ ನಿಧಿಯೈ ಪ್ಪೆರುಮಾಪ್ಪೋಲೆ ತಾನ್ ಪೆರುಪ್ಪುಕಿರ ಪರಮಪುರುಷಾರ್ಥತ್ತೈಯುಮ್, ಪಾರ್ತು, ಹೃಷ್ಟಮನಾನಾಯ್,

ನಿಂದಲೂ ವಂಚಿಸಲಿಲ್ಲನೇ ? ವಾಲಿಯನ್ನು ವಂಚಿಸಲಿಲ್ಲನೇ ? ಹೀಗೆ ಅನೇಕ ಸಂದರ್ಭಗಳಲ್ಲಿ ವಂಚಿಸಿರುವ ಮಾಯಾಚೇಷ್ಟಿತನಲ್ಲಿ ವಿಶ್ವಾಸವನ್ನಿಡಬಹುದೋ ? ಎಂದಾಕ್ಷೇಪಿಸಿದರೆ, ತನ್ನನ್ನು ಆಶ್ರಯಿಸದೇ ಇರುವ ವಿಪರೀತರ ವಿಷಯದಲ್ಲಿ ಅಂತಹ ವಂಚನೆಯೇ ವಿನಾ ಆಶ್ರಿತನ ವಿಷಯದಲ್ಲಿ ಇಂತಹ ವಂಚಕ ವ್ಯಾಪಾರವನ್ನು ಕಂಡಿಲ್ಲವು. ತನ್ನನ್ನಾಶ್ರಯಿಸಿದ ಪ್ರಪನ್ನನ ವಿಷಯದಲ್ಲಿ ಆತನು "ಮಾತಾ ಪಿತಾ ಭ್ರಾತಾ ನಿವಾಸ ಶ್ಶರಣಂ ಸುಹೃತ್" ಎಂದು ಹೇಳಿರುವದರಿಂದ ಆತನು ತುಂಬಾ ವಿಶ್ವಸನೀಯನು, ತಾನು ಸಂಕಲ್ಪಿಸಿದ ಫಲವನ್ನು ಸಾಧಿಸಿಕೊಡುವದರಲ್ಲಿ ಸಮರ್ಥನು, ಅಶಕ್ತನ ವಿಷಯದಲ್ಲಿ ಉಪಾಸನಸ್ಥಾನದಲ್ಲಿ ತಾನೇ ಉಪಾಯನಾಗಿ ನಿಲ್ಲುವನು. ಆದುದರಿಂದಲೇ ಸಂದೇಹಕ್ಕೆ ಕಾರಣವೇ ಇಲ್ಲವು.

ಸದ್ಯಃ ಫಲವಾಗಿ ಪರಿಣಮಿಸಿರುವ ಐಹಿಕಸುಖಗಳನ್ನು ತೊರೆದು, ಬಹುಕಾಲದಮೇಲೆ ದೇಹಾವಸಾನಾನಂತರ ಉಂಟಾಗಬಹುದಾದ ಸುಖಗಳನ್ನು ನೆಚ್ಚಿಕೊಂಡು ಇರುವ ಮನಸ್ಸು ಈ ಪ್ರಪನ್ನನಿಗೆ ಹೇಗೆ ಪ್ರಾಪ್ತವಾದೀತೆಂಬ ಶಂಕಾನಿಗೆ ಮುಂದೆ ಸಮಾಧಾನ ಹೇಳಿ, ಆತನು ಹರ್ಷನಿಸಸ್ಕನೆಂದು ಸ್ಥಾಪಿಸುತ್ತಾರೆ. **ಕಡೈಯುರವಿಟ್ಟ** - ವಾಸನಾ ಹೇಗೆ ಕತ್ತರಿಸಿ ಹೋಗಬೇಕೋ ಹಾಗೆ ಬಿಟ್ಟು. **ಅನ್ಯಪುರುಷಾರ್ಥಜ್ಜಳ್ಳೈಯುಮ್** - ಮೋಕ್ಷೇತರ ಪುರುಷಾರ್ಥಗಳಾದ ಅಲ್ಪ ಅಸ್ಥಿರಗಳಾದ ಐಶ್ವರ್ಯಾದಿಗಳನ್ನೂ, ಮತ್ತು, **ಕಾಂಪರವಿಟ್ಟ** - **ಕಾನ್ಪು** ಎಂದರೆ ಸಾಧನಗಳು, **ಅರ** - ಏನೊಂದೂ ಇಲ್ಲದೇ ಇರೋಣ ಹೋಗೋ ಹಾಗೆ, **ವಿಟ್ಟ** - ಬಿಟ್ಟಂಥಾ, **ಉಪಾಯಾನ್ತರಜ್ಜಳ್ಳೈಯುಮ್** - ಇತರ ಉಪಾಯಗಳನ್ನೂ, ಮತ್ತು **ಅಕಿಂಚನನ್** - ದರಿದ್ರನು, **ಅಯತ್ನಮಾಗ** - ತನ್ನ ಸ್ವಂತ ಪ್ರಯತ್ನವಿಲ್ಲದೇನೇ, **ಮಹಾನಿಧಿಯೈಪ್ಪೆರುಮಾಪ್ಪೋಲೆ** - ಗುಪ್ತವಾದ ಮಹತ್ತಾದ ಧನವನ್ನು ಹೊಂದುವಹಾಗೆ ಎಂದರೆ ಬಡವನನ್ನು ಹುಡುಕಿಕೊಂಡು ಭಾಗ್ಯವು ಬಂದಹಾಗೆ, **ತಾನ್ ಪೆರುಪ್ಪುಗಿರ** - ತಾನು ಮುಂದಕ್ಕೆ ದೇಹಾವಸಾನಾನಂತರ ಹೊಂದುವ, **ಪರಮ ಪುರುಷಾರ್ಥತ್ತೈಯುಮ್**. ಚ್ಯುತಿಯಿಲ್ಲದ ನಿರತಿಶಯ ಮಹಾನಂದರೂಪ ಮೋಕ್ಷಸುಖವನ್ನೂ **ಪಾರ್ತು** - ಅವುಗಳಿಗಿರುವ ಪರಸ್ಪರ ವ್ಯತ್ಯಾಸವನ್ನು ವಿವೇಕಿಸಿ ತಿಳಿದು,

ಹೃಷ್ಟಮನಾಯ್ - ತುಂಬಾ ಹರ್ಷಚಿತ್ತನಾಗಿ, "ಇರುಕ್ಕ್ಯಪ್" ಎಂದು ಮುಂದೆ ಇರುತ್ತದೆ. ಈ ನಾಮ ಪ್ರಪದನಾನುಷ್ಠಾನ ಮಾಡಿದವನು ಇರುವನು.

ಇತರ ಪುರುಷಾರ್ಥಗಳೂ ಅವುಗಳನ್ನು ಪಡೆಯುವ ಸಾಧನಗಳೂ ಸಹ ಪ್ರಪನ್ನನಿಗೆ ಸ್ವರೂಪ ವಿರುದ್ಧವಾದವುಗಳು ; ಏಕೆಂದರೆ, ಅವು ಅನಿತ್ಯವಾದವುಗಳಾಗಿಯೂ ಅಲ್ಪಗಳಾಗಿಯೂ ಇರುವದರಿಂದ ಅವುಗಳನ್ನು ಮನಸಾ ಕೂಡ ಸ್ಮರಿಸಲು ಯೋಗ್ಯವಲ್ಲವು : ಈಗ ಮುಂದಕ್ಕೆ ಪರಮ ಪದದಲ್ಲಿ ಹೊಂದತಕ್ಕ ಪುರುಷಾರ್ಥವಾದರೋ ನಿರುಪಾಧಿಕವಾದುದಾಗಿಯೂ ಅಪರಿಚ್ಛಿನ್ನವಾದುದಾಗಿಯೂ ನಿತ್ಯವಾಗಿಯೂ, ಪರಬ್ರಹ್ಮಾನಂದಕ್ಕೆ ಸಮಾನವಾದುದಾಗಿಯೂ ಇರುವದರಿಂದ ಅಂಥಾದ್ದು ತನಗೀಗ ಏನೊಂದೂ ಆಯಾಸವಿಲ್ಲದೆ ಒಂದು ಕ್ಷಣ ಸಾಧ್ಯವಾದ ಭರನ್ಯಾಸದಿಂದ ಲಭಿಸಹೋಗುತ್ತದೆ ; ಅಂತಹ ಹೇಯವಾದ ದುಃಖಮಿಶ್ರವಾದ ಐಹಿಕಾದಿ ಸುಖಕ್ಕೂ, ಮುಂದೆ ಪ್ರಾಪ್ತವಾಗುವ ನಿರತಿಶಯವಾದ ದುಃಖಗಂಧವಿಲ್ಲದ ಆನಂದಕ್ಕೂ ಅಜಗಜನ್ಯಾಯವೆಂದು ಯಾವಾಗ ಮನಸ್ಸಿಗೆ ತೋರಿತೋ ಆಗ ಹರ್ಷಚಿತ್ತನಾಗಿರಲು ಸಂದೇಹವಿಲ್ಲವೆಂಬ ಭಾವವು.

ಇಂತಹ ಪ್ರಪನ್ನನು ಕೃತಕೃತ್ಯನೆಂದೂ ಕೃತಾರ್ಥನೆಂದೂ ಹೇಳಿದ ಕೃತಾರ್ಥನು ಮಾಡತಕ್ಕದ್ದೇನೂ ಇಲ್ಲದಿರುವದರಿಂದ, ಆತನೇನು ನಿತ್ಯ ನೈಮಿತ್ತಿಕ ಕರ್ಮಗಳನ್ನನುಷ್ಠಿಸತಕ್ಕದ್ದೇ ? ಅವುಗಳಿಂದ ಇವನಿಗೆ ಉಪಾಯರೂಪವಲ್ಲಾಗಲಿ ಫಲರೂಪದಲ್ಲಾಗಲಿ ಪ್ರಯೋಜನವೇನೂ ಇಲ್ಲದಿರುವದರಿಂದ, ಅವುಗಳನ್ನು ತ್ಯಜಿಸಬಹುದೇ? ಆದರೆ ತ್ಯಜಿಸಿದರೆ "ಅಹರಹಸ್ಸಂಧ್ಯಾಮುಪಾಸೀತ" **"ಸಂಧ್ಯಾಹೀನೋ ಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು" "ಸಂಧ್ಯಾತಿಕ್ರಮಣಾದ್ವಿಪ್ರೋ ಬ್ರಾಹ್ಮಣ್ಯಾತ್ಪತತೇ ಯತಃ"** ಇತ್ಯಾದಿ ವಾಕ್ಯಗಳಿಗೆ ವಿರುದ್ಧವಾದುದಾಗುತ್ತದೆ "ಹಾಗೆಯೇ ಗೀತೆಯಲ್ಲೂ, **ನಿಯತಸ್ಯ ತು ಸನ್ಯಾಸಃ ಕರ್ಮಣೋ ನೋಪಪದ್ಯತೇ**" ಎಂದು ನಿಯಮಿತವಾದ ನಿತ್ಯ ನೈಮಿತ್ತಿಕ ಕರ್ಮಗಳ ತ್ಯಾಗವು ನಿಷೇಧಿಸಲ್ಪಟ್ಟಿರುತ್ತದೆ. ಆದುದರಿಂದ ನಿತ್ಯಕರ್ಮಾನುಷ್ಠಾನವನ್ನು ನಿಯತವಾಗಿ ಪ್ರತಿದಿನದಲ್ಲೂ ನಡಿಸಲೇಬೇಕೆಂದಾಯಿತು. ಆದರೆ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನದಲ್ಲಿ ಸೂರ್ಯಾಗ್ನೀಂದ್ರಾದಿಗಳಾದ ಅನ್ಯದೇವತೆಗಳ ಸಂಬಂಧವುಂಟಾಗುವದರಿಂದ ಪ್ರತ್ಯವಾಯವಲ್ಲವೇ ? ಅದೂ ಅಲ್ಲದೆ ಪ್ರತಿಯೊಬ್ಬ ಬ್ರಾಹ್ಮಣನಿಗೂ (ಉಪಲಕ್ಷಣಯಾ ಕ್ಷತ್ರಿಯ ವೈಶ್ಯನಿಗೂ)

"ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿ ಋಣವಾ ಜಾಯತೇ,
ಬ್ರಹ್ಮಚರ್ಯೇಣ ಋಷಿಭ್ಯಃ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ"

ಎಂದು ಹೇಳಿರುವಹಾಗೆ ಮೂರು ಋಣಗಳುಂಟೆಂದೂ, ಆದರಲ್ಲಿ ದೇವಋಣ

(೧) "**ದೇವರ್ಷಿಭೂತಾತ್ಮನೃಣಾಂ ಪಿತೄಣಾಂ ನಕಿಂಕರೋ ನಾಯಮೃಣೀಚರಾಜನ್ । ಸರ್ವಾತ್ಮನಾ ಯಶ್ಶರಣಂ ಶರಣ್ಯಂ ನಾರಾಯಣಂ ಲೋಕಗುರುಂ ಪ್ರಪನ್ನಃ ॥**

ವನ್ನು ಪಂಚಮಹಾಯಜ್ಞಯಾಗಾದಿಗಳಿಂದಲೂ, ಋಷಿಋಣವನ್ನು ಬ್ರಹ್ಮಚರ್ಯದಿಂದಲೂ, ಪಿತೃಋಣವನ್ನು ಪ್ರಜೋತ್ಪತ್ತಿಯಿಂದಲೂ ಕಳೆಯತಕ್ಕದ್ದೆಂದೂ ಹೇಳಿರುವವರಿಂದ ಕೃತಕೃತ್ಯತೆ ಹೇಗೆ? ಇತ್ಯಾದಿ ಆಕ್ಷೇಪಗಳಿಗೆ ಈ ಮುಂದಿನ ವಾಕ್ಯಖಂಡದಿಂದ ಸಮಾಧಾನ ಹೇಳುವವರಾಗಿ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಏನೂ ಪ್ರತ್ಯವಾಯವಿಲ್ಲವೆಂದೂ, ಪ್ರಪನ್ನನಿಗೆ ಯಾವ ವಿಧವಾದ ಋಣವೂ ಇಲ್ಲವೆಂದೂ ಅಪ್ಪಣೆಕೊಡಿಸುತ್ತಾರೆ.

"ಹೇ ರಾಜನ್ - ಓ ನಿಮಿ ಚಕ್ರವರ್ತಿಯೇ, ಚಮಸಋಷಿಯು ನಿಮಿಯನ್ನು ಕುರಿತು ಹೇಳುತ್ತಾರೆ, **ಯಃ** - ಯಾವನು, ಲೋಕಕ್ಕೆಲ್ಲಾ ಗುರುವಾದ ನಾರಾಯಣನನ್ನು, ಶರಣಂ - ಉಪಾಯವನ್ನಾಗಿಯೂ, **ಶರಣ್ಯಂ** - ಉಪೇಯವನ್ನಾಗಿಯೂ, **ಸರ್ವಾತ್ಮನಾ** - ಸರ್ವಪ್ರಕಾರದಿಂದಲೂ, **ಪ್ರಪನ್ನಃ** - ಹೊಂದುವನೋ, **ಅಯಂ** - ಅಂತಹ ಪ್ರಪನ್ನನು, **ದೇವರ್ಷಿಭೂತಾತ್ಮನೃಣಾಂ, ದೇವರ್ಷಿ** ಭೂತ - ದೇವತೆ ಮತ್ತು ಋಷಿರೂಪರಾದ, **ಆತ್ಮ** - ಆತ್ಮರುಗಳೇನು ಮತ್ತು **ನೃಣಾಂ** - ಮನುಷ್ಯರೇನು ಇವರುಗಳಿಗೆ. ಶಾರಾಸ್ವಾದಿನಿಯವರು ಹೀಗೆ ಅರ್ಥ ಮಾಡಿರುತ್ತಾರೆ. ಸಾರಪ್ರಕಾಶಿಕೆ ಮತ್ತು ಸಾರವಿವರಣೆ ವ್ಯಾಖ್ಯಾತೃಗಳು, **ದೇವಭೂತಾತ್ಮನಾಂ** ಮತ್ತು **ಋಷಿಭೂತನೃಣಾಂ** ಎಂದು ಅನ್ವಯಿಸಿ, ದೇವರೂಪರಾದ ಆತ್ಮರೇನು ಋಷಿರೂಪರಾದ ಮನುಷ್ಯರೇನು ಇವರುಗಳಿಗೆ ಎಂದು

---

(೧) ಭಾಗವತ ೧೧ ೫. ೪೨. ಈಚೆಗೆ ಶ್ರೀಮದ್ಬ್ರಹ್ಮತಂತ್ರ ಪರಕಾಲಗುರುಗಳು ಅಚ್ಚು ಹಾಕಿಸಿದ ಗ್ರಂಥದಲ್ಲಿ ಈ ಶ್ಲೋಕವು "**ದೇವರ್ಷಿ ಭೂತಾಪ್ತನೃಣಾಂ ಪಿತೄಣಾಂ ನ ಕಿಂಕರೋ ನಾಯಮೃಣೀ ಚ ರಾಜನ್. ಸರ್ವಾತ್ಮನಾಯಶ್ಶರಣಂ ಶರಣ್ಯಂಗತೋ ಮುಕುನ್ದಂ ಪರಿಹೃತ್ಯಕೃತ್ಯಂ**" ಎಂದಿರುತ್ತದೆ. ಚಮಸರು ನಿಮಿಚಕ್ರವರ್ತಿಗೆ ಭಕ್ತಿಯೋಗದಿಂದ ಪರಮಪದ ಪ್ರಾಪ್ತಿಯನ್ನುಪದೇಶಿಸಿದರು. ಅದೂ ತುಂಬಾ ದುಸ್ತರವಾದುದಾಗಿ ವಿಷ್ಣುನಾಮ ಸಂಕೀರ್ತನವನ್ನು ಉಪಾಯವಾಗಿ ಹೇಳಿದರೂ ಅದೂ ತುಂಬಾ ಪ್ರತಿಬಂಧಕಗಳುಳ್ಳುದಾದುದರಿಂದ, ತುಂಬಾ ಸುಕರವಾದ ಪ್ರಪದನಮಾರ್ಗವನ್ನು ಈ ಶ್ಲೋಕಮೂಲಕ ಉಪದೇಶಿಸುತ್ತಾರೆ. **ಪರಿಹೃತ್ಯಕೃತ್ಯಂ** ಎಂದರೆ ಆತನನ್ನು **ಹೊಂದುವ** ಎಲ್ಲಾ **ಮಾರ್ಗಗಳನ್ನೂ ತ್ಯಜಿಸಿ** ಈ ಭರನ್ಯಾಸವನ್ನು ಕೈಕೊಳ್ಳಬಹುದೆಂಬ ಭಾವವು.

ಎನ್ನಿರ ಶ್ಲೋಕತ್ತಿನ್ಪಡಿಯೇ ಪ್ರಜಾಪತಿ ಪಶುಪತಿ ಯೆನ್ನಾರ್ಪ್ಪೋಲೆ ಪೇರಿಟ್ಟುಕೊಣ್ಡಿರುಕ್ಕಿರ ಸಜಾತೀಯರಾನ ಕ್ಷೇತ್ರಜ್ಞರೈಪ್ಪತ್ತ ಪೋರೋ

ಅರ್ಥಬರೆದಿರುತ್ತಾರೆ. ಈ ಎರಡನೇ ಅರ್ಥವೇ ಸರಿಯಾದುದಾಗಿ ತೋರುತ್ತದೆ. ಏಕೆಂದರೆ ಋಷಿಗಳ ಸಂವಾದದಿಂದ ಈ ಎರಡನೇ ಅರ್ಥವೇ ಸಾಧುವು ; ಮತ್ತು **ಪಿತೄಣಾಂ** ಪಿತೃಗಳ, **ಕಿಂಕರಃ** - ಆಳಾದವನು, **ನ** - ಅಲ್ಲವು. **ಋಣೀ ಚ** - ಋಣದಲ್ಲಿರುವವನೂ ಸಹ **ನ** - ಅಲ್ಲವು. ಎಂದರೆ ಭರನ್ಯಾಸಮಾಡಿದ ಪ್ರಪನ್ನನು ದೇವರ್ಷಿಪಿತೃಗಳಿಗೆ ಕಿಂಕರನೂ ಅಲ್ಲವು ಋಣಿಯೂ ಅಲ್ಲವು. ಆದುದರಿಂದ ಪ್ರಪನ್ನನಾದ ಬ್ರಾಹ್ಮಣನು ದೇವರ್ಷಿ ಪಿತೃತರ್ಪಣಾದಿಗಳನ್ನು ಮಾಡುವುದರಿಂದ ಅವರುಗಳಿಗೆ ಋಣಿಯಾಗಿ ಆಚರಿಸುವುದಿಲ್ಲವು. ದೇವರ್ಷಿ ಪಿತೃರಂತರಕ ಪರಮಾತ್ಮನನ್ನು ಪ್ರೀಣನಮಾಡಬೇಕೆಂಬ ವಿಧಿಯನ್ನನುಸರಿಸಿ ನಡಿಸತಕ್ಕದ್ದೆಂಬ ಭಾವವು ತ್ಯಾಗವನ್ನು ಹೇಳುವದರಿಂದ ಅದರ ಯಾವ ಫಲದಲ್ಲೂ ಈತನಿಗೆ ಅನ್ವಯವಿಲ್ಲವೆಂಬ ಭಾವವು. ಇಲ್ಲಿ ಸರ್ವಾತ್ಮನಾ ಎಂಬ ಪದಕ್ಕೆ ಪ್ರಾಪಕನಾಗಿಯೂ ಪ್ರಾಪ್ಯನಾಗಿಯೂ ಹೀಗೆ ಸರ್ವಪ್ರಕಾರವಾಗಿ ಎಂದಾಗಲಿ ಅಥವಾ ನವ ವಿಧವಾದ ಬಂಧುತ್ವದಿಂದಲೂ ಎಂದಾಗಲಿ ಅರ್ಥವನ್ನು ಹೇಳಬಹುದು.

ಎನ್ನಿರಶ್ಲೋಕತ್ತಿನ್ ಪಡಿಯೇ - ಎಂಬಭಿಪ್ರಾಯವುಳ್ಳ ಶ್ಲೋಕದಲ್ಲಿ ಹೇಳಿರುವಹಾಗೆ, **ಪ್ರಜಾಪತಿ** - ಪ್ರಜೆಗಳಿಗೆಲ್ಲಾ ಪತಿಯಾದ ಚತುರ್ಮುಖಬ್ರಹ್ಮನು, **ಪಶುಪತಿ** - ಪಶುವೆಂದರೆ ಬದ್ಧಚೇತನರು ಅವರಿಗೆಲ್ಲಾ ಸ್ವಾಮಿಯಾದ ರುದ್ರನು **ಎನ್ನಾರ್ಪ್ಪೋಲೆ** ಎಂದು ಹೇಳುವಹಾಗೆ. **ಪೇರಿಟ್ಟುಕೊಂಡಿರುಕ್ಕಿರ** - ಹೆಸರುಗಳನ್ನಿಟ್ಟುಕೊಂಡಿರುವ, **ಸಜಾತೀಯರಾನ** - ನಮ್ಮಹಾಗೆ ಬದ್ಧರಾದ **ಕ್ಷೇತ್ರಜ್ಞರೈಪ್ಪತ್ತ** - ಜೀವಾತ್ಮರನ್ನು ವಿಷಯವಾಗಿ, ಇದಕ್ಕೆ ಕರ್ತೃಪದವು **ಈ ಉಪಾಯ ನಿಷ್ಠನ್** ಎಂದು ಈ ಮಹಾವಾಕ್ಯ ಪ್ರಾರಂಭದಲ್ಲಿರುತ್ತದೆ. ಈ ಭರನ್ಯಾಸಾನುಷ್ಠಾನ ಮಾಡಿದವನು. **ಓರೋರವಸರಙ್ಗಳಿಲೆ** - ಒಂದೊಂದು ಕಾಲಗಳಲ್ಲಿ ಆ ಕಾಲಗಳು ಯಾವುವೆಂದರೆ **ಈತನು** ನಿತ್ಯಕರ್ಮಾನುಷ್ಠಾನ ಮತ್ತು ನೈಮಿತ್ತಿಕಗಳಾದ ಶ್ರಾದ್ಧವೂ ದರ್ಶಶ್ರಾದ್ಧಗಳೂ, ಉಪನಯನ ವಿವಾಹಾದಿಗಳೂ. ಇಂತಹ ಕಾಲಗಳಲ್ಲಿ, **ಕೈಕೂಲಿಪ್ಪೋಲೆ** - ಲೋಕದಲ್ಲಿ ಕೂಲಿ ಮೂಲಕವಾಗಿ ಭೃತ್ಯನಾಗಿರುವವನ ಹಾಗೆ, **ಶಿಲ ಉಪಾಧಿಗಳಡಿಯಾಗ** - ಕೆಲವು ಬ್ರಾಹ್ಮಣ ಜನ್ಮವೇ ಮೊದಲಾದ ಉಪಾಧಿಗಳ ಮೂಲಕವಾಗಿ, **ಎಳುದಾಮರೈಗಳಿಲೆ** - ಬರಿಯದೇ ಇರುವ ವೇದಗಳಲ್ಲಿ, ಜನರು ರಚಿಸಿದ ಗ್ರಂಥವಾದರೋ ಬರೆಯಲ್ಪಟ್ಟಿರುವದು, ವೇದಗಳಾದರೋ ಉಚ್ಚಾರಣಾನುಚ್ಚಾರಣೆರೂಪವಾಗಿ ಗುರುವಿನಿಂದ

ರವಸರಜ್ಜ್ವಳಿಲೆ ಕ್ಕೈಕ್ಕೂಲಿಪ್ಪೋಲೆ ಶಿಲ ಉಪಾಧಿಗಳಡಿಯಾಗ ವೇಳುತಾ ನುರೈಗಳಿಲೇ ಯೇರಿಟ್ಟುಕ್ಕಿರಕ್ಕಿಡನಡಿಮೈತ್ತೀಟ್ಟುನ್. ನುುದಲ್ ನೊಳಾದೆ ಪೋಲಿಶೈಯಿಟ್ಟು ಪೋರುಗಿರ ತನಿಶುತ್ತೀಟ್ಟುನ್ ಕ(ಕಿ)ಳಿತ್ತನ

ಶಿಷ್ಯನಿಗೆ ಹೀಗೆ ಪರಂಪರೆಯಾಗಿ ಬಂದುದಾದುದರಿಂದ ಅಕೃತ್ರಿಮವಾದುದು, ಇಂತಹ ವೇದಗಳಲ್ಲಿ, **ಏರಿಟ್ಟುಕ್ಕಿಡಕ್ಕಿರ** - ಅಂತರ್ಗತನಾಗಿ ಹೇಳಲ್ಪಟ್ಟಿರುವ **ಅಡಿಮೈತ್ತೀಟ್ಟುನ್** ದಾಸ್ಯಭಾವವನ್ನು ತೋರಿಸುವಪತ್ರವನ್ನೂ ಎಂದರೆ ನಾನು ಬ್ರಹ್ಮರುದ್ರಾದಿಗಳಿಗೆ ದಾಸ್ಯಮಾಡುವವನು ಎಂದು ತೋರಿಸುವಪತ್ರವನ್ನೂ **ನುುದಲ್** - ಮೂಲದ್ರವ್ಯವು, **ನೊಳಾದೆ** - ಕಮ್ಮಿಯಾಗದಹಾಗೆ, **ಪೊಲಿಶೈಯಿಟ್ಟು ಪೋರುಕಿರ** - ಬಡ್ಡಿಗೆ ಬಾಕಿರುವ, **ತನಿಶುತ್ತೀಟ್ಟುನ್** - ವೇದದಲ್ಲಿ ತೋರಿಬರುವ ಋಣಪತ್ರವನ್ನೂ, ಎಂದರೆ ಮೂಲಧನವು ಯಾವಾಗಲೂ ಕಮ್ಮಿಯಾಗದಹಾಗೆ ಸದಾ ಬಡ್ಡಿಯನ್ನು ಸಲ್ಲಿಸುವನೆಂದು ಋಣಪತ್ರ ಹೇಗೋ ಹಾಗೆ ಈ ಬ್ರಹ್ಮರುದ್ರಾದಿಗಳಿಗೆ ದಾಸ್ಯವು ಎಂದಿಗೂ ಕಮ್ಮಿಯಾಗದಹಾಗೆ, ಸದಾ ದಾಸ್ಯವೃತ್ತಿಯನ್ನು ಮಾಡುತ್ತೇನೆಂಬ ಋಣಪತ್ರವನ್ನೂ ಸಹ, **ಕಳಿತ್ತವನ್** - ಈ ಪ್ರಪನ್ನನು ಕಳೆದುಕೊಂಡವನು. ಇಲ್ಲಿ **ಕಳಿತ್ತವನ್** ಎಂಬಲ್ಲಿಗೆ ಒಂದು ವಾಕ್ಯವಾಗಿ ಭಾವಿಸಬಹುದು. ಮುಂದಕ್ಕೆ **ಅಗ್ಗೈಯಾಲೆ** ಎಂದು ಪ್ರಾರಂಭಿಸಬಹುದು. **ಕಿಳಿತ್ತವನ್** ಎಂದಿದ್ದರೆ ಆ ಪತ್ರವನ್ನು ಹರಿದು ಬಿಸಾಡಿದವನೆಂಬ ಭಾವವು.

ಈ ವಾಕ್ಯ ಒಂದಾಭಿಪ್ರಾಯವೇನೆಂದರೆ :— ಮೇಲಿನ ಭಾಗವತ ಶ್ಲೋಕದಲ್ಲಿ ಭಗವತ್ಸಾಕ್ಷಾತ್ಕಾರವಾದವನು ದೇವತೆಗಳಿಗೂ ಋಷಿಗಳಿಗೂ, ಪಿತೃಗಳಿಗೂ ಕಿಂಕರನು ಅಲ್ಲವು ಎಂದು ಹೇಳಲ್ಪಟ್ಟಿತು. ಆದರೆ **"ಜಾಯಮಾನೋ ವೈ ಬ್ರಾಹ್ಮಣ ಸ್ತ್ರಿಭಿ ಋಣವಾ ಜಾಯತೇ"** ಬ್ರಾಹ್ಮಣನಾಗಿ ಹುಟ್ಟಿದವನಿಗೆ ಈ ಮೂರು ಋಣಗಳೂ ಉಂಟೆಂದು ಹೇಳಿದೆಯಲ್ಲಾ ? ಮತ್ತು ಬ್ರಹ್ಮರುದ್ರರಿಗೆ, ಪ್ರಜಾಪತಿ, ಪಶುಪತಿ ಎಂಬ ಹೆಸರುಗಳಿರುವುದರಿಂದಲೇ ಅವರುಗಳು ನಮ್ಮಂಥವರಿಗೆಲ್ಲಾ ಪತಿಗಳಾಗಿ ಅವರಿಗೆ ಶೇಷಭೂತರೆಂಬುವದು ತೋರಿಬರುತ್ತದೆ. ಅದೂ ಅಲ್ಲದೆ ವೇದದಲ್ಲಿ **"ಯಥಾ ಪಶುರೇವಂ ಸ ದೇವಾನಾಂ ಜಾಯಮಾನೋ ವೈ ಬ್ರಾಹ್ಮಣಃ"** "ಲೋಕದಲ್ಲಿ ಪಶುವು ಹೇಗೆ ಮನುಷ್ಯರಿಗೆ ಅಧೀನವೋ, ಹಾಗೆ ಬ್ರಾಹ್ಮಣನಾಗಿ ಹುಟ್ಟಿದವನು ದೇವತೆಗಳಿಗೆ ಕಿಂಕರರು." ಎಂಬ **ಅಡಿಮೈತ್ತೀಟ್ಟು** ದಾಸಪತ್ರವಿರುತ್ತದೆ. ಮತ್ತು "ಕುಸೀದ ಮೇಕೇ ವಿಹರಂತಿ" ಎಂಬ ಪ್ರಮಾಣದಲ್ಲಿ ತೋರಿಬರುವ **ತನಿಶುತ್ತೀಟ್ಟು** ಬಡ್ಡೀಪತ್ರವೂ

ನಾಂಗೈಯಾಲೇ ಪಂಚಮಹಾ ಯಜ್ಞಾದಿಗಳಾನ ನಿತ್ಯನೈಮಿತ್ತಿಕಙ್ಗಳಿಲ್ ಅವರ್‌ಗಳ್ ಪೇರ್ ಶೊಲ್ಲಿಂಪೋದು (೧) "ಯೇ ಯಜನ್ತಿ ಪಿತೄನ್ ದೇವಾನ್ ಬ್ರಾಹ್ಮಣಾನ್ ಸಹುತಾಶನಾನ್ । ಸರ್ವಭೂತಾಂತರಾತ್ಮಾನಂ

ಇರುತ್ತದೆ ಇವುಗಳಿಗೆಲ್ಲಾ ಹೀಗೆ ಬದ್ಧನಾದರೆ, ಕೃತಕೃತ್ಯನು ಹೇಗಾಗು ವನು? ಎಂಬಾಕ್ಷೇಪಕ್ಕೆ ಸಮಾಧಾನವಾಗಿ ಇವುಗಳನ್ನೆಲ್ಲಾ ಈ ಪ್ರಪನ್ನನು **ಕಳಿತ್ತವನ್** - ಹೋಗಲಾಡಿಸಿಕೊಂಡವನು ತ್ಯಾಗವನ್ನು ಹೇಳಿ ಫಲಾಭಿಸಂಧಿ ರಹಿತನಾಗಿ ಅವುಗಳನ್ನು ನೆರವೇರಿಸುವದರಿಂದ, ಅವುಗಳ ಸಂಬಂಧವು ಈತನಿ ಗಿಲ್ಲವೆಂಬ ಭಾವವು.

ಆದರೂ ಈತನು ಮುಖ್ಯವಾಗಿ ಅನುಷ್ಠಿಸಬೇಕಾದ ಪಂಚಮಹಾಯಜ್ಞ ಗಳಾದ ನಿತ್ಯ ಕರ್ಮಾನುಷ್ಠಾನಗಳಲ್ಲಿಯೂ ನೈಮಿತ್ತಿಕಗಳಲ್ಲಿಯೂ ಬ್ರಹ್ಮರುದ್ರೇಂದ್ರಾ ದಿಗಳನ್ನೂ ಆದಿತ್ಯಾಗ್ನಿಗಳೇ ಮೊದಲಾದ ದೇವತೆಗಳನ್ನೂ ಆರಾಧಿಸಿದ ಹಾಗೆ ಆಗುವದಿಲ್ಲವೇ? ಪ್ರಪನ್ನನಿಗೆ ಮುಖ್ಯವಾಗಿ ಅನ್ಯದೇವತಾರಾಧನೆಯು ನಿಷಿದ್ಧ ವಾದುದಲ್ಲವೇ? ಎಂದರೆ ಅದಕ್ಕೆ ಮುಂದಿನ ವಾಕ್ಯಭಾಗದಿಂದ ಸಮಾಧಾನ ವನ್ನು ಹೇಳುತ್ತಾರೆ. ನಿತ್ಯನೈಮಿತ್ತಿಕ ಕರ್ಮಗಳನ್ನನುಷ್ಠಿಸುವಾಗ, ತತ್ತದ್ದೇವತಾ ಶರೀರಕನಾದ ಶ್ರೀಮನ್ನಾರಾಯಣನೇ ಆರಾಧಿಸಲ್ಪಡುವನೆಂದು ಸಪ್ರಮಾಣ ವಾಗಿ ತಿಳಿಸುತ್ತಾರೆ.

ಪಂಚಮಹಾಯಜ್ಞಾದಿಗಳಾನ - ಪಂಚಮಹಾ ಯಜ್ಞಗಳೇ ಮೊದ ಲಾದವುಗಳಾದ, **ನಿತ್ಯನೈಮಿತ್ತಿಕಙ್ಗಳಿಲ್** - ಪ್ರತಿದಿನವೂ ಅನುಷ್ಠಿಸಬೇಕಾದ ಕರ್ಮಗಳು ನಿತ್ಯಗಳು, ಪಿತೃಶ್ರಾದ್ಧ, ದರ್ಶಶ್ರಾದ್ಧವೇ ಮೊದಲಾದವುಗಳು ನೈಮಿ ತ್ತಿಕ ಕರ್ಮಗಳು, ಇಂತಹ ಕರ್ಮಗಳಲ್ಲಿ **ಅವರುಗಳ್ ಪೇರ್ ಶೊಲ್ಲಿಂ ಪೋದು** - ಆ ದೇವತೆಗಳ ಋಷಿಗಳ ಪಿತೃಗಳ ಹೆಸರುಗಳನ್ನು ಹೇಳುವಾಗ, "**ಯೇ** - ಯಾರು, **ಪಿತೄನ್** - ಸೋಮಮುಮ ಮೊದಲಾದ ಪಿತೃಗಳನ್ನೂ, **ದೇವಾನ್** - ಇಂದ್ರಾದಿ ದೇವತೆಗಳನ್ನೂ, **ಬ್ರಾಹ್ಮಣಾನ್** - ಋಷಿಗಳೇ ಮೊದಲಾದ ಬ್ರಾಹ್ಮಣರನ್ನೂ **ಸಹುತಾಶನಾನ್** - ಅಗ್ನಿಯೊಂದಿಗೆ ಇರುವರನ್ನಾಗಿ ಎಂದರೆ, ಯಜ್ಞಾದಿಗಳಲ್ಲಿ ಅಗ್ನಿಯು ಹವಿಸ್ಸನ್ನು ತಂದುಕೊಡುವವ ರಾಗಿ, **ಯಜನ್ತಿ** - ಆರಾಧಿಸುತ್ತಾರೋ, **ತೇ** - ಅವರು, **ಸರ್ವಭೂತಾಂತ ರಾತ್ಮಾನಂ** - ಈ ಶಬ್ದ ಮೇಲಿನ ಪಿತೃಗಳೇ ಮೊದಲಾದ ಸರ್ವ ಚೇತನರಿಗೂ

(೧) ಭಾರ ಶಾನ್ತಿ ೩೫೫. ೨೪.

ವಿಷ್ಣುಮೇವ ಯಜಂತಿತೇ" ಇತ್ಯಾದಿಗಳಿಲ್ ಮಹರ್ಷಿಗಳರುದಿ ಯಿಟ್ಟ ಪಡಿಯೇ, ರಾಜಸೇವಕರ್ ರಾಜಾವುಕ್ಕುಚ್ಚಟ್ಟೈ ಮೇಲೆ ಮಾಲ್ಯೆಯ್ಯುಮ್ ಅಭರಣತ್ತೈಯುಮಿಟ್ಟಾಲುಮ್ ಶಟ್ಟೈಯಿಲ್ ತುವಕ್ಕಱ್ಱು ರಾಜಾವಿನ್ ಪ್ರೀತಿಯೇ ಪ್ರಯೋಜನಮಾಗತ್ತೆಳಿನ್ದಿರುಕ್ಕುಮಾಪ್ಪೋಲೆ ಯಜ್ಞಾಗ್ರಹರಾಧ್ಯಾಯಾದಿಗಳಿಲುಮ್, ಶ್ರೀ ಹಸ್ತಿಗಿರಿ ಮಾಹಾತ್ಮ್ಯತ್ತಿಲುಮ್, "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಙ್ಗಿಱ ಸೂತ್ರತ್ತಿಲುಮ್, ಶೊಲ್ಲುಗಿರಪಡಿಯೇ ದೇವರ್‌ಗಳ್ ಪಿತೃಕ್ಕಳ್ ಎಙ್ಗಿಱ ಶಟ್ಟೈಗಳೋಡು ತುವಕ್ಕಱ ಅವ್ವೋ ಶಬ್ದಙ್ಗಳ್ ಅವಯುವ ಶಕ್ತಿಪೌಷ್ಕಲ್ಯ

ಅಂತರಾತ್ಮಾವಾಗಿರುವದರಿಂದಲೇ, ಹಾಗೆ ಅಂತರಾತ್ಮಾವಾದ ವಿಷ್ಣುವನ್ನೇ, ಯಜನ್ತಿ - ಆರಾಧಿಸುವರು. ಇವರೆಲ್ಲರಿಗೂ ವಿಷ್ಣುವು ಆತ್ಮಾ ಎಂದು ಹೇಳಿರುವದರಿಂದ ವಿಷ್ಣುವು ಶರೀರಿಯಾಗಿ ಅವರೆಲ್ಲರೂ ಅವನಿಗೆ ಶರೀರವಾಯಿತು. ಶರೀರಕ್ಕೆ ಮಾಡಿದಾರಾಧನೆಯಿಂದ ಶರೀರಿಯು ಪ್ರೀತನಾಗುವನೆಂಬ ಭಾವವು" ಇತ್ಯಾದಿಗಳಿಲ್ - ಇವೇ ಮೊದಲಾದ ಪ್ರಮಾಣಗಳಲ್ಲಿ, ಮಹರ್ಷಿಗಳ್ - ವ್ಯಾಸ ಮೊದಲಾದ ಮಹರ್ಷಿಗಳು, ಅರುದಿಯಿಟ್ಟಪಡಿಯೇ - ನಿಶ್ಚಯಿಸಿದ ಪ್ರಕಾರವಾಗಿಯೇ, ಅವರು ಹೇಗೆ ಹಾಗೆ ನಿಶ್ಚಯಿಸಿದರೆಂಬುವದಕ್ಕೆ ಪ್ರಮಾಣಗಳೂ ಅಲ್ಲದೆ ಲೋಕದೃಷ್ಟಾಂತವೂ ಉಂಟೆಂದು ಹೇಳುತ್ತಾರೆ; ರಾಜಸೇವಕರು ರಾಜನಿಗೆ ಶಟ್ಟೈಮೇಲೆ - ಅಂಗಿಯ ಮೇಲೆ, ಮಾಲ್ಯೆಯುಮ್ ಆಭರಣತ್ತೈಯುಮ್ - ಪುಷ್ಪಹಾರವನ್ನೂ ರತ್ನಖಚಿತವಾದ ಸುವರ್ಣಾಭರಣವನ್ನೂ, ಇಟ್ಟಾಲುಮ್ - ಹಾಕಿದರೂ, ಶಟ್ಟೈಯಿಲ್ ತುವಕ್ಕತ್ತು - ಆ ಅಂಗಿಯ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿ, ಅದು ಇಲ್ಲದ ಹಾಗೆಯೇ ಭಾವಿಸಿ, ರಾಜಾವಿನ್ ಪ್ರೀತಿಯೇ ಪ್ರಯೋಜನಮಾಗ - ರಾಜನ ಪ್ರೀತಿಯೇ ಪ್ರಯೋಜನವಾಗಿ, ತೆಳಿನ್ದಿರುಕ್ಕುಮಾಪ್ಪೋಲೆ - ಆ ರಾಜಸೇವಕರು ತಿಳಿದಿರುವ ಹಾಗೆ, ಇದಕ್ಕೆ ಮುಂದೆ ಇರುವ ನಿರ್ಕರ ನಿಲ್ಯೆಯ್ಯ ಕಣ್ಣ - ಎಂಬುವದರೊಂದಿಗೆ ಅನ್ವಯವು. ಭಾರತದಲ್ಲಿರುವ ಯಜ್ಞಾಗ್ರಹರಾಧ್ಯಾಯದಲ್ಲೂ, ಶ್ರೀ ಹಸ್ತಿಗಿರಿ ಮಾಹಾತ್ಮೆಯಲ್ಲೂ, ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಂಬ ಶಾರೀರಕ ಮೀಮಾಂಸಾ ಸೂತ್ರದಲ್ಲೂ (೧. ೨. ೨೮) ಶೊಲ್ಲುಗಿರಪಡಿಯೇ - ಹೇಳುವಹಾಗೆ, ದೇವರ್ಗಳ್ ಪಿತೃಕ್ಕಳ್ ಎಙ್ಗಿಱ ಶಟ್ಟೈಗಳೋಡು - ದೇವತೆಗಳು ಪಿತೃಗಳು ಎಂಬ ಕಂಚುಕಸ್ಥಾನದಲ್ಲಿರುವರೊಂದಿಗೆ ಎಂದರೆ ಸರ್ವೇಶ್ವರನ ಶರೀರಗಳಾದ ದೇವತೆಗಳು ಮತ್ತು ಪಿತೃಗಳು, ಇವರೊಂದಿಗೆ ತುವಕ್ಕಱ-

ಙ್ಗಳಾಲೇ ಈಶ್ವರರ್ ಪಕ್ಕಲಿಲೆ ನಾರಾಯಣಾದಿ ಶಬ್ದಙ್ಗಳ್ ಪೋಲೆ ನಿರ್ವಿರ ನಿಲ್ಲೈಯೈಯುಮುಡೈ ಕಣ್ಡು,

---

ಸಂಬಂಧವಿಲ್ಲದಪಾಗಿ, **ಅವ್ವೋ ಶಬ್ದಙ್ಗಳ್** - ಆಮಾ ಪ್ರಜಾಪತಿ, ರುದ್ರೇಂದ್ರ ಸೂರ್ಯಾಗ್ನಿ ಶಬ್ದಗಳು, **ಅವಯುವ ಶಕ್ತಿಪೌಷ್ಕಲ್ಯಙ್ಗಳಾಲೇ** - ಪ್ರಕೃತಿ ಪ್ರತ್ಯಯಮೂಲಕ ಉಂಟಾಗುವ ವ್ಯುತ್ಪತ್ತಿ ದ್ವಾರಾ, **ಈಶ್ವರನ್ ಪಕ್ಕಲಿಲೆ** - ಸರ್ವೇಶ್ವರನಲ್ಲೀ, **ನಾರಾಯಣಾದಿ ಶಬ್ದಙ್ಗಳ್ ಪೋಲೆ** - ನಾರಾಯಣ, ಆದಿ ಶಬ್ದದಿಂದ ವಾಸುದೇವ, ಭಗವಾನ್, ಕೇಶವ, ಮುಕುಂದ ಮೊದಲಾದ ಶಬ್ದಗಳ ಹಾಗೆ, **ನಿರ್ವಿರ ನಿಲ್ಲೈಯೈ ಕಣ್ಡು** - ನಿಲ್ಲುವ ಎಂದರೆ ಅನ್ವಯಿಸುವ ಸ್ಥಿತಿಯನ್ನು ತಿಳಿದು, **ಯಿರುಕ್ಕುಮ್** ಎಂದು ಇಲ್ಲಿಗೆ ಒಂದು ವಾಕ್ಯವಾಗಿ ಭಾಗಿಸಬಹುದು.

"ಪಂಚವಾ ಏತೇ ಮಹಾಯಜ್ಞಾಃ ಸತತಿ ಪ್ರತಾಯನ್ತೇ
ಸತತಿ ಸನ್ತಿಷ್ಠನ್ತೇ ದೇವಯಜ್ಞಃ ಪಿತೃಯಜ್ಞೋ
ಭೂತಯಜ್ಞೋ ಮನುಷ್ಯಯಜ್ಞೋ ಬ್ರಹ್ಮಯಜ್ಞ ಇತಿ"

ಎಂಬುವದರಿಂದ ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಬ್ರಹ್ಮಯಜ್ಞವೆಂಬುವದಾಗಿ ಪಂಚಮಹಾಯಜ್ಞಗಳು, ಇವುಗಳನ್ನು ಸಪತ್ನೀಕನಾದ ಗೃಹಸ್ಥ ಬ್ರಾಹ್ಮಣನು ಸತತಿ ಪ್ರತಿದಿನದಲ್ಲೂ ಅನುಷ್ಠಿಸತಕ್ಕದ್ದು.

ಯದಗ್ನೌ ಜುಹೋತ್ಯಪಿ ಸಮಿಧಂ ತದ್ದೇವ ಯಜ್ಞಃ ಸಂತಿಷ್ಠತೇ।
ಯತ್ಪಿತೃಭ್ಯಸ್ಸ್ವಧಾ ಕರೋತ್ಯಪ್ಯ ಪಸ್ತತ್ಪಿತೃಯಜ್ಞಃ ಸಂತಿಷ್ಠತೇ।
ಯದ್ಭೂತೇಭ್ಯೋ ಬಲಿಗ್ಂ ಹರತಿ ತದ್ಭೂತಯಜ್ಞಃ ಸಂತಿಷ್ಠತೇ।
"ಯದ್ಬ್ರಾಹ್ಮಣೇಭ್ಯೋಽನ್ನಂ ದದಾತಿ ತನ್ಮನುಷ್ಯ ಯಜ್ಞಃ ಸಂತಿಷ್ಠತೇ।
"ಯತ್ಸ್ವಾಧ್ಯಾಯ ಮಧೀಯೀತೈಕಾಮಪ್ಯೃಚಂ ಯಜುಸ್ಸಾಮವಾ ತದ್ಬ್ರಹ್ಮಯಜ್ಞ ಸ್ಸಂತಿಷ್ಠತೇ" (ತೈ ಆರಣ್ಯಕ ೨. ೧೦)

ಎಂದು ಈ ಐದು ಯಜ್ಞಗಳಲ್ಲಿ ಕೊನೆಯದಾದ ಬ್ರಹ್ಮಯಜ್ಞವನ್ನು ಪ್ರಾತಸ್ಸಂಧ್ಯಾ ವಂದನವಾದ ನಂತರ ಜೇಗ್ರ್ ಮಾಡತಕ್ಕದ್ದು. ಇದಕ್ಕೆ ಅರ್ಹತೆ ಸಪತ್ನೀಕನಾದ ಗೃಹಸ್ಥನಿಗೆ ಉಂಟು. ಬ್ರಹ್ಮಚಾರಿಯೂ ಕೂಡ ಮಾಡತಕ್ಕದ್ದು. ಮಿಕ್ಕ ನಾಲ್ಕು ಯಜ್ಞಗಳನ್ನು ವೈಶ್ವದೇವದೊಂದಿಗೆ ಪ್ರತಿದಿನವೂ ನಡಿಸತಕ್ಕದ್ದಾಗಿರುತ್ತದೆ. **ದೇವಯಜ್ಞೇನ, ಪಿತೃಯಜ್ಞೇನ, ಭೂತಯಜ್ಞೇನ, ಮನುಷ್ಯಯಜ್ಞೇನ ಯಕ್ಷ್ಯೇ** ಎಂದು ಕ್ರಮವಾಗಿ ಸಙ್ಕಲ್ಪಿಸಿ ನಡಿಸತಕ್ಕದ್ದಾಗಿರುತ್ತದೆ. ಇದಕ್ಕೆ ಸಪತ್ನೀಕನಾದ ಗೃಹಸ್ಥನು ಅಧಿಕಾರಿಯು ; ಅಪತ್ನೀಕರಿಗೆ ಬ್ರಹ್ಮಯಜ್ಞ ಮೊದ

ಲಾದ ಸಂಚನುಹಾಪಾಪ್ಮಗಳಿಗೆ ಅಧಿಕಾರವಿಲ್ಲವು. ಹಾಗೆಯೇ ಔಪಾಸನಕ್ಕೂ ಅಧಿಕಾರವಿಲ್ಲವು.

ಯೇ ಯಜನ್ತಿ ಎಂಬ ಶಾಸ್ತ್ರಪದ್ಯ ಪ್ರಮಾಣವು ಸರ್ವೇಶ್ವರನೇ ಸರ್ವಕರ್ಮಗಳಿಂದಲೂ ಆರಾಧ್ಯನೆಂದು ಹೇಳುತ್ತದೆ. ಈ ಸರ್ವ ಕರ್ಮಾರಾಧ್ಯತೆಯು ಅನೇಕ ಕಡೆಗಳಲ್ಲಿ ಮಹರ್ಷಿಗಳಿಂದ ಪ್ರೋಕ್ತವಾಗಿದೆ ಎಂದು ತಿಳಿಸುವದಕ್ಕಾಗಿಯೇ, ಇತ್ಯಾದಿಗಳಿಲ್ ಎಂದು ಪ್ರಯೋಗಿಸಿರುತ್ತಾರೆ. ಗೀತೆಯಲ್ಲೂ,

"ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವಚ"

ಸಮಸ್ತ ಯಜ್ಞಗಳಿಗೂ ಕರ್ತಾವಾಗಿ ಫಲಪ್ರದನೂ ಆದುದರಿಂದ ಸ್ವಾಮಿಯೂಗಿಯೂ, ಭೋಕ್ತಾವಾಗಿಯೂ ಇರುವವನು ನಾನೇ ಎಂದೂ (ಗೀ. ೯. ೨೪)

"ಯೇಪ್ಯನ್ಯದೇವತಾಭಕ್ತಾಃ ಯಜನ್ತೇ ಶ್ರದ್ಧಯಾನ್ವಿತಾಃ।
ತೇಪಿ ಮಾಮೇವ ಕೌನ್ತೇಯ ಯಜನ್ತ್ಯವಿಧಿಪೂರ್ವಕಂ॥"

"ಯಾರು ಇತರ ದೇವತೆಗಳನ್ನು ಕುರಿತು ಯಜ್ಞಗಳನ್ನು ಮಾಡುತ್ತಾರೋ ಅವರೂ ನನಗೆ ಶರೀರವಾಗಿ ಅವರಿಗೆ ನಾನು ಆತ್ಮಾವಾದ ಪ್ರಯುಕ್ತ, ಅವರುಗಳನ್ನು ಹೇಳುವ ಶಬ್ದಗಳು ನನ್ನನ್ನೇ ಕುರಿತು ಹೇಳಿರುವದರಿಂದ ಅಶಾಸ್ತ್ರೀಯವಾಗಿ ಯಜ್ಞಮಾಡುತ್ತಾರೆ." ಎಂದು ಹೇಳಲ್ಪಟ್ಟಿರುತ್ತದೆ. ಈ ಶರೀರಾತ್ಮಭಾವದಿಂದಲೇ ಯಾವ ದೇವತೆಯನ್ನುದ್ದೇಶಿಸಿ ಆರಾಧನೆಯನ್ನು ಗೈಯ್ದರೂ ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಡುವನೆಂಬ ಭಾವವು.

ಈ ವಿಷಯದಲ್ಲಿ ಪ್ರಮಾಣವನ್ನು ತೋರಿಸಿದುದೂ ಅಲ್ಲದೆ ಒಂದು ಲೋಕದೃಷ್ಟಾಂತದಿಂದಲೂ ಅದನ್ನು ವ್ಯಕ್ತಪಡಿಸುತ್ತಾರೆ. ಒಬ್ಬ ರಾಜನು ಒಂದು ಅಂಗಿಯನ್ನು ಧರಿಸಿರುತ್ತಾನೆಂದು ಭಾವಿಸೋಣ. ಆ ಅಂಗಿಯ ಮೇಲೆ ಬೀಳುವ ಹಾಗೆ ಒಂದು ಹೂವಿನ ಹಾರವನ್ನಾಗಲಿ ಅಥವಾ ಚಿನ್ನದ ಹಾರವನ್ನಾಗಲಿ, ಒಬ್ಬ ರಾಜ ಸೇವಕನು ಹಾಕಿದರೆ, ಅದರಿಂದ ಆ ಅಂಗಿಗೆ ಏನೂ ಪ್ರಯೋಜನವಾಗದೆ ರಾಜನಿಗೇನೇ ಅದು ಹೇಗೆ ಮುಖೋಲ್ಲಾಸಕ್ಕೆ ಕಾರಣಭೂತವಾಗುತ್ತದೋ, ಹಾಗೆಯೇ ಸರ್ವೇಶ್ವರನಿಗೆ ಶರೀರಭೂತರಾಗಿ ಕಂಚುಕಪ್ರಾಯರಾದ ಈ ಬ್ರಹ್ಮರುದ್ರೇಂದ್ರಾದಿಗಳಾದ ದೇವತೆಗಳ ಆರಾಧನೆಯಿಂದ ಸರ್ವೇಶ್ವರನೇ ಪ್ರೀತನಾಗುವನೆಂಬ ಭಾವವು. ರಾಜನ ಆತ್ಮಾವಿಗೆ ದೇಹವೇ ಒಂದು ಕಂಚುಕದ ಹಾಗೆ ಇರುವಾಗ ಅದನ್ನು ಬಿಟ್ಟು ಬೇರೆಯೊಂದು ಕಂಚುಕದ ಸಾಮ್ಯವನ್ನು ಏಕೆ ಶ್ರೀ ಮದಾಚಾರ್ಯರವರು ಪ್ರಯೋಗಿಸಿದರೆಂದರೆ, ದೇಹವು ಪ್ರಾಣವಿರುವವರಿಗೂ ಆತ್ಮಾವಿಗೆ ಸಂಬಂಧಿಸಿ ಇದ್ದುಕೊಂಡು ಚೈತನ್ಯವನ್ನು ಹೊಂದಿದ ಹಾಗೆ ತೋರುತ್ತದೆ. ಸರ್ವೇಶ್ವರನಿಗೆ ಶರೀರಭೂತರಾದ ಇವರುಗಳು ಸರ್ವೇಶ್ವರನಿಂದ ಕೊಡಲ್ಪಟ್ಟ ಸತ್ತಾದಿಗಳೂ ಅಧಿಕಾರವೂ ಇಲ್ಲದ ಪಕ್ಷದಲ್ಲಿ ಅಂಗಿಯ ಹಾಗೆ ಅಚೇತನ

ಪ್ರಾಯರೆಂದು ವಿಶದವಾಗಿ ತಿಳಿಸುವದಕ್ಕಾಗಿ **ರಾಜಶಟ್ಟ್ಯ** ದೃಷ್ಟಾಂತವೆಂದು ತಿಳಿಯತಕ್ಕದ್ದು. ಅನ್ಯದೇವತಾರಾಧನವೂ ಕೂಡ ಅಶಾಸ್ತ್ರೀಯವಾಗಿ ಮಾಡಿದ ಸರ್ವೇಶ್ವರಾರಾಧನನೆಂಬ ಭಾವವು. ಸರ್ವೇಶ್ವರನೇ ಸರ್ವ ಕರ್ಮಾರಾಧ್ಯನೆಂಬಂಶವು ಮುಖ್ಯವಾಗಿ ಎಲ್ಲಿ ಪ್ರತಿಪಾದಿತವಾಗಿದೆ ಎಂದರೆ ಹೇಳುತ್ತಾರೆ:—ಭಾರತದ ಯಜ್ಞಾಗ್ರಹರಾಧ್ಯಾಯದಲ್ಲೂ ಮತ್ತು ಹಸ್ತಿಗಿರಿ ಮಾಹಾತ್ಮ್ಯೆಯಲ್ಲೂ ಇದು ಉಪಪಾದಿಸಲ್ಪಟ್ಟಿರುತ್ತದೆ:—ಯಜ್ಞಾಗ್ರಹರಾಧ್ಯಾಯದಲ್ಲಿ "**ಕಥಂ ಸಭಗವಾನ್ ದೇವೋ ಯಜ್ಞೇಷ್ವಗ್ರಹರಃ ಪ್ರಭುಃ**" ಯಜ್ಞಗಳಲ್ಲಿ ಪರಮ ಪುರುಷನೇ ಹೇಗೆ ಅಗ್ರಹರನು ಎಂಬ ಪ್ರಶ್ನೆಗೆ ಉತ್ತರವು ಹೇಳಲ್ಪಡುತ್ತದೆ. ಕ್ರೀಡಾಲೋಲನಾದ ಭಗವಂತನಿಂದ ಸೃಷ್ಟಿಕಾಲದಲ್ಲಿ ಅಧಿಕಾರಕೊಡಲ್ಪಟ್ಟ ಬ್ರಹ್ಮರುದ್ರಾದಿಗಳು ಲೋಕಕಾರ್ಯನಿರ್ವಾಹ ಸಾಮರ್ಥ್ಯವಿಲ್ಲದೆ, ಭಗವಂತನನ್ನು ಕುರಿತು ತಪಸ್ಸನ್ನಾಚರಿಸಿದವರಾಗಿ ಭಗವಂತನು ಪ್ರತ್ಯಕ್ಷನಾಗಿ ಅವರನ್ನು ಕುರಿತು ನೀವು ತಪಸ್ಸುಮಾಡಿದ ಉದ್ದೇಶವು ತಿಳಿಯಿತು ಎಂದು ಹೇಳಿ ಆಜ್ಞಾಪಿಸುತ್ತಾರೆ:—

ಏಷ ಬ್ರಹ್ಮಾ ಲೋಕಗುರು ಸ್ಸರ್ವಲೋಕ ಪಿತಾಮಹಃ ।
ಯೂಯಂಚ ವಿಬುಧಶ್ರೇಷ್ಠಾ ಮಾಂ ಯಜಧ್ವಂ ಸಮಾಹಿತಾಃ ॥

ಓ ಚತುರ್ಮುಖಬ್ರಹ್ಮನೇ, ಓ ಇತರ ದೇವತೆಗಳಿರಾ, ನೀವುಗಳೆಲ್ಲಾ ಸೇರಿ ನನ್ನನ್ನು ಕುರಿತು ಯಜ್ಞವನ್ನು ಮಾಡಿರಿ ಎಂದು ವಿಧಿಸಲು; ಆಗ ಅವರು ವೈಷ್ಣವ ಯಜ್ಞವನ್ನು ಪ್ರಾರಂಭಿಸಿದರು, ಚತುರ್ಮುಖಬ್ರಹ್ಮನು ವಿಷ್ಣುವಿಗೂ ತನಗೂ ಇತರ ದೇವತೆಗಳಿಗೂ ಹವಿರ್ಭಾಗಗಳನ್ನು ಕಲ್ಪಿಸಿದನು. ಅವುಗಳನ್ನು ಯಜ್ಞಧರನಾದ ಶ್ರೀ ಮಹಾವಿಷ್ಣುವು ಅನುಮೋದಿಸಿ, ಬ್ರಹ್ಮರುದ್ರಾದಿಗಳಿಗೆ ವರದಾನಶಕ್ತಿಯನ್ನಿತ್ತನು. ಹೀಗೆ ಪ್ರತಿಯೊಂದು ಯಜ್ಞದಲ್ಲೂ

"ಏವಮೇವ ಮಹಾಭಾಗಃ ಪದ್ಮನಾಭಸ್ಸನಾತನಃ ।
ಯಜ್ಞೇಷ್ವಗ್ರಹರಃ ಪ್ರೋಕ್ತೋ ಯಜ್ಞಧಾರೀಚ ನಿತ್ಯದಾ ॥"

ಎಂದು ಹೇಳಿ, ಸರ್ವ ಕರ್ಮಗಳಿಂದಲೂ ವಿಷ್ಣುವೇ ಆರಾಧ್ಯನೆಂದು ಹೇಳಲ್ಪಟ್ಟಿರುತ್ತದೆ.

ಹಸ್ತಿಗಿರಿ ಮಾಹಾತ್ಮ್ಯೆಯಲ್ಲೂ ಶ್ರೀ ಮಹಾವಿಷ್ಣುವಿನ ಸರ್ವ ಕರ್ಮಾರಾಧ್ಯತೆಯು ಬಹು ಚನ್ನಾಗಿ ಹೇಳಲ್ಪಟ್ಟಿರುತ್ತದೆ. ಇಲ್ಲಿಯೂ ಚತುರ್ಮುಖಬ್ರಹ್ಮನು,

"ಯಜ್ಞಂ ಯಜ್ಞೇಶ್ವರಂ ವಿಷ್ಣುಂ ವರದಂ ಭಕ್ತವತ್ಸಲಂ ।
ಅಗ್ನಿಮಧ್ಯೇ ಸ್ಥಿತಂ ಧ್ಯಾತ್ವಾ ಸರ್ವಂ ತಸ್ಮೈ ನ್ಯವದೇಯತ್
ಯಜ್ಞಮೂರ್ತಿ ರನನ್ಯಾತ್ಮಾ ವೈಕುಂಠಃ ಪ್ರಿಯತಾಮಿತಿ"

ಶ್ರೀ ಮಹಾವಿಷ್ಣುವಿನ ಪ್ರೀತಿಗಾಗಿ, ಆತನನ್ನು ಅಗ್ನಿಮಧ್ಯದಲ್ಲಿರುವ ಹಾಗೆ

ಧ್ಯಾನಿಸಿದವನಾಗಿ, "ಶ್ರೀಮದಚ್ಯುತಃ ಪ್ರೀಯತಾಂ" ಎಂದು ಹೇಳಿ ಯಜ್ಞವನ್ನಾರಂಭಿಸಿ, ಹವಿರ್ಭಾಗಗಳನ್ನು ಕೊಡಲಾರಂಭಿಸಿದನು ಆಗ ಇತರ ದೇವತೆಗಳಿಗೂ ಕೊಟ್ಟ ಹವಿರ್ಭಾಗವೂ ಕೂಡ,

ಸರ್ವಲೋಕೇಶ್ವರ ಸ್ಸಾಕ್ಷಾದ್ದ್ವರದೋ ಹವ್ಯಕವ್ಯ ಭುಕ್ ।
ಯಃ ಪಶುರ್ಯೇನ ಮನ್ತ್ರೇಣ ಯದ್ದೈವತ್ಯೋಽಭಿಧೀಯತೇ ।
ಸಪಶು ಸ್ತೇನ ಮನ್ತ್ರೇಣ ತದ್ದೈವತ್ಯೋಽಪಿ ಹೂಯತೇ
ತಥಾಪಿ ತ್ರಿದಶೈ ಸ್ಸಾಂಶೋ ಲಭ್ಯತೇ ನಚಕಶ್ಚನ ॥

ಎಂದು ಹೇಳಿರುವ ಹಾಗೆ, ಅವರುಗಳಿಗೆ ಲಭ್ಯವಾಗದೆ ಯಜ್ಞಮೂರ್ತಿಯಾಗಿ ಹವ್ಯ ಕವ್ಯ ಭುಕ್ಕಾದ ಶ್ರೀಮನ್ನಾರಾಯಣನೇ ಸರ್ವಭಾಗವನ್ನೂ ಪರಿಗ್ರಹಿಸಿದನು. ಆಗ ಇತರ ದೇವತೆಗಳು ಚತುರ್ಮುಖನನ್ನು ಕುರಿತು,

"ಕಿಮಿದಂ ಕಲ್ಪಿತೋಽಸ್ಮಾಕಂ ತ್ವಯಾ ಲೋಕಪಿತಾಮಹ ।
ಯಜ್ಞಭಾಗೋ ನಚಾಸ್ಮಾಭಿರ್ಲಭ್ಯತೇ ತ್ವತ್ಸಮುಕ್ಷತಃ ॥"

ಇದೇನು ನಿಮ್ಮಿಂದ ನಮಗೆ ಹವಿರ್ಭಾಗವು ಕಲ್ಪಿಸಲ್ಪಟ್ಟರೂ ನಮಗೆ ಅವು ಲಭ್ಯವಾಗುವದಿಲ್ಲವಲ್ಲಾ ? ಎಂದು ಕೇಳಲು ; ಅದಕ್ಕೆ ಚತುರ್ಮುಖನು ಹೇಳುತ್ತಾನೇನೆಂದರೆ :—

ನಯುಷ್ಮದ್ವ್ಯಾ ಮಯಾ ಯೂಯಂ ಕದಾಚಿದಪಿ ದೇವತಾಃ ।
ಅನ್ಯೇನಾಪಿ ಭವಾಂ ಭೋದಿಂ ತರ್ತುಕಾಮೇನ ಕೇನ ಚಿತ್ ।
ದತ್ತಂ ಯುಷ್ಮನ್ಮುಖಾದ್ಭುಙ್ಕ್ತೇ ಹರಿಸ್ತು ಸ್ವರ್ಗಿಭಿರ್ಹವಿಃ ।
ಮುಮುಕ್ಷುಭಿ ಸ್ತದಾ ಭುಙ್ಕ್ತೇ ಸ್ವಯಮೇವ ಜನಾರ್ದನಃ ॥

"ಎಲೈ ದೇವತೆಗಳಿರಾ ನಿಮ್ಮಗಳನ್ನು ಕುರಿತು ನನ್ನಿಂದ ಎಂದಿಗೂ ಯಜ್ಞಮಾಡಲ್ಪಡತಕ್ಕದ್ದಲ್ಲವು, ಹಾಗೆಯೇ ಈ ಸಂಸಾರ ಸಾಗರವನ್ನು ದಾಟಬೇಕೆಂಬಿಚ್ಛೆಯುಳ್ಳ ಇನ್ನ್ಯಾರಿಂದಲಾಗಲಿ ನಿಮಗಾಗಿ ಯಜ್ಞಮಾಡತಕ್ಕದ್ದಲ್ಲವು ; ಎಂದರೆ ಶ್ರೀ ಮಹಾವಿಷ್ಣು ಪ್ರೀತಿಗಾಗಿಯೇ ಯಜ್ಞಾರಂಭವೂ ಹವಿಸ್ಸಿನ ಪ್ರದಾನವೇ ವಿನಾ ನಿಮಗಾಗಿ ಅಲ್ಲವು. ಸ್ವರ್ಗಕಾಮಿಯಾದವನು ಯಜ್ಞಮಾಡಿದರೆ, ಶ್ರೀ ಹರಿಯು ಹವಿರ್ಭಾಗವನ್ನು ನಿಮ್ಮ ಮೂಲಕವಾಗಿ ಪರಿಗ್ರಹಿಸುತ್ತಾನೆ. ಮೋಕ್ಷಾರ್ಥಿಗಳಿಂದ ಕೊಡಲ್ಪಟ್ಟ ಹವಿರ್ಭಾಗಗಳನ್ನಾದರೋ ಶ್ರೀ ಜನಾರ್ದನನು ನಿಮ್ಮಗಳ ಮೂಲಕವಲ್ಲದೆ ತಾನೇ ಸ್ವೀಕರಿಸುತ್ತಾನೆಂದು ಚತುರ್ಮುಖನು ದೇವತೆಗಳಿಗೆ ಸಮಾಧಾನವನ್ನು ಹೇಳಿದನು. ಇಂದ್ರಾಯಸ್ವಾಹಾ ಎಂದು ಹೇಳಿ, ಸ್ವರ್ಗಾದಿಭೋಗಾಪೇಕ್ಷೆಯುಳ್ಳವನು ಹವಿಸ್ಸನ್ನು ಸಮರ್ಪಿಸಿದರೆ ಇಂದ್ರನ ಮೂಲಕವಾಗಿ ಶ್ರೀಮನ್ನಾರಾಯಣನೇ ಹವಿಸ್ಸನ್ನು ಪರಿಗ್ರಹಿಸುವನು ;

ಇಂದ್ರಾಯಸ್ವಾಹಾ ಎಂದು ಮೋಕ್ಷಾರ್ಥಿಯು ಹವಿಸ್ಸಮರ್ಪಿಸಿದರೆ ತಚ್ಛರೀರಕ ಶ್ರೀ ಮನ್ನಾರಾಯಣನೇ ತಾನೇ ಸಾಕ್ಷಾತ್ತಾಗಿ ಪರಿಗ್ರಹಿಸುವನು ಎಂಬುವದು ತಾತ್ಪರ್ಯವು.

ಇದರಿಂದ ಈ ಪಂಚಮಹಾಯಜ್ಞಗಳಲ್ಲೂ, ಇತರ ಯಜ್ಞಗಳಲ್ಲೂ ಇತರ ದೇವತೆ ಪಿತೃ ಮೊದಲಾದವರುಗಳನ್ನುದ್ದೇಶಿಸಿ ಮಾಡಿದ ಆರಾಧನವೂ ತತ್ತ ಚ್ಛರೀರಕನಾದ ಪರಮಾತ್ಮನಿಗೇನೆ ಸರಿ. ಬುಭುಕ್ಷುವಾದ ಪಕ್ಷದಲ್ಲಿ ಆಯಾ ದೇವತೆ ಗಳ ಮೂಲಕ ಪರಿಗ್ರಹಿಸುವನು. ಮುಮುಕ್ಷುವಾದ ಪಕ್ಷದಲ್ಲಿ ಆಯಾ ದೇವತೆ ಗಳ ಹೆಸರನ್ನು ಹೇಳಿದರೂ ಶ್ರೀ ಮಹಾವಿಷ್ಣುವೇ ಸ್ವಯಮೇವ ಪರಿಗ್ರಹಿಸು ವನು. ಆದುದರಿಂದ ಪ್ರಪನ್ನನಿಗೆ ಇತರ ದೇವತೆಗಳನ್ನಾರಾಧಿಸಿದ ದೋಷವು ಪ್ರಾಪ್ತವಾಗುವದಿಲ್ಲವೆಂಬ ಭಾವವು.

ಆದರೆ "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಂಬುವ ಸೂತ್ರದಲ್ಲಿ ಹೇಳಿರುವದೇನೆಂದರೆ :—

"ಅಹರಹ ಸ್ಸಂಧ್ಯಾ ಮುಪಾಸೀತ" ಇತ್ಯಾದಿ ವಿಧಿ ವಾಕ್ಯಗಳಿಗನು ಸಾರವಾಗಿ ಮುಮುಕ್ಷುವೂ ಕೂಡ ಕೃತಕೃತ್ಯನಾದರೂ, ನಿತ್ಯ ನೈಮಿತ್ತಿಕ ಕರ್ಮಗಳ ನ್ನನುಷ್ಠಿಸಬೇಕೆಂದು ಏರ್ಪಟ್ಟಿತು. ಹಾಗೆ ಅನುಷ್ಠಿಸುವದರಿಂದ ಸೂರ್ಯಾಗ್ನಿ ಮೊದಲಾದವರುಗಳ ಭಜನೆಯ ಮೂಲಕ ಅನ್ಯದೇವತಾ ಭಜನರೂಪ ದೋಷವು ಪ್ರಾಪ್ತವಾಗಲಿಲ್ಲವೇ ಎಂಬ ಪೂರ್ವಪಕ್ಷ ಬಂದರೆ ತತ್ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಟ್ಟನೆಂದು ಸಮಾಧಾನವು ಹೇಳಲ್ಪಟ್ಟಿತು. ಇದು ಬಾದರಾಯಣರ ಭಿಪ್ರಾಯವು. ಇದರ ಮೇಲೂ ಇನ್ನೊಂದು ಆಕ್ಷೇಪಣೆಯು ಉಂಟಾಗ ಬಹುದು :—ಹೀಗೆ ಇತರ ದೇವತೆಗಳ ಹೆಸರನ್ನು ಹೇಳಿಬಿಟ್ಟು, ಅವರಿಗೆ ಆತ್ಮ ವಾದ ಪರಮಾತ್ಮನೇ ಭಜಿಸಲ್ಪಟ್ಟನೆಂದು ಹೇಳುವದು ಹೇಗೆ? ಈ ಆಕ್ಷೇ ಪಣೆಯು ಸರಿಯಾದದಲ್ಲವಾದರೂ ಇಂತಹ ಆಕ್ಷೇಪಣೆಗೂ ಕೂಡ ಅವಕಾಶ ವಿಲ್ಲದಹಾಗೆ ಈ ಸೂರ್ಯ, ಅಗ್ನಿ, ವೈಶ್ವಾನರ ಇಂದ್ರ ಮೊದಲಾದ ಶಬ್ದಗಳು ವ್ಯುತ್ಪತ್ತಿಮೂಲಕವಾಗಿ ಸಾಕ್ಷಾತ್ತಾಗಿ ಪರಮಾತ್ಮನನ್ನೇ ಬೋಧಿಸುತ್ತವೆ ಎಂಬುವದು ಆ ಬಾದರಾಯಣರ ಶಿಷ್ಯರಾದ ಜೈಮಿನ್ಯಾಚಾರ್ಯರವರಭಿಪ್ರಾಯವು ಆದುದರಿಂದ ಸಂಧ್ಯಾಭಾಷ್ಯದಲ್ಲಿ ಸೂರ್ಯ, ಅಗ್ನಿ ಮೊದಲಾದ ಶಬ್ದಗಳಿಗೆ ಪರ ಮಾತ್ಮವಾಚಿ ಶಬ್ದಗಳಾಗಿಯೇ ಎಲ್ಲರೂ ವ್ಯಾಖ್ಯಾನ ಮಾಡಿರುತ್ತಾರೆ. ಹೀಗೆ ಈ ಶಬ್ದಗಳು ಪರಮಾತ್ಮನನ್ನೇ ಬೋಧಿಸಿದರೆ, ಮುಮುಕ್ಷುವು ಅನ್ಯದೇವತಾ ಭಜನಮಾಡಿದ ಪ್ರತ್ಯವಾಯ ವುಂಟಾಗುವದಿಲ್ಲವೆಂಬಭಿಪ್ರಾಯವು. ಚೆನ್ನಾಗಿ ಪ್ರೇರಿಸುವನು ಸೂರ್ಯನೆಂದೂ, ಅಗ್ರನಯತ್ವದಿಂದ ಅಗ್ನಿಯೆಂದೂ, ವಿಶ್ವನಯತ್ವ ದಿಂದ ವೈಶ್ವಾನರನೆಂದೂ, ಪ್ರಜೆಗಳಿಗೆ ಪತಿಭಾವದಿಂದ ಪ್ರಜಾಪತಿಯೆಂದೂ

ಅವತ್ತಿನುಡೈಯ ಉಚ್ಚಾರಣಾದಿಗಳಿಲ್ ಶ್ವೇತದ್ವೀಪವಾಸಿಗಳಿನ ಶುದ್ಧಿ

ಹೀಗೆ ಇವೆಲ್ಲಾ ಪರಮಾತ್ಮನನ್ನೇ ಬೋಧಿಸುವ ಶಬ್ದಗಳೆಂದು ಭಾವಿಸಬಹುದು. ಆದುದರಿಂದಲೇ ಅವಯವ ಶಕ್ತಿಸಾಕಲ್ಯಜ್ಞಳಾಲೇ ಈಶ್ವರನಲ್ಲೇ ಈ ಶಬ್ದಗಳು ಅನ್ವಯಿಸತಕ್ಕವುಗಳೆಂದು ಹೇಳಿರುತ್ತಾರೆ. ಇದಕ್ಕೆ ನಿದರ್ಶನರೂಪವಾಗಿ **ನಾರಾಯಣ ಶಬ್ದಂಗಳ್ ಪೋಲೆ** ಎಂದು **ಹೇಳಿರುತ್ತಾರೆ. ನಾರಾಯಣ ಶಬ್ದಕ್ಕೆ** ತತ್ಪುರುಷ ಬಹುವ್ರೀಹಿ ಅರ್ಥಗಳ ಮೂಲಕವಾಗಿ ಪರಮಾತ್ಮನಲ್ಲೇ ಅನ್ವಯವೆಂಬುವದಕ್ಕೆ ೨೯ನೆಯಪುಟವನ್ನು ನೋಡಿ.

ಹೀಗೆ ವರ್ಣಾಶ್ರಮರೀತ್ಯಾ ನಡಿಸುವ ಪಂಚಮಹಾಯಜ್ಞಾದಿಗಳಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ಮಾಡಬೇಕೆಂಬ ವಿಧಿ ವಾಕ್ಯಪ್ರಕಾರ ಮಾಡಿದ ಕರ್ಮಗಳಿಂದ ಅನ್ಯದೇವತಾ ಭಜನರೂಪ ಪ್ರತ್ಯವಾಯವಿಲ್ಲವೆಂಬುವದಕ್ಕೆ ಎರಡು ವಿಧ ನಿರ್ವಾಹಗಳನ್ನು ಹೇಳಿದರು.

೧. ಆ ಕರ್ಮಗಳಲ್ಲಿ ಹೇಳಲ್ಪಟ್ಟ ದೇವತೆಗಳಿಗೆ ಆತ್ಮಾನಾದ ಪರಮಾತ್ಮನೇ ಸರ್ವ ಕರ್ಮಾರಾಧ್ಯನಾದುದರಿಂದ ಆರಾಧಿಸಲ್ಪಟ್ಟನೆಂಬುವದೊಂದು ನಿರ್ವಾಹವು.

೨. ಜೈಮಿನ್ಯಾಚಾರ್ಯರಭಿಪ್ರಾಯ ಪ್ರಕಾರ ವ್ಯುತ್ಪತ್ತಿ ಮೂಲಕ ಆ ಶಬ್ದಗಳೂ ಪರಮಾತ್ಮನನ್ನೇ ಬೋಧಿಸುವದರಿಂದ ವಿರೋಧವಿಲ್ಲವೆಂಬುವದು ಎರಡನೇ ನಿರ್ವಾಹವೆಂಬುವದು ಮುಖ್ಯ ತಾತ್ಪರ್ಯವು.

ಇನ್ನು ಮುಂದಿನ ವಾಕ್ಯಭಾಗದಿಂದ ಇನ್ನೊಂದು ಆಕ್ಷೇಪಕ್ಕೆ ಸಮಾಧಾನ ಹೇಳಿ, ಇಂತಹ ಪ್ರಪನ್ನನಿಷ್ಠನು ಈ ಮೇಲೆ ಹೇಳಿದ ಕರ್ತವ್ಯಾಂಶಗಳಿದ್ದರೂ **ಕೃತಕೃತ್ಯನೂ ಕೃತಾರ್ಥನೂ** ಹೌದು ಎಂದು ಮುಂದೆ ಸ್ಥಾಪಿಸುತ್ತಾರೆ. ಆ ಆಕ್ಷೇಪವೇನೆಂದರೆ :—ಹೀಗೆ ಈ ಎರಡು ವಿಧ ನಿರ್ವಾಹಗಳನ್ನು ಹೇಳಿ ಸಮಾಧಾನ ಹೇಳಿದರೂ, ಅನ್ಯದೇವತಾ ವಿಷಯವಾದ ಶಬ್ದಗಳಿರುವದರಿಂದಲೂ ಅಥವಾ ವ್ಯುತ್ಪತ್ತಿ ಮೂಲಕ ಸಾಕ್ಷಾತ್ತಾಗಿ ಬೋಧಿಸುವಾಗಲೂ ಇತರ ವಸ್ತುಗಳ ಸಂಬಂಧವು ತೋರಿಬರುವದರಿಂದಲೂ ಪರವೈಕಾಂತಿತ್ವಕ್ಕೆ ಹಾನಿಯಿಲ್ಲವೇ ? ಎಂದರೆ, ಈ ಆಕ್ಷೇಪಕ್ಕೆ ಸಮಾಧಾನವಾಗಿ ಉದ್ದೇಶ್ಯನು ಪರಮಾತ್ಮನಾದುದರಿಂದ, ಏಕಾಂತ್ಯ ಹಾನಿಗೆ ಕಾರಣವಿಲ್ಲವೆಂದು ಹೇಳುತ್ತಾರೆ.

ಅವತ್ತಿನುಡೈಯ – ದೇವಪಿತೃಗಳಾದ ಆ ವೈಶ್ವಾನರ ಅಗ್ನೀಂದ್ರಾದಿ ಶಬ್ದಗಳ, **ಉಚ್ಚಾರಣಾದಿಗಳಿಲ್** - ಉಚ್ಚಾರಣವೇ ಮೊದಲಾದವುಗಳಲ್ಲಿ, ಇಲ್ಲಿ ಆದಿ ಪದದಿಂದ ಅವರುಗಳನ್ನು ಕುರಿತ ತರ್ಪಣ, ಹೋಮ ಮೊದಲಾದವು ಹೇಳಲ್ಪಟ್ಟಿತು, ಶ್ವೇತದ್ವೀಪ ವಾಸಿಗಳಾದ ಶುದ್ಧಯೋಗಿಗಳಹಾಗೆ ಎಂದರೆ

ಯಾಜಿಗಳುಕ್ಕುಪ್ಪೋಲೆ ತನ್ನುಡೈಯೈಕಾಂತಿತ್ವಮ್ ಕುಲೈಯಾದೆ ನಿರ್ಕ್ಕುಮ ಪಡಿಯೈ ನಿರೂಪಿತ್ತು ತನ್ ವರ್ಣಾಶ್ರಮ ನಿಮಿತ್ತ ಗುಣಾದ್ಯಧಿಕಾರತ್ತುಕ್ಕು ಅನುರೂಪಮಾಗ ಅಡಿಮೈಕೊಳ್ಳ ಸಙ್ಕಲ್ಪಿತ್ತಿರುಕ್ಕುಮ ಶಾಸಿತಾವಾನ ಶೇಷಿಯಿನುಡೈಯ ಶಾಸ್ತ್ರವೇದ್ಯಾಜ್ಞಾನುಜ್ಞಾಪರಿಪಾಲನರೂಪಕೈಙ್ಕರ್ಯ ಮುಖತ್ತಾಲೆ ಪ್ರತ್ಯಕ್ಷವಿದಿತ ಪರಮಪುರುಷಾಭಿಪ್ರಾಯರಾನ ಮುಕ್ತರೈಪ್ಪೋಲೆ ಕಿಂಚಿತ್ಕರನಾಯ್ಕೊಣ್ಡು ಮುಕ್ತತುಲ್ಯನಾಯ್ ಉಪಾಯಪೂರ್ತ್ತಿಯಾಲೇ ಕೃತಕೃತ್ಯನೆನ್ನುಮ್, ಪುರುಷಾರ್ಥಪೂರ್ತ್ತಿಯಾಲೆ ಕೃತಾರ್ಥ

ಅವರುಗಳಿಗೆ ನಾರಾಯಣ ನಾಮೋಚ್ಚಾರಣ ಮೂಲಕ ಉಂಟಾಗುವ ನಾರ ಶಬ್ದ ಸಂಬಂಧದಿಂದ ಪರಮೈಕಾಂತಿತ್ವಕ್ಕೆ ಅಪೇಕ್ಷಿತಾಭಿಪ್ರಾಯವಿಲ್ಲದಿರುವುದರಿಂದ ಹೇಗೆ ಭಂಗವಿಲ್ಲವೋ, ಹಾಗೆಯೇ, **ಐಕಾಂತಿತ್ವ ಕುಲೈಯಾದೆ** - ಏಕಾಂತಿತ್ವಕ್ಕೆ ಹಾನಿಯಿಲ್ಲದ ಹಾಗೆ, **ನಿರ್ಕ್ಕುಮಪಡಿಯೈ ನಿರೂಪಿತ್ತು** - ಇರುವ ಸ್ಥಿತಿಯನ್ನು ನಿರೂಪಣಮಾಡಿ, **ತನ್ ವರ್ಣ** - ತನ್ನ ಬ್ರಾಹ್ಮಣ್ಯಾದಿ ವರ್ಣವೇನು, **ಆಶ್ರಮ** - ಬ್ರಹ್ಮಚರ್ಯಾದಿ ಆಶ್ರಮವೇನು, **ನಿಮಿತ್ತ** - ಪುತ್ರಜನನಾದಿ, **ಗುಣ**-ವೈಷ್ಣವತ್ವಾದಿಗುಣ, **ಆದಿ** - ಇವೇ ಮೊದಲಾದ **ಅಧಿಕಾರತ್ತುಕ್ಕು** - ಅಧಿಕಾರಕ್ಕೆ, **ಅನುರೂಪಮಾಗ** - ಯುಕ್ತವಾದ, **ಅಡಿಮೈಕೊಳ್ಳ** - ಕೈಙ್ಕರ್ಯವನ್ನು ಸ್ವೀಕರಿಸುವದಾಗಿ, **ಸಙ್ಕಲ್ಪಿತ್ತಿರುಕ್ಕುಮ** - ಸಙ್ಕಲ್ಪಿಸಿರುವ, **ಶಾಸಿತಾವಾನ**-ವಿಧಿ ನಿಷೇಧ ವಾಕ್ಯಗಳ ಮೂಲಕ ಆಜ್ಞಾಪಿಸುವಂಥಾವನಾದ, **ಶೇಷಿಯಿನುಡೈಯ** - ಸರ್ವಭೂತಗಳಿಗೂ ಶೇಷಿಯಾಗಿರುವ ಸರ್ವೇಶ್ವರನ, **ಶಾಸ್ತ್ರವೇದ್ಯಾಜ್ಞಾನುಜ್ಞಾಪರಿಪಾಲನರೂಪ ಕೈಙ್ಕರ್ಯಮುಖತ್ತಾಲೇ** - ಶಾಸ್ತ್ರಗಳಿಂದ ತಿಳಿದುಬರುವ ಆಜ್ಞಾರೂಪವಾಗಿ ಆವಶ್ಯಕವಾಗಿ ನಡಿಸಬೇಕಾದುದು ಮತ್ತು ಅನುಮತಿ ಕೊಡುವದರಿಂದ ಐಚ್ಛಿಕವಾದುದು, ಇವುಗಳನ್ನು ನಡಿಸುವ ಕೈಙ್ಕರ್ಯ ಮೂಲಕವಾಗಿ, **ಪ್ರತ್ಯಕ್ಷವಿದಿತ** - ಸಾಕ್ಷಾತ್ತಾಗಿಯೇ ತಿಳಿದ, **ಪರಮ ಪುರುಷಾಭಿಪ್ರಾಯರಾನ** - ಸರ್ವೇಶ್ವರನ ಅಭಿಪ್ರಾಯವನ್ನುಳ್ಳ, **ಮುಕ್ತರೈಪ್ಪೋಲೆ** - ಮುಕ್ತರ ಹಾಗೆ, **ಕಿಂಚಿತ್ಕಾರನಾಯ್ ಕೊಂಡು** - ಕೈಙ್ಕರ್ಯವನ್ನೆಸಗುವನಾಗಿ, **ಮುಕ್ತತುಲ್ಯನಾಯ್** - ಮುಕ್ತನಿಗೆ ಸಮಾನನಾಗಿ, **ಉಪಾಯಪೂರ್ತ್ತಿಯಾಲೇ** - ಇಲ್ಲಿ ಉಪಾಯವು ಸಾಙ್ಗ ಪ್ರಪದನವಾದುದರಿಂದ, ಆ **ಉಪಾಯ ಪೂರ್ತ್ತಿಯಾಲೇ** - ಸಾಙ್ಗವಾಗಿ ಉಪಾಯವು ನೆರವೇರಿದುದರಿಂದ, **ಕೃತಕೃತ**ನೆಂಬುವನಾಗಿ, **ಪುರುಷಾರ್ಥ ಪೂರ್ತ್ತಿಯಾಲೆ** - ಮೋಕ್ಷದಲ್ಲಿ ಭಗವದನುಭವ

ನೆನ್ರುಂ, ಶಾಸ್ತ್ರಜ್ಙಳ್ಃಲುಮ್, ತನ್ನಿಷ್ಠರಾಲುಮ್ ಕೊಂಡಾಡುಂಪಡಿ ಇರುಕ್ಕುಮ್.

ಕೈಂಕರ್ಯಪ್ರಾಪ್ತಿಯು ನಿಸ್ಸಂಶಯವಾಗಿಯೂ ಸಂಪೂರ್ಣವಾಗಿಯೂ ಲಭಿಸುವದರಿಂದ **ಕೃತಾರ್ಥನೆನ್ರುಂ** - ಹೊಂದಿದ ಪ್ರಯೋಜನವನ್ನುಳ್ಳವನೆಂದೂ, **ಶಾಸ್ತ್ರಜ್ಙಳಾಲುಮ್** - ಶಾಸ್ತ್ರಗಳಲ್ಲೂ, **ತನ್ನಿಷ್ಠರಾಲುಮ್** - ಆ ಶಾಸ್ತ್ರಗಳಲ್ಲಭಿಮಾನದಿಂದ ನಿಷ್ಠೆಯನ್ನು ಹೊಂದಿದ ಪೂರ್ವಾಚಾರ್ಯರುಗಳಿಂದಲೂ, **ಕೊಂಡಾಡುಂಪಡಿ** - ವಿಶೇಷವಾಗಿ ಶ್ಲಾಘಿಸಲ್ಪಡುವನಾಗಿ, **ಯಿರುಕ್ಕುಮ್** - ಇರುವನು.

ಸರ್ವಭೂತಗಳನ್ನು ಹೇಳುವ ಸರ್ವ ಶಬ್ದಗಳು ತತ್ತಚ್ಛರೀರಕನಾದ ಪರಮಾತ್ಮನನ್ನೇ ಬೋಧಿಸುತ್ತವೆಂದು ಶ್ರೀ ವ್ಯಾಸಮಹರ್ಷಿಯು ಅಭಿಪ್ರಾಯಪಟ್ಟರು. ಅನ್ಯ ದೇವತೆಗಳನ್ನು ಬೋಧಿಸುವ ಪದಗಳೂ ಸಹ ವ್ಯುತ್ಪತ್ತಿಮೂಲಕ ಪರಮಾತ್ಮನನ್ನೇ ಬೋಧಿಸುತ್ತವೆಂದು ಅವರ ಶಿಷ್ಯರಾದ ಜೈಮಿನ್ಯಾಚಾರ್ಯರು ಅಭಿಪ್ರಾಯಪಟ್ಟರು. ಹೀಗೆ ವ್ಯುತ್ಪತ್ತಿಯನ್ನು ಕಲ್ಪಿಸುವಾಗ ನಾರಾಯಣ ಮೊದಲಾದ ಶಬ್ದಗಳಲ್ಲಿ ಹೇಗೋ ಹಾಗೆ ಇತರ ವಸ್ತುಗಳೂ ಬೋಧಿತವಾಗುವವರಿಂದ, ಐಕಾಂತ್ಯಹಾನಿಯುಂಟಾಗುವದಿಲ್ಲವೇ ಎಂದರೆ ಉದ್ದೇಶ್ಯನು ಪರಮಾತ್ಮನೇಯಾದುದರಿಂದ, ಐಕಾಂತ್ಯಹಾನಿಯಿಲ್ಲವೆಂದು ಹೇಳುತ್ತಾರೆ. ಶ್ರೀನಿವಾಸನೆಂದರೆ ಲಕ್ಷ್ಮಿಗೆ ಆವಾಸಭೂತನಾದ ಸರ್ವೇಶ್ವರನು. ಲಕ್ಷ್ಮೀಕಟಾಕ್ಷಕ್ಕೆ ಪಾತ್ರನಾಗಿ ಒಬ್ಬ ಶ್ರೀನಿವಾಸನಿದ್ದರೂ, ದೇವಾಲಯದಲ್ಲಿ ಶ್ರೀನಿವಾಸನೆಂದರೆ ಈ ಅಲ್ಪ ಮನುಷ್ಯನು ಉದ್ದೇಶ್ಯನಲ್ಲದೆ ದೇವಾಲಯದಲ್ಲಿ ಬಿಜಮಾಡಿಸಿರುವ ಶ್ರೀನಿವಾಸನೇ ಹೇಗೆ ಉದ್ದೇಶ್ಯನೋ, ಹಾಗೆಯೇ ಇಲ್ಲೂ ಕೂಡ ಸರ್ವೇಶ್ವರನೇ ಉದ್ದೇಶ್ಯವಾಗಿ ಐಕಾಂತ್ಯಹಾನಿಗೆ ಕಾರಣವಿಲ್ಲವೆಂಬ ಭಾವವು.

ಅದುದರಿಂದಲೇ ಚೇತನನ ವರ್ಣಾಶ್ರಮ ನಿಮಿತ್ತ ಗುಣಾದ್ಯಧಿಕಾರತ್ತುಕ್ಕು ಅನುರೂಪವಾದ ಕರ್ಮಾನುಷ್ಠಾನವನ್ನೇ ತನಗೆ ಪರಮ ಕೈಙ್ಕರ್ಯವಾಗಿ ಭಾವಿಸುವೆನೆಂದು ಸರ್ವೇಶ್ವರನು ಸಙ್ಕಲ್ಪಿಸಿರುತ್ತಾನೆ. ಆ ಕಾರಣದಿಂದ ವರ್ಣಾಶ್ರಮ ನಿತ್ಯನೈಮಿತ್ತಿಕಗಳಾದ ಧರ್ಮಗಳನ್ನನುಷ್ಠಿಸಲೇಬೇಕೆಂಬುವದು ಏರ್ಪಟ್ಟಿತು. ಎಲ್ಲಿ ಹಾಗೆ ಸಙ್ಕಲ್ಪಿಸಿರುತ್ತಾನೆಂಬುವದು ತೋರಿಬರುತ್ತದೆಂದರೆ "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" (ಗೀ. ೪.೧೩.) ಎಂಬ ಪ್ರಮಾಣವನ್ನು ಸಙ್ಕಲ್ಪಕ್ಕೂ, " ನಿಯತಂ ಕುರು ಕರ್ಮತ್ವಂ " (ಗೀ ೩-೮)

"ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।"

"ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ॥"

(ಗೀ. ೧೮. ೪೫. ೬)

ಇತ್ಯಾದಿ ಪ್ರಮಾಣಗಳನ್ನು ವರ್ಣಾಶ್ರಮ ಧರ್ಮಗಳು ಅವಶ್ಯಾನುಷ್ಠೇಯಗಳೆಂಬ ಪದಕ್ಕೆ, ಉದಾಹರಣೆಯಾಗಿ ಭಾವಿಸಬಹುದು. ಹಾಗೆಯೇ ಜ್ಞಾನಸಿಧಿಯಾಗಿಯೂ ಮುನಿವರರಾಗಿಯೂ ಇರುವ ಪರಾಶರರು :—

(೧) "ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।
ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ ॥"

ವರ್ಣಾಶ್ರಮಾಚಾರಗಳಿಂದ ವಿಷ್ಣುವು ಆರಾಧಿಸಲ್ಪಡುವನೆಂದೂ, ಇದಕ್ಕಿಂತ ಸಂತೋಷವನ್ನುಂಟುಮಾಡುವದು ಬೇರೆಯಿಲ್ಲವೆಂದು ಹೇಳಲ್ಪಟ್ಟಿತು. ಮತ್ತು,

(೨) "ವರ್ಣಾಶ್ರಮೇಷು ಯೇ ಧರ್ಮಾಃ ಶಾಸ್ತ್ರೋಕ್ತಾ ನೃಪಸತ್ತಮ ।
ತೇಷು ತಿಷ್ಠನ್ನರೋ ವಿಷ್ಣುಮಾರಾಧಯತಿ ನಾನ್ಯಥಾ ॥"

"ವರ್ಣಾಶ್ರಮಗಳಿಗೆ ಶಾಸ್ತ್ರೋಕ್ತವಾಗಿ ಯಾವ ಧರ್ಮಗಳೆಂದು ಹೇಳಲ್ಪಟ್ಟಿವೆಯೋ ಅವುಗಳನ್ನೇ ಅನುಷ್ಠಿಸುವ ನರನು ವಿಷ್ಣುವನ್ನು ಆರಾಧಿಸುವನು. ಅನ್ಯಥಾ ಅಲ್ಲವು" ಎಂದೂ ಹೇಳಲ್ಪಟ್ಟಿರುತ್ತದೆ. ಇಂತಹ ವರ್ಣಾಶ್ರಮ ಧರ್ಮಗಳು ಯಾವುವು ಎಂಬುವದು ಎಲ್ಲಾ ಶ್ರುತಿ ಸ್ಮೃತೀತಿಹಾಸ ಪುರಾಣಾದಿಗಳಲ್ಲೂ ಉಪಪಾದಿತವಾಗಿರುತ್ತವೆ. ಬೇಕಾದರೆ ಭಾಗವತ ಸಪ್ತಮಸ್ಕಂಧದಲ್ಲಿ ಸದಾಚಾರ ನಿರ್ಣಯರೂಪವಾದ ಏಕಾದಶಾಧ್ಯಾಯವನ್ನು ಪರಾಂಬರಿಸಬಹುದು.

ವರ್ಣಾಶ್ರಮನಿಮಿತ್ತ ಎಂಬಲ್ಲಿ ನಿಮಿತ್ತವೆಂದರೆ ಪುತ್ರಜನನವೇ ಮೊದಲಾದವು. ಅದಕ್ಕಾಗಿ ಮಾಡತಕ್ಕ ಕೈಂಕರ್ಯರೂಪ ಧರ್ಮವು ವೈಶ್ವಾನರೇಷ್ಟಿಯು, ಕೃಷ್ಣಕೇಶಾಗ್ನಿಯು, ಇಲ್ಲಿ ಗುಣವೆಂದರೆ ವೈಷ್ಣವತ್ವವೇ ಮೊದಲಾದವು, ಅದರಿಂದುಂಟಾಗುವ ಕೈಂಕರ್ಯರೂಪಧರ್ಮವಾವುವೆಂದರೆ :—ದೇವತಾಂತರವರ್ಜನವೇ ಮೊದಲಾದವು. ಇಂತಹ ಶಾಸ್ತ್ರಚೋದಿತವಾದ, ವರ್ಣಾಶ್ರಮಾದಿಗಳಿಗೆ ಉಚಿತವಾದ ಧರ್ಮಾನುಷ್ಠಾನವನ್ನೇ ಪರಮಪುರುಷನು ತನಗೆ ಕೈಂಕರ್ಯವಾಗಿ ಭಾವಿಸಿ ಆರಾಧಿಸಲ್ಪಡುವನಾದುದರಿಂದ ಸಂತುಷ್ಟನಾಗುವನೆಂಬುವದು ಮುಖ್ಯಾಭಿಪ್ರಾಯವು. ಇಂತಹ ಕೈಂಕರ್ಯಗಳು ಎರಡು ವಿಧವೆಂದು ತಿಳಿಸುತ್ತಾರೆ. (೧) ಆಜ್ಞಾಪರಿಪಾಲನರೂಪ ಕೈಂಕರ್ಯಗಳು :—ಸಂಧ್ಯಾವಂದನಾದಿ. (೨) ಅನುಜ್ಞಾಪರಿಪಾಲನರೂಪ ಕೈಂಕರ್ಯಗಳು :—ಯಜ್ಞಾದಿಗಳು, ಭಾಗವತ ಕೈಂಕರ್ಯಗಳು ಸ್ವಾಮಿಗೆ ಮಾಲೆ ಕಟ್ಟುವದು, ದೀಪಗಳ ಹಚ್ಚುವದು, ಉತ್ಸವಗಳನ್ನು ಸಂಭ್ರಮವಾಗಿ ನಡಿಸುವದು ಇತ್ಯಾದಿ. ಈ ಎರಡು ವಿಧ ಕೈಂಕರ್ಯಗಳನ್ನನುಷ್ಠಿಸುವ ಪ್ರಪನ್ನರು ಪರಮ ಪುರುಷನ ಸಂಕಲ್ಪವನ್ನು ತಿಳಿದ ಮುಕ್ತರಹಾಗೆ ಇರುವವರು

---

(೧)(ವಿ. ಪು. ೩ ಅ. ೯) (೨)(ವಿ. ಪು. ೩. ಅ. ೧೯)

ಆದುದರಿಂದ ಇವರು "ಅನ್ಯತ ಇಹ ಭವತಿ" ಎಂದು ಹೇಳಿರುವಹಾಗೆ ಈ ಕರ್ಮಭೂಮಿಯಲ್ಲೇ ಮುಕ್ತರಿಗೆ ಸಮಾನರಾಗಿ ಇರುವವರು. ಇದನ್ನು ತಿಳಿಸುವದಕ್ಕಾಗಿಯೇ, "ಪರಮ ಪುರುಷಾಭಿಪ್ರಾಯಲಾನ ಮುಕ್ತೈರ್ಶ್ಯೋಲೆ" ಎಂಬ ಪ್ರಯೋಗವು.

ಆದುದರಿಂದ ಇಂತಹ ಪ್ರಪನ್ನರು **ಕೃತಕೃತ್ಯರು** ಎಂದರೆ ಲಕ್ಷ್ಮೀಪತಿಯನ್ನು ಹೊಂದಲು ಯಾವ ಉಪಾಯವನ್ನನುಷ್ಠಿಸತಕ್ಕದ್ದೋ ಅದನ್ನು ಅನುಷ್ಠಿಸಿದವರು ; ಮತ್ತು **ಕೃತಾರ್ಥರು** ಎಂದರೆ ಯಾವ ಪರಮಪುರುಷನ ಕೈಂಕರ್ಯರೂಪ ಪ್ರಯೋಜನವನ್ನು ಹೊಂದಬೇಕೋ ಅಂತಹ ಪ್ರಯೋಜನಕ್ಕೆ ಸಮಾನವಾದ ಕೈಂಕರ್ಯವನ್ನು ಇಲ್ಲಿಯೂ ಹೊಂದಿ ದೇಹಾವಸಾನಾನಂತರ ಮುಂದೆಯೂ ಹೊಂದುವವರು ಎಂಬ ಭಾವವು.

ಹೀಗೆ ಶರಣಾಗತಿಯನ್ನನುಷ್ಠಿಸಿದ ಪ್ರಪನ್ನನು ಶಾಸ್ತ್ರಗಳಲ್ಲೂ, ಅಂತಹ ಶಾಸ್ತ್ರಜ್ಞರಾದ ಪೂರ್ವಾಚಾರ್ಯರುಗಳಿಂದಲೂ, **ಕೃತಕೃತ್ಯನೆಂದೂ ಕೃತಾರ್ಥನೆಂದೂ** ಕೊಂಡಾಡಲ್ಪಟ್ಟಿರುತ್ತಾನೆಂಬ ಭಾವವು. ಶಾಸ್ತ್ರಗಳಲ್ಲಿ ಎಲ್ಲಿ ಕೊಂಡಾಡಲ್ಪಟ್ಟಿವೆ ಎಂದರೆ :—

"ಸಮಿತ್ಸಾಧನಕಾದೀನಾಂ ಯಜ್ಞಾನಾಂ ನ್ಯಾಸಮಾತ್ಮನಃ ।
ನಮಸಾ ಯೋ ಕರೋದ್ದೇವೇ ಸ ಸ್ವಧ್ವರ ಇತೀರಿತಃ ।
ಅನುಷ್ಠಿತಕ್ರತುಶತೋ ಭವತ್ಯೇವ ನ ಸಂಶಯಃ" ॥

ಎಂದು ಋಗ್ವೇದಾಭಿಪ್ರಾಯವನ್ನು ಒಳಗೊಂಡಿರುವ ಈ ಅಹಿರ್ಬುಧ್ನ್ಯ ಸಂಹಿತೆಯ ವಾಕ್ಯದಲ್ಲಿ ಕೊಂಡಾಡಲ್ಪಟ್ಟಿರುತ್ತದೆ. ಇದರರ್ಥವೇನೆಂದರೆ :— **ಸಮಿತ್ಸಾಧನಕಾದೀನಾಂ** - ಸಮಿತ್ತನ್ನೇ ಸಾಧನವಾಗಿ ಉಳ್ಳ, **ಯಜ್ಞಾನಾಂ** - ಯಜ್ಞಗಳ ಮಧ್ಯದಲ್ಲಿ, **ಆತ್ಮನಃ ನ್ಯಾಸಂ** - ಆತ್ಮನಿಕ್ಷೇಪರೂಪ ಭರನ್ಯಾಸವನ್ನು, **ದೇವೇ** – ಕ್ರೀಡಾಪರನಾದ ಸರ್ವೇಶ್ವರನಲ್ಲಿ, **ಯಃ** - ಯಾವ ಪ್ರಪನ್ನನು, **ಕರೋತ್** - ಮಾಡುತ್ತಾನೆಯೋ, **ಸಃ** - ಅವನು **ಸ್ವಧ್ವರಃ** - ಒಳ್ಳೇ ಎಂದರೆ ಸರ್ವೋತ್ಕೃಷ್ಟ ಯಜ್ಞವನ್ನನುಷ್ಠಿಸಿದವನೆಂದು, **ಇತೀರಿತಃ** - ಎಂದು ಋಗ್ವೇದದಲ್ಲಿ ಹೇಳಲ್ಪಟ್ಟಿರುತ್ತಾನೆ. **ಅನುಷ್ಠಿತಕ್ರತು.... ನ ಸಂಶಯಃ**– ಅವನು ನೂರು ಯಜ್ಞಗಳನ್ನು ಮಾಡಿದವನೇ ಎಂದು ಹೇಳುವದರಲ್ಲೇನೂ ಸಂದೇಹವಿಲ್ಲವು. ಹೀಗೆ ಶಾಸ್ತ್ರಗಳಲ್ಲಿ ಪ್ರಪನ್ನನು ಕೊಂಡಾಡಲ್ಪಟ್ಟಿರುವನೆಂಬಭಿಪ್ರಾಯವು.

ಆದರೆ ಈ ಕೃತಕೃತ್ಯಾನುಸಂಧಾನವು ಪ್ರಪನ್ನನಿಗೆ ಆವಶ್ಯಕವೇ ? ದ್ವಯಮನ್ತ್ರೋಪದೇಶಮೂಲಕ ಅನುಷ್ಠಿಸುವ ಶರಣಾಗತಿಯ ಮಹಿಮೆಯನ್ನು ಪ್ರಥಮತಃ ಶ್ರೀರಂಗ ಉಪದೇಶಿಸಿ ಪ್ರಚುರಪಡಿಸಿದವರು ನಮ್ಮ ಯತಿಸಾರ್ವಭೌಮರು. ಅವರು ಬರೆದ ಶರಣಾಗತಿ ಗದ್ಯದಲ್ಲಿ ಈ ಕೃತಕೃತ್ಯಾನುಸಂಧಾನವನ್ನು ಮಾಡಿ

16. 3. 2002

ಇವನುಡೈಯ ಕೃತಕೃತ್ಯತ್ವಾನುಸಂಧಾನತ್ತೈ "ಅತಸ್ತ್ವಂತವ ತತ್ತ್ವತೋ ಮದ್ಜ್ಞಾನ ದರ್ಶನ ಪ್ರಾಪ್ತಿಷು ನಿಸ್ಸಂಶಯ ಸ್ಸುಖಮಾಸ್ಸ್ವ" ಎನ್ರು ಶರಣಾಗತಿ ಗದ್ಯತ್ತಿಲೆ ನಿಗಮಿತ್ತರುಳಿನಾರ್. ಇದುಕ್ಕುಕ್ಕರುತ್ತು :—

ಪ್ವಾರೆಯೇ ಎಂದರೆ ಶ್ರೀ ನಿಗಮಾಂತ ದೇಶಿಕರವರು "**ನಿಸ್ಸಂಶಯಸ್ಸುಖಮಾಸ್ಸ್ವ**" ಎಂಬ ವಾಕ್ಯದಲ್ಲಿ ಮಾಡಿದ್ದಾರೆಂದು ಉಪಪಾದಿಸುತ್ತಾರೆ. ಆ ವಾಕ್ಯದಲ್ಲಿ ಪ್ರಾಪ್ತಿಯಲ್ಲಿ ನಿಸ್ಸಂಶಯ ಮಾತ್ರ ತೋರುತ್ತದೆ. ಕೃತಕೃತ್ಯತೆ ಎಲ್ಲಿ ತೋರುತ್ತದೆಂಬ ಆಕ್ಷೇಪಣೆ ಬಂದೀತೆಂದು ಭಾವಿಸಿ, ಕೃತಕೃತ್ಯತ್ವಾನುಸಂಧಾನವು ಸ್ಫುಟವಾಗಿ ತೋರುತ್ತದೆಂದುಪದೇಶಿಸುತ್ತಾರೆ.

ಇವನುಡೈಯ - ಹೀಗೆ ಸದಾಚಾರ್ಯ ಕಟಾಕ್ಷಮೂಲಕ ಸಾಂಗಪ್ರಪದನಾನುಷ್ಠಾನಮಾಡಿದ ಸ್ವತಂತ್ರಪ್ರಪನ್ನನ, ಕೃತಕೃತ್ಯತ್ವಾನುಸಂಧಾನವನ್ನು **ಅತಸ್ತ್ವಂ** ಎಂಬ ವಾಕ್ಯಮೂಲಕ, ಶರಣಾಗತಿಗದ್ಯದಲ್ಲಿ, **ನಿಗಮಿತ್ತರುಳಿನಾರ್** - ಕೃಪೆ ಮಾಡಿ ಹೇಳಿ ಮುಗಿಸಿರುತ್ತಾರೆ. ಇಲ್ಲಿ ಯಾರು ಹೇಳಿರುತ್ತಾರೆಂದು ತಿಳಿಸಲಿಲ್ಲವು. ಶ್ರೀ ಭಾಷ್ಯಕಾರರೆಂದು ಇಟ್ಟುಕೊಳ್ಳತಕ್ಕದ್ದು. ಶರಣಾಗತಿಗದ್ಯವನ್ನು ದಯಪಾಲಿಸಿದವರು ಶ್ರೀ ಭಾಷ್ಯಕಾರರೆಂಬುವದು ಸರ್ವರಿಗೂ ತಿಳಿದಂಶವಾದುದರಿಂದ ಹೇಳಲಿಲ್ಲವು. ಅದೂ ಅಲ್ಲದೆ ತುಂಬಾ ಮಹನೀಯರುಗಳ ಹೆಸರನ್ನು ಹೇಳುವದು ಅಗೌರವಾದುದರಿಂದಲೂ ತಿಳಿಸಲಿಲ್ಲವಾಗಿ ಭಾವಿಸಬಹುದು. ಅಥವಾ ಎಲ್ಲರಿಗೂ ತಿಳಿದಿರುವ ಸಂದರ್ಭವನ್ನು ತಿಳಿಸುವದರಲ್ಲಿ ಸಂಕೋಚ ಪಟ್ಟು ತಿಳಿಸಲಿಲ್ಲವೆಂದಾಗಲಿ ಭಾವಿಸಬಹುದು. ಇದು ಭಗವದ್ವಾಕ್ಯವು. **ಅತಃ** - ಆದುದರಿಂದ, **ತ್ವಂ** – ಶರಣಾಗತರಕ್ಷಣೆಯಲ್ಲಿ ಸತ್ಯವಾದಿಯಾಗಿಯೂ, ಸತ್ಯವ್ರತನಾಗಿಯೂ ಇರುವದರಿಂದ ನನ್ನ ವಾಕ್ಕಿನಲ್ಲಿ ವಿಶ್ವಾಸವನ್ನಿಟ್ಟಿರುವ ನೀನು, **ತವ** – ನಿನಗೆ, **ತತ್ತ್ವತಃ** – ಸಂಶಯ ವಿಪರ್ಯಗಳು ಯಾವುವೂ ಇಲ್ಲದೆ ಯಥಾರ್ಥವಾಗಿ **ಮದ್ಜ್ಞಾನದರ್ಶನ ಪ್ರಾಪ್ತಿಷು** - ನನ್ನ ವಿಷಯವಾದ ಜ್ಞಾನವೇನು, ನನ್ನ ಸಾಕ್ಷಾತ್ಕಾರವೇನು, ನನ್ನನ್ನು ಹೊಂದುವದೇನು ಇವುಗಳಲ್ಲಿ **ನಿಸ್ಸಂಶಯಃ** - ಸ್ವಲ್ಪವೂ ಸಂಶಯವಿಲ್ಲದವನಾಗಿ, **ಸುಖಂ** - ಸುಖವಾಗಿ, **ಆಸ್ಸ್ವ** - ಇರು" ಎಂಬುವದು ಈ ಮೇಲಿನ ವಾಕ್ಯಾರ್ಥವು. ಇಲ್ಲಿ **ಮದ್ಜ್ಞಾನ ದರ್ಶನಪ್ರಾಪ್ತಿರೂಪ**ವಾದ ಫಲದಲ್ಲಿ ಯಾವಾಗ ನಿಸ್ಸಂಶಯನಾಗಿರೆಂದು ಹೇಳಲ್ಪಟ್ಟಿತೋ, ಆಗ ನಿರ್ಭಯತ್ವವೂ ನಿರ್ಭರತ್ವವೂ ಹೇಳಲ್ಪಟ್ಟಿತು ; **ಸುಖಮಾಸ್ಸ್ವ** - ಎಂದು ಹೇಳಿರುವದರಿಂದ ಸಂತುಷ್ಟನಾಗಿರೆಂದೂ ಹೇಳಲ್ಪಟ್ಟಿತು. ಇದರಿಂದ ಕೃತಕೃತ್ಯಾನುಸಂಧಾನ ಮಾಡೆಂದು ಹೇಳಿದುದು ವ್ಯಕ್ತವು. ಮದ್ಜ್ಞಾನ ದರ್ಶನಪ್ರಾಪ್ತಿಯೇ

ಅನಾದಿಕಾಲಮ್ ಆಜ್ಞಾತಿಲಂಘನ ಮಡಿಯಾಗ ಉಂಡಾನ ಭಗವನ್ನಿಗ್ರಹತ್ತಾಲೆ ಸಂಸರಿತ್ತುಪ್ಪೋನ ನಮುಕ್ಕು ಅವಸರ ಪ್ರತೀಕ್ಷೈಯಾನ ಭಗವತ್ಕೃಪೈಯಡಿಯಾಗ ವುಂಡಾನ ಸದಾಚಾರ್ಯ ಕಟಾಕ್ಷ ವಿಷಯೀಕಾರತ್ತಾಲೇ ವನ್ದ ದ್ವಯೋಚ್ಚಾರಣಾ ನೂಚ್ಚಾರಣತ್ತಾಲೆ ಪ್ರಪತ್ತ್ಯನುಷ್ಠಾನಂ ಪಿರನ್ದ ಪಿನ್ಬು ಶರಣ್ಯಪ್ರಸಾದನಜ್ಗಳಿಲ್ ಇದುಕ್ಕು ಮೇಲೊನ್ರಿಲ್ಲಾಮೈಯಾಲೆ ನಿಗ್ರಹ ಹೇತುಕ್ಕಳೈಯೆಲ್ಲಾಂ ಶಮಿತ್ತುತ್ತೀರ್ನ್ದ ವಡಿ

ಪ್ರಯೋಜನವಾಗಿ ಅದು ನಿಸ್ಸಂಶಯವಾದುದರಿಂದ ಕೃತಾರ್ಥಾನುಸಂಧಾನವೂ ಉಪದೇಶಿಸಲ್ಪಟ್ಟಿತು ಎಂಬ ಭಾವವು. ಈ ಮೇಲಿನ ಶ್ರೀ ಭಾಷ್ಯಕಾರರ ವಾಕ್ಯದ ಮುಖ್ಯಾಭಿಪ್ರಾಯವೇನೆಂಬುವದನ್ನು, **ಇದಕ್ಕು ಕರುತ್ತು** ಎಂದು ಪ್ರಾರಂಭಿಸಿ ತಿಳಿಸುತ್ತಾರೆ. **ಅನಾದಿಕಾಲಂ** - ಅನಾದಿಕಾಲದಿಂದಲೂ, **ಆಜ್ಞಾತಿಲಂಘನ ಮಡಿಯಾಗ** - ಭಗವಂತನ ಆಜ್ಞೆಗಳಾದ ವಿಧಿ ನಿಷೇಧ ವಾಕ್ಯಗಳಿಗನುಗುಣವಾಗಿ ನಡೆಯದೆ, ಕೃತ್ಯಾಕರಣ ಅಕೃತ್ಯಕರಣಗಳ ಮೂಲಕವಾಗಿ, **ಉಂಡಾನ** - ಪ್ರಾಪ್ತವಾದ, **ಭಗವನ್ನಿಗ್ರಹತ್ತಾಲೆ** - ಭಗವನ್ನಿಗ್ರಹಕ್ಕೆ ಒಳಪಟ್ಟು, **ಸಂಸರಿತ್ತುಪೋನ** - ಪುನಃ ಪುನಃ ಜನ್ಮವೆತ್ತುವ ಮೂಲಕ ಸಂಸಾರವನ್ನು ಹೊಂದಿದ, **ನಮುಕ್ಕು** - ನಮಗೆ, **ಅವಸರಪ್ರತೀಕ್ಷೈಯಾನ** - ರಕ್ಷಣೆಯು ಕಾಲವನ್ನು ನಿರೀಕ್ಷಿಸುತ್ತಲಿರುವ, **ಭಗವತ್ಕೃಪೈಯಡಿಯಾಗ** - ಭಗವತ್ಕೃಪೆಯ ಮೂಲಕವಾಗಿ, **ಉಂಡಾನ** - ಉಂಟಾದ, **ಸದಾಚಾರ್ಯ ಕಟಾಕ್ಷ ವಿಷಯೀಕಾರತ್ತಾಲೆ** - ಒಳ್ಳೇ ಆಚಾರ್ಯನ ಕಟಾಕ್ಷಕ್ಕೆ ತಾನು ಪಾತ್ರನಾಗುವದರಿಂದ, **ವನ್ದ** - ಪ್ರಾಪ್ತವಾದ, **ದ್ವಯೋಚ್ಚಾರಣಾನೂಚ್ಚಾರಣತ್ತಾಲೇ** - ದ್ವಯಮಂತ್ರವನ್ನು ಆ ಆಚಾರ್ಯನು ಉಚ್ಚರಿಸಿದುದನ್ನು ತಾನು ಉಚ್ಚರಿಸುವದರ ಮೂಲಕವಾಗಿ, **ಪ್ರಪತ್ತ್ಯನುಷ್ಠಾನಂ ಪಿರನ್ದಪಿನ್ಬು** - ಭರನ್ಯಾಸಾನುಷ್ಠಾನವು ಪ್ರಾಪ್ತವಾದ ಬಳಿಕ **ಶರಣ್ಯಪ್ರಸಾದಜ್ಗಳಿಲ್** - ಸರ್ವಲೋಕ ಶರಣ್ಯನಾದ ಸರ್ವೇಶ್ವರನ ಅನುಗ್ರಹ ಉಂಟಾಗುವ ಉಪಾಯಗಳಲ್ಲಿ, **ಇದಕ್ಕುಮೇಲೊನ್ರಿಲ್ಲಾಮೈಯಾಲೇ** - ಈ ಭರನ್ಯಾಸಾನುಷ್ಠಾನಕ್ಕಿಂತ ಹೆಚ್ಚಾದುದು ಬೇರೆ ಇನ್ಯಾವ ಉಪಾಯವೂ ಇಲ್ಲದುದರಿಂದ, **ನಿಗ್ರಹ ಹೇತುಕ್ಕಳೈಯೆಲ್ಲಾಂ** - ಭಗವನ್ನಿಗ್ರಹಕ್ಕೆ ಕಾರಣಭೂತಗಳಾದ ಸಹಸ್ರಾಪರಾಧಗಳನ್ನೆಲ್ಲಾ, **ಶಮಿತ್ತು**-ಹೋಗಲಾಡಿಸಿ, **ತೀರ್ನ್ದ ವಡಿಯವರ್ ತಮ್ಮೈ** - ವಿಶ್ವಾಸಯುಕ್ತರಾಗಿರುವ ಆಶ್ರಿತರುಗಳನ್ನು, **ತಿರುತ್ತಿ**- ವಿರೋಧಿ ನಿರಸನಮೂಲಕ ಪರಿಶುದ್ಧರನ್ನಾಗಿ ಮಾಡಿ, **ಪಣಿಕೊಳ್ಳವಲ್ಲ** - ಅವರು ಮಾಡಿದ ಕೈಂಕರ್ಯವನ್ನು ಸ್ವೀಕರಿಸುವ ಶಕ್ತಿಯುಳ್ಳ, **ಸರ್ವಶೇಷಿ**

ಯುವರ್ ತನ್ಮೃತ್ತಿರುತ್ತಿಪ್ಪಣಿಕೊಳ್ಳವಲ್ಲ ಸರ್ವಶೇಷಿಯಾನ ಶ್ರಿಯಃಪತಿ ತಱ ಪೇರಾಗತ್ತಾನೇ ರಕ್ಷಿಕ್ಕು ಮೆನ್ರುತೇರಿ ನಿರ್ಭರನಾಯಿರುವನೆನ್ಗೈ.

ಯೂದ ಶ್ರಿಯಃಪತಿಯು ತಱ ಪೇರಾಗ - ತನಗೆ ಪ್ರಯೋಜನ ಹೇಗಾಗಬೇಕೋ ಹಾಗೆ ಎಂದರೆ ತನ್ನ ಪ್ರಯೋಜನಕ್ಕಾಗಿಯೇ, **ತಾನೇ ರಕ್ಷಿಕ್ಕುಮೆನ್ರು** - ತಾನೇ ರಕ್ಷಿಸುವನೆಂದು, **ತೇರಿ** - ಮಹಾ ವಿಶ್ವಾಸವನ್ನು ಹೊಂದಿದವನಾಗಿ, **ನಿರ್ಭರನಾಯಿರುವನೆನ್ಗೈ** - ನಿರ್ಭರನಾಗಿರತಕ್ಕದ್ದೆಂಬುವದು. ಇದೇ ಆ ವಾಕ್ಯದ ಮುಖ್ಯ ತಾತ್ಪರ್ಯವೆಂಬ ಭಾವವು.

ಈ ಜೀವಾತ್ಮನು ಸೃಷ್ಟಿಮೊದಲುಗೊಂಡೂ ಅದಕ್ಕೆ ಮುಂದಿನ ಸೃಷ್ಟಿಯಲ್ಲೂ ಸಹ ಹೀಗೆ ಅನಾದಿಕಾಲದಿಂದಲೂ ಶಾಸ್ತ್ರದಲ್ಲಿರುವ ವಿಧಿ ನಿಷೇಧ ವಾಕ್ಯಗಳನ್ನು ಲಂಘಿಸಿ ಅಕೃತ್ಯಕರಣ ಕೃತ್ಯಾಕರಣ ದೋಷಗಳಿಗೆ ಒಳಪಟ್ಟು ಭಗವನ್ನಿಗ್ರಹಕ್ಕೆ ಪಾತ್ರನಾಗಿ ಜನ್ಮ ಮರಣಾದಿ ಕ್ಲೇಶಗಳಿಗೆ ಸಿಲುಕಿ ಬಹುಜನ್ಮಗಳನ್ನೆತ್ತುತ್ತಾನೆ. ಆದುದರಿಂದ **ಅನಾದಿಕಾಲಂ......ಸಂಸರಿತ್ತು ಪೋನ್ನ** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಜೀವನು ಕ್ಲೇಶಗಳನ್ನನುಭವಿಸುತ್ತಿದ್ದಾನಲ್ಲಾ ಇದನ್ನು ತಪ್ಪಿಸಿ, ಯಾವಾಗ ಇವನಿಗೆ ಅನುಗ್ರಹಿಸಿ ನಿರತಿಶಯ ಸುಖವನ್ನುಂಟುಮಾಡುವನೆಂದು ಸರ್ವೇಶ್ವರನು "ಅವಸರಪ್ರತೀಕ್ಷೆ"ಯನ್ನು ಎದುರು ನೋಡುತ್ತಿರುತ್ತಾನೆ. ಆಗ ಈತನು ಯತ್ಕಿಂಚಿತ್ಸುಕೃತವನ್ನು ಮಾಡಿದನಾದರೆ (೧) "**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ**" ಎಂದು ಹೇಳಿರುವ ಹಾಗೆ, ಸರ್ವೇಶ್ವರನು ಸುಪ್ರೀತನಾಗಿ, ಆತನಿಗೆ ಸಾತ್ವಿಕ ಸಂಭಾಷಣೆ ಸದ್ಗುರು ಪ್ರಾಪ್ತಿಯನ್ನುಂಟುಮಾಡಿ, ಆತನಿಂದ ತನ್ನನ್ನು ಹೊಂದುವ ಉಪಾಯವನ್ನು ತಿಳಿಯುವ ಹಾಗೆ ಮಾಡಿ, ಈ ಲಘೂಪಾಯವಾದ, ಗುರುವು ಉಚ್ಚರಿಸಿದ ದ್ವಯಮಂತ್ರವನ್ನು ಉಚ್ಚರಿಸುವ ರೂಪವಾದ ಭರನ್ಯಾಸವನ್ನು ಅನುಷ್ಠಿಸುವ ಹಾಗೆ ಮಾಡುತ್ತಾನೆ. ಈ ರೂಪವಾದ ಭಗವತ್ಕೃಪೆಯನ್ನು ಸಂಪಾದಿಸುವ ಭರನ್ಯಾಸಕ್ಕಿಂತಲೂ ಉತ್ಕೃಷ್ಟವಾದ ಮಾರ್ಗವು ಬೇರೆಯಿಲ್ಲವಾದುದರಿಂದ ಆ ಕೃಪಾಸಾಗರನು ಈತನ ಸರ್ವಾಪರಾಧಗಳನ್ನೂ ಕ್ಷಮಿಸಿ, ಆತನನ್ನು ಪರಿಶುದ್ಧನನ್ನಾಗಿ ಮಾಡಿ, ತನ್ನ ಪ್ರಯೋಜನಕ್ಕಾಗಿಯೇ, ತನಗೆ ಕೈಂಕರ್ಯವನ್ನೆಸಗುವ ಸಾಮ್ರಾಜ್ಯ ಪದವಿಯನ್ನು ಕೊಟ್ಟು ಕಾಪಾಡುವನು. ಈ ವಿಷಯದಲ್ಲಿ ಯಾವದೊಂದು ಶಂಕೆಯು ಇಲ್ಲವಾದುದರಿಂದ ತಾನೇ ರಕ್ಷಿಸೇ ರಕ್ಷಿಸುವನೆಂಬ ಮಹಾವಿಶ್ವಾಸಯುಕ್ತನಾಗಿಯೂ ನಿರ್ಭಯನಾಗಿಯೂ, ನಿರ್ಭರನಾಗಿಯೂ ಇರು ಎಂದು ಸರ್ವೇ

---

೧. ರಾ. ಅಯೋಧ್ಯ

ಇದು "ಮಾಶುಚಃ" ಎನ್ಱ ಶರಣ್ಯವಾಕ್ಯತ್ತಿಲುಮ್ ತೀರ್ನ್ದ (ತಿರಣ್ಡ) ಪೊರುಳ್· ಇವನುಕ್ಕು ಪ್ರಪತ್ತಿಕ್ಕು ಮುನ್ಬು ಶೋಕಮ್

ಸ್ವೀನು "**ನಿಸ್ಸಂಶಯಸ್ಸುಖಮಾಸ್ಸ್ವ**" ಎಂಬ ಪ್ರತಿವಚನವನ್ನು ದಯಪಾಲಿಸಿದನೆಂಬುವದು ತೋರಿಬರುವದರಿಂದ, ಈ ಭರನ್ಯಾಸವನ್ನನುಷ್ಠಿಸಿದವನು ಕೃತಕೃತ್ಯನೆಂಬುವದು ಶ್ರೀ ಭಾಷ್ಯಕಾರೋಕ್ತಿಯಲ್ಲಿ ಸುವ್ಯಕ್ತವು ಎಂಬ ತಾತ್ಪರ್ಯವು. ಮುಂದೆ, ಶ್ರೀ ಯತಿ ಸಾರ್ವಭೌಮರ "**ನಿಸ್ಸಂಶಯಸ್ಸುಖಮಾಸ್ಸ್ವ**" ಎಂಬ ಶರಣಾಗತಿಗದ್ಯದ ವಾಕ್ಯಾಭಿಪ್ರಾಯವೂ, ಲೀಲಾಸಾರಥಿಯಾದ ಶ್ರೀಕೃಷ್ಣಭಗವಾನ್ರವರ ಅಮೋಘೋಕ್ತಿಯಾದ "**ಮಾಶುಚಃ**" ಎಂಬ ವಾಕ್ಯಾಭಿಪ್ರಾಯವೂ ಒಂದೇ ಎಂದು ಹೇಳಿ, ಆ "**ಮಾಶುಚಃ**" ಎಂಬ ವಾಕ್ಯದಲ್ಲಿ ಕೃತಕೃತ್ಯತಾಜ್ಞಾನ ಸಂದರ್ಭದಲ್ಲಿ **ಹೇಗೆ** ತೋರಿಬರುತ್ತದೆಂಬುವದನ್ನು ತಿಳಿಯಪಡಿಸುತ್ತಾರೆ.

ಇದು - ಈ ಭರನ್ಯಾಸಾನುಷ್ಠಾತೃವು ಕೃತಕೃತ್ಯನು ಎಂಬ ಭಾವವೇ, "**ಮಾಶುಚಃ**" ಎನ್ಱ - ಚರಮಶ್ಲೋಕದಲ್ಲಿರುವ (ಗೀ. ೧೮. ೬೬) ಅಳಬೇಡವೆಂಬದನ್ನುಳ್ಳ. **ಶರಣ್ಯವಾಕ್ಯತ್ತಿಲುಮ್** - ಲೋಕರಕ್ಷಕನ ವಾಕ್ಯದಲ್ಲಿ, **ತೀರ್ನ್ದಪೊರುಳ್** - ವ್ಯವಸ್ಥೆಯನ್ನು ಹೊಂದಿದ ಮುಖ್ಯ ತಾತ್ಪರ್ಯವು, **ತಿರಣ್ಡಪೊರುಳ್** ಎಂದಿದ್ದರೆ ಸಿಸ್ಕೃಷ್ಟವಾದಭಿಪ್ರಾಯವೆಂಬ ಭಾವವು. ಹೀಗೆ ಭರನ್ಯಾಸವನ್ನನುಷ್ಠಿಸಿದವನು ಕೃತಕೃತ್ಯನೆಂಬುವದು ಈ ವಾಕ್ಯದಲ್ಲಿ ಹೇಗೆ ತೋರಿಬರುತ್ತದೆಂಬುವದನ್ನು ಮುಂದಿನ ಮೂರು ವಾಕ್ಯಗಳಿಂದುಪಪಾದಿಸುತ್ತಾರೆ. **ಮಾಶುಚಃ** - ಎಂಬುವದರಿಂದ ಅಳಬೇಡವೆಂದು ಹೇಳಿ ಭರವಸೆಯನ್ನು ಸತ್ಯಸಂಕಲ್ಪನು ಯಾವಾಗ ಇತ್ತನೋ, ಆಗ ಈತನು ಮಾಡಿದ ಪ್ರಪತ್ತ್ಯನುಷ್ಠಾನಕ್ಕೆ ಮುಂಚೆ ಈತನು ಶೋಕಿಸುತ್ತಿರಬೇಕೆಂದು ಸತ್ಯಸಂಕಲ್ಪನು ಯಾವಾಗ ಅಳಬೇಡವೆಂದು ಅಭಯವಿತ್ತನೋ, ಆಗ ಶೋಕವು ತೊಲಗಿತೆಂದೂ ಊಹಿಸಬೇಕಾಗುತ್ತದೆ. ಹೀಗೆ ಶೋಕವು ತೊಲಗಿದುದರಿಂದ ತಾನು ಕೃತಕೃತ್ಯನೆಂಬನುಸಂಧಾನವು ಪ್ರಾಪ್ತವಾಗುತ್ತದೆಂಬ ಭಾವವು.

ಇವನುಕ್ಕು - ಈ ಭರನ್ಯಾಸಾನುಷ್ಠಾನಮಾಡಿದವನಿಗೆ, **ಪ್ರಪತ್ತಿಕ್ಕು ಮುನ್ಬುತ್ತಶೋಕಂ** ಆ ಅನುಷ್ಠಾನಕ್ಕೆ ಮೊದಲು ಇದ್ದ ಶೋಕವು, **ಅಧಿಕಾರತ್ತಿಲೆ**- ಅಧಿಕಾರವನ್ನುಂಟುಮಾಡುವ ಕಾರ್ಪಣ್ಯದಲ್ಲೇ, **ಶೇರುಗೈಯಾಲೇ** - ಅಂತರ್ಗತವಾದುದರಿಂದ, ಸೇರಿದುದರಿಂದ, ಪ್ರಪತ್ತ್ಯನುಷ್ಠಾನಕ್ಕೆ ಅಧಿಕಾರಿ ಎನಿಸಲು **ಕಾರ್ಪಣ್ಯರೂಪಶೋಕವು** ಇದ್ದೇ ಇರಬೇಕಾದುದರಿಂದ, **ಮುನ್ಬುಶೋಕತ್ತಿಲ**

ಅಧಿಕಾರತ್ತಿಲೆ ಶೇರುಗೈಯಾಲೆ, ಮುನ್ಬು ಶೋಕಿತ್ತಿಲನಾಗಿಲ್ ಅಧಿಕಾರಿಯಲ್ಲಾಮೈಯಾಲೆ, "ಕಾರಣಾಭಾವಾತ್ ಕಾರ್ಯಾಭಾವಃ" ಎಙ್ಗಿರ ನ್ಯಾಯತ್ತಾಲೆ ಉಪಾಯನಿಷ್ಪತ್ತಿ ಯುಣ್ಡಾಗಾದು. ಉಪಾಯ ಸ್ವೀಕಾರಂ ಪಣ್ಣಿನಾನಾಗತ್ತನ್ನೈ ನಿನೈತ್ತಿರನ್ದ ಪಿನ್ಬು ಶರಣ್ಯೋಕ್ತಿಯಿಲೇನಗಳ್ ಚ್ಚಿಯುಡೈಯನಾಯ್ ಶೋಕಿತ್ತಾನಾಗಿಲ್, "ಕಾರ್ಯಾಭಾವಾತ್ತಾಸಾಮಗ್ರ್ಯಭಾವಃ" ಎಙ್ಗಿರ ನ್ಯಾಯತ್ತಾಲೆ, ಪೂರ್ಣೋಪಾಯನಲ್ಲಾಮೈಯಾಲೆ, ಫಲಮ್ ಉಪಾಯಪೂರ್ತಿಸಾಪೇಕ್ಷಮಾಯ್‌ಕೊಣ್ಡು ನಿಳಂ

ನಾಗಿಲ್ - ಹಾಗೆ ಪ್ರಪದನಕ್ಕೆ ಮುಂಚೆ ಆತನು ಶೋಕಿಸದೇ ಹೋದರೆ, ಅಧಿಕಾರಿಯಲ್ಲಾಮೈಯಾಲೆ - ಅಧಿಕಾರಿಯಾಗುವುದೇ ಇಲ್ಲವಾದುದರಿಂದ, ಕಾರಣಾಭಾವಾತ್ಕಾರ್ಯಾಭಾವಃ - ಕಾರ್ಯಕ್ಕೆ ಕಾರಣಭೂತಗಳಾದುವು ಯಾವಾಗ ಇಲ್ಲವೋ, ಆಗ ಕಾರ್ಯವೂ ಇಲ್ಲವು, ಎಙ್ಗಿರನ್ಯಾಯತ್ತಾಲೆ - ಎಂಬುವ ನ್ಯಾಯದಿಂದ ಉಪಾಯ ನಿಷ್ಪತ್ತಿಯುಂಡಾಗಾದು - ಉಪಾಯಾನುಷ್ಠಾನವೇ ಪ್ರಾಪ್ತವಾಗುವುದಿಲ್ಲವು. "ಮಾಶುಚಃ" ಅಳಬೇಡವೆಂದು ಹೇಳಬೇಕಾದರೆ ಅಳುವವನನುದ್ದೇಶಿಸಿ ತಾನೇ ಹೇಳಬಹುದು. ಹಾಗೆ ಕಾರ್ಪಣ್ಯದಿಂದ ಶೋಕಿಸುತ್ತಿದ್ದರೇನೇ ಆತನು ಅಧಿಕಾರಿಯಾಗುವನು. ಶೋಕಿಸದೇ ಇದ್ದರೆ ಆತನು ಅಧಿಕಾರಿಯೇ ಆಗುವದಿಲ್ಲವು ಎಂಬ ಭಾವವು.

ಉಪಾಯಸ್ವೀಕಾರಂಪಣ್ಣಿನಾನಾಗ - ತಾನು ಉಪಾಯಾನುಷ್ಠಾನವನ್ನು ಮಾಡಿದನೆಂದು, ತನ್ನೈ ನಿನೈತ್ತಿರನ್ದ ಪಿನ್ಬು - ತನ್ನನ್ನು ತಿಳಿದನಂತರವೂ ಕೂಡ ಶರಣ್ಯೋಕ್ತಿಯಿಲ್ - ಲೋಕರಕ್ಷಕನ "ಮೋಕ್ಷಯಿಷ್ಯಾಮಿ ಮಾಶುಚಃ" "ದದಾಮ್ಯೇತದ್ವ್ರತಂ ಮಮ" "ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ" "ರಾಮೋದ್ವಿರ್ನಾಭಿಭಾಷತೇ" ಇವೇ ಮೊದಲಾದ ಉಕ್ತಿಗಳಲ್ಲಿ, ನೆಗಳ್‌ಚ್ಚಿಯುಡೈಯನಾಯ್ - ಸಂದೇಹಪ್ರಸ್ತನಾಗಿ, ಶೋಕಿತ್ತಾನಾಗಿಲ್ - ಶೋಕಿಸಿದವನಾದರೆ, "ಕಾರ್ಯಾಭಾವಾತ್ತಾಸಾಮಗ್ರ್ಯಭಾವಃ" - ಕಾರ್ಯವಿಲ್ಲದುದರಿಂದ ಅದಕ್ಕೆ ಕಾರಣವಾದ ಸಾಮಗ್ರಿಯೂ, ಸಹಕಾರಿಯೂ ಇಲ್ಲವು, ಎಙ್ಗಿರ ನ್ಯಾಯತ್ತಾಲೆ - ಎಂಬ ನ್ಯಾಯದ ಪ್ರಕಾರ ಪೂರ್ಣೋಪಾಯನಲ್ಲಾಮೈಯಾಲೆ - ಪ್ರಪದನಾನುಷ್ಠಾನಕ್ಕೆ ಮಹಾವಿಶ್ವಾಸವು ಒಂದು ಅಙ್ಗವು; ಯಾವಾಗ ಪ್ರಪದನಾನಂತರವೂ ಶೋಕಿಸಿದನೋ ಆಗ ಪ್ರಪದನಕಾಲದಲ್ಲಿ ಮಹಾವಿಶ್ವಾಸ ಉಂಟಾಗಲಿಲ್ಲವಾದುದರಿಂದ, ಉಪಾಯವಾದ ಪ್ರಪದನವು ಪೂರ್ತಿಯಾಗದೆ ಇರುವವನಾದುದರಿಂದ ಫಲಮ್ ಉಪಾಯ

ಬಿಕ್ಕು ಮೆನ್ರರಿಯಲಾವುಂ.

ಮುನ್ಪು ಪ್ರಸಕ್ತಶೋಕನಾಯ್, ಪಿನ್ಪು "ಮಾಶುಚಃ" ಎನ್ರು ಪ್ರತಿಷೇಧಿಕ್ಕಿರಪಡಿಯೇ ವೀತ ಶೋಕನಾನವನ್ ಕೃತಕೃತ್ಯನೆನ್ರರಿಯಲಾಮ್.

ಪೂರ್ತಿಸಾಪೇಕ್ಷಮಾಯ್‌ಕೊಂಡು - ಫಲ ಉಪಾಯಪೂರ್ತಿಯನ್ನಪೇಕ್ಷಿಸುವಂಥಾದ್ದಾಗಿ, **ವಿಳಂಬಿಕ್ಕು ಮೆನ್ರರಿಯಲಾಮ್** – ವಿಳಂಬಿಸಿ ಪ್ರಾಪ್ತವಾಗುತ್ತದೆಂದು ತಿಳಿಯಬಹುದು. "ಮಾಶುಚಃ" ಎಂಬ ವಾಕ್ಯದಲ್ಲಿ ಭರನ್ಯಾಸಾನುಷ್ಠಾತೃವು ಕೃತಕೃತ್ಯನೆಂಬ ಭಾವವು ತೋರಿಬರುತ್ತದೆಂದುಪದೇಶಿಸುತ್ತಾರೆ; ಹೇಗೆಂದರೆ—ಪ್ರಪತ್ತ್ಯನುಷ್ಠಾನಕ್ಕೆ ಮುಂಚೆ ಈತನಿಗೆ ಶೋಕವಿರಬೇಕು. ಹಾಗೆ ಶೋಕವಿಲ್ಲದಿದ್ದರೆ ಕಾರ್ಪಣ್ಯವೆಂಬ ಅಂಗವೇ ಇಲ್ಲದೆ ಹೋಗುವದರಿಂದ ಪ್ರಪತ್ತಿಗೆ ಪೂರ್ವಭಾವಿಯಾಗಿ ಪಾಪಿಯಾದ ನನಗೆ ಯಾರೂ ಗತಿ ಇಲ್ಲವೇ ಎಂಬ ಶೋಕವಿರಬೇಕು.

"ಯಸ್ಯ ದೇಹಾಂತರ ಕೃತೇ ಶೋಕೋ ದೃಪ್ತಸ್ಸ ಉಚ್ಯತೇ ॥
ಯಸ್ತು ಪ್ರಾರಬ್ಧ ದೇಹೇಽಪಿ ಶೋಚತ್ಯಾರ್ತ ಸ್ಸ ಉಚ್ಯತೇ ॥"

ಯಾವನಿಗೆ ಮುಂದೆ ಬೇರೆ ದೇಹ ಎಲ್ಲಿ ಉಂಟಾಗುತ್ತೋ ಎಂಬ ಶೋಕವು ಉಂಟಾಗುತ್ತದೋ ಆತನು ದೃಪ್ತನೆನಿಸುವನು. ಯಾವನಿಗಾದರೆ ಪ್ರಾರಬ್ಧ ದೇಹದಲ್ಲಿ ಇಷ್ಟವಿಲ್ಲದೆ ಶೋಕ ಉಂಟಾಗುತ್ತದೋ ಆತನು ಆರ್ತನೆನಿಸುವನು, ಎಂದು ಹೇಳಿರುವದರಿಂದ ಈ ಎರಡು ವಿಧ ಪ್ರಪನ್ನರಿಗೂ ಶರಣಾಗತ್ಯನುಷ್ಠಾನಕ್ಕೆ ಪೂರ್ವದಲ್ಲಿ ಶೋಕವಿತ್ತೆಂಬುವದು ಸಿದ್ಧವು

ಆದರೆ ಪ್ರಪದನಾನುಷ್ಠಾನಾನಂತರ ಶೋಕವಿರಕೂಡದು, ಶೋಕವಿದ್ದದಾದರೆ ಸರ್ವಲೋಕ ಶರಣ್ಯನ ಅಮೋಘವಾದ ವಾಕ್ಯಗಳಾದ "ಮಾಶುಚಃ" "ಅಭಯಂ ದದಾಮಿ" ಇತ್ಯಾದಿಗಳಲ್ಲಿ ಮಹಾ ವಿಶ್ವಾಸವಿಲ್ಲವೆಂದು ಹೇಳಿದಂತಾಯಿತು. ಆಗ ಪ್ರಪದನವು ಈ ಅಂಗವಿಲ್ಲದುದರಿಂದ ಪೂರ್ಣವಾಗಲಿಲ್ಲವೆಂದು ತೋರಿಬರುತ್ತದೆ. ಆದುದರಿಂದ ದೇಹಾವಸಾನಾನಂತರ ಮೋಕ್ಷವಿಲ್ಲವು; ಉತ್ತರ ಜನ್ಮದಲ್ಲೋ ಇನ್ಯಾವಾಗಲೋ ಪ್ರಾಪ್ತವಾಗಬಹುದೆಂಬ ಭಾವವು.

ಆದುದರಿಂದ ಪ್ರಪದನಕ್ಕೆ ಮುಂದೆ ಶೋಕವೂ ತದನಂತರ ತನ್ನಿವೃತ್ತಿಯೂ ಇರಬೇಕೆಂದು ಸ್ಥಾಪಿಸಿ ಅಂತವನೇ ಕೃತಕೃತ್ಯನೆಂದುಪದೇಶಿಸಿ ಅಧಿಕಾರಪೂರ್ತಿಯನ್ನು ಮಾಡುತ್ತಾರೆ.

ಮುನ್ನವರ್ ವಿಣ್ಣವರ್ ನಾನೋರಿರ್ರೈ (ಯೆನ) ಯೊನ್ರುವರ್ ವಾನ್ಗ
ರುತ್ತೊರ್ ।
ಅನ್ನವರ್ ವೇಳ್ವಿಯನೈತ್ತು ಮುಡಿತ್ತನ ರನ್ಬುಡೈಯಾರ್

ಮುನ್ನು - ಶರಣಾಗತ್ಯನುಷ್ಠಾನಕ್ಕೆ ಮುಂದೆ, ಪ್ರಸಕ್ತಶೋಕನಾಯ್- ಉಂಟಾದ ಶೋಕವುಳ್ಳವನಾಗಿ, ಪಿನ್ನು - ಅನುಷ್ಠಾನಾನಂತರ, "ಮಾಶುಚಃ" ಎನ್ರು ಪ್ರತಿಷೇಧಿಕ್ಕ್ಕರ ಪಡಿಯೇ - ಅಳಬೇಡವೆಂದು ನಿಷೇಧಿಸಿ ಹೇಳಿರುವದರ ಹಾಗೆ, ವೀತಶೋಕನಾನವರ್ - ಹಿಂದಿನ ಶೋಕವನ್ನು ಕಳೆದುಕೊಂಡವನೇ, ಕೃತಕೃತ್ಯನೆನ್ರರಿಯಲಾಮ್ - ಕೃತಕೃತ್ಯನೆಂದರಿಯಬಹುದು. ಹಿಂದೆ ಇದ್ದ ಶೋಕವು ಈಗ ಬಿಟ್ಟು ಹೋಗಿರುತ್ತದೆ. ಅದಕ್ಕೆ ಕಾರಣವು ತನಗೆ ಫಲಪ್ರಾಪ್ತಿ ಯಲ್ಲಿ ಹಿಂದೆ ಇದ್ದ ಸಂಶಯವೂ ಭಯವೂ ತನ್ಮೂಲಕ ಉಂಟಾದ ದುಃಖವೂ ಎಲ್ಲಾ ತೊಲಗಿ ನಿಸ್ಸಂಶಯವೂ, ನಿರ್ಭಯವೂ ಉಂಟಾದುದರಿಂದ ಈಗ ಹೃಷ್ಟ ಮನಸ್ಕನಾಗಿರುವದರಿಂದಲೇ ವೀತಶೋಕನಾಗಿರುತ್ತಾನೆ; ಆದುದರಿಂದಲೇ ಈತನು ಈಗ ಕೃತಕೃತ್ಯನೆಂಬುವದರಲ್ಲಿ ಸಂದೇಹವಿಲ್ಲವೆಂಬ ಭಾವವು.

ಈಗ ಅಧಿಕಾರವು ಸಮಾಪ್ತಿಯಾದುದರಿಂದ, ಅದರಭಿಪ್ರಾಯವನ್ನು ಒಂದ ಪಾಶುರದ ಮೂಲಕ ಸಂಗ್ರಹಿಸುತ್ತಾರೆ :—

ಭಕ್ತಿರೂಪ ಉಪಾಯವು ಬಹು ಕಷ್ಟಸಾಧ್ಯವಾದುದಾಗಿಯೂ ಮುಖ್ಯವಾದು ದಾಗಿಯೂ ಇರುವಾಗ ಇದನ್ನು ನಿರಾಕರಿಸಿ, ಬಹು ಸುಲಭ ಸಾಧ್ಯವಾದುದಾಗಿಯೂ ಗೌಣವಾಗಿಯೂ ಇರುವುದನ್ನು ಅಂಗೀಕರಿಸಿ, ಈ ಸುಲಭೋಪಾಯವನ್ನವಲಂಬಿ ಸಿದವನು ಕೃತಕೃತ್ಯನೆಂದು ಹೇಳುವದು ಅಸಂಗತವಲ್ಲವೇ ಎಂಬ ಶಙ್ಕಾ ಕೆಲವ ರನ್ನು ಬಾಧಿಸಬಹುದು. ಇದಕ್ಕೆ ಸಮಾಧಾನ ರೂಪದಲ್ಲಿ, ಅಚೇತನವಾದ ಭಕ್ತಿ ಯೋಗದಲ್ಲಿ ನಿಷ್ಠೆಗಿಂತಲೂ, ಭಕ್ತಿಯೋಗಕ್ಕೂ ಕೂಡ ಫಲಪ್ರದನಾಗಿಯೂ, ಆಕಿಂ ಚನನ ವಿಷಯದಲ್ಲಿ ತುಂಬಾ ಕೃಪಾಶಾಲಿಯಾಗಿಯೂ ಇರುವ ಸರ್ವೇಶ್ವರನೇ ಭಕ್ತಿ ಯೋಗಸ್ಥಾನದಲ್ಲಿ ನಿಂತು ಈತನಿಗೂ ಈತನನುಬಂಧಿಗಳಿಗೂ ಕೂಡ ಮೋಕ್ಷಪ್ರದ ನಾದವನನ್ನೇ ಉಪಾಯವಾಗಿಯುಳ್ಳ ನಿಷ್ಠೆಯು ಉತ್ತಮವಾದುದರಿಂದ, ಅಂತಹ ನಿಷ್ಠೆಗೆ ಅಧಿಕಾರಿಯಾದವರು ಸ್ತೋತ್ರಾರ್ಹರೆಂದು ತಿಳಿಸುತ್ತಾರೆ ;—

ಅರ್ಥ---ಅನ್ಬುಡೈಯಾರ್ಕ್ಕು - ಅನ್ಬು ಎಂದರೆ ಪ್ರೇಮ ಅಥವಾ ಭಕ್ತಿ, ಮಹಾ ವಿಶ್ವಾಸದಿಂದ ಭರನ್ಯಾಸವನ್ನನುಷ್ಠಿಸಿದವರಿಗೆ, ಎನ್ನವರಂ ತರವೆನ್ರು ನಿರತಿಶಯ ಸುಖರೂಪವನ್ನು ಅವರಿಗೂ ಅವರ ಅನುಬಂಧಿಗಳಿಗೂ ಕೊಟ್ಟ್ರು ಕೂಡ, ಅತೃಪ್ತಿಯಿಂದ ಇನ್ನೇನು ವರವನ್ನು ಕೊಟ್ಟೇನೆಂದು ಹೇಳುವ ನಮ್ಮ

ಕೆನ್ನ ವರನ್ನರ ವೆನ್ನು ನಮ್ಮತ್ತಿಗಿರಿತ್ತಿರುಮಾಲ್ ।
ಮುನ್ನಮ್ ವರುನ್ನಿ ಯಡೈಕ್ಕಲ ಜ್ಕೊಣ್ಡನಮ್ಮುಕ್ಕಿ
ಯರೇ ॥ ೨೦ ॥

ತ್ತಿಗಿರಿತಿರುಮಾಲ್ - ನಮ್ಮ ಹಸ್ತಿಗಿರಿಯಾದ ಕಾಂಚೀಪುರದ ಸ್ವಾಮಿಯಾದ ತಿರುಮಾಲ್, ಇಲ್ಲಿ ತಿರು ಎಂದರೆ ಶ್ರೀ ಲಕ್ಷ್ಮಿಯು, **ಮಾಲ್** ಎಂದರೆ ವ್ಯಾಮೋಹವು ಪುರುಷಕಾರ ಭೂತಳಾಗಿಯೂ ಅನುಗ್ರಹಮಯಳಾಗಿಯೂ ಇರುವ ಲಕ್ಷ್ಮಿಯಲ್ಲಿ ಪೂರ್ಣವ್ಯಾಮೋಹವನ್ನಿಟ್ಟಿರುವ ಶ್ರೀ ವರದರಾಜನಿಂದ, **ಮುನ್ನಂ ವರುನ್ನಿ** ಇದಕ್ಕೆ ಮೊದಲೇ ಇವರ ಉಜ್ಜೀವನಕ್ಕಾಗಿಯೇ ಕೃಷಿ ಮಾಡಿ ಎಂದರೆ ಪ್ರಯತ್ನ ಮಾಡಿ, ಹೇಗೆಂದರೆ ಪ್ರಥಮತಃ ಕರಣ ಕಳೇಬರಯೋಗ, ಮಾನುಷಜನ್ಮ, ಶಾಸ್ತ್ರಪ್ರದಾನ, ಯಾದೃಚ್ಛಿಕ ಸುಕೃತಪ್ರಾಪ್ತಿ, ಜಾಯಮಾನ ಕಟಾಕ್ಷ, ಸಾತ್ವಿಕ ಸಂಭಾಷಣ, ಗುರೂಪಸದನ, ಹೀಗೆಲ್ಲಾ ಮೊದಲು ಪ್ರಯತ್ನಮಾಡಿ ಈಗ ಭರನ್ಯಾಸಾನುಷ್ಠಾನವನ್ನು ಮಾಡುವ ಹಾಗೆ ಮಾಡಿ ಎಂಬ ಭಾವವು. **ಅಡೈಕ್ಕಲಂ ಕೊಂಡ**- ಭರನ್ಯಾಸಮೂಲಕ ರಕ್ಷ್ಯವಸ್ತುವೆಂದು ಸ್ವೀಕರಿಸಲ್ಪಟ್ಟ, **ನಮ್ಮುಕ್ಕಿಯರ್** - ನಮ್ಮ ಸ್ವಾಮಿಗಳಾದ ಪ್ರಪನ್ನರು, **ಮನ್ನವರ್** - ರಾಜರುಗಳೇ ಸರಿ ಮತ್ತೂ ಅವರು, **ವಿಣ್ಣವರ್** ಈ ಲೋಕದ ದೇವತೆಗಳು, **ವಾನೋರಿರೈ** - ನಿತ್ಯಸೂರಿಗಳಿಗೆ ನಿರ್ವಾಹಕನಾದ ಶ್ರೀಮನ್ನಾರಾಯಣನು, **ಒನ್ರುಮ್** - ಸದಾ ವಾಸಮಾಡುತ್ತಿರುವ, **ವಾನ್ನರುತ್ತೋರ್** - ಪರಮಪದದಲ್ಲಿ ಅಭಿಪ್ರಾಯವುಳ್ಳವರು ಎಂದರೆ ಅಭಿಲಾಷೆಯುಳ್ಳವನು, ಮೋಕ್ಷದಲ್ಲಿ ಮಾತ್ರ ಅಭಿರುಚಿಯೇ ವಿನಾ ಇತರ ವಿಷಯದಲ್ಲಿ ವೈರಾಗ್ಯವುಳ್ಳವರು, **ಅನ್ನವರ್** - ಪರಮಹಂಸರು, ಹಂಸವು ಹೇಗೆ ನೀರಕ್ಷೀರಗಳನ್ನು ಪ್ರತ್ಯೇಕಿಸಿ, ಕ್ಷೀರವನ್ನು ಮಾತ್ರ ಪಾನಮಾಡುತ್ತವೆಂಬ ಪ್ರತೀತಿಯುಂಟೋ, ಹಾಗೆ ಸಾರಾಸಾರ ವಿವೇಕ ಚತುರರು ಎಂಬ ಭಾವವು. **ವೇಳ್ವಿ** - ಯಜ್ಞಗಳ, **ಅನೈತ್ತುಮ್** - ಸಮಸ್ತವನ್ನೂ, **ಮುಡಿತ್ತನರ್** - ಮುಗಿಸಿದವರು ಎಂದರೆ ಸಮಸ್ತ ಯಜ್ಞವನ್ನೂ ನಡಿಸಿದವರೆಂದು ಭಾವಿಸಬಹುದು ಎಂಬರ್ಥವು.

ತಾತ್ಪರ್ಯ--ನಮ್ಮ ಈ ಭರನ್ಯಾಸಾನುಷ್ಠಾನಮಾಡಿದವರು ತುಂಬಾ ಧನ್ಯರೆಂದು ಕೊಂಡಾಡುತ್ತಾರೆ. ಇಲ್ಲಿ ನಮ್ಮುಕ್ಕಿಯರೇ ಎಂಬಲ್ಲಿ ನಮ್ಮ ಎಂಬುವದರಭಿಪ್ರಾಯವೇನೆಂದರೆ—

"ಸತ್ಕರ್ಮನಿರತಾಶ್ಶುದ್ಧಾಸ್ಸಾಂಖ್ಯಯೋಗವಿದಸ್ತಥಾ ।
ನಾರ್ಹಂತಿ ಶರಣಸ್ಥಸ್ಯ ಕಲಾಂ ಕೋಟಿತಮೀಮಪಿ ॥"

ಎಂಬ ಲಕ್ಷ್ಮೀತಂತ್ರ (೧೭.೬೨) ವಾಕ್ಯದ ಪ್ರಕಾರ, ಕರ್ಮಯೋಗ ಜ್ಞಾನಯೋಗ

ಗಳಿಂದ ಕೂಡಿದ ಯೋಗಾಭ್ಯಾಸ ನಿರತರು, ಈ ಶರಣಸ್ಥನ್ಯ-ಈ ಭರನ್ಯಾಸಾ ನಿಷ್ಠರುಗಳ ಕೋಟ್ಯಂಶದಲ್ಲಿ ಒಂದು ಭಾಗವನ್ನು ಹೋಲಲಾರರೆಂಬ ಅಭಿಪ್ರಾಯದಿಂದ ನಮ್ಮ ಎಂದು ಉಪಯೋಗಿಸಿರಬಹುದು. ಈ ನಿಷ್ಠೆಯು ತಮಗೆ ಪರಮ ಗುರುಸ್ಥಾನೀಯರಾದ ಶ್ರೀಭಾಷ್ಯಕಾರರಿಗೆ ತುಂಬಾ ಅಭಿಮತವಾದುದಾಗಿ ತಮ್ಮಿಂದ ಅದರ ಮಹಿಮೆಯು ನಿಕ್ಷೇಪರಕ್ಷೆ, ನ್ಯಾಯಸಿದ್ಧಾಂಜನ, ಶರಣಾಗತಿ ದೀಪಿಕೆ, ನ್ಯಾಸತಿಲಕ, ನ್ಯಾಸದಶಕ, ನ್ಯಾಸವಿಂಶತಿ ಇತ್ಯಾದಿ ಅನೇಕ ಗ್ರಂಥಗಳಲ್ಲಿ ಕೊಂಡಾಡಲ್ಪಟ್ಟಿರುವದರಿಂದಲಾಗಲಿ, ನಮ್ಮುಕ್ಕಿಯರೇ ಎಂದು ಪ್ರಯೋಗಿಸಿರಬಹುದು.

ಇಂತಹ ಪ್ರಪನ್ನನ ವಿಷಯದಲ್ಲಿ ಸರ್ವೇಶ್ವರನಿಗೆ ಪರಮಾದರವು, ಈತನ ಇಂತಹ ಉಪಾಯಾನುಷ್ಠಾನವನ್ನು ಯಾವಾಗ ಮಾಡುವೆನೆಂದು ಅವಸರ ಪ್ರತೀಕ್ಷೆಯಲ್ಲಿ ಸದಾ ಇರುವನು ಏನಾದರೂ ಕಿಂಚಿತ್ಸುಕೃತವನ್ನು ಮಾಡಿದರೆ ಸಾಕ ಎಂದು ಎದುರುನೋಡುತ್ತಿರುವನು. "ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ" ಎಂದು ಹೇಳಿರುವ ಹಾಗೆ ಯಾದೃಚ್ಛಿಕ ಸುಕೃತವನ್ನು ಮಾಡುವ ದನ್ನೇ ಎದುರುನೋಡುತ್ತಾ, ಅಂಥಾವನನ್ನು ಜನ್ಮಕಾಲದಲ್ಲಿ ತನ್ನ ದಿವ್ಯಕಟಾಕ್ಷದಿಂದ ನೋಡಿ, ಸತ್ವಗುಣಾಧಿಕ್ಯವನ್ನುಂಟುಮಾಡಿ ಸಾತ್ವಿಕ ಸಂಭಾಷಣೆ ಉಂಟಾಗುವಹಾಗೆ ಮಾಡಿ ಅದರಿಂದ ಗುರುಕಟಾಕ್ಷಕ್ಕೆ ಒಳಪಟ್ಟು, ಉಪಾಯಾನುಷ್ಠಾನವನ್ನು ಮಾಡುವ ಹಾಗೆ ಸರ್ವೇಶ್ವರನು ಪ್ರೇರಿಸುವದರಿಂದ, ಮುನ್ನಂ ವರುನ್ನಿ ಎಂಬ ಪ್ರಯೋಗವು.

ಇಂತಹ ಸರ್ವೇಶ್ವರಾನುಗ್ರಹ ಭಾಗವತಾನುಗ್ರಹಗಳಿಗೆ ಈ ಭರನ್ಯಾಸವನ್ನನುಷ್ಠಿಸಿದವರು ಪಾತ್ರರಾದುದರಿಂದ, ಅವರು ಕೃತಕೃತ್ಯರೂ ಕೃತಾರ್ಥರೂ ಆದುದರಿಂದ, ಅಂತಹ "ನಮ್ಮುಕ್ಕಿಯರಿ"ಗೆ ಸಮಾನರೂ ಯಾರೂ ಇಲ್ಲನೆಂದು ತಿಳಿಸುವದಕ್ಕಾಗಿ, ಅವರು ಮನ್ನವರ್ ರಾಜರುಗಳೇ ಸರಿ ಎಂದು ಹೇಳಿರುತ್ತಾರೆ. ಅವರು ಐಹಿಕ ಸುಖದುಃಖಗಳಿಗೆ ಒಳಪಟ್ಟು ಚಂಚಲಚಿತ್ತರಾಗದೆ ದೇವತೆಗಳಿಗೆ ಸಮಾನವಾದ ಸುಖವನ್ನು ಇಲ್ಲಿಯೇ ಹೊಂದಿರುವರಾದುದರಿಂದ ಅವರು ವಿಣ್ಣವರ್ ಎಂದು ಹೇಳಿರುತ್ತಾರೆ. ಪರಮಾತ್ಮನಿ ಯೋ ರಕ್ತೋ ವಿರಕ್ತೋsಪರಮಾತ್ಮನಿ ಎಂದು ಹೇಳಿರುವ ಹಾಗೆ ಪರಮಪದದಲ್ಲಿ ಪ್ರಾಪ್ಯದಲ್ಲೇ ಸಕ್ತವಾದ ಮನಸ್ಸುಳ್ಳವರಾದುದರಿಂದ, ಇತರ ವಿಷಯದಲ್ಲಿ ವೈರಾಗ್ಯವುಳ್ಳವರೆಂದು ತಿಳಿಸುವದಕ್ಕಾಗಿ "ವಾಜ್ಕರುತ್ತೋರ್" ಎಂಬ ಪ್ರಯೋಗವು. ಹೀಗೆ ಐಹಿಕಾದಿಗಳೆಲ್ಲಾ ಅಲ್ಪಾಸ್ಥಿರಫಲವುಳ್ಳವುಗಳೆಂಬ, ಮೋಕ್ಷವೇ ನಿತ್ಯನಿರತಿಶಯ ಸ್ಥಿರಫಲವುಳ್ಳದು ಎಂಬ, ಸಾರಾಸಾರ ವಿವೇಕವುಳ್ಳವರಾದುದರಿಂದ, ಅನ್ನವರ್ ಎಂದು ಹೇಳಿರುತ್ತಾರೆ. ಅಂತವರು ಅನುಷ್ಠಿಸಿರುವ ಭರನ್ಯಾಸವು, ಸಮಸ್ತಯಜ್ಞಗಳಿಗಿಂತ

ಭಗವತಿ ಹರೌ ಪಾರಂಗಂತುಂ ಭರನ್ಯಸನಂ ಕೃತಂ।
ಪರಿಮಿತ ಸುಖ (ರಸ) ಪ್ರಾಪ್ತ್ಯೈ ಕೃತ್ಯಂ ಪ್ರಹೀಣ ಮಕೃತ್ಯವತ್।

ಮೇಲಾದ ಫಲವನ್ನೀಯುವದರಿಂದ ಸಮಸ್ತ ಯಜ್ಞಗಳನ್ನು ಅನುಷ್ಠಿಸಿದವರೆಂದು ಭಾವಿಸತಕ್ಕದ್ದೆಂದು ತಿಳಿಸುವದಕ್ಕಾಗಿ, **ವೇಳ್ವಿಅನೈತ್ತುಮ್ ಮುಡಿತ್ತನರ್** ಎಂದು ಉಪದೇಶಿಸಿರುತ್ತಾರೆ.

ಅವತಾರಿಕೆ :—ಮೇಲೆ ಹೇಳಿದಭಿಪ್ರಾಯಗಳನ್ನೇ ಒಂದು ಸಂಸ್ಕೃತ ಶ್ಲೋಕದಿಂದಲೂ ಸಂಗ್ರಹಿಸಿ ಹೇಳುತ್ತಾರೆ ;—ಹಿಂದಿನ ಪಾಶುರದಲ್ಲಿ ಬಹುವಾಗಿ ಕೊಂಡಾಡಲ್ಪಟ್ಟ ಭರನ್ಯಾಸಾನುಷ್ಠಾನ ಮಾಡಿದ ಮಹನೀಯನಾದ ಪ್ರಪನ್ನನು ಕೃತಾರ್ಥನು, ಕೃತಕೃತ್ಯನೆಂದೂ ಇಲ್ಲಿಯೂ ಹೇಳಿ, ಆತನು ಮುಂದೆ ದೇಹಾವಸಾನಾನಂತರ ಪಡೆಯತಕ್ಕ ನಿರತಿಶಯಮೋಕ್ಷಪ್ರಾಪ್ತಿಗೆ ಮಾಡತಕ್ಕದ್ದೇನೂ ಇಲ್ಲವೆಂದು ಸ್ಥಾಪಿಸಿ ಹೇಳುತ್ತಾರೆ. ಆದರೆ ಈತನಿಗೆ ಶರೀರ ಧಾರಣಾದಿಗಳಿಗೆ ಉಪಯುಕ್ತವಾದ ದ್ರವ್ಯಾರ್ಜನೆಯೂ, ಅದಕ್ಕೆ ಬೇಕಾದ ಐಹಿಕ ಸಾಧನಗಳೂ ಮತ್ತು ಕಾಮ್ಯಕರ್ಮಗಳೂ ಅವೆಲ್ಲಾ ಬೇಡವೇ ? ಮತ್ತು ಪ್ರಾರಬ್ಧ ಕರ್ಮವು ಅದರ ಫಲವನ್ನು ಕೊಡಬಹುದು, ಅದು ದುಃಖರೂಪವಾದುದಾದರೆ, ಅದಕ್ಕೆ ಪ್ರತೀಕಾರರೂಪವಾದ ಧರ್ಮಗಳನ್ನು ಆಚರಿಸಬೇಡವೇ ? ಎಂಬೀ ಶಂಕಾಗಳಿಗೆ ಸಮಾಧಾನವನ್ನು ಹೇಳಲು ಹೊರಟು, ಇವುಗಳು ನಿಷಿದ್ಧಗಳಾಗಿ ತ್ಯಾಜ್ಯಗಳೆಂದು ಹೇಳುತ್ತಾರೆ ಇವುಗಳನ್ನೆಲ್ಲಾ ಸರ್ವೇಶ್ವರನೇ ತಾನೇ ನಿಂತು ಪ್ರಪನ್ನನಲ್ಲಿರುವ ಪ್ರೀತ್ಯತಿಶಯದಿಂದ ನಡಿಸಿಕೊಡುತ್ತಾನಾದುದರಿಂದ, ಪ್ರಪನ್ನನ ಪ್ರಯತ್ನವು ಬೇಕಾಗಿರುವದಿಲ್ಲವು ಆದರೆ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವೂ ಕೂಡ ಬೇಡವೋ ಎಂದರೆ ಭಗವದಾಜ್ಞೆಗೆ ವಿರುದ್ಧಾಚರಣೆಯು ಪ್ರಪನ್ನನಿಗೆ ಯೋಗ್ಯವಲ್ಲವಾದುದರಿಂದ ಆಜ್ಞಾನುಜ್ಞಾರೂಪ ಕೈಂಕರ್ಯಗಳನ್ನು ಪ್ರಪನ್ನನು ಮಾಡಿಯೇ ತೀರಬೇಕೆಂದು ಹೇಳಿ ಅಧಿಕಾರ ಪರಿಸಮಾಪ್ತಿಯನ್ನು ಮಾಡುತ್ತಾರೆ.

ಅರ್ಥ:— ಇಂತಹ ಕೃತಕೃತ್ಯರಾದ ಶಾಸ್ತ್ರಜ್ಞರಾದ ಮಹನೀಯರಿಗೆ ಯಾವ ಕೃತ್ಯಗಳು ತ್ಯಾಜ್ಯವಾದುವು, ಯಾವುವು ಉಪಾದೇಯವಾದವು ಎಂಬುವದನ್ನು ತಿಳಿಸುತ್ತಾರೆ. **ಪಾರಂ** - ಸಂಸಾರ ಸಾಗರದ ಆಚೆಯ ದಡವನ್ನು ಎಂದರೆ ಪರಮಪದವನ್ನು, **ಗಂತುಂ** - ಹೋಗಿ ಸೇರಲು **ಭಗವತಿ** – ಹೇಯಪ್ರತ್ಯನೀಕನಾಗಿಯೂ ಅನುಗ್ರಹಕ್ಕೆ ಯೋಗ್ಯವಾದ ಷಾಡ್ಗುಣ್ಯಾದಿ ಕಲ್ಯಾಣಗುಣಾಕರನಾಗಿಯೂ ಇರುವ, **ಹರೌ** - ಸರ್ವಪಾಪಹರನಾದ ಶ್ರೀಮಹಾ ವಿಷ್ಣುವಿನಲ್ಲಿ, **ಭರನ್ಯಸನಂ ಕೃತಂ** – ಭರನ್ಯಾಸವು ಅನುಷ್ಠಿಸಲ್ಪಟ್ಟಿತು **ಪರಿಮಿತಸುಖಪ್ರಾಪ್ತ್ಯೈ**

ಭವತಿ ಚ ವಪುರ್ವೃತ್ತಿಃ ಪೂರ್ವಂ ಕೃತೈ(ರ್ನಿಯತಕ್ರಮೈಃ)ರ್ನಿಯತಕ್ರಮಾ ।
ಪರಮಿಹ ವಿಭೋರಾಜ್ಞಾ ಸೇತುರ್ಬುಧೈರನುಪಾಲ್ಯತೇ ॥೩೧॥

ಇಹಲೋಕದ ಐಶ್ವರ್ಯಮೂಲಕ ಉಂಟಾಗುವ ಸುಖ. ಸ್ವರ್ಗಾದಿ ಲೋಕಗಳ ಸುಖ ಕೈವಲ್ಯರೂಪ ಸುಖ ಇವುಗಳನ್ನು ಹೊಂದುವದಕ್ಕಾಗಿ, ಈ ಸುಖಗಳೆಲ್ಲಾ ಅಲ್ಪಾಸ್ಥಿರಗಳಾದುದರಿಂದ ಪರಿಮಿತವಾದವೆಂದು ಇಲ್ಲಿ ಹೇಳಲ್ಪಟ್ಟವು, ರಸಪ್ರಾಪ್ತ್ಯೈಃ ಎಂಬ ಪಾಠವಲ್ಲೂ ಇದೇ ಅರ್ಥವು, ಕೃತ್ಯಂ – ಮಾಡತಕ್ಕ ಸಕಲ ಕಾಮ್ಯಕರ್ಮವೂ ಅಕೃತ್ಯವತ್ - ನಿಷಿದ್ಧ ಪಾಪಕರ್ಮಗಳ ಹಾಗೆ, ಪ್ರಹೀಣಂ - ಬಿಡಲ್ಪಟ್ಟವು ತ್ಯಜಿಸಲ್ಪಟ್ಟವು. ಆದರೆ ದೇಹಯಾತ್ರೆಗಾಗಿ ಪ್ರಯತ್ನ ಬೇಡವೋ ಎಂದರೆ ಹೇಳುತ್ತಾರೆ.

ವಪುರ್ವೃತ್ತಿಶ್ಚ-ಶರೀರರಕ್ಷಣೆರೂಪ ದೇಹಯಾತ್ರೆಯಾದರೋ, ಪೂರ್ವಂ ಕೃತೈಃ - ಮೊದಲು ಪೂರ್ವ ಜನ್ಮಗಳಲ್ಲಿ ಮಾಡಿದ ಸುಕೃತದುಷ್ಕೃತರೂಪಕರ್ಮಗಳಿಂದ, ನಿಯತಕ್ರಮಾ - ಪ್ರಾರಬ್ಧ ಕರ್ಮದ ಫಲರೂಪದಲ್ಲಿ ಅವಶ್ಯ ಅನುಭವಿಸಬೇಕಾದುದಾಗುತ್ತದೆ. ನಿಯತಕ್ರಮೈಃ ಎಂಬ ಪಾಠವಾದರೆ ಅಂತಹ ಕ್ರಮಗಳಿಂದ ಭವತಿ – ಉಂಟಾಗುತ್ತವೆ. ಇಹ - ಪ್ರಸತ್ತ್ಯುತ್ತರಕಾಲವಾದ ಈ ಸಂಸಾರದೆಶೆಯಲ್ಲಿ, ಬುಧೈಃ - ತತ್ವಹಿತ ಪುರುಷಾರ್ಥಗಳ ಸದುಪದೇಶ ಹೊಂದಿದ ಜ್ಞಾನಿಗಳಿಂದ, ವಿಭೋಃ - ಶ್ರೀಮಹಾವಿಷ್ಣುವಿನ, ಕೇವಲಂ – ಕೇವಲ, ಅಜ್ಞಾಸೇತುಃ - ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಆಜ್ಞಾರೂಪವಾದ ವಿಧಿನಿಷೇಧ ವಾಕ್ಯಗಳ ಎಲ್ಲೆಯು ಎಂದರೆ ನಿತ್ಯನೈಮಿತ್ತಿಕರೂಪ ಆಜ್ಞಾಕೈಂಕರ್ಯಗಳು, ಅನುಪಾಲ್ಯತೇ - ಪರಿಪಾಲಿಸಲ್ಪಡುತ್ತವೆ.

ತಾತ್ಪರ್ಯ :—ಆಚಾರ್ಯಮುಖೇನ ಶ್ರುತಿ ಸ್ಮೃತಿಗಳ ಉಪದೇಶವನ್ನು ಹೊಂದಿದ ಪಂಡಿತರು ಪಾರಂ ಗಂತುಂ, ಸಂಸಾರಸಾಗರವನ್ನು ದಾಟಿ ಮೋಕ್ಷಸುಖವನ್ನು ಹೊಂದಲು ಉಪಾಯವು ಭರನ್ಯಾಸನವೇ ಎಂದು ಉಪದೇಶಿಸಿದರೆಂದು ಇಲ್ಲಿ ಹೇಳಲ್ಪಟ್ಟಿತು. ಇದರಿಂದ ಈ ಉಪಾಯಾನುಷ್ಠಾನವು ತುಂಬಾ ಆವಶ್ಯಕವೆಂದೂ ಇದೂ ಬೇಕಾಗಿಲ್ಲವೆಂಬ ಕೆಲವರ ಅಭಿಮತವು ಸರಿಯಾದುದಲ್ಲವೆಂದೂ ತೋರಿ ಬರುತ್ತದೆ. ಈ ಭರನ್ಯಾಸವನ್ನನುಷ್ಠಿಸಿದವನ ಅನುಗ್ರಹಕ್ಕನುಗುಣವಾದ ಗುಣಗಳು ಸರ್ವೇಶ್ವರನಲ್ಲಿವೆ ಎಂದು ತೋರಿಸುವದಕ್ಕಾಗಿ, ಭಗವತಿ ಹರೌ ಎಂದು ಪ್ರಯೋಗಿಸಿರುತ್ತಾರೆ. ಈತನಲ್ಲಿ ಜ್ಞಾನ ಶಕ್ತಿ ದಯಾ ಸೌಲಭ್ಯ ಸೌಶೀಲ್ಯಾದಿ ಕಲ್ಯಾಣ ಗುಣಗಳುಂಟೆಂದೂ, ಆತನು ಈ ಪ್ರಪನ್ನನ ದುರಿತಗಳನ್ನೆಲ್ಲಾ ಹೋಗಲಾಡಿಸುವ ಶಕ್ತಿಯುಳ್ಳವನೆಂದೂ ಹೇಳುವದಕ್ಕಾಗಿ ಈ ಪ್ರಯೋಗಗಳು. ಕೃತಂ

ಎಂದು ಹೇಳಿರುವದರಿಂದ ನಿರತಿಶಯ ಮೋಕ್ಷ ಸುಖವನ್ನು ಹೊಂದಲು ಏನನ್ನು ಮಾಡಬೇಕೋ ಅದು ಮಾಡಲ್ಪಟ್ಟಿದುದರಿಂದ ಅಂಥವನು ಕೃತಕೃತ್ಯನೆಂಬ ಭಾವವೂ ತೋರಿಬರುತ್ತದೆ. ಇದರಿಂದ ಈತನಿಗೆ ಅನ್ಯದೇವತಾ ಭಜನಾದಿಗಳ ಬೇಕಾಗಿಲ್ಲವೆಂಮೂ ಆತನ ಸ್ವರೂಪಕ್ಕೆ ವಿರುದ್ಧವೆಂಬ ಭಾವವೂ ಕೂಡ ತೋರಿ ಬರುತ್ತದೆ.

ಆದರೆ ಅಂತಹ ಶಾಸ್ತ್ರಜ್ಞನಾದ ಪ್ರಪನ್ನನು ಪರಿಮಿತ ಸುಖಪ್ರಾಪ್ತಿಯನ್ನುಂಟುಮಾಡುವ ಕಾಮ್ಯಕರ್ಮಗಳನ್ನು ಅನುಷ್ಠಿಸಬಹುದೋ ಎಂದರೆ ಅವುಗಳು ತಸ್ಕರ, ಅನೃತ ಭಾಷಣ, ಪರದಾರಾಗಮನ ಮೊದಲಾದ ನಿಷಿದ್ಧಕರ್ಮಗಳು ಹೇಗೆ ತ್ಯಾಜ್ಯವೋ ಹಾಗೆ ತ್ಯಾಜ್ಯವೆಂದು ಹೇಳಿದರು. ಇಲ್ಲಿ **ಪ್ರಹೀಣಂ** ಎಂಬುವದರಿಂದ **ಪ್ರಕರ್ಷೇಣ ಹೀನಂ** ಎಂಬರ್ಥ ಉಂಟಾಗುವದರಿಂದ ಈತನ ಸ್ವರೂಪಕ್ಕೆ ತುಂಬಾ ವಿರುದ್ಧವಾದುದೆಂಬ ಭಾವವು ತೋರಿಬರುತ್ತದೆ. ಪ್ರಪನ್ನನಿಗೆ ವೈರಾಗ್ಯವು ಮುಖ್ಯವಾದುದರಿಂದ, ಐಹಿಕ ಸುಖಕ್ಕಾಗಲಿ, ಸ್ವರ್ಗಾದಿ ಲೋಕ ಭೋಗಕ್ಕಾಗಲಿ ಕೈವಲ್ಯಾನಂದಕ್ಕಾಗಲಿ ಈತನು ಏನನ್ನೂ ಮಾಡಕೂಡದು.

"ನನಾಕಪೃಷ್ಠಂ ನ ಚ ಸಾರ್ವಭೌಮಂ
ನ ಪಾರಮೇಷ್ಠ್ಯಂ ನ ರಸಾಧಿಪತ್ಯಂ ।
ನ ಯೋಗಸಿದ್ಧೀರ ಪುನರ್ಭವಂವಾ
ವಾಂಛನ್ತಿ ಯತ್ಪಾದರಜಃ ಪ್ರಪನ್ನಾಃ ॥" (ಭಾಗ. ೧೦.೧೬.೩೭)

ಸರ್ವೇಶ್ವರನ ಪಾದಕಮಲ ಪರಾಗದಲ್ಲಿ ಸೇರಿದ ಮನಸ್ಸುಳ್ಳ ಪ್ರಪನ್ನರು ಸ್ವರ್ಗ ಲೋಕವಾಸವನ್ನಾಗಲಿ, ಚಕ್ರವರ್ತಿ ಪದವಿಯನ್ನಾಗಲಿ, ಚತುರ್ಮುಖನ ಅಧಿಕಾರವನ್ನಾಗಲಿ ಅಥವಾ ಸತ್ಯಲೋಕವಾಸವನ್ನಾಗಲಿ, ಅಣಿಮಾದ್ಯಷ್ಟೈಶ್ವರ್ಯವನ್ನಾಗಲಿ, ಕೈವಲ್ಯವನ್ನಾಗಲಿ ಅಪೇಕ್ಷಿಸುವದಿಲ್ಲವೆಂದು ಹೇಳಿರುತ್ತದೆ.

ಆಗಲಿ, ಕಾಮ್ಯಕರ್ಮಗಳೇನೋ ತ್ಯಾಜ್ಯಗಳೇ ಎಂದು ಒಪ್ಪಿಕೊಳ್ಳೋಣ, ದೇಹಯಾತ್ರೆಯು ನಡೆಯಬೇಕಲ್ಲಾ, ಅದಕ್ಕಾಗಲಿ ಏನೂ ಪ್ರಯತ್ನ ಬೇಡವೋ ಎಂದರೆ, ಏನೂ ಬೇಕಾಗಿಲ್ಲವೆಂದು ಹೇಳುತ್ತಾರೆ :--**"ಯೋ ಮೇ ಗರ್ಭಗತಸ್ಯಾಪಿ ವೃತ್ತಿಂ ಕಲ್ಪಿತವಾನ್ ಪ್ರಭುಃ"** ಎಂದು **ಹೇಳಿರುವ** ಹಾಗೆ, ಪೂರ್ವ ಜನ್ಮಗಳಲ್ಲಿ ಸುಕೃತ ದುಷ್ಕೃತಗಳ ಪರಿಪಾಕ ದೆಶೆಯು ಪ್ರಾಪ್ತವಾಗಿ, ಆ ಪ್ರಾರಬ್ಧ ಕರ್ಮವನ್ನು ಈ ದೇಹದಲ್ಲಿ ಅನುಭವಿಸಬೇಕೆಂದು ಸರ್ವೇಶ್ವರನೇ ಸಂಕಲ್ಪಿಸಿರುವದರಿಂದ, ಆ ಸಂಕಲ್ಪಾನುಸಾರ ಸುಖದುಃಖೋಪಭೋಗಗಳೊಂದಿಗೆ ದೇಹ ಯಾತ್ರೆಯು ನಡೆದು ಹೋಗುತ್ತದೆ. ಆದುದರಿಂದ ಆ ಸಂದರ್ಭದಲ್ಲೂ ಈತನು ಮಾಡತಕ್ಕದ್ದೇನೂ ಇರುವದಿಲ್ಲವು ಎಂಬ ಭಾವವು. ಈತನಿಗೆ ಕರಣಕಳೇಬರ ಯೋಗದೊಂದಿಗೆ ಕರ್ತೃತ್ವವನ್ನೂ ಸರ್ವೇಶ್ವರನು ದಯಪಾಲಿಸಿರುವಾಗ ದೇಹ

ಯಾತ್ರೆಗೆ ಬೇಕಾದ ಧನಾರ್ಜನಾದಿ ವ್ಯಾಪಾರಗಳು ಹೇಗೆ ತ್ಯಾಜ್ಯವು ಎಂದರೆ **ದೈವಂ ಚೈವಾತ್ರ ಪಂಚಮಂ** ಎಂದು ಹೇಳಿರುವ ಹಾಗೂ, "**ಪರಾತ್ತು ತಚ್ಛ್ರುತೇಃ**" ಎಂಬ ಸೂತ್ರದಲ್ಲೂ ಹೇಳಿರುವ ಹಾಗೂ ಸರ್ವೇಶ್ವರನ ಸಂಕಲ್ಪಕ್ಕೆ ಅಧೀನವಾದುದು ಆ ಕರ್ತೃತ್ವವೆಂದು ತಿಳಿಯತಕ್ಕದ್ದು. ತದನುಗುಣವಾಗಿ ಧನಾರ್ಜನೆ ಮೊದಲಾದವುಗಳನ್ನು, "**ಪೂರ್ವೇ ವಯಸಿ ತತ್ಕುರ್ಯಾದ್ಯೇನ ವೃದ್ಧಸ್ಸುಖಂ ವಸೇತ್**" ಎಂಬ ವಿದುರೋಕ್ತಿಗನುಸಾರವಾಗಿ ಪೂರ್ವ ವಯಸ್ಸಿನಲ್ಲೇ ಮಾಡಿ, ವೃದ್ಧನಾದವನು ಆ ದ್ರವ್ಯ ಮೂಲಕವಾಗಿಯೇ ವೃದ್ಧಾಪ್ಯದಲ್ಲಿ ಏನೊಂದೂ ಕ್ಲೇಶವಿಲ್ಲದೆ ಸುಖವಾಗಿ ಭಗವದ್ಭಾಗವತ ಕೈಂಕರ್ಯಗಳನ್ನೆಸಗುತ್ತಾ ಕಾಲಯಾಪನೆಮಾಡತಕ್ಕದ್ದು. ಸರ್ವೇಶ್ವರನು ಈತನಿಗೆ ಪೂರ್ವ ವಯಸ್ಸಿನಲ್ಲೇ ಸರಿಯಾದ ವೃತ್ತಿಯನ್ನು ಕಲ್ಪಿಸಿ ತನ್ಮೂಲಕ ಈತನಿಗೆ ಪೂರ್ವಾರ್ಜಿತ ಹಣದ ಬಡ್ಡಿಯಿಂದಲಾಗಲಿ, ಜಮೀನಿನ ಆದಾಯ ರೂಪದಿಂದಲಾಗಲಿ ಪೆನ್ಷನ್‌ಮೂಲಕವಾಗಲಿ ದೇಹಯಾತ್ರೆಯು ನಡೆಯುವ ಹಾಗೆ ಕೃಪಯಾ ಅನುಗ್ರಹಿಸಿದ್ದರೂ, ವೃದ್ಧಾಪ್ಯದಲ್ಲೂ ಕೂಡ ಸ್ವಾಮಿಯನ್ನು ಚನ್ನಾಗಿ ಆರಾಧಿಸದೆ ವಿಶೇಷ ದ್ರವ್ಯಾರ್ಜನೆಗಾಗಿ ಕ್ಲೇಶಪಡುತ್ತಾ, ಹೊಸಹೊಸ ವೃತ್ತಿಗಳನ್ನವಲಂಬಿಸುತ್ತಾ ಪೆನ್ಷನ್ ಆದರೂ ಲಾಯರಾಗಿಯೋ, ಕಂಟ್ರಾಕ್ಟದಾರನಾಗಿಯೋ ಹಣ ಸಂಪಾದಿಸೋಣವೆಂದು ಪ್ರವರ್ತಿಸುತ್ತಾ ಇರುವದು ತುಂಬಾ ಶೋಚನೀಯವಾದ ವಿಷಯವಾಗಿರುತ್ತದೆ. ಸಾಧಾರಣ ಜನದಲ್ಲೇ ಇದು ಶೋಚನೀಯವಾಗಿರುವಲ್ಲಿ, ಇನ್ನು ಪ್ರಪನ್ನನ ವಿಷಯವಲ್ಲಿ ಹೇಳತಕ್ಕದ್ದೇನಿದೆ.

ಆದರೆ ಪ್ರಪನ್ನನು ತುಂಬಾ ಬಡವನಾಗಿದ್ದರೆ, ಹೆಚ್ಚು ದ್ರವ್ಯಾರ್ಜನೆಯಲ್ಲಿ ಪ್ರವರ್ತಿಸಕೂಡದೇ ಎಂದರೆ ಅಂತಹ ಸಂದರ್ಭದಲ್ಲಿ ಸಂಸಾರವಂದಿಗನಾಗಿದ್ದ ಪಕ್ಷದಲ್ಲೂ ಈ ಅಪರ ವಯಸ್ಸಿನ ಧನಾರ್ಜನೆಯಲ್ಲಿ ಈತನು ಲಿಪ್ತನಾಗದೆ ಸಂಸಾರದಲ್ಲೂ ಲಿಪ್ತನಾಗದೆ "**ಮುಕ್ತಸಂಗಸ್ಸಮಾಚರ**" ಎಂದು ಹೇಳಿರುವ ಮೇರಿಗೆ ಪ್ರವರ್ತಿಸಬಹುದು. ಆದರೆ ಇದೂ ಉತ್ತಮ ಪಕ್ಷವಲ್ಲವು, ಪ್ರಪನ್ನನ ಸ್ವರೂಪಕ್ಕೆ ಅನುಗುಣವಾದುದಲ್ಲವು,

ಪ್ರಪನ್ನನಾದವನಿಗೆ ಧನಾರ್ಜನೆಯಲ್ಲಿ ಶಕ್ತಿಯಿದ್ದು, ಹಾಗೆ ಆರ್ಜಿಸಿದ ಧನದ ಮೂಲಕ ಲೋಕೋಪಕಾರವನ್ನು ಮಾಡಕೂಡದೋ ? ಮುಕ್ತಸಂಗನಾಗಿ ಆಚರಿಸಕೂಡದೋ ? ಎಂದರೆ ಮಾಡಬಹುದು. ಇದೂ ಉತ್ತಮಪಕ್ಷವಲ್ಲವು. ಇದೂ ಪ್ರಪನ್ನನಾಗುವದಕ್ಕಿಂತ ಪೂರ್ವಭಾವಿಯಾಗಿ ನಡಿಸತಕ್ಕ ವಿಷಯವು. ತನಗೆ ಅಂತಹ ಧನಾರ್ಜನೆ ಶಕ್ತಿಯಿದ್ದರೆ, ತನ್ನ ಮಗ ಮಿತ್ರ, ಅಥವಾ ಒಂದು ಚಿಕ್ಕ ಸಭೆ ಮುಂತಾದುದರ ಮೂಲಕ ಏರ್ಪಾಡನ್ನು ಮಾಡಿ ಬಿಟ್ಟು, ತಾನು ವಿರಕ್ತನಾಗಿರಬಹುದು.

ಹೀಗೆ ಇವೆಲ್ಲವೂ ತ್ಯಾಜ್ಯವಾದುದಾದರೆ ಈ ಬುಧನು-ಪ್ರಪನ್ನನಾದ ಪಂಡಿತನು, ಮಾಡತಕ್ಕದ್ದು ಯಾವುದೊಂದೂ ಇಲ್ಲವೋ ಎಂದರೆ ಮಾಡತಕ್ಕದ್ದೊಂದು ಮುಖ್ಯವಾಗಿ ಉಂಟು, ಅದನ್ನು ಎಂದಿಗೂ ಬಿಡತಕ್ಕದ್ದಲ್ಲವು ಎಂದು ಹೇಳುತ್ತಾರೆ. ನಿತ್ಯನೈಮಿತ್ತಿಕ ಕರ್ಮಾನುಷ್ಠಾನವು ಶ್ರುತಿಸ್ಮೃತಿಗಳಲ್ಲಿ **"ಅಹರಹಸ್ಸಂಧ್ಯಾಮುಪಾಸೀತ"** ಇತ್ಯಾದಿ ವಾಕ್ಯಗಳಿಂದ ವಿಧಿಸಲ್ಪಟ್ಟಿವೆ; ಇವೆಲ್ಲಾ ವಿಭುವಾದ ಶ್ರೀಮನ್ನಾರಾಯಣನ ಆಜ್ಞೆಗಳು; ಅವುಗಳ ಮರ್ಯಾದೆಯು ಮಾತ್ರ ಈ ಪ್ರಪನ್ನರಿಂದ ಪರಿಪಾಲಿಸಲ್ಪಡತಕ್ಕದ್ದು. ಆದುದರಿಂದ ಶಾಂಕರಾದಿಗಳ ಅಭಿಪ್ರಾಯದ ಹಾಗೆ ಎಂದಿಗೂ ಬಿಡತಕ್ಕದ್ದಲ್ಲವು. **"ಸರ್ವಧರ್ಮಾನ್ ಪರಿತ್ಯಜ್ಯ"** ಎಂಬಲ್ಲಿ ಇಂತಹ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವನ್ನೂ ಬಿಡತಕ್ಕದ್ದೆಂಬರ್ಥವಲ್ಲವು. ಹಾಗೆ ಬಿಟ್ಟರೆ

"ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ ।
ಮನೀಷೀ ವೈದಿಕಾಚಾರಂ ಮನಸಾಪಿ ನಲಂಘಯೇತ್"

ಎಂಬ ಪ್ರಮಾಣಾನುಸಾರವಾಗಿ, ಭಗವದಾಜ್ಞೆಯನ್ನುಲ್ಲಂಘಿಸಿ ಭಗವನ್ನಿಗ್ರಹಕ್ಕೆ ಪಾತ್ರನಾಗುತ್ತಾನೆ. **ಮನೀಷೀ** - ಪಂಡಿತನಾದವನು, **ಮನಸಾಪಿ** - ಮನಸ್ಸಿನಿಂದಲೂ ಅಂತಹ ವೈದಿಕಾಚಾರವನ್ನು ಉಲ್ಲಂಘಿಸತಕ್ಕದ್ದಲ್ಲವು ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಕೃತಕೃತ್ಯನಾದ ಪ್ರಪನ್ನನು, ನಿತ್ಯನೈಮಿತ್ತಿಕಾನುಷ್ಠಾನಗಳನ್ನು ಭಗವತ್ಪ್ರೀತ್ಯರ್ಥವಾಗಿ ಭಗವತ್ಕೈಂಕರ್ಯರೂಪದಿಂದ ಫಲಾಭಿಸಂಧಿರಹಿತನಾಗಿ ಸಾತ್ವಿಕತ್ಯಾಗ ಪೂರ್ವಕವಾಗಿ ಅನುಷ್ಠಿಸತಕ್ಕದ್ದೆಂಬುವದು ಈ ಶ್ಲೋಕದ ನಿಷ್ಕರ್ಷಾರ್ಥವು.

ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ

ಹದಿಮೂರನೆಯದಾದ ಕೃತಕೃತ್ಯಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಶ್ರೀಮದ್ರಹಸ್ಯತ್ರಯಸಾರೇ

ಸ್ವನಿಷ್ಠಾಭಿಜ್ಞಾನಾಧಿಕಾರಃ ೧೪.

ಸ್ವರೂಪೋಪಾಯಾರ್ಥೇಷ್ವನಿತರಥ ನಿವಿಷ್ಟ ಸ್ಥಿರಮತೇ
ಸ್ವನಿಷ್ಠಾಭಿಜ್ಞಾನಂ ಸು(ಗಮ)ಭಗ ಮುಪವರ್ಗಾದುಪನತಾತ್ ।

ಅವತಾರಿಕೆ :—ಹಿಂದಿನ ಅಧಿಕಾರದಲ್ಲಿ ಭರನ್ಯಾಸವನ್ನನುಷ್ಠಿಸಿದವನು ಹೇಗೆ ಕೃತಕೃತ್ಯನೆಂದೂ, ಹೇಗೆ ಕೃತಾರ್ಥನೆಂದೂ ಉಪಪಾದಿಸಿ, ಅಂತವನು ಅದಕ್ಕಾಗಿ ಇನ್ನೇನೂ ಮಾಡತಕ್ಕದ್ದಿಲ್ಲವೆಂದೂ, ಅನ್ಯದೇವತಾಭಜನ ಮತ್ತು ನಿಷಿದ್ಧ ಕಾಮ್ಯವ್ರತಗಳನ್ನಾಚರಿಸುವದು ಈತನಿಗೆ ಸ್ವರೂಪವಿರುದ್ಧವೆಂದೂ, ದೇಹಯಾತ್ರೆಗಾಗಿ ಈತನು ಏನೂ ಮಾಡಬೇಕಾದುದಿಲ್ಲವೆಂದೂ ಭಗವತ್ಪ್ರೀತ್ಯರ್ಥವಾಗಿ ಭಗವದಾರಾಧನ ರೂಪದಲ್ಲಿ ನಿತ್ಯನೈಮಿತ್ತಿಕಾನುಷ್ಠಾನಗಳನ್ನು ನಡಿಸತಕ್ಕದ್ದೆಂದೂ ಹೇಳಲ್ಪಟ್ಟಿತು.

ಆದರೆ ಲೋಕದಲ್ಲಿ ಅನೇಕ ಸಂದರ್ಭಗಳು ಒದಗುವುದುಂಟು. ಒಬ್ಬನು ನಿಷ್ಕಾರಣವಾಗಿ ನಮ್ಮನ್ನು ಬೈದು ಅವಮಾನಪಡಿಸಬಹುದು. ಇದಕ್ಕೆ ಪ್ರತೀಕಾರ ಬೇಡವೇ ? ಇನ್ನೊಬ್ಬನು ನಮ್ಮ ದ್ರವ್ಯ ಜಮೀನು ಮೊದಲಾದವುಗಳನ್ನು ಅಪಹರಿಸಲು ಪ್ರಯತ್ನಿಸಬಹುದು. ಅದಕ್ಕೆ ಇತರೋಪಾಯಗಳನ್ನು ಅವಲಂಬಿಸಬೇಡವೇ ? ಹೀಗೆಯೇ ಇನ್ನೂ ಅನೇಕ ಛಿದ್ರಗಳು ಪ್ರಾಪ್ತವಾಗಬಹುದು. ಈ ಸಂದರ್ಭಗಳಲ್ಲೆಲ್ಲಾ ಮನೋವಿಕಾರವಿಲ್ಲದೆಯೂ, ಪ್ರತೀಕಾರಗಳನ್ನವಲಂಬಿಸದೇ ಇರುವದೂ ಅಸಾಧ್ಯವು. ಹೀಗಿರುವಾಗ ಕೃತಕೃತ್ಯತಾ ಹೇಗೆ ಎಂಬಾಕ್ಷೇ

ಪ್ರಥಿವ್ಯಾಂ ಯಸ್ಯಾ(ದೌ)ಸೌ ಪ್ರಭವತಿ ವಿನೀತಸ್ಸ್ಥಗಯಿತುಂ
ಗಭೀರಾನ್ ದುಷ್ಪೂರಾನ್ ಗಗನಮುಹತಶ್ಛಿದ್ರನಿವಹಾನ್ ॥ ೩೨ ॥

ಪಕ್ಕೆ ಸಮಾಧಾನವಾಗಿ ಈ ಅಧಿಕಾರದಲ್ಲಿ ಹೇಳುವವೇನೆಂದರೆ :—

ತನ್ನ ಸ್ವರೂಪನಿಷ್ಠಾಜ್ಞಾನವಿದ್ದರೆ, ತನ್ನ ಆತ್ಮಾಮಹಾಪರಿಶುದ್ಧನು, ಹಾಗೆಯೇ ಇತರರ ಆತ್ಮಾ ಸಹ ಎಂಬ ಜ್ಞಾನಉಂಟಾದರೆ, ಮೇಲೆ ಹೇಳಿದ ಪ್ರತಿಕೂಲಾಚರಣೆಯಲ್ಲಿ ಪ್ರವರ್ತಿಸುವದಿಲ್ಲವು ತಾನು ಈಗ ಅನುಷ್ಠಿಸಿರುವ ಭರನ್ಯಾಸರೂಪವಾದ ಉಪಾಯವು ತುಂಬಾ ಮಾಹಾತ್ಮ್ಯಯುಳ್ಳದು ಎಂಬ ಉಪಾಯನಿಷ್ಠಾಜ್ಞಾನವಿದ್ದರೆ, ತನ್ನ ಮನೋರಥಾವಾಪ್ತಿಗಳಿಗಾಗಿ ಇತರೋಪಾಯಗಳನ್ನವಲಂಬಿಸನು. ತನಗೆ ತುಂಬಾ ಬೇಕಾಗಿರುವ ಪುರುಷಾರ್ಥರೂಪವಾದುದು, ನಿರತಿಶಯವಾದ ಸರ್ವೇಶ್ವರಕೈಂಕರ್ಯರೂಪಸಾಮ್ರಾಜ್ಯವು, ಇಂತಹ ಪುರುಷಾರ್ಥನಿಷ್ಠಾಜ್ಞಾನ ಉಂಟಾದರೆ, ಐಹಿಕಗಳಾದ ಇತರ ಪುರುಷಾರ್ಥ ಪ್ರಾಪ್ತಿಗಳಲ್ಲಿ ವೈರಾಗ್ಯವೂ, ತವಲಾಭದಲ್ಲಿ ಮನೋವಿಕಾರರಾಹಿತ್ಯವೂ ಉಂಟಾಗುವದಲ್ಲದೆ, ಇಲ್ಲಿಯೂ ಕೂಡ ಭಗವತ್ಪ್ರೀಣನಾರ್ಥವಾಗಿ ಭಾಗವತಪರ್ಯಂತವಾದ ಭಗವತ್ಕೈಂಕರ್ಯಗಳಲ್ಲಿ ಪ್ರವೃತ್ತಿಯೂ ಉಂಟಾಗುತ್ತದೆ. ಹೀಗೆ ಸ್ವರೂಪನಿಷ್ಠೆ, ಉಪಾಯನಿಷ್ಠೆ, ಪುರುಷಾರ್ಥನಿಷ್ಠೆ ಈ ಮೂರುನಿಷ್ಠೆಯ ಅಭಿಜ್ಞಾನದಿಂದ ಈ ಪ್ರಸನ್ನನಿಗೆ ಯಾವ ವಿಧವಾದ ಪ್ರತಿಕೂಲಾಚರಣೆಯೂ ಉಂಟಾಗದೆ, **"ಅಮೃತ ಇಹ ಭವತಿ"** ಎಂದು ಹೇಳಿರುವ ಹಾಗೆ ಮುಕ್ತತುಲ್ಯನಾಗಿರುವನು ಎಂದು ಹೇಳಲು ಹೊರಟು, ಈ ಅಧಿಕಾರಾರ್ಥವನ್ನು ಈ ಶ್ಲೋಕದ ಮೂಲಕ ಸಂಗ್ರಹಿಸಿ ಹೇಳುತ್ತಾರೆ.

ಅರ್ಥ :—ಸ್ವರೂಪೋಪಾಯಾರ್ಥೇಷು, **ಸ್ವರೂಪ** – ಜೀವಾತ್ಮನು ಅಚಿತ್ತುಗಿಂತಲೂ ವಿಲಕ್ಷಣವಾಗಿ ಜ್ಞಾನಾನಂದಾದಿ ಗುಣಗಳಿಂದ ವಿರಾಜಿಸುತ್ತಾ, ಎಲ್ಲರಲ್ಲೂ ಜ್ಞಾನೈಕಾಕಾರತೆಯಿಂದ ಸಮನು ಎಂಬುವದರಲ್ಲೂ, **ಉಪಾಯ** – ಸರ್ವೇಶ್ವರನಿಂದ ರಕ್ಷಿಸಲ್ಪಡಲು ಇಂತಹ ಲಘೂಪಾಯಕ್ಕಿಂತಲೂ ಮಹತ್ತಾದ ಉಪಾಯವು ಯಾವುದೂ ಇಲ್ಲವು, ಆದುದರಿಂದ ಇಂತಹ ಉಪಾಯವು, **ಅರ್ಥೇಷು** – ಯಾವುದು ಅಪೇಕ್ಷಿಸಲ್ಪಡವುದೋ ಅದು ಅರ್ಥವು ಎಂದರೆ ನಿರತಿಶಯವಾದ ಪರಮಪುರುಷ ಕೈಂಕರ್ಯಪ್ರಾಪ್ತಿರೂಪ ಸಾಮ್ರಾಜ್ಯವು, ಇವುಗಳಲ್ಲಿ, **ಅವಿತಥನಿವಿಷ್ಟಸ್ಥಿರಮತೇಃ,** **ಅವಿತಥ** – ವ್ಯರ್ಥವಾಗದಿರೋಣವು ಹೇಗೋ ಹಾಗೆ ಎಂದರೆ ಯಥಾರ್ಥವಾಗಿ, **ನಿವಿಷ್ಟ** – ಶಾಸ್ತ್ರದಲ್ಲಿ ಹೇಳಿರುವ ಹಾಗೆ ಆಯಾ ವಿಶೇಷಣಗಳಿಂದ ಯುಕ್ತವಾದುದಾಗಿ ಆ ಸ್ವರೂಪೋಪಾಯ ಪುರುಷಾರ್ಥಗಳನ್ನು ವಿಷಯೀಕರಿಸುವ, **ಸ್ಥಿರಮತೇಃ**-ಪ್ರಸತ್ತ್ಯುತ್ತರ ಕಾಲದಲ್ಲೂ ಕೂಡ ಅನುವರ್ತಿ

ಸಿಕೊಂಡು, ಕುಯುಕ್ತಿಗಳಿಂದಲೂ ಅವಿಚಾಲ್ಯವಾದ ದೃಢವಾದ ಬುದ್ಧಿಯುಳ್ಳ ಪ್ರಪನ್ನನಿಗೆ, **ಸ್ವನಿಷ್ಠಾಭಿಜ್ಞಾನಂ** - ತನ್ನ ಈ ಮೂರು ವಿಧವಾದ ನಿಷ್ಠೆಯು ತನಗುಂಟೆಂಬ ನಿಶ್ಚಯಜ್ಞಾನವು, **ಉಪನತಾತ್** - ಸಮೀಪಸ್ಥವಾದ ಎಂದರೆ ಜನ್ಮಾಂತರದ ಸಾವಕಾಶವೇನೂ ಇಲ್ಲದೆ ಈ ಜನ್ಮದಲ್ಲೇ ದೇಹಾವಸಾನವಾದ ಒಡನೆಯೇ ಮುಂದೆ ಪ್ರಾಪ್ತವಾಗುವ, **ಅಪವರ್ಗಾತ್**-ಪರಬ್ರಹ್ಮಾನುಭವಕ್ಕಿಂತಲೂ, **ಸುಭಗಂ**-ಅತ್ಯಂತಭೋಗ್ಯಭೂತವಾದುದು, ಸುಗಮಂ ಎಂಬ ಪಾಠವಾದರೆ, ಸುಲಭವಾಗಿ ಹೊಂದಲುಶಕ್ಯವು ಎಂಬರ್ಥವು, ಹೀಗೆ ಮೂರು ನಿಷ್ಠೆಗಳ ಅಭಿಜ್ಞಾನವು ಮುಂದೆಯುಂಟಾಗುವ ಪರಬ್ರಹ್ಮಾನುಭವಕ್ಕಿಂತಲೂ ಮನೋಹರವಾದುದು ಹೇಗೆ ಎಂದರೆ, ಉತ್ತರಾರ್ಧದಿಂದ ಸಮರ್ಥಿಸಿ ಹೇಳುತ್ತಾರೆ. ಈ ಸ್ವನಿಷ್ಠಾಭಿಜ್ಞಾನವು ಅಂತಹ ಆನಂದವನ್ನುಂಟುಮಾಡಿ ಇಂತಹ ಅನರ್ಥಗಳನ್ನುಂಟುಮಾಡದಿರುವ ಸಾಮರ್ಥ್ಯವುಳ್ಳದೆಂದುಪದೇಶಿಸುತ್ತಾರೆ :—

ಯಸ್ಯ - ಯಾವ ತನ್ನ ಈ ಮೂರು ವಿಧ ನಿಷ್ಠೆಯ ಅಭಿಜ್ಞಾನದ, **ಪ್ರಥಿಮ್ನಾ** - ಮಹಿಮೆಯಿಂದ, ಅಸೌ - ಈ ಪ್ರಪನ್ನನು, ಅವೌ ಎಂಬ ಪಾಠದಲ್ಲಿ ಅಸೌ ಎಂದು ಇಟ್ಟುಕೊಳ್ಳಬೇಕು, ಆದೌ - ಮೊದಲೇ ಎಂದರೆ ಪ್ರಪದನಕ್ಕೆ ಪೂರ್ವಭಾವಿಯಾಗಿಯೇ, ವಿನೀತಸ್ಸನ್ - ಆಚಾರ್ಯರಿಂದ ಶಿಕ್ಷಿಸಲ್ಪಟ್ಟವನಾಗಿ, **ಗಭೀರಾನ್** – ಅತಿ ಗಹನಗಳಾದ ಎಂದರೆ ಅನರ್ಥಗಳ ಆಳವು ಇಷ್ಟೆಂದು ತಿಳಿಯಲಸಾಧ್ಯವಾದ **ದುಷ್ಪೂರಾನ್**–ಪ್ರತೀಕಾರಗಳಿಗೆ ಅಸಾಧ್ಯವಾಗಿರುವ, **ಗಗನಮಹತಃ** - ಆಕಾಶಕ್ಕಿಂತಲೂ ಬಹು ವಿಸ್ತೀರ್ಣಗಳಾದ, **ಛಿದ್ರನಿವಹಾನ್** - ದೋಷಗಳ ಸಮೂಹಗಳನ್ನು, **ಸ್ಥಗಯಿತುಂ** - ಮುಚ್ಚುವದಕ್ಕೆ ಎಂದರೆ ಹೋಗಲಾಡಿಸಿಕೊಳ್ಳುವದಕ್ಕೆ, **ಪ್ರಭವತಿ** – ಸಮರ್ಥನಾಗುತ್ತಾನೆ.

ತಾತ್ಪರ್ಯ—ಹಿಂದಿನಧಿಕಾರದಲ್ಲಿ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನು ಕೃತಕೃತ್ಯನೂ ಕೃತಾರ್ಥನೂ ಎಂದು ಹೇಳಿದರು. ಈ ಅಧಿಕಾರದಲ್ಲಿ ಆತನು ಮುಕ್ತತುಲ್ಯನೆಂದು ಹೇಳುತ್ತಾರೆ. ಅದು ಹೇಗೆಂದರೆ :— ಇಂತಹ ಪ್ರಪನ್ನನಿಗೆ ಮೂರರ ನಿಷ್ಠಾಜ್ಞಾನವು ಆವಶ್ಯಕವು :—ಸ್ವರೂಪನಿಷ್ಠೆ, ಉಪಾಯನಿಷ್ಠೆ, ಪುರುಷಾರ್ಥನಿಷ್ಠೆ ಇವುಗಳ ಜ್ಞಾನವನ್ನು ಹೊಂದಿರಬೇಕು. ಈ ಮೂರು ನಿಷ್ಠೆಗಳ ಮಹಿಮೆಯನ್ನು ಆಚಾರ್ಯರುಗಳು ಪ್ರಪದನಕಾಲ ಪೂರ್ವಭಾವಿಯೇ ಈ ಮುಮುಕ್ಷುವಿಗೆ ತಿಳಿಸಿರಬೇಕು ಎಂಬ ಭಾವದಿಂದಲೂ, ಈತನು ಅವುಗಳನ್ನು ಗ್ರಹಿಸಿರಬೇಕೆಂಬ ಭಾವದಿಂದಲೂ, "ಆದೌ" ಎಂಬ, ವಿನೀತಸ್ಸನ್ ಎಂಬ ಪ್ರಯೋಗಗಳು. ಹೀಗೆ ಉಪದೇಶಿಸಲ್ಪಟ್ಟ ಪಪ್ರನ್ನನುಅವಿತಥ ನಿವಿಷ್ಟಸ್ಥಿರ ಮತಿಯುಳ್ಳವನಾಗಿರಬೇಕೆಂದು ತಿಳಿಸುತ್ತಾರೆ. ಶಾಸ್ತ್ರೋಕ್ತಪ್ರಕಾರವಾಗಿ ಈ ಸ್ವರೂಪ, ಉಪಾಯ, ಪುರುಷಾರ್ಥಗಳನ್ನು ಗ್ರಹಿಸಿರುವದರಿಂದ

ಅವುಗಳ ವಿಷಯದಲ್ಲಿ ಇವನಿಗೆ ಸ್ಥಿರಬುದ್ಧಿ ಇರಬೇಕು. ಪ್ರಪತ್ತ್ಯುತ್ತರ ಕಾಲದಲ್ಲೂ ಕೂಡ, ಯಾವಜ್ಜೀವವೂ ಕುವಾದ ಕುಯುಕ್ತಿಗಳಿಂದ ಚಾಂಚಲ್ಯ ವನ್ನು ಹೊಂದದೇ ಇರುವ ಬುದ್ಧಿಯೋಗವುಳ್ಳವನಾಗಿರಬೇಕು. ಹಾಗಿದ್ದರೇನೇ ಅದು ನಿಷ್ಠೆಯೆಂದು ಹೇಳಿಸಿಕೊಳ್ಳುತ್ತದೆಂಬ ಭಾವವು. ಆಚಾರ್ಯರುಗಳು ಪರಮ ಕೃಪಯಾ ಉಪದೇಶಿಸಿದುದನ್ನು ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಲ್ಲಿ ಬಿಟ್ಟುಬಿಟ್ಟರೆ ಅದು ನಿರರ್ಥಕವಾದುದಾಗುತ್ತದೆ. ಹಾಗಿಲ್ಲದೆ ಯಾವಜ್ಜೀವವೂ ಈತನು ಅನುವರ್ತಿಸಿ ನಡೆಯಲು ಈ ಉಪದೇಶವು ಕಾರಣವಾಗಬೇಕು. ಆದುದ ರಿಂದಲೇ ಅವಿತಥ ನಿವಿಷ್ಟಸ್ಥಿರಮತಿಯುಳ್ಳವನಾಗಬೇಕೆಂದು ಹೇಳಿರುತ್ತಾರೆ.

(೧) ತನ್ನ ಸ್ವರೂಪ (೨) ತಾನು ಅನುಷ್ಠಿಸಿದ ಪ್ರಪತ್ತಿರೂಪ ಉಪಾಯ, (೩) ಭಗವತ್ಕೈಂಕರ್ಯರೂಪ ಪುರುಷಾರ್ಥಗಳಲ್ಲಿ ನಿಷ್ಠಾಜ್ಞಾನವಿರಬೇಕೆಂದು ಹೇಳಿ ರುತ್ತಾರೆ. ತನ್ನ ಸ್ವರೂಪನಿಷ್ಠಾಜ್ಞಾನವು ಏನನ್ನು ಮಾಡುತ್ತದೆ ಎಂದರೆ, ತಾನು ಶ್ರಿಯಃಪತಿಗೇನೇ ಶೇಷಭೂತನು, ಇನ್ನಾರಿಗೂ ಇಲ್ಲವೆಂಬುವದರಿಂದಲೂ, ತಾನು ತುಂಬಾ ಪರತಂತ್ರನು ಎಂಬ ನಿಷ್ಠಾಜ್ಞಾನವಿದ್ದರೆ, ತಾನೇ ಪರಮಾ ತ್ಮನು, ತಾನು ಸ್ವತಂತ್ರನು ಇತ್ಯಾದಿ ಅಭಿಪ್ರಾಯಗಳನ್ನು ಪಪಾದಿಸುವ ಕುಯುಕ್ತಿ ಕುವಾದಗಳಿಂದ ಚಾಂಚಲ್ಯ ಉಂಟಾಗುವದಿಲ್ಲವು.

(೨) ತನ್ನ ಉಪಾಯ ನಿಷ್ಠಾಜ್ಞಾನವು ಏನನ್ನು ಮಾಡುತ್ತದೆಂದರೆ :— ಸಿದ್ಧೋಪಾಯನಾದ ಸರ್ವೇಶ್ವರನನ್ನೇ ಉಪಾಸನಸ್ಥಾನದಲ್ಲಿಟ್ಟು ತಾನು ಅನುಷ್ಠಿ ಸಿದ ಭರನ್ಯಾಸಕ್ಕಿಂತ ಉತ್ತಮ ಮಾರ್ಗವು ಇಲ್ಲವೆಂದು ಈತನಿಗೆ ಉಪಾಯನಿಷ್ಠೆ ಯುಂಟಾಗಿರುವದರಿಂದ, ಅದರಲ್ಲೇ ಪೂರ್ಣವಿಶ್ವಾಸವನ್ನಿಟ್ಟು ತದಿತರೋಪಾಯ ಗಳನ್ನು ತುಚ್ಛವಾಗಿ ಎಣಿಸಿ ನಿರಾಕರಿಸುವ ಹಾಗೆ ಮಾಡುತ್ತದೆ.

(೩) ಹಾಗೆಯೇ ಪುರುಷಾರ್ಥನಿಷ್ಠಾಜ್ಞಾನದ ಪ್ರಯೋಜನವೇನೆಂದರೆ :— ಪುರುಷಾರ್ಥವು ಭಗವತ್ಕೈಂಕರ್ಯರೂಪವಾದುದು ; ಇದು ತದೀಯರಾದ ಭಾಗವತ ಕೈಂಕರ್ಯರೂಪವೂ ಆದುದು ; ಎಂದು ಹೀಗೆ ನಿಶ್ಚಯಜ್ಞಾನ ಉಂಟಾದ ಬಳಿಕ ತದ್ವ್ಯತಿರಿಕ್ತವಾದ ಅಪುರುಷಾರ್ಥಗಳನ್ನು ಯುಕ್ತಿಯಿಂದ ಪುರುಷಾರ್ಥ ವೆಂದು ಎಷ್ಟು ಸಾಧಿಸಿದರೂ ವಿಕಾರನ್ನು ಹೊಂದದೇ ಇರುವ ಹಾಗೆ ಮಾಡುತ್ತದೆ.

ಇಂತಹ ಈ ಮೂರು ನಿಷ್ಠಾರೂಪ ಸ್ಥಿರಮತಿಯು ತನಗಿದೆಯೆಂದು ಭಾವಿಸು ವದಕ್ಕೆ ಸ್ವನಿಷ್ಠಾಭಿಜ್ಞಾನವೆಂದು ಹೆಸರು. ಈ ಸ್ವನಿಷ್ಠಾಭಿಜ್ಞಾನವು ತನಗೆ ಮುಂದೆ ಪ್ರಾಪ್ತವಾಗುವ ಪರಮಪದಕ್ಕಿಂತ ಪರಮಭೋಗ್ಯವಾದುದೆಂದು ಹೇಳು ತ್ತಾರೆ. ಶ್ರುತಿಯೂ "ತಮೇವಂ ವಿದ್ವಾ ನ ಮೃತ ಇಹಭವತಿ" ಎಂದು

ಸ್ವರೂಪ ನಿಷ್ಠಾಭಿಜ್ಞಾನ ಪ್ರಕಾರಃ

ಇಪ್ಪಡಿ ತನಕ್ಕು ನಿಷ್ಟೈ ಯುಣ್ಡೆನ್ರು ತಾನರಿಯುಂಪಡಿ ಯೆಜ್ಜನೇ ಯೆನ್ನಿಲ್ ?

ಪರತ್ವಸೌಲಭ್ಯಾದಿ ಕಲ್ಯಾಣಗುಣಮಹೋದಧಿಯನ್ನು ಉಪಾಯ ಮೂಲಕ ಹೊಂದಿದವನು ಈ ಲೋಕದಲ್ಲೇ ಮುಕ್ತತುಲ್ಯನೇ ಆಗುತ್ತಾನೆಂದು ಹೇಳಿರುತ್ತದೆ. ಅದರ ಉಪಬೃಹ್ಮಣವೇ ಈ ಶ್ಲೋಕವಾಗಿರುತ್ತದೆ. ಆದುದರಿಂದ **ಉಪನತಾತ್ ಅಪವರ್ಗಾತ್** ತನಗೆ ಸಮೀಪಿಸಿರುವ ಮೋಕ್ಷಫಲಕ್ಕಿಂತಲೂ, **ಸುಭಗಂ** ಭೋಗ್ಯಭೂತವಾದುದೆಂದು ಹೇಳಿರುತ್ತಾರೆ. ಪರಮಪದ ಭೋಗ್ಯತೆ ಏನೋ ಈತನಿಗೆ ಪ್ರಕೃತಿಸಂಬಂಧ ಹೋಗಿಯು, ಸ್ವಸ್ವರೂಪಾವಿರ್ಭಾವ ಉಂಟಾಗಿ ಸ್ವಜ್ಞತ್ವವು ತಲೆದೋರಿರುವಾಗ ಅಭಿಜ್ಞಾನದಲ್ಲೇನೂ ಅಷ್ಟು ಮಹಿಮೆ ಇಲ್ಲವು ಪ್ರಕೃತಿಸಂಬಂಧವಿರುವಾಗಲೇ, ಇನ್ನೂ ಸ್ವಸ್ವರೂಪದ ಆವಿರ್ಭಾವ ಉಂಟಾಗುವದಕ್ಕಿಂತ ಮುಂಚಿಯೇ, ಇಂತಹ ಸ್ವನಿಷ್ಠಾಭಿಜ್ಞಾನ ಉಂಟಾಗಿರುವದರಲ್ಲಿ ಮಹಿಮೆಯೂ ಭೋಗ್ಯತೆಯೂ ಸಹ ಹೆಚ್ಚು ಎಂಬ ಭಾವವು.

ಇಂತಹ ಸ್ವನಿಷ್ಠಾಭಿಜ್ಞಾನದ ಮಾಹಾತ್ಮ್ಯೆಯು **ಭಿದ್ರನಿವಹಾ** - ಅನೇಕ ದೋಷಸಮೂಹಗಳನ್ನು ಹೋಗಲಾಡಿಸುತ್ತದೆಂದು ಹೇಳುತ್ತಾರೆ. ಅವು ಯಾವುವೆಂದರೆ :--

ಅನ್ಯಾಭಿಗಮನ - ಇತರರನ್ನು ಹುಡುಕಿಕೊಂಡು ಹೋಗೋಣವು, **ಅನ್ಯಾರ್ಥಪ್ರವೃತ್ತಿಯು** ಎಂದರೆ ಇತರ ಪುರುಷಾರ್ಥಕ್ಕಾಗಿ ಪ್ರವರ್ತಿಸೋಣವು, **ಅನ್ಯಯಜನ** ಇತರ ದೇವತಾರಾಧನೆಯು, ಅನ್ಯನಾಮ ಸಂಕೀರ್ತನವು, **ಅನ್ಯಚಿಂತನವು** ಅನ್ಯಶಾಸ್ತ್ರ ಪಠನವು ಇವೇ ಮೊದಲಾದವುಗಳು.

ಈ ದೋಷಗಳು ಎಂತವುಗಳೆಂದರೆ ಅವುಗಳಿಗೆ ಮೂರು ವಿಶೇಷಣಗಳನ್ನು ಕೊಟ್ಟಿರುತ್ತಾರೆ :—ಗಭೀರಾ-ಅತಿಗಹನವಾದವು, **ದುಷ್ಪ್ರಾರಾ**, - ಪ್ರತೀಕಾರಕ್ಕೆ ಸಾಧ್ಯವಿಲ್ಲದಿರುವವು, ಮತ್ತು **ಗಗನಮಹತ್** - ಆಕಾಶದ ಹಾಗೆ ಬಹು ವಿಸ್ತೀರ್ಣವಾದವುಗಳು. ಇಂತಹ ಸಕಲದೋಷಗಳನ್ನೂ ಸ್ವನಿಷ್ಠಾಭಿಜ್ಞಾನವು ಹೋಗಲಾಡಿಸಲು ಸಾಮರ್ಥ್ಯವುಳ್ಳದು ಎಂಬ ತಾತ್ಪರ್ಯವು.

ತನಗೆ ಸ್ವರೂಪ ನಿಷ್ಠೆಯುಂಟೆಂದರಿಯುವ ಬಗೆ

ಇಪ್ಪಡಿ - ಈ ಮೇಲೆ ಹೇಳಿದ ರೀತಿಯಲ್ಲಿ ಸ್ವರೂಪೋಪಾಯ ಪುರುಷಾರಗಳು ಮೂರರಲ್ಲೂ, **ತನಕ್ಕು ನಿಷ್ಠೆ** - ತನಗೆ ನಿಷ್ಠೆಯು, **ಉಂಡೆನ್ರು** - ಉಂಟೆಂ

ಬದಾಗಿ, **ತಾನರಿಯುಂಪಡಿ** - ತಾನು ತಿಳಿಯುವ ರೀತಿಯು, **ಎಙ್ಙನೇ ಎನ್ನಿಲ್** - ಹೇಗೆ ಎಂದರೆ ? ಹೀಗೆ ಮೂರರ ನಿಷ್ಠೆಯೂ ಎಂದರೆ ದೃಢವಾದ ಜ್ಞಾನವು ತನಗುಂಟು ಎಂದು ತಿಳಿಯುವ ಬಗೆ ಹೇಗೆ ? ಎಂದು ಪ್ರಶ್ನಿಸಿ, ಈ ಮೂರಕ್ಕೂ ಉತ್ತರವನ್ನು ಹೇಳುವವರಾಗಿ, ಪ್ರಥಮತಃ ತನಗೆ ಸ್ವರೂಪ ನಿಷ್ಠೆ ಯುಂಟೆಂಬುವದನ್ನು ಪ್ರಥಮರಹಸ್ಯವಾದ ಮೂಲಮಂತ್ರಾಭಿಪ್ರಾಯವನ್ನನು ಸರಿಸಿ ಒಂದು ದೊಡ್ಡವಾಕ್ಯದ ಮೂಲಕ ತಿಳಿಸುತ್ತಾರೆ :---ಐದು ಕಾರಣಗಳಿಂದ ತನಗೆ ಸ್ವರೂಪ ನಿಷ್ಠೆಯುಂಟೆಂದು ತಿಳಿಯಬಹುದೆಂದು ಆ ಐದು ಕಾರಣಗಳಿಂದ ತನಗೆ ಐದು ಪ್ರಯೋಜನಗಳು ಪ್ರಾಪ್ತವಾಗುತ್ತವೆಂದು ಕ್ರಮಾಲಂಕಾರಪೂರ್ವಕ ವಾಗಿ ಉಪದೇಶಿಸುತ್ತಾರೆ. ಆ ಐದು ಕಾರಣಗಳು ಯಾವುವೆಂದರೆ---

(೧) **ಪರಪರಿಭವಾದಿಗಳಿಲ್ ವಿಷಾದಾಭಾವಮುಂ**, ಇತರರಿಂದುಂಟಾ ಗುವ ಅವಮಾನದಿಂದ ತನಗೆ ಶೋಕವಿಲ್ಲದಿರೋಣವೂ ; ಇದರಿಂದುಂಟಾಗುವ ಪ್ರಯೋಜನವು ತಾನು ಅಚಿತ್ತಿಗಿಂತಲೂ ವಿಲಕ್ಷಣವೆಂಬ ತಿಳುವಳಿಕೆಯು.

(೨) **ಪರಿಭವಾದಿಗಳ್ ಪಣ್ಣಿನ ಮತಿಗೇಡಕ್ಕೈಪ್ಪೂರ್ಕೆಕ್ಕೈಪುರಣ್ಡ ಕೃಪೈ ಯುಮ್**, ಹಾಗೆ ಅವಮಾನ ಪಡಿಸಿದವರ ವಿಷಯದಲ್ಲಿ ಮಿತಿಮೀರಿದ ಕೃಪೆಯೂ; ಇದರಿಂದುಂಟಾಗುವ ಪ್ರಯೋಜನವು— **ಸರ್ವಭೂತಾನುಕೂಲ್ಯಾದಿಗಳುಕ್ಕು ಯೋಗ್ಯಮಾನ ಜ್ಞಾನವು**. ಎಲ್ಲರಿಗೂ ತಾನು ಅನುಕೂಲನಾಗಿರಬೇಕೆಂಬ ಜ್ಞಾನವು.

(೩) **ಸ್ವದೋಷಜ್ಞತ್ತೈಮುರಪಾದಪಡಿ ಪಣ್ಣಿನಾರ್ಗಳ್ ಎಂಬ ಉಪ ಕಾರಸ್ಮೃತಿಯುಮ್** ತನ್ನ ದೋಷಗಳನ್ನು ಮರೆಯದ ಹಾಗೆ ಜ್ಞಾಪಕಕೊಡಲು ಈ ಪರಿಭವಗಳನ್ನುಂಟುಮಾಡಿದರೆಂಬ ಉಪಕಾರಸ್ಮೃತಿಯೂ ; ಇದರಿಂದುಂಟಾ ಗುವಪ್ರಯೋಜನ, **ಸರ್ವಶೋಮುಖಮಾನ ಆಕಿಂಚನ್ಯಂ** - ಎಲ್ಲಾ ಭಾಗ ದಲ್ಲೂ ಆಕಿಂಚನ್ಯವು.

(೪) ಕರ್ಮಾನುಗುಣವಾಗಿ ಈಶ್ವರ ಪ್ರೇರಿತರಾಗಿ ಈ ಪರಿಭವಗಳನ್ನು ಮಾಡುವರು ಎಂದು **ನಿರ್ವಿಕಾರಚಿತ್ತತೆಯು** ಎಂದರೆ ಮನಸ್ಸು ವಿಕಾರವನ್ನು ಹೊಂದದಿರೋಣವು , ಇದರಿಂದುಂಟಾಗುವ ಪ್ರಯೋಜನವು ಅನನ್ಯಾರ್ಹ ಶೇಷತ್ವ ಪಾರತಂತ್ರ್ಯಗಳು.

(೫) ಪ್ರಾರಬ್ಧಕರ್ಮಕಳಿಯುತ್ತದೆಂಬ ಸಂತೋಷವು, ಇದರಿಂದುಂಟಾಗುವ ಪ್ರಯೋಜನವು, ಸರ್ವೇಶ್ವರನ ಮೂಲಕವೇ ತನಗೆ ಹಿತಸಿದ್ಧಿಯು ಎಂಬ ಭಾವನೆಯು.

ಹೀಗೆ ಇವು ಐದು ತನಗೆ ಉಂಟಾಗಿ ಅವುಗಳ ಮೂಲಕ ಪ್ರಾಪ್ತವಾಗುವ

(೧) ಪರರಾಲೆ ಪರಿಭವಾದಿಗಳುಂಡಾಂಪೋದು ತನ್ ದೇಹಾದಿಗಳೈಪ್ಪಱ್ಱಿ ಪರಿಭಾವಕರ್ ಶೊಲ್ಲುಗಿರ ಕುತ್ತಙ್ಗಳ್, ತ್ರ ಸ್ವರೂಪತ್ತಿಲ್ ತಟ್ಟಾದ ಪಡಿ ಕಣ್ಡು ವಿಷಾದಾದಿಗಳ್ ಅಱ್ಱಿರುಕ್ಕೈಯುಮ್ (೨) "ಶಪ್ಯಮಾನಸ್ಯ ಯತ್ಪಾಪಂ ಶಪಂತ ಮಧಿಗಚ್ಛತಿ" ಎಙ್ಗಿರಪಡಿಯೇ ಪರಿಭವಾದಿಗಳಾಲೇ ತ್ರ ಪಾಪತ್ತೈ ವಾಙ್ಗಿಕ್ಕೊಳ್ಳುಗಿರ ಮತಿಗೇಡರೈಪ

ತಿಳುವಳಿಕೆಯೂ ಇವ್ವರೆ, ತನಗೆ ಸ್ವರೂಪ ನಿಷ್ಠಾಭಿಜ್ಞಾನ ಉಂಟೆಂದು ತಿಳಿಯಬಹುದೆಂಬುದುಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಪರರಾಲೆ ಪರಿಭವಾದಿಗಳ್ - ಇತರರಿಂದ ಅವಮಾನಗಳು, **ಉಂಡಾಂಪೋದು** - ಪ್ರಾಪ್ತವಾಗುವ ಸಂದರ್ಭಗಳಲ್ಲಿ, **ತ್ರ ದೇಹಾದಿಗಳೈಪ್ಪಱ್ಱಿ** ತನ್ನ ಶರೀರವೇ ಮೊದಲಾದವುಗಳನ್ನು ಕುರಿತು, ಮೊದಲಾದವು ಎಂಬುವದರಿಂದ ಈತನು ನಡೆಯುವ, ಮಾತಾಡುವ ಮೊದಲಾದ ರೀತಿಗಳು ಹೇಳಲ್ಪಟ್ಟವು, **ಪರಿಭಾವಕರ್** - ಅವಮಾನ ಮಾಡುವವರು, **ಶೊಲ್ಲುಗಿರಕುತ್ತಙ್ಗಳ್** - ಹೇಳುವ ದೋಷಗಳು **ತ್ರ ಸ್ವರೂಪತ್ತಿಲ್ ತಟ್ಟಾದಪಡಿ ಕಂಡು** - ತನ್ನ ಸ್ವರೂಪಕ್ಕೆ ಸಂಬಂಧಿಸಿವಲ್ಲನೆಂದು ತಿಳಿದು, **ವಿಷಾದಾದಿಗಳ್** - ಅದರಿಂದುಂಟಾಗುವ ದುಃಖವೇ ಮೊದಲಾದವುಗಳನ್ನು ಆದಿ ಶಬ್ದದಿಂದ ಕ್ರೋಧ ಮೊದಲಾದವುಗಳು ಹೇಳಲ್ಪಟ್ಟವು; **ಅಱ್ಱಿರುಕ್ಕೈಯುಮ್** – ತ್ಯಜಿಸಿರೋಣವೂ, **ನಡೈಯಾಡಿತ್ತಾಕಿಲ್**, ಇವ್ವಿದಾದರೆ ಎಂದು ಮುಂದೆ ಇರುವವರೊಂದಿಗೆ ಅನ್ವಯವು.

(೨) **ಶಪ್ಯಮಾನಸ್ಯ** – ನಿಂದಿಸಲ್ಪಟ್ಟವನ, **ಯತ್ಪಾಪಂ** - ಯಾವ ಪಾಪಗಳುಂಟೋ, ಅವು **ಶಪನ್ತಂ** – ನಿಂದಿಸುವವನನ್ನು, **ಅಧಿಗಚ್ಛತಿ** - ಹೊಂದುತ್ತವೆ, ಎಂದರೆ ಅನ್ಯಾಯವಾಗಿ ಬೈಯುವವನು ಬೈಸಿಕೊಂಡವನ ಪಾಪಕ್ಕೆ ಗುರಿಯಾಗಬೇಕಾಗುತ್ತದೆಂದು ಈ ಭಾರತ ವಾಕ್ಯವು ಬೋಧಿಸುತ್ತದೆ. ಗುರುಭಾವದಲ್ಲಿರುವವರು ಅಧರ್ಮಗಳನ್ನು ನಿಂದಿಸುವದು ನಿಂದೆಯಾಗುವದಿಲ್ಲವೆಂದು ತಿಳಿಯತಕ್ಕದ್ದು. **ಎಙ್ಗಿರಪಡಿಯೆ** - ಎಂದು ಹೇಳಿರುವ ಹಾಗೆ, **ಪರಿಭವಾದಿಗಳಾಲೆ** - ಇಂತಹ ಅವಮಾನ ಮೊದಲಾದವುಗಳಿಂದ, ಇಲ್ಲಿ ಆದಿಶಬ್ದದಿಂದ, ಚಾಡಿ ಹೇಳೋಣವೂ ದುರ್ಯಶಸ್ಸು ಹರಡುವ ಹಾಗೆ ಮಾಡೋಣವೇ ಮೊದಲಾದ ದೋಷಗಳು ಹೇಳಲ್ಪಟ್ಟವು, **ತ್ರ ಪಾಪತ್ತೈ ವಾಙ್ಗಿಕೊಳ್ಳುಗಿರ** - ತನ್ನ ಪಾಪವನ್ನು ಆ ನಿಂದೆ ಮೊದಲಾದವುಗಳಿಗೆ ಪ್ರತಿಫಲವಾಗಿ ಹೊಂದುವ, **ಮತಿಗೇಡರೈಪ್ಪತ್ತ** -

---

(೨) ಭಾರ. ಅಶಾ ೧೦೦.೬೪

೭೨ (೧) "ಬದ್ಧ ವೈರಾಣಿ ಭೂತಾನಿ ದ್ವೇಷಂ ಕುರ್ವಂತಿ ಚೇತ್ತತಃ। ಶೋಚ್ಯಾನ್ಯಹೋತಿ ಮೋಹೇನ ವ್ಯಾಪ್ತಾನೀತಿ ಮನೀಷಿಣಾ," "ಆತ್ಮ

ಬುದ್ಧಿಯಿಲ್ಲದವರನ್ನು ಕುರಿತು, ಇದಕ್ಕೆ "ಕರ್ತೈಪುರಂಡ ಕೃಪೈಯುಮ್"ಎಂಬುವದರೊಂದಿಗೆ ಅನ್ವಯವು ; ಇಂತಹ ಜ್ಞಾನ ಶೂನ್ಯತೆಯುಳ್ಳವರ ವಿಷಯದಲ್ಲಿ ಕೃಪಾಪ್ರವಾಹವಿರಬೇಕೆಂದು ಹೇಳುತ್ತಾರೆ ; ಹಾಗೆ ಅಂತಾವರಲ್ಲಿ ಪರಿಪೂರ್ಣಕೃಪೆಯಿರಬೇಕೆಂಬುವದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ. "**ಭೂತಾನಿ** - ಪ್ರಾಣಿಗಳು, **ಬದ್ಧವೈರಾಣಿ** ಪರಸ್ಪರ ಬೆಳೆಸಿದ ವೈರವುಳ್ಳವರಾಗಿ, **ದ್ವೇಷಂ ಕುರ್ವಂತಿ ಚೇತ್** - ತನ್ನಲ್ಲಾಗಲಿ ಅಥವಾ ಪರಸ್ಪರವಾಗಲಿ, ವಾಙ್ನಿಷ್ಠೂರಮೂಲಕವಾಗಲಿ ಅಪಯಶಸ್ಸು ಮೊದಲಾದವು ಉಂಟಾಗುವ ಹಾಗೆ ಮಾಡಿದರಾಗಲಿ ಎಂಬರ್ಥವು, **ತತಃ** - ಅನಂತರದಲ್ಲಿ, ಅಥವಾ ಅಜ್ಞಾನಮೂಲಕ ಹೀಗೆ ಪ್ರವರ್ತಿಸಿದನಂತರ, **ಅತಿಮೋಹೇನ ವ್ಯಾಪ್ತಾನಿ** - ಅತ್ಯಂತ ಅಜ್ಞಾನದಿಂದ ವ್ಯಾಪ್ತರಾಗಿ ಹೀಗೆ ಮಾಡಿದರು **ಅಹೋ** - ಅಯ್ಯೋ ಎಂದು, **ಮನೀಷಿಣಾ** - ವಿದ್ವಾಂಸನಿಂದ, **ಶೋಚ್ಯಾನಿ** - ಪರಿತಾಪಕ್ಕೆ ಅರ್ಹರು ಈ ಪ್ರಾಣಿಗಳು ದ್ವೇಷಭಾವದಿಂದ ತನ್ನನ್ನಾಗಲಿ ಇತರನ್ನಾಗಲಿ ದ್ವೇಷಿಸಿದರೂ ಅಯ್ಯೋ ಮಂದಬುದ್ಧಿಗಳಾಗಿ ವಿವೇಕ ಶೂನ್ಯರಾಗಿ ಇಂತಹ ಅಕೃತ್ಯಕ್ಕೆ ಗುರಿಯಾದರಲ್ಲಾ ಎಂಬ ಪರಿತಾಪದಿಂದ ಶೋಕಿಸತಕ್ಕ ವಿಷಯವೇ ವಿನಾ ಆಗ್ರಹ ಶಿಕ್ಷೆ ಮೊದಲಾದವುಗಳಿಗೆ ಅರ್ಹರೆಂದು ಭಾವಿಸಬಾರದೆಂಬ ಭಾವವು. ಅಂತಾವರ ವಿಷಯದಲ್ಲಿ ಪೂರ್ಣಕೃಪೆಯು ಈ ಪ್ರಪನ್ನನಿಗಿರಬೇಕೆಂದು ಹೇಳುತ್ತಾರೆ." ಅಂತಾವರಲ್ಲಿ ದಯೆಯನ್ನೇ ತೋರಿಸತಕ್ಕದ್ದೆನ್ನುವದಕ್ಕೆ ಇನ್ನೊಂದು ಪ್ರಮಾಣವನ್ನುದಾಹರಿಸುತ್ತಾರೆ. **ಆತ್ಮದ್ರುಹಂ** - ತನ್ನ ಆತ್ಮಾವಿಗೆ ತಾನೇ ದ್ರೋಹಿಯಾಗಿರುವ, ಅದು ಹೇಗೆಂದರೆ ಸರ್ವ ಆತ್ಮಗಳೂ ಜ್ಞಾನೈಕಾಕಾರತೆಯಿಂದಲೂ ಭಗವಚ್ಛೇಷತ್ವದಿಂದಲೂ ಸಮರಾದುದರಿಂದ ಅವರುಗಳ ವಿಷಯದಲ್ಲಿ ಪ್ರತಿಕೂಲನಾಗಿರಕೂಡದೆಂದು ತಿಳಿಯದೆ ಇಂತಹ ಪರಿಭವಾದಿಗಳಿಂದ ಭಗವನ್ನಿಗ್ರಹಕ್ಕೆ ವಶನಾಗಿ ತನ್ನ ಆತ್ಮನನ್ನು ನಾಶಮಾಡಿಕೊಳ್ಳುವನು, ಅಥವಾ ಅಂತಹ ನಿಂದೆ ದ್ವೇಷ ಮೊದಲಾದವುಗಳ ಮೂಲಕ ಇತರರ ಪಾಪವನ್ನು ವಹಿಸಿಕೊಳ್ಳುವ ಅನರ್ಥವನ್ನುಂಟುಮಾಡಿಕೊಳ್ಳುವನು ಎಂಬ ಭಾವವು ; **ಅಮರ್ಯಾದಂ**-ಶಾಸ್ತ್ರಮರ್ಯಾದೆಯನ್ನು ಮೀರಿದಂತಹ, **ಮೂಢಂ**-ಆದುದರಿಂದ ಸ್ವಸ್ವರೂಪಾದಿಗಳು ತಿಳಿಯದೆ

೧, ವಿ. ಪು. ೧-೧೭. ೮೩

ದ್ರುಹಮನುರ್ಮ್ಯಾದಂ ಮೂಢ ಮುಜ್ಝಿತ ಸತ್ಪಥಂ। ಸುತರಾ ಮನುಕಂಪೇತ ನರಕಾರ್ಚಿಷ್ಮದಿಂಧನಂ ॥ ಎಙ್ಗಿರಪಡಿಯೇ ಕರೈ ಪುರುಂಡ ಕೃಪೈಯುಂ ; (೩) "ಅಮರ್ಯಾದಃ ಕ್ಷುದ್ರಃ" ಎಙ್ಗಿರ ಶ್ಲೋಕತ್ತಾಲುಂ "ವಾಡಿನೇನ್ ವಾಡಿ" ಮುದಲಾನ ಆಳ್ವಾರ್ ಪಾಶುರಂಗಳಾಲುಂ ತನಕ್ಕನು ಸಂಧೇಯುಮಾಕ ಉದಾಹರಿತ್ತ ದೋಷಂಗಳೈ ಮರವಾದಪಡಿ ಪಣ್ಣಿನಾರ್‌ಗಳೆನ್ಗಿರ ಉಪಕಾರಸ್ಮೃತಿಯುಮ್,

---

ಅಜ್ಞಾನಾದ, ಉಜ್ಝಿತಸತ್ಪಥಂ - ಯಾವಾಗ ಅಜ್ಞನೋ, ಆಗ ಇದು ಸನ್ಮಾರ್ಗವೆಂದು ತಿಳಿಯುವೆ, ಅದನ್ನು ತ್ಯಜಿಸಿದ, **ನರಕಾರ್ಚಿಷ್ಮದಿಂಧನಂ, ನರಕಾರ್ಚಿಷ್ಮತ್** - ನರಕವೆಂಬ ಬೆಂಕಿಗೆ, **ಇಂಧನಂ** - ಕಟ್ಟಿಗೆ ರೂಪದಲ್ಲಿರುವ ಇಂಥಾವನನ್ನು, **ಸುತರಾಂ** - ವಿಶೇಷವಾಗಿ, **ಅನುಕಂಪೇತ** - ದಯೆಮಾಡತಕ್ಕದ್ದು, ಸುತರಾಂ ಅನುಕಂಪೇತ ಎಂದು ಹೇಳಿರುವವರಿಂದ ಎಂದಿಗೂ ಅಂತವನ ವಿಷಯದಲ್ಲಿ ಕೋಪಮಾಡಕೂಡದೆಂಬುವದು ದ್ಯೋತಿತವು. **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಕರೈಪುರಂಡ** - ಮಿತಿಮೀರಿಪ್ರವಹಿಸುವ ಎಂದರೆ ನಿರವಧಿಕವಾದ, **ಕೃಪೈಯುಮ್** - ದಯೆಯೂ ; ಮುಂದೆ **ನಡೆಯಾಡಿತ್ತಾಗಿಲ್** - ಇದ್ದುದೇಯಾದರೆ ಎಂಬುವದರೊಂದಿಗೆ ಇವಕ್ಕೆ ಅನ್ವಯವು,

(೩) "ಅಮರ್ಯಾದಃ ಕ್ಷುದ್ರಃ" ಎಂಬ **ಶ್ಲೋಕತ್ತಾಲುಮ್** - ಶ್ಲೋಕಮೂಲಕವಾಗಿಯೂ, "ವಾಡಿನೇನ್ ವಾಡಿ" ಎಂಬ **ಮುದಲಾನ** - ಮೊದಲಾದ **ಆಳ್ವಾರ್‌ಪಾಶುರಂಗಳಾಲುಮ್** - ಆಳ್ವಾರುಗಳ ಪಾಶುರಗಳಿಂದಲೂ, **ತನಕ್ಕನು ಸಂಧೇಯುಮಾಗ ಉದಾಹರಿತ್ತ** - ತನ್ನಲ್ಲಿರುವವಾಗಿ ತಿಳಿಯತಕ್ಕದ್ದೆಂದು ಹೇಳಲ್ಪಟ್ಟ, **ದೋಷಙ್ಗಳೈ** - ದೋಷಗಳನ್ನು, **ಪರಿವಾದಾದಿಗಳಾಲೆ**-ನಿಂದೆ ಮೊದಲಾದವುಗಳ ಮೂಲಕವಾಗಿ, **ಮರವಾದಪಡಿ** - ಮರೆಯುವ ಹಾಗೆ **ಪಣ್ಣಿನಾರ್‌ಗಳ್** - ಮಾಡಿದರು, **ಎಙ್ಗಿರ** - ಎನ್ನುವ **ಉಪಕಾರಸ್ಮೃತಿಯುಮ್** - ಉಪಕಾರ ಮಾಡಿದರೆಂಬ ಸ್ಮರಣೆಯೂ, ಇದಕ್ಕೂ **ನಡೆಯಾಡಿತ್ತಾಗಿಲ್** - ಇದ್ದುದೇಯಾದರೆ ಎಂಬುವದರೊಂದಿಗೆ ಅನ್ವಯವು. ಶ್ರೀಯಾಮುನೇಯರವರು ಅಮರ್ಯಾದಃಕ್ಷುದ್ರಃ ಎಂಬ ಶ್ಲೋಕದಲ್ಲೂ ಶ್ರೀ ತಿರುಮಙ್ಗೈಯಾಳ್ವಾರ್‌ರವರು "ವಾಡಿನೇನ್" (ಪೆ. ತಿ. ೧.೧.೧.) ಎಂಬ ಪಾಶುರದಲ್ಲೂ ತಾವು

ಅನೇಕದೋಷಗಳಿಗೆ ಆಕರರೆಂದು ಹೇಳಿಕೊಂಡಿರುತ್ತಾರೆ. ಯಾರಾದರೂ ತಮ್ಮನ್ನು ನಿಂದಿಸಿ ಅವಮಾನಪಡಿಸಿದುದಾದರೆ, ಅಂತಹ ನಿಂದೆ ಅವಮಾನಗಳಿಂದ ತಮ್ಮಲ್ಲಿರುವ ದೋಷಗಳನ್ನು ಜ್ಞಾಪಕಕ್ಕೆ ಕೊಟ್ಟದುದರಿಂದ ಅವರ ವಿಷಯದಲ್ಲಿ ಉಪಕಾರಸ್ಮರಣೆ ಇರಬೇಕೆಂದುಪದೇಶಿಸಿರುತ್ತಾರೆ. ಸಾಧಾರಣರಾದ ಪಾಮರರು **"ಪಶ್ಯತಿ ಪಶ್ಯತಿ ಪರದೋಷಾನ್ನಾತ್ಮದೋಷಾನ್ನಪಶ್ಯತಿ"** ಎಂದು ಹೇಳಿರುವ ಹಾಗೆ ಇತರರ ದೋಷವನ್ನು ನೋಡುವರೇ ವಿನಾ, ಅವರಿಗೆ ತಮ್ಮ ಸ್ವಂತ ದೋಷಗಳು ಕಣ್ಣಿಗೆ ಬೀಳುವದಿಲ್ಲವು. ಆದರೆ ಇತರರು ದೋಷಾರೋಪಣೆ ಮಾಡಿದರೆ, ತನ್ನಲ್ಲಿ ಅಂತಹ ದೋಷಗಳುಂಟೋ ಏನೋ, ಅದನ್ನು ತೋರಿಸಿ ಕೊಟ್ಟರು, ಆದುದರಿಂದ ಅವರುಗಳ ವಿಷಯವಲ್ಲಿ ಈತನಿಗೆ ಉಪಕಾರಸ್ಮೃತಿ ಯಿರಬೇಕೆಂದು ಹೇಳುತ್ತಾರೆ. ಹಾಗೆಯೇ,

"ರಾಜನ್ ಸರ್ಷಪ ಮಾತ್ರಾಣಿ ಪರಚ್ಛಿದ್ರಾಣಿ ಪಶ್ಯಸಿ ।
ಆತ್ಮನೋ! ಮೇರು ಮಾತ್ರಾಣಿ ಪಶ್ಯನ್ನಪಿ ನ ಪಶ್ಯಸಿ" ಎಂದು ಹೇಳಿರುವ ಮೇರಿಗೆ, ಇತರರ ದೋಷಗಳು ಸಾಸಿವೆಕಾಳಿನಷ್ಟು ಇದ್ದರೂ ಚೆನ್ನಾಗಿ ಕಣ್ಣಿಗೆ ಬೀಳುತ್ತವೆ, ತನ್ನ ದೋಷಗಳಾದರೋ ಮೇರುಪರ್ವತದ ಹಾಗೆ ದೊಡ್ಡವಾಗಿ ಕಾಣಬರುತ್ತಿದ್ದರೂ ತನ್ನ ಕಣ್ಣುಗಳಿಗೆ ಬೀಳುವದಿಲ್ಲವು ಎಂದೂ,

ವಿಪರೀತ ಮಿದಂ ಸ್ವಸ್ಮಿನ್ ಮಹಿಮಾನೋಹಾಂಜನ ಸ್ಯೇಷಃ ।
ಪಶ್ಯತಿ ಪರೇಷು ದೋಷಾ ನ ಸತೋಽಪಿ ಜನ ಸ್ಸತೋಽಪಿ ನೈವ ಗುಣಾನ್"

"ಆತ್ಮಾಭಿಮಾನರೂಪಮೋಹವೆಂಬ ಅಂಜನವು ತುಂಬಾ ವಿಪರೀತವಾಗಿ ಪರಿಣಮಿಸುತ್ತದೆ. ಇತರರಲ್ಲಿ ದೋಷವಿಲ್ಲದಿದ್ದರೂ ದೋಷವು ಕಣ್ಣಿಗೆ ಬೀಳುತ್ತದೆ, ಒಳ್ಳೆ ಗುಣಗಳಿದ್ದರೂ ಕೂಡ ಕಣ್ಣಿಗೆ ಕಾಣುವುದಿಲ್ಲವು" ಎಂದೂ ಹೇಳಲ್ಪಟ್ಟವೆ ಪ್ರಪನ್ನನಿಗಾದರೋ ಹಾಗಲ್ಲದೆ ಇತರರಲ್ಲಿ ದೋಷವನ್ನೆಣಿಸದೆ ತನ್ನ ವಿಷಯದಲ್ಲೆ ನೈಚ್ಯಾನುಸಂಧಾನದಿಂದ, ಇತರರು ನಿಂದಿಸಿದರೆ ತನ್ನಲ್ಲಿರುವ ದೋಷಗಳನ್ನು ಜ್ಞಾಪಕಕ್ಕೆ ತಂದುಕೊಟ್ಟರೆಂದೂ, ಅಂತಹ ದೋಷಗಳಿಂದ ನಿವೃತ್ತಿಯನ್ನು ಹೊಂದಲು ಅವಕಾಶವನ್ನು ಕೊಟ್ಟರೆಂದೂ, ಉಪಕಾರಸ್ಮೃತಿಯಿರಬೇಕೆಂದು ಹೇಳುತ್ತಾರೆ. "ಅಮರ್ಯಾದಃ ಎಂಬುವ ಶ್ಲೋಕವು ಯಾವುದೆಂದರೆ :—

ಅಮರ್ಯಾದಃ ಕ್ಷುದ್ರಶ್ಚಲಮತಿ ರಸೂಯಾ ಪ್ರಸವ ಭೂಃ
ಕೃತಘ್ನೋ ದುರ್ಮಾನೀ ಸ್ಮರಪರವಶೋ ವಂಚನ ಪರಃ ।
ನೃಶಂಸಃ ಪಾಪಿಷ್ಠಃ ಕಥ ಮಹ ಮಿತೋ ದುಃಖ ಜಲಧೇ
ರಪಾರಾದುತ್ತೀರ್ಣಸ್ತವ ಪರಿಚರೇಯಂ ಚರಣಯೋಃ ॥ ೬೨ ॥

ಎಂಬುವದು ಶ್ರೀಯಾಮುನೇಯರವರ ಪೂರಾ ಶ್ಲೋಕವು ಅಮರ್ಯಾದಃ ಶ್ರುತಿ

ಸ್ಮೃತಿಗಳ ಆಜ್ಞಾರೂಪ ಎಲ್ಲೆಯನ್ನು ಅತಿಕ್ರಮಿಸಿದವನು ; **ಕ್ಷುದ್ರಃ** - ಸ್ವಾಮಿಯನ್ನು ಹೊಂದುವ ಉಪಾಯವಾದ ಯೋಗವನ್ನವಲಂಬಿಸುವದಕ್ಕೆ ಶಕ್ತಿಯಿಲ್ಲದೆ ಐಹಿಕ ಪುರುಷಾರ್ಥಗಳಲ್ಲಿ ಅಭಿಲಾಷೆಯುಳ್ಳವನು, **ಚಲಮತಿಃ** - ಅದೇಕೆಂದರೆ ಶಾಸ್ತ್ರದಲ್ಲಿ ಪ್ರತಿಷ್ಠಿತವಾಗದೇ ಇರುವ ಸ್ಥಿರವಲ್ಲದೇ ಇರುವ ಬುದ್ಧಿಯುಳ್ಳವನು, **ಅಸೂಯಾಪ್ರಸವಭೂಃ** - ಅಸೂಯೆ ಎಂದರೆ ಗುಣದಲ್ಲೂ ದೋಷಾರೋಪಣೆಯು, ಅದಕ್ಕೆ ತೌರುಮನೆಯಾಗಿರುವವನು ; **ಕೃತಘ್ನಃ** - ಉಪಕಾರವನ್ನು ಸ್ಮರಿಸದೆ ಅಪಕಾರವನ್ನು ಮಾಡುವವನು, **ದುರ್ಮಾನೀ** - ದುರಹಂಕಾರವನ್ನು ಹೊಂದಿರುವವನು, ಶಿಶುಪಾಲನ ಹಾಗೆ ತಾನು ನಿಕೃಷ್ಟನಾದರೂ ಉತ್ಕೃಷ್ಟನೆಂದು ಭಾವಿಸಿಕೊಳ್ಳುವವನು, **ಸ್ಮರಪರವಶಃ** - ಧರ್ಮವಿರುದ್ಧವಾದ ಕಾಮೋಪಭೋಗಗಳಿಗೆ ವಶನಾಗಿರುವವನು, **ವಂಚನ ಪರಃ** - ಇತರರ ದ್ರವ್ಯಾದಿಗಳ ಅಪಹಾರದಲ್ಲಿ ಹೇಗೋ ಹಾಗೆ ಸರ್ವಜ್ಞನಾದ ಸರ್ವೇಶ್ವರನನ್ನೂ ಕೂಡ ವಂಚಿಸುವನು, **ನೃಶಂಸಃ** - ಕ್ರೂರ ಕರ್ಮಿಯು, **ಪಾಪಿಷ್ಠಃ** - ಪಾಪಗಳನ್ನು ಮಾಡುವದರಲ್ಲಿ ಆಸಕ್ತನು, ಇಂತಹ **ಅಹಂ** - ನಾನು, **ಇತಃ** - ಉತ್ಪಟ್ಟಿಗಳಿಂದ ಕೂಡಿ ಬೆಂಕಿಯ ತಾಪದ ಮಧ್ಯೆ ಇರುವ ಹಾಗೆ ತೋರುತ್ತಿರುವ ಈ ಲೋಕದಿಂದ ಆದುದರಿಂದಲೇ **ಅಪಾರಾತ್ ದುಃಖಜಲಧೇಃ** ಅಪಾರವಾದ ದುಃಖಸಾಗರದಿಂದ **ಕಥಂ ಉತ್ತೀರ್ಣಃ** - ಹೇಗೆ ದಾಟಿದವನಾಗಿ, **ತವ ಚರಣಯೋಃ** - ನಿನ್ನ ಪಾದಗಳಲ್ಲಿ, **ಪರಿಚರೇಯಂ** - ಕೈಂಕರ್ಯವನ್ನೆಸಗುವೆನು ? ಇಷ್ಟು ಹೇಯಗುಣಗಳಿಂದ ಪರಿಪೂರ್ಣನಾಗಿರುವವನು ಹೇಗೆ ಈ ಪ್ರಾಕೃತ ಶರೀರವನ್ನು ತೊರೆದ ಅಪ್ರಾಕೃತ ದಿವ್ಯಮಂಗಳ ವಿಗ್ರಹಯುಕ್ತನಾಗಿ ಪರಮಪದದಲ್ಲಿ ನಿನ್ನ ಕೈಂಕರ್ಯಗಳನ್ನೆಸಗುವ ನಿರತಿಶಯ ಶ್ರೇಯಸ್ಸನ್ನು ಹೊಂದುವೆನು ? ಎಂಬ ತಾತ್ಪರ್ಯವು.

"**ವಾಡಿನೇನ್**" ಎಂಬ ಪಾಶುರವು ಯಾವುದೆಂದರೆ :—

ವಾಡಿನೇನ್ ವಾಡಿ ವರುನ್ದಿನೇನ್ ಮನತ್ತಾಲ್ ಪೆರುನ್ದುಯರಿಡು
ಮ್ಬೈಯಿಲ್ ಪಿರನ್ದುಕೂಡಿನೇನ್, ಕೂಡಿ ಯಿಳೈಯವರ್ ದನೊ
ಡವರ್ ದರುಮ್ ಕಲುವಿಯೇ ಕರುದಿ ! ಓಡಿನೇನ್ ನೋಡಿಯುಯ್ಯ
ವದೋರ್ ಪೊರುಳಾ ಉಣರ್ವೆನುಮ್ ಪೆರುಮ್‌ದ ನಾಡಿನೇನ್
ನಾಡಿನಾನ್ ಕಣ್ಡುಕೊಣ್ಡೇನ್ ನಾರಾಯಣವೆನ್ನುಮ್ ನಾಮ್.

ಇದರರ್ಥವು :—**ಪೆರನ್ದುಯರ್** - ಮಹತ್ತಾದ ದುಃಖಗಳಿಗೆ ಹೇತುಭೂತರಾದ, **ಇಡುಮ್ಬೈಯಿಲ್** - ಕರ್ಮಾವಿದ್ಯಾದಿ ಚಕ್ರಗಳಿಗೆ ಕಾರಣವಾದ ಶರೀರಗಳಲ್ಲಿ, **ಪಿರನ್ದು**-ಜನ್ಮಗಳನ್ನೆತ್ತಿ, **ಕೂಡಿನೇನ್**-ನಾನು ಬೇರೆ ಶರೀರ ಬೇರೆ ಎಂಬ ಭಾವವಿಲ್ಲದೆ ಅದರೊಂದಿಗೆ ಅನಾದಿಯಾಗಿ ಸೇರಿಕೊಂಡೆನು. **ಕೂಡಿ**-ಹೀಗೆ ಬಹುಕಾಲದಿಂದ ಈ ಪ್ರಕೃತಿಸಂಬಂಧವನ್ನು ಹೊಂದಿದವನಾಗಿ, ಈ ಪ್ರಕೃತಿಸಂಬಂಧದಿಂದ ಅನರ್ಥ

(೪) ಆತ್ಮಾಕ್ಕಳುಕ್ಕೆಲ್ಲಾಂ ಸ್ವರೂಪಾನು ಬಂಧಿಯಾನ ಭಗವತ್ಪಾರತಂತ್ರತ್ತೈಯುಮ್. ಕ್ಷೇತ್ರಜ್ಞರೆಲ್ಲಾರುಮ್ ಕರ್ಮವಶ್ಯರಾಯಿರುಕ್ಕಿರ

ವೂ ಪ್ರಯೋಜನವೂ ಉಂಟು, ಮೊದಲು ಅನರ್ಥವೇನೆಂಬುವದನ್ನು ತಿಳಿಸುತ್ತಾರೆ, ಇಳೈಯವರ್-ಯವ್ವನ ಸ್ತ್ರೀಯರು ಶೆರುಮ್‌ಕಲುವಿಯೇ-ಕೊಡುವ ಸಂಶ್ಲೇಷವನ್ನೇ ಕರುದಿ - ಸ್ಮರಿಸಿಕೊಂಡು, ಅವರ್‌ತನ್ನೋಡು:-ಆ ಯುವತಿಯರನ್ನೇ ಹಿಂಬಾಲಿಸಿ, ಓಡಿನೇನ್-ಛಾಯೆಯು ಹಾಗೆ ಹಿಂದೆಯೇ ನಾಚಿಗೆ ಇಲ್ಲದೆ ಓಡಿಹೋದೆನು,ಅವರ ಕೋಪನಿಂದೆಗಳಿಗೂ ಕೂಡ ಮನಗೊಡದೆ, ಅವರನ್ನೇ ಅನುವರ್ತಿಸಿಕೊಂಡು ಹೋದೆನು. ಓಡಿ - ಹೀಗೆ ನೀಚ ವಿಷಯಸುಖಗಳಿಗೆ ಮನಕೊಟ್ಟು ಅದಕ್ಕಾಗಿ ತೊಳಲಿ ಬಳಲಿ ಮನತ್ತಾಲ್ - ಆ ವಿಷಯ ಸುಖಗಳಲ್ಲೇ ಸಕ್ತವಾಗಿ, ತದೇಕಧ್ಯಾನವುಳ್ಳ ಮನಸ್ಸಿನಿಂದ, ವರುನ್ದಿನೇನ್ - ನಾನಾವಿಧವಾದ ಕ್ಲೇಶಗಳನ್ನನುಭವಿಸಿದೆನು. ಹೀಗೆ ನಾನಾಪ್ರಕಾರವಾಗಿ ವಿಷಯಾಸಕ್ತನಾಗಿ, ನಾಡಿನೇನ್ - ಆಶ್ರಯಹೀನವಾದ ಲತೆಯು ಹೇಗೆ ಬಾಡಿಹೋಗುತ್ತದೋ ಹಾಗೆ ಮ್ಲಾನತೆಯನ್ನು ಹೊಂದಿದೆನು. ಇನ್ನು ಮುಂದೆ ಈ ಕರಣಕಳೇಬರಯೋಗದಿಂದುಂಟಾದ ಮಹತ್ತಾದ ಉಪಕಾರವೇನೆಂಬುವದನ್ನು ತಿಳಿಸುತ್ತಾರೆ. ನಾಡಿ-ಹೀಗೆ ಸರ್ವವಿಧ ಕ್ಲೇಶಗಳಿಂದ ಬಾಡಿದವನಾಗಿ, ಉಯ್ವದು - ಉಜ್ಜೀವನೆಗೆ ಕಾರಣಭೂತವಾದ, ಓರ್‌ಪೋರುಗಳಾಲೆ - ಅದ್ವಿತೀಯವಾದ ಸರ್ವೇಶ್ವರನ ಕೃಪೆಯಿಂದ, ಉಣರ್ನ್ದು ಎನ್ನುಮ್ - ಜ್ಞಾನವೆಂಬುವ, ಪೆರುಂಪದಂ- ಮಹತ್ತಾದ ಸ್ಥಾನವನ್ನು, ಸಾಡಿನೇನ್ ಭಾಗವತ ಕೃಪೆಯಿಂದ ಐಹಿಕವೆಲ್ಲಾ ತುಚ್ಛವೆಂದೂ ಆತ್ಮಹಿತ ಪುರುಷಾರ್ಥಗಳು ಸರ್ವೋತ್ಕೃಷ್ಟವೆಂದೂ, ವಿವೇಕ ಜ್ಞಾನವನ್ನು ಹೊಂದಿದೆನು. ನಾಡಿ - ಹೀಗೆ ವಿವೇಕ ಜ್ಞಾನ ಹೊಂದಿ, ನಾನ್ - ಪ್ರಕೃತಿಸಂಬಂಧವಾದ ಭೋಗಗಳಲ್ಲೇ ಸಕ್ತವಾದ ಮನಸ್ಸುಳ್ಳ ನಾನು, ನಾರಾಯಣಾ ಎನ್ನುನಾಮಂ ಶ್ರೀಮನ್ನಾರಾಯಣನೆಂಬ ಹೆಸರನ್ನು, ಕಂಡುಕೊಂಡೇನ್ - ಬಹುವ್ರೀಹಿ ತತ್ಪುರುಷಾರ್ಥಗಳಿಂದ ತೋರಿಬರುವ ಸರ್ವೇಶ್ವರನನಾಮವೆಂದೂ, ಆತನೇ ಉಪಾಯೋಪೇಯವೆಂದೂ ಬೋಧಿಸುವ ನಾಮವೆಂದೂ ಆತನೇ ಪರಮಪುರುಷಾರ್ಥದಾಯಕನೆಂದುಪದೇಶಿಸುವ ನಾಮವೆಂದೂ ಆತನಿಗೇನೇ ಸರ್ವವಿಧ ಕೈಂಕರ್ಯಗಳನ್ನು ಮಾಡುವದೇ ತನಗೆ ಸ್ವರೂಪವೆಂದು ಸೂಚಿಸುವ ನಾಮವೆಂದು ನಾರಾಯಣಾ ವಾಕ್ಯದಲ್ಲಿ ಹೊಗಳಲ್ಪಟ್ಟ ನಾಮವೆಂದೂ ಅಜಾಮಿಳನಿಗೆ ಮೋಕ್ಷಕೊಟ್ಟ ನಾಮವೆಂದೂ ತಿಳಿದುಕೊಂಡೆನು.

(೪) ಆತ್ಮಾಕ್ಕಳುಕ್ಕೆಲ್ಲಾಂ - ನಿತ್ಯ, ಮುಕ್ತ, ಬದ್ಧರಾದ ತ್ರಿವಿಧ ಚೇತನರುಗಳೆಲ್ಲರಿಗೂ, ಸ್ವರೂಪಾನುಬಂಧಿಯಾನ "ದಾಸಭೂತಾಸ್ಸ್ವತ ಸರ್ವೇ"

ನಿಲ್ಶೈಯ್ಯೈಯುಮ್, ಪಾರ್ತ್ತು ನಮುಕ್ಕುಮ್ ನಮ್ಮುಳನಿಲ್ ಪರಿಭವಾದಿಗಳ್ ಪಣ್ಣುಗಿರ ಚೇತನರುಕ್ಕು ಮುಳ್ಳ ಕರ್ಮಾನುಗುಣಮಾಗ ಇನ್ಸ್ಪುರುಮಿನ್ವಿಳೈಯಾಟ್ಟುಡೈಯನಾನ ಸ್ವತಂತ್ರ ಶೇಷಿಯಾಲೆ ಪ್ರೇರಿತರಾಯವರ್ಗಳ್ ಪರಿಭವಾದಿಗಳ್ ಪಣ್ಣುಗಿರಾರ್ಗಳೆನ್ರು ಅವರ್ಗಳ್ ಪಕ್ಕಲ್ ನಿರ್ವಿಕಾರ ಚಿತ್ತತ್ತೈಯುಮ್,

---

ಎಂದೂ, "ಈಶ ನೀಶಾ" (ಶ್ವೇ ೧೯) ಎಂದೂ ಹೇಳಿರುವ ಹಾಗೆ ಸರ್ವೇಶ್ವರನಿಗೆ ಶೇಷಭೂತನಾಗಿರುವ ಮತ್ತೂ "ಅನೀಶಯಾ ಶೋಚತಿ ಮುಹ್ಯಮಾನಃ (ಮುಂ ೩.೧.೨) ಎಂದು ಹೇಳಿರುವ ಹಾಗೆ ಪ್ರಕೃತಿಗೆ ವಶನಾಗಿರುವ ಸ್ವರೂಪಕ್ಕೆ ಸಂಬಂಧಿಸಿದ, ಭವಗತ್ಪಾರತಂತ್ರ್ಯತ್ತೈಯುಮ್ ಭಗವಂತನಿಗೆ ಪರವಶನಾಗಿರುವಿಕೆಯನ್ನೂ, **ಕ್ಷೇತ್ರಜ್ಞರೆಲ್ಲಾರುಮ್** - ಬದ್ಧಜೀವರುಗಳಾದ ನಿಂದಿಸಿದವನೂ ನಿಂದಿಸಲ್ಪಟ್ಟವನೂ ಸೇರಿ ಎಲ್ಲರೂ, **ಕರ್ಮವಶ್ಯರಾಯಿರುಕ್ಕಿರ** - ಕರ್ಮಕ್ಕೆ ವಶರಾಗಿ ಕರ್ಮಫಲಗಳನ್ನನುಭವಿಸುವ, **ನಿಲ್ಶೈಯುಂ** - ಸ್ಥಿತಿಯನ್ನೂ, **ಪಾರ್ತು** - ಕಂಡು, **ನಮುಕ್ಕುಮ್** - ನನಗೂ, ಮತ್ತು, **ನಮ್ಮುಳವಿಲ್ ಪರಿಭವಾದಿಗಳ್ ಪಣ್ಣುಗಿರಚೇತನರುಕ್ಕುಮುಳ್ಳ**-ನನ್ನ ವಿಷಯದಲ್ಲಿ ಅವಮಾನ ನಿಂದೆ ಮೊದಲಾದವುಗಳನ್ನು ಮಾಡುವ ಚೇತನರಿಗೂ ಸಹ ಇರುವ **ಕರ್ಮಾನುಗುಣಮಾಗ** - ನನ್ನ ಮತ್ತು ಆ ಚೇತನರ ಕರ್ಮಗಳಿಗನುಸಾರವಾಗಿ, **ಇನ್ಸ್ಪುರುಮ್** - ಆನಂದಾನುಭವಾರ್ಥವಾಗಿ, **ಇನ್ವಿಳೈಯಾಟ್ಟುಡೈಯನಾನ** - ಈ ವಿಧವಾದ ಲೀಲೆಯನ್ನು ಹೊಂದಿರುವ, **ಸ್ವತಂತ್ರಶೇಷಿಯಾಲೆ** - ಸ್ವತಂತ್ರನಾದ ಸರ್ವಶೇಷಿಯ ಮೂಲಕ, **ಪ್ರೇರಿತರಾಯ್** - ಪ್ರೇರಿಸಲ್ಪಟ್ಟವರಾಗಿ, **ಅವರ್ಗಳ್** - ಚೇತನರು, **ಪರಿಭವಾದಿಗಳ್** - ಅವಮಾನ ನಿಂದೆ ಮೊದಲಾದವುಗಳನ್ನು, **ಪಣ್ಣುಗಿರಾರ್ಗಳೆನ್ರು** - ಮಾಡುತ್ತಾರೆಂದು ಭಾವಿಸಿ **ಅವರ್ಗಳ್ಪಕ್ಕಲ್** - ಅವರುಗಳ ವಿಷಯದಲ್ಲಿ, **ನಿರ್ವಿಕಾರ ಚಿತ್ತತ್ತೈಯುಮ್** - ಅಂತಹ ಪರಿಭವಾದಿಗಳಿಂದ ವಿಕಾರವನ್ನು ಹೊಂದದೇ ಇರುವ ಮನಸ್ಸೂ, ಇವಕ್ಕೂ **ನಣ್ಣೈಯಾಡಿತ್ತಾಗಿಲ್** - ಇದ್ದುದೇಯಾದರೆ ಎಂಬುವದರೊಂದಿಗೆ ಅನ್ವಯವು. ಈ ಚೇತನರೆಲ್ಲರೂ ಭಗವಂತನಿಗೆ ಶೇಷಭೂತರಾಗಿರುವದರಿಂದ ಆತನಿಗೆ ಅಧೀನರಾಗಿ ಪರತಂತ್ರರು. ಇದು ಸ್ವರೂಪತಃ ಎಲ್ಲಾ ಚೇತನರಿಗೂ ಸಿದ್ಧವಾದುದು. ಹೀಗಿರುವದರಿಂದ ಇತರರ ಮೂಲಕ ಈ ಪ್ರಪನ್ನನಿಗೆ ಪರಿಭವಾದಿಗಳುಂಟಾಗುತ್ತದೆ ಎಂದೂ, ಇದನ್ನುಂಟುಮಾಡುವವನು ಸ್ವತಂತ್ರನಾದ ಸರ್ವೇಶ್ವರನೆಂದೂ ಸರ್ವೇಶ್ವರನು ತನ್ನ ಮನಸ್ಸು ಬಂದ ಹಾಗೆ ಮಾಡುವನೆಂಬರೆ

(೫) ಪ್ರಾರಬ್ಧ ಪಾಪ ವಿಶೇಷವ್ ಶಿಷ್ಟೈಯುರುಕ್ಕಿರದೆಙ್ಙ ರ ಸಂತೋಷಮುಮ್, ನಡೈಯಾಡಿತ್ತಾಗಿಲ್, ಪ್ರಥಮ ಮಧ್ಯಮ ಪದಂಗಳಿಲೆ

ಆತನಿಗೆ ವೈಷಮ್ಯನೈರ್ಘೃಣ್ಯಾದಿ ದೋಷಗಳು ಪ್ರಾಪ್ತವಾಗುತ್ತವೆ. ಆದರೆ ಸರ್ವೇಶ್ವರನು ಅನುಗ್ರಹಿಸುವದೂ, ಶಾಸ್ತಾವಾಗಿ ದಂಡಿಸುವದೂ ಅವರವರುಗಳ ಕರ್ಮಾನುಸಾರವಾದುದರಿಂದ ಅಂತಹ ದೋಷಗಳಿಗೆ ಕಾರಣವಿಲ್ಲವೆಂದುಪದೇಶಿಸುವದಕ್ಕಾಗಿಯೇ, "**ಕ್ಷೇತ್ರಜ್ಞರೆಲ್ಲಾರುಮ್ ಕರ್ಮವಶ್ಯರಾಯಿರುಕ್ಕಿರ ನಿಲ್ಯೈಯುಮ್ ಪಾರ್ತು**" ಎಂದು ಪ್ರಯೋಗಿಸಿರುತ್ತಾರೆ. ನಿಂದಿಸುವವನು ತನ್ನ ಕರ್ಮಾನುಸಾರ ನಿಂದಿಸಿ ಇತರರ ಪಾಪಗಳನ್ನು ತಾನು ತೆಗದುಕೊಳ್ಳುತ್ತಾನೆ. ನಿಂದಿಸಲ್ಪಟ್ಟವನು ತನ್ನ ಪ್ರಾರಬ್ಧಾನುಗುಣವಾಗಿ ಆತನ ಮೂಲಕ ಅವಮಾನವನ್ನು ಹೊಂದುವನು. ಹೀಗೆಲ್ಲಾ ಮಾಡಿಸುವ ಪ್ರೇರಕನು ಶ್ರಿಯಃಪತಿಯು. ಆತನು ಸ್ವತಂತ್ರನಾದರೂ ಇವರುಗಳ ಈ ಕರ್ಮಾನುಗುಣವಾಗಿ ಇವನ್ನೆಲ್ಲಾ ಮಾಡಿಸುತ್ತಾನೆ ಹಾಗೆ ಮಾಡುವದರಲ್ಲಿ ಸರ್ವೇಶ್ವರನಿಗೇನಾದರೂ ಪ್ರಯೋಜನ ಉಂಟೋ? ಎಂದರೆ ಆತನಿಗೆ ಇದೆಲ್ಲಾ, ಲೀಲೆಯಾಗಿ, ಅದೇ ಅವನಿಗೆ ಪ್ರಯೋಜನವೆಂಬ ಭಾವವು. ಸೃಷ್ಟಿಕ್ರಮ, ಸ್ಥಿತಿ ಲಯ ಮೊದಲಾದವುಗಳೆಲ್ಲಾ ಸರ್ವೇಶ್ವರನಿಗೆ ಲೀಲೆ ಎಂಬ ಉಪಪಾದನಕ್ಕೆ ದಾಸನು ಬರೆದ ಶ್ರೀ ಸ್ತುತಿಯ ೫೭-೫೮ನೆಯ ಪುಟಗಳನ್ನು ಪರಾಂಬರಿಸಬಹುದು. ಹೀಗೆ ನಮ್ಮನ್ನು ನಿಂದಿಸುವವನು ಆತನ ಕರ್ಮಾನು ಗುಣವಾಗಿ ಸರ್ವೇಶ್ವರನಿಂದ ಪ್ರೇರಿತನಾಗಿ ನಡಿಸುವನು. ಹಾಗೆಯೇ ನಾವುಗಳು ಸರ್ವೇಶ್ವರನಿಗೆ ಅಧೀನವಾಗಿರುವದರಿಂದ ನಮ್ಮ ಪ್ರಾರಬ್ಧಾನುಗುಣವಾಗಿ ಅವರುಗಳು ನಮ್ಮನ್ನು ನಿಂದಿಸುವ ಹಾಗೆ ಮಾಡುವನು. ಹೀಗೆ ಸಂಪೂರ್ಣ ಪಾರತಂತ್ರ್ಯವಿರುವದರಿಂದ ಅಂತಹ ಸಂದರ್ಭದಲ್ಲಿ ನಮ್ಮ ಮನಸ್ಸು ಕ್ರೋಧಾದಿಗಳಿಗೆ ವಶವಾಗುವದರಿಂದ ಏನೊಂದೂ ಪ್ರಯೋಜನವಿಲ್ಲವಾದುದರಿಂದ ಶಾಂತತೆಯನ್ನು ಹೊಂದಬೇಕೆಂಬ ಭಾವವು.

ಪ್ರಾರಬ್ಧ ಪಾಪ ವಿಶೇಷವು, **ಶಿಷ್ಟೈಯುರುಕ್ಕಿರದು** – ಅದರ ಅಗ್ರಭಾಗವು ಕತ್ತರಿಸಲ್ಪಡುತ್ತದೆ, ಎಙ್ಙ ರ ಸನ್ತೋಷಮುಮ್-ಸಂತೋಷವೂ ಕೂಡ **ನಡೈಯಾಡಿತ್ತಾಗಿಲ್** - ಇದ್ದುದೇಯಾದರೆ ಎಂಬುವದರೊಂದಿಗೆ ಅನ್ವಯವು. ಹೀಗೆ ಇನ್ನೊಬ್ಬರು ನಮ್ಮನ್ನು ನಿಂದಿಸಿದರೆ :—(೧) ಬೈಯ್ಯುತ್ತಾರೆಂದು ವಿಷಾದವಿಲ್ಲದಿರುವಿಕೆಯೂ (೨) ಅಯ್ಯೋ ಅನ್ಯಾಯವಾಗಿ ಆತ್ಮನಷ್ಟಮಾಡಿಕೊಳ್ಳುತ್ತಾನೆಯಲ್ಲಾ ಎಂಬ ಪರಿತಾಪವೂ, (೩) ತನ್ನಲ್ಲಿರುವ ದೋಷಗಳನ್ನು ಜ್ಞಾಪಕಕ್ಕೆ ಕೊಟ್ಟನೆಂಬ ಉಪಕಾರಸ್ಮರಣೆಯೂ (೪) ಕರ್ಮಾನುಗುಣವಾಗಿ, ಸರ್ವೇಶ್ವರನಿಂದ ಪ್ರೇರಿತ

ಶೋಧಿತಮಾನಪಡಿಯೇ ಅಚಿದ್ವೈಲಕ್ಷಣ್ಯತ್ತೈಯುಮ್, ಸರ್ವ ಭೂತಾನುಕೂಲ್ಯಾದಿಗಳುಕ್ಕು ಯೋಗ್ಯಮಾನ ಜ್ಞಾನತ್ತೈಯುಮ್, ಸರ್ವತೋಮುಖಮಾನ ಅಕಿಂಚನ್ಯತ್ತೈಯುಮ್, ಸ್ವತಸ್ಸರ್ವ ಸಮನಾಯ್ ಕಮರ್ಾ

ರಾಯ್ ನಡೆಯಿತೆಂದು ಶಾಂತತೆಯೂ (೫) ನಮ್ಮ ಪ್ರಾರಬ್ಧಕರ್ಮದ ಸ್ವಲ್ಪಭಾಗ ಕಳಯಿತೆಂಬ ಸಂತೋಷವೂ ಇರಬೇಕೆಂದು ಹೇಳಲ್ಪಟ್ಟಿತು. ಹೀಗೆ ಈ ಐದು ಭಾವನೆಗಳೂ ಇದ್ದುದಾದರೆ ತನಗೆ ಸ್ವರೂಪನಿಷ್ಠಾಭಿಜ್ಞಾನ ಉಂಟೆಂದು ಹೇಳಲು ಕಾರಣ ಭೂತವಾದ ಐದೂ ತನ್ನಲ್ಲಿವೆ ಎಂದು ಹೇಳಬಹುದೆಂದು ಮುಂದೆ ತಿಳಿಸುತ್ತಾರೆ :---ಹಾಗೆ ಈ ಸ್ವರೂಪನಿಷ್ಠೆಯನ್ನು ಬೋಧಿಸುವ ಐದೂ ಮೂಲಮಂತ್ರದ ಎರಡನೇ ಪದಗಳಲ್ಲಿ ತೋರಿಬರುತ್ತವೆಂದೂ ಉಪದೇಶಿಸುತ್ತಾರೆ. **ಪ್ರಥಮ ಮಧ್ಯಮ ಪದಙ್ಗಳಿಲೆ** - ಮೂಲಮಂತ್ರದ ಮೊದಲನೇ ಪದವಾದ ಪ್ರಣವ ಮತ್ತು ಮಧ್ಯಮಪದವಾದ ನಮಃ ಎಂಬ ಶಬ್ದಗಳಲ್ಲಿ, **ಶೋಧಿತಮಾನ ಪಡಿಯೇ** - **ಸಮರ್ಥಿಸಲ್ಪಟ್ಟ** ಹಾಗೆ (೧) **ಅಚಿದ್ವೈಲಕ್ಷಣ್ಯತ್ತೈಯುಮ್** - ತಾನು ಜ್ಞಾನ ಸ್ವರೂಪನಾಗಿಯೂ ಜ್ಞಾನಕ್ಕೆ ಆಶ್ರಯನಾಗಿಯೂ, ಆನಂದತ್ವ ಅಮಲತ್ವಗಳಿಂದ ಯುಕ್ತನಾಗಿಯೂ ಇರುವದರಿಂದ, ಜಡತ್ವಾದಿಗಳಿಂದ ಯುಕ್ತವಾದ ಅಚಿತ್ತಿಗಿಂತಲೂ ವಿಲಕ್ಷಣನೆಂಬ ಜ್ಞಾನವನ್ನೂ, ಇದು ಪ್ರಣವದಲ್ಲಿ ತೋರಿಬರುತ್ತದೆ. ಮೂರನೇ ಅಕ್ಷರವಾದ ಮಕಾರವು **ಮನಜ್ಞಾನೇ** ಎಂಬ ಧಾತುವಿನಿಂದ ಜ್ಞಾನಸ್ವರೂಪತ್ವಜ್ಞಾನಾಶ್ರಯತ್ವಗಳನ್ನು ಬೋಧಿಸುತ್ತದೆ. (೨) **ಸರ್ವಭೂತಾನುಕೂಲ್ಯಾದಿಗಳುಕ್ಕು** - ಎಲ್ಲಾ ಚೇತನರಿಗೂ ಅನುಕೂಲನಾಗಿರಬೇಕೆಂಬ ಭಾವನೆ ಮೊದಲಾದವುಗಳಿಗೆ - **ಯೋಗ್ಯಮಾನ ಜ್ಞಾನತ್ತೈಯುಮ್** - ಉಚಿತವಾದ ಜ್ಞಾನವನ್ನೂ, ; ಇದು ಪ್ರಣವದ ಅಕಾರ ಉಕಾರ ಮಕಾರಗಳಿಂದ ಮಕಾರವಾಚ್ಯರಾದ ಜೀವಾತ್ಮರೆಲ್ಲಾ ಅಕಾರ ವಾಚ್ಯನಾದ ಶ್ರಿಯಃಪತಿಗೇನೇ ಶೇಷಭೂತರೆಂಬರ್ಥ ತೋರಿಬರುವದರಿಂದ ಸರ್ವಚೇತನರೂ ಕೂಡ ಅವನಿಗೆ ಶೇಷಭೂತರಾಗಿ ಆತನ ಸ್ವತ್ತಾದುದರಿಂದ ಅಂತವರ ವಿಷಯದಲ್ಲಿ ಅನುಕೂಲನಾಗಿಯೇ ಇರಬೇಕೆಂಬ ಜ್ಞಾನವು ಶೋಧಿತವಾಯಿತು. (೩) **ಸರ್ವತೋ ಮುಖಮಾನ ಅಕಿಂಚನ್ಯತ್ತೈಯುಮ್** - ಎಲ್ಲಾ ವಿಧದಲ್ಲೂ ಆಕಿಂಚನ್ಯವನ್ನೂ ಎಲ್ಲವೂ ಸರ್ವೇಶ್ವರನದೇಯಾದುದರಿಂದ, ನಿತ್ಯ ಕೈಂಕರ್ಯ ಪ್ರಾಪ್ತಿ, ಮತ್ತು ಅದಕ್ಕೆ ಕಾರಣಭೂತವಾದ ಸಾಧನಾನುಷ್ಠಾನ, ಅದಕ್ಕೆ ಸೇರಿದ ವರ್ಗಗಳೆಲ್ಲವೂ, ಹಾಗೆಯೇ ಪರಿಭವಾದಿಗಳ ನಿವರ್ತನೆ ಇವೆಲ್ಲವೂ ಅವನಿಂದಲ್ಲದೆ ಬೇರೆ ಯಾರಿಂದಲೂ ಆಗದಾದುದರಿಂದ **ಸರ್ವತೋ ಮುಖಾಕಿಂಚ್ಯನನೆಂದು** ಹೇಳಲ್ಪಟ್ಟಿತು;

ನುರೂಪ ಫಲಪ್ರದನಾನ ಸ್ವತಂತ್ರ ಶೇಷಿಕ್ಕು ಇಷ್ಟವಿನಿಯೋಗ ನೂಾವ್ಪಡಿ ಅನನ್ಯಾರ್ಹ ಶೇಷತ್ವ ಪಾರತಂತ್ರ್ಯಙ್ಗಳೈಯುಮ್, "ಯದ್ಧಿತಂ ಮಮ ದೇವೇಶ" ಇತ್ಯಾದಿಗಳಿಲ್ಪಡಿಯೇ ಪರಾಧೀನ ಹಿತಸಿದ್ಧಿಯೈಯುಮ್ ಉಡೈಯ ತನ್ ಸ್ವರೂಪತ್ತಿಲೆ ನಿಷ್ಠೈಯುಂಡೆನ್ರರಿಯಲಾಮ್.

ಇದು **ನಮಃ** ಎಂಬ ದ್ವಿತೀಯ ಪದದಿಂದ, ನನ್ನ ಸಂರಕ್ಷಣೆಯಲ್ಲಿ ಮಃ - ನನಗೆ ನ - ಸಂಬಂಧವಿಲ್ಲವು ಎಂಬ ಯೋಜನೆಯಿಂದ ತೋರಿಬರುತ್ತದೆ. (೪) **ಸ್ವತಃ**-ತಾನೇ, **ಸರ್ವಸಮನಾಯ್** - **"ಸಮೋಽಹಂ ಸರ್ವಭೂತೇಷು"** "ನಾನು ಸಮಸ್ತ ಚೇತನರ ವಿಷಯದಲ್ಲೂ ಸಮನಾಗಿರುವೆನು" ಎಂದು **ಹೇಳಿಕೊಂಡಿರುವ** ಹಾಗೆ, ಪಕ್ಷಪಾತಾದಿಗಳೊಂದೂ ಇಲ್ಲದೆ ಸಮನಾಗಿ, ಕರ್ಮಾನುಗುಣವಾಗಿ ಫಲವನ್ನುದಯ ಪಾಲಿಸುವ, ಸ್ವತಂತ್ರನಾದ ಶೇಷಿಗೆ, **ಇಷ್ಟವಿನಿಯೋಗನೂಾವ್ಪಡಿ**-ಆತನ ಇಷ್ಟಾನುಸಾರ ತನ್ನನ್ನು ಉಪಯೋಗಿಸಿಕೊಳ್ಳೋಣ ಹೇಗೋ ಹಾಗೆ, **ಅನನ್ಯಾರ್ಹ ಶೇಷತ್ವ ಪಾರತಂತ್ರ್ಯಙ್ಗಳೈಯುಮ್** - ಸರ್ವೇಶ್ವರನಿಗೆ ಮಾತ್ರವೇ ಯೋಗ್ಯವಾದ ಶೇಷಭಾವವನ್ನೂ, ಆತನಿಗೆ ಮಾತ್ರವೇ ಅಧೀನನಾಗಿರುವಿಕೆಯನ್ನೂ; ಇದು ಪ್ರಣವದಲ್ಲಿ **ಮಕಾರವಾಚ್ಯನಾದ ಜೀವನು ಆಯೈವ**-ಎಂಬುವದರಿಂದ ಅನನ್ಯಾರ್ಹ ಶೇಷತ್ವ ಪಾರತಂತ್ರ್ಯಗಳು ತೋರಿಬರುತ್ತವೆ. (೫) **ಹೇ ದೇವೇಶ** - ದೇವತೆಗಳೆಲ್ಲರಿಗೂ ನಾಥನಾದ ಸರ್ವೇಶ್ವರನೇ, **ಮಮ**-ನನಗೆ, **ಯತ್** - ಯಾವುದು, **ಹಿತಂ** - ಹಿತವಾದುದೋ, ಮುಂದಕ್ಕೆ **"ತದಾಜ್ಞಾಪಯ ಮಾಧವ"** ಎಂದು ಇರುತ್ತದೆ; ಓ ಶ್ರಿಯಃಪತಿಯೇ ಅದನ್ನು ಆಜ್ಞಾಪಿಸು." **ಇತ್ಯಾದಿಗಳಿಲ್ಪಡಿಯೇ** - ಎಂಬಿವೇ ಮೊದಲಾದವುಗಳ ಹಾಗೆ, **ಪರಾಧೀನ ಹಿತಸಿದ್ಧಿಯೈಯುಮ್** - **ಪರಾಧೀನ** ಇತರನಿಗೆ ಎಂದರೆ ಸರ್ವೇಶ್ವರನಿಗೆ ಅಥವಾ **ಪರ** - ಸರ್ವೋತ್ಕೃಷ್ಟನಿಗೆ ಅಧೀನವಾದ, **ಹಿತಸಿದ್ಧಿಯೈಯುಮ್** - ಉಪಾಯಾವಲಂಬನವನ್ನೂ, ಹೀಗೆ ಈ ಐದನ್ನೂ **ಉಡೈಯ** - ಹೊಂದಿರುವ, **ತನ್ ಸ್ವರೂಪತ್ತಿಲೆ** - ತನ್ನ ಸ್ವರೂಪದಲ್ಲಿ, **ನಿಷ್ಠೈಯುಂಡೆನ್ರರಿಯಲಾಮ್** - ನಿಷ್ಠೆಯುಂಟೆಂದು ತಿಳಿಯಬಹುದು.

೧. ಇತರರು ಮಾಡಿದ ಅವಮಾನದಿಂದ ದುಃಖವಿಲ್ಲದಿದ್ದರೆ, ಅಚಿತ್ತಿಗಿಂತಲೂ ತಾನು ವಿಲಕ್ಷಣನು ಎಂಬ ಸ್ವರೂಪನಿಷ್ಠೆಯುಂಟೆಂದು ತಿಳಿಯಬಹುದು.

೨. ಅಂತಹ ಅವಮಾನಮಾಡಿದವನಲ್ಲಿ ಕೃಪೆಯಿದ್ದುದಾದರೆ, ಆ ಕೃಪೆಯು ಅನುಕೂಲ್ಯಜ್ಞಾನದ ವಿಜೃಂಭಣೆಯಾಗುವದರಿಂದ ಸರ್ವಭೂತ

ಉಪಾಯ ನಿಷ್ಠಾ ಜ್ಞಾಪಕಾನಿ.

.(೧) ಸರ್ವೇಶ್ವರನೈ ಯೊಳಿಯತ್ತಾನುಮ್ ಪಿರರುಮ್ ತನಕ್ಕು ತಂಜಮನ್ರೆಜ್ಞಿರ ಬುದ್ಧಿಯುಮ್, (೨) ಮೃತ್ಯುಪರ್ಯಂತಮಾನ ಭಯ

ಗಳಿಗೂ ತಾನು ಅನುಕೂಲನಾಗಬೇಕೆಂಬ ಸ್ವರೂಪನಿಷ್ಠೆಯುಂಟೆಂದು ನಿಶ್ಚಯಿಸಬಹುದು.

೩. ಅಂತವನ ವಿಷಯದಲ್ಲೂ ಮೇಲೆ ಹೇಳಿದ ರೀತ್ಯಾ ಉಪಕಾರಸ್ಮೃತಿಯಿದ್ದಾದರೆ ತನ್ನಲ್ಲಿ ಆಕಿಂಚನ್ಯತ್ವರೂಪ ಸ್ವರೂಪನಿಷ್ಠೆಯುಂಟೆಂದು ತಿಳಿಯಬಹುದು.

೪. ಅಂತಹ ಸಂದರ್ಭದಲ್ಲಿ ನಿರ್ವಿಕಾರ ಚಿತ್ತತೆಯಿದ್ದಾದರೆ, ಕರ್ಮಾನುಸಾರ ಫಲಪ್ರದನಾದ ಸರ್ವಶೇಷಿಗೆ ತಾನು ಅನನ್ಯಾರ್ಹ ಶೇಷನು ಮತ್ತು ಪರತಂತ್ರನೆಂಬ ಸ್ವರೂಪ ನಿಷ್ಠೆಯುಂಟೆಂದು ಭಾವಿಸಬಹುದು.

೫. ಇವರಿಂದ ಪ್ರಾರಬ್ಧ ಸ್ವಲ್ಪ ಕಳೆಯಿತೆಂಬ ಸಂತೋಷವಿದ್ದರೆ, ಸರ್ವೇಶ್ವರನಿಗೆ ಅಧೀನವಾದುದು ತನ್ನ ಉಪಾಯ ಸಿದ್ಧಿಯು ಎಂಬ ಸ್ವರೂಪನಿಷ್ಠೆಯುಂಟೆಂದು ಊಹಿಸಬಹುದು.

ಇದೀಗ ಮೇಲಿನ ವಾಕ್ಯದ ಸಂಗ್ರಹವಾದ ತಾತ್ಪರ್ಯವು. ಮುಂದೆ ಉಪಾಯನಿಷ್ಠೆಯುಂಟೆಂದು ನಿಶ್ಚಯಿಸುವ ಕಾರಣಗಳಾವುವೆಂದು ತಿಳಿಸುತ್ತಾರೆ.

ಉಪಾಯನಿಷ್ಠೆಯುಂಟೆಂದು ತಿಳಿಯುವ ಬಗೆ.

ಐದು ಕಾರಣಗಳಿಂದ ಉಪಾಯ ವಿಷಯದಲ್ಲಿ ನಿಷ್ಠೆಯುಂಟೆಂದು ತಿಳಿಯಬಹುದೆಂದುಪದೇಶಿಸುತ್ತಾರೆ :— (೧) ಸರ್ವೇಶ್ವರನೈ ಯೊಳಿಯ ಸರ್ವೇಶ್ವರನನ್ನು ಬಿಟ್ಟರೆ, ತಾನುಮ್ ಪಿರರುಮ್–ತಾನಾಗಲಿ, ಇತರರಾಗಲಿ, ತನಕ್ಕು ತಂಜಮನ್ರು - ತನಗೆ ರಕ್ಷಕರಲ್ಲವು, ಎಜ್ಞಿರಬುದ್ಧಿಯುಂ-ಎನ್ನುವ ಬುದ್ಧಿಯೂ, ಎಂದರೆ ಸರ್ವೇಶ್ವರನೇ ರಕ್ಷಕನೇ ವಿನಾ ತಾನೇಯಾಗಲಿ ಇತರರೇಯಾಗಲಿ, ತನ್ನನ್ನು ರಕ್ಷಿಸಲು ಸಮರ್ಥರಲ್ಲವೆಂಬ ಜ್ಞಾನವಿದ್ದರೆ ಉಪಾಯನಿಷ್ಠಾಜ್ಞಾನವಿದೆ ಎಂದು ತಿಳಿಯಬಹುದು (೨) ಮೃತ್ಯುಪರ್ಯಂತ ಮಾನ ಭಯ-

ಹೇತುಕ್ಕಳ್ಳೈಕ್ಕಣ್ಡಾಲುಮ್, "ಪ್ರಾಯೇಣಾ ಕೃತಕೃತ್ಯತ್ವಾನ್ಮೃತ್ಯೋ ರುದ್ವಿಜತೇ ಜನಃ । ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಂ" ಎನ್ಗಿರಪಡಿಯೇ ಇಶ್ಶರೀರಾನನ್ತರಮ್ ಎನ್ ಪಡಪ್ಪುಕಿಕರೋಮೆನ್ಗಿರ ಕರೈತಲತ್ತು ಅಭಿಮತಾಸಕ್ತಿಯಾಲೆ ಪ್ರೀತನಾಯಿರುಕ್ಕೈಯುಮ್

ಮರಣ ಪರ್ಯಂತವಾದ ಭಯಕ್ಕೆ, **ಹೇತುಕ್ಕಳ್ಳೈ ಕಂಡಾಲುಮ್** - ಕಾರಣಗಳು ಕಂಡು ಬಂದರೂ, **ಪ್ರಾಯೇಣ** - ಪ್ರಾಯಶಃ, **ಅಕೃತಕೃತ್ಯತ್ವಾತ್** - ಉಪಾಯಾನುಷ್ಠಾನಮಾಡದೇ ಇರುವದರಿಂದ, **ಜನಃ** - ಜನಸಾಮಾನ್ಯವು, **ಮೃತ್ಯೋಃ** - ಮರಣದ ದೆಶೆಯಿಂದ, **ಉದ್ವಿಜತೇ** - ಭಯಪಡುತ್ತದೆ. **ಕೃತಕೃತ್ಯಾಃ** – ಉಪಾಯಾನುಷ್ಠಾನ ಮಾಡಿದವರಾದರೋ **ಮೃತ್ಯುಂ**-ಮರಣವನ್ನು, **ಪ್ರಿಯಮಿವಾತಿಥಿಂ** - ವೈಶ್ವದೇವ ಮಾಡಿದ ಬ್ರಾಹ್ಮಣನು ಅತಿಥಿಯನ್ನು ಹೇಗೆ ಪ್ರಿಯವಾಗಿ ಭಾವಿಸುವನೋ ಹಾಗೆ, **ಪ್ರತೀಕ್ಷಂತೇ**-ನಿರೀಕ್ಷಿಸಿಕೊಂಡಿರುತ್ತಾರೆ." **ಎನ್ಗಿರಪಡಿಯೇ**-ಎಂದು ಹೇಳಿರುವ ಹಾಗೆ **ಇಶ್ಶರೀರಾನನ್ತರಮ್** - ಈ ದೇಹಾವಸಾನಾನಂತರ, **ಎನ್ ಪಡಪ್ಪುಕುಕಿರೋಮ್** - ಯಾವ ಕ್ಲೇಶಗಳನ್ನು ಹೊಂದುತ್ತೇವೋ **ಎನ್ಗಿರ** - ಎನ್ನುವ, **ಕರೈತಲತ್ತು** - ಭಯವನ್ನು ತ್ಯಜಿಸಿ, **ಅಭಿಮತಾಸಕ್ತಿಯಾಲೆ** - ಮೋಕ್ಷಪ್ರಾಪ್ತಿಯುಂಟಾಗುತ್ತದೆಂಬ ಉತ್ಸಾಹದಿಂದ, **ಪ್ರೀತನಾಯಿರುಕ್ಕೈಯುಮ್** - ಸಂತೋಷದಿಂದಿರೋಣವೂ; ಒಂದುವೇಳೆ ಮರಣಭಯವಿದ್ದರೂ, ಮರಣಕ್ಕೆ ಅಂಜದೆ ಮರಣವಾದರೆ ಇದಕ್ಕಿಂತಲೂ ಅತಿಶಯವಾದ ಸ್ಥಿತಿಯು ತನಗೆ ಪ್ರಾಪ್ತವಾಗುವದರಿಂದ, ದೇಹಾವಸಾನವು ಪ್ರಾಪ್ತವಾಯಿತೆಂಬ ಸಂತೋಷವಿರಬೇಕೇ ವಿನಾ ದುಃಖವಿರಕೂಡದು ಎಂದುಪದೇಶಿಸಿರುತ್ತಾರೆ. ಅಂತಹ ಸಂತೋಷವಿದ್ದಾದರೆ ಈತನಿಗೆ ಉಪಾಯನಿಷ್ಠೆಯುಂಟೆಂದು ಭಾವಿಸಬಹುದು. ಮೃತ್ಯುವಿಗೆ ಅಂಜುವವರು ಯಾರೆಂದರೆ **ಅಕೃತ**ಕೃತ್ಯರು, ಉಪಾಯಾನುಷ್ಠಾನಮಾಡದೇ ಇರುವವರು. ಇವರಿಗೆ ದೇಹಾವಸಾನಾನಂತರ ಎಂತಹ ಕ್ಲೇಶಗಳು ಪ್ರಾಪ್ತವಾಗುತ್ತವೋ ಎಂಬುವ ಕ್ಲೇಶದಿಂದ ಭಯಪಡುತ್ತಾರೆ. ವೈಶ್ವದೇವ ಮಾಡಿದ ಗೃಹಸ್ಥನಿಗೆ ಅತಿಥಿಯು ಹೇಗೆ ಪ್ರಿಯನೋ, ಹಾಗೆ ಉಪಾಯಾನುಷ್ಠಾನಮಾಡಿದವರಿಗೆ ಮರಣವು ಪ್ರಿಯವು ಎಂದು ಹೇಳಿ ಅದಕ್ಕೆ ಪ್ರಮಾಣವನ್ನು ನಿದರ್ಶಿಸಿರುತ್ತಾರೆ.

(೧) ಇತಿ. ಸಮುಚ್ಚಯಂ ೭-೩೮

ವ್, (೪) "ಗಜಂವಾ ವೀಕ್ಷ್ಯ ಸಿಂಹಂವಾ ವ್ಯಾಘ್ರಂವಾಪಿ ವರಾನನಾ। ನಾಹಾರಯತಿ ಸಂತ್ರಾಸಂ ಬಾಹೂ ರಾಮಸ್ಯ ಸಂಶ್ರಿತಾ ॥" ಎನ್ರುವ್ (೧) "ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್। ನತ್ವಾಂ ಕುರ್ಮಿದಶಗ್ರೀವ ಭಸ್ಮ ಭಸ್ಮಾರ್ಹತೇಜಸಾ"॥ ಎನ್ರುವ್, (೨) "ಶರೈಸ್ತು ಸಂ

(೪) "ವರಾನನಾ - ಶ್ರೇಷ್ಠವಾದ ಮುಖವುಳ್ಳ ಸೀತೆಯು, ಗಜಂ ವಾ - ಆನೆಯನ್ನಾಗಲಿ, ಸಿಂಹಂ ವಾ - ಸಿಂಹವನ್ನೇಯಾಗಲಿ, ವ್ಯಾಘ್ರಂ ವಾ ಹುಲಿಯನ್ನೇಯಾಗಲಿ, ವೀಕ್ಷ್ಯ - ಕಂಡು, ಸಂತ್ರಾಸಂ - ಭಯವನ್ನು, ನಾಹಾರಯತಿ - ಹೊಂದುವದಿಲ್ಲವು, ಏಕೆಂದರೆ ರಾಮಸ್ಯ - ಮಹಾಬಲ ಪರಾಕ್ರಮವನ್ನು ಹೊಂದಿ ಸರ್ವಶಕ್ತನಾದ ಶ್ರೀರಾಮನ, ಬಾಹೂ - ಬಾಹುಗಳನ್ನು ಆಕೆಯು ಸಂಶ್ರಿತಾ-ಆಶ್ರಯಿಸಿರುತ್ತಾಳಾದುದರಿಂದ" ಎನ್ರುಂ-ಎಂಬದಾಗಿಯೂ ಸಾಧಾರಣವಾಗಿ ಸ್ತ್ರೀಯರುಗಳಿಗೆ ಇಂತಹ ಘಾತುಕ ಮೃಗಗಳನ್ನು ಕಂಡರೆ ತುಂಬಾ ಭೀತಿಯು, ನಿರ್ಜನಪ್ರದೇಶವಾಗಿರುವ ಮಹಾವನದಲ್ಲಿ ಕಂಡರೆ ಇನ್ನೂ ಹೆಚ್ಚು ಭೀತಿಯುಂಟಾಗಬೇಕು; ಹಾಗಿದ್ದರೂ, ಲೋಕನಾಥನ ಬಾಹುಗಳನ್ನು ಸೀತೆಯು ಆಶ್ರಯಿಸಿರುವದರಿಂದ ಆಕೆಗೆ ಈಷದಪಿ ಭಯವಿಲ್ಲವೆಂಬ ಭಾವವು. ವ್ಯಾಘ್ರಂವಾಪಿ ವರಾನನಾ ಎಂಬುವದಕ್ಕೆ ಬದಲಾಗಿ, ವ್ಯಾಘ್ರಂ ವಾ ವನಮಾಶ್ರಿತಾ ಎಂದು ಪಾಠಾಂತರವು. ಸೀತೆಗೆ ಹೇಗೆ ಭಯವಿಲ್ಲವೋ ಹಾಗೆಯೇ ಸರ್ವಶಕ್ತನಾದ ಶ್ರಿಯಃಪತಿಯನ್ನಾಶ್ರಯಿಸಿದ ಪ್ರಪನ್ನರಿಗೆ ಯಾವ ವಿಧವಾದ ಭೀತಿಯೂ ಇಲ್ಲವೆಂಬ ಭಾವವು; ಏಕೆಂದರೆ:— ಪ್ರಪನ್ನನೂ ಕೂಡ ನಾಹಾರಯತಿ ಸಂತ್ರಾಸಂ - ಭಯವನ್ನು ಹೊಂದುವದಿಲ್ಲವು. ಅದೇನು ಕಾರಣವೆಂದರೆ ಆತನೂ ಕೂಡ ಪಾದೌ ರಾಮಸ್ಯ ಸಂಶ್ರಿತಃ - ಶ್ರೀರಾಮನ ಚರಣದ್ವಂದವನ್ನು ಆಶ್ರಯಿಸಿರುವದರಿಂದ ಎಂಬ ತಾತ್ಪರ್ಯವು.

"ಅಸಂದೇಶಾತ್ತು ರಾಮಸ್ಯ-ಭರ್ತ್ರಾವಾದ ಶ್ರೀರಾಮನು, ನಿನಗೆ ತೊಂದರೆ ಮಾಡಿದವರನ್ನು ಕ್ರೂರದೃಷ್ಟಿಯಿಂದ ಭಸ್ಮಮಾಡಿಬಿಡು ಎಂದು ಅನುಜ್ಞೆಯನ್ನು ಕೊಡದೇ ಇರುವದರಿಂದಲೂ, ಅದೇಕೆ ಅನುಜ್ಞೆಯಿಲ್ಲವೆಂದರೆ ಆತನೇ ಶ್ರೀಘ್ರವಾಗಿ ಬಂದು ಎಲ್ಲಾ ರಾಕ್ಷಸರೊಂದಿಗೆ ರಾವಣನನ್ನು ವಧಿಸುತ್ತಾನೆಂಬುವದನ್ನು ತನ್ನ ಸರ್ವಜ್ಞತೆಯಿಂದ ತಿಳಿದಿರುವದರಿಂದ ಎಂಬ ಭಾವವು; ತಪಸಶ್ಚಾನುಪಾಲನಾತ್ - ತನ್ನ ಪಾತಿವ್ರತ್ಯರೂಪತಪಸ್ಸನ್ನು ಕಾಪಾಡಿಕೊಳ್ಳಬೇಕಾಗಿರುವದರಿಂದ

(೪) ರಾಮಾ. ಅಯೋಧ್ಯಾ ೬೦-೨೦
(೧) ರಾಮಾ. ಸುಂದರ. ೩೨-೨೦
(೨) ರಾಮಾ. ಸುಂದರ ೩೯-೩೦

ಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ। ಮಾಂನಯೇದ್ಯದಿ ಕಾಕುತ್ಸ್ಥ ಸ್ತತ್ತಸ್ಯ ಸದೃಶಂ ಭವೇತ್ ।” ಎನ್ರುಮ್, ಪಿರಾಟ್ಟಿ ನಡತ್ತಿಕಾಟ್ಟಿನ ರಕ್ಷಕಾವಪ್ಟುವ್ಪುತ್ತಾಲುಳ್ಳ ತೇತ್ತಮುಮ್, (೪) ತಾನ್ ಭರನ್ಯಾಸಂ ಪಣ್ಣಿನ

ಮುಂದೆ ಆಂಜನೇಯನಿಗೆ ಅಗ್ನಿತಾಪ ಶಮನದಲ್ಲೂ ತನ್ನ ಅಗ್ನಿಪ್ರವೇಶಾದಿಕಾಲದಲ್ಲೂ ಅದರುಪಯೋಗವಿರುವದರಿಂದ ಎಂಬಭಾವವು ; **ಹೇ ಭಸ್ಮಾರ್ಹ**-ಭಸ್ಮಮಾಡಲುಯೋಗ್ಯನಾದ, **ಹೇ ದಶಗ್ರೀವ**-ಓ ದಶಕಂಠನೇ, **ತೇಜಸಾ** - ನನ್ನ ಪಾತಿವ್ರತ್ಯರೂಪ ತೇಜಸ್ಸಿನಿಂದ, **ಭಸ್ಮ** - ಭಸ್ಮವನ್ನು, **ನಕುರ್ಮಿ** - ಮಾಡುವದಿಲ್ಲ. ಓ ರಾವಣನೇ ನಿನ್ನ ದುರಾಗತದಿಂದ ಯದ್ಯಪಿ ನೀನು ಭಸ್ಮಮಾಡಲ್ಪಡಲು ಅರ್ಹನು. ನನಗೂ ನಿನ್ನನ್ನು ದಹಿಸಿಬಿಡುವ ಶಕ್ತಿಯು ಪಾತಿವ್ರತ್ಯ ಬಲದಿಂದುಂಟು. ಆದರೂ ನಾನು ನಿನ್ನನ್ನು ಭಸ್ಮಮಾಡುವದಿಲ್ಲವು. ಏಕೆಂದರೆ ಪಾತಿವ್ರತ್ಯರೂಪ ತಪಸ್ಸನ್ನು ಕಾಪಾಡಿಕೊಳ್ಳುವದೂ ಅಲ್ಲದೆ, ನಿನ್ನನ್ನು ದಹಿಸಲು ಭರ್ತಾವಿನ ಆಜ್ಞೆಯಿಲ್ಲವು, ಎಂದು ಸೀತೆಯುಹೇಳುತ್ತಾಳೆ. ಇಲ್ಲಿಯೂ ಲೋಕ ಭರ್ತಾನಾದ ಶ್ರೀರಾಮನನ್ನುನಂಬಿರುವದರಿಂದ ಆತನೇ ರಾವಣನನ್ನು ವಧಿಸಿ ತನ್ನನ್ನು ರಕ್ಷಿಸುವನು ಎಂಬ ಧೈರ್ಯವುತೋರಿಬರುತ್ತದೆ. ಪ್ರಪನ್ನನ ವಿಷಯದಲ್ಲೂ ಹಾಗೆಯೇ ಎಂದು ಭಾವಿಸತಕ್ಕದ್ದು.

ಎನ್ರುಮ್ - ಎಂದೂ, “**ಪರಬಲಾರ್ದನಃ** - ಶತ್ರುಸೈನ್ಯ ಸಂಹಾರಕನಾದ, **ಕಾಕುತ್ಸ್ಥಃ** - ಕಕುತ್ಸ್ಥವಂಶೋದ್ಭವನಾದ ಶ್ರೀರಾಮನು, **ಲಂಕಾಂ ತು** - ಲಂಕಾಪಟ್ಟಣವನ್ನಾದರೋ, **ಶರೈಃ** - ಬಾಣಗಳಿಂದ, **ಸಂಕುಲಾಂ** - ಆವರಿಸಲ್ಪಡುವದನ್ನಾಗಿ, **ಕೃತ್ವಾ** - ಮಾಡಿ, **ಮಾಂ** - ಆತನೇ ರಕ್ಷಕನೆಂದು ದೃಢವಾಗಿ ನಂಬಿರುವ ನಿತ್ಯಾನಪಾಯಿಯಾದ ಲಕ್ಷ್ಮಿಯಾದ ನನ್ನನ್ನು, **ನಯೇದ್ಯದಿ** - ಕರೆದುಕೊಂಡುಹೋದರೆ, ಆಗೀಗ, **ತತ್** - ಆ ದಿವ್ಯ ಚೇಷ್ಟಿತವು, **ತಸ್ಯ** - ಸರ್ವಶಕ್ತನಾಗಿ ಧೀರೋದಾತ್ತನಾದ ಆ ರಾಮನಿಗೆ, **ಸದೃಶಂ** - ಸಮಾನವಾದುದು ಎಂದರೆ ಯೋಗ್ಯವಾದುದು **ಭವೇತ್** - ಆದೀತು” ಇವರಿಂದ ತನ್ನ ಅನನ್ಯಶರಣತ್ವವೂ ಸರ್ವೇಶ್ವರನ ಶರಣ್ಯತೆಯಲ್ಲಿ ಪರಿಪೂರ್ಣವಿಶ್ವಾಸವೂ ತೋರಿಬರುತ್ತದೆ ” **ಎನ್ರುಮ್** - ಎಂಬವಾಗಿಯೂ, **ಪಿರಾಟ್ಟಿನಡತ್ತಿಕಾಟ್ಟಿನ** - ಸೀತೆಯು ಅನಷ್ಠಿಸಿ ತೋರಿಸಿರುವ, **ರಕ್ಷಕಾವಪ್ಟುವ್ಪುತ್ತಾಲುಳ್ಳ** - ರಕ್ಷಕನನ್ನು ಚನ್ನಾಗಿಅವಲಂಬಿಸಿರೋಣದಿಂದುಂಟಾದ, **ತೇತ್ತಮುಮ್** - ಧೈರ್ಯವೂ ; ಉಪಾಯ ಸ್ವೀಕೃ

ವಿಷಯತ್ತಿಲ್ ಸ್ವಯತ್ನಮತ್ತಿರುಕ್ಕೈಯುಮ್, (೫) ಅದಿಲನಿಷ್ಟನಿವೃತ್ತಿಯುಮ್ ಇಷ್ಟಪ್ರಾಪ್ತಿಯುಮ್ ಅವನ್ ಕೈಯಿಲ್ಯುದೇ ಎನ್ರಿರುಕ್ಕೈಯುಮ್, ಉಂಡಾಯಿತ್ತಾಗಿಲ್, ತಾನ್ ಕೋಲಿನ ಸಕಲ ಫಲತ್ತುಕ್ಕುಮ್ ಸಾಧನಮಾಗ ವೈತ್ತಾಯ್, ಚರಮಶ್ಲೋಕತ್ತಿಲ್ ಪೂರ್ವಾರ್ಧತ್ತಿಲೇ ವಿಹಿತಮಾಯ್, ದ್ವಯತ್ತಿಲ್ ಪೂರ್ವಖಂಡತ್ತಿಲ್ ಅನುಸಂಧೇಯಮಾಯ್, ತಿರುಮಂತ್ರತ್ತಿಲ್ ಮಧ್ಯಮಪದತ್ತಿಲುಮ್ ವಿವಕ್ಷಿತಮಾನ ಉಪಾಯತ್ತಿಲೇ ತನಕ್ಕು ನಿಷ್ಠೆಯುಂಡೆನ್ರಿರಿಯಲಾಮ್.

ಯುಂಟೆಂಬುವದಕ್ಕೆ ಇಂತಹ ಸರ್ವಶಕ್ತನಾದ ಶ್ರಿಯಃಪತಿಯು ನಮಗೆ ಸರ್ವವಿಧದಲ್ಲೂ ರಕ್ಷಕನೆಂಬ ಧೈರ್ಯವಿರಬೇಕೆಂದು ಹೇಳಲ್ಪಟ್ಟಿತು. (೪) **ತಾನ್ ಭರನ್ಯಾಸಂ ಪಣ್ಣಿನ ವಿಷಯತ್ತಿಲ್** - ಪ್ರಪನ್ನನಾದ ತಾನು ಭರನ್ಯಾಸವನ್ನು ಅನುಷ್ಠಿಸಿದ ವಿಷಯದಲ್ಲಿ, **ಸ್ವಯತ್ನಮತ್ತಿರುಕ್ಕೈಯುಮ್** - ತನ್ನ ಪ್ರಯತ್ನವನ್ನು ಆತನಲ್ಲಿಟ್ಟಿರುವದರಿಂದ ಉಪಾಯಾನುಷ್ಠಾನ ವಿಷಯದಲ್ಲೂ ಪಾರತಂತ್ರ್ಯವಿರಬೇಕೆಂದು ಹೇಳಲ್ಪಟ್ಟಿತು. ಇದರಿಂದಲೂ ಉಪಾಯನಿಷ್ಠೆಯುಂಟೆಂದು ಭಾವಿಸಬಹುದು.

(೫) **ಅದಿಲ್** - ಆ ಭರನ್ಯಾಸ ಮಾಡಿದ ವಿಷಯದಲ್ಲಿ, **ಅನಿಷ್ಟನಿವೃತ್ತಿಯುಮ್** - ಪಾಪರೂಪ ಕರ್ಮಗಳ ನಿವೃತ್ತಿಯೂ, **ಇಷ್ಟಪ್ರಾಪ್ತಿಯುಮ್** - ತನ್ನ ಮನೋರಥಾವಾಪ್ತಿಯೂ, **ಅವನ್ ಕೈಯಿಲ್ಯುದೇ** - ಅವನ ಕೈಯಲ್ಲಿರುವದೇ ಎಂದರೆ ಆತನ ಅಧೀನವಾದುದೇ, **ಎನ್ರಿರುಕ್ಕೈಯುಮ್** - ಎಂದಿರೋಣವೂ, ಹೀಗೆ ಇವು ಐದೂ, **ಉಣ್ಡಾಯಿತ್ತಾಗಿಲ್** - ಇದ್ದುದಾದರೆ, **ತಾನ್ ಕೋಲಿನ** - ತಾನು ಅಪೇಕ್ಷಿಸಿದ, **ಸಕಲ ಫಲತ್ತುಕ್ಕುಮ್** - ಸಮಸ್ತ ಫಲಗಳಿಗೂ, **ಸಾಧನಮಾಹವೈತ್ತಾಯ್** - ಸಾಧನವಾಗಿ ಆಗಲಾಗಿ, **ಚರಮಶ್ಲೋಕತ್ತಿಲ್ ಪೂರ್ವಾರ್ಧತ್ತಿಲೇ** ಚರಮಶ್ಲೋಕದ ಪೂರ್ವಾರ್ಧವಾದ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬುವದರಲ್ಲಿ, **ವಿಹಿತಮಾಯ್** - ವಿಧಿಸಲ್ಪಟ್ಟು, ದ್ವಯಮಂತ್ರದ **ಪೂರ್ವಖಂಡದಲ್ಲಿ, ಅನುಸನ್ಧೇಯಮಾಯ್** - ಅನುಸಂಧಾನ ಮಾಡಲ್ಪಡುವದಾಗಿ, **ತಿರುಮನ್ತ್ರತ್ತಿಲ್** - ಮೂಲಮಂತ್ರದಲ್ಲಿರುವ, **ಮಧ್ಯಮಪದತ್ತಿಲುಮ್**-ಮಧ್ಯದ ಪದವಾದನಮಶ್ಶಬ್ದದಲ್ಲೂ, **ವಿವಕ್ಷಿತಮಾನ** - ಎಂದರೆ ವಿವಕ್ಷಿತಮಾಯ್ ಯಿರುಕ್ಕಿರ ಎಂಬ ಭಾವವು, ಎಂದರೆ ತೋರಿಬರುವದಾಗಿಯೂ ಇರುವ, **ಉಪಾಯತ್ತಿಲೆ** - ಸಿದ್ಧೋಪಾಯ ಸಾಧ್ಯೋಪಾಯಗಳಲ್ಲಿ **ತನಕ್ಕು ನಿಷ್ಠೆಯುಣ್ಡೆನ್ರರಿಯಲಾಮ್** - ತನಗೆ

ಪುರುಷಾರ್ಥ ನಿಷ್ಠಾಜ್ಞಾಪಕಾನಿ

"ಉತ್ಪತ್ತಿ ಸ್ಥಿತಿನಾಶಾನಾಂ ಸ್ಥಿತೌ ಚಿಂತಾ ಕುತಸ್ತವ । ಯಥೋ

ನಿಷ್ಠೆಯುಂಟೆಂದು ತಿಳಿಯಬಹುದು. (೧) ಭಗವಂತನಲ್ಲದೆ ತನಗೆ ಯಾರೂ ರಕ್ಷಕರಿಲ್ಲವೆಂಬ ಜ್ಞಾನವೂ (೨) ಮೃತ್ಯುಸನ್ನಿಹಿತವಾಗಿದ್ದರೂ ನಿರ್ಭಯನಾಗಿ, ಮೋಕ್ಷವು ಸನ್ನಿಹಿತವಾಯಿತೆಂದು ಸಂತೋಷದಿಂದಿರುವದೂ (೩) ಸರ್ವಶಕ್ತನಾದ ರಕ್ಷಕನು ತನಗಿರುವನೆಂಬ ಧೈರ್ಯವೂ (೪) ಭರನ್ಯಾಸ ವಿಷಯದಲ್ಲಿ ಸ್ವಪ್ರಯತ್ನ ನಿವೃತ್ತಿಯೂ (೫) ಫಲವು ಆ ಸರ್ವೇಶ್ವರನಿಗೇ ಅಧೀನವಾದುದೆಂಬ ಬುದ್ಧಿಯೂ ಹೀಗೆ ಇವು ಐದೂ ಉಪಾಯನಿಷ್ಠೆಯುಂಟೆಂಬುವದಕ್ಕೆ ಚಿಹ್ನೆಗಳು. ಈ ಉಪಾಯನಿಷ್ಠೆಯು ಎಲ್ಲಿ ತೋರಿಬರುತ್ತದೆ ಎಂದರೆ ಮೂರು ರಹಸ್ಯಗಳಲ್ಲೂ ವ್ಯಕ್ತವೆಂದು ಹೇಳಿರುತ್ತಾರೆ. ಇವುಗಳೆಲ್ಲಾ ಸವಿಸ್ತಾರವಾಗಿ ಮೂಲಮಂತ್ರದ್ವಯ ಚರಮ ಶ್ಲೋಕಾಧಿಕಾರಗಳಲ್ಲಿ ತಾವೇ ಉಪಪಾದಿಸುತ್ತಾರಾಗಿ ಇಲ್ಲಿ ಸಂಗ್ರಹವಾಗಿ ಹೇಳಿರುತ್ತಾರೆ. ಈ ಉಪಾಯವು ವಿಧಿರೂಪದಲ್ಲಿ ಹೇಳಿರುವದರಿಂದ ಮೊದಲು ಚರಮಶ್ಲೋಕವನ್ನೇ ಕುರಿತು ಹೇಳಿ, "ಮಾಮೇಕಂ ಶರಣಂ ವ್ರಜ" ಎಂದಿರುವದರಿಂದ, ಅದು ಇಲ್ಲಿ ವಿಹಿತವಾಗಿರುತ್ತದೆ ಎಂದರೆ ವಿಧಿಸಲ್ಪಟ್ಟಿರುತ್ತದೆ. ದ್ವಯವು ಶರಣಮಂತ್ರವಾದುದರಿಂದ, ವಿಹಿತಮಾಯ್ - ಎಂದು ಹೇಳದೆ ಪೂರ್ವಖಂಡದಲ್ಲಿ ಅನುಸಂಧೇಯವೆಂದು ಪ್ರಯೋಗಿಸಿರುತ್ತಾರೆ. ಮೂಲ ಮಂತ್ರವು ಎಲ್ಲಾ ಅಭಿಪ್ರಾಯಗಳನ್ನೂ ಬೋಧಿಸುವ ಮಾಹಾತ್ಮ್ಯೆಯುಳ್ಳದಾದುದರಿಂದ ಮಧ್ಯಮ ಪದತ್ತಿಲ್ ವಿವಕ್ಷಿತವು ದ್ಯೋತಿತವು ಎಂದು ಪ್ರಯೋಗಿಸಿರುತ್ತಾರೆ ನಮಶ್ಶಬ್ದವು ಉಪಾಯವನ್ನು ಬೋಧಿಸುತ್ತದೆಂದು ಮುಂದೆ ಉಪಪಾದಿಸಿ ಮಾರ್ಕಂಡೇಯರ ಉಪದೇಶಪ್ರಕಾರ ಶ್ರೀಕೃಷ್ಣನಲ್ಲಿ ಶರಣಾಗತಿಯನ್ನು ಮಾಡಿದರೆಂದು ಹೇಳುವದಕ್ಕಾಗಿ "ದ್ರೌಪದ್ಯಾಸ್ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಂ" "ದ್ರೌಪದಿ ಸಹಿತರಾದ ಪಾಂಡವರು ಶ್ರೀಕೃಷ್ಣನನ್ನು ಕುರಿತು ನಮಸ್ಕರಿಸಿದರು ಎಂದರೆ ಶರಣಾಗತಿಮಾಡಿದರು" ಎಂಬ ಪ್ರಮಾಣವನ್ನೂ ಸಹ ಉದಾಹರಿಸುತ್ತಾರೆ.

ಮುಂದೆ ಪುರುಷಾರ್ಥನಿಷ್ಠೆಯುಂಟೆಂದು ತಿಳಿಯತಕ್ಕ ಚಿಹ್ನೆಗಳಾವುವು ಎಂಬುವದನ್ನು ತಿಳಿಸುತ್ತಾರೆ.

ಪುರುಷಾರ್ಥ ನಿಷ್ಠೆಯುಂಟೆಂದು ತಿಳಿಯುವ ಬಗೆ.

(೧) ದೇಹಯಾತ್ರಾದಿ ವಿಷಯಗಳಲ್ಲಿ ತುಂಬಾ ಶ್ರಮವನ್ನು ತೆಗೆದುಕೊಳ್ಳದಿರುವಿಕೆಯೂ (೨) ಒಂದು ವೇಳೆ ತುಂಬಾ ಕ್ಲೇಶದಿಂದ ದೇಹಯಾತ್ರಾದಿಗಳು

ತ್ಪತ್ತಿರ್ಯಥಾ ನಾಶಃ ಸ್ಥಿತಿಸ್ತದ್ವದ್ಭವಿಷ್ಯತಿ ॥" (೧) "ಅಚೇಷ್ಟಮಾನ ಮಾಸೀನಂ ಶ್ರೀಃ ಕಂಚಿದುಪತಿಷ್ಠತಿ । ಕರ್ಮೀ ಕರ್ಮಾ (ಪಿಕೃತ್ಯಾನ್ಯೋ) ನು ಸೃತ್ಯಾನ್ಯೋ ನ ಪ್ರಾಶ್ಯಮಧಿಗಚ್ಛತಿ," ಎಙ್ಗಿರಪಡಿಯೇ ಪ್ರಾರಬ್ಧ

ನಡೆದರೂ ಈಶ್ವರ ಸಙ್ಕಲ್ಪವಿಲ್ಲದೆ ಇವು ಯಾವುವೂ ನಡೆಯುವದಿಲ್ಲವೆಂಬ ಬುದ್ಧಿಯೂ, (೩) ಶಾಸ್ತ್ರವಿರುದ್ಧವಲ್ಲದೆ ತಾನಾಗಿಯೇ ಪ್ರಾಪ್ತವಾದ ಐಹಿಕ ಸುಖಗಳನ್ನನುಭವಿಸೋಣವೂ (೪) ಐಹಿಕಗಳಾದ ಸುಖದುಃಖಗಳ ಪ್ರಾಪ್ತಿಯಲ್ಲಿ ಹರ್ಷಶೋಕಗಳನ್ನು ತ್ಯಜಿಸುವಿಕೆಯೂ (೫) ಪಾಪ್ಯರುಚಿಯೂ ಪ್ರಾಪ್ತಿತ್ವರೆಯೂ ಇದ್ದರೆ ಪುರುಷಾರ್ಥನಿಷ್ಠೆಯುಂಟೆಂದು ತಿಳಿಯಬಹುದೆಂದು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ.

"**ಉತ್ಪತ್ತಿ ಸ್ಥಿತಿನಾಶಾನಾಂ** - ಜನ್ಮ, ಸ್ಥಿತಿ, ಮರಣಗಳೊಳಗೆ **ಸ್ಥಿತೌ** - ಸ್ಥಿತಿಯಲ್ಲಿ ಮಾತ್ರ, **ಚಿಂತಾ** - ಚಿಂತೆಯು, **ತವ** - ಸಂಪೂರ್ಣಪರತಂತ್ರನಾದ ನಿನಗೆ, **ಕುತಃ** - ಎಲ್ಲಿಯದು ? ಜನ್ಮ ಮರಣಗಳೆರಡೂ ನಿನ್ನ ಚಿಂತೆಗೆ ಅವಕಾಶವಿಲ್ಲದೆ ಎರಡೂ ಕಳೆದುಹೋಗುತ್ತವೆ, ಸ್ಥಿತಿ ವಿಷಯದಲ್ಲಿ ಮಾತ್ರ ಚಿಂತೆ ಏತಕ್ಕೆಂಬ ಭಾವವು. ಈ ಅಭಿಪ್ರಾಯವೇ ಸವಿಸ್ತರಿಸಿ ಹೇಳಲ್ಪಡುತ್ತದೆ. **ಯಥೋತ್ಪತ್ತಿಃ** - ಜನ್ಮವು ಹೇಗೆ ನಿನ್ನ ಪ್ರಯತ್ನವಿಲ್ಲದೆ ಸರ್ವೇಶ್ವರ ಸಂಕಲ್ಪಾನುಸಾರ ನಡೆಯಿತೋ, **ಯಥಾನಾಶಃ** - ಮರಣವೂ ಕೂಡ ನಮಗೆ ಅಧೀನವಿಲ್ಲದೆ ಈಶ್ವರೇಚ್ಛೆ ಪ್ರಕಾರ ನಡೆಯುತ್ತದೋ, **ಸ್ಥಿತಿಃ** - ಸ್ಥಿತಿಯೂ ಕೂಡ, **ತದ್ವತ್** - ಅವುಗಳ ಹಾಗೆಯೇ, **ಭವಿಷ್ಯತಿ** - ಆಗುತ್ತದೆ ಪ್ರಾರಬ್ಧಕರ್ಮಾನುಗುಣವಾಗಿ ನಡೆಯುವ ಹಾಗೆ ಸ್ವಾಮಿಯಿಂದ ಸಂಕಲ್ಪಿಸಲ್ಪಟ್ಟಿರುತ್ತದೆ ಎಂಬ ಭಾವವು. "**ಅಚೇಷ್ಟಮಾನಂ** - ಏನೊಂದೂ ಪ್ರಯತ್ನಗಳನ್ನು ಮಾಡದಿರುವ, **ಆಸೀನಂ** - ಸುಮ್ಮನೆ ಕೂತುಕೊಂಡಿರುವ, **ಕಂಚಿತ್** - ಯಾವನೋ ಒಬ್ಬ ಅಲ್ಪನಾಗಿ ತೋರುವ ಮನುಷ್ಯನನ್ನು, **ಶ್ರೀಃ** - ಸಂಪತ್ತು, **ಉಪತಿಷ್ಠತಿ** - ಪ್ರಾರಬ್ಧ ಕರ್ಮಾನುಗುಣವಾಗಿ ಹೊಂದುತ್ತದೆ. ಸರ್ವೇಶ್ವರನ ಸಂಕಲ್ಪಾನುಸಾರ ಬಂದು ಸೇರುತ್ತದೆಂಬ ಭಾವವು, **ಅನ್ಯಃ** - ಬೇರೆ ಇನ್ನೊಬ್ಬನಾದರೋ, **ಕರ್ಮೀ** - ಪೂರ್ಣಪ್ರಯತ್ನಮೂಲಕ ಕಾರ್ಯವನ್ನುಮಾಡುವವನು, **ಕರ್ಮ** - ತಾನು ಸರ್ವ ವಿಧದಿಂದಲೂ ಮಾಡುವ ಕರ್ಮವನ್ನು, **ಅನುಸೃತ್ಯ** - ಅನುಸರಿಸಿ, ಅಥವಾ **ಕರ್ಮಾನುಸೃತ್ಯಾ** - ತಾನು ಮಾಡಿದ ಕರ್ಮಕ್ಕನುಗುಣವಾಗಿ, **ಪ್ರಾಶ್ಯಂ** - ಆಹಾರವನ್ನು

---

(೧) ಭಾರ. ಶಾಂತಿ. ೩೩೯.೧೩

ಕರ್ಮವಿಶೇಷಾಧೀನನ್ನಾಗ ಈಶ್ವರನ್ ಶೆಯ್ಯುಯುಮ್ ದೇಹಯಾತ್ರಾದಿ ಗಳಿಲ್ ಕಳೈತಲತ್ತು, ತಾಁ ಕಳೈನಾಲುಮ್ (೧) "ಉತ್ಪತನ್ನಪಿ ಚಾಕಾಶಂ ವಿಶನ್ನಪಿ ರಸಾತಲಂ। ಅಟನ್ನಪಿ ಮಹೀಂ ಕೃತ್ಸ್ನಾಂ ನಾದತ್ತಮುಪ

ಜೀವನವನ್ನು, ನಾಧಿಗಚ್ಛತಿ - ಹೊಂದುವದಿಲ್ಲವು. ನಾವು ಲೋಕದಲ್ಲಿ ಏನೊಂದೂ ಪ್ರಯತ್ನವನ್ನಾಗಲಿ, ಕೆಲಸವನ್ನಾಗಲಿ ಮಾಡದೇ ಇರುವವನಿಗೆ ಸಂಪತ್ತು ಪ್ರಾಪ್ತವಾಗುವದನ್ನು ಕಂಡಿರುವೆವು. ಹಾಗೆಯೇ ಸರ್ವಪ್ರಯತ್ನ ಮಾಡುತ್ತಾ ಸದಾ ಕಾರ್ಯದಲ್ಲೇ ನಿರತನಾಗಿರುವವನು ಜೀವನಕ್ಕೆ ಮಾರ್ಗವಿಲ್ಲದೆ ಕ್ಲೇಶಪಡುತ್ತಲಿರುವದನ್ನೂ ಕಂಡಿರುವೆವು ಇದೇತಕ್ಕೆಂದರೆ ಸರ್ವೇಶ್ವರನು ಈತನ ಪ್ರಾರಬ್ಧ ಕರ್ಮಾನುಸಾರ ಜೀವನವನ್ನು ಕಲ್ಪಿಸಿರುವದರಿಂದ ಹಾಗೆ ಪ್ರಾಪ್ತವಾಗುತ್ತದೆಂಬ ಭಾವವು. ಪ್ರಾರಬ್ಧಕರ್ಮರೀತ್ಯಾ ಸರ್ವೇಶ್ವರಸಂಕಲ್ಪವಿದ್ದರೆ ಪ್ರಯತ್ನವಿಲ್ಲದೆ ಐಶ್ವರ್ಯಉಂಟಾಗಬಹುದು ಸರ್ವೇಶ್ವರ ಸಂಕಲ್ಪವಿಲ್ಲದಿದ್ದರೆ ಎಷ್ಟು ಕಷ್ಟಪಟ್ಟರೂ ಪ್ರಯೋಜನವಿಲ್ಲವೆಂಬ ಭಾವವು. ಈ ಶ್ಲೋಕದ ಉತ್ತರಾರ್ಧವು ಕುಂಭಕೋಣದಲ್ಲಿ ಈಚಿಗೆ ಅಚ್ಚಾಗಿರುವ ಮಹಾಭಾರತ ಪ್ರತಿಯಲ್ಲಿ "ಕಶ್ಚಿತ್ಕರ್ಮಾನು ಸೃತ್ಯಾನ್ಯೋ ನಾ ಪ್ರಾಪ್ಯಮಧಿಗಚ್ಛತಿ" ಎಂದು ಇದೆ. ಅಪ್ರಾಪ್ಯಂ ನಾಧಿಗಚ್ಛತಿ ಎಂಬುವದಕ್ಕೆ ತನಗೆ ಲಭ್ಯವಲ್ಲದನ್ನು ಹೊಂದುವದಿಲ್ಲವೆಂಬರ್ಥವು, ಎಙ್ಗರಪಡಿಯೇ - ಎಂದು ಹೇಳಿರುವ ಹಾಗೆ, **ಪ್ರಾರಬ್ಧಕರ್ಮವಿಶೇಷಾಧೀನನಾಗ** - ಪ್ರಾರಬ್ಧ ಕರ್ಮವಿಶೇಷಕ್ಕನುಗುಣವಾಗಿ, **ಈಶ್ವರನ್ ಶೆಯ್ಯುಯುಮ್ ದೇಹಯಾತ್ರಾದಿಗಳಿಲ್** - ಈಶ್ವರನು ತನ್ನ ಸಂಕಲ್ಪ ಮಾತ್ರದಿಂದ ನಡಿಸುವ ಜೀವನ ಮೊದಲಾದವುಗಳಲ್ಲಿ, **ಕಳೈತಲತ್ತು** - ಆಸಕ್ತಿಯನ್ನು ಬಿಟ್ಟು, ಇದಕ್ಕೆ ಪ್ರತಿಸಂಧಾನಂ ಪಣ್ಣಿ ಎಂಬುವದರೊಂದಿಗೆ ಅನ್ವಯವು; **ತಾಁ ಕಳೈನಾಲುಮ್** - ಒಂದು ವೇಳೆ ತಾನು ಆಸಕ್ತಿಯನ್ನು ಮಾಡಿದರೂ ಕೂಡ, ಎಂದರೆ ತಾನು ಪ್ರಯಾಸಪಟ್ಟರೂ, ಪ್ರಾರಬ್ಧಕರ್ಮಾನುಗುಣವಾದ ಈಶ್ವರಸಂಕಲ್ಪವಿಲ್ಲದೆ ಲಭ್ಯವಲ್ಲವೆಂಬುವದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ:—"**ಆಕಾಶಂ** - ಆಕಾಶವನ್ನು ಕುರಿತು, **ಉತ್ಪತನ್ನಪಿ** - ಹಾರಿದರೂ, **ರಸಾತಲಂ** - ಪಾತಾಳವನ್ನು, **ವಿಶನ್ನಪಿ** - ಪ್ರವೇಶಿಸಿದರೂ, **ಕೃತ್ಸ್ನಾಂ** - ಸಂಪೂರ್ಣವಾದ, **ಮಹೀಂ** - ಭೂಮಿಯನ್ನು, **ಅಟನ್ನಪಿ** -

೧. ಶಾಂತಿಪರ್ವ ೩೫೯-೫೬

ತಿಷ್ಠತೇ," (೨)"ಯತ್ಕಿಂಚಿದ್ವರ್ತತೇ ಲೋಕೇ ಸರ್ವಂ ತನ್ಮದ್ವಿಚೇಷ್ಟಿತಂ। ಅನ್ಯೋಽನ್ಯನ್ ಚಿಂತಯತಿ ಸ್ವಚ್ಛಂದಂ ವಿದಧಾಮ್ಯಹಂ" ಎಜ್ಞ್ಗರಪಡಿಯೇ ಈಶ್ವರನ್ ನಿನವ್ವಿ ಪಡಿಯುಲ್ಲದು ಒನ್ನು ನಡವಾದೆನ್ನು ಪ್ರತಿಸಂಧಾನಂ ಪಣ್ಣಿ, "ಅಪ್ರಯತ್ನಾಗತಾಸ್ಸೇವ್ಯಾ ಗೃಹಸ್ಥೈರ್ವಿಷಯಾ

ಸಂಚರಿಸಿದರೂ, **ಅದತ್ತಂ** - ಪೂರ್ವಜನ್ಮಗಳಲ್ಲಿ, ಕೊಟ್ಟಿಟ್ಟುದುದಲ್ಲದು, **ನೋಪತಿಷ್ಠತೇ** - ಈ ಜನ್ಮದಲ್ಲಿ ಪ್ರಾಪ್ಯವಾಗುವದಿಲ್ಲವು. ಪ್ರಮಾಣವನ್ನು ಮೇಲಿನಭಿಪ್ರಾಯದ ಸಮರ್ಥನೆಗಾಗಿ ಉದಾಹರಿಸುತ್ತಾರೆ :—**ಲೋಕೇ** - ಲೋಕದಲ್ಲಿ, **ಯತ್ಕಿಂಚಿತ್** - ಯಾವುದಾದರೂ **ವರ್ತತೇ** - ಇರುತ್ತದೋ, **ಸರ್ವಂ ತತ್** - ಒಂದೂ ಬಿಡದೆ ಅದೆಲ್ಲವೂ, **ಮದ್ವಿಚೇಷ್ಟಿತಂ** - ನನ್ನ ಸಂಕಲ್ಪಾನುಸಾರ ನಡೆಯುವ ವ್ಯಾಪಾರವು. **ಅನ್ಯಃ** - ನಾನಲ್ಲದೆ ಬೇರೆ ಯಾವ ಕ್ಷೇತ್ರಜ್ಞನು, **ಅನ್ಯತ್** - ಬೇರೆ ವಿಧವಾಗಿ, **ಚಿಂತಯತಿ** - ಆಲೋಚಿಸಬಹುದು. **ಸ್ವಚ್ಛಂದಂ** - ನನ್ನ ಇಷ್ಟಾನುಸಾರವಾಗಿ ಎಂದರೆ ಸಂಕಲ್ಪಾನುಸಾರವಾಗಿ, **ವಿದಧಾಮಿ** - ಮಾಡುವೆನು. ಇದು ಸರ್ವೇಶ್ವರನ ವಾಕ್ಯವು **ಎಜ್ಞ್ಗರಪಡಿಯೇ** - ಎಂದು ಹೇಳಿರುವ ಹಾಗೆ **ಈಶ್ವರನ್ ನಿನವ್ವಿಪಡಿಯುಲ್ಲದು** - ಸರ್ವೇಶ್ವರನಿಂದ ಸಂಕಲ್ಪಿಸಿದ ಪ್ರಕಾರವಲ್ಲದೆ, **ಒನ್ನುಮ್ ನಡವಾದೆನ್ನು** - ಒಂದು ನಡೆಯುವದಿಲ್ಲವೆಂದು, **ಪ್ರತಿಸಂಧಾನಂಪಣ್ಣಿ** - ಮನಸ್ಸಿಗೆ ತಂದುಕೊಂಡು; ಇದರಿಂದ ಸರ್ವವೂ ಪ್ರಾರಬ್ಧಕರ್ಮದ ರೀತಿಯಲ್ಲಿ ಸರ್ವೇಶ್ವರ ಸಂಕಲ್ಪಾನುಸಾರ ನಡಿಯುವದರಿಂದ,

(೧) ದೇಹಮಾತ್ರಗಾಗಿ ಪ್ರಯಾಸವು ಮೋಕ್ಷಾರ್ಥಿಗೆ ಬೇಕಾಗಿಲ್ಲವು

(೨) ಪ್ರಯಾಸಪಟ್ಟರೂ ಈಶ್ವರಸಂಕಲ್ಪವಿಲ್ಲದಿದ್ದರೆ ಏನೂ ಲಭಿಸದು ಎಂಬ ತಿಳುವಳಿಕೆ ಇರತಕ್ಕದ್ದೆಂದು ಹೇಳಲ್ಪಟ್ಟಿತು. ಮುಂದೆ

(೩) ಪ್ರಯಾಸಪಡದೆ ತಾನಾಗಿಯೇ ಸಂಪತ್ತು ಮೊದಲಾದವು ಮುಮುಕ್ಷುವಿಗೆ ಲಭಿಸಿದರೆ ಅನುಭಾವ್ಯಗಳೆಂದು ಹೇಳುತ್ತಾರೆ. ಅದಕ್ಕೆ ಪ್ರಮಾಣವನ್ನು ಪ್ರದರ್ಶಿಸುತ್ತಾರೆ—**ಗೃಹಸ್ಥೈಃ** - ಗೃಹಸ್ಥಾಶ್ರಮದಲ್ಲಿರುವವರಿಂದ, **ಅಪ್ರಯತ್ನಾಗತಾಃ** - ತನ್ನ ಪ್ರಯತ್ನವಿಲ್ಲದೆ ತಾನಾಗಿಯೇ ಈಶ್ವರಸಂಕಲ್ಪಮೂಲಕ ಪ್ರಾಪ್ತವಾಗಿರುವ, **ವಿಷಯಾಃ** - ವಿಷಯಗಳು ಎಂದರೆ ಶಾಸ್ತ್ರವಿರುದ್ಧವಲ್ಲದ ವಿಷಯ ಸುಖಗಳು, **ಸದಾ** - ಯಾವಾಗಲೂ,

---

೨. ಭಾರತ ಶಾಂತಿ ೩೦೧-೩೫

ಸ್ವದಾ । ಪ್ರಯತ್ನೇನಾಪಿ ಕರ್ತವ್ಯಃ ಸ್ವಧರ್ಮ ಇತಿ ಮೇ ಮತಿಃ ॥"
"ನಾಹಾರಂ ಚಿನ್ತಯೇತ್ಪ್ರಾಜ್ಞೋ ಧರ್ಮಮೇವಾನುಚಿಂತಯೇತ್ ।
ಆಹಾರೋಹಿ ಮನುಷ್ಯಾಣಾಂ ಜನ್ಮನಾ ಸಹ ಜಾಯತೇ" ಎನ್ನುವ
ಪರಾಶರ ಗೀತಾದಿಗಳಲ್ಲಿಯೂ, "ಸಸನ್ನಿಪತಿತಂ ಧರ್ಮ್ಯಮುಪಭೋಗಂ

ಸೇವ್ಯಾಃ - ಅನುಭವಿಸತಕ್ಕವುಗಳು. ವಿಷಯಸುಖಾನುಭವಕ್ಕಾಗಿ ಪ್ರಯತ್ನವು ಬೇಕಿಲ್ಲವು, ತಾನಾಗಿ ಪ್ರಾಪ್ತವಾದವುಗಳು ಅಧರ್ಮಗಳಲ್ಲದಿದ್ದರೆ ಸೇವಿಸಬಹುದು. ಆದರೆ ಪ್ರಯತ್ನವನ್ನೆಲ್ಲಿ ಮಾಡತಕ್ಕದ್ದೆಂದರೆ ಹೇಳಲ್ಪಡುತ್ತದೆ— **ಪ್ರಯತ್ನೇನಾಪಿ** - ಪ್ರಯತ್ನವನ್ನು ಮಾಡಿಯೂ ಕೂಡ, **ಸ್ವಧರ್ಮಃ** - ತನ್ನ ತನ್ನ ವರ್ಣಾಶ್ರಮ ಧರ್ಮವು, **ಕರ್ತವ್ಯಃ** - ಮಾಡತಕ್ಕದ್ದು, ಇತಿ - ಎಂಬದಾಗಿ, **ಮೇಮತಿಃ** - ನನ್ನಭಿಪ್ರಾಯವು ಎಂದು ಶ್ರೀ ಭೀಷ್ಮರು ಯುಧಿಷ್ಠಿರನಿಗೆ ಪರಾಶರಗೀತಾ ವಿಷಯವನ್ನು ತಿಳಿಸಿದ ಪ್ರಕರಣವು. ಇಲ್ಲಿ ಪ್ರಯತ್ನವಿಲ್ಲದೆ ಪ್ರಾಪ್ತವಾದ ಭೋಗಗಳನ್ನು ಸೇವಿಸಬಹುದೆಂದು ಹೇಳಿರುವದು ಗೃಹಸ್ಥಾಶ್ರಮಿಯನ್ನು ಮಾತ್ರ ಕುರಿತು ಹೇಳಿದುದೇ ವಿನಾ ಸನ್ಯಾಸಾದಿ ಆಶ್ರಮಿಗಳನ್ನು ಕುರಿತು ಹೇಳಿದುದಲ್ಲವು. ಇದರಿಂದ ಮೋಕ್ಷಾರ್ಥಿಯು ಈ ಭೋಗಗಳಿಗಾಗಿ ಪ್ರಯತ್ನ ಮಾಡುವದು ಯುಕ್ತವಲ್ಲವು. ಹಾಗೆಯೇ ಅನೇಕ ದೊಡ್ಡ ಮನುಷ್ಯರು ಹೇಗೆ ಆದೆತಲ್ಲಾ ಎಂಬ ಚಿನ್ತೆಯಿಂದ ಧನಾರ್ಜನೆಗಾಗಿ ಪುನಃ ಪ್ರಯತ್ನ ಮಾಡುವದು ಅನುಚಿತವೆಂದೂ ಪಿತ್ರಾರ್ಜಿತ ಸ್ವಾರ್ಜಿತ ಧನವಿದ್ದರೂ ನಾಳಿನ ಬುದ್ಧಿಯಿಂದ ಹೆಚ್ಚಾಗಿ ಸಂಪಾದಿಸಬೇಕೆಂಬ ಕ್ಷೋಭಬುದ್ಧಿಯು ಗರ್ಹಿತವಾದುದೆಂದೂ, ಇಲ್ಲಿ ಹೇಳಲ್ಪಟ್ಟಿತು. ಪ್ರಯತ್ನವನ್ನು ಎಲ್ಲಿ ಈ ಮುಮುಕ್ಷುವು ಮಾಡತಕ್ಕದ್ದೆಂದರೆ ತನ್ನ ವರ್ಣಾಶ್ರಮಧರ್ಮವನ್ನು ಕಾಪಾಡಿಕೊಂಡು ನಿತ್ಯಕರ್ಮಾನುಷ್ಠಾನರೂಪ ತಪಸ್ಸನ್ನು ಮಾಡುವದರಲ್ಲಿ ಎಂದು ತಿಳಿಯತಕ್ಕದ್ದು. "ಪ್ರಾಜ್ಞಃ - ವಿಶೇಷವಾಗಿ ತಿಳಿದವನು ಬುದ್ಧಿಶಾಲಿಯು, ತನ್ನ ಆಹಾರವನ್ನು ಕುರಿತು, **ನಚಿನ್ತಯೇತ್** - ಚಿನ್ತಿಸತಕ್ಕದ್ದಲ್ಲವು, ಆದರೆ ಧರ್ಮಮೇವ - ತಾನು ಶಾಸ್ತ್ರಾನುಗುಣವಾಗಿ ನಡಿಸತಕ್ಕ ಕರ್ಮವನ್ನು ಎಂದರೆ ವರ್ಣಾಶ್ರಮ ಧರ್ಮ ಮೊದಲಾದವನ್ನು ಮಾತ್ರ, **ಚಿನ್ತಯೇತ್** - ಆಲೋಚಿಸತಕ್ಕದ್ದು. ಆಹಾರೋಹಿ - ಆಹಾರವಾದರೋ **ಮನುಷ್ಯಾಣಾಂ**- ಮನುಷ್ಯರಿಗೆ, ಜನ್ಮನಾ ಸಹ- ಅವರುಗಳ ಜನ್ಮದೊಂದಿಗೆ, ಜಾಯತೇ-ಉಂಟಾಗುತ್ತದೆ ಎನ್ನು- ಎಂಬದಾಗಿ, ಪರಾಶರಗೀತಾದಿಗಳಲ್ಲಿಯೂ- ಪರಾಶರ ಗೀತೆ ಮೊದಲಾದವುಗಳಲ್ಲಿಯೂ, **"ಯದೃಚ್ಛಯಾ** - ನನ್ನ ಇಚ್ಛೆಯಿಲ್ಲದೇನೇ ಎಂದರೆ

ಯದೃಚ್ಛಯಾ । ಪ್ರತ್ಯಾಚಕ್ಷೇ ನಚಾಪ್ಯೇನ ಮನುರುಂಧೇ ಸುದುರ್ಲಭಮ್ ।" ಎನ್ರು ಅಜಗರೋಪಾಖ್ಯಾನತ್ತಿಲುಮ್ ಶೊಲ್ಲುಗಿರಪಡಿಯೇ ಶಾಸ್ತ್ರ ವಿರುದ್ಧಮಲ್ಲಾದ ವಿಷಯಂಗಳ್ ತಾನೊರುವಿರಗು ಶೆಯ್ಯಾದಿರುಕ್ಕ ಭಗವತ್ಸಂಕಲ್ಪತ್ತಾಲೆ ತಾನೇ ವರಕ್ಕಂಡು ಪ್ರಾರಬ್ಧ ಕರ್ಮಫಲಮಾನ, ತನಿಶು ತೀರುಗಿರದೆನ್ರು, ವಿಲಕ್ಕಾದೇ ಯನುಭವಿಕ್ಕೈಯುಮ್ ;

ನನ್ನ ಪ್ರಯತ್ನ ಯಾವುದೂ ಇಲ್ಲದೆ, ಸನ್ನಿಪತಿತಂ-ಬಂದಿರುವ, ಉಂಟಾಗಿರುವ, **ಧರ್ಮ್ಯಂ** - ಧರ್ಮದಿಂದ ಸೇರಿದ, **ಉಪಭೋಗಂ** - ವಿಷಯ ಸುಖಾನುಭವವನ್ನು, **ನ ಪ್ರತ್ಯಾಚಕ್ಷೇ** – ಬಿಟ್ಟುಬಿಡುವದಿಲ್ಲವು. **ಸುದುರ್ಲಭಂ** – ಪಡೆಯಲು ತುಂಬಾ ಅಶಕ್ತವಾದ **ಏನಂ** – ಈ ಉಪಭೋಗವನ್ನು, **ನಾನುರುಂಧೇ** - ನಾನು ಆಶೆಪಡುವದಿಲ್ಲವು ; **ನಾನುರುಧ್ಯೇ** - ಎಂಬ ಪಾಠಾಂತರವೂ ಉಂಟು. ಸ್ವಪ್ರಯತ್ನವಿಲ್ಲದೆ ತಾನಾಗಿಯೇ ಈಶ್ವರಸಂಕಲ್ಪಮೂಲಕ ಒದಗಿದ ಉಪಭೋಗಗಳನ್ನು ತಿರಸ್ಕರಿಸುವದಿಲ್ಲವು. ಆ ಉಪಭೋಗವಾದರೋ **ಧರ್ಮ್ಯಂ** - ಧರ್ಮಪ್ರತಿಷ್ಠಿತವಾಗಿರಬೇಕು, ಅಧರ್ಮಪ್ರಾಪ್ತವಾಗಿರಕೂಡದು. ಯಾರದೋ ಇತರರ ದ್ರವ್ಯವು ಯಾದೃಚ್ಛಿಕವಾಗಿಯೇ ಸಿಕ್ಕಬಹುದು ; ಅದು ಧರ್ಮ್ಯವಲ್ಲದೆ ಪ್ರತಿಗ್ರಹಯೋಗ್ಯವಲ್ಲವಾದುದರಿಂದ ಅಂಗೀಕರಿಸಕೂಡದು. ಮತ್ತು ಪಡೆಯಲು ತುಂಬಾ ಕಷ್ಟತರವಾದುವನ್ನು ಅಪೇಕ್ಷಿಸಿ, ಅದಕ್ಕಾಗಿ ಕ್ಲೇಶಪಟ್ಟು ಸಂಪಾದಿಸುವದೂ ಯುಕ್ತವಲ್ಲವೆಂದು ಇದರಿಂದ ಹೇಳಲ್ಪಟ್ಟಿತು." **ಎನ್ರು** - ಎಂಬದಾಗಿ, **ಅಜಗರೋಪಾಖ್ಯಾನತ್ತಿಲುಮ್** - ಮಹಾಭಾರತ ಮೋಕ್ಷಧರ್ಮದಲ್ಲಿ ಶ್ರೀಭೀಷ್ಮರು ಯುಧಿಷ್ಠಿರಾದಿಗಳಿಗೆ ವಿರಕ್ತಿಯು ಮುಮುಕ್ಷುವಿಗೆ ಸುಖದಾಯಕವೆಂದು ಹೇಳಿದ ಪ್ರಹ್ಲಾದಾಜಗರ ಮುನಿಸಂವಾದರೂಪ ಉಪಾಖ್ಯಾನದಲ್ಲಿ, **ಶೊಲ್ಲಗಿರಪಡಿಯೇ** – ಹೇಳಿರುವ ಹಾಗೆ, **ಶಾಸ್ತ್ರವಿರುದ್ಧಮಲ್ಲಾ ವಿಷಯಂಗಳ್** ಶಾಸ್ತ್ರವಿರುದ್ಧವಲ್ಲದ ವಿಷಯ ಸುಖಗಳು, ಇದು ಹಿಂದೆ ಪ್ರಮಾಣವಚನದಲ್ಲಿರುವ **ಧರ್ಮ್ಯಮುಪಭೋಗಂ** - ಎಂಬುವದರ ತಾತ್ಪರ್ಯವು ; **ತಾನೊರು ವಿರಗು ಶೆಯ್ಯಾದಿರುಕ್ಕ** – ತಾನು ಯಾವುದೊಂದು ಉಪಾಯ ಎಂದರೆ ಪ್ರಯತ್ನಮಾಡದೆ ಇದ್ದುಕೊಂಡು, ಎಂದರೆ ಯಾದೃಚ್ಛಿಕವಾಗಿ, **ಭಗವತ್ಸಂಕಲ್ಪತ್ತಾಲೆ ತಾನೇ ವರಕ್ಕಂಡು** - ಸರ್ವೇಶ್ವರ ಸಂಕಲ್ಪದಿಂದ ತಾನಾಗಿಯೇ ಪ್ರಾರಬ್ಧ ಕರ್ಮರೂಪ ಸುಕೃತ ಮೂಲಕ ಬಂದದ್ದಾಗಿದ್ದರೂ, **ಪ್ರಾರಬ್ಧಕರ್ಮಫಲಮಾನ** - ಪ್ರಾರಬ್ಧಕರ್ಮದ ಫಲರೂಪವಾದ, **ತನಿಶು ತೀರುಗಿರದೆನ್ರು** - ಋಣವು ತೀರುತ್ತದೆಂದು, **ವಿಲಕ್ಕಾದೆ ಅನುಭವಿಕ್ಕೈ**

ಇಪ್ಪಡಿ ಕರ್ಮವಿಶೇಷಾಧೀನವಾಗ ವರುಗಿರ ಪ್ರಾಪ್ಯಾನ್ತರ ಲಾಭಾಲಾಭಂಗಳಿಲ್ (೧) "ತಯೋಃ ರೇಕತರೋ ರಾಶಿರ್ಯದ್ಯೇನ ಮುಪಸನ್ನನೋತ್। ನ ಸುಖಂ ಪ್ರಾಪ್ಯ ಸಂಹೃಷ್ಯೇದ್ದುಃಖಂ ಪ್ರಾಪ್ಯ ನ ಸಂಜ್ವ

ಯುಮ್ - ವಿರಕ್ತಿಯಿಂದ ನಿರಾಕರಿಸದೆ ಅನುಭವಿಸೋಣವೂ; ತನ್ನ ಕ್ಲೇಶ ಪ್ರಯತ್ನಗಳು ಯಾವುದೊಂದೂ ಇಲ್ಲದೆ ಪ್ರಾರಬ್ಧ ಸುಕೃತಾನುಸಾರವಾಗಿ ಸ್ವಾಮಿಸಂಕಲ್ಪದಿಂದ ಯಾದೃಚ್ಛಿಕವಾಗಿ ಸುಖಪ್ರಾಪ್ತವಾದರೆ ವಿರಕ್ತಿಯಿಂದ ಅದನ್ನೇನೂ ತಿರಸ್ಕರಿಸುವ ಆವಶ್ಯಕವಿಲ್ಲವು; ಅದರಲ್ಲಿ ಸಂಗವನ್ನು ತ್ಯಜಿಸಿ, ಅದು ಶಾಸ್ತ್ರವಿರುದ್ಧವಲ್ಲದೇ ಇದ್ದ ಪಕ್ಷದಲ್ಲಿ ಪ್ರಾರಬ್ಧಕರ್ಮ ಭಾಗವು ಕಳೆಯುತ್ತದೆಂಬ ಭಾವನೆಯಿಂದ ಅನುಭವಿಸಬಹುದು ಎಂದು ಹೇಳಿರುತ್ತಾರೆ. ಆದರೆ ತನಗೆ ಈಗ ಲಭ್ಯವಿಲ್ಲದೇ ಇರುವ ಸುಖಾನುಭವಗಳಿಗಾಗಿ ತುಂಬಾ ಕಷ್ಟಪಟ್ಟು ಸಾಧಿಸಲು ಪ್ರಯತ್ನಿಸುವುದು ಪ್ರಪನ್ನನಿಗೆ ಸರಿಯಲ್ಲವು. ಈವತ್ತು ಮೃಷ್ಟಾನ್ನವೂ, ಪೀತಾಂಬರವೂ, ಪರ್ಯಂಕ ಶಯನವೂ, ತಾನಾಗಿಯೇ ಪ್ರಾಪ್ತವಾಗಬಹುದು; ಇವುಗಳಲ್ಲಿ ಮಮತೆಯನ್ನಿಡದೆ ಅನುಭವಿಸಬಹುದು, ಇನ್ನೊಂದು ದಿನ ಕಂದ ಮೂಲಾದಿಗಳೂ, ಹರಕು ಬಟ್ಟೆಯೂ, ಪೃಥ್ವೀಶಯನವೂ ಪ್ರಾಪ್ತವಾಗಬಹುದು. ಆಗಲೂ ನಿಶ್ಚಲಿತಮನಸ್ಕನಾಗಿ ಮೊದಲು ಸುಖವೆಂಬ ಹರ್ಷವೂ ಈಗ ದುಃಖವೆಂಬ ಖೇದವೂ ಇಲ್ಲದೆ ವಿರಕ್ತಿಭಾವದಿಂದಿರುವದೇ ಪರಮಾರ್ಥನಿಷ್ಠೆಗೆ ಲಕ್ಷಣವೆಂದು ಇಲ್ಲಿ ಹೇಳಲ್ಪಟ್ಟಿತು. ಇದನ್ನೇ ಮುಂದೆ ಅನುವಾದ ಮಾಡಿ ಹೇಳಿ ಹೀಗೆಲ್ಲಾ ವಿರಕ್ತಿಭಾವವಿದ್ದುದಾದರೆ, ಇನ್ನು ಯಾವದರಲ್ಲೂ ರುಚಿ ಇರಕೂಡದೋ ಎಂದರೆ ಐಹಿಕದಲ್ಲೇನೋ ವಿರಕ್ತಿಯು ಈತನ ಪುರುಷಾರ್ಥನಿಷ್ಠೆಗೆ ಯೋಗ್ಯವಾದುದು, ರುಚಿಯು ಇರತಕ್ಕದ್ದು ಪರಮಪ್ರಾಪ್ಯ ಕೈಂಕರ್ಯದಲ್ಲಿ ಎಂದು ಹೇಳುತ್ತಾರೆ ಇದೂ ಪುರುಷಾರ್ಥ ನಿಷ್ಠೆಗೆ ಲಕ್ಷಣವೆಂದುಪದೇಶಿಸುತ್ತಾರೆ.

ಇಪ್ಪಡಿ - ಈ ಮೇಲೆ ಹೇಳಿದ ರೀತಿಯಲ್ಲಿ, ಕರ್ಮವಿಶೇಷಾಧೀನವಾನ - ಪ್ರಾರಬ್ಧಕರ್ಮವಿಶೇಷವನ್ನನುಸರಿಸಿ, ವರುಗಿರ - ಬರುವ, ಪ್ರಾಪ್ಯಾನ್ತರ ಲಾಭಾಲಾಭಂಗಳಿಲ್ - ಪ್ರಾಪ್ಯವಲ್ಲದೆ ಬೇರೆಯಾದ ಎಂದರೆ ಐಹಿಕಗಳಾದ ಲಾಭಾಲಾಭಗಳಲ್ಲಿ, "ತಯೋಃ - ಹಿಂದಿನ ವಾಕ್ಯದಲ್ಲಿ ದುಃಖಾನಿ ಚ ಸುಖಾನಿ

(೧) ಭಾರ ಶಾಂತಿ ೧೭೫-೫.

ರೇತ್ ॥" ಎನ್ನುವುದು (೨) ಉಳದೆನ್ನಿರುವನಾವಾರ್" ಎನ್ನುವುದು, ಕೊಲ್ಲುಗಿರಪಡಿಯೋ: ಹರ್ಷಶೋಕಂಗಳತ್ತು ಸ್ವರೂಪಾನುರೂಪವಾನ

ಚ ಎಂಬಿರುವದರಿಂದ, ಆ ಸುಖದುಃಖಗಳಲ್ಲಿ, ಏಕತರೋ ರಾಶಿಃ - ಒಂದಾದ ರಾಶಿಯು: ಎಂದರೆ ಸುಖವೇ ಆಗಲಿ ಅಥವಾ ದುಃಖವೇ ಆಗಲಿ, ಏನಂ - ಈ ಚೇತನನನ್ನು ಉಪಸನ್ನ ಮೇಷ್ಯದಿ - ಬಂದು ಸೇರಿದುದಾದರೆ, ಸುಖಂ ಪ್ರಾಪ್ಯ - ಸುಖವನ್ನು ಹೊಂದಿ, ನ ಸಂಹೃಷ್ಯೇತ್ - ಸಂತೋಷಪಡಕೂಡದು, ದುಃಖಂ ಪ್ರಾಪ್ಯ - ದುಃಖವನ್ನು ಹೊಂದಿ, ನ ಸಂಜ್ವರೇತ್ - ಪರಿತಾಪಪಡತಕ್ಕದ್ದಲ್ಲವು" ಎನ್ನು - ಎಂದು ಹೇಳಿರುವ ಹಾಗೆ, ಹರ್ಷಶೋಕಙ್ಗಳತ್ತು - ಹರ್ಷ ಶೋಕಗಳನ್ನು ಬಿಟ್ಟು ಎಂದು ಮುಂದೆ ಇರುತ್ತದೆ. ಈ ಅಭಿಪ್ರಾಯವೇ ಗೀತೆಯಲ್ಲಿ ಅನೇಕ ಕಡೆಯಲ್ಲಿ "ಸಿದ್ಧ್ಯಸಿದ್ಧ್ಯೋಸ್ಸಮೋ ಭೂತ್ವಾ" ಎಂದೂ, "ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ" ಎಂದೂ, "ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ" ಎಂದೂ ಹೇಳಲ್ಪಟ್ಟಿರುತ್ತದೆ. ಶ್ರೀಮದ್ರಾಮಾಯಣದಲ್ಲಿ ರಾಜ್ಯಭ್ರಷ್ಟನಾಗಿ ಅಣ್ಣನು ಕಾಡಿಗೆ ಹೋಗಬೇಕಾಗಿ ಬಂತಲ್ಲಾ ಎಂಬ ರೋಷದಿಂದಿರುವ ಲಕ್ಷ್ಮಣನನ್ನು ಕುರಿತು ಶ್ರೀರಾಮನು ಹೇಳುತ್ತಾನೆ

(೩) "ಮಾಚ ಲಕ್ಷ್ಮಣ ಸಂತಾಪಂ ಕಾರ್ಷೀರ್ಲಕ್ಷ್ಮ್ಯಾ ವಿಪರ್ಯಯೇ।
ರಾಜ್ಯಂ ವಾ ವನವಾಸೋ ವಾ ವನವಾಸೋ ಮಹೋದಯಃ"

ಓ, ಲಕ್ಷ್ಮಣನೇ ರಾಜ್ಯಲಕ್ಷ್ಮಿಯು ಕೈಬಿಟ್ಟು ಹೋಯಿತೆಂದು ನಿನಗೆ ಸಂತಾಪವು ಬೇಡ, ರಾಜ್ಯವಾದರೇನು ವನವಾಸವಾದರೇನು, ಹಾಗೆ ನೋಡಿದರೆ ವನವಾಸವೇ ಸರ್ವಶ್ರೇಯಸ್ಕರವು" ಎಂಬ ಶ್ಲೋಕತಾತ್ಪರ್ಯವು ಇಲ್ಲಿ ಅನುಸಂಧೇಯವು; ಹಾಗೆಯೇ ಅದೇ ಪ್ರಕರಣದಲ್ಲೇ

(೪) ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ।
ಯಚ್ಚ ಕಿಂಚಿತ್ತಥಾ ಭೂತಂ ನನು ದೈವಸ್ಯ ಕರ್ಮತತ್ ॥"

ಸುಖದುಃಖಗಳೂ, ಭಯಕ್ರೋಧಗಳೂ, ಲಾಭಾಲಾಭಗಳೂ, ಬಂಧಮೋಕ್ಷಗಳೂ, ಮತ್ತು ಇನ್ನು ಯಾವುವು ಅಚಿಂತ್ಯಕಾರಣವುಳ್ಳದೋ, ಅವೆಲ್ಲವೂ ದೈವ

(೨) ಇರಂಡಾನ್ತಿರುವಂದಾದಿ ೪೫. (೩) ರಾ. ಅಯೋಧ್ಯಾ ೨೨-೨೮.

(೪) ರಾಮಾ ಅಯೋಧ್ಯಾ ೨೨-೨೨

ಪರಮಪ್ರಾಪ್ಯಕೈಂಕರ್ಯತ್ತಿಲೆ ರುಚಿಯುಮ್ ; ಸ್ತೋತ್ರತ್ತಿಲುಮ್ ಶ್ರೀವೈಕುಂಠ ಗದ್ಯಾದಿಗಳಿಲುಮ್ ಕದಾ ಕದಾ ಎನ್ರು ಪಾರಿಪ್ಪುಲತ್ತಪ್ಪಣ್ಣುಗಿರ ಪ್ರಾಪ್ತಿಯಿಲ್ ತ್ವರೈಯುಮ್, ನಡೈಯಾಡಿತ್ತಾಗಿಲ್,

---

ಕಾರ್ಯವು ಎಂದರೆ ಪ್ರಾರಬ್ಧಕರ್ಮಾನುಸಾರ ಈಶ್ವರನಿಂದ ಸಂಕಲ್ಪಿಸಲ್ಪಟ್ಟವು ಎಂಬ ಭಾವವು.

ಉಳದೆನ್ರು - ತನಗೆ ತುಂಬಾ ಸಂಪತ್ತಿದೆ ಎಂದು **ಇರುಮಾ ಪ್ಪಾರ್** - ಗರ್ವಪಡುವದಿಲ್ಲವು" ಎನ್ರುಮ್ ಶೊಲ್ಲುಗಿರಪಡಿಯೇ ಎಂದು ಹೇಳಿರುವ ಹಾಗೆ, ಹರ್ಷಶೋಕಗಳನ್ನು ತ್ಯಜಿಸಿ, ಎಂದಿರುತ್ತದೆ. ಈ ಪೂರಾಪಾಶುರವು ಯಾವುದೆಂದರೆ :—

ಉಳದೆನ್ರಿರುಮಾಪ್ಪಾರುಣ್ಡಿಲ್ಲೈಯೆನ್ರು
ತಳರ್ ತಲ ತನರುಕುಮ್ ಶಾರ್ ಅಳವರಿಯ
ವೇದತ್ತಾ ವೇಙ್ಗಡತ್ತಾನ್ ವಿಣ್ಣೋರ್ ಮುಡಿ ತೋಯುಮ್
ಪಾದತ್ತಾನ್ ಪಾದಮ್ಪಯನ್ರು.

ಇದರರ್ಥವು :—**ಅಳವರಿಯ** - ಅಪರಿಮಿತವಾದ, **ವೇದತ್ತಾನ್** , ವೇದಗಳಿಂದ ಪ್ರತಿಪಾದಿಸಲ್ಪಟ್ಟಿರುವವನು, ಹಾಗೆ ಶಬ್ದಪ್ರಮಾಣಮಾತ್ರದಿಂದಲೇ ತಿಳಿಯಲು ಸಾಧ್ಯನಾದರೂ, **ವೇಙ್ಗಡತ್ತಾನ್** ದಿವ್ಯವೇಙ್ಕಟಾಚಲವಾಸಿಯಾಗಿ ಅರ್ಚಾರೂಪದಿಂದ ತನ್ನ ಸೌಲಭ್ಯಸೌಶೀಲ್ಯಾದಿಗಳಿಂದ ದೃಗ್ಗೋಚರನಾಗಿರುವವನು, **ವಿಣ್ಣೋರ್ ಮುಡಿ ತೋಯುಮ್ ಪಾದತ್ತಾನ್** - ನಿತ್ಯಸೂರಿಗಳ ಶಿರಸ್ಸುಗಳು ಸೇರಿರುವ ಪಾದಗಳನ್ನುಳ್ಳ ಸರ್ವೇಶ್ವರನ, **ಪಾದಂ** - ಚರಣವನ್ನು, **ಪಯನ್ರು**- ಆಶ್ರಯಿಸಿ, **ಉಳದೆನ್ರು** - ತನಗೆ ತುಂಬಾ ಐಶ್ವರ್ಯವಿದೆ ಎಂದು, **ಇರುಮಾಪ್ಪಾರ್** - ಗರ್ವಪಡರು, **ಉಣ್ಡಿಲ್ಲೈಯೆನ್ರು** - ಮೊದಲು ಇದ್ದು ಈಗ ಇಲ್ಲವೆಂದು, **ತಳರ್ತಲ್** - ಶೋಕಿಸುವವರ, **ಅದನರುಕುಮ್** - ಅದರ ಹತ್ತಿರ ಕೂಡ, **ಶಾರಾರ್** - ಸೇರುವದಿಲ್ಲವು. ಅದುದರಿಂದ ಪುರುಷಾರ್ಥನಿಷ್ಠೆಯೆಂದು ಹೇಳುವ ಪುರುಷನಲ್ಲಿ ಐಹಿಕ ಸುಖೋಪಭೋಗಗಳಲ್ಲಿ ರುಚಿಯಿಲ್ಲದೆಯೂ ಸುಖದುಃಖಲಾಭಾಲಾಭಗಳಲ್ಲಿ ಹರ್ಷಶೋಕಗಳಿಗೆ ಅವಕಾಶವಿಲ್ಲದೆಯೂ ಇರಬೇಕೆಂದು ಹೇಳಲ್ಪಟ್ಟಿತು. ಇನ್ನು ಯಾವುದರಲ್ಲಿ ಅಭಿರುಚಿ ಇರಬೇಕೆಂದರೆ ಹೇಳುತ್ತಾರೆ :—

ಸ್ವರೂಪಾನು ರೂಪನೂನ - ತನ್ನ ಪ್ರಪನ್ನ ಸ್ವರೂಪಕ್ಕೆ ಯೋಗ್ಯವಾದ, ಅಥವಾ ಸರ್ವೇಶ್ವರನಿಗೆ ದಾಸಭೂತನಾದ ಆತ್ಮಾವಿನ ಸ್ವರೂಪಕ್ಕೆ ಅನುಗುಣವಾದ, **ಪರಮ ಪ್ರಾಪ್ಯ** - ಸರ್ವೋತ್ಕೃಷ್ಟನಾದ ಶ್ರಿಯಃಪತಿಯ, ಕೈಙ್ಕರ್ಯ **ತ್ತಿಲೆ ರುಚಿಯುಮ್** ಕೈಂಕರ್ಯ ಪ್ರಾಪ್ತಿಯಲ್ಲಿ ಅಭಿರುಚಿಯೂ; ಇದರಿಂದ ಐಹಿಕಭೋಗಗಳಲ್ಲಿ ಆಶೆಯನ್ನು ತೊರೆದು ಮುಂದೆ ಪ್ರಾಪ್ತವಾಗುವ ಮೋಕ್ಷದೆಸೆಯಲ್ಲಿ ಭಗವದ್ಕೈಂಕರ್ಯವನ್ನು ಮಾಡಬೇಕೆಂಬ ಕುತೂಹಲವಿರಬೇಕೆಂದು ಹೇಳಲ್ಪಟ್ಟಿತು.

ಸ್ತೋತ್ರತ್ತಿಲುಮ್-ಶ್ರೀಯಾಮುನೇಯರವರ ಸ್ತೋತ್ರರತ್ನದಲ್ಲೂ, ಶ್ರೀ **ವೈಕುಂತಗದ್ಯಾದಿಗಳಿಲುಮ್** - ಶ್ರೀಯತಿವರ್ಯರು ರಚಿಸಿದ ಶ್ರೀ ವೈಕುಂಠ ಗದ್ಯವೇ ಮೊದಲಾದವುಗಳಲ್ಲೂ, **ಕದಾ ಕದಾ ಎನ್ರುವಾಯ್ ಪುಲಮ್ಬಪ್ಪಣ್ಣಗಿರ** - ಯಾವಾಗ ಯಾವಾಗ ನೋಡುವೆನೋ ಎಂದು ಪ್ರಲಾಪಿಸುವ ಹಾಗೆ ಮಾಡುವ, **ಪ್ರಾಪ್ತಿಯಿಲ್ ತ್ವರೆಯುಮ್** - ದಿವ್ಯವೈಕುಂತವನ್ನು ಹೋಗಿ ಸೇರಿ ಸರ್ವೇಶ್ವರನನ್ನು ಸೇರುವ ಪ್ರಾಪ್ತಿಯಲ್ಲಿ ತ್ವರೆಯೂ, **ನಡೈಯಾಡಿತ್ತಾಗಿಲ್** - ಇದ್ದುದೇಯಾದರೆ, **ಪರಮಪುರುಷಾರ್ಥತ್ತಿಲೆ ನಿಷ್ಠೈಯುಂಡೆನ್ರುರಿಯಲಾಮ್** ಎಂಬುವದರೊಂದಿಗೆ ಅನ್ವಯವು. ಸರ್ವೇಶ್ವರನನ್ನು ಸೇರಿ ಆತನಿಗೆ ಕೈಂಕರ್ಯವನ್ನೆಸಗುವ ಸಾಮ್ರಾಜ್ಯಪದವಿಯು ಇನ್ನೆಷ್ಟು ದಿನಗಳಿಗೆ ಲಭಿಸುತ್ತದೋ, ಶೀಘ್ರದಲ್ಲಿ ದೊರೆಯಕೂಡದೇ ಎಂಬ ಆತುರವಿರಬೇಕೆಂದು ಹೇಳುತ್ತಾರೆ. ಅನೇಕ ಪ್ರಪನ್ನರಾದ ಆಳ್ವಾರಾಚಾರ್ಯರುಗಳು ಹಾಗೆ ವಿಳಂಬವನ್ನು ಸಹಿಸದವರಾಗಿ ಎಂದಿಗೆ ಆತನ ಪಾದಕಮಲಸೇವೆಯು ಪ್ರಾಪ್ತಿಯಾಗುತ್ತದೋ ಎಂದು ಪ್ರಾರ್ಥನೆಮಾಡುತಾ ಕಾಲನಿರೀಕ್ಷಣೆಯನ್ನು ಮಾಡುತ್ತಾರೆಂಬುವದಕ್ಕೆ ಒಂದೆರಡು ನಿದರ್ಶನಗಳನ್ನು ಪ್ರದರ್ಶಿಸುತ್ತಾರೆ. ಶ್ರೀ ಆಳವಂದಾರ್ರವರು ಸ್ತೋತ್ರರತ್ನದಲ್ಲಿ "**ಧನಂ ಮದೀಯಂ ತವಪಾದಪಂಕಜಂ ಕದಾನು ಸಾಕ್ಷಾತ್ಕರವಾಣಿ ಚಕ್ಷುಷಾ** ಪ್ರಪತ್ತ್ಯಧಿಕಾರಿಗೆ ಸಾಮರ್ಥ್ಯವೂ ಅರ್ಥಿತ್ವವೂ ಇರತಕ್ಕದ್ದು ; ಈ ಶ್ಲೋಕದಿಂದ ಅರ್ಥಿತ್ವವುಂಟೆಂದು ಪ್ರದರ್ಶಿಸುವದಕ್ಕಾಗಿ ಸರ್ವೇಶ್ವರನು, ಅನುಗ್ರಹಿಸಿದ ತೀವ್ರಭಕ್ತಿಯಿಂದ ಆತನ ಅತಿ ರಮಣೀಯವಾಗಿ ಅತಿಭೋಗ್ಯಭೂತನಾದ ಮತ್ತುನನ್ನ ಮನೋರಥವನ್ನು ಬಹು ಶೀಘ್ರವಾಗಿ ಹೊಂದಿಸುವ ಧನರೂಪವಾಗಿರುವಪಾದಕಮಲಗಳನ್ನು ನಾನು ಯಾವಾಗ ಕಣ್ಣಿನಿಂದ ಸಾಕ್ಷಾತ್ಕರಿಸುವೆನೋಎಂದು ಪ್ರಾರ್ಥಿಸುತ್ತಾರೆ. ಆದರೆ ಆಗಮಾಂಸರೂಪ ಚಕ್ಷುಸ್ಸಿಲ್ಲವಲ್ಲಾ, **ಚಕ್ಷುಷಾ ಸಾಕ್ಷಾತ್ಕರವಾಣಿ** ಎಂದು ಹೇಳಿರುವುದು ಹೇಗೆ ? ಎಂದರೆ ಸ್ವಾಭಾವಿಕ ಜ್ಞಾನರೂಪವಾದ ದಿವ್ಯಚಕ್ಷುಸ್ಸಿನಿಂದ ಸಾಕ್ಷಾ

ತ್ಕಾರವೆಂಬಭಾವವು. ಇದರಿಂದ ಭಗವತ್ಪ್ರಾಪ್ತಿಯಲ್ಲಿ ತ್ವರಾತಿಶಯವು ಸೂಚಿಸಲ್ಪಟ್ಟಿತು. ಪುನಃ

ಕದಾಪುನಶ್ಶಂಖರಥಾಙ್ಗಕಲ್ಪಕ
ಧ್ವಜಾರವಿಂದಾಂಕುಶವಜ್ರಲಾಂಛನಂ ।
ತ್ರಿವಿಕ್ರಮ ತ್ವಚ್ಚರಣಾಂಬುಜದ್ವಯಂ
ಮದೀಯ ಮೂರ್ಧಾನಮಲಂಕರಿಷ್ಯತಿ ॥ ೨೧ ॥

ಹೇ ತ್ರಿವಿಕ್ರಮ - ತ್ರಿವಿಕ್ರಮಾವತಾರಮಾಡಿ ಸಾಮಾನ್ಯವಾಗಿ ಎಲ್ಲರ ತಲೆಯಲ್ಲೂ ತನ್ನ ಪಾದಕಮಲವನ್ನಿಟ್ಟ ಉದಾರಮೂರ್ತಿಯೇ, ಶಂಖ ಚಕ್ರಾದಿ ಲಾಂಛನಗಳಿಂದ ಅಲಂಕೃತವಾಗಿ ಪರಮಭೋಗ್ಯವಾಗಿ ರಾಜಾಧಿರಾಜನೆಂದು ಪ್ರಕಟಿಸುತ್ತಿರುವ ನಿನ್ನ ಪಾದಕಮಲವು ಎಂದಿಗೆ ನನ್ನ ಶಿರಸ್ಸನ್ನು ಅಲಂಕರಿಸುತ್ತದೆಯೋ ಎಂಬದಾಗಿ ಇಲ್ಲಿಯೂ ತ್ವರಾತಿಶಯವು ತೋರಿಬರುತ್ತದೆ, ಹಾಗೆಯೇ ಇನ್ನೊಂದು ಕಡೆಯಲ್ಲಿಯೂ

"ಕದಾಹ ಮೈಕಾಂತಿಕ ನಿತ್ಯಕಿಙ್ಕರಃ ಪ್ರಹರ್ಷಯಿಷ್ಯಾಮಿ ಸನಾಥ ಜೀವಿತಃ" ॥ ೪೬ ॥ ಎಂದರೆ, ನಾನು ಸನಾಥಜೀವಿತನಾಗಿ, ನಿನ್ನನ್ನೇ ನಾಥನನ್ನಾಗಿ ವರಿಸಿ ನಿನ್ನಿಂದಲೇ ಸತ್ತಾದಿಗಳನ್ನು ಹೊಂದಿರುವವನಾಗಿರುವೆನು ; ಆದುದರಿಂದಲೇ ನಿನಗೆ ಐಕಾಂತಿಕ ನಿತ್ಯಕಿಂಕರನಾಗಿರಲು ಅರ್ಹನು. ನಿನಗೆ ಮಾತ್ರವೇ ದಾಸ್ಯಮಾಡುವದೇ ಸ್ವರೂಪವಾಗಿ ಉಳ್ಳವನು. ಅಂತಹ ದಾಸ್ಯವನ್ನು ಮಾಡುತ್ತಾ ಯಾವಾಗ ಸಂತೋಷಯುಕ್ತನಾಗುವೆನೋ ಎಂದು ಇಲ್ಲಿಯೂ ತ್ವರಾತಿಶಯವನ್ನು ಸೂಚಿಸುತ್ತಾರೆ.

ಹಾಗೆಯೇ ಶ್ರೀಭಾಷ್ಯಕಾರರವರು ಶ್ರೀ ವೈಕುಂಠ ಗದ್ಯದಲ್ಲಿ

(೧) "ಕದಾಹಂ ಭಗವಂತಂ ನಾರಾಯಣಂ ಮಮ ನಾಥಂ ಸಾಕ್ಷಾತ್ಕರವಾಣಿ ಚಕ್ಷುಷಾ" "ಯಾವಾಗ ನಾನು ನನಗೆ ಸ್ವಾಮಿಯಾದ ಭಗವಂತನಾದ ನಾರಾಯಣನನ್ನು ದಿವ್ಯಚಕ್ಷುಸ್ಸಿನಿಂದ ಸಾಕ್ಷಾತ್ಕರಿಸುವೆನು" ಎಂದೂ,

(೨) "ಕದಾಹಂ ಭಗವತ್ಪಾದಾಂಬುಜದ್ವಯಂ ಶಿರಸಾ ಸಂಗ್ರಹಿಷ್ಯಾಮಿ" "ಯಾವಾಗ ಭಗವಂತನ ಪಾದಕಮಲದ್ವಯವನ್ನು ಶಿರಸ್ಸಿನಿಂದ ಪರಿಗ್ರಹಿಸುವೆನು" ಎಂದೂ,

(೩) "ಕದಾಹಂ ಭಗವತ್ಪಾದಾಂಬುಜದ್ವಯಪರಿಚರ್ಯಾಶಯಾ ... ...ಪ್ರವೇಕ್ಷ್ಯಾಮಿ" "ಯಾವಾಗ ನಾನು ಕೈಂಕರ್ಯಮಾಡಬೇಕೆಂಬಾಶೆಯಿಂದ ಪಾದದ್ವಂದವನ್ನು ಪ್ರವೇಶಿಸುವೆನೋ ಎಂದರೆ ಪಾದದ್ವಂದದ ಕೆಳಗೆ ಪ್ರವೇಶಿಸುವೆನೋ" ಎಂದೂ,

ತಿರುಮನ್ತ್ರತ್ತಿಲ್ ನಾರಾಯಣಶಬ್ದತ್ತಿಲ್ ಚತುರ್ಥಿಯಾಲುಮ್, ದ್ವಯತ್ತಿಲ್ ಚತುರ್ಥೀ ನಮಸ್ಸುಕ್ಕಳಾಲುಮ್, ಚರಮ

(೪) "ಕದಾಹಂ ತತ್ಪಾದೌ ಪರಿಚರಿಷ್ಯಾಮಿ" "ಯಾವಾಗ ನಾನು ಆತನ ಪಾದಗಳನ್ನು ಪಚರಿಸುವೆನು" ? ಎಂದೂ,

(೫) ಕದಾ ಮಾಂ ಭಗವಾನ್ ಪರಿಚರ್ಯಾಯಾಂ ಆಜ್ಞಾಪಯಿಷ್ಯತಿ" "ಯಾವಾಗ ನನ್ನನ್ನು ಭಗವಂತನು ತನ್ನ ಕೈಙ್ಕರ್ಯದಲ್ಲಿ ಆಜ್ಞಾಪಿಸುವನೋ" ಎಂದೂ ಹೇಳಿಕೊಂಡಿರುತ್ತಾರೆ.

"ಶ್ರೀ ವೈಕುಂಠಗದ್ಯಾದಿಗಳಿಲುಮ್" ಎಂಬಲ್ಲಿ ಆದಿ ಪದದಿಂದ ಇತರ ಆಳ್ವಾರ್ಆಚಾರ್ಯರುಗಳಾದ ಪ್ರಪನ್ನರೂ ಸಹ ಪ್ರಾಪ್ಯ ವಿಷಯದಲ್ಲಿ ಇಂತಹ ತ್ವರಾತಿಶಯವನ್ನು ತೋರಿಸಿರುತ್ತಾರೆಂಬ ಭಾವವು. ನಮ್ಮಾಳ್ವಾರ್ರವರು "ತಿಣ ಲಾರ್ ಶಾರ್ಙ್ಗತ್ತುನಪಾದಂ ಶೇರ್ವದಡಿಯೇನೆನ್ನಾಳೇ" "ನಿನ್ನ ಪಾದವನ್ನು ಸೇರುವುದು ಯಾವಾಗಲೋ ? ಅಯ್ಯೋ !'' ಎಂದೂ (೬. ೧೦. ೫) "ಮೆಯ್ನ್ನಾನೆಯ್ತಿ ಯೆನ್ನಾಳುನ್ನಡಿಕ್ಕಳಡಿಯೇನ್ ಮೇವುವದೇ" (೬.೧೦.೬) "ದಾಸನಾದ ನಾನು ನಿನ್ನನ್ನು ಸಾಕ್ಷಾತ್ಕರಿಸಿ ನಿನ್ನ ಪಾದಕಮಲವನ್ನು ಸೇರುವದು ಯಾವಾಗಲೋ" ಎಂದೂ ಹೇಳಿರುತ್ತಾರೆ. ಹೀಗೆ ಅನೇಕ ಪ್ರಪನ್ನರು ಬಹು ದೈನ್ಯದಿಂದ ತ್ವರಾತಿಶಯವನ್ನು ತೋರಿಸಿರುತ್ತಾರೆ.

ಮುಂದೆ ಶ್ರೀಮದ್ರಹಸ್ಯತ್ರಯಗಳಲ್ಲಿ ಪುರುಷಾರ್ಥನಿಷ್ಠೆಯು ಎಲ್ಲಿ ತೋರಿಬರುತ್ತದೆಂಬುವದನ್ನು ತೋರಿಸುತ್ತಾರೆ. ತಿರುಮನ್ತ್ರತ್ತಿಲ್ - ಮೂಲಮಂತ್ರದಲ್ಲಿ, ನಾರಾಯಣಶಬ್ದತ್ತಿಲ್ ಚತುರ್ಥಿಯಾಲುಮ್-ನಾರಾಯಣ ಶಬ್ದವಲ್ಲಿರುವ ಚತುರ್ಥೀ ವಿಭಕ್ತಿಯಿಂದಲೂ, ನಾರಾಯಣಾಯ ಎಂಬ ಪದದಲ್ಲಿರುವ ಚತುರ್ಥೀ ವಿಭಕ್ತಿಯು ಪರಮಪುರುಷಾರ್ಥವು ಭಗವತ್ಕೈಂಕರ್ಯವೆಂದು ಹೇಳುತ್ತದೆ ಎಂಬ ಭಾವವು; ದ್ವಯತ್ತಿಲ್ - ದ್ವಯಮಂತ್ರದಲ್ಲಿ, ಚತುರ್ಥೀ ನಮಸ್ಸುಕ್ಕಳಾಲುಮ್ - ನಾರಾಯಣಾಯ ನಮಃ ಎಂಬಲ್ಲಿ ಸರ್ವವಿಧ ಕೈಂಕರ್ಯಗಳೂ ನಾರಾಯಣನಿಗೇನೇ ವಿನಾ ನನಗಲ್ಲವು ಎಂಬುವದರಲ್ಲಿಯೂ, ಚರಮಶ್ಲೋಕತ್ತಿಲ್ - ಚರಮ ಶ್ಲೋಕದಲ್ಲಿ "ಅಹಂತ್ವಾ" ಎಂಬುವ ವಾಕ್ಯದಿಂದಲೂ, ಇಲ್ಲಿ ಅನಿಷ್ಟನಿವೃತ್ತಿ ಹೇಳಿರುವಾಗ ಪುರುಷಾರ್ಥ ಹೇಗೆ ಎಂದರೆ ಇಷ್ಟಪ್ರಾಪ್ತಿರೂಪ ಪುರುಷಾರ್ಥವು ಅನಿಷ್ಟನಿವೃತ್ತಿ ಮೂಲಕವೇ ಆಗುವದರಿಂದ ಪಾಪಗಳಿಂದ ಬಿಡುಗಡೆಯೇ ಮೋಕ್ಷವು ಎಂಬ ಭಾವವು; ಬಾಸ್ಕರೀಯನು ಪುರು

ಶ್ಲೋಕತ್ತಿಲ್ "ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ಗಿರ ವಾಕ್ಯತ್ತಾಲುಮ್, ಕಡಲೈ ಕೈಯಿಟ್ಟು ಕಾಟ್ಟುಮಾಪ್ಪೋಲೆ, ಕಾಟ್ಟಪ್ಪಟ್ಟ ಅಪರಿಚ್ಛೇದ್ಯಮಾನ, ಪರಮಪುರುಷಾರ್ಥತ್ತಿಲೆ ನಿಷ್ಠೈಯುಂಡೆನ್ರರಿಯಲಾಮ್.

ಷಾರ್ಥವು ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಹೀಗೆ ಎರಡು ವಿಧವೆಂದು ಹೇಳುವನು. ನಮ್ಮ ಸಿದ್ಧಾಂತರೀತ್ಯಾ ಫಲವು ಏಕರೂಪವು, ಅನಿಷ್ಟನಿವೃತ್ತಿಯ ಮೂಲಕವೇ ಇಷ್ಟಪ್ರಾಪ್ತಿಯು. ಹೀಗೆ ಈ ಮೂರು ರಹಸ್ಯಗಳಲ್ಲೂ ಮೇಲೆ ಹೇಳಿದ ಸ್ಥಳಗಳಲ್ಲಿ, **ಕಡಲೈ ಕೈಯಿಟ್ಟು ಕಾಟ್ಟುಮಾಪ್ಪೋಲೆ**-ಸಮುದ್ರದಲ್ಲಿ ಕೈಯನ್ನಿಟ್ಟು ತೋರಿಸುವ ಹಾಗೆ, **ಕಾಟ್ಟಪಟ್ಟ** - ತೋರಿಸಲ್ಪಟ್ಟ, **ಅಪರಿಚ್ಛೇದ್ಯಮಾನ** - ಅಳವಿಲ್ಲದ, **ಪರಮಪುರುಷಾರ್ಥತ್ತಿಲೆ ನಿಷ್ಠೈಯುಂಡೆನ್ರರಿಯಲಾಮ್** - ನಿರತಿಶಯವಾದ ಪುರುಷಾರ್ಥದಲ್ಲಿ ನಿಷ್ಠೆಯುಂಟೆಂದು ತಿಳಿಯಬಹುದು. ಪುರುಷಾರ್ಥವು ಶ್ರೀಮದ್ರಹಸ್ಯತ್ರಯಗಳಲ್ಲಿ ಎಲ್ಲಿ ಹೇಳಲ್ಪಟ್ಟಿದೆ, ಎಂಬುವದು ಹಿಂದೆ ಅರ್ಥಪಂಚಕಾಧಿಕಾರದಲ್ಲಿ (೩೮೫ನೆಯ ಪುಟ ನೋಡಿ) ಹೇಳಿದ್ದರೂ, ಪ್ರಕರಣಾನುಗುಣ್ಯವಾಗಿ ಇಲ್ಲಿ ಪುನಃ ಹೇಳಿರುತ್ತಾರೆ. ಇಲ್ಲಿ ಸಮುದ್ರದ ದೃಷ್ಟಾಂತವನ್ನು ಹೇಳಿರುವದರಭಿಪ್ರಾಯವೇನೆಂದರೆ :—

ಈ ಮೂರು ಮಂತ್ರಗಳೂ ಅಪರಿಚ್ಛೇದ್ಯವಾದ ಪರಮಪುರುಷಾರ್ಥವನ್ನು ತೋರಿಸುವದು ಹೇಗಾಯಿತೆಂದರೆ ಅಪರಿಚ್ಛಿನ್ನವಾಗಿ ತೋರುವ ಸಮುದ್ರವು ನಾನಾರತ್ನಮುಂತಾದ ಅನೇಕ ವಸ್ತುಗಳನ್ನು ಗರ್ಭದಲ್ಲಿಟ್ಟು ಬಹು ವಿಶಾಲವಾಗಿಯೂ ಅಗಾಧವಾಗಿಯೂ ಇದ್ದರೂ, ಅದನ್ನು ಹಸ್ತವು ಗುರ್ತಿಸುವದು ಹೇಗೋ ಹಾಗೆಯೇ ಈಮಂತ್ರಗಳೂ ಕೂಡ ಅಪರಿಚ್ಛೇದ್ಯವಾಗಿ ನಿರತಿಶಯಾನಂದವನ್ನು ಒಳಗೊಂಡಿರುವ ಪರಮಪುರುಷಾರ್ಥವನ್ನು ಸೂಚಿಸುವುವು ಎಂಬ ತಾತ್ಪರ್ಯವು.

ಈ ಮೇಲಿನ ವಾಕ್ಯಪ್ರಕಾರ ಪುರುಷಾರ್ಥನಿಷ್ಠೆಗೆ ಲಕ್ಷಣಗಳು ಯಾವುವೆಂದರೆ :—

(೧) ಪ್ರಪನ್ನನು ದೇಹಯಾತ್ರಾದಿಗಳಲ್ಲಿ ಆಸಕ್ತಿಯನ್ನು ಬಿಟ್ಟಿರಬೇಕು.

(೨) ಪ್ರಾರಬ್ಧಕರ್ಮಾನುಗುಣವಾಗಿ ಸರ್ವೇಶ್ವರನ ಸಂಕಲ್ಪಾನುಸಾರ ಎಲ್ಲವೂ ನಡಿಯುತ್ತದೆಂಬ ಅನುಸಂಧಾನಮಾಡಬೇಕು.

(೩) ಯಾದೃಚ್ಛಿಕವಾಗಿ ಹೀಗೆ ಪ್ರಾಪ್ತವಾಗುವ ಸುಖಾದಿಗಳನ್ನು ಅನುಭವಿಸತಕ್ಕದ್ದು.

ಈ ಸ್ವನಿಷ್ಠಾಭಿಜ್ಞಾನ ಪ್ರಯೋಜನ...

ಸ್ವನಿಷ್ಠಾಭಿಜ್ಞಾನಸ್ಯ ಪ್ರಯೋಜನಂ

ಇಪ್ಪಡಿ ಯಃವ್ವೋಽವಡೈಯಾಳಙ್ಗಳಾಲೇ "ಅಹಮಾತ್ಮಾ ನ ದೇಹೋಽಸ್ಮಿ ವಿಷ್ಣುಶೇಷೋಽಪರಿಗ್ರಹಃ। ತಮೇವ ಶರಣಂ ಪ್ರಾಪ್ತ ಸ್ತತ್ಕೈಂಕರ್ಯ ಚಿಕೀರ್ಷಯಾ॥" ಎಙ್ಗಿರಪಡಿಯೇ ಮೂಲಮಂತ್ರಾದಿ

---

(೪) ಐಹಿಕ ಸುಖದುಃಖ ಲಾಭಾ ಲಾಭಗಳಲ್ಲಿ ಹರ್ಷ ಶೋಕಗಳನು ತೊರೆದಿರಬೇಕು.

(೫) ಪರಮಪದದಲ್ಲುಂಟಾಗುವ ಕೈಂಕರ್ಯದಲ್ಲಿ ರುಚಿಯಿರಬೇಕು.

(೬) ಆ ಪ್ರಾಪ್ಯವನ್ನು ಹೊಂದುವದರಲ್ಲಿ ತ್ವರಾತಿಶಯವಿರಬೇಕು.
ಇವುಗಳಿದ್ದಲ್ಲಿ ಪುರುಷಾರ್ಥ ನಿಷ್ಠಾಜ್ಞಾನವಿದೆ ಎಂದು ತಿಳಿಯಬಹುದು.

ಈ ಮೂರು ನಿಷ್ಠೆಗಳ ಜ್ಞಾನದಿಂದುಂಟಾಗುವ ಪ್ರಯೋಜನವು

ಹೀಗೆ ಈ ಮೂರು ನಿಷ್ಠೆಗಳ ಜ್ಞಾನವಿರುವವನಿಗೆ ಮರಣ ಭೀತಿಯನ್ನುಂಟುಮಾಡುವ ವಿಷಯಗಳಲ್ಲಿ ಭಯವೂ, ಸುಖಪ್ರದಗಳಾದ ವಿಷಯಗಳಲ್ಲಿ ಪ್ರೀತಿಯೂ ಉಂಟಾಗುವದಿಲ್ಲನೆಂದೂ ಇದೀಗ ಸ್ವನಿಷ್ಠಾಭಿಜ್ಞಾನದ ಪ್ರಯೋಜನವೆಂದೂ ಹೇಳುತ್ತಾರೆ.

ಇಪ್ಪಡಿ - ಈ ಈ ನಿಷ್ಠೆಗಳಗೆ ಈ ಈ ಲಕ್ಷಣಗಳಿಂದು ಮೇಲೆ ಉಪಪಾದಿಸಿದ ರೀತಿಯಲ್ಲಿ, **ಅವ್ವೋ ಅಡೈಯಾಳಙ್ಗಳಾಲೇ**-ಆಯಾಯಾ ಚಿಹ್ನೆಗಳಿಂದ ಎಂದರೆ ಲಕ್ಷಣಗಳಿಂದ, ಇದಕ್ಕೆ ತನ್ನ ನಿಷ್ಠೆಯನ್ನು **ಉಣರ್ನ್ದು ಪೋರುಂ** ಎಂಬುವದರೊಂದಿಗೆ ಅನ್ವಯವು. **ಅಹಂ** - ನಾನು ಎಂಬ ಪ್ರತೀತಿಯನ್ನುಂಟುಮಾಡುವಂಥಾದ್ದು, ಆತ್ಮಾನೇ ವಿನಾ, **ನದೇಹೋಽಸ್ಮಿ** - ದೇಹವಲ್ಲವು ; **ವಿಷ್ಣುಶೇಷಃ** - ವಿಷ್ಣುವಿಗೆ ದಾಸಭೂತನು, **ಅಪರಿಗ್ರಹಃ** - ತನಗೆ ಸಂಬಂಧಪಟ್ಟ ಒಂದು ವಸ್ತುವೂ ಇಲ್ಲದಿರುವವನು, **ತತ್ಕೈಙ್ಕರ್ಯಚಿಕೀರ್ಷಯಾ** - ಆ ವಿಷ್ಣುವಿಗೆ ಕೈಙ್ಕರ್ಯವನ್ನು ಮಾಡಬೇಕೆಂಬ ಕುತೂಹಲದಿಂದ, **ತಮೇವ** - ಆ ಶ್ರೀಮಹಾ ವಿಷ್ಣುವನ್ನೇ, **ಶರಣಂ ಪ್ರಾಪ್ತಃ** - ಶರಣವನ್ನು:ಹೊಂದಿವದನು." **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಮೂಲಮನ್ತ್ರಾದಿಗಳ್ಳಿ**

ಗಳ್ಳೈಕ್ಕೊಣ್ಡು ಸ್ವರೂಪೋಪಾಯ ಪುರುಷಾರ್ಥಙ್ಗಳಿಲ್ ತನ್ನುಡೈಯ ನಿಷ್ಠೈಯೈ ಯುಣರ್ನ್ದು ಪೋರುಮಿವ್ವಧಿಕಾರಿಕ್ಕು, (೧) "ನೈಷಾ ಪಶ್ಯತಿ ರಾಕ್ಷಸ್ಯೋ ನೇಮಾನ್ ಪುಷ್ಪಫಲದ್ರುಮಾನ್ । ಏಕಸ್ಥಹೃದಯಾ ನೂನಂ ರಾಮಮೇವಾನುಪಶ್ಯತಿ" ॥ ಎನ್ಗಿರಪಡಿಯೇ ವಿರೋಧಿಯೋಡೆ ಕೂಡಿ ಯಿರುಕ್ಕಿರ ತನಕ್ಕು ಪಾಕ್ಷಿಕಮಾಗ ಸಂಭಾವಿತಮಾನ ಬ್ರಹ್ಮವಿದಪಚಾರಾದಿ ವ್ಯತಿರಿಕ್ತಙ್ಗಳಾನ ಏದೇನುಮೊರು ಭೀತಿ

ಕೊಣ್ಡು - ಮೂಲಮನ್ತ್ರ ಮೊದಲಾದವುಗಳ ಮೂಲಕವಾಗಿ, ಇಲ್ಲಿ ಆದಿ ಶಬ್ದ ದಿಂದ ದ್ವಯ ಚರಮಶ್ಲೋಕಾದಿಗಳು ಹೇಳಲ್ಪಟ್ಟವು. ಸ್ವರೂಪೋಪಾಯ ಪುರು ಷಾರ್ಥಗಳಲ್ಲಿ ತನ್ನುಡೈಯ ನಿಷ್ಠೈಯೈ - ತನ್ನ ನಿಷ್ಠೆಯನ್ನು, **ಉಣರ್ನ್ದು ಪೋರುಂ** - ತಿಳಿದುಹೋಗುವ, **ಇವ್ವಧಿಕಾರಿಕ್ಕು** - ಈ ಮೋಕ್ಷಾಧಿಕಾರಿಗೆ "**ಏಷಾ** - ಭಯಪ್ರೀತಿಗಳನ್ನುಂಟುಮಾಡುವ ವಸ್ತುಗಳಿಂದ ಸುತ್ತುವರಿಯಲ್ಪಟ್ಟ ಈ ಸೀತಾದೇವಿಯು, **ರಾಕ್ಷಸ್ಯಃ**-ಭಯಕ್ಕೆ ಕಾರಣಭೂತರಾದ ಈ ರಾಕ್ಷಸಿಯ ರನ್ನೂ, **ನ ಪಶ್ಯತಿ** - ನೋಡುವುದಿಲ್ಲವು, **ಇಮಾನ್**-ಇಲ್ಲೇ ಸನ್ನಿಹಿತವಾಗಿರುವ, **ಪುಷ್ಪಫಲದ್ರುಮಾನ್**-ಪ್ರೀತಿಯನ್ನುಂಟುಮಾಡುವ ಮನೋಹರ ಪುಷ್ಪಗಳನ್ನೂ ರುಚಿಯಾದ ಫಲಗಳನ್ನೂ ಉಳ್ಳ ಮರಗಳನ್ನೂ, **ನ ಪಶ್ಯತಿ**-ಕಣ್ಣೆತ್ತಿ ನೋಡುವ ದಿಲ್ಲವು, ಇನ್ನು ಯಾರನ್ನು ನೋಡುತ್ತಾಳೆಂದರೆ :—**ಏಕಸ್ಥಹೃದಯಾ** - ಒಂದನ್ನು ಮಾತ್ರವೇ ಹೃದಯದಲ್ಲುಳ್ಳವಳಾಗಿ, **ರಾಮಮೇವ**- ಜಗತ್ಪತಿಯಾದ ರಾಮನನ್ನು ಮಾತ್ರವೇ, **ಅನುಪಶ್ಯತಿ** - ಅನುಸರಿಸಿ ನೋಡುವಳು, ಎಂದರೆ "**ಅದ್ಯಾಪಿ ನ ನಿವರ್ತತೇ**" "ರಾಮನನ್ನನುಸರಿಸಿ ಹೋದ ಕಣ್ಣು ಇನ್ನೂ ಹಿಂತಿರಗಲಿಲ್ಲವು," ಎಂದು ಹೇಳಿದಹಾಗೆ ಆತನನ್ನೇ ಸಾಕ್ಷಾತ್ಕರಿಸುತ್ತಾ ಇದ್ದಾಳೆ, **ನೂನಂ** - ನಿಶ್ಚಯವು" **ಎನ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ವಿರೋಧಿಯೋಡೆ ಕೂಡಿಯಿರುಕ್ಕಿರ ತನಕ್ಕು** - ಶರೀರ, ಮನಸ್ಸು, ಇಂದ್ರಿಯ ಗಳೊಂದಿಗೆ ಸೇರಿರುವ ತನಗೆ, **ಪಾಕ್ಷಿಕಮಾಗ ಸಂಭಾವಿತಮಾನ** - ಉಂಟಾ ಗದೇ ಇದ್ದರೂ ಇರಬಹುದು, ಆದರೂ ಒಂದು ಪಕ್ಷ ಸಂಭವಿಸಬಹುದಾದ, **ಬ್ರಹ್ಮವಿದಪಚಾರಾದಿ ವ್ಯತಿರಿಕ್ತಙ್ಗಳಾನ** - ಬ್ರಹ್ಮವಿತ್ತುಗಳಾದ ಭಾಗವತೋ ತ್ತಮರ ವಿಷಯದಲ್ಲುಂಟಾಗುವ ಅಪಚಾರ ಮೊದಲಾದವುಗಳಿಗಿಂತ ಬೇರೆಯಾದ,

(೧) ರಾ, ಸುಂದರ. ೧೬-೨೫

ಹೇತುಕ್ಕಳಿಲುವ್, ಸ್ವರೂಪಪ್ರಾಪ್ತ ಕೈಙ್ಕರ್ಯ ವ್ಯತಿರಿಕ್ತಙ್ಗಳಾನ ಏದೇನ ವೊರು ಪ್ರೀತಿ ಹೇತುಕ್ಕಳಿಲುವ್, ಕಣ್ಣೋಟ್ಟಮುಂಡಾಕಾದು. ಯದೃಚ್ಛಯಾ ಉಂಡಾನಾಲುವ್ ಅವತ್ತಾಲ್ ಭೀತಿಯುವ್ ಪ್ರೀತಿಯುವ್ ಉಂಡಾಗಾದು.

ಇಲ್ಲಿ ಆದಿ ಪದದಿಂದ ಭಗವದಪಚಾರವೂ ಪ್ರತಿಷ್ಠಿತ ದೇವತಾಂತರ ಸಂಬಂಧವೂ ಹೇಳಲ್ಪಟ್ಟವು, **ಏದೇನು ವೊರು ಭೀತಿ ಹೇತುಕ್ಕಳಿಲುವ್** - ಬಂಧು ವಿಯೋಗ ಮೊದಲಾದ ಯಾವುದಾದರೂ ಒಂದು ಭಯಕ್ಕೆ ಕಾರಣಭೂತವಾದವು ಗಳ ಮೇಲೂ, **ಸ್ವರೂಪ ಪ್ರಾಪ್ತ ಕೈಙ್ಕರ್ಯ ವ್ಯತಿರಿಕ್ತಙ್ಗಳಾನ** – ತನ್ನ ಸ್ವರೂಪವಾದ ದಾಸ ಭಾವಕ್ಕೆ ಉಚಿತವಾದ ಕೈಂಕರ್ಯಕ್ಕಿಂತಲೂ ಬೇರೆಯಾದ, **ಏದೇನು ವೊರು ಪ್ರೀತಿಹೇತುಕ್ಕಳಿಲುವ್** - ಕ್ಷೇತ್ರಲಾಭ ಮೊದಲಾದ ಯಾವುದಾದರೂ ಒಂದು ಪ್ರೀತಿಗೆ ಕಾರಣಭೂತವಾದವುಗಳ ಮೇಲೂ, **ಕಣ್ಣೋಟ್ಟ ಮುಂಡಾಗಾದು** - ದೃಷ್ಟಿ ಪ್ರಸರಣವು ಉಂಟಾಗುವದಿಲ್ಲವು. **ಯದೃಚ್ಛಯಾ** - ನಮ್ಮ ಪ್ರಯತ್ನವಿಲ್ಲದೆ ತಾನಾಗಿಯೇ, **ಉಂಡಾನಾಲುವ್** - ಪ್ರಾಪ್ತವಾದರೂ, **ಅವತ್ತಾಲ್** - ಅವುಗಳಿಂದ ಭೀತಿಯೂ, ಪ್ರೀತಿಯೂ, **ಉಂಡಾಗಾದು** - ಉಂಟಾಗುವದಿಲ್ಲವು. ಈ ಲೋಕದಲ್ಲಿ ಮನುಷ್ಯನಿಗೆ ಕೆಲವು ವಿಷಯಗಳು ಭೀತಿಗೆ ಕಾರಣವಾದವು, ಕೆಲವು ಪ್ರೀತಿಗೆ ಕಾರಣವಾದವು ಬಂಧು ವಿನಾಶ, ದ್ರವ್ಯನಾಶ, ರೋಗಾದಿಗಳು, ವ್ಯಾಘ್ರ ಸರ್ಪಾದಿಗಳಿಂದ ತೊಂದರೆ ಇವೆಲ್ಲಾ ಭಯೋತ್ಪಾದಕಗಳು ; ಪುತ್ರಲಾಭ, ಕ್ಷೇತ್ರಪ್ರಾಪ್ತಿ, ಪುತ್ರೋತ್ಪತ್ತಿ, ದ್ರವ್ಯಲಾಭ ಮೊದಲಾದವು ಪ್ರೀತಿಕಾರಕಗಳು. ಮುಮುಕ್ಷುವಿಗೆ ಈ ಸ್ವನಿಷ್ಠಾಭಿಜ್ಞಾನದಿಂದ ಭಯಹೇತುವಾದವುಗಳಿಂದ ಭೀತಿಯೂ, ಪ್ರೀತಿ ಹೇತುವಾದವುಗಳಿಂದ ಪ್ರೀತಿಯೂ ಉಂಟಾಗುವದಿಲ್ಲವೆಂದು ಹೇಳಿದರು. ಸರ್ವೇಶ್ವರನ ಕೃಪೆಯಿಂದ ಭಯಪ್ರೀತಿ ಹೇತುಗಳಾದವು ಸಂಭವಿಸುವದೇ ಇಲ್ಲವು. ಒಂದು ವೇಳೆ ಪ್ರಾರಬ್ಧ ಕರ್ಮ ಪ್ರಾಬಲ್ಯದಿಂದ ಅಂತಹ ಹೇತುಗಳು ಒದಗಿದರೂ ಅವುಗಳಿಂದ ಭಯವೂ ಪ್ರೀತಿಯೂ ಸಹ ಉಂಟಾಗುವದಿಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಆದರೆ ಪ್ರಪನ್ನನೂ ಕೂಡ ಒಂದೆರಡು ವಿಷಯಗಳಲ್ಲಿ ಮಾತ್ರ ಭೀತನಾಗಿರಬೇಕೆಂದು ಇದರಿಂದ ಹೇಳಲ್ಪಟ್ಟಿತು. ಅವು ಯಾವುವೆಂದರೆ :.....

(೧) ಬ್ರಹ್ಮವಿತ್ತಿನ ವಿಷಯದಲ್ಲಿ ಅಪಚಾರವು ಪ್ರಪನ್ನನು ಇದಕ್ಕೆ ಮುಖ್ಯವಾಗಿ ಅಂಜತಕ್ಕದ್ದು (*) "ತ್ರಸ್ಯ ಬ್ರಹ್ಮವಿದಾಗಸಃ" ಬ್ರಹ್ಮವಿತ್ತಿನ

(*) ಸಙ್ಕಲ್ಪ

ಅಪಚಾರದ ದೆಶೆಯಿಂದ ಭಯಪಡು ಎಂದು ಇವರೇ ಇನ್ನೊಂದು ಕಡೆಯಲ್ಲಿ ಉಪದೇಶಿಸಿರುತ್ತಾರೆ.

"ನಾಹಂ ವಿಶಙ್ಕೇ ಸುರರಾಜ ವಜ್ರಾನ್ನತ್ರ್ಯಕ್ಷ ಶೂಲಾನ್ನಯಮಸ್ಯ ದಂಡಾತ್ । ನಾಗ್ನ್ಯರ್ಕ ಸೋಮಾನಿಲ ವಿತ್ತಪಾಸ್ತ್ರಾಚ್ಛಙ್ಕೇ ಭೃಶಂ ಬ್ರಹ್ಮಕುಲಾವಮಾನಾತ್ ॥" ಎಂದರೆ ಇಂದ್ರನ ವಜ್ರಾಯುಧಕ್ಕೆ ಭಯಪಡುವುದಿಲ್ಲವು, ಹಾಗೆಯೇ ರುದ್ರನ ತ್ರಿಶೂಲಕ್ಕೂ ಯಮನ ಪಾಶಕ್ಕೂ, ಸೂರ್ಯ, ಅಗ್ನಿ, ಚಂದ್ರ, ವಾಯು ಕುಬೇರರುಗಳ ಅಸ್ತ್ರಕ್ಕೂ ಭಯಪಡುವದಿಲ್ಲವು. ಇನ್ನು ಯಾವುದಕ್ಕೆ ತುಂಬಾ ಭಯಪಡತಕ್ಕದ್ದೆಂದರೆ ತಿಳಿಸುತ್ತಾರೆ:—ಬ್ರಹ್ಮವಿತ್ತಿಗೆ ಅವಮಾನವೆಲ್ಲಿಯಾಯಿತೋ ಎಂದು ತುಂಬಾಭಯಪಡುತ್ತೇನೆಂದು ರಹೋಗಣರಾಜನು ತನ್ನ ಶಿಬಿಕವನ್ನು ಹೊರುವದಕ್ಕಾಗಿ ನಿಯಮಿಸಲ್ಪಟ್ಟ ಮಹಾ ಭಾಗವತೋತ್ತಮರಾಗಿ ಬ್ರಹ್ಮವಿತ್ತಾದ ಜಡಭರತರನ್ನು ಕುರಿತು ಹೇಳುವ ವಾಕ್ಯವು (ಭಾಗ. ೫.೧೦.೧೬) ಹಾಗೆಯೇ

"ಶ್ರೀವಿಷ್ಣೋರವಮಾನನಾತ್ ಗುರುತರಂ ಶ್ರೀವೈಷ್ಣವೋಲ್ಲಂಘನಂ" ಶ್ರೀಮಹಾ ವಿಷ್ಣುವಿಗೆ ಮಾಡುವ ಅಪರಾಧಕ್ಕಿಂತ ಆತನ ಭಕ್ತರಿಗೆ ಮಾಡುವ ಅಪರಾಧವು ಗುರುತರವಾದುದೆಂದು ಹೇಳಲ್ಪಟ್ಟಿರುತ್ತದೆ.

(೨) ಭಗವದಪಚಾರವು. ಇದು ಬ್ರಹ್ಮವಿದಪಚಾರಾದಿ ಎಂಬಲ್ಲಿರುವ ಆದಿ ಪದದಿಂದ ತೋರಿಬರುತ್ತದೆ.

(೩) ಅನ್ಯದೇವತಾ ಸಂಬಂಧವು. ಹೀಗೆ ಇವು ಮೂರು ವಿಷಯಗಳಲ್ಲಿ ಮಾತ್ರ ಪ್ರಪನ್ನನಿಗೆ ಭೀತಿ ಇರಬೇಕೆಂದು ಹೇಳಲ್ಪಟ್ಟಿತು.

ಹಾಗೆಯೇ ಸ್ವಸಿಷ್ಯಾಭಿಜ್ಞಾನವಿರುವ ಪ್ರಪನ್ನನಿಗೆ ಐಹಿಕ ವಿಷಯಗಳಲ್ಲಿ ಪ್ರೀತಿ ಉಂಟಾಗಬಾರದೆಂದು ಹೇಳಿದರು. ಆದರೆ ಒಂದರಲ್ಲಿ ಮಾತ್ರ ವಿಶೇಷ ಪ್ರೀತಿಇರಬೇಕೆಂದು ಹೇಳುವದಕ್ಕಾಗಿ, ಸ್ವರೂಪ ಪ್ರಾಪ್ತ ಕೈಙ್ಕರ್ಯ ವ್ಯತಿರಿಕ್ತಗಳಲ್ಲಿ ಪ್ರೀತಿಬೇಡವೆಂದು ಹೇಳಿದರು. ದಾಸಭೂತನಾದ ಈಚೇತನನ ಸ್ವರೂಪಕ್ಕೆ ಅನುರೂಪವಾದುದು "ಅಹಂ ಸರ್ವಂ ಕರಿಷ್ಯಾಮಿ" ಎಂದು ಹೇಳಿರುವ ಹಾಗೆ ಭಗವತ್ಕೈಙ್ಕರ್ಯದಲ್ಲಿ ವಿಶೇಷ ಪ್ರೀತಿ ಇರಬೇಕೆಂದೂ ಹೇಳಲ್ಪಟ್ಟಿತು. ಮುಖ್ಯವಾಗಿ ಭಗವದ್ಭಾಗವತಾಪಚಾರಗಳಲ್ಲಿ ಭೀತಿಯೂ ಭಗವತ್ಕೈಙ್ಕರ್ಯದಲ್ಲಿ ಪ್ರೀತಿಯೂ ಅತ್ಯಾವಶ್ಯಕವೆಂದೂ ಈ ಮೇಲಿನ ವಾಕ್ಯದಿಂದ ಹೇಳಲ್ಪಟ್ಟಿತು.

ಐಹಿಕ ವಿಷಯಗಳಲ್ಲಿ ಭೀತಿಯೂ ಪ್ರೀತಿಯೂ ಉಂಟಾಗುವದಿಲ್ಲವೆಂಬುವದಕ್ಕೂ, ಅತಿಶಯಪ್ರೀತಿಯು ಸರ್ವೇಶ್ವರನನ್ನು ಹೊಂದಿ ಶುಶ್ರೂಷೆಯನ್ನು ಮಾಡು

ವದರಲ್ಲಿ ಮಾತ್ರವೇ ಎಂಬುವದಕ್ಕೂ ಒಂದು ನಿದರ್ಶನವನ್ನು ತೋರಿಸಿರುತ್ತಾರೆ. ಸೀತೆಯು ಅಶೋಕವನದಲ್ಲಿರುವಾಗ ಯಾವಾಗಲೂ ಶ್ರೀರಾಮನನ್ನೇ ಚಿಂತಿಸುತ್ತಾ ಇದ್ದುದರಿಂದಲೂ ಎರಡು ತಿಂಗಳವಧಿಯನ್ನು ಹೇಳಿದುದರಿಂದಲೂ ದೃಪ್ತಪ್ರಪನ್ನನ ಅವಸ್ಥೆಯಲ್ಲಿರುವ ಹಾಗೆ ಭಾವಿಸಬಹುದು. ರಾಕ್ಷಸೀಯರಿಂದ ಭೀತಿಗೂ ಅಲ್ಲಿನ ಮನೋಹರ ಪುಷ್ಪ ಫಲಾದಿಗಳಿಂದ ಪ್ರೀತಿಗೂ ಅವಕಾಶವಿದ್ದರೂ, ಅವೆರಡನ್ನೂ ಕಣ್ಣೆತ್ತಿ ನೋಡದೆ ಯಾವಾಗಲೂ ರಾಮನನ್ನೇ ಸಾಕ್ಷಾತ್ಕರಿಸುತ್ತಿದ್ದಳು, ಎಂದು ಹೇಳಿರುವದರಿಂದ ಸರ್ವೇಶ್ವರನಲ್ಲಿಯೂ ಆತನ ಕೈಙ್ಕರ್ಯದಲ್ಲಿಯೂ ಈ ನಿಷ್ಠೆಯುಳ್ಳವನಿಗಿರುವ ಪ್ರೀತ್ಯತಿಶಯವು ನಿದರ್ಶಿಸಲ್ಪಟ್ಟಿತು. ರಾಮಮೇವ ಎಂಬ ಅವಧಾರಣವಿರುವದರಿಂದ ಅನ್ಯದೇವತಾ ಸಂಬಂಧ ವಿಷಯದಲ್ಲಿ ಭಯವೂ ಸಹ ನಿದರ್ಶಿಸಲ್ಪಟ್ಟಿತು.

ಈ ಮೂರು ನಿಷ್ಠೆಯನ್ನೂ ಬಹು ಸ್ವಾರಸ್ಯವಾಗಿ ಉಪಪಾದಿಸುವ ಒಂದು ಪ್ರಮಾಣ ವಾಕ್ಯವನ್ನು ಉದಾಹರಿಸಿ ಆ ಶ್ಲೋಕವು ಮೂಲಮಂತ್ರಾರ್ಥವನ್ನೂ ಈ ಮೂರು ನಿಷ್ಠೆಗಳನ್ನೂ ಉಪಪಾದಿಸುತ್ತದೆಂದು ಹೇಳಿರುತ್ತಾರೆ **ಅಹನಾತ್ಮಾನದೇಹೋಽಸ್ಮಿ** ಎಂಬುವದರಿಂದ ಸ್ವರೂಪನಿಷ್ಠೆಯು ಹೇಳಲ್ಪಟ್ಟಿತು. ಇದು ಮೂಲಮಂತ್ರದ ಪ್ರಣವದ ಮಕಾರದರ್ಥವು. ಇದರ ಧಾತ್ವರ್ಥದಿಂದ ಜ್ಞಾನತ್ವ ಚೇತನತ್ವಗಳು ತೋರಿಬರುತ್ತದೆ ವಿನಾ ಜಡತ್ವವಲ್ಲವು. ಆದುದರಿಂದ ಜಡವಾದ ದೇಹಕ್ಕಿಂತಲೂ ವಿಲಕ್ಷಣನೆಂಬುವದು ತೋರಿಬರುತ್ತದೆ. **ವಿಷ್ಣುಶೇಷಃ** ಎಂಬುವದರಿಂದ ಮಕಾರ ವಾಚ್ಯನು ಅಕಾರ ವಾಚ್ಯನಾದ ವಿಷ್ಣುವಿಗೇ ಶೇಷಭೂತನು ಎಂಬ ಪ್ರಣವಾರ್ಥವು ಉಪಪಾದಿಸಲ್ಪಟ್ಟಿತು. **ಅಪರಿಗ್ರಹಃ** ಎಂಬುವದರಿಂದ ತನಗೆ ಶೇಷಭೂತವಾದುದು ಯಾವುದೂ ಇಲ್ಲವೆಂದು ಹೇಳಿದುದರಿಂದ ನಮಶ್ಶಬ್ದಾರ್ಥವು ಬೋಧಿತವಾಯಿತು. **ತಮೇವ ಶರಣಂ ಗಚ್ಛ** ಎಂಬುವದರಿಂದಲೂ ನಮಶ್ಶಬ್ದದ ಸ್ಥೂಲಯೋಜನಾರ್ಥವು ತೋರಿಬರುತ್ತದೆ. ಇದರಲ್ಲಿ ಉಪಾಯನಿಷ್ಠೆಯು **ತಮೇವ** ಎಂಬಲ್ಲಿರುವ ಅವಧಾರಣದಿಂದ ವ್ಯಕ್ತಪಡುತ್ತದೆ. **ತತ್ಕೈಙ್ಕರ್ಯ ಚಿಕೀರ್ಷಯಾ** ಎಂಬುವದರಿಂದ ನಾರಾಯಣಾಯ ಎಂಬ ಶಬ್ದದ ಚತುರ್ಥ್ಯರ್ಥವು ಹೇಳಲ್ಪಟ್ಟಿತು. **ಚಿಕೀರ್ಷಯಾ** ಎಂಬುವದರಿಂದ ಪುರುಷಾರ್ಥ ನಿಷ್ಠೆಯು ಬೋಧಿತವಾಯಿತು. ಹೀಗೆ ಮೂಲಮಂತ್ರದಿಂದ ಈ ಪ್ರಪನ್ನನಾದವನು ಸ್ವರೂಪೋಪಾಯ ಪುರುಷಾರ್ಥಗಳಲ್ಲಿ ಸ್ವನಿಷ್ಠೆಯನ್ನು ತಿಳಿಯಬಹುದೆಂದು ಹೇಳಿರುತ್ತಾರೆ.

ಆದುದರಿಂದ ಈ ಸ್ವನಿಷ್ಠಾಭಿಜ್ಞಾನದಿಂದ ಆಗುವ ಮುಖ್ಯ ಪ್ರಯೋಜನಗಳು:—

ಮುಕ್ಕಿಯ ಮನ್ತಿರ ಙ್ಕಾಟ್ಟಿಯ ಮೂನ್ರಿಲ್ ನಿಲೈಯುಡೈಯಾರ್ ।
ತಕ್ಕನ್ವೈಯನ್ರಿ ತಕಾದನ್ವೈಯೊನ್ರುಮ್ ತಮಕ್ಕಿಶೈಯಾರ್ ।
ಇಕ್ಕರುಮಙ್ಗಳೆನಕ್ಕುಳ (ತೆ) ವೆನ್ರು ಮಿಲಕ್ಕಣತ್ತಾಲ್ ।
ಮಿಕ್ಕ ವುಣರ್ತ್ತಿಯರ್ ಮೇದಿನಿ ಮೇವಿಯ ವಿಣ್ಣವರೇ ॥೨೧॥

(೧) ಬ್ರಹ್ಮವಿದ್ಭಾಗವತಾಪಚಾರಗಳಲ್ಲಿ ಅತಿ ಭೀತಿಯು, (೨) ತತ್ಕೈಙ್ಕರ್ಯಗಳಲ್ಲಿ ಅತಿ ಪ್ರೀತಿಯು, (೩) ಮಿಕ್ಕ ಐಹಿಕ ವಿಷಯಗಳಲ್ಲಿ ಭೀತಿಪ್ರೀತಿಗಳ ರಾಹಿತ್ಯವು

ಅವತಾರಿಕೆ :—ಹೀಗೆ ಸ್ವರೂಪೋಪಾಯ ಪುರುಷಾರ್ಥ ಮೂರರಲ್ಲೂ ನಿಷ್ಠೆಯುಳ್ಳವರು ತುಂಬಾ ಮಹನೀಯರು, ಪರಮಪದ ವಾಸಿಗಳಾದ ನಿತ್ಯಸೂರಿಗಳಿಗೆ ಸಮಾನರು ಎಂದು ಅಂಥವರನ್ನು ಕೊಂಡಾಡುತ್ತಾರೆ. ನಿತ್ಯಸೂರಿಗಳೇ ಈ ಪೃಥ್ವಿಯಲ್ಲಿ ನಮ್ಮಗಳ ಅನುಗ್ರಹಕ್ಕಾಗಿ ಅವತರಿಸುವದೂ ಉಂಟಾದುದರಿಂದ ಹಾಗೆ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನರು ಸ್ವಾಮಿಯಿಂದ ಆಜ್ಞಪ್ತರಾಗಿ ಅವತರಿಸಿದ ಮಹನೀಯರಾಗಿ ಏಕಿರಕೂಡದೆಂಬ ನಂಬಿಕೆಯಿಂದ, ಅವರು ಪೃಥ್ವಿಯನ್ನಲಂಕರಿಸಿದ ನಿತ್ಯಸೂರಿಗಳೇ ಎಂದು ಸ್ತುತಿಸುತ್ತಾರೆ.

ಅರ್ಥ—**ಮುಕ್ಕಿಯ ಮನ್ತಿರಂ** - ಮುಖ್ಯವಾದ ಮಂತ್ರವು ಮೂಲಮಂತ್ರವು, **ಕಾಟ್ಟಿಯ** - ತೋರಿಸುವ, **ಮೂನ್ರಿಲ್** - ಸ್ವರೂಪ, ಉಪಾಯ, ಪುರುಷಾರ್ಥ ಮೂರರಲ್ಲಿಯೂ, **ನಿಲೈಯುಡೈಯಾರ್**-ನಿಷ್ಠೆಯುಳ್ಳ ಪ್ರಪನ್ನರು, **ತಕ್ಕನ್ವೈ** - ತನಗುಚಿತವಾದ ನಿತ್ಯನೈಮಿತ್ತಿಕ ಕರ್ಮಗಳೂ ಭಗವದ್ಭಾಗವತ ಕೈಙ್ಕರ್ಯಗಳೂ, **ಅನ್ರಿ** - ವಿನಾ, **ತಗಾದನ್ವೈ** - ತನಗೆ ಉಚಿತವಲ್ಲದ ನಿಷಿದ್ಧ ಕಾಮ್ಯಕರ್ಮಗಳಾದ, **ಒನ್ರುಮ್** - ಯಾವ ಒಂದನ್ನೂ, **ತಮಕ್ಕಿಶೈಯಾರ್** - ಅವರು ಅಙ್ಗೀಕರಿಸುವದಿಲ್ಲವು. **ಇಕ್ಕರುಮಙ್ಗಳ್** - ನಿಷಿದ್ಧ ಕಾಮ್ಯಕರ್ಮಗಳಲ್ಲದ ಭಗವದ್ಭಾಗವತ ಕೈಙ್ಕರ್ಯ ಮೊದಲಾದವುಗಳ ಪ್ರವೃತ್ತಿರೂಪ ವ್ಯಾಪಾರಗಳು, **ಎನಕ್ಕು** - ನನಗೆ, **ಉಳದೆನ್ರು** -ಉಂಟೆಂದು, **ಇಲಕ್ಕಣತ್ತಾಲ್** - ಲಕ್ಷಣಗಳಿಂದ, ಚಿಹ್ನೆಗಳಿಂದ, **ಮಿಕ್ಕ ಉಣರ್ತ್ತಿಯರ್** - ಉತ್ಕೃಷ್ಟವಾದ ನಿಶ್ಚಯವನ್ನು ಪಡೆದವರು ಎಂದರೆ ಸ್ವನಿಷ್ಠಾಭಿಜ್ಞಾನವನ್ನುಳ್ಳವರು, ಮತ್ತು **ಮೇದಿನಿಮೇವಿಯ ವಿಣ್ಣವರೇ** - ಅವರು ಭೂಮಿಯಲ್ಲಿ ವಾಸಮಾಡುವ ನಿತ್ಯಸೂರಿಗಳೇ ಸರಿ.

ತಾತ್ಪರ್ಯ—ಮೂಲಮನ್ತ್ರವು ಮನ್ತ್ರಗಳಲ್ಲೆಲ್ಲಾ ತುಂಬಾ ಶ್ರೇಷ್ಠವಾ

ದುದರಿಂದ ಮುಕ್ತಿಯ ಮನ್ತ್ರವೆಂದು ಪ್ರಯೋಗಿಸಿರುತ್ತಾರೆ. ನಾರದೀಯ ಕಲ್ಪವಾಕ್ಯವು ಈ ಮಂತ್ರವನ್ನು,

ಮನ್ತ್ರಾಣಾಂ ಪರಮೋ ಮಂತ್ರೋ ಗುಹ್ಯಾನಾಂ ಗುಹ್ಯಮುತ್ತಮಂ।
ಪವಿತ್ರಂ ಚ ಪವಿತ್ರಾಣಾಂ ಮೂಲಮಂತ್ರಸ್ಸನಾತನಃ।
ಯದಂತಸ್ಥಮಶೇಷೇಣ ವಾಙ್ಮಯಂ ವೇದವೈದಿಕಂ।
ತಸ್ಮೈ ವ್ಯಾಪಕ ಮುಖ್ಯಾಯ ಮಂತ್ರಾಯ ಮಹತೇ ನಮಃ॥

ಎಂಬದಾಗಿ ಶ್ಲಾಘಿಸಿರುತ್ತದೆ. ಇನ್ನೊಂದು ಕಡೆಯಲ್ಲೂ,

ಯಥಾ ಸರ್ವೇಷು ವೇದೇಷು ನಾಸ್ತಿ ನಾರಾಯಣಾತ್ಪರಃ।
ತಥಾ ಸರ್ವೇಷು ಮನ್ತ್ರೇಷು ನಾಸ್ತಿ ಚಾಷ್ಟಾಕ್ಷರಾತ್ಪರಃ।
ಸರ್ವವೇದಾಂತಸಾರಾರ್ಥಃ ಸಂಸಾರಾರ್ಣವತಾರಕಃ।
ಗತಿರಷ್ಟಾಕ್ಷರೋ ನೃಣಾಂ ಅಪುನರ್ಭವಕಾಂಕ್ಷಿಣಾಂ।
ಐಹಲೌಕಿಕಮೈಶ್ವರ್ಯಂ ಸ್ವರ್ಗಾದ್ಯಂ ಪಾರಲೌಕಿಕಂ।
ಕೈವಲ್ಯಂ ಭಗವಂತಂಚ ಮನ್ತ್ರೋಯಂ ಸಾಧಯಿಷ್ಯತಿ।
ಕಿಂ ತತ್ರ ಬಹುಭಿರ್ಮನ್ತ್ರೈಃ ಕಿಂ ತತ್ರ ಬಹುಭಿರ್ವ್ರತೈಃ।
ನಮೋ ನಾರಾಯಣಾಯೇತಿ ಮಂತ್ರಸ್ಸರ್ವಾರ್ಥಸಾಧಕಃ।
ಋಚೋ ಯಜೂಂಷಿ ಸಾಮಾನಿ ತಥೈವಾಥರ್ವಣಾನಿ ಚ।
ಸರ್ವಮಷ್ಟಾಕ್ಷರಾಂತಸ್ಥಂ ಯಚ್ಚಾನ್ಯದಪಿ ವಾಙ್ಮಯಂ।
ತಸ್ಮಾದಷ್ಟಾಕ್ಷರಂ ಮಂತ್ರಂ ಮುಮುಕ್ಷುರ್ವೀತಕಲ್ಮಷೈಃ।
ಸಂಧ್ಯಾಕಾಲೇಷು ಜಪ್ತವ್ಯಂ ಸತತಂ ಚಾತ್ಮಶುದ್ಧಯೇ।

ಎಂದು ಹಾಗೆಯೇ ಮೂಲಮನ್ತ್ರದ ಮಹಿಮೆಯು ಕೊಂಡಾಡಲ್ಪಟ್ಟಿರುತ್ತದೆ. ಈ ಮೂಲಮನ್ತ್ರದ ಮೂರು ಪದಗಳಿಂದ ಸ್ವರೂಪ, ಉಪಾಯ, ಪುರುಷಾರ್ಥಗಳೂ ತನ್ನಿಷ್ಠೆಗಳೂ ಬೋಧಿತವಾಗುವದರಿಂದ, ಮೂನ್ರಿಲ್ ನಿಲೈಯುಡೈಯಾರ್ ಎಂದು ಪ್ರಯೋಗಿಸಿರುತ್ತಾರೆ. ಅಂತಹ ಪ್ರಪನ್ನರು ತಮ್ಮ ಸ್ವರೂಪಕ್ಕೆ ಉಚಿತವಾದ "ನಿರಪರಾಧೇಷು ಕೈಙ್ಕರ್ಯೇಷು" ಎಂದು ಹೇಳಿರುವ ಹಾಗೆ ನಿತ್ಯ ನೈಮಿತ್ತಿಕ ಕರ್ಮಗಳನ್ನೂ ದೇವ ಭಾಗವತ ಕೈಙ್ಕರ್ಯಗಳನ್ನೂ ಅನುಷ್ಠಿಸುವವರೇ ವಿನಾ "ನಿಷಿದ್ಧ ಕಾಮ್ಯರಹಿತಂ" ಎಂದು ಹೇಳಿರುವ ಹಾಗೆ ನಿಷಿದ್ಧ ಕಾಮ್ಯ ಕರ್ಮಗಳನ್ನು ಎಂದಿಗೂ ಎಸಗರು ಎಂದು ಹೇಳಿರುತ್ತಾರೆ. ಹೀಗೆ ಉಚಿತವಾದ ಕರ್ಮಗಳಲ್ಲಿ ಪ್ರವೃತ್ತಿಯೂ ಅನುಚಿತವಾದ ಕರ್ಮಗಳ ವಿಷಯದಲ್ಲಿ ನಿವೃತ್ತಿಯೂ ಇವೆರಡೂ ಇವರಲ್ಲಿ ಉಂಟು. ಮುಖ್ಯವಾಗಿ ಇತರರಿಂದುಂಟಾಗುವ ಪರಿಭವಾದಿ

ಸ್ವಾಪೋದ್ಬೋಧವ್ಯತಿಕರನಿಭೇ ಭೋಗಮೋಕ್ಷಾಂತರಾಳೇ ।
ಕಾಲೇ ಕಂಚಿಜ್ಜಗತಿ ವಿಧಿನಾ ಕೇನಚಿತ್ಸ್ಥಾಪ್ಯಮಾನಾಃ ।

ವಿಷಯಗಳಲ್ಲಿ ಯಾವುದೊಂದೂ ಪ್ರವೃತ್ತಿಯೂ ಇಲ್ಲದೆ ನಿವೃತ್ತಿಧರ್ಮವನ್ನಾಶ್ರಯಿಸಿದವರು. ಹಾಗೆಯೇ ಉಪಾಯ ಪುರುಷಾರ್ಥಗಳಲ್ಲೂ ನಿಷ್ಠೆಯುಳ್ಳವರು. ಆದುದರಿಂದಲೇ "ಮಿಕ್ಕ ವುಣರ್ತಿಯರ್" ಸ್ವನಿಷ್ಠಾಭಿಜ್ಞಾನವುಳ್ಳವರೆಂದೂ, ಮೇದಿನಿ ಮೇವಿಯ ವಿಣ್ಣವರೇ ಎಂದೂ ಅವರನ್ನು ಪ್ರಶಂಸಿಸುತ್ತಾರೆ. ನಿತ್ಯಸೂರಿಗಳು ಹೇಗೆ ಶ್ರಿಯಃಪತಿಗೆ ಕೈಂಕರ್ಯವನ್ನು ಎಸಗುತ್ತಾ ನಿರತಿಶಯಾನಂದದಿಂದಿರುತ್ತಾರೋ ಹಾಗೆಯೇ ಇವರು ಅರ್ಚಾವತಾರಿಯಾದ ಶ್ರಿಯಃಪತಿಯನ್ನು ಸೇವಿಸುತ್ತಾ ಭೂ ವೈಕುಂಠಗಳಾದ ಶ್ರೀರಂಗ ತಿರುಮಲೆ ಮೊದಲಾದವುಗಳಲ್ಲಿ ವಾಸವಾಡುತ್ತಿದ್ದಾರೆಂಬ ಭಾವವು. ಅಥವಾ, ನಿತ್ಯಸೂರಿಗಳೇ ಈ ಭೂಮಿಯಲ್ಲಿ ಅಂಶಾವತಾರವನ್ನು ಮಾಡಿ, ತಾವಾಗಿಯೋ ಅಥವಾ ಶ್ರಿಯಃಪತಿಯ ನಿರ್ಹೇತುಕ ಕೃಪೆಯಿಂದ ಆಜ್ಞಪ್ತರಾಗಿಯೋ ಸದುಪದೇಶವನ್ನು ಮಾಡಿ ತಮ್ಮ ಸದ್ವೃತ್ತಿಯನ್ನು ಪ್ರದರ್ಶಿಸಿ ಚೇತನರ ಅಜ್ಞಾನಾಂಧಕಾರವನ್ನು ತೊಲಗಿಸುವದಕ್ಕಾಗಿ ಬಂದ ನಿತ್ಯಸೂರಿಗಳೇ ಆಗಿರಬಹುದೆಂಬ ತಾತ್ಪರ್ಯವಾಗಬಹುದು. ಅಥವಾ ಇವರುಗಳ ಸ್ಥಿತಿಯು ನಿತ್ಯಸೂರಿಗಳ ಸ್ಥಿತಿಗೇನೂ ಕಮ್ಮಿಯಾದುದಲ್ಲವೆಂಬ ಅಭಿಪ್ರಾಯವಾದರೂ ಆಗಬಹುದು.

ಅವತಾರಿಕೆ—ಹಿಂದಿನ ಪಾಶುರದಲ್ಲಿ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನನು ನಿತ್ಯಸೂರಿ ಸಮಾನನೆಂದು ಹೇಳಲ್ಪಟ್ಟಿತು. ಹಾಗೆಯೇ ಸ್ವನಿಷ್ಠಾಭಿಜ್ಞಾನವುಳ್ಳವನು ತನ್ನ ಅತಿಹೇಯವಾದ ಶರೀರವನ್ನು ಧಾರಣಮಾಡುವನೇ ? ಶರೀರವನ್ನು ಧಾರಣಮಾಡಿರುವದರಿಂದ ಸ್ವನಿಷ್ಠಾಭಿಜ್ಞಾನವೇ ಉಂಟಾಗಲಿಲ್ಲವೆಂದು ಹೇಳೋಣವೇ ? ಎಂಬೀ ಶಂಕೆಗಳಿಗೆ ಸಮಾಧಾನ ಹೇಳುವವರಾಗಿ ಅಧಿಕಾರ ಸಮಾಪ್ತಿಯನ್ನು ಮಾಡುತ್ತಾರೆ :—ಸರ್ವೇಶ್ವರನೇ ಈತನಿಗೆ ಸ್ವನಿಷ್ಠೆಯನ್ನು ದಯಪಾಲಿಸಿ ಬ್ರಹ್ಮವಿತ್ತಾಗಿ ಮಾಡಿ ಲೋಕದ ಜನರಿಗೆ ಹಿತವನ್ನುಂಟುಮಾಡುವದಕ್ಕಾಗಿ ಕೆಲವು ಕಾಲ ಈತನನ್ನು ಪೃಥ್ವಿಯಲ್ಲಿರುವ ಹಾಗೆ ಮಾಡಿರುತ್ತಾನೆಂದು ಸಮಾಧಾನ ಹೇಳುತ್ತಾರೆ.

ಅರ್ಥ—ಕೃತಿನಃ - ಹೀಗೆ ಪ್ರಪನ್ನನಾಗಿ ಕೃತಕೃತ್ಯತೆಯನ್ನು ಹೊಂದಿದ ಕೆಲವು ಪ್ರಪನ್ನರು, **ಸ್ವಾಪೋದ್ಬೋಧವ್ಯತಿಕರನಿಭೇ, ಸ್ವಾಪ** - ನಿದ್ರೆ, **ಉದ್ಬೋಧ** - ಎಚ್ಚರಿಕೆ, ಇವೆರಡರ ವ್ಯತಿಕರ - ಸಂಬಂಧವುಳ್ಳ ಸ್ವಪ್ನಾವ

ತತ್ತ್ವೋಪಾಯ ಪ್ರಭೃತಿ ವಿಷಯೇ ಸ್ವಾಮಿದತ್ತಾಂ ಸ್ವನಿಷ್ಠಾಂ ।
ಶೇಷಾಂ ಕೃತ್ವಾ ಶಿರಸಿ ಕೃತಿನಶ್ಶೇಷಮಾಯುರ್ನಯನ್ತಿ ॥೩೩॥

ಸ್ಥೆಗೆ, ನಿಭೇ - ಸಮಾನವಾದ, ಭೋಗ-ಇಹಲೋಕದ ಸುಖದುಃಖಾನುಭವ, **ಮೋಕ್ಷ** - ದಿವ್ಯವೈಕುಂಠದಲ್ಲಿ ನಿರತಿಶಯಾನಂದ ಪ್ರಾಪ್ತಿ, ಇವುಗಳ **ಅಂತರಾಳೆ** - ಮಧ್ಯದಲ್ಲಿ, **ಕಿಂಚಿತ್ಕಾಲಂ** - ಕೆಲವು ದಿನ, **ಜಗತಿ** - ಈ ಜಗತ್ತಿನಲ್ಲಿ, **ಕೇನಚಿತ್ ವಿಧಿನಾ** -- ಯಾವುದೋ ಒಂದು ಪ್ರಾರಬ್ಧಕರ್ಮರೂಪ ಸುಕೃತ ವಿಶೇಷದಿಂದ, **ಸ್ಥಾಪ್ಯಮಾನಾಃ**-ಲೋಕಹಿತಾರ್ಥವಾಗಿ ಶ್ರಿಯಃಪತಿಯಿಂದ ಇರಿಸಲ್ಪಟ್ಟವರಾಗಿ, **ತತ್ತ್ವೋಪಾಯಪ್ರಭೃತಿ ವಿಷಯೇ, ತತ್ತ್ವ** - ಸ್ವರೂಪ, ಉಪಾಯ, **ಪ್ರಭೃತಿ ವಿಷಯೇ** - ಮೊದಲಾದ ವಿಷಯಗಳಲ್ಲಿ, ಇದರಿಂದ ಪುರುಷಾರ್ಥವು ಹೇಳಲ್ಪಟ್ಟಿತು, **ಸ್ವಾಮಿದತ್ತಾಂ** - ಸರ್ವೇಶ್ವರನಿಂದ ದಯಪಾಲಿಸಲ್ಪಟ್ಟ, **ಸ್ವನಿಷ್ಠೆ**ಯನ್ನು, **ಶಿರಸಿ** - ತಲೆಯಲ್ಲಿ, **ಶೇಷಾಂ ಕೃತ್ವಾ** - ಇಲ್ಲಿ ಶೇಷಾಶಬ್ದಕ್ಕೆ ಪರಿವಟ್ಟವೆಂಬರ್ಥವು, ಪರಿವಟ್ಟವನ್ನಾಗಿ ಅಂಗೀಕರಿಸಿ, ಎಂದರೆ ಬಹು ಆದರದಿಂದ ಪರಿಗ್ರಹಿಸಿ ಎಂಬ ತಾತ್ಪರ್ಯವು, **ಶೇಷಮಾಯುಃ** - ಇನ್ನು ನಿಂತಿರುವ ಆಯುಸ್ಸನ್ನು **ನಯನ್ತಿ** - ಕಳೆಯುತ್ತಾರೆ.

ತಾತ್ಪರ್ಯ - ಈ ಮನುಷ್ಯನು ಪ್ರಪದನಾನುಷ್ಠಾನ ಮಾಡುವದಕ್ಕೆ ಮುಂಚಿನ ಅವಸ್ಥೆಯು ಸಂಸಾರ ದಶೆಯು. ಪ್ರಪದನಾನುಷ್ಠಾನಾನಂತರ ಈತನ ಸಂಚಿತಪಾಪಗಳೆಲ್ಲಾ ನಷ್ಟವಾಗಿ, ಆಗಾಮಿಗಳು ಈತನಿಗೆ ಅನ್ವಯಿಸದೇ ಇರುವದರಿಂದ ಈತನ ಜ್ಞಾನವು ವಿಕಸಿತವಾಗುತ್ತದೆ. ಆದರೆ ಮೋಕ್ಷದಶೆಯಲ್ಲುಂಟಾಗುವಷ್ಟು ವಿಕಸಿತವಾಗುವದಿಲ್ಲ. ಮೋಕ್ಷದಶೆಯಲ್ಲಾದರೋ "**ಸ್ವೇನರೂಪೇಣಾಭಿನಿಷ್ಪದ್ಯತೇ**" (ಛಾಂ. ೮.೧೨.೩) ಎಂದು ಹೇಳಿರುವ ಹಾಗೆ ಸ್ವಸ್ವರೂಪಾವಿರ್ಭಾವವು ಎಂದರೆ ತನ್ನನೈಜವಾದ ಸರ್ವಜ್ಞತ್ವಭಾವದೊಂದಿಗೆ ಪ್ರಕಾಶಿಸುತ್ತದೆ ಸಂಸಾರದಶೆಯಲ್ಲಿಇದು ಪ್ರಕೃತಿಸಂಬಂಧದಿಂದ ಹೆಚ್ಚಾಗಿ ಆವರಿಸಲ್ಪಟ್ಟಿರುತ್ತದೆಯಾದುದರಿಂದ "**ಅನಾದಿಮಾಯಯಾ ಸುಪ್ತಃ**" ಎಂದು ಹೇಳಿರುವ ಹಾಗೆ ಇದು ನಿದ್ರಾವಸ್ಥೆಗೆ ಹೋಲಿಸಲ್ಪಟ್ಟಿರುತ್ತದೆ. ಮೋಕ್ಷದಶೆಯಲ್ಲಿ ಇಂತಹ ಜ್ಞಾನತಿರೋಧಾನವಿಲ್ಲದಿರುವದರಿಂದ "**ಜಾಗ್ರುವಾಂಸಸ್ಸಮಿಂಧತೇ**" ಎಂದು ಹೇಳಿರುವ **ಉದ್ಬೋಧ**ವೆಂದರೆ ಜಾಗರಾವಸ್ಥೆಗೆ ಹೋಲಿಸಲ್ಪಟ್ಟಿರುತ್ತದೆ. ಭರನ್ಯಾಸದ **ಉತ್ತರಕಾಲಾ**ವಸ್ಥೆಯಾದರೋ **ಪೂರ್ವ**ಕಾಲಿಕ ನಿದ್ರಾವಸ್ಥೆಗೂ, ಮೋಕ್ಷಪ್ರಾಪ್ತಿಯ ಜಾಗರಾವಸ್ಥೆಗೂ ಮಧ್ಯಸ್ಥವಾಗಿ ಎರಡರ ಸಂಬಂಧ**ವೂ** ಇರುವದರಿಂದ ಜ್ಞಾನಾಜ್ಞಾನಾವಸ್ಥೆಯಾದ ಸ್ವಪ್ನಾವಸ್ಥೆಯೆಂದು ಹೇಳಬಹುದು. ಆದುದರಿಂದ**ಲೆ ಈ**

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟ ನಾಥಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಸ್ವನಿಷ್ಠಾಭಿ ಜ್ಞಾನಾಧಿಕಾರಶ್ಚತುರ್ದಶಃ.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ.

ಭೋಗಮೋಕ್ಷಾಂತರಾಳ ದೆಶೆಯು ಸ್ವಾಪೋದ್ಬೋಧವ್ಯತಿಕರನಿಭ ವಾದುನೆಂದು ಹೇಳಲ್ಪಟ್ಟಿರುತ್ತದೆ.

ಈತನು ಆಚಾರ್ಯ ಕೃಪೆಯಿಂದ ಸಾಂಗ ಭರನ್ಯಾಸವನ್ನನುಷ್ಠಿಸಿ, ಸ್ವರೂಪೋಪಾಯ ಪುರುಷಾರ್ಥಗಳಲ್ಲಿ ನಿಷ್ಠೆಯನ್ನು ಹೊಂದುವದು, ಸರ್ವೇಶ್ವರನ ಕೃಪೆಯಿಂದಲೇ ಹೊರತು ತನ್ನ ಸ್ವಪ್ರಯತ್ನದಿಂದಲೇ ಅಲ್ಲವು. ಈತನು ಈಷದಪಿ ಸ್ವಾತಂತ್ರ್ಯವನ್ನು ವಹಿಸಿದವನಲ್ಲವಾದುದರಿಂದ, ಆ ಪಾರತಂತ್ರ್ಯವನ್ನು ಪ್ರಕಟಿಸುವದಕ್ಕಾಗಿ ಸ್ವಾಮಿದತ್ತಾಂ ಸ್ವನಿಷ್ಠಾಂ ಎಂಬ ಪ್ರಯೋಗವು. ಈ ಸ್ವನಿಷ್ಠೆಯು ಯಾವ ವಿಷಯದಲ್ಲೆಂದರೆ, ತತ್ಸ್ವೋಪಾಯ ಪ್ರಭೃತಿ ವಿಷಯೇ ಸ್ವರೂಪೋಪಾಯ ಪುರುಷಾರ್ಥಗಳಲ್ಲಿ ನಿಷ್ಠೆಯೆಂದು ಹೇಳಲ್ಪಟ್ಟಿತು. ಇಂತಹ ನಿಷ್ಠೆಯನ್ನು ಯಾವಾಗ ಹೊಂದಿದನೋ, ಒಡನೆ ಸಂಸಾರ ಬಂಧವನ್ನು ಸಹಿಸಲು ಸಾಧ್ಯವಿಲ್ಲದಿರುವಾಗ ಉತ್ತರ ಕಾಲವು ಈತನಿಗೆ ಮಹಾ ದುಃಖರೂಪವಾಗಿ ಪರಿಣಮಿಸಲಾರದೋ? ದೇಹಾವಸಾನದವರೆಗೂ ಇರುವ ಕಂಚಿತ್ಕಾಲವನ್ನು ಕಳೆಯುವ ಬಗೆ ಹೇಗೆ? ಎಂದರೆ, ಅಂತಹ ಪ್ರಪನ್ನರಿಗೆ ಈ ಮಧ್ಯಕಾಲವೂ ಉತ್ಕೃಷ್ಟ ಕಾಲವೇ ಸರಿ ಎಂದು ಹೇಳುತ್ತಾರೆ. ಕೇನ ಚಿದ್ವಿಧಿನಾಸ್ಥಾಪ್ಯಮಾನಾಃ ಅವರುಗಳು ತಮ್ಮ ಯಾವುದೋ ಒಂದು ಸುಕೃತ ವಿಶೇಷದಿಂದ ಹಾಗೆ ಕೆಲವು ಕಾಲ ಈ ಲೀಲಾವಿಭೂತಿಯಲ್ಲಿರುವ ಹಾಗೆ ಸರ್ವೇಶ್ವರನು ಸಙ್ಕಲ್ಪಿಸಿರುತ್ತಾನೆ. ಸ್ಥಾಪ್ಯಮಾನಾಃ ಎಂದಿರುವದರಿಂದ ಸರ್ವೇಶ್ವರನಿಂದ ಹಾಗೆ ನಿಲ್ಲಿಸಲ್ಪಟ್ಟವರೆಂದು ಹೇಳಲ್ಪಟ್ಟಿರುತ್ತದೆ. ಏತಕ್ಕಾಗಿ ಹಾಗೆ ನಿಲ್ಲಿಸಿರಬಹುದೆಂದರೆ— ಇವರುಗಳು ಹೇಗೆ ಭರನ್ಯಾಸವನ್ನನುಷ್ಠಿಸಿ, ಕೃತಕೃತ್ಯರಾಗಿ ನಿಷ್ಠೆಯನ್ನು ಸಂಪಾದಿಸಿಕೊಂಡು ಮೋಕ್ಷಪ್ರಾಪ್ತಿಯನ್ನು ಕೈವಶಮಾಡಿಕೊಂಡರೋ, ಹಾಗೆಯೇ "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ (ಗೀ.೩.೨೧) ಎಂದು ಹೇಳಿರುವ ಹಾಗೆ ಲೋಕದಲ್ಲಿ ಇತರರೂ ಕೂಡ ಇವರನ್ನು ನೋಡಿ ಆತ್ಮೋಜ್ಜೀವನಮಾಡಿಕೊಳ್ಳಲೆಂದು ಶ್ರೀ ಹರಿಯು ನಿರ್ಹೇತುಕ ಕೃಪಾ ಪೂರ್ವಕವಾದ ಸಂಕಲ್ಪವಾಗಿರಬಹುದು. ಇನ್ನೂ ಸರ್ವೇಶ್ವರನು, ಅವರುಗಳ ಮೂಲಕ,

ಅಧ್ಯಾತ್ಮಗ್ರಂಥನಿರ್ಮಾಣಂ ಅನೇಕೇಷಾಂ ಚ ಬೋಧನಂ ।
ಅರ್ಚಾವತಾರಸೇವಾ ಚ ತೇಷಾಮೇತನ್ಮಹತ್ಫಲಮ್ ॥ ಎಂದು ಹೇಳಿರುವ ಹಾಗೆ ಅಧ್ಯಾತ್ಮ ಗ್ರಂಥರಚನೆಯನ್ನೂ, ಅನೇಕ ಮುಮುಕ್ಷುಗಳಿಗೆ ತತ್ತ್ವೋಪದೇಶವನ್ನೂ, ಅರ್ಚಾವತಾರ ಕೈಂಕರ್ಯಗಳನ್ನೂ ಉದ್ದೇಶಿಸಿ ಅವರನ್ನು ಕೆಲವು ಕಾಲವಿಲ್ಲಿ ನಿಲ್ಲಿಸಿರಬಹುದು. ಇವುಗಳೆಲ್ಲಾ ಮುಂದಿನ ಉತ್ತರ ಕೃತ್ಯಾಧಿಕಾರದಲ್ಲಿ ಸವಿಸ್ತಾರವಾಗಿ ಉಪಪಾದಿತವಾಗುವದರಿಂದ, ಮುಂದಿನ ಅಧಿಕಾರಾರ್ಥವು ಇದರಿಂದ ಸೂಚಿಸಲ್ಪಟ್ಟಿತು.

ಆದುದರಿಂದ ಅಂತಹ ಸ್ವನಿಷ್ಠಾಭಿಜ್ಞಾನವಿರುವ ದೃಪ್ತಪ್ರಪನ್ನರು ಈ ಉತ್ತರ ಕಾಲವನ್ನು ದುಸ್ಸಹವಾಗಿ ಭಾವಿಸರು. ಅವರು ನಿತ್ಯಸೂರಿಗಳಿಗೆ ಸಮಾನರಾಗಿರುವವರೆಂದು ಮೇಲೆಯೇ ಹೇಳಲ್ಪಟ್ಟಿತು. ಇವರೂ ಕೂಡ ಯೋಗಿಗಳ ಹಾಗೆ "ಅಮೃತ ಇಹ ಭವತಿ" ಇಲ್ಲಿಯೇ ಮುಕ್ತತುಲ್ಯರಾಗುತ್ತಾರೆ. ಅವರುಗಳು ಇಲ್ಲಿ ಮಾಡುವ ಕೈಂಕರ್ಯಗಳೆಲ್ಲಾ

ಯಾಃ ಕ್ರಿಯಾಸ್ಸಂಪ್ರಯುಕ್ತಾಸ್ಸ್ಯುರೇಕಾಂತಗತಬುದ್ಧಿಭಿಃ ।
ತಾ ಸ್ಸರ್ವಾ ಶಿರಸಾ ದೇವಃ ಪ್ರತಿಗೃಹ್ಣಾತಿ ವೈಸ್ವಯಂ ॥ ಎಂದು ಹೇಳಿರುವ ಹಾಗೆ ಭಕ್ತವತ್ಸಲನು ಶಿರಸಾ ವಹಿಸುವನೆಂದು ಹೇಳಿರುವದರಿಂದ ಮುಕ್ತರ ಹಾಗೆಯೇ ಸಂತೋಷಯುಕ್ತರಾಗಿರುವರೇ ವಿನಾ ಶೋಕಿಸರು. ಆದುದರಿಂದ ಸಂತೋಷಚಿತ್ತನಾಗಿಯೇ ಅಧ್ಯಾತ್ಮ ವಿದ್ಯೆಯನ್ನು ಸಂಗ್ರಹಿಸುತ್ತಾ, ತಿಳಿದುದನ್ನು ಇತರರಿಗೆ ಉಪದೇಶಿಸುತ್ತಾ, ದೇಹಾವಸಾನ ಕಾಲವನ್ನು ನಿರೀಕ್ಷಿಸುತ್ತಾ ಕಾಲಯಾಪನೆಯನ್ನು ಮಾಡುತ್ತಿರುವರು.

ಎಂಬಲ್ಲಿಗೆ
ಹದಿನಾಲ್ಕನೆಯದಾದ ಸ್ವನಿಷ್ಠಾಭಿಜ್ಞಾನಾಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವ ಶರ್ಮನ
ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.
ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀ ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಅಥ ಉತ್ತರಕೃತ್ಯಾಧಿಕಾರಃ.

20.3.2002

ಸಂತೋಷಾರ್ಥಂ ವಿಮೃಶತಿ ಮುಹುಸ್ಸದ್ಭಿರಧ್ಯಾತ್ಮವಿದ್ಯಾಂ
ನಿತ್ಯಂ ಬ್ರೂತೇ ನಿಶಮಯತಿ ಚ ಸ್ವಾದು ಸುವ್ಯಾಹೃತಾನಿ ।

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಹಿಂದಿನ ಶ್ಲೋಕಾಂತ್ಯದಲ್ಲಿ **ಶೇಷಮಾಯುರ್ನಯನ್ತಿ**, ಆಯುಸ್ಸಿನ ಮಿಕ್ಕ ಭಾಗವನ್ನು, ಈ ಸಾಙ್ಗಪ್ರಪದನಾನುಷ್ಠಾನಮಾಡಿ ಕೃತಕೃತ್ಯನಾಗಿ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನನು ಕಳೆಯುತ್ತಾನೆಂದು ಹೇಳಲ್ಪಟ್ಟಿತು. ಅಂತಹ ಪ್ರಪನ್ನನು ಜೀವನೋಪಾಯ ಮುಂತಾದವುಗಳಲ್ಲಾಗಲಿ, ಇನ್ನು ಮೋಕ್ಷಪ್ರಾಪ್ತಿ ವಿಷಯದಲ್ಲಾಗಲಿ ಏನೊಂದೂ ಪ್ರಯತ್ನಮಾಡತಕ್ಕದ್ದಿಲ್ಲವೆಂದೂ ಹೇಳಲ್ಪಟ್ಟಿತು. ಹಾಗಾದರೆ ಈತನು ಪಾಷಾಣತುಲ್ಯನಾಗಿ ಒಂದು ಕಡೆಯಲ್ಲಿ ಏನೊಂದೂ ಪ್ರವೃತ್ತಿಯಿಲ್ಲದೆ ಇರತಕ್ಕದ್ದೇ ? ಇಲ್ಲವೇ, ಏನಾದರೂ ಈತನಿಗೂ ಕರ್ತವ್ಯಗಳುಂಟೋ? ಎಂಬ ಪ್ರಶ್ನೆಗೆ ಸದುತ್ತರವನ್ನು ದಯಪಾಲಿಸುತ್ತಾರೆ. ಬುದ್ಧಿ ವಿವೇಕಗಳುಂಟಾದ ಮೇಲೆ ಸಾಯುವತನಕ ಎಲ್ಲಾ ವರ್ಣಾಶ್ರಮಿಗಳಿಗೂ ಅವರವರುಗಳ ಇತಿ

ಅಙ್ಗೀಕುರ್ವನ್ನನಘಲಳಿತಾಂ ವೃತ್ತಿಮಾದೇಹಪಾತಾ ।
ದೃಷ್ಟಾದೃಷ್ಟಸ್ವಭರ ವಿಗಮೇ ದತ್ತದೃಷ್ಟಿಃ ಪ್ರಪನ್ನಃ ॥ ೨೮ ॥

ಕರ್ತವ್ಯತೆಗಳುಂಟು ; ಅವುಗಳನ್ನು ಪ್ರತಿಯೊಬ್ಬನೂ ನೆರವೇರಿಸಲೇಬೇಕು. ಮನುಷ್ಯಜನ್ಮಕ್ಕೆ ಸಾರ್ಥಕ್ಯವು ಇಂತಹ ಇತಿ ಕರ್ತವ್ಯತೆಗಳನ್ನು ತಿಳಿದು ಲೋಕ ಸಂಗ್ರಹಾರ್ಥವಾಗಿ ತನ್ನ ಕೈಲಾದಷ್ಟು ಪ್ರವೃತ್ತಿಯು. ಇದನ್ನು ಎಲ್ಲರೂ ಅರಿತು ವರ್ತಿಸಿದರೆ ಲೋಕಕ್ಷೇಮವು ತುಂಬಾ ಅಭಿವೃದ್ಧಿಯನ್ನು ಹೊಂದುವದರಲ್ಲೇನೂ ಸಂದೇಹವಿಲ್ಲವು. ಹಾಗೆಯೇ ಈ ಪ್ರಪನ್ನನಿಗೂ ಭರನ್ಯಾಸೋತ್ತರ ಕಾಲದಲ್ಲೂ ಇತಿಕರ್ತವ್ಯತೆಗಳುಂಟು. ಅವುಗಳನ್ನು ಕುರಿತು ಈ ಅಧಿಕಾರದಲ್ಲಿ ಉಪದೇಶಿಸು ವದರಿಂದ, ಇದಕ್ಕೆ ಉತ್ತರ ಕೃತ್ಯಾಧಿಕಾರವೆಂದು ಹೆಸರು.

ಅರ್ಥ—**ಪ್ರಪನ್ನಃ** - ಈ ಸಾಂಗಭರನ್ಯಾಸವನ್ನನುಷ್ಠಿಸಿದವನು, **ದೃಷ್ಟಾದೃಷ್ಟ ಸ್ವಭರ ವಿಗಮೇ, ದೃಷ್ಟ** - ತನಗೆ ಕಣ್ಣಿಗೆ ಕಾಣುವ ವಿಷಯಗಳಾದ ದೇಹಯಾತ್ರಾದಿಗಳಲ್ಲೂ, **ಅದೃಷ್ಟ** - ಕಣ್ಣಿಗೆ ಕಾಣದೇ ಇರುವ ಪರಮಪದ ಪ್ರಾಪ್ತಿಯಲ್ಲೂ, **ಸ್ವಭರ**-ತನಗೆ ಎಲ್ಲಾ ವಿಧವಾದ ಭಾರವೂ, **ವಿಗಮೇ**- ಇಲ್ಲದಿರು ವದರಲ್ಲಿ, **ದತ್ತದೃಷ್ಟಿಃ** - ಸಾವಧಾನದೃಷ್ಟಿಯುಳ್ಳವನಾಗಿ, ಅವೆರಡರ ವಿಷಯ ದಲ್ಲೂ ಕರ್ತವ್ಯಾಂಶವೇನೂ ಇಲ್ಲವೆಂಬುವದನ್ನು ಹಿಂದಿನ ಎರಡು ಅಧಿಕಾರದಲ್ಲಿ ಉಪಪಾದಿಸಿದಂತೆ ಅರಿತು ಸ್ವರೂಪೋಪಾಯ ಪುರುಷಾರ್ಥ ನಿಷ್ಠೆಯನ್ನು ಹೊಂದಿದವನಾಗಿ, **ಆದೇಹಪಾತಾತ್** - ದೇಹಾವಸಾನದವರೆಗೂ, **ಅನಘ ಲಳಿತಾಂ, ಅನಘ** - ದೋಷಗಂಧವೂ ಇಲ್ಲದೆ ಪರಿಶುದ್ಧವಾದ, ಏಕೆಂದರೆ ವಿಧಿವಿಹಿತವಾದುದರಿಂದ, **ಲಳಿತಾಂ** - ಭಗವತ್ಕೈಂಕರ್ಯರೂಪವಾಗಿಯೂ ಭಗ ವತ್ಪ್ರೀತ್ಯರ್ಥವಾಗಿಯೂ ಇರುವದರಿಂದ ಅತಿಮನೋಹರವಾದ, **ವೃತ್ತಿಂ** - ವರ್ಣಾಶ್ರಮೋಚಿತ ಕರ್ಮಾನುಷ್ಠಾನವನ್ನು, **ಅಙ್ಗೀಕುರ್ವನ್** ಅಂಗೀಕರಿಸಿದವ ರಾಗಿ, **ಸಂತೋಷಾರ್ಥಂ** ಭಗವದ್ಗುಣಾನುಭವದಿಂದುಂಟಾದ ಸಂತೋಷಾರ್ಥ ವಾಗಿ, **ಸದ್ಭಿಃಸ್ಸಹ** ಸಾಧುಜನಗಳೊಡನೇ, ಬ್ರಹ್ಮವಿತ್ತುಗಳೊಡನೇ ಅಥವಾ ಬ್ರಹ್ಮವಿತ್ತುಗಳಾಗಬೇಕೆಂಬಪೇಕ್ಷೆಯುಳ್ಳವರೊಡನೆ, **ನಿತ್ಯಂ** - ಪ್ರತಿನಿತ್ಯವೂ, **ಅಧ್ಯಾತ್ಮವಿದ್ಯಾಂ** – ಶಾರೀರಿಕ ಮೀಮಾಂಸವನ್ನೂ, ಮತ್ತು ಅರಿತು ಸ್ವರೂ **ಪೋಪಾಯ** ಪುರುಷಾರ್ಥನಿಷ್ಠೆಯನ್ನು ಹೊಂದಿದವನಾಗಿ, **ವಿಮೃಶತಿ** – ತಿಳಿದವ ರೊಂತಿಗೆ ಚರ್ಚಿಸುವದು, ಪ್ರತಿನಿತ್ಯವೂ **ಬ್ರೂತೇ** - ಶಿಷ್ಯರಿಗೆ ಉಪದೇಶಿಸುವನು, **ನಿಶಮಯತಿ ಚ** - ತನ್ನ ಆಚಾರ್ಯರಿಂದ ಉಪದೇಶಹೊಂದಿಕೇಳುವನು. ಈ

ಉತ್ತರಕೃತ್ಯಾಧಿಕಾರಃ

ಅಧ್ಯಾತ್ಮವಿದ್ಯೆಯೇನು ಅವುಗಳ ಮನೋಹರವಾದ ಉಪಬ್ರಹ್ಮಣಗಳಾದ ಇತಿಹಾಸ ಪುರಾಣಗಳೇನು ಮತ್ತು ಶ್ರೀ ಆಳ್ವಾರಾಚಾರ್ಯರುಗಳ ದಿವ್ಯಸೂಕ್ತಿಗಳೇನು ಇವುಗಳನ್ನು ಕುರಿತು, ಸಮಾನರೊಂದಿಗೆ ಚರ್ಚಿಸುವದು, ತಿಳಿಯದವರಿಗೆ ಬೋಧಿಸುವದು, ತಿಳಿದವರಿಂದ ತಾನು ಉಪದೇಶಹೊಂದುವದು; ಇವೇ ಮೊದಲಾದವುಗಳೇ ಈ ಪ್ರಪನ್ನನ ಉತ್ತರಕೃತ್ಯಗಳೆಂಬ ಭಾವವು.

ತಾತ್ಪರ್ಯ:—ಸಾಂಗ ಭರನ್ಯಾಸವನ್ನು ಮಾಡಿ, ಕೃತಕೃತ್ಯನೆನಿಸಿ, ಸ್ವನಿಷ್ಠಾಭಿಜ್ಞಾನವನ್ನು ತಿಳಿದವನ ಉತ್ತರಕೃತ್ಯವೇನೆಂಬುವದನ್ನು ತಿಳಿಸುತ್ತಾರೆ. ಐಹಿಕ ವಿಷಯಗಳಾದ ದೇಹಯಾತ್ರೆಗಾಗಿಯಾಗಲಿ ಪರಮಪದಪ್ರಾಪ್ತಿಗಾಗಲಿ ಈ ಪ್ರಪನ್ನನು ಮಾಡತಕ್ಕದ್ದೇನೂ ಇರುವದಿಲ್ಲವು. ಇದನ್ನೇ ಇನ್ನೊಂದು ಸಲ ಜ್ಞಾಪಿಸುವದಕ್ಕಾಗಿ "ದೃಷ್ಟಾದೃಷ್ಟಸ್ವಭರವಿಗಮೋ ದತ್ತದೃಷ್ಟಿಃ" ಎಂದು ಹೇಳಿರುತ್ತಾರೆ. ದೇಹಯಾತ್ರೆ ಮೊದಲಾದುದು ದೃಷ್ಟವಿಷಯವು, ಪರಮಪದಪ್ರಾಪ್ತಿಯು ಅದೃಷ್ಟ ವಿಷಯವು. ಇವೆರಡರ ವಿಷಯದಲ್ಲೂ ತಾನು ಮಾಡತಕ್ಕದ್ದೇನೂ ಇಲ್ಲವೆಂಬುವದರ ಜ್ಞಾನವು ಸದಾ ಅನುವರ್ತಿಸಿ ಬರತಕ್ಕದ್ದು. ಆದುದರಿಂದಲೇ ದತ್ತದೃಷ್ಟಿಃ ಎಂಬ ಪ್ರಯೋಗವು. ಅದು ಏಕೆ ಹಾಗೆ ಅನುವರ್ತಿಸಿ ಬರತಕ್ಕದ್ದೆಂದರೆ, ಅಂತಹ ಜ್ಞಾನವಿಲ್ಲವಾದರೆ ಸ್ವರೂಪೋಪಾಯಪುರುಷಾರ್ಥಗಳಲ್ಲಿ ನಿಷ್ಠೆಯಿಲ್ಲವೆಂದಾಗುತ್ತದೆ. ಆದುದರಿಂದ ಸಾವಧಾನನಾಗಿರತಕ್ಕದ್ದೆಂದು ಹೇಳುವದಕ್ಕಾಗಿ ದತ್ತದೃಷ್ಟಿಃ ಎಂದು ಹೇಳಿರುತ್ತಾರೆ.

ಆದರೆ ಉಪಾಯ ರೂಪವಾಗಿ ಈತನೇನನ್ನು ಮಾಡದಿದ್ದರೂ ತನ್ನ ವರ್ಣಾಶ್ರಮೋಚಿತ ಕರ್ಮಗಳನ್ನೇನೋ ಆದೇಹಪಾತಾತ್-ದೇಹಾವಸಾನದವರಿವಿಗೂ ಮಾಡಲೇಬೇಕೆಂಬುವದನ್ನು ತಿಳಿಸುವದಕ್ಕಾಗಿ, ಅಂಗೀಕುರ್ವನ್ನನಘಲಲಿತಾಂ ವೃತ್ತಿಂ ಎಂದು ಪ್ರಯೋಗಿಸಿರುತ್ತಾರೆ. ಅಙ್ಗೀಕುರ್ವನ್ ಎಂದು ಹೇಳಿರುವದರಿಂದ ಇದು ಉಪಾಯಕ್ಕಾವಶ್ಯಕವಿಲ್ಲವೆಂಬ ಭಾವವೂ, ಆದರೂ ಅವುಗಳ ಅನುಷ್ಠಾನವನ್ನು ಪರಿಗ್ರಹಿಸಲೇಬೇಕೆಂಬ ಭಾವವೂ ತೋರಿಬರುತ್ತವೆ. ಅದು ಸರ್ವೇಶ್ವರನ ಆಜ್ಞಾರೂಪಕೈಙ್ಕರ್ಯವಾಗಿ, "ಅವಿದ್ಯಯಾ ಮೃತ್ಯುಂ ತೀರ್ತ್ವಾ" ಎಂದು ಹೇಳಿರುವಹಾಗೆ ಸಂಸಾರವನ್ನು ದಾಟುವುದಕ್ಕೆ ಸಹಕಾರಿಯಾಗುವದರಿಂದ ಅನಘವಾದುದು; ಮತ್ತು ಅದು ಭಗವತ್ಕೈಙ್ಕರ್ಯರೂಪವಾಗಿಯೂ ಭಗವತ್ಪ್ರೀತ್ಯರ್ಥವಾಗಿಯೂ ಮಾಡಲ್ಪಡುವದರಿಂದ ಆತನಿಗೆ ತುಂಬಾ ಭೋಗ್ಯಭೂತವಾದುದೆಂದು ತಿಳಿಸುವದಕ್ಕಾಗಿ, ಲಳಿತವೃತ್ತಿ ಎಂದು ಹೇಳಲ್ಪಟ್ಟಿತು.

ಪ್ರಪನ್ನನಾಗಲಿ ಪ್ರಪನ್ನನಲ್ಲದೇ ಇರಲಿ, ಈ ಆಜ್ಞಾನುಜ್ಞಾಕೈಙ್ಕರ್ಯಗಳನ್ನು ವರ್ಣಾಶ್ರಮೋಚಿತವಾಗಿ ಫಲಾಪೇಕ್ಷೆ ಇಲ್ಲದೇ ಸಾತ್ವಿಕತ್ಯಾಗಮೂಲಕ ನಡಿಸತಕ್ಕ

ದ್ದೇನೋ ಸರಿಯೇ. ಹೀಗೆ ಪ್ರಪನ್ನನಾಗಿ ಕೃತಕೃತ್ಯನಾದವನಿಗೆ ವರ್ಣಾಶ್ರಮೋಚಿತ ಕರ್ಮಗಳಲ್ಲದೆ ಇನ್ನೂ ಯಾವ ಇತಿಕರ್ತವ್ಯಗಳುಂಟು ಎಂದರೆ ಹೇಳುತ್ತಾರೆ.

ಈ ಪ್ರಪನ್ನನು ಮುಖ್ಯವಾಗಿ ಮಾಡತಕ್ಕದ್ದೇನೆಂದರೆ: ಅಧ್ಯಾತ್ಮವಿದ್ಯೆಯಲ್ಲಿ ಬ್ರಹ್ಮವಿತ್ತಾದ ತನ್ನ ಆಚಾರ್ಯರ ಮೂಲಕ ಜ್ಞಾನವನ್ನು ಸಂಪಾದಿಸತಕ್ಕದ್ದು. ಉಪನಿಷತ್ತುಗಳ ಸಙ್ಗ್ರಹರೂಪವಾದ ವ್ಯಾಸಸೂತ್ರಗಳನ್ನೂ ಅವುಗಳ ಪ್ರಾಮಾಣಿಕ ತಾತ್ಪರ್ಯವಾದ ಶ್ರೀ ಯತಿವರ್ಯರ ಶ್ರೀ ಭಾಷ್ಯವನ್ನೂ ಅಧಿಕರಿಸತಕ್ಕದು. ಇದಕ್ಕೆ ಒಂದು ವೇಳೆ ಯೋಗ್ಯತೆ ಇಲ್ಲದಿದ್ದರೆ ಇವುಗಳ ಉಪಬ್ರಹ್ಮಣಗಳಾದ ಶ್ರೀಮದ್ಭಾಗವತ, ಭಾರತ, ಶ್ರೀಮದ್ವಾಲ್ಮೀಕಿ ರಾಮಾಯಣ, ವಿಷ್ಣು ಪುರಾಣ, ಆಳ್ವಾರ್ ಆಚಾರ್ಯರ ಸೂಕ್ತಿಗಳಾದ "ನಾಲಾಯಿರಂ ಪ್ರಬಂಧಂ" ಅದರಲ್ಲಿ ಮುಖ್ಯವಾಗಿ ಶ್ರೀ ನಮ್ಮಾಳ್ವಾರ್‌ರವರ ತಿರುವಾಯ್ಮೊಳಿ ಅವುಗಳ ವ್ಯಾಖ್ಯಾನವಾದ "ಭಗವದ್ವಿಷಯಂ" ಇವುಗಳನ್ನಾಗಲಿ ಜ್ಞಾನನಿಧಿಗಳಾದ ಆಚಾರ್ಯರುಗಳಮೂಲಕ ಅಧಿಕರಿಸತಕ್ಕದ್ದು. ಇವುಗಳೊಂದಿಗೆ ಮುಖ್ಯವಾಗಿ ಈ ಶ್ರೀಮದ್ರಹಸ್ಯತ್ರಯಸಾರವನ್ನೂ ಸೇರಿಸತಕ್ಕದ್ದಾಗಿರುತ್ತದೆ. ವೇದಗಳನ್ನೂ ಅವುಗಳಲ್ಲಿ ಸಾರಭೂತವಾದ ಉಪನಿಷತ್ತುಗಳನ್ನೂ ಉಪದೇಶಿಸುವವರೂ ಮತ್ತು ಅವನ್ನು ಅಧಿಕರಿಸುವ ಜ್ಞಾನವುಳ್ಳವರೂ ತುಂಬಾ ವಿರಳರು. ಆದುದರಿಂದ ಸಮ್ಪ್ರದಾಯಸ್ಥಾಪಕರು ದಯಪಾಲಿಸಿರುವ ಶ್ರೀ ಭಾಷ್ಯವನ್ನು ಅಧಿಕರಿಸುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳತಕ್ಕದ್ದು ನಮಗೆ ಸ್ವರೂಪವು. ಇವುಗಳನ್ನುದ್ದೇಶಿಸಿಯೇ ಅಧ್ಯಾತ್ಮವಿದ್ಯೆಯೆಂದು ಹೇಳಲ್ಪಟ್ಟಿತು. ಅದಕ್ಕೆ ಯೋಗ್ಯತೆ ಇಲ್ಲದ ಪಕ್ಷದಲ್ಲಿ ಮೇಲೆ ವಿವರಿಸಿದ ಋಷಿಪ್ರೋಕ್ತ ಗ್ರಂಥಗಳನ್ನಾಗಲಿ ಆಳ್ವಾರ್ ಆಚಾರ್ಯರುಗಳ ದಿವ್ಯ ಸೂಕ್ತಿಗಳನ್ನಾಗಲಿ ಅಧಿಕರಿಸುವದು ನಮಗೆ ಉಚಿತವಾದುದು. ಇವುಗಳಿಗೂ ಕೂಡ ಕೆಲವರಿಗೆ ಯೋಗ್ಯತೆ ಇರಲಾರದೆಂದು ಭಾವಿಸಿ, ಶ್ರೀ ನಿಗಮಾಂತ ದೇಶಿಕರವರು ಇಂತಹ ಪ್ರಪನ್ನನು ಯಾವ ಜ್ಞಾನವನ್ನು ಮುಖ್ಯವಾಗಿ ಹೊಂದಬೇಕೋ, ಆ ವಿಷಯಗಳನ್ನೆಲ್ಲಾ ಸಙ್ಗ್ರಹಿಸಿ ತುಂಬಾ ಕೃಪೋದಾರಭಾವಗಳಿಂದ ಈ ಶ್ರೀಮದ್ರಹಸ್ಯತ್ರಯಸಾರವನ್ನು ದಯಪಾಲಿಸಿರುತ್ತಾರೆ. ಅದನ್ನು ಎಲ್ಲರೂ ಸಙ್ಗ್ರಹಿಸಲೆಂಬ ಉದಾರಮತಿಯಿಂದ ತಮಿಳ್ ಭಾಷೆಯಲ್ಲೇ ಬರೆದಿರುತ್ತಾರೆ. ಆ ಭಾಷೆಯೂ ನಮಗೆ ಈಗ ಕಷ್ಟತರವಾದುದಾಗಿ ಪರಿಣಮಿಸಿರುವದರಿಂದಲೇ ದಾಸನು ಅದಕ್ಕೆ ಕನ್ನಡ ಭಾಷಾಂತರವನ್ನು ಮಾಡುತ್ತಲಿದ್ದೇನೆ.

ಈ ಆಳ್ವಾರಾಚಾರ್ಯ ಸೂಕ್ತಿಗಳೆಂತವೆಂದರೆ, ಸ್ವಾದುಸುವ್ಯಾಹೃತಾನಿ ಎಂದರೆ ಶ್ರುತಿವಾಕ್ಯಗಳಹಾಗೆ ಕಠಿಣವಾದ ಶಾಸ್ತ್ರವಿನವಾಕ್ಯಾದ ವಿಧಿನಿಷೇಧರೂಪಗಳಲ್ಲಿಲ್ಲದೆ, ಬಹು ಲಲಿತವಾಗಿಯೂ ಮಧುರವಾಗಿಯೂ ಕಿವಿಗಿಂಪಾಗಿಯೂ

ಭಗವದ್ಗುಣಾನುಭವವಿರುವದರಿಂದ ಕಾಂತಾಸಮ್ಮಿತವೆಂದೆನಿಸಿ, ಅತಿ ಮನೋಹರವಾಗಿಯೂ ಇವೆ ಎಂದು ಹೇಳಿರುತ್ತಾರೆ.

ಹೀಗೆ ತಾನು ಅಧ್ಯಾತ್ಮವಿದ್ಯೆಯಲ್ಲಿ ಪರಿಶ್ರಮವನ್ನು ಹೊಂದಿ, **ನಿತ್ಯಂ ಬ್ರೂತೇ,** ಪ್ರತಿನಿತ್ಯವೂ ಬ್ರಹ್ಮಜ್ಞಾನವಿಲ್ಲವೇ ಎಂದು ಶೋಕಿಸುವ ಯೋಗ್ಯರಾದ ಶಿಷ್ಯರಿಗೆ ಉಪದೇಶಿಸತಕ್ಕದ್ದು. ಯೋಗ್ಯನಾದ ಮುಮುಕ್ಷುವಿಗೇ ಉಪದೇಶಿಸತಕ್ಕದ್ದೇ ವಿನಾ ಬೀದಿಯಲ್ಲಿ ಹೋಗುವ ಎಲ್ಲರಿಗೂ ಉಪದೇಶಿಸತಕ್ಕದ್ದಲ್ಲವು.

ಇದಲ್ಲದೆ ಅಧ್ಯಾತ್ಮವಿಷಯಿಕ ಜ್ಞಾನವು ಸುಪ್ರತಿಷ್ಠವಾಗುವದಕ್ಕೆ **ಸದ್ಭಿಸ್ಸಹ** ಸತ್ಪುರುಷರೊಂದಿಗೆ ಚರ್ಚೆ ಮಾಡತಕ್ಕದ್ದು, ಜಿಜ್ಞಾಸೆಯು ತುಂಬಾ ಅವಶ್ಯಕವು; ಪೂರ್ವಪಕ್ಷ ಸಿದ್ಧಾಂತ ರೂಪಗಳಿಂದ ಚರ್ಚೆಯು ನಡೆದರೇನೆ ಜ್ಞಾನವು ಪ್ರತಿಷ್ಠಿತವಾಗುತ್ತದೆ. ಈ ಸತ್ ಶಬ್ದದಿಂದ ಹೇಳಲ್ಪಟ್ಟವರು ಯಾರೆಂಬುವದನ್ನು ಶ್ರುತಿಯು " **ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ** " ಎಂಬುವದರಿಂದ ಬ್ರಹ್ಮಜ್ಞಾನ ಪರಿಚಯವುಳ್ಳವರೆಂದು ಹೇಳುತ್ತದೆ ಆದುದರಿಂದ ವಿಶಿಷ್ಟಾದ್ವೈತಿಗಳಾಗಿ ಶ್ರೀ ಭಾಷ್ಯದಲ್ಲಿ ತುಂಬಾ ಪರಿಶೀಲನೆಯುಳ್ಳವರೇ ಈ **ಸದ್ಭಿಸ್ಸಹ** ಎಂಬ ಪದಗಳಿಂದ ಹೇಳಲ್ಪಟ್ಟರೆಂದು ಭಾವಿಸತಕ್ಕದು. ಅಂತವರೊಂದಿಗೆ ಚರ್ಚಿಸಿದರೆ " **ಬೋಧಯನ್ತಃ ಪರಸ್ಪರಂ** " ಎಂದು ಗೀತೆಯಲ್ಲಿ ಹೇಳಿರುವ ಹಾಗೆ ಪರಸ್ಪರ ಒಳ್ಳೇ ಜ್ಞಾನಕ್ಕೆ ಕಾರಣವಾಗುತ್ತದೆಂಬ ಭಾವವು.

ಇಂತಹ ಕೃತಕೃತ್ಯನಾಗಿ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನನಿಗೆ ಯಾವಾಗಲೂ ಸಹವಾಸವು ಅಂತಹ ಸತ್ಪುಗಳೊಂದಿಗೆ ವಿನಾ ಅಸತ್ಪುಗಳೊಂದಿಗೆ ಕೂಡದು ಎಂಬುವದು ಇದರಿಂದ ಸುವ್ಯಕ್ತವು; ಅಂತವರ ಸಹವಾಸಕ್ಕಿಂತಲೂ "ವರಂ ಹುತವಹ ಜ್ವಾಲಾಪಂಜರಾನ್ತರ್ವ್ಯವಸ್ಥಿತಿಃ । ನ ಶೌರಿ ಚಿನ್ತಾ ವಿಮುಖಜನ ಸಂವಾಸ ವೈಶಸಮ್ " ಅಗ್ನಿ ಜ್ವಾಲೆಯ ಮಧ್ಯೆ ಇರುವ ಸ್ಥಿತಿಯು ಉತ್ತಮವೆಂದು ಹೇಳಲ್ಪಟ್ಟಿರುತ್ತದೆ. ಅದೇಕೆ ಹಾಗೆ ಹೇಳಲ್ಪಟ್ಟಿದೆ ಎಂದರೆ :—

"ಅಹನ್ಯಹನಿ ಧರ್ಮಸ್ಯ ಯೋನಿಸ್ಸಾಧುಸಮಾಗಮಃ ।
ಮೋಹಜಾಲಸ್ಯ ಯೋನಿರ್ಹಿ ಮೂಢೈರೇವಸಮಾಗಮಃ ॥" ಎಂದೂ
"ಅಸತಾಂ ದರ್ಶನಾತ್ಸ್ಪರ್ಶಾತ್ ಸಂಪರ್ಶಾಚ್ಚ ಸಹಾಸನಾತ್।
ಧರ್ಮಾಚಾರಾಃ ಪ್ರಣಶ್ಯನ್ತಿ ಯಥಾಸ್ಸೈಕತ ಮಪ್ಸ್ವಪಿ" ॥ ಎಂದೂ

ಹೇಳಿರುವ ಹಾಗೆ ಅಸತ್ಪುಗಳೊಂದಿಗೆ ಸಹವಾಸವು, ಧರ್ಮಾಚಾರಗಳೆಲ್ಲಾ ನಷ್ಟವಾಗಿ ಈತನಿಗೆ ಸ್ವರೂಪ ಹಾನಿಗೆ ಕಾರಣವಾಗುದರಿಂದ ಸರ್ವಥಾ ಕೂಡದೆಂದು ನಿಷೇಧಿ

ಸಲ್ಪಟ್ಟಿರುತ್ತದೆ. ಆದುದರಿಂದ ರಾವಣನಿರುವ ಸ್ಥಳದಲ್ಲಿ, "ಇಹ ಸಂತೋ ನ ವಾಸಂತಿ" ಎಂದು ಸೀತಾವಾಕ್ಯದ ಹಾಗೆ ಸಾಧುಜನಗಳು ವಾಸಮಾಡದಿರುವದರಿಂದಲೂ, ಅಥವಾ ಒಬ್ಬರಿಬ್ಬರು ಇದ್ದರೂ ಸತೋ ವಾ ನಾನು ವರ್ತಸೇ" ಎಂದು ಹೇಳಿರುವ ಹಾಗೆ, ಅವರನ್ನು ಆತನು ಅನುವರ್ತಿಸದೇ ಇರುವದರಿಂದಲೂ ವಿಭೀಷಣನು ಅಂತವನೊಂದಿಗೆ ಇರುವದು ತನಗೆ ಸ್ವರೂಪವಲ್ಲವೆಂದು ಹೇಗೆ ಆತನನ್ನು ತ್ಯಜಿಸಿದನೋ ಹಾಗೆ ನಾವೂ ಕೂಡ ಅಸತ್ತುಗಳನ್ನು ತ್ಯಜಿಸತಕ್ಕದ್ದೆಂಬುವದು ಇದರಿಂದ ದ್ಯೋತಿತವು.

ಆದುದರಿಂದ ಸತ್ತುಗಳೊಂದಿಗೆ ಸೇರಿ (1) ಅಧ್ಯಾತ್ಮವಿದ್ಯೆಯ ವಿಷಯವಾಗಿ ಚರ್ಚಿಸಿ ಯಥಾರ್ಥಜ್ಞಾನವನ್ನು ದೃಢಪಡಿಸಿಕೊಳ್ಳತಕ್ಕದ್ದು, (2) ಬ್ರಹ್ಮವಿತ್ತುಗಳಾದ ಆಚಾರ್ಯರುಗಳಿಂದ ಬ್ರಹ್ಮಜ್ಞಾನವನ್ನು ಹೊಂದತಕ್ಕದ್ದು. (3) ತಿಳಿದುದನ್ನು ಯೋಗ್ಯರಾದವರಿಗೆ ಉಪದೇಶಿಸತಕ್ಕದ್ದು. ಹೀಗೆ ಈ ಮೂರು ವಿಷಯಗಳನ್ನು ತಿಳಿಸಿದುದು ಇವು ಮೂರೇ ಕರ್ತವ್ಯಗಳೆಂದು ಭಾವಿಸಕೂಡದು. ಇವುಗಳು ಇತರ ಉತ್ತರಕೃತ್ಯಗಳಿಗೂ ಉಪಲಕ್ಷಣಗಳು. ಇವು ಮೂರನ್ನೂ ನಡೆಸಲು ಕೆಲವರಿಗೆ ಶಕ್ತಿ ಇರಲಾರದು. ಅಂಥಾವರು ಅರ್ಚಾವತಾರ ಸ್ವಾಮಿಯನ್ನು ಸೇವಿಸುವದು, ದೀಪಾರೋಪಣ ಮುಂತಾದ ಕೈಂಕರ್ಯಗಳನ್ನೆಸಗುವದು, ಭಾಗವತರನ್ನು ಸೇವಿಸುವದು, ಕೈಂಕರ್ಯಗಳನ್ನೆಸಗುವದು ಇವೇ ಮೊದಲಾದವುಗಳನ್ನೆಲ್ಲಾ ನಡೆಸಬಹುದು.

ಶ್ರೀ ಭಾಷ್ಯಕಾರರನ್ನು ಚರಮ ದೆಶೆಯಲ್ಲಿ ಅವರ ಶಿಷ್ಯರಾದ ಪ್ರಪನ್ನರು ತಮ್ಮಗಳ ಕರ್ತವ್ಯಗಳಾವುವೆಂದುಪದೇಶಿಸಬೇಕೆಂದು ಬೇಡಲು, ಅದಕ್ಕಾ ಯತಿವರ್ಯರು ಹೇಳುತ್ತಾರೆ :---ದೃಷ್ಟಫಲವೆಲ್ಲಾ ಪ್ರಾರಬ್ಧಕರ್ಮಾಧೀನವಾಗಿ ಸರ್ವೇಶ್ವರ ಸಙ್ಕಲ್ಪದಂತೆ ನಡೆಯುವದರಿಂದಲೂ ಅದೃಷ್ಟಫಲವು ಆತನಧೀನವೇ ಯಾದುದರಿಂದಲೂ ಇವೆರಡರ ವಿಷಯದಲ್ಲೂ ಪ್ರಪನ್ನನು ಶೋಕಿಸದೆ, ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳನ್ನು ಉಪಾಯ ಬುದ್ಧಿಯಿಂದ ಮಾಡದೆ ಭಗವತ್ಪ್ರೀತ್ಯರ್ಥವಾಗಿ ಮಾಡತಕ್ಕದ್ದು. (4) ಶ್ರೀಭಾಷ್ಯಾದಿ ಗ್ರಂಥಗಳು ಪ್ರಾಚುರ್ಯವನ್ನು ಹೊಂದುವ ಹಾಗೆ ಮಾಡತಕ್ಕದ್ದು. ಹೀಗೆ ಇವುಗಳ ಪ್ರವಚನ ಮೊದಲಾದವುಗಳಲ್ಲಿ ಯೋಗ್ಯತೆ ಸಾಲದಿದ್ದರೆ, (5) ಪರಾಂಕುಶರೇ ಮೊದಲಾದ ಹತ್ತು ಆಳ್ವಾರುಗಳ ದಿವ್ಯಸೂಕ್ತಿಗಳನ್ನು ಅಭ್ಯಾಸಮಾಡಿ ಶಿಷ್ಯರಿಗೆ ಉಪದೇಶಿಸತಕ್ಕದ್ದು. ಇದಕ್ಕೂ ಯೋಗ್ಯತೆ ಇಲ್ಲದಿದ್ದರೆ, ಯಾವುದಾದರೂ ದಿವ್ಯದೇಶಗಳಿಗೆ ಹೋಗಿ ಅಲ್ಲಿ ಸರ್ವೇಶ್ವರನನ್ನೇ ಕೈಂಕರ್ಯಮೂಲಕ ಪೂಜಿಸತಕ್ಕದ್ದು. ಅದೂ ಆಗದ ಪಕ್ಷದಲ್ಲಿ ತಮಗೆ ತುಂಬಾ ಪ್ರಿಯವಾದ ಯಾದವಾದ್ರಿಯಲ್ಲಿ (ಮೇಲುಕೋಟೆ ಅಥವಾ ತಿರುನಾರಾಯಣಪುರ) ಒಂದು ಕುಟೀರವನ್ನು ಕಟ್ಟಿಕೊಂಡು ನಿರಹಂಕಾರರಾಗಿ ನಿವಸತಕ್ಕದ್ದು. ಇದೂ ಇಷ್ಟವಿಲ್ಲದಿದ್ದರೆ ಅರ್ಥಜ್ಞಾನದೊಂದಿಗೆ ದ್ವಯೋಚ್ಚಾ

ರಣೆಯನ್ನು ಮಾಡತಕ್ಕದ್ದು. ಇದಕ್ಕೂ ಮನಸ್ಸಿಲ್ಲದಿದ್ದರೆ ಯಾರಾದರೂ ಮಹಾ ಭಾಗವತೋತ್ತಮನ ನಿಯಮಾನುಗುಣ ವರ್ತಿಸಬಹುದು ಎಂದು ಬುದ್ಧಿವಾದವನ್ನು ಹೇಳಿದರು ಈ ಅಭಿಪ್ರಾಯವು ಮುಂದಿನ ಪ್ರಸಿದ್ಧ ಶ್ಲೋಕದಲ್ಲಿ ಅಡಗಿದೆ :—

ಶ್ರೀ ಭಾಷ್ಯಂ ದ್ರಮಿಡಾಗಮ ಪ್ರವಚನಂ ಶ್ರೀಶಸ್ಥಲೇಷ್ವನ್ವಯಂ ।
ಕೈಙ್ಕರ್ಯಂ ಯದುಶೈಲದೇಶವಸತಿಸ್ಸ್ವಾರ್ಥದ್ವಯೋಚ್ಚಾರಣಂ ।
ಯದ್ವಾಭಾಗವತಾಭಿಮಾನ ವಸತಿ ಶ್ರೇಯಸ್ಸತಾ ಮಿತ್ಥಲಂ ।
ಶಿಷ್ಯಾನ್ಸ್ಪ್ರಾಹ ಯತೀಶ್ವರಃ ಪರಮುಗಾದ್ವಿಷ್ಣೋಃ ಪದಂ ಶಾಶ್ವತಂ ॥

ಇದಲ್ಲದೆ, ಅವೈಷ್ಣವರಾದ ವಿರೋಧಿವರ್ಗವನ್ನು ಕಂಡರೆ ಬೆಂಕಿಯನ್ನೂ ಸರ್ಪವನ್ನೂ ಕಂಡ ತೆರದಿ ತ್ಯಜಿಸತಕ್ಕದ್ದು. ಪ್ರಪನ್ನರಾಗಿ ವೈಷ್ಣವರಾದ ಅನುಕೂಲವರ್ಗವನ್ನು ಕಂಡರೆ ಭೋಗ್ಯವಸ್ತುಗಳ ಪ್ರಾಪ್ತಿಯಲ್ಲಿ ಹೇಗೋ ಹಾಗೆ ಅವರ ಸಂಗವನ್ನು ಮಾಡತಕ್ಕದ್ದು, ಇವೆರಡೂ ಅಲ್ಲದ ಸಂಸಾರಿಗಳನ್ನು ಕಂಡರೆ, ಕಾಷ್ಠಲೋಷ್ಟತೃಣಗಳ ಹಾಗೆ ಅನಾದರದಿಂದ ನೋಡತಕ್ಕದ್ದು; ಎಂಬಿವೇ ಮೊದಲಾದ ಬುದ್ಧಿವಾದಗಳನ್ನುಪದೇಶಿಸಿದರು.

ಆದುದರಿಂದ ಉತ್ತರಕೃತ್ಯಗಳಲ್ಲಿ ಮುಖ್ಯವಾದವು ; ಶ್ರೀ ಭಾಷ್ಯಾದಿ ಗ್ರಂಥಗಳನ್ನೂ ದ್ರಾವಿಡ ಪ್ರಬಂಧಗಳನ್ನೂ ಶ್ರೀಮದ್ರಹಸ್ಯತ್ರಯಸಾರವನ್ನೂ ಆಚಾರ್ಯರಿಂದ ಅಧಿಕರಿಸೋಣವೂ ಶಿಷ್ಯರಿಗೆ ಉಪದೇಶವೂ, ಜ್ಞಾನಿಗಳಾದ ಪ್ರಪನ್ನರೊಂದಿಗೆ ಜಿಜ್ಞಾಸೆಯೂ ಹೀಗೆಕಾಲಕ್ಷೇಪವನ್ನು ಮಾಡಬಹುದೆಂದು ಹೇಳಿರುತ್ತಾರೆ.

ಮುಂದೆ ಈ ಸಙ್ಗ್ರಹ ಶ್ಲೋಕವನ್ನು ಒಂದು ಮಹಾ ವಾಕ್ಯದ ಮೂಲಕ ವಿಸ್ತರವಾಗಿ ಉಪಪಾದನೆ ಮಾಡುತ್ತಾರೆ. ಇಷ್ಟು ದೊಡ್ಡ ವಾಕ್ಯದ ಅವಗಾಹನೆಯು ಸ್ವಲ್ಪ ಕಷ್ಟತರವಾದುದರಿಂದ, ಈ ವಾಕ್ಯವನ್ನು ವಿಭಜನೆ ಮಾಡಿ ಗ್ರಹಿಸತಕ್ಕದ್ದಾಗಿರುತ್ತದೆ. ಮೊದಲು ವಾಕ್ಯದಲ್ಲಿ ಹೇಳುವ ಅಂಶಗಳಿಗೆ ಅನೇಕ ದ್ರಾವಿಡ ಪ್ರಬಂಧಾದಿ ಪ್ರಮಾಣಗಳನ್ನುದಾಹರಿಸಿ ಕೊನೆಗೆ " ಮುನ್ನಡಿಪಾರ್ತ್ತು ನಡಕ್ಕಪುನ್ " ಎಂಬಲ್ಲಿಗೆ ಒಂದು ಅಭಿಪ್ರಾಯವು ಮುಗಿಯುವದರಿಂದ ಅಲ್ಲಿಗೆ ಒಂದು ವಾಕ್ಯವಾಗಿ ಭಾವಿಸಬಹುದು. ಈ ವಾಕ್ಯದಲ್ಲಿ ಉತ್ತರಕೃತ್ಯಸ್ಥಿತಿ ಪ್ರಕಾರವು ಹೇಳಲ್ಪಡುತ್ತದೆ.

ಉತ್ತರಕೃತ್ಯದ ನಿರೂಪಣವು.

ಮೊದಲು ಈ ಉತ್ತರಕೃತ್ಯಾಧಿಕಾರಿ ಎಂತವನೆಂದು ತಿಳಿಸುವದಕ್ಕಾಗಿ, ಹಿಂದಿನ ಅಧಿಕಾರಗಳಲ್ಲಿ ಹೇಳಿದುದನ್ನೇ ಅನುವಾದಮಾಡಿ, ಉತ್ತರ ಕೃತ್ಯವು

Imp

ಉತ್ತರಕೃತ್ಯತ್ತಿನ್ ಪ್ರಕಾರಂ

ಇಪ್ಪಡಿ ಕೃತಕೃತ್ಯನಾಯ್ ಸ್ವನಿಷ್ಠ್ಯೈತ್ತೆಳಿನ್ದು, ಶರೀರಶ್ತ್ತೋಡಿರುನ್ದ ಕಾಲಮ್ ಪಳನ್ತಿರುವಿ(ಡ್ಯೈ)ಳ್ಳೈ ಯಾಟ್ಟತ್ತಿಲೆ ಶಿರುತಿಡತ್ತೈಯುಡೈತ್ತುಕ್ಕೊಣ್ಡಿರು ಪ್ಪಾರ್ಯೆ ಪ್ಪೋಲೆ, ಒರುಪಡಿತುವಕ್ಕ್ಯಾಣ್ ಒರುಪಡಿತುವಕ್ಕ್ಯಣ್ಡಿರುಕ್ಕಿರ ಇನ್ವಧಿಕಾರಿಕ್ಕು, ಮುಕ್ತರುಡೈಯ ಕೈಙ್ಕರ್ಯ ಪರಂಪರೈ

ಎಂಥಾಪ್ತೆಂದು ಸಪ್ರಮಾಣವಾಗಿ ತಿಳಿಸುತ್ತಾರೆ. **ಇಪ್ಪಡಿ** - ಈ ಹಿಂದೆ ಹೇಳಿದ ರೀತಿಯಲ್ಲಿ, **ಕೃತಕೃತ್ಯನಾಯ್ ಸ್ವನಿಷ್ಠ್ಯೈತ್ತೆಳಿನ್ದು** - ಕೃತಕೃತ್ಯನಾಗಿ ಸ್ವನಿಷ್ಠೆಯನ್ನರಿತವನಾಗಿ, ಹಿಂದಿನ ಎರಡು ಅಧಿಕಾರಾರ್ಥಗಳೂ ಅನುವದಿಸಲ್ಪಟ್ಟವು. **ಶರೀರತ್ತೋಡಿರುನ್ದ ಕಾಲಮ್** - ಶರೀರವಿರುವವರೆಗೂ, **ಪಳನ್ತಿರು ವಿಳ್ಳೈಯಾಟ್ಟತ್ತಿಲೆ** - ಪುರಾತನಕಾಲದಿಂದಲೂ ಕ್ರಮವಾಗಿ ಬಂದಿರುವ ದಿವ್ಯವಾದ, **ವಿಳ್ಳೈಯಾಟ್ಟು** ಎಂದರೆ ಧಾನ್ಯ ಬೆಳೆಯುವ ಕ್ಷೇತ್ರ, ಅದರಲ್ಲಿ, **ಶಿರುದಿಡತ್ತೈ** - ಕೊಂಚ ಭಾಗವನ್ನು ಮಾತ್ರ, **ಎಡುತ್ತುಕ್ಕೊಂಡು**-ಎಂದರೆ ಋಣಕ್ಕಾಗಿ ಕ್ಷೇತ್ರವನ್ನು ವಿಕ್ರಯಿಸಿಬಿಟ್ಟು, ಆದರಲ್ಲಿ ವಾಸಕ್ಕಾಗಿಯೂ ದೇವತಾರ್ಚನೆಗಾಗಿಯೂ ಸ್ವಲ್ಪ ಭಾಗವನ್ನು ಇಟ್ಟುಕೊಂಡು ಬೆಳೆಯನ್ನು ಬೆಳೆದು ಎಂಬ **ಭಾವವು** ; **ಇರುಪ್ಪಾರ್ಯೈಪ್ಪೋಲೆ**-ಇರುವ ಲೌಕಿಕ ಜನರ ಹಾಗೆ, **ಒರುಪಡಿತುವಕ್ಕ್ಯಾಣ್** ಒಂದು ವಿಧವಾಗಿ ಸಂಬಂಧವನ್ನು **ತ್ಯಜಿಸಿ**, **ಎಂದರೆ**, ಈ ಶರೀರವು ಕರ್ಮಕೃತವಾದುದರಿಂದ ನನ್ನದು, ನನ್ನ ಭೋಗಾರ್ಥವಾದುದು ಎಂಬ ಮಮತೆಯನ್ನು **ತ್ಯಜಿಸಿ, ಒರುಪಡಿ ತುವಕ್ಕುಂಡಿರುಕ್ಕಿರ** - ಒಂದು ವಿಧವಾಗಿ ಸಂಬಂಧವನ್ನು ವಹಿಸಿರುವ, ಸರ್ವೇಶ್ವರನು ತನ್ನನ್ನು ಕಂಡು ತನ್ನ ಕಥಾಶ್ರವಣವನ್ನು ಮಾಡಿ **ತನ್ನ** ಪಾದದಲ್ಲಿ ಶರಣಾಗತಿ ಮಾಡಿ ಸುಖವಾಗಿ ಬಾಳಲೆಂದು ಕರಣಕಳೇಬರಗಳನ್ನು ದಯಪಾಲಿಸಿರುವದರಿಂದ ತನಗೆ ದೇಹ ಸಂಬಂಧ ಉಂಟೆಂದು ಭಾವಿಸುವ, **ಅಧಿಕಾರಕ್ಕು** – ಈ ಭರನ್ಯಾಸ ಮಾಡಿದ ಪ್ರಪನ್ನನಿಗೆ, ಉತ್ತರ ಕೃತ್ಯವು ಆವಶ್ಯಕವು ಎಂದು ಹೇಳುವದಕ್ಕಾಗಿ, ಆ ಉತ್ತರ ಕೃತ್ಯದ ಪ್ರಯೋಜನಗಳನ್ನು ತಿಳಿಸುತ್ತಾರೆ :—ಮುಂದೆ ಬರುವ ಗುಣವಾಚಕಗಳೆಲ್ಲಾ ಉತ್ತರ ಕೃತ್ಯಪ್ರಮಾಣಗಳನ್ನೆಲ್ಲಾ ಉದಾಹರಿಸಿದ ನಂತರ ಬರುವ “ **ಉತ್ತರಕೃತ್ಯ** ” ವೆಂಬುವದಕ್ಕೆ ವಿಶೇಷಣಗಳು ; **ಮುಕ್ತರುಡೈಯ ಕೈಙ್ಕರ್ಯಪರಂಪರೈಪ್ಪೋಲೆ** . ಮುಕ್ತರಿಗೆ ಪರಮಪದದಲ್ಲಿ ಲಭಿಸುವ ಕೈಙ್ಕರ್ಯಪರಂಪರೆಗಳ ಹಾಗೆ, **ಸ್ವಾದುತಮಮಾಕೆಯಾಲೆ** ತುಂಬಾ ಪ್ರಿಯವಾದುವಾದುದರಿಂದ, **ಸ್ವಯಂಪ್ರಯೋಜನಮಾಯ್**

ಪೋಲೆ ಸ್ವಾದು ತನು ಮಾಕ್ಕೈಯಾಲೇ ಸ್ವಯಂ ಪ್ರಯೋಜನಮಾಯ್,

ಆಜ್ಞಾಪಾಲನವೇ ಒಂದು ಸ್ವಕೀಯ ಪ್ರಯೋಜನವಾಗಿರುವ, ಉತ್ತರಕೃತ್ಯವು ಎಂದು ಹೇಳಲ್ಪಟ್ಟಿರುತ್ತದೆ. ಈ ಶರೀರವು ನನ್ನದು, ನನಗೆ ಸುಖಾನುಭವ ಕ್ಕಾಗಿ ಉಂಟಾದುದೆಂದು ಭಾವಿಸಿ ಅದರಲ್ಲಿ ಮಮತೆಯನ್ನು ಇಡಕೂಡದು. ಈ ಶರೀರವು, "ಕಾಯನೌಃ" ಎಂದು ಹೇಳಿರುವ ಹಾಗೆ ಸಂಸಾರ ಸಮುದ್ರ ವನ್ನು ದಾಟುವವಕ್ಕೆ ಸರ್ವೇಶ್ವರನು ದಯಪಾಲಿಸಿದ ಹಡಗಾಗಿ ಭಾವಿಸತಕ್ಕದ್ದು. ಶ್ರುತಿಯಲ್ಲಿ ಈ ಶರೀರವು ಒಂದು ರಥಕ್ಕೆ ಹೋಲಿಸಲ್ಪಟ್ಟಿರುತ್ತದೆ. ಅದಕ್ಕೆ ಕಟ್ಟಿ ರುವ ಅಶ್ವಗಳೇ ಇಂದ್ರಿಯಗಳು, ಅವುಗಳ ಲಗಾಮೇ ಮನಸ್ಸು, ಬುದ್ಧಿಯೇ ಸಾರಥಿಯು, ಈ ಆತ್ಮನೇ ರಥದಲ್ಲಿ ಕೂತಿರುವ ಯಜಮಾನನು. ಈ ಸಾರಥಿಯು ಲಗಾಮನ್ನು ಚನ್ನಾಗಿ ಹಿಡಿದು ಕುದುರೆಗಳು ಕೆಟ್ಟ ಮಾರ್ಗದಲ್ಲಿ ಹೋಗದೆ ಸನ್ಮಾ ರ್ಗದಲ್ಲಿ ಹೋಗುವ ಹಾಗೆ ಮಾಡತಕ್ಕದ್ದೆಂದು ಶ್ರುತಿಯು ಹೇಳುತ್ತ ದೆಯಾದುದರಿಂದ, ಹೀಗೆ ದೇಹೇಂದ್ರಿಯಗಳು ಸತ್ಪಥದಲ್ಲಿ ಹೋಗುವ ಹಾಗೆಮಾಡಿ, "ಬದ್ಧೇನಾಂಜಲಿನಾ" ಎಂಬ ಶ್ಲೋಕದಲ್ಲಿಯೂ (೧) "ಜಿಹ್ವೇ ಕೀರ್ತಯ" ಎಂಬ ಶ್ಲೋಕದಲ್ಲೂ ಹೇಳಿರುವ ಹಾಗೆ, ಸ್ವಾಮಿ ದಯ ಪಾಲಿಸಿದ ದೇಹದಲ್ಲಿ ಇಷ್ಟು ಮಾತ್ರ ಸಂಬಂಧವನ್ನು ಇಟ್ಟುಕೊಳ್ಳತಕ್ಕದ್ದೆಂಬ ಅಭಿಪ್ರಾಯವು ಅದೂ ಅಲ್ಲದೆ ಈತನಿಗೆ ಜನ್ಮಾನುಸಾರ ಪ್ರಾಪ್ತವಾದ ದೇಹದಿಂದ ನಿತ್ಯನೈಮಿತ್ತಿಕ ಕರ್ಮಗಳೂ ವರ್ಣಾಶ್ರಮ ಧರ್ಮಗಳೂ ಶಾಸ್ತ್ರ ರೀತ್ಯಾ ನಡೆಯಬೇಕಾಗಿರುವದರಿಂದ ಅದಕ್ಕಾಗಿಯೂ ಈ ದೇಹಪ್ರಾಪ್ತಿ ಎಂದೂ ಭಾವನೆ ಇರತಕ್ಕದ್ದು. ಈ ಅಧಿಕಾರಿಯಲ್ಲದ ಇತರರಿಗಾದರೋ ಹಿಂದೆ ವಿವರಿ ಸಿದ ರೀತಿಯಲ್ಲಿ "ಜಾಯಮಾನೋವೈ ಬ್ರಾಹ್ಮಣಸ್ತ್ರಿಭಿಃ ಋಣವಾ ಜಾ ಯತೇ" ಎಂಬಲ್ಲಿ ಹೇಳಿರುವಹಾಗೆ ಮೂರು ಋಣಗಳಿಂದ ಮುಕ್ತನಾಗುವದಕ್ಕಾಗಿ ಈ ದೇಹವು ಪ್ರಯೋಜನಕಾರಿಯಾಗಬಹುದು. ಈ ಅಧಿಕಾರಿಗಾದರೋ "ನಾಯಮೃಣೀಚ ರಾಜನ್" ಎಂದು ಹೇಳಿರುವ ಹಾಗೆ ಈ ಋಣಗಳು ಯಾವುವೂ ಇಲ್ಲದಿದ್ದರೂ ಭಗವತ್ಪ್ರೀಣನಾರ್ಥವಾಗಿ ಈ ವಿಧ್ಯುಕ್ತ ಕ್ರಿಯೆಗಳನ್ನ ನುಷ್ಠಿಸುವದಕ್ಕಾಗಿಯೂ ಈ ದೇಹವೆಂದುಭಾವಿಸತಕ್ಕದ್ದೆಂಬ ತಾತ್ಪರ್ಯವು.

(೧) ಮುಕುಂದಮಾಲಾ.

ಶಾಸ್ತ್ರವಿಭಕ್ತಕಾಲ ವಿಶೇಷ ನಿಯುತನಾಯ್,

ಮುಂದೆ ವಿವರಿಸುವ ಉತ್ತರಕೃತ್ಯದ ಪ್ರಯೋಜನವೇನೆಂದರೆ, ಮುಕ್ತರಿಗೆ ಸರ್ವೇಶ್ವರನ ಕೈಙ್ಕರ್ಯಪರಂಪರೆಗಳು ಪರಮಪದದಲ್ಲಿ ಹೇಗೆ ಭೋಗ್ಯಭೂತವಾದವುಗಳೋ, ಹಾಗೆಯೇ ಈ ಅಧಿಕಾರಿಯು ಮಾಡುವ ಉತ್ತರಕೃತ್ಯವೂ ಕೂಡ ಭಗವತ್ಪ್ರೀತಿಯನ್ನುಂಟುಮಾಡುವ ಪ್ರಯುಕ್ತಪ್ರಯೋಜನಕರವಾದುದೆಂದು ಹೇಳುತ್ತಾರೆ. ಇನ್ನೂ ಉತ್ತರಕೃತ್ಯವೆಂಥಾದ್ದೆಂದರೆ:—**ಶಾಸ್ತ್ರವಿಭಕ್ತಕಾಲವಿಶೇಷ ನಿಯುತನಾಯ್** ಎಂದು ಹೇಳುತ್ತಾರೆ; ಮುಕ್ತರಾದರೋ ಸದಾ ಕೈಙ್ಕರ್ಯದಲ್ಲಿ ಸಕ್ತರಾಗಿರಬಹುದು. ಹಾಗೆ ಈ ಅಧಿಕಾರಿಯೂ ಸದಾ ಉತ್ತರಕೃತ್ಯವೆಂದು ಹೇಳಿಸಿಕೊಳ್ಳುವ ಅಧ್ಯಾತ್ಮವಿದ್ಯೆಯ ಪಾಠ ಪ್ರವಚನಾದಿಗಳಲ್ಲೇ ನಿರತನಾಗಿರಬಹುದೋ ಎಂದರೆ ಹಾಗಲ್ಲವು. ನಿತ್ಯನೈಮಿತ್ತಿಕ ಕರ್ಮಗಳಿಗೆ ಶಾಸ್ತ್ರದಲ್ಲಿ ಯಾವ ಕಾಲಗಳು ನಿಯತವಾಗಿವೆಯೋ ಆ ಕಾಲಗಳನ್ನು ಬಿಟ್ಟು, ಆ ನಿತ್ಯನೈಮಿತ್ತಿಕಾನುಷ್ಠಾನಗಳಿಗೆ ವಿರೋಧವಿಲ್ಲದ ಹಾಗೆ ಈ ಉತ್ತರಕೃತ್ಯವನ್ನು ನಡಿಸತಕ್ಕದ್ದೆಂದು ಹೇಳುತ್ತಾರೆ. **ಶಾಸ್ತ್ರವಿಭಕ್ತ** - ಶಾಸ್ತ್ರಗಳಲ್ಲಿ ವಿಭಾಗಿಸಿ ಹೇಳಿರುವ, **ಕಾಲವಿಶೇಷ** - ನಿತ್ಯ ನೈಮಿತ್ತಿಕ ಕರ್ಮಗಳಿಗೆ ವಿಧಿಸಿರುವ ಕಾಲವಲ್ಲದೇ ಬೇರೇ ಕಾಲವಿಶೇಷದಿಂದ, **ನಿಯುತನಾಯ್** - ನೇಮಿಸಲ್ಪಟ್ಟದಾಗಿರತಕ್ಕದ್ದು. ಪ್ರಥಮಯಾಮದಲ್ಲಿ ಸಾಂಗಾಭಿಗಮನವೂ, ದ್ವಿತೀಯದಲ್ಲಿ ಉಪಾದಾನವೂ, ತೃತೀಯದಲ್ಲಿ ಇಜ್ಯೆಯೂ, ನಾಲ್ಕನೆಯದರಲ್ಲಿ ಸ್ವಾಧ್ಯಾಯವೂ ಅನಂತರ ಯೋಗವಿಕ್ಕವುಗಳೂ ನಡೆಸತಕ್ಕದ್ದೆಂದು ವಿಧಿಸಿರುತ್ತದೆ. ಪ್ರಥಮಯಾಮದ ಅಭಿಗಮನದಲ್ಲಿ, ಮಲಮೂತ್ರೋತ್ಸರ್ಜನ, ದಂತಧಾವನ, ಸ್ನಾನ ಊರ್ಧ್ವಪುಂಡ್ರಧಾರಣ, ಸ್ನಾನಾಙ್ಗ ದೇವರ್ಷಿ ಪಿತೃತರ್ಪಣ, ಪ್ರಾತಸ್ಸಂಧ್ಯಾವನ್ದನ, ಮೂಲಮಂತ್ರದ್ವಯ ಚರಮಶ್ಲೋಕಜಪ, ಆಧಾರ ಶಕ್ತ್ಯಾದಿತರ್ಪಣ, ದೇವರ್ಷಿಕಾಂಡರ್ಷಿ ಪಿತೃತರ್ಪಣ, ಬ್ರಹ್ಮಯಜ್ಞ ಗೃಹಾಗಮನಾದಿ ನಿತ್ಯಕರ್ಮಗಳನ್ನು ಅನುಷ್ಠಿಸತಕ್ಕದ್ದು. ಎರಡನೆಯ ಯಾಮದಲ್ಲಿ ಉಪಾದಾನವೆಂದರೆ ಭಗವದಾರಾಧನೆಗೆ ಉಪಯುಕ್ತ ತುಲಸೀ ಪುಷ್ಪಾದಿ ಸಾಮಗ್ರಿಗಳನ್ನು ಒದಗಿಸಿಕೊಳ್ಳತಕ್ಕದ್ದು. ಮೂರನೆಯ ಇಜ್ಯಾಕಾಲದಲ್ಲಿ, ಮಾಧ್ಯಾಹ್ನಿಕಸ್ನಾನ, ಮಾಧ್ಯಾಹ್ನಿಕ ಭಗವದಾರಾಧನ, ವೈಶ್ವದೇವ, ಭೋಜನ ನಡಿಸತಕ್ಕದ್ದು. ನಾಲ್ಕನೆಯ ಸ್ವಾಧ್ಯಾಯಕಾಲದಲ್ಲಿ ವೇದಾಧ್ಯಯನ, ಉಪನಿಷದ್ಭ್ಯಾಸಂಗ, ಶ್ರೀಭಾಷ್ಯ ಶ್ರೀಮದ್ಗೀತಾಭಾಷ್ಯ, ಶ್ರೀಮದ್ರಹಸ್ಯತ್ರಯಸಾರ, ಆಳ್ವಾರಾಚಾರ್ಯ ದಿವ್ಯಸೂಕ್ತಿಗಳು,

ಉತ್ತರಕೈಙ್ಕರ್ಯತ್ತುಕ್ಕು　ಅವಸರಲಾಭಾರ್ಥವಾಗ ಪೂರ್ವಕೈಙ್ಕ

ಶ್ರೀಮದ್ರಾಮಾಯಣ, ಶ್ರೀಮದ್ಭಾಗವತ, ಶ್ರೀಮನ್ಮಹಾಭಾರತ, ಶ್ರೀ ವಿಷ್ಣು ಪುರಾಣಾದಿ ಗ್ರಂಥಗಳ ಪಾಠಪ್ರವಚನಗಳನ್ನು ನಡಿಸತಕ್ಕದ್ದು. ಸಾಧಾರಣವಾಗಿ ಉಪಾದಾನ ಇಜ್ಯಾಕಾಲಗಳ ಮಧ್ಯೆ ಅವಕಾಶವಿರುವದರಿಂದ ಶ್ರೀ ಭಾಷ್ಯಾದಿ ಗ್ರಂಥಗಳನ್ನು ಆಚಾರ್ಯಮುಖೇನ ಅಧಿಕರಿಸುವವರು ಆಗ ಉಪದೇಶವನ್ನು ಹೊಂದತಕ್ಕದ್ದು. ನಾಲ್ಕನೆಯ ಸ್ವಾಧ್ಯಾಯಕಾಲದಲ್ಲಿ ಇತರ ಗ್ರಂಥಗಳ ಉಪದೇಶವನ್ನು ಹೊಂದಬಹುದು. ಅಥವಾ ತಾನೇ ಪಾಠಪ್ರವಚನಗಳನ್ನು ಹೇಳಬಹುದು. ಹೀಗೆ ಉತ್ತರಕೃತ್ಯಕ್ಕೆ ಕಾಲವು ಶಾಸ್ತ್ರದಲ್ಲಿ ನಿಯತವೆಂದು ಹೇಳಿರುತ್ತಾರೆ. ಐದನೇ ಯೋಗಕಾಲದಲ್ಲಿ ಗತಿಚಿನ್ತನಾದಿಗಳನ್ನು ನಡಿಸತಕ್ಕದ್ದು. ಆದುದರಿಂದ ನಿತ್ಯನೈಮಿತ್ತಿಕ ಕರ್ಮಗಳಿಗೆ ಅವಿರೋಧೇನ ಈ ಉತ್ತರಕೃತ್ಯವನ್ನು ನಡಿಸಬೇಕೆಂದು ಹೇಳಲ್ಪಟ್ಟಿತು. ಈ ಪಂಚಕಾಲದಲ್ಲಿಯೂ ನಡಿಸತಕ್ಕ ಪ್ರಕ್ರಿಯೆಗಳನ್ನೆಲ್ಲಾ ಶ್ರೀ ಜನರ್ದನೈಯ್ಯಂಗಾರ್ ಸ್ವಾಮಿಗಳವರು ಅವರು ಬರೆದಿರುವ ಆಚಾರಕಾಂಡವೆಂಬ ಗ್ರಂಥದಲ್ಲಿ ಎಲ್ಲರಿಗೂ ತಿಳಿಯುವ ಹಾಗೆ ಬರೆದಿರುತ್ತಾರೆ. ಅವಲೋಕಿಸಬಹುದು. ಶ್ರೀ ಪರಾಶರರು ಶ್ರೀ ವಿಷ್ಣುಪುರಾಣ ಪ್ರಥಮಶ್ಲೋಕದಲ್ಲಿ ಈ ಉತ್ತರಕೃತ್ಯಕ್ಕೆ ಕಾಲವು "ಕೃತಪೌರ್ವಾಹ್ಣಿಕ ಕ್ರಿಯಂ" ಎಂದು ಹೇಳಿರುವುದರಿಂದ, ಪೂರ್ವಾಹ್ಣದಲ್ಲಿ ಮಾಡತಕ್ಕ ನಿತ್ಯಕರ್ಮಾನುಷ್ಠಾನಾನಂತರ ಎಂದರೆ ಇಜ್ಯಾಕಾಲಕ್ಕೆ ಪೂರ್ವಭಾವಿಯಾದ ಕಾಲವು. ಬ್ರಹ್ಮವಿದ್ಯೆಗೆ ಇದೀಗ ಸರಿಯಾದ ಕಾಲವು ; ಏವಂಚ ನಿತ್ಯನೈಮಿತ್ತಿಕಗಳಿಗೆ ಶಾಸ್ತ್ರದಲ್ಲಿ ವಿಧಿಸಿದ ಕಾಲವಲ್ಲದೆ ಬೇರೇ ಕಾಲದಲ್ಲಿ ಅವುಗಳಿಗೆ ಪ್ರತಿ ಬಂಧಕವಿಲ್ಲದೆ ಈ ಉತ್ತರಕೃತ್ಯವು ನಡಿಸಲ್ಪಡತಕ್ಕದ್ದೆಂದು ಹೇಳಿದಂತಾಯಿತು

ಮುಕ್ತರುಡೈಯ ಕೈಂಕರ್ಯಪರಂಪರೈಪ್ಪೋಲೆ ಎಂದು ಹೇಳಿರುವದರಿಂದ ಕೈಙ್ಕರ್ಯವು ಪರಮಪದದಲ್ಲಿ ಅವಿಚ್ಛಿನ್ನವಾಗಿರುತ್ತದೆ. ಹಾಗೆಯೇ ಪ್ರಪನ್ನರಿಗೂ ಕೂಡ ಇಂತಹ ಉತ್ತರ ಕೈಙ್ಕರ್ಯವೂ ಸಹ ಅವಿಚ್ಛಿನ್ನವಾಗಿಯೇ ಇರುತ್ತದೆಂದು ಮುಂದೆ ತಿಳಿಸುತ್ತಾರೆ. ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳೂ ಪಾಠಪ್ರವಚನಾದಿಗಳೂ ಎಲ್ಲವೂ ಉತ್ತರಕೃತ್ಯದಲ್ಲಿಯೇ ಸೇರಿದವುಗಳಾಗಿ ಪರಸ್ಪರ ಸಂಬಂಧಿಸಿಕೊಂಡಿರುವುದರಿಂದ ಅವಿಚ್ಛಿನ್ನವಾಗಿ ನಡಿಸತಕ್ಕದ್ದು ಈ ಉತ್ತರಕೃತ್ಯವು ಎಂದು ಹೇಳುತ್ತಾರೆ:—

ರ್ಯಮ್ ತಲ್ಯೆಕಟ್ಟವೇಣ್ಡುಂಪಡಿ ಶಙ್ಗಲಿತ್ತುವಕ್ಕಾಯ್, ಸ್ವಾಮಿ ಸಂಪ್ರೀತಿಕ್ಕುಕ್ಕಾರಣಮುಮಾಯ್, ಕಾರ್ಯಮುಮಾಯ್.

ಉತ್ತರಕೈಂಕರ್ಯತ್ತುಕ್ಕು-ಮುಂದೆ ಪ್ರಾಪ್ತವಾಗುವ ಕೈಙ್ಕರ್ಯಕ್ಕೆ, ಅವಸರಲಾಭಾರ್ಥವಾಗ - ಸಮಯ ದೊರೆಯುವದಕ್ಕಾಗಿ, ಪೂರ್ವಕೈಂಕರ್ಯಮ್-ಅದರ ಪೂರ್ವಕಾಲದ ಕೈಙ್ಕರ್ಯವು, ತಲ್ಯೆಕಟ್ಟವೇಣ್ಡುಮ್ ಪಡಿ-ಮುಗಿಸುವ ಅಪೇಕ್ಷೆಯುಳ್ಳೋಣ ಹೇಗೋ ಹಾಗೆ, ಹೀಗೆ ಪಂಚಕಾಲಿಕ ಕೈಙ್ಕರ್ಯವೂ ಅವಿಚ್ಛಿನ್ನವಾಗಿ, ಶಙ್ಗಲಿತುವಕ್ಕಾಯ್ - ಸರಪಣಿಕೊಂಡಿಗಳು ಒಂದಕ್ಕೊಂದ ಸಂಬಂಧಿಸಿಕೊಂಡಿರುವ ಉತ್ತರಕೃತ್ಯವು ಎಂದು ಮುಂದಕ್ಕೆ ಅನ್ವಯವು. ಇದರಿಂದ ಇಂತಹ ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನನು ಯಾವಾಗಲೂ ಕೈಙ್ಕರ್ಯನಿಷ್ಠನಾಗಿಯೇ ಇರತಕ್ಕದ್ದೆಂದೂ ಈ ಕೈಙ್ಕರ್ಯಗಳು ಒಂದಕ್ಕೊಂದು ಸಂಬಂಧಿಸಿಕೊಂಡೇ ಇರಬೇಕೆಂದೂ ಹೇಳಲ್ಪಟ್ಟಿತು. ಬ್ರಾಹ್ಮ ಮುಹೂರ್ತ ಮೊದಲುಗೊಂಡು ನಿತ್ಯಕರ್ಮಾನುಷ್ಠಾನರೂಪಕೈಙ್ಕರ್ಯಗಳೂ ಅಲ್ಲಿಂದ ಆಚಾರ್ಯರಿಂದುಪದೇಶವೂ ಅನಂತರ ಇಜ್ಯಾ ಕೈಂಕರ್ಯಗಳೂ ಅನಂತರ ಗ್ರಂಥಾವಲೋಕನ, ಶಿಷ್ಯೋಪದೇಶ ಪುನಃಸಾಯಂ ಸನ್ಧ್ಯಾವಂದನ ಹೀಗೆ ಕೈಂಕರ್ಯಗಳು ಒಂದಕ್ಕೊಂದು ಸಂಬಂಧಿಸಿರುವಂಥಾ ಉತ್ತರಕೃತ್ಯವೆಂದು ಹೇಳಿರುತ್ತಾರೆ. ಈ ವಿಷಯದಲ್ಲಿ ಇಲ್ಲಿ ನಡಿಸುವ ಉತ್ತರಕೃತ್ಯವೂ ಮುಕ್ತರ ಕೈಙ್ಕರ್ಯಕ್ಕೆ ಸಮಾನವಾದುದು ಎಂಬಭಿಪ್ರಾಯವೂ ತೋರಿಬರುತ್ತದೆ.

ಆದರೆ ಹೀಗೆ ಸದಾ ಅವಿಚ್ಛಿನ್ನವಾಗಿ ಕೈಙ್ಕರ್ಯಗಳನ್ನೆಸಗುವದು ಕ್ಲೇಶಕರವಾದುದಲ್ಲವೋ ಎಂದರೆ, ಹಾಗೆ ಕ್ಲೇಶಕರವಲ್ಲವೆಂದೂ, ಸರ್ವೇಶ್ವರನ ಸಂಪ್ರೀತಿಗೆ ಕಾರಣವೂ ಕಾರ್ಯವೂ ಆಗುತ್ತದೆಂದು ತಿಳಿಸುತ್ತಾರೆ; ದಾಸಭೂತನಾಗಿ ಶೇಷತ್ವಮಹಿಮೆಯನ್ನರಿತ ಈ ಮಹಾಭಾಗವತನಿಗೆ ಸರ್ವೇಶ್ವರನ ಪ್ರೀತಿಯನ್ನುಂಟುಮಾಡುವಂಥಾದ್ದು ಎಂದಿಗೂ ಕ್ಲೇಶಕರವಾಗಲಾರದೆಂಬಭಿಪ್ರಾಯವು :—

ಸ್ವಾಮಿಸಂಪ್ರೀತಿಕ್ಕುಕ್ಕಾರಣಮಾಯ್ - ಸರ್ವೇಶ್ವರನಿಗೆ ಪ್ರೀತಿಯನ್ನುಂಟುಮಾಡುವದಾಗಿಯೂ, ಕಾರ್ಯಮುಮಾಯ್ - ಸ್ವಾಮಿ ಸಂಪ್ರೀತಿಕಾರ್ಯಮುಮಾಯ್, ಸ್ವಾಮಿಪ್ರೀತಿಯಿಂದುಂಟಾದ ಕೈಙ್ಕರ್ಯರೂಪವಾಗಿರುವ ಉತ್ತರಕೃತ್ಯವುಎಂಬ ಭಾವವು. ಈ ಉತ್ತರಕೃತ್ಯವು ಭಗವತ್ಪ್ರೀತಿಗೆ ಕಾರಣವೂ ಕಾರ್ಯವೂ ಎರಡೂ ಹೇಗೆಂದರೆ—ಈಗ ಮಾಡಿದ ಉತ್ತರಕೃತ್ಯದಿಂದ ಭಗವತ್ಪ್ರೀತಿಯುಂಟಾಗುವದರಿಂದ ಕಾರಣವು. ಆ ಪ್ರೀತಿಯಿಂದ ಮುಂದಿನ ನಿರಪರಾಧವಾದ ಅಂತಹ ಉತ್ತರಕೃತ್ಯಗಳು ಲಭಿಸುವದರಿಂದ ಕಾರ್ಯವು ಎಂಬಭಿಪ್ರಾಯವು. ಆದರೆ

(೧) "ನಾಶಿತ್ತುಂ ಕೇಟ್ಟುಂ ವಣಜ್ಙಿ ವಳಿಪಟ್ಟುಂ ಪೂಶಿತ್ತುಂ ಪೋಕ್ಕಿನೇರ್‌ಪೋದು" ಎನ್ರುಮ್ (೨) ಶೀರ್‌ಕಲನ್ಶೊಲ್ ನಿನೈನ್ದು ಪೋಕ್ಕಾರೇಲ್ ಶೂಳ್‌ವಿನೈಯಿನಾಳ್‌ತುಯರ್ಯೆನ್ನಿನೈನ್ದು ಪೋಕ್ಕುವ ರಿಪ್ಪೋದು" ಎನ್ರುಮ್,

ಉತ್ತರಕೃತ್ಯದಿಂದ ಭಗವತ್ಪ್ರೀತಿಯೂ, ಭಗವತ್ಪ್ರೀತಿಯಿಂದ ಉತ್ತರಕೃತ್ಯವೂ ಉಂಟಾಗುತ್ತದೆಂದರೆ ಅನ್ಯೋನ್ಯಾಶ್ರಯದೋಷ ಬರಲಿಲ್ಲವೇ ಎಂದರೆ ಭಗವತ್ಪ್ರೀತಿಗೆ ಕಾರಣವಾದ ಉತ್ತರಕೃತ್ಯವೂ, ಭಗವತ್ಪ್ರೀತಿಯಿಂದುಂಟಾಗುವ ಉತ್ತರಕೃತ್ಯವೂ ಬೇರೆಬೇರೆಯಾದುದರಿಂದ ಆ ದೋಷವಿಲ್ಲವು. ಇವೆಲ್ಲಾ ಮುಂದೆ ಬರುವ ಉತ್ತರಕೃತ್ಯಮಿರುಕ್ಕುಮ್‌ಪಡಿ ಎಂಬಲ್ಲಿರುವ ಉತ್ತರಕೃತ್ಯಕ್ಕೆ ವಿಶೇಷಣಗಳು ; ಇಂತಹ ಉತ್ತರಕೃತ್ಯದ ಸ್ಥಿತಿಯ ಪ್ರಕಾರವು ಹೇಗೆ ಎಂದರೆ ಮುಂದೆ ತಿಳಿಸುತ್ತಾರೆ. ಹಾಗೆ ತಿಳಿಸುವದಕ್ಕೆ ಮುಂಚೆ, ಇದುವರೆಗೂ ಉತ್ತರಕೃತ್ಯವನ್ನು ವಿಶೇಷಿಸಿ ಹೇಳಿದಭಿಪ್ರಾಯಗಳನ್ನು ಸ್ಥಿರಪಡಿಸಲು ಅನೇಕ ಪ್ರಮಾಣಗಳನ್ನು ಉದಾಹರಿಸುತ್ತಾರೆ.

೧. ನಾನ್ಮುಗನ್ತಿರುವಂದಾದಿ ೬೩.

ತರುತ್ತಿರುನ್ದೇನಾಕವೇ ತಾರಾಗಣಪ್ಪೋರ್
ವಿರಿತ್ತುರೈತ್ತವೆನ್ನಾಕತ್ತು ನ್ನೈ-ತ್ತೆರಿತ್ತೆಳುದಿ
ನಾಶಿತ್ತುಙ್ಕೇಟ್ಟುಮ್ ವಣಙ್ಗಿವಳಿಪಟ್ಟುಮ್
ಪೂಶಿತ್ತುಂ ಪೋಕ್ಕಿನೇರ್ ಪೋದು ॥

ಎಂಬುವದು ಪೂರಾ ಪಾಶುರವು. ತಾರಾಗಣಪ್ಪೋರ್ - ನಕ್ಷತ್ರಮಂಡಲದ ಸಂಚಾರವನ್ನು, ವಿರಿತ್ತುರೈತ್ತ – ವಿಸ್ತಾರವಾಗಿ ಹೇಳಿದ, ವೆನ್‌ನಾಕತ್ತು-ಆದಿಶೇಷನಿಗೆ ಅಂತರಾತ್ಮವಾಗಿರುವ, ತೆರಿತ್ತು – ಅನುಸಂಧಾನಮಾಡಿ, ಎಳುದಿ - ಬರೆದು, ನಾಶಿತ್ತು - ಓದಿ, ಯಾವುದನ್ನು ಬರೆದು ಓದಿ ಎಂದರೆ ಶ್ರೀಭಾಷ್ಯಾದಿಗ್ರಂಥಗಳನ್ನು, ಅಥವಾ ಹೊಸ ಅಧ್ಯಾತ್ಮ ಗ್ರಂಥಗಳನ್ನು ರಚಿಸಿ, ಇತರರಿಗೆ ಓದಿ ಹೇಳಿ ಎಂಬ ಭಾವವಾದರೂ ಆಗಬಹುದು. ಕೇಟ್ಟುಮ್ - ಗುರುಗಳಿಂದ ಉಪದೇಶರೀತಿಯಲ್ಲಿ ಶ್ರವಣಮಾಡಿ, ವಣಙ್ಗಿ - ನಮಸ್ಕಾರಗಳನ್ನು ಮಾಡಿ, ವಳಿಪಟ್ಟುಮ್ - ಅದೇ ಯಾತ್ರೆಯಾಗಿ, ಪೂಶಿತ್ತುಂ - ಆರಾಧನೆಯನ್ನು ಮಾಡಿ, ಈ ರೀತಿಯಲ್ಲಿ ಪೋಕ್ಕಿನೇರ್‌ಪೋದು - ಹೊತ್ತನ್ನು ಕಳೆದೆನು" ಎಂಬುವದು ಈ ಪಾಶುರಾರ್ಥವು. ಇದರಿಂದ ಉತ್ತರಕೃತ್ಯವು ಹೇಳಲ್ಪಟ್ಟಿತು.

೨. ಪೆರಿಯ ತಿರುವಂದಾದಿ ೮೩.

ಶೀರ್ - ಗುಣಗಳಿಂದ, ಕಲನ್ಶೊಲ್ - ಸೇರಿದ ಎಂದರೆ ಪ್ರತಿಪಾದಕ

(೩) "ಒಳಿವಿಲ್ ಕಾಲಮೆಲ್ಲಾಮುಡನಾಯ್ ಮನ್ನಿವಳುವಿಲಾ

ವಾದ ದಿವ್ಯಸೂಕ್ತಿಗಳನ್ನು, ನಿನ್ನೈನ್ದು - ಅನುಸಂಧಾನಮಾಡಿ, **ಶೂಳ್** ವಿ **ನ್ನೈಯಿರ್** - ಆತ್ಮಾವನ್ನು ವ್ಯಾಪಿಸಿರುವ ಪಾಪಗಳ ಕಾರ್ಯವಾದ, **ಆಳ್ತು ಯರ್** - ಅಗಾಧವಾದ ದುಃಖವನ್ನು, **ಇವ್ವೋದು** - ಈ ಜನ್ಮದ ಸಂಸಾರ ದೆಶೆಯಲ್ಲೇ, **ಪೋಕ್ಕಾರೇಲ್** - ಹೋಗಲಾಡಿಸಿಕೊಳ್ಳದೇ ಹೋದರೆ. ಈ ದುಃಖಾಭಿಯನ್ನು ದಾಟದಿದ್ದರೆ **ಎನ್ನಿನ್ನೈತ್ತು** - ಇನ್ನು ಯಾವುದನ್ನು ಅನು ಸಂಧಾನ ಮಾಡಿ, **ಪೋಕ್ಕುವರ್** ಹೋಗಲಾಡಿಸಿಕೊಳ್ಳುವರು. ಈ ಸುಸಮಯ ದಲ್ಲಿ ನಾವು ಪಾಪಗಳನ್ನು ಹೋಗಲಾಡಿಸಿಕೊಳ್ಳಲು, ಆತನ ದಿವ್ಯಕಲ್ಯಾಣಗಳನ್ನು ಅನುಸಂಧಾನಮಾಡಿ, ದಿವ್ಯಸೂಕ್ತಿಗಳನ್ನು ಪಠಿಸಿ ರಸನೇಂದ್ರಿಯಕ್ಕೆ ಸಾರ್ಥಕ ವನ್ನುಂಟುಮಾಡಿಕೊಳ್ಳದಿದ್ದರೆ, ಪಾಪಗಳನ್ನು ಇನ್ನು ಹೇಗೆ ಕಳೆದುಕೊಳ್ಳಲ್ಕೆ ಸಾಧ್ಯವು ಎಂಬ ಭಾವವು. ಇಲ್ಲಿ ವಾಚಿಕ ಕೈಙ್ಕರ್ಯವು ಹೇಳಲ್ಪಟ್ಟಿತು. ಮಾನಸಿಕ ವಾಚಿಕಕಾಯಕ ಕೈಙ್ಕರ್ಯಗಳಲ್ಲಿ ಮಾನಸಿಕವು ಧ್ಯಾನರೂಪವಾಗಿ ಕಷ್ಟತರವಾ ದುದು, ಕಾಯಕವು ದೇಹಶಕ್ತಿ ಸಹಕಾರಿಗಳ ಅಪೇಕ್ಷೆಯಿಂದ ಕಷ್ಟವಾದುದು, ವಾಚಿಕವು ಸುಲಭವು, ಇದನ್ನೇ ಮಾಡದಿದ್ದರೆ ಇನ್ನು ಯಾವ ಕೈಙ್ಕರ್ಯವನ್ನು ಅನುಷ್ಠಿಸುವಿರಿ ಎಂಬ ತಾತ್ಪರ್ಯವು.

೩. ತಿರುವಾಯ್ಮೊಳಿ, ೩-೩-೧ **ಒಳಿವಿಲ್ಕಾಲಮೆಲ್ಲಾಂ**-ವಿಚ್ಛೇದ ವಿಲ್ಲದೆ ಎಲ್ಲಾ ಕಾಲದಲ್ಲಿಯೂ, **ಉಡನಾಯ್**-ಅನುವರ್ತಿಸಿ ಸರ್ವದೇಶದಲ್ಲೂ ಒಟ್ಟಿಗೆ ಇರುವ, **ಮನ್ನಿ** – ಸರ್ವಾವಸ್ಥೆಯಲ್ಲೂ ಒಟ್ಟಿಗೇ ಇರುವ, **ವಳುವಿಲಾ**- ಒಂದನ್ನೂತಪ್ಪದ ಹಾಗೆ ಪ್ರಯೋಜನ ಕರ್ತೃತ್ವಭೋಕ್ತೃತ್ವಾದಿಗಳು ತನಗೆ ಸ್ವಾಧೀನವಾದವೆಂಬ ದೋಷಗಳೊಂದೂ ಇಲ್ಲದ, ಎಂದು ಸಾರಾಸ್ವಾದಿನಿಯವರು ಅರ್ಥಮಾಡಿರುತ್ತಾರೆ ; ಸಾರವಿವರಣಿಯವರು **ಅಳವಿಲಾ** ಎಂಬ ಪಾಠವನ್ನಿಟ್ಟು ಕೊಂಡು, ಕ್ಷಯರಹಿತವಾದ ಎಂದು ವ್ಯಾಖ್ಯಾನಮಾಡಿರುತ್ತಾರೆ. **ಅಡಿಮೈ**- ಕೈಂಕರ್ಯವನ್ನು, **ನಾಂ** – ನಾವು, **ಶೆಯ್ಯವೇಣ್ದು** - "ಅಹಂ ಸರ್ವಂ ಕರಿಷ್ಯಾಮಿ" ಎಂದು ಹೇಳಿರುವ ಹಾಗೆ ಮಾಡತಕ್ಕದ್ದು. ಯಾರಿಗೆ ಮಾಡ ತಕ್ಕದ್ದೆಂಬುವದನ್ನು ಉತ್ತರಾರ್ಧದಿಂದ ಹೇಳುತ್ತಾರೆ :—

ತೆಳಿಕುರಲರುವಿತ್ತಿರುವೇಙ್ಗಡತ್ತು ಎಳಿಲ್‌ಕೋಲ್

ಶೋತಿ ಯನ್ತೈ ತನ್ತೈ ತನ್ತೈಕ್ಕೇ ಎಂದರೆ ಮಹಾಧ್ವನಿಯಾಗುವ ಹಾಗೆ ಶಬ್ದಮಾಡುವ ಬೆಟ್ಟಗಳುಳ್ಳ ತಿರುವೇಙ್ಗಡ ಎಂಬ ತಿರುಮಲೆಯಲ್ಲಿ ಮಹಾ ಸೌಂದರ್ಯವುಳ್ಳ ತೇಜೋಮಯವಾದ ದಿವ್ಯಮಂಗಳ ವಿಗ್ರಹವುಳ್ಳ, ನಮ

ನಡುವುೃಶೆಯ್ಯ ವೇಣ್ಡು ನಾಮು" ಎನ್ಱುಮ್, (೪) "ಪೊೞಿಜ್ಗೀಳ್ ಪುಕ ೞ್‌ಗಳ್ ವಾಯವಾಯ್ ಪುಲನ್ಗೊಳ್ ವಡಿವ್ ಮನತ್ತದಾಯ್। ಅಜ್ಗೀ ಮಲರ್‌ಗಳ್ ಕೈಯ್ಯವಾಯ್ ವೞಿಪಟ್ಟೋಡ ವರುೞಿಲ್"

ಪಿತೃಪಿತಾಮಹ ಪ್ರಪಿತಾಮಹರಿಗೆಲ್ಲಾ ನಾಥನಾದ ಶ್ರೀನಿವಾಸನಿಗೆ ಕೈಂಕರ್ಯ ವನ್ನು ಮಾಡೋಣ ಎಂಬ ಭಾವವು. ಇದರಿಂದ ದಾಸಭೂತರಾದ ನಾವು ಸರ್ವ ಶೇಷಿಯಾದ ಶ್ರಿಯಃಪತಿಗೆ ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲೂ ಸರ್ವವಿಧ ಕೈಂಕರ್ಯವನ್ನು ಮಾಡುವವೇ ನಮಗೆ ಸರ್ವೋತ್ಕೃಷ್ಟವಾದ ಭಗವದನುಭವ ವೆಂದು ಹೇಳಲ್ಪಟ್ಟಿತು.

೪. ತಿರುವಾಯ್‌ಮೊೞಿ ೮-೧೦-೪ "ಪೊೞ್ಗು ಏಳ್-ತುಂಬಾ ಅಭಿವೃದ್ಧಿ ಯನ್ನು ಹೊಂದಿರುವ, ಪುಗೞ್‌ಕಲ್ - ಸರ್ವೇಶ್ವರನ ಕಲ್ಯಾಣಗುಣಗಳು, ವಾಯವಾಯ್ - ವಾಕ್ಕಿಗೆ ವಿಷಯವಾಗಿ ಎಂದರೆ ಆತನ ನಿರವಧಿಕಾತಿಶಯ ಕಲ್ಯಾಣಗುಣಗಳನ್ನು ಯಾವಾಗಲೂ ಸ್ತುತಿಸುತ್ತಾ, ಪುಲನ್ಗೊಳ್‌ವಡಿವು-ನನ್ನ ಇಂದ್ರಿಯಗಳನ್ನಾಕರ್ಷಿಸುವ ದಿವ್ಯಮಂಗಳ ವಿಗ್ರಹವು, ಎನ್ ಮನತ್ತೆದಾಯ್- ನನ್ನ ಮನಸ್ಸಿನಲ್ಲಿ ಸದಾ ಇರುವದಾಗಿ, ಇದರಿಂದ ವಾಚಿಕ ಕೈಂಕರ್ಯವು ಹೇಳಲ್ಪ ಟ್ಟಿತು.

"ಚಂದ್ರಕಾಂತಾನನಂರಾಮಮತೀವ ಪ್ರಿಯದರ್ಶನಂ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಂ"

ಎಂದು ಹೇಳಿರುವ ಹಾಗೆ ಸರ್ವೇಶ್ವರನ ಅರ್ಚಾವತಾರರೂಪ ದಿವ್ಯಮಂಗಳ ವಿಗ ಹವು, ನಮ್ಮ ದೃಷ್ಟಿಯನ್ನೂ ಮನಸ್ಸನ್ನೂ ಅಪಹರಿಸುತ್ತದೆ. ಆದುದರಿಂದಅಂತಹ ವಿಗ್ರಹವು ಸದಾ ನನ್ನ ಮನಸ್ಸಿನಲ್ಲೇ ಇರುವದಾಗಿ ಎಂಬ ಭಾವವು; ಇದರಿಂದ ಮಾನಸ ಕೈಂಕರ್ಯವು ಹೇಳಲ್ಪಟ್ಟಿತು. ಅಜ್ಗು ಏಯ್ - ಅಂತಹ ಸೌಂದರ್ಯಕ್ಕೆ ಅನುರೂಪವಾದ, ಮಲರ್‌ಗಳ್ - ದಿವ್ಯಪುಷ್ಪಗಳು, ಕೈಯವಾಯ್ - ನಿನ್ನನ್ನು ಅರ್ಚಿಸುವದಕ್ಕಾಗಿ ಕೈಯಲ್ಲಿರುವ ಹಾಗೆ, ಇದರಿಂದ ಕಾಯಿಕಕೈಂಕರ್ಯವು ಹೇಳಲ್ಪಟ್ಟಿತು. ವೞಿ - ಇಂತಹ ವಾಚಿಕ ಮಾನಸಿಕ ಕಾಯಿಕ ಕೈಂಕರ್ಯಗಳನ್ನು ಮಾಡುವ ಸನಾತನವಾದ ಮಾರ್ಗವನ್ನು, ಪಟ್ಟು-ಅವಲಂಬಿಸಿ, ಓಡ - ಪ್ರವರ್ತಿಸುವ ಹಾಗೆ, ಅರುೞಿಲ್ - ಕೃಪೆಮಾಡಿದುದರಾದರೆ, ಇಜ್ಗೀತಿರಿನ್ದೇರ್ಕು ಇಳುಕ್ಕು ... ಎನ್ - ಹೀಗೆ ಇಲ್ಲೇ ಈ ಲೀಲಾವಿಭೂತಿಯಲ್ಲೇ ಸಂಚರಿಸುವ ತನಗೆ ಕೊರತೆ ಏನಿರುತ್ತದೆ? ಎಂದು ಪೂರ್ವಾರ್ಧದಲ್ಲಿರುತ್ತದೆ. ಪೂರ್ವಾ ರ್ಧವು :—

ಎನ್ರುಮ್ (೫) ನಾಡಾದ ಮಲರ್ ನಾಡಿ" ಎನ್ರುಮ್.

"ಇಜ್ಞೀ ತಿರಿನ್ತೇರ್ಕ್ಕಳುಕ್ಕು ನ್ನಿರು ಮಾನಿಲ ಮುನ್ನುಂಡು ಮಿಳ್‌ನ್ದ ಶಜ್ಞೋಲತ್ತ ಪವಳವಾಯ್ ಚ್ಚೆನ್ದಾಮರೈ ಕಣ್ಣಿನ್ನಮ್ಮಾನ್ !"

ಇದರರ್ಥವೇನೆಂದರೆ—ವಿಸ್ತೀರ್ಣವಾಗಿ ಶ್ಲಾಘ್ಯವಾದ ಜಗತ್ತನ್ನು ಪ್ರಳಯದಲ್ಲಿ ತನ್ನಲ್ಲಿ ಲೀನವಾಗಿಟ್ಟುಕೊಂಡು ಸೃಷ್ಟಿಕಾಲದಲ್ಲಿ ಅದನ್ನು ಸೃಷ್ಟಿಮೂಲಕ ವಿಸ್ತರಿಸಿ ಹೊರಪಡಿಸಿದ, ಕೆಂಪಗೆ ಸುಂದರವಾದ ಹವಳದ ಹಾಗೆ ಅಧರವನ್ನೂ, ಕೆಂಪಗಿರುವ ಕಮಲಪುಷ್ಪದ ಹಾಗಿರುವ ಕಣ್ಣುಗಳುಳ್ಳ ನನ್ನ ಸ್ವಾಮಿಯಾದ ಶ್ರಿಯಃಪತಿಗೆ ತ್ರಿವಿಧ ಕೈಂಕರ್ಯಗಳನ್ನೂ ಮಾಡುವ ಈ ಸತ್ಪಥವನ್ನವಲಂಬಿಸುವ ಹಾಗೆ ನೀನು ನನಗೆ ಅನುಗ್ರಹಿಸಿದುದಾದರೆ, ಇಲ್ಲೀ ಇರುವದರಲ್ಲಿ ಯಾವ ಕೊರತೆ ತಾನೇ ಇರುತ್ತದೆ ಎಂಬ ಭಾವವು.

೫. ತಿರು ೧-೪-೯ "ನಾಡಾದ - ಹುಡುಕಿ ತರಲು ಕಷ್ಟವಾದ, ಮಲರ್-ಪುಷ್ಪವನ್ನು, ನಾಡಿ - ಹುಡುಕಿ ತಂದು, ಪರಮಪ್ರೀತಿಭಕ್ತಿಗಳಿಂದ ಬಹು ಪ್ರಿಯವಾದುದಾಗಿ ತುಂಬಾ ಕಷ್ಟಪಟ್ಟು ಸಂಪಾದಿಸಿದ ಹೂಗಳನ್ನು ಆತನ ಪಾದ ಕಮಲದಲ್ಲಿ ಸಮರ್ಪಿಸುವದು ತನಗೆ ಸ್ವರೂಪವೆಂಬ ಭಾವವು, ಈ ಪುಷ್ಪರೂಪ ಕೈಂಕರ್ಯವೂ ಸರ್ವವಿಧಕೈಂಕರ್ಯಗಳಿಗೂ ಉಪಲಕ್ಷಣವು. ಅಥವಾ ಹುಡುಕಿ ತರಲು ಕಷ್ಟವೆಂದು ಹೇಳಿದುದರಿಂದ ಜೀವಾತ್ಮನೆಂಬ ಪುಷ್ಪವನ್ನುದ್ದೇಶಿಸಿ ಹೇಳಿ, ಆ ಆತ್ಮವನ್ನು ಸ್ವಾಮಿಯಲ್ಲಿ ಸಮರ್ಪಿಸುವದೇ ಕೈಂಕರ್ಯವೆಂದೂ ಭಾವಿಸಬಹುದು, ಆದರೆ ನಾಡೋರುಮ್ - ಎಂದರೆ ಪ್ರತಿನಿತ್ಯವೂ ಎಂದು ಮುಂದೆ ಇರುವದರಿಂದ ಪ್ರತಿನಿತ್ಯವೂ ಆತ್ಮಸಮರ್ಪಣೆ ಎಂಬುವದು ಸರಿಯಲ್ಲವಾದುದರಿಂದ ನಾಡಾದ ಎಂಬುವದಕ್ಕೆ ಮೊದಲರ್ಥವೇ ಸರಿಯಾದುದು.

ನಾಡಾದ ಮಲರ್ ನಾಡಿ ನಾಡೋರಂ ನಾರಣನ್ರ್ ।
ವಾಡಾದ ಮಲರಡಿಕ್ಕೀಳ್ ವೈಕ್ಕವೇ ವಕುಕ್ಕಿನ್ರು ।
ವೀಡಾಡಿ ವೀ ರುತ್ತಲ್ ವಿನೈಯ ರ್ದೇಶೆಯ್‌ವದೋ ।
ಊಡಾಡು ಪನಿವಾಡಾ ಯುರೈತ್ತೀರಾ ಯೆನದುಡಲೇ॥ ಎಂಬುವದು ಪೂರಾಪಾಶುರವು, ಊಡಾಡು..... ವಾಡಾಯ್ ಸರ್ವೇಶ್ವರನಿಗೂ ನನಗೂ ಮಧ್ಯದಲ್ಲಿ ಸಂಚರಿಸುವ ಶೀತಲವಾದ ಮಾರುತವೇ, ನಾಡಾದ...... ನಾಡೋರುಮ್-ಹುಡುಕಿ ತರಲು ದುರ್ಲಭವಾದ ಪುಷ್ಪಗಳನ್ನು ಪ್ರತಿದಿನವೂ, ನಾಡಾದ

(೬) ವಡಿವಿಣೈಯಿಲ್ಲಾ ಮಲರ್ ಮಗಳ್ ಮತ್ತ ನಿಲಮಗಳ್

ವಕುಕ್ಕಿನ್ರು - ಬಾಡದೆ ಇರುವ ಕಮಲ ಪುಷ್ಪದ ಹಾಗಿರುವಪಾದಗಳಲ್ಲಿ ಶ್ರಿಯಃಪತಿಯು ಸಮರ್ಪಿಸುವದೇ ಸ್ವರೂಪವಾಗಿರಲಾಗಿ, **ವೀಡು**.........**ವಿನೈಯು ಮ್ಱದು** - ಆ ಸರ್ವೇಶ್ವರನನ್ನು ಬಿಟ್ಟಿರುವ ವಿರಹ ದುಃಖದಿಂದ ಬೇರೆಯಾಗಿರುವ ಈ ದೌರ್ಭಾಗ್ಯವು, **ಎನ್ ಶೆಯ್‌ವದೋ** - ಯಾವ ಅನರ್ಥವನ್ನುಂಟು ಮಾಡುತ್ತದೋ ? **ಉರೈತ್ತು** - ಆ ಸ್ವಾಮಿಗೆ ತಿಳಿಸಿ, ಹಾಗೆ ಸರಿಯಾದ ಏನೂ ಪ್ರತ್ಯುತ್ತರ ಬಾರದಿದ್ದರೆ, **ಎನದುಡಲ್ ಈರಾಯ್** - ನನ್ನ ಶರೀರವು ನಿಲ್ಲದ ಹಾಗೆ ಮಾಡು ಎಂದು ವಾಯುವನ್ನು ಕುರಿತು ಪ್ರಾರ್ಥಿಸುತ್ತಾರೆ.

೬. ತಿರುವಾಯ್‌ಮೊಳಿ ೯-೨-೧೦ **ವಡಿವು**-ಸೌಂದರ್ಯಕ್ಕೆ, **ಇಣೈ ಇಲ್ಲಾ**-ಸಮಾನವಿಲ್ಲದ ಎಂದರೆ ನಿರತಿಶಯ ಲಾವಣ್ಯವುಳ್ಳ, **ಮಲರ್ ಮಗಳ್** - ಕಮಲವಾಸಿನಿಯಾದ ಲಕ್ಷ್ಮಿಯೂ, **ಮತ್ತ** - ಅಂತಹ, **ನಿಲಮಗಳ್** - ಭೂದೇವಿಯೂ ಸಹ, **ಪಿಡಿಕ್ಕುಮ್** - ಒತ್ತಿ ಕೈಂಕರ್ಯವನ್ನು ಮಾಡುವ, **ಮೆಲ್ಲಡಿಯೈ** ಸುಕುಮಾರವಾಗಿ ಮೃದುವಾಗಿರುವ ನಿನ್ನ ಪಾದಗಳನ್ನು, **ಕೊಡುವಿನೈಯೇನುಮ್** - ಮಹಾ ಪಾಪಿಷ್ಠನಾದ ನಾನೂ ಸಹ, **ಪಿಡಕ್ಕ** - ಒತ್ತಿ ಕೈಂಕರ್ಯ ಮಾಡುವ ಹಾಗೆ, ಮುಂದಕ್ಕೆ, **"ನೀ ಒರುನಾಳ್ ಕೂವುದಲ್‌ವರುದಲ್ ಶೆಯ್ಯಾಯೇ"** ಎಂದಿರುತ್ತದೆ. ಮಹಾಕೃಪಾಪೂರ್ಣನಾದ ನೀನು ಒಂದು ದಿನ ನನ್ನನ್ನು ಅಲ್ಲಿಗೆ (ಪರಮಪದಕ್ಕೆ) ಕರಿಸಿಕೊಳ್ಳುವದೇ ಆಗಲಿ ಅಥವಾ ಇಲ್ಲಿಯೇ ನೀನು ಬಂದು ಕೃಪೆಮಾಡಿಯಾಗಲಿ ಮಾಡತಕ್ಕದ್ದು.

> **ಕೊಡುವಿನೈಪ್ಪಡೆಗಳ್ ವಲ್ಲೈಯಾ ಯಮರರ್‌ಕ್ಕಿಡರ್ ಕೆಡವ**
> **ಶುರರ್ ಕಟ್ಟಿಡರ್ ಶೆಯು । ಕಡುವಿನೈ ನಞ್ಜೇ ಯೆನ್ನುಡೈಯ**
> **ಮುದೇ ಕಲಿನಯುಲ್ ತಿರುಪ್ಪುಳಿಙ್ಗುಡಿಯಾಯ್ । ವಡಿವಿಣೈ**
> **ಯಿಲ್ಲಾ ಮಲರ್‌ಮಗಳ್‌ಮಱ್ಱೈ ನಿಲಮಗಳ್ ಪಿಡಿಕ್ಕುಂ ಮೆಲ್ಲ**
> **ಡಿಯೈ । ಕ್ಕೊಡುವಿನೈಯೇನುಮ್ ಪಿಡಿಕ್ಕನೀ ಯೊರುನಾಳ್**
> **ಕೂವುದಲ್ ವರುದಲ್ ಶೆಯ್ಯಾಯೇ ॥**

ಎಂಬುವದು ಪೂರಾ ಪಾಶುರವು. **ಕೊಡುವಿನೈ ಪಡೈಗಳ್ ವಲ್ಲೈಯಾಯ್** ಕ್ರೂರ ವ್ಯಾಪಾರವುಳ್ಳ ಸುದರ್ಶನಾಯುಧಗಳ ಮೂಲಕ ತನ್ನ ಸಂಕಲ್ಪವನ್ನು ನಡಿಸಿಕೊಳ್ಳುವ ಸಾಮರ್ಥ್ಯವುಳ್ಳವನಾಗಿ, ಅಮರರ್ಕ್ಕು ಇಡರ್ ಕೆಡ-ದೇವತೆಗಳ ದುಃಖವು ತೀರುವ ಹಾಗೂ, ಅಶುರರ್‌ಗಳುಕ್ಕು ಇಡರ್‌ಶೆಯ್ಯು - ಕ್ರೂರರಾಕ್ಷಸರಿಗೆ ದುಃಖವನ್ನುಂಟುಮಾಡುವ ಹಾಗೂ ಇರುವ, ಕುಡುವಿನೈನೆಂಜೇ-ಕ್ರೂರ

ಪಿಡಿಕ್ಕ್ ಮೆಲ್ಲಡಿಯೈ ಕೊಡುವಿನೈಯೇನುಂ ಪಿಡಿಕ್ಕ" ಎನ್ರುಮ್ (೭) "ತನಕ್ಕೇ ಯಾಕ ವೆನ್ನೈಕ್ಕೊಳ್ಳುಮೀದೆ" ಎನ್ರುಮ್ (೮) "ಉನಕ್ಕೇ ನಾಮಾಳ್ ಚ್ಚೆಯ್ವೋಮ್" ಎನ್ರುಮ್,

---

ವಾದ ಔಷಧ ಮತ್ತು ವಿಷವನ್ನುಳ್ಳವನೇ, ಯೆನ್ನುಡೈಯ ಮುದೇ ನನಗೆ ಅಮೃತದ ಹಾಗೆ ಭೋಗ್ಯ ಭೂತನೇ, **ಕಲಿವಯಲ್ ತಿರುಪ್ಪುಳಿಜ್ಗುಡಿಯಾಯ್** - ಸಮೃದ್ಧಿ ಹೊಂದಿದ ಗದ್ದೆಗಳುಳ್ಳ ತಿರುಪ್ಪುಳಿಜ್ಗುಡಿಯಲ್ಲಿ ಬಿಜಮಾಡಿಸಿರುವವನೇ ಎಂದು ಪೂರ್ವಾರ್ಧದ ಅರ್ಥವು, ಇದರಿಂದಲೂ ಕೈಂಕರ್ಯವೇ ಉತ್ತರಕೃತ್ಯವೆಂದು ಹೇಳಿದಂತಾಯಿತು.

೭. ತಿರುವಾಯ್ ಮೊಳಿ ೨-೯-೪. **ತನಕ್ಕೆ ಆಕೆ** - ಸರ್ವೇಶ್ವರನಾದ ತನಗೇ ಮಾತ್ರವೇ ಎಂದರೆ ಇನ್ನು ಯಾರಿಗೂ ಇಲ್ಲದೆ, ಶೇಷಭೂತನಾಗಿ ದಾಸ್ಯ ಮಾಡಿಕ್ಕೊಂಡು ಪರತಂತ್ರನಾಗುವ ಹಾಗೆ, **ಎನ್ನೈಕ್ಕೊಳ್ಳುಮ್** - ನನ್ನನ್ನು ಅಂಗೀಕರಿಸುವನು. ಇಲ್ಲಿ ದಾಸ್ಯಮೂಲಕ ಪಾರತಂತ್ರ್ಯವು ಹೇಳಲ್ಪಟ್ಟಿತು. ಪೂರಾಪಾಶುರವು :—

> **ಎನಕ್ಕೇ ಯಾಟ್ಚೆಯ್ಯೆಕ್ಕಾಲತ್ತು ಮೆನ್ರು ಎ್ ೯ । ಮನಕ್ಕೇ ವಂದಿಡೈ ವೀಡಿನ್ರಿ ಮನ್ನಿ । ತನಕ್ಕೇ ಯಾಗವೆನ್ನೈಕೊಳ್ಳುಮೀದೇ । ಎನಕ್ಕೇ ಕಣ್ಣನೈಯಾನ್ ಕೊಳ್ ಶಿರಪ್ಪೇ.**

ಇದರರ್ಥವು—**ಎಕ್ಕಾಲತ್ತುಮ್ ಎನಕ್ಕೇ ಅಳ್ ಶೆಯ್ ಎನ್ರು** - ಎಲ್ಲಾ ಕಾಲದಲ್ಲೂ ತನಗೇ ದಾಸ್ಯವನ್ನು ಮಾಡತಕ್ಕದ್ದೆಂದು, **ಎ್ ೯ ಮನಕ್ಕೆ ವಂದು**- ನನ್ನ ಮನಸ್ಸಿಗೆ, **ಇಡೈವೀಡು ಇನ್ರಿ** - ವಿಚ್ಛೇದವಿಲ್ಲದ ಹಾಗೆ, **ಮನ್ನೀ** - ನಿರಂತರ ದಾಸ್ಯವನ್ನುಮಾಡಿ, **ತನಕ್ಕೇಯಾಗ** - ತನಗೇ ಪರತಂತ್ರನಾಗಿ, **ಎನ್ನೈಕ್ಕೊಳ್ಳುಮ್** - ನನ್ನನ್ನು ಅಂಗೀಕರಿಸುವನು, **ಈದೇ ಎನಕ್ಕೇ** - ಇದೇ ನನಗೆ, **ಕಣ್ಣನೈಯಾ್ ಕೊಳ್** - ಶ್ರೀಕೃಷ್ಣನನ್ನು ನಾನು ಪ್ರಾರ್ಥಿಸುವ, **ಶಿರುಪ್ಪೇ** - ಪ್ರಯೋಜನವು. ನನಗೆ ಶ್ರೀಕೃಷ್ಣಭಗವಾನರವರಿಂದ ಉಂಟಾಗುವ ಮುಖ್ಯಪ್ರಯೋಜನವೇನೆಂದರೆ—ಸರ್ವಕಾಲದಲ್ಲೂ ತನಗೇ ಕೈಂಕರ್ಯವನ್ನು ಮಾಡತಕ್ಕದ್ದೆಂದು ಆಜ್ಞಾಪಿಸಿ, ನನ್ನ ಮನಸ್ಸಿನಲ್ಲೇ ನಿರಂತರವಾಸಮಾಡಿಕೊಂಡು ಹೀಗೆ ತನಗೇ ಪರತಂತ್ರನಾಗಿರುವ ಹಾಗೆ ನನ್ನನ್ನು ಅಂಗೀಕರಿಸಿದುದೀಗ ನನಗೆ ಪರಮಪುರುಷಾರ್ಥವೆಂದ ುಹೇಳಿಕೊಳ್ಳುತ್ತಾರೆ.

(೮) ತಿರುಪ್ಪಾವೈ ೨೯. **ಉನಕ್ಕೇ** - ಸರ್ವೇಶ್ವರನಾದ ನಿನಗಾಗಿಯೇ ಎಂದರೆ ನಿನ್ನ ಪ್ರೀತಿಗಾಗಿಯೇ, **ನಾಮ್** - ನಾವುಗಳು, **ಆಳ್ ಶೆಯ್ವೋಮ್**-

(೯) " ಪಳ್ಳಿಕೊಳ್ಳುಮಿಡತ್ತ ಕೊಟ್ಟಡಕ್ಕೊಳ್ಳುವಾಗಿಲ್ " ಎನ್ನುವ್

ಕೈಙ್ಕರ್ಯವನ್ನು ಮಾಡುವೆವು.

" ಶಿತ್ತಂ ಶಿರುಕಾಲೆ ವನ್ದುನ್ನೈಚ್ಚೇವಿತ್ತುನ್ ಪೊಱ್ಱಾಮರೈಯಡಿಯೇ ಪೋಱ್ಱುಮ್ ಪೊರುಳ್ ಕೇಳಾಯ್ । ಪೆಱ್ಱಮ್ ಮೇಯ್ತ್ತುಣ್ಣುಮ್ ಕುಲತ್ತಿಱ್ಪಿರನ್ದು, ನೀಕುಱ್ಱೇವಲೆಙ್ಗಳೈಕ್ಕೊಳ್ಳಾಮಱ್ಪೋಗಾದು । ಇಱ್ಱೈಪ್ಪಱೈಕೊಳ್ವಾನನ್ರುಗಾಣ್ ಗೋವಿನ್ದಾ, ಎಱ್ಱೈಕ್ಕುಮ್ ಏೞೇೞ್ ಪಿರವಿಕ್ಕುಮ್ ಉನ್ತನ್ನೋಡುಱ್ಱೋಮೇಯಾವೋಮ್ ಉನಕ್ಕೇ ನಾಮಾಟ್ಚೆಯ್ವೋಮ್, ಮಱ್ಱೈನಙ್ಗಾಮಙ್ಗಳ್ ಮಾಱ್ಱೇಲೋರೆಮ್ಪಾವಾಯ್ "

ಎಂಬುವದು ಪೂರಾ ಪಾಶುರವು. ಶಿಱ್ಱಂ.... ಸೇವಿತ್ತು - ಈ ಉಷಃಕಾಲದಲ್ಲೇ ಬಂದು ಸರ್ವೇಶ್ವರನಾದ ನಿನ್ನ ಪಾದಕಮಲಂಗಳಿಗೆರಗಿ, ಉನ್.... ಕೇಳಾಯ್ - ನಿನ್ನನ್ನು ಸ್ತೋತ್ರಮಾಡುವ ಫಲವನ್ನು ಹೇಳುವೆವು ಕೇಳ್ಬಿಯ್ಯಾ, ಪೆಱ್ಱಮ್.... ಪಿರನ್ದು ನೀ-ಗೋವುಗಳನ್ನು ಮೇಯಿಸಿ ಜೀವನಮಾಡುವ ಗೋಪಾಲರ ಕುಲದಲ್ಲಿ ಹುಟ್ಟಿದ ನೀನು, ಸದ್ವೃತ್ತಿಯುಳ್ಳ ಸಾಧುಗಳ ಪರಿತ್ರಾಣಕ್ಕಾಗಿಯೇ ಅವರ ಮಧ್ಯದಲ್ಲೇ ಜನಿಸಿದ ನೀನು, ಕುಱ್ಱೇವಮ್.... ಪೋಕಾದು ನಮ್ಮ ಕೈಙ್ಕರ್ಯಗಳನ್ನು ಸ್ವೀಕರಿಸದೇ ಇರಕೂಡದು, ಇಱ್ಱೈಪ್ಪಱೈ ಕೊಳ್ವಾನ್.... ಗೋವಿಂದಾ - ಈಗಿನ ಒಂದು ಪ್ರಯೋಜನಕ್ಕಾಗಿ ಬಂದವರಲ್ಲವೈಯ್ಯಾ ಓ ಗೋವಿಂದನೇ, ಎಱ್ಱೈಕ್ಕುಮ್...... ಯಾವೋಮ್ - ಇನ್ನೂ ೨೧ ಜನ್ಮವಿರುವವರಿಗೇಯಾಗಲಿ ಅಥವಾ ಕಾಲತತ್ವವಿರುವವರೆಗೇಯಾಗಲಿ ನಿನ್ನನ್ನಗಲಿ ನಾಪಿರಲಾರೆವು, ಉನಕ್ಕೇನಾಮಾಳ್‌ಶೈಯ್‌ವೋಮ್ - ನಿನಗೇ ಶೇಷಭೂತರೆಂಬುವದನ್ನರಿತವರಾದುದರಿಂದ ನಿನಗೆ ಸರ್ವ ವಿಧವಾದ ಕೈಙ್ಕರ್ಯವನ್ನು ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಯಲ್ಲೂ ನಿನ್ನ ಕೃಪೆಯಿಂದ ನಡೆಸುವೆವು. ಮಱ್ಱೈನಂ.... ಮಾಱ್ಱು - ನಮ್ಮ ಇತರ ಐಹಿಕಾದಿ ಕಾಮನೆಗಳಲ್ಲಿ ಮಮತೆಯನ್ನು ಹೋಗಲಾಡಿಸು, ಆಗೀಗ ನಮ್ಮ ಈ ವ್ರತವು ಶ್ಲಾಘ್ಯವಾಗುತ್ತದೆ."

ಎಂಬುವದೀ ಪಾಶುರತಾತ್ಪರ್ಯವು

೯. ನಾಚ್ಚಿಯಾರ್ ತಿರುಮೊೞಿ ೪. ೧.

"ತೆಳ್ಳಿಯಾರ್ ಪಲರ್ ಕೈತೊೞುನ್ದೇವನಾರ್
ವಳ್ಳಲ್ ಮಾಲಿರುಮ್ ಶೋಲೈಮಣಾಳನಾರ್
ಪಳ್ಳಿಕೊಳ್ಳುಮಿಡತ್ತಡಿ ಕೊಟ್ಟಿಡ
ಕ್ಕೊಳ್ಳುಮಾಗಿಲ್ ನೀಕೂಡಿಡು ಕೂಡಲೇ ॥"

(೧೦). "ಎಣ್ಣಕ್ಕಣ್ಣವಿರಲ್‌ಗಳ್" ಎನ್ರುವನ್,

ಎಂಬುವದು ಪೂರಾ ಪಾಶುರವು. **ತೆಳ್ಳಿಯಾರ್** - ನಿತ್ಯಾನುಭವವನ್ನು ಮಾಡುವ ನಿತ್ಯಸೂರಿಗಳಾದ, **ಪಲರ್** - ಅನೇಕರು, **ಕೈತೊಳುವನ್** - ಅಂಜಲಿ ಬಂಧವನ್ನು ಮಾಡುವಹಾಗೆ ಬಿಜಮಾಡಿಸಿರುವ, **ದೇವನಾರ್** - ಸರ್ವಸ್ವಾಮಿ ಯಾಗಿ, **ವಳ್ಳಲ್** - ಪರಮೋದಾರರಾಗಿ, **ಮಾಲಿರುಂಜೋಲೈ** - ತಿರುಮಾ ಲಿರುಂಜೋಲೆ ಎಂಬ ಪರ್ವತದಲ್ಲಿ, **ಮಣಾಳನಾರ್** - ನನ್ನನ್ನು ಪರಿಗ್ರಹಿಸುವ ದಕ್ಕಾಗಿ ಬಿಜಮಾಡಿಸಿದವರಾಗಿ, **ಪಳ್ಳಿಕೊಳ್ಳುಮಿಡತ್ತ್ಯ** - ಮಲಗಿಕೊಳ್ಳುವ ಸ್ಥಳದಲ್ಲಿ ಅದು ಯಾವುದೆಂದರೆ ದೇವಸ್ಥಾನದಲ್ಲಿ, **ಅಡಿಕೊಟ್ಟಿಡ**-ಪಾದಕೈಙ್ಕರ್ಯ ವನ್ನು, **ಕೊಳ್ಳುಮಾಗಿಲ್** - ಸ್ವೀಕರಿಸಿದವರಾದರೆ, **ಕೂಡಲೇ** - ಒಡನೆಯೇ **ನೀಕೊಡಿಡು** - ನೀನು ಸೇರತಕ್ಕದ್ದು. ಇದು ಪೆರಿಯಾಳ್ವಾರವರ ಮಗಳಾದ **ಆಂಡಾಳ್** ಹೇಳುವ ಉಕ್ತಿಯು.

ಇದರಿಂದ ಮುಮುಕ್ಷುವಿನ ಕೃತ್ಯವು ಕೈಙ್ಕರ್ಯವೆಂದು ಹೇಳಲ್ಪಟ್ಟಿರುತ್ತದೆ.

೧೦. ಪೆರಿಯಾಳ್ವಾರ್ ತಿರುಮೊಳಿ, ೪-೪-೩.

ವಣ್ಣನನ್ಮಣಿಯುಮ್ ಮರಕತಮುಮ್ ಅಳುತ್ತಿನಿಳಲೆಳುಮ್ । **ತಿಣ್ಣೈ**ಶೂಳ್ ತಿರುಕೋಟ್ಟಿಯೂರ್ ತಿರುಮಾಲವನ್ ತಿರುನಾಮ ಙ್ಗಳ್ । ಎಣ್ಣಕ್ಕಣ್ಣ ವಿರಲ್‌ಗಳಾಲ್ ಇರೈಪ್ಪೊಳಿದುಮ್ ಎಣ್ಣಗಿಲಾದು **ಪೋಯ್** । ಉಣ್ಣಕ್ಕಣ್ಣದ ಮೂತ್ತೈನಾಯ್‌**ಕ್ಕು ಕ್ಕವಳಮುಂದು ಕಿನ್ರಾರ್‌ಗಳೇ**॥ಎಂಬುವದು **ಪೂರಾ** ಪಾಶುರವು.

ವಣ್ಣನನ್ಮಮಣಿಯುಮ್ - ಒಳ್ಳೇ ಕಾನ್ತಿಯುಳ್ಳ ಮಾಣಿಕ್ಯವನ್ನು **ಮರಕತಮುಮ್** - ಪಚ್ಚೆಯನ್ನು, **ಅಳುತ್ತಿ** - ಕೆತ್ತಿ, **ನಿಳಲೆಳುಮ್** - ಪ್ರತಿ ಬಿಂಬ ಉಂಟಾಗುವ ಹಾಗೆ ಪ್ರಕಾಶಿಸುತ್ತಿರುವ, **ತಿಣ್ಣೈಶೂಳ್** - ಜಗಲಿಗಳಿಂದ ತುಂಬಿದ ,ತಿರುಕೋಟ್ಟಿಯೂರ್ ಎಂಬ ದಿವ್ಯ ಸ್ಥಳದಲ್ಲಿ ಬಿಜಮಾಡಿಸಿರುವ, **ತಿರುಮಾಲವನ್ ತಿರುನಾಮಙ್ಗಳ್** - ಶ್ರೀಯಃಪತಿಯ ದಿವ್ಯ ನಾಮಗಳನ್ನು **ಎಣ್ಣಕ್ಕಂಡವಿರಲ್‌ಗಳಾಲ್**-ಎಣಿಸುವದಕ್ಕಾಗಿರುವ ಬೆರಳುಗಳಿಂದ, **ಇರೈಪ್ಪೊಳಿದುಮ್** - ಒಂದು ಕ್ಷಣಕಾಲವೂ, **ಎಣ್ಣಗಿಲಾದುಪೋಯ್** - ಹಾಗೆ ಎಣಿ ಸದೆ ಹೋಗಿ, **ಕವಳಂ** - ಅನ್ನದ ತುತ್ತನ್ನು, **ಊತ್ತೈನಾಯ್‌**ಕು - ಅಶುದ್ಧ ಬಾಯಿಗೆ **ಉಣ್ಣಕಂಡದಂ** - ಹಾಕುವದಕ್ಕಾಗಿ **ಮುಂದು ಕಿನ್ರಾರ್‌ಗಳೇ** - **ಆ**ತುರಪಡುತ್ತಾರಲ್ಲವೇ. ಇದರಿಂದ ಕೈಬೆರಳಿಗೆ ಸಾರ್ಥಕ್ಯವು ತುತ್ತುಗಳನ್ನು

(೧೧) "ಉಣ್ಣಾನಾಳ್ ಪಶಿಯಾವದೊನ್ರಿಲ್ಲೈಯೋವಾದೇ ನಮೋ ನಾರಣಾವೆನ್ರೆಣ್ಣಾನಾಳುಮಿರುಕ್ಕೆಶುರ್‌ಚಾಮವೇದ ನಾಣ್ಮಲರ್ ಕೊಣ್ಡು ನಪಾದಮ್ ನಣ್ಣಾನಾಳ್ ವೈತ್ತುರುಮಾಕಿಲ ನ್ರೆನಕ್ಕವೈ ಪಟ್ಟಿನಿನಾಳೇ" ಎನ್ರುಮ್,

ಹೇಯವಾದ ಹೊಟ್ಟೆಗಾಗಿ ಬಾಯಿಗೆ ಸೇರಿಸುವದಲ್ಲವು ಮತ್ತೇನೆಂದರೆ ಜಪತಪಗಳಲ್ಲಿ ಆತನ ದಿವ್ಯನಾಮಗಳನ್ನು ಎಣಿಸುವದು. ಬಾಯಿಯು ಆ ದಿವ್ಯನಾಮಗಳನ್ನು ಪಠಿಸುವದು, ಇವುಗಳಿಂದಲೇ ಸಾರ್ಥಕ್ಯವು. ಇಲ್ಲಿಯೂ ವಾಚಿಕಮಾನಸಿಕ ಕೈಂಕರ್ಯಗಳು ಹೇಳಲ್ಪಟ್ಟವು.

೧೧. ಪೆರಿಯಾಳ್ವಾರ್ ತಿರುಮೊಳಿ ೫-೧-೬. **ಉಣ್ಣಾನಾಳ್** - ಆಹಾರವಿಲ್ಲದ ಉಪವಾಸ ದಿನದಲ್ಲಿ, **ಪಶಿಯಾವದೊನ್ರಿಲ್ಲೈ** - ನನಗೆ ಹಶಿವು ಯಾವುದೂ ಇಲ್ಲವು, ಇನ್ನು ಯಾವ ದಿನಗಳಲ್ಲಿ ತಮಗೆ ತುಂಬಾ ಹಸಿವು ಎಂದರೆ ಹೇಳುತ್ತಾರೆ. :— **ಓವಾದೆ** - ವಿಚ್ಛೇದವಿಲ್ಲದೆ, **ನಮೋ ನಾರಣಾವೆನ್ರು** - ನಮೋನಾರಾಯಣ ಎಂದು, **ಎಣ್ಣಾನಾಳುಮ್** ಮೂಲಮಂತ್ರ ಜಪವಿಲ್ಲದ ದಿನವೂ, ಮತ್ತು **ಇರುಕ್** - ಋಗ್ವೇದ, **ಎಶುಚ್** - ಯಜುರ್ವೇದ, **ಶಾಮವೇದ** – ಸಾಮವೇದಗಳಿಂದ ಯುಕ್ತವಾದ, **ನಾಣ್ಮಲರ್** - ನಾಲ್ಕು ಪುಷ್ಪಗಳು, ನಾಲ್ಕು ಎಂದು ಹೇಳಿರುವದರಿಂದ ಅಥರ್ವಣವೇದವೂ ಹೇಳಲ್ಪಟ್ಟಿತು, **ಕೊಂಡು ನ್ಪಾದಮ್** - ಇವುಗಳ ಮಂತ್ರಪುಷ್ಪವನ್ನು ಹೇಳಿ ನಿನ್ನ ಪಾದಕಮಲವನ್ನು **ನಣ್ಣಾನಾಳ್** – ಆಶ್ರಯಿಸಿ ಅರ್ಚಿಸದೇ ಇರುವ ದಿನವೂ ಸಹ **ವೈತ್ತುರುಮಾಗಿಲ್** - ಪ್ರಾಪ್ತಗಳಾದರೆ, **ಅನ್ರು** - ಆ ದಿನವೇ, **ಎನಕ್ಕವೈ** – ನನಗೆ ಅವುಗಳು, **ಪಟ್ಟಿನಿನಾಳೇ** - ಕ್ಷುತ್ತಿನಿಂದ ಬಾಧಿತಗಳಾದ ದಿನಗಳೇ, ಎಂದರೆ ಉಪವಾಸ ದಿನಗಳೇ ಸರಿ, **ಎನ್ರುಮ್** – ಎಂದು, ಇಲ್ಲಿ ಈ ಪಾಶುರದ ಮೂರು ಪಾದಗಳೂ ಉದಾಹರಿಸಲ್ಪಟ್ಟವು. **ಕಣ್ಣಾನಾನ್ಮುಗನೈಪಡೈತ್ತಾನೇ ಕಾರಣಾ ಕರಿಯಾಯುಡಿಯೇ ನಾಣ್**"ಎಂಬುವದು ಮೊದಲನೆಯ ಪಾದವು. ಇದರರ್ಥವೇನೆಂದರೆ. ಓ **ಕಾರಣಾ** - ಪ್ರಕೃತಿ ಮೊದಲಾದವುಗಳಿಗೂ ಆದಿಕಾರಣನೇ, ಅದರೂ, **ಕಣ್ಣಾ** - ಶ್ರೀ ಕೃಷ್ಣನಾಗಿ ವಸುದೇವಸೂನುವಾಗಿ ಸರ್ವಸುಲಭನಾಗಿ ಅವತಾರಮಾಡಿದವನೇ, **ನಾನ್ಮುಗನೈ ಪಡೈತ್ತಾನೇ** - ಚತುರ್ಮುಖನನ್ನು ಜಗತ್ಸೃಷ್ಟಿಮಾಡಲು ಸೃಷ್ಟಿಸಿದವನೇ, **ಕರಿಯಾಯ್** - ಸರ್ವರನ್ನೂ ಆಕ್ರಯಿಸುವ ಹಾಗೆ ಮಾಡಿ, ಅವರುಗಳ ಮನಸ್ಸನ್ನೂ ಅಪಹರಿಸುವ ದಿವ್ಯಮಂಗಳ ವಿಗ್ರಹಯುಕ್ತನಾದವನೇ, ಎಂದು ಸಂಬೋಧಿಸಿ, ನೀನು ಧಾರಕ

(೧೨) ನಾಕ್ಕು ನಿನ್ನೈಯಲ್ಲಾಲರಿಯಾದು ನಾನದಞ್ಜುವನ್ ವಶಮನ್ರು" ಎನ್ರುಮ್,

ನೇನೋ? ಹೌದು, ಆದರೂ **ಅಡಿಯೇನ್** - ಅನನ್ಯಾರ್ಹ ಶೇಷಭೂತನಾದ ನನಗೆ ಯಾವುದು ಮುಖ್ಯಧಾರಕವೆಂದರೆ :—ನನಗೆ ಪ್ರಕೃತಿಸಂಬಂಧವನ್ನುಂಟು ಮಾಡಿ ಜನ್ಮವನ್ನಿತ್ತಿರುವೆ, ಜನನ ಕಾಲದಲ್ಲೇ ಜೀವನೋಪಾಯವನ್ನು ಕಲ್ಪಿಸಿ ರುವದರಿಂದ ಅದರ ವಿಷಯದಲ್ಲಿ ನನಗೆ ಚಿಂತೆಯಿಲ್ಲದುದರಿಂದ ಆಹಾರವಿಲ್ಲದೆ ಉಪ ವಾಸವಾದರೂ ಉಪವಾಸವೆಂದೆಣಿಸುವದಿಲ್ಲವು. ನಿನಗೆ ಕೈಂಕರ್ಯಗಳನ್ನೆಸಗದ ದಿನವೇ ತಮಗೆ ಉಪವಾಸದಿನವೆಂದು ಹೇಳಿಕೊಂಡಿರುತ್ತಾರೆ.

೧೨. ಪೆರಿಯಾಳ್ವಾರ್ ತಿರುಮೊಳಿ. ೫. ೧. ೧.

ವಾಕ್ಕುತ್ತೂಯ್ಮೈಯಿಲಾಮೈಯಿನಾಲೆ **ಮಾಧವಾ** **ವುನ್ನೈ** ವಾಯ್‌ಕೊಳ್ಳಮಾಟ್ಟೇನ್ । **ನಾಕ್ಕು ನಿನ್ನೈ ಯಲ್ಲಾ ಲರಿಯಾದು** ನಾನದಞ್ಜುವ ನೆನ್ ವಶಮನ್ರು । **ಮೂರ್ಕ್ಕುಪ್ಪೇಶುಗಿನ್ರಾ ನಿವನೆನ್ರು** ಮುನಿವಾಯೇಲುಮೆನ್ **ನಾವಿನುಕ್ಕು** ಆಱ್ಱೇನ್ **ಕಾಕ್ಕೈ ವಾಯಿಲುಮ್** ಕಟ್ಟುರೈಕೊಳ್ವರ್ **ಕಾರಣಾ ಕರುಳಕ್ಕೊಡಿಯಾನೇ** ॥ ಎಂದು ಪೂರಾ ಪಾಶುರವು. ಇದರರ್ಥವು :—**ವಾಕ್ಕು**-ನನ್ನ ನುಡಿಯು, **ತೂಯ್ಮೈಯಿಲಾಮೈಯಿನಾಲೆ**-ಭಗವತ್ಸನ್ನಿಧಿಯಲ್ಲಿ ಸುಳ್ಳು ಹೇಳುವದು, ಅನ್ಯದೇವತೆಯನ್ನು ಸ್ತೋತ್ರಮಾಡುವದು, ಪ್ರಯೋಜನಗಳಿಗಾಗಿ ಭಗವಂತನನ್ನು ಸ್ತೋತ್ರಮಾಡು ವದು, ಇವೇ ಮೊದಲಾದ ಅಶುದ್ಧಿಗಳಿರುವದರಿಂದ, **ಹೇ ಮಾಧವಾ** - ಓ ಶ್ರಿಯಃ ಪತಿಯೇ, ಉನ್ನೈ **ವಾಯ್ಕೊಳ್ಳ ಮಾಟ್ಟೇನ್** - ನಿನ್ನನ್ನು ಸ್ತೋತ್ರ ಮಾಡಲಾರೆನು, **ನಾಕ್ಕು** - ನಾಲಿಗೆಯು, **ನಿನ್ನೈಯಲ್ಲಾಲ್** - ಸರ್ವರಸನಾದ ನಿನ್ನನ್ನು ಬಿಟ್ಟು, **ಅರಿಯಾದು** - ಬೇರೆ ಯಾವ ರುಚಿಯಾದ ವಸ್ತುವನ್ನು ತಿಳಿದಿಲ್ಲವು. ಅದು ವಿಷಯಾಧೀನವಾದುದೇ ವಿನಾ ಇನ್ನು ಯಾವುದನ್ನು ಕಂಡಿಲ್ಲವೆಂಬ ಭಾವವು **ನಾನದು ಅಂಜುವನ್** - ನಾಲಿಗೆಯ ದೋಷವನ್ನು ತಿಳಿದವನಾಗಿ ನಾನು ಭಯಪಡುತ್ತೇನೆ. **ಎನ್ ವಶಮನ್ರು** - ಅದು ರಸಪರೀಕ್ಷೆ ಯುಳ್ಳದಾದುದರಿಂದ, ಮೇಲೆ ಬೀಳುತ್ತದೆ, ಏಕೆಂದರೆ ಅದು ನನ್ನ ವಶದಲ್ಲಿಲ್ಲವು, **ಮೂರ್ಕ್ಕುಪ್ಪೇಶಾಗಿನ್ರಾನಿವನೆನ್ರುಮುನಿವಾಯೇಲುಮ್** - ನಾನು ಹೇಳು ವ ಪಾಶುರವು ಮೂರ್ಖನು ಹೇಳುವ ಪಾಶುರವಾಗಿದೆಯೆಂದು **ನೀನು** ಕೋಪಗೊಂಡರೂ, **ಎನ್ ನಾವಿನುಕ್ಕಾಱ್ಱೇನ್** - ನಿನ್ನ ಕೋಪವನ್ನಾದರೂ ಸಹಿಸಬಹುದು, ನನ್ನ ನಾಲಿಗೆಯನ್ನು ಮಾತ್ರ ಸಹಿಸಲು ಸಾಧ್ಯವಿಲ್ಲವು, **ಎಂದರೆ**

(೧೩) "ನಾಯುನನ್ನೈಯಲ್ಲದು ವಾಳಿತ್ತಾದು" ಎನ್ಬ್ರನ್

ಅದರ ದಾಹವು ತೀರುವದಿಲ್ಲವೆಂಬ ಭಾವವು ; ಆಗಲಿ ಹಾಗಾದರೆ ಅಂತಹ ಪಾಶುರವು ನಮಗೆ ಅಶ್ರೇಯಸ್ಸಿಗೆ ಕಾರಣವಾಗಲಾರದೋ ಎಂದರೆ, **ಕಾಕ್ಕೈವಾಯಿಲುನ್ ಕಟ್ಟುರೈಕೊಳ್ಳುವರ್**-ಕಾಗೆಯು ಕರ್ರೆಂದು ಕ್ರೂರವಾಗಿ ಕೂಗಿದರೂ ಮಹಾತ್ಮರು ಒಳ್ಳೇದನ್ನೇ ನುಡಿಯಿತೆಂದು ಭಾವಿಸುವರು, ತಮಗೆ ಅವಶಕುನವಾಯಿತೆಂದು ಭಾವಿಸರು. ಹಾಗೆಯೇ ನನ್ನ ಅವಿಧೇಯನಾದ ನಾಲಿಗೆಯು ಒರಟುತನದಿಂದ ನಿನ್ನನ್ನು ಸ್ತುತಿಸಿದರೂ ನೀನು ಅದರಲ್ಲಿ ಗುಣವನ್ನೇ ಗ್ರಹಿಸತಕ್ಕದ್ದು. ಅದೇಕೆಂದರೆ ನೀನು **ಕಾರಣಃ** - ಇದಕ್ಕೆಲ್ಲಾ ದಕ್ಕೂ ಜಗತ್ಸೃಷ್ಟಿ ಮೊದಲಾದವುಗಳಿಗೂ ಸಹ ನೀನೇ ಕಾರಣವು. ನಿನ್ನದಾದ ನಾಲಿಗೆಯು ಸ್ತುತಿಸಿತು. ಅದೂ ಅಲ್ಲದೆ ನೀನು **ಕರುಳಕ್ಕೊಡಿಯಾನೇ**-ನಾಲಿಗೆ ಮಾಡಿದಪರಾಧವನ್ನು ಸಹಿಸಲೇ ಬೇಕು, ಅದೇನೆಂದರೆ ನೀನು ಅಘಟಿತಘಟನಾಶಕ್ತಿಯುಳ್ಳವನೆಂದೂ, ಭಕ್ತರ ಅಪರಾಧಗಳನ್ನು ಕ್ಷಮಿಸುವನೆಂದೂ, ಆಶ್ರಿತರಕ್ಷಕನೆಂದೂ, **ಕೊಡಿಯಾನೆ** - ಧ್ವಜಪಟವನ್ನು ಏರಿಸಿದವನಲ್ಲವೇ,

ಇಲ್ಲಿಯೂ ವಾಚಾ ಕೈಂಕರ್ಯವು ಉಪಪಾದಿಸಲ್ಪಟ್ಟಿತು.

೧೩. ಮುದಿಲ್ ತಿರುವಂದಾದಿ. ೧೧ "**ನಾಯ್** - ವಾಗಿಂದ್ರಿಯವು, **ಅವನನ್ನೈಯಲ್ಲದು**-ಆ ಸರ್ವೇಶ್ವರನನ್ನಲ್ಲದೆ ಇತರರನ್ನು **ವಾಳಿತ್ತಾದು**-ಸ್ತೋತ್ರ ಮಾಡಲಾರದು. ಇದರಲ್ಲಿ ಇಂದ್ರಿಯಗಳ ಸಾರ್ಥಕ್ಯರೂಪ ಕೈಂಕರ್ಯಗಳು ಹೇಳಲ್ಪಟ್ಟಿರುತ್ತವೆ :—

> **ನಾಯುವನ್ನೈ ಯಲ್ಲದು ವಾಳ್ತ್ತಾದು, ಕೈಯುಲಗಂತ್**
> **ತಾಯವನ್ನೈ ಯಲ್ಲದು ತಾನ್ತೊಳಾ—ಪೇಯ್ ಮುಲೈನ**
> **ಞ್ಞಾಣಾಗ ವುಣ್ಡಾನುರುವೋಡು ಪೇರಲ್ಲಾಲ್**
> **ಕಾಣಕಣ್ ಕೇಳಾಶೆವಿ.**

ಇದರರ್ಥವು. ವಾಕ್ಕು ಈ ಸರ್ವೇಶ್ವರನನ್ನಲ್ಲದೆ ಇತರರನ್ನು ಸ್ತುತಿಸಲಾರದು. **ಕೈ** - ಹಸ್ತವು **ಉಲಕಂ ತಾಯುವನ್ನೈಯಲ್ಲದು** - ಈ ಭೂಲೋಕವನ್ನೇ ರಕ್ಷಿಸುವವನನ್ನು ತ್ಯಜಿಸಿ, **ತಾನ್ ತೊಳಾ** - ತಾನೇ ನಮಸ್ಕರಿಸಲಾರದು. **ಪೇಯ್** - ಪಿಶಾಚಿಯಾದ ಪೂತನಿಯ **ಮುಲೈನಂಜುಂಡಾನ್** ಸ್ತನದ ವಿಷವನ್ನು ಪರಿಗ್ರಹಿಸಿದ ಶ್ರೀ ಕೃಷ್ಣನ, **ಉರುವಲ್ಲಾಲ್** - ದಿವ್ಯಮಂಗಳ ವಿಗ್ರಹವಲ್ಲದೆ ಬೇರೆ ಯಾವುದನ್ನೂ, **ಕಣ್** - ನನ್ನ ಕಣ್ಣು, **ಕಾಣಾ** - ಕಾಣಲಾರದು, ನನ್ನ **ಶೆವಿ** - ಕಿವಿಯು, **ಪೇರಲ್ಲಾಲ್** ಆತನ ದಿವ್ಯನಾಮಗಳಲ್ಲದೆ ಬೇರೆ ಯಾವದನ್ನೂ,

(೧೪) "ತೋಳುವನ್ನೈಯಲ್ಲಾಲ್ ತೊಳಾ" ಎನ್ನುವ್,

ಕೇಳಾ - ಕೇಳವಲ್ಲದು. ಸರ್ವೇಶ್ವರನಿಗೆ ಮಾತ್ರವೇ ಪ್ರತಿ ಇಂದ್ರಿಯವೂ ತನಗೆ ಸಾಧ್ಯವಾದ ಕೈಂಕರ್ಯಗಳನ್ನು ಮಾಡಿ ಸಾರ್ಥಕ್ಯವನ್ನು ಹೊಂದಬೇಕೇ ಹೊರತು ತನ್ನ ಸ್ವರೂಪವನ್ನು ಹಾಳುಮಾಡಿಕೊಳ್ಳಕೂಡದೆಂಬ ತಾತ್ಪರ್ಯವು. ವಾಗಿಂದ್ರಿಯವು ಆತನನ್ನೇ ಸ್ತುತಿಸತಕ್ಕದ್ದು, ಹಸ್ತವು ಆತನನ್ನೇ ಅರ್ಚಿಸತಕ್ಕದು. ಕಣ್ಣು ಆತನ ದಿವ್ಯಮಂಗಳ ವಿಗ್ರಹವನ್ನೇ ದರ್ಶನಮಾಡತಕ್ಕದ್ದು, ಕಿವಿಯು ಆತನ ದಿವ್ಯನಾಮಗಳನ್ನೂ ಸ್ತೋತ್ರಗಳನ್ನೂ ಕೇಳತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ. ಈ ಸಂದರ್ಭದಲ್ಲಿ "ಜಿಹ್ವೇ ಕೀರ್ತಯ ಕೇಶವಂ ಮುರರಿಪುಂ ಚೇತೋ ಭಜ ಶ್ರೀಧರಂ" ಎಂಬ ಮುಕುಂದಮಾಲಾ ಸ್ತೋತ್ರವೂ ಮತ್ತು

> ವಾಣೀ ಗುಣಾನುಕಥನೇ ಶ್ರವಣಂ ಕಥಾಯಾಂ ಹಸ್ತೌ ಚ
> ಕರ್ಮಸು ಮನಸ್ತವ ಪಾದಯೋರ್ನಃ। ಸ್ಮೃತ್ಯಾಂ ಶಿರಸ್ತವನಿವಾಸ
> ಜಗತ್ಪ್ರಣಾಮೇ ದೃಷ್ಟಿಸ್ಸತಾಂ ದರ್ಶನೇಸ್ತು ಭವತ್ತನೂನಾಂ॥"

ಎಂಬ ಭಾಗವತ ಶ್ಲೋಕವೂ ಅನುಸಂಧೇಯವು. ಇದು ನಳಕೂಬರ ಮಣಿಗ್ರೀವರು ಶ್ರೀಕೃಷ್ಣನನ್ನು ನಮಿಸಿ ಪ್ರಾರ್ಥಿಸುವ ಪ್ರಕರಣವು. ನಮ್ಮ ವಾಕ್ಕು ನಿನ್ನ ಕಲ್ಯಾಣಗುಣಗಳ ಸ್ತೋತ್ರದಲ್ಲೂ, ಕಿವಿಯು ನಿನ್ನ ಅತ್ಯದ್ಭುತ ದಿವ್ಯಚೇಷ್ಟಿತಗಳನ್ನು ಕೇಳುವದರಲ್ಲೂ, ಕೈಗಳು ನಿನ್ನ ಪೂಜಾರೂಪಕರ್ಮಗಳಲ್ಲೂ, ಮನಸ್ಸು ನಿನ್ನ ಪಾದಕಮಲಗಳನ್ನು ಸ್ಮರಿಸುವದರಲ್ಲೂ, ಓ ಜಗತ್ತಿನ್ನೇ ನಿವಾಸವಾಗಿ ಉಳ್ಳ ಶ್ರೀಕೃಷ್ಣನೇ, ಶಿರಸ್ಸು ನಿನ್ನ ಪ್ರಣಾಮದಲ್ಲೂ, ನಮ್ಮ ದೃಷ್ಟಿಯು ನಿನ್ನ ಅಂಶಭೂತರಾಗಿ ನಿನ್ನ ಶರೀರವಾಗಿರುವ ಭಾಗವತೋತ್ತಮರುಗಳನ್ನು ದರ್ಶನಮಾಡುವದರಲ್ಲೂ, ಪ್ರವರ್ತಿಸುವ ಹಾಗೆ ಅನುಗ್ರಹಿಸತಕ್ಕದ್ದು.

೧೪. ಮುದಲ್ ತಿರುವಂದಾದಿ ೬೩

> "ತೋಳವನ್ನೈಯಲ್ಲಾಲ್ ತೊಳಾ, ಎನ್ ಶೆವಿಯಿರಣ್ಡುಮ್
> ಕೇಳವನದಿ ಮೊಳಿಯೇ ಕೇಟ್ಟಿರುಕ್ಕುಮ್ - ನಾಣಾಳುಮ್
> ಕೋಣಾಗಣೈಯಾನ್ ಕುರೈ ಕಳಲೇ ಕೂರುಮದೇ
> ನಾಣಾಮ್ನೈನಳ್ಳೇನ್ ನಯಮ್" ಎಂಬುವದು ಈ ಪಾಶುರವು.

ತೋಳ್ - ಕೈಗಳು, ಅವನ್ನೈಯಲ್ಲಾಲ್ - ಆ ಸರ್ವೇಶ್ವರನನ್ನಲ್ಲದೆ, ತೊಳಾ ಅಂಜಲಿಯನ್ನು ಮಾಡಲಾರದು, ಅಥವಾ ಅರ್ಚಿಸಲಾರದು ಏಕೆಂದರೆ:— ಎನ್ ಶೆವಿಯಿರುಣ್ಡುಮ್-ನನ್ನ ಕಿವಿಗಳೆರಡೂ, ಕೇಳ್ ಸರ್ವಬಂಧುವಾದ, ಅವ

(೧೫) ನಯವೇ̃ ಪಿರರ್ ಪೊರುಳ್ಕ್ಕೆ" ಎನ್ನುಮ್,

ನದು ಆ ಸರ್ವೇಶ್ವರನ, ಇನ್ ಮೊಳಿಯೇ-ಮಧುರವಾದ ದಿವ್ಯಸೂಕ್ತಿಗಳನ್ನು, ಕೇಟ್ಟಿರುಕ್ಕುಂ -ಕೇಳಿರುತ್ತವೆ. ನಾ-ನನ್ನ ನಾಲಿಗೆಯಾದರೋ, ನಾಳುಮ್ - ಯಾವಾಗಲೂ, ಕೊಳ್ ನಾಗ - ಸಾಮರ್ಥ್ಯವುಳ್ಳ ಸರ್ಪವಾದ ಆದಿಶೇಷನನ್ನು ಅಣೈಯಾನ್-ಹಾಸಿಗೆಯಾಗಿ ಉಳ್ಳವನ, ಕುರೈಕಳಲೇ - ಆಭರಣಗಳಿಂದ ಧ್ವನಿ ಮಾಡುತ್ತಿರುವ ಪಾದಗಳನ್ನು, ಕೂರುವುದೇ - ಅನುಸಂಧಾನಮಾಡುವುದು, ನಾಣಮ್ಮೈ - ನಾಚಿಕೆಯಿಲ್ಲದೆ, ನಳ್ಳೇನ್-ವಿಷಯಗಳನ್ನು ಹತ್ತಿರ ಬರಕೊಡಿಸೆನು ನಯಮ್-ಇದೀಗ ನೀತಿಯು. ಇಲ್ಲಿಯೂ ಉತ್ತರಕೃತ್ಯವು ಹೇಳಲ್ಪಟ್ಟಿತು.

೧೫. ಮುದಿಲ್ ತಿರುವಂದಾದಿ. ೬೪.

"ನಯವೇ̃ ಪಿರರ್ ಪೊರುಳ್ಕ್ಕೆ ನಳ್ಳೇ̃ ಕೀಳಾರೋಡು
ಉಯವೇ ನುಯರ್ನ್ದವರೋಡಲ್ಲಾಲ್-ವಿಯವೇ̃
ತಿರುಮಾಲ್ಲೈಯಲ್ಲದು ದೆಯ್ವ ಮೆನ್ರೇತ್ತೇ̃
ವರುಮಾರೇ̃ ನಮ್ಮೇಲ್ ವಿನೈ

ಪಿರರ್ – ತನಗಿಂತಲೂ ವಿಲಕ್ಷಣನಾಗಿ ಬೇರೆಯಾಗಿರುವ ಸರ್ವೇಶ್ವರನ, ಪೊರುಳ್ಕ್ಕೆ - "ಯಸ್ಯಾತ್ಮಾ ಶರೀರಂ" ಎಂದು ಹೇಳಿರುವ ಹಾಗೆ ಆ ಸ್ವಾಮಿಯು ಸ್ವತ್ತಾದ ಈ ಆತ್ಮನನ್ನು, ನಯವೇ̃ - ಆಶಿಪಡುವದಿಲ್ಲವೆಂದರೆ ನನ್ನದು ಎಂಬ ಭ್ರಮೆಯನ್ನು ಇಡುವದಿಲ್ಲವು; "ಅನ್ಯಥಾ ಸಂತಮಾತ್ಮಾನಂ ಯೋನ್ಯಥಾ ಪ್ರತಿಪದ್ಯತೇ । ಕಿಂ ತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ" ಎಂದುಹೇಳಿರುವ ಹಾಗೆ ಆತ್ಮಾ ತನ್ನದು ಎಂಬ ಭ್ರಮೆಯುಳ್ಳ ಕೀಳಾಗಿರುವ ಸಂಸಾರಿಗಳೊಂದಿಗೆ, ನಳ್ಳೇನ್ - ಸೇರುವದಿಲ್ಲವು. ಉಯರ್ನ್ದವರೋಡಲ್ಲಾಲ್ -ಸರ್ವೋತ್ಕೃಷ್ಟರಾದ ಭಾಗವತರೊಂದಿಗಲ್ಲದೆ, ಇತರರೊಂದಿಗೆ, ಉಯವೇನ್-ಸಹವಾಸವನ್ನು ಮಾಡೆನು, ತಿರುಮಾಲೈಯಲ್ಲದು - ಶ್ರಿಯಃಪತಿಯಲ್ಲದೆ ಬೇರೆ, ಯಾರನ್ನೂ ದೇಯ್‌ವಮೆನ್ರು-ಪರದೇವತೆಯೆಂದು, ಏತ್ತೇನ್ ಸ್ತೋತ್ರಮಾಡುವದಿಲ್ಲವು ಮತ್ತು ವಿಯವೇ̃ - ಆಶ್ಚರ್ಯಪಡುವದೂ ಇಲ್ಲವು. ನಮ್ಮೇಲ್‌ವಿನೈ ನಮ್ಮ ಮೇಲೆ ಪಾಪವು. ವರುಮಾರೇ̃ ಬರುವ ರೀತಿಯು ಹೇಗೆ ಪಾಪಕ್ಕೆ ಕಾರಣವೇ ಇಲ್ಲವೆಂಬ ಭಾವವು. ಇದರಿಂದ ಅಹಂಕಾರ ಮಮಕಾರ ನಿವೃತ್ತಿರೂಪ ಕೈಂಕರ್ಯವು ಹೇಳಲ್ಪಟ್ಟಿತು.

(೧೬) "ನಿರನ್ತರಂ ನಿನೈಪ್ಪದಾಗ ನೀ ನಿನೈಕ್ಕ ವೇಣ್ಡುಮೇ" ಎನ್ರುಮ್, (೧೭) "ಇರುಳಿರಿಯು",

---

೧೬. ತಿರುಚ್ಛಂದ ವಿರುತ್ತಂ ೧೧೧.

"ಇರನ್ದುರೈಪ್ಪದುಣ್ಡು ವಾಳಿ ಯೇಮ ನೀರ್ ನಿರತ್ತಮಾ
ವರನ್ತರುನ್ದಿರುಕ್ಕುರಿಪ್ಪಿಲ್ ವೈತ್ತದಾಗಿಲ್ ಮನ್ನುಶೀರ್
ಪರನ್ದ ಶಿನ್ದೈಯೊನ್ರಿ ನಿನ್ರು ನಿನ್ನ ಪಾದ ಪಙ್ಕಯಮ್
ನಿರನ್ತರಂ ನಿನೈಪ್ಪದಾಗ ನೀ ನಿನೈಕ್ಕ ವೇಣ್ಡುಮೇ"

ಎಂಬುವದು ಪೂರಾ ಪಾಶುರವು. ಇದರರ್ಥವು—ಏಮ - ಮಹತ್ವಾಗಿರುವ, ನೀರ್‌ನಿರತ್ತು, ನೀರ್ - ಸಮುದ್ರದ ಹಾಗೆ ಅಪರಿಚ್ಛಿನ್ನವಾದ, ನಿರತ್ತೆ ಎಂದರೆ ವರ್ಣವನ್ನು ಹೊಂದಿರುವ, ಅಮಾ - "ಅಹಂವೋಬಾಂಧವೋಜಾತಃ"ಎಂದು ಹೇಳಿರುವ ಹಾಗೆ ನಿರುಪಾಧಿಕ ಬಂಧುವೇ, ಇರನ್ದು - ಯಾಚಿಸಿ, ಉರೈಪ್ಪದು ಉಂಡು – ವಿಜ್ಞಾಪಿಸಿಕೊಳ್ಳುವದು ಒಂದುಂಟು. ವಾಳಿ - ಮಂಗಳಾಶಾಸನವು ; ವರನ್ತರುಂ ಕೃಪೆಯನ್ನು ಮಾಡುವದೇ ಸ್ವಭಾವವಾದ, ತಿರುಕ್ಕುರಿಪ್ಪಿಲ್ ವೈತ್ತದಾಗಿಲ್ - ನನಗೆ ಅನುಗ್ರಹಿಸುವದಾಗಿ ನಿಮ್ಮ ಚಿತ್ತದಲ್ಲಿದ್ದರೆ, ಮನ್ನು – ಸ್ಥಿರವಾದ, ಶೀರ್ - ಕೈಂಕರ್ಯ ಸಾಮ್ರಾಜ್ಯರೂಪ ಶ್ರೀಯಸ್ಸನ್ನು, ಪರನ್ದ – ವಿಷಯಗಳಲ್ಲಿ ಪ್ರವರ್ತಿಸುವ, ಶಿನ್ದೈ ನನ್ನ ಮನಸ್ಸು, ಒನ್ರಿ ನಿನ್ರು - ಹೀಗೆ ಒಂದರಲ್ಲೂ ಪ್ರವರ್ತಿಸದೆ ನಿನ್ನೊಂದಿಗೇ ಇರುವ ಹಾಗೆ, ನಿನ್ ಪಾದ ಪಂಕಯಮ್ - ನಿನ್ನ ಪಾದಕಮಲವನ್ನು, ನಿರನ್ತರಂ - ವಿಚ್ಛೇದವಿಲ್ಲದ ಹಾಗೆ ಸದಾ, ನಿನೈಪ್ಪದಾಗ - ಧ್ಯಾನಿಸುವ ಹಾಗೆ, ನೀ ನಿನೈಕ್ಕ ವೇಣ್ಡುಂ - ನೀನು ಅನುಗ್ರಹಿಸಿ ಸಂಕಲ್ಪಿಸತಕ್ಕದ್ದು. ಇಲ್ಲಿ ಸದಾ ಧ್ಯಾನರೂಪ ಕೈಂಕರ್ಯವು ಹೇಳಲ್ಪಟ್ಟಿತು.

೧೭. ಶ್ರೀಕುಲಶೇಖರಾಳ್ವಾರವರು ಅನುಗ್ರಹಿಸಿದ ಪೆರುಮಾಳ್ ತಿರುಮೊಳಿ ೧-೧,

"ಇರುಳಿರಿಯಚ್ಚುಡರ್ ಮಣಿಗಳಿಮೈಕ್ಕುಮ್‌ನೆತ್ತಿ ।
ಇನತ್ತುತ್ತಿಯಣಿಪಣವಾಯಿರಙ್ಗಳಾರ್‌ನ್ದ ।
ಅರವರಶಪ್ಪೆರುಮ್‌ಶೋದಿಯನನ್ದನೆನ್ನುಮ್ ।
ಅಣಿವಿಳಙ್ಗುಮುಯರ್ ವೆಳ್ಳೈಯಣೈಯೈಮೇವಿ ।
ತಿರುವರಙ್ಗಪ್ಪೆರುನಗರುಳ್ ತೆಣ್ಣೀರ್ ಪ್ಪೊನ್ನಿ ।
ತಿರೈಕ್ಕೈಯಾಲಡಿವರುಡಪ್ಪಳ್ಳಿಕೊಳ್ಳುಮ್ ।
ಕರುಮಣಿಯೈಕ್ಕೋಮಳತ್ತೈಕ್ಕಂಡುಕೊಂಡೇನ್ ।
ಕಣ್ಣಿಣೈಕಳೆನ್ರುಕೊಲೋಕಳಿಕ್ಕು ನಾಳೇ ।

(೧೮) "ಊನೇರು ಶೆಲ್‌ವತ್ತು",

ತಿರುವ ರಙ್ಗಮ್ – ಶ್ರೀರಂಗವೆಂಬ, **ಪೆರುನಗರುಳ್**-ಮಹಾನಗರದಲ್ಲಿ, **ಇರುಳಿರಿಯ** – ಅಂಧಕಾರ ಹೋಗುವ ಹಾಗೆ, **ಶುಡರ್ ಮಣಿಗಳ್** - ಕಾಂತಿಯುಳ್ಳ ಮಣಿಗಳು, **ಇನ್ಮೈಕ್ಕುಮ್** ನೆತ್ತಿ - ಪ್ರಕಾಶಿಸುತ್ತಿರುವ ಮುಖವು, **ಇನಂ** - ಅನುರೂಪವಾದ, **ತುತ್ತಿ** – ಸರ್ವೇಶ್ವರನ ಪಾದವನ್ನು ಹೋಲುವ ಹೆಡೆಯಲ್ಲಿರುವ ಚಿಹ್ನೆಯನ್ನು, **ಅಣಿ** - ಹೊಂದಿರುವ, **ಆಯಿರಮ್ ಪಣಙ್ಗಳ್** - ಸಾವಿರ ಹೆಡೆಗಳನ್ನು, **ಆರ್‌ನ್ದ** - ಪೂರ್ಣವಾಗಿ ಹೊಂದಿರುವ, **ಅರವು ಅರುಶ** - ಉರಗ ರಾಜನು, ಸರ್ಪರಾಜನೆಂಬ, **ಪೆರುಂ ಶೋದಿ** - ಅಧಿಕ ತೇಜಸ್ಸನ್ನು ಹೊಂದಿದ, **ಅನಂದನೆನ್ನುಂ** - ಆದಿಶೇಷನೆಂಬ, **ಅಣಿವಿಳಙ್ಗುಮ್** - ಸೌಂದರ್ಯಾತಿಶಯವುಳ್ಳ, **ಉಯರ್** - ಮಹಿಮೆಯುಳ್ಳ, **ವೆಳ್ಳೈಯಣೈಯೈ** - ಸ್ವಚ್ಛವಾಗಿರುವ ಹಾಸಿಗೆಯನ್ನು, **ಮೇವಿ** - ಆಶ್ರಯಿಸಿ, **ತೆಳ್ ನೀರ್** - ನಿರ್ಮಲವಾಗಿ ಸ್ವಚ್ಛವಾಗಿರುವ ನೀರುಳ್ಳ, **ಪೊನ್ನಿ** – ಕಾವೇರೀ ನದಿಯು, **ತಿರೈಕ್ಕೈಯ್ಯಾಲೆ** - ತನ್ನ ಅಲೆಗಳೆಂಬ ಕೈಗಳಿಂದ, **ಅಡಿವರುಡ**-ಶ್ರೀರಂಗನಾಥನ ಪಾದಕಮಲವನ್ನು ಸ್ಪರ್ಶಿಸುವದಕ್ಕಾಗಿ, **ಪಳ್ಳಿಕೊಳ್ಳುಮ್ ಕರುಮಣಿಯೈ** - ಶಯನಿಸಿರುವ ಒಂದು ನೀಲರತ್ನದೋಪಾದಿಯಲ್ಲಿ ಪ್ರಕಾಶಿಸುತ್ತಲಿರುವವನಾಗಿ, **ಕೋಮಳತ್ತೈ** - ನಿರತಿಶಯ ಲಾವಣ್ಯ ಸೌಕುಮಾರ್ಯಾದಿಗಳನ್ನು ಹೊಂದಿರುವ ಶ್ರೀರಂಗನಾಥನ, **ಎನ್‌ಕಣ್ಣಿಣೈಗಳ್** - ನನ್ನ ಎರಡು ಕಣ್ಣುಗಳು, **ಕಣ್ಣುಕೊಂಡು** - ದರ್ಶನಮಾಡಿ, **ಕಳಿಕ್ಕುಮ್‌ನಾಳ್** - ಆನಂದಿಸುವ ದಿನವು, **ಎನ್ನುಕಾಲೋ** – ಯಾವಾಗಲೋ ? ಇಲ್ಲಿಯೂ ಲೋಚನಗಳ ಸಾರ್ಥಕ್ಯವು ಉಪಪಾದಿಸಲ್ಪಟ್ಟಿತು.

೧೮. ಪೆರುಮಾಳ್ ತಿರುಮೊಳಿ. ೪. ೧.

ಊನೇರು ಶೆಲ್ವತ್ತುಡಪ್ಪಿರ ವಿಯಾನ್ ವೇಣ್ಡೇನ್
ಆನೇರೇಳ್ ವೆನ್ರಾ ನಡಿಮೈತ್ತಿರಮಲ್ಲಾಲ್
ಕೂನೇರು ಶಙ್ಖಮಿಡತ್ತಾನ್ರನ್ ವೇಙ್ಗಡತ್ತು
ಕ್ಕೋನೇರಿ ವಾಳುಮ್ ಕುರುಕಾಯ್‌ಪ್ಪಿರಪ್ಪೇನೇ ॥

ಯಾನ್ - ವಿವೇಕ ಜ್ಞಾನವನ್ನು ಸರ್ವೇಶ್ವರನ ಮತ್ತು ಆಚಾರ್ಯರ ಕೃಪೆಯಿಂದ ಹೊಂದಿರುವ ನಾನು, **ಆನೇರೇಳ್** – ಸಪ್ತ ವೃಷಭಗಳನ್ನೂ, **ವೆನ್ರಾನ**-ಭೂಮಿ ದೇವಿಗಾಗಿ, ನಿರಸನ ಮಾಡಿದ ಶ್ರೀನಿವಾಸನಿಗೆ, **ಅಡಿಮೈತ್ತಿರಮಲ್ಲಾಲ್** - ಕೈಙ್ಕರ್ಯ ಮಾಡುವದನ್ನು ಬಿಟ್ಟು, **ಊನೇರು** - ಮಾಂಸಪ್ರಚುರವಾಗಿ, **ಶೆಲ್ವ**

(೧೯) "ನೀಣಾಕಂ ಶುಱ್ಱಿ" ಎಜ್ಞರ ತಿರುಮೊಳಿಗಳಿಲುಮ್,

ಮ್ - ಅನಿತ್ಯವಾದ ಐಶ್ವರ್ಯವುಳ್ಳ, **ಉಡಲ್ ಪಿರವಿ** - ಮನುಷ್ಯ ಜನ್ಮವನ್ನು, **ವೇಣ್ಡೇನ್**-ಅಪೇಕ್ಷಿಸಲಾರೆನು. **ಕೋನ್ ಏರು**-ಭಗವದನುಭವದಿಂದ ಅಭಿವೃದ್ಧಿ ಹೊಂದಿದ, **ಶಜ್ಗಮ್** - ಶ್ರೀಪಾಂಚಜನ್ಯವನ್ನು, **ಇಡತ್ತಾನ್ ತನ್** - ಎಡಗೈಯಲ್ಲಿ ಹೊಂದಿರುವ, **ವೇಜ್ಗಡತ್ತು** – ತಿರುಮಲೆಯಲ್ಲಿರುವ ಶ್ರೀನಿವಾಸನ, **ಕೋನೇರಿ** - ತಿರುಕ್ಕೋನೇರಿ ಎಂದರೆ ಸ್ವಾಮಿ ಪುಷ್ಕರಣಿಯಲ್ಲಿ, **ವಾಳುಮ್** - ಜೀವಿಸಿಕೊಂಡಿರುವ, **ಕುರುಕಾಯ್** - ಪಕ್ಷಿಯಾಗಿ, **ಪಿರಪ್ಪೇನ್** - ಹುಟ್ಟುವೆನು. ಇದರಿಂದ ಈ ಮನುಷ್ಯಜನ್ಮಕ್ಕೆ ಶ್ರೀನಿವಾಸಕೈಂಕರ್ಯವೇ ಸಾರ್ಥಕ್ಯವೆಂದ ಹೇಳಿರುತ್ತಾರೆ.

೧೯. ಪೆರಿಯ ತಿರುಮೊಳಿ. ೧೧

ನೀಣಾಗಮ್ ಶುಱ್ಱಿ ನೆಡುವರೈ ನಟ್ಟಾಲ್ ಕಡಲೈ।
ಪ್ಪೇಣಾನ್ ಕಡೈನ್ದ ಮುದಮ್ ಕೊಂಡುಗನ್ದ ಪೆಮ್ಮಾನೈ ॥
ಪ್ಪೂಣಾರ ಮಾರ್ವನೈಪ್ಪುಳ್ಳೂರುಮ್ ಪೊನ್ಮಲೈಯೈ
ಕ್ಕಾಣಾದಾರ್ ಕಣ್ಣೆನ್ರುಮ್ ಕಣ್ಣಲ್ಲ ಕಂಡೋಮೇ ಎಂಬುವದ

ಪೂರಾಪಾಶುರವು, ಇದರರ್ಥವು—**ನೀಳ್** - ಉದ್ದವಾದ, **ನಾಗಮ್** - ಹಾವಾದ ವಾಸುಕಿಯನ್ನು, **ಶುಱ್ಱಿ** - ಹಗ್ಗವಾಗಿ ಸುತ್ತಿ, **ನೆಡುವರೈನಾಟ್ಟಿ** - ಮಂದರಪರ್ವತವನ್ನು ಕಡಗೋಲಾಗಿಮಾಡಿ, **ಆಳ್ ಕಡಲೈ** - ಆಳವಾದ ಸಮುದ್ರವನ್ನು, **ಪೇಣಾನ್** - ನಮಗೆ ಈ ವಾಸುಕಿ ಹಾಸಿಗೆ ಎಂದು ಎಣಿಸದವನಾಗಿ, **ಕಡೈನ್ದು** - ಮಥಿಸಿ, **ಅಮುದಂ ಕೊಂಡು** - ಇತರರಿಗೆ ಸುಖವನ್ನುಂಟುಮಾಡುವದೇ ತನಗೆ ಸ್ವರೂಪವೆಂದು ಭಾವಿಸಿ ಶ್ರಮಪಟ್ಟು, ಅಮೃತವನ್ನು ತಂದುಕೊಟ್ಟ, **ಉಗನ್ದ ಪೆಮ್ಮಾನೇ** - ಅನುಗ್ರಹಿಸಿದ ಸರ್ವಸ್ವಾಮಿಯೇ, **ಪೂಣಾರ್ ಮಾರ್ವನೈ** - ವನಮಾಲೆಯಿಂದ ಅಲಂಕೃತವಾದ ದಿವ್ಯವಕ್ಷಸ್ಥಳವುಳ್ಳವನಾಗಿ, ಇಲ್ಲಿ ಹಾರವನ್ನು ಹೇಳಿದುದು, ವಕ್ಷಸ್ಥಳವನ್ನು ಸಮುದ್ರಮಥನಕಾಲದಲ್ಲಿ ಅಲಂಕರಿಸಿದ ಶ್ರೀಮಹಾಲಕ್ಷ್ಮಿಗೂ, ಕೌಸ್ತುಭಮಣಿಗೂ ಉಪಲಕ್ಷಣವು, ಲಕ್ಷ್ಮಿಯು ಅನುಗ್ರಹಮಯಳಾಗಿ ಭಕ್ತರನ್ನು ಅನುಗ್ರಹಿಸಲು ಕಾದಿರುವವಳು, ಕೌಸ್ತುಭವು, ಭಕ್ತನಾದ ಆತ್ಮನು ಸರ್ವೇಶ್ವರನಿಗೆ ತುಂಬಾ ಹೃದ್ಯನೆಂಬುವದನ್ನು ಸೂಚಿಸುತ್ತದೆ. **ಪುಳ್ಳೂರುಮ್** - ಗರುಡಾರೂಢನಾಗಿರುವ **ಪೊನ್ಮಲೈಯೈ** - "ಧಾತೂನಾಮಿವಶೈ

(೨೦) **ಪತ್ಯುಃ ಪ್ರಜಾನಾ ಮೈಶ್ವರ್ಯಂ ಪಶೂನಾಂ ವಾ ನ ಕಾಮಯೇ। ಅಹಂ ಕದಂಬೋ ಭೂಯಾಸಂ ಕುಂದೋ ವಾ ಯಮುನಾತಟೇ।" ಎನ್ರುಮ್**

ಲೇಂದ್ರೋ ಗುಣಾನಾಂ ಆಕರೋಮಹಾನ್ ಎಂಬಂತೆ ಸುವರ್ಣಮಯವಾದ ಪರ್ವತದ ಹಾಗಿರುವವನನ್ನು ; ಗಜೇಂದ್ರನ ಸಂರಕ್ಷಣೆಯಲ್ಲಿ ತೋರಿ ಬಂದ ಪ್ರಕಾರ ಆಶ್ರಿತರ ಆರ್ತಿಗಳನ್ನು ಬಿಡಿಸಲು ಬೇಕಾದ ಶೀಘ್ರಗಮನ ಸಾಧನೆಯಿಂದಲೂ, ರಕ್ಷಣೋಪಯುಕ್ತ ಕಲ್ಯಾಣಗುಣಗಳೇ ಮೊದಲಾದ ಸರ್ವಪರಿಕರಗಳಿಂದಲೂ, ಯುಕ್ತನಾಗಿರುವವನನ್ನು, ಮತ್ತು **ಪೊನ್ಮಲೆ** ಎಂದು ಹೇಳಿದುದರಿಂದ ಭಕ್ತರಿಗೆ ಪರಮಭೋಗ್ಯಭೂತನಾದವನನ್ನು, **ಕಾಣಾದಾರ್** - ನೋಡದೇ ಇರುವವರ, **ಕಣ್** - ಕಣ್ಣುಗಳು, **ಎನ್ರುಮ್** - ಒಂದು ದಿನವೂ, **ಕಣ್ಣಲ್ಲಾ** - ಯೋಗ್ಯವಾದ ಕಣ್ಣುಗಳಲ್ಲವು ಎಂಬದಾಗಿ, **ಕಣ್ಡೋಮೇ**-ನಾವು ತಿಳಿದಿರುವೆವು. ಇಲ್ಲಿ ಚಕ್ಷುರಿಂದ್ರಿಯದ ಸಾರ್ಥಕ್ಯವು ಉಪಪಾದಿಸಲ್ಪಟ್ಟಿತು. ನಮ್ಮಗಳ ಯೋಗಕ್ಷೇಮವನ್ನು ವಹಿಸಲು ಯೋಗ್ಯನೆಂದು ಹಿಂದಿನ ದಿವ್ಯಚೇಷ್ಟಿತದಿಂದ ಪ್ರಸಿದ್ಧನು. ಹಾಗೆ ರಕ್ಷಿಸಬೇಕೆಂಬ ಕುತೂಹಲಕ್ಕೆ ಬೇಕಾದ ದಿವ್ಯಕಲ್ಯಾಣಗುಣಗಳುಳ್ಳವನು ಆತನನ್ನನುಭವಿಸಲು ದಿವ್ಯಲಾವಣ್ಯಯುಕ್ತನು, ಆಶ್ರಿತನನ್ನು ಕಾಪಾಡಲು ಸರ್ವಸೌಕರ್ಯಯುಕ್ತನು, ಇಂಥಾವನನ್ನು ಪರಮಭಕ್ತಿವಿಶ್ವಾಸದಿಂದ ನೋಡದಕಣ್ಣು ಅದು ಕಣ್ಣೇ ಎಂದು ಅದನ್ನು ನಿಂದಿಸುತ್ತಾರೆ.

"ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ॥
ನಿಂದಿತಸವಸೇ ಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ"

ಎಂಬ ರಾಮಾಯಣ ಶ್ಲೋಕವು ಇಲ್ಲಿ ಅನುಸಂಧೇಯವು ಅಯೋಧ್ಯಾ. ೧೭-೧೪

(೨೦) **ಪ್ರಜಾನಾಂ ಪತ್ಯುಃ** – ಪ್ರಜೆಗಳಿಗೆ ಪತಿಯಾದ ಚತುರ್ಮುಖನ, ಐಶ್ವರ್ಯವನ್ನೂ ಮತ್ತೂ **ಪಶೂನಾಂ ವಾ ಪತ್ಯುಃ** - ಪಶುಗಳಿಗೆ ಪತಿಯಾದ ರುದ್ರನ ಐಶ್ವರ್ಯವನ್ನಾಗಲಿ, **ನಕಾಮಯೇ** - ಅಪೇಕ್ಷಿಸುವದಿಲ್ಲವು, **ಅಹಂ** - ನಾನು, **ಯಮುನಾತಟೇ** - ಶ್ರೀಕೃಷ್ಣ ಪಾದನ್ಯಾಸದಿಂದ ಪವಿತ್ರವಾದ ಯಮುನಾ ತೀರದಲ್ಲಿ, **ಕದಂಬೋ ಕುಂದೋವಾ** - ಆತನಿಗೆ ತುಂಬಾ ಇಷ್ಟವಾದ ಕದಂಬ ಅಥವಾ ಕುಂದ, ವೃಕ್ಷವಾಗಲಿ, **ಭೂಯಾಸಂ** - ಆಗುವೆನು. ಇದರಿಂದ ಸರ್ವೇಶ್ವರನಿಗೆ ಕೈಂಕರ್ಯರೂಪದಲ್ಲಿ ಭೋಗ್ಯಭೂತವಾಗಿರುವದೇ ತನಗೆ ಸ್ವರೂಪವು ಎಂಬುವದು ಹೇಳಲ್ಪಟ್ಟಿತು.

(೨೧) "ಕುರುಷ್ವಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ ।
ಕೃತಾರ್ಥೋಽಹಂ ಭವಿಷ್ಯಾಮಿ ತವ ಚಾರ್ಥಃ ಪ್ರಕಲ್ಪತೇ ।"
(೨೨) ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚ ತೇ"

---

(೨೧) ರಾಮಾ. ಅಯೋಧ್ಯಾ, ೩೧.೨೨ ಶ್ರೀರಾಮನನ್ನು ಕುರಿತು ಲಕ್ಷ್ಮಣನ ವಾಕ್ಯವು.

ಮಾಂ - ಸ್ವಾಭಾವಿಕವಾಗಿ ಶೇಷಭೂತನಾದ ನನ್ನನ್ನು, **ಅನುಚರಂ** - ಆ ಶೇಷವೃತ್ತಿಗನುಗುಣವಾದ ಕೈಂಕರ್ಯಮಾಡಲು ಜೊತೆಯಲ್ಲಿ ಬರುವ ದಾಸನನ್ನಾಗಿ, **ಕುರುಷ್ವ** - ಮಾಡಿಕೋ ಎಂದು ಹೇಳಿರುವದರಿಂದ, ನಿನಗೇ ಮುಖ್ಯ ಪ್ರಯೋಜನವೆಂಬ ಭಾವವು. ಹೀಗೆ ಮಾಡುವದರಲ್ಲಿ **ವೈಧರ್ಮ್ಯಂ ನೇಹ ವಿದ್ಯತೇ** - ನಿನಗೂ ನನಗೂ ಇರುವ ಸೇವ್ಯ ಸೇವಕ ಧರ್ಮಕ್ಕೆ ವಿರುದ್ಧ ವಾದುದು ಯಾವುದೂ ಇರುವದಿಲ್ಲವು, ಎಂದರೆ ನೀನು ಸ್ವಾಮಿಯಾದುದ ರಿಂದ ಸ್ವಾಮಿಧರ್ಮವು ಪೂರ್ಣವಾಯಿತು, ನಾನು ದಾಸನಾದುದರಿಂದ ಸೇವಕ ವೃತ್ತಿಯೂ ಪೂರ್ಣವಾಯಿತು, ಎಂಬಭಿಪ್ರಾಯವು. ಅಥವಾ, ರಾಜಪುತ್ರನಾದ ವನು ಸೇವಾ ವೃತ್ತಿಯನ್ನು ಮಾಡುವದು ಧರ್ಮವಿರುದ್ಧವಲ್ಲವೇ ಎನ್ನು ತ್ತೀಯೋ ಹಾಗೇನೂ ಅಲ್ಲವು, ಏಕೆಂದರೆ ಜ್ಯೇಷ್ಠಭ್ರಾತಾ ಪಿತೃಸಮವಾದುದರಿಂದ ವೈಧರ್ಮ್ಯವೇನೂ ಇಲ್ಲವು; ಸ್ವಾಭಾವಿಕ ಶೇಷಭೂತನಾದರೂ ಸೇವಾವೃತ್ತಿ ಯನ್ನು ಮಾಡಲೇಬೇಕೆಂಬುವದೇನು? ಎಂದರೆ **ಕೃತಾರ್ಥೋಽಹಂ ಭವಿ ಷ್ಯಾಮಿ** - ನಾನು ಕೃತಕೃತ್ಯನಾಗುವೆನು, ಇದೇ ನನಗೆ ಪರಮಪುರುಷಾರ್ಥವಾದು ದರಿಂದ, ಅದಿಲ್ಲದೇ ಇರಲಾರನೆಂಬ ಭಾವವು. ನನಗೆ ಮಾತ್ರವೇ ಪ್ರಯೋಜನ ವಲ್ಲವು, ನಿನಗೂ ಹೆಚ್ಚಿನ ಪ್ರಯೋಜನವುಂಟೆಂದು, **ತವ ಚಾರ್ಥಃ ಪ್ರಕಲ್ಪತೇ**- ನಿನಗೇನೇ ಮುಖ್ಯಪ್ರಯೋಜನವಾಗುತ್ತದೆಂದುಹೇಳಿರುತ್ತಾರೆ. ಕಂದ ಮೂಲ ಫಲ ಪುಷ್ಪಾದಿಗಳನ್ನು ತಂದು ನಿನಗರ್ಪಿಸುವದರಿಂದ ನಿನಗೆ ಅದು ಭೋಗ್ಯಭೂ ತವಾದುದಾಗುತ್ತದೆ". ಎಂಬ ಭಾವವು. ಇದರಿಂದ ಚೇತನನು ಕೈಂಕರ್ಯದಿಂದಲೇ ಕೃತಕೃತ್ಯನೆಂದೂ, ಅದೇ ಶ್ರಿಯಃಪತಿಗೆ ಭೋಗ್ಯಭೂತವಾದುದೆಂದೂ ಹೇಳಲ್ಪ ಟ್ಟಿತು. ಹೇಗೆ ಭೋಗ್ಯಭೂತವೆಂದರೆ ಆಶ್ರಿತರನ್ನು ಉಜ್ಜೀವನಮಾಡಿದ ಪ್ರಯೋ ಜನವು, ಶರಣಾಗತರಕ್ಷಣರೂಪ ವ್ರತವು ನೆರವೇರಿದ ಪ್ರಯೋಜನವು, ಪ್ರಾಪ್ತವಾ ದುದಾಗಿ ಭೋಗ್ಯವು.

(೨೨) ರಾಮಾ. ಅಯೋಧ್ಯಾ ೩೧. ೨೫.

" **ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ** " ಎಂಬು

(೨೩) "ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ।"
ಸ್ವಯಂ ತು ರುಚಿರೇ ದೇಶೇ ಕ್ರಿಯತಾಮಿತಿ ಮಾಂ ವದ,

ವದು **ಪೂರ್ವಾರ್ಧ**ವು. ನೀನಾದರೋ ಸೀತೆಯೊಂದಿಗೆ ಬೆಟ್ಟದ **ತೊಪ್ಪಲು**ಗಳಲ್ಲಿ ವಿಹರಿಸುವನಾಗು, **ಅಹಂ** - ನಿನ್ನ ದಾಸನಾದ ನಾನು, **ಜಾಗ್ರತಃ** - ಎಚ್ಚರವಾಗಿರುವ ಅಥವಾ, **ಸ್ವಪತಃ** - ನಿದ್ರೆಗೈಯುತ್ತಿರುವ, **ತೇ** ನಿನಗೆ, **ಸರ್ವಂ ಕರಿಷ್ಯಾಮಿ**-ಸರ್ವಕಾಲಸರ್ವಾವಸ್ಥೋಚಿತ ಸರ್ವವಿಧಕೈಂಕರ್ಯವನ್ನು ಮಾಡುವೆನು ಹಿಂದಿನ ಎರಡು ಶ್ಲೋಕಗಳಲ್ಲಿ ಸರ್ವದೇಶಕೈಂಕರ್ಯಗಳೂ ಹೇಳಲ್ಪಟ್ಟವು ಈ ಕೈಂಕರ್ಯವು ಲಕ್ಷ್ಮೀವಿಶಿಷ್ಟನಾರಾಯಣನಿಗೇನೆ ಎಂದು ತಿಳಿಸುವದಕ್ಕಾಗಿ, **ವೈದೇಹ್ಯಾಸಹ** ಎಂಬ ಪ್ರಯೋಗವು, ಹೀಗೆ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಸರ್ವವಿಧ ಕೈಂಕರ್ಯಗಳನ್ನೂ ಮಾಡುವದೇ ಶೇಷಭೂತನಾದ ಈ ಪ್ರಪನ್ನನಿಗೆ ಕರ್ತವ್ಯವೆಂದು ಇಲ್ಲಿ ತಿಳಿಸಲ್ಪಟ್ಟಿತು.

(೨೩) ರಾಮಾ. ಅರಣ್ಯ ೧೫ ೭. ಯಾವ ಸ್ಥಳವು ನೀರು ನೆರಳುಗಳಿಗೆ ಆಶ್ರಯವಾಗಿ ರಮಣೀಯವಾಗಿನಿನಗೆ **ಸನ್ನಿಕೃಷ್ಟಂಚ ಯತ್ರಸ್ಯಾತ್ಸ ಮಿತ್ಪುಷ್ಪಕುಶೋದಕಂ"** ಸಮಿತ್ತು, ಪುಷ್ಪ, ದರ್ಭೆ, ಉದಕ, ಇವುಗಳಿಗೆ ಹತ್ತಿರವಾಗಿದೆಯೋ ಅಂತಹ ಸ್ಥಳದಲ್ಲಿ ಒಂದು ಆಶ್ರಮವನ್ನು ನಿರ್ಮಾಣಮಾಡೆಂದು, ಶ್ರೀರಾಮನು ಲಕ್ಷ್ಮಣನಿಗೆ ಹೇಳಲು ; ಅದಕ್ಕಾಲಕ್ಷ್ಮಣನು, ತನ್ನ ಸೌಕರ್ಯವೂ ಸುಖವೂ ಮುಖ್ಯವಲ್ಲೆಂದು ತಿಳಿಸುವದಕ್ಕಾಗಿಯೂ, ಮತ್ತು ಹಿಂದೆ ವನಕ್ಕೆ ಹೊರಡುವ ಕಾಲದಲ್ಲಿ, ಕೌಸಲ್ಯಾಕ್ಷೇಮಾರ್ಥವಾಗಿ ಅಯೋಧ್ಯೆಯಲ್ಲೇ ಇರೆಂದು ಹೇಳಿದರೆ ಸ್ವಾತಂತ್ರ್ಯವನ್ನು ವಹಿಸಿ ಜೊತೆಯಲ್ಲಿ ಬಂದುದುಕ್ಕೆ ಪ್ರಾಯಶ್ಚಿತ್ತ ರೂಪದಲ್ಲಿ ರಾಮನನ್ನು ಕುರಿತು ಹೇಳುತ್ತಾನೆ. ಹೇ **ಕಾಕುತ್ಸ್ಥ** - ಓ ಕಕುತ್ಸ್ಥ ವಂಶೋತ್ಪನ್ನನೇ, **ತ್ವಯಿ ವರ್ಷ ಶತಂಸ್ಥಿತೇ**-ಅನೇಕ ವರ್ಷಗಳು ನೀನು ಹೀಗೆ ಇದ್ದರೂ, ಎಂದರೆ ನಿರಂತರವೂ, **ಪರವಾನಸ್ಮಿ** – ನಿನಗೆ ಪರಾಧೀನನಾಗಿರುತ್ತೇನೆ, ನನಗೆ ಸ್ವಲ್ಪವೂ ಸ್ವಾತಂತ್ರ್ಯವೆಂಬುವದಿಲ್ಲವು. ಆದುದರಿಂದ **ಸ್ವಯಂತು** ಸರ್ವ ಸ್ವತಂತ್ರನಾದ ನೀನೇ, **ರುಚಿರೇದೇಶೇ** - ನಿನಗೆ ಮನೋಹರವಾದ ಪ್ರದೇಶದಲ್ಲಿ, **ಕ್ರಿಯತಾಂ**-ಮಾಡತಕ್ಕದ್ದು, **ಇತಿ** - ಎಂದು **ಮಾಂವದ** - ನನ್ನನ್ನು ಕುರಿತು ಆಜ್ಞಾಪಿಸು, ನನಗೆ ಪೂರ್ಣ ಪಾರತಂತ್ರ್ಯವೇ ಸ್ವರೂಪವಾದುದರಿಂದ, ಹಿಂದೆ ಇದನ್ನು ಮರೆತಿದ್ದರಿಂದ ನೀನು ನನ್ನನ್ನು ಮನ್ನಿಸಿ ನಿನಗಭಿಮತವಾದ ಕೈಂಕರ್ಯದಲ್ಲಿ ನೀನೇ ನಿಯಮಿಸತಕ್ಕದ್ದೆಂದು ಹೇಳಿದನು. ಹಿಂದಿನ ಶ್ಲೋಕದಲ್ಲಿ **" ಸೀತಾ ಸಮಕ್ಷಂ "** ಎಂದು ಇರುವದರಿಂದ, ಸೀತೆಯು ಪುರುಷಕಾರಭೂತಳಾಗಿ ಹಿಂದಿನ ಅಪರಾಧ

(೨೪) "ಕಾಮಯೇ ವೈಷ್ಣವತ್ವಂ ತು ಸರ್ವಜನ್ಮಸು ಕೇವಲಂ" ಎನ್ರುಮ್, (೨೫) "ವರ್ತಮಾನಸ್ಸದಾ ಚೈವಂ ಪಾಂಚಕಾಲಿಕ ವರ್ತ್ಮನಾ । ಸ್ವಾರ್ಜಿತೈರ್ಗಂಧಪುಷ್ಪಾದ್ಯೈಶ್ಶುಭೈಶ್ಶಕ್ತ್ಯನುರೂಪತಃ । ಆರಾಧಯನ್ ಹರಿಂ ಭಕ್ತ್ಯಾ ಗಮಯಿಷ್ಯಾಮಿ ವಾಸರಾನ್" ಎನ್ರುಂ

ಸಹನದಲ್ಲಿ ಉಪಯುಕ್ತಳಾಗುವಳೆಂಬ ಭಾವವೂ, ಮತ್ತು ಕೈಙ್ಕರ್ಯಕ್ಕೆ ಉದ್ದೇಶ್ಯರು, ದ್ವಯದ ಉತ್ತರ ಖಂಡದಲ್ಲಿ ವಿಧಿಸಲ್ಪಟ್ಟ ಹಾಗೆ ಲಕ್ಷ್ಮೀನಾರಾಯಣರು ಎಂಬ ಭಾವವೂ ಉಪಪಾದಿಸಲ್ಪಟ್ಟವು ; **ಲಕ್ಷ್ಮಣಸ್ಸಂಯುತಾಂಜಲಿಃ** ಎಂದು ಹಿಂದೆ ಹೇಳಿರುವದರಿಂದ, **"ಅಂಜಲಿಃ ಪರಮಾ ಮುದ್ರಾ"** ಎಂಬ ಹಾಗೆ, ತಾನು ಶ್ರೀರಾಮನಿಂದ ರಕ್ಷಿಸಲ್ಪಟ್ಟು ತನ್ನ ಸರ್ವಮನೋರಥಾವಾಪ್ತಿಯೂ ಉಂಟಾದ ಭಾವವೂ ತೋರಿಬರುತ್ತದೆ. ಆದುದರಿಂದ ಕೈಂಕರ್ಯದಲ್ಲಿಯೂ ಪಾರತಂತ್ರ್ಯಭಾವವೇ ಆವಶ್ಯಕವೆಂಬುವದು ಇದರಿಂದ ಬೋಧಿತವಾಯಿತು.

(೨೪) ಜಿತನ್ತಾ. ೧.೧.೩ **ಸರ್ವಜನ್ಮಸು** - ಒಂದು ವೇಳೆ ಪುನಃ ಜನ್ಮಗಳು ಪ್ರಾಪ್ತವಾದರೆ ಅವುಗಳಲ್ಲೆಲ್ಲಾ, **ಕೇವಲಂವೈಷ್ಣವತ್ವಂ** - ಕೇವಲ ವಿಷ್ಣುಕಿಂಕರನಾಗಿರುವದನ್ನೇ, **ಕಾಮಯೇ** - ಪ್ರಾರ್ಥಿಸುವೆನು" ಎನ್ರುಮ್- ಎಂಬದಾಗಿಯೂ, ಇಲ್ಲಿಯೂ ಶ್ರೀ ಮಹಾ ವಿಷ್ಣುವಿನ ಕೈಂಕರ್ಯವೇ ಈ ದಾಸಭೂತನಿಗೆ ಮುಖ್ಯವಾದುದೆಂದು ಹೇಳಲ್ಪಟ್ಟಿತು.

(೨೫) **ಏವಂ** - ಈ ಪ್ರಕಾರವಾಗಿ, **ಪಾಂಚಕಾಲಿಕಕವರ್ತ್ಮನಾ** - ಐದು ಕಾಲಗಳಲ್ಲೂ ಯಾವ ಯಾವ ಅನುಷ್ಠಾನಗಳನ್ನು ನಡಿಸಬೇಕೆಂದು ವಿಧಿಸಿರುತ್ತದೆಯೋ ಆ ಮಾರ್ಗದಿಂದ, (ಪಾಂಚಕಾಲಿಕವಾಗಿ ಏನೇನನ್ನು ನಡಿಸತಕ್ಕದ್ದೆಂಬ ವಿಷಯದಲ್ಲಿ ಪುಟವನ್ನು ಪರಾಂಬರಿಸಿ.) **ವರ್ತಮಾನಃ** - ಇರುವವನಾಗಿ ಎಂದರೆ ಪಾಂಚಕಾಲಿಕಾನುಷ್ಠಾನಗಳನ್ನೆಲ್ಲ ಸರಿಯಾಗಿ ನಡಿಸುವನಾಗಿ, **ಸ್ವಾರ್ಜಿತೈಃ**-ಸ್ವಂತವಾಗಿ ಧರ್ಮಾನುಗುಣವಾಗಿ ಸಂಪಾದಿಸಲ್ಪಟ್ಟ, **ಶುಭೈಃ**- ಪ್ರಯೋಜನಾನ್ತರಾದಿ ದೋಷಗಳೊಂದೂ ಇಲ್ಲದೆ ಪವಿತ್ರಗಳಾದ **ಗಂಧಪುಷ್ಪಾದ್ಯೈಃ** - ಗಂಧಪುಷ್ಪ ಮೊದಲಾದವುಗಳಿಂದ, ಆದಿಶಬ್ದದಿಂದ ದೀಪಧೂಪಾದಿಗಳು ಹೇಳಲ್ಪಟ್ಟವು, **ಹರಿಂ** - ಶ್ರೀ ಹರಿಯನ್ನು **ಆರಾಧಯನ್** - ಆರಾಧಿಸುವನಾಗಿ ತಾನೇ ಆರಾಧಿಸತಕ್ಕದ್ದು, ಇತರರಿಂದ ಮಾಡಿಸುವದು ಉತ್ತಮಪಕ್ಷವಲ್ಲವೆಂಬುವದು ನಿರೂಪಿತವಾಯಿತು, **ಸ್ವಾರ್ಜಿತೈಃ** ಎಂದು ಹೇಳಿದುದರಿಂದ ಅರ್ಚಕನ ಹಾಗೆ ಇತರರ ದ್ರವ್ಯಗಳಿಂದ ಅರ್ಚಿಸುವದೂ ಕೂಡ ಉತ್ತಮಪಕ್ಷವಲ್ಲವೆಂಬು

ಶೊಲ್ಲುಗಿರಪಡಿಯೇ ಸ್ವರೂಪಾನುರೂಪ ಕಾಲಕ್ಷೇಪಾರ್ಥವಾನ ಉತ್ತರ ಕೃತ್ಯಮಿರುಕ್ಕಂಪಡಿ :—

ವವೂ ಸುವ್ಯಕ್ತವು ; **ವಾಸರಾ್‌** - ಮಿಕ್ಕದಿನಗಳನ್ನು, **ಗಮಯಿಷ್ಯಾಮಿ** - ಕಳೆಯಿಸುವೆನು" ಎನ್ರುನ್-ಎಂಬದಾಗಿಯೂ, **ಶೊಲ್ಲುಗಿರಪಡಿಯೆ** - ಈ ೨೫ ಪ್ರಮಾಣಗಳಲ್ಲೂ ಹೇಳಿರುವ ಹಾಗೆ, **ಸ್ವರೂಪಾನು ರೂಪಕಾಲಕ್ಷೇಪಾರ್ಥ ವಾನ** -- ತನ್ನ ಸ್ವಾಭಾವಿಕ ಶೇಷತ್ವರೂಪ ಸ್ವರೂಪ ಮತ್ತು ಈಗ ಭರನ್ಯಾಸ ಮಾಡಿ ಕೃತಕೃತ್ಯನಾಗಿ, ಸ್ವನಿಷ್ಠಾಭಿಜ್ಞಾನವುಳ್ಳ ಪ್ರಪನ್ನ ಸ್ವರೂಪಗಳಿಗೆ, **ಅನು ರೂಪವಾನ** - ಅನುರೂಪವಾದ, **ಕಾಲಕ್ಷೇಪಾರ್ಥವಾನ** - ದೇಹಾವಸಾನದವ ರೆಗೂ ಇರುವ ದಿನಗಳಲ್ಲಿ ಕಾಲವನ್ನು ಕಳೆಯುವದಕ್ಕಾಗಿ ವಿಧಿಸಿರುವ ಮತ್ತು ಆಚಾರ್ಯರಿಂದ ಉಪದೇಶಿಸಲ್ಪಟ್ಟ, **ಉತ್ತರಕೃತ್ಯಮಿರುಕ್ಕಂಪಡಿ** - ಉತ್ತರ ಕೃತ್ಯವಿರುವ ಪ್ರಕಾರವು ಯಾವುದೆಂದರೆ ಎಂದು ಪ್ರಾರಂಭಿಸಿ, ಮುಂದೆ ಒಂದು ಮಹಾ ವಾಕ್ಯರೂಪದಿಂದ, ಉಪದೇಶಿಸುತ್ತಾರೆ. **ಏದೆನ್ನಿಲ್** - ಎಂದು ಮುಂದೆ ಇಟ್ಟುಕೊಳ್ಳತಕ್ಕದ್ದು.

ಹೀಗೆ ಮುಂದೆ ಉತ್ತರಕೃತ್ಯಗಳೆಂದು ನಿರೂಪಿಸಲ್ಪಡುವವು ಸಂಗ್ರಹವಾಗಿ ಯಾವುವೆಂದರೆ :—

೧. ತಾನು ತಿಳಿಯಬೇಕಾದುದರಲ್ಲಿ ತಿಳಿಯದಿರುವ ಅಂಶವನ್ನು ಜ್ಞಾನಿಗಳಾದ ಮಹಾಭಾಗವತೋತ್ತಮರಿಂದ ಕೇಳಿ ತಿಳಿಯುವದು.

೨. ಇಂತಹ ಜ್ಞಾನಿಗಳೊಂದಿಗೆ ಸೇರಿರೋಣವು

೩. ಅಂತಹ ಅನುಷ್ಠಾನಪರರು ಸಿದ್ಧರ್ಶಿಸಿದ ಆಚಾರದಲ್ಲಿ ತನ್ನ ವರ್ಣಾಶ್ರಮಕ್ಕನುರೂಪವಾದ ಆಚಾರವನ್ನನುಷ್ಠಿಸುವದು.

೪. ತಾನು ಅನುಷ್ಠಾನಪರನಾಗಿ ಇತರರು ಹಾಗಿಲ್ಲದಿರುವದರಿಂದ ತನ್ನಲ್ಲಿ ಮಾಹಾತ್ಮ್ಯೆಯನ್ನಾರೋಪಿಸಿಕೊಂಡು, ಇತರರನ್ನು ನಿಕೃಷ್ಟವಾಗಿ ಕಾಣದಿರೋಣವು.

೫. ತನಗೆ ಭಗವತ್ಕೃಪೆಯಿಂದ ಭಗವತ್ಸಾಕ್ಷಾತ್ಕಾರ ಉಂಟಾದರೆ ಅದರಿಂದ ಕಾರ್ಪಣ್ಯ ಪ್ರಭೇದಗಳನ್ನು ಬಿಡದೇ ಇರೋಣವು.

೬. ಹಿಂದಿನ ತನ್ನ ಅನರ್ಹತೆಯನ್ನು ಕುರಿತು ಶೋಕಿಸದೆ, ಅವತಾರ ರಹಸ್ಯದಿಂದ ಸಿದ್ಧವಾದ ಭಗವತ್ಸೌಲಭ್ಯಾನುಸಂಧಾನದಿಂದ ಧೈರ್ಯವನ್ನು ಹೊಂದಿ ಈಗ ತನಗೆ ಪ್ರಾಪ್ತವಾದ ಯೋಗ್ಯತೆಯನ್ನು ಅನುಸಂಧಾನಮಾಡುತ್ತಾ, ಆಹಾರ ನಿಯಮವನ್ನವಲಂಬಿಸಿ, ಇಂದ್ರಿಯಂಗಳನ್ನು ಜಯಿಸಿ, ಭಗವತ್ಸೇವಾ

22.3.2002

ಅಜ್ಞಾತಾಂಶಸ್ಯ ಆಚಾರ್ಯ ಸಕಾಶಾ ಚ್ಛ್ರವಣಂ

ತನ್ನಿಷ್ಟೈಕ್ಕನುರೂಪವನಾಗ ತ್ತೆಳಿಯ ವೇಣ್ಡುಮ್ ಅರ್ಥಙ್ಗಳಿಲ್ ತನಕ್ಕು ತ್ತೆಳಿಯಾದ ನಿಲಙ್ಗಳೈ ನಾಮ್ ಕೃತಕೃತ್ಯನೆನ್ರು ಅನಾದರಿತ್ತಿರಾದೆ ಅನುಭವ ಪೂರ್ತಿಯುಣ್ಡಾಪ್ಪೋದು ತೆಳಿವುಮ್ ಪ್ರೇಮುಮುಮ್

ಯೋಗ್ಯಗಳನ್ನಾಗಿ ಮಾಡಿ, ಆಜ್ಞಾಕೈಂಕರ್ಯಗಳನ್ನೂ, ತನ್ನ ಉನ್ನತಾವಸ್ಥೆಗನುರೂಪವಾದ ಅನುಜ್ಞಾಕೈಂಕರ್ಯಗಳನ್ನೂ ಅನುಷ್ಠಿಸೋಣವು.

೭, ಈ ಅನುಷ್ಠಾನಗಳನ್ನು ಫಲಾರ್ಥಿಗಳು ಎಷ್ಟು ನಿಯಮದಿಂದ ಅನುಷ್ಠಿಸುತ್ತಾರೋ ಹಾಗೆ ಶಾಸ್ತ್ರಸಮ್ಮತವಾಗಿ ಅನುಷ್ಠಿಸೋಣವು.

೮. ಅರ್ಚಾವತಾರದ ಪಾವನತ್ವ ಭೋಗ್ಯತ್ವಗಳನ್ನು ಅನುಸಂಧಾನ ಮಾಡಿ, ಯಥಾಯೋಗ್ಯವಾದ ಕೈಂಕರ್ಯಗಳನ್ನು ಮಾಡೋಣವು.

೯. ಹೀಗೆ ಕೈಂಕರ್ಯಗಳನ್ನು ಮಾಡುವಾಗ ನ್ಯಾಯಾರ್ಜಿತ ದ್ರವ್ಯದಿಂದ ಮಾಡೋಣವು.

೧೦. ಈ ಕೈಂಕರ್ಯಗಳನ್ನು ಸ್ವಾಮಿಗೆ ಪ್ರತ್ಯುಪಕಾರ ರೂಪದಲ್ಲಿ ಮಾಡದೆ ತನ್ನ ಸ್ವರೂಪ ಲಾಭಕ್ಕಾಗಿ ಮಾಡೋಣವು.

೧೧. ಇವೆಲ್ಲಾ ತನಗೆ ಆಚಾರ್ಯಸಂಬಂಧದಿಂದ ಪ್ರಾಪ್ತವಾಯಿತೆಂದು, ಆಚಾರ್ಯರಲ್ಲಿ ಕೃತಜ್ಞತೆಯು.

೧೨ ಈ ಆಚಾರ್ಯ ಸಂಬಂಧಕ್ಕೂ ಕೂಡ ಭಗವತ್ಸಹಜ ಕಾರುಣ್ಯವೇ ಕಾರಣವೆಂದರಿತು, ಆ ವಿಷಯದಲ್ಲಿ ಕೃತಜ್ಞನಾಗಿರೋಣವು.

ಇವುಗಳೇ ಉತ್ತರಕೃತ್ಯಗಳೆನಿಸುವವು,

ತಿಳಿಯದಿರುವ ಅಧ್ಯಾತ್ಮವಿದ್ಯೆಯನ್ನು ಆಚಾರ್ಯರ ಮೂಲಕ ತಿಳಿಯೋಣವು

ತನ್ನಿಷ್ಟೈಕ್ಕು - ತಾನು ಸಾಙ್ಗಭರನ್ಯಾಸ ಮಾಡಿರುವ ಈ ನಿಷ್ಠೆಗೆ, **ಅನುರೂಪನಾಗ** - ಯೋಗ್ಯವಾಗಿ, **ತೆಳಿಯ ವೇಣ್ಡುಮ್ ಅರ್ಥಙ್ಗಳಿಲ್** - ತಿಳಿಯಬೇಕಾದ ವಿಷಯಗಳಲ್ಲಿ, **ತನಕ್ಕುತ್ತೆಳಿಯಾದ ನಿಲಙ್ಗಳೈ** - ತನಗೆ ತಿಳಿಯದೇ ಇರುವ ವಿಷಯಗಳನ್ನು, **ನಾಮ್ ಕೃತಕೃತ್ಯನೆನ್ರು** - ನಾವು ಕೃತಕೃತ್ಯರೆಂದು, **ಅನಾದರಿತ್ತಿರಾದೆ** – ಉಪೇಕ್ಷೆಮಾಡದೆ, **ಅನುಭವ ಪೂರ್ತಿಯುಂಡಾಪ್ಪೋದು** - ಸರ್ವೇಶ್ವರನ ಅನುಭವದ ಪೂರ್ತಿಯುಂಟಾಗು

ವೇಣ್ಡುಗೈಯಾಲುಮ್ "ತತ್ಪಾದ ಭಕ್ತಿ ಜ್ಞಾನಾಭ್ಯಾಂ ಫಲಮನ್ಯತ್ಕದಾಚನ। ನಯಾಚೇತ್ಪುರುಷೋ ವಿಷ್ಣುಂ ಯಾಚನಾನ್ನಶ್ಯತಿ ಧ್ರುವಂ," ಎಙ್ಗಿರಪಡಿಯೆ, ಜ್ಞಾನ ಭಕ್ತಿಗಳೈ ಅಪೇಕ್ಷಿತ್ತಾಲ್ ಕುತ್ತಮಿಲ್ಲಾಮೈಯಾಲುಂ, ತನಕ್ಕು ಶೇಷಿ ವಿಷಯತ್ತಿಲೆ ಚಿತ್ತರಂಜನಮ್ ಪಿರಕ್ಕೈಕ್ಕಾಗ (೧) "ಪೀತಕವಾಡೈಪ್ಪಿರಾನಾರ್ ಪಿರಮ ಗುರುವಾಗಿ ವನ್ದು" ಎನ್ನುಮ್ಪಡಿ ನಿರ್ಕಿರ ತೆಳಿವುಡೈಯ ಪರಮೈಕಾಂತಿಗಳ್ ಪಕ್ಕಲಿಲೆ "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ। ಉಪದೇಕ್ಷ್ಯನ್ತಿ ತೇಜ್ಞಾನಂ

ವಾಗ, ತೆಳಿವುಮ್ - ಜ್ಞಾನವೂ, ಪ್ರೇಮುಮುಮ್ - ಭಕ್ತಿಯೂ ಸಹ ವೇಣ್ಡುಗೈಯಾಲೇ - ಬೇಕಾಗುವದರಿಂದ, "ತತ್ಪಾದಭಕ್ತಿಜ್ಞಾನಾಭ್ಯಾಂ, ತತ್ - ಆ ಸರ್ವೇಶ್ವರನ, ಪಾದ - ಪಾದದಲ್ಲಿ, ಭಕ್ತಿಜ್ಞಾನಾಭ್ಯಾಂ - ಭಕ್ತಿ, ಜ್ಞಾನಗಳಗಿಂತ, ಅನ್ಯತ್ - ಬೇರೆ, ಫಲಂ - ಫಲವನ್ನು, ಪುರುಷಃ - ಪುರುಷನು, ಕದಾಚಿತ್ - ಎಂದಿಗೂ, ವಿಷ್ಣುಂ - ಶ್ರೀ ಮಹಾವಿಷ್ಣುವನ್ನು, ಕುರಿತು, ನಯಾಚೇತ್ - ಯಾಚಿಸಕೂಡದು, ಯಾಚನಾತ್ - ಯಾಚನೆ ಮಾಡುವುದರಿಂದ, ನಶ್ಯತಿ - ನಾಶಹೊಂದುವನು. ಧ್ರುವಂ - ನಿಶ್ಚಯವು'', ಎಙ್ಗಿರಪಡಿಯೇ - ಎಂದು ಹೇಳಿರುವ ಹಾಗೆ, ಜ್ಞಾನಭಕ್ತಿಗಳೈಯಪೇಕ್ಷಿತ್ತಾಲ್ - ಜ್ಞಾನಭಕ್ತಿಗಳನ್ನು ಪ್ರಾರ್ಥಿಸಿದರೆ, ಕುತ್ತಮಿಲ್ಲಾಮೈಯಾಲೇ - ಏನೊಂದೂ ದೋಷವಿಲ್ಲದುದರಿಂದ, ತನಕ್ಕು ಶೇಷಿವಿಷಯತ್ತಿಲೆ - ತನಗೆ ಶೇಷಿಯಾದ ಸರ್ವೇಶ್ವರನ ವಿಷಯದಲ್ಲಿ, ಚಿತ್ತರಂಜನ - ಮನಸ್ಸಂತೋಷವು, ಪಿರಕ್ಕೈಕ್ಕಾಗ - ಉಂಟಾಗುವದಕ್ಕಾಗಿ, ಪೀತಕವಾಡೈ - ಆಡೈ ಎಂದರೆ ಅಂಬರ, ಬಟ್ಟೆಯು, ಪೀತಾಂಬರಧಾರಿಯಾದ,ಪಿರಾನಾರ್ - ಮಹೋಪಕಾರಕನಾದ ಶ್ರೀ ಮಹಾವಿಷ್ಣುವು, ಪಿರಮಗುರುವಾಗಿ ವನ್ದು - ಸರ್ವೋತ್ಕೃಷ್ಟನಾದ ಬ್ರಹ್ಮೋಪದೇಷ್ಟಾವಾದ ಗುರುವಾಗಿಬಂದು'', ಎನ್ನುಮ್ಪಡಿ - ಎಂದೇನಾದರೂ ಹೇಳುವ ಹಾಗೆ, ನಿರ್ಕಿರ - ಇರುವ, ತೆಳಿವುಡೈಯ - ಜ್ಞಾನಸಮೃದ್ಧ್ಯವನ್ನು ಹೊಂದಿರುವ, ಪರಮೈಕಾಂತಿಗಳ ಪಕ್ಕಲಿಲೇ - ಪರಮೈಕಾಂತಿಗಳ ಮೂಲಕವಾಗಿ, "ಹೇ ಪಾಂಡವ - ಓ ಪಾಂಡುತನಯನಾದ ಅರ್ಜುನನೇ ತತ್ ಜ್ಞಾನಂ-ನಾನು ನಿನಗೆ ಉಪದೇಶಿಸುವ ಆತ್ಮವಿಷಯ ಜ್ಞಾನವನ್ನು, ತತ್ವದರ್ಶಿನಃ - ಆತ್ಮ ತತ್ವವನ್ನು ತಿಳಿದಿರುವ

೧. ಪೆರಿಯ ತಿರು ೫. ೨. ೮

ಜ್ಞಾನಿನಸ್ತತ್ತ್ವ ದರ್ಶಿನಃ" ಎನ್ಗಿರ ಕಟ್ಟಳೈಯಿಲೆ ತೆಳಿಯ ಕ್ಕೇಟ್ಟು,

ಎಂದರೆ ಆತ್ಮಸಾಕ್ಷಾತ್ಕಾರವನ್ನು ಹೊಂದಿರುವ, **ಜ್ಞಾನಿನಃ** -- ಜ್ಞಾನಿಗಳು, **ಉಪದೇಕ್ಷ್ಯಂತಿ** - ಉಪದೇಶಿಸುವರು, ಆದುದರಿಂದ ನೀನು ಅಂತಹ ಜ್ಞಾನಿಗಳ ಮೂಲಕವಾಗಿ, **ಪ್ರಣಿಪಾತೇನ** - ದಂಡವತ್ಪ್ರಣಾಮದಿಂದಲೂ, **ಪರಿಪ್ರಶ್ನೇನ** - ಉಚಿತವಾದ ಪ್ರಶ್ನೆಗಳಿಂದಲೂ, **ಸೇವಯಾ** - ಶುಶ್ರೂಷಾದಿಗಳಿಂದಲೂ, **ವಿದ್ಧಿ** - ತಿಳಿದುಕೋ, **ಎಙ್ಗಿರ ಕಟ್ಟಲೆಯಿಲೆ** - ಎಂಬಲ್ಲಿ ತೋರಿಬರುವ ನಿಯಮಗಳ ಮೂಲಕ, **ತೆಳಿಯಕೇಟ್ಟು**-ಚನ್ನಾಗಿಕೇಳಿ ತಿಳಿದು, ಯಾವಾಗ ಭರನ್ಯಾಸವನ್ನನುಷ್ಠಿಸಿ ಕೃತಕೃತ್ಯನಾದನೋ, ಆಗ ಮೋಕ್ಷಪ್ರಾಪ್ತಿಯು ನಿಸ್ಸಂಶಯವು ; ಹೀಗಿರುವಾಗ ತಾನು ಮುಂದಕ್ಕೆ ಶಾಸ್ತ್ರಜ್ಞಾನ ಮುಂತಾದುದನ್ನು ಸಂಪಾದಿಸುವದು ನಿರರ್ಥಕವೆಂದು ಉದಾಸೀನಭಾವದಿಂದಿರಕೂಡದು ಎಂದು ಹೇಳುತ್ತಾರೆ. ಕೃತಕೃತ್ಯನಿಗೂ ಕೂಡ ಇತಿಕರ್ತವ್ಯತೆಗಳುಂಟು. ಆದುದರಿಂದ ಹೀಗೆ ಅನಾದರಣೆ ಮಾಡದೆ ತನ್ನ ಆಚಾರ್ಯರ ಮೂಲಕ ಬ್ರಹ್ಮಜ್ಞಾನವನ್ನು ಸಂಪಾದಿಸಿ ಇತರರಿಗೆ ಅದನ್ನು ಉಪದೇಶಿಸುವದೇ ಮೊದಲಾದವುಗಳನ್ನು ಮಾಡಬೇಕೆಂದು ಮುಂದೆ ಹೇಳುತ್ತಾರೆ. ಅದೂ ಅಲ್ಲದೆ ಈ ಪ್ರಪನ್ನನಿಗೆ ಮುಖ್ಯವಾಗಿ ಭಗವದನುಭವಕ್ಕೆ ಜ್ಞಾನ ಭಕ್ತಿ ವೈರಾಗ್ಯಗಳು ಆವಶ್ಯಕವು ; ಪ್ರಪನ್ನನು ಇನ್ನು ಯಾವುವುಗಳನ್ನೂ ಅಪೇಕ್ಷಿಸುವದು ಸರಿಯಲ್ಲವಾದರೂ, ಇವುಗಳನ್ನು ಮಾತ್ರ ಅಪೇಕ್ಷಿಸುವದು ದೋಷಾವಹವಲ್ಲವೆಂದು ತೋರಿಸುವದಕ್ಕಾಗಿ "**ತ್ವತ್ಪಾದ ಭಕ್ತಿಜ್ಞಾನಾಭ್ಯಾಂ**" ಎಂಬ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಜ್ಞಾನಭಕ್ತಿಗಳಲ್ಲದೆ ಇತರವಾದವುಗಳನ್ನಪೇಕ್ಷಿಸಿದರೆ "**ಯಾಚನಾನ್ನಶ್ಯತಿ ಧ್ರುವಂ**" ಎಂದು ಹೇಳಲ್ಪಟ್ಟಿರುತ್ತದೆ. ಇಂತಹ ಜ್ಞಾನ ಭಕ್ತಿಗಳನ್ನು ಹೊಂದುವದರಿಂದ ಪರಮೋಪಕಾರಕನಾಗಿ ಶೇಷಿಯಾದ ಭಗವಂತನ ವಿಷಯದಲ್ಲಿ ತನಗೆ ಮನಸ್ಸಂತೋಷವುಂಟಾಗುವದೇ ಪ್ರಯೋಜನವಾಗಿರುತ್ತದೆ. ಇಂತಹ ಜ್ಞಾನಾದಿಗಳನ್ನು ಸಂಪಾದಿಸಬೇಕಾದರೆ ಪರಮೈಕಾಂತಿಗಳಾದ ತಮ್ಮ ಆಚಾರ್ಯರನ್ನು ಸಾಕ್ಷಾತ್ ಭಗವದಂಶರೆಂದು ಭಾವಿಸಿ, ಅವರಿಗೆ ಪ್ರಣಾಮ ಶುಶ್ರೂಷಾದಿಗಳನ್ನೆಸಗಿ, ಉಚಿತವಾದ ಪ್ರಶ್ನೆಗಳ ಮೂಲಕವಾಗಿ ಉಪದೇಶವನ್ನು ಹೊಂದತಕ್ಕದ್ದು. ಬ್ರಹ್ಮೋಪದೇಷ್ಟಾವಾದ ಆಚಾರ್ಯನು ಸರ್ವೇಶ್ವರನಿಗೆ ಸಮಾನವೆಂದು ಹೇಳಲು ಹಿಂದೆ ಗುರುಪರಂಪರಾಸಾರದಲ್ಲಿ, "**ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇತಥಾ** "ಗುರೌ ಎಂದೂ, "**ಕೃಷ್ಣ ದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂಪ್ರಭುಂ** ಎಂದೂ, ಹೇಳಿ ಈ ಪ್ರಮಾಣವನ್ನು ಸಹ ಅಲ್ಲಿಯೂ ಉದಾ

ಹರಿಸಿದ್ದಾರೆ. ೬೪ನೆಯ ಪುಟವನ್ನು ನೋಡಿ. ಪುನಃ ಅದನ್ನೇ ಜ್ಞಾಪಕಕ್ಕೆ ತರುತ್ತಾರೆ. ಆ ಪೂರ್ವಪಾಶುರವು ಯಾವುದೆಂದರೆ :—

ಏತಙ್ಗಳಾಯಿನವೆಲ್ಲಾ ಮಿರಙ್ಗಲಿಡುವಿತ್ತೆನ್ನುಳ್ಳೇ ।
ಪೀತಕವಾಡೈ ಪ್ಪಿರಾನಾರ್ ಪಿರಮುಗುರುವಾಗಿವನ್ದು ।
ಪೋತಿಲ್ ಕಮಲವನ್ನೆಞ್ಜಮ್ ಪುಗುನ್ದುಮೆನ್ ಚೆನ್ನಿತ್ತಿಡರಿಲ್
ಪಾದವಿಲಚ್ಚಿ ನೈವೈತ್ತಾರ್ ಪಣ್ಡನ್ರು ಪಟ್ಟನಙ್ಙಾಪ್ಪೇ.

ಇದರರ್ಥವೇನೆಂದರೆ :—**ಏದಙ್ಗಳಾಯಿನವೆಲ್ಲಾಂ**-ದೋಷಗಳೆಲ್ಲವನ್ನೂ, ಅವು ಯಾವುವೆಂದರೆ, ದೇಹಾತ್ಮಾಭಿಮಾನವೂ ಸ್ವಸ್ವಾತಂತ್ರ್ಯವೂ ಸ್ವರಕ್ಷಣಪ್ರವೃತ್ತಿಯೂ, ಅನ್ಯಶೇಷತ್ವವೂ, ಸ್ವಪ್ರಯೋಜನವೂ, ಪುಣ್ಯಪಾಪಗಳೂ, ಹೀಗೆ ಇವೆಲ್ಲವನ್ನೂ **ಇರಙ್ಗಲಿಡುವಿತ್ತು** - ನಾಶವಾಗುವ ಹಾಗೆ ಮಾಡಿ, **ಎನ್ನುಳ್ಳೇ** - ಹೀಗೆ ನಿರ್ದೋಷಿಯಾಗಿ ಮಾಡಲ್ಪಟ್ಟ ನನ್ನೊಳಗೆ, **ಪೀತಗವಾಡೈ** - ಪೀತಾಂಬರಧಾರಿಯಾದ ಸರ್ವೇಶ್ವರನು, **ಪಿರಾನಾರ್** - ಪರಮೋಪಕಾರಕನಾಗಿ, **ಪಿರಮುಗುರು ವಾಗಿವನ್ದು** - ಸರ್ವಶ್ರೇಷ್ಠನಾದ ಬ್ರಹ್ಮವಿದ್ಯೋಪದೇಶಿಕನಾದ ಆಚಾರ್ಯನಾಗಿ ಬಂದು, **ಪೋದಿಲ್ ಕಮಲನನ್ನೇಞ್ಜಮ್ ಪುಗುನ್ದುಮ್, ಪೋದಿಲ್** - ಜ್ಞಾನಕ್ಕೆ ನಿವಾಸವಾದ, **ಕಮಲವನ್ನೆಞ್ಜಂ ಪುಗನ್ದು** - ಹೃದಯ ಕಮಲವನ್ನು ಪ್ರವೇಶಿಸಿ, ಹೃದಯ ಕಮಲವನ್ನು ಪ್ರವೇಶಿಸಿರುವುದು ತನಗೆ ಮಾತಾ ಪಿತಾ ಗುರುಗಳ ಮೂಲಕವಾಗಿ ಉಪದೇಶಮಾಡಿ ದೋಷಗಳನ್ನೆಲ್ಲಾ ಹೋಗಲಾಡಿಸಿ, ಪವಿತ್ರನನ್ನಾಗಿ ಮಾಡುವದಕ್ಕೋಸ್ಕರವಾಗಿ ಎಂದು ಭಾವಿಸಿ, ಹೀಗೆ ಅಂತರ್ಯಾಮಿಯಾಗಿ ಪರಮೋಪಕಾರಕನಾದ ಪ್ರಯುಕ್ತ, "**ಪೀತಗವಾಡೈ ಪಿರಾನಾರ್**" ಎಂದು ಪ್ರಯೋಗಿಸಿರುತ್ತಾರೆ. ಉಪಕಾರ ಹೇಗೆಂದರೆ:- ಪ್ರಣವದ ಮಕಾರದಿಂದ ದೇಹಾತ್ಮಾಭಿಮಾನವನ್ನೂ, ಲುಪ್ತಚತುರ್ಥಿಯಿಂದ ಸ್ವಸ್ವಾತಂತ್ರ್ಯವನ್ನೂ, ಉಕಾರದಿಂದ ಅನ್ಯ ಶೇಷತ್ವವನ್ನೂ, ನಮಸ್ಸಿನಿಂದ ಸ್ವರಕ್ಷಕತ್ವವನ್ನೂ, ನಾರಾಯಣ ಶಬ್ದದಿಂದ ಸ್ವಪ್ರಯೋಜನವನ್ನೂ, ಕಳೆದುಕೊಂಡು ಸತ್ತೆಯನ್ನು ಹೊಂದುವದಕ್ಕಾಗಿಯೇ ಸರ್ವೇಶ್ವರನು ಹೃದಯ ಕಮಲದಲ್ಲಿದ್ದಾನೆಂದು ತಿಳಿಯತಕ್ಕದ್ದೆಂಬ ಭಾವವು. **ಎನ್ ಚೆನ್ನಿತ್ತಿಡರಿಲ್ ಪಾದ ವಿಲಚ್ಚಿನ ವೈತ್ತಾರ್** - ನನ್ನ ತಲೆ ಎಂಬ ನೀರು ಹತ್ತದ ಎತ್ತರ ಪ್ರದೇಶಕ್ಕೆ ತನ್ನ ಚರಣಾರವಿಂದವೆನ್ನುವ ಕಾಲುವೆಯ ಮೂಲಕ ಹತ್ತುವ ಹಾಗೆ ಮಾಡಿದರು. **ಪಣ್ಡನ್ರು** - ಇಂದ್ರಿಯಗಳಿಗೆ ವಶಪಟ್ಟಿದ್ದ ಹಿಂದಿನ ಕಾಲದಲ್ಲಲ್ಲವು. **ಪಟ್ಟನಙ್ಙಾಪ್ಪೇ**- ಆಚಾರ್ಯರನ್ನು ಆಶ್ರಯಿಸುವದರಿಂದುಂಟಾದ ಅವರಭಿಮಾನದಿಂದ ರಕ್ಷಣೆಯನ್ನು ಹೊಂದಿರಿ ಎಂದು ಹೇಳಿರುತ್ತಾರೆ. ಹೀಗೆ ತನ್ನ ಸದಾ

೨ ವಿಪಶ್ಚಿತಾಂ ಸಂಸರ್ಗಃ

(೨) "ಮಂದೋಽಪ್ಯಮಂದತಾಮೇತಿ ಸಂಸರ್ಗೇಣ ವಿಪಶ್ಚಿತಃ। ಪಂಕಚ್ಛಿದಃ ಫಲಸ್ಯೇವ ನಿಘರ್ಷೇಣಾವಿಲಂ ಪಯಃ" ಎನ್ನಿಗರಪಡಿಯೇ ಪರಿ

ಚಾರ್ಯರನ್ನು ಭಾವಿಸಿ ಅವರುಗಳ ಮೂಲಕ ಅಧ್ಯಾತ್ಮ ಶಾಸ್ತ್ರದಲ್ಲಿ ಉಪದೇಶ ಹೊಂದತಕ್ಕದ್ದು ಎಂಬ ಭಾವವು. ಇದರಿಂದ ಇತರ ಅಪಸಿದ್ಧಾಂತಿಗಳು ನಡಿಸುವ ಪಾಠಪ್ರವಚನ, ಪುರಾಣ, ಹರಿಕಥೆ, ಉಪನ್ಯಾಸಾದಿಗಳನ್ನು ಕೇಳುವುದು ಅನುಚಿತವೆಂದೂ ಅರ್ಥಾತ್ ತೋರಿಬರುತ್ತದೆ. ಆಚಾರ್ಯರ ಮೂಲಕ ಸರಿಯಾದ ಜ್ಞಾನವನ್ನು ಹೊಂದಿದ್ದರೂ ಮೇಲೆ ಹೇಳಿದ ಅಪಸಿದ್ಧಾಂತಿಗಳೊಂದಿಗೆ ಸಹವಾಸ ಸಂವಾದಗಳು ಬುದ್ಧಿ ಭ್ರಾಮಕವನ್ನುಂಟುಮಾಡೀತಾದುದರಿಂದ, ಸತ್ಸಹವಾಸವು ಪ್ರಪನ್ನನಿಗೂ ಸಹ ಆವಶ್ಯಕವೆಂದು ಮುಂದೆ ಹೇಳುತ್ತಾರೆ. ರಾವಣ ದುರ್ಯೋಧನಾದಿಗಳಿಗೆ ಸತ್ಸಹವಾಸವಿಲ್ಲವಾದದರಿಂದ ಕೆಟ್ಟರು. ಅರ್ಜುನಾದಿಗಳು ಸತ್ಸಹವಾಸದಿಂದ ಪರಿಶುದ್ಧ ಜ್ಞಾನವುಳ್ಳವರಾದರು. ಆದುದರಿಂದ ಸತ್ಸಹವಾಸವನ್ನೇ ಮಾಡಿ ಪರಿಶುದ್ಧ ಜ್ಞಾನವಾನ್ ಆಗುವವೂ ಸಹ ಒಂದು ಉತ್ತರಕೃತ್ಯವೆಂದು ಮುಂದೆ ಹೇಳುತ್ತಾರೆ.

೨ ಜ್ಞಾನ ನಿಷ್ಠರೊಂದಿಗೆ ಸಹವಾಸವು.

೨. **"ಮಂದೋಽಪಿ"** - ಮೂಢನೂ ಕೂಡ, **ವಿಪಶ್ಚಿತಃ** - ಪಂಡಿತನಾದವನ, **ಸಂಸರ್ಗೇಣ** - ಸಹವಾಸದಿಂದ, **ಅಮಂದತಾಂ** - ಒಳ್ಳೇ ಜ್ಞಾನನಿಷ್ಠೆಯನ್ನು **ಏತಿ** – ಹೊಂದುವನು, ಅದು ಹೇಗೆ ಎನ್ನುವುದಕ್ಕೆ ಒಂದು ದೃಷ್ಟಾಂತವನ್ನು ಉದಾಹರಿಸುತ್ತಾರೆ. **ಪಂಕಚ್ಛಿದಃ ಫಲಸ್ಯ** - ನೀರಿನಲ್ಲಿರುವ ಮಣ್ಣನ್ನು ಹೋಗಲಾಡಿಸುವ ಚಿಲ್ಲದ ಬೀಜದ, **ನಿಘರ್ಷೇಣ** - ತೇಯೋಣದರಿಂದ, **ಆವಿಲಂ ಪಯಃ ಇವ** - ಬಗ್ಗಡವಾದ ನೀರು ಹೇಗೆ ಪರಿಶುದ್ಧತೆಯನ್ನು ಹೊಂದುತ್ತದೆಯೋ ಹಾಗೆ," **ಎಙ್ಗಳ್ ರಪಡಿಯೇ** - ಎಂದು ಹೇಳಿರುವ ಹಾಗೆ **ಪರಿಶುದ್ಧ ಜ್ಞಾನನಾಯ್**-ಪರಿಶುದ್ಧ ಜ್ಞಾನವುಳ್ಳವನಾಗಿ, ಎಂದರೆ ಸಂಶಯಾದಿಗಳೊಂದೂ ಇಲ್ಲದೆ ವಿಶದವಾದ ಜ್ಞಾನವುಳ್ಳವನಾಗಿ, ಚಿಲ್ಲದ ಬೀಜದ ಸಂಪರ್ಕದಿಂದ ಕಶ್ಮಲವಾದ ನೀರು ಹೇಗೆ ನಿರ್ಮಲವಾಗುತ್ತದೋ ಹಾಗೆ ಜ್ಞಾನದೀಪ್ತಿಯಿಂದ ಬೆಳಗುತ್ತಿರುವ ಮಹಾನುಭಾವರ ಸಹವಾಸದಿಂದ ಸುಪ್ರತಿಷ್ಠಿತಜ್ಞಾನ

---

೨. ಕಾಳಿದಾಸ, ಮಾಳವಿಕಾಗ್ನಿಮಿತ್ರ

ಶುದ್ಧ ಜ್ಞಾನನಾಯ್ (೧) "ಯಸ್ಯಾನುಭವ ಪರ್ಯಂತಾ ಬುದ್ಧಿಸ್ತತ್ತ್ವೇ ಪ್ರತಿಷ್ಠಿತಾ । ತದ್ದೃಷ್ಟಿ ಗೋಚರಾಸ್ಸರ್ವೇ ಮುಚ್ಯನ್ತೇ ಸರ್ವಕಿಲ್ಬಿಷೈಃ ಎಙ್ಗಿರಪಡಿಯೇ ಇನ್ವರ್ಥಙ್ಗಳಿಲ್ ನಿಷ್ಠೈಯುಡೈಯವರ್‌ಗಳುಡನೇ ನೆರಂಗಿ ವರ್ತಿತ್ತು,

ವುಳ್ಳವನಾಗಿ ಎಂಬ ಭಾವವು. (೧) **ಯಸ್ಯ** - ಯಾವನಿಗೆ, **ತತ್ತ್ವೇ** - ತತ್ವ ವಿಷಯದಲ್ಲಿ, **ಬುದ್ಧಿಃ** - ಬುದ್ಧಿಯು, **ಅನುಭವಪರ್ಯಂತಾ** - ಅನುಭವದವರೆಗೂ, **ಪ್ರತಿಷ್ಠಿತಾ** – ಸ್ಥಿರವಾಗಿರುತ್ತದೆಯೋ, ಎಂದರೆ ಶಾಸ್ತ್ರಜ್ಞಾನದ ಫಲವು ಶಾಸ್ತ್ರವು ವಿಧಿಸಿರುವದನ್ನನುಷ್ಠಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು, **ತದ್ದೃಷ್ಟಿ ಗೋಚರಾಃ** - ಸರ್ವೇಶ್ವರನ ಸಾಕ್ಷಾತ್ ದಿವ್ಯ ಕಟಾಕ್ಷಗಳಿಗೆ ವಿಷಯರಾದ, **ಸರ್ವೇ** - ಸಮಸ್ತರೂ, **ಸರ್ವ ಕಿಲ್ಬಿಷೈಃ** - ಸಮಸ್ತ ಪಾಪಗಳಿಂದಲೂ, **ಮುಚ್ಯಂತೇ** - ಬಿಡಲ್ಪಡುತ್ತಾರೆ". **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಇನ್ವರ್ಥಙ್ಗಳಿಲ್** - ಇಂತಹ ತತ್ವ ವಿನಿಶ್ಚಯವನ್ನು ವಿಮರ್ಶಿಸಿ ತಿಳಿದ ಜ್ಞಾನದಲ್ಲಿ, **ನಿಷ್ಠೈಯುಡೈಯವರ್ಗಳುಡನೇ** - ಅನುಷ್ಠಾನವೂ ಕೂಡ ಇರುವ ಎಂದರೆ ಪರಬ್ರಹ್ಮವಿಷಯವಾದ ಯಥಾರ್ಥ ಜ್ಞಾನವನ್ನು ಹೊಂದಿ ಉಪಾಯಾನುಷ್ಠಾನವನ್ನೂ ಮಾಡಿರುವ ಮಹಾ ಸಾಧುಜನರೊಂದಿಗೆ, **ನೆರಙ್ಗಿ ವರ್ತಿತ್ತು** – ಯಾವಾಗಲೂ ಒಟ್ಟಿಗೆ ಇದ್ದುಕೊಂಡು, **ಇರಕ್ಕುಮಂ ಪ್ರಾಪ್ತಂ** - ಇರತಕ್ಕದ್ದು ಉಚಿತವು ಎಂದು ಮುಂದೆ ಇರುತ್ತದೆ. ಇದರಿಂದ ಕೃತಕೃತ್ಯನಾದ ಪ್ರಪನ್ನನು ಅಧ್ಯಾತ್ಮ ವಿಷಯವಾದ ಪರಿಶುದ್ಧ ಜ್ಞಾನವನ್ನು ಹೊಂದುವದು ಆವಶ್ಯಕವಾದುದರಿಂದ, **"ಮಂದೋಽಪಿ"** ಎಂಬ ಪ್ರಮಾಣದಿಂದ ಯಥಾರ್ಥಜ್ಞಾನವನ್ನು ಹೊಂದಿರುವವನನ್ನಾಶ್ರಯಿಸಿ, ಆತನ ಮೂಲಕ ತನ್ನ ಅಜ್ಞಾನವನ್ನು ನೀಗಿಕೊಳ್ಳಬೇಕೆಂದು ಹೇಳಿ, ಎರಡನೆಯ ಪ್ರಮಾಣವಾದ **"ಯಸ್ಯಾನುಭವ"** ವೆಂಬುವದರಿಂದ, ನಾವು ಸಂಗವನ್ನು ಬೆಳಸುವ ಮಹಾನುಭಾವರಲ್ಲಿ ಬರೀ ಯಥಾರ್ಥಜ್ಞಾನ ಮಾತ್ರ ಇದ್ದರೆ ಸಾಲದೆಂದೂ, ಸದಾಚಾರನಿಷ್ಠೆಯುಳ್ಳವರಾಗಿ ಉಪಾಯಾನುಷ್ಠಾನಾದಿಗಳನ್ನು ಆಚರಿಸಿದವರೂ ಆಗಿರಬೇಕೆಂದೂ; ಅಂಥಾವರೊಂದಿಗೆ ಯಾವಾಗಲೂ ಇದ್ದುಕೊಂಡು ಜ್ಞಾನವನ್ನು ಸಂಪಾದಿಸತಕ್ಕದೆಂದೂ ಹೇಳಿದರು. ಮುಂದೆ ತಾನು ಬರೀ ಜ್ಞಾನಮಾತ್ರಸಂಪಾ

೧. ಶ್ರೀ ಸಾತ್ವತಂ

೩. ವರ್ಣಾಶ್ರಮ ಧರ್ಮಾನುಷ್ಠಾನ

(೩) ಅವರ್‌ಗಳನುಷ್ಠಾನಜ್ಞಳಿಲ್ "ಯಾವಾನರ್ಥ ಉದಪಾನೇ ಸರ್ವತಸ್ಸಂಪ್ಲುತೋದಕೇ" ಎನ್ಗಿರಪ್ರಕಾರತ್ತಿಲೆ ತಂ ವರ್ಣಾಶ್ರಮ ಜಾತಿ ಗುಣಾದಿಗಳುಕ್ಕನುರೂಪಮಾನ ಕರ್ತವ್ಯಾಂಶತ್ತೈ ನಿಷ್ಕರ್ಷಿತ್ತು ಅನುಷ್ಠಿತ್ತು,

---

ದಿಸಿದರೆ ಸಾಲದು. ತನ್ನ ವರ್ಣಾಶ್ರಮ ಜಾತಿ ಮೊದಲಾದವುಗಳಿಗೆ ಯೋಗ್ಯಗಳಾದ ಮತ್ತು ಆವಶ್ಯಕಗಳಾದ ಕರ್ಮಗಳ ಅನುಷ್ಠಾನವೂ ಸಹ ಇರಬೇಕೆಂದು ಉಪದೇಶಿಸುತ್ತಾರೆ :—

ತನ್ನ ವರ್ಣಾಶ್ರಮಗಳಿಗೆ ಉಚಿತವಾದ ಅನುಷ್ಠಾನದ ಆವಶ್ಯಕತೆಯು :-

೩, **ಅವರ್‌ಗಳನುಷ್ಠಾನಜ್ಞಳಿಲ್** - ಮೇಲೆ ಹೇಳಿದ ಜ್ಞಾನನಿಷ್ಠೆ ಮತ್ತು ಆಚಾರ ನಿಷ್ಠೆಹೊಂದಿದ ಪರವ್ಯೈಕಾನ್ತಿಗಳ ಅನುಷ್ಠಾನಗಳಲ್ಲಿ, ಹೇಗೆ **ಸರ್ವತಃ**-ಎಲ್ಲಾ ಕಡೆಯಲ್ಲೂ, ಯಥೇಚ್ಛವಾಗಿ ಎಂಬ ಭಾವವು, **ಸಂಪ್ಲುತೋದಕೇ**-ಉದಕದಿಂದ ತುಂಬಿರುವ, **ಉದಪಾನೇ**- ಜಲಾಶಯಗಳಾದ ಕೆರೆ ಸರೋವರಗಳಲ್ಲಿ ದಾಹವಿರುವವನಿಗೆ ಎಷ್ಟುಮಟ್ಟಿಗೆ ಆ ಸ್ವಾದೂದಕವು ಪ್ರಯೋಜನವೋ, "**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ**" ಎಂದು ಮುಂದೆ ಇರುವದರಿಂದ ತಾವಾನ್-ಅಷ್ಟು ಮಾತ್ರ ತಾನೇ ಆ ದಾಹವಿರುವವನು ಪರಿಗ್ರಹಿಸುವನು, ಜಲಾಶಯದಲ್ಲಿರುವ ಸಮಸ್ತ ಜಲವನ್ನೂ ಅಂಗೀಕರಿಸುವದಿಲ್ಲವು. ಅದರ ಹಾಗೆ ಬ್ರಹ್ಮವಿದ್ಯಾಜ್ಞಾನನಿಷ್ಠನಾದ ಬ್ರಾಹ್ಮಣನು ತನಗೆ ಎಷ್ಟು ಭಾಗ ಬೇಕೋ ಅಷ್ಟು ಮಾತ್ರವೇ **ಸರ್ವೇಷು ವೇದೇಷು** ಸಮಸ್ತ ವೇದಗಳಲ್ಲೂ ಪರಿಗ್ರಹಿಸುವನು." **ಎಙ್ಗಿರ ಪ್ರಕಾರತ್ತಿಲೇ** - ಎಂದು ಹೇಳಿರುವ ರೀತಿಯಲ್ಲಿ, **ತಂ ವರ್ಣಾಶ್ರಮಜಾತಿ ಗುಣಾದಿಗಳುಕ್ಕು** ತನ್ನ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಗಳಿಗೂ, ಬ್ರಹ್ಮಚರ್ಯಗೃಹಸ್ಥಾದಿ ಆಶ್ರಮಗಳಿಗೂ, ಗೋತ್ರ ಶಾಖೆ ಮೊದಲಾದ ಜಾತಿಗಳಿಗೂ, ಪ್ರಪನ್ನತ್ವ ಪರವ್ಯೈಕಾಂತಿತ್ವಾದಿಗುಣಗಳಿಗೂ **ಅನುರೂಪಮಾನ ಕರ್ತವ್ಯಾಂಶತ್ತೈ ನಿಷ್ಕರ್ಷಿತ್ತು** - ಯೋಗ್ಯವಾಗಿ ಆವಶ್ಯಕವಾಗಿ ಅನುಷ್ಠಿಸಬೇಕಾದುದನ್ನು ನಿಷ್ಕರ್ಷಿಸಿ ತಿಳಿದುಕೊಂಡು **ಅನುಷ್ಠಿತ್ತು ನಡಕ್ಕವುಮ್** - ಅನುಷ್ಠಿಸಿ ನಡೆಯೋಣವು. ಅಂತಹ ಜ್ಞಾನನಿಷ್ಠೆ ಹೊಂದಿದ ಪರವ್ಯೈಕಾಂತಿಗಳ ಅನುಷ್ಠಾನಗಳು ವಿಪುಳಗಳಾಗಿ ಬಹು ಕಷ್ಟಸಾಧ್ಯವಾಗಿ ಬಹು ಕಾಲಮಾಡಬೇಕಾದವುಗಳಾಗಿರಬಹುದು. ವೇದಗಳಲ್ಲಿ ಅನೇಕಾಂಶಗಳಿದ್ದರೂ ಬ್ರಹ್ಮವಿತ್ತಾದವನು ಸರ್ವವನ್ನೂ ಪರಿಗ್ರಹಿಸದೆ ಬ್ರಹ್ಮವಿದ್ಯಾಭಾಗವನ್ನು

ಸ್ವೋತ್ಕರ್ಷ ಪರನಿಕರ್ಷ ತ್ಯಾಜ್ಯತ್ವಂ

(೪) ಇವ್ವನುಷ್ಠಾನಾದಿಗಳ್ಳೈ ಯುಡೈಯೋ ಮೆನ್ನುಂ ಭಾವನೈ ಯುಡಿಯಾಗವರುಂ ಸ್ವೋತ್ಕರ್ಷ ಪರನಿಕರ್ಷಾನು ಸಂಧಾನಙ್ಗಳಾಗಿರ ಪಡುಕುಳಿಗಳೈತ್ತಪ್ಪುಮ್ಬಡಿ ತ್ತ ಮುನ್ನಡಿ ಪಾರ್ತ್ತು ನಡಕ್ಕುವುಮ್,

---

ಮಾತ್ರ ಹೇಗೆ ಸ್ವೀಕರಿಸುವನೋ, ಮತ್ತು ದಾಹವಿರುವವನು ಹೇಗೆ ಪುಷ್ಕಲ ಜಲವಿರುವ ಜಲಾಶಯದಿಂದ ತನ್ನ ನೀರಡಿಕೆಯ ಶಾಂತಿಗೆ ಎಷ್ಟು ನಿರ್ಮಲೋದಕ ವನ್ನು ಮಾತ್ರಪರಿಗ್ರಹಿಸುವನೋ, ಅದೇ ಮೇರೆಗೆ, ಅವರುಗಳ ಅನುಷ್ಠಾನದಲ್ಲಿ ತನ್ನ ವರ್ಣ, ಆಶ್ರಮ, ಜಾತಿ, ಗುಣಗಳಿಗೆ ಅತ್ಯಾವಶ್ಯಕವಾದ ಅನುಷ್ಠಾನವು ಯಾವುದೆಂದು ಚನ್ನಾಗಿ ವಿಮರ್ಶಿಸಿ ತಿಳಿದು ಅದನ್ನು ಅನುಷ್ಠಿಸುವುದೂ ಉತ್ತರ ಕೃತ್ಯದಲ್ಲಿ ಸೇರಿದುದೆಂಬ ಭಾವವು.

ತನ್ನಲ್ಲಿ ಉತ್ಕರ್ಷ ಭಾವವನ್ನೂ, ಇತರರಲ್ಲಿ ನಿಕರ್ಷ ಭಾವವನ್ನೂ ತ್ಯಜಿಸತಕ್ಕದ್ದು

೪ **ಇವ್ವನುಷ್ಠಾನಾದಿಗಳ್ಳೈ ಯುಡೈಯೋ ಮೆನ್ನುಮ್** - ಮೇಲೆ ಹೇಳಿದ ರೀತಿಯಲ್ಲಿ ನಿಷ್ಠೆಯುಳ್ಳ ಪರಮೈಕಾಂತಿಗಳ ಸಂಬಂಧದಿಂದ ಕರ್ತವ್ಯಾನುಷ್ಠಾನವನ್ನೆಲ್ಲಾ ತಿಳಿದು ಅನುಷ್ಠಿಸುತ್ತಿದ್ದೇವೆಂಬ, **ಭಾವನೈಯುಡಿಯಾಗ ವರುಮ್** - ಅಹಂಕಾರ ಮೂಲವಾಗಿ ಬರುವ, **ಸ್ವೋತ್ಕರ್ಷಾ........ಳಾಗಿರ** - ತನ್ನಲ್ಲಿ ಉತ್ಕೃಷ್ಟತೆಯನ್ನೂ ಮತ್ತು ಇತರರಲ್ಲಿ ನಿಕೃಷ್ಟತೆಯನ್ನೂ, **ಅನು ಸಂಧಾನಗಳಾಗಿರ** - ಜ್ಞಾಪಕಕ್ಕೆ ತರುವಂಥಾವುಗಳಾದ, **ಪಡುಕುಳಿಗಳ್ಳೈ** - ಮೇಲೆ ಎಲೆ ಮುಂತಾದುದರಿಂದ ಮುಚ್ಚಿರುವ ಗುಂಡಿಗಳಲ್ಲಿ, **ತಪ್ಪುಂಬಡಿ** - ಬೀಳುವುದು ತಪ್ಪುವುದಕ್ಕಾಗಿ, **ಮುನ್ನಡಿ ಪಾರ್ತು ನಡಕ್ಕವುಮ್** - ಹೇಗೆ ಮುಂದಿನ ಹೆಜ್ಜೆಯನ್ನು ನೋಡಿ ನಡೆಯಬೇಕೋ ಹಾಗೆ ಜಾಗರೂಕತೆಯಿಂದ ನಡೆಯತಕ್ಕದ್ದು. "**ಪ್ರಾಪ್ತಂ**" ಎಂದು ಮುಂದಕ್ಕೆ ಅನ್ವಯವು, ಎಂದರೆ ಹಾಗೆ ನಡೆಯತಕ್ಕದ್ದು ಉಚಿತವು ಎಂಬ ಭಾವವು. ಜ್ಞಾನನಿಷ್ಠೆ ಆಚಾರನಿಷ್ಠೆಗಳು ತನ್ನಲ್ಲಿವೆ ಎಂಬ ಅಹಂಕಾರದಿಂದ ತಾನು ಎಲ್ಲರಗಿಂತ ಉತ್ಕೃಷ್ಟನು, ಇತರರೆಲ್ಲಾ ನಿಕೃಷ್ಟರೆಂದು ಭಾವಿಸಕೂಡದು. ಹಾಗೆ ಭಾವಿಸಿದುದಾದರೆ ಅಹಂಕಾರ ಮಮಕಾರ ರೋಪಗುಂಡಿಯಲ್ಲಿ ಬಿದ್ದಹಾಗೆ ಆಗುತ್ತದೆ. ಯಾವಾಗ ತನಗೆ ಇಂತಹ ನಿಷ್ಠೆ ಇದೆಯೋ, ಆಗ ತಾನು ಶ್ರೇಷ್ಠನೆಂಬ ಭಾವವು ತನಗೆ ತಿಳಿಯದ

೫. ಆಕಿಞ್ಚನ್ಯಾನುಸಂಧಾನಂ

(೫) **ತನಕ್ಕು ಶರಣ್ಯ ಪ್ರಸಾದ ವಿಶೇಷಮೂಲಕಮಾಗ, ನಮ್ಮಾಳ್ವಾರ್ ನಾಥಮುನಿಗಳುಳ್ಳಿಟ್ಟಾರ್ಕ್ಕುಪ್ಪೋಲೆ ಸಾಕ್ಷಾತ್ಕಾರಾದಿಗಳಾ**

ಹಾಗೆಯೇ ಉಂಟಾಗಬಹುದು. **ಗರ್ಹ್ತೇ ಪತಿಷ್ಠಾಮಿಮೀ ತ್ಯೇಃವ ಮನೃತಾದಾತ್ಮಾನಂ ಜಿಗುಪ್ಸೇತ್**" ಎಂದು ಹೇಳಿರುವ ಹಾಗೆ ಇದು ಎಂದಿಗೂ ಕೂಡದೆಂದು ಹೇಳುತ್ತಾರೆ. ನೈಚ್ಯಾನುಸಂಧಾನವಿರಬೇಕೇ ವಿನಾ ಸ್ವಪ್ರತಿಷ್ಠಾನುಸಂಧಾನವು ಎಂದಿಗೂ ಕೂಡದೆಂಬ ತಾತ್ಪರ್ಯವು. ತುಂಬಾ ನಿಷ್ಠೆಯುಳ್ಳ ಮಹಾನುಭಾವರೂ ಕೂಡ, "**ನಧರ್ಮನಿಷ್ಠೋಽಸ್ಮಿ**" ಎಂದೂ "**ಧಿಗಶುಚಿಮವನೀತಂ**" ಎಂದೂ ಅನುಸಂಧಾನ ಮಾಡಿರುತ್ತಾರೆ.

ಆಕಿಞ್ಚನ್ಯಾನುಸಂಧಾನವೂ ಅವಶ್ಯಕವು.

೫ ಹಿಂದಿನ ವಾಕ್ಯಖಂಡದಿಂದ ತನ್ನಲ್ಲಿ ಪ್ರತಿಷ್ಠೆಯೂ, ಇತರರಲ್ಲಿ ನಿಕೃಷ್ಟ ಭಾವವೂ ಕೂಡದೆಂದು ಹೇಳಿದರು. ಈ ವಾಕ್ಯಖಂಡದಿಂದ ತಾನು ಎಷ್ಟು ಜ್ಞಾನ ಕರ್ಮನಿಷ್ಠೆಗಳನ್ನು ಹೊಂದಿ ಪರಬ್ರಹ್ಮ ಸಾಕ್ಷಾತ್ಕಾರಾದಿಗಳು ಲಭಿಸಿದ್ದರೂ ತನ್ನ ಆಕಿಂಚನ್ಯ ಭಾವವನ್ನು ತಾನು ಮರೆಯಕೂಡದೆಂದೂ, ಇಂತಹ ಕಾರ್ಪಣ್ಯದಿಂದ ತೋರುವ ನೈಚ್ಯಾನುಸಂಧಾನವೇ ಇರತಕ್ಕದ್ದೆಂದೂ ಬೋಧಿಸುತ್ತಾರೆ. **ತನಕ್ಕು** – ತನಗೆ, **ಶರಣ್ಯಪ್ರಸಾದ ವಿಶೇಷಮೂಲಕಮಾಗ** - "**ಸರ್ವಸ್ಯ ಶರಣಂ ಸುಹೃತ್**" ಎಂದು ಹೇಳಿರುವ ಹಾಗೆ ಸರ್ವಲೋಕಕ್ಕೂ ರಕ್ಷಕನಾದ ಸರ್ವೇಶ್ವರನ ಕೃಪಾ ವಿಶೇಷ ಮೂಲಕವಾಗಿ, **ನಮ್ಮಾ...... ಉಳ್ಳಿಟ್ಟಾರ್ಕ್ಕುಪ್ಪೋಲೆ** - ನಮ್ಮಾಳ್ವಾರ್ ನಾಥಮುನಿಗಳೇ ಮೊದಲಾದವರುಗಳಿಗೆ ಹೇಗೋ ಹಾಗೆ ಇಲ್ಲಿ ಮೊದಲಾದವರು ಎಂಬುವದರಿಂದ ಪರಬ್ರಹ್ಮ ಸಾಕ್ಷಾತ್ಕಾರವನ್ನು ಹೊಂದಿದ ಪೆರಿಯಾಳ್ವಾರ್, ಕಾಂಚೀಪೂರ್ಣರು, ಆಳವಂದಾರ್ ಶ್ರೀ ಭಾಷ್ಯಕಾರ ಪ್ರಭೃತಿಗಳೂ, ಹಾಗೆಯೇ ಸಂಜಯ ಅಕ್ರೂರಾದಿಗಳೂ ಹೇಳಲ್ಪಟ್ಟರು. **ಸಾಕ್ಷಾತ್ಕಾರಾದಿಗಳಾಗಿರ ಫಲೋದ್ಗಮ ಪರ್ವಙ್ಗಳ್** - ಫಲವೆಂದರೆ ಮಹಾ ಫಲವಾದ ಮೋಕ್ಷವು, ಅದರ ಉದ್ಗಮವೆಂದರೆ ಅಂಕುರಿಸೋಣವು, ಅದರ **ಪರ್ವಙ್ಗಳ್** - ಪ್ರಭೇಧಗಳು, **ವನ್ದಾಲುಮ್** - ಪ್ರಾಪ್ತವಾದರೂ, ಆಕಿಂಚನ್ಯ

ಗಿರ ಫಲೋದ್ಗನು ಫರ್ವಜ್ಗಳ್ ವನ್ಪಾಲುವು, (೧) “ನ ನ್ಮೈ ತೀನ್ಮೈಗ

ಭಾವವನ್ನು ತ್ಯಜಿಸಕೂಡದೆಂದುಪದೇಶಿಸುತ್ತಾರೆ. ಅಂತಹ ಆಕಿಂಚನ್ಯ ಭಾವದ ನಿಶ್ಚಯವುಂಟಾಗುವದಕ್ಕಾಗಿ ಕೆಲವು ಪ್ರಮಾಣಗಳನ್ನುದಾಹರಿಸುತ್ತಾರೆ :—

(೧) ಪೆರಿಯಾಳ್ವಾರ್ ತಿರುಮೊ ೫-೧-೩

ನನ್ಮೈತೀನ್ಮೈಗಳೊನ್ರು ಮರಿಯೇನ್ ನಾರಣಾವೆನ್ನುಮಿತ್ತನ್ನೈ ಯುಲ್ಲಾಲ್ । ಪುನ್ಮೈಯಾಲುನ್ನೈಪ್ಪುಳುವುನ್ ಪೇಶಿಪುಗಳ್ವಾನನ್ರು ಕಣ್ಡಾಯ್ ತಿರುಮಾಲೆ । ಉನ್ನುಮಾರುನ್ನೈ ಯೊನ್ರುಮರಿಯೋ ನೋವಾದೆ ನಮೋ ನಾರಣಾವೆನ್ಬನ್ ।ವನ್ಮೈಯಾವುದುನ್ ಕೋಯಿಲಿಲ್ ವಾಳುಮ್ ವೈಟ್ಟಣವನೆನ್ನುಂ ವನ್ಮೈಕಣ್ಡಾಯೇ

ಇದರರ್ಥವು:—**ನಾರಣಾವೆನ್ನುಮಿತ್ತನ್ನೈಯುಲ್ಲಾಲ್** - ನಮೋ ನಾರಾಯಣಾಯ ಎಂದು ಇಷ್ಟು ಮಾತ್ರ ಹೇಳುವದಲ್ಲದೆ, **ನನ್ಮೈ**.........**ಅರಿಯೇನ್** ನಿನ್ನ ಅಪರಾಧಸಹತ್ವರೂಪ ಒಳ್ಳೇ ಗುಣವೋ, ನನ್ನ ಅಪರಾಧವೋ ಯಾವುದೋ ಎನಗನುಗ್ರಹರೂಪವಾದುದೆಂಬುವದು ತಿಳಿಯದು ಎಂದರೆ ನನ್ನನ್ನು ನೋಡಿದರೆ ಮಹಾದೋಷಿಯಾಗಿ ತೋರುವೆನು, ನಿನ್ನನ್ನು ನೋಡಿದರಾದರೋ ಮಹಾಕಲ್ಯಾಣಗುಣಗಳಿಂದ ಯುಕ್ತನಾಗಿ ತೋರುವಿ ಎಂಬ ಭಾವವು. **ನಾರಣಾವೆನ್ನುಮಿತ್ತನ್ನೈಯುಲ್ಲಾಲ್**-ನಾರಾಯಣವೆಂಬುವದರಿಂದ ಅಪರಾಧವನ್ನು ಸಹಿಸುವನೆಂಬ ನಾಮಧೇಯವನ್ನು ಹೊಂದಿರುವನುಎಂಬುವದನ್ನು ಬಿಟ್ಟು, **ಪುನ್ಮೈಯಾಲೆ** - ಪ್ರಯೋಜನದ ಆಶೆಯಿಂದ, **ಉನ್ನೈಪುಳ್ಳುವುನ್ ಪೇಶಿಪುಗಳ್ವಾನನ್ರುಕಂಡಾಯ್** - ಸರ್ವಾಧಿಕನಾದ ನಿನ್ನನ್ನು, ಕೃತ್ರಿಮಸ್ತೋತ್ರಗಳನ್ನು ಪ್ರಯೋಗಿಸಿ ಸ್ತೋತ್ರಮಾಡಲೂ ಶಕ್ತನಲ್ಲವು. **ತಿರುಮಾಲೆ**-ಇಲ್ಲಿ ಲಕ್ಷ್ಮೀಪತಿಯನ್ನು ಸಂಬೋಧಿಸಿ ಹೇಳಿರುವದರ ಅಭಿಪ್ರಾಯವೇನೆಂದರೆ:—ಶ್ರೀಲಕ್ಷ್ಮಿಯನ್ನು ಮುಂದಿಟ್ಟು ಶರಣಾಗತಿಯನ್ನು ಮಾಡಿದವನಾದುದರಿಂದ, ಅಪರಾಧಗಳಿಗಾಗಿ ಭಯಪಡಬೇಕೇ ಎಂಬ ಭಾವವು ; **ಉನ್ನುಮಾರುನ್ನೈಯೊನ್ರುಮರಿಯೇನ್**-ಶಾಸ್ತ್ರೋಕ್ತಪ್ರಕಾರ ನಿರಂತರ ಸ್ಮೃತಿಯನ್ನು ಮಾಡುವದನ್ನರಿತವನಲ್ಲವು. **ಓವಾದೆ ನಮೋನಾರಣವೆನ್ಬನ್** - ಅನನ್ಯಪ್ರಯೋಜನನಾದುದರಿಂದ ನಿರಂತರವಾಗಿ ತಿರುಮಂತ್ರವನ್ನು ಅರ್ಥಸಹಿತವಾಗಿ ಅನುಸಂಧಾನಮಾಡುವೆನು. **ವನ್ಮೈಯಾವುದು** - ನನಗೆ ಮುಖ್ಯವಾದ ಬಲ ಯಾವುದೆಂದರೆ: —**ಉನ್ ಕೋಯಿಲಿಲ್ ವಾಳುಮ್** – ಭಗವದಭಿಮಾನವುಳ್ಳ ದೇಶದಲ್ಲಿ ವಾಸಮಾಡಿ ಸತ್ತೆಯನ್ನು ಹೊಂದುವ **ವೈಟ್ಟಣವನೆನ್ನುಂ** - ಶ್ರೀವೈಷ್ಣವನೆಂಬ, **ವನ್ಮೈ ಕಂಡಾಯೇ** -

ಳೊನ್ರು ಮುಂಯೋ" ಎನ್ರುಮ್, (೨) "ಅರಿವನೇಲುಮ್ ಇವೈಯೆಲ್ಲಾ ಮೆನ್ನಾಲ್ ಅಡೈಪ್ಪು ನೀಕ್ಕೊಣ್ಣಾ" ಎನ್ರುಮ್ ನಿಶ್ಚಯಿತ್ತು ಪರಾಧೀನ ಸ್ವರೂಪಸ್ಥಿತಿ ಪ್ರವೃತ್ತಿಯಾನ ತನ್ನಧಿಕಾರತ್ತಿಲೇ ಶೊರುಗಿನ ಆಕಿಞ್ಚನ್ಯ

ಮಹಾಬಲವೆಂಬದಾಗಿ ತಿಳಿ. ಇಲ್ಲಿ ತಮಗೆ ಬಲವು ಉಪಾಯಾಂತರ ಯಾವುದೂ ಇಲ್ಲದೆ ಭಗವದಭಿಮಾನಸ್ಥಳದ ವಾಸದಿಂದ ಭಗವಂತನಿಂದುಂಟಾದುದೆಂಬ ಅಭಿಪ್ರಾಯವಿರುವದರಿಂದ ಆಕಿಂಚನ್ಯವುವ್ಯಕ್ತಪಡುತ್ತದೆ.

(೨) ಪೆರಿಯ ತಿರುವಂದಾದಿ ೩.

ಇವೈಯುನ್ರೇನಲ್ಲವಿವೈ ಯನ್ರೇತೀಯ,
ಇವೈಯೆನ್ರಿವೈ ಯರಿವನೇಲುಮ್, ಇವೈಯೆಲ್ಲಾಮ್
ಎನ್ನಾಲಡೈಪ್ಪು ನೀಕ್ಕೊಣ್ಣಾದಿರೈಯವನೇ ।
ಎನ್ನಾಲ್ ಶೆಯರ್ಪಾಲದೆ ॥

ಇವೈ ಯನ್ರೇನಲ್ಲ ಇವೈಯನ್ರೇತೀಯ - ಇವುಗಳೇ ಶುಭಕರವಾದುವು, ಇವುಗಳೇ ಅಶುಭಕರವಾದುವು, **ಎನ್ರು** - ಎಂಬದಾಗಿ, **ಇವೈ ಇವೈ** - ಈ ಈ ಸ್ವಭಾವುಗಳೆಂದು, **ಅರಿವನೇಲುಮ್** - ತಿಳಿದವನಾದರೂ, **ಇವೈಯೆಲ್ಲಾಮ್** - ಅಶುಭತ್ಯಾಗ, ಶುಭಪರಿಗ್ರಹಗಳನ್ನೆಲ್ಲಾ, **ಎನ್ನಾಲ್**-ನನ್ನಿಂದ **ಅಡೈಪ್ಪು ನೀಕ್ಕು ವೊಣ್ಣಾದು** - ಪರಿಗ್ರಹಿಸುವದೂ ಸಾಧ್ಯವಲ್ಲವು, ತ್ಯಜಿಸುವದೂ ಸಾಧ್ಯವಲ್ಲವು. **ಇರೈಯವನೇ** - ಓ ಸ್ವಾಮಿಯೇ, **ಎನ್ನಾಲ್**- ನನ್ನಿಂದ, **ಶೆಯರ್ಪಾಲದು ಎನ್** - ಮಾಡತಕ್ಕದ್ದೇನು ? ಯಾವುದೂ ಇರುವುದಿಲ್ಲವೆಂಬ ಭಾವವು. ಇಲ್ಲಿ ಶುಭಪರಿಗ್ರಹಕ್ಕೂ ಅಶುಭ ತ್ಯಾಗಕ್ಕೂ ಕೂಡ ಅಚಿತ್ಸಂಸರ್ಗದಿಂದಲೂ ಪಾರತಂತ್ರ್ಯದಿಂದಲೂ ತನಗೆ ಯೋಗ್ಯತೆ ಇಲ್ಲವೆಂದು ಹೇಳಿರುವದರಿಂದ ಆಕಿಂಚನ್ಯವು ವ್ಯಕ್ತವು.

ಎನ್ರುಮ್ ನಿಶ್ಚಯಿತ್ತು - ಎಂದು ಹೇಳಿರುವಹಾಗೆ ನಿಶ್ಚಯಜ್ಞಾನವನ್ನು ಹೊಂದಿ, **ಪರಾಧೀನಸ್ವರೂಪಸ್ಥಿತಿಪ್ರವೃತ್ತಿಯಾನ**-ಇತರರಿಗೆ ಅಧೀನವಾದ ಎಂದರೆ ಸರ್ವೇಶ್ವರನಿಗೆ ಅಧೀನವಾದ ಸ್ವರೂಪಸ್ಥಿತಿಪ್ರವೃತ್ತಿಗಳುಳ್ಳ, ಪರಶಬ್ದಕ್ಕೆ ಸರ್ವೋತ್ಕೃಷ್ಟನಾದ ಸರ್ವೇಶ್ವರನೆಂದರ್ಥವೂ ಉಂಟು, **ತನ್ನಧಿಕಾರತ್ತಿಲೆ ಶೊರುಗಿನ**- ತನ್ನಧಿಕಾರಕ್ಕೆ ಒಳಪಟ್ಟ, **ಆಕಿಂಚನ್ಯತ್ತೈಯುಳಿಯುನಾರಾದೆ**- ಆಕಿಂಚನ್ಯಭಾವವು ನಾಶವಾಗದಿರೋಣವು, ಹೇಗೋ ಹಾಗೆ, ಎಂದರೆ ಆಕಿಂಚನ್ಯವನ್ನು ತ್ಯಜಿಸದೆ,

ತ್ರಿತ್ಯಯುಳಿಯು ಮಾರಾದೆ, (೩) "ಅಹಮಸ್ಮ್ಯಪರಾಧಾನಾ ಮಾಲಯೋ ಕಿಂಚನೋ ಗತಿಃ" ಇತ್ಯಾದಿಗಳೈಯುಡಯೊತ್ತಿನಡಕ್ಕಿರ (೪) "ನೋಱ್ತ

ಅಹಂ - ನಾನು, ಅಪರಾಧಾನಾಂ - ಅಪರಾಧಗಳಿಗೆ, ಆಲಯಃ - ತೌರುಮನೆಯು, ಅಕಿಂಚನಃ - ಬೇರೆ ಯಾವ ಉಪಾಯವನ್ನೂ ತಿಳಿಯದವನು, ಅಗತಿಃ - ಇನ್ನೂ ಯಾವ ಗತಿಯೂ, ಇಲ್ಲದವನೂ ಅಸ್ಮಿ - ಆಗಿರುವೆನು. "ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾ ಮತಿಃ" ಎಂಬುವದು ಉತ್ತರಾರ್ಧವು. ಆದುದರಿಂದ ನೀನೇ ನನಗೆ ಉಪಾಯಭೂತನಾಗತಕ್ಕದ್ದೆಂದು ಪ್ರಾರ್ಥಿಸುವ ಬುದ್ಧಿಯು ಶರಣಾಗತಿಯು ಎಂದು ಮುಂದೆ ಇರುತ್ತದೆ. ಇತ್ಯಾದಿಗಳೈ-ಇವೇ ಮೊದಲಾದವುಗಳನ್ನು, ಅಡಯೊತ್ತಿನಡಕ್ಕಿರ - ಮೂಲವಾಗಿ ಅನುಸರಿಸಿ ಪ್ರವರ್ತಿಸಿರುವ, ಎಂದರೆ "ಅಹಮಸ್ಮಿ" ಎಂಬ ಶ್ಲೋಕಾರ್ಥವನ್ನೇ ಈ ಮುಂದೆ ಉದಾಹರಿಸಿರುವ ಪ್ರಮಾಣಗಳೂ ಬೋಧಿಸುತ್ತವೆ ಎಂಬ ಭಾವವು.

(೪) ತಿರುವಾಯ್ಮೊಳಿ ೫. ೭. ೧.

ನೋಱ್ಱನೋನ್ಬಿಲೇಸ್ ಉಣ್ಣರಿವಿಲೇ ನಾಕಿಲುಮಿನಿಯುನ್ನೈವಿಟ್ಟೊನ್ರು
ಮಾಱ್ಱಕಿರ್ಕಿನ್ರಿಲೇ ನರವಿನಣೈಯಮ್ಮಾನೇ।
ಶೇಱ್ಱುತ್ತಾಮರೈ ಶೆನ್ನಲೂಡುಮಲರ್ ಶಿರೀವರಮಙ್ಗಲನಗರ್
ವೀಱ್ಱಿರುನ್ದವೆನ್ದಾಯುನಕ್ಕುಮಿಗೈಯಲ್ಲೇನಙ್ಗೇ ॥

ಅರ್ಥ—ನೋಱ್ಱನೋನ್ಬಿಲೇಸ್ - ಫಲಾಭಿಸಂಧಿ ಇಲ್ಲದ ಕರ್ಮಯೋಗವನ್ನು ಮಾಡಲಿಲ್ಲವು. ನುಣ್ ಅರಿವು ಇಲೇಸ್ - ಸ್ವಸ್ವರೂಪಜ್ಞಾನಪೂರ್ವಕ ಪರಬ್ರಹ್ಮಜ್ಞಾನವನ್ನು ತಿಳಿಯುವ ಜ್ಞಾನಯೋಗವನ್ನೂ ತಿಳಿಯೆನು. ಇವೆರಡೂ ಯಾವಾಗ ಇಲ್ಲವೋ ಆಗ ಭಕ್ತಿಯೋಗವೂ ತಿಳಿಯದು ಎಂದು ಹೇಳಿದಂತಾಯಿತು. "ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ ನ ಭಕ್ತಿಮಾನ್ ತ್ವಚ್ಚರಣಾರವಿಂದೇ।" ಎಂದು ಇದರಿಂದ ಹೇಳಿದಂತೆಯಾಯಿತು. ಆಗಿಲುಮ್ - ಆದುದರಿಂದ, ಇನಿ ಉನ್ನೈ ವಿಟ್ಟು - ಇನ್ನು ಮುಂದೆ ರಕ್ಷಣೈಕಶೀಲನಾದ ನಿನ್ನನ್ನು ಬಿಟ್ಟು, ಒನ್ರುಮ್ ಆಱ್ಱಕಿರ್ಕಿನ್ರಿಲೇಸ್ - ಒಂದು ಕ್ಷಣವಾಗಲಿ ಸಹಿಸಿಕೊಂಡಿರಲಾರೆನು. ಅರವಿನಣೈಯಮ್ಮಾನೇ -ಆದಿಶೇಷನನ್ನು ಹಾಸಿಗೆಯಾಗಿವುಳ್ಳ ಸ್ವಾಮಿಯೇ, ಶೇಱ್ಱುತ್ತಾಮರೈ - ಕೆಸರು ನೆಲದಲ್ಲಿರುವ ಕಮಲಪುಷ್ಪವು, ಶೆನ್ನಲೂಡುಮಲರ್ - ಭತ್ತದೊಂದಿಗೆ ಸೇರಿ, ಅರಳಿರುವ, ಎಂದರೆ ಹಾಗೆ

೩. ಅಹಿ. ೩೭. ೩೦

ನೋಱ್ಪಿಲೇನುಣ್ಣರಿಕಿಲೇನ್", (೫) "ಎನ್ನಾನ್ ಶೆಯ್ಗೇನ್",

ಮನೋಹರವಾಗಿರುವ, ಶಿರೀವರಮಙ್ಗಲನಗರ್ - ಶಿರೀವರಮಙ್ಗಲನಗರದಲ್ಲಿ ವೀಱ್ಱಿರುನ್ದವೆನ್ನಾಯ್ - ಬಿಜಮಾಡಿಸಿರುವ ಓ ಸ್ವಾಮಿಯೇ, ಅಙ್ಗುಉನಕ್ಕು - ಅಂತಹ ಪುಣ್ಯ ಕ್ಷೇತ್ರದಲ್ಲಿ ಆಶ್ರಿತ ರಕ್ಷಣಾರ್ಥವಾಗಿರುವ ನಿನಗೆ, ಮಿಗೈಯಲ್ಲೇನ್ - ನಾನು ಎಂದಿಗೂ ಬಾಹಿರನು ಅಲ್ಲವು. ನೀನಾದರೋ ರಕ್ಷಿಸಬೇಕೆಂದೇ ಈ ದಿವ್ಯದೇಶದಲ್ಲಿ ಸುಪ್ರತಿಷ್ಠಿತನಾಗಿರುವೆ. ನಾನಾದರೋ ಯಾರೂ ರಕ್ಷಸುವರು ಗತಿ ಇಲ್ಲದೆ ನೀನು ರಕ್ಷಿಸಿದರೆ ಸಾಕೆಂದು ಕಾದಿದ್ದೇನೆ. ಹೀಗಿರುವಾಗ ನಿನ್ನ ರಕ್ಷ್ಯವರ್ಗಕ್ಕೆ ಸೇರದೇ ಹೇಗಿರುವೆನು ಎಂಬ ಭಾವವು. ಇದರಿಂದ ಕರ್ಮಯೋಗಜ್ಞಾನಯೋಗ ಭಕ್ತಿಯೋಗಗಳ ಸಂಬಂಧವಿಲ್ಲದವನೆಂದು ಹೇಳಿದುದರಿಂದ ಆಕಿಂಚನ್ಯವು ಹೇಳಲ್ಪಟ್ಟಿತು.

(೫) ತಿರುವಾಯ್ಮೊಳಿ, ೫. ೮. ೩.

ಎನ್ನಾನ್ ಶೆಯ್ಗೇನ್ ಯಾರೇಕಳೈಕಣ್ಣೆನ್ನೈಯೆನ್ ಶೆಯ್ಗಿನ್ಱಾ
ಯುನ್ನಾಲಲ್ಲಾಲ್ ಯಾವರಾಲುಮೊನ್ಱುಙ್ಗುಱೈ ವೇಣ್ಡೇನ್ ।
ಕನ್ನಾರ್ಮದಿಳ್ಶೂೞ್ ಕುಡನ್ದೈಕ್ಕಿಡನ್ದಾಯಡಿಯೇನರುವಾಣಾಳ್ ।
ಶೆನ್ನಾಳೆನ್ನಾಳನ್ನಾಳುನತಾಳ್ ಪಿಡಿತ್ತೇ ಶೆಲಕ್ಕಾಣೇ ॥

ಎಂಬುವದು ಪೂರಾ ಪಾಶುರವು. ಇದರರ್ಥವೇನೆಂದರೆ :—

ನಾನ್ - ಪರಾಯತ್ತವಾದ ಕರ್ತೃತ್ವವುಳ್ಳ ನಾನು. ಎನ್ ಶೆಯ್ಗೇನ್ - ಸ್ವತಂತ್ರಿಸಿ ಏನನ್ನು ಮಾಡಲು ಸಾಧ್ಯವು ? ಎಂದರೆ ಸ್ವರಕ್ಷಣಾರ್ಥವಾಗಿ ಏನನ್ನು ಮಾಡಲು ಸಾಧ್ಯವು ಎಂಬರ್ಥವು. ಕಳೈಕಣ್ಯಾರ್ - ನನ್ನನ್ನು ರಕ್ಷಿಸುವರು ಯಾರು ಇದ್ದಾರೆ ? ಎನ್ನೈ, ಎನ್ ಶೆಯ್ಗಿನ್ಱಾಯ್ - ಅಶಕ್ತನಾದ ನನ್ನನ್ನು ಏನುಮಾಡಬೇಕೆಂದಿರುತ್ತೀಯೆ ಎಂದರೆ ಕಷ್ಟತರವಾದ ಉಪಾಸನೆಯನ್ನು ಮಾಡು ಎಂದು ಹೇಳುತ್ತೀಯೋ ಎಂಬ ಭಾವವು, ಉನ್ನಾಲಲ್ಲಾಲ್-ನಿನ್ನನ್ನು ಬಿಟ್ಟು, ಯಾವರಾಲುಮ್ ಒನ್ಱು ಕುಱೈಯುಮ್ ವೇಣ್ಡೇನ್ - ಅಶಕ್ತರಾದ ಇನ್ನು ಯಾರ ಮೂಲಕವಾಗಿಯೂ ಯಾವದೊಂದು ನ್ಯೂನತೆಯ ವಿಷಯದಲ್ಲೂ ಪ್ರಾರ್ಥಿಸುವದಿಲ್ಲವು, ಏಕೆಂದರೆ ಮನೋರಥ ಪೂರ್ಣತೆ ಮಾಡುವ ಶಕ್ತಿಯು ಇನ್ನಾರಿಗೂ ಇಲ್ಲವು. ಕಲ್ ಆರ್ಮದಿಳ್ - ತಾಮ್ರದಿಂದ ತುಂಬಿದ ಪ್ರಾಕಾರದಿಂದ, ಶೂೞ್ ಕುಡನ್ದೈಕ್ಕಿಡನ್ದಾಯ್ - ಸುತ್ತುವರಿಯಲ್ಪಟ್ಟ ತಿರುಕ್ಕುಡನ್ದೈಯಲ್ಲಿ ಬಿಜಮಾಡಿಸಿರುವನೇ! ಅಡಿಯೇನ್ ಅರುವಾಳ್ನಾಳ್-ದಾಸನಾದ

(೬) ಕಳೈವಾಯ್ ತುನ್ಬಂ ಕಳೈಯಾದೊಳಿವಾಯ್ ಕಳೈಕಣ್ ಮಱ್ಱಿಲೇನ್", (೭) "ಪುಗಲೊನ್ರಿಲ್ಲಾವಡಿಯೇ"

ನನ್ನ ಅಣುಸ್ವರೂಪವಾದ ಆತ್ಮಾವನ್ನು ಉಜ್ಜೀವಿಸುವ ಹಾಗೆ ಮಾಡುವ ಕಾಲವು, ಶೆಲ್‌ನಾಳ್ - ಅನುವರ್ತಿಸಿರುವ ಕಾಲವೂ. ಎನ್ನಾಳ್ - ಯಾವಾಗಲೋ ? ಅನ್ನಾಳ್ ಉನತಾಳ್‌ಪಿಡಿತ್ತೇ - ಅದುವರಿವಿಗೂ ನಿನ್ನ ಚರಣಕಮಲವನ್ನು ಹಿಡದೇ, ಶೆಲ್ರಕಾಣ್ - ಪ್ರವರ್ತಿಸುವ ಹಾಗ್ಗೆ ಕಟಾಕ್ಷಿಸಬೇಕು. ನಮಗೆ ಇಂದ್ರಿಯಗಳನ್ನೂ, ಶರೀರವನ್ನೂ, ಬುದ್ಧಿಯುನ್ನೂ ಕೊಟ್ಟಿರುವದರಿಂದ ನಮಗೆ ಕರ್ತೃತ್ವಭೋಕ್ತೃತ್ವಗಳುಂಟು. ಆದರೆ ಈ ಕರ್ತೃತ್ವಭೋಕ್ತೃತ್ವಗಳು ಸರ್ವೇಶ್ವರಾಧೀನವಾಗಿರುವದರಿಂದ, ಆತನು ಪ್ರಾರಬ್ಧಕರ್ಮಾನುಗುಣ ಸಂಕಲ್ಪಿಸಿ ನಡಿಸುತ್ತಾನೆ. ಆದುದರಿಂದ **ಎನ್ನಾನ್‌ಶೆಯ್‌ಗೇನ್** ಎಂದು ಹೇಳಿರುತ್ತಾರೆ.

೬. ತಿರುವಾಯ್‌ಮೊಳಿ. ೫.೮.೮.

ತುನ್ಬಂ - ನನ್ನ ದುಃಖವನ್ನು, **ಕಳೈವಾಯ್** - ಹೋಗಲಾಡಿಸು, ಅಥವಾ **ಕಳೈಯಾದೊಳಿಯಾಯ್** - ಹೋಗಲಾಡಿಸದೇ ಬಿಟ್ಟುಬಿಡು. **ಕಳೈಕಣ್** - ಅದನ್ನು ಹೋಗಲಾಡಿಸುವ ಕಟಾಕ್ಷವು ಎಂದರೆ ಹೋಗಲಾಡಿಸಿ ಕಾಪಾಡುವವನು, **ಮಱ್ಱಿಲೇ**ನ್ - ಬೇರೆ ಯಾರೂ ಇಲ್ಲವು. ಇದರಿಂದ ಸಂಪೂರ್ಣಪಾರತಂತ್ರ್ಯರೂಪಕಾರ್ಪಣ್ಯವು ಪ್ರಕಟಸಲ್ಪಟ್ಟಿತು, ಪೂರಾ ಪಾಶುರ ಮತ್ತು ಅರ್ಥಗಳಿಗೆ ೭೨೩ನೆಯ ಪುಟವನ್ನು ನೋಡಿ.

೭. ತಿರುವಾಯ್‌ಮೊಳಿ ೬.೧೦.೧೦.

ಅಗಲಗಿಲ್ಲೇ ನಿರೈಯುಂ ಮೆನ್ರುಲರ್ ಮೇಲ್ ಮಙ್ಗೈಯುಱೈ ಮಾರ್ಪಾ । ನಿಕರಿಲ್ಪು ಕಳಾಯುಲಗಮೂನ್ರುಡೈಯಾಯೆನ್ನೈಯಾಳ್ವಾನೇ । ನಿಕರಿಲ ಮರರ್ ಮುನಿಕ್ಕಣಙ್ಗಳ್ ವಿರುಮ್ಬುನ್ದಿರು ವೇಙ್ಗಡತ್ತಾನೇ । ಪುಗಲೊನ್ರಿಲ್ಲಾ ವಡಿಯೇನುನ್ನಡಿ ಕೀಳಮರ್ನ್ದು ಪುಗುನ್ದೇನೇ ॥

ಎಂಬುವದು ಪೂರಾಪಾಶುರವು. ಇದರರ್ಥವೇನೆಂದರೆ —

ಇರೈಯುಮ್ - ಒಂದು ಕ್ಷಣಕೂಡ, **ಅಗಿಲಗಿಲ್ಲೇ** - ಅಗಲಿರಲಾರೆನು, ಎನ್ರು - ಎಂದು, ಇದರಿಂದ **"ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ"** ಎಂದು ಹೇಳಿರುವ ಹಾಗೆ ಸದಾ ಸರ್ವಾವಸ್ಥೆಯಲ್ಲೂ

(೮) "ಅವಿಕ್ಕೊರ್ಪು(ಪ್ರು)ಕ್ಕೊವ್ಪ ನಿನ್ನಲಾಲ್ ಅರಿಗಿನ್ರಿಲೇ೯",

ನಿತ್ಯಯೋಗವನ್ನು, ಹೊಂದಿದ, **ಅಲರ್ಮೇಲ್** - ಕಮಲ ಪುಷ್ಪದ ಮೇಲಿಂದ ಬಂದ, ಇದರಿಂದ ಮಾರ್ದವಾದಿಗುಣಗಳುಳ್ಳವಳಾಗಿ ಆಶ್ರಯಿಸಲು ಕರುಣಾಮೂರ್ತಿಯಾಗಿರುವ ಭಾವವು ಹೇಳಲ್ಪಟ್ಟಿತು. **ಮಙ್ಗೈ**-ವಾಲ್ಲಭ್ಯಾತಿಶಯವುಳ್ಳ ಮಹಾಲಕ್ಷ್ಮಿಯು, **ಉರೈಮಾರ್ಪಾ** - ವಾಸಮಾಡುವ ದಿವ್ಯವಕ್ಷಸ್ಥಳವುಳ್ಳವನೇ ಇದರಿಂದಲೂ ಮತುಪ್ ಶಬ್ದಾರ್ಥವಾದ ನಿತ್ಯಯೋಗವೂ, ಉಪಾಯಭೂತಳೆಂಬುವದೂ ತೋರಿಬರುತ್ತವೆ. **ನಿಗರಿಲ್ ಪುಕುಳಾಯ್**-ನಿರುಪಮವಾದ ಯಶಸ್ಸನ್ನು **ಹೊಂದಿರುವವನೇ**, ಅನುಗ್ರಹಮಯಳಾದ ಲಕ್ಷ್ಮಿಯೊಂದಿಗೆ ಸೇರಿರುವದರಿಂದ **"ಅಪ್ರಮೇಯಂ ಹಿತತ್ತೇಜಃ ಯಸ್ಯ ಸಾಜನಕಾತ್ಮಜಾ"** ಎಂದರೆ ಜನಕನಂದನಿಯು ಯಾರಿಗೆಪತ್ನಿಯೋ ಅಂಥಾವನ ತೇಜಸ್ಸು ನಿರುಪಮವಾದುದು" ಎಂದು ಹೇಳಿರುವ ಹಾಗೆ ನಿರವಧಿಕವಾತ್ಸಲ್ಯಾದಿಗುಣಗಳಿಂದ **"ಎನ್ನಡಿಯಾರ್ ಇದು ಶೆಯ್ಯಾರ್"** ಎಂದು ಆಶ್ರಿತದೋಷವನ್ನು ತಿಳಿಯದಿರುವವನೇ ಎಂಬ ಭಾವವು, **ಮೂನ್ರುಲಗಮುಮ್ ಉಡೈಯಾಯ್** - ಮೂರು **ಲೋಕವನ್ನೂ** ಎಂದರೆ ಸಮಸ್ತಲೀಲಾ ವಿಭೂತಿಯನ್ನೂ ರಕ್ಷ್ಯವರ್ಗವಾಗಿವುಳ್ಳವನೇ, ಅಥವಾ ಸಮಸ್ತ ತ್ರಿವಿಧ ಚೇತನಾಚೇತನವನ್ನೂ ತನ್ನ ಸ್ವತ್ತಾಗಿಯುಳ್ಳ ಸ್ವಾಮಿಯೇ, **ಎನ್ನೈ ಆಳ್ವಾನೇ** - ಅಂತಹ ಮಾಹಾತ್ಮ್ಯೆಯನ್ನು ಹೊಂದಿದ್ದರೂ **ಕೂಡ** ತುಂಬಾ ಹೇಯನಾದ ನನ್ನ ಹೃದಯದಲ್ಲೇ ಇದ್ದು ತನ್ನ ಸೌಶೀಲ್ಯವಾತ್ಸಲ್ಯಾದಿಗಳ ಮೂಲಕ ರಕ್ಷಿಸುವವನೇ, **ನಿಕರಿಲ್**-ಇಂತಹ ಕಲ್ಯಾಣಗಳನ್ನು ಕಂಡು ಎಲ್ಲರೂ ಅನುಭವಿಸುವ ಹಾಗೆ ಅಪದೃಶನಾದ. **ಅಮರರ್ ಮುನಿಕ್ಕಣಙ್ಗಳ್** - ದೇವತೆಗಳೂ ಮತ್ತು ಋಷಿಸಮೂಹಗಳೂ, **ವಿರಮ್ಬುಮ್ ತಿರುವೇಙ್ಗಡತ್ತಾನೆ**- ತುಂಬಾ ಭಕ್ತಿಯಿಂದ ಆಶ್ರಯಿಸಿರುವ ತಿರುವೇಙ್ಗಡಮುಡೈಯಾನನೇ, **ಪುಕಲ್ ಒನ್ರು ಇಲ್ಲಾ**-ನೀನಲ್ಲದೆ ನನಗೆ ಉಪಾಯರೂಪದಲ್ಲಿಯಾಗಲಿ ರಕ್ಷಕರೂಪದಲ್ಲಿಯಾಗಲಿ ಬೇರೊಂದೂ ಗತಿಯಿಲ್ಲದಿರುವ ಎಂದರೆ ಅನನ್ಯಶರಣನಾದ, **ಅಡಿಯೇ೯**-ಪಾರತಂತ್ರ್ಯವನ್ನು ಹೊಂದಿ ದಾಸಭೂತನಾದ ನಾನು, **ಉ೯ ಅಡಿ**-ಇಂತಹ ಅನುಗ್ರಹಮಯಳ ಸಂಬಂಧವನ್ನೂ ಇಂತಹ ರಕ್ಷಣೋಪಯುಕ್ತ ಮಹಾಗುಣಯೋಗವನ್ನೂ ಸಹ ಹೊಂದಿರುವ ನಿನ್ನ ಚರಣ ಕಮಲದ **ಕೀಳ್ ಅಮರ್ನ್ದು** - ಕೆಳಗೆ ಅನನ್ಯಪ್ರಯೋಜನನಾಗಿ ಸೇರಿ ಎಂದರೆ ಭರನ್ಯಾಸವನ್ನನುಷ್ಠಿಸಿ **ಪುಗುನ್ದೇ೯**-**ಆಶ್ರಯಿಸಿದೆನು.**

ಇದು ದ್ವಯಮಂತ್ರವಿವರಣರೂಪವಾಗಿ ಪೂರ್ಣ ಶರಣಾಗತಿಯನ್ನುಪಪಾ

(೯) "ಕರವೈಗಳ್ ಪಿ೯ಶೆನ್ರು,"

ದಿಸುವ ಅಮೋಘಪಾಶುರವು. ಶರಣಾಗತಿತತ್ವವೆಲ್ಲಾ ಈ ಪಾಶುರಮೂಲಕ ಗ್ರಹಿಸಬಹುದು. ಪುಗಲೊನ್ರಿಲ್ಲಾವಡಿಯೇ೯ ಎಂಬಲ್ಲಿ ಆಕಿಂಚನ್ಯತ್ವವು ಹೇಳಲ್ಪಟ್ಟಿತು.

೮. ತಿರುವಾಯ್ಮೊಳಿ ೧೦ ೧೦.೩

ಆವಿಕ್ಕು-ಸುಪರ್ಣವೆಂದು ಶ್ರುತಿಯಲ್ಲಿ ಪಕ್ಷಿ ಎಂಬದಾಗಿ ಹೇಳಿಸಿಕೊಳ್ಳುವ ನನ್ನ ಆತ್ಮಾವಿಗೆ, ಓರ್ ಪಱ್ಱುಕ್ಕೊಂಬು - ಒಂದು ಆಶ್ರಯವಾದ ವೃಕ್ಷವು, ನಿನ್ನಲಾಲ್ - "ನಿವಾಸವೃಕ್ಷಸ್ಸಾಧೂನಾಂ" ಎಂದು ಹೇಳಿಸಿಕೊಳ್ಳುವ ನಿನ್ನ ಹೊರತು ಇನ್ನ್ಯಾರನ್ನೂ, ಅರಿಗಿನ್ರಿಲೇ೯ ನಾನು ಅರಿಯೆನು, ತಿಳಿಯೆನು. ಇದರಿಂ ದಲೂ ಆಕಿಂಚನ್ಯವು ಬೋಧಿತವಾಯಿತು. ಪೂರಾ ಪಾಶುರ ಮತ್ತು ಅರ್ಥ ಗಳಿಗೆ ಪರದೇವತಾ ೧೧೩ನೆಯ ಪುಟವನ್ನು ನೋಡಿ.

ತಿರುಪ್ಪಾವೈ.೨೮

ಕರವೈಗಳ್ಪಿನ್ಶೆನ್ರುಕಾನಂಶೇರ್ನ್ದುಣ್ಬೋಂ । ಅರಿವೊನ್ರುವಿಲ್ಲಾದ ವಾಯ್ಕ್ಕುಲತ್ತುನ್ರನ್ನೈ । ಪ್ಪಿರವಿಪೆರುನ್ದನೈಪ್ಪುಣ್ಣಿಯಂ ಯಾಮು ಡೈಯೊಂ । ಕುರೈವೊನ್ರು ಮಿಲ್ಲಾದ ಗೋವಿಂದಾ ವುನ್ರನ್ನೋಡು । ಉರವೇಲ್ ನಮುಕ್ಕಿಜ್ಞೊಳಿಕ್ಕವೊಳಿಯಾ । ದರಿಯಾದ ಪಿಳ್ಳೈ ಗಳೋಂ ಮುನ್ಬಿನಾಲುನ್ರನ್ನೈ । ಚ್ಚಿರು ಪೇರಳೈತ್ತನವುಂ ಶೀರಿಯರು ಳಾದೆ ಯಿರೈವಾ ನೀತಾರಾಯ್ ಪರೈಯೆಲೋರೆಂಬಾವಾಯ್ ॥

ಇದರರ್ಥವು—ಕರವೈಗಳ್ ಪಿನ್ಶೆನ್ರು-ಹಸುಗಳ ಹಿಂದೆ ಹೋಗಿ, ಕಾನಂ ಶೇರ್ನ್ದು - ಎಲ್ಲರೂ ಅರಣ್ಯವನ್ನು ಸೇರಿ, ಉಣ್ಬೋಮ್ - ಶರೀರ ಪೋಷಣೆ ಯನ್ನು ಮಾಡಿಕೊಳ್ಳೋಣ. ಅರಿವೊನ್ರುಮಿಲ್ಲಾದ - ಕೊಂಚವೂ ಜ್ಞಾನ ವಿಲ್ಲದ, ಆಯ್ ಕುಲತ್ತುನ್ರನ್ನೈ-ಗೋಪಾಲರ ಕುಲದಲ್ಲವತರಿಸಿದ ನಿನ್ನನ್ನು, ಪಿರವಿಪೆರುನ್ದನೈ - ಆ ಕುಲದಲ್ಲೇ, ಅಥವಾ ಮಾನುಷ ಜಾತಿಯಲ್ಲಿ ಹುಟ್ಟಿದ, ಪುಣ್ಣಿಯಂ ಯಾಮುಡೈಯೋಂ-ಸುಕೃತವನ್ನು ನಾವು ಹೊಂದಿರುವೆವು. ಕುರೈಯೊನ್ರುಂ ಇಲ್ಲಾದ ಗೋವಿಂದಾ - ಪರಿಪೂರ್ಣಕಾಮನಾದ ಗೋವಿಂ ದನೇ, ಉ೯ತನ್ನೋಡುಂ - ನಿನ್ನೊಂದಿಗೆ ನಮಗುಂಟಾಗಿರುವ, ಉರವು ಏಲ್ - ಈ ಸಂಬಂಧವಾದರೋ, (ನಿತ್ಯವಾದುದರಿಂದ) ನಮುಕ್ಕು ಇಜ್ಞು - ನಮಗೆ ಇಲ್ಲಿ, ಒಳಿಕ್ಕ ವೊಳಿಯಾದು - ತ್ಯಜಿಸತಕ್ಕದ್ದಲ್ಲವು. ಅರಿಯಾದ

(೧೦) "ಕುಳಿತ್ತು ಮೂನ್ರನಲ್ಲೈಯೋಮ್ಬುವನ್,"

ಪಿಳ್ಳೈಗಳೋಂ - ಏನೂ ತಿಳಿಯದ ಬಾಲೆಯರು, **ಅನ್ರಿನಾಲ್ ಉನ್ ತನ್ನೈ** ಪ್ರೀತ್ಯತಿಶಯದಿಂದ ನಿನ್ನನ್ನು, **ಶಿರಪೇರ್ ಅೞೈತ್ತನವುಂ**-ಮರ್ಯಾದೆಗೆ ಹೀನವಾದ, **"ಹೇ ಕೃಷ್ಣ ಯಾದವ ಹೇ ಸಖೇತಿ"** ಇತ್ಯಾದಿ ಹೆಸರುಗಳಿಂದ ಕರೆದಿದ್ದನ್ನು **ಶೀರಿಯರುಳಾದೆ** - ಕೋಪಿಸಿಕೊಳ್ಳದೆ, **ಇರೈವಾನೀತಾರಾಯ್** - ಸ್ವಾಮಿಯಾದ ನೀನು ಕರುಣಿಸತಕ್ಕದ್ದು. **ಪರೈ ಏಲ್** - ಈ ನಮ್ಮ ಕೋರಿಕೆಗಳಾದರೋ ಸಫಲವಾದರೆ, **ಓರ್ ಎಂಪಾವೈ ಆಯ್** - ಆಗ ಅಸದೃಶವಾದ ಈ ನಮ್ಮ ವ್ರತವು ಕೈಗೂಡುವುದು. ಇಲ್ಲಿ **ಉರವು ಏಲ್ ಒಳಿಕ್ಕ ವೊಳಿಯಾದು, ಅರಿಯಾದ ಪಿಳ್ಳೈಗಳುಂ** ಎಂಬಲ್ಲಿ ಕಾರ್ಪಣ್ಯವು ತೋರಿಬರುತ್ತದೆ.

೧೦. ತಿರುಮಾಲೈ ೨೫,

ಕುಳಿತ್ತು ಮೂನ್ರನಲ್ಲೈಯೋಮ್ಬುಕ್ಕುರಿಕೊಳನ್ದಣನ್ಮೈತನ್ನೈ
ಒೞಿತ್ತಿಟ್ಟೇನೆನ್ ಕಣಿಲ್ಲೈನಿನ್ ಕಣುಮ್ಬತ್ತನಲ್ಲೇನ್ ।
ಕಳಿಪ್ಪತೆನ್ ಕೊಣ್ಡುನಮ್ಬೀ ಕಡಲ್ ವಣ್ಣಾ ಕದುರಿಗಿನ್ರೇನ್
ಅಳಿತ್ತಿನಕ್ಕರುಳ್ ಶೆಯ್ ಕಣ್ಣಾಯರಙ್ಗಮಾನಕರುಳಾನೇ ॥

ಇದರರ್ಥವು—**ಕುಳಿತ್ತು** - ನಿತ್ಯ ನೈಮಿತ್ತಿಕಾದಿ ಸ್ನಾನಗಳನ್ನು ಮಾಡಿ, **ಮೂನ್ರು ಅನಲೈ** - ಗಾರ್ಹಪತ್ಯ ಆಹವನೀಯ, ದಕ್ಷಿಣವೆಂಬ ಮೂರು ಅಗ್ನಿಗಳನ್ನೂ, **ಓಮ್ಬುಮ್** ಆದರಿಸಿಕೊಂಡು **ಹೋಗುವ,** ಮತ್ತು **ಕುರಿಕೊಳ್**- ಹೀಗೆ ಕರ್ಮಾನುಷ್ಠಾನಮಾಡಿ ಮಂತ್ರಲೋಪಾದಿಗಳು ಅವರಲ್ಲಿ ಬಾರದ ಹಾಗೆ ಪ್ರಾಯಶ್ಚಿತ್ತವನ್ನನುಷ್ಠಿಸುವ, **ಅನ್ದಣನ್ಮೈತನ್ನೈ** - ತನಗೆ ಜನ್ಮದಿಂದಲೂ, ಸಂಸ್ಕಾರದಿಂದಲೂ, ಪ್ರಾಪ್ತವಾದ ಬ್ರಾಹ್ಮಣ್ಯವನ್ನು, **ಒೞಿತ್ತಿಟ್ಟೇನ್** - ಇಂತಹ ಕರ್ಮನಿಷ್ಠೆಯಿಲ್ಲದೆ ಹಾಳುಮಾಡಿಕೊಂಡೆನು. ಹೋಗಲಿ, ಕರ್ಮ ನಿಷ್ಠೆ ಏನೋ ಕಳಕೊಂಡೆನು. ಜ್ಞಾನನಿಷ್ಠೆಯಾದರೂ ಉಂಟೋ ಎಂದರೆ, **ಎನ್ ಕಣಿಲ್ಲೈ** - ಆತ್ಮವಿಷಯವಾದ ಜ್ಞಾನವೂ ಇಲ್ಲವು, ಕರ್ಮನಿಷ್ಠೆಯಿಲ್ಲದಿದ್ದರೂ ಹಿಂದಿನ ಜನ್ಮ ಸುಕೃತದಿಂದಲಾದರೂ ಆತ್ಮಸ್ವರೂಪವಿಷಯ ಜ್ಞಾನವುಂಟಾಗಬಹುದಲ್ಲಾ ಎಂದರೆ ಅದೂ ಇಲ್ಲವು, ಹೀಗೆ ಕರ್ಮನಿಷ್ಠೆ ಜ್ಞಾನನಿಷ್ಠೆ ಎರಡೂ ಇಲ್ಲದಿದ್ದರೂ ಸರ್ವೇಶ್ವರನಾದ ನಿನ್ನಲ್ಲಿ ಭಕ್ತಿಯಾದರೂ ಉಂಟೋ ಎಂದರೆ ಅದೂ ಇಲ್ಲವೆನ್ನುತ್ತಾರೆ :—**ನಿನ್ ಕಣುಮ್ಬತ್ತನಲ್ಲೇನ್** - ನಿನ್ನ ವಿಷಯದಲ್ಲಿ ಭಕ್ತಿಯಿಲ್ಲದವನೂ ಆದೆನು. ಹೀಗೆ ಶ್ರೀಯಾಮುನೇಯರವರು ಹೇಳಿದ ಹಾಗೆ **ನ ಧರ್ಮನಿಷ್ಠೋ**

(೧೧) "**ಕುಲಜ್ಗಳಾಯ ವೀರರಣ್ಡಿಲ್**",

ಸ್ಥಿ – ಕರ್ಮನಿಷ್ಠೆಯಿಲ್ಲದವನಾಗಿದ್ದೇನೆ. **ನ ಚಾತ್ಮವೇದೀ** – ಆತ್ಮವಿಷಯಜ್ಞಾನವಿಲ್ಲದೆ ಜ್ಞಾನಯೋಗನಿಷ್ಠೆಯಿಲ್ಲದವನಾಗಿದ್ದೇನೆ. **ನ ಭಕ್ತಿಮಾಂಸ್ತ್ವಚ್ಚರಣಾರವಿಂದೇ** – ನಿನ್ನ ಚರಣಕಮಲದಲ್ಲಿ ಭಕ್ತಿಯೋಗವಿಲ್ಲದವನಾಗಿದ್ದೇನೆ. ಹೀಗೆ ನಾನು **ಅಕಿಂಚನೋಽನನ್ಯಗತಿಃ** - ಅಕಿಂಚನನಾಗಿಯೂ ಅನನ್ಯಗತಿಕನಾಗಿಯೂ ಆಗಿದ್ದೇನೆ. ಆದುದರಿಂದ**ವ್ಗ ಕೊಂಡುಕಳಿಪ್ಪದು** - ಇನ್ನು ಯಾವುದನ್ನವಲಂಬಿಸಿತಕ್ಕದ್ದು, ನನ್ನಲ್ಲಿಯಾವ ಸಾಧನೆಯೂ ಯಿಲ್ಲದೆ ಅಕಿಂಚನನಾಗಿ ಅನುತಾಪಪಟ್ಟರೂ, ಆ ಅನುತಾಪಕ್ಕೆ ಅನುಸಾರವಾಗಿ "**ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ**" ಎಂಬಂತೆ ತಾನೂ ದುಃಖಿಸುವನಾಗಿ, **ಮಾಶುಚಃ** ಎಂದು ನನಗೆ ಸಮಾಧಾನಮಾಡುವ, **ನಮ್ಬಿ** - ಆರ್ತರ ದುಃಖನಿವಾರಣೆಗೆ ಬೇಕಾದ ಮಂಗಳಕರವಾದ ಶೀಲ ಕಲ್ಯಾಣಗುಣ ಪೂರ್ತಿಯುಳ್ಳವನೇ, **ಕಡಲ್ವಣ್ಣಾ** – ಸಮುದ್ರದ ಹಾಗೆ ಶ್ಯಾಮಲವರ್ಣದಿಂದ ಸರ್ವಲಾವಣ್ಯಯುಕ್ತನೇ, ನಮಗೆ ನಿನ್ನಲ್ಲಿ ಭಕ್ತಿಯಿಲ್ಲದಿದ್ದರೂ ನಮ್ಮ ಮನಸ್ಸನ್ನು ನಿನ್ನದಿವ್ಯಲಾವಣ್ಯದಿಂದ ಆಕರ್ಷಿಸುವವನೇ, **ಅರಜ್ಗಮಾನಗರುಳಾನೇ**- ಹೀಗೆ ಆಕರ್ಷಿಸಿ, ರಕ್ಷಿಸಬೇಕೆಂಬ ವ್ರತವನ್ನು ಕೈಕೊಂಡು ತನ್ನ ಸೌಲಭ್ಯ ಸೌಶೀಲ್ಯಾದಿಗಳನ್ನು ಪ್ರದರ್ಶಿಸುವುದಕ್ಕಾಗಿ ಶ್ರೀರಂಗದಲ್ಲಿ ನಿತ್ಯವಾಸಮಾಡುವವನೇ, **ಕದರುಗಿನ್ನೇನ್**-ನಿನ್ನ ಕಾಲಿನಲ್ಲಿ ಬಿದ್ದು ಗಟ್ಟಿಯಾಗಿ ರೋದನಮಾಡಿರುತ್ತೇನೆ ಈ ಲೋಕದ ಉಪಾಧಿಯುಕ್ತಳಾದ **ತಾಯಿಯೇ** ಮಗುವು ಅತ್ತರೆ ತಡೆಯದೆ ರಕ್ಷಿಸುವ ಕಾಲದಲ್ಲಿ ನೀನು ನಿರುಪಾಧಿಕ ತಾಯಿಯಾಗಿ ಸುಮ್ಮನಿರುವಿಯೋ? ಎಂದಿಗೂ ಇಲ್ಲವೆಂಬ ಭಾವವು. ಆದುದರಿಂದ **ಎನಕ್ಕಳಿತ್ತು** - ನನ್ನನ್ನು ನಿನ್ನ ಕೃಪೆಗೆ ವಿಷಯುವನ್ನಾಗಿ ಮಾಡಿ, **ಅರುಳ್‌ಶೆಯ್‌ಕೆಂಡಾಯ್** – ನೀನು ಕೃಪೆಮಾಡಬೇಕು ನೋಡು. ಇಲ್ಲದಿದ್ದರೆ ನಿನಗೆ ಅಪಯಶಸ್ಸು; **ಮಾಶುಚಃ** ಎಂಬುವದು ಅಸತ್ಯವಾಕ್ಯಾಗುತ್ತದೆ, ಏಕೆಂದರೆ ನಾನು ಅಳುತ್ತಲಿದ್ದೇನೆ ನೀನು **ಮಾಶುಚಃ** ಎಂದು ಹೇಳಲೇಬೇಕು. ಅರ್ಚಾವತಾರಿಯಾಗಿ ಅರ್ಚಕಪರಾಧೀನನಾಗಿಲ್ಲಿರುವದು ಅಸಾರ್ಥಕವಾಗುತ್ತದೆಂಬ ಭಾವವು. ಇಲ್ಲಿಯೂ ಆಕಿಂಚನ್ಯವುಪ್ರದರ್ಶಿಸಲ್ಪಟ್ಟಿತು.

(೧೧) ತಿರುಚ್ಚಂದ ವಿರುತ್ತಂ. ೯೦.

ಕುಲಜ್ಗಳಾಯ ವೀರಿರಣ್ಡಿಲೊನ್ರಿಲುಮ್ ಪಿರನ್ದಿಲೇ<u></u>ನ್ ।
ನಲಜ್ಗಳಾಯನರ್ ಕೈಳೆಗಳ್ ನಾಲಿಲುಮ್ ನವಿನ್ರಿಲೇನ್ ।

(೧೨) ಏಳೈ ಯೋದಿಲ್ಲ್",

ಪುಲಙ್ಗಳ್ಳೈನ್ದುವಮ್ ವೆನ್ರಿಲೇನ್ ಪೊರಿಯಲೇನ್ ಪುತಿತನಿನ್ ।
ಇಲಙ್ಗುಪಾದ ಮನ್ರಿಮ ಱ್ಱೊ್ ಪಱ್ಱಿಲೇ ನೆಮ್ಮೀಶನೇ ॥

ಈ ಪಾಶುರಕ್ಕೆ ಎರಡು ವಿಧವಾಗಿ ಅರ್ಥಹೇಳಬಹುದು. ಕಾರಣಪರಂಪ ರೆಯಾಗಿಯೂ, ಕಾರ್ಯಪರಂಪರೆಯಾಗಿಯೂ ಅನ್ವಯಿಸಬಹುದು. ಮೊದಲಿನ ನಿರ್ವಾಹ ಹೇಗೆಂದರೆ—

ಪೊರಿಯಿಲೇನ್ – ಮತ್ಸ್ಯವು ಗಾಳಕ್ಕೆ ಶಿಕ್ಕಿಕೊಳ್ಳುವಹಾಗೆ ಶಬ್ದಾದಿವಿಷ ಯಗಳಲ್ಲಿ ಸಿಕ್ಕಿ ನಿಂತೆನು. **ಪುಲಂಗಳ್ಳೈನ್ದುಂ** – ಅದಕ್ಕೆ ಕಾರಣವಾದ, ಪಂಚೇಂ ದ್ರಿಯಗಳನ್ನು, **ವೆನ್ರಿಲೇನ್** - ಜಯಿಸಲಿಲ್ಲವು. **ನಲಂಗಳಾಯ** – ಅದಕ್ಕೆ ಕಾರಣವಾದ- ಚೇತನರ ಗುಣಾನುಸಾರವಾಗಿ ಒಳ್ಳೇ ಮಾರ್ಗ ತೋರಿಸುವ, **ನಲ್ ಕಳೈಗಳ್** - ಸಮಿಾಚೀನಗಳಾದ ವೇದಗಳನ್ನು, **ನಾಲಿಲುಮ್** – ನಾಲ್ಕರಲ್ಲೂ, **ನವಿನ್ರಿಲೇನ್** - ನಿಷ್ಠೆ ಇಲ್ಲದವನಾಗಿದ್ದೇನೆ. **ಈರಿರುಂಡಾಯ** - ಇದಕ್ಕೆ ಕಾರ ಣವಾದ, ನಾಲ್ಕಾದ, **ಕುಲಂಗಳ್ ಒನ್ರಿಲುಂ**-ವರ್ಣಗಳಲ್ಲಿ ಒಂದರಲ್ಲೂ, **ಪಿರಂ ದಿಲೇನ್** - ಜನ್ಮವೆತ್ತಲಿಲ್ಲವು. ಕಾರ್ಯಪರಂಪರೆಯಾಗಿ ಅರ್ಥ ಹೇಳುವಾಗ, **ಈರಿರುಂಡಾಯ ಕುಲಂಗಳ್ ಒನ್ರಿಲುಮ್ ಪಿರಂದಿಲೇನ್** - ನಾಲ್ಕು ವರ್ಣಗಳೊಂದರಲ್ಲೂ ಜನ್ಮವೆತ್ತಲಿಲ್ಲವು ; ಹೀಗಾದುದರಿಂದ ಇದರ ಕ್ಕಾರ ರೂಪವಾಗಿ, **ನಲ್‌ಕಳೈಗಳ್ ನವಿನ್ರಿಲೇನ್** - ನಾಲ್ಕು ವೇದಗಳಲ್ಲೂ ನಿಷ್ಠೆ ಇಲ್ಲದವನಾದೆನು. ಹೀಗೆ ಶಾಸ್ತ್ರಾಭ್ಯಾಸವಿಲ್ಲದುದರಿಂದ, **ಪುಲಙ್ಗಳ್ಳೈ ನ್ದುಮ್ ವೆನ್ರಿಲೇನ್** - ಪಂಚೇಂದ್ರಿಯಗಳನ್ನು ಜಯಿಸಲಿಲ್ಲವು ; ಇಂದ್ರಿಯ ಜಯವಿಲ್ಲದ ಕಾರ್ಯರೂಪವಾಗಿ, **ಪೊರಿಯಿಲೇನ್** - ಮತ್ಸ್ಯಗಾಳಕ್ಕೆ ಸಿಕ್ಕಿದೆನು. **ಪುನಿದ** - ಪರಮಪಾವನನೇ, ಅಶುದ್ಧಕುಲವೇನು, ವೇದಾಧಿಕಾರವಿಲ್ಲದಿರೋ ಣವೇನು, ವೇದಾರ್ಥಗಳ ಅರ್ಥಗ್ರಹಣವಿಲ್ಲದಿರುವದೇನು, ಇಂದ್ರಿಯಗಳ ಹಾವಳಿಗೆ ಸಿಕ್ಕಿರುವದೇನು ಇಂತಹ ಅಪವಿತ್ರತೆಗಳನ್ನು ತನ್ನ ಅನು ಗ್ರಹಮೂಲಕ ಹೋಗಲಾಡಿಸಿ ಪರಿಶುದ್ಧರನ್ನಾಗಿ ಮಾಡುವವನೇ, **ನಿನ್** - ಶರಣಾಗತವತ್ಸಲನಾದ ನಿನ್ನ, **ಇಲಙ್ಗುಪಾದಮಿನ್ರಿ** – ಪ್ರಕಾಶಿಸುತ್ತಿರುವ ಪಾದಗಳಲ್ಲದ, **ಮಱ್ಱೊರುಪಱ್ಱು** ಬೇರೊಂದು ಉಜ್ಜೀವನೋಪಾಯವು, **ಇಲೇನ್** - ಇಲ್ಲವು, ಇದಕ್ಕೆ ಮುಖ್ಯ ನಿದರ್ಶನವು, ಗುಹ ಅಹಲ್ಯಾದಿಗಳು; **ಎಮ್** - ಅಕಿಂಚನರಾಗಿಯೂ ಅಗತಿಗಳಾಗಿಯೂ ಇರುವ ನಮಗೆ, **ಈಶನೇ** -

ನಿವರ್ತಕನಾದವನೇ. ಪ್ರಾಪ್ಯನೂ ನೀನೇ ಆಗಿ, ನಿನ್ನ ಪಾದ ದ್ವಂದಗಳನ್ನು, ಆಶ್ರಯಿಸುವ ಹಾಗೆ ಮಾಡುವವನೂ ನೀನೇ ಆಗಿರುವದರಿಂದ, ನಿನ್ನ ಪಾದದ್ವಂದ ಗಳಲ್ಲಿ ಶರಣಾಗತಿಯಲ್ಲದೆ ಬೇರೆ ತನಗೆ ಗತಿಯಿಲ್ಲವೆಂದು ಹೇಳಿಕೊಂಡಿರುವದರಿಂ ದಲೂ ಆಕಿಂಚನ್ಯವೂ ಅನನ್ಯಗತಿತ್ವವೂ ಇಲ್ಲಿ ಹೇಳಲ್ಪಟ್ಟವು.

(೧೨) ಪೆರಿಯ ತಿರುಮೊಳಿ. ೫. ೮. ೧.

ಏಳೈ ಏತಲನ್ ಕೀಳ್ ಮಗನೆನ್ನಾ ತಿರಿಂಗಿಮಱ್ಱವಱ್ಱಗಿನ್ನರುಳ್ ಶುರನ್ದು । ಮಾಳೈನೋನ್ಮಡನೋಕ್ಕಿಯುನ್ ತೋೞಿ ಉಮ್ಬಿ ಯೆಮ್ಬಿ ಯೆನ್ರೊಳಿನ್ದಿಲೈ ಉಗನ್ದು ! ತೋಳನ್ ನೀ ಯೆನಕ್ಕಿ ಙ್ಗೊಳಿ ಯೆನ್ರ ಚೊಲ್‌ಗಳ್ ವನ್ದು ಅಡಿಯೇಱ ಮನತ್ತಿರುನ್ದಿಡ । ಆೞಿವಣ್ಣ ನಿನ್ನಡಿ ಯಿಣೈ ಯಡೈನ್ದೇಱ ಅಣಿಪೊೞಿಲ್ ತಿರುವರಙ್ಗ ತ್ತಮ್ಮಾನೇ ॥

ಆೞಿವಣ್ಣ - ಸಮುದ್ರದ ಬಣ್ಣದ ಹಾಗೆ ಶ್ಯಾಮಲಾಂಗನೇ, **ಅಣಿಪೊ ೞಿಲ್** - ರಮಣೀಯಗಳಾದ ತೋಟಗಳುಳ್ಳ, **ತಿರುವರಙ್ಗತ್ತಮ್ಮಾನೇ** - ಶ್ರೀರಂ ಗದಲ್ಲಿ ಬಿಜಮಾಡಿಸಿರುವ ಸ್ವಾಮಿಯೇ, **ಏಳೈ** - ಈ ಚೇತನನು ಅಲ್ಪೋಪಪತ್ತಿ ಯುಳ್ಳವನು, ಅಥವಾ ಜ್ಞಾನಶೂನ್ಯನು, **ಏದಲನ್**-ವಿದ್ವೇಷಿಯು, ದೋಷ ವುಳ್ಳವನು, **ಕೀಳ್‌ಮಗನ್ ಎನ್ನಾದು** - ನೀಚ ಜಾತಿಯಲ್ಲಿ ಹುಟ್ಟಿದವನು "**ನಿಷಾದಾನಾಂ ನೇತಾ**" ಎಂದು, ಹೀಗೆ ಗುಹನ ನೀಚಜನ್ಮಾದಿಗಳನ್ನು ನಿಕೃಷ್ಟತೆಯನ್ನು ಪರಿಗಣಿಸದೆ, ಇರುಙ್ಗ - ಅವನಲ್ಲಿ ಕೃಪೆಮಾಡಿ, ಅವನನ್ನು ಮಹಾನುಭಾವನೆಂದು ಭಾವಿಸಿ ಎಂಬರ್ಥವು, ಮಱ್ಱು - ಅದೂ ಅಲ್ಲದೆ, **ಅವ ರ್ಕ್ಕು** - ಆ ಗುಹನೆಂಬ ಮಹಾಭಕ್ತನಿಗೆ, ಇಱ **ಅರುಳ್ ಶುರನ್ದು** - ಮಹ ತ್ತಾದ ಆಲಿಂಗನ ಮೊದಲಾದ ಅನುಗ್ರಹವಾತ್ಸಲ್ಯಗಳನ್ನು ಕರೆದು, **ಮಾಳೈ ನೋನ್ಮಡನೋಕ್ಕಿಉಱತೋೞಿ** - ಕೃಷ್ಣಮೃಗದ ಮರಿಯ ಹಾಗೆ ಚಂಚಲ ದೃಷ್ಟಿಯುಳ್ಳ ಈ ಸೀತೆಯು ನಿನ್ನ ಸ್ನೇಹಿತಳು, **ಉಮ್‌ಬಿ ಎಮ್‌ಬಿ** - ನಿನ್ನ ತಮ್ಮನೇ ನನ್ನ ತಮ್ಮನಾದ ಲಕ್ಷ್ಮಣನು, **ಎನ್ರು** - ಎಂಬುದಾಗಿ, **ಒಳಿನ್ದಿಲೈ** - ಇಷ್ಟು ಮಾತ್ರವೇ ಹೇಳಿ ಬಿಡದೆ, **ಉಗನ್ದು** - ಸಂತೋ ಷಿಸಿದವನಾಗಿ, ಸುಪ್ರೀತನಾಗಿ, **ನೀ ಎನಕ್ಕು ತೋಳನ್** - **ರಾಮ ಸ್ಸಖಾಯಂ ಗುಹಮಬ್ರವೀತ್** (ರಾ. ಅಯೋಧ್ಯಾ. ೫೨-೭೧.) ಎಂಬಲ್ಲಿ ಹೇಳಿರುವ ಹಾಗೆ ನೀನು ನನಗೆ ಸ್ನೇಹಿತನು, **ಇಙ್ಗ ಒಳಿ** - ಇಲ್ಲಿಯೇ ನೀನು ಇರು ಏಕೆಂದರೆ

"**ಅಪ್ರಮತ್ತೋ ಬಲೇಕೋಶೇ ದುರ್ಗೇ ಜನಪದೇ ತಥಾ ।**
ಭವೇಥಾಗುಹರಾಜ್ಯಂ ಹಿ ದುರಾರಕ್ಷತಮಂ ಮತಂ"

(೧೩) "ಪ್ರಿನ್ರೆಲೊನ್ರುಮಿಲೇನ್",

ರಾಜ್ಯರಕ್ಷಣೆಯು ತುಂಬಾ ಕಷ್ಟತರವಾದುದರಿಂದ ನೀನು ಎಲ್ಲಾ ವಿಷಯದಲ್ಲೂ ಅಪ್ರಮತ್ತನಾಗಿ ನೋಡಿಕೊಳ್ಳತಕ್ಕದ್ದೆಂದು, ಎನ್ರ - ಎಂಬ, **ಶೊರ್‌ಗಳ್** - ಸಮಾಧಾನರೂಪವಾದ ಸಾಂತ್ವ ವಚನಗಳು, **ವನ್ದು** - ಕರ್ಣಾಕರ್ಣಿಕೆಯಾಗಿ ಬಂದು, **ಅಡಿಯೇನವುನತ್ತಿರುನ್ದಿಡ** - ದಾಸನಾದ ನನ್ನ ಮನಸ್ಸನ್ನು ಆಕ್ರಮಿಸಿರುವದರಿಂದ, **ನಿನ್ ಅಡಿಯಿಣೈ ಅಡೈನ್ದೇನ್** - ನಿನ್ನ ಪಾದದ್ವಂದವನ್ನು ಶರಣು ಹೊಂದಿದೆನು. ಇಲ್ಲಿ ಜ್ಞಾನ, ಗುಣ, ಕುಲದಲ್ಲಿ ನಿಕೃಷ್ಟನೆಂಬುವದನ್ನು ಪರಿಗಣಿಸದೆ ಗುಹನನ್ನು ಹೇಗೆ ಪರಮಾನುಗ್ರಹದಿಂದ ನೋಡಿದೆಯೋ, ಹಾಗೆಯೇ ನನ್ನನ್ನು ನೋಡುವಿ ಎಂಬ ಭರವಸೆಯಿಂದ ನಿನ್ನ ಪಾದಗಳನ್ನು ಶರಣುಹೊಂದಿದೆನೆಂದು ಹೇಳಿರುವದರಿಂದ ತನ್ನ ನಿಕೃಷ್ಟಜ್ಞಾನ ಗುಣ ಜಾತಿ ರೂಪ ಕಾರ್ಪಣ್ಯ ವಿಶೇಷಗಳು ಈ ಪಾಶುರದಲ್ಲಿ ಪ್ರದರ್ಶಿಸಲ್ಪಟ್ಟವು.

(೧೩) ಪೆರಿಯ ತಿರು. ೧. ೯. ೯

ಪಿನ್ರೆಲೊನ್ರು ಮಿಲೇನ್, ಪಾವಮೇ ಶೆಯ್‌ದು ಪಾವಿಯಾನೇನ್ ।
ಮಱ್ರೆಲೊನ್‌ರರಿಯೇನ್, ಮಾಯನೇ, ಎಙ್ಗಳ್ ಮಾಧವನೇ ।
ಕಲ್ತ್ರಿನ್ ಪಾಯ್‌ನ್ದ್ರೊಳುಗುವ್ ಕಮಲಚ್ಚುನೈ ವೇಙ್ಗಡವಾ ।
ಅಱ್ರೇನ್‌ವನ್ದಡೈನ್ದೇ ನಡಿಯೇನ್ನೈ ಯಾಟ್ಕೊಂಡರುಳೇ ॥

ಓ ಮಾಯನೇ - ದಿವ್ಯಾಶ್ಚರ್ಯಗುಣ ಚೇಷ್ಟಿತಗಳುಳ್ಳವನೇ, **ಎಙ್ಗಳ್‌ಮಾಧವನೇ** - ಆಶ್ರಿತರಾದ ನಮ್ಮ ಮಹಾಪರಾಧಗಳನ್ನು ಸಹಿಸಿಕೋ ಎಂದು ಬೇಡಲು ಸಿದ್ಧವಾಗಿ ಪಕ್ಕದಲ್ಲೇ ಇರುವ ಅನುಗ್ರಹಮಯಳಾದ ಲಕ್ಷ್ಮಿಯ ವಲ್ಲಭನೇ, **ಕಲ್‌ತೇನ್ ಪಾಯುನ್ದು** - ಪರ್ವತ ಶಿಲೆಗಳಲ್ಲಿ ಗೂಡಿಟ್ಟು ಜೇನುತುಪ್ಪ ತುಂಬಿ ಹೆಚ್ಚಾಗಿ ಪ್ರವಹಿಸಿ ಸೇರಿದ ಕಮಲ ತಟಾಕಗಳುಳ್ಳ, ತಿರುಮಲೆಯಲ್ಲಿ ನಿತ್ಯವಾಸ ಮಾಡುವ ಓ ಶ್ರೀನಿವಾಸನೇ' **ಪಿನ್ರೆಲೊನ್ರುಮಿಲೇನ್** ನಿನ್ನ ಹೊರತು ಇನ್ನು ಯಾವ ಸುಕೃತರೂಪ ಆಶ್ರಯವನ್ನಾಗಲಿ ಇಲ್ಲದಿರುವನಾಗಿದ್ದೇನೆ, **ಪಾವಮೇಶೆಯ್‌ದು ಪಾವಿಯಾನೇನ್**-"**ಅಹಮಸ್ಮ್ಯಪರಾಧಾನಾಮಾಲಯಃ**" ಎಂದು ಹೇಳಿರುವ ಹಾಗೆ ಯಾವಾಗಲೂ ಪಾಪವನ್ನೇಮಾಡಿ ಪಾಪಿಷ್ಠನೆನಿನಿದೆನು. **ಮಱ್ರೆಲೊನ್ರುಮರಿಯೇನ್** – ಉಪಾಯಾನ್ತರ ಒಂದನ್ನೂ ನಾನು ತಿಳಿಯೆನು ; **ಅಱ್ರೇನ್ ವನ್ದು ಅಡೈನ್ದೇನ್** - ನಿನಗೇ ಪರತಂತ್ರನಾಗಿ ನಿನ್ನ ಪಾದಕಮಲಗಳನ್ನೇದೃಢವಾಗಿ ಆಶ್ರಯಿಸಿರುವೆನು. **ಅಡಿಯೇನ್ನೈ** - ನಿನ್ನ

(೧೪) "ತರುತುಯರನ್ತಡಾಯೇಲ್" ಎನ್ಗಿರ ಪಾಟ್ಟುಕ್ಕಳಿಲುಮ್
(೧೫) "ನ ಧರ್ಮನಿಷ್ಠೋಽಸ್ಮಿ" ಎನ್ಗಿರ ಶ್ಲೋಕತ್ತಿಲುಂ, ಇವರ್ಗಳ್ ಅರುಳಚ್ಚೆಯ್ದ ಕಾರ್ಪಣ್ಯತ್ತಿನ್ ಕವಡುಗಳೈಯೆಲ್ಲಾಮ್ ಅವಲಂಬಿತ್ತುಕೊಂಡು ಪೋರುವುಮ್,

---

ದಾಸನಾದ ನನ್ನನ್ನು, ಆಳ್ಕೊಂಡರುಳೇ - ನನ್ನ ಸ್ವರೂಪಕ್ಕನುರೂಪವಾದ ಕೈಂಕರ್ಯವನ್ನು ದಯಪಾಲಿಸೈಯ್ಯಾ ಎಂದು ಆಕಿಂಚನ್ಯವನ್ನು ತೋರಿಸಿರುತ್ತಾರೆ.

(೧೪) ಪೆರುಮಾಳ್ ತಿರುಮೊಳಿ, ೫. ೧.
ತರುತುಯರ್ - ನೀನೇ ಪ್ರಾರಬ್ಧಕರ್ಮಾನುಗುಣವಾಗಿ ಕೊಡುವ ದುಃಖವನ್ನು, ತಡಾಯೇಲ್ - ನೀನೇ ಹೋಗಲಾಡಿಸದೇ ಇದ್ದರೆ, ಉನ್ ಶರಣಲ್ಲಾಲ್ ಶರಣಿಲ್ಲೈ - ನಿನ್ನ ಪಾದಗಳಲ್ಲದೆ ಬೇರೇ ಗತಿಯಿಲ್ಲವು. ಇದರಿಂದಲೂ ಆಕಿಂಚನ್ಯವು ಹೇಳಲ್ಪಟ್ಟಿತು. ಪೂರಾ ಪಾಶುರ ಮತ್ತು ಅರ್ಥಗಳಿಗೆ ಪರದೇವತಾಪಾರಮಾರ್ಥ್ಯಾಧಿಕಾರ೭೨ನೆಯ ಪುಟವನ್ನು ನೋಡಿ.

ಎಙ್ಗಿರ - ಹೀಗೆ ಹೇಳಿರುವ, ಪಾಟ್ಟುಕ್ಕಳುಮ್ - ಪಾಶುರಗಳಲ್ಲಿಯೂ, ಮತ್ತು, "ನ ಧರ್ಮ ನಿಷ್ಠೋಽಸ್ಮಿ" ಎಂಬುವ ಶ್ಲೋಕದಲ್ಲೂ, ಇವರ್ಗಳ್ - ಈ ಮೇಲೆ ಉದಾಹರಿಸಿರುವ ಪ್ರಮಾಣಗಳನ್ನನುಗ್ರಹಿಸಿದ ಆಳ್ವಾರಾಚಾರ್ಯರುಗಳು. ಅರುಳಚ್ಚೆಯ್ದ - ಕೃಪಯಾ ಹೇಳಿರುವ, ಕಾರ್ಪಣ್ಯತ್ತಿನ್ ಕವಡುಗಳೈಯೆಲ್ಲಾಂ - ಈ ಮೇಲಿನ ಆರು ಪಾಶುರಗಳಿಂದ ತೋರಿಬರುವ ಕಾರ್ಪಣ್ಯದ ಪ್ರಭೇದಗಳನ್ನೆಲ್ಲಾ, ಅವಲಂಬಿತ್ತು ಕೊಂಡು ಪೋರುವುಂ - ಅಂಗೀಕರಿಸಿಕೊಂಡು ಪ್ರವರ್ತಿಸುವದು; ಮುಂದಕ್ಕೆ ಪ್ರಾಪ್ತಂ ಎಂದರೆ ಯೋಗ್ಯವಾದುದು ಎಂಬುವದರೊಂದಿಗೆ ಅನ್ವಯವು. "ನ ಧರ್ಮನಿಷ್ಠೋಽಸ್ಮಿ ಎಂಬ ಶ್ಲೋಕವು ಯಾವುದೆಂದರೆ :—ಆಳವಂದಾರ್ ಸ್ತೋತ್ರ. ೨೨.

ನ ಧರ್ಮನಿಷ್ಠೋಽಸ್ಮಿ ನಚಾತ್ಮವೇದೀ ನ ಭಕ್ತಿಮಾಂ ತ್ವಚ್ಚರಣಾರವಿಂದೇ । ಅಕಿಞ್ಚನೋಽನನ್ಯಗತಿಶ್ಶರಣ್ಯತ್ವತ್ಪಾದ ಮೂಲಂ ಶರಣಂ ಪ್ರಪದ್ಯೇ ॥

ನ ಧರ್ಮ ನಿಷ್ಠೋಽಸ್ಮಿ - ನಾನು ಕರ್ಮಯೋಗ ನಿಷ್ಠನೂ ಅಲ್ಲವು, ನ ಚಾತ್ಮವೇದೀ-ಆದುದರಿಂದಲೇ ಜ್ಞಾನಯೋಗ ಮೂಲಕ ಪರಿಶುದ್ಧನಾದ ಆತ್ಮಸಾಕ್ಷಾತ್ಕಾರವುಳ್ಳವನೂ ಅಲ್ಲವು. ಆ ಕಾರಣದಿಂದಲೇ ತ್ವಚ್ಚರಣಾರವಿಂದೇ - ಪವಿತ್ರತೆಯೂ ಭೋಗ್ಯತೆಯೂ ಇರುವ ನಿನ್ನ ಪಾದಕಮಲಗಳಲ್ಲಿ ನ ಭಕ್ತಿಮಾನ್ -

ಸ್ವಸ್ಯಾನರ್ಹತಾನುಸಂಧಾನರೂಪಾವಸಾದಃ ತ್ಯಾಜ್ಯಃ

ಇಪ್ಪಡಿ ತನಕ್ಕನಾದಿ ಕಾಲುಮ್ ಪಿರನ್ದ ಅನರ್ಹತೈಯುಮ್

ಯಾವಾಗ ಕರ್ಮಯೋಗ ಜ್ಞಾನಯೋಗಗಳ ನಿಷ್ಠೆಯೂ ಇಲ್ಲವೋ, ಆಗ ಭಕ್ತಿಯೋಗನಿಷ್ಠೆಯೂ ಇಲ್ಲವು ಶಾಸ್ತ್ರಾರ್ಥಗಳ ಯಥಾರ್ಥಜ್ಞಾನದಿಂದ ಕರ್ಮಯೋಗವು ಪ್ರಾಪ್ತವಾಗುತ್ತದೆ. ಆದರಿಂದ ಇಂದ್ರಿಯ-ನಿಗ್ರಹ ಮೂಲಕ ಪರಿಶುದ್ಧಾಂತಃಕರಣನಾದವನಿಗೆ ಜ್ಞಾನಯೋಗವು ಉಂಟಾಗಿ ಆತ್ಮಾವಲೋಕನ ಉಂಟಾಗುತ್ತದೆ. ಈ ಪ್ರಕಾರವಾಗಿ ಅನುಷ್ಠಿಸಿದ ಕರ್ಮಯೋಗ ಜ್ಞಾನ ಯೋಗಗಳಿಂದ ಭಕ್ತಿಯುಕ್ತವಾದ ಯೋಗನಿಷ್ಠೆಯು ಪ್ರಾಪ್ತವಾಗಿ ಪರಮಾತ್ಮ ಸಾಕ್ಷಾತ್ಕಾರ ರೂಪವಾದ ಪರಭಕ್ತಿಯು ಪ್ರಾಪ್ತವಾಗುತ್ತದೆ. ಒಂದು ವೇಳೆ ಜ್ಞಾನಯೋಗಕ್ಕೆ ಸಾಮರ್ಥ್ಯವಿಲ್ಲದಿದ್ದರೂ ಕರ್ಮಯೋಗದಿಂದಲೇ ಆತ್ಮಾವ ಲೋಕನಪ್ರಾಪ್ತವಾಗಿ ಭಕ್ತಿಯೋಗ ನಿಷ್ಠೆಯು ಪ್ರಾಪ್ತವಾಗಬಹುದು. : **ನ ಭಕ್ತಿಮಾ** ಎಂಬುವದರಿಂದ ಇಂತಹ ಸಾಧನ ಕ್ರಮವ್ಯಾವುದೂ ಇಲ್ಲವೆಂದೂ ಹೇಳಿದರು. ಆದುದರಿಂದಲೇ ತಾವು **ಅಕಿಂಚನೋಽನ್ಯಗತಿಃ** - ಸಾಧನಾಂತರ ಗಳ್ಯಾವದೊಂದೂ ಇಲ್ಲದವನೆಂದೂ, **"ಅನನ್ಯಗತಿಃ"** ಸರ್ವೇಶ್ವರನಲ್ಲದೆ ಬೇರೆ ಗತಿಯಿಲ್ಲದವನೆಂದೂ ಹೇಳಿ; ಆ ಕಾರಣದಿಂದಲೇ **ಹೇ ಶರಣ್ಯನೇ** ಎಂದು ಸಂಬೋಧಿಸಿ, ಅದೇಕೆ ಹಾಗೆ ಸಂಬೋಧಿಸಿದ್ದು ಎಂದರೆ ನೀನೇ **"ಮಾಮೇಕಂ ಶರಣಂ ವ್ರಜ"** ಎಂದು ಹೇಳಿರುವದರಿಂದ, **ತ್ವತ್ಪಾದ ಮೂಲಂ** - ನಿನ್ನ ಪಾದಮೂಲವನ್ನೇ **ಶರಣಂ ಪ್ರಪದ್ಯೇ** - ಉಪಾಯವನ್ನಾಗಿ ಹೊಂದಿರುವೆನು. ಹೀಗೆ ಈ ಶ್ಲೋಕದಿಂದ ಆಕಿಂಚನ್ಯವೂ ಅನನ್ಯಗತಿತ್ವವೂ ಪ್ರದರ್ಶಿಸಲ್ಪಟ್ಟಿತು. ಇದರಿಂದ ಈ ಪ್ರಪನ್ನನಿಗೆ ಅವಸಾದ ಉಂಟಾಗಲು ಕಾರಣವೇನೋ ಉಂಟೆಂದು ಮೊದಲು ಹೇಳುತ್ತಾರೆ. ಅನಾದಿಕಾಲ ದಿಂದಲೂ ಸರ್ವೇಶ್ವರನನ್ನು ಹೊಂದದೆಯೂ ಆತನಿಗೆ ಕೈಂಕರ್ಯಗಳನ್ನೆಸಗ ದೆಯೂ ಇರುವದರಿಂದಲೇ ಅನರ್ಹತೆಯುಂಟೆಂಬುವದು ಸುವ್ಯಕ್ತವು. ಆದರೂ ಈತನು ನಿರ್ವೇದ ಪ್ರಾಚುರ್ಯದಿಂದ ಅವಸನ್ನನಾಗಕೂಡದೆಂದು ಹೇಳುತ್ತಾರೆ.

ತನ್ನ ಅನರ್ಹತೆಯ ಸ್ಮರಣೆಯಿಂದುಂಟಾಗುವ ಶೋಕವು ತ್ಯಜಿಸತಕ್ಕದ್ದು

ಆದರೆ ಮೇಲೆ ಹೇಳಿದ ರೀತಿಯಲ್ಲಿ ಆಕಿಂಚನ್ಯಾದ್ಯನುಸಂಧಾನವು

ಅದಡಿಯಾಗ ವಿಳನ್ದ ಕೈಂಕರ್ಯತ್ತೈಯುಮ್ ಪಾರ್‌ತ್ತು "ಪೊಯ್ ನಿನ್ರ ಜ್ಞಾನಮುಮ್ ಪೊಲ್ಲಾ ವೊಳಕ್ಕುಮುಳುಕ್ಕುಡಮ್ಬುಮ್ ಎನ್ರುಲ ಶ್ರೀ

ನಿತ್ಯವೂ ಮಾಡತಕ್ಕದ್ದೆಂದು ಉಪದೇಶಿಸಿದರೆ, ಇಂತಹ ಅನರ್ಹತೆಯು ಬಹು ಕಾಲದಿಂದ ತನಗೆ ಒದಗಿರುವದರಿಂದ ತನ್ನ ಈ ಜನ್ಮವೂ ಕೂಡ ವ್ಯರ್ಥವೆಂದು ಭಾವಿಸಿ, ತುಂಬಾ ಶೋಕವು ಪ್ರಾಪ್ತವಾಗಿ, ಉತ್ತರ ಕೈಂಕರ್ಯ ಮೊದಲಾದವು ಗಳಲ್ಲಿ ತಾತ್ಪರ್ಯಭಾವವು ಉಂಟಾದೀತಲ್ಲವೇ ? ಎಂದರೆ ಈಗ ಪ್ರಪನ್ನನು ಮಾಡಿರುವ ಭರನ್ಯಾಸ ಪ್ರಭಾವದಿಂದ ವಿಪರೀತ ವಾಸನಾ ಎಲ್ಲವೂ ನಿವರ್ತಿಸಿರು ವದರಿಂದ ಹಿಂದೆ ಕಳೆದುಹೋದುದಕ್ಕೆ ಶೋಕಿಸಲು ಕಾರಣವಿಲ್ಲವೆಂದು ಹೇಳಿ, ಸರ್ವೇಶ್ವರನ ಅವತಾರ ರಹಸ್ಯಗಳ ಅನುಸಂಧಾನದಿಂದ ತನ್ನ ಅನರ್ಹತೆ ಯೆಲ್ಲಾ ಕಳೆದುಹೋಗುತ್ತದೆಂದು ಸಪ್ರಮಾಣವಾಗಿ ಉಪದೇಶಿಸುತ್ತಾರೆ.

ಇಪ್ಪಡಿ - ಮೇಲೆ ಹೇಳಿದ ರೀತಿಯಲ್ಲಿ ಕಾರ್ಪಣ್ಯಾನುಸಂಧಾನ ಮೂಲ ಕವಾಗಿ, **ತನಕ್ಕನಾದಿ ಕಾಲಂ ಪಿರನ್ದ** - ಹಿಂದೆ ಅನಾದಿ ಕಾಲದಿಂದಲೂ ಉಂಟಾದ, **ಅನರ್ಹತೆಯುಂ** - ಸರ್ವೇಶ್ವರನನ್ನು ಹೊಂದದೇಯಿದ್ದ ಅಯೋ ಗ್ಯತೆಯನ್ನೂ, **ಅದಡಿಯಾಗ**-ತನ್ಮೂಲವಾಗಿ, **ವಿಳನ್ದ ಕೈಂಕರ್ಯತ್ತೈಯುಂ**- ಬಿಡಲ್ಪಟ್ಟ ಕೈಂಕರ್ಯವನ್ನೂ, **ಪಾರ್‌ತು** - ಆಲೋಚಿಸಿ, ಆದರೆ ಇಂತಹ ಕಾರ್ಪ ಣ್ಯಾನುಸಂಧಾನದಿಂದಾಗುವ ಪ್ರಯೋಜನವೇನು ಎಂದರೆ, ತಾನು ಶಕ್ತನೆಂದೇ ಭಾವಿಸಿ ಉಪಾಯಾಂತರದಲ್ಲಿ ಎಂದಿಗೂ ಅಭಿಪ್ರಾಯವಿಲ್ಲದೇ ಇರಲೆಂಬ ಭಾವವು.

(೧) ತಿರುವಿರುತ್ತಂ ೧.

ಪೊಯ್ ನಿನ್ರ ಜ್ಞಾನಮುಂ ಪೊಲ್ಲಾ ವೊಳುಕ್ಕು ಮುಳುಕ್ಕುಡ ಮ್ಬುಂ । ಇನ್ನಿನ್ರ ನೀರ್ಮೈ ಯಿನಿಯಾ ಮುರಾಮೈ ಉಯಿರ ಳಿಪ್ಪಾನ್ ಎನ್ನಿನ್ರ । ಯೋನಿಯುಮಾಯ್ ಪ್ಪಿರನ್ದಾಯಿ ಮೈ ಯೋರ್ ತಲೈವಾ । ಮೆಯ್ಯನಿನ್ರು ಕೇಟ್ಟರುಳಾಯ್ ಅಡಿ ಅಡಿಯೇನ್ ಶೆಯ್ಯುಮ್ ವಿಣ್ಣಪ್ಪಮೇ ॥೧॥

ಎಂಬುವದು ಪೂರಾ ಪಾಶುರವು. **ಉಯಿರ್** - ಪ್ರಾಣಿಗಳನ್ನು, **ಅಳಿಪ್ಪಾನ್** - ಉಪಾಯಭೂತನಾಗಿ ರಕ್ಷಿಸುವದಕ್ಕಾಗಿ, **ಎನ್ನಿನ್ರ** - "ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ" ಎಂದು ಹೇಳಿರುವ ಹಾಗೆ ನಮ್ಮಗಳ ಹಾಗೆ ಅನೇಕ ಜನ್ಮಗಳನ್ನು ಎತ್ತಿರುವದರಿಂದ, ಅನೇಕವಿಧಗಳಾದ, **ಯೋನಿಯುಮಾಯ್** - ಮತ್ಸ್ಯಕೂರ್ಮವರಾಹ ನಾರಸಿಂಹ ರಾಮಕೃಷ್ಣಾದಿರೂಪಕ್ಕಾಗಿಯೋನಿಗಳಲ್ಲಿ,

ಪ್ಪಣ್ಣುಮ್ ನಿರ್ವೇದ ಪ್ರಾಚುರ್ಯತ್ತಾಲೆ ಅವಸನ್ನನಾಗಾದೆ "ಉಯಿರ ಳಿಪ್ಪಾನೆನ್ನಿನ್ರ ಯೋನಿಯುಮಾಯ್ ಪಿರನ್ದಾಯಿ ಮ್ಮೈಯೋರ್

ಪಿರನ್ದಾಯ್-ಅವತರಿಸಿದವನೇ, ಇಮ್ಮೈಯೋರ್-ನಿತ್ಯಸೂರಿಗಳಿಗೆ, ತಲೈವಾ-ಸ್ವಾಮಿಯಾದವನೇ, ಪೊಯ್ ನಿನ್ರ ಜ್ಞಾನಮುಂ-ಸುಳ್ಳಾದ ಜ್ಞಾನವು, ಯಾವುದೆಂದರೆ "ಅನಾತ್ಮನಿ ಆತ್ಮಬುದ್ಧಿರ್ಯಾ ಅಸ್ವೇಸ್ವಮಿತಿಯಾ ಮತಿಃ" ದೇಹವೇ ಆತ್ಮಾ ಎಂಬ, ತಾನೇ ಸ್ವತಂತ್ರನೆಂಬ ಯಥಾರ್ಥವಲ್ಲದ ಜ್ಞಾನವು, ಪೊಲ್ಲಾವೊಳುಕ್ಕುಂ - ಅದರಿಂದುಂಟಾಗುವ ದುರಾಚಾರವು, ಅಳುಕ್ಕುಡಂಬುಂ – ಆ ಕಾರಣದಿಂದುಂಟಾದ ಕೊಳೆಯಿರುವ ಎಂದರೆ ಪಾಪಮಾಡಿದ ದೇಹವೂ, ಇನ್ನಿನ್ರ್ಮೈ ಇಂತಹ ವಿಪರೀತ ಸ್ವಭಾವವನ್ನು, ಇನಿ - ಇನ್ನು ಮೇಲೆ, ಎಂದರೆ ನಿನ್ನಲ್ಲಿ ಶರಣಾಗತಿಮಾಡಿದ ಬಳಿಕ, ಯಾಮ್ - ನಾನು ಬಹುವಚನವೇಕೆಂದರೆ, ಅನೇಕ ಜನ್ಮಗಳನ್ನೆತ್ತಿ, ಅನೇಕ ನಾಮರೂಪಗಳನ್ನು ಹೊಂದಿದ ನಾನು, ಉರಾಮ್ಮೈ - ಪುನಃ ಅವುಗಳನ್ನು ಪಡೆಯದ ಹಾಗೆ, ಅಡಿಯೇನ್-"ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ" ಎಂದು ಹೇಳಿರುವ ಹಾಗೆ ಸ್ವಭಾವತಃ ದಾಸನಾದ ನಾನು, ಶೆಯ್ಯುಂ ಮಾಡುವ, ಮೆಯ್ – ಸತ್ಯವಾದ, ವಿಣ್ಣಪ್ಪಂ - ವಿಜ್ಞಾಪನವನ್ನು, ನಿನ್ರು - ಅನೇಕ ಜಗದ್ವ್ಯಾಪಾರಗಳಲ್ಲಿ ನೀನು "ಸದಾ ವರ್ತ ಏವ ಚ ಕರ್ಮಣಿ" ಎಂದು ಹೇಳಿರುವ ಹಾಗೆ, ಸದಾ ಪ್ರವೃತ್ತನಾಗಿದ್ದರೂ ಸ್ವಲ್ಪ ನಿಂತು ಸಾವಧಾನದಿಂದ, ಕೇಟ್ಟರುಳಾಯ್ - ಕೇಳಿ ಕೃಪೆಮಾಡಬೇಕಯ್ಯಾ, ಎನ್ರು - ಎಂದು ಹೇಳಿರುವ ಹಾಗೆ, ಅಲಟ್ರಿಪ್ಪಣ್ಣುಮ್ - ಪ್ರಲಾಪಿಸುವ ಹಾಗೆ ಮಾಡುವ, ನಿರ್ವೇದ ಪ್ರಾಚುರ್ಯತ್ತಾಲೇ – ಯಾವ ಕೆಲಸಕ್ಕೂ ಉತ್ಸಾಹವಿಲ್ಲದಿರುವ ದೈನ್ಯದ ಆಧಿಕ್ಯದಿಂದ, ಅವಸನ್ನನಾಗಾದೆ - "ವೃಥೈವ ಭವತೋ ಯಾತಾ ಭೂಯಸೀ ಜನ್ಮ ಸಂತತಿಃ" ಅನೇಕ ಜನ್ಮಸಂತತಿಗಳು ನಿನಗೆ ನಿರರ್ಥಕವಾಗಿ ಗತಿಸಿ ಹೋದವು" ಎಂದು ಶಾಂಡಿಲ್ಯ ಸ್ಮೃತಿಯಲ್ಲಿ ಹೇಳಿರುವ ಹಾಗೆ ಮನಸ್ಸಿನಲ್ಲಿ ಖಿನ್ನನಾಗಿ ಯಾವ ಕೆಲಸವನ್ನು ಮಾಡಲೂ ನಿರುತ್ಸಾಹನಾಗಿ, ಉಯಿರಳಿಪ್ಪಾ..........ತಲೈವಾ "ಸಂಸಾರಿ ಚೇತನರ ಸಂರಕ್ಷಣಾರ್ಥವಾಗಿಯೇ ದೇವತಿರ್ಯಙ್ಮನುಷ್ಯಾದ್ಯನೇಕ ರೂಪವನ್ನು ಹೊಂದಿ ಅವತರಿಸಿರುವೆ ಓ ನಿತ್ಯಸೂರಿಗಳಿಗೆ ಸ್ವಾಮಿಯೇ, ಎಙ್ಗಳ್ರಪಡಿಯೇ - ಎಂದು ಹೇಳಿರುವ ಹಾಗೆ, ಎದಿರ್ - ಆಶ್ರಿತರ ಎದುರಿಗೆ ಬಂದು, ಶೂಳಲ್ - ಅಡ್ಡವಾಗಿ ಸುತ್ತುವ ಹಾಗೆ, ಪುಕ್ಕು ನಿರ್ಕ್ಕರ - ಪ್ರವೇಶಿಸಿ ನಿಲ್ಲುವ, ಶರಣ್ಯನುಡೈಯ - ಸರ್ವರಕ್ಷಕನ, ಇದಕ್ಕೆ

ತಲೈವಾ" ಎಂಗಿರಪಡಿಯೇ ಎದಿರ್ ಶೂಳಲ್ ಪುಕ್ಕುನಿರ್ಕಿರ ಶರಣ್ಯನು ಡೈಯ, ತಾಯ್‌ಮುಲೈಪ್ಪಾಲ್ ಪೋಲೆ ಪಥ್ಯತಮುಮುಮಾಯ್ ಪ್ರಿಯತಮುಮುಮಾನ ಉಪದೇಶತ್ತಾಲೆ ತೆಳಿನ್ದು, ಅವತಾರರಹಸ್ಯಾದಿಗಳಾಗಿರ

ಉಪದೇಶತ್ತಾಲೆ ಎಂಬುವದರೊಂದಿಗೆ ಅನ್ವಯವು. ಗೀತೆಯೇ ಮೊದಲಾದ ಉಪದೇಶವು, ಎಂತಹ ಉಪದೇಶವೆಂದರೆ ಹೇಳುತ್ತಾರೆ :—**ತಾಯ್‌ಮುಲೈಪ್ಪಾಲ್ ಪೋಲೆ** - ಮಗುವಿಗೆ ತಾಯಿಯ ಹಾಲಿನ ಹಾಗೆ, **ಪಥ್ಯತಮುಮುಮಾಯ್** - ಕ್ಷೇಮವನ್ನುಂಟುಮಾಡುವದಾಗಿಯೂ, **ಪ್ರಿಯತಮುಮುಮಾನ** - ತುಂಬಾ ಇಷ್ಟವಾದುದಾಗಿಯೂ ಇರುವ, **ಉಪದೇಶತ್ತಾಲೆ ತೆಳಿನ್ದು** ಗೀತಾದಿ ಉಪದೇಶದಿಂದ ಜ್ಞಾನವನ್ನು ಹೊಂದಿ, **ಅವತಾರರಹಸ್ಯಾದಿಗಳಾಗಿರ** - "ಬಹೂನಿ ಮೇ ವ್ಯತೀತಾನಿ" ಎಂದು ಪ್ರಾರಂಭಿಸಿ ಐದು ಶ್ಲೋಕಗಳಲ್ಲಿ ಉಪಪಾದಿತಗಳಾದ ಅವತಾರ ರಹಸ್ಯಗಳೇ ಮೊದಲಾದವುಗಳೆಂಬ, ಇಲ್ಲಿ ಆದಿ ಶಬ್ದದಿಂದ ಗೀತೆಯಲ್ಲಿ ಹೇಳಲ್ಪಟ್ಟಿರುವ ಪುರುಷೋತ್ತಮ ವಿದ್ಯೆಯು ಬೋಧಿತವಾಯಿತು ಅದು ಯಾವುದೆಂದರೆ :—

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ।
ಯಸ್ಮಾತ್ ಕ್ಷರಮತೀತೋಹಂ ಅಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ ॥
ಯೋ ಮಾಮೇವ ಮಸಮ್ಮೂಢೋ ಜಾನಾತಿ ಪುರುಷೋತ್ತಮಂ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ।
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ॥

ಎಂಬೀ ಶ್ಲೋಕಗಳಲ್ಲಿ ಯಾವನು ಬದ್ಧ ಮುಕ್ತ ನಿತ್ಯರುಗಳಿಗಿಂತ ವಿಲಕ್ಷಣನಾಗಿ ಪುರುಷೋತ್ತಮನೊಬ್ಬನಿದ್ದಾನೆಂದೂ ಆತನು ಎಲ್ಲವನ್ನೂ ಪ್ರವೇಶಿಸಿ, ಎಲ್ಲಕ್ಕೂ ನಿಯಾಮಕನಾಗಿದ್ದಾನೆಂದೂ ತಿಳಿಯುತ್ತಾನೋ ಆತನೀಗ ಸಮಸ್ತವನ್ನು ತಿಳಿದವನು, ಇದೀಗ ಪುರುಷೋತ್ತಮ ವಿದ್ಯೆಯೆಂಬ ರಹಸ್ಯವು. ಅದೀಗ ಓ ನಿರ್ದುಷ್ಟನಾದ ಅರ್ಜುನನೇ ನನಗೆ ನಿನ್ನಲ್ಲಿರುವ ಪ್ರೀತ್ಯತಿಶಯದಿಂದ ನನ್ನಿಂದ ನಿನಗೆ ಉಪದೇಶಿಸಲ್ಪಟ್ಟಿತೆಂದು ಹೇಳಲ್ಪಟ್ಟಿರುತ್ತದೆ. **ತೀರ್ಥಙ್ಗಳೈ ಅವಗಾಹಿತ್ತು** - ತೀರ್ಥಗಳಲ್ಲಿ ಸ್ನಾನಮಾಡಿ ಎಂದರೆ ಜನ್ಮಪವಿತ್ರತೆ ಮತ್ತು ಸಾಧರ್ಮ್ಯವನ್ನುಂಟು

ತೀರ್ಥಂಗಳೈಯವಗಾಹಿತ್ತು ಶೇರಿ, (೧) "ಉತ್ತಮೇ ಚೇದ್ವಯಸಿ ಸಾಧುವೃತ್ತಃ" ಎನ್ರುಮ್, (೨) "ದುರಾಚಾರೋಽಪಿ ಸರ್ವಾಶೀ ಕೃತಘ್ನೋ ನಾಸ್ತಿಕಃ ಪುರಾ । ಸಮಾಶ್ರಯೇದಾದಿದೇವಂ ಶ್ರದ್ಧಯಾ ಶರಣಂ ಯದಿ ನಿರ್ದೋಷಂ ವಿದ್ಧಿ ತಂ ಜನ್ತುಂ ಪ್ರಭಾವಾತ್ಪರಮಾತ್ಮನಃ" ಎನ್ರುಂ

ಮಾಡುವ ಈ ಅವತಾರ ರಹಸ್ಯಾರ್ಥಗಳನ್ನು ಚನ್ನಾಗಿ ಮನಸ್ಸಿಗೆ ತಂದುಕೊಂಡು, (೫೬೯-೫೭೦ನೆಯ ಪುಟಗಳನ್ನು ನೋಡಿ) **ಶೇರಿ** - ತಾನು ಅನರ್ಹನೆಂಬ ಅಪಸಾಪವನ್ನು ತ್ಯಜಿಸಿ, ಸಾತ್ವಿಕ ಧೃತಿಯನ್ನು ತಾಳಿ ಎಂದರೆ ಧೈರ್ಯವನ್ನು ಹೊಂದಿ,

(೧) **ಯದ್ಯವ್ವನೇ ಚರತಿ ವಿಭ್ರಮೇಣ ಸದ್ವಾಸದ್ವಾ ಯಾದೃಶಂವಾ ಯಥಾವಾ । ಉತ್ತಮೇ ಚೇದ್ವಯಸಿ ಸಾಧುವೃತ್ತಸ್ತದೇವಾಸ್ಯ ಭವತಿ ನೇತರಾಣಿ ।**

ಎಂಬುವದು ಪೂರಾ ಶ್ಲೋಕವು. **ಸದ್ವಾಸದ್ವಾ** - ಒಳ್ಳೇ ಮಾರ್ಗದಲ್ಲಾಗಲಿ ಕೆಟ್ಟ ಮಾರ್ಗದಲ್ಲಾಗಲಿ, **ಯಾದೃಶಂವಾ** - ಎಂಥಾದ್ದೇಯಾಗಲಿ, **ಯಥಾವಾ** - ಯಾವ ರೀತಿಯಲ್ಲೇ ಆಗಲಿ, **ಯವ್ವನೇ** - ಯವ್ವನ ಕಾಲವಲ್ಲಿ. **ವಿಭ್ರಮೇಣ** - ವಿಶೇಷ ಭ್ರಮೆಯಿಂದ, **ಚರತಿ ಯದಿ** - ಪ್ರವರ್ತಿಸಿದರೂ, **ಉತ್ತಮೇ ವಯಸಿ** - ವಾರ್ಧಕ್ಯದಲ್ಲಿ ಎಂದರೆ ಚರಮ ದೆಸೆಯಲ್ಲಿ, **ಸಾಧುವೃತ್ತಶ್ಚೇತ್** - ಒಳ್ಳೇ ನಡತೆಯುಳ್ಳವನಾದರೆ, **ಅಸ್ಯ** - ಈತನಿಗೆ, **ತದೇವ ಭವತಿ** - ಆ ಸಾಧುವೃತ್ತವೇ ಕೊನೆಗೆ ಪರಮ ಶ್ರೇಯಸ್ಸಿಗೆ ಕಾರಣವಾಗುತ್ತದೆ. **ಇತರಾಣಿ** - ಮೇಲೆ ಹೇಳಿದ ಯವ್ವನದ ದುರ್ವೃತ್ತಗಳು, **ನ** - ಈತನ ಶ್ರೇಯಸ್ಸಿಗೆ ಪ್ರತಿಬಂಧಕವಾಗುವುದಿಲ್ಲವು

ಇದರಿಂದ ಹಿಂದೆ ಎಷ್ಟು ಅನರ್ಹತೆಯಿದ್ದರೂ ಈಗ ಭರನ್ಯಾಸಾನುಷ್ಠಾನಾನಂತರ ಸಂಪೂರ್ಣಾರ್ಹತೆ ಪ್ರಾಪ್ತವಾಗುತ್ತೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸಿದರು.

೨. **ಪುರಾ** - ಮೊದಲು ಎಂದರೆ ಸರ್ವೇಶ್ವರನನ್ನಾಶ್ರಯಿಸುವದಕ್ಕಿಂತ ಮುಂಚೆ, **ದುರಾಚಾರೋಽಪಿ** - ಕೆಟ್ಟ ನಡತೆಯುಳ್ಳವನಾಗಿದ್ದರೂ ಕೂಡ, **ಸರ್ವಾಶೀ** - ಆಹಾರ ನಿಯಮವಿಲ್ಲದೆ ಎಲ್ಲಾ ಕಡೆಯಲ್ಲೂ ದೋಷಯುಕ್ತ ಪದಾರ್ಥಗಳನ್ನೂ ಕೂಡ ಭುಂಜಿಸುವವನಾಗಿಯೂ, **ಕೃತಘ್ನಃ** - ಉಪಕಾರ ಸ್ಮರಿಸದೆ ಪ್ರತ್ಯುಪಕಾರಮಾಡದವನಾಗಿಯೂ, **ನಾಸ್ತಿಕಃ** -

---

೧. ಬೋಧಾಯನಗೃಹ್ಯ ಸೂತ್ರಂ ೧೪.೧೧ ೨. ಸಾತ್ವತ ೧೬.೨೩

(೩) "ಯದ್ಬ್ರಹ್ಮಕಲ್ಪನಿಯುತಾನುಭವೇಽಪ್ಯನಾಶ್ಯಂ ತತ್ಕಿಲ್ಬಿಷಂ ಸೃಜತಿ ಜನ್ತುರಿಹಕ್ಷಣಾರ್ಧೇ । ಏವಂ ಸದಾ ಸಕಲ ಜನ್ಮಸು ಸಾಪರಾಧಂ

ಪರಮಾತ್ಮನೊಬ್ಬನಿದ್ದಾನೆಂದು ನಂಬದವನಾಗಿಯೂ, ಹೀಗೆ ಇದ್ದರೂ, ಕೊನೆಗಾದರೂ, **ಶ್ರದ್ಧಯಾ** - ತುಂಬಾ ಭಕ್ತಿ ವಿಶ್ವಾಸದಿಂದ, **ಆದಿದೇವಂ** - ಮೂಲಭೂತನಾದ ಸರ್ವೇಶ್ವರನನ್ನು, **ಶರಣಂ** - ಉಪಾಯವನ್ನಾಗಿ, **ಸಮಾಶ್ರಯೇದ್ಯದಿ** - ಆಶ್ರಯಿಸಿದುದಾದರೆ, **ತಂ ಜನ್ತುಂ** – ಆ ಜನ್ಮವೆತ್ತಿದವನನ್ನು, **ಪರಮಾತ್ಮನಃ ಪ್ರಭಾವಾತ್** - ಸರ್ವೇಶ್ವರನ ಮಹಿಮೆಯ ಮೂಲಕ, **ನಿರ್ದೋಷಂ ವಿದ್ಧಿ** - ದೋಷರಹಿತನನ್ನಾಗಿ ತಿಳಿ, ಚೇತನನು ಮೊದಲಿಗೆ ಎಷ್ಟೆಷ್ಟು ಪಾಪಗಳನ್ನೆಸಗಿದ್ದರೂ ಯಾವಾಗ ಸರ್ವೇಶ್ವರನನ್ನೇ ಸಿದ್ಧೋಪಾಯನನ್ನಾಗಿ ಭಾವಿಸಿ ಶರಣಾಗತಿಯನ್ನು ಮಾಡಿದನೋ, ಆಗ ಸರ್ವೇಶ್ವರನ ಕೃಪಾಪ್ರಭಾವದಿಂದ ಆತನು ಹಿಂದೆ ಮಾಡಿದ ಸರ್ವಾಪರಾಧಗಳೂ ನಶಿಸಿ ಹೋಗುವದರಿಂದ ಆತನನ್ನು ನಿರ್ದೋಷಿಯೆಂದು ಭಾವಿಸತಕ್ಕದ್ದೆಂಬ ಭಾವವು. **ಎನ್ನುಂ** - ಎಂದು ಹೇಳಿರುವ ಹಾಗೂ ; ಈ ಮೇಲಿನ ಪ್ರಮಾಣದಿಂದಲೂ ಕೂಡ ಪೂರ್ವದಲ್ಲಿ ಎಷ್ಟು ಅನರ್ಹತೆ ಇದ್ದರೂ ಈಗ ಅರ್ಹತೆಯುಂಟೆಂದು ತೋರಿಸಿರುತ್ತಾರೆ. ಈ ಸಂದರ್ಭದಲ್ಲಿ,

"ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ॥ "

(ರಾ. ಅಯೋಧ್ಯಾ ೧. ೧೧) ಎಂಬ ಶ್ಲೋಕವು ಅನುಸಂಧೇಯವು.

(೩) "**ಯತ್** - ಯಾವ ಪಾಪವು, **ಬ್ರಹ್ಮಕಲ್ಪನಿಯುತ** - ಅನೇಕ ಬ್ರಹ್ಮಕಲ್ಪಗಳಲ್ಲಿ, **ಅನುಭವೇಽಪಿ** – ಅನುಭವಿಸಿದರೂ, **ಅನಾಶ್ಯಂ**-ನಾಶವನ್ನು ಹೊಂದಿಸಲು ಸಾಧ್ಯವಿಲ್ಲವೋ, **ತತ್ಕಿಲ್ಬಿಷಂ** - ಅಂತಹ ಪಾಪವನ್ನು, **ಜನ್ತುಃ** - ಜನ್ಮಾದಿಗಳಿಗೆ ಸಿಲುಕಿದ ಪ್ರಾಣಿಯು, **ಇಹ** - ಈ ಲೋಕದಲ್ಲಿ, **ಕ್ಷಣಾರ್ಧೇ** - ಒಂದು ಅರ್ಧ-ಕ್ಷಣದಲ್ಲಿ, **ಸೃಜತಿ** - ಸೃಷ್ಟಿಸುತ್ತಾನೆ. ಎಂದರೆ ಮಾಡುತ್ತಾನೆಂಬ ಭಾವವು. **ಏವಂ** - ಹೀಗೆ, **ಸದಾ** - ಯಾವಾಗಲೂ, **ಸಕಲಜನ್ಮಸು** - ಎಲ್ಲಾ ಜನ್ಮಗಳಲ್ಲೂ, **ಸಾಪರಾಧಂ** - ಅಪರಾಧಯುಕ್ತನಾದವನನ್ನು **ತದಭಿಸಂಧಿವಿರಾಮಮಾತ್ರಾತ್** - ಆ ಕಿಲ್ಬಿಷದ ಅಭಿಸಂಧಿಯನ್ನು ಬಿಟ್ಟ ಮಾತ್ರದಿಂದ, **ಕ್ಷಾಮ್ಯಸಿ** - ಕ್ಷಮಿಸಿಬಿಡುತ್ತೀಯೋ, **ಅಹೋ** – ಆಶ್ಚರ್ಯವು ; ನಿನ್ನ ಕೃಪಾ

೩. ವೈಕುಂಠಸ್ತವ ೩.೧

ಕ್ಷಾಮ್ಯಸ್ಯ ಹೋ ತದಪಿ ಸಂಧಿವಿರಾಮಮಾತ್ರಾತ್", ಎನ್ನುಂ (೪) "ಪ್ರವಹತ್ಯೇವ ಹಿ ಜಲೇ ಸೇತುಃ ಕಾರ್ಯೋ ವಿಜಾನತಾ" ಎನ್ನುಂ (೫) "ಮಾಳುಮೊರಿಡತ್ತಿಲುಮ್ ವಣಕ್ಕೊಡು ಮಾಳ್ವದು ವಲಮೇ"

ಮಾಹಾತ್ಮ್ಯೆಯು ಅತ್ಯಾಶ್ಚರ್ಯಕರವಾದುದೆಂಬಭಿಪ್ರಾಯವು. ಈ ಪ್ರಮಾಣದಿಂದ, ಚೇತನನು ಎಷ್ಟು ಅಪರಾಧಿಯಾಗಿದ್ದರೂ, ಅಂತಹ ಅಪರಾಧಾಭಿಸಂಧಿಯನ್ನು ಯಾವಾಗ ತ್ಯಜಿಸಿದನೋ ಆಗ ಸರ್ವ ಶ್ರೇಯಸ್ಸಿಗೂ ಅನರ್ಹನೆಂಬ ಭೀತಿಯು ತೊಲಗಿತು ಎಂದು ತೋರಿಸಲ್ಪಟ್ಟಿತು," ಎನ್ನುಂ - ಎಂಬುವಾಗಿಯೂ,

"**ಜಲೇ** - ಉದಕವು, **ಪ್ರವಹತ್ಯೇವ** - ಪ್ರವಹಿಸುತ್ತಾ ಇರುತ್ತಿರಲಾಗಿ, **ವಿಜಾನತಾ** - ತಿಳುವಳಿಕೆಯುಳ್ಳವನಿಂದ, **ಸೇತುಃ**-ಅಣೆಯು, **ಕಾರ್ಯಃ** - ಮಾಡಲ್ಪಡತಕ್ಕದ್ದು. ಇದು ಭಗವತ್ಕೈಂಕರ್ಯ ವಿರೋಧಿಯಾದ ಇಂದ್ರಿಯಗಳ ವಿಷಯ ಪ್ರವರ್ತನೆಯನ್ನಡಗಿಸಿ ಈ ಸಮಯವಾದ ಈ ಜನ್ಮದಲ್ಲೇ ಅವು ಭಗವತ್ಕೈಂಕರ್ಯದಲ್ಲೇ ಅವಿಚ್ಛಿನ್ನವಾಗಿ ಪ್ರವರ್ತಿಸುವ ಹಾಗೆ ಮಾಡತಕ್ಕದ್ದೆಂಬುವದಕ್ಕೆ ಪ್ರಮಾಣವು; ಇದರಿಂದ ಹಿಂದೆ ಕಳೆದುಹೋದುದನ್ನು ಕುರಿತು ಶೋಕಕ್ಕೆ ಕಾರಣವಿಲ್ಲವೆಂದು ತೋರ್ಪಡಿಸಿರುತ್ತಾರೆ.

೫ ಇದು ಪಾಶುರದ ೪ನೆಯ ಪಾದವು.

ನಾಳು ನಿನ್ರಡು ನಮುಪಿಳವ್ಯೈ ಯುಜ್ಜೋಡುವಿನ್ಯೈ ಯುಡನೇ ।
ಮಾಳುಮ್, ಓರ್ ಕುರೈ ವಿಲ್ಲೈ ಮನನಕಮಲಮರಕ್ಕಳುವಿ ॥
ನಾಳು ನನ್ನಿರುವುಡೈಯಡಿಕಡನ್ನಲಜ್ಗಳ್ಲಣಜ್ಜ್ ।
ಮಾಳುಮೊರಿಡತ್ತಿಲುಮ್ ವಣಕ್ಕೊಡುಮಾಳ್ವದು ವಲಮೇ ॥

ಈ ಪ್ರಮಾಣವೂ ಕೂಡ, ಹಿಂದೆ ಹೋದುದಕ್ಕೆ ಶೋಕವು ಅನಾವಶ್ಯಕವೆಂದೂ, ಆತನನ್ನು ಆಶ್ರಯಿಸಿದವನಿಗೆ ಏನೊಂದೂ ನ್ಯೂನತೆಯೂ ಇಲ್ಲವೆಂದೂ ಅನ್ತಿಮದೆಶೆಯಲ್ಲಿ ಒಂದು ಅಂಜಲಿ ರೂಪವಲ್ಲಾಗಲಿ, ಒಂದು ಉಕ್ತಿಮಾತ್ರವಲ್ಲಾಗಲಿ, ಒಂದು ಸ್ಮರಣೆರೂಪವಲ್ಲಾಗಲಿ ಹೀಗೆ ಕಾಯಿಕ ವಾಚಿಕ ಮಾನಸಿಕ ಕೈಂಕರ್ಯದಲ್ಲಿ ಯಾವುದನ್ನಾಗಲಿ ಮಾಡಿದರೂ ಪ್ರಾಪ್ಯಾನುಭವವುಂಟೆಂದೂ ಬೋಧಿಸುತ್ತವೆ. ಮನನಕ ಮಲಮರ-ತ್ರಿಮೂರ್ತ್ಯೈಕ್ಯವೆಂಬ ಮಲ ಅಥವಾ ದುಷ್ಟೇಂದ್ರಿಯಗಳಿಂದ ಪ್ರೇರಿತವಾಗಿ ದೋಷಯುಕ್ತವಾದ ಇವೇಮೊದಲಾದ ಸರ್ವ ಸಂಶಯರೂಪ

---

೪ ನಂಗಿ ನಿತ್ಯಂ ೫. ತಿರು ೧.೩.೮

ಎನ್ರುಂ, ಶೊಲ್ಲುಗಿರ ನ್ಯಾಯತ್ತಾಲೆ ಗತತ್ತುಕ್ಕು ಶೋಕಿಯಾದೆ, ಗತಮಾನವಯೋಗ್ಯತೈಯೈ ಕಣ್ಡು ಕಲವುಮ್ ಪಾರಾದೇ, ಅಪರ್ಯನುಯೋಜ್ಯಮಾಯನವಧಿಕಮಾನ ಶರಣ್ಯ ಪ್ರಭಾವತ್ತಾಲೆ ಯಿಪ್ಪೋದು ಪಿರನ್ದ ಯೋಗ್ಯತೈಯೈ ಕಣ್ಡು ವರುಗಿರ ನೀರುಕ್ಕಣೈ, ಕೋಲುಮ್ ಕಣಕ್ಕಿಲೆ ಇವ್ವವಸ್ಥೈಕ್ಕನುರೂಪಮಾನ ಆಜ್ಞಾನುಜ್ಞಾನು ವರ್ತನ

ಮಲಗಳೆಲ್ಲಾ ನಶಿಸಿ ಹೋಗುವ ಹಾಗೆ, **ಕಳುವಿ**-ಆ ಮನಸ್ಸನ್ನು ವಿವೇಕವೆಂಬ ಜಲದಿಂದ ತೊಳೆದು, **ನಾಳುಮ್ ನಮ್ ತಿರುವುಡೈ** - ಪ್ರತಿದಿನವೂ ಅನುಗ್ರಹಮುಖರಾಗಿ ನಮ್ಮ ಪುರುಷಕಾರಭೂತೆಯಾದ ಲಕ್ಷ್ಮಿಯ ಪತಿಯ, **ಅಡಿಗಳ್ ತಮ್** - ತಿರುವಡಿಗಳನ್ನು ಆಶ್ರಯಿಸಿದ ನಂತರ, **ನಾಳುಮ್ ಇನ್ರು ಅಡುಮ್** - ಯಾವಾಗಲೂ ಇದ್ದುಕೊಂಡು ಬಾಧಿಸುತ್ತಿರುವ **ನಮ ಪಳವಿನೈ ಅಡಕ್ಕೋಡುವಿನ್ನೈ**-ನಮ್ಮ ಅನಾದಿಯಾಗಿ ಬಂದಿರುವ ಅತ್ಯಂತ ಕ್ರೂರ ಪಾಪಗಳು, **ಉಡನೇ ಮಾಳುಮ್** - ಆಶ್ರಯಿಸಿದ ಒಡನೆಯೇ ನಶಿಸಿ ಹೋಗುತ್ತವೆ. **ಓರ್ ಕುರೈವಿಲ್ಲೈ** - ನಮಗೆ ಇನ್ನು ಮೇಲೆ ಏನೊಂದೂ ಕೊರತೆಯಿಲ್ಲವು. ವಿಷಾದಕ್ಕೆ ಕಾರಣವಿಲ್ಲವೆಂಬ ಭಾವವು. **ಮಾಳುಮೋರಿಡತ್ತಿಲುಮ್** - ದೇಹಾವಸಾನವುಂಟಾಗುವ ಅವಸ್ಥೆಯಲ್ಲೂ ಎಂದರೆ ಅಂತಿಮ ಕಾಲದ ಒಂದು ಕ್ಷಣದಲ್ಲಿ ಎಂಬ ಭಾವವು, **ವಣಕ್ಕೋಡು ಮಾಳ್ವದು** - ಅಂಜಲಿ, ನಾಮೋಚ್ಚಾರಣೆ, ಅಂತಿಮಸ್ಮೃತಿ ಮೊದಲಾದ ದಾಸ್ಯಭಾವವನ್ನು ತೋರಿಸುವ ಕೈಂಕರ್ಯಗಳೊಂದಿಗೆ ದೇಹತ್ಯಾಗವು, **ವಲಮ್** - ಪ್ರಬಲವಾದುದು ಎಂದರೆ ಪ್ರಾಪ್ಯವನ್ನು ಹೊಂದಿಸುವ ಶ್ರೇಯೋರೂಪವಾದುದೆಂಬ ಭಾವವು."

ಎನ್ರುಮ್ - ಎಂದೂ, **ಶೊಲ್ಲುಗಿರನ್ಯಾಯತ್ತಾಲೆ** - ಹೇಳಿರುವ ಪ್ರಕಾರವಾಗಿ **ಗತತ್ತುಕ್ಕು ಶೋಕಿಯಾದೆ** - ಹಿಂದೆ ಕಳೆದುಹೋದುದಕ್ಕೆ ಎಂದರೆ ಹಿಂದಿನ ತನ್ನ ನಡತೆಗೆ ವ್ಯಸನಪಡದೆ, **ಗತಮಾನ ವಯೋಗ್ಯತೈಯೈ** - ಗತಿಸಿಹೋದ ಅಯೋಗ್ಯತೆಯನ್ನು ಕಂಡು **ಅಕಲವುಮ್ ಪಾರಾದೆ** - ಇದುವರೆವಿಗೂ ಕೈಂಕರ್ಯವು ತಪ್ಪಿಹೋದುದನ್ನು ಸ್ಮರಿಸದೆ, **ಅಪರ್ಯನುಯೋಜ್ಯಮಾಯ್** - "ಸ್ವಾತಂತ್ರ್ಯಮೈಶ್ವರಮಪರ್ಯನುಯೋಜ್ಯಮಾಹುಃ" ಎಂದು ಕೂರೇಶರವರು ಹೇಳಿರುವ ಹಾಗೆ ಆಕ್ಷೇಪಕ್ಕೆ ಅವಕಾಶವಿಲ್ಲದುದಾಗಿರುವ, (೬೯ನೆಯ ಪುಟವನ್ನು ನೋಡಿ) ಇದುವರೆವಿಗೂ ಕೈಂಕರ್ಯಧನವು ಪ್ರಾಪ್ತವಾಗದಿರಲು ಕಾರಣವೇನು, ಈಗ ಮಾತ್ರ ಏಕೆ ಪ್ರಾಪ್ತವಾಗಬೇಕು ಎಂಬದಾಗಿ ಸರ್ವೇಶ್ವರನ ಪ್ರಭಾವವನ್ನು ಕುರಿತು ಆಕ್ಷೇಪಿಸಲು ಸಾಧ್ಯವಿಲ್ಲವೆಂಬ ಭಾವವು **ನ** ಅನವಧಿಕಮಾನ

ಮಾಗಿರ ಕ್ಕೈಙ್ಕರ್ಯಾನುಭವತ್ತೈ, (೬) "ಮುಡಿಯಾನಿಲ್" ಪಡಿಯೇ ವಿಡಾಯ್‌ತ್ತ ಕರಣಂಗಳ್ಳೈ ಸಾತ್ವಿಕಾಹಾರ ಸೇವಾದಿಗಳಾಲೇ ಯೋಗ್ಯ

ಅವಧಿಯಿಲ್ಲದ, ಅಪರಿಮಿತವಾದ, **ಶರಣ್ಯಪ್ರಭಾವತ್ತಾಲೆ** - ಸರ್ವರಕ್ಷಕನಾದ ಸರ್ವೇಶ್ವರನ ಪ್ರಭಾವದಿಂದ, **ಇಪ್ಪೋದು ಪಿರನ್ದ**-ಈಗ ಉಂಟಾದ **ಯೋಗ್ಯತೈಯೈ ಕಣ್ಡು** - ಯೋಗ್ಯತೆಯನ್ನು ಕಂಡು, **ವರುಗಿರ ನೀರುಕ್ಕು ಅಣೈಕೋಲುಮ್ ಕಣಕ್ಕಿಲೆ**-ಬರುವ ನೀರಿಗೆ ಅಣೆಯನ್ನು ಕಟ್ಟುವ ನ್ಯಾಯದಿಂದ, **ಇವ್ವವಸ್ಥೈಕ್ಕು** - ಈ ಭರನ್ಯಾಸಮಾಡಿರುವ ಅವಸ್ಥೆಗೆ **ಅನುರೂಪಮಾನ** - ಅನುರೂಪವಾದ, ಸರಿಯಾದ, **ಆಜ್ಞಾನುಜ್ಞಾನುವರ್ತನಮಾಗಿರ** - ಆಜ್ಞೆಯನ್ನೂ ಅನುಜ್ಞೆಯನ್ನೂ ಅನುಸರಿಸಿರುವ, **ಕೈಂಕರ್ಯಾನುಭವತ್ತೈ** - ಕೈಙ್ಕರ್ಯಗಳ ಅನುಭವವನ್ನು, **ಇಳವಾದೆ** - ತ್ಯಜಿಸದೆ,

೬ "ಮುಡಿಯಾನೇ ಎ, ಮೂವುಲಗುನ್ದೊಳು ದೇತ್ತುಞ್ಚಿ ।
ರಡಿಯಾನೇ ಎ, ಯಾಳ್ ಕಡಲೈಕ್ಕಡಿನ್ದಾಯ್ ಪುಳ್ಳೂರ್
ಕೊಡಿಯಾನೇ ಎ, ಕೊಂಡಲ್ವಣ್ಣಾ ವಣ್ಡತ್ತುಂಬರಿ
ನೆಡಿಯಾನೇ ಎ, ಯೆನ್ರುಕಿ ಡಕ್ಕುಮೆನ್ನೆಞ್ಚಮೇ"

ಮುಡಿಯಾನೇ - ಉಭಯ ವಿಭೂತಿ ನಾಯಕತ್ವ ಸೂಚಕವಾದ ಕಿರೀಟವುಳ್ಳವನೇ, **ಮೂವುಲಗಮುಂ** - ಮೂರು ಲೋಕವು, **ತೊಳುದು ಏತ್ತುಂ** - ಆಶ್ರಯಿಸಿ ಸ್ತುತಿಸುವ, **ಶೀರ್** - ಸ್ವಭಾವವುಳ್ಳ, **ಅಡಿಯಾನೇ** - ತಿರುವಡಿಗಳುಳ್ಳವನೇ, **ಆಳ್ ಕಡಲೈ** - ಅಗಾಧ ಸಮುದ್ರವನ್ನು, **ಕಡೈನ್ದಾಯ್** - ಮಥಿಸಿದವನೇ, **ಪುಳ್** - ಪಕ್ಷಿಯಾದ ಗರುತ್ಮಂತನನ್ನು, **ಊರ್ ಕೊಡಿಯಾನೆ** - ವಾಹನವನ್ನಾಗಿಯೂ ಧ್ವಜವನ್ನಾಗಿಯೂ ಉಳ್ಳವನೇ, **ಕೊಂಡಲ್ವಣ್ಣಾ** - ನೀಲಮೇಘದ ಕಾಂತಿಯುಳ್ಳವನೇ, **ಅಣ್ಡತ್ತು ಉಮ್ಬರಿಲ್** - ಪರಮಪದದಲ್ಲಿರುವ ನಿತ್ಯಸೂರಿಗಳಿಗೂ, **ನೆಡಿಯಾನೆ** - ನಿರ್ವಾಹಕನಾಗಿ ಸರ್ವಾಧಿಕನೇ, **ಎನ್ರು** - ಎಂಬುದಾಗಿ ಹೀಗೆಲ್ಲಾ ಅನುಸಂಧಾನಮಾಡಿ, **ಎನ್ನೆಞ್ಚು** - ನನ್ನ ಮನಸ್ಸು, **ಕಿಡಕ್ಕುಮ್** - ಶಿಥಿಲವಾಗುತ್ತಿದೆ. ಇಲ್ಲಿ ಮನಸ್ಸು ಶಿಥಿಲವಾಗುತ್ತದೆಂದು ಹೇಳಿರುತ್ತದೆ. ಹಾಗೆಯೇ ಇದೇ **ತಿರುವಾಯ್ ಮೊಳಿಯ** ಎರಡನೇ ಪಾಶುರದಲ್ಲಿ "**ಎನ್ರುಮೆಪ್ಪೋದು ಎ ನಾಕಕಮೇ**" ಎಂದೂ, ಮೂರನೆಯ ಪಾಶುರದಲ್ಲಿ "**ಎನ್ರು ತಡವುಮೆನ್ಕೈಗಳೇ**" ನಾಲ್ಕನೆಯ ಪಾಶುರದಲ್ಲಿ "**ಉ**

---

೬ ತಿರು ೩-೮-೧೬

ಜ್ಗಳಾಕ್ಕಿ, ಪ್ರಾಪ್ತಂಗಳಾನವನುಭವಂಗಳಿಲೆ ಮೂಟ್ಟಿ, ಅಯೋಗ್ಯವಿಷ ಯಾಂತರಂಗಳಿಲ್ ಪಟ್ಟಪುಕ್ಕ ವಾಸನೈಗಳ್ಳೈ ಮಾತ್ತ್ರುವಿಕ್ಕಮುಮ್,

---

ನ್ನೈ ಮೆಯ್ ಕೊಳ್ಳಕ್ಕಾಣವಿರುಮ್ಪುವರ್ ಕಣ್‌ಗಳೇ" ಹಾಗೆಯೇ ಇತರ ಪಾಶುರಗಳಲ್ಲೂ ಸಹ ಆಳ್ವಾರ್‌ಗಳವರು ತಮ್ಮ ಇಂದ್ರಿಯಗಳೆಲ್ಲಾ ಕ್ಲೇಶಪಡುತ್ತಾ ಇವೆ ಎಂದು ಹೇಳಿಕೊಂಡಿರುತ್ತಾರೆ **ಮುಡಿಯಾನಿಲ್ ಪಡಿಯೇ**-ಈ ಮೇಲಿನ **ಮುಡಿಯಾನೇ** ಎಂಬ ತಿರುವಾಯ್‌ಮೊಳಿಯಲ್ಲಿ **ಹೇಳಿರುವ** ಹಾಗೆ ಎಂದರೆ ಮುಡಿಯಾನೆ ಎಂದು ಪ್ರಾರಂಭಿಸಿ ಹೇಳಿರುವ ಹತ್ತು ಪಾಶುರದಲ್ಲಿ, **ವಿಡಾಯ್‌ತ್ತ ಕರಣಂಗಳ್ಳೈ** – ಶ್ರಮದಿಂದ ಕ್ಲೇಶ ಹೊಂದಿದ ಇಂದ್ರಿಯಗಳನ್ನು ಎಂದರೆ ಭಗವತ್ಸಾಕ್ಷಾತ್ಕಾರಾದಿಗಳು ಉಂಟಾಗದ ಪ್ರಯುಕ್ತ ಭ್ರಾಂತಿಗೊಂಡ ಇಂದ್ರಿಯಗಳು ಎಂಬ ಭಾವವು, **ಸಾತ್ತ್ವಿಕಾಹಾರ ಸೇವಾದಿಗಳಾಲೇ** - ನಿರ್ದುಷ್ಟವಾದ ಸಾತ್ತ್ವಿಕಾಹಾರವನ್ನು ಸೇವಿಸುವದು ಮೊದಲಾದವುಗಳಿಂದ, ಇಲ್ಲಿ ಆದಿ ಪದವು **ವಿನೋಃಕ** ವೆಂದರೆ ಕಾಮಾದಿಗಳಿಂದ ವಿಕಾರವಿಲ್ಲದಿರುವಿಕೆಯೇ ಮೊದಲಾದವುಗಳನ್ನು ಬೋಧಿಸುತ್ತದೆ, **ಯೋಗ್ಯಂಗಳಾಕ್ಕಿ**-ಭಗವತ್ಕೈಂಕರ್ಯಗಳಿಗೆ ಯೋಗ್ಯವಾದವುಗಳನ್ನಾಗಿ ಮಾಡಿ, **ಪ್ರಾಪ್ತಂಗಳಾನವನುಭವಂಗಳಿಲೆ ಮೂಟ್ಟಿ** - ಈಗ ಲಭಿಸಿರುವ ಅನುಭವರೂಪ ಕೈಙ್ಕರ್ಯಗಳಲ್ಲಿ ಪ್ರವೇಶಿಸುವ ಹಾಗೆ ಮಾಡಿ, **ಅಯೋಗ್ಯ ವಿಷಯಾನ್ತರಙ್ಗಳಿಲ್**-ಸ್ವರೂಪಕ್ಕೆ ಉಚಿತಗಳಲ್ಲದ ವಿಷಯಾಂತರಗಳಲ್ಲಿ, **ಪಟ್ಟಪುಕ್ಕ**ವೆಂದರೆ ಆಕಳು ಮೊದಲಾದವುಗಳು ಯಾರಾದರೂ ಬಂದು ಓಡಿಸುವವರಿಗೂ ಸ್ವೇಚ್ಛೆಯಿಂದ ಹುಲ್ಲುಗಿಡಗಳನ್ನು ಮೇಯೋಣವು, ಎಂದರೆ ಕಳ್ಳತನದಿಂದ ವಿಷಯಾಂತರಗಳ ಅನುಭವವು, ಇದರಿಂದುಂಟಾಗುವ, **ವಾಸನೈಗಳ್ಳೈ ಮಾತ್ತ್ರುವಿಕ್ಕವುಂ** -- ವಾಸನೈಗಳ್ಳೈ ಹೋಗಲಾಡಿಸೋಣವು, **ಇವ್ವಧಿಕಾರಿಕ್ಕು** - ಈ ಅಧಿಕಾರಿಗೆ ಎಂದು ವಾಕ್ಯಾರಂಭದಲ್ಲಿದೆ, **ಪ್ರಾಪ್ತಂ**-ಸ್ವರೂಪಕ್ಕೆ ಯೋಗ್ಯವಾದುದು ಎಂದು ಕ್ರಿಯಾಪದವು ಮುಂದೆ ಇದೆ.

ಈ ವಾಕ್ಯಖಂಡದಿಂದ ಉಪದೇಶಿಸಲ್ಪಟ್ಟಿದುದು ಏನೆಂದರೆ:—ಹಿಂದೆ ತಾನು ಸಮರ್ಥನೆಂದು ಭಾವಿಸಿ ಎಲ್ಲಿಯಾದರೂ ಉಪಾಯಾನ್ತರ ಸಂಬಂಧವು ಪ್ರಾಪ್ತವಾದೀತೆಂದು ಭಾವಿಸಿ, ಆಕಿಂಚನ್ಯಾನುಸಂಧಾನವು ಉತ್ತರಕೃತ್ಯದಲ್ಲಿ ಸೇರಿದುದೆಂದು ಹೇಳಲ್ಪಟ್ಟಿತು.

೧. ಅಂತಹ ಆಕಿಂಚನ್ಯಾನುಸಂಧಾನದಿಂದ ನಿರ್ವೇದವೂ ತನ್ಮೂಲಕ ಶೋಕವೂ ಸರಿಯಲ್ಲವೆಂದೂ,

೨. ಸರ್ವಲೋಕ ಶರಣ್ಯನ, ಜನನೀಸ್ತನ್ಯದ ಹಾಗೆ ಪಥ್ಯವಾದ ಅವತಾರ ರಹಸ್ಯಾದಿ ಉಪದೇಶಗಳಿಂದ, ಅಂತಹ ಶೋಕಕ್ಕೆ ಕಾರಣವೇ ಇಲ್ಲವೆಂದೂ,

ಭಗವತ್ಪ್ರೀತ್ಯರ್ಥಂ ಆಜ್ಞಾನುಜ್ಞಾ ಕೈಙ್ಕರ್ಯಾಣಾಂ ಯಥಾಶಾಸ್ತ್ರಮನುಷ್ಠಾನಮ್.

(೭) ಅಕ್ಕರೈಯಿಲ್ ಅಭಿಮತೆ ದೇಶತ್ತುಕ್ಕುಪ್ಪೋಗ ಓಡಮ್

೧. ಈ ಅಧಿಕಾರಿಯು ಎಷ್ಟು ದುರ್ವೃತ್ತನಾಗಿ ಶತಾಪರಾಧವನ್ನು ಹಿಂದೆ ಮಾಡಿದ್ದರೂ ಕೂಡ, ಶ್ರಿಯಃಪತಿಯ ಕೃಪಾಪ್ರಭಾವದಿಂದ ಅನರ್ಹತೆಯೆಲ್ಲಾ ತೊಲಗಿ ಪೂರ್ಣಾರ್ಹತೆಯು ಪ್ರಾಪ್ತವಾಗುತ್ತದೆಂದೂ,

೨. ಆ ಅರ್ಹತೆಗೆ ಅನುರೂಪವಾಗಿ ಭಗವನ್ಮುಖೋಲ್ಲಾಸಕ್ಕಾಗಿ ಆಜ್ಞಾನುಜ್ಞಾ ಕೈಂಕರ್ಯಗಳು ಕರ್ತವ್ಯವೆಂದೂ, ತ್ಯಜಿಸತಕ್ಕದ್ದಲ್ಲವೆಂದೂ,

೩. ಈ ಅಧಿಕಾರಿಯು ಮುಖ್ಯವಾಗಿ ಇಂದ್ರಿಯಗಳನ್ನು ಅನುಚಿತವಾದ ವಿಷಯಾನುಭವದಿಂದ ನಿವರ್ತಿಸಿ, ಭಗವದನುಭವ ಕೈಂಕರ್ಯಗಳಲ್ಲಿ ಪ್ರವರ್ತಿಸುವ ಹಾಗೆ ಮಾಡತಕ್ಕದ್ದೆಂದೂ, ಅದಕ್ಕಾಗಿ ಸಾತ್ವಿಕಾಹಾರ ನಿಯಮವು ಆವಶ್ಯಕವೆಂದೂ, ಸಾತ್ವಿಕಾಹಾರ ಸೇವನೆಯಿಂದ, ಇಂದ್ರಿಯಗಳ ಜಯವೂ, ಇಂದ್ರಿಯಗಳ ಜಯದಿಂದ, ಭಗವದನುಭವವೂ ಪ್ರಾಪ್ತವಾಗುತ್ತವೆಂದೂ, ಹೇಳಲ್ಪಟ್ಟಿತು.

ಈ ಪ್ರಪನ್ನಾಧಿಕಾರಿಗೆ ಉತ್ತರ ಕೃತ್ಯರೂಪದಲ್ಲಿ, ಭಗವತ್ಪ್ರೀತ್ಯರ್ಥವಾಗಿ ಆಜ್ಞಾನುಜ್ಞಾ ಕೈಂಕರ್ಯಗಳ ಅನುಷ್ಠಾನವು ಆವಶ್ಯಕವೆಂದು ಒಂದು ದೃಷ್ಟಾಂತ ಮೂಲಕ ಉಪದೇಶಿಸುತ್ತಾರೆ. ಆದರೆ ಉತ್ತರ ಕೃತ್ಯದಲ್ಲಿ, ಸಾತ್ವಿಕಾಹಾರ ನಿಯಮವೂ, ತನ್ಮೂಲಕ ಇಂದ್ರಿಯ ಜಯವೂ, ತನ್ಮೂಲಕ ಭಗವದನುಭವ ಕೈಂಕರ್ಯಗಳೂ ಹಿಂದೆ ಹೇಳಿದ ಮೇರೆಗೆ ಆವಶ್ಯಕಗಳಾದರೆ, ಈ ಜನ್ಮದಲ್ಲೇ ಉಂಟಾಗದಿದ್ದರೆ ಹೇಗೆ? ಇನ್ನೊಂದು ಜನ್ಮವೆತ್ತಬೇಕೇ? ಎಂದರೆ ಈ ಪ್ರಪನ್ನಾಧಿಕಾರಿಗೆ ಜನ್ಮಾನ್ತರವಿಲ್ಲದುದರಿಂದ ಈ ಜನ್ಮದಲ್ಲೇ ಅವುಗಳು ಪ್ರಾಪ್ತವಾಗುತ್ತದೆಂದು ತಿಳಿಯತಕ್ಕದ್ದು. ವಿಷಯಾನ್ತರಗಳಲ್ಲಿ ಇಂದ್ರಿಯಗಳು ಪ್ರವರ್ತಿಸದೇ ಇರುವದಕ್ಕಾಗಿಯೇ ಈತನು ಆಜ್ಞಾನುಜ್ಞಾರೂಪ ಕೈಂಕರ್ಯಗಳನ್ನು ಮಾಡತಕ್ಕದ್ದೆಂದು ಏರ್ಪಟ್ಟಿತು. ಹೀಗೆ ಅಂತಹ ಕೈಂಕರ್ಯಗಳಲ್ಲಿ ಪ್ರವರ್ತನಾಗಿದ್ದರೆ, ತನ್ನ ಇಷ್ಟಾನುಸಾರ ಯಾವುಗಳನ್ನಾದರೂ ಕಾಲನಿಯಮವಿಲ್ಲದೆ ನಡಿಸಬಹುದೋ? ಎಂದರೆ, ಹಾಗಲ್ಲವು; ಶಾಸ್ತ್ರವಿಧಿಗಳನುಸಾರವಾಗಿ, ಅವುಗಳು ವಿಧಿಸಿದ ಕಾಲದಲ್ಲೇ ಮಾಡತಕ್ಕದ್ದೆಂದು ಒಂದು ದೃಷ್ಟಾಂತ ಮೂಲಕ "ಅಕ್ಕರೈಯಿಲ್" ಎಂದು ಪ್ರಾರಂಭಿಸಿ ಉಪದೇಶಿಸುತ್ತಾರೆ.

ಪಾರ್ತ್ತಿರುಪ್ಪಾರ್ ನಿನ್ರೈತ್ತಪೋದು ವಿಡವೊಣ್ಣಾದ ಪಣಬಂಧದ್ಯೂತತ್ತಿಲಿೞಿಯಾದೆ, ವೇಣ್ಡಿನನುಟ್ಟಲೆ ತಲೈಕಟ್ಟುಗೈಕ್ಕೇಡಾನ ವಿಹಾರದ್ಯೂತತ್ತಿಲೆ ಇೞಿನ್ದಾಲುಮ್ ದ್ಯೂತಶಾಸ್ತ್ರತ್ತಿಱ್ ಪಡಿಯೇ ಯಡಿತಪ್ಪಾದೆ ಕರುವಿಗಳ್ ನ್ರೈಕ್ಕುಮಾಪ್ಪೋಲೆ, ಆಜ್ಞಾನುಜ್ಞೈಗಳಾಲೆ ಯಡಿಮೈಕೊಳ್ಳುಗಿರ ಶಾಸಿತಾವಿನುಡೈಯ ಶಾಸನತ್ತುಕ್ಕು ಪೊರುನ್ದಿನ ಕಾಲವಿಶೇಷಾದಿ ನಿಯತಮಾನ ಕೈಂಕರ್ಯತ್ತೈ ಪಿತ್ತ ಪರಿಹಾರಾರ್ಥಮಾಗ ಕ್ಷೀರ

ಭಗವತ್ಪ್ರೀತ್ಯರ್ಥವಾಗಿ ಆಜ್ಞಾನುಜ್ಞಾಕೈಂಕರ್ಯಗಳು ಶಾಸ್ತ್ರರೀತ್ಯಾ ಅನುಷ್ಠಿಸತಕ್ಕವು.

(೭) **ಅಕ್ಕರೈಯಿಲ್** - ಒಂದು ನದಿಯ ಆಚೇ ದಡದಲ್ಲಿ, **ಅಭಿಮತದೇಶತ್ತುಕ್ಕು** - ತನಗೆ ಇಷ್ಟವಿರುವ ದೇಶಕ್ಕೆ, **ಪೋಗ** - ಹೋಗುವದಕ್ಕಾಗಿ, **ಓಡಮ್ ಪಾರ್ತ್ತಿರುಪ್ಪಾರ್** - ಆಚೇ ದಡದಲ್ಲಿರುವ ಒಂದು ನಾವೆಯನ್ನೋ ಅಥವಾ ದೋಣಿಯನ್ನೋ ಎದುರುನೋಡುತ್ತಿರುವವರು **ನಿನ್ರೈತ್ತಪೋದು** - ತಾವು ಸಂಕಲ್ಪಿಸಿದ ಕಾಲದಲ್ಲೇ, **ವಿಡವೊಣ್ಣಾದ** – ಬಿಡಲು ಸಾಧ್ಯವಲ್ಲದ, **ಪಣಬಂಧದ್ಯೂತತ್ತಿಲೆ** - ದುಡ್ಡಿಟ್ಟಾಡುವ ಪಗಡೆ, ಚತುರಂಗ ಮೊದಲಾದ ಆಟದಲ್ಲಿ, **ಇೞಿಯಾದೇ** - ಪ್ರವೇಶಿಸದೆ, **ವೇಣ್ಡಿನ ನುಟ್ಟಲೇ** - ತಾನು ಅಪೇಕ್ಷಿಸಿದ ಕಾಲದಲ್ಲೇ, **ತಲೈಕಟ್ಟುಗೈಕ್ಕೇಡಾನ** - ಆ ದೋಣಿ ಬಂದ ಸಮಯದಲ್ಲೇ ಮುಗಿಸುವುದಕ್ಕೆ ಯೋಗ್ಯವಾದ, **ವಿಹಾರದ್ಯೂತತ್ತಿಲೆ** - ಬೇಸರ ಹೋಗುವದಕ್ಕಾಗಿ ಸುಮ್ಮನೆ ಕಾಲ ಕಳೆಯುವುದಕ್ಕಾಗಿ ಆಡುವ ಪಗಡೆ, ಚತುರಂಗ ಮೊದಲಾದ ಆಟದಲ್ಲಿ, **ಇೞಿನ್ದಾಲುಮ್** - ಪ್ರವೇಶಿಸಿದರೂ, **ದ್ಯೂತಶಾಸ್ತ್ರತ್ತಿಱ್ ಪಡಿಯೇ** - ಆ ಚತುರಂಗ ಮೊದಲಾದ ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ, **ಅಡಿತಪ್ಪಾದೆ** - ಸ್ವಲ್ಪವೂ ಅದರ ಮಾರ್ಗವನ್ನತಿಕ್ರಮಿಸದೆ, **ಕರುವಿಗಳ್ ನ್ರೈಕ್ಕುಮಾಪ್ಪೋಲೆ** - ಆ ಆಟದ ಕಾಯಿಗಳಾದ ಕುದುರೆ, ಒಂಟೆ, ಆನೆಗಳನ್ನು ಕ್ರಮಪ್ರಕಾರ ನಡಿಸುವ ಹಾಗೆ, ಹೀಗೆ ದೃಷ್ಟಾಂತವನ್ನು ಹೇಳಿ ದಾರ್ಷ್ಟಾಂತಿಕವನ್ನುಪಪಾದಿಸುತ್ತಾರೆ. **ಆಜ್ಞಾನುಜ್ಞೈಗಳಾಲೆ** - ಆಜ್ಞಾನುಜ್ಞಾನುಷ್ಠಾನಗಳ ಮೂಲಕವಾಗಿ, **ಅಡಿಮೈಕೊಳ್ಳುಗಿರ** - ಕೈಂಕರ್ಯವಾಗಿ ಸ್ವೀಕರಿಸುವ, **ಶಾಸಿತಾವಿನುಡೈಯ** - ಸರ್ವನಿಯಾಮಕನಾದ ಸರ್ವೇಶ್ವರನ, **ಶಾಸನತ್ತುಕ್ಕು** - "ಶಾಸನಾತ್ ಶಾಸ್ತ್ರಂ" ಎಂದು ಹೇಳಿರುವ ಹಾಗೆ, ಶಾಸ್ತ್ರರೂಪವಾದ ಆಜ್ಞೆಗೆ, **ಪೊರುನ್ದಿನ** - ಅನುಗುಣವಾದ, **ಕಾಲವಿಶೇಷಾದಿ ನಿಯತಮಾನ ಕೈಙ್ಕರ್ಯತ್ತೈ** -

ಸೇವೈಪಣ್ಣು ವಾರ್ೈಪ್ಪೋಲನ್ರಿಕ್ಕೆ, ಅಯತ್ನಲಬ್ಧಮಾನ ಔಷಧತ್ತಾಲೆ ಅವಿಳಂಬಿತಮಾಗ ಆರೋಗ್ಯಮ್ ಪೆಱ್ಱವರ್‌ಗಳ್ ಪಾಲ್‌ವಾಶ್ತ್ತುಣ್ಣು ಮಾಪ್ಪೋಲೆ ಉಗನ್ದು ಪಣ್ಣುವುಮ್,

---

ಆಯಾ ಕಾಲವಿಶೇಷಗಳಲ್ಲಿ ಮಾಡತಕ್ಕದ್ದೆಂದು ಏರ್ಪಟ್ಟ ಕೈಂಕರ್ಯವನ್ನು, **ಪಿತ್ತ ಪರಿಹಾರಾರ್ಥಮಾಗ ಕ್ಷೀರಸೇವೈ ಪಣ್ಣುವಾರ್ೈಪ್ಪೋಲನ್ರಿಕ್ಕೇ** - ಪಿತ್ತ ವ್ಯಾಧಿ ನಿವೃತ್ತಿಯಾಗುವುದಕ್ಕಾಗಿ ಹಾಲನ್ನು ಸೇವಿಸುವರ ಹಾಗಲ್ಲದೆ, **ಅಯತ್ನ ಲಬ್ಧಮಾನ** - ತನ್ನ ಪ್ರಯತ್ನ ಯಾವುದೂ ಇಲ್ಲದೆ ಸರ್ವೇಶ್ವರನ ಮೂಲಕ ವಾಗಿ ಸಿಕ್ಕಿದ, **ಔಷಧತ್ತಾಲೆ** - ಕೃಪಾರೂಪ ಔಷಧದಿಂದ, **ಅವಿಳಮ್ಬಿತ ಮಾಗ ಆರೋಗ್ಯಮ್ ಪೆತ್ತವರ್‌ಗಳ್** - ಶೀಘ್ರದಲ್ಲಿ ಆರೋಗ್ಯವನ್ನು ಹೊಂದಿದವರುಗಳು, **ಪಾಲ್‌ವಾತ್ತುಣ್ಣುಮಾಪ್ಪೋಲೆ** - ಪರಮ ಭೋಗ್ಯ ವೆಂದು ತಿಳಿದು ಹಾಲನ್ನು ಹಾಕಿಕೊಂಡು ಭೋಜನಮಾಡುವಹಾಗೆ, **ಉಗನ್ದು ಪಣ್ಣುವುಮ್** - ಆ ಆಜ್ಞಾನುಜ್ಞಾ ಕೈಂಕರ್ಯಗಳನ್ನು ಸಂತೋಷಚಿತ್ತರಾಗಿ ಮಾಡತಕ್ಕದ್ದೂ ; **ಪ್ರಾಪ್ತಂ** - ಉಚಿತವು ಎಂದು ಮುಂದೆ ಇರುತ್ತದೆ.

ಈ ಉತ್ತರ ಕೃತ್ಯರೂಪದಲ್ಲಿ, ಹಿಂದಿನ ವಾಕ್ಯದಲ್ಲಿ ಹೇಳಿದಂತೆ ಆಜ್ಞಾನುಜ್ಞಾನುಷ್ಠಾನರೂಪವಾದ ನಿತ್ಯನೈಮಿತ್ತಿಕಾದಿ ಅನುಷ್ಠಾನಗಳನ್ನು ತನ್ನ ಇಷ್ಟ ಬಂದಂತೆ ನಡೆಸತಕ್ಕದ್ದಲ್ಲವು ; ಶಾಸ್ತ್ರರೀತ್ಯಾ, ಆ ಶಾಸ್ತ್ರದಲ್ಲಿ ಹೇಳಿರುವ ಕಾಲ ನಿಯಮಗಳನ್ನನುಸರಿಸಿ ಮಾಡತಕ್ಕದ್ದೆಂದು ಹೇಳುವುದಕ್ಕಾಗಿ "**ಕಾಲವಿಶೇಷಾದಿ ನಿಯತಮಾನ**" ಎಂದು ಪ್ರಯೋಗಿಸಿರುತ್ತಾರೆ. ಅದೇಕೆ ಈ ಕಾಲನಿಯಮ ಗಳನ್ನು ಯಥಾಶಾಸ್ತ್ರಂ ಅವಲಂಬಿಸತಕ್ಕದ್ದೆಂದರೆ, ಈ ಶಾಸ್ತ್ರವೆಲ್ಲಾ "**ಶಾಸಿತಾ ವಿಷ್ಣುರ್ಯೇಯ ಶಾಸನಂ**" ಸರ್ವನಿಯನ್ತಾವಿನ ಆಜ್ಞೆಯಾದುದರಿಂದ ಅವಲಂಬಿಸ ತಕ್ಕದ್ದೆಂದು ಹೇಳಿದರು. ಈ ಕೈಂಕರ್ಯಗಳನ್ನೆಸಗುವಾಗ ಫಲದಲ್ಲಿ ಮಮತೆಯನ್ನು ತೊರೆದು ಅನುಷ್ಠಿಸತಕ್ಕದೆಂದು ಹೇಳುವುದಕ್ಕಾಗಿ, ಪಿತ್ತರೋಗಿಯು ಪಿತ್ತಪರಿಹಾರ ಕ್ಕಾಗಿ ಹಾಲನ್ನು ಸೇವಿಸುವ ಹಾಗೆ ಕೂಡದೆಂದೂ, ಸ್ವಾಮಿಕೃಪೆಯಿಂದ ಆರೋಗ್ಯ ಹೊಂದಿದವನು ಸುಮ್ಮನೆ ಹಾಲನ್ನು ಸೇವಿಸುವ ಹಾಗೆ, ಅನುಷ್ಠಿಸತಕ್ಕದ್ದೆಂದುಪ ದೇಶಿಸುತ್ತಾರೆ. ಆ ಆರೋಗ್ಯವು ಅಯತ್ನಲಬ್ಧವಾದ ಔಷಧದಿಂದ ಹೊಂದ ಲ್ಪಟ್ಟಿತೆಂದು ಹೇಳಿದುದರಿಂದ, ತನಗೆ ಪ್ರಾಪ್ತವಾಗಿರುವ ಈ ಸುಕೃತ ದೆಸೆಯು ತನಗೆ ಸಂಪೂರ್ಣವಾಗಿ ಭಗವತ್ಕೃಪಾ ಮೂಲಕ ಉಂಟಾಯಿತೆಂದೂ, ಆ ಸಂದ ರ್ಭದಲ್ಲಿ ಈಷದಪಿ ಅಹಂಕಾರ ಮಮಕಾರಾದಿಗಳಿಗೆ ಅವಕಾಶವಿಲ್ಲವೆಂದೂ, ಪ್ರದ

ಶೀಸಲ್ಪಟ್ಟಿತು. ಆ ಆರೋಗ್ಯದಶೆಯು ಅವಿಳಂಬಿತವಾಗಿ ಪ್ರಾಪ್ತವಾದು ದೆಂದು ಹೇಳಲ್ಪಟ್ಟದುದರಿಂದ, ಈಗಿನ ಕೃತಕೃತ್ಯನಾಗಿರುವ ಅವಸ್ಥೆಗೆ ಹಿಂದೆ ಇವೆಲ್ಲಾ ವಿಳಂಬಿಸಿತ್ತೆಂಬ ತಾತ್ಪರ್ಯವು ತೋರಿಬರುತ್ತದೆ. ಈ ನಿತ್ಯನೈಮಿ ತ್ತಿಕಾದಿಗಳನ್ನು ಮಾಡುವದರಲ್ಲಿ ಕ್ಲೇಶವೆಂಬ ಭಾವವಿಲ್ಲದೆ, ಸರ್ವೇಶ್ವರ ಪ್ರೀತಿ ಗಾಗಿ ಎಂಬ ಭಾವನೆಯಿಂದ ಸಂತೋಷದಿಂದ ಮಾಡತಕ್ಕದ್ದೆಂದು, **ಉಗನ್ದು ಪಣ್ಣು ವುಮ್** ಎಂದು ಉಪದೇಶಿಸಿರುತ್ತಾರೆ.

ಹೀಗೆ ಸರ್ವೇಶ್ವರ ಪ್ರೀತ್ಯರ್ಥವಾಗಿ ಮಾಡುವ ಆಜ್ಞಾನುಜ್ಞಾ ಕೈಂಕರ್ಯ ಗಳು, ಈ ಪ್ರಪನ್ನರು ಈ ಸಂಸಾರವನ್ನು ದಾಟಿ ಪರಮ ಪದಕ್ಕೆ ಹೋಗುವವಕ್ಕೆ ಏನೊಂದೂ ಸಂಬಂಧವುಳ್ಳವುಗಳಲ್ಲದಿದ್ದರೂ, ತನ್ನ ಮನಃಪ್ರೀತ್ಯರ್ಥವಾಗಿಯೂ ಭಗವನ್ಮುಖೋಲ್ಲಾಸಕ್ಕಾಗಿಯೂ ನಡಿಸುವ ವಿಷಯದಲ್ಲಿ ಒಂದು ದೃಷ್ಟಾಂತ ವನ್ನು ಬೋಧಿಸುತ್ತಾರೆ. ಒಂದು ನದಿಯ ಆಚೆ ದಡದಲ್ಲಿರುವ ತುಂಬಾ ಇಷ್ಟ ವಾದ ಪ್ರದೇಶಕ್ಕೆ ಹೋಗಬೇಕೆಂಬದಾಗಿ ಉದ್ದೇಶಿಸಿ, ಆಚೇ ದಡದಲ್ಲಿರುವ ದೋಣಿಯು ಬರುವದು ಸಾವಕಾಶವಾದುದರಿಂದ ಅದುವರೆಗೂ ಹೊತ್ತುಕಳೆ ಯುವುದಕ್ಕಾಗಿ ದೋಣಿಯು ಬಂದ ಒಡನೆಯೇ ಬಿಡಬಹುದಾದ ಲೀಲಾವಿಹಾರ ರೂಪವಾದ ಚತುರಂಗ ಆಟದಲ್ಲಿ ಕೆಲವು ಮಹನೀಯರು ಉದ್ಯುಕ್ತರಾಗಿದ್ದರೂ, ಅವರು ಹೇಗೆ ಚತುರಂಗ ಶಾಸ್ತ್ರದ ನಿಯಮಾನುಸಾರ, ಕುದುರೆ, ಆನೆ, ಒಂಟೆ ಗಳನ್ನು ಯಥಾಕ್ರಮವಾಗಿ ನಡಿಸುತ್ತಾರೆಯೋ, ಹಾಗೆಯೇ ಈ ಆಜ್ಞಾನುಜ್ಞಾ ಕೈಂಕರ್ಯಗಳನ್ನು ಶಾಸ್ತ್ರವಿಧಿಗನುಸಾರವಾಗಿ ನಡಿಸತಕ್ಕದ್ದೆಂದು ಹೇಳಲ್ಪಟ್ಟಿತು. **"ನದಿಯು ಅಕ್ಕರೆಯಿಲ್ ಅಭಿಮತದೇಶ"** ವೆಂದು ಹೇಳಿದುದರಿಂದ ಈ ಪ್ರಪ ನ್ನರೂ ಕೂಡ ಈ ಪ್ರಕೃತಿ ಸಂಬಂಧರೂಪವಾದ ಸಂಸಾರವನ್ನು ದಾಟಿ ದಿವ್ಯ ವೈಕುಂಠಕ್ಕೆ ಹೋಗುವವರೆಂದು ಹೇಳಲ್ಪಟ್ಟಿತು. ಒಂದು ಓಡವನ್ನು ನಿರೀಕ್ಷಿಸಿ ಕೊಂಡಿರುವವರೆಂದು ಹೇಳಿದುದರಿಂದ, "**ಮೃತ್ಯುಂಪ್ರಿಯಮಿವಾತಿಥಿಂ**" ಎಂದು ಹೇಳಿರುವ ಹಾಗೆ, ದೇಹಾವಸಾನವನ್ನೂ ಅದರಿಂದಾಚೆಗೆ ಅಮಾನವ ಕರ ಸ್ಪರ್ಶಾದಿಗಳನ್ನೂ ನಿರೀಕ್ಷಿಸುತ್ತಿರುವರೆಂದೂ ಬೋಧಿಸಲ್ಪಟ್ಟಿತು. ಆ ಓಡವು ಬರುವ ತನಕ ಲೀಲಾವಿಹಾರ ದ್ಯೂತದಲ್ಲಿ ಪ್ರವರ್ತಿಸಿ ದ್ಯೂತಶಾಸ್ತ್ರಕ್ಕೆ ಸ್ವಲ್ಪವೂ ವಿರೋಧವಿಲ್ಲದೆ ಕಾಯಿಗಳನ್ನು ನಡಿಸತಕ್ಕದ್ದು ಎಂದು ಹೇಳಿದುದರಿಂದ ಶಾಸ್ತ್ರ ರೀತ್ಯಾ ನಿತ್ಯನೈಮಿತ್ತಿಕಾನುಷ್ಠಾನಗಳನ್ನು ದೇಹಾವಸಾನದವರೆಗೂ ಮಾಡತಕ್ಕ ದ್ದೆಂದುಪದೇಶಿಸಲ್ಪಟ್ಟಿತು. ಅವುಗಳನ್ನು ಹೇಗೆ ಅನುಷ್ಠಿಸತಕ್ಕದ್ದೆಂದರೆ, ದುಡ್ಡಿಟ್ಟು ಆಡುವ ಆಟದ ಹಾಗಲ್ಲವು, ಲೀಲೆಗಾಗಿ ಆಡುವ ಆಟದ ಹಾಗೆ ಎಂದು ಹೇಳಿರು ತ್ತಾರೆ. ಆಟವು ಎರಡು ವಿಧವು :—ದುಡ್ಡಿಟ್ಟು ಆಡುವ ಆಟವು, ಪಣಬನ್ಧ

೮. ಏತತ್ಕೈಂಕರ್ಯಂ ಅರ್ಚಾವತಾರ ಏವ ಕಾರ್ಯಂ

ಅಪ್ಪೋದು (೧) “ನಿತ್ಯಸಿದ್ಧೇ ತದಾಕಾರೇ ತತ್ಪರತ್ವೇ ಚ

ದ್ಯೂತವೆಂದು ಹೇಳಲ್ಪಟ್ಟಿತು. ಇದು ಫಲಾಪೇಕ್ಷೆಯುಳ್ಳದಾದುದರಿಂದ, ಮಧ್ಯೆ **ಆಟವನ್ನು** ಬಿಟ್ಟು, ಅಭಿಮತಸ್ಥಳಕ್ಕೆ ಹೋಗಲಾಗುವದಿಲ್ಲವು. ದುಡ್ಡಿಟ್ಟು ಇಸ್ಪೀಟು ಆಟದಲ್ಲಿ ಮಗ್ನನಾದವನು ತಂದೆಗೆ ದೇಹಾವಸಾನಕಾಲವೆಂದರೂ, ಆಟದಿಂದ ಏಳದೆ ದೇಹಾವಸಾನವಾಯಿತು ಎಂದರೂ ಕೂಡ ಆಟವನ್ನು ಬಿಡದೆ, ಪ್ರೇತವನ್ನು ಆ ಮಾರ್ಗವಾಗಿಯೇ ತಂದರೆ ತಾನು ಜೊತೆಯಲ್ಲಿ ಬರುವೆನೆಂದು ಹೇಳಿದ ಇತಿಹಾಸವನ್ನು ಅನೇಕರು ಹೇಳುವರು. ಆದುದರಿಂದಲೇ **ನಿನ್ನೈತ್ತಪ್ಪೋದು ವಿಡವೊಣ್ಣಾದ** ಎಂದು ಪ್ರಯೋಗಿಸಿರುತ್ತಾರೆ. **ಇನ್ನೊಂದು** ವಿಧ ದ್ಯೂತವು ಲೀಲೆಗಾಗಿ, **ಹೊತ್ತುಹೋಗುವದಕ್ಕಾಗಿ** ಆಡುವ ಆಟವು. ಇದು ವಿಕಾರ ದ್ಯೂತವೆಂದು ಹೇಳಲ್ಪಟ್ಟಿರುತ್ತದೆ. ಇದರಲ್ಲಿ ಲೀಲಾರೂಪ ಮನಸ್ಸಂತೋಷವಲ್ಲದೆ, ಇನ್ನು ಯಾವ ಪ್ರಯೋಜನವೂ ಇಲ್ಲವಾದುದರಿಂದ, ಬಿಡವು ಬಂತೆಂದರೆ ಒಡನೆ **ಆಟವನ್ನು** ನಿಲ್ಲಿಸಿ ಅಭಿಮತಸ್ಥಳಕ್ಕೆ ಪ್ರಯಾಣ ಮಾಡಬಹುದು. ಹಾಗೆಯೇ ಪ್ರಪನ್ನನೂ ಕೂಡ ಹೀಗೆ ಆಜ್ಞಾನುಜ್ಞಾ ಕೈಂಕರ್ಯಗಳನ್ನು ನಡಿಸು**ವದರಿಂದ** ಯಾವ ಬಂಧಕ್ಕೂ ಸಿಕ್ಕದೆ ದೇಹಾವಸಾನಾನಂತರ ಪರಮ ಪದವನ್ನು ಸಾರುವನೆಂಬ **ಭಾವವು**.

೮. ಈ ಕೈಙ್ಕರ್ಯವನ್ನು ಅರ್ಚಾವತಾರಿಯು ಸನ್ನಿಧಿಯಲ್ಲೇ ಸಮರ್ಪಿಸತಕ್ಕದ್ದು.

ಹೀಗೆ ಸಂತೋಷದಿಂದ ಕೈಂಕರ್ಯ ಮಾಡುವ ಅಧಿಕಾರಿಯು ಅಂತಹ ಕೈಂಕರ್ಯವನ್ನು ಅರ್ಚಾವತಾರಿಯಾದ ಸರ್ವೇಶ್ವರನ ಸನ್ನಿಧಿಯಲ್ಲೇ ಮಾಡತಕ್ಕ**ದ್ದೆಂ**ಬುವದಕ್ಕೆ ಪೌಷ್ಕರ ಸಂಹಿತೆಯ ಪ್ರಮಾಣವನ್ನು ಉದಾಹರಿಸುತ್ತಾರೆ. ಇದು ಚತುರ್ಮುಖ ಬ್ರಹ್ಮನನ್ನು ಕುರಿತು ಭಗವಂತನ ವಚನವು. **ಅಪ್ಪೋದು** - ಹಾಗೆ, **ಉಗನ್ದು ಕೈಙ್ಕರ್ಯಂ ಪಣ್ಣಂಪೋದು**, ಸಂತೋಷದಿಂದ ಕೈಂಕರ್ಯ ಮಾಡುವಾಗ, “**ಹೇ ಪೌಷ್ಕರ** - ಪುಷ್ಕರವೆಂದರೆ ಕಮಲ, ಸರ್ವೇಶ್ವರನ ನಾಭೀಕಮಲದಲ್ಲಿ ಹುಟ್ಟಿದವನು ಪೌಷ್ಕರನು, ಓ ಚತುರ್ಮುಖ ಬ್ರಹ್ಮನೇ, **ನಿತ್ಯಸಿದ್ಧೇ** - ಕರ್ಮಕೃತವಲ್ಲದೆ ಎಂದಿಗೂ ಚ್ಯುತಿಯಿಲ್ಲದೆ ನಿತ್ಯವಾಗಿ ಸ್ಥಾಪಿತವಾಗಿರುವ, ಅಥವಾ ಕಾಲಾಪರಿಚ್ಛಿನ್ನವಾದ **ಸ್ವಸಙ್ಕಲ್ಪ** ಕಲ್ಪಿತವಾದ **ತದಾಕಾರೇ** - ತಚ್ಛಬ್ದವಾಚ್ಯನಾದ ಸರ್ವೇಶ್ವರನ ದಿವ್ಯಮಂಗಳವಿಗ್ರಹದಲ್ಲೂ,

ಪೌಷ್ಕರ । ಯಸ್ಯಾಸ್ತಿ ಸತ್ತಾ ಹೃದಯೇ ತಸ್ಯಾಸೌ ಸನ್ನಿಧಿಂ ವ್ರಜೇತ್" ಎನ್ನುಂ,

---

ತತ್ಪರತ್ವೇ ಚ - ಆತನ ಸರ್ವೋತ್ಕೃಷ್ಟ ಭಾವದಲ್ಲೂ ಕೂಡ, **ಯಸ್ಯ** - ಯಾವ ಅಧಿಕಾರಿಯ, **ಹೃದಯೇ** - ಹೃದಯದಲ್ಲಿ, **ಸತ್ತಾಸ್ತಿ** – ಅವುಗಳಿವೆ ಎಂಬ ದೃಢ ನಂಬಿಕೆಯುಂಟೋ, **ತಸ್ಯ** - ಅಂತಹ ಅಧಿಕಾರಿಗೆ, **ಅಸೌ** - ಈ ಸರ್ವೇಶ್ವರನು **ಸನ್ನಿಧಿಂ ವ್ರಜೇತ್** – ಸಾನ್ನಿಧ್ಯವನ್ನು ಹೊಂದುವನು. ಯಾವನೊಬ್ಬನಿಗೆ ಅರ್ಚಾವಿಗ್ರಹದಲ್ಲಿ ಸರ್ವೇಶ್ವರನು ಅರ್ಚಾವಿಗ್ರಹಕ್ಕೆ ಸಮಾನವಾದ ದಿವ್ಯ ಮಂಗಳವಿಗ್ರಹವನ್ನೆತ್ತಿರುವನೆಂದೂ, ಅದರಲ್ಲೇ ಪರತ್ವಾದಿ ಗುಣಯುಕ್ತನಾಗಿ ರುವನೆಂದೂ ಪೂರ್ಣನಂಬಿಕೆಯುಂಟೋ, ಅಂತವನಿಗೆ ಕೃಪೆಮಾಡುವದಕ್ಕಾಗಿ ಸರ್ವೇಶ್ವರನು ಅದರಲ್ಲಿ ಸಾನ್ನಿಧ್ಯವನ್ನು ದಯಪಾಲಿಸುವನು ; ಎಂದರೆ ಆ ವಿಗ್ರಹಕ್ಕೆ ಅನುಸಾರವಾದ ದಿವ್ಯಮಂಗಳ ವಿಗ್ರಹವನ್ನು ಎತ್ತಿ, ಆ ವಿಗ್ರಹವನ್ನೇ ಪ್ರವೇಶಿಸಿ, ಆತನ ಕೈಂಕರ್ಯಗಳನ್ನು ಕೈಕೊಂಡು ಆತನಿಗೆ ಸರ್ವ ಶ್ರೇಯಸ್ಸನ್ನೂ ಉಂಟುಮಾಡುವನೆಂಬ ಭಾವವು "ಇಲ್ಲಿ **ಸನ್ನಿಧಿಂ ವ್ರಜೇತ್**", ಸಾನ್ನಿಧ್ಯವನ್ನು ಹೊಂದುವನೆಂದು ಹೇಳಿರುವದರಿಂದ, ಕಲ್ಲಿನ ಪ್ರತಿಮೆಯೇ ಸರ್ವೇಶ್ವರನ ದಿವ್ಯಮಂಗಳ ವಿಗ್ರಹವಲ್ಲವೆಂದು ತಿಳಿಯತಕ್ಕದ್ದು. ಪ್ರತಿಷ್ಠಾರೂಪ ಸಂಸ್ಕಾರದಿಂದ ಸರ್ವೇಶ್ವರನು ಭಕ್ತನಿಗೆ ಕಟ್ಟುಬಿದ್ದು, ಆ ಅರ್ಚೆಯ ಬಿಂಬವನ್ನು ಪ್ರವೇಶಿಸಿ, ಆ ಬಿಂಬಹೇಗಿದೆಯೋ ಹಾಗೆಯೇ ದಿವ್ಯಮಂಗಳ ವಿಗ್ರಹವನ್ನು ಹೊಂದುವನೆಂಬ ಭಾವವು. ಆದರೆ ಸರ್ವೇಶ್ವರನು ಎಲ್ಲಾ ಕಲ್ಲು, ಮರ ಮುಂತಾಗಿ ಎಲ್ಲಾ ಪದಾರ್ಥಗಳನ್ನು ಪ್ರವೇಶಿಸಿ, ವ್ಯಾಪಿಸಿರುವಾಗ, ಈ ಅರ್ಚಾ ವಿಗ್ರಹವನ್ನು ವ್ಯಾಪಿಸಿರುವದರಲ್ಲಿ ಏನು ವೈಲಕ್ಷಣ್ಯವೆಂದು ಪ್ರಶ್ನಿಸಬಹುದು. ಎಲ್ಲಾ ಪದಾರ್ಥಗಳನ್ನು ವ್ಯಾಪಿಸಿರುವದು ಸ್ವರೂಪತಃ ವಿನಾ ದಿವ್ಯ ಮಂಗಳ ವಿಗ್ರಹವಾಗಿ ಅಲ್ಲವು. ಸಂಸ್ಕಾರ ಮಹಿಮೆಯಿಂದ ವಿಗ್ರಹವನ್ನು ವ್ಯಾಪಿಸಿರುವದು ದಿವ್ಯ ಮಂಗಳ ವಿಗ್ರಹ ರೂಪದಲ್ಲಿ ಎಂದು ತಿಳಿಯತಕ್ಕದ್ದು." **ಎನ್ನುಂ** - ಎಂಬದಾಗಿಯೂ, ಹೀಗೆ ಒಬ್ಬ ಅಧಿಕಾರಿಗೆ ಶ್ರೇಯಸ್ಸನ್ನುಂಟುಮಾಡುವದಕ್ಕಾಗಿ ಅರ್ಚಾ ವಿಗ್ರಹದಲ್ಲಿ ಸನ್ನಿಹಿತನಾದರೆ, ಆ ಅರ್ಚಾ ವಿಗ್ರಹವನ್ನು ಸೇವಿಸುವ ಇತರರಾದ ಸರ್ವರಿಗೂ ಶ್ರೇಯಸ್ಸನ್ನುಂಟುಮಾಡುವನಾಗಬೇಕಾಯಿತು ಆ ಒಬ್ಬ ಅಧಿಕಾರಿಯ ಅನುಗ್ರಹಕ್ಕೆ ಮಾತ್ರವೇ ಸಾನ್ನಿಧ್ಯವು, ಇತರರಿಗಿಲ್ಲವೆಂದರೆ ಸರ್ವೇಶ್ವರನ ಉದಾರಭಾವಕ್ಕೂ ಆತನ ನಿರ್ಹೇತುಕ ಕೃಪೆಗೂ ಕುಂದಕವಾದುದಾಗುತ್ತದೆ. ಆದುದರಿಂದ ಹಾಗೆಯೇ ಇತರರಿಗೂ ಸರ್ವೇಶ್ವರನು ಸೇವೆಯನ್ನಿತ್ತು,

(೨) "ಯಥಾ ಸಾಮುದ್ರ ಮಂಭೋಽಬ್ಭೈಸ್ಸ್ಪೃಷ್ಟಮೇತ್ಯುಪ ಭೋಗ್ಯತಾಂ । ತಥೈವ ಹಿ ಮನುಷ್ಯಾಣಾಂ ಭಕ್ತೈಸ್ಸಂಭಾವಿತೋ ಹರಿಃ" ಎನ್ರುಂ, ಶೊಲ್ಲುಗಿರಪಡಿಯೇ, ಓರಧಿಕಾರಿ ವಿಶೇಷತ್ತುಕ್ಕಾಕ ಸಾನ್ನಿಧ್ಯಾದಿಗಳೈಪಣ್ಣಿ ಪರನ್ಯೈಕಾಂತಿಯಾನ ತನ್ನೈ ಯುಗನ್ದುವನ್ದು

ಅವರುಗಳ ಕೈಂಕರ್ಯಗಳನ್ನು ಕೈಕೊಂಡು, ಅವರಿಗೆ ಶ್ರೇಯಸ್ಸನ್ನುಂಟುಮಾಡುವ ನೆಂದೇ ಹೇಳಬೇಕಾಗುತ್ತದೆ. ಅಥವಾ, ಯಾವನ ಹೃದಯದಲ್ಲಿ ಸತ್ತ್ವ ಇದೆಯೋ. ಅಸೌ - ಅವನು, ತಸ್ಯ - ಅಂತಹ ಭಗವಂತನ, ಸನ್ನಿಧಿಂ - ಸಾನ್ನಿಧ್ಯವನ್ನು ಪರಮಪದವನ್ನು ವ್ರಜೇತ್ ಎಂದೂ ಅರ್ಥವನ್ನು ಹೇಳಬಹುದು. ಇದರ ಸಮರ್ಥನೆಗಾಗಿ ಪೌಷ್ಕರ ಸಂಹಿತೆಯ ಮುಂದಿನ ವಾಕ್ಯವನ್ನುದಾಹರಿಸುತ್ತಾರೆ.

(೨) "ಯಥಾ - ಹೇಗೆ, ಸಾಮುದ್ರಂ - ಸಮುದ್ರ ಸಂಬಂಧವಾದ, ಅಂಭಃ - ಉಪ್ಪಾದ ನೀರು, ಅಬ್ಭೈಃ - ಮೇಘಗಳಿಂದ, ಸ್ಪೃಷ್ಟಂ - ಸ್ಪರ್ಶಿ ಸಲ್ಪಟ್ಟುದಾಗಿ, ಉಪಭೋಗ್ಯತಾಂ - ಕುಡಿಯಲು ಯೋಗ್ಯವಾಗಿ ಸ್ವಾದುವಾಗಿ ರುವ ಭೋಗ್ಯತೆಯನ್ನು, ಏತಿ - ಹೊಂದುತ್ತದೋ, ತಥೈವ ಹಿ - ಹಾಗೆಯೇ, ಭಕ್ತೈಃ - ಭಕ್ತರುಗಳಿಂದ, ಸಂಭಾವಿತಃ - ಅರ್ಚಾರೂಪದಿಂದ ಪ್ರತಿಷ್ಠಿಸ ಲ್ಪಟ್ಟು ಆರಾಧಿಸಲ್ಪಟ್ಟ ಶ್ರೀ ಹರಿಯು, ಮನುಷ್ಯಾಣಾಂ - ಎಲ್ಲಾ ಮನುಷ್ಯ ರಿಗೂ ಸಹ, ಉಪಭೋಗ್ಯತಾಂ ಏತಿ ಎಂದು ಇಟ್ಟುಕೊಳ್ಳಬೇಕು, ಭೋಗ್ಯತೆ ಯನ್ನು ಹೊಂದುವನು ಎಂದರೆ ಆಜ್ಞಾನುಜ್ಞಾ ಕೈಂಕರ್ಯಗಳನ್ನು ಸ್ವೀಕರಿಸುವ ದರ ಮೂಲಕ ಭೋಗ್ಯಭಾವವನ್ನು ಹೊಂದುವನೆಂಬ ಭಾವವು." ಎನ್ರುಮ್ - ಎಂದು, ಶೊಲ್ಲುಗಿರಪಡಿಯೇ - ಹೇಳಿರುವ ಹಾಗೆ, ಓರಧಿಕಾರಿವಿಶೇಷತ್ತು ಕ್ಕಾಗ - ಪ್ರತಿಷ್ಠಾದಿ ಸಂಸ್ಕಾರ ಮೂಲಕ ಪ್ರಾರ್ಥಿಸಿದ ಒಬ್ಬ ಮಹಾ ಭಾಗವತ ನಿಗಾಗಿ, ಅಂತಹ ಮಹಾಭಾಗವತರುಗಳು ಯಾರೆಂದರೆ :—ಪ್ರಹ್ಲಾದ, ನಾರದ, ಭೃಗುಮಹರ್ಷಿ, ಮಾರ್ಕಂಡೇಯ ಮಹರ್ಷಿ, ಶ್ರೀ ನಮ್ಮಾಳ್ವಾರ್, ಶ್ರೀಮನ್ನಾಥ ಮುನಿ, ಶ್ರೀ ಯಾಮುನಮುನಿ. ಶ್ರೀಯತೀನ್ದ್ರರೇ ಮೊದಲಾದವರು. ಸಾನ್ನಿ ಧ್ಯಾದಿಗಳೈಪಣ್ಣಿ - ಅರ್ಚಾಬಿಂಬ ಪ್ರವೇಶಮಾಡಿ ಸಾನ್ನಿಧ್ಯವನ್ನು ದಯಪಾಲಿಸಿ, ಪರನ್ಯೈಕಾಂತಿಯಾನ ತನ್ನೈ - ಪರನ್ಯೈಕಾಂತಿಯಾದ ತನ್ನನ್ನು, "ಭಕ್ತಿ ಜ್ಞಾನಾಭ್ಯಾಂ ಅನ್ಯತ್ಫಲಂ ಭಗವತೋಽಪಿ ನೇಚ್ಛತಿ ಯಃ ಸ ಪರನ್ಯೈ ಕಾಂತೀ" ಎಂದು ಯತೀಂದ್ರಮತ ದೀಪಿಕೆಯಲ್ಲಿ ಹೇಳಿರುವಹಾಗೆ ಭಕ್ತಿ ಜ್ಞಾನ ಗಳನ್ನಲ್ಲದೆ ಬೇರೆ ಯಾವುದನ್ನೂ ಭಗವಂತನಿಂದ ಅಪೇಕ್ಷಿಸದವನು ಪರನ್ಯೈ ಕಾಂತಿಯು, ಏಕಾಂತಿಯಾರೆಂದರೆ, ಮೋಕ್ಷಫಲದೊಂದಿಗೆ ಇತರ ಐಹಿಕ ಫಲ

ಅರ್ಚಾವತಾರಂ ಪಣ್ಣಿಯಿರುಕ್ಕಿರ ಎನ್ಬೆರುಮಾನ್ ಪಕ್ಕಲಿಲೇ, (೧) "ಸರ್ವಾತಿಶಾಯಿ ಷಾಡ್ಗುಣ್ಯಂ ಸಂಸ್ಥಿತಂ ಮಂತ್ರಬಿಂಬಯೋಃ" ಎನ್ಗಿರ ಪೂರ್ತಿಯುಮ್, (೨) ಆಪೀಠಾನ್ಮೌಳಿಪರ್ಯಂತಂ ಪಶ್ಯತಃ ಪುರುಷೋತ್ತಮಮ್ । ಪಾತಕಾನ್ಯಾಶು ನಶ್ಯನ್ತಿ ಕಿಂ ಪುನಸ್ತೂಪಪಾತಕಂ" ಎಂಗಿರ ಪಾವನತ್ವತ್ತೈಯುಮ್,

---

ಗಳನ್ನೂ ಕೂಡ ದೇವತಾಂತರವನ್ನು ಆಶ್ರಯಿಸದೆ ಭಗವಂತನ ಮೂಲಕವೇ ಅಪೇಕ್ಷಿಸುವವನ್ನು, **ಉಗನ್ದು ವನ್ದು** - ಸಂತೋಷದಿಂದ ಬಂದು, **ಆರ್ಚಾವತಾರಂ ಪಣ್ಣಿರುಕ್ಕಿರ ಎನ್ಬೆರುಮಾನ್ ಪಕ್ಕಲಿಲೆ** - ಅರ್ಚಾವತಾರವನ್ನು ಮಾಡಿರುವ ಸರ್ವೇಶ್ವರನಲ್ಲಿ, ಕಲ್ಯಾಣಗುಣಪೂರ್ಣತೆಯೂ, ಪಾವನತ್ವವೂ ವಿರೋಧಿನಿವರ್ತಕತ್ವವೂ, ಆಶ್ರಿತ ಪಾರತಂತ್ರ್ಯವೂ, ಭಕ್ತಭೋಗ್ಯತ್ವವೂ ಉಂಟೆಂದು ಮುಂದೆ ಹೇಳುತ್ತಾರೆ. ಅದಕ್ಕೆ ಪ್ರಮಾಣಗಳನ್ನು ಉದಾಹರಿಸುತ್ತಾರೆ :—**ಮಂತ್ರಬಿಂಬಯೋಃ** - ಮಂತ್ರದಲ್ಲೂ ಮತ್ತು ಆ ಮಂತ್ರದಿಂದ ಪ್ರತಿಷ್ಠಿಸಲ್ಪಟ್ಟ ಬಿಂಬದಲ್ಲೂ ಸಹ, **ಸರ್ವಾತಿಶಾಯಿಷಾಡ್ಗುಣ್ಯಂ** - ಪರತ್ವಾದಿಗಳಿಗಿಂತಲೂ ಅತಿಶಯವಾಗಿ ಜ್ಞಾನ ಶಕ್ತ್ಯಾದಿ ಆರು ಗುಣಗಳಿಗಿರುವ ಭಾವವು, **ಸಂಸ್ಥಿತಂ** - ಉಂಟು, **ಎನ್ಗಿರ** - ಎಂದು ಹೇಳಿರುವದರಲ್ಲಿ ತೋರಿಬರುವ, **ಪೂರ್ತಿಯುಮ್** - ಕಲ್ಯಾಣಗುಣ ಸಂಪೂರ್ಣತೆಯನ್ನೂ, ಇದಕ್ಕೆ ಮುಂದೆ ಬರುವ **ಅನುಸಂಧಿತ್ತು** ಎಂಬುವದರೊಂದಿಗೆ ಅನ್ವಯವು. ಈ ಬಿಂಬದಲ್ಲಿರುವ ದಿವ್ಯ ಮಂಗಳ ವಿಗ್ರಹಕ್ಕೆ ಕಲ್ಯಾಣಗುಣ ಪೂರ್ಣತೆಯುಂಟೆಂಬದಾಗಿ ತಿಳಿಸಲು **ವಿಷ್ವಕ್ಸೇನ** ಸಂಹಿತೆಯ ಪ್ರಮಾಣವನ್ನು ಉದಾಹರಿಸಿದರು.

(೨) ಈ ಅರ್ಚಾಮೂರ್ತಿಗೂ, ಚನ್ನಾಗಿ ಆಶ್ರಯಿಸುವದರಿಂದ ನಮ್ಮ ಸಮಸ್ತ ಪಾತಕಗಳನ್ನು ಹೋಗಲಾಡಿಸುವ ಮಾಹಾತ್ಮ್ಯಯುಂಟೆಂದು ಅನುಸಂಧಾನ ಮಾಡತಕ್ಕದ್ದೆಂದು ತಿಳಿಸಲು ಶಾಂಡಿಲ್ಯ ಸಂಹಿತೆಯ (೨-೮೪) ಪ್ರಮಾಣವನ್ನುದಾಹರಿಸುತ್ತಾರೆ. **ಆಪೀಠಾನ್ಮೌಳಿಪರ್ಯಂತಂ** - ಅರ್ಚಾ ವಿಗ್ರಹದ ಪಾದಪೀಠ ಮೊದಲುಗೊಂಡು ಕಿರೀಟದವರೆಗೂ, ಮೌಳಿ ಎಂದರೆ ಕಿರೀಟವಾದರೂ ಆಗಬಹುದು ಅಥವಾ ಕೇಶಬಂಧವಾಗಲಿ ಆಗಬಹುದು, ಅ ಪಾದತಲಮಸ್ತಕವಾಗಿ, ತಿರುವಡಿ ಮೊದಲುಗೊಂಡು ಶಿರಸ್ಸಿನವರೆಗೂ, (ಹೀಗೀಗ ಸ್ವಾಮಿಯನ್ನು ಸೇವೆಮಾಡುವ ಕ್ರಮವು) **ಪುರುಷೋತ್ತಮಂ** - ಈ ಬಿಂಬವನ್ನು ಆಶ್ರಯಿಸಿರುವ, ಗೀತೆಯಲ್ಲಿ ಪುರುಷೋತ್ತಮನೆಂದು ಪ್ರತಿ

ಪಾದ್ಯನಾಗಿರುವ ಸರ್ವೇಶ್ವರನನ್ನು, **ಪಶ್ಯತಃ** - ನೋಡುತ್ತಿರುವ ಮನುಷ್ಯನ, **ಪಾತಕಾನಿ** - ಮಹಾಪರಾಧಗಳು, **ಆಶು** - ಶೀಘ್ರದಲ್ಲೇ, **ನಶ್ಯನ್ತಿ** - ನಾಶ ಹೊಂದುತ್ತವೆ, ಹೀಗಿರುವಾಗ, **ಉಪಪಾತಕಂ** - ಅಲ್ಪದೋಷಗಳ ವಿಷಯ ದಲ್ಲಿ, **ಕಿಂಪುನಃ** – ಹೇಳತಕ್ಕದ್ದೇನಿದೆ ಎಂದರೆ ಕೈಮುತಿಕ ನ್ಯಾಯಪ್ರಕಾರ ಅವು ಗಳೂ ನಾಶಹೊಂದುವದರಲ್ಲಿ ಸ್ವಲ್ಪವೂ ಸಂದೇಹವಿಲ್ಲವೆಂಬ ತಾತ್ಪರ್ಯವು" **ಎಜ್ಞುರ** - ಎಂಬೀ ಪ್ರಮಾಣದಲ್ಲಿ ತೋರುವ, **ಪಾವನ ತಮತ್ವಮುವ್** - ನಮ್ಮಗಳ ಸರ್ವಾಪರಾಧಗಳನ್ನೂ ನಾಶಮಾಡಿ ಪರಿಶುದ್ಧರನ್ನಾಗಿ ಮಾಡುವ ಭಾವ ವನ್ನೂ ಅನುಸಂಧಾನ ಮಾಡತಕ್ಕದ್ದೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ,

ಯಾವನ್ನಚಂದ್ರಸಂಕಾಶಂ ದ್ರಕ್ಷ್ಯಾಮಿ ಶುಭಮಾನನಂ ।
ಭ್ರಾತುಃ ಪದ್ಮಪಲಾಶಾಕ್ಷಂ ನಮೇ ಶಾಂತಿರ್ಭವಿಷ್ಯತಿ ॥
ಯಾವನ್ನಚರಣೌ ಭ್ರಾತುಃ ಪಾರ್ಥಿವ ವ್ಯಂಜನಾನ್ವಿತೌ ।
ಶಿರಸಾಧಾರಯಿಷ್ಯಾಮಿ ನಮೆಶಾಂತಿರ್ಭವಿಷ್ಯತಿ ॥
ಸಿದ್ಧಾರ್ಥಃಖಲು ಸೌಮಿತ್ರಿರ್ಯಶ್ಚಂದ್ರ ವಿಮಲೋಪಮಂ ।
ಮುಖಂಪಶ್ಯತಿ ರಾಮಸ್ಯ ರಾಜೀವಾಕ್ಷಂ ಮಹಾದ್ಯುತಿ

ರಾ. ಅ. ೯೮. ೭-೯

"ಎಷ್ಟರವರೆಗೆ ಚಂದ್ರನಿಗೆ ಸಮಾನವಾಗಿ ಪರಮಾಹ್ಲಾದಕರವಾದ ಮಙ್ಗಳ ಕರವಾದ ಶ್ರೀರಾಮನ ಮುಖಕಮಲವನ್ನು ನೋಡುವದಿಲ್ಲವೋ ಅಷ್ಟರವರೆಗೂ ನನಗೆ ಯಾವ ವಿಧವಾದ ದುಃಖಶಾಂತಿಯು ಉಂಟಾಗುವದಿಲ್ಲವು. ಎಷ್ಟರವರೆಗೆ ವಜ್ರಧ್ವಜ, ಅರವಿಂದ, ಅಂಕುಶ, ಸುಧಾಕಲಶ ಮೊದಲಾದ ಮಹಾರಾಜ ಲಕ್ಷಣ ಗಳಿಂದ ಯುಕ್ತವಾದ ಪಾದಕಮಲಗಳನ್ನು ಶಿರಸ್ಸಿನಿಂದ ಧರಿಸುವದಿಲ್ಲವೋ ಅಥವಾ ಪಾರ್ಥಿವ ವ್ಯಂಜನವು ಎಂದರೆ ರಾಜ ಲಕ್ಷಣವು, ಆ ಲಕ್ಷಣವು ಯಾವು ದೆಂದರೆ "**ನಾ ವಿಷ್ಣುಃ ಪೃಥಿವೀಪತಿಃ**" ಎಂಬುವದರಿಂದ ವಿಷ್ಣ್ವಂಶವಿರುವದು ಇದರಿಂದ ಕೂಡಿಕೊಂಡಿರುವದು. ಮಹಾವಿಷ್ಣುವಿನ ಸಂಬಂಧವುಳ್ಳ ಆ ಶ್ರೀರಾ ಮನ ಪಾದಗಳನ್ನು ಎಂಬ ಭಾವವು; ಅಷ್ಟರವರೆಗೆ ನನಗೆ ಸಕಲ ದುಃಖಶಾಂತಿ ಯೂ ಉಂಟಾಗುವದಿಲ್ಲವು. ಯಾವ ಪ್ರಸಿದ್ಧನಾದ ಲಕ್ಷ್ಮಣನು ಕಳಂಕಾದಿ ಮಲಗಳಿಲ್ಲದೆ ಇರುವ ಚಂದ್ರನಿಗೆ ಸಮಾನವಾದ ಮುಖವನ್ನೂ, ಮಹಾ ತೇಜೋ ಮಯವಾಗಿ ಆಶ್ರಿತಕಾರುಣ್ಯಸೂಚಕವಾದ ಪುಂಡರೀಕದಹಾಗಿರುವ ನಯನವನ್ನೂ ಎಷ್ಟರವರೆಗೆ ನೋಡುವನೋ, ಅವನು ಮಹಾ ಭಾಗ್ಯಶಾಲಿಯಾದ ಕೃತ ಕೃತ್ಯನು" ಎಂಬ ಚಿತ್ರಕೂಟವನ್ನು ಕುರಿತು ಹೋಗುವ ಮಹಾ ಭಾಗವತನಾದ ಶ್ರೀ ಭರತನ ವಾಕ್ಯವೂ,

(೩) ಸಂದರ್ಶನಾದಕಸ್ಮಾಚ್ಚ ಪುಂಸಾಂ ಸಂಮೂಢಚೇತಸಾಂ।
ಕುವಾಸನಾಕುಬುದ್ಧಿಶ್ಚ ಕುತರ್ಕನಿಚಯಶ್ಚಯಃ। ಕುಹೇತುಶ್ಚ ಕುಭಾವಶ್ಚ

ಯಶ್ಚ ರಾಮಂ ನಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ।
ನಿಂದಿತಸ್ಸವಸೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ।
(ರಾ. ಅ. ೧೭-೧೪.)

"ಯಾವನು ರೂಪೌದಾರ್ಯಗಳಿಂದ ದೃಷ್ಟಿಚಿತ್ತಗಳನ್ನು ಅಪಹರಿಸುವ ಶ್ರೀರಾಮನನ್ನು ದೃಷ್ಟಿಸಿ ನೋಡುವದಿಲ್ಲವೋ, ಆದುದರಿಂದಲೇ ಅಂತಹ ಆ ಅಭಿಮುಖ್ಯವು ಅವನಲ್ಲಿಲ್ಲದುದರಿಂದ ಶ್ರೀರಾಮನು ಅವನನ್ನು ತನ್ನ ದಿವ್ಯಕಟಾಕ್ಷದಿಂದ ನೋಡು ವದಿಲ್ಲವೋ, ಅಂತಹ ಮನುಷ್ಯನು ಲೋಕದ ಜನರುಗಳಿಂದ ನಿಂದಿತನಾಗಿ ವಸಿಸುವನಲ್ಲದೆ, ತಾನು ಎಂತಹ ನಿರ್ಭಾಗ್ಯನೆಂದು ತನ್ನ ಮನಸ್ಸೂ ಕೂಡ ತನ್ನನ್ನು ನಿಂದಿಸುತ್ತದೆ" ಎಂಬ ಮಹರ್ಷಿಯ ವಾಕ್ಯೂ, ಇಲ್ಲಿ ಅನುಸಂಧೇಯವು.

(೩) ಮುಂದೆ ಸರ್ವವಿಧಭ್ರಮೆಗಳೆಲ್ಲಾ ಅಂತಹ ಅರ್ಚಾವತಾರಿಯ ಸಂದರ್ಶನದಿಂದ ತೊಲಗುತ್ತವೆ ಎಂಬ ಅನುಸಂಧಾನವಿರಬೇಕೆಂಬುವದಕ್ಕೆ ಪುನಃ ಪೌಷ್ಕರ ಸಂಹಿತಾ ವಾಕ್ಯವನ್ನು ಉದಾಹರಿಸುತ್ತಾರೆ. **ಅಕಸ್ಮಾಚ್ಚ** - ತಾನು ಅಪೇಕ್ಷಿಸದೆ, ಅಕಸ್ಮಾತ್ತಾಗಿ ಎಂದರೆ ಯಾದೃಚ್ಛಿಕವಾಗಿ, **ಸಂದರ್ಶನಾಚ್ಚ** - ಅರ್ಚಾವತಾರಿಯ ಸಂದರ್ಶನದಿಂದ, **ಸಂಮೂಢಚೇತಸಾಂ** - ಅಜ್ಞಾನಾವೃತ ಮನಸ್ಸುಳ್ಳ, **ಪುಂಸಾಂ** - ಪುರುಷರ, **ಕುವಾಸನಾ** - ದುಷ್ಕರ್ಮದಿಂದುಂಟಾಗುವ ವಾಸನೆಯೂ, ಇದು ಪ್ರತ್ಯಕ್ಷಪ್ರಮಾಣದಲ್ಲಿ ಭ್ರಮವನ್ನುಂಟುಮಾಡುತ್ತದೆ, **ಕುಬುದ್ಧಿಶ್ಚ** - ಆ ವಾಸನಾಫಲರೂಪವಾದ ಕುಯುಕ್ತಿಯೂ, **ಕುತರ್ಕನಿಚಯಶ್ಚ** - ಅನುಮಾನಪ್ರಮಾಣದಲ್ಲಿ ಕುತರ್ಕಸಮೂಹವೂ, **ಕುಹೇತುಶ್ಚ** - ಅದರ ಫಲವಾದ ದುಷ್ಟಹೇತುಗಳೂ, **ಕುಭಾವಶ್ಚ** - ಆಗಮಪ್ರಮಾಣದಲ್ಲಿ ತಪ್ಪು ಅಭಿಪ್ರಾಯವೂ, **ನಾಸ್ತಿಕತ್ವಂ** - ಅದರ ಫಲವಾದ ಏನೂ ಇಲ್ಲವೆಂಬ ಭಾವವೂ, ಅಥವಾ ಕುಭಾವವೆಂದರೆ ಕುವಾಕ್ಯಾರ್ಥ ನಿರ್ಣಯವು ಅದರ ಫಲವಾದ ನಾಸ್ತಿಕತ್ವವೆಂದರೆ ಕೆಲವು ಶ್ರುತಿವಾಕ್ಯಗಳು ಪ್ರಮಾಣವಾಗುವದಿಲ್ಲವೆಂಬ ಭಾವವೂ, ಹೀಗೆ ಈ ಪ್ರತಿಯೊಂದೂ, **ಲಯಂವ್ರಜೇತ್** - ನಾಶವನ್ನು ಹೊಂದುತ್ತವೆ. ಪ್ರತ್ಯಕ್ಷ ವಿಷಯಮೂಲಕ ಭ್ರಮೆಗೆ ದೇಹಾತ್ಮಭ್ರಮವು ಉದಾಹರಣೆಯು, ಇದು ಕುವಾಸನೆಯಿಂದುಂಟಾಗಬಹುದು. ಅದರ ಫಲವಾಗಿ "**ಋಣಂಕೃತ್ವಾ ಘೃತಂ ಪಿಬೇತ್**"

---

[೩] ಪೌಷ್ಕರ ಸಂಹಿತೆ

ನಾಸ್ತಿಕತ್ವಂ ಲಯಂ ವ್ರಜೇತ್ ॥ ಎಙ್ಗಿರಪಡಿಯೇ ಪ್ರತ್ಯಕ್ಷಾದಿ ಪ್ರಮಾಣತ್ರಯತ್ತಿಲುಮ್ ಹೇತು ಫಲಭಾವತ್ತಾಲೆ ವರುಂ ಮತಿಮ ಯಕ್ಕುಗಳಿಲ್ಲಾತ್ತುಕ್ಕುಂ ಮರುನ್ದಾಯಿರುಕ್ಕಿರಪಡಿಯೈಯುಮ್,

---

ಎಂಬ ಕುಬುದ್ಧಿಯು. ಅನುಮಾನಪ್ರಮಾಣ ಮೂಲಕ ಕುತರ್ಕಕ್ಕೆ ಉದಾಹರಣೆಯು, ಜಗನ್ಮಿಥ್ಯಾದೃಶ್ಯತ್ವಾತ್ ಎಂಬ ಕುವಾದವು, ಅದಕ್ಕೆ ದುಷ್ಟಹೇತು ದೃಶ್ಯತ್ವಾತ್, ಅದರ ಹಾಗೆಯೇ ಅದಕ್ಕೆ ಪ್ರತಿಯಾಗಿ ಇನ್ನೊಂದು ತರ್ಕವು ಬ್ರಹ್ಮಮಿಥ್ಯಾ ಎಂಬದಾಗಿ; ಇದಕ್ಕೆ 'ಜ್ಞಾನವಿಷಯತ್ವಾತ್' ಎಂದು ದುಷ್ಟ ಹೇತುವು. ಶಾಸ್ತ್ರಪ್ರಮಾಣದಲ್ಲಿ ಕುಭಾವಕ್ಕೆ ಸಕಲವಿಶೇಷಪ್ರತ್ಯನೀಕ ಚಿನ್ಮಾತ್ರವು ಬ್ರಹ್ಮವೆಂಬಭಿಪ್ರಾಯವು ಅದಿಲ್ಲದೆ ಇನ್ನು ಯಾವುದೂ ಜ್ಞಾತಾವಾಗಲಿ, ಜ್ಞೇಯವಸ್ತುಗಳಾಗಲಿ ಯಾವುವೂ ಇಲ್ಲವೆಂಬ ನಾಸ್ತಿಕತ್ವವು. ಹೀಗೆ ಭ್ರಮೆಗಳು ಉತ್ಪನ್ನವಾಗುತ್ತವೆ. ಇವುಳಗನ್ನೇ ಶ್ರೀ ದೇಶಿಕರು ಮುಂದೆ ಉದ್ದೇಶಿಸಿ, "ಮತಿಮಯಕ್ಕಙ್ಗಳ್" ಎಂದು ಪ್ರಯೋಗಿಸಿರುತ್ತಾರೆ. ಇತರ ಸಿದ್ಧಾಂತಿಗಳು ಪ್ರತ್ಯಕ್ಷಾನುಮಾನ ಶಾಬ್ದಪ್ರಮಾಣಗಳಲ್ಲಿ ಹೇಳುವ ಇಂತಹ "ಮತಿಮಯಕ್ಕಂಗಳ್" ನಮ್ಮ ಸಿದ್ಧಾನ್ತದಲ್ಲಿಲ್ಲವೆಂದು ಸಂಕಲ್ಪ ಸೂರ್ಯೋದಯದಲ್ಲಿ ಹೇಳಿರುತ್ತಾರೆ :—

> ದೃಷ್ಟೇ ಪಹ್ನುತ್ಯಭಾವಾದನುಮಿತಿವಿಷಯೇ ಲಾಘವಸ್ಯಾನುಸಾರಾತ್ ಶಾಸ್ತ್ರೈಕಾಸ್ಯೈವಾವಸೇಯೇ ವಿಹತಿ ವಿರಹಿತೇ ನಾಸ್ತಿಕತ್ವಪ್ರಹಾಣಾತ್। ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ ಯಾಮುನೇಯಪ್ರಬಂಧೈಸ್ತ್ರಾತಂ ಸಮ್ಯಗ್ಯತೀಂದ್ರೈರಿದಮಖಿಲ ತಮಃ ಕರ್ಶನಂ ದರ್ಶನಂ ನಃ ॥

ನಮ್ಮ ಸಿದ್ಧಾನ್ತದಲ್ಲಿ ಇತರ ಸಿದ್ಧಾನ್ತಿಗಳು ಹೇಳುವ ಹಾಗೆ ಪ್ರತ್ಯಕ್ಷವಿಷಯದಲ್ಲಿ ಅಪಲಾಪವಿಲ್ಲವು, ಅನುಮಾನ ಪ್ರಮಾಣದಲ್ಲಿ ಗೌರವವಾದುದನ್ನು ತ್ಯಜಿಸಿ, ಲಾಘವವಾದುದನ್ನನುಸಂಸಿರುವೆವು. ಶಾಸ್ತ್ರಮೂಲಕವಾಗಿಯೇ ತಿಳಿಯಬೇಕಾದ ವಿಷಯದಲ್ಲಿ ಪರಸ್ಪರ ಬಾಧ್ಯಬಾಧಕ ಭಾವವನ್ನೂ ಹೇಳುವದಿಲ್ಲವು, ನಾಸ್ತಿಕತ್ವವನ್ನೂ ಹೇಳುವದಿಲ್ಲವು, ಮತ್ತು ನಮ್ಮ ಸಿದ್ಧಾನ್ತವು ಶ್ರೀಮನ್ನಾಥ ಮುನಿಗಳ ಪ್ರಥಮ ಜ್ಞಾನಕ್ಕೆ ವಿಷಯವಾಗಿ ಶ್ರೀ ಯಾಮುನೇಯರ ಅನೇಕ ಗ್ರಂಥಗಳಿಂದ ಉಪಕರಿಸಲ್ಪಟ್ಟು, ಶ್ರೀ ಯತೀಂದ್ರರಿಂದ ಚನ್ನಾಗಿ ಪೋಷಿಸಲ್ಪಟ್ಟಿದುದಾಗಿ ಅನೇಕ ಸಿದ್ಧಾನ್ತಗಳಲ್ಲಿ ತೋರಿಬರುವ ಸರ್ವ ಅಜ್ಞಾನಗಳನ್ನು ನಾಶಪಡಿಸು

(೪) "ಯೇ ಯಥಾ ಮಾಂ ಪ್ರಪದ್ಯಂತೇ ತಾಂ ಸ್ತಥೈವ ಭಜಾಮ್ಯಹಂ" ಎನ್ರುಮ್

ವಂಥಾದ್ದಾಗಿದೆ ಎಂದು ಹೇಳಿರುತ್ತಾರೆ. **ಎಂಗಿರಪಡಿಯೆ** - ಎಂದು ಹೇಳಿರುವ ಹಾಗೆ, **ಪ್ರಮಾಣತ್ರಯತ್ತಿಲುಮ್** - ಪ್ರತ್ಯಕ್ಷಾನುಮಾನ ಶಾಬ್ದವೆಂಬ ಮೂರು ಪ್ರಮಾಣಗಳಲ್ಲೂ, **ಹೇತುಫಲಭಾವತ್ತಾಲೆ** - ಕಾರಣ ಕಾರ್ಯಭಾವ ದಿಂದ, **ವರುಂ** - ಉಂಟಾಗುವ, **ಮತಿಮಯಕ್ಕಳೆಲ್ಲಾತುಕ್ಕು** - ಬುದ್ಧಿಭ್ರಮೆ ಗಳಿಗೆಲ್ಲಾ, **ಮರುಂದಾಯಿರುಕ್ಕಿರ ಪಡಿಯೈಯುಮ್** - ದಿವ್ಯೌಷಧವಾಗಿರುವ ಪ್ರಕಾರವನ್ನೂ, **ಅನುಸಂಧಿತ್ತು** - ಅನುಸಂಧಾನಮಾಡಿ ಎಂದು ಮುಂದೆ ಇರು ತ್ತದೆ. ಸರ್ವೇಶ್ವರನ ದಿವ್ಯ ಮಂಗಳ ವಿಗ್ರಹವನ್ನು ಚನ್ನಾಗಿ ಸೇವಿಸುವದ ರಿಂದ ನಮ್ಮಗಳ ಸಮಸ್ತ ಭ್ರಮೆಗಳನ್ನೆಲ್ಲಾ ಹೋಗಲಾಡಿಸುವ ಔಷಧವಾಗಿ ಪರಿಣಮಿಸುತ್ತದೆಂದು ಹೇಳಲ್ಪಟ್ಟಿತು.

ಮುಂದೆ ಆ ದಿವ್ಯಮಂಗಳ ವಿಗ್ರಹದಲ್ಲಿ ಆಶ್ರಿತ ಪಾರತಂತ್ರ್ಯವನ್ನನು ಸಂಧಾನ ಮಾಡತಕ್ಕದ್ದೆಂದು ಹೇಳುತ್ತಾರೆ, "**ಯೇ** - ಯಾರು, ಎಂದರೆ ನನ್ನನ್ನಾಶ್ರಯಿಸಬೇಕೆಂಬ ಅಪೇಕ್ಷೆಯುಳ್ಳವರು ಯಾರಾಗಲಿ, **ಮಾಂ** - ಭಕ್ತಾ ನುಗ್ರಹದಲ್ಲೇ ಸದಾ ನಿರತನಾಗಿರುವ ನನ್ನನ್ನು, **ಯಥಾ** - ಹೇಗೆ ಆಗಲಿ, ಅವರುಗಳಪೇಕ್ಷೆ ಅನುಕೂಲಾದಿಗಳು ಹೇಗಿದೆಯೋ ಹಾಗೆ ಎಂದರೆ ಯಾವ ಕಾಲದಲ್ಲೇಯಾಗಲಿ, ಪ್ರದೇಶದಲ್ಲೇಯಾಗಲಿ, ತುಂಬಾ ಪೂಜಾದ್ರವ್ಯಗಳಿಂದ ಲಾಗಲಿ, ಅಲ್ಪ ದ್ರವ್ಯಗಳಿಂದ ಅರ್ಘ್ಯಾದಿಗಳ ಮೂಲಕವೇಯಾಗಲಿ, ತಾನೇ ಯಾಗಲಿ, ಇತರರ ಮೂಲಕವಾಗಲಿ, ಒಳ್ಳೇ ಅವಸರದಲ್ಲಿಯಾಗಲಿ ಅಥವಾ ಹಾಗಲ್ಲದೆಯಾಗಲಿ, **ಪ್ರಪದ್ಯಂತೇ** - ಆಶ್ರಯಿಸಿದರೂ, ಎಂದರೆ ದೇವ ಮನು ಷ್ಯಾದಿ ರೂಪದಿಂದ ಅವತರಿಸಿಯೇ ಆಶ್ರಿತ ರಕ್ಷಣೆಯನ್ನು ನಾನು ಮಾಡ ಬೇಕೆಂಬುವದಿಲ್ಲವು; ಇನ್ನು ಯಾವ ಭಾವನೆಯಿಂದ ತಮಗೆ ಅಪೇಕ್ಷೆಯಿದ್ದ ಹಾಗೆ ಆಶ್ರಯಿಸಿ ಆರಾಧಿಸಿದರೂ, **ತಾನ್** - ಅಂಥಾವರನ್ನು, **ತಥೈವ** - ಅವ ರಪೇಕ್ಷೆ ಇದ್ದಹಾಗೆಯೇ, **ಭಜಾಮ್ಯಹಂ** - ನಾನು ದರ್ಶನಾದಿಗಳನ್ನು ಕೊಟ್ಟು ಅನುಗ್ರಹಿಸುವೆನು ಅಥವಾ ಅಂಗೀಕರಿಸುವೆನು. ಇದರಿಂದ ಬಿಂಬದಲ್ಲಿ ರುವ ದಿವ್ಯಮಂಗಳ ವಿಗ್ರಹಯುಕ್ತನಾಗಿ, ಈತನು ಮಾಡುವ ಸರ್ವವಿಧ ಕೈಂಕರ್ಯ ಗಳನ್ನೂ ಕೈಕೊಂಡು ಆಶ್ರಿತ ಪರತಂತ್ರನಾಗಿರುವೆನು ಎಂದು ಹೇಳಲ್ಪಟ್ಟಿತು.

---

[೪] ಗೀ. ೪-೧೧.

(೫) "ತ್ತಮರು ಗನ್ದದೆವ್ವುರುವಂ" ಎಂಗಿರ ಪಾಟ್ಟಲುಂ ಶೊಲ್ಲುಗಿರ

ಈ ಶ್ಲೋಕದ ಉತ್ತರಾರ್ಧವು "ಮಮವರ್ತ್ಮಾನು ವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ" ಎಂಬದಾಗಿ. ಎನ್ರುಮ್ - ಎಂಬದಾಯೂ, ಗಿ

ತ್ತಮರು ಗನ್ದದೆ ವ್ವುರುವ ಮವ್ವುರುವಂ ತಾನೇ
ತಮರುಗನ್ದದೆಪ್ಪೇರ್ ಮಱ್ಱಪ್ಪೇರ್-ತಮರುಗ
ನ್ದೆವ್ವಣ್ಣಂ ಶಿನ್ದಿತ್ತಿಮೈಯಾದಿರುಪ್ಪರೇ
ಅವ್ವಣ್ಣಮಾಳಿಯಾನಾಮ್.

ಆಳಿಯಾನ್ - ಚಕ್ರಾಯುಧವನ್ನು ಧರಿಸಿರುವ ಸರ್ವೇಶ್ವರನು, **ತಮರ್** - ತನ್ನ ಭಕ್ತರು, **ಉಗನ್ದದು** - ಅಪೇಕ್ಷಿಸಿದುದು, **ಎವ್ವುರುವಮ್** - ಯಾವ ವಿಗ್ರಹವೋ, **ಅವ್ವುರುವುಮ್** - ಅಂತಹ ದಿವ್ಯಮಂಗಳ ವಿಗ್ರಹವನ್ನು, **ತಾನೇ** - ಅವನೇ, ತಾನಾಗಿಯೇ, **ಆಮ್** - ಸ್ವೀಕರಿಸುವನು, ಮಱ್ಱು - ಮತ್ತು, **ತಮರ್ ಉಗನ್ದದು** - ತನ್ನ ಭಕ್ತರು ಅಪೇಕ್ಷಿಸಿದುದು, **ಎಪ್ಪೇರ್** - ದೀಪಪ್ರಕಾಶನೆಂದಾಗಲಿ, **ಅಳಗರ್** ಎಂದಾಗಲಿ ಯಾವ ಹೆಸರೋ, **ಅಪ್ಪೇರ್** - ಆ ಹೆಸರನ್ನೇ, **ಆಮ್** - ಅಂಗೀಕರಿಸುವನು, **ತಮರ್** - ತನ್ನ ಭಕ್ತರು, **ಉಗನ್ದು** - ಅಪೇಕ್ಷಿಸಿ, **ಎವ್ವಣ್ಣಂ** - ಯಾವ ಪ್ರಕಾರವಾಗಿ, **ಶಿನ್ದಿತ್ತು** - ಅನುಸನ್ಧಾನ ಮಾಡಿ, **ಇಮೈಯಾದಿರುಪ್ಪರ್** - ಕಣ್ಣುರೆಪ್ಪೆಯಾಡಿಸದೆ ದೃಷ್ಟಿಸಿ ನೋಡುವರೋ, **ಅವ್ವಣ್ಣಂ** - ಆ ಪ್ರಕಾರವಾಗಿಯೇ, **ಆಮ್** - ಆಗುವನು. ಭಕ್ತರಪೇಕ್ಷಿಸಿದ ದಿವ್ಯಮಂಗಳ ವಿಗ್ರಹವನ್ನೂ ಹೆಸರನ್ನೂ ವರ್ಣವನ್ನೂ, ಸಹ ಭಕ್ತಪರವಶನಾಗಿ ಅವರುಗಳು ಕೋರಿದ ರೀತಿಯಲ್ಲಿ ಅಂಗೀಕರಿಸುವನೆಂಬ ಭಾವವು. ಈ ಸಂದರ್ಭದಲ್ಲಿ ಪೆರಿಯವಾಚ್ಚಾನ್ಪಿಳ್ಳೈಯವರು ಒಂದು ಇತಿಹಾಸವನ್ನನುಗ್ರಹಿಸಿರುತ್ತಾರೆ. ಶ್ರೀ ಯತಿವರ್ಯರು ಮಾಧುಕರಕ್ಕೆ ದಯಮಾಡುತ್ತಿದ್ದಾಗ ಕೆಲವು ಹುಡುಗರು ಕಾಲಿನಿಂದ ನೆಲದಲ್ಲಿ ಒಂದು ಬೊಂಬೆಯನ್ನುಗೀರಿ "**ಉಮ್ಮುಡೈಯ ಎಮ್ಬೆರುಮಾನ್ ತಿರುಮೇನಿ**" ಎಂದು ಹಾಸ್ಯಮಾಡಿ ಹೇಳಲು, ಅವರುಗಳಿಗೆ ಬುದ್ಧಿಕಲಿಸುವದಕ್ಕಾಗಿ, ಅವರು ಪಾತ್ರೆಯನ್ನು ಕೆಳಗಿಟ್ಟು, ಅದಕ್ಕೆ ಪ್ರಣಾಮಗಳನ್ನೆಸಗಿ ಹೊರಟುಹೋದರೆಂದು ಹೇಳಿರುತ್ತಾರೆ. ಇದರಿಂದ ಶ್ರೀ ಯತಿವರ್ಯರು ಈ ಅರ್ಥವನ್ನು ಸಮರ್ಥಿಸಿದಂತಾಯಿತು. **ಎಂಗಿರಪಾಟ್ಟಲುಂ** - ಎನ್ನುವ ಪಾಶುರದಲ್ಲೂ,

[೫] ಮುದಿಲ್ ತಿರುವಂದಾದಿ. ೪೪

ಪಡಿಯೇ ವಾಙ್ಮನಸಾ ಪರಿಚ್ಛೇದ್ಯಮಾನವಾಶ್ರಿತ ಪಾರತಂತ್ರ್ಯತ್ತೈ ಯುಮ್, (೬) ಕಣ್ಣಕಣ್ಣಿಳ್ ವುತ್ತೆನ್ನಿನ್ನೈಕ್ಕಿಣಾದೇ," ಎಙ್ಗಳ ಆಕರ್ಷಕತ್ವತ್ತೈಯುಂ ಅನುಸಂಧಿತ್ತು,

---

ಶೊಲ್ಲುಗಿರಪಡಿಯೇ - ಉಪಪಾದಿಸಿರುವ ಹಾಗೆ, ವಾಙ್ಮನಸಾ ಪರಿಚ್ಛೇದ್ಯ ಮಾನ - ವಾಕ್ಕಿನಿಂದಲೂ ಮನಸ್ಸಿನಿಂದಲೂ ಇಷ್ಟೆಂದು ಹೇಳಲಸಾಧ್ಯವಾದ, ಆಶ್ರಿತಪಾರತಂತ್ರ್ಯತ್ತೈಯುಮ್ - ಭಕ್ತಪರಾಧೀನನಾಗಿರುವದನ್ನು, ಅನುಸಂಧಿತ್ತು - ಎಂದು ಮುಂದೆ ಇದೆ. ಈತನು ಭಕ್ತಪರಾಧೀನನಾದುದರಿಂದಲೇ ಭಕ್ತನಾದ ಅರ್ಚಕನು ಯಾವ ರೀತಿಯಲ್ಲಿ ಪೂಜೆಯನ್ನು ಮಾಡಿದರೂ ಅದನ್ನೇ ಅಂಗೀಕರಿಸುವನು. ಭಕ್ತಾದಿಗಳು ಯಾವ ಅಲಂಕಾರವನ್ನೂ ವಸ್ತ್ರಾಭರಣಗಳನ್ನೂ ಕಲ್ಪಿಸುವರೋ ಮತ್ತು ಯಾವ ಯಾವ ಉತ್ಸವ ನೈವೇದ್ಯ ಮೊದಲಾದ ಕೈಂಕರ್ಯಗಳಿಂದ ಆತನನ್ನು ಪೂಜಿಸುವರೋ, ಅವುಗಳನ್ನೇ ಸ್ವೀಕರಿಸಿ ಅವುಗಳಿಂದ ಪ್ರೀತನಾಗಿ ಅವರುಗಳ ಅಭೀಷ್ಟಗಳನ್ನು ದಯಪಾಲಿಸುವನು. ಹೀಗೆ ಭಕ್ತ ಪರತಂತ್ರನು. ಹೀಗೆಯೇ ಅವತಾರ ಕಾಲಗಳಲ್ಲೂ ತಾನು ಭಕ್ತಪರಾಧೀನನೆಂದು

(೧) "ಇಮೌ ಸ್ಮ ಮುನಿಶಾರ್ದೂಲ ಕಿಂಕರೌ ಸಮುಪಸ್ಥಿತೌ ।
ಆಜ್ಞಾಪಯ ಯಥೇಷ್ಟಂ ವೈ ಶಾಸನಂ ಕರವಾವ ಕಿಂ ॥

ಎಂದು ವಿಶ್ವಾಮಿತ್ರರಂ ಕುರಿತು, ತಾನು ಕಿಂಕರನು, ಇಷ್ಟಾನುಸಾರ ಆಜ್ಞಾಪಿಸಬಹುದು, ಆ ಆಜ್ಞೆಯನ್ನು ಶಿರಸಾವಹಿಸಿ ನಡೆಸಿಕೊಡುವೆನೆಂಬ ಭಾವವನ್ನು ತೋರಿಸಿರುತ್ತಾರೆ. ಹಾಗೆಯೇ ಶರಭಂಗ ಮುನಿಗಳಿಗೆ ಅಭಯವನ್ನಿತ್ತು (೨) "ನೈವಮರ್ಹಥ ಮಾಂ ವಕ್ತುಮಾಜ್ಞಾಪ್ಯೋಽಹಂ ತಪಸ್ವಿನಾಂ" ಅವರುಗಳ ಆಶ್ರಿತನಿವಾರಣರೂಪ ಶರಣಾಗತಿಯೇ ತನಗೆ ಆಜ್ಞೆ ಎಂದು ಹೇಳಿಕೊಂಡಿರುತ್ತಾರೆ. ಹಾಗೆಯೇ ಚಕ್ರಾಯುಧವು ಅಟ್ಟಿಸಿಕೊಂಡು ಬಂದುದರಿಂದ ಭೀತರಾದ ದುರ್ವಾಸರಿಗೂ (೩) "ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ" ಎಂದು ಭಗವಂತನೇ ಹೇಳಿರುವುದರಿಂದ ಭಗವಂತನ ಭಕ್ತರ ತಂತ್ರ್ಯವು ಪರಮೈಕಾಂತಿಯಲ್ಲಿ ಸುವ್ಯಕ್ತವು.

ಇನ್ನು ಮುಂದೆ "ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಂ" ಎಂದು ಹೇಳಿರುವ ಹಾಗೆ ಭಗವಂತನ ದಿವ್ಯಮಂಗಳ ವಿಗ್ರಹಕ್ಕೆ ದೃಷ್ಟಿಚಿತ್ತಗಳನ್ನಪಹರಿಸುವ ಭಾವವುಂಟೆಂದು ಅನುಸಂಧಾನ ಮಾಡತಕ್ಕದ್ದೆಂದು ಉಪದೇಶಿಸುತ್ತಾರೆ :—

(೬) ಅಮಲನಾದಿಪ್ಪಿರಾ‌ನ್, ೧೦.

ಕೊಣ್ಡಲ್ ವಣ್ಣನೈ ಕೋವಲನಾಯ್‌ವೆಣ್ಣೆ
ಯುಣ್ಡವಾಯನೆನನ್ನುಳ್ಳಙ್ಕವರ್‍ನ್ದಾನೈ
ಯುಣ್ಡರ್ಕೋನ್ ನಣಿಯರಙ್ಗನೆನ್ನಮುದನೈ
ಕ್ಕಣ್ಡಕಣ್‍ಗಣ್ಮತ್ತೊನ್ರಿನೈಕ್ಕಾಣಾವೇ ॥

ಕೊಂಡಲ್ ವಣ್ಣನೈ - ನೀಲಮೇಘದಂತೆ ಶ್ಯಾಮಲ ವರ್ಣನಾದ, **ಕೋವಲನಾಯ್** - ಗೋಪಾಲನಾದ, **ವೆಣ್ಣೆಯುಣ್ಡವಾಯುವನ್** - ಬೆಣ್ಣೆಯನ್ನು ಭೋಗ್ಯವಾಗಿ ಭುಜಿಸಿದ ಬಾಯುಳ್ಳವನಾದ, **ಎನ್ನುಳ್ಳಂ ಕವರ್‍ನ್ದಾನೆ** - ನನ್ನ ಹೃದಯವನ್ನಪಹರಿಸಿದವನಾದ, **ಅಣ್ಡರ್‍ಕೋನ್** - ಅಣ್ಡಗಳಿಗೂ ಅಣ್ಡಗಳಲ್ಲಿನ ಸಮಸ್ತ ಚಿದಚಿತ್ತುಗಳಿಗೂ ಸ್ವಾಮಿಯಾದ, **ಅಣಿಯರಂಗನ್** - ಈ ಲೀಲಾವಿಭೂತಿಗೇನೆ ಅಲಂಕಾರಪ್ರಾಯವಾದ ದಿವ್ಯ ಶ್ರೀರಂಗಕ್ಷೇತ್ರದ, **ಅಮುದನೈ** - ಪರಮ ಭೋಗ್ಯನಾಗಿ ಅಮೃತನೆಂದು ಹೇಳಿಸಿಕೊಳ್ಳುವ ಸರ್ವೇಶ್ವರನನು, **ಕಂಡಕಣ್‍ಗಳ್** - ದೃಷ್ಟಿಗೆ ಆಸೇಚನಕವಾಗಿ ಆ ಪರವಸ್ತುವನ್ನು ನೋಡಿ "ಅದ್ಯಾಪಿ ನ ನಿವರ್ತತೇ" ಎಂದು ಹೇಳಿರುವ ಹಾಗೆ ಹಿಂತಿರುಗದ ಕಣ್ಣುಗಳು, **ಮತ್ತೊನ್ರಿನೈಕ್ಕಾಣಾವೇ** - ಇನ್ನು ಯಾವ ಐಹಿಕ ನಶ್ವರಪದಾರ್ಥಗಳನ್ನು ನೋಡುವದಿಲ್ಲವು. ಅಥವಾ ಇನ್ನು ಯಾವ ದೇವತಾನ್ತರ ರೂಪಗಳನ್ನಾಗಲಿ ನೋಡುವದಿಲ್ಲವು. ಈತನು ಅಮುದನು, ಆದುದರಿಂದ ನಾವುಗಳೂ ಅಮೃತವನ್ನು ಎಂದರೆ ಮೋಕ್ಷವನ್ನು ಹೊಂದಬಹುದು. ಇತರ ವಿಗ್ರಹಗಳಿಗೆ ಈ ಶಕ್ತಿ ಇಲ್ಲವೆಂಬ ಭಾವವು **ಬೆಣ್ಣೆಯನ್ನು ಅತಿಪ್ರೀತಿಯಿಂದ ಶ್ರೀ ಕೃಷ್ಣನು ಸವಿದನು** ಎಂದು ಹೇಳಿರುವದರಿಂದ ಭಕ್ತನು ಸಮರ್ಪಿಸುವ ಪದಾರ್ಥಗಳಲ್ಲಿ ಗೋವು ತುಂಬಾ ಪವಿತ್ರವಾದ ಪಶುವಾದುದರಿಂದ, ಹಾಲು, ಮೊಸರು, ಬೆಣ್ಣೆಗಳು ಆತನಿಗೆ ತುಂಬಾ ಪವಿತ್ರವಾದುದಾಗಿಯೂ, ವಿದುರಾನ್ನ, ಕುಚೇಲ ಪೃಥುಕ ತಂಡುಲಗಳ ಹಾಗೆ ಭಕ್ತನ ಮನೆಯ ಪದಾರ್ಥವಾದುದಾಗಿಯೂ, ಹೀಗೆ ಎರಡು ವಿಧವಾಗಿಯೂ ಪರಮಭೋಗ್ಯವು. ಈ ಭಕ್ತರಿಗೆ ಸೇರಿದ ಪದಾರ್ಥವನ್ನು ತಾನೇ ಉಂಡನೆಂದು ಹೇಳಿದುದರಿಂದ, ಅವರನುಗ್ರಹಾರ್ಥವಾಗಿ ಅವರಿಗೆ ಸೇರಿದ ಪುಣ್ಯಪಾಪರೂಪಗಳನ್ನು ಉಂಡನೆಂದರೆ, ಹೋಗಲಾಡಿಸಿದನೆಂಬ ವೇದಾನ್ತಾರ್ಥವೂ ತೋರಿಬರುತ್ತದೆ. ಈ ಪಾಶುರದಿಂದ ಸರ್ವೇಶ್ವರನ ದಿವ್ಯ ಮಂಗಳ ವಿಗ್ರಹಕ್ಕೆ ಮನವನ್ನಾಕರ್ಷಿಸುವ ಶಕ್ತಿಯು ಉದಾಹರಿಸಲ್ಪಟ್ಟಿತು. **ಎನ್ನಿರ** - ಎಂಬ ಪಾಶುರದಲ್ಲಿ ತೋರುವ, **ಆಕರ್ಷಕತ್ತೈಯುಂ** - ಮನಸ್ಸನ್ನು ಆಕರ್ಷಿಸುವ ಮಾಹಾತ್ಮ್ಯೆಯನ್ನೂ, **ಅನುಸಂಧಿತ್ತು** - ಅನುಸಂಧಾನಮಾಡಿ, ಹೀಗೆ

(೭) "ಸತೀವ ಪ್ರಿಯಭರ್ತಾರಂ, ಜನನೀವಸ್ತನಂಧಯಂ । ಆಚಾರ್ಯಂ ಶಿಷ್ಯವನ್ಮಿತ್ರಂ ಮಿತ್ರವಲ್ಲಾಲಯೇದ್ಧರಿಂ । ಸ್ವಾಮಿತ್ವೇನ ಸುಹೃತ್ವೇನ ಗುರುತ್ವೇನ ಚ ಸರ್ವದಾ । ಪಿತೃತ್ವೇನ ತಥಾ ಭಾರ್ವ್ಯೋ ಮಾತೃತ್ವೇನ ಚ ಮಾಧವಃ ।", "ಯಥಾ ಯುವಾನಂ ರಾಜಾನಂ ಯಥಾಚಮದ

ಅರ್ಚಾವಿಗ್ರಹದಲ್ಲಿನ ದಿವ್ಯಮಂಗಳ ವಿಗ್ರಹ ಸೇವೆಯಲ್ಲಿ ಈ ಐದರ ಅನುಸಂಧಾನವು ಇರಬೇಕೆಂದುಪದೇಶಿಸಿರುತ್ತಾರೆ :—[೧] ಆಶ್ರಯೋಚಿತವಾದ ಸಮಸ್ತ ಕಲ್ಯಾಣ ಗುಣಾಕರತ್ವವೂ, [೨] ಆಶ್ರಿತನ ಸರ್ವದೋಷ ಪರಿಹಾರ ಮೂಲಕ ಪಾವನ ಮಾಡುವ ಶಕ್ತಿಯೂ, [೩] ಆಶ್ರಿತನ ಸಮಸ್ತ ಭ್ರಮನಿವರ್ತಕತ್ವವೂ, [೪] ಆಶ್ರಿತ ಪಾರತಂತ್ರ್ಯವೂ, [೫] ಭಕ್ತರನ್ನಾಕರ್ಷಿಸುವ ಮಾಹಾತ್ಮ್ಯೆಯೂ ಇವೆ ಎಂದು ಭಾವಿಸತಕ್ಕದ್ದೆಂದು ಹೇಳಲ್ಪಟ್ಟಿತು.

ಇಂತಹ ಉದಾರಿಯಾಗಿ ಕೃಪಾಪರಿಪೂರ್ಣನಾಗಿ, ಪರಮೋಪಕಾರಿಯಾಗಿ, ಜ್ಞಾನಪ್ರದನಾಗಿ, ಸ್ವಯಮುಪಾಯಭೂತನಾಗಿರುವ ಅರ್ಚಾವತಾರಿಯ ಸನ್ನಿಧಿಯಲ್ಲಿ ಮಾಡುವ ನಮ್ಮ ಕೈಂಕರ್ಯರೂಪ ವೃತ್ತಿಯು ಎಂಥಾದ್ದಾಗಿರಬೇಕೆಂಬುವದನ್ನು ಮುಂದಿನ ವಾಕ್ಯಶೇಷದಿಂದ ತಿಳಿಸುವದಲ್ಲದೆ ಅದನ್ನು ಸಮರ್ಥಿಸುವ ಪ್ರಮಾಣಗಳನ್ನೂ ಉದಾಹರಿಸುತ್ತಾರೆ. **ಪ್ರಿಯಭರ್ತಾರಂ** - ತುಂಬಾ ಪ್ರಿಯನಾದ ವಲ್ಲಭನನ್ನು, **ಸತೀವ** - ಮಹಾ ಪತಿವ್ರತೆಯು ಹಾಗೂ, ಎಂದರೆ ವಿಶೇಷ ಪ್ರೀತಿ, ಭಕ್ತಿ, ವಿಶ್ವಾಸಗಳಿಂದ, **ಲಾಲಯೇತ್** - ಉಪಚರಿಸಬೇಕೆಂದು ಮುಂದೆ ಇದೆ. **ಸ್ತನಂಧಯಂ** - ಸ್ತನ್ಯ ಪಾನಮಾಡುವ ಮಗುವನ್ನು, **ಜನನೀವ** - ತಾಯಿಯು ಹಾಗೆಯೂ, ಎಂದರೆ ತುಂಬಾ ವಾತ್ಸಲ್ಯದಿಂದ ಉಪಚರಿಸಬೇಕೆಂಬ ಭಾವವು, **ಆಚಾರ್ಯಂ ಶಿಷ್ಯೋಯಥಾ** - ಆಚಾರ್ಯನನ್ನು ಶಿಷ್ಯನು ಹೇಗೆ ತುಂಬಾ ಭಕ್ತಿಯಿಂದುಪಚರಿಸುವನೋ ಹಾಗೆಯೂ, **ಮಿತ್ರಂ** - ಸ್ನೇಹಿತನನ್ನು, **ಮಿತ್ರವತ್** - ಸ್ನೇಹಿತನ ಹಾಗೆ, **ಹರಿಂ** - ಈ ಅರ್ಚಾರೂಪಿಯಾದ ಹರಿಯನ್ನು, **ಲಾಲಯೇತ್** - ಉಪಚರಿಸತಕ್ಕದ್ದು. **ಸರ್ವದಾ** - ಯಾವಾಗಲೂ, **ಸ್ವಾಮಿತ್ವೇನ** - ನಮಗೆ ನಾಥನು ಎಂಬ ಭಾವನೆಯಿಂದಲೂ, **ಸುಹೃತ್ವೇನ** - ಒಳ್ಳೆ ಉಪಕಾರನಾದ "ಸರ್ವಸ್ಯ ಶರಣಂ ಸುಹೃತ್" ಎಂದು ಹೇಳಿರುವ ಹಾಗೆ ಮಿತ್ರನೆಂಬ ಭಾವನೆಯಿಂದಲೂ, **ಗುರುತ್ವೇನ** - "ದಿವ್ಯಂ ದದಾಮಿ ತೇ ಚಕ್ಷುಃ" ಎಂದೂ, "ದದಾಮಿ ಬುದ್ಧಿಯೋಗಂ" ಎಂದೂ ಹೇಳಿರುವ ಹಾಗೆ ಜ್ಞಾನಪ್ರದನೆಂಬ

೭, ಶಾಂಡಿಲ್ಯಸಂಹಿತೆ ೪,೩೭-೮.

ಹಸ್ತಿನಂ ಯಥಾ ಪ್ರಿಯಾತಿಥಿಂ ಯೋಗ್ಯಂ ಭಗವಂತಂ ತಥಾರ್ಚಯೇತ್ ।
"ಯಥಾ ಚ ಪುತ್ರಂ ದಯಿತಂ ತಥೈವೋಪಚರೇದ್ಧರಿಂ" ಎಂಗಿರಪಡಿಯೇ ಅನ್ಯೋನ್ಯ ಸಂಬಂಧವರ್ಗ ಪರತ್ವ ಸೌಲಭ್ಯಾದಿಗಳುಕ್ಕು ಅನುರೂಪ ಮಾನವೃತ್ತಿಯೈ ಪಣ್ಣುವದು,

---

ಗುರುಭಾವದಿಂದಲೂ, ಪಿತೃತ್ವೇನ - "ಪಿತಾ ಚ ಮಮ ರಾಘವಃ" ಎಂದು ಹೇಳಿರುವ ಹಾಗೆ ತಂದೆ ಎಂಬ ಭಾವದಿಂದಲೂ, ಮಾತೃತ್ವೇನ ಚ - ತಾಯಿ ಎಂಬ ಭಾವದಿಂದಲೂ ಸಹ, ಮಾಧವಃ - ಲಕ್ಷ್ಮೀಪತಿಯು, ಭಾವ್ಯಃ - ಸನ್ಮಾನಿಸಲು ಅರ್ಹನು ಎಂದರೆ ಉಪಚರಿಸಲು ಅರ್ಹನು. ಯುವಾನಂ - ಯೌವನಸ್ಥನನ್ನು, ಯಥಾ ಅರ್ಚಯೇತ್ - ಹೇಗೆ ಮಿತ್ರನ ಹಾಗೆ ಸನ್ಮಾನಿಸಬೇಕೋ ಹಾಗೆ, ರಾಜಾನಂ - ರಾಜನನ್ನು, ರಾಜನನ್ನು ಹೇಗೆ ಪೂಜಿಸತಕ್ಕದ್ದೆಂಬುವದಕ್ಕೆ ಮಹರ್ಷಿಯು ಆತನಲ್ಲಿ ವಿಷ್ಣ್ವಂಶವಿರುವದರಿಂದ,

"ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಂ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಂ ॥"
(ರಾಮಾ. ಅಯೋಧ್ಯಾ. ೬೭-೩೪.)

ರಾಜನು ಸತ್ಯಸ್ವರೂಪನು, ಧರ್ಮರೂಪಿಯು, ಸತ್ಕುಲ ಪ್ರಸೂತರಲ್ಲಿ ಶ್ರೇಷ್ಠನು, ತಾಯಿಯ ಹಾಗೆ ಪ್ರೀತಿಯಿಂದ ಪೋಷಕನು, ತಂದೆಯ ಹಾಗೆ ಸದ್ವಿದ್ಯಾ ಪ್ರದಾತೃವು, ಸರ್ವ ಪ್ರಜೆಗಳಿಗೂ ಹಿತವನ್ನುಂಟುಮಾಡುವನು ಎಂದು ಹೇಳಿರುವ ಹಾಗೆ ರಾಜನು ಒಳ್ಳೆಯವನಾದರೆ ಹೀಗೆಯೇ ಭಾವನೆ ಇರಬೇಕೆಂಬ ಭಾವವು ಮತ್ತು ಮದಹಸ್ತಿನಮ್ - ಮದಿಸಿದ ಆನೆಯನ್ನೂ ಸಹ. ಯಥಾರ್ಚಯೇತ್ - ಹೇಗೆ ಘನವಿಂದ ಪೂಜಿಸತಕ್ಕದ್ದೋ, ಯೋಗ್ಯಂ ಪ್ರಿಯಾತಿಥಿಂ - ಯೋಗ್ಯನಾದ ಪ್ರಿಯನಾದ ಅತಿಥಿಯನ್ನು, ಯಥಾರ್ಚಯೇತ್ - ಹೇಗೆ ಆದರದಿಂದ ಪೂಜಿಸತಕ್ಕದ್ದೋ, ತಥಾ - ಹಾಗೆಯೇ, ಭಗವನ್ತಂ - ಷಾಡ್ಗುಣ್ಯ ಪರಿಪೂರ್ಣನಾದ ಸರ್ವೇಶ್ವರನನ್ನು, ಅರ್ಚಯೇತ್ - ಪೂಜಿಸತಕ್ಕದ್ದು. "ದಯಿತಂ ಪುತ್ರಂ - ಪ್ರೇಮಪಾತ್ರನಾದ ಮಗನನ್ನು, ಯಥಾ ಉಪಚರೇತ್ - ಹೇಗೆ ಪ್ರೇಮದಿಂದ ಉಪಚರಿಸಬೇಕೋ ತಥೈವ - ಹಾಗೆಯೇ, ಹರಿಂ - ಶ್ರೀಮಹಾವಿಷ್ಣುವನ್ನು, ಉಪಚರೇತ್ - ಉಪಚರಿಸತಕ್ಕದ್ದು." ಎಙ್ಗಿರ ಪಡಿಯೇ - ಎಂದು ಹೇಳಿರುವ ಹಾಗೆ, ಅನ್ಯೋನ್ಯ ಸಂಬಂಧವರ್ಗ - ಆಯಾಯಾ ಸಂಬಂಧ ವರ್ಗಕ್ಕೆ ಸೇರಿದ, ಪರತ್ವ ಸೌಲಭ್ಯಾದಿಗಳುಕ್ಕು - ಪರತ್ವ ಸೌಲ

ಭ್ಯವೇ ಮೊದಲಾದ ಗುಣಗಳಿಗೆ, ಇಲ್ಲಿ **ಆದಿ** ಪದದಿಂದ, ಸೌಶೀಲ್ಯ, ವಾತ್ಸ ಲ್ಯಾದಿಗಳು ಹೇಳಲ್ಪಟ್ಟವು, ಇಂತಹ ಗುಣಗಳಿಗೆ, **ಅನುರೂಪಮಾನ ವೃತ್ತಿಯ್ಯೆ ಪಣ್ಣವುಮ್** – ಅನುಗುಣವಾದ ಎಂದರೆ ಯೋಗ್ಯವಾದ ಕೈಂಕರ್ಯಗಳನ್ನು ಮಾಡುವದು, **ಪ್ರಾಪ್ತಂ** ಎಂದು ಮುಂದೆ ಇದೆ; ತಾಯಿ, ತಂದೆ, ಗುರು, ರಾಜ ಮೊದಲಾದವರುಗಳಿಗೆ ಹೇಗೆ ಭಕ್ತಿ ಮೊದಲಾದವುಗಳಿಂದ **ಉಪಚರಿಸುತ್ತೇವೋ** ಹಾಗೆ ಅರ್ಚಾವತಾರಿಯನ್ನೂ ಉಪಚರಿಸಬೇಕೆಂಬ ಭಾವವು. ರಾಜನನ್ನು ಕಂಡರೆ ಸೊಂಟಕ್ಕೆ ಕಟ್ಟಿ ಛತ್ರಚಾಮರಾದಿ ಕೈಂಕರ್ಯಗಳನ್ನು ಹೇಗೆ ಮಾಡುತ್ತೇವೋ, ಅಂತಹ ಕೈಂಕರ್ಯಗಳನ್ನು ಮಾಡಬೇಕೆಂಬ ಭಾವವು. ಏಕೆಂದರೆ ಈತನಾದರೋ ರಾಜನು, ಆತನೋ ರಾಜಾಧಿರಾಜನು. ತನ್ನ ಪುತ್ರನಿಗೆ ಹೇಗೆ ಭಕ್ಷ್ಯಾದಿಗಳನ್ನು ಪ್ರೇಮದಿಂದ ಕೊಡುವನೋ, ಹಾಗೆ ಅವುಗಳನ್ನು ಪ್ರೇಮದಿಂದ ಸಮರ್ಪಿಸತಕ್ಕದ್ದೆಂಬ ಭಾವವು. ಹಾಗೆ ಪ್ರೇಮದಿಂದ ಸಮರ್ಪಿಸಿದರೆ ಕುಚೇಲರ ಪೃಥುಕ ತಂಡುಲಮೋಪಾದಿಯಲ್ಲಿ **"ಪ್ರೇಮ್ಣಾ ಭೂರ್ಯೇವ ಮೇ ಭವೇತ್"** (ಭಾಗ ೧೦.೮೨) ಎಂದು ಸರ್ವೇಶ್ವರನು ಅದನ್ನು ಅನಂತವೆಂದು ಭಾವಿಸಿ ಸ್ವೀಕರಿಸುವನು ಎಂಬ ಭಾವವು ಹೀಗೆಯೇ ವಾಕ್ಯವುಗಳನ್ನೂ ಊಹಿಸತಕ್ಕದ್ದು. **"ಸತೀವಪ್ರಿಯಭರ್ತಾರಂ"** ಎಂಬುವದರಿಂದ ಸರ್ವೇಶ್ವರನಿಗೂ ನಮಗೂ, ಭರ್ತೃಭಾರ್ಯಾಸಂಬಂಧವುಂಟೆಂದು ಹೇಳಲ್ಪಟ್ಟಿತು. ಸತೀ ಎಂದು ಹೇಳಿರುವದರಿಂದ ಅವಿಚಲಿತ ಪ್ರೀತ್ಯತಿಶಯವು ಇರಬೇಕೆಂದೂ, ಐಕಾಂತ್ಯದಿಂದ ಪತಿವ್ರತೆಯು ಪತಿಶುಶ್ರೂಷೆಯಲ್ಲೇ ಹೇಗೆ ನಿರತಳೋ ಹಾಗೆ ಕೈಂಕರ್ಯನಿರತರಾಗಿರಬೇಕೆಂದೂ, ಅನ್ಯದೇವತಾಭಕ್ತಿ ಕೂಡದೆಂದೂ ಹೇಳಿದಂತಾಯಿತು. **"ಆಚಾರ್ಯಂ ಶಿಷ್ಯವತ್"** ಎಂಬುವದಕ್ಕೆ ೫೬ನೆಯ ಪುಟ ನೋಡಿ ಅಲ್ಲಿ (೧) **"ತಮಿಮಂ ಸರ್ವಸಂಪನ್ನಂ ಆಚಾರ್ಯಂ ಪಿತರಂಗುರುಂ"** ಎಂದೂ, (೨) **"ಮಮಾಪ್ಯಖಿಲಲೋಕಾನಾಂ ಗುರುರ್ನಾರಾಯಣೋ ಗುರುಃ"** ಎಂದೂ (೩) **"ತ್ವಮೇವ ಬಂಧುಶ್ಚ ಗುರುಸ್ತ್ವಮೇವ"** ಎಂದೂ, (೪) **"ಗುರುರಸಿಗತಿಶ್ಚಾಸಿಜಗತಾಂ"** ಎಂದೂ ಸರ್ವಲೋಕಕ್ಕೂ ಸರ್ವೇಶ್ವರನು ಆಚಾರ್ಯನೆಂದು ಹೇಳಲ್ಪಟ್ಟು ಉಪಪಾದಿಸಲ್ಪಟ್ಟಿರುತ್ತದೆ. **ಮಿತ್ರವತ್** ಎಂಬುವದಕ್ಕೆ (೫) **"ಗತಿರ್ಭರ್ತಾ ಪ್ರಭುಸ್ಸಾಕ್ಷೀ (೬) ನಿವಾಸಶ್ಶರಣಂಸುಹೃತ್"** ಎಂಬ **"ಪ್ರಿಯೋಹಿಜ್ಞಾನಿನೋತ್ಯರ್ಥಂ ಅಹಂ ಸಚಮಮ ಪ್ರಿಯಃ"** ಎಂಬ (೭) **"ಮಿತ್ರಭಾವೇನ ಸಂಪ್ರಾಪ್ತಂ"**

---

(೧) ಭಾರ ಸಭಾ ೪೧-೨೧ (೨) ವಿ, ಪು, ೫-೧-೧೫ (೩) ಶರಣಾಗತಿ ಗದ್ಯ (೪) ಆಳ, ಸ್ತೋ ೬೦

(೫) ಗೀ, ೯-೧೮ (೬) ಗೀ,೭-೧೭ (೭) ರಾ. ಯು.

ನ್ಯಾಯಾರ್ಜಿತದ್ರವ್ಯೇಣೈವ ಕೈಂಕರ್ಯಸ್ಯ ಕರ್ತವ್ಯತ್ವಂ

(೯) ಅಪ್ಪೋದು (೧) ತದಾಹಿಯತ್ಕಾರ್ಯಮುಪೈತಿ ಕಿಂಚಿದುಪಾಯನಂ ಚೋಪಹೃತಂ ಮಹಾರ್ಹಂ । ಸಪಾದುಕಾಭ್ಯಾಂ ಪ್ರಥಮಂನಿವೇ

ಎಂಬ ಇವೇ ಮೊದಲಾದವು ಪ್ರಮಾಣಗಳಾಗಿವೆ. ಸ್ವಾಮಿಗೂ ನಮಗೂ ಶ್ರುತಿಪ್ರತಿಪಾದ್ಯವಾದ ನವವಿಧ ಸಂಬಂಧಗಳಲ್ಲಿ ಕೆಲವೆಲ್ಲಾ ಇಲ್ಲಿ ಹೇಳಲ್ಪಟ್ಟವು. ಮಹರ್ಷಿಯೂ ಲಕ್ಷ್ಮಣ ವಾಕ್ಯರೂಪದಲ್ಲಿ (೮) "ಭ್ರಾತಾಭರ್ತಾ ಚ ಬನ್ಧುಶ್ಚ ಪಿತಾ ಚ ಮಮ ರಾಘವಃ" ಎಂದು ಹೇಳಿರುತ್ತಾರೆ. ನಮ್ಮಾಳ್ವಾರ್ರವರೂ (೯) "ಶೇಲೇಯ್ ಕಣ್ಣಿಯರುಮ್ ಪೆರುಶೆಲ್ವಮುಮ್ ನ್ ಲ್ ಮಕ್ಕಳುಮ್ ಮೇಲಾತ್ತಾಯ್ ತನ್ದೈಯುಮ್ ಅವರೇ ಇನಿಯಾವಾರೇ" ಎಂದರೆ ಮೀನ ನೇತ್ರೆಯರಾದ ಸ್ತ್ರೀಗಳೂ, ಮಹತ್ತಾದ ಐಶ್ವರ್ಯವೂ, ಸತ್ಪುತ್ರರೂ, ತುಂಬಾ ಪ್ರೀತಿಯುಳ್ಳ ತಾಯಿತಂದೆಗಳೂ ಎಲ್ಲವೂ ಸರ್ವೇಶ್ವರನೇ ಎಂದೂ ಹೀಗೆಯೇ ಇನ್ನೂ ಅನೇಕ ಸ್ಥಳಗಳಲ್ಲೂ ಉಪಪಾದಿಸಿರುತ್ತಾರೆ. ಆಚಾರ್ಯರುಗಳಲ್ಲಿ ಯಾಮುನೇಯರೂ "ಪಿತಾ ತ್ವಂ ಮಾತಾ ತ್ವಂ" ಎಂಬ ಶ್ಲೋಕದಲ್ಲೂ, ಶ್ರೀ ಭಾಷ್ಯಕಾರ್ರರೂ "ತ್ವಮೇವ ಮಾತಾ ಚ ಪಿತಾ ತ್ವಮೇವ ತ್ವಮೇವ ಬಂಧುಶ್ಚ ಗುರುಸ್ತ್ವಮೇವ । ತ್ವಮೇವ ವಿದ್ಯಾ ದ್ರವಿಣಂ ತ್ವಮೇವ ತ್ವಮೇವ ಸರ್ವಂ ಮಮ ದೇವ ದೇವ" ಎಂಬುವ ಶ್ಲೋಕದಿಂದಲೂ ಸರ್ವವಿಧ ಬಾಂಧವ್ಯವನ್ನು ಅನುಸಂಧಾನಮಾಡಿರುತ್ತಾರೆ.

ಹಿಂದೆ ನಾನಾವಿಧವಾದ ಬಂಧುತ್ವಕ್ಕನುಗುಣವಾಗಿ ಅರ್ಚಾವತಾರ ಮೂರ್ತಿಗೆ ಕೈಂಕರ್ಯಗಳನ್ನೆಸಗತಕ್ಕದ್ದೆಂದು ಹೇಳಲ್ಪಟ್ಟಿತು. ಆದರೆ ಭಗವದನುಮತಿಯಿಲ್ಲದೆ ಅನಭಿಮತ ಕೈಂಕರ್ಯಗಳನ್ನು ಮಾಡುವದು ಉಚಿತವಲ್ಲವಾದುದರಿಂದ, ರಾಜನಲ್ಲಿ ರಾಜಭೃತ್ಯನು ವಿಜ್ಞಾಪಿಸಿಕೊಳ್ಳುವ ಹಾಗೆ, ಸರ್ವೇಶ್ವರನಲ್ಲಿ ವಿಜ್ಞಾಪಿಸಿಕೊಂಡು, ಕೈಂಕರ್ಯಗಳನ್ನು ಮಾಡತಕ್ಕದ್ದೆಂದು ಹೇಳಲು ಹೊರಟು, ಶ್ರೀ ಭರತಾಳ್ವಾರರು ಮಾಡಿದ ಕೈಂಕರ್ಯವನ್ನು ನಿದರ್ಶನವಾಗಿಟ್ಟುಕೊಂಡು, ಆ ರೀತಿಯಲ್ಲಿ ನಡಿಸತಕ್ಕದ್ದೆಂದುಪದೇಶಿಸುತ್ತಾರೆ :—

ಅಪ್ಪೋದು - ಹಿಂದೆ ಹೇಳಿದ ರೀತಿಯಲ್ಲಿ, ಸರ್ವೇಶ್ವರನ ಪರತ್ವಸೌಲಭ್ಯಾದಿಗಳಿಗೆ ಅನುರೂಪವಾದ ಕೈಂಕರ್ಯವನ್ನು ಮಾಡುವಾಗ, "ತದಾ - ಪರ

---

(೮) ರಾ ಅ, ೫೮-೩೧ [೧] ರಾಮಾ. ಅಯೋಧ್ಯಾ. ೧೧೫-೨೭

ದ್ಯ ಚಕಾರಪಶ್ಚಾದ್ಭರತೋ ಯಥಾವತ್" ಎನ್ರು ತಿರುವಡಿ ನಿಲೈಗಳ್ ವಿಷಯತ್ತಿಲ್ ಶ್ರೀಭರತಾಳ್ವಾರ್ ನಡತ್ತಿನ ರಾಜಸೇವಕ ವೃತ್ತಿಯೈ ನ್ಯಾಯಾರ್ಜಿತ ದ್ರವ್ಯಙ್ಗಳಾಲೇ ನಡತ್ತುವುಮ್,

---

ತತ್ವವಾದ ಶ್ರೀ ರಾಮನ ಸ್ಥಾನದಲ್ಲಿ ಪಾದುಕೆಗಳನ್ನು ಸಿಂಹಾಸನದಲ್ಲಿ ಬಿಜಮಾಡಿಸಿ ಪಟ್ಟಾಭಿಷೇಕಮಾಡಿ, ಆ ಪಾದುಕೆಗಳ ಹೆಸರಿನಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದಾಗ, **ಯತ್ಕಾರ್ಯಮುಪೈತಿ** - ಯಾವ ಕಾರ್ಯವು ಪ್ರಸಕ್ತವಾದುದಾಗುತ್ತದೋ ಎಂದರೆ ಲೌಕಿಕ ಕಾರ್ಯಗಳಾದ ರಾಜ್ಯಾಡಳಿತಗಳೋ, ವೈದಿಕಗಳಾದ ಶುಭಶೋಭನಾದಿ ಕರ್ಮಗಳೋ ಯಾವುದೇ ಆಗಲಿ ಪ್ರಾಪ್ತವಾದರೂ, **ಮಹಾರ್ಹಂ** - ಬಹು ಶ್ಲಾಘ್ಯವಾದ, **ಉಪಾಯನಂ** - ರಾಜರಿಂದ ತರಲ್ಪಟ್ಟ ಕಪ್ಪವಾಗಲಿ ಫಲಪುಷ್ಪಾದಿಗಳಾಗಲಿ ಮನೆಯಲ್ಲಿ ಮಾಡಿದ ಭಕ್ಷ್ಯಭೋಜ್ಯ ಪರಮಾನ್ನಾದಿಗಳಾಗಲಿ, **ಯದುಪಹೃತಂ** – ಯಾವುದು ತರಲ್ಪಟ್ಟಿದುದಾದರೂ, **ತತ್** - ಅದನ್ನು, **ಸಃ** – ಆ ಭರತನು, **ಪ್ರಥಮಂ** - ಮೊದಲು **ಪಾದುಕಾಭ್ಯಾಂ ನಿವೇದ್ಯ** - ಶ್ರೀರಾಮ ಪಾದುಕೆಗಳಿಗೆ ಸಮರ್ಪಿಸಿ, **ಪಶ್ಚಾತ್** - ಅನಂತರ **ಯಥಾವಚ್ಚಕಾರ** - ಅವುಗಳನ್ನು ಹೇಗೆ ಉಚಿತವಾಗಿಯೂ, ಶಾಸ್ತ್ರೋಕ್ತರೀತಿಯಲ್ಲೂ ವಿನಿಯೋಗಿಸಬೇಕೋ ಹಾಗೆ, ವಿನಿಯೋಗಿಸುತ್ತಿದ್ದನು. ಇದರಿಂದ ನಾವುಗಳೂ ಮಾಡುವ ಸರ್ವ ಲೌಕಿಕ ವೈದಿಕ ಕರ್ಮಗಳನ್ನೆಲ್ಲಾ ಭಗವಂತನಲ್ಲಿ ಸಮರ್ಪಿಸತಕ್ಕದ್ದೆಂದೂ, ನಾವು ಗಳಿಸಿದ ಹಣ, ಕೊಂಡ ಧೋತ್ರ ಸೀರೆ, ಮಾಡಿಸಿದ ಆಭರಣ, ಊಟಮಾಡುವ ಪಕ್ವಾಪಕ್ವ ಪದಾರ್ಥಗಳೆಲ್ಲವನ್ನೂ ಅರ್ಚಾವತಾರಿಯಲ್ಲಿ ಪ್ರತಿದಿನವೂ ಸಮರ್ಪಿಸಿ, ಅವುಗಳನ್ನು ವಿನಿಯೋಗಿಸತಕ್ಕದ್ದೇ ವಿನಾ ಹಾಗೆಯೇ ಕೂಡದೆಂದು ನಿಷೇಧಿಸಲ್ಪಟ್ಟಿತೆಂದು ತಿಳಿಯತಕ್ಕದ್ದು" **ಎನ್ರು** - ಎಂಬದಾಗಿ, **ತಿರುವಡಿ ನಿಲೈಗಳ್ ವಿಷಯತ್ತಿಲೆ** - ಶ್ರೀ ರಾಮ ಪಾದುಕೆಗಳು ನಂದಿಗ್ರಾಮದಲ್ಲಿದ್ದ ವಿಷಯದಲ್ಲಿ, **ಶ್ರೀ ಭರತಾಳ್ವಾರ್**ರವರು, **ನಡತ್ತಿನ ರಾಜಸೇವಕವೃತ್ತಿಯೇ** - ನಡಿಸಿದ ರಾಜನಿಗೆ ಸೇವಕನಾಗಿರುವ ವ್ಯಾಪಾರವನ್ನು ಎಂದರೆ ರಾಜನಿಗೆ ಮಾಡುವ ಸರ್ವವಿಧ ಕೈಂಕರ್ಯಗಳನ್ನು, **ನ್ಯಾಯಾರ್ಜಿತ ದ್ರವ್ಯಂಗಳಾಲೆ** - ಅಧರ್ಮಗಳಿಗೆ ಬೀಳದೆ ಶಾಸ್ತ್ರಗಳಲ್ಲಿ ಹೇಳಿರುವ ಹಾಗೆ ಧರ್ಮದಿಂದ ಸಂಪಾದಿಸಿದ ಹಣದಿಂದ, **ನಡತ್ತುವುಮ್** - ನಡಿಸತಕ್ಕದ್ದೂ, **ಪ್ರಾಪ್ತಂ** ಎಂದು ಮುಂದೆ ಇವೆ, ಇವೂ ಒಂದು ಉತ್ತರಕೃತ್ಯವೆಂಬ ಭಾವವು. ಹೀಗೆ ಧರ್ಮದಿಂದ ಸಂಪಾದಿಸಿದ ದ್ರವ್ಯದಿಂದ ಮಾಡಿದ ಕೈಂಕರ್ಯದಿಂದ ಸರ್ವೇಶ್ವರನು ಸುಪ್ರೀತನಾಗುವನೇ ವಿನಾ. ಅನ್ಯಾಯಾರ್ಜಿತವಾದ

ದ್ರವ್ಯದಿಂದ ಮಾಡಿದ ಕೈಂಕರ್ಯದಿಂದ ಸ್ವಾಮಿ ಸುಪ್ರೀತನಾಗನು :- **ಮಾಗೃಧಃ ಕಸ್ಯಸ್ವಿದ್ಧನಂ** ಎಂದು ಶ್ರುತಿಯು ಪರಧನಾಪಹಾರವನ್ನು ನಿಂದಿಸುತ್ತದೆ

"ಅನ್ಯಾಯಾರ್ಜಿತವಿತ್ತೇನ ಯೋಽರ್ಚಯೇತ್ಪುರುಷೋತ್ತಮಂ ।
ನ ಸ ತತ್ಪ್ರತಿಗೃಹ್ಣಾತಿ ವಿಫಲಂ ತಸ್ಯ ತದ್ಭವೇತ್॥"

ಅಧರ್ಮ ಮಾರ್ಗದಿಂದ ಸಂಪಾದಿಸಿದ ದ್ರವ್ಯದಿಂದ ಯಾರೇ ಆಗಲೀ ಪುರುಷೋತ್ತಮನನ್ನು ಕೈಂಕರ್ಯಮೂಲಕ ಪೂಜಿಸಿದರೆ, ಆತನು ಅದನ್ನು ಸ್ವೀಕರಿಸುವದಿಲ್ಲವು, ಆತನ ಆ ಪೂಜೆಯು ವ್ಯರ್ಥವಾದುದಾಗುತ್ತದೆಂದು ಹೇಳಿರುತ್ತದೆ., ನ್ಯಾಯದಿಂದ ಆರ್ಜಿಸಿದ ಪತ್ರ, ಪುಷ್ಪ ಫಲಗಳಿಂದಲೇ ಸುಪ್ರೀತನಾಗುವನೇ ವಿನಾ, ಅನ್ಯಾಯ ದ್ರವ್ಯದಿಂದ ಗುಡಿ ಗೋಪುರಾದಿಗಳನ್ನು ನಿರ್ಮಿಸಿದರೂ ಆತನು ಪ್ರೀತನಾಗುವದಿಲ್ಲವು. ಶ್ರೀರಂಗದಲ್ಲಿ ಒಬ್ಬ ವೇಶ್ಯೆ ಕಟ್ಟಿಸಿದ ಉತ್ತರ ವಿಮಾನದ ಕಡೆಗೆ ಶ್ರೀರಂಗನಾಥನು ಎಂದಿಗೂ ಬಿಜಮಾಡಿಸುವದೇ ಇಲ್ಲವೆಂದು ಹೇಳುತ್ತಾರೆ. ಆದರೆ ಶ್ರೀ ತಿರುಮಂಗೈಯಾಳ್ವಾರವರು ಅವೈಷ್ಣವರಿಂದ ತಂದ ಹಣದಿಂದ ಕಟ್ಟಿಸಿದ ವಿಮಾನ ಮೊದಲಾದವುಗಳು ಸ್ವಾಮಿಗೆ ಹೇಗೆ ಅಭಿಮತವಾದವೆಂದು ಆಕ್ಷೇಪಿಸಿದರೆ, ಶ್ರೀ ತಿರುಮಂಗೈಯಾಳ್ವಾರವರು ನಿತ್ಯಸೂರಿಗಳ ಅಂಶಭೂತರಾಗಿ ಅತಿಮಾನುಷ ಚರಿತ್ರೆ ವ್ಯಾಪಾರವುಳ್ಳವರಾಗಿರುವವರ ವಿಷಯದಲ್ಲಿ ಆಕ್ಷೇಪಗಳು ಯುಕ್ತವಾದುದಲ್ಲವು. ಶ್ರೀ ಕೃಷ್ಣನು ವಿದುರಾನ್ನ ಭೋಜನ, ಸ್ವಂತ ಸೋದರ ಮಾವನ ಸಂಹಾರ ಪರಶುರಾಮನಾಗಿ ತಾಯಿಯಸಂಹಾರ ಇತ್ಯಾದಿ ಅಧರ್ಮವಾಗಿ ತೋರುವ ಅತಿಮಾನುಷ ವ್ಯಾಪಾರಗಳನ್ನು ನಾವು ಆಕ್ಷೇಪಿಸುವದು ಹೇಗೆ ಅಸಾಧುವೋ ಹಾಗೆಯೇ ಈ ಆಳ್ವಾರರ ಕೈಂಕರ್ಯವನ್ನು ಕುರಿತ ನಮ್ಮ ಆಕ್ಷೇಪವೂ ಅಸಂಗತವು.

ಆದುದರಿಂದ ನ್ಯಾಯಾರ್ಜಿತ ದ್ರವ್ಯದಿಂದಲೇ ಸ್ವಾಮಿ ಕೈಂಕರ್ಯಗಳನ್ನು ಮಾಡತಕ್ಕದ್ದೇ ವಿನಾ, ಅನ್ಯಾಯಾರ್ಜನೆಯಿಂದ ಭಗವನ್ನಿಗ್ರಹಕ್ಕೆ ಪಾತ್ರನಾಗುವದರಿಂದ, ಅಂತಹ ದ್ರವ್ಯದಿಂದ ಮಾಡಲ್ಪಟ್ಟ ಕೈಂಕರ್ಯದಿಂದ ಎಂದಿಗೂ ಸುಪ್ರೀತನಾಗನು. ಈ ನ್ಯಾಯಾರ್ಜಿತ ದ್ರವ್ಯಮೂಲಕ ಕೈಂಕರ್ಯಮಾಡುವಾಗ, ರಾಜನಿಗೆ ದಾಸನು ಹೇಗೆ ರಾಜಾನುಮತಿಯನ್ನು ಪಡೆದು ತದಧೀನನಾಗಿ ಭಯಭಕ್ತಿ ವಿಶ್ವಾಸಗಳಿಂದ ಕೈಂಕರ್ಯವನ್ನೆಸಗುವನೋ, ಹಾಗೆಯೇ ನಾವೂ ಸರ್ವವನ್ನೂ ಅರ್ಚಾವತಾರಿಯಲ್ಲಿ ಅರಿಕೆಮಾಡಿ ಆತನ ಆಜ್ಞೆಯನ್ನು ಪಡೆದು **"ಪರಿಗೃಹ್ಣೀಷ್ವ"** ಎಂದು ಪ್ರಾರ್ಥಿಸಿ ಸಮರ್ಪಿಸತಕ್ಕದ್ದೆಂಬ ಭಾವವು. ತಿರುಪತಿ, ಶ್ರೀರಙ್ಗಾದಿ ದಿವ್ಯ ದೇಶಗಳಲ್ಲಿ, ತಿರುವೇಙ್ಗಡಮುಡೈಯಾನನಿಗೂ ಶ್ರೀರಙ್ಗನಾಥನಿಗೂ ರಾಜನಿಗೆ ನಡಿಯುವ ವರದಿ, ರಾಜಭೋಗಾದಿಗಳು ಸಾಙ್ಗವಾಗಿ ಈಗಲೂ ನಡೆಯು

೧೦. ಸ್ವರೂಪಪ್ರಾಪ್ತಮಿತಿ ಕೈಙ್ಕರ್ಯಂ ಕರ್ತವ್ಯಂ

ಇವ್ವೃತ್ತಿಯೈ ವಾಳ್ಕೈಪ್ಪಟ್ಟ ವಧೂವಿನ್ ಮಾಙ್ಗಲ್ಯಸೂತ್ರಾದಿ ರಕ್ಷಣಮಾತ್ರಮಾಗ ನಿನೈತ್ತಿರುಕ್ಕವುಮ್,

ತ್ರವೆ. ಅನಂತಶಯನದ ರಾಜರೂ ಸಹ ಅನಂತಶಯನ ಸನ್ನಿಧಿಯಲ್ಲಿ ಸಮಸ್ತವನ್ನೂ ಅರಿಕೆಮಾಡಿ ಆತನ ಆಜ್ಞೆಯನ್ನು ಪಡೆದು ತಾವು ಆತನ ದಾಸನಹಾಗೆ ಸರ್ವವಿಧ ಕೈಂಕರ್ಯಗಳನ್ನೂ ಸಮರ್ಪಿಸುತ್ತಾರೆ. ಪ್ರಪನ್ನನೂ ಕೂಡ ಹಾಗೆಯೇ ನಡಿಸತಕ್ಕದ್ದೆಂದೂ, ಇದೂ ಉತ್ತರ ಕೃತ್ಯದಲ್ಲಿ ಸೇರಿದುದೆಂದೂ, ಉಪದೇಶಿಸಿರುತ್ತಾರೆ.

ಆದರೆ ಲೌಕಿಕದಲ್ಲಿ ಅಪರಾಧಕ್ಷಮಾಪಣೆಗಾಗಿಯೋ ಅಥವಾ ಆಶೋತ್ತರಗಳಿಂದಲೋ ಅಥವಾ ರಾಜನಿಗೆ ಉಪಕಾರವೆಂಬ ಭಾವದಿಂದಲೋ ಕೈಙ್ಕರ್ಯವನ್ನೆಸಗುವನು. ಈ ಸಂದರ್ಭದಲ್ಲಾದರೋ ಹಾಗಲ್ಲವೆಂದು ಸದೃಷ್ಟಾಂತವಾಗಿ ಉಪದೇಶಿಸುತ್ತಾರೆ:-

ಕೈಂಕರ್ಯವು ತನಗೆ ಸ್ವರೂಪವೆಂಬ ಬುದ್ಧಿ ಇರತಕ್ಕದ್ದು.

ಇವೃತ್ತಿಯೈ - ಈ ರಾಜಸೇವಕ ವ್ಯಾಪಾರರೂಪದಲ್ಲಿ ನಡಿಸುವ ಕೈಙ್ಕರ್ಯವನ್ನೂ, **ವಾಳ್ಕೈಪಟ್ಟ** – ಅಗ್ನಿಸಾಕ್ಷಿಯಾಗಿ ವಿವಾಹಿತಳಾದ, **ವಧೂವಿನ್** - ಪತಿವ್ರತೆಯಾದ ವಧೂವಿನ, **ಮಂಗಳಸೂತ್ರಾದಿ** - ಮಾಙ್ಗಲ್ಯದ ಸರವೇ ಮೊದಲಾದವುಗಳೂ, ಆದಿ ಪದದಿಂದ ಸುಮಂಗಲಿಗೆ ಲಕ್ಷಣಗಳಾದ ಓಲೆ ಮೂಗುಜೊಟ್ಟು ಮುಂತಾದವುಗಳು ಹೇಳಲ್ಪಟ್ಟವು, ಇವುಗಳು **ರಕ್ಷಣಮಾತ್ರಮಾಗ**- ತನ್ನ ಮುತ್ತೈದೆಯ ಸ್ವರೂಪವನ್ನು ಕಾಪಾಡುವದಕ್ಕೆ ಮಾತ್ರ ಹೇಗೋ ಹಾಗೆ, **ನಿನೈತ್ತಿರುಕ್ಕುವುಮ್** - ಭಾವನೆ ಇರತಕ್ಕದ್ದು, **ಪ್ರಾಪ್ತಂ** - ಉಚಿತವು ಎಂದು ಮುಂದೆ ಇದೆ. ಮದುವೆಯಾದ ಪತಿವ್ರತಾ ಸ್ತ್ರೀಗೆ ಮಾಂಗಲ್ಯ, ಓಲೆ, ಮೂಗುಜೊಟ್ಟು, ಇವೆಲ್ಲವನ್ನೂ ಧರಿಸುವದು ತನಗೆ ಸ್ವರೂಪವೆಂದೂ, ಆದರಿಂದ ಪತಿಯು ಸುಪ್ರೀತನಾಗುವದೇ ತನಗೆ ಪ್ರಯೋಜನವೆಂದೂ ಹೇಗೆ ಭಾವಿಸುವಳೋ, ಹಾಗೆಯೇ ಈ ಪ್ರಪನ್ನನೂ ಕೂಡ ಈ ರಾಜಸೇವಕ ರೂಪವೃತ್ತಿಯೇ ತನಗೆ ಸ್ವರೂಪವೆಂದೂ, ಆದರಿಂದ ಸರ್ವೇಶ್ವರನು ಸುಪ್ರೀತನಾಗುವದೇ ತನಗೆ ಪರಮ ಪುರುಷಾರ್ಥವೆಂದೂ ಅನುಸಂಧಾನವಿರತಕ್ಕದ್ದೆಂಬ ಭಾವವು. **ರಕ್ಷಣಮಾತ್ರಮಾಗ** ಎಂದು ಮಾತ್ರ ಶಬ್ದಪ್ರಯೋಗದಿಂದ, ಭಗವಂತನಿಗೆ ತಾನೇನೋ ಉಪಕಾರ

೧೧ ಭಗವತಿ ಸ್ವಾಚಾರ್ಯೇಚ ಕೃತಜ್ಞತಾ ಭಾವಸ್ಯ ಆವಶ್ಯಕತ್ವಂ.

ಇಪ್ಪಡಿ ಭಗವದುಪಕ್ರಮಮಾಯ್ ಭಾಗವತ ಪರ್ಯಂತಮಾಕ ವರುಗಿರ ಕೈಂಕರ್ಯಾಖ್ಯ ಪುರುಷಾರ್ಥಸಿದ್ಧಿಕ್ಕು ಪ್ರಧಾನಕಾರಣಂ(೧)

ಮಾಡಿದೆನೆಂಬ ಬುದ್ಧಿಯಾಗಲಿ, ತನಗೆ ಇತರ ಪ್ರಯೋಜನಗಳನ್ನುಂಟುಮಾಡುವನೆಂಬ ಸಾಧನತ್ವಬುದ್ಧಿಯಾಗಲಿ, ಕೂಡದೆಂಬ ಭಾವವು.

ಹೀಗೆ ಕೈಙ್ಕರ್ಯರೂಪವೃತ್ತಿಯು ತನಗೆ ಸ್ವರೂಪವೆಂದು ಇಷ್ಟುಮಾತ್ರ ಭಾವನೆ ಇದ್ದರೆ ಸಾಕೇ ? ಇನ್ನು ಯಾವ ವಿಧವಾದ ಅನುಸಂಧಾನವೂ ಬೇಡವೋ ಎಂದರೆ ಈಗ ತಾನು ಅನುಷ್ಠಿಸಿರುವ ಪ್ರಪದನವನ್ನೇ ಒಂದು ವ್ಯಾಜಮಾಡಿಕೊಂಡು ದೇಹಾವಸಾನಾನಂತರ ನಿರತಿಶಯ ಸುಖರೂಪವಾದ ಮೋಕ್ಷವನ್ನು ದಯಪಾಲಿಸುತ್ತೇನೆಂದು ಸಂಕಲ್ಪಿಸಿರುವ ಸರ್ವೇಶ್ವರನ ಸನ್ನಿಧಿಯಲ್ಲಿ ತನಗುಂಟಾದ ಕೈಂಕರ್ಯ ಪ್ರಾಪ್ತಿಗಾಗಿ ಕೃತಜ್ಞತಾಭಾವವಿರತಕ್ಕದ್ದೆಂದು ಹೇಳುತ್ತಾರೆ. ಇಂತಹ ಪರಮ ಶ್ರೇಯಸ್ಸಿಗೆಲ್ಲಾ ಕಾರಣಭೂತರು ತಮ್ಮ ಆಚಾರ್ಯರಾದುದರಿಂದ, ಭಗವಂತನಿಗೆ ಮಾಡುವ ಕೈಂಕರ್ಯಾದಿಗಳು ತದೀಯರವರೆಗೂ ಅನ್ವಯಿಸುವುದರಿಂದ ಭಾಗವತ ಕೈಂಕರ್ಯವೂ ಸಹ ಉತ್ತರ ಕೃತ್ಯದಲ್ಲಿ ಸೇರಿದುದೆಂದೂ, ಅಂತಹ ಭಾಗವತೋತ್ತಮರಾದ ಆಚಾರ್ಯರ ಕೈಂಕರ್ಯವನ್ನು ನಡೆಸುವಾಗ ಅವರಲ್ಲೂ ಮುಖ್ಯವಾಗಿ ಕೃತಜ್ಞತಾ ಭಾವವು ಆವಶ್ಯಕವೆಂದೂ ಉಪದೇಶಿಸುತ್ತಾರೆ. ಹೀಗೆ ಈ ಭಗವಂತನಲ್ಲೂ, ಆಚಾರ್ಯರಲ್ಲೂ ಕೈಂಕರ್ಯಾದಿಗಳನ್ನು ಮಾಡುವಾಗ, ಪ್ರತ್ಯುಪಕಾರ ಬುದ್ಧಿಯು ಸರಿಯಲ್ಲವಾದುದರಿಂದ ಕೃತಘ್ನನೆಂದು ಹೇಳಿಸಿಕೊಳ್ಳುವದು ಉಚಿತವಲ್ಲದುದರಿಂದ ಸುಮ್ಮನೆ ಕೃತಜ್ಞತಾಭಾವ ಮಾತ್ರ ಆವಶ್ಯಕವೆಂದು ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ.

೧೧ ಸರ್ವೇಶ್ವರನಲ್ಲೂ ಸ್ವಾಚಾರ್ಯರಲ್ಲೂ ಕೃತಜ್ಞತಾ ಭಾವದ ಆವಶ್ಯಕತೆಯು.

ಭಗವದುಪಕ್ರಮಮಾಯ್ - ಭಗವಂತನನ್ನು ಮೊದಲುಮಾಡಿಕೊಂಡು, ಭಾಗವತಪರ್ಯನ್ತಮಾಗ - ತದೀಯರಾದ ಭಾಗವತರವರೆಗೂ, **ಇಪ್ಪಡಿ** - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ ಎಂದರೆ ಕೈಂಕರ್ಯವು ತನಗೆ ಸ್ವರೂಪವೆಂಬ ಬುದ್ಧಿಯುಕ್ತವಾಗಿರಬೇಕೇ ವಿನಾ ಸರ್ವೇಶ್ವರನಿಗೆ ಪ್ರಯೋಜನವೆಂಬ ಬುದ್ಧಿಯಾಗಲಿ, ಅಥವಾ ತನಗೆ ಪುರುಷಾರ್ಥ ಸಾಧನವೆಂಬ ಬುದ್ಧಿಯಾಗಲಿ ಇರಕೂಡದೆಂದುಪಪಾದಿಸಿದ ರೀತಿಯಲ್ಲಿ, **ವರುಗಿರ ಕೈಂಕರ್ಯಾಖ್ಯ**

"**ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ । ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್ ಭವೇತ್**" ಎನ್ರುಮ್, (೨) "**ಎಮ್ಮೀಶರ್ ವಿಣ್ಣೋರ್ ಪಿರಾನಾರ್ ಮಾಶಿನ್ ಮಲರಡಿಕ್ಕೀಳೆಮ್ಮೈ ಚ್ಚೇರವಿಕ್ಕುಮ್ ವಣ್ಣಂಗಳ್**" ಎನ್ರುಮ್,

ಪುರುಷಾರ್ಥಸಿದ್ಧಿಕ್ಕು - ದಾಸಭೂತನಾದ ತನ್ನ ಶೇಷವೃತ್ತಿಗೆ ಪರಾಕಾಷ್ಠೆಯಾದ ಭಗವತ್ಕೈಂಕರ್ಯವೆಂಬ ಪುರುಷಾರ್ಥಸಿದ್ಧಿಯುಂಟಾಗಿರುವದಕ್ಕೆ **ಪ್ರಧಾನ ಕಾರಣವು** - ಮುಖ್ಯ ಕಾರಣವು ಯಾವುದೆಂದರೆ ಮುಂದೆ ಕೆಲವು ಪ್ರಮಾಣಗಳನ್ನು ನಿದರ್ಶಿಸಿ, ಆಚಾರ್ಯ ಸಂಬಂಧವೇ ಎಂಬದಾಗಿ ಹೇಳುತ್ತಾರೆ :— (೧) ಪಾದ್ಮೋತ್ತರ ಪುರಾಣ. ಈ ಶ್ಲೋಕವು ಹಿಂದೆಯೇ ಗುರುಪರಂಪರಾ ಸಾರದ ೪೯-೫೧ನೆಯ ಪುಟಗಳಲ್ಲಿ ವ್ಯಾಖ್ಯಾನಮಾಡಲ್ಪಟ್ಟು ಕ್ಷತ್ರಬಂಧು ಮತ್ತು ಪುಂಡರೀಕ ವೃತ್ತಾಂತಗಳು ವಿಸ್ತರವಾಗಿ ಉಪಪಾದಿಸಲ್ಪಟ್ಟಿವೆ. ಈ ಶ್ಲೋಕಾಭಿಪ್ರಾಯವೇನೆಂದರೆ ;—"ಮಹಾ ಪಾಪಿಯಾದುದರಿಂದ ರಾಜ್ಯಾಡಳಿತದಿಂದ ದೂರೀಕೃತನಾಗಿ, ನೀಚಕ್ಷತ್ರಿಯನೆನಿಸಿ, ಪರಹಿಂಸೆಯಿಂದಲೇ ಜೀವಿಸುತ್ತಿದ್ದ ಕ್ಷತ್ರಬಂಧುವೂ, ಅನೇಕ ಧರ್ಮಕಾರ್ಯಗಳನ್ನೂ, ವೇದಾಧ್ಯಯನವನ್ನೂ, ಪುಣ್ಯತೀರ್ಥಯಾತ್ರೆಗಳನ್ನೂ ಮಾಡಿ ಬ್ರಾಹ್ಮಣ ಶ್ರೇಷ್ಠರೆನಿಸಿದ ಪುಂಡರೀಕರೂ, **ಆಚಾರ್ಯವತ್ತಯಾ** - ಆಚಾರ್ಯರಾದ ನಾರದ ಮುನಿಗಳನ್ನು ಆಶ್ರಯಿಸಿ, ಉಪಾಯಾನುಷ್ಠಾನ ಮಾಡಿದುದರಿಂದಲೇ, **ಮುಕ್ತೌ** - ಮುಕ್ತಿಯನ್ನು ಹೊಂದಿದರು. **ತಸ್ಮಾತ್** - ಆ ಕಾರಣದಿಂದ, **ಆಚಾರ್ಯವಾನ್ ಭವೇತ್** - ಆಚಾರ್ಯರನ್ನಾಶ್ರಯಿಸುವಂತವರಾಗತಕ್ಕದ್ದು". ಇದರಿಂದ ಮುಕ್ತಿಗೆ ಆಚಾರ್ಯನೇ ಪ್ರಧಾನ ಕಾರಣನೆಂದು ಹೇಳಲ್ಪಟ್ಟಿತು.

"**ವೀಶುಮ್ ಶಿರಕಾಲ್ ಪರತ್ತೀರ್ ವಿಣ್ಣಾಡುನುಜ್ಞಟ್ಟೆಳಿದು ಪೇಶುಮ್ ಪಡಿಯುನ್ನ ಪೇಶಿಯುಮ್ ಪೋವದು, ನೆಯ್ ತೊಡುವುಣ್ ಡೇಶುಮ್ ಪಡಿಯುನ್ನ ಶೆಯ್ಯು ಮೆಮ್ಮೀಶರ್ ವಿಣ್ಣೋರ್ ಪಿರಾನಾರ್ ಮಾಶಿನ್ ಮಲರಡಿಕ್ಕೀಳ್ ಎಮ್ಮೈಚ್ಚೇರ್ವಿಕ್ಕುಮ್ ವಣ್ಣಂಗಳೇ**"

ಎಂಬುವದು ಪೂರ್ಣಪಾಶುರವು. ಇದರರ್ಥವು :— ಎಮ್ಮೀಶರ್ - ನಮಗೆ ನಾಥರಾದ ನಮ್ಮ ಆಚಾರ್ಯರುಗಳು ಎಂತವರೆಂದರೆ ;— ಅಥವಾ ಸರ್ವೇಶ್ವರನಿಗೆ

[೨] ತಿರುವಿರುತ್ತಂ, ೫೪

(೩) "ವಿಲ್ಲಿಪುತುವೈ ನಗರ್ ನಂಬಿವಿಟ್ಟು ಶಿತ್ತರ್ ತಙ್ಗಳ್ ದೇವರೈ

ವಿಶೇಷಣವಾಗಿ ಭಾವಿಸಿ, ಈ ಲೀಲಾವಿಭೂತಿಗೆ ಸೇರಿದ ನಮ್ಮೆಲ್ಲರಿಗೂ ನಾಥನಾದ ಮತ್ತು, **ವಿಣ್ಣೋರ್** - ನಿತ್ಯಸೂರಿಗಳಿಗೆ, **ಪಿರಾನಾರ್** - ಸ್ವಾಮಿಯಾದ, **ನೆಯ್** - ತುಪ್ಪವನ್ನು, **ತೋಡು** - ಕಳವುಮಾಡಿ, **ಉಣ್ಡು** - ಭುಂಜಿಸಿ, ಎಂದರೆ ಭಾಗವತೋತ್ತಮರಾಗಿ, ಸತ್ತುಕ್ಕಳಾಗಿರುವವರ ಪದಾರ್ಥವನ್ನು ಅವರಿಂದ ಕೊಡಲ್ಪಡದೆ ಇದ್ದರೂ ತನಗೆ ಉಚಿತವಾದುದೆಂದು ತಾನೇ ಪರಿಗ್ರಹಿಸಿ, **ವಿಶುಮ್ಬಡಿ** - ತಾನು ಮಾಡಿದ ಚೋರ ಜಾರವೃತ್ತಿಗಳನ್ನು ಸರಿಯಾಗಿ ತಿಳಿದುಕೊಳ್ಳದೆ ನಿಂದಿಸಿದ ಅಂತಹ ವ್ಯಾಪಾರಗಳನ್ನು. **ಅನ್ನ** -ಎಂದರೆ ಶಿಶುಪಾಲಾದಿಗಳನ್ನು ಸಭೆಯಲ್ಲಿ ನಾಶವನ್ನು, **ಶೆಯ್ಯುಂ** - ಮಾಡುವವನಾಗಿ, **ಮಾಶು ಇಲ್** - ಹೇಯಗುಣ ರಹಿತವಾದ, **ಮಲರ್** - ಕಮಲಪುಷ್ಪದ ಹಾಗಿರುವ, **ಅಡಿಕ್ಕೀಳ್** - ಪಾದಗಳ ಕೆಳಗೆ, **ಎಮ್ಮೈ** - ದೇಹವೇ ಆತ್ಮ ಎಂಬ, ಮತ್ತು ತಾನೇ ಸ್ವತಂತ್ರನೆಬಂಧ್ರಮೆಗಳಿಂದ ಕೂಡಿದ ನಮ್ಮನ್ನು **ಸೇರ್ ವಿಕ್ಕುಂ** - ಸೇರಿಸುವ, ಎದಂರೆ ದಿವ್ಯ ವೈಕುಂಠವನ್ನು ಹೊಂದಿ ಅವನ್ನನುಭವಿಸಿ ಆತನಿಗೆ ಕೈಂಕರ್ಯಪ್ರಾಪ್ತಿಯನ್ನುಂಟುಮಾಡುವ ಸಾಮರ್ಥ್ಯವುಳ್ಳ, **ಓವಣ್ಡುಗಳೀ** - ಭ್ರಮರಗಳೇ, ಎಂದರೆ ಪುಷ್ಪಗಳಿಂದ, ದಿವ್ಯವಾದ ಸುರಭಿಯನ್ನು ಸಂಗ್ರಹಿಸುವ ಶಕ್ತಿಯುಳ್ಳ ಭ್ರಮರಗಳ ಹಾಗೆ ಶಾಸ್ತ್ರದಲ್ಲಿ ಸಾರತಮವಾದುದನ್ನು ಸ್ವೀಕರಿಸುವ ಆಚಾರ್ಯರುಗಳೇ, **ವೀಶುಂ** - ವಿಸ್ತಾರವಾದ, **ಶಿರುಗಾಲ್** - ರೆಕ್ಕೆಗಳಿಂದ, ನಿರತಿಶಯವಾದ ಕರ್ಮನಿಷ್ಠೆ ಜ್ಞಾನನಿಷ್ಠೆ ಎಂಬೆರಡರ ಸಹಾಯದಿಂದ, **ಪರತ್ತೀರ್** - ಹಾರುವರಾಗಿದ್ದೀರಿ ಎಂದರೆ ಹಾರಿ ನಿತ್ಯವಿಭೂತಿಯನ್ನು ಸೇರುವರಾಗಿದ್ದೀರಿ. **ಉಙ್ಗಳ್ ಕ್ಕು** - ನಿಮಗೆ, **ವಿಣ್ ನಾಡು** - ಪರಮಾಕಾಶದಲ್ಲಿರುವ ಪರಮಪದವು, **ಎಳಿದು** - ಸುಲಭವಾಗಿ ಪ್ರಾಪ್ತವಾಗುವದಾಗಿರುತ್ತದೆ. **ಪೇಶುಂಪಡಿ** - ಅಲ್ಲಿ ಹೋಗಿ ಸರ್ವೇಶ್ವರನಲ್ಲಿ ಪುರುಷಕಾರರೂಪವಲ್ಲಿ ಹೇಳುವ, **ಎನ್ನ** - ಯಾವುದೋ ಅಂತಹ ಮಾತುಗಳನ್ನು, **ಪೇಶಿಯುಂ ಪೋವದು** - ನಮ್ಮೆದುರಿಗೆ ಹೇಳಿ ಹೋಗತಕ್ಕದ್ದು. ನಾವು ಆಚಾರ್ಯನಿಷ್ಠೆಯುಳ್ಳವರಾದುದರಿಂದ ನಮಗಾಗಿ ಶರಣಾಗತಿ ಭರವನ್ನು ಸ್ವಾಮಿಯಲ್ಲಿ ಸಮರ್ಪಿಸಿ, ನಮ್ಮನ್ನು ಪರಿಗ್ರಹಿಸಬೇಕೆಂದು ಪ್ರಾರ್ಥಿಸಿರಿ ಎಂಬ ಭಾವವು. ಇದೀಗ ತಾವು ಶ್ರಿಯಃಪತಿಯಲ್ಲಿ ಅರಿಕೇ ಮಾಡತಕ್ಕದ್ದು.

(೩) ನಾಚ್ಚಿಯಾರ್ ತಿರುಮೊಳಿ ೧೦. ೧೦.

ನಲ್ಲವೆನ್ ತೋಳಿನಾಕಣಿ ಮಿಕ್ಕೈ ನಮ್ಬರರ್

ವಲ್ಲಪರಿಶು ವರುವಿಪ್ಪರೇಲದು ಕಾಣ್ಣುಮೇ" ಎನ್ರುಮ್, ಕೊಲ್ಲಾಗಿರಪ ಡಿಯೇ ಸದಾಚಾರ್ಯ ಸಂಬಂಧಮೇ, ಎನ್ರು ವಿಶ್ವಪಿತ್ರು, ಅಭಿಷೇಕಮ್

ಶೆಲ್ವರ್ ಪೆರಿಯರ್ ತಿರುಮಾನಿಡವರ್ ನಾಮ್ ಶೆಯ್ವದೇ ಎಂಬುವದು ಪೂರ್ವಾರ್ಧವು. ಎನ್ - ನನಗೆ ನಲ್ಲ - ಅತಿಪ್ರಿಯನಾದ, ತೋೞ - ಸಖನೇ, ನಾಗಣೆಮಿಶೈ - ಅನಂತನೆಂಬ ಹಾಸಿಗೆಯಲ್ಲಿ ಪವಡಿಸಿರುವನೇ, ನಮ್ಬರರ್ - ಪ್ರಸಿದ್ಧನಾದ ಪರತ್ವವನ್ನು ಹೊಂದಿರುವ. ಶೆಲ್ವರ್ - ಶ್ರಿಯಃಪತಿಯಾಗ, ಪೆರಿಯರ್ - ಎಲ್ಲರಿಗಿಂತಲೂ ಉತ್ಕೃಷ್ಟನಾದವನನ್ನು, ತಿರುಮಾನಿಡವರ್ - (ಪ್ರಕೃತಿ ಸಂಬಂಧದಿಂದ ಜ್ಞಾನ ಸಂಕೋಚವನ್ನು ಹೊಂದಿ ಕರ್ಮವಶ್ಯರಾಗಿ ಅನೇಕ ದುಃಖಭಾಕ್ಕುಗಳಾಗಿರುವದರಿಂದ) ಅತಿ ಕ್ಷುದ್ರ ಮನುಷ್ಯರಾದ, ನಾಮ್ - ನಾವು, ಶೆಯ್ವದೇ - ಮಾಡತಕ್ಕದ್ದೇನಿದೆ ? ವಿಲ್ಲಿಪುತ್ತುವೈನಗರ್ - ಶ್ರೀ ವಿಲ್ಲಿಪುತ್ತೂರೆಂಬ ಪಟ್ಟಣಕ್ಕೆ, ನಮ್ಬಿ - ನಿರ್ವಾಹಕನಾದ, ವಿಷ್ಣುಚಿತ್ತರ್ - ವಿಷ್ಣುವನ್ನು ಮನಸ್ಸಿನಲ್ಲಿಟ್ಟಿರುವುದರಿಂದಾಗಲಿ, ಅಥವಾ ವಿಷ್ಣುವಿಗೆ ತುಂಬಾ ಅಭಿಮತರಾಗಿ ಆತನ ಮನಸ್ಸಿನಲ್ಲಿರುವದರಿಂದಾಗಲಿ, ವಿಷ್ಣುಚಿತ್ತರೆಂಬ ನಾಮಧೇಯವನ್ನು ಹೊಂದಿದ ಪೆರಿಯಾಳ್ವಾರವರು, ತಙ್ಗಳ್ ದೇವರೈ - ತಮಗೆ ಸ್ವಾಮಿಯಾದ ರಂಗಮನ್ನಾರನ್ನು, ವಲ್ಲಪರಿಶು - ತಾವು ತಿಳಿದ ಒಂದು ಪ್ರಕಾರದಿಂದ ಎಂದರೆ ಒಂದು ಸಾಧನೋಪಾಯದಿಂದ, ಅರಿವಿಪ್ಪರೇಲ್ - ನಾವು ನಿತ್ಯ ಕೈಂಕರ್ಯ ಮಾಡುವ ಹಾಗೆ ಸ್ವಾಮಿಯನ್ನು ವಶಮಾಡಿಕೊಡುವವರಾದರೆ, ಅದು ಕಾಂಡುಮೇ - ಆ ಮಾರ್ಗವಾಗಿ ಕಾಣುವೆವು ಎಂದರೆ ಪರಮ ಶ್ರೇಯಸ್ಸನ್ನು ಹೊಂದುವೆವು. ಶ್ರೀ ಆಳವಂದಾರವರು, ನಾಥಮುನಿಂ ವಿಲೋಕ್ಯ ಪ್ರಸೀದ - ಎಂದು ಪ್ರಾರ್ಥಿಸಿದ ಹಾಗೆ, ಶ್ರೀ ಪೆರಿಯಾಳ್ವಾರನ್ನು ಮುಂದಿಟ್ಟು ಪ್ರಾಪ್ಯವನ್ನು ಹೊಂದಿದರೆಂಬುವದು ಇಲ್ಲಿ ಉಪದೇಶಿಸಲ್ಪಟ್ಟಿತು. ಇದರಿಂದಲೂ ಪರಮ ಪುರುಷಾರ್ಥಸಿದ್ಧಿಗೆ ಆಚಾರ್ಯರೇ ಪ್ರಧಾನ ಕಾರಣರೆಂದು ಹೇಳಲ್ಪಟ್ಟಿತು. ಇಲ್ಲಿ ಸರ್ವೇಶ್ವರನಿಗೂ ಚೇತನನಿಗೂ ಇರುವ ವ್ಯತ್ಯಾಸವು ಉಪಪಾದಿಸಲ್ಪಟ್ಟಿತು. ಸರ್ವೇಶ್ವರನು ನಾಗ ಪರ್ಯಙ್ಕಶಯನನಾಗಿ ನಿಸ್ಸಮಾಭ್ಯಧಿಕನಾಗಿ, ಪರತ್ವಾದಿಗಳಿಂದ ಸರ್ವೋತ್ಕೃಷ್ಟನು. ಆತನು ಸೌಲಭ್ಯಾದಿ ಗುಣಯುಕ್ತನಾದರೂ ಈ ಚೇತನನು ಪ್ರಕೃತಿಸಂಬಂಧದಿಂದ ಸಂಕುಚಿತಜ್ಞಾನನಾಗಿ ಕರ್ಮಗಳಿಗೆ ವಶನಾಗಿ ಅತಿ ಕ್ಷುದ್ರನಾಗಿರುವದರಿಂದ ಆತನನ್ನು ಸ್ವತಂತ್ರನಾಗಿ ಹೊಂದಲು ಸಾಧ್ಯವಿಲ್ಲವಾದದರಿಂದಲೂ, ಸದಾಚಾರ್ಯರುಗಳಿಗೆ ಆತನು ಸ್ವಾಧೀನ

ಪಣ್ಣಪುಕುಕಿರ ರಾಜಕ್ಕುಮಾರನಕ್ಕು ರಾತ್ರಿಯಿಲ್ ವಿಳಕ್ಕೇತ್ತಿ ವೈಕ್ಕು ಮಾಪ್ಪೋಲೆ ತನಕ್ಕವರ್ಗಳ್ ಪಣ್ಣಿನ ವೆಳಿಚ್ಚಿರಪ್ಪೈಯುಮ್ ಅದಡಿಯಾಗತ್ತನಕ್ಕು ವನ್ನ ಕೈಂಕರ್ಯಗಳೈಯುಮ್ ಅನುಸಂಧಿತ್ತು ಅವರ್ಗಳ್ ಪಕ್ಕಲಿಲೆ ಕೃತಜ್ಞನಾಯಿರುಕ್ಕುವುಮ್ ;

ನಾದ ಪ್ರಯುಕ್ತ, ಅಂತಹ ಸದಾಚಾರ್ಯರ ಮೂಲಕ ಪ್ರಾಪ್ಯಪ್ರಾಪ್ತಿಯು ನಿಸ್ಸಂದೇಹವೆಂಬಭಿಪ್ರಾಯದಿಂದ. ತಮಗೆ ಆಚಾರ್ಯರಾದ ಪೆರಿಯಾಳ್ವಾರವರ ಮೂಲಕ ಪರಮ ಪುರುಷಾರ್ಥಸಿದ್ಧಿಯು ನಿಸ್ಸಂದೇಹವು. ಇಂತಹ ಸದಾಚಾರ್ಯರುಗಳೇ ಪ್ರಧಾನಕಾರಣರಾದ ಪ್ರಯುಕ್ತ, ಅಂತವರ ಸನ್ನಿಧಿಯಲ್ಲೂ ಸರ್ವೇಶ್ವರನಲ್ಲೂ ಸಹ ಕೃತಜ್ಞತಾ ಭಾವವು ಆವಶ್ಯಕವೆಂಬ ತಾತ್ಪರ್ಯವು." **ಎನ್ರುಮ್** - ಎಂಬುದಾಗಿಯೂ, **ಕೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, **ಸದಾಚಾರ್ಯಸಂಬಂಧಮೇ** - ಪರಮಪುರುಷಾರ್ಥ ಸಿದ್ಧಿಗೆ ಮೂಲ ಕಾರಣವು ಒಳ್ಳೆ ಕರ್ಮಜ್ಞಾನನಿಷ್ಠೆಗಳಿಂದ ಕೂಡಿದ ಆಚಾರ್ಯರ ಸಂಬಂಧವೇ, **ಎನ್ರುವಿಶ್ವಸಿತ್ತು** - ಎಂಬದಾಗಿ ವಿಶ್ವಾಸವನ್ನು ತೋರಿಸಿ, **ಅಭಿಷೇಕಂ ಪಣ್ಣ** - ಮಾರನೇ ದಿನ ಯೌವರಾಜ್ಯಾಭಿಷೇಕವನ್ನು ಮಾಡುವದಕ್ಕಾಗಿ, **ಪುಗುಗಿರ** - ಉದ್ಯುಕ್ತವಾಗಿರುವ, **ರಾತ್ರಿಯಿಲ್** - (ತದಂಗವಾಗಿ ಕೆಲವು ವಿಧಿಪ್ರೋಕ್ತಕರ್ಮಗಳು ನಡೆಯಬೇಕಾದ) ರಾತ್ರಿಯಲ್ಲಿ, **ವಿಳಕ್ಕೇತ್ತಿವೈಕ್ಕುಮಾಪ್ಪೋಲೆ** - (ಸರ್ವ ಕರ್ಮಾರಾಧ್ಯನನ್ನು ಆರಾಧಿಸುವಾಗ) ಅನೇಕ ದೀಪಗಳನ್ನು ಹಚ್ಚಿಡುವ ಹಾಗೆ, **ತನಕ್ಕವರ್ಗಳ್** - ತನಗೆ ಆ ಕೃಪಾಶಾಲಿಗಳಾದ ಸದಾಚಾರ್ಯರುಗಳು, **ಪಣ್ಣಿನ** - ಅನುಗ್ರಹಿಸಿದ, **ವೆಳಿಚ್ಚಿರಪ್ಪೈಯುಮ್** - ತತ್ವಜ್ಞಾನದಿಂದುಂಟಾದ ಜ್ಞಾನವಿಕಾಸವನ್ನೂ, **ಅದಡಿಯಾಗ** - ತನ್ಮೂಲಕವಾಗಿ, **ತನಕ್ಕು ವನ್ನ ಕೈಙ್ಕರ್ಯಙ್ಗಳೈಯುಮ್** - ತನಗೆ ಪ್ರಾಪ್ತವಾದ ಕೈಙ್ಕರ್ಯಗಳನ್ನೂ, ಇಲ್ಲಿ ಕೈಙ್ಕರ್ಯಗಳು ಎಂದು ಬಹುವಚನವಿರುವದರಿಂದ ಇಲ್ಲಿ ತನಗೆ ಪ್ರಾಪ್ತವಾದ ಸರ್ವೇಶ್ವರನ ಕೈಙ್ಕರ್ಯಗಳೂ ಮುಂದೆ ಪ್ರಾಪ್ತವಾಗುವ ನಿತ್ಯ ಕೈಙ್ಕರ್ಯಗಳೂ ಸಂಗ್ರಹಿಸಲ್ಪಟ್ಟವು. **ಅನುಸಂಧಿತ್ತು**-ಸ್ಮರಣೆಗೆ ತಂದುಕೊಂಡು, **ಅವರ್ಗಳ್ ಪಕ್ಕಲಿಲೆ**-ಆ ಸದಾಚಾರ್ಯರುಗಳ ವಿಷಯದಲ್ಲಿ, **ಕೃತಜ್ಞನಾಯಿರುಕ್ಕುವುಮ್** - ಕೃತಜ್ಞನಾಗಿರುವದೂ ಕೂಡ, **ಪ್ರಾಪ್ತಂ** - ಉತ್ತರಕೃತ್ಯವಾಗಿ, ಈತನಿಗೆ ಉಚಿತವಾದ ಧರ್ಮವು ಎಂದು ಮುಂದಕ್ಕೆ ಅನ್ವಯವು. ಈ ಅರ್ಚಾವತಾರಿಗೆ ಕೈಙ್ಕರ್ಯಮಾಡುವಾಗ ಸರ್ವೇಶ್ವರನಿಗೆ ತಾನು ಉಪಕಾರಮಾಡಿದೆನೆಂಬ ಬುದ್ಧಿಯಾಗಲಿ, ತನಗೆ ಸಾಧನವೆಂಬ ಬುದ್ಧಿ

ಯಾಗಲಿ ಬೇಡವೆಂದುಪದೇಶಿಸಿದರು. ಆದರೆ ನಾನ ಭಾವನೆಯೂ ಬೇಡವೋ ಎಂದರೆ, ಸರ್ವೇಶ್ವರನಲ್ಲೂ, ಮತ್ತು ತನಗೆ ಸ್ವಾಮಿಯನ್ನು ಹೊಂದುವ ಮಾರ್ಗ ವನ್ನು ತೋರಿಸಿ, ತನ್ನನ್ನು ಕೃತಕೃತ್ಯನಾಗಿ ಮಾಡಿದ ಸ್ವಾಚಾರ್ಯರಲ್ಲೂ, ಕೃತ ಜ್ಞತಾಭಾವವು ಅತ್ಯಾವಶ್ಯಕವು ಎಂದು ಹೇಳಿದರು. ಅಂತಹ ಸದಾಚಾರ್ಯರು ಪರಮೋಪಕಾರರು ಎಂಬುವದಕ್ಕೆ ಸ್ಮೃತಿವಚನವನ್ನೂ ಪೂರ್ವಾಚಾರ್ಯ ದಿವ್ಯ ಸೂಕ್ತಿಗಳನ್ನೂ ಪ್ರದರ್ಶಿಸಿದರು. ಇವರು ಮಾಡಿದ ಉಪಕಾರವು ಮಹತ್ತಾ ದುದೆಂದುಪಪಾದಿಸಿ, ಅದು ಎಂಥಾದ್ದೆಂಬುವದಕ್ಕೆ ಒಂದು ಲೋಕದೃಷ್ಟಾಂತ ವನ್ನುಪಪಾದಿಸುತ್ತಾರೆ. ಇವರುಗಳು ಜ್ಞಾನಪ್ರದರಾಗಿ ಈ ಸಂಸಾರದೆಶೆ ಯಲ್ಲೇನೋ ಉಪಕಾರಕರೇ ಸರಿ. ಆದರೆ ಮುಕ್ತದೆಶೆಯಲ್ಲಿನ ಕೈಂಕರ್ಯ ಪ್ರಾಪ್ತಿಗೆ ಹೇಗೆ ಸಾಧಕವೆಂಬುವದನ್ನು ಈ ದೃಷ್ಟಾಂತವು ಬೋಧಿಸುತ್ತದೆ. ಯೌವರಾಜ್ಯಾಭಿಷೇಕದ ಪೂರ್ವರಾತ್ರಿಯಲ್ಲಿ ರಾಜನಿಗೂ ರಾಜಕುಮಾರನಿಗೂ ಸಹ ತುಂಬಾ ಬೇಕಾದವರು, ತದಂಗವಾದ ಆರಾಧನೆಗಳಲ್ಲಿ ದೀಪವನ್ನು ಹಚ್ಚಿಡುವದರಿಂದ ನಾಳೇ ನಡೆಯುವ ಅಭಿಷೇಕದಲ್ಲಿ ಸರ್ವೇಶ್ವರನ ಕೃಪೆಯೊದ ಗೀತೆಂಬ ನಿಸ್ಸಂದೇಹತೆಯೂ, ಹರ್ಷವೂ, ಉತ್ಸಾಹವೂ, ಅದಕ್ಕಾಗಿ ಪ್ರವೃ ತ್ತಿಯೂ ಹೇಗೆ ತೋರಿಬರುತ್ತವೋ, ಹಾಗೆಯೇ ಮುಕ್ತೈಶ್ವರಕ್ಕೆ ಪೂರ್ವ ರಾತ್ರಿಯಾದ ಈ ಮುಮುಕ್ಷುವಿಗೆ ಉಳಿದ ಪುರುಷಾಯುಸ್ಸಿನಲ್ಲಿ, ಈ ಭಗವದಂತ ರಂಗರಾದ ಈ ಸದಾಚಾರ್ಯರು ಅನುಗ್ರಹಿಸಿದ ತತ್ವಜ್ಞಾನ, ಉಪಾಯಾನು ಷ್ಠಾನಗಳಿಂದ, ಕೈಂಕರ್ಯ ಸಾಮ್ರಾಜ್ಯದ ಯೌವರಾಜ್ಯಾಭಿಷೇಕದಲ್ಲಿ ನಿಸ್ಸಂದೇ ಹತೆ ಹರ್ಷಾದಿಗಳನ್ನುಂಟುಮಾಡುವುವುಗಳಾಗಿ ಅವುಗಳು ಉಪಕಾರಕಗಳೆಂಬ ಭಾವವು. ಇಲ್ಲಿ ರಾತ್ರಿ ಎಂಬ ಶಬ್ದದಿಂದ ಆಚಾರ್ಯೋಪದೇಶಕ್ಕೆ ಪೂರ್ವಕಾಲದ ಅಜ್ಞಾನವೂ, ವಿಳಕ್ಕೇತ್ತಿ ಎಂಬುವದರಿಂದ ಇವರುಗಳಿಂದುಂಟಾಗುವ ಜ್ಞಾನ ವಿಕಾಸವೂ ಬೋಧಿತವಾಯಿತು. ಹೀಗೆ ಅಂಧಕಾರವು ತೊಲಗಿ ತತ್ವಜ್ಞಾನ ಉಪಾಯಾನುಷ್ಠಾನಗಳು ಪ್ರಾಪ್ತವಾದುದರಿಂದ ಅವರುಗಳ ಸನ್ನಿಧಿಯಲ್ಲಿ ಕೃತ ಜ್ಞತಾ ಭಾವವು ಆವಶ್ಯಕವೆಂದು ಹೇಳಲ್ಪಟ್ಟಿತು.

೧೨. ಭಗವಂತನ ವಿಷಯದಲ್ಲೂ ಕೃತಜ್ಞತಾನುಸಂಧಾನವು ಆವಶ್ಯಕವು.

ಹಿಂದೆ ಆಚಾರ್ಯರ ವಿಷಯದಲ್ಲಿ, ಅವರು ಜ್ಞಾನಪ್ರಾಪ್ತಿ ಉಪಾಯಾನುಷ್ಠಾ ನಾದಿಗಳಿಗೆ ಪ್ರಧಾನಕಾರಣವಾದುದರಿಂದ ಕೃತಜ್ಞತಾಭಾವವು ಆವಶ್ಯಕವೆಂದು ಹೇಳಲ್ಪಟ್ಟಿತು. ಈ ಪ್ರಧಾನಕಾರಣವಾದ ಆಚಾರ್ಯರ ಸಂಬಂಧಕ್ಕೂ ಕೂಡ ಪ್ರಧಾನಕಾರಣನು ಸರ್ವೇಶ್ವರನು. ಅಂಥಾವನಲ್ಲಿ ಕೃತಜ್ಞತಾನುಸಂಧಾನ

30.3.2002

೧೨. ಭಗವತಿ ಚ ಕೃತಜ್ಞತಾಯಾಃ ಆವಶ್ಯಕತ್ವಂ

ಇನ್ನೈ ಎಲ್ಲಾತ್ತುಕ್ಕುಂ ಸಾಧಾರಣಮಾನ ಪ್ರಧಾನಕಾರಣಮುಮಾಯ್ ಮುಕ್ತದಶೈಯಿಲ್ ಆತ್ಮಾನುಬಂಧಿಯಾನ ಭಗವದನುಭವತ್ತೈಪತ್ತ

ಬೇಡವೋ ? ಎಂದರೆ, ತುಂಬಾ ಅವಶ್ಯಕವೆಂದು ಬೋಧಿಸುತ್ತಾರೆ. ಆದರೆ ಸರ್ವೇಶ್ವರನು ಈ ಸರ್ವ ಕ್ರಿಯೆಗಳನ್ನೂ ಒಂದು ವ್ಯಾಜವಾದ ಪ್ರಪತ್ತಿಯನ್ನುದ್ದೇಶಿಸಿ ಮಾಡಿರುವುದರಿಂದ ಕೃತಜ್ಞತೆಯ ಆವಶ್ಯಕತೆ ಎಲ್ಲಿಯದು ? ಎಂದು ಆಕ್ಷೇಪಿಸಿದರೆ, ಸರ್ವೇಶ್ವರನ ಸಹಜವಾದ ಕರುಣೆಯೇ ಈ ವ್ಯಾಜರೂಪವಾದುದನ್ನೇ ಅನುಷ್ಠಿಸುವ ಹಾಗೆ ಮಾಡಿದುದು; ಆ ಕಾರಣದಿಂದ ಆತನ ಸಹಜಕೃಪೆಯೇ ನಮ್ಮ ಎಲ್ಲಾ ಕ್ರಿಯೆಗಳಿಗೂ ಮೂಲಭೂತವಾದುದರಿಂದ, ಅದಕ್ಕಾಗಿ ಕೃತಜ್ಞತೆಯು ಆವಶ್ಯಕವೆಂದುಪದೇಶಿಸುತ್ತಾರೆ. ಹಾಗೆ ತಿಳಿಸುವ ಸಂದರ್ಭದಲ್ಲಿ ಆತನ ಸಹಜಕೃಪೆಯನ್ನು ಕೊಂಡಾಡಿರುವ ಆಳ್ವಾರ್ ಸೂಕ್ತಿಗಳನ್ನು ಉದಾಹರಿಸುತ್ತಾರೆ.

ಇನ್ನೈ ಎಲ್ಲಾತ್ತುಕ್ಕುಮ್-ಇವುಗಳೆಲ್ಲಕ್ಕೂ, ಎಂದರೆ ಆಚಾರ್ಯ ಸಂಬಂಧ, ತತ್ತ್ವಜ್ಞಾನಪ್ರಾಪ್ತಿ, ಉಪಾಯಾನುಷ್ಠಾನ ಇವೇ ಮೊದಲುಗೊಂಡು ಸ್ವಸ್ವರೂಪಾವಿರ್ಭಾವದೊಂದಿಗೆ ಈ ಮುಕ್ತೈಶ್ವರ್ಯಪ್ರಾಪ್ತಿಯವರೆಗೂ ಉಂಟಾಗುವ ಸರ್ವಕ್ಕೂ, **ಸಾಧಾರಣಮಾನ ಪ್ರಧಾನ ಕಾರಣಂ** - ಎಲ್ಲಾದಕ್ಕೂ ಮೂಲಭೂತವಾಗಿ ಮುಖ್ಯ ಕಾರಣವಾಗಿ, **ಮುಕ್ತದಶೈಯಿಲ್** - ಮುಕ್ತಾವಸ್ಥೆಯಲ್ಲಿ, **ಆತ್ಮಾನುಬಂಧಿಯಾನ** - ಆತ್ಮಸ್ವರೂಪಕ್ಕೆ ಸೇರಿದ **ಭಗವದನುಭವತ್ತೈ** - ಭಗವದನುಭವವನ್ನು, **ಪತ್ತ** - ಕುರಿತು ಉಂಟಾಗುವ, **ಅಪರ್ಯನುಯೋಜ್ಯ**-ಆಕ್ಷೇಪಿಸಲು ಸಾಧ್ಯವಲ್ಲದ **ಸ್ವಾತಂತ್ರ್ಯಮಡಿಯಾಗ** -ಸ್ವಾತಂತ್ರ್ಯಮೂಲಕವಾಗಿ, **ಶಙ್ಕಿತಮಾನ್ ವಿಚ್ಛೇದತ್ತುಕ್ಕು**-ಶಂಕಿಸಲ್ಪಡಬಹುದಾದವಿಚ್ಛೇದಕ್ಕೆ, **ಪರಿಹಾರಮಾಯಿರುಪ್ಪದು**-ಪರಿಹಾರವಾಗಿರುವಂಥಾದ್ದು, ಸರ್ವೇಶ್ವರನ "**ಸಹಜಕಾರುಣ್ಯಮೆನ್ರು ತೆಳಿನ್ದು**" ಎಂದು ಮುಂದೆ ಇದೆ, ಅದರೊಂದಿಗೆ ಇದಕ್ಕೆ ಅನ್ವಯವು. ಈತನ ಯಾದೃಚ್ಛಿಕ ಸುಕೃತಪ್ರಾಪ್ತಿ ಮೊದಲುಗೊಂಡು ಸದ್ಗುರುಪ್ರಾಪ್ತಿ, ಉಪಾಯಾನುಷ್ಠಾನಗಳಿಂದ ಪ್ರಾಪ್ತವಾಗುವ ಭಗವದನುಭವ ಪರ್ಯಂತವಾದ ಸರ್ವಕ್ರಿಯೆಗಳಿಗೂ ಸರ್ವೇಶ್ವರನ ಸಹಜ ಕಾರುಣ್ಯವೇ ಎಂದು ಹೇಳುತ್ತಾರೆ. ಆದರೆ ಸರ್ವೇಶ್ವರನು ಸರ್ವಸ್ವಾತಂತ್ರ್ಯವುಳ್ಳವನು. ಆತನ ಸ್ವಾತಂತ್ರ್ಯವಿಷಯವಾಗಿ ಯಾರೂ ಆಕ್ಷೇಪಿಸಲು ಸಾಧ್ಯವಿಲ್ಲವು. ಹೀಗಿರುವಾಗ ಈ ಭಗವದನುಭವಕ್ಕೆ ವಿಚ್ಛೇದ

ಅಪರ್ಯನುಯೋಜ್ಯ ಸ್ವಾತಂತ್ರ್ಯಮೂಲಕವಾಗಿ ಶಂಕಿತವಾದ ವಿಚ್ಛೇದತ್ವಕ್ಕೆ ಪರಿಹಾರವಾಗಿರುವುದು.

ಉಂಟಾಗಲಿ ಎಂದು ಸರ್ವೇಶ್ವರನೇ ಏಕೆ ಸಂಕಲ್ಪಿಸಕೂಡದು ? ಈ ಸಂಸಾರ ದೆಶೆಗೆ ಅಲ್ಲಿಂದ ಪುನರಾವರ್ತಿ ಇಲ್ಲವೆಂದು ಹೇಗೆ ತಾನೇ ಹೇಳಬಹುದು ? ಎಂದರೆ ಈ ಭಗವದನುಭವವು ಈ ಪ್ರಪನ್ನನಿಗೆ ಮೋಕ್ಷದೆಶೆಯಲ್ಲಿ ಆತ್ಮಾನುಬಂಧಿಯಾಗಿ ಎಂದರೆ ಯಾವತ್ಸ್ವರೂಪಭಾವಿಯಾಗಿರುತ್ತದೆ. **ಸ್ವೇನರೂಪೇಣಾಭಿನಿಷ್ಪದ್ಯತೇ,** ಈ ಚೇತನನಿಗೆ ಸ್ವಸ್ವರೂಪಾವಿರ್ಭಾವ ಉಂಟಾಗಿ, **ಪರಮಂ ಸಾಮ್ಯಮುಪೈತಿ,** ಸರ್ವೇಶ್ವರನೊಂದಿಗೆ ಸಮಾನಾಕಾರವನ್ನು ಹೊಂದುತ್ತಾನೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಅದೂ ಅಲ್ಲದೆ ಆತನು ಕರುಣಾನಿಧಿಯು, ಆತನ ಸಹಜ ಕಾರುಣ್ಯವು ಎಂದಿಗೂ ಈತನಿಗೆ ಪುನರಾವರ್ತಿಯನ್ನುಂಟುಮಾಡುವದಿಲ್ಲವು. ಈ ವಿಷಯದಲ್ಲಿ ಈಷದಪಿ ಸಂದೇಹವಿಲ್ಲವೆಂದು **"ನ ಚ ಪುನರಾವರ್ತತೇ, ನ ಚ ಪುನರಾವರ್ತತೇ"** ಎಂದು ಶ್ರುತಿಯು ಉದ್ಘೋಷಿಸುತ್ತದೆ. ಶ್ರೀ ಯತಿರಾಜರವರು ಕೊನೆಯ ಸೂತ್ರದ ಭಾಷ್ಯದಲ್ಲಿ,

> **"ನ ಚೋಚ್ಛಿನ್ನಕರ್ಮಬನ್ಧಸ್ಯ ಅಸಙ್ಕುಚಿತಜ್ಞಾನಸ್ಯ ಪರಬ್ರಹ್ಮಾನುಭವೈಕಸ್ವಭಾವಸ್ಯ ತದೇಕಪ್ರಿಯಸ್ಯಾನನವಧಿಕಾತಿಶಯಾನಂದಂ ಬ್ರಹ್ಮಾನುಭವತೋಽನ್ಯಾಪೇಕ್ಷಾ, ತದರ್ಥಾರಂಭಾದ್ಯಸಂಭವಾತ್ಪುನರಾವರ್ತಿಶಙ್ಕಾ. ನ ಚ ಪರಮಪುರುಷಸ್ಸತ್ಯಸಙ್ಕಲ್ಪೋಽತ್ಯರ್ಥಪ್ರಿಯಂ ಜ್ಞಾನಿನಂ ಲಬ್ಧ್ವಾ ಕದಾಚಿದಾವರ್ತಯಿಷ್ಯತಿ"**

ಎಂದರೆ "ಕರ್ಮಬಂಧವೆಲ್ಲಾ ಕತ್ತರಿಸಿ ಹೋಗಿ, ಜ್ಞಾನಸಂಕೋಚವಿಲ್ಲದವನಾಗಿ, ಪರಬ್ರಹ್ಮಾನುಭವದಲ್ಲೇ ನಿರತನಾಗಿ, ಆತನಿಗೆ ಮುಖ್ಯ ಪ್ರಿಯದಾಸನಾಗಿ, ನಿರತಿಶಯಾನಂದರೂಪನಾದ ಪರಬ್ರಹ್ಮನನ್ನನುಭವಿಸುವುದಕ್ಕಿಂತಲೂ ಬೇರೆ ವಿಷಯದಲ್ಲಿ ಅಪೇಕ್ಷೆಯಾಗಲಿ, ಅದಕ್ಕಾಗಿ ಪ್ರಯತ್ನವಾಗಲಿ ಉಂಟಾಗಲಾರದಾಗಿ, ಆ ಮುಕ್ತನು ಪುನಃ ಇಲ್ಲಿಗೆ ಬಂದು ಸಂಸಾರವನ್ನು ಹೊಂದುವನೆಂಬ ಶಂಕೆಗೆ ಅವಕಾಶವೇ ಇಲ್ಲವು. ಸರ್ವೋತ್ಕೃಷ್ಟನಾಗಿ ಪರಮ ಪುರುಷನು ಎನಿಸಿ, ಶರಣಾಗತನನ್ನು ಎಂದಿಗೂ ಬಿಡೆನೆಂದು ಸತ್ಯಸಂಕಲ್ಪವುಳ್ಳವನಾದ ಸರ್ವೇಶ್ವರನು ತನಗೆ ಪರಮ ಪ್ರಿಯನಾದ ಜ್ಞಾನಿಯನ್ನು ಹತ್ತಿರ ಕರೆದುಕೊಂಡು, ಅನಂತರ ಯಾವಾಗಲಾಗಲಿ ಹೊರಡಿಸಿ ಪುನಸ್ಸಂಸಾರದಲ್ಲಿ ಬೀಳಿಸಲಾರನು" ಎಂದು ಹೇಳಿ, ಅದಕ್ಕೆ ಪ್ರಮಾಣವಾಗಿ ಸರ್ವೇಶ್ವರನ ವಾಕ್ಯವನ್ನೇ ಭಗವದ್ಗೀತೆಯಿಂದ ತೆಗೆದು ಉದಾಹರಿಸಿರುತ್ತಾರೆ.

(೧) "ಇರಳಕತ್ತು ಮರಿಕದಿರೋ ಮಣ್ಣುಲತ್ತೊಡೇತ್ತಿ ವೈತ್ತೇಣ ನಾಂಜ್ಞೇ" ಎನ್ರುಮ್,

---

" ಮಾಮುಪೇತ್ಯ ಪುನರ್ಜನ್ಮ ದುಃಖಾಲಯ ಮಶಾಶ್ವತಂ
ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ ।
ಮಾಮುಪೇತ್ಯತು ಕೌನ್ತೇಯ ಪುನರ್ಜನ್ಮ ನವಿದ್ಯತೇ "

"ನನ್ನನ್ನು ಪಡೆದು, ದುಃಖಕ್ಕೆ ತೌರುಮನೆಯಾಗಿಯೂ ಅಸ್ಥಿರವಾಗಿಯೂ ಇರುವ ಜನ್ಮವನ್ನು ಹೊಂದುವದಿಲ್ಲವು. ಅದೇತಕ್ಕೆಂದರೆ, ಈ ಮಹಾತ್ಮರು ನನ್ನ ಯಥಾರ್ಥವಾದ ಸ್ವರೂಪವನ್ನರಿತವರಾಗಿ ನನಗೆ ವಿಶೇಷ ಪ್ರಿಯರಾದುದರಿಂದ ನಾನಿಲ್ಲದೆ ಆತ್ಮಧಾರಣೆಯನ್ನು ಹೊಂದದವರಾಗಿ ನನ್ನಲ್ಲೇ ಸಕ್ತವಾದ ಮನಸ್ಸುಳ್ಳವರಾಗಿ, ನನ್ನನ್ನೇ ಆಶ್ರಯಿಸಿದವರಾಗಿ, ನನ್ನನ್ನೇ ಉಪಾಸಿಸಿ, ಪರಮ ನಿಶ್ರೇಯಸ್ಸಿನ ರೂಪವಾದ ನನ್ನನ್ನೇ ಹೊಂದಿದನಂತರ ಪುನರಾವೃತ್ತಿಯನ್ನು ಹೊಂದುವರೇ ? ಸರ್ವಜ್ಞನಾಗಿಯೂ, ಸತ್ಯಸಂಕಲ್ಪನಾಗಿಯೂ, ಸಮಸ್ತ ಜಗತ್ತುಗಳ ಸೃಷ್ಟಿ ಸ್ಥಿತಿ ಲಯಗಳನ್ನೇ ಲೀಲೆಯಾಗುಳ್ಳವನಾಗಿಯೂ, ಸದಾ ಒಂದೇ ವಿಧವಾದ ಪ್ರವೃತ್ತಿಗಳುಳ್ಳವನಾಗಿಯೂ ಇರುವ ನನ್ನನ್ನು ಹೊಂದಿದನಂತರವಾದರೋ ಪುನರ್ಜನ್ಮವೂ ಎಂದಿಗೂ ಇಲ್ಲವು" ಎಂದು ಸರ್ವೇಶ್ವರನೇ ಅರ್ಜುನನಿಗೆ ಉಪದೇಶಿಸಿರುತ್ತಾನೆ. ಭಗವದನುಭವ ಪ್ರಾಪ್ತಿಯುಂಟಾದನಂತರವೂ ಪುನರ್ಜನ್ಮ ಒಂದುವೇಳೆ ಉಂಟಾದರೆ, ಮೂರು ಕಾರಣಗಳಿಂದುಂಟಾಗಬಹುದು:—(೧) ತನ್ನ ಇಚ್ಛೆಯೂ, (೨) ಅಥವಾ ಕರ್ಮಲೇಪವು, (೩) ಸರ್ವೇಶ್ವರನ ಸಂಕಲ್ಪವು. ನಿರತಿಶಯ ಸುಖರೂಪಬ್ರಹ್ಮಾನುಭವ ಉಂಟಾದನಂತರ ಈ ದುಃಖಾಲಯವನ್ನು ಪುನಃ ಹೊಂದಬೇಕೆಂಬಿಚ್ಛೆಯು ಎಂದಿಗೂ ಉಂಟಾಗಲಾರದಷ್ಟೆ. ಯಾವಾಗ ಭರನ್ಯಾಸವನ್ನು ಮಾಡಿದನೋ ಒಡನೆಯೇ ಪೂರ್ವಾಘವೆಲ್ಲಾ ನಾಶವಾದವು. ಉತ್ತರಾಘವು ಅಂಟುವದೇ ಇಲ್ಲವು, ಪ್ರಾರಬ್ಧವು ದೇಹಾವಸಾನದೊಂದಿಗೆ ನಷ್ಟವಾಯಿತು. ಆದುದರಿಂದ ಕರ್ಮಲೇಪವಿಲ್ಲವು. ತುಂಬಾ ಪ್ರಿಯನಾದವನು ಎಂದಿಗೆ ನನ್ನಲ್ಲಿಗೆ ಬಂದಾನೋ ಎಂದು ನಿರೀಕ್ಷಿಸುತ್ತಿದ್ದ ಸರ್ವೇಶ್ವರನು ದಿವ್ಯವೈಕುಂಠಕ್ಕೆ ಬರಮಾಡಿಕೊಂಡು, ಪುನಃ ಅಲ್ಲಿಂದ ದಬ್ಬಿಬಿಡುವನೋ ? ಎಂದಿಗೂ ಇಲ್ಲವೆಂಬಭಾವವು. ಏತಕ್ಕೆಂದರೆ ಇಂತಹ ಶಂಕಾಗಳಿಗೆ ಕಾರಣವೇ ಇಲ್ಲದ ಹಾಗೆ ಸರ್ವೇಶ್ವರನ ನಿರ್ಹೇತುಕ ಕೃಪೆಯು ಪ್ರಧಾನ ಕಾರಣವಾಗಿರುತ್ತದೆಂದು ಬೋಧಿಸಿರುತ್ತಾರೆ. ಪುನರಾವರ್ತಿ ಶಂಕಾವಿಲ್ಲವೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ.

(೧) **ಕರುಳುಡೈಯ ಪೊಳಿಲ್ ಮರುದುಂಜ್ಕ ತಕ್ಕಳಿರುಮ್ ಪಿಲಂಬನೈಯುಂ ಜ್ಕಡಿಯುಮಾವುಮ್ ಉರುಳುಡೈಯ ಶಕಟರೈಯುಂ ಮಲ್ಲರೈಯುಂ ಮುಡೈಯ ವಿಟ್ಟೋೞ್ಶೈ ಕೇಟ್ಟಾನ್ । ಇರಳಕತ್ತು ಎರಿಕದಿರೋನ್ ಮಣ್ಡಲತ್ತೂಡೇತ್ತಿ ವೈತ್ತೇಣಿವಾಜ್ಗಿ । ಅರುಳ್ ಕೊಡುತ್ತಿಟ್ಟಡಿಯವರೈಯಾಟ್ಕೊಳ್ವಾನಮರುಮೂರಣಿಯರಙ್ಗಮೇ.**

ಎಂಬುವದು ಪೂರ್ವಾಚಾರ್ಯರವ್ರು ಇದರರ್ಥವೇನೆಂದರೆ :— **ಕರುಳುಡೈಯ ಪೊಳಿಲ್ ಮರುದುಮ್** – ಕೋಪಗೊಂಡಿರುವ ನಿಬಿಡವಾದ ಎಲೆಗಳುಳ್ಳ ಯಮಳಗಳಾದ ಅರ್ಜುನ ವೃಕ್ಷಗಳನ್ನೂ, **ಕತಕ್ಕಳಿರುಮ್** - ಮದೋದ್ರೇಕವನ್ನು ಹೊಂದಿರುವ ಕುವಲಯಾ ಪೀಡವೆಂಬ ಆನೆಯನ್ನೂ, **ಪಿಲಂಬನೈಯುಂ** - ಪ್ರಲಂಬಾಸುರನನ್ನೂ, **ಕಡಿಯುಮಾವುಂ** - ಕ್ರೂರವಾದ ಕುದುರೆ ರೂಪದಲ್ಲಿದ್ದ ಕೇಶಿ ಎಂಬಸುರನನ್ನು, **ಉರುಳುಡೈಯ ಶಕಟರೈಯುಂ** - ಉರುಳಿಕೊಂಡು ಬಂದ ಶಕಟಾಸುರನನ್ನೂ, **ಮಲ್ಲರೈಯುಂ** – ಮಲ್ಲಯುದ್ಧದಲ್ಲಿ ನಿಪುಣರಾದ ಮುಷ್ಟಿಕಾಸುರ ಚಾಣೂರಾದಿಗಳನ್ನೂ, **ಉಡೈಯವಿಟ್ಟು** - ಧ್ವಂಸಮಾಡಿ, **ಓಶೈಕೇಟ್ಟಾನ್** - ದುಷ್ಟರನ್ನು ದಂಡಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮ ಸಂಸ್ಥಾಪನೆ ಮಾಡಿದನೆಂದು ಋಷಿಗಳೂ, ದೇವತೆಗಳೂ, ಮಹಾ ಭಾಗವತರೂ ಸಹ ಸ್ತೋತ್ರ ಮಾಡುವ ಹಾಗೆ ಮಾಡಿಕೊಂಡನು. **ಇರಳಕತ್ತುಮ್** - ಕತ್ತಲೆಯನ್ನು ಹೋಗಲಾಡಿಸುವ, **ಎರಿಕದಿರೋನ್ ಮಂಡಲತ್ತೂಡು** - ಬಿಸಿ ಬಿಸಿಯಾದ ಕಿರಣಗಳುಳ್ಳ ಸೂರ್ಯಮಂಡಲದಲ್ಲಿ, ಏತ್ತಿ - ಹತ್ತಿಸಿ, ಎಂದರೆ ಪ್ರಪನ್ನರುಗಳನ್ನು ದೇಹಾವಸಾನಾನಂತರ "**ರಶ್ಮ್ಯನುಸಾರೀ**" ಎಂಬ ಸೂತ್ರದಲ್ಲಿ ಹೇಳಿರುವ ಹಾಗೆ ಈ ದೇಹವನ್ನು ಬಿಟ್ಟು ಮೂರ್ಧನ್ಯನಾಡಿಯ ಮೂಲಕ ಆದಿತ್ಯ ಕಿರಣಗಳ ಮೂಲಕ ಅರ್ಚಿರಾದಿ ಮಾರ್ಗವನ್ನು ಹೊಂದಿ, ಆದಿತ್ಯ ಮಂಡಲವನ್ನು ಹೊಂದಿ, ಅಲ್ಲಿ ಅರ್ಚಿರಾದಿ ಆತಿವಾಹಕರಿಂದ ಸತ್ಕರಿಸಲ್ಪಟ್ಟು ಕಡೆಗೆ ಪರಮ ಪದವನ್ನು ಹೊಂದಿ, ಎಂಬ ಭಾವವು, ವೈತ್ತು - ನಿತ್ಯಸೂರಿಗಳೊಂದಿಗೆ ದಿವ್ಯ ವೈಕುಂಠದಲ್ಲಿ ಪರಿಪೂರ್ಣ ಬ್ರಹ್ಮಾನುಭವ ಉಂಟಾಗುವ ಹಾಗೆ ಮಾಡಿ, **ಏಣಿವಾಂಗಿ** - ನಿಚ್ಚಣಿಕೆಯನ್ನು ತೆಗೆದುಹಾಕಿ, ಎಂದರೆ ಅರ್ಚಿರಾದಿಗತಿಗೆ ಸಾಧನವಾಗಿದ್ದ ಸೂಕ್ಷ್ಮ ಶರೀರದ ಸಂಬಂಧವನ್ನು ಹೋಗಲಾಡಿಸಿ, **ಅರುಳ್ ಕೊಡುತ್ತಿಟ್ಟು** - ಅದರಿಂದ ಪುನರಾವೃತ್ತಿ ಇಲ್ಲದ ಹಾಗೆ ಕೃಪೆಮಾಡಿ ನಿತ್ಯಕೈಂಕರ್ಯವನ್ನುಂಟುಮಾಡಿ, **ಅಡಿಯವರೈ** – ಶರಣಾಗತಿ ಮಾಡಿ ತನಗೆ ಶೇಷತ್ವವೇ ಅಸಾಧಾರಣ ಧರ್ಮವೆಂದು ತಿಳಿದುದರಿಂದ ಅಲ್ಲಿಯೂ

---

(೧) ಪೆರಿಯಾಳ್ವಾರ್ ತಿರುಮೊೞಿ ೪, ೯, ೩.

(೨) "ಪೋಯಿನಾಲ್ ಪಿನ್ನೈ ಯಿತ್ತಿಶೈಕ್ಕೆನ್ರುಂ ಪಿಣೈಕ್ಕೊಡುಕ್ಕಿಲುಮ್ ಪೋಕವೊಟ್ಟಾರ್" ಎನ್ರುಮ್,

ಸ್ವಸ್ವರೂಪಾವಿರ್ಭಾವದಿಂದ ಶೇಷತ್ವ ಮಹಿಮೆಯನ್ನರಿತವರನ್ನು, ಆಳ್ ಕೊಳ್ವಾನ್-ಕೈಂಕರ್ಯ ಸಾಮ್ರಾಜ್ಯದಲ್ಲಿ ಅಂಗೀಕರಿಸಿದವನಾದವನು, ಅಮರ್ ಮೂರ್ - ಹೀಗೆ ಚೇತನರ ಉದ್ಧಾರಕ್ಕಾಗಿ ನಿತ್ಯ ವಾಸಮಾಡುವ ಪಟ್ಟಣವು, ಅಣಿಯರಙ್ಗಮೇ - ಅಲಂಕಾರಭೂತವಾಗಿ ಶ್ರೀರಂಗನಾಥನಿರುವ ಶ್ರೀರಂಗವೇ. ಕಾವೇರಿಯಿಂದ ಸುತ್ತಲ್ಪಟ್ಟು, ಸಮೃದ್ಧಿಯುಳ್ಳ ಭತ್ತದ ಗದ್ದೆಗಳೂ, ಪ್ರಾಸಾದಗಳೂ, ಸಪ್ತಪ್ರಾಕಾರಗಳೂ, ವಿಮಾನಗಳೂ, ಮುಂತಾದವುಗಳಿಂದ ಅಲಂಕಾರಭೂತವಾದ ಶ್ರೀರಂಗವೆಂಬ ಭಾವವು.

(೨) ಚೀಯಿನಾಲ್ ಚಿರನ್ದೇರಿಯ ಪುಣ್ ಮೇಲ್ ಶೆತ್ತಲೇರಿಕ್ಕುಳಮ್ಬಿರುನ್ದಿಙ್ಗನ್ । ಈಯಿನಾಲ್ ಅರಿಪುಣ್ಡು ಮಯಙ್ಗಿ ಎಲ್ಲೈವಾಯ್ ಚೆನ್ರು ಶೇರ್ವದನ್ ಮುನ್ನಮ್ । ವಾಯಿನಾಲ್ ನಮೋನಾರಣಾವೆನ್ರು ಮತ್ತಿಕತ್ತಿಡೈ ಕ್ಕೈಗಳ್ಕೂಪ್ಪಿ । ಪೋಯಿನಾಲ್ ಪಿನ್ನೈಯಿದ್ದಿಶೈಕ್ಕೆನ್ರುಮ್ ಪಿಣೈಕ್ಕೊಡುಕ್ಕಿಲುಮ್ ಪೋಗವೊಟ್ಟಾರೇ॥

ಎಂಬುವದು ಪೂರಾಪಾಶುರವು :—ಚೀಯಿನಾಲ್ ಚಿರನ್ದೇರಿಯ ಪುಣ್ ಮೇಲ್ - ಕೀವು ತುಂಬಿರುವ ಹುಣ್ಣಿನ ಮೇಲೆ. ಶೆತ್ತಲೇರಿ - ನೊಣಕೂತು ಮೊಟ್ಟೆಯಿಟ್ಟು, ಕುಳಮ್ಬಿರನ್ದು - ಅದು ಹಣ್ಣಾಗಿ ಕೀವು ಸುರಿಯುವ ಸಮಯದಲ್ಲಿ, ಈಯಿನಾಲ್ ಪುಣ್ಡುಮಯಂಗಿ - ನೊಣಕೂತು ಬಾಧೆಯುಂಟಾಗಿ, ಅದನ್ನು ಸಹಿಸಲಕ್ಕಾಗದೆ ಮೂರ್ಛೆಹೊಂದಿ, ಎಲ್ಲೈ ವಾಯ್ ಚ್ಚೆನ್ರು ಶೇರ್ ವದನ್ ಮುನ್ನಂ - ಚರಮ ದೆಶೆಯನ್ನು ಹೊಂದಿ ದೇಹಾವಸಾನವು ಬಂದೊದಗುವುದಕ್ಕೆ ಮುಂಚಿತನಾಗಿ, ನಾಯಿನಾಲ್ ನಮೋನಾರಣಾವೆನ್ರು - ಬಾಯಿ ಕೊಟ್ಟಿದ್ದಕ್ಕೆ ಪ್ರಯೋಜನವಾಗಿ ಬಾಯಿಂದ ನಮೋ ನಾರಾಯಣವೆಂದು ಹೇಳಿ, ಮತ್ತಿಕತ್ತಿಡೈಕ್ಕೈಗಳ್ಕೂಪ್ಪಿ, "ಶಿರಸ್ಯಂಜಲಿ ಮಾಧಾಯ" ಎಂದು ಹೇಳಿರುವ ಹಾಗೆ, ಮಸ್ತಕ ಎಂದರೆ ತಲೆಯ ಮೇಲೆ ಅಂಜಲಿಯನ್ನು ಮಾಡಿ, ಪೋಯಿನಾಲ್ - ಹೀಗೆ ಮಾಡಿ ಹೊರಟುಹೋಗಿ ನಿತ್ಯವಿಭೂತಿಯನ್ನು ಸೇರಿದರೆ, ಪಿನ್ನೈ ಇದ್ದಿಶೈಕ್ಕೆನ್ನುಮ್-ಪುನಃ ಈ ಲೀಲಾವಿಭೂತಿಯ ಕಡೆಗೆ, ಪ್ಪಿಣೆಕ್ಕೊಡುಕ್ಕಿಲುಮ್-ನಿತ್ಯ ಮುಕ್ತರುಗಳ ಜಾಮೀನನ್ನು ಕೊಟ್ಟರೂ, ಪೊಗವೊ

(೨) ಪೆರಿಯಾಳ್ವಾರು ತಿರುಮೊಳಿ ೪, ೫, ೨

(೩) "ವಣ್ಪುಕಳ್ ನಾರಣ್ ತಿಣ್ಕಳಲ್" ಎನ್ನುವರ್.

ಟ್ಟಾರ್-ಹೋಗಲು ಬಿಡರು. " "ಅಂಜಲಿಃಪರಮಾಮುದ್ರಾಕ್ಷಿಪ್ರಂ ದೇವ ಪ್ರಸಾದಿನೀ" ಎಂದು ಹೇಳಿರುವ ಹಾಗೆಯೂ ಮತ್ತು "ಕೃತಾಪರಾಧಸ್ಯ ಹಿತೇ ನಾನ್ಯತ್ಪಶ್ಯಾಮ್ಯಹಂಕ್ಷಮಂ । ಅಂತರೇಣಾಂಜಲಿಂಬಧ್ವಾ" ಎಂಬಲ್ಲಿ ಮಹಾಭಾಗವತನಾದ ಆಂಜನೇಯನ ಅಂಜಲಿಮಾಹಾತ್ಮ್ಯೋಪದೇಶ ಪ್ರಕಾರ ವಾಗಿಯೂ ನಮೋನಾರಣಾ ಎಂಬಮಂತ್ರೋಚ್ಚಾರಣಮೂಲಕ ಅಂಜಲಿಯನ್ನು ಮಾಡುವದು ಪ್ರಪದನಾನುಷ್ಠಾನವಾಗುವದರಿಂದ ಅದರಿಂದ ಸುಪ್ರೀತನಾದ ಶ್ರಿಯಃಪತಿಯು ಪುನರಾವರ್ತಿಯಿಲ್ಲದ ಮೋಕ್ಷಪ್ರಾಪ್ತಿಯನ್ನುಂಟುಮಾಡುವನೆಂಬು ವುದು ಪಾಶುರಾರ್ಥವು. ವ್ಯಾಧಿಮೊದಲಾದವುಗಳಿಂದ ಶರೀರವು ಪರವಶವಾಗುವದ ಕ್ಕಿಂತ ಮುಂಚೆಯೇ ಆತನನ್ನು ಶರಣ ಹೊಂದುವದು ಯುಕ್ತವು. ನಿತ್ಯವಿಭೂತಿ ಯನ್ನು ಸೇರಿದನಂತರ ನಮಗಂತೂ ಹಿಂತಿರುಗಿ ಬರಲು ಇಷ್ಟವು ಇರುವ ದಿಲ್ಲವು. ಸರ್ವೇಶ್ವರನೂ ಕೂಡ ಅತ್ಯಂತ ಪ್ರಿಯಭಕ್ತನನ್ನು ಹೊಂದಿದನಂತರ ತಾನೇ ಎಂದಿಗೂ ಹೋಗು ಎಂದೂ ಹೇಳುವದಿಲ್ಲವು. ನಿತ್ಯಸೂರಿಗಳೂ ಮುಕ್ತರೂ ಸಹ ಈ ಹೊಸ ಭಗವದ್ಭಕ್ತನನ್ನು ಹಿಂತಿರುಗಿ ಕಳುಹಿಸಿಕೊಡಲು ಎಂದಿಗೂ ಒಪ್ಪುವದಿಲ್ಲವೆಂಬ ಭಾವವು.

೩. "ಎರುಣ್ಣೈಕ್ಕನ್ನಲತ್ತು ಒಣ್ಪೊರುಳೀರಿಲ
ವಣ್ಪುಕಳ್ ನಾರಣ್ ತಿಣ್ಕಳಲ್ ಶೇರೇ ॥

ಎಂಬುವದು ಪಾಶುರವು :—ಎಣ್ ಪೆರುಕ್ಕು - ಅಸಂದವಲ್ಲಿಯಲ್ಲಿ ಹೇಳಿರುವ ಪ್ರಕಾರವಲ್ಲಿ ಲೆಖ್ಖಮಾಡಲು ಸಾಧ್ಯವಿಲ್ಲದಿರುವ ಹಾಗೆ, ಅನ್ನಲತ್ತು - ಆನಂದಾ ದಿಗುಣಗಳ ಅಥವಾ ಎಣ್ ಪೆರುಕ್ಕು - ಎಂದರೆ ಲೆಖ್ಖಮಾಡಲು ಸಾಧ್ಯ ವಿಲ್ಲದ, ಎಂಬುವದನ್ನು ಒಣ್ಪೊರುಳ್ ಎಂಬ ಜೀವವರ್ಗಕ್ಕೆ ವಿಶೇಷಣಮಾಡಿ ದರೆ ಜೀವಾನಂತ್ಯವು ಹೇಳಲ್ಪಟ್ಟಿತೆಂದು ಅರ್ಥಮಾಡುವದೂ ಕೂಡ ಸರಸವು. ಒಣ್ಪೊರುಳ್ - ಸ್ವಸ್ವರೂಪಾವಿರ್ಭಾವವುಳ್ಳ ಜೀವವರ್ಗವನ್ನೂ, ಈರಿಲ - ಅಸಂಖ್ಯೇಯವಾಗಿಯೂ ಅಪರಿಚ್ಛಿನ್ನವಾಗಿಯೂ ಇರುವ, ವಣ್ಪುಕಳ್-ಕಲ್ಯಾ ಣಗುಣಗಳನ್ನು, ನಾರಣ್-ಇವುಗಳೆರಡನ್ನೂ ಅಪೃಥಕ್ಸಿದ್ಧ ವಿಶೇಷಣಗಳಾಗಿ ಹೊಂದಿರುವದರಿಂದಲೇ ನಾರಾಯಣಶಬ್ದವಾಚ್ಯನಾದ ಶ್ರಿಯಃಪತಿಯ, ತಿಣ್ ಕ

(೩) ತಿರುವಾಯ್‌ಮೊಳಿ ೧-೨-೧೦

(೪) ಶನ್ಮಶನ್ಮಾನ್ತರಮ್ ಕಾತ್ತಡಿಯಾರ್‌ಗಳ್ಳೈ ಕೊಣ್ಡುಪೋಯ್ ತ್ತನ್ನೈ ಪೆರುತ್ತಿತ್ತನ್ ತಾಳಿಣೈಕ್ಕೀಳ್‌ಕ್ಕೊಳ್ಳುಮಪ್ಪನ್" ಎನ್ರುಮ್,
(೫) "ತನ ತಾಳಿಣೈಕ್ಕೀಳ್ ಶೇರ್‌ತ್ತವನ ಶೆಯ್ಯುಮ್ ಶೇಮತ್ತೈ"

ಳಲ್ - ಆಶ್ರಿತರನ್ನು ಕೈಬಿಡದ ಹಾಗೆ ದೃಢವಾದ ತಿರುವಡಿಗಳನ್ನು, ಶೇರ್ - ಆಶ್ರಯಿಸಿರಿ, ಇದು ನಮಃ ಎಂಬ ಪದದರ್ಥವು. ಇಲ್ಲಿ ತಿಣ್‌ಕಳಲ್ - ಎಂದು ಹೇಳಿರುವದರಿಂದ ಪುನರಾವರ್ತಿಯಿಲ್ಲವೆಂಬ ಭಾವವು ತೋರಿಬರುತ್ತದೆ.

೪. ತೊನ್ಮೈಪಿತ್ತನ್ವಲ್ಲಾರೈಪ್ಪಿತ್ತನ್ರುಮವರ್ ಕಣ್ಡೀರ್ ।
ನನ್ಮೈಪೆರುತ್ತೆನ್ನೈನಾಳುಯ್ಯಕೊಳ್ ಕಿನ್ರ ನಮ್ಬರೇ ॥

ಎಂಬುವದು ಉತ್ತರಾರ್ಧವು. ಶನ್ಮಶನ್ಮಾನ್ತರಮುಂ - ಪುನಃ ಪುನಃ ಜನ್ಮಗಳು, ಕಾತ್ತು - ಬಾರದ ಹಾಗೆ ಸಂರಕ್ಷಿಸಿ, ಅಡಿಯಾರ್‌ಗಳ್ಳೈ - ಭರನ್ಯಾಸಾನುಷ್ಠಾನಮಾಡಿದವರನ್ನು ಎಂದರೆ ದಾಸರನ್ನು. ಕೊಣ್ಡುಪೋಯ್ - ಸೂಕ್ಷ್ಮಶರೀರಮೂಲಕ ಅರ್ಚಿರಾದಿ ಗತಿಯನ್ನುಂಟುಮಾಡಿ, ವಿರಜಾಸ್ನಾನದಿಂದ ಈ ಶರೀರವು ಬಿಟ್ಟುಹೋಗಿ ಅಪ್ರಾಕೃತ ಶರೀರಪ್ರಾಪ್ತಿಯುಂಟಾಗಿ, ಅಮಾನವರಮೂಲಕ ತನ್ನನ್ನು ದಿವ್ಯವೈಕುಂಠದಲ್ಲಿ ಸೇರುವ ಹಾಗೆ, ಕರೆದುಕೊಂಡು ಹೋಗಿ, ತನ್ನೈ ಪೆರುತ್ತಿ - "ಸ್ವೇನರೂಪೇಣಾಭಿನಿಷ್ಪದ್ಯತೇ" (ಛಾಂ. ೮. ೩) ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸ್ವಸ್ವರೂಪಾವಿರ್ಭಾವವನ್ನುಂಟುಮಾಡಿ, ತನ ತಾಳಿಣೈಕ್ಕೀಳ್‌ಕೊಳ್ಳುಮ್ - ತನ್ನ ಪಾದಕಮಲದ ಕೆಳಗೆ ದಾಸ್ಯವನ್ನು ಕೈಕೊಳ್ಳುವ ಅಪ್ಪನೈ - ಸರ್ವಲೋಕಪಿತಾವಾದವನನ್ನು ತೊನ್ಮೈಪಿತ್ತನ್ವಲ್ಲಾರೈ - ಸ್ವಾಭಾವಿಕ ಉಪಕಾರಕತ್ವವನ್ನು ಹೇಳಿ ಅಕ್ರಮವಾಗಿ ಸ್ತೋತ್ರಮಾಡುವವ ಪಿತ್ತನ್ರುಮವರ್ ಕಂಡೀರ್ - ಪ್ರೇಮಪರವಶರಾಗಿ ಸ್ತುತಿಸುವಂಥಾ ನಮ್ಮ ಶ್ರೀವೈಷ್ಣವಮಹಾಭಾಗವತರು. ಎನ್ನೈ - ನಮ್ಮನ್ನು, ನನ್ಮೈ - ನಿತ್ಯಕೈಂಕರ್ಯರೂಪ ಸಂಪತ್ತನ್ನು, ಪೆರುತ್ತು-ಹೊಂದುವಹಾಗೆ, ನಾಳ್-ಯಾವಾಗಲೂ, ಉಯ್ಯಕೊಳ್ಳಗಿನ್ರ - ಉಜ್ಜೀವಿಸುವ ಹಾಗೆ ಮಾಡಿದ, ನಮ್ಬರೇ-ವಿಶ್ವಾಸವುಳ್ಳವರೇ ಸರಿ. ಶನ್ಮಶನ್ಮಾನ್ತರಮುಂಕಾತ್ತು ಎಂದು ಹೇಳಿರುವದರಿಂದ ಪುನರ್ಜನ್ಮವಿಲ್ಲದ ಹಾಗೆ ಮಾಡಿದವನು ಸರ್ವೇಶ್ವರನೆಂದು ಇಲ್ಲಿ ಹೇಳಲ್ಪಟ್ಟಿರುತ್ತದೆ.

(೫) ಪಾರ್ತ್ತ್ಯರಿಪವರ್ ಮಾಯವರ್ಕ್ಕಾಳನ್ರಿಯಾವರೋ
ಪೋರ್ತ್ತ ಪಿರಪ್ಪೊಡು ನೋಯೊಡು ಮೂಪ್ಪೊಡಿ ರಪ್ಪಿವೈ

(೪) ತಿರುವಾಯ್‌ಮೊಳಿ ೩,೭,೭ (೫) ತಿರುವಾಯ್‌ಮೊಳಿ ೭,೫,೧೦

ಎನ್ರುಮ್, ಶೊಲ್ಲುಗಿರಪಡಿಯೇ ಅಪುನರಾವೃತ್ತಿಯಿಲುಮ್ ಮುನ್ಬು ಸಂಸರಿಪ್ಪಿಕ್ಕೈಯಿರ್ಪ್ಪೋಲೆ ಸತ್ಯಸಙ್ಕಲ್ಪನಾಯ್ ಶೇಷಿಯಾನ ಶ್ರಿಯಃ

ಪೇರ್ತ್ತು ಪ್ಪೆರುನ್ತುನ್ಬಮ್ ವೇರರ ನೀಕ್ಕಿ ತನ್ತಾಳಿಣ್ಕೀಳ್ ಚೇರ್ತ್ತು
ಅವರ್ ಶೆಯ್ಯುಮ್ ಶೇಮತ್ತೈಯೆಣ್ಣಿ ತ್ತೆಳಿವುರ್ರು ॥

ಎಂಬುವದು ಪೂರಾಪಾಶುರವು—**ನಾರ್ಣಯುರಿಪವರ್** - ಮಹಾಭಾರತದ ಲ್ಲೆಲ್ಲಾ ತುಂಬಾ ಅಮೋಘವಾದ ವಾಕ್ಯ, ಅದು ಯಾವುದೆಂದರೆ ದ್ರೌಪದಿಯು ಬಿಚ್ಚಿದ ತಲೆಯನ್ನು ಕಟ್ಟಿಸುವದಕ್ಕಾಗಿ ನಡಿಸಿದ ಮಹಾಯುದ್ಧರಂಗದ ಮಧ್ಯೆ ಮಾಡಿದ ಮಹತ್ತಾದ ಉಪದೇಶವೆಂಬ ಸಮುದ್ರದಲ್ಲಿ ಕೊನೆಗೆ ಬಂದ "**ಸರ್ವ ಧರ್ಮಾನ್**" ಎಂಬ ಚರಮಶ್ಲೋಕ ಮಹಾತ್ಮ್ಯೆಯನ್ನು ಉಪದೇಶಿಸುವ ಮಹನೀಯರು, **ಪೋರ್ತ್ತ** – ಈ ಜೀವಾತ್ಮನನ್ನು ಬಾಧಿಸುವ, **ಪಿರಪ್ಪೋಡು** - ಜನ್ಮದಿಂದಲೂ, **ನೋಯೊಡು** - ವ್ಯಾಧಿಗಳಿಂದಲೂ, **ಮೂಪ್ಪೊಡು** – ಮುಪ್ಪಿನಿಂದಲೂ, **ಇರಪ್ಪು** – ಇವುಗಳೊಂದಿಗೆ ಅವರ್ಜನೀಯವಾದ ಮರಣ, **ಇವೈಪೇರ್ತು** - ಇಂತಹ ವಿಕಾರಗಳನ್ನು ಹೋಗಲಾಡಿಸಿ, **ಪೆರನ್ತುನ್ಬಮ್ ವೇರರ ನೀಕ್ಕಿ** – ಕರ್ಮಮೂಲಕ ಉಂಟಾಗುವ ಮಹಾದುಃಖಗಳನ್ನು ಬೇರುಸಹಿತ ಹೋಗಲಾಡಿಸಿ, **ತನ್ ತಾಳಿಣೈಕ್ಕೀಳ್ ಶೇರ್ತ್ತಿಯವರ್** - ಸ್ವಾತ್ಮಾನುಭವದಿಂದುಂಟಾಗುವ ಕೈವಲ್ಯಾದಿಗಳಿಗೆ ಸಿಕ್ಕದ ಹಾಗೆ, ತನ್ನ ಪಾದಕಮಲಗಳ ಕೆಳಗೆ ಸೇರುವ ಹಾಗೆ ಮಾಡಿದವನು, **ಶೆಯ್ಯುಮ್ ಶೇಮತ್ತೈ - ನ ಚ ಪುನರಾವರ್ತತೇ**" (ಛಾಂ. ೮.೧೫) ಎಂದು ಹೇಳಿರುವ ಹಾಗೆ ಆವರ್ತಿ ಇಲ್ಲದ ಹಾಗೆ ಮಾಡುವ ಸಂರಕ್ಷಣೆಯನ್ನು, **ಎಣ್ಣಿ** - ಅನುಸಂಧಾನಮಾಡಿ, **ತೆಳಿವುರ್ರು** - ನಿರ್ಮಲಜ್ಞಾನವನ್ನು ಹೊಂದಿದವರಾಗಿ **ನಾಯುವರ್ಕನ್ರಿ** - ಆಶ್ರಿತಸುಲಭನಾಗಿಯೂ ವಿರೋಧಿ ನಿವರ್ತಕನಾಗಿಯೂ ಹೀಗೆ ಆಶ್ಚರ್ಯಗುಣಚೇಷ್ಟಿತಗಳನ್ನು ಹೊಂದಿದ ಕೃಷ್ಣನಿಗಲ್ಲದೆ, **ಆಳಾವರೇ** – ಇನ್ನು ಯಾರಿಗೇ ಆಗಲಿ ಶೇಷಭೂತರಾಗುವರೋ ? ಎಂದಿಗೂ ಆಗುವದಿಲ್ಲವೆಂಬ ಭಾವವು. ಸರ್ವೇಶ್ವರನ ನಿರ್ಹೇತುಕ ಕೃಪೆಯು ಚೇತನನಿಗೆ ಕರ್ಮಮೂಲವಾಗಿ ಉಂಟಾಗಿರುವ ಈ ದೇಹಪ್ರಾಪ್ತಿಯನ್ನೂ ತನ್ಮೂಲಕ ಪ್ರಾಪ್ತವಾಗಿರುವ ಅನೇಕ ದುಃಖಗಳನ್ನೂ ನಿಶ್ಶೇಷವಾಗಿ ಹೋಗಲಾಡಿಸಿ, ಸ್ವರ್ಗಕೈವಲ್ಯಾದಿ ಸುಖಗಳಿಗೆ ಆಸೆಪಡದ ಹಾಗೆ ತನ್ನ ಪಾದಕಮಲಗಳನ್ನೇ ಆಶ್ರಯಿಸುವ ಹಾಗೆ ಪ್ರೇರಿಸಿ ಹೀಗೆ ಸರ್ವವಿಧದಲ್ಲೂ ಕಾಪಾಡಿರುತ್ತದೆ ಹೀಗೆ ನಾನಾ ವಿಧದಲ್ಲೂ ಸರ್ವೇಶ್ವರನು ಉಪಕಾರಮಾಡಿರುತ್ತಾ

ಪತಿನುಡ್ಶೈಯ (೬) **"ಪಣ್ಡೈನಾಳಾಲೆ ನಿನ್ ತಿರುವರುಳುಮ್ ಪಙ್ಗಯತ್ತಾಳ್ ತಿರುವರುಳುಙ್ಕೊಣ್ಡು ನಿನ್‌ಕೋಯಿಲ್ ಶೀಯ್‌ತ್ತು," ಎನ್ರು ಶೊಲ್ಲಪ್ಪಟ್ಟ ಸಹಜಕಾರುಣ್ಯಮೆನ್ರು ತೆಳಿನ್ದು ಅವ್ವಿಷಯತ್ತಿಲುಮ್ ಕೃತಜ್ಞನಾಯಿರುಕ್ಕುಮ್ ಪ್ರಾಪ್ತಮ್.**

ನೆಂಬುವದನ್ನು ಉಪದೇಶಿಸಿದವರು ಗೀತಾಸಾರಥಿಯು ಪರಮರಹಸ್ಯವಾದ ಚರಮಶ್ಲೋಕಾರ್ಥವನ್ನು ಗ್ರಹಿಸಿದವರು. ಅಂಥಾವರು ತುಂಬಾ ಕೃತಜ್ಞತಾಭಾವದಿಂದ ಅಂತಹ ಪರಮೋಪಕಾರನಾದವನಿಗೆ ಶೇಷಭೂತರಾಗುವರೇ ವಿನಾ ಇನ್ನು ಯಾರಿಗೂ ಅಲ್ಲವು ಎಂಬ ತಾತ್ಪರ್ಯವು" ಎನ್ರುಮ್ - ಎಂಬುದಾಗಿಯೂ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, **ಅಪುನರಾವೃತ್ತಿಯಿಲುಮ್** - ಪುನಃ ಹಿಂತಿರುಗಿ ಈ ಕರ್ಮಭೂಮಿಗೆ ಬಾರದೆ ಇರೋಣದರಲ್ಲೂ, ಇದಕ್ಕೆ **ಸತ್ಯಸಙ್ಕಲ್ಪನಾಯ್** - ಎಂಬುವದರೊಂದಿಗೆ ಅನ್ವಯವು. ಹೇಗೆ ದೃಢಸಙ್ಕಲ್ಪನು ಎಂಬುವದಕ್ಕೆ ಒಂದು ದೃಷ್ಟಾಂತವನ್ನು ಕೊಡುತ್ತಾರೆ; **ಮುನ್ನು ಸಂಸರಿಕ್ಕೈಯಿರ್‌ಪೋಲೆ** - ಇದಕ್ಕೆ ಮೊದಲು ಕರ್ಮಾನುಗುಣವಾಗಿ ಸಂಸಾರಹೊಂದಲು **ಸರ್ವೇಶ್ವರನ** ಸತ್ಯಸಂಕಲ್ಪವೇ ಹೇಗೆ ಕಾರಣವೋ, ಹಾಗೆಯೇ ಅಪುನರಾವೃತ್ತಿಗೂ ಕೂಡ ಆತನ ಸತ್ಯಸಂಕಲ್ಪವೇ ಕಾರಣವು. ಹೀಗೆ **ಸತ್ಯಸಙ್ಕಲ್ಪನಾದ ಶೇಷಿಯಾದ ಶ್ರಿಯಃಪತಿಯು**, ಇದಕ್ಕೆ ಸಹಜಕಾರುಣ್ಯವೆಂಬುವದರೊಂದಿಗೆ ಅನ್ವಯವು; ಹೀಗೆ ಇಂತಹ ಶ್ರಿಯಃಪತಿಯು **ಸಹಜಕಾರುಣ್ಯಮೆನ್ರು** - ನಿರುಪಾಧಿಕವಾದ ಎಂದರೆ ನಿರ್ಹೇತುಕವಾದ ಕಾರುಣ್ಯವೆಂದು, **ತೆಳಿನ್ದು** - ಅನುಸಂಧಾನಮಾಡಿ, **ಅವ್ವಿಷಯತ್ತಿಲುಮ್** - ಆ ವಿಷಯದಲ್ಲೂ, **ಕೃತಜ್ಞನಾಯಿರುಕ್ಕುಮ್ ಪ್ರಾಪ್ತಂ** - ಕೃತಜ್ಞನಾಗಿರಬೇಕೆಂಬುವದು ಈ ಪ್ರಪನ್ನನ ಸ್ವರೂಪಕ್ಕೆ ಉಚಿತವಾದುದು. ಆದರೆ ಮೋಕ್ಷಪ್ರಾಪ್ತಿಗೆ ಭರನ್ಯಾಸವೇ ಕಾರಣವಲ್ಲವೇ ? ಹಾಗಾದ ಪಕ್ಷದಲ್ಲಿ ಸರ್ವೇಶ್ವರನ ನಿರ್ಹೇತುಕ ಕೃಪೆ ಹೇಗೆ ಕಾರಣವೆಂದು ಹೇಳಲಾಗುತ್ತದೆಂದು ಆಕ್ಷೇಪಿಸಿದರೆ, ಭರನ್ಯಾಸವು ಈತನ ಕೃತ್ಯಾಕರಣ, ಅಕೃತ್ಯಕರಣ, ನಿಷಿದ್ಧಾಚರಣೆಗಳಿಂದುಂಟಾದ ಭಗವನ್ನಿಗ್ರಹವನ್ನು ಹೋಗಲಾಡಿಸುತ್ತದೆ ಮೋಕ್ಷಪ್ರಾಪ್ತಿಗೆ ಸರ್ವೇಶ್ವರನ ನಿರ್ಹೇತುಕ ಕೃಪೆಯೇ ಕಾರಣವು. ಭರನ್ಯಾಸವು ಬರೀ ವ್ಯಾಜಮಾತ್ರವು ಎಂಬ

(೬) ತಿರುವಾಯ್‌ಮೊಳಿ ೯,೨,೧

ಭಾವವು. ಶ್ರಿಯಃಪತಿಯು ಸಹಜಕಾರುಣ್ಯವುಳ್ಳವನೆಂಬುವದಕ್ಕೆ ನಮ್ಮಾಳ್ವಾರ ವರ ದಿವ್ಯಸೂಕ್ತಿಯಿಂದ ಉದಾಹರಿಸುತ್ತಾರೆ.

"**ಪಣ್ಡೈನಾಳಾಲೆ ನಿನ್ತಿರುವರುಳನುಂ ಪಙ್ಕಯತ್ತಾಳ್ ತಿರುವರುಳನುಂ। ಕೊಣ್ಡು, ನಿನ್ ಕೋಯಿಲ್ ಶೀಯ್ತ್ತು ಪಲ್ ಪಡಿಕಾಲ್ ಕುಡಿಕುಡಿವಳಿವನ್ದಾಟ್ಚೆಯುಮ್। ತೊಣ್ಡರೋರ್ಕ್ಕರುಳಿಚ್ಚೋತಿವಾಯ್ ತಿರುನ್ದುನ್ದಾಮರೈ ಕಣ್ಗಳನೋಕ್ಕಾಯ್। ತೆಣ್ತಿರೈಪ್ಪೊರುನಲ್ ತಣ್ಪಣೈ ಶೂಳ್ನ್ದ ತಿರುಪ್ಪುಳಿಙ್ಗುಡಿಕ್ಕಿಡನ್ದಾನೇ॥**"

ಎಂಬುವದು ಪೂರಾಪಾಶುರವು. **ತೆಣ್ ತಿರೈಪ್ಪೊರುನಲ್** - ನಿರ್ಮಲವಾಗಿರುವ ಅಲೆಗಳುಳ್ಳ ತಾಮ್ರಪರ್ಣೀ ನದಿಯ ತೀರದಲ್ಲಿರುವ **ತಣ್ ಪಣೈ ಶೂಳ್ನ್ದ** - ತಂಪಾದ ನೀರಿನ ವಸತಿಯುಳ್ಳ ಗದ್ದೆಗಳಿಂದ ತುಂಬಿರುವ, **ತಿರುಪ್ಪುಳಿಙ್ಗುಡಿಕಿಡನ್ದಾನೇ** - ತಿರುಪ್ಪುಳಿಙ್ಗುಡಿ ಎಂಬ ದಿವ್ಯದೇಶದಲ್ಲಿ ಪವಳಿಸಿರುವವನೇ **ಪಣ್ಡೈನಾಳಾಲೆ** - ಅನಾದಿಕಾಲದಿಂದಲೂ ಬಂದಿರುವ, ಎಂದರೆ ಸೃಷ್ಟಿಮೊದಲುಗೊಂಡು ಕರಣಕಳೇಬರಯೋಗ, ಜಾಯಮಾನಕಾಲಕಟಾಕ್ಷವೀಕ್ಷಣ, ಸಾತ್ವಿಕ ಸಂಭಾಷಣ, ಶಾಸ್ತ್ರಜ್ಞಾನಾಪ್ತಿ, ಪರಮಭಾಗವತ ಪ್ರೇಷಣ ಮೊದಲಾದ ನಿರ್ಹೇತುಕವಾಗಿ ಬಂದಿರುವ, **ನಿನ್ ತಿರುವರುಳನುಂ**-ನಿರುಪಾಧಿಕ ಬಂಧುವಾದ ನಿನ್ನ ಅಮೋಘವಾದ ಕೃಪೆಯನ್ನೂ, **ಪಙ್ಗಯತ್ತಾಳ್ ತಿರುವಳುನುಂ** - **ಕಿಮೇತನ್ನಿರ್ದೋಷಃ ಕಃ**, ಇದೇನು ಹೀಗೆ ನಿರ್ದೋಷಿಗಳು ಯಾರು ತಾನೇ ಇದ್ದಾರೆಂದು ಸಮಾಧಾನಗೊಳಿಸುವ ಕಮಲವಾಸಿನಿಯಾದ ಶ್ರೀಮಹಾಲಕ್ಷ್ಮಿಯ ಕೃಪೆಯನ್ನೂ, ಅಥವಾ ಅವನ ತಿರುವರುಳಕ್ಕೆ ಕಾರಣವು **ಪಙ್ಗಯತ್ತಾಳ್ ತಿರುವರುಳನುಂ** - ಎಂದು ಅರ್ಥಮಾಡಬಹುದು. ವಧಾರ್ಹನಾಗಿರುವ ಕಾಕನನ್ನೂ ಕೂಡ **ಕೃಪಯಾ ಪರ್ಯಪಾಲಯತ್** ಎಂದು ಹೇಳಿರುವ ಹಾಗೆ ಸಂರಕ್ಷಿಸುವ, **ಪಙ್ಗಯತ್ತಾಳ್ ತಿರುವರುಳ್ ಕೊಂಡು** - ಸ್ವೀಕರಿಸಿ, **ನಿನ್ ಕೋಯಿಲ್ ಶೀಯ್ತ್ತು** - ನೀನು ಬಿಜಮಾಡಿಸಿರುವ ಪುಣ್ಯಕ್ಷೇತ್ರದ ದೇವಾಲಯದಲ್ಲಿ ಸಮ್ಮಾರ್ಜನಾದಿ ಕೈಙ್ಕರ್ಯಗಳನ್ನು ಕೈಕೊಂಡು, **ಪಡಿಕಾಲ್ ಕುಡಿಕುಡಿವಳಿವನ್ದು** - ಬಹು ಕಾಲದಿಂದ ಕುಲಕ್ರಮವಾಗಿ ಪ್ರಾಪ್ತವಾದ ಶಾಸ್ತ್ರಮಾರ್ಗಮೂಲಕ ಬಂದ, **ಆಳ್ ಶೆಯ್ಯುಮ್** - ದಾಸ್ಯವನ್ನು ಮಾಡುವ, **ತೊಂಡರೋರ್ಕ್ಕು** - ಶೇಷಭೂತರಾದ ನಮಗೆ, **ಅರುಳಿ** - ನಿರುಪಾಧಿಕ ಕೃಪೆಯನ್ನು ಮಾಡಿ, **ಶೋದಿವಾಯ್ ತಿರನ್ದು** - ಪ್ರಕಾಶಮಾನವಾದ ಬಾಯನ್ನು ತೆರೆದು ಎಂದರೆ ಮಧುರಾಲಾಪವನ್ನು ಮಾಡಿ, **ಉನ್ದಾಮರೈ ಕಣ್ಗಳಾಲ್** - ನಿನ್ನ ಆಕೃಪಾಸೂಚಕವಾದ ಕಮಲಸದೃಶ ನೇತ್ರಗಳಿಂದ, **ನೋಕ್ಕಾಯ್** - **ಲೋಚ**

ಉತ್ತರಕೃತ್ಯಕಾಲೇ ತ್ಯಾಜ್ಯೋಪಾದೇಯಾಃ

ಇವ್ವುತ್ತರಕೃತ್ಯತ್ತಿಲ್ ಮನೋವಾಕ್ಕಾಯಙ್ಗಳೆನ್ನು ಶೊಲ್ಲುಗಿರ ಕರಣಙ್ಗಳ್ ಮೂನ್ರಾಲುಮ್ ಪರಿಹರಣೀಯಙ್ಗಳಿಲುಮ್ ಪರಿಗ್ರಾಹ್ಯ

ನಾಭ್ಯಾಂ ಪಿಬನ್ನಿವ ಎಂದು ಹೇಳಿರುವ ಹಾಗೆ ಕಟಾಕ್ಷಿಸಿ ಕೃಪೆಗೈಯ್ಯಬೇಕು. ಇಲ್ಲಿ ಲಕ್ಷ್ಮೀನಾರಾಯಣರಾದ ದಿವ್ಯದಂಪತಿಗಳ ನಿರ್ಹೇತುಕ ಕೃಪೆಯೇ ತನಗೆ ಪ್ರಾಪ್ತವಾಗಿರುವ ಸರ್ವವಿಧ ಶ್ರೇಯಸ್ಸುಗಳಿಗೂ ಕಾರಣವೆಂದು ಹೇಳಲ್ಪಟ್ಟಿತು. ಆದುದರಿಂದ ಅಂತಹ ಪರಮೋಪಕಾರಕನ ವಿಷಯದಲ್ಲಿ ಕೃತಜ್ಞತೆಯು ಇಲ್ಲದಿದ್ದರೆ ಈ ಪ್ರಪನ್ನನ ಸ್ವರೂಪಕ್ಕೇ ಹಾನಿಯು ಎಂಬ ಭಾವದಿಂದ ಸರ್ವೇಶ್ವರನಲ್ಲಿ ಸಂಪೂರ್ಣ ಕೃತಜ್ಞತಾ ಭಾವವು ಉತ್ತರಕೃತ್ಯದಲ್ಲಿ ಸೇರಿದುದು ಎಂದು ಹೇಳಿ, ಅಧಿಕಾರಾರ್ಥವನ್ನು ಮುಗಿಸಿರುತ್ತಾರೆ. ಹೀಗೆ ಉತ್ತರಕೃತ್ಯವು ಹನ್ನೆರಡು ವಿಧವಾದುದೆಂದು, ಅಧಿಕಾರ ಮೊದಲುಗೊಂಡು ಪ್ರಾರಂಭಿಸಿ, ಇರಕ್ಕುವುಮ್ ಪ್ರಾಪ್ತಂ ಎಂದು ಹೇಳಿ ಪೂರೈಸಿರುತ್ತಾರೆ. ಈ ಹನ್ನೆರಡೂ ಯಾವುವು ಎಂಬುವದು ಸಂಕ್ಷೇಪವಾಗಿ ಮೊದಲೇ ಸಂಗ್ರಹಿಸಲ್ಪಟ್ಟಿರುತ್ತದೆ. ೧೨೫೦-೨ನೆಯ ಪುಟಗಳನ್ನು ಪರಾಂಬರಿಸಿ.

ಈ ಉತ್ತರ ಕೃತ್ಯಗಳನ್ನು ನಡೆಸುವಾಗ
ತ್ಯಾಜ್ಯೋಪಾದೇಯಗಳಾವುವು ?

ಇವ್ವುತ್ತರ ಕೃತ್ಯತ್ತಿಲ್ - ಈ ಮೇಲೆ ಹೇಳಿದ ಹನ್ನೆರಡು ವಿಧ ಉತ್ತರ ಕೃತ್ಯಗಳನ್ನು ನಡೆಸುವಾಗ, ಮನೋವಾಕ್ಕಾಯಙ್ಗಳೆನ್ನು ಶೊಲ್ಲುಗಿರ ಕರಣಙ್ಗಳ್ ಮೂನ್ರಾಲುಮ್ - ಮನೋವಾಕ್ಕಾಯಗಳೆಂದು ಹೇಳಲ್ಪಡುವ ತ್ರಿಕರಣಗಳಿಂದಲೂ, ಪರಿಹರಣೀಯಙ್ಗಳಿಲುಮ್ - ಬಿಡತಕ್ಕವುಗಳಲ್ಲೂ- ಪರಿಗ್ರಾಹ್ಯಙ್ಗಳಿಲುಮ್ - ಅಂಗೀಕರಿಸತಕ್ಕವುಗಳಲ್ಲೂ, ಇಲ್ಲಿ ಮೊದಲು ತ್ಯಾಜ್ಯಗಳನ್ನು ಹೇಳಿ ಉಪಾದೇಯಗಳನ್ನು ಆನಂತರ ಹೇಳಿದುದರ ಅಭಿಪ್ರಾಯವು ಸಾಧುವಾದುದನ್ನು ಪರಿಗ್ರಹಿಸುವದಕ್ಕಿಂತ ಅಸಾಧು ತ್ಯಾಜ್ಯವು ಮುಖ್ಯವೆಂದು ತಿಳಿಯಪಡಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು. ಸಾರಮಿರುಕ್ಕುಂಪಡಿ - ಈ ತ್ಯಾಜ್ಯೋಪಾದೇಯಗಳಲ್ಲಿ ತುಂಬಾ ಮುಖ್ಯವಾದುವುಗಳೆಂದು ಶಾಸ್ತ್ರಗಳಲ್ಲಿರುವವದನ್ನು, ಶೊಲ್ಲುಗಿರೋಮ್ - ಮುಂದೆ ಹೇಳುವೆವು. ಇಲ್ಲಿ ಸಾರಮಿರುಕ್ಕುಂಪಡಿ ಎಂದು ಏತಕ್ಕೆ ಹೇಳಲ್ಪಟ್ಟಿತೆಂದರೆ, ಇವುಗಳೇ

ಜ್ಗಳಲುಮ್ ಸಾರಮಿರುಕ್ಕುಮ್‌ಪಡಿ ಶೊಲ್ಲುಗಿರೋಮ್ :—"ವಿಷಸ್ಯ ವಿಷಯಾಣಾಂಚ ದೂರಮತ್ಯನ್ತ ಮಂತರಂ। ಉಪಭುಕ್ತಂ ವಿಷಂಹನ್ತಿ ವಿಷಯಾ ಸ್ಸ್ಮರಣಾದಪಿ" ಎನ್ರುಮ್, (೧) "ಆನಿತಿಕ್ಕೈಕ್ಕನ್ನೈವರ್

ಮುಖ್ಯವಾದವೆಂದು ತಮ್ಮ ಬುದ್ಧಿಯಿಂದ ಕಲ್ಪಿತಗಳಾದವಲ್ಲವು, ಅವುಗಳು ಮುಖ್ಯವಾದವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ ಎಂಬ ಭಾವವು. ಪ್ರಥಮತಃ ಮನಸ್ಸಿನಿಂದ ಮುಖ್ಯವಾಗಿ ಸ್ಮರಿಸಕೂಡದುದು ಮತ್ತು ಮುಖ್ಯವಾಗಿ ಸ್ಮರಿಸಬೇಕಾದುದು ಯಾವುವೆಂದು ತಿಳಿಸುತ್ತಾರೆ. ಸ್ಮರಿಸಕೂಡದ್ದರಲ್ಲಿ ಪ್ರಧಾನವಾದುದು ವಿಷಯಾಭಿಲಾಷೆಯು, ಸ್ಮರಿಸಬೇಕಾದುದರಲ್ಲಿ ಪ್ರಧಾನವಾದುದು ಆಚಾರ್ಯನ ಮಹೋಪಕಾರವು ಎಂದು ಉಪದೇಶಿಸುತ್ತಾರೆ. ವಿಷಯಾಭಿಲಾಷೆಯು ಸರ್ವದಾ ಕೂಡದೆಂಬುವದಕ್ಕೆ ಒಂದೆರಡು ಸೂಕ್ತಿಗಳನ್ನು ಉದಾಹರಿಸುತ್ತಾರೆ:—ವಿಷಸ್ಯ - ವಿಷಕ್ಕೂ, **ವಿಷಯಾಣಾಂಚ** ವಿಷಯಗಳಿಗೂ, **ಅನ್ತರಮ್**-ತಾರತಮ್ಯವು, **ಅತ್ಯಂತಂ ದೂರಮ್**-ಮಹತ್ತರವಾಗಿ ದೂರವಾದುದು, ತುಂಬಾ ಹೆಚ್ಚಾದುದು. ಅದು ಹೇಗೆ ಎಂಬುವದು ಉತ್ತರಾರ್ಧದಿಂದ ಹೇಳಲ್ಪಡುತ್ತದೆ:—**ವಿಷಂ**-ವಿಷವು, **ಉಪಭುಕ್ತಂಸತ್**-ಸೇವಿಸಲ್ಪಟ್ಟದಾಗಿ, **ಹನ್ತಿ**-ಸೇವಿಸಿದವನನ್ನು ಕೊಲ್ಲುತ್ತದೆ, **ವಿಷಯಾಃ** - ವಿಷಯಗಳಾದರೋ, **ಸ್ಮರಣಾದಪಿ**-ಸ್ಮರಿಸುವದರಿಂದಲೇ, ಕೊಲ್ಲುತ್ತವೆ (೧) "**ಕಾಮಾನುಕಾಮೀ ಪ್ರತಿಬದ್ಧಮೋಹಾಃ**" ಎಂದು ಹೇಳಿರುವ ಹಾಗೆ ಮನಸ್ಸು ಚಂಚಲನಾಗಿ "**ಕಾಮಾತ್ಕ್ರೋಧೋಭಿಜಾಯತೇ**" ಎಂದು ಹೇಳಿರುವ ರೀತ್ಯಾಬುದ್ಧಿನಾಶವೂ ಆತ್ಮಹಾನಿಯೂ ಪ್ರಾಪ್ತವಾಗುತ್ತವೆಂಬ ಭಾವವು" **ಎನ್ರುಮ್** - ಎಂದೂ,

(೨) **ಆನಿತಿಕ್ಕೈಕ್ಕ** - "**ಚಂಚಲಂ ಹಿ ಮನಃ**" (ಗೀ ೬ ೩೪) ಎಂದು ಹೇಳಿರುವಹಾಗೆ ಮನಸ್ಸು ಚಂಚಲವಾಗುವ ಹಾಗೆ, **ಐವರ್**-ಪಂಚೇಂದ್ರಿಯಗಳು, **ಕುಮೈಕ್ಕುಮ್**-ಬಾಧಿಸುವ ಹಾಗೂ, **ಶಿರ ಇನ್ಬಮ್** ಅಲ್ಪ ಸುಖವನ್ನು, **ಪಲಕಾಟ್ಟಿ** - ಬಹು ವಿಧವಾಗಿ ತೋರಿಸಿ, **ನೀ** - ಇವುಗಳನ್ನೆಲ್ಲಾ ಪರಿಹರಿಸುವ ಶಕ್ತಿಯುಳ್ಳ ನೀನು, **ಪಾಪಿಯೇನೈ** - ಮಹಾಪರಾಧಮಾಡಿ ಸನ್ನೊಂದಿಗೆ ಇರಲು ಅರ್ಹತೆಯನ್ನು ಕಳೆದುಕೊಂಡು ಪಾಪಿಷ್ಠನಾದ ನನ್ನನ್ನು, **ಪಡುಪ್ಪಾಯೋ** - "**ಸಂಸಾರೇಷುನರಾಧಮಾನ್ ಕ್ಷಿಪಾಮಿ**" (ಗೀ. ೧೬-೧೯) ಎಂದು ಹೇಳಿರುವ ಹಾಗೆ ಸಂಸಾರ ಸಾಗರದಲ್ಲಿ ಮುಳುಗಿಸಿ ಬಿಟ್ಟು, ಬಂಸಿಸುತ್ತೀಯೋ ?

---

(೧) ರಾಮಾ. ಕಿಷ್ಕಿಂಧಾ (೨) ತಿರುವಾಯ್ ೬,೯,೯

ಕುಮ್ಮೈಕ್ಕುಮ್ ಶಿತ್ತಿನ್ಭಮ್ ಸಾವಿಯೋನ್ನೈಪ್ಪಲನೀಕಾಟ್ಟುಪ್ಪಡುಪ್ಪಾಯೋ" ಎನ್ರುಮ್, ಶೊಲ್ಲುಗೈಯಾಲೆಪರಮಪುರುಷಾರ್ಥರುಚಿ ಕುಲಿಯಾಮೈಕ್ಕಾಕ ಮರಕ್ಕವೇಣ್ಡು ಮವತ್ತಿಲ್ ಪ್ರಧಾನಮ್ ವಿಷಯಾ

"ತಾವಿನ್ನೈಯಜ್ಞೊಕ್ಕಣ್ಡತಡನ್ದಾಮರೈಗಟ್ಕೇ ।
ಕೂವಿಕ್ಕೊಳ್ಳುಮ್ ಕಾಲಮಿನ್ನಙ್ಕುರುಕಾದೋ ॥"

ಎಂಬುವದು ಉತ್ತರಾರ್ಧವು "ಭೂಮಿಯನ್ನಳದು ಅನನ್ಯಾರ್ಹತೆಯನ್ನುಂಟುಮಾಡಿದ ನಿನ್ನ ಪಾದಕಮಲಗಳನ್ನು, ಹೊಂದುವ ಕಾಲವು. **"ಜಹಿಶತ್ರುಂ ಮಹಾಬಾಹೋ"** ಎಂದು ನೀನೇ ಉಪದೇಶಿಸಿದ ಹಾಗೆ ಇಂದ್ರಿಯಗಳನ್ನು ಜಯಿಸಿ ಶಠಗೋಪನೆನಿಸಿದ ನನಗೆ ಇನ್ನೂ ದೂರವೋ" ಎಂಬುವದು ಇದರರ್ಥವು. **"ಜಿಹ್ವೈಕತೋಮುಮುಪಕರ್ಷತಿ"** ಎಂಬ ಭಾಗವತ ಶ್ಲೋಕದಲ್ಲಿ ಇಂದ್ರಿಯಗಳ ಹಾವಳಿಯು ವರ್ಣಿಸಲ್ಪಟ್ಟು, **"ಬಹ್ವ್ಯಸ್ಸಪತ್ನ್ಯ ಇವ ಗೇಹಪತಿಂ ಲುನನ್ತಿ"** "ಅನೇಕ ಹೆಂಡರಿದ್ದರೆ ಅವರೆಲ್ಲಾ ಸೇರಿ ಹೇಗೆ ಮನೆಯ ಯಜಮಾನನನ್ನು ನಾಶಪಡಿಸುವರೋ, ಹಾಗೆ ಈ ಇಂದ್ರಿಯಗಳೂ ಮನಸ್ಸೂ ಎಲ್ಲಾ ಸೇರಿ ಈ ದೇಹವೆಂಬ ಮನೆಯ ಯಜಮಾನನಾದ ಆತ್ಮನನ್ನು ನಾಶಮಾಡುತ್ತವೆ ಎಂದುಹೇಳಲ್ಪಟ್ಟಿರುತ್ತದೆ. ಎನ್ರುಮ್ – ಎಂದೂ. **ಶೊಲ್ಲುಗೈಯಾಲೆ**-ಹೇಳಿರುವದರಿಂದ, **ಪರಮ ಪುರುಷಾರ್ಥರುಚಿ** - ದಿವ್ಯವೈಕುಂಠ ಪ್ರಾಪ್ತಿಮೂಲಕ ಭಗವದನುಭವ ಕೈಂಕರ್ಯ ರುಚಿಯು, **ಕುಲಿಯಾಮೈಕ್ಕಾಹ** - ನಾಶವಾಗದಿರುವದಕ್ಕಾಗಿ, **ಮರಕ್ಕವೇಣ್ಡುವತ್ತಿಲ್** - ಮರೆಯಬೇಕಾದುದರಲ್ಲಿ **ಪ್ರಧಾನಂ** - ಮುಖ್ಯವಾದುದು, **ವಿಷಯಾಸ್ವಾದಮ್** - ವಿಷಯೋಪಭೋಗವು. ಮನಸ್ಸಿನಲ್ಲಿ ಸ್ಮರಿಸಲು ಕೂಡ ಅರ್ಹವಲ್ಲದೆ ತ್ಯಾಜ್ಯವಾದುದರಲ್ಲಿ ಪ್ರಧಾನವಾದುದು ವಿಷಯಾನುಭವವು, ಒಂದು ವೇಳೆ ಇಂತಹ ದೋಷಯುಕ್ತವಾದುದನ್ನು ಸ್ಮರಿಸಿದರೆ, ಪ್ರಥಮತಃ **"ದೋಷಾನುಚಿಂತನಾಥರ್ಾ ಸ್ಮೃತಿರಪಿ ದೂರೀಕರೋತಿ ವೈರಾಗ್ಯಮ್"** ಎಂದು ಹೇಳಿರುವ ಹಾಗೆ ವೈರಾಗ್ಯಹಾನಿಯುಂಟಾಗಿ ಬುದ್ಧಿನಾಶವುಂಟಾಗಿ ಆತ್ಮ ಹಾನಿಗೆ ಕಾರಣವಾಗುತ್ತದೆಂಬ ಭಾವವು. ಮುಂದೆ ಮನಸ್ಸಿನಿಂದ ಮುಖ್ಯವಾಗಿ ಸ್ಮರಿಸಬೇಕಾದುನು ಯಾವುದು ಎಂಬುವದನ್ನು ತಿಳಿಸುತ್ತಾರೆ.

ಕೃತಘ್ನತೈ ವಾರಾಮೈಕ್ಕಾಗ - ಕೃತಘ್ನನೆಂಬ ಅಪವಾದವು ಬಾರದಿರುವದಕ್ಕಾಗಿ, **ನಿನೈಕ್ಕ ವೇಣ್ಡುಮವತ್ತಿಲ್** ಸ್ಮರಿಸಬೇಕಾದುದರಲ್ಲಿ, **ಪ್ರಧಾನಂ** - ಮುಖ್ಯವಾದುದು ಯಾವುದೆಂದರೆ, **ಆಚಾರ್ಯ ಶೆಯ್‌ದ-**

ಸ್ವಾದನ್, 2 ಕೃತಘ್ನತೈನಾರಾನ್ಯಕ್ಕಾಗ ನಿನೈಕ್ಕವೇಣ್ಡುವತ್ತಿಲ್ ಪ್ರಧಾನಮ್ ಆಚಾರ್ಯನ್ ಶೆಯ್‌ದ ಪ್ರಥಮಕಟಾಕ್ಷಮ್ ಮುದಲಾನ

ತಾನು ಆಚಾರ್ಯನಿಷ್ಠೆಮೂಲಕವಾಗಿಯೋ, ಭಕ್ತಿನಿಷ್ಠೆಮೂಲಕವಾಗಿಯೋ ಭರನ್ಯಾಸಮಾಡಲು ಕಾರಣಭೂತರಾಗಿ ಮಹೋಪಕಾರರಾದ ಆಚಾರ್ಯರು ಮಾಡಿದ, **ಪ್ರಥಮ ಕಟಾಕ್ಷಮೊದಲಾನ ಉಪಕಾರಮ್** - "**ಶಾಧಿಮಾಂತ್ವಾಂ ಪ್ರಪನ್ನಂ**" ಎಂದು ಶಿಷ್ಯನು ಆಚಾರ್ಯನನ್ನು ಹೊಂದಿ ಪ್ರಾರ್ಥಿಸಿದ ಸಮಯದಲ್ಲಿ ಅವರ ಪ್ರಥಮಕಟಾಕ್ಷ ಪ್ರಾಪ್ತಿ ಮೊದಲುಗೊಂಡು ಶಿಷ್ಯನಿಗೆ ಉಂಟಾದ ಉಪಕಾರವು, **ಮೊದಲಾನ** ಎಂಬುವದರಿಂದ ಮಂತ್ರಾರ್ಥೋಪದೇಶಾದಿಗಳು ಸೂಚಿಸಲ್ಪಟ್ಟವು. ಕೃತಘ್ನತೆಯು ಸರ್ವಾಪರಾಧಗಳಲ್ಲೂ ತುಂಬಾ ಹೇಯವಾದುದೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುತ್ತದೆ. "**ಕೃತಘ್ನೇ ನಾಸ್ತಿ ನಿಷ್ಕೃತಿಃ**" ಕೃತಘ್ನನಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲವೆಂಬ ಶ್ರೀರಾಮೋಕ್ತಿಯೇ ಉಂಟು. (ರಾಮಾ ಕಿಷ್ಕಿಂಧಾ). ಮತ್ತು "**ಪ್ರಥಿತಂ ಪಾತಕಿವರ್ಗಮ್ ಕೃತಘ್ನ ಏಕೋಹಿಕೃತ್ಸ್ನಮತಿಶೇತೇ**" ಕೃತಘ್ನನು ಎಂದರೆ ಮಾಡಿದುಪಕಾರವನ್ನು ಸ್ಮರಿಸದವನು ಪ್ರಬಲವಾದ **ಸಮಸ್ತ**ಪಾತಕಸಮೂಹವನ್ನೂ ಅತಿಕ್ರಮಿಸಿರುತ್ತಾನೆ ಎಂದರೆ ತುಂಬಾ ಹೆಚ್ಚಾದ ಪಾಪಿಷ್ಠನು'' ಎಂಬ ಸಙ್ಕಲ್ಪಸೂರ್ಯೋದಯ (ಅಂಕ ೩.೩೩) ಸೂಕ್ತಿಯು ಇದನ್ನೇ ಸಮರ್ಥಿಸುತ್ತದೆ. ಉತ್ತರಾರ್ಧದಿಂದ, ಕ್ರಿಯಮಾಣಘ್ನನು ಎಂದರೆ ವರ್ತಮಾನಕಾಲದಲ್ಲೇ ಉಪಕಾರಮಾಡುತ್ತಾ ಇರುವವನನ್ನು ಸ್ಮರಿಸದವನು, ಕೃತಘ್ನನಿಗಿಂತ ಪಾಪಿಷ್ಠನೆಂದೂ. ಕರಿಷ್ಯಮಾಣಘ್ನನು ಎಂದರೆ ಭವಿಷ್ಯತ್ಕಾಲದಲ್ಲೂ ಕೂಡ ಉಪಕಾರಮಾಡುತ್ತಲೇ ಇರುವವನನ್ನು ಸ್ಮರಿಸದವನು ಎಲ್ಲರಿಗಿಂತಲೂ ಮಹಾಪಾಪಿಷ್ಠನೆಂದು ಹೇಳಲ್ಪಡುತ್ತದೆ. ಇಂತಹ ಭಾಗವತಾಪಚಾರವು ಬಾರದಿರುವದಕ್ಕಾಗಿಯೂ, ತಮ್ಮ ಆಚಾರ್ಯರವರು ಮಾಡಿದ ಮಹತ್ತಾದ ಉಪಕಾರದ ಸ್ಮರಣೆಯಿರಬೇಕು.

ಹೀಗೆ ಮನಸ್ಸಿನಿಂದ ಸ್ಮರಿಸಬಿರತಕ್ಕದ್ದು, ವಿಷಯಾಭಿಲಾಷೆಯೆಂದೂ, ಸ್ಮರಿಸತಕ್ಕದ್ದು ಆಚಾರ್ಯಕೃತೋಪಕಾರವೆಂದೂ ಹೇಳಿ, ವಾಗಿಂದ್ರಿಯಕ್ಕೆ ತ್ಯಾಜ್ಯವಾವುದು, ಉಪಾದೇಯವಾದುದು ಯಾವುದೆಂಬುವದನ್ನು ಮುಂದೆ ತಿಳಿಸುತ್ತಾರೆ :- **ಕಾರ್ಪಣ್ಯಮ್ ಕುಲೈಯಾನ್ಯಕ್ಕಾಗ** - ತನ್ನ ಕಾರ್ಪಣ್ಯವು ನಾಶವಾಗಿರುವದಕ್ಕಾಗಿ, **ಶೊಲ್ಲಾದವೇಣ್ಡುವ**ದಿಲ್ - ಬಾಯಿಂದ ಉಚ್ಚರಿಸಬೇಕಾದ ಇತರಕ್ಕವುಗಳಲ್ಲಿ **ಪ್ರಧಾನಮ್** - ಮುಖ್ಯವಾದುದು ಯಾವುದೆಂದರೆ :- **ಆತ್ಮೋತ್ಕರ್ಷಮ್** - ಸ್ವಪ್ರತಿಷ್ಠೆಯು, ಆತ್ಮಸ್ತುತಿಯನ್ನು ಮಾಡಿದುದಾದರೆ ಸರ್ವೇಶ್ವರ ಕೃಪಾಜನಕ

ಉಪಕಾರಮುಮ್ ಕಾರ್ಪಣ್ಯಮುಮ್ ಕುಲೈಯಾನ್ಮೈಕ್ಕಾಗಚ್ಚೊಲ್ಲಾದೊಳಿಯವೇಣ್ಡುಮವಱ್ಱಿಲ್ ಪ್ರಧಾನಮ್ ಆತ್ಮೋತ್ಕರ್ಷಮ್. ಉಪಾಯನಿಷ್ಠೈಯೈ ಮಱವಾಮೈಕ್ಕಾಗ "ಸದೈವಂ ವಕ್ತಾ" ಎಙ್ಗಿಱಪಡಿಯೇ ಶೊಲ್ಲ

ಕಾರ್ಪಣ್ಯವು ನಾಶವಾಗುತ್ತದೆ, ಮತ್ತು ಹಿಂದೆ ವಿಶೇಷವಾಗಿ ನಿಷೇಧಿಸಿದ ಅಹಂಕಾರ ಮಮಕಾರಗಳು ಪ್ರಾಪ್ತವಾಗುತ್ತವೆಂಬ ಭಾವವು. ಇಂತಹ ಅನರ್ಥಗಳು ಬಾರದಿರುವದಕ್ಕಾಗಿ ಸ್ವಪ್ರಶಂಸೆಯು ಕೂಡದು ಎಂದು ಉಪದೇಶಿಸುತ್ತಾರೆ. **ಉಪಾಯನಿಷ್ಠೈಯೈಮಱವಾಮೈಕ್ಕಾಗ** - ಹಿಂದೆ ಸ್ವನಿಷ್ಠಾಭಿಜ್ಞಾನಾಧಿಕಾರದಲ್ಲಿ ಉಪಾಯವಿಷಯದಲ್ಲಿ ಸ್ವನಿಷ್ಠಾಭಿಜ್ಞಾನವಿರಬೇಕೆಂದು ಹೇಳಲ್ಪಟ್ಟಿತು. ಅಂತಹಉಪಾಯನಿಷ್ಠೆಯನ್ನು ಮರೆಯದೆ ಇರುವದಕ್ಕಾಗಿ, **"ಸದೈವಂವಕ್ತಾ" ಎಙ್ಗಿಱಪಡಿಯೇ**-"ಯಾವಾಗಲೂ ಹೀಗೆ ದ್ವಯಮಂತ್ರವನ್ನು ಉಚ್ಚರಿಸುವವನಾಗಿ" ಎಂದು ಶ್ರೀ ಭಾಷ್ಯಕಾರರವರು ಹೇಳಿರುವ ಹಾಗೆ, **ಶೊಲ್ಲವೇಣ್ಡುಮ್ ಅವಱ್ಱಿಲ್**-ಬಾಯಲ್ಲಿ ಉಚ್ಚರಿಸಬೇಕಾದುದರಲ್ಲಿ, **ಪ್ರಧಾನಮ್** - ಮುಖ್ಯವಾದುದು, **ದ್ವಯಮ್** - ದ್ವಯಮಂತ್ರವು. ಪ್ರಪನ್ನನು ಸಮಯವು ಸಿಕ್ಕಿದಾಗೆಲ್ಲಾ ದ್ವಯಮಂತ್ರವನ್ನು ಉಚ್ಚರಿಸುತ್ತಾ, ಕೆಳಗಿನ ತುಟಿಯು ಅದರುತಾ ಇರಬೇಕೆಂದು ಹೇಳಲ್ಪಟ್ಟಿರುತ್ತದೆ.

ಮುಂದೆ ಕಾಯಿಕ ಕರಣಕ್ಕೆ ತ್ಯಾಜ್ಯೋಪಾದೇಯಗಳಾವುವು ಎಂದು ಹೇಳಲು ಹೊರಟು, ಕ್ರಮವಾಗಿ ಅವುಗಳು ಕರಣತ್ರಯಗಳಿಂದಲೂಕೂಡ ವರ್ಜ್ಯವೂ, ಅಂಗೀಕಾರ್ಯವೂ, ಎಂದು ಹೇಳುತ್ತಾರೆ. ಏಕೆಂದರೆ, ಮೂರು ಕರಣಗಳಿಗೂ ಸಂಬಂಧವುಂಟು; '**ಯನ್ಮನಸಾ ಧ್ಯಾಯತಿ, ತದ್ವಾಚಾವದತಿ, ತತ್ಕರ್ಮಣಾಕರೋತಿ**' ಎಂದರೆ ಮನಸ್ಸಿನಿಂದ ಏನನ್ನು ಆಲೋಚಿಸುತ್ತಾನೋ, ಅದನ್ನೇ ಬಾಯಲ್ಲಿ ಉಚ್ಚರಿಸುವನು, ಅದನ್ನೇ ಕರ್ಮಮೂಲಕ ನಡಿಸುವನೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ತ್ರಿಕರಣಗಳಿಂದಲೂ ಬ್ರಹ್ಮವಿದಪಚಾರವು ಮುಖ್ಯವಾಗಿ ತ್ಯಾಜ್ಯವಾದುದೆಂದೂ, ಮುಖ್ಯವಾಗಿ ತ್ರಿಕರಣಗಳಿಂದೂ ಉಪಾದೇಯವಾದುದು ಆಚಾರ್ಯಾದಿ ಭಾಗವತ ಕೈಙ್ಕರ್ಯವೆಂದೂ ತಿಳಿಸುತ್ತಾರೆ.

"**ಉಗನ್ದು**"—ಪ್ರೀತನಾಗಿ. **ಪಣಿಕೊಳ್ಳ** - ಕೈಂಕರ್ಯವನ್ನು ಸ್ವೀಕರಿಸಲು, **ಉರಿಯನಾನ** - ಯೋಗ್ಯನಾದ, **ಎಮ್ಬೆರುಮಾನ್** - ನಮ್ಮ ಸ್ವಾಮಿಯಾದ ಶ್ರಿಯಃಪತಿಯ, **ತಿರುವುಳ್ಳಮ್** - ಮನಸ್ಸು, **ಅಳಲಾಮೈಕ್ಕಾಗ** - ಭಗವನ್ನಿಗ್ರಹವು ಉಂಟಾಗದಹಾಗೆ, **ಕರಣತ್ರಯತ್ತಾಲುಮ್** - ಮನೋವಾ

ವೇಣ್ಡುಮವಱ್ಱಿಲ್ ಪ್ರಧಾನಮ್ ದ್ರವ್ಯಮ್. ಉಗನ್ದು ಪಣಿಕೊಳ್ಳ ವುರಿಯನಾನ ವೆನ್ಬೆರುಮಾನ್ ತಿರುವುಳ್ಳಮುಳಲಾಮ್ಯ ಕ್ಕಾಹ ಕರಣತ್ರಯತ್ತಾಲುಮ್ (೧) ಶೆಯ್ಯಾದನಶೆಯ್ಯೋಮ್" ಎನ್ನುಮವಱ್ಱಿಲ್ ಪ್ರಧಾನಂ ಬ್ರಹ್ಮವಿದಪಚಾರಮ್.

ಕ್ಕಾಯವಾದ ಮೂರಿಂದ್ರಿಯಗಳಿಂದಲೂ, "**ಶೆಯ್ಯಾದನ ಶೆಯ್ಯೋಮ್**" "ಮಾಡಬಾರದ್ದನ್ನೆಂದಿಗೂ ಮಾಡುವದಿಲ್ಲವು." **ಎನ್ನುಮ್ ಅವಱ್ಱಿಲ್** ಎಂದು ಹೇಳಿರುವದರಲ್ಲಿ, **ಪ್ರಧಾನಂ** - ಮುಖ್ಯವಾದುದು, **ಬ್ರಹ್ಮವಿದಪಚಾರಮ್** – ಪರಬ್ರಹ್ಮನನ್ನು ತಿಳಿದಿರುವವರ ವಿಷಯದಲ್ಲಿ ಅಪಚಾರವು. ಪರಬ್ರಹ್ಮವನ್ನು ಶಾಸ್ತ್ರವಿಧಿಪ್ರಕಾರ ಕರ್ಮಯೋಗಾದಿಗಳನುಷ್ಠಾನಮೂಲಕವಾಗಿ ಉಪಾಸನದ್ವಾರ ಸಾಕ್ಷಾತ್ಕರಿಸಿದವರು, ಅಥವಾ ಪ್ರಪನ್ನರಾಗಿ ಆಚಾರ್ಯಮೂಲಕವಾಗಿ ಉಪದೇಶದಿಂದ ಪರಬ್ರಹ್ಮಸ್ವರೂಪ ಸ್ವಭಾವೋಪಾಯ ಪುರುಷಾರ್ಥ ತದ್ವಿರೋಧಿಗಳನ್ನು ತಿಳಿದವರು. ಇಂತಹ ಎರಡು ವಿಧ ಪ್ರಪನ್ನರೂ ಬ್ರಹ್ಮವಿತ್ತುಗಳು ಇಂಥಾವರ ವಿಷಯದಲ್ಲಿ ಅಪಚಾರವು ಮನೋವಾಕ್ಕಾಯಗಳಿಂದಲೂ ಕೂಡದೆಂದು ಹೇಳಿರುತ್ತಾರೆ "**ತ್ರಸ್ಯಬ್ರಹ್ಮವಿದಾಗಸಃ**" "ಬ್ರಹ್ಮವಿತ್ತಿಗೆ ಎಲ್ಲಿ ಅಪರಾಧವಾಗುತ್ತೋ ಎಂದು ಭಯಪಡತಕ್ಕದ್ದೆಂದು" ಶ್ರೀ ದೇಶಿಕರವರೇ ಶಿಂಗಭೂಪಾಲನಿಗೆ ಬರೆದು ಕಳುಹಿಸಿದ ಉಪದೇಶದಲ್ಲಿ ಗರ್ಭೀಕರಿಸಿರುತ್ತಾರೆ.

"**ಶ್ರೀ ವಿಷ್ಣೋರವಮಾನನಾದ್ಗುರುತರಂ ಶ್ರೀವೈಷ್ಣವೋಲ್ಲಂಘನಂ**"

"**ನಿರ್ಧನಾಂಶ್ಚ ರತೋಲೋಕೇವೃತ್ತ್ಯರ್ಥಮಿಹ ವೈಷ್ಣವಾನ್ ।**
ನಾವಮನ್ಯೇತ ತ್ರೈಲೋಕ್ಯಂ ಪವಿತ್ರೀ ಕುರುತೇ ಹರಿಃ" ॥

ಎಂದರೆ "ಶ್ರೀ ವಿಷ್ಣುವಿಗೆ ಮಾಡುವ ಅವಮಾನಕ್ಕಿಂತ ಅವನ ಭಕ್ತರಿಗೆ ಮಾಡುವ ಅವಮಾನವು ಗುರುತರಪಾತಕವೆಂದೂ, ಧನಹೀನರಾಗಿ ಜೀವನಕ್ಕಾಗಿ ಅಲ್ಲಲ್ಲಿ ಸಂಚರಿಸುತ್ತಿರುವ ವೈಷ್ಣವರನ್ನು ಅವಮಾನಪಡಿಸಬೇಡ, ಏಕೆಂದರೆ ಶ್ರೀಹರಿಯು ಅವರ ಮೂಲಕವಾಗಿ ಲೋಕವನ್ನು ಪರಿಶುದ್ಧಮಾಡುವನು" ಎಂದೂ

"**ಚಣ್ಡಾಲಮಪಿಮದ್ಭಕ್ತಂ ನಾವಮನ್ಯೇತ ಬುದ್ಧಿಮಾನ್ ।**
ಅವಮಾನಾತ್ಪತತ್ಯೇವ ರೌರವೇ ನರಕೇ ಹಿ ಸಃ"

"ನನ್ನ ಭಕ್ತನಾದವನು ಚಂಡಾಲನಾದರೂ, ಅವನನ್ನೂ ಸಹ ವಿವೇಕಿಯಾದವನು ಅವಮಾನಮಾಡಬಾರದು, ಅವಮಾನಮಾಡಿದುದಾದರೆ ರೌರವಾದಿ ನರಕವನ್ನು ಹೊಂದುವನು. (ಇದು ಸರ್ವೇಶ್ವರನ ವಾಕ್ಯವು)" ಎಂದೂ,

---

(೧) ತಿರಪ್ಪಾವೈ ೨

(೧) "ಬ್ರಾಹ್ಮಣಾನಾಂ ಪರಿಭವಾತ್ಪರಿವಾದಾಚ್ಚ ಭಾರತ ।
ಕುಲಾನ್ಯಕುಲತಾಂ ಯಾನ್ತಿ ನ್ಯಾಸಾಪಹರಣೇನಚ"

ಓ ಧೃತರಾಷ್ಟ್ರನೇ ಕೇಳು ಎಂದು ವಿದುರನು ಹೇಳುತ್ತಾನೆ. ಬ್ರಾಹ್ಮಣರನ್ನು (ಬ್ರಹ್ಮವಿತ್ತುಗಳನ್ನು) ಅವಮಾನಪಡಿಸುವದರಿಂದಲೂ ನಿಂದಿಸುವದರಿಂದಲೂ, ಅವರು ನಂಬಿಕೆಯಿಂದಿಟ್ಟಿದ್ದದನ್ನು ಅಪಹರಿಸುವದರಿಂದಲೂ, ಕುಲಗಳೇ ಕ್ಷಯವನ್ನು ಹೊಂದುತ್ತವೆ ಎಂದೂ, "**ಸಾಧುಸಜ್ಜನ ಸಂತಾಪಃ ಕಿಮಾಶ್ಚರ್ಯಂ ಕುಲಕ್ಷಯೇ**" ಎಂದೂ ಹೇಳಿರುವಾಗ, ಬ್ರಹ್ಮವಿತ್ತುಗಳಾಗಿರುವ ಶ್ರೀಮಹಾವಿಷ್ಣುವಿನ ಭಕ್ತರನ್ನು ಅವಮಾನಗೊಳಿಸಬಹುದೋ? ಇದು ಬುದ್ಧಿಪೂರ್ವಕವಾಗಿ ಮಾಡಲ್ಪಟ್ಟರೆ ಭಗವನ್ನಿಗ್ರಹಕ್ಕೆ ಕಾರಣವಾಗುತ್ತದೆ. ಈ ವಿಷಯಗಳೆಲ್ಲಾ ಮುಂದೆ ಪ್ರಭಾವ ರಕ್ಷಾಧಿಕಾರದಲ್ಲಿ ಉಪಪಾದಿತವಾಗಿರುತ್ತವೆ. ಇಂತಹ ಭಾಗವತಾಪರಾಧಕ್ಕೆ ಶಾಂತಿ ಹೇಗೆ ಎಂಬಂಶವು ಅಂಬರೀಷೋಪಾಖ್ಯಾನದಲ್ಲಿ ಉಪಪಾದಿತವಾಗಿರುತ್ತದೆ. ಮಹಾಭಕ್ತಶಿರೋಮಣಿಯಾಗಿ ಪರಮಭಾಗವತೋತ್ತಮನಾದ ಅಂಬರೀಷ ಮಹಾರಾಜನ ದ್ವಾದಶೀವ್ರತಾನುಷ್ಠಾನಕ್ಕೆ ದುರ್ವಾಸ ಋಷಿಯು ವಿಘ್ನವನ್ನುಂಟುಮಾಡಿ ಮಹಾಕೋಪಗೊಂಡು ರಾಜನನ್ನು ನಿಂದಿಸಿ ಜಟೆಯಿಂದ ರಾಜನ ನಾಶಕ್ಕಾಗಿ ಒಂದು ಶಕ್ತಿಯನ್ನು ನಿರ್ಮಿಸಿ, ಹೀಗೆಲ್ಲಾ ಮಾನಸಿಕವಾಚಕಕಾಯಿಕ ಭಾಗವತಾಪರಾಧಗಳನ್ನು ಮಾಡಿದುದರಿಂದ ಭಗವನ್ನಿಗ್ರಹವು ಸುದರ್ಶನಚಕ್ರರೂಪದಲ್ಲಿ ಈ ಋಷಿಯನ್ನು ಅಟ್ಟಿಸಿಕೊಂಡು ಬರಲು; ಆಗ ಋಷಿಯು ಶಂಕರನಲ್ಲಿಗೆ ಓಡಿಹೋಗಿ ಸಹಾಯವಂ ಪ್ರಾರ್ಥಿಸಲು; ಆಗ ಸರ್ವಜ್ಞನಾದ ರುದ್ರನು ಸರ್ವೇಶ್ವರನ ಕೋಪಕ್ಕೆ ಪ್ರತಿಯಾಗಿ ಮಾಡಲು ಅಶಕ್ತನೆಂದು ಹೇಳಿ, ಇಂತಹ ಭಾಗವತಾಪಚಾರಕ್ಕೆ ಪ್ರಾಯಶ್ಚಿತ್ತವು (೧) "**ತಮೇವ ಶರಣಂ ಯಾಹಿ ಹರಿಸ್ತೇಶಂ ವಿಧಾಸ್ಯತಿ**" ಎಂದು ಶರಣಾಗತಿ ಮಾಡು ಶ್ರೀ ಹರಿಯು ನಿನಗೆ ಸುಖವನ್ನುಂಟುಮಾಡುವನೆಂದು ಉಪದೇಶಿಸಿದನು. ಬುದ್ಧಿಪೂರ್ವಕೃತ ಬ್ರಹ್ಮವಿದಪಚಾರಮೊದಲಾದ ಉತ್ತರಾಘಕ್ಕೆ ಪ್ರಾಯಶ್ಚಿತ್ತವು ಪುನಶ್ಶರಣಾಗತಿಯೆಂದು ಇಲ್ಲಿ ಹೇಳಲ್ಪಟ್ಟಿತು. ಅನಂತರ ದೂರ್ವಾಸನು ಶ್ರೀ ಮಹಾವಿಷ್ಣುವನ್ನು ಸಾರಿ ರಕ್ಷಿಸಬೇಕೆಂದು ಯಾಚಿಸಲು; ಅದಕ್ಕೆ ಶ್ರೀ ಮಹಾವಿಷ್ಣುವು (೧) **ಅಹಂ ಭಕ್ತಪರಾಧೀನೋಹ್ಯಸ್ವತಂತ್ರ ಇವದ್ವಿಜ** " "ತಾನು ಭಕ್ತಪರಾಧೀನನಾದ ಪ್ರಯುಕ್ತ" ನಾನೊಂದು ಸುಲಭೋಪಾಯರೂಪವಾದ ಪ್ರಾಯಶ್ಚಿತ್ತವನ್ನುಪದೇಶಿಸುವೆನು, ಏನೆಂದರೆ :—

೨. "**ಬ್ರಹ್ಮಂಸ್ತದ್ಗಚ್ಛ ಭದ್ರಂತೇ ನಾಭಾಗತನಯಂನೃಪಮ್ ।
ಕ್ಷಮಾಪಯ ಮಹಾಭಾಗತತಶ್ಶಾನ್ತಿರ್ಭವಿಷ್ಯತಿ**"

---

(೧) ಭಾರತ, ಉದ್ಯೋಗ ೩೬.೨೭ (೨) ಭಾಗ ೯.೪

"ಓ ಬ್ರಾಹ್ಮಣನೇ ನಾಭಾಗನ ಮಗನಾದ ಅಂಬರೀಷನಲ್ಲಿಗೆ ಹೋಗಿ ಆತನ ಕ್ಷಮಾಪಣೆಯನ್ನು ಬೇಡಿದುದಾದರೆ ನಿನಗೆ ಮಂಗಳವಾಗುತ್ತದೆಂದು ಹೇಳಲು ಹಾಗೆಯೇ ದೂರ್ವಾಸರು ನಡೆದುದರಿಂದ ಚಕ್ರದಿಂದುಂಟಾದ ಭಯವು ನಿವೃತ್ತಿಯಾಯಿತು. ಆದುದರಿಂದ ಬುದ್ಧಿಪೂರ್ವಕ ಭಾಗವತಾಪಚಾರಕ್ಕೆ ಆ ಭಾಗವತರ ಕ್ಷಮಾಪಣೆಯೇ ಪ್ರಾಯಶ್ಚಿತ್ತವು. ಆ ಭಾಗವತರಿಲ್ಲದಿದ್ದರೆ ಅಪರಾಧನಿವೃತ್ತಿಗಾಗಿ ಪ್ರಪತ್ತಿ ಯಾಗವನ್ನು ಆಚಾರ್ಯಮುಖೇನ ನಡಿಸತಕ್ಕದ್ದು.

ಹೀಗೆ ಭಾಗವತಾಪರಾಧಕ್ಕೆ ಪರಮೌಷಧವು ಭಾಗವತನಲ್ಲಿ ಕ್ಷಮಾಪಣೆಯನ್ನು ಬೇಡುವದೆಂಬಂಶವು ಶ್ರೀ ಸುಗ್ರೀವ ಲಕ್ಷ್ಮಣ ಸಂವಾದದಲ್ಲಿ ಬಹು ಸ್ವಾರಸ್ಯವಾಗಿ ಮಹರ್ಷಿಯಿಂದ ಉಪಪಾದಿತವಾಗಿರುತ್ತದೆ:—ಸುಗ್ರೀವನು ಸರ್ವೇಶ್ವರನಾದ ಶ್ರೀರಾಮನಿಗೆ ಪರಮ ಸುಹೃತ್ತು. "**ಸುಹೃದೋನಾಭವ ದ್ವಿಧಾಃ**" (ರಾಮಾ ಯುದ್ಧ) ನಿನ್ನಂತಹ ಎಂದರೆ ಸುಗ್ರೀವನಂತಹ ಮಿತ್ರರು ಪರಮಸುಕೃತಿಗಳಿಗಲ್ಲದೆ ಎಲ್ಲರಿಗೂ ದೊರಕಲಾರರೆಂದು ಶ್ರೀರಾಮನೇ ಮುಂದೆ ಹೇಳುತ್ತಾನೆ. ಇಂತಹ ಭಗವದ್ಭಕ್ತನು ಏನೋ ಸ್ವಲ್ಪ ಅಜ್ಞಾನದಿಂದ ಸೀತಾನ್ವೇಷಣ ವಿಷಯದಲ್ಲಿ ಸ್ವಲ್ಪ ಕಾಲವಿಳಂಬ ಉಂಟಾದುದರಿಂದ ತನಗೆ ಭಗವದಪಚಾರಪ್ರಾಪ್ತವಾಯಿತೆಂದು ತಿಳಿದು. ಆ ಭಗವದಪಚಾರಕ್ಕಾಗಿ ಭಗವದೇಕಾಂತಿಯಾದ ಲಕ್ಷ್ಮಣನಲ್ಲಿ ಕ್ಷಮಾಪಣೆಯಂ ಬೇಡುವದರಿಂದ ಭಗವನ್ನಿಗ್ರಹ ಶಾಂತಿಯುಂಟಾಗುತ್ತದೆಂದು ಜ್ಞಾನಿಯಾದ ಆಂಜನೇಯನಿಂದ

"ಕೃತಾಪರಾಧಸ್ಯಹಿತೇನಾನ್ಯಂ ಪಶ್ಯಾಮ್ಯಹಂಕ್ಷಮಂ ।
ಅಂತರೇಣಾಂಜಲಿಂ ಬಧ್ವಾ ಲಕ್ಷ್ಮಣಸ್ಯ ಪ್ರಸಾದನಾತ್"

ಭಗವದಪರಾಧಮಾಡಿದ ನಿನಗೆ, ಪರಮಭಾಗವತನಾದ ಲಕ್ಷ್ಮಣನಿಗೆ ಅಂಜಲಿಯನ್ನು ಮಾಡಿ ಕ್ಷಮಾಪಣೆಯನ್ನು ಬೇಡಿ ಆತನನ್ನು ಪ್ರಸನ್ನನಾಗಿ ಮಾಡಿಕೊಳ್ಳದ ಹೊರತು ಬೇರೆ ಇನ್ನು ಯಾವ ಯೋಗ್ಯವಾದ ಉಪಾಯವು ನನಗೆ ತೋಚುವದಿಲ್ಲವು ಎಂದು ಹಿತೋಪದೇಶವನ್ನು ಹೊಂದಿದವನಾಗಿ,

"**ಯದಿಕಿಂಚಿದತಿಕ್ರಾಂತಂ ವಿಶ್ವಾಸಾತ್ಪ್ರಣಯೇನವಾ ।**
ಪ್ರೇಷ್ಯಸ್ಯ ಕ್ಷಮಿತವ್ಯಂ ಮೇ ನ ಕಶ್ಚಿನ್ನಾಪರಾಧ್ಯತಿ"

"ಹೀಗೆ ಸ್ವಲ್ಪ ಅತಿಕ್ರಮಿಸಿ ನಡೆದ ದಾಸನ ಅಪರಾಧವನ್ನು ಕ್ಷಮಿಸಬೇಕೆಂದೂ ದೋಷಿಗಳಲ್ಲದವರು ಯಾರಿದ್ದಾರೆಂದು ಹೇಳಿ ಪ್ರಾರ್ಥಿಸಿ ಭಗವದಪಚಾರವನ್ನು ಕಳೆದುಕೊಂಡನು. ಆದರೆ ತನ್ನ ಅಣ್ಣನ ಪಕ್ಷವನ್ನು ವಹಿಸಿ ಭಾಗವತೋತ್ತಮನಾದ ಸುಗ್ರೀವನನ್ನು "**ಅನಾರ್ಯ**"ನೆಂದೂ, "**ಕೃತಘ್ನ**"ನೆಂದೂ. "**ಮಿಥ್ಯಾವಾದೀ**" ಎಂದೂ, "**ದುರಾತ್ಮ**"ನೆಂದೂ ಹೀಗೆಲ್ಲಾ ತುಂಬಾ ಕೋಪದಿಂದ ನಿಂದಿಸಿ ಭಾಗವತಾಪಚಾರಕ್ಕೆ ತಾನು ಗುರಿಯಾದೆನೆಂಬುವದನ್ನು ಸುಗ್ರೀವ

ಪುರುಷಾರ್ಥಸಾಗರಮ್ ವಱ್ಱುದಲ್ ವಱೈಯಿಡುದಲ್ ಶೆಯ್ಯಾವೈ ಕ್ಕಾಹ ಕರಣತ್ರಯತ್ತಾಲುಂ ಕರ್ತವ್ಯಙ್ಗಳಿಲ್ ಪ್ರಧಾನಂ ಭಗವತ್ಕೈ

ಕ್ಷಮಾಪಣಾನಂತರದಲ್ಲಿ, ಲಕ್ಷ್ಮಣನು ತಿಳಿದವನಾಗಿ, ಅಂತಹ ಭಾಗವತಾಪ ಚಾರಕ್ಕೆ ಆ ಭಾಗವತನ ಕ್ಷಮಾಪಣೆಯೇ ಪ್ರಾಯಶ್ಚಿತ್ತವೆಂದು ಭಾವಿಸಿ ಹೇಳುತ್ತಾನೆ—

"ಯಚ್ಚ ಶೋಕಾಭಿಭೂತಸ್ಯ ಶ್ರುತ್ವಾ ರಾಮಸ್ಯ ಭಾಷಿತಂ।
ಮಯಾ ತ್ವಂ ಪರುಷಾಣ್ಯುಕ್ತಸ್ತಚ್ಚ ತ್ವಂ ಕ್ಷಂತುಮರ್ಹಸಿ॥"

ಮಹಾಶೋಕಪೀಡಿತನಾದ ಅಣ್ಣನಾದ ಶ್ರೀರಾಮನ ದೈನ್ಯವಾದ ಭಾಷಣ ವನ್ನು ಕೇಳಿದವನಾಗಿ, ನಾನು ನಿನ್ನನ್ನು ಕುರಿತು ಯಾವ ತುಂಬಾ ಕರ್ಣಕಠೋರ ವಾಕ್ಯಗಳನ್ನಾಡಿದೆನೋ, ಅವೆಲ್ಲವನ್ನೂ ಓ ಸುಗ್ರೀವನೇ ನೀನು ಕೃಪಯಾ ಕ್ಷಮಿಸತಕ್ಕದ್ದೆಂದು ಬೇಡಿ, ಹೀಗೆ ಭಾಗವತಾಪಚಾರಕ್ಕೆ ಭಾಗವತ ಕ್ಷಮಾಪಣೆಯೇ ಒಳ್ಳೇ ಚಿಕಿತ್ಸೆಯು ಎಂಬ ಶಾಸ್ತ್ರಮರ್ಯಾದೆಯನ್ನು ಪ್ರಕಟಿಸಿದನು. ಇವೆಲ್ಲವೂ ಅಪರಾಧಪರಿಹಾರಾಧಿಕಾರದಲ್ಲಿ ಮುಂದೆ ಶ್ರೀ ದೇಶಿಕರವರೇ ಬಹು ಚನ್ನಾಗಿ ಉಪಪಾದಿಸಿರುತ್ತಾರೆ.

ಹೀಗೆ ತ್ರಿಕರಣಗಳಿಂದಲೂ ತ್ಯಾಜ್ಯವಾದುದು ಭಗವದಪಚಾರವೆಂದು ಹೇಳಿ ಈ ಮುಂದಿನ ವಾಕ್ಯದಿಂದ ತ್ರಿಕರಣಗಳಿಂದಲೂ ಉಪಾದೇಯವಾದುದ ರಲ್ಲಿ ಮುಖ್ಯವಾದುದು, ಆಚಾರ್ಯಾದಿ ಭಾಗವತ ಕೈಂಕರ್ಯವೆಂದುಪದೇಶಿಸುತ್ತಾರೆ-

ಪುರುಷಾರ್ಥಸಾಗರಮ್ - ಪುರುಷಾರ್ಥವಾದರೋ ಮೋಕ್ಷಪ್ರಾಪ್ತಿಯೊಂ ದಿಗೆ ಸ್ವಾಮಿಕೈಂಕರ್ಯವು, ಇಂತಹ ಸಾಗರವು, **ವಱ್ಱುದಲ್** - ನಿಶ್ಶೇಷವಾಗಿ ಶೋಷಿಸಿ ಹೋಗುವದೇನು, **ವಱೈಯಿಡುದಲ್** - ಕಡಿಮೆಯಾಗೋಣವೇನು ಇವುಗಳು **ಶೆಯ್ಯಾವೈಕ್ಕಾಹ** - ಉಂಟಾಗದಿರುವದಕ್ಕಾಗಿ, **ಕರಣತ್ರಯ ತ್ತಾಲುಮ್** - ಮನೋವಾಕ್ಕಾಯವೆಂಬ ಮೂರು ಇಂದ್ರಿಯಗಳಿಂದಲೂ, **ಕರ್ತವ್ಯಙ್ಗಳಿಲ್** - ಮಾಡತಕ್ಕವುಗಳಲ್ಲಿ, **ಪ್ರಧಾನಂ** - ಮುಖ್ಯವಾದುದ ಯಾವುದೆಂದರೆ:—**ಭಗವತ್ಕೈಙ್ಕರ್ಯತ್ತಿಲ್ ಎಲ್ಲೈನಿಲಮಾಯ್** - ಭಗವತ್ಕೈ ಙ್ಕರ್ಯದಲ್ಲಿನ ಅಚೇದಡವಾಗಿರುವ ಎಂದರೆ ಭಗವತ್ಕೈಙ್ಕರ್ಯದ ಪರಾಕಾಷ್ಠೆಯಾದ, ಭಗವತ್ಕೈಙ್ಕರ್ಯದ ಪರಮೋತ್ಕೃಷ್ಟಾಂಶವು ಎಂಬ ಭಾವವು, **ಶಾಸ್ತ್ರಾನುಜ್ಞಾ ತಮಾನ** - ಶಾಸ್ತ್ರಸಮ್ಮತವಾದ, **ಆಚಾರ್ಯಾದಿ ಭಾಗವತ ಕೈಙ್ಕರ್ಯಮ್** - ತಮ್ಮ ಸ್ವಂತ ಆಚಾರ್ಯರೇ ಮೊದಲಾದ ಭಾಗವತರುಗಳ ಕೈಙ್ಕರ್ಯವು. ಇಲ್ಲಿ ಆದಿ

ಙ್ಕರ್ಯತ್ತಿಲ್ ಎಲ್ಲೈನಿಲವಾಯ್ ಶಾಸ್ತ್ರಾನುಜ್ಞಾತವಾನ ವಾಚಾರ್ಯಾದಿ ಭಾಗವತಕೈಙ್ಕರ್ಯ್ಯಮ್.

ರಹಸ್ಯತ್ರಯೇ ಉತ್ತರಕೃತ್ಯಾನುಸಂಧಾನ ಸ್ಥಲಪ್ರದರ್ಶನಂ

ಸ್ವಯಂ ಪ್ರಯೋಜನವಾನ ಇವ್ವುತ್ತರ ಕೃತ್ಯಮುಮ್ ರಹಸ್ಯ

ಪದದಿಂದ ಆಳ್ವಾರ್ ಆಚಾರ್ಯರುಗಳು ಮತ್ತು ಸ್ವಾಚಾರ್ಯರ ಆಚಾರ್ಯಪ್ರಾಚಾರ್ಯರೂ ಸಹ ಹೇಳಲ್ಪಟ್ಟರು. ಭಗವತ್ಕೈಙ್ಕರ್ಯದ ಪರಾಕಾಷ್ಠೆಯು ಭಾಗವತ ಕೈಙ್ಕರ್ಯವು; ಈ ಭಾಗವತ ಕೈಙ್ಕರ್ಯವು ಇಲ್ಲವಾದರೆ ಭಗವತ್ಕೈಙ್ಕರ್ಯವು ಸಿದ್ಧಿಸದು ಅಥವಾ ಅದಕ್ಕೆ ನ್ಯೂನತೆಯುಂಟಾದೀತು; ಏಕೆಂದರೆ ಪುರುಷಾರ್ಥವೇ ಭಗವತ್ಕೈಙ್ಕರ್ಯರೂಪವಾದುದು, ಯಾವಾಗ ಭಾಗವತ ಕೈಙ್ಕರ್ಯವಿಲ್ಲವೋ ಆಗ ತನ್ನ ಕೈಙ್ಕರ್ಯವನ್ನೂ ಸರ್ವೇಶ್ವರನು ಪರಿಗ್ರಹಿಸನು ಎಂಬ ಭಾವವು. ಇದು ತಮ್ಮ ಸ್ವಂತವಾದ ಅಭಿಪ್ರಾಯವೆಂದು ತಿಳಿಯಕೂಡದು; ಶಾಸ್ತ್ರ ಸಮ್ಮತವಾದುದು ಎಂದು ತಿಳಿಸುವದಕ್ಕಾಗಿ "ಶಾಸ್ತ್ರಾನುಜ್ಞಾತವಾನ'' ಎಂದು ಪ್ರಯೋಗಿಸಿರುತ್ತಾರೆ. ಈ ಪ್ರಮಾಣಗಳನ್ನು ಮುಂದೆ ಪುರುಷಾರ್ಥಕಾಷ್ಠಾಧಿಕಾರದಲ್ಲಿ ಉದಾಹರಿಸುತ್ತಾರೆ.

ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು " ಶ್ರೀಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತಮಂ" ಎಂದು ಹೇಳಲ್ಪಟ್ಟಿತು.

ರಹಸ್ಯತ್ರಯದಲ್ಲಿ ಉತ್ತರ ಕೃತ್ಯವನ್ನು ಗ್ರಹಿಸುವ ಸ್ಥಳವು.

ಸ್ವಯಂಪ್ರಯೋಜನವಾನ - ಬೇರೆ ಇನ್ನು ಯಾವ ಪ್ರಯೋಜನವೂ ಇಲ್ಲದ ಈ ಉತ್ತರ ಕೃತ್ಯವು, ಎಂದರೆ ಉತ್ತರ ಕೃತ್ಯವು ಮುಖ್ಯವಾಗಿ ಕೈಙ್ಕರ್ಯ ರೂಪವಾದುದು, ಆದುದರಿಂದ ಅದಕ್ಕೆ ಬೇರೆ ಯಾವುದೂ ಪ್ರಯೋಜನವಿಲ್ಲವೆಂಬ ಭಾವವು; **ರಹಸ್ಯತ್ರಯತ್ತಿಲ್** - ಶ್ರೀಮದ್ರಹಸ್ಯತ್ರಯದಲ್ಲಿ, **ಫಲಪ್ರತಿಪಾದಕಸ್ಥಳಂಗಳಿಲೆ** ಫಲವನ್ನು ತೋರಿಸುವ ಸ್ಥಳಗಳಲ್ಲಿ, **ಅನುಸಂಧೇಯಂ** - ಭಾವಿಸತಕ್ಕದ್ದು. ಫಲವೂ ಭಗವತ್ಕೈಙ್ಕರ್ಯರೂಪವಾಗಿರುವದರಿಂದಲೂ, ಉತ್ತರ ಕೃತ್ಯವೂ ಮುಖ್ಯವಾಗಿ ಭಗವದ್ಭಾಗವತಕೈಙ್ಕರ್ಯರೂಪವಾದುದರಿಂದಲೂ, ಫಲ ಪ್ರತಿಪಾದಕ ಸ್ಥಳದಲ್ಲಿ ಉತ್ತರಕೃತ್ಯವನ್ನು ಗ್ರಹಿಸಬಹುದೆಂದು ಹೇಳಲ್ಪಟ್ಟಿತು.

ತ್ರಯುತ್ತಿಲ್ ಫಲಪ್ರತಿಪಾದಕಙ್ಗಳಾನ ಪ್ರದೇಶಙ್ಗಳಿಲೆ ಅನುಸಂಧೇಯುವೞ್.

ವಿಣ್ಣವರ್ ವೇಣ್ಡ ವಿಲಕ್ಕಿನ್ರಿ ಮೇವು ಮಡಿಮೈ ಯೆಲ್ಲಾಮ್
ಮಣ್ಣುಲಗಿತ್ತಿಲ್ ಮಕಿೞ್‌ನ್ದಡೈಕಿನ್ರನರ್, ವಣ್ಡುವರೈ,

ಹಿಂದೆ ಅರ್ಥಪಂಚಕಾಧಿಕಾರದಲ್ಲಿ ಫಲಪ್ರತಿಪಾದಕ ಸ್ಥಳಗಳು ಎಲ್ಲಿ ಅನುಸನ್ಧೇಯ ವೆಂಬುವದು ಸೂಚಿಸಲ್ಪಟ್ಟಿರುತ್ತದೆ. (೩೮೫ ನೆಯ ಪುಟವನ್ನು ನೋಡಿ) ಇವುಗಳು ಮುಖ್ಯವಾಗಿ ಮೂಲಮಂತ್ರದ್ವಯಗಳಲ್ಲಿರುವ **ನಾರಾಯಣಾಯ** ಎಂಬ ಪದದ ಚತುರ್ಥಿಯಲ್ಲಿ ಅನುಸನ್ಧೇಯವು.

ಈ ಉತ್ತರ ಕೃತ್ಯವು ಮುಖ್ಯವಾಗಿ ಭಗವದ್ಭಾಗವತ ಕೈಙ್ಕರ್ಯರೂಪವಾದು ದರಿಂದ ನಿತ್ಯಸೂರಿಗಳಿಗೆ ಪರಮಪದದಲ್ಲಿ ಲಭ್ಯವಾದ ಕೈಙ್ಕರ್ಯಗಳೇ ಈ ಪ್ರಪನ್ನರಿಗೂ ಈ ಲೀಲಾವಿಭೂತಿಯಲ್ಲೇ ಲಭ್ಯವಾಗಿರುವದರಿಂದ ಈ ಪ್ರಪನ್ನರು ನಿತ್ಯಸೂರಿಗಳಿಗೆ ಸಮಾನರು ಎಂದು ತಿಳಿಸುತ್ತಾರೆ:—ಆ ಕೈಙ್ಕರ್ಯಗಳಲ್ಲಿ ವಾಚಿಕ ಕೈಙ್ಕರ್ಯವಾದ ದ್ರಾವಿಡ ವೇದವೆನಿಸುವ ಆಳ್ವಾರ್ ಶ್ರೀ ಸೂಕ್ತಿಗಳನ್ನು ಗಾನದಿಂದ ಹಾಡಿ ಅದರರ್ಥವನ್ನು ಗ್ರಹಿಸಿದ ಮಹಿಮೆಯು ನಿತ್ಯರಿಗೆ ಸಮಾನರೆಂದು ಅಪ್ಪಣೆ ಕೊಡಿಸುತ್ತಾರೆ.

ಅರ್ಥ—ವಣ್ಡುವರೈ, ವಣ್ - ವಿಲಕ್ಷಣವಾದ, **ತುವರೈ** - ದ್ವಾರಕೆಯಲ್ಲಿ ಎಂದರೆ ಅಲ್ಲಿ ಬಿಜಮಾಡಿಸಿರುವ, **ಕಣ್ಣನ್** - ಶ್ರೀ ಕೃಷ್ಣನು, **ಅಡೈಕ್ಕಲಮ್ ಕೊಳ್ಳ** - ರಕ್ಷ್ಯವಸ್ತುವೆಂದು ಭರನ್ಯಾಸ ಸ್ವೀಕಾರವನ್ನು **ಮಾಡಲಾಗಿ,** ಆದುದರಿಂದಲೇ **ಕಡನ್ಗಳ್ ಕಳನ್ದ** - ವೇದಾರ್ಥ ಪಿತೃಋಣಗಳನ್ನು ಕಳೆದುಕೊಂಡಿರುವ, **ನಮ್** - ನಮ್ಮ, ಇದು **ತಮಿೞ್‌ವೇದ** ಎಂಬುವದಕ್ಕಾಗಲಿ ಅಥವಾ **ಭಗವರ್‌ಗಳೇ** ಎಂಬುವದಕ್ಕಾಗಲಿ ವಿಶೇಷಣವಾಗಿ ಭಾವಿಸಬಹುದು; **ಪಣ್ಣುರುಮ್** - **ಪಣ್** – ಗಾನಭೇದಗಳು, **ಅಮರ್** - ತುಂಬಿರುವ, **ತಮಿೞ್‌ವೇದಂ** - ದ್ರಾವಿಡವೇದವೆನಿಸುವ ಆಳ್ವಾರ್ ದಿವ್ಯಸೂಕ್ತಿಗಳನ್ನು, **ಅರಿನ್** - ಗಾನರೂಪದಲ್ಲಿ ಹಾಡುವದೇನು, ಅದರ ಸ್ವಾರಸ್ಯಾರ್ಥವನ್ನು ಗ್ರಹಿಸುವದೇನು ಇವುಗಳನ್ನು ತಿಳಿದ, **ಭಗವರ್‌ಗಳ್** - ಭಗವಚ್ಛಬ್ದವಾಚ್ಯರೆನಿಸಲು ಅರ್ಹರಾದ ಪ್ರಪನ್ನರು **ವಿಣ್ಣವರ್** - ನಿತ್ಯಮುಕ್ತರುಗಳಂತೆ, ವಿಣ್ ಎಂದರೆ ಪರಮಪದ ಅಲ್ಲಿ ವಾಸಮಾಡುವವರು ವಿಣ್ಣವರ್. **ವೇಣ್ಡ** - ಅಪೇಕ್ಷಿಸಲ್ಪಟ್ಟ, **ವಿಲಕ್ಕಿನ್ರಿ** - ವಿಘ್ನಗಳೊಂದೂ ಇಲ್ಲದೆ ಎಂದರೆ ನಿರಂತರವಾಗಿ, **ಮೇವುಮ್** – ಪ್ರೀತಿಯಿಂದ ಮಾಡುವ, **ಅಡಿಮೈಯೆಲ್ಲಾಂ** - ಕೈಙ್ಕರ್ಯಗಳನ್ನೆಲ್ಲಾ, **ಮಣ್ಣುಲಕತ್ತಿಲ್** -

ಕಣ್ಣನಡ್ಯೈಕ್ಕಲವುಮ್ ಕೊಳ್ಳಕ್ಕಡೞಗಳ್ ಕಳ[illegible]ಯುನವುಮ್
ಪಣ್ಣುಮರುನ್ತುಮಿಳ್ ವೇದ ಮುರಿನ್ದು ಭಗವರ್ಗಳೇ ॥

ಈ ಕರ್ಮಭೂಮಿಯಲ್ಲೇ, **ಮಗಿಳ್‌ನ್ದು** - ತುಂಬಾ ಪ್ರೀತಿಯಿಂದ, **ಅಡಗಿನ್ರನರೇ** - ಹೊಂದಿರುವರಲ್ಲವೇ. ದಿವ್ಯ ವೈಕುಂಠದಲ್ಲಿ ನಿತ್ಯಮುಕ್ತರು ಶ್ರಿಯಃಪತಿಗೆ ಮಾಡುವ ಕೈಙ್ಕರ್ಯಗಳ ಹಾಗೆ ಈ ಪಾಪಭೂಯಿಷ್ಠವಾದ ಲೋಕದಲ್ಲೂ ನಮ್ಮ ಪ್ರಪನ್ನರಾದ ಮಹಾನುಭಾವರು ತತ್ಸದೃಶವಾದ ಕೈಙ್ಕರ್ಯಗಳನ್ನು ಮಾಡುತ್ತಾರೆಂಬ ಭಾವವು.

ತಾತ್ಪರ್ಯ - ನಿತ್ಯಮುಕ್ತರುಗಳು ಪರಮಪದದಲ್ಲಿ ಹೇಗೆ ಕೈಙ್ಕರ್ಯಗಳನ್ನು ಎಸಗುವರೋ ಹಾಗೆಯೇ ನಮ್ಮ ಕೃತಕೃತ್ಯರಾದ ಪ್ರಪನ್ನರು ಇಲ್ಲಿಯೂ ನಡಿಸುವರು ಎಂದು ಹೇಳುತ್ತಾರೆ. ಆದುದರಿಂದ ಕೃತಕೃತ್ಯರ ಸ್ಥಿತಿಯು ನಿತ್ಯಮುಕ್ತರುಗಳ ಸ್ಥಿತಿಗೇನೂ ಕಮ್ಮಿಯಾದುದಲ್ಲವು ಎಂದು ಹೇಳಲ್ಪಟ್ಟಿತು. ಆದರೆ ಅಲ್ಲಿನ ಕೈಙ್ಕರ್ಯಕ್ಕೂ ಇಲ್ಲಿನ ಕೈಙ್ಕರ್ಯಕ್ಕೂ ಸ್ವಲ್ಪ ವೈಲಕ್ಷಣ್ಯವುಂಟೆಂದು ಹೇಳುತ್ತಾರೆ. ಅಲ್ಲಿನ ಕೈಙ್ಕರ್ಯಗಳಿಗಾದರೋ ಏನೊಂದೂ ವಿಘ್ನಗಳಿಲ್ಲದೆ ನಿರಂತರವೂ ನಡೆಯುತ್ತವೆಂದು ವಿಲಕ್ಕನಿ ಎಂಬುವದರಿಂದ ಹೇಳಲ್ಪಟ್ಟಿತು. ಅದು ಶಾಶ್ವತವು, ಇಲ್ಲಿಯದು ಅಶಾಶ್ವತವು, ವಿಘ್ನಗಳಿಂದ ಪ್ರತಿಹತವಾದುದು. ಆದರೂ ಈ ದುಃಖಾಲಯವಾದ ಪ್ರಕೃತಿಮಂಡಲದಲ್ಲೇ ಈ ಕೈಙ್ಕರ್ಯಲಾಭವು ತುಂಬಾ ಶ್ಲಾಘ್ಯತರವಾದುದು ಎಂಬ ಭಾವವು ತೋರಿಬರುತ್ತದೆ. ಈ ಕೈಙ್ಕರ್ಯಗಳನ್ನು ಈ ಪ್ರಪನ್ನರು ಅನುಷ್ಠಿಸುತ್ತಿರುವುದು ಮಾಡದಿದ್ದರೆ ಸ್ವರೂಪಹಾನಿಯೂ ಪ್ರತ್ಯವಾಯವೂ ಉಂಟಾದೀತು ಎಂಬ ಬುದ್ಧಿಯಿಂದಲ್ಲವು; ತುಂಬಾ ಸಂತೋಷಚಿತ್ತರಾಗಿ, ಭಗವತ್ಪ್ರೀತ್ಯರ್ಥವಾಗಿ ಎಂದು ತಿಳಿಸುವದಕ್ಕಾಗಿ "**ಮಗಿಳ್‌ನ್ದು ಅಡೈಗಿನ್ರನರ್**" ಎಂದು ಪ್ರಯೋಗಿಸಿರುತ್ತಾರೆ. ಈ ಪ್ರಪನ್ನರು ಇನ್ನು ಎಂತವರೆಂದರೆ ಹೇಳುತ್ತಾರೆ :—ವಣ್ತುವರೈ ಕಣ್ಣನ್ ಸನ್ನಿಧಿಯಲ್ಲಿ ಭರನ್ಯಾಸವನ್ನು ಮಾಡಿ ಕೃತಕೃತ್ಯರಾಗಿರುವವರು ; ಇಲ್ಲಿ ದ್ವಾರಕೆಯು **ವಣ್ತುವರೈ** ಎಂದು ಹೇಳಲ್ಪಟ್ಟಿರುತ್ತದೆ. ಏಕೆಂದರೆ ದ್ವಾರಕೆಯು ಶ್ರೀಕೃಷ್ಣನಿಂದ ನಿರ್ಮಿತವಾದುದಾಗಿ ಸರ್ವಸಮೃದ್ಧಿಯಿಂದ ಕೂಡಿದುದಾಗಿ ಸರ್ವೈಶ್ವರ್ಯಭರಿತವಾದುದಾಗಿ, ಸುಧರ್ಮಾದಿ ಸರ್ವವಿಭೂತಿಸಂಯುಕ್ತವಾದುದಾಗಿದ್ದುದರಿಂದ **ವಣ್** ಎಂದರೆ ವಿಲಕ್ಷಣವಾದ ದ್ವಾರಕೆಯೆಂದು ಪ್ರಯೋಗಿಸಲ್ಪಟ್ಟಿರುತ್ತದೆ ಅಂತಹ ದ್ವಾರಕೆಯಲ್ಲಿ ಬಿಜಮಾಡಿಸಿರುವ ಶ್ರೀಕೃಷ್ಣನಲ್ಲಿ ಭರನ್ಯಾಸವನ್ನು ಮಾಡಿ ಕೃತಕೃತ್ಯರಾದವರು. ಆದುದರಿಂದಲೇ "**ದೇವರ್ಷಿಭೂತಾತ್ಮ ನೃಣಾಂ ಪಿತೄಣಾಂ ನ ಕಿಂಕರೋನಾಯ**

ನ್ಯೃಣೋ ಚ ರಾಜರ್" ಎಂದು ಹೇಳಿರುವಹಾಗೆ ದೇವರ್ಷಿ ಪಿತೃಋಣಗಳನ್ನು ಕಳೆದುಕೊಂಡವರು.(೧೪೬ನೆಯ ಪುಟ ನೋಡಿ) ಇನ್ನೂ ಎಂತವರೆಂದರೆ :- **ಪಣ್ಣಮರುನ್ತಮಿಳ್ ವೇದ ಮರಿನ್ದವರ್** ; ನಮ್ಮಾಳ್ವಾರ್ ಪ್ರಭೃತಿಗಳು ಅನುಗ್ರಹಿಸಿದ ತಿರುವಾಯ್ಮೊಳಿ ಮೊದಲಾದವುಗಳು **ವೇದಮ್ ತಮಿಳ್ ಶೆಯ್ದ** ಎಂದು ಹೇಳಿರುವಹಾಗೆ ವೇದಾರ್ಥಗಳೆಲ್ಲಾ **ತ್ರೈವರ್ಣಿಕರಿಗೆ** ಮಾತ್ರವೇ ಅಲ್ಲದೆ ಇತರರಿಗೂ ಕೂಡ ವೇದ್ಯವಾಗಲೆಂದು ಕೃಪಯಾ ತಮಿಳ್ ಭಾಷೆಯಲ್ಲಿ ಬರದವರು. ಅವು ತುಂಬಾ ಹೃದಯಂಗಮವಾಗಿರಲೆಂದು ದಿವ್ಯಗಾನ ಸಮೃದ್ಧಿಯಿಂದಲೂ ಭಕ್ತಿರಸಪೂರ್ಣತೆಯಿಂದಲೂ ಪಾಶುರರೂಪದಲ್ಲಿ ಅನುಗ್ರಹಿಸಿರುತ್ತಾರೆ. ಆದುದರಿಂದಲೇ "**ಪಣ್ ಅಮರುಮ್ ತಮಿಳ್ವೇದಂ**" ಎಂದು ಪ್ರಯೋಗಿಸಿರುತ್ತಾರೆ. ಮಹರ್ಷಿಯು ಶ್ರೀಮದ್ರಾಮಾಯಣವನ್ನು ಕುರಿತು

"ಪಾಠ್ಯೇಗೇಯೇ ಚ ಮಧುರಂ ಪ್ರಮಾಣೈಸ್ತ್ರಿಭಿರನ್ವಿತಂ ।
ಜಾತಿಭಿಸ್ಸಪ್ತಭಿರ್ಬದ್ಧಂ ತಂತ್ರೀಲಯಸಮನ್ವಿತಂ॥" (ರಾ. ಬಾ. ೪)

ಎಂದು ಹೇಳಿರುವ ಹಾಗೆ, ಪಠಿಸುವದಕ್ಕೂ ಗಾನದಿಂದ ಹಾಡುವದಕ್ಕೂ ಅತಿ ಮನೋಹರವಾದುದು ನಮ್ಮಾಳ್ವಾರ್ರವರ ತಿರುವಾಯ್ಮೊಳಿ ಮೊದಲಾದವು. ಶ್ರೀನಾಥಮುನಿಗಳು ತಿರುವಾಯ್ಮೊಳಿಯನ್ನು ದೇವಗಾನ ಸಮವಾದ ಗಾನದಿಂದ ಹಾಡಿ ತಮ್ಮ ಸೋದರಳಿಯರಿಗೆ ಗಾನರೂಪದಲ್ಲಿ ಉಪದೇಶಿಸಿ, ಪರಮಪದ ಏಕಾದಶೀಕಾಲದ ಅಧ್ಯಯನೋತ್ಸವದಲ್ಲಿ ಅತಿಮನೋಹರವಾಗಿ ಹಾಡುವ ಹಾಗೆ ಏರ್ಪಡಿಸಿದ್ದರು. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟು **ಪಣ್ ಅಮರುಮ್** ಎಂಬದಾಗಿ ಪ್ರಯೋಗಿಸಿರುತ್ತಾರೆ. ಇಂತಹ ತಮಿಳ್ವೇದವನ್ನು **ಅರಿನ್ದವರ್** ತಮ್ಮ ಪ್ರಪನ್ನರು ಎಂದು ಹೇಳುವದರಿಂದ ಸುಮ್ಮನೆ ಬಾಯಲ್ಲಿ ಸೇವೆಯು ಮಾಡುವ ಕಾಲದಲ್ಲಿ ಹೇಳುವ ಹಾಗೆ ಪಠಿಸುವದಲ್ಲವು. **ಶ್ರೀ ತಿರುಕ್ಕುರುಕೈಪ್ಪಿರಾನ್**ರವರನುಗ್ರಹಿಸಿದ ಆರಾಯಿರಪ್ಪಡಿ, ಶ್ರೀವಡಕ್ಕು ತಿರುವೀದಿಪ್ಪಿಳ್ಳೈಯವರನುಗ್ರಹಿಸಿದ ಈಡೆಂಬ ಮುಪ್ಪತ್ತಾರಾಯಿರಪ್ಪಡಿ ಗಳ ವ್ಯಾಖ್ಯಾನದಲ್ಲಿರುವ ಹಾಗೆ ಅರ್ಥ ಸ್ವಾರಸ್ಯವನ್ನು ಗ್ರಹಿಸಿದವರು. **ನಮ್** - ಎಂಬುವದನ್ನು **ತಮಿಳ್ವೇದ** ಎಂಬ ಪದಕ್ಕೆ ಅನ್ವಯಿಸಿದರೆ, ಶ್ರುತ್ಯರ್ಥವೆಲ್ಲಾ ಸರ್ವರಿಗೂ ಕೂಡ ವೇದ್ಯವಾಗುವ ಹಾಗೆ ಅನುಗ್ರಹಿಸಿರುವ ಭಾಗ್ಯವು ನಮ್ಮ ಶ್ರೀ ವೈಷ್ಣವ ಮಂಡಲಿಗೇ ವಿನಾ ಇತರರಿಗೆ ಅಂತಹ ಸುಕೃತವಿಲ್ಲವೆಂಬಭಿಪ್ರಾಯವೂ ತೋರಿಬರುತ್ತದೆ. **ನಮ್** - ಎಂಬುವದು **ಅರಿನ್ದ ಭಗವರ್**ಗಳಿಗೆ ಸಂಬಂಧಿಸಿದರೆ ಆಗ ಅಂತವರಲ್ಲಿರುವ ಇವರ ಆದರಾತಿಶಯವು **ನಮ್** ಎಂಬುವದರಿಂದಲೇ ತೋರಿಬರುತ್ತದೆ. ಇನ್ನೂ ಎಂತವರೆಂದರೆ:- **ಭಗವರ್**ಗಳು ಎಂದು ಹೇಳಿರುತ್ತಾರೆ. ಭಗವಚ್ಛಬ್ದವು ಸರ್ವೇಶ್ವರನಿಗೆ ಪ್ರಯೋಗಿಸಲ್ಪಟ್ಟರೆ,

"ಜ್ಞಾನಶಕ್ತಿಬಲೈಶ್ವರ್ಯ ವೀರ್ಯತೇಜಾಂಸ್ಯ ಶೇಷತಃ ।
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ" (ವಿ ಪ್ರ೬.೫.೭೯)

ಎಂದು ಹೇಳಿರುವ ಹಾಗೆ ಹೇಯವಾದ ಪ್ರಕೃತಿ ಸಂಬಂಧಗುಣ ರಹಿತನೆಂದೂ ಷಾಡ್ಗುಣ್ಯಾದಿ ಕಲ್ಯಾಣಗುಣಗಣ ಪರಿಪೂರ್ಣನೆಂದೂ ಅರ್ಥವನ್ನು ಹೇಳತಕ್ಕದ್ದು. ಸರ್ವೇಶ್ವರನಲ್ಲದೆ ಇತರರಿಗೆ ಉಪಯೋಗಿಸಿದರೆ ಆಗ ಗೌಣಾರ್ಥವನ್ನು ಹೇಳತಕ್ಕದ್ದೆಂದು ಶ್ರೀ ಪರಾಶರರು ಹೇಳಿರುತ್ತಾರೆ. ಭಗವಚ್ಛಬ್ದಕ್ಕೆ ಅರ್ಹರಾದ ಪೂಜ್ಯರು ಯಾರೆಂದರೆ ಹೇಳುತ್ತಾರೆ :—

ಉತ್ಪತ್ತಿಂ ಪ್ರಳಯಂ ಚೈವ ಭೂತಾನಾಮಾಗತಿಂಗತಿಂ।
ವೇತ್ತಿವಿದ್ಯಾಮವಿದ್ಯಾಂ ಚ ಸ ವಾಚ್ಯೋಭಗವಾನಿತಿ(ವಿ.ಪ್ರ. ೬.೫ ೭೮)

ಜಗತ್ಸೃಷ್ಟಿಸ್ಥಿತಿಲಯಗಳನ್ನೂ ಚೇತನರ ಪುನರ್ಜನ್ಮ ದೇಹಾವಸಾನಾನಂತರ ಅವರು ಹೊಂದುವ ಮಾರ್ಗ್ಗಗಳನ್ನೂ, ಸರ್ವೇಶ್ವರನನ್ನು ಪಡೆಯುವ ಉಪಾಯವನ್ನು ತಿಳಿಸುವ ಬ್ರಹ್ಮವಿದ್ಯೆಯನ್ನೂ, ಅಜ್ಞಾನಗಳು ಯಾವುವೆಂಬುವದನ್ನೂ, ಯಾವನು ತಿಳಿದಿರುವನೋ, ಅವನೇ ಭಗವಚ್ಛಬ್ದವಾಚ್ಯನು.

ಇಂತಹ ಮಹನೀಯರಾದ ಪ್ರಪನ್ನರು ಈ ಕರ್ಮಭೂಮಿಯಲ್ಲಿರುವಾಗಲೇ ನಿತ್ಯಮುಕ್ತರುಗಳ ಹಾಗೆ ಕೈಂಕರ್ಯಗಳನ್ನು ಭಗವತ್ಪ್ರೀತಿಯಾಗಿ ಮಾಡುತ್ತಾ ಅವರುಗಳು ಹಾ ೩ ವುಹಾ ೩ ವುಹಾ ೩೩ ಎಂದು ಹೇಳಿರುವ ಹಾಗೆ ಸಾಮಗಾನವನ್ನು ಮಾಡುತ್ತಾ ಆನಂದಿಸುತ್ತಿರುವರೋ, ಹಾಗೆಯೇ ಈ ಕೃತಕೃತ್ಯರಾದ ಮಹಾನುಭಾವರೂ ಕೂಡ ಪಣತ್ರಯವನ್ನು ಕಳೆದುಕೊಂಡು ತಮಿಳ್‌ವೇದವಾದ ತಿರುವಾಯ್‌ಮೊಳಿ ಮೊದಲಾದವನ್ನು ಗಾನಮಾಡುತ್ತಾ ಕಾಲಯಾಪನೆಯನ್ನು ಮಾಡುತ್ತಿರುವರೆಂದು ಅವರನ್ನು ಕೊಂಡಾಡಿರುತ್ತಾರೆ.

ಅವತಾರಿಕೆ—ಹಿಂದೆ ಈ ಕೃತಕೃತ್ಯರಾದ ಪ್ರಪನ್ನರು ಮಾಡುವ ಉತ್ತರಕೃತ್ಯರೂಪಕೈಂಕರ್ಯಗಳೆಲ್ಲಾ ಸ್ವಯಂ ಪ್ರಯೋಜನವಾದುವೇ ವಿನಾ ಅವುಗಳಿಗೆ ಇನ್ನು ಯಾವ ಪ್ರಯೋಜನವೂ ಇಲ್ಲವೆಂದು ಹೇಳಲ್ಪಟ್ಟಿತು. ನಿತ್ಯ ಮುಕ್ತರುಗಳು ದಿವ್ಯ ವೈಕುಂಠದಲ್ಲಿ ಶ್ರಿಯಃಪತಿಯನ್ನು ಸಾಕ್ಷಾತ್ಕರಿಸುತ್ತಾ ನಿರತಿಶಯ ಪ್ರೇಮರೂಪವಾದ ಅನುಭವದಿಂದ ಪ್ರಾಪ್ತವಾದ ಕೈಂಕರ್ಯಗಳನ್ನೇನೋ ಸ್ವಯಂ ಪ್ರಯೋಜನವಾದವೆಂದು ಹೇಳಬಹುದು. ಆದರೆ ಈ ಪ್ರಪನ್ನರಿಗೆ ಅಂತಹ ಸಾಕ್ಷಾತ್ಕಾರವಿಲ್ಲದಿರುವದರಿಂದ ಅಂತಹ ಪ್ರೇಮ ಪರವಶರಾಗಿ ಕೈಂಕರ್ಯವನ್ನು ಸ್ವಯಂ ಪ್ರಯೋಜನವಾಗಿ ಮಾಡಲು ಸಾಧ್ಯವೋ ಎಂದರೆ ಸಾಧ್ಯವೆಂದು ಒಂದು ಲೋಕ ದೃಷ್ಟಾಂತಮೂಲಕ ಸಮರ್ಥಿಸುತ್ತಾರೆ.

ಪ್ರಣಯಿನಮಿವ ಪ್ರಾಪ್ತಂ ಪಶ್ಚಾತ್ಪ್ರಿಯಾ ಸ್ವಸಮನ್ವಿತಂ
ಮಹತಿ ಮುಹುರಾಮೃಷ್ಟೇ ದೃಷ್ಟ್ವಾ ಮನೌ ಮಣಿದರ್ಪಣೇ ।
ಪ್ರಪದನ ಧನಾಸ್ಸಂತ ಶ್ಶುದ್ಧ್ಯೈಃ ಪ್ರಭುಂ ಪರಿಭುಂಜತೇ
ಪ್ರಸೃಮರಮಹಾಮೋದಸ್ಮೇರ ಪ್ರಸೂನಸಮೈಃ ಕ್ರಮೈಃ ॥ ೩೫ ॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಉತ್ತರಕೃತ್ಯಾಧಿಕಾರಃ ಪಂಚದಶಃ

ಶ್ರೀಮತೇ ನಿಗಮಾನ್ತಮಹಾದೇಶಿಕಾಯ ನಮಃ

ಅರ್ಥ - **ಪ್ರಿಯಾ** - ಪತಿವ್ರತೆಯಾದ ಭರ್ತೃವಿನಲ್ಲಿ ನಿರತಿಶಯ ಪ್ರೀತಿಯುಳ್ಳ, ಒಬ್ಬ ಪತ್ನಿಯು, **ಪಶ್ಚಾತ್** - ತನ್ನ ಹಿಂದೆ, **ಪ್ರಾಪ್ತಂ** - ಬಂದಿರುವ, ಆದುದರಿಂದಲೇ **ಸ್ವಸಮನ್ವಿತಂ** ತನ್ನೊಡನೆ ಕೂಡಿದ ಎಂದರೆ ಕನ್ನಡಿಯಲ್ಲಿ ತನ್ನ ಪ್ರತಿಬಿಂಬದೊಂದಿಗೆ ಗಂಡನ ಪ್ರತಿಬಿಂಬವು ಸೇರಿತೆಂಬ ಭಾವವು, **ಪ್ರಣಯಿನಮಿವ** - ತನ್ನ ಪ್ರಿಯವಲ್ಲಭನನ್ನೋ ಎಂಬಂತೆ ಎಂಬುದಾಗಿ ತಿಳಿದು ಸತ್ಕರಿಸುವ ಪ್ರಕಾರ; ಮತ್ತು **ಮುಹುರಾಮೃಷ್ಟೇ** ಪುನಃ ಪುನಃ ಚೆನ್ನಾಗಿ ತೊಳೆದ (ಇದು ಕನ್ನಡಿ ಪರವಾದರ್ಥವು), ಪುನಃ ಪುನಃ ಸದಾಚಾರ್ಯರಿಂದ ಉಪದೇಶಿಸಲ್ಪಟ್ಟದುದರಿಂದ ಅರ್ಥಗಳೆಲ್ಲಾ ಚೆನ್ನಾಗಿ ಪ್ರಕಾಶಿಸುವ (ಇದು ಮೂಲಮಂತ್ರ ಪರವಾದರ್ಥವು), **ಮನೌ ಮಣಿ ದರ್ಪಣೇ** ಮನು ಎಂದರೆ ಮಂತ್ರವು, ಮೂಲಮಂತ್ರವೆಂಬ ಮಣಿದರ್ಪಣದಲ್ಲಿ, **ದೃಷ್ಟ್ವಾ** - ಕಂಡು, ಮಂತ್ರಪರವಾಗಿ ತಿಳಿದು ಎಂಬರ್ಥವು, **ಪ್ರಪದನಧನಾಃ** - ಭರನ್ಯಾಸವನ್ನೇ ಧನವಾಗಿವುಳ್ಳ, ಅಥವಾ ಆಭರಣವಾಗಿವುಳ್ಳ, **ಸಂತಃ** - ಸತ್ಪುರುಷರು, **ಶುದ್ಧ್ಯೈಃ** - ಎಂಬುವದು ಪುಷ್ಪಗಳಿಗೆ ಸಮೈಃ ಸದೃಶಗಳಾದ ಎಂಬುವದಕ್ಕೆ ವಿಶೇಷಗಳಾದಾಗ **ಶುಭ್ರಗಳಾದ** ಎಂಬರ್ಥವನ್ನು ಹೇಳಬಹುದು. ಪ್ರಪನ್ನರಿಗೆ ಸಂಬಂಧಿಸಿ ಅರ್ಥಹೇಳುವಾಗ, ಸಾತ್ತ್ವಿಕತ್ಯಾಗಾದಿಗಳಿಂದ ಪವಿತ್ರಗಳಾದ **ಪ್ರಸೃಮರಮಹಾಮೋದಸ್ಮೇರಪ್ರಸೂನಸಮೈಃ**, **ಪ್ರಸೃಮರ** - ವ್ಯಾಪಿಸಿತ್ತಿರುವ, **ಮಹಾಮೋದ** - ತುಂಬಾ ಪರಿಮಳವುಳ್ಳ, **ಸ್ಮೇರ** - ವಿಕಸಿತವಾದ, **ಪ್ರಸೂನಸಮೈಃ ಕ್ರಮೈಃ** - ಪುಷ್ಪಗಳಿಗೆ ಸದೃಶವಾದ ಸೇವಾಕ್ರಮಗಳಾದ, ಎಂದರೆ ಗಂಡನಿಗೆ ಪುಷ್ಪಗಂಧಾದ್ಯುಪಚಾರಗಳಿಂದ ಪೂಜಿಸುವ ಕ್ರಮಗಳಿಂದ ಎಂಬರ್ಥವನ್ನು ಪತಿವ್ರತೆಯ ಪರವಾಗಿ ಹೇಳಬಹುದು ; ಪ್ರಪನ್ನರ ವಿಷಯದಲ್ಲಿ ಸ್ವಯಂಪ್ರಯೋಜನವೆಂಬ ಬುದ್ಧಿಯಿಂದ ಭಗವತ್ಪ್ರೀಣನ ರೂಪ

ದಲ್ಲಿ ಅತ್ಯಂತ ಸಂತೋಷದಿಂದ ಮಾಡಲ್ಪಟ್ಟ ಭಗವದ್ಭಾಗವತ ಕೈಂಕರ್ಯಗಳಿಂದ ಎಂಬರ್ಥವು; ತುಂಬಾ ಪರಿಮಳ ವ್ಯಾಪಿಸಿರುವ ಪುಷ್ಪಗಳಿಗೆ ಸದೃಶವಾದ ಕೃಮ್ಯೈಃ ಎಂದು ಹೇಳಿರುವುದರಿಂದ ತನಿರುಳ್ ಮಾಲೈ ಎಂದು ಹೇಳಿರುವಹಾಗೆ ನಮ್ಮಾಳ್ವಾರ್ ಮೊದಲಾದ ಆಳ್ವಾರುಗಳ ಮನೋಹರವಾದ ಶ್ರೀ ಸೂಕ್ತಿಗಳನ್ನು ಪಠಿಸುವ ವಾಚಾ ಕೈಂಕರ್ಯಗಳಿಂದ ಎಂಬರ್ಥವೂ ಸಹಾ ತೋರಿಬರುತ್ತದೆ, ಪ್ರಭುಂ - ತನಗೂ ಸರ್ವೇಶ್ವರನಿಗೂ ಭರ್ತೃಭಾರ್ಯಾ ಸಂಬಂಧವಿರುವುದರಿಂದ ಭರ್ತೃವಾದ ಸರ್ವೇಶ್ವರನನ್ನೇ, ಪರಿಭುಂಜತೇ-ಅನುಭವಿಸುತ್ತಾರೆ.

ತಾತ್ಪರ್ಯ - ಪತಿವ್ರತಾಶಿರೋಮಣಿಯಾದ ಒಬ್ಬ ಸ್ತ್ರೀಯು ತನ್ನ ಪ್ರಿಯವಲ್ಲಭನಲ್ಲಿ ನಿರತಿಶಯ ಪ್ರೇಮವುಳ್ಳವಳಾಗಿ ತನ್ನ ಪತಿಗೆ ಅನುಗುಣವಾದ ಮತ್ತು ಆತನು ಪ್ರೀತಿಸಲು ಅರ್ಹವಾದ ಸೌಂದರ್ಯವು ತನ್ನಲ್ಲಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳುವುದಕ್ಕಾಗಿ ತುಂಬಾ ಸ್ವಚ್ಛವಾದ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಿರುವಾಗ ಹಿಂದಿನಿಂದ ಬಂದ ತನ್ನ ವಲ್ಲಭನ ಮುಖವನ್ನು ಅದೇ ಕನ್ನಡಿಯಲ್ಲಿ ಕಂಡು ಪ್ರೀತಳಾಗಿ ಒಡನೆ ಪುಷ್ಪಸಮರ್ಪಣೆ ಮೊದಲಾದ ಇಷ್ಟವಾದ ಕೈಂಕರ್ಯಗಳನ್ನೆಸಗಿ ಸುಪ್ರೀತಳಾಗಿ ಪತಿಯನ್ನು ಹೇಗೆ ಅನುಭವಿಸುವಳೋ, ಹಾಗೆಯೇ ಈ ಭರನ್ಯಾಸಮಾಡಿ ಕೃತಕೃತ್ಯರಾದ ಮಹಾನುಭಾವರು, ಮೂಲಮಂತ್ರವೆಂಬ ರತ್ನಕನ್ನಡಿಯಲ್ಲಿ ತನ್ನ ಸ್ವರೂಪವು ತನ್ನ ಪತಿಯಾದ ಸರ್ವೇಶ್ವರನಿಗೆ ಶೇಷಭೂತವಾಗಿ ಅಭಿಮತವಾದುದೆಂದು ಅರಿತವರಾಗಿ, ತಾವು ಲೋಕನಾಥನಿಗೂ ತದೀಯರಿಗೂ ಸರ್ವವಿಧ ಕೈಂಕರ್ಯಗಳನ್ನು ಸ್ವಯಂ ಪ್ರಯೋಜನವೆಂಬ ಭಾವದಿಂದ ಎಸಗುತ್ತಾ ಆತನನ್ನು ಅನುಭವಿಸುವರೆಂದು ಹೇಳುತ್ತಾರೆ.

ಇಲ್ಲಿ ತಮ್ಮನ್ನು ಒಬ್ಬ ಪತಿವ್ರತಾಶಿರೋಮಣಿಯ ಹಾಗೂ, ಲೋಕನಾಥನನ್ನು ಪ್ರಿಯವಲ್ಲಭನಹಾಗೂ ಭಾವಿಸಿ ಹೇಳಿಕೊಂಡಿರುವುದರಿಂದ ಸರ್ವೇಶ್ವರನಿಗೂ ನಮಗೂ ಇರುವ ನವವಿಧ ಸಂಬಂಧದಲ್ಲಿ ಭರ್ತೃಭಾರ್ಯಾಸಂಬಂಧವು ಇಲ್ಲಿ ಉಪಪಾದಿಸಲ್ಪಟ್ಟಿತು. ಪುರುಷಸೂಕ್ತದಲ್ಲಿ ಉಪಪಾದಿಸಲ್ಪಟ್ಟವನು ಮಾತ್ರನೇ ಪುರುಷಶಬ್ದವಾಚ್ಯನೆಂದೂ "ಸ್ತ್ರೀಪ್ರಾಯಮಿತರತ್" ಎಂದು ಹೇಳಿರುವಹಾಗೆ ಎಲ್ಲಾ ಜೀವಾತ್ಮರೂ ಸ್ತ್ರೀಪ್ರಾಯರೆಂಬ ಭಾವವು. ಪತ್ನಿಯು ಹೇಗೆ ಪತಿಗೆ ಅಧೀನಳೋ, ಅನನ್ಯಾರ್ಹಶೇಷಳೋ, ಅನನ್ಯ ಭೋಗ್ಯಳೋ ಹಾಗೆಯೇ ಜೀವನೂ ಕೂಡ ಶ್ರಿಯಃಪತಿಗೆ ಅಧೀನನು, ಅನನ್ಯಾರ್ಹಶೇಷನು, ಅನನ್ಯಭೋಗ್ಯನು ಎಂಬ ಭಾವವು. ಜೀವಾತ್ಮನು ಸರ್ವೇಶ್ವರನಿಗೆ "ನಿತ್ಯಹೃದ್ಯ"ನು; ಜೀವನಿಗೆ ಪರಮಾತ್ಮನಿಗಿಂತ ಪ್ರಿಯನಾಗಿರುವವನು ಬೇರೆ ಯಾರೂ

ಇಲ್ಲವು. ಆದುದರಿಂದಲೇ ಗೀತೆಯಲ್ಲಿ "ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ" (ಗೀ. ೭,೧೭) ಎಂದು ಹೇಳಲ್ಪಟ್ಟಿರುತ್ತದೆ. ಕೃತಕೃತ್ಯನಾಗಿ ಸ್ವನಿಷ್ಠಾಭಿಜ್ಞಾನಾದಿಗಳನ್ನುಳ್ಳವನು ಜ್ಞಾನಿಗೆ ಸಮಾನನೇ. ಚೇತನನಿಗೂ, ಇವರನ್ನು ಭರಿಸುವ "ಗತಿರ್ಭರ್ತಾ" ಎಂದು ಹೇಳಿರುವ ಹಾಗೆ ಲೋಕಭರ್ತಾವಾದ ಸರ್ವೇಶ್ವರನಿಗೂ ಇರುವ ಈ ಭರ್ತೃಭಾರ್ಯಾಸಂಬಂಧವು, ಶ್ರೀ ಗೋದಾದೇವಿಯು ಬಹು ಸ್ವಾರಸ್ಯವಾಗಿ ಅನುಗ್ರಹಿಸಿದ ತಿರುಪ್ಪಾವೈಯಲ್ಲಿ ಉಪಪಾದಿತವಾಗಿರುತ್ತದೆ. ಅಲ್ಲಿ ತಮ್ಮ ಸೌಂದರ್ಯವೂ, ತಾವೂ, ಶ್ರೀರಂಗ ಮನ್ನಾರರಿಗೆ ಸಮರ್ಪಿಸುವ ಪುಷ್ಪಹಾರವೂ, ಭೋಗ್ಯವಾಗಿವೆಯೋ ಇಲ್ಲವೋ ಎಂದು ತಿಳಿಯಲು, ಶ್ರೀಆಂಡಾಳ್‌ರವರು ತಮ್ಮನ್ನು ಕನ್ನಡಿಯಲ್ಲಿ ನೋಡಿಕೊಳ್ಳು ತ್ತಿದ್ದಾಗಲೇ ಪತಿಯನ್ನೇ ಧ್ಯಾನಿಸುತ್ತಿದ್ದು ಆತನ ದಿವ್ಯಮಂಗಳ ವಿಗ್ರಹವೇ ಆಗಲೇ ಕನ್ನಡಿಯಲ್ಲಿ ಪ್ರತಿಫಲಿಸಿದಾಗಿ ಭಾವಿಸುತ್ತಿದ್ದರೆಂಬೀ ಇತಿಹಾಸವೂ ಕೂಡ ಈ ಶ್ಲೋಕದಿಂದ ಸ್ಫೂರ್ತಿಗೆ ಬರುತ್ತದೆ. ಗೋದಾವೃತ್ತಾಂತಕ್ಕೆ ೨೪ ನೆಯ ಪುಟವನ್ನು ನೋಡಿ.

ಮನಾ ಮಣಿದರ್ಪಣೇ - ಪತಿವ್ರತೆಯು ತಾನು ಪತಿಗೇನೇ ಶೇಷಭೂತ ಳಾಗಿ ತದೇಕಭೋಗ್ಯಳಾಗಿರಲು ಅರ್ಹವಾದ ಸೌಂದರ್ಯಾದಿಗಳಿವೆಯೋ ಇಲ್ಲವೋ ಎಂದು ಹೇಗೆ ಕನ್ನಡಿಯಲ್ಲಿ ತಿಳಿಯುವಳೋ ಹಾಗೆಯೇ, ಈ ಚೇತ ನನೂ ಕೂಡ ತನ್ನ ಅನನ್ಯಾರ್ಹ ಶೇಷತ್ವವನ್ನೂ, ಅನನ್ಯಾರ್ಹ ಭೋಗ್ಯತ್ವ ವನ್ನೂ ಮೂಲಮಂತ್ರವೆಂಬ ರತ್ನಕನ್ನಡಿಯಲ್ಲಿ ಚನ್ನಾಗಿ ತಿಳಿಯುವನು. ಮೂಲ ಮಂತ್ರವನ್ನು ಮಣಿದರ್ಪಣಕ್ಕೆ ಹೋಲಿಸಿದುದರಿಂದ ಆ ಮಂತ್ರದ ಸರ್ವೋ ತ್ಕೃಷ್ಟತೆಯೂ, **"ಸರ್ವಂ ಅಷ್ಟಾಕ್ಷರಾಂತಸ್ಥಂ"** ಎಂದು ಹೇಳಿರುವ ಮೇರೆಗೆ ಸಮಸ್ತಾಭಿಪ್ರಾಯಗಳನ್ನೂ ಬಹು ವಿಶದವಾಗಿ ತೋರಿಸುವ ಮಹಿಮೆ ಯುಳ್ಳದೆಂಬುವದೂ, ಸಂಗ್ರಹಿಸಲ್ಪಟ್ಟವು. **ಮಹತಿ** - ಆ ಕನ್ನಡಿಯು ಎಂಥಾ ದ್ದೆಂದರೆ, **"ಮಹತಿ"** ಬಹು ವಿಶಾಲವಾಗಿ ದೊಡ್ಡದಾಗಿರುವ ನಿಲುಗನ್ನಡಿಯು, ಶರೀರಲಾವಣ್ಯವನ್ನೆಲ್ಲಾ ಬಹು ಚನ್ನಾಗಿ ತೋರಿಸುವಂಥಾದ್ದು. ಒಂದು ವೇಳೆ ನಾಥನು ಹಿಂದೆ ಬಂದರೆ ಆತನನ್ನೂ ಕೂಡ ಬಹು ಸ್ಫುಟವಾಗಿ ಆತನ ಸಂಪೂ ರ್ಣಾಕಾರವನ್ನು ತೋರಿಸುವಂಥಾದ್ದು. ಹಾಗೆಯೇ ಮೂಲಮಂತ್ರವೂ ಕೂಡ ಜೀವಸ್ವರೂಪವನ್ನೂ, ಪರಮಾತ್ಮನ ಸ್ವರೂಪವನ್ನೂ, ಅವರುಗಳ ಕಲ್ಯಾಣ ಗುಣ ಮೊದಲಾದವುಗಳನ್ನೂ ಬಹು ಸ್ಫುಟವಾಗಿ ತೋರಿಸುವಂಥಾದ್ದು. ಇನ್ನೂ ಎಂಥಾದ್ದು ಆ ಮಣಿದರ್ಪಣವೆಂದರೆ, **ಮುಹುರಾಮೃಷ್ಟೇ** ಎಂದು ಹೇಳು ತ್ತಾರೆ. ಕನ್ನಡಿಯನ್ನು ಕೊಳೆಯಿಲ್ಲದಹಾಗೆ ಪದೇ ಪದೇ ಚನ್ನಾಗಿ ತಿಕ್ಕುವದ

ರಿಂದ ಅದು ಸ್ವಚ್ಛವಾಗಿ ಸ್ಫುಟವಾಗಿ ಅವಯವ ಸೌಂದರ್ಯವನ್ನು ತೋರಲು ಸಹಕಾರಿಯಾಗುತ್ತದೆ. ಹಾಗೆಯೇ ಮೂಲಮಂತ್ರವೂ ಕೂಡ, ಆಳ್ವಾರಾಚಾರ್ಯರುಗಳ ಅಸಕೃದುಪದೇಶದಿಂದಲೂ, ಪುನಃ ಪುನಃ ಮಾಡಿದ ಅರ್ಥಾನುಸಂಧಾನಗಳಿಂದಲೂ ಮೇಲೆ ಹೇಳಿದಂಶಗಳೆಲ್ಲಾ ಚನ್ನಾಗಿ ವಿದಿತವಾಗುತ್ತವೆಂಬ ಭಾವವು.

ಪಶ್ಚಾತ್ ಸ್ಪ್ರಾಪ್ತಂ ಸ್ವಸಮನ್ವಿತಂ ಪ್ರಣಯಿನಂ - ಆ ಕನ್ನಡಿಯಲ್ಲಿ ತನ್ನನ್ನೂ ತನ್ನ ಲಾವಣ್ಯವನ್ನೂ ಮಾತ್ರವೇ ಪತಿವ್ರತೆಯು ನೋಡುವದಿಲ್ಲವು ತನ್ನ ಸೌಂದರ್ಯವು ಪ್ರಿಯನಿಗೆ ಅರ್ಹವಾಗಿದೆಯೋ ಇಲ್ಲವೋ ಎಂದು ಪತಿವಿನಿಯೋಗಾರ್ಹಳು ಹೌದೋ ಅಲ್ಲವೋ ಎಂದು ಧ್ಯಾನಿಸುತ್ತಿರುವಳು ಎಂಬುವದು ಮುಖ್ಯಾಭಿಪ್ರಾಯವು. ಆ ಕಾಲದಲ್ಲೇ ತನ್ನ ಪ್ರಿಯನಾಥನೇ ಸಾಕ್ಷಾತ್ತಾಗಿ ತಾನೇ ಹಿಂದೆ ಬಂದರೆ ಆಗ ಇಬ್ಬರ ಪ್ರತಿಬಿಂಬವು ಆ ದರ್ಪಣದಲ್ಲೇ ಪ್ರತಿಫಲಿಸುವದರಿಂದ ಇಬ್ಬರೂ ಸೇರಿದಂತಾಗುವದರಿಂದ **ಸ್ವಸಮನ್ವಿತಂ** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ನಾಥನೊಂದಿಗೆ ಸಂಶ್ಲೇಷಿಸಿದುದನ್ನೂ ಕನ್ನಡಿಯಲ್ಲಿ ಈ ಪತಿವ್ರತೆಯು ಹೇಗೆಕಂಡಳೋ. ಹಾಗೆಯೇ ಈ ಮೂಲಮಂತ್ರದಲ್ಲಿ ಮಕಾರವಾಚ್ಯನಾದ ಜೀವನು, ಆ ಮಕಾರದ ಹಿಂದುಗಡೆಯೇ ಅಕಾರದಲ್ಲಿ ತೋರಿಬರುವ ಲೋಕನಾಥನನ್ನೂ, ಆತನಿಗೇನೇ ತಾನು ಅನನ್ಯಾರ್ಹ ಶೇಷನೆಂಬುವದನ್ನೂ, ಆತನೇ ಕೃಪೆಗೈದ ಬುದ್ಧಿಯೋಗದಿಂದಲೂ, ಆಚಾರ್ಯೋಪದೇಶದಿಂದಲೂ, ಮಧ್ಯಮಾಕ್ಷರದಲ್ಲಿ ತಿಳಿಯುವನೆಂಬ ಭಾವವು. ಇಲ್ಲಿ **ಸ್ವಸಮನ್ವಿತಂ** ಎಂದು ಹೇಳಿರುವವರಿಂದ ತನ್ನ ಭರ್ತಾತಾನೂ ಸಹ ವಿಶ್ಲೇಷವಿಲ್ಲದಹಾಗೆ, "**ದ್ವಾಸುಪರ್ಣಾ**" ಎಂಬ ಶ್ರುತಿಯು ಹೇಳುವಹಾಗೆ, ಸದಾ ಒಟ್ಟಿಗೆ ಹೃದಯಗುಹೆಯಲ್ಲಿದ್ದಾರೆಂಬ ಶಾಸ್ತ್ರೋಕ್ತಿಯು ಇಲ್ಲಿ ಸೂಚಿಸಲ್ಪಟ್ಟಿತು.

ಪ್ರಪದನಧನಾಸ್ಸಂತಃ ಎಂಬುವದನ್ನು ಒಟ್ಟಿಗೆ ಸೇರಿಸಿ ಪ್ರಪದನವನ್ನೇ ಧನವಾಗಿ ಉಳ್ಳವರಾಗಿ ಎಂಬರ್ಥವನ್ನು ಹೇಳಬಹುದು ; ಅಥವಾ **ಧನಂ ಮದೀಯಂ ತವ ಪಾದಪಙ್ಕಜಂ** ಎಂದು ಹೇಳಿರುವ ಹಾಗೆ ಪ್ರಪದನವನ್ನೇ ಧನವಾಗಿವುಳ್ಳ ಪೂರ್ವಾಚಾರ್ಯರುಗಳು ಎಂದೂ ಅರ್ಥಮಾಡಬಹುದು. "**ಸನ್ತಿ ದೇವಾಃ**" ಎಂದು ಹೇಳಿರುವಹಾಗೆ, ಸನ್ತಃ ಎಂಬುವದರಿಂದ ನಿತ್ಯಸೂರಿಗಳೆಂದು ಅರ್ಥಮಾಡಿ ಅವರುಗಳ ಅಂಶಾವತಾರಿಗಳಾದ ಆಳ್ವಾರ್ ಆಚಾರ್ಯರುಗಳು ಎಂದು ಭಾವಿಸಬಹುದು; ಅಥವಾ **ಅಸ್ತಿ ಬ್ರಹ್ಮೇತಿಚೇದ್ವೇದ ಸನ್ತಮೇನಂ ತತೋ ವಿದುಃ**" ಎಂದು ಹೇಳಿರುವಹಾಗೆ ಪರಬ್ರಹ್ಮಸ್ವರೂಪವನ್ನು ತಿಳಿದು ಆತನನ್ನೇ ಏಕಾಂತತ್ವದಿಂದ ಧ್ಯಾನಿಸುವವರು ಎಂದು ಅರ್ಥ ಹೇಳಬಹುದು. ಇವರುಗಳೆಲ್ಲಾ (೧) "**ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ**

ಶರಣಂ ಗತಃ" ಎಂದೂ, (೨) **"ಪರಿತ್ಯಕ್ತಾ ಮಯಾಲಂಕಾ ಮಿತ್ರಾಣಿ ಚ ಧನಾನಿ ಚ"** ಎಂದೂ ಹೇಳಿರುವಹಾಗೆ, ಐಹಿಕ ಧನಾದಿಗಳನ್ನೆಲ್ಲಾ ಸಂಪೂರ್ಣವಾಗಿ ಪರಿತ್ಯಜಿಸಿ, ಪ್ರಪದನವನ್ನೇ ಧನವಾಗಿ ಎಣಿಸಿ ಮಹಾವಿರಕ್ತಿಯಿಂದಿರುವವರು ಎಂಬ ಭಾವವು. ಪ್ರಪದನಧನಾಃ ಎಂದು ಅದೇ ಪುರುಷಾರ್ಥವೆಂದು ಹೇಳಿರುವದರಿಂದ ಯಾವುದನ್ನು ಮಾಡಬೇಕೋ ಅದನ್ನು ಮಾಡಿ ಕೃತಕೃತ್ಯರಾದವರೆಂಬ ಭಾವವೂ ತೋರಿಬರುತ್ತದೆ. ಧನವು ಹೇಗೆ ತನಗೂ ಇತರರಿಗೂ ಸಹ ಸಮೃದ್ಧಿಯನ್ನುಂಟುಮಾಡಿ ಸುಖಕ್ಕೆ ಕಾರಣವೋ, ಹಾಗೆಯೇ ಭರನ್ಯಾಸಾನುಷ್ಠಾನಮಾಡಿರುವದು ತನ್ನ ಆತ್ಮೋಜ್ಜೀವನಕ್ಕೂ, ಇತರರ ಆತ್ಮೋಜ್ಜೀವನಕ್ಕೂ, ಸಹಕಾರಿಯಾದುದೆಂಬ ಅಭಿಪ್ರಾಯವೂ ಸೂಚಿತವಾಯಿತು. ಪ್ರಪದನಧನಾಃ ಎಂಬಲ್ಲಿ ಧನಶಬ್ದವು ಆಭರಣವೆಂಬರ್ಥದಲ್ಲಿ ಉಪಯೋಗಿಸಿರುವದರಿಂದ ಆಭರಣವು ಪತಿವ್ರತೆಗೆ ಹೇಗೆ ಪತಿಯ ಪ್ರೀತಿಯನ್ನು ಆಕರ್ಷಿಸಲು ಸಹಕಾರಿಯೋ, ಹಾಗೆಯೇ ಭರನ್ಯಾಸವೂ ಕೂಡ ಲೋಕಭರ್ತಾವಿನ ಪ್ರೀತ್ಯತಿಶಯವನ್ನು ಆಕರ್ಷಿಸಿ, **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"** ಎಂದಿಗೂ ಕೈಬಿಡೆನು ಎಂದು ಹೇಳುವ ಹಾಗೆ ಮಾಡುತ್ತದೆ.

ಇಂತವರ ಉತ್ತರಕೃತ್ಯವೇನೆಂಬುವದನ್ನು ತಿಳಿಸುತ್ತಾರೆ :—**ಪ್ರಸ್ಮರಮಹಾಮೋದಸ್ಮೇರಪ್ರಸೂನಸನ್ಮೈಃ ಕ್ರಮೈಃ** - ಇಲ್ಲಿ ಪ್ರಸ್ಮರಮಹಾಮೋದವೆಂದು ಹೇಳಿರುವದರಿಂದ ದೃಷ್ಟಾಂತದಲ್ಲಿ ಹೇಗೆ ವ್ಯಾಪ್ತವಾದ ಪರಿಮಳವುಳ್ಳ ವಿಕಸಿತ ಪುಷ್ಪಮಾಲಿಕಾ ಕೈಂಕರ್ಯವೆಂಬುವದರಹಾಗೆ ಈ ದಾರ್ಷ್ಟಾಂತಿಕದಲ್ಲೂ ಈ ಕೈಂಕರ್ಯಗಳಿಗೆ ಸ್ವಯಂಪ್ರಯೋಜನತಾ ಎಂಬುವದೇ ಮಹಾಮೋದಭಾವವೆಂದು ತೋರಿಬರುತ್ತದೆ. ಇಂತಹ ಸ್ವಯಂಪ್ರಯೋಜನವುಳ್ಳ **ಸ್ಮೇರಪ್ರಸೂನಸನ್ಮೈಃ ಕ್ರಮೈಃ** - ದೃಷ್ಟಾಂತದಲ್ಲಿ ವಿಕಸಿತ ಪುಷ್ಪಚಂದನಾದಿಗಳು ಹೇಗೆ ಭರ್ತಾವಿಗೆ ಪ್ರೀತಿ ಸಂಪಾದಕಗಳಾಗಿ ಆತನಿಗೆ ಭೋಗ್ಯಭೂತಗಳೋ, ಹಾಗೆಯೇ ಈ ಪ್ರಪದನ ಧನರೂ ಮಾಡುವ ಉತ್ತರ ಕೈಂಕರ್ಯಗಳೂ ಭಗವನ್ಮುಖೋಲ್ಲಾಸಕರವಾಗಿ ಪರಮ ಭೋಗ್ಯಭೂತವಾದುವಾಗುತ್ತವೆಂಬ ಭಾವವು. **ಪ್ರಸೂನಸನ್ಮೈಃ ಕ್ರಮೈಃ** ಎಂಬಲ್ಲಿ ಶ್ರೀ ಆಂಡಾಳ್‌ರವರು ಧರಿಸಿದ ಪುಷ್ಪಮಾಲಿಕಾದಿಗಳು ಶ್ರೀರಂಗಮನ್ನಾರ್‌ರವರಿಗೆ ಹೇಗೆ ಪರಮಭೋಗ್ಯಭೂತವಾದವೋ, ಹಾಗೆಯೇ ಈ ಪ್ರಪದನ ಧನರು ಭಾಗವತಕೈಂಕರ್ಯಮೂಲಕ ನಡಿಸಿದ ಭಗವದಾರಾಧನೆಯೂ ಸಹ ಪ್ರಭುವಾದ ಲೋಕನಾಥನಿಗೆ ಪರಮಭೋಗ್ಯಭೂತವಾದುದಾಗಿ ಪರಿಣಮಿಸುತ್ತವೆ ಎಂಬ ತಾತ್ಪರ್ಯವೂ ತೋರಿಬರುತ್ತದೆ. ಇದರಿಂದ ಮುಂದಿನ ಪುರುಷಾರ್ಥಕಾಷ್ಠಾಧಿಕಾರಾಭಿಪ್ರಾಯವು ಸೂಚಿತವಾದುದು.

ಶುದ್ಧೈಃ - ಈ ಪ್ರಸೂನ ಸಮಾಕ್ರಮರೂಪಕೈಂಕರ್ಯಗಳು ಎಂತವೆಂದರೆ ಶುದ್ಧವಾದವು. ದೃಷ್ಟಾಂತದಲ್ಲಿ ಮಲ್ಲಿಗೆ ಮೊದಲಾದ ಸ್ವಚ್ಛವಾದ ಪುಷ್ಪಗಳಿಂದ ಯುಕ್ತವಾದವು ಎಂಬ ಭಾವವು ತೋರಿಬರುತ್ತದೆ. ಹಾಗೆಯೇ ಈ ಪ್ರಪನ್ನರ ಕೈಂಕರ್ಯಗಳೂ ಶುದ್ಧವಾದವು ಎಂಬದೆ ಅವಿದ್ಯಯಾ ಮೃತ್ಯುಂತೀರ್ತ್ವಾ ಎಂದು ಹೇಳಿರುವಹಾಗೆ ನಿತ್ಯನೈಮಿತ್ತಿಕಾನುಷ್ಠಾನಗಳಿಂದ ಪವಿತ್ರವಾದವು. ಶ್ರೀವಿಷ್ಣುಪುರಾಣದ ಪ್ರಥಮಶ್ಲೋಕದಲ್ಲಿ "**ಪರಾಶರಂ ಮುನಿವರಂಕೃತ ಪೌರ್ವಾಹ್ಣಿಕ ಕ್ರಿಯಂ**" ಎಂದು ಹೇಳಿರುವಹಾಗೆ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಶುಚಿಭೂರ್ತವಾದ ಎಂಬ ಭಾವವು ಅಥವಾ ಅನ್ಯದೇವತಾ ಭಜನರೂಪದೋಷವಿಲ್ಲದೆ ಶುದ್ಧವಾದವೆಂಬಾಗಲಿ, ಅಥವಾ ಸಾತ್ವಿಕತ್ಯಾಗದಿಂದ ಯುಕ್ತವಾದ ನಿತ್ಯನೈಮಿತ್ತಿಕಾನುಷ್ಠಾನರೂಪ ಕೈಂಕರ್ಯಗಳಾದುದರಿಂದ ಶುದ್ಧವಾದವೆಂದಾಗಲಿ ಅರ್ಥಹೇಳಬಹುದು.

ಇಂತಹ ಸ್ವಯಂಪ್ರಯೋಜನಗಳಾದ ಭಗವದ್ಭಾಗವತಕೈಂಕರ್ಯಗಳಿಂದಲೂ ಸಾತ್ವಿಕತ್ಯಾಗಯುಕ್ತ ನಿತ್ಯಕರ್ಮಾನುಷ್ಠಾನಗಳಿಂದಲೂ ಈ ಪ್ರಪದನಧನರು **ಪ್ರಭುಂ ಪರಿಭುಂಜತೇ,** ಲೋಕನಾಥನನ್ನು ಅನುಭವಿಸುವರು. ನಿತ್ಯಸೂರಿಗಳು ಹೇಗೆ ಶ್ರಿಯಃಪತಿಯನ್ನು ದಿವ್ಯವೈಕುಂಠದಲ್ಲಿ ಸ್ವಾಮಿಗೆ ಅಭಿಮತ ಕೈಂಕರ್ಯಗಳನ್ನು ಎಸಗುತ್ತಾ ಅನುಭವಿಸುವರೋ ಹಾಗೆಯೇ, ಇವರೂ ಕೂಡ ಅನುಭವಿಸುವರು. ಪತಿವ್ರತೆಯು ಪತಿಗೆ ಹೇಗೆ ಅಭಿಮತ ಶುಶ್ರೂಷೆಗಳನ್ನು ಮಾಡುತ್ತಾ ಪತಿಯನ್ನನುಭವಿಸುವಳೋ, ಆ ತೆರದಿ ಸರ್ವೇಶ್ವರನಿಗೆ ನಿತ್ಯಕೈಂಕರ್ಯಗಳನ್ನೆಸಗುತ್ತಾ ಪ್ರಪಥನಧನರೂ ಅನುಭವಿಸುವರು. ಈ ಶ್ಲೋಕದ ಮುಖ್ಯ ತಾತ್ಪರ್ಯವು ಇಷ್ಟೇ :—ಪತಿಯೇ ಪರದೇವತೆಯೆಂದರಿತ ಒಬ್ಬ ಪತಿವ್ರತಾಶಿರೋಮಣಿಯು ತಾನು ತನ್ನ ಪ್ರಿಯಭರ್ತ್ರುವಿಗೆ ತುಂಬಾ ಪ್ರಿಯತಮಳಾಗಿಯೂ ಭೋಗ್ಯಭೂತಳಾಗಿಯೂ ಇರಬೇಕೆಂಬಭಿಪ್ರಾಯದಿಂದ, ಸರ್ವಾಭರಣ ಭೂಷಣಾಲಂಕಾರಗಳಿಂದ ಭೂಷಿತೆಯಾಗಿ, ತಾನು ತನ್ನ ಪ್ರಿಯಕಾಂತನಿಗೆ ಅನುರೂಪಳಹುದೋ ಅಲ್ಲವೋ ಎಂದು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವಾಗ, ತಾನು ಸತತ ಧ್ಯಾನಿಸುತ್ತಿದ್ದ ಪತಿಯೇ ಹಿಂದೆ ಬಂದು ನಿಲ್ಲಲು, ಕನ್ನಡಿಯಲ್ಲಿ ತನ್ನೊಂದಿಗೆ ತನ್ನ ಪತಿಯನ್ನೂ ಕಂಡು, ಪುಷ್ಪಗಳನ್ನು ಆತನಮೇಲೆ ಎರಚಿ, ಪುಷ್ಪಹಾರಗಳನ್ನಿತ್ತು, ಆತನಿಗೆ ನಾನಾವಿಧ ಉಪಚಾರಗಳನ್ನೆಸಗುತ್ತಾ ಸರಸಸಲ್ಲಾಪಾದಿಗಳಿಂದ ಹೇಗೆ ಪತಿಗೆ ಭೋಗ್ಯಭೂತಳಾಗುವಳೋ, ಹಾಗೆಯೇ ಈ ಪ್ರಪದನಧನನಾದ ಜೀವಾತ್ಮನೂ ಕೂಡ ಮಕಾರವಾಚ್ಯನಾದ ತನ್ನ ಸ್ವರೂಪವನ್ನು ತನ್ನ ಹಿಂದೆಯೇ ಇರುವ ಅಕಾರವಾಚ್ಯನಾದ ಶ್ರಿಯಃಪತಿಯ ದಿವ್ಯಸ್ವರೂಪವನ್ನೂ

ವಿಶದವಾಗಿ ಮೂಲಮಂತ್ರದ ಪ್ರಣವದಲ್ಲಿ ಕಂಡು, ತನಗೂ ಸರ್ವೇಶ್ವರನಿಗೂ ಭರ್ತೃಭಾರ್ಯಾಸಂಬಂಧವೆಂಬುವದನ್ನೂ, ತಾನು ಸರ್ವೇಶ್ವರನಿಗೇನೆ ಅನನ್ಯಾರ್ಹಶೇಷನು, ಅನನ್ಯಭೋಗ್ಯಭೂತನೆಂದೂ, ಅರಿತವನಾಗಿ, ಅದಕ್ಕಾಗಿ ಆತನಿಗೆ ನಿತ್ಯನೈಮಿತ್ತಿಕಾನುಷ್ಠಾನರೂಪಕೈಂಕರ್ಯಗಳನ್ನೆಸಗುವನಾಗಿ, ದೇವತಾರ್ಚನೆ, ಪುಷ್ಪಾರ್ಚನೆ ಮೊದಲಾದವುಗಳನ್ನು ನಡೆಸುತ್ತಾ ಹಾಗೆಯೇ ತತ್ಪ್ರೀತ್ಯರ್ಥವಾಗಿ ತದೀಯರಾದ ಭಾಗವತೋತ್ತಮರಿಗೂ ನಾನಾವಿಧ ಕೈಂಕರ್ಯಗಳನ್ನೆಸಗುವನಾಗಿ, ಪರಮಭೋಗ್ಯಭೂತನಾಗುವನು ಎಂಬುವದು ತಾತ್ಪರ್ಯವು ; ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ ಹದಿನೈದನೆಯ **ಉತ್ತರಕೃತ್ಯಾಧಿಕಾರಕ್ಕೆ**

ತಿರುನಾರಾಯಣಪುರಂ ವಿಜಯರಾಘವಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೧೧೩೨	೫	ಅಧಿಕಾರಗಳ	ಅಧಿಕಾರಗಳು
೧೧೩೩	೧೦	ವೆಂದ	ವೆಂದು
,,	೧೨	ಸ್ತ್ರಿಭೀ	ಸ್ತ್ರಿಭಿ
೧೧೩೪	೧೫	ಜಲಥೌ	ಜಲಧೌ
೧೧೩೭	೧೪	ಶಾಂಕಾರಾ	ಶಾಂಕರಾ
೧೧೪೪	೧೯	ಆನ್ಯ	ಅನ್ಯ
೧೧೪೫	೧೫	ಹೇಳಿದ	ಹೇಳಿ,
೧೧೫೧	೧೭	ಸಂತಷ್ಠಿತೇ	ಸಂತಿಷ್ಠತೇ
೧೧೫೬	೨೬	ಅಗ್ನಿಂದ್ರಾದಿ	ಅಗ್ನೀಂದ್ರಾದಿ
೧೧೫೭	೨೫	ಶುಲ್ಯನಾಯ್	ತುಲ್ಯನಾಯ್
೧೧೬೫	೪	ನಗಳ್ಚಿ	ನೆಗಳ್ಚಿ
೧೧೬೭	೨೧	ಆಕಿಂಚನನು	ಅಕಿಂಚನನು
,,	೨೮	ಕೆಟ್ರೂ	ಕೊಟ್ಟರೂ
,,	೨೯	ನಮ್ಮ,	ನಮ್ಮ
೧೧೬೯	೨	ಆಭಿಪಾಯ	ಅಭಿಪ್ರಾಯ
,,	೯	ಈತನ	ಈತನು
೧೧೭೨	೩	ಭಜನಾದಿಗಳ	ಭಜನಾದಿಗಳು
೧೧೭೪	೧೧	ಚ್ಛೈದಿ	ಚ್ಛೇದೀ
,,	೧೨	ಮನಿಷೀ	ಮನೀಷೀ
೧೧೭೬	೧೮	ಶ್ಣೋಕದ	ಶ್ಲೋಕದ
೧೧೭೭	೨೯	ಪಪ್ರನ್ನನು	ಪ್ರಪನ್ನನು
,,	೩೧	ಪುಸುಷಾರ್ಥ	ಪುರುಷಾರ್ಥ
೧೧೭೯	೧೭	ಆನ್ಯ	ಅನ್ಯ
೧೧೮೪	೨೨	ವಿಷಯದಲ್ಲಿ	ವಿಷಯದಲ್ಲೇ
೧೧೮೫	೨೬	ನಾಮ್	ನಾಮುಮ್
೧೨೦೨	೧೬	ಪರಮಾರ್ಥ	ಪುರುಷಾರ್ಥ
೧೨೦೪	೧	ರುಚಿಯುಮ್ ;	ರುಚಿಯುಮ್,
೧೨೨೧	೨೫	ಮತ್ತು ಅರಿತು	ಅರಿತು
,,	೨೭	ವ್ರತಿನಿತ್ಯವೂ	ಪ್ರತಿನಿತ್ಯವೂ
೧೩೨೭	೨೩	ತ್ರಿಕರಣಗಳಿಂದೂ	ತ್ರಿಕರಣಗಳಿಂದಲೂ

೧೨೨೮	೧೭	ಪ್ರಾಪ್ತವಾದ್ರ	ಪ್ರಾಪ್ತವಾದ
,,	೧೭	ಶಾಸ್ತ್ರ	ಶಾಸ್ತ್ರ
೧೨೩೦	೯	ಐದನೇ	ಐದನೆಯ
೧೨೩೫	೧೩	ಕಾಯುಕ	ಕಾಯಿಕ
	೨೩	ಪಾತವನ್ನಿಟು	ಪಾತವನ್ನಿಟ್ಟು
,,			
೧೨೩೬	೨	ಪಾದಗಳಲ್ಲಿ ಶ್ರಿಯಃಪತಿಯ	ಶ್ರಿಯಃಪತಿಯ ಪಾದಗಳಲ್ಲಿ
೧೨೩೭	೧೪	ಯಾಟ್ಯೆಯ್ಯೆ	ಯಾಟ್ಟೆಯ್ಯೆ
೧೨೩೮	೧	ಕ್ವೊಳ್ಳು	ಕ್ವೊಳ್ಳು
೧೨೪೧	೧೭	ಭಗವಂತನನ್ನು	ಇತರರನ್ನು
೧೨೪೪	೧	ಏರರ್	ಪಿರರ್
,,	೭	ನಾಣವ್ಯೆ	ನಾಣಾವ್ಯೆ
	೨೫	ಹೇಗೆ	ಹೇಗೆ ?
,,			
೧೨೪೭	೧೪	ಎಂಬುವದ	ಎಂಬುವದು
	೨೫	ಪಕ್ಷಸ್ಥಳ	ವಕ್ಷಸ್ಥಳ
,,			
೧೨೫೦	೧೫	ಸಮಿತ್ಪುಷ್ಪ	ಸಮಿತ್ಪುಷ್ಪ
೧೨೫೧	೨೦	ಪುಟವನ್ನು	೧೨೯ನೆಯ ಪುಟವನ್ನು
೧೨೫೨	೧೯	ಸಿಷ್ಕರ್ಷಿಸಿದ	ಸಿಷ್ಕರ್ಷಿಸಿದ
೧೨೫೩	೨೩	ಅನುರೂಪವಮಾಗ	ಅನುರೂಪವಮಾಗ
೧೨೬೩	೨೫	ಭಯುಪಡಜೇಕೇ	ಭಯಪಡಬೇಕೇ?
೧೨೬೪	೨೬	ಅರವಿನಣ್ಯೆಯಮ್ಮಾನೇ	ಅರವಿನಣ್ಯೆಯಮ್ಮಾನೇ
೧೨೬೯	೧೬	ಕೊಣ್ಣು	ಕೊಣ್ಣು
೧೨೭೧	೧೬	ಇದರಕ್ಯಾರ	ಇದರಕಾರ್ಯ
೧೨೮೨	ಕೊನೆಯಪಂಕ್ತಿ	ನ ಅವಧಿಕಮಾನ	ಅನವಧಿಕಮಾನ
೧೨೮೩	೨೪	ಶಿಥಿಲ	ಶಿಥಿಲ
೧೨೮೬	೧೯	ಪ್ರವೇಶಿಸಿದರೂ	ಪ್ರವೇಶಿಸಿದರೂ
೧೨೯೮	೨೪	ಭಕ್ತ ರತಂತ್ರ್ಯವೂ	ಭಕ್ತ ಪಾರತಂತ್ರ್ಯವೂ
೧೨೯೯	೪	ಯುಣ್ಣಕೋ೯ನ್	ಯುಣ್ಣ ಕ್ಯೋನ್
	೧೯	ಭಾವವು	ಭಾವವು.
,,			
೧೩೦೦	೨೫	ಭಾನನೆ	ಭಾವನೆ
೧೩೦೧	೧೩	ಸಶ್ಯಂಚ	ಸತ್ಯಂಚ
೧೩೦೬	೩	ವಾಳ್ಕೈಲಪಟ್ಟ	ವಾಳ್ಕೈಲಪಟ್ಟ
೧೩೦೭	೭	ಅನುಸಂಭಾನ	ಅನುಸಂಧಾನ
೧೩೦೯	೧೨	ಎದಂರೆ	ಎಂದರೆ

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ
ಶ್ರೀ ನಿಗಮಾನ್ತ ಮಹಾದೇಶಿಕರವರ

೧	ಅಭೀತಿಸ್ತವವೆಂಬ ಶ್ರೀ ರಂಗನಾಥಸ್ತೋತ್ರವು	೦ ೧೨
೨.	ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀ ಸ್ತೋತ್ರವು	೦ ೧೨
೩.	ಶ್ರೀಮದ್ರಹಸ್ಯತ್ರಯಸಾರವು :— ಗುರುಪರಂಪರಾಸಾರವು	೦ ೧೨
೪.	ಶ್ರೀಮದ್ರಹಸ್ಯತ್ರಯಸಾರವು :— ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು	೦ ೯
೫.	ಶ್ರೀಮದ್ರಹಸ್ಯತ್ರಯಸಾರವು :— ಪ್ರಧಾನ ಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು	೦ ೧೨
೬.	ಶ್ರೀಮದ್ರಹಸ್ಯತ್ರಯಸಾರವು :— ತತ್ವತ್ರಯಾಧಿಕಾರವು	೦ ೧೨
೭.	ಶ್ರೀಮದ್ರಹಸ್ಯತ್ರಯಸಾರವು :— ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು	೦ ೧೦
೮.	ಶ್ರೀಮದ್ರಹಸ್ಯತ್ರಯಸಾರವು :— ಅಧಿಕಾರಿವಿಭಾಗಾಧಿಕಾರವು, ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು	೦ ೯
೯.	ಶ್ರೀಮದ್ರಹಸ್ಯತ್ರಯಸಾರವು :— ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು	೦ ೧೧
೧೦.	ಶ್ರೀಮದ್ರಹಸ್ಯತ್ರಯಸಾರವು :— ಕೃತಕೃತ್ಯಾಧಿಕಾರವು, ಸ್ವನಿಷ್ಠಾಭಿಜ್ಞಾನಾಧಿಕಾರವು ಉತ್ತರಕೃತ್ಯಾಧಿಕಾರವು	೦ ೧೨
೧೧.	ಶ್ರೀಮದ್ರಹಸ್ಯತ್ರಯಸಾರವು :— ಪುರುಷಾರ್ಥಕಾಷ್ಠಾಧಿಕಾರವು	ಪ್ರಿಂಟಾಗುತ್ತಲಿದೆ
೧೨.	ಶ್ರೀ ಯಾಮುನೇಯರವರ ಚತುಶ್ಶ್ಲೋಕೀ	೦ ೮

ಸಿ. ಯಂ. ವಿಜಯರಾಘವಾಚಾರ್,
ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್
ಬಸವನಗುಡಿ, ಬೆಂಗಳೂರು ಸಿಟಿ.